ಜಯಂತಿ

೧೪ ನೆಯ ಸಂಪುಟ

ಜೂನ್ ೧೯೫೧

ಬೆಲೆ ಎಂಟು ಆಣೆಗಳು

ಈ

ಸಂಚಿಕೆಯಲ್ಲಿ

ೀ. ದ. ರಾ. ಬೇಂದ್ರೆ

, ಆರ್.ಎಸ್. ಪಂಚಮುಖಿ

. ಬಿ. ಎಸ್. ಪಾಟೀಲ

ಗೋಂಕ ಕೃಕಣಿ

ಶ್ರೀಮತಿ ಇಂದಿರಾ

ಎಲ್.ಎಸ್. ರಾವ್

ಮುಂತಾದವರ

ಾರಪೂರ್ಣ ಲೇಖನ, ಕವನ

ಕಥೆಗಳನ್ನು ಓದಬಹುದು.

ಜಾಹೀರಾತಿಗಾಗಿ
ಕಾಯ್ದಿರಿಸಿದ ಸ್ಥಳ

★

೪೦೦೦೦ ಕನ್ನಡಿಗರು ಜಯಂತಿಯನ್ನು
ಓದುತ್ತಾರೆ.

★

ನಿಮ್ಮ ಸರಕಿನ ಪ್ರಚಾರವಾಗಬೇಕಿದ್ದರೆ
ಜಯಂತಿಯಲ್ಲಿ
ಜಾಹೀರಾತನ್ನು ಪ್ರಕಟಿಸಿರಿ.

★

JAYANTI

JUNE 1951

ಜಯಂತಿ

ವಾರ್ಷಿಕ ವರ್ಗಣಿ. ೫-೦-೦

ಬಿಡಿಸಂಚಿಕೆ . . ೦-೮-೦

ಸಂಚಿಕೆ ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ಸಂಪಾದಕರು— ಶ್ರೀ. ಬೆಟಗೇರಿ ಕೃಷ್ಣಶರ್ಮ
ವ್ಯವಸ್ಥಾಪಕ ಸಂಪಾದಕರು—ಶ್ರೀ. ಎಲ್. ಜೆ. ಬೇಂದ್ರೆ
ಪ್ರಕಾಶಕರು— ಶ್ರೀ. ಎಮ್. ವಿ. ಮೊಳ್ಳಿಗಟ್ಟಿ

ಸಂಪುಟ ೧೪ | ೧ ನೆಯ ಜೂನ್ ೧೯೫೧ | ಸಂಚಿಕೆ ೧

ಈ ಸಂಚಿಕೆಯಲ್ಲಿ:

ಎತ್ತರಕೆ ಬಾರಣ್ಣ ! (ಕವನ)
'ಅಂಬಿಕಾತನಯದತ್ತ' ೧

ಬಲವಿಲ್ಲದ ಬಾನುಲಿಕಟ್ಟೆ (ಸಂಪಾದಕೀಯ)
ಸಂಪಾದಕರು ೨

ನಾಡನಡೆ (ವಾತಾವರಣ ವಿಮರ್ಶೆ)
'ಕಾಲಭೈರವ' ೩

ರೇಡಿಯೋ ಪುರಾಣ (ಒಂದು ವಾಸ್ತವಚಿತ್ರ)
ಶ್ರೀಮತಿ ಇಂದಿರಾ ಎಲ್. ಎನ್. ರಾವ್ ಎಂ. ಎ. ೫

ಅಂದಮಾನ-ನಿಕೋಬಾರ ನಡುಗಡ್ಡೆಗಳು (ಪ್ರದೇಶ ಪರಿಚಯ)
ಶ್ರೀ. ವಿದ್ಯಾರತ್ನ, ರಾ. ಸ್ವಾ. ಪಂಚಮುಖಿ ಎಂ. ಎ. ೧೧

ಮೊನ್ನೆ ಬಸ್ಸು ಕೆಟ್ಟಾಗ (ಒಂದು ಚಿತ್ರಾವಳಿ)
"ಸಂಚಾರಿ" ೧೨

ಜೋಗಿ-ಗೊಂದಲಿಗರ ಕಥೆಗಳು (ಜಾ. ಸಾ. ಪರಿಚಯ)
ಶ್ರೀ. ಪಾಟೀಲ ಬಳವಂತರಾಯರು, ಬೆಟಗೇರಿ ೧೮

ಗಿರಿಗಿರಿ ಗಿಂಡಿ (ಕವನ)
ಶ್ರೀ ಚೆನ್ನವೀರ ಕಣವಿ ಬಿ. ಎ. ಧಾರವಾಡ ೨೨

ಬಿಂದೂ (ಅನುವಾದಿತ ಕಥೆ)
ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ ೨೩

'ಕಣ್ಣುಗಳು' (ವಿಜಯಶಾಲಿ ಕಥೆಯ ವಿಮರ್ಶೆ)
ಶ್ರೀ. ಗೌರೀಶ ಕಾಯ್ಕಿಣಿ, ಗೋಕರ್ಣ ೨೭

ಗೋಮಟೇಶ್ವರನ ಸನ್ನಿಧಿಯಲ್ಲಿ (ಪ್ರವಾಸ ಪ್ರಬಂಧ)
ಶ್ರೀ. ಎ. ಎಸ್. ರಾಮಕೃಷ್ಣ, ಮಣಿಪಾಲ-ಉಡುಪಿ ೩೩

ಕಸೂತಿ ಕಲಿಯಬೇಕೆ? (ಕೈಕಸೂತಿ)
ಶ್ರೀಮತಿ ಸುಶೀಲಾದೇವಿ ಹಳಪೇಟೆ, ಧಾರವಾಡ ೩೭

ಪುಸ್ತಕ ವಿಮರ್ಶೆ
ಬೇರೆ ಬೇರೆ ವಿಮರ್ಶಕರು ೩೮

ಸಾದರ ಸ್ವೀಕಾರ .... ಕವ್ಹರ್ ೩

Calchemico's RENUKA TOILET POWDER

ರೇಣುಕಾ ಫೇಸ ಪೌಡರ

ಇದು ಕೋಮಲವಾದ ಸುಗಂಧಿತ (ಬೇಬಿಸ) ಪೌಡರ್, ಪ್ರೆಸಿಪಿಟೇಟೆಡ್ ಟಾಲ್ಕಮ್, ಝಿಂಕ ಮತ್ತು ಮ್ಯಾಗ್ನಿಸಿಯಂ ಕಣಗಳನ್ನೊಳಗೊಂಡಿದೆ. ಇದರ ಕ್ರಮವಾದ ಉಪಯೋಗದಿಂದ ಶರೀರದ ದುರ್ವಾಸನೆ, ಉಷ್ಣವಲಯ ಪ್ರದೇಶಗಳ ಚುಚ್ಚುವ ಶಕೆ, ಇತರ ಚರ್ಮಸ್ಫೋಟನ ನಿವಾರಣೆಯಾಗುತ್ತದೆ.

CALCUTTA CHEMICAL

ಮುಂಬಯಿ ಆಫೀಸ:— ಜೀವಕಲ್ಲ ಮ್ಯಾನ್ಶನ್, ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ.

ವರ್ಷ ೧೪ ಜೂನ್

ಜಯಂತಿ

ಸಂಚಿಕೆ ೧ ೧೯೫೧

ಎತ್ತರಕ್ಕೆ ಬಾರಣ್ಣ !

'ಅಂಬಿಕಾತನಯದತ್ತ'

★

ಅಗೊ, ಭೂಮಿ ಹೃದಯ ಗಿರಿಶಿಖರಗಳಲಿ ಕೈಮೊಗ್ಗೆ ಮೇಲೆ ಮುಗಿಸಿ,
ಅರ್ಪಿಸುತ್ತಲಿವೆ ಭಕ್ತಿಯನ್ನು ಬಾನಲ್ಲಿ ಸತ್ತ್ವ ಚಿಗಿಸಿ—
ಕೊಳಕು ಕೊಳ್ಳದಲಿ ಹುಚ್ಚುಹಳ್ಳದಲಿ ಎಷ್ಟು ದಿವಸ ನಡೆವೆ ?
ಎತ್ತರಕ್ಕೆ ಬಾರಣ್ಣ ಅಲ್ಲಿ ನೀ ಪಡೆವುದನ್ನು ಪಡೆವೆ.

ತಿರುಮಲೆಯ ಕಡೆಗೆ, ಶ್ರೀಶೈಲದೆಡೆಗೆ, ಶೃಂಗೇರಿ ಮಾರ್ಗವಾಗಿ
ಬೆಳುಗೊಳದ ಬೆಟ್ಟ, ಆ ಪೂರ್ವಘಟ್ಟ ಜೀವಕ್ಕೆ ಸ್ವರ್ಗವಾಗಿ—
ಎಂದಿನಿಂದಲೋ ಸೆಳೆಯುತಿಹವು ಯಾತ್ರಿಕರ ಮೋದದಿಂದ
ಬದುಕು ಮಾಡಿಕೊಂಡಿಹುದು ಮನುಜಕುಲ ಆ ಪ್ರಸಾದದಿಂದ.

ಹೊಳೆಗೆ ತಾಯ ಮೊಲೆಯಾಗಿ ಬಾಳುತಿದೆ ಸರ್ವಪರ್ವತಾಗ್ರ,
ವನಕೆ ತವರುಮನೆಯಾಗಿ ನೆಲಸಿಹವು ತಾನೆ ತಾ ಉದಗ್ರ,
ಹೊಲಕೆ ಮಣ್ಣು ಆ ಮನೆಗೆ ಕಲ್ಲು ಹೆರುತಿಹವು ಏನು ಒಲವು ?
ಬಿಸಿಲುಗಾಲದಲಿ ನೆರೆಯ ತರುವವೋ ಗಂಗೆಗಳಿಗೆ ಕೆಲವು.

ಗುಡ್ಡದಲ್ಲಿ ಗುಡಿ ಕೊರೆದರಲ್ಲ ಕಣ್ಗಂಡ ಓಜರೆಲ್ಲ
ಶಿಲ್ಪವಲ್ಲ ನವಕಲ್ಪ ಸೃಷ್ಟಿ ಆ ಕಡೆಗೆ ಮರಣವಿಲ್ಲ.
ಧ್ಯಾನಲೀನ ಮನ ಏಳಿ ತೊಳೆದು ಅಜ್ಞಾನದಾ ಕಲಂಕ,
ಜ್ಯೋತಿ ಜೀವನವೆ ಮೂರ್ತವಾದಂತೆ ಜೀವದೇವತಾಂಕ.

ಕಲ್ಲಿನಲ್ಲೆ ದೇವತ್ವಮೂಡಿ ಆದರ್ಶವಾಗುತಿರಲು
ಮನುಜನಲ್ಲಿಯಾ ರೋಗ ಮೂಡಿ ಜೀವನವೆ ಬೊಕ್ಕುಬೋರಲು—
ಆಗುತಿಹದೊ !— ಆ ಬೀಜ ಹುರಿದು ನಿರ್ನಾಮಗೊಳಿಸಲಹುದೂ
ಅಲ್ಲಿ ಇಲ್ಲಿ ಒರಗುವುದದೇಕೆ, ತುದಿಯಲ್ಲೆ ಫಲವು ಬಹುದು !



ಬಲವಿಲ್ಲದ ಬಾನುಲಿ ಕಟ್ಟೆ

ಅಖಿಲ ಭಾರತ ಆಕಾಶವಾಣಿಸಂಸ್ಥೆಯಲ್ಲಿ ಕನ್ನಡಭಾಷೆಗೂ ಒಂದು ಮನ್ನಣೆಯ ಸ್ಥಾನ ದೊರೆತುದು ಕನ್ನಡಿಗರಿಗೆಲ್ಲ ಸಂತೋಷದ ಸಂಗತಿ. ಕರ್ನಾಟಕಕ್ಕಾಗಿಯೆ ಇಂದು ಧಾರವಾಡ ಮತ್ತು ಮೈಸೂರುಗಳ ಸ್ವತಂತ್ರ ಬಾನುಲಿಕಟ್ಟೆಗಳಿರುವುವಲ್ಲದೆ ದಿಲ್ಲಿ, ಮುಂಬಯಿ, ಮದರಾಸು, ಹೈದರಾಬಾದ್ ಈ ನಾಲ್ಕು ಕಟ್ಟೆಗಳಿಂದಲೂ ಕನ್ನಡ ಕಾರ್ಯಕ್ರಮಗಳು ಬಿತ್ತರಗೊಳ್ಳುವ ಏರ್ಪಾಡು ಇದೆ. ಆದರೆ, ಶಕ್ತಿಶಾಲಿ ಬಾನುಲಿಕೇಂದ್ರಗಳಾದ ದಿಲ್ಲಿ, ಮುಂಬೈ ಮದರಾಸು, ಹೈದರಾಬಾದುಗಳಲ್ಲಿ ಕನ್ನಡಕ್ಕೆ ದೊರೆಯುವ ಸಮಯ ತೀರ ಸ್ವಲ್ಪ. ಆದುದರಿಂದ ಆ ಕೇಂದ್ರಗಳಿಂದ ಕನ್ನಡಿಗರು ಕರ್ನಾಟಕದ ಸಾಹಿತ್ಯ–ಸಂಸ್ಕೃತಿಗಳ ವಿವಿಧಮುಖವಾದ ಕಾರ್ಯಕ್ರಮಗಳನ್ನು ನಿರೀಕ್ಷಿಸುವುದು ಸಾಧ್ಯವೇ ಇಲ್ಲ.

* * * *

ಇನ್ನು ಕನ್ನಡಿಗರಿಗೆಂದೇ ಪ್ರತ್ಯೇಕವಾಗಿ ಕಾರ್ಯ ಮಾಡುತ್ತಿರುವ ಧಾರವಾಡ, ಮೈಸೂರು ಕೇಂದ್ರಗಳು ಅಖಿಲ ಕರ್ನಾಟಕದ ಜನರಿಗೆ ಇದ್ದೂ ಇಲ್ಲದಂತಾಗಿವೆ. ಏಕೆಂದರೆ ಎರಡೂ ಕೇಂದ್ರಗ ಬಿತ್ತರಣೆಯ ಯಂತ್ರಗಳು ಅಲ್ಪಶಕ್ತಿಯವಾಗಿದ್ದು, ಕೇವಲ ಪರಿಮಿತ ಪ್ರದೇಶದ ಜನರಿಗೆ ಮಾತ್ರ ಅವುಗಳ ಪ್ರಯೋಜನ ದೊರೆಯುತ್ತಲಿದೆ. ಆ ಪ್ರದೇಶದ ಎಲ್ಲೆಯನ್ನು ಮೀರಿದ ಪ್ರದೇಶದ ಕನ್ನಡಿಗರಿಗೆ ಇವೆರಡೂ ಕೇಂದ್ರಗಳಿಂದ ಯಾವ ಪ್ರಯೋಜನವೂ ದೊರೆಯದುದರಿಂದ, ಅವರು ನಿರಾಶೆಗೊಂಡು ಬೇರೆ ಭಾಷೆಯ ಕೇಂದ್ರಗಳ ಕಾರ್ಯಕ್ರಮಗಳನ್ನು ಅನಿವಾರ್ಯವಾಗಿ ಕೇಳಬೇಕಾದ ಸಂದರ್ಭವಿದ್ದುದು ವಿಷಾದದ ಸಂಗತಿ.

* * * *

ಧಾರವಾಡ, ಮೈಸೂರು— ಎರಡೂ ಕೇಂದ್ರಗಳಲ್ಲಿಯೂ ಆಗಬೇಕಾದಷ್ಟು ಆಡಳಿತದ ವೆಚ್ಚವಾಗುತ್ತದೆ. ಕಾರ್ಯಕ್ರಮಗಳಿಗಾಗಿಯೂ ಮಾಡಬೇಕಾದ ವೆಚ್ಚ ಮಾಡಲೆಬೇಕಾಗುತ್ತದೆ. ಆದರೆ ಇಷ್ಟು ಹಣದ ವೆಚ್ಚವಾಗಿಯೂ ಎಲ್ಲ ಕನ್ನಡಿಗರ ಕಿವಿಗೆ ಕನ್ನಡ ಕಾರ್ಯಕ್ರಮಗಳು ಕೇಳಿಸದಿರುವುದು ವಿಚಾರ ಮಾಡಬೇಕಾದ ಸಂಗತಿಯಲ್ಲವೆ? ಸರಕಾರದವರು ಇವೆರಡೂ ಕೇಂದ್ರಗಳಲ್ಲಿ— ಕೊನೆಯ ಪಕ್ಷ ಒಂದು ಕೇಂದ್ರದಲ್ಲಾದರೂ— ಶಕ್ತಿಯುತವಾದ ಯಂತ್ರವನ್ನು ಪೂರಯಿಸುವುದು ಅತ್ಯವಶ್ಯವೆಂಬ ಸಂಗತಿಯನ್ನು ಅವರ ಲಕ್ಷ್ಯಕ್ಕೆ ತಂದುಕೊಡಬೇಕಾದುದು ಕನ್ನಡಿಗರೆಲ್ಲರ ಕರ್ತವ್ಯವಾಗಿದೆ. ಅದಕ್ಕಾಗಿ ನಮ್ಮ ಪತ್ರಿಕೆಗಳು ಮತ್ತೆ ಮತ್ತೆ ಬರೆದು ಬರೆದು, ಕನ್ನಡಿಗರ ಈ ಕೊರತೆಯ ಕೂಗು ಸರಕಾರದ ಕಿವಿಗೆ ಮುಟ್ಟುವಂತೆ ಮಾಡಬೇಕು. ಕನ್ನಡಕ್ಕಾಗಿ ದುಡಿಯುವ ಬೇರೆ ಬೇರೆ ಪ್ರಾದೇಶಿಕ ಸಂಸ್ಥೆಗಳೂ ಕರ್ನಾಟಕ ಸಂಘಗಳು ಇದರ ವಿಷಯ ಸಭೆಗಳನ್ನು ಕೂಡಿಸಿ, ಗೊತ್ತುವಳಿ ಮಾಡಿ ಕೇಂದ್ರದ ಅಧಿಕಾರಿಗಳ ಕಡೆಗೂ ಬಾನುಲಿಶಾಖೆಯ ಮಂತ್ರಿಗಳ ಕಡೆಗೂ ಕಳುಹಬೇಕು. ರೇಡಿಯೋ ಯಂತ್ರ ಇರಿಸಿಕೊಂಡ ಜನರೂ ವೈಯಕ್ತಿಕವಾಗಿ, ತಮ್ಮ ಈ ನ್ಯಾಯವಾದ ಬೇಡಿಕೆಯನ್ನು ಕುರಿತು ಮೇಲಿನವರಿಗೆ ಬಿನ್ನವಿಸಿಕೊಳ್ಳಬೇಕೆಂಬ ಕೂಗು ಕಿವಿ–ಮನಗಳಲ್ಲಿ ಬಂದು ಚುಚ್ಚುವವರೆಗೆ, ಸರಕಾರವು ಯಾವ ಇಂತಹ ಸಂಗತಿಯ ಕಡೆಗೂ ಲಕ್ಷ್ಯಕೊಡಲಾರದೆಂಬುದನು ನಾವು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು.

* * * *

ಇಲ್ಲಿ ಇನ್ನೊಂದು ಮಾತಿನ ವಿಮರ್ಶಾತ್ಮಕ ವಿವರಣೆಯನ್ನೂ ಮಾಡಬೇಕಾಗಿದೆ. ಧಾರವಾಡ ಮತ್ತು ಮೈಸೂರು ಕೇಂದ್ರಗಳಲ್ಲಿ ನಡೆಯುವ ದೈನಂದಿನ ಕಾರ್ಯಕ್ರಮಗಳನ್ನು ನೋಡಿದರೆ, ಮೈಸೂರು ಕೇಂದ್ರದಲ್ಲಿ ಏರ್ಪಡುವ ಕಾರ್ಯಕ್ರಮಗಳೂ, ಅವುಗಳಲ್ಲಿ ಭಾಗವಹಿಸುವ ಕಲಾವಿದರಗುಂಪೂ ಕೇವಲ ಮೈಸೂರು ಪ್ರಾದೇಶಿಕ ದೃಷ್ಟಿಯಿಂದಲೇ ಆಯ್ದುವಾಗಿರುವುವೆಂಬುದು ಸ್ಪಷ್ಟವಾಗಿ ಕಂಡುಬರುವಂತಿದೆ. ಅದೇ ಧಾರವಾಡದಲ್ಲಿ ಏರ್ಪಡುವ ಕಾರ್ಯಕಲಾಪಗಳನ್ನು ನೋಡಿದರೆ, ಅವೆಲ್ಲ ಅಖಿಲ ಕರ್ನಾಟಕದ ದೃಷ್ಟಿಯಿಂದ ಏರ್ಪಡುತ್ತಿರುವುವೆಂಬುದು ಯಾರ ಲಕ್ಷ್ಯಕ್ಕೂ ಬರುವಂತಹ ಮಾತಾಗಿದೆ. ಧಾರವಾಡಕ್ಕೆ ಬರುವ ಕಲಾವಿದರೂ ಸಾಹಿತ್ಯಿಕರೂ ಅಖಿಲ ಕರ್ನಾಟಕದ ಎಲ್ಲ ಭಾಗಗಳಿಂದಲೂ ಬರುವರು. ಉತ್ತರ–ದಕ್ಷಿಣ ಎರಡೂ ಪದ್ಧತಿಯ ಸಂಗೀತಗಾರರಿಗೂ ಇಲ್ಲಿ ಅವಕಾಶ ದೊರೆಯುವುದು. ನಾಡಿನ ಹೆಸರುವಾಸಿಗಳಾದ ವಿದ್ವಾಂಸರೆಲ್ಲರನ್ನೂ ಆಮಂತ್ರಿಸುವ ಪದ್ಧತಿಯನ್ನು ಈ ಕೇಂದ್ರದವರು ಇರಿಸಿಕೊಂಡಿದ್ದಾರೆ. ಆದುದರಿಂದಲೆ ಧಾರವಾಡ ಬಾನುಲಿಯ ಕಾರ್ಯಕ್ರಮಗಳನ್ನು ತಪ್ಪದೆ ಕೇಳಬೇಕೆಂಬ ಕುತೂಹಲ, ಕರ್ನಾಟಕದ ಎಲ್ಲ ಜನರಲ್ಲಿಯೂ ಹೆಚ್ಚುತ್ತಲಿದೆಯೆಂಬುದು ನಮ್ಮ ಅನುಭವಕ್ಕೆ ಬಂದ ಮಾತು. ಆದರೆ, ಧಾರವಾಡದ ಬಾನುಲಿಯ ಬಲಹೀನತೆ, ಅವರೆಲ್ಲರ ಕಿವಿಗೂ ತನ್ನ ಕಾರ್ಯಕ್ರಮಗಳು ಹೋಗಿ ನಿಲುಕದಂತೆ ಮಾಡಿದೆ. ಈ ಬಲಹೀನತೆ ಅದರ ಪ್ರಯೋಜನವನ್ನೇ ಕಡಿಮೆಮಾಡಿದೆ. ಭಾರತ ಕೇಂದ್ರ ಸರಕಾರವು, ಈ ಮಾತನ್ನು ಮನವರಿಕೆ ಮಾಡಿಕೊಂಡು, ಧಾರವಾಡದ ಕೇಂದ್ರವೊಂದಕ್ಕಲ್ಲಾದರೂ ಕೂಡಲೆ ಹೆಚ್ಚು ಕಿಲೋವ್ಯಾಟಿನ ಯಂತ್ರವನ್ನು ಹೊಂದಿಸಬೇಕಾಗಿ ನಮ್ಮ ಬೇಡಿಕೆ. ಈ ಬೇಡಿಕೆ ಕರ್ನಾಟಕದ ಜನರೆಲ್ಲರದೂ ಆಗಿದೆಯೆಂಬುದರ ಕಡೆಗೆ, ಬಾನುಲಿಶಾಖೆಯ ಅಧಿಕಾರಿಗಳು ಕೂಡಲೆ ಲಕ್ಷ್ಯವಹಿಸಬೇಕು.

—ಸಂಪಾದಕ

ನಾಡನಡೆ

‘ ಕಾಲಭೈರವ ’

卐

ಮತ್ತೆ ಕರ್ನಾಟಕ ಏಕೀಕರಣದ ಕೂಗು

ಕೋಗಿಲೆ ಹತ್ತುತಿಂಗಳೂ ಮೌನವಾಗಿದ್ದು, ವಸಂತಋತುವಿನಲ್ಲಿ ಬಾಯಿಬಿಡುತ್ತದೆ. ಕರ್ನಾಟಕದ ಏಕೀಕರಣದ ಕೂಗುಗಾರರಿಗೂ ಹೀಗೆಯೆ ಯಾವಾಗಲಾದರೊಮ್ಮೆ ಕೂಗಿಕೊಳ್ಳುವಂತಹ ಋತುಮಾನ ಒದಗಿಬರುತ್ತದೆ. ಅಂತಹ ಋತುಮಾನ ಈಗ ಮತ್ತೆ ಒದಗಿದಂತಿದೆ. ಮೊನ್ನೆ ಮೊನ್ನೆ ಹಾವೇರಿಯಲ್ಲಿ, ಈ ಕೂಗನ್ನು ಕೂಗುವುದಕ್ಕಾಗಿಯೇ ಕನ್ನಡಿಗರ ಸರ್ವಪಕ್ಷೀಯ ಪರಿಷತ್ತು ಸೇರಿದ್ದಿತು (ಕರ್ನಾಟಕದಲ್ಲಿ ಕಾಂಗ್ರೆಸ್ಸೊಂದನ್ನು ಉಳಿದು ಮಿಕ್ಕ ಪಕ್ಷಗಳಾವುವಾದರೂ ಇವೆಯೆ ?). ಕಾಂಗ್ರೆಸ್ ಪಕ್ಷವೊಂದನ್ನುಳಿದು ಮಿಕ್ಕ ಪಕ್ಷ (?) ಗಳ ಮುಂದಾಳುಗಳೆಲ್ಲ ಸೇರಿ, ಏಕೀಕರಣದ ವಿಚಾರದಲ್ಲಿ ಉಗ್ರವಾದ ಭಾಷೆಯುಳ್ಳ ಗೊತ್ತುವಳಿ ಮಾಡಿದರು. ಕರ್ನಾಟಕದ ರಾಜಕಾರಣದ ಹೊಣೆಗಾರಿಕೆಯೆಲ್ಲ ತಮ್ಮ ಮೇಲೆಯೇ ಇರಬೇಕೆಂದು ಬಯಸುವ ಕಾಂಗ್ರೆಸ್ ಕನ್ನಡಿಗರು, ಮಿಕ್ಕವರಿಗೆ ರಾಜಕೀಯ ವಿಷಯ ಮಾತನಾಡಲು ಅಧಿಕಾರವೆಲ್ಲಿದೆಯೆಂಬ ರೋಷದಿಂದಲೇನೋ—ಸಭೆಯನ್ನು ಬಹಿಷ್ಕರಿಸಿ ಎದ್ದುಹೋದರು. ಸಭೆಯಿಂದ ಎದ್ದುಹೋದರೂ ಕರ್ನಾಟಕ ಏಕೀಕರಣದ ಕೂಗನ್ನು ಅವರೂ ಕೂಗಲೇ ಬೇಕಾಗಿದೆ; ಏಕೆಂದರೆ, ಅಂತಹ ಹಂಗಾಮಿನ ಕಾಲವೇ ಈಗ ಬಂದಿದೆ.

ಪರಿಷತ್ತಿನಲ್ಲಿ ಉಗ್ರಭಾಷೆಯ ಗೊತ್ತುವಳಿಯನ್ನು ತಂದು ಪುರಸ್ಕರಿಸಿದ ಏಕೀಕರಣದ ಭಕ್ತರು, ಸ್ವಾತಂತ್ರ್ಯಸಾಧನೆಯ ಕಾಲದಲ್ಲಿ ಕಾಂಗ್ರೆಸ್ಸಿಗರು ಬ್ರಿಟಿಷರಿಗೆ ವಿರೋಧವಾಗಿ ಮಾಡುತ್ತಿದ್ದ ಗೊತ್ತುವಳಿಗಿಂತ ಉಗ್ರವಾದ ಭಾಷೆಯನ್ನು ಬಳಸಿದ್ದಾರೆ. ಆದರೆ ಈ ಜನರಲ್ಲಿ ಕರ್ನಾಟಕ ಏಕೀಕರಣ ವಿಷಯದಲ್ಲಿ ಇದುವರೆಗೂ ಮೂಡದ ಉತ್ಕಟವಾದಭಾವನೆ ಈಗ ಒಮ್ಮೆಲೆ ಮೂಡಿದುದು ಹಲವರಿಗೆ ಆಶ್ಚರ್ಯದ್ದಮಾತಾಗಿ ಕಾಣಬಹುದು ಆದರೆ ಸದ್ಯದ ಋತುಮಾನವೇ ಆ ಬಗೆಯದಾಗಿದೆ. ಬರಲಿರುವ ಮಹಾಚುನಾವಣೆಯಲ್ಲಿ ಭಾಗವಹಿಸಿ ಗೆಲವು ಪಡೆಯಬೇಕೆನ್ನುವವರಿಗೆ, ಈಗ ಕರ್ನಾಟಕದ ಏಕೀಕರಣದ ಕೂಗೊಂದೇ ತಾರಕಸಾಧನವಾಗಿ ಕಾಣುತ್ತಲಿದೆ. ಆದುದರಿಂದಲೇ, ಮನಸ್ಸಿನಲ್ಲಿ ಏನೇ ಇದ್ದರೂ ಕಾಂಗ್ರೆಸ್ಸಿಗರು ‘ಕರ್ನಾಟಕ ಏಕೀಕರಣ’ ಸಾಧನೆಯ ಘೋಷಣೆಯನ್ನು ಒತ್ತಿ ಒತ್ತಿ ಮಾಡಬೇಕಾಗಿದೆ. ಕಾಂಗ್ರೆಸ್ಸಿಗರನ್ನು ಸೋಲಿಸಿ ತಾವು ‘ಸರಕಾರ’ವಾಗಬೇಕೆಂಬ ಮಿಕ್ಕ ‘ಸರ್ವಪಕ್ಷೀಯ’ ಮುಂದಾಳುಗಳಿಗೆ, ಕಾಂಗ್ರೆಸಿಗರು ಏಕೀಕರಣ ವಿಚಾರದಲ್ಲಿ ಈ ಮೊದಲು ತೋರಿಸಿರುವ ಅನಾಸ್ಥೆ-ಉಪೇಕ್ಷೆಗಳೇ ಮಹತ್ತ್ವದ ಸಾಧನವನ್ನು ಕಲ್ಪಿಸಿಕೊಟ್ಟಂತಾಗಿದ್ದು, ಚುನಾವಣೆಯ ಕಾರ್ಯ ಮುಗಿಯುವವರೆಗೂ ‘ಏಕೀಕರಣ’ದ ಮಂತ್ರದ ಜಪವನ್ನೆ ಅವರು ಕಸುವಿನಿಂದ ಮಾಡಬೇಕಾಗಿದೆ. ಚುನಾವಣೆಯ ಈ ಋತುಮಾನ ಮುಗಿದ ಮೇಲೆ, ಈ ಕೂಗುವ ಕೋಗಿಲೆಗಳ ಬಾಯಿಗೆ ಮೌನದ ಮುದ್ರೆ ಬೀಳಬೇಕಾದುದು ಸ್ವಾಭಾವಿಕವೇ. ಆ ಮೇಲೆ ಈ ಕೂಗನ್ನು ಕೂಗುವ ಋತುಮಾನ ಬೇಗನೆ ಬರಲಾರದು. ಆದುದರಿಂದ, ಈ ಋತುಮಾನ ತೀರುವ ವರೆಗೆ ಕರ್ನಾಟಕ ಏಕೀಕರಣದ ಕೂಗು ಇನ್ನೂ ಉತ್ತರೋತ್ತರ ಹೆಚ್ಚಾಗಿ ಕೇಳುವುದು. ಇದರಿಂದ ಏನಾದರೂ ಆದೀತೆಂದು ಯಾರೂ ಗಾಬರಿಗೊಳ್ಳುವ ಕಾರಣವಿಲ್ಲ.

ಕರ್ನಾಟಕ ವಿ. ವಿ ನಿಲಯದ ಉಪಕುಲಪತಿಗಳು

ಕನ್ನಡಿಗರು ಈಗ ಕುತೂಹಲದಿಂದ ನಿರೀಕ್ಷಿಸುತ್ತಿರುವ ಮತ್ತೊಂದು ಮಹತ್ತ್ವದ ಸಂಗತಿಯೆಂದರೆ ಕರ್ನಾಟಕ ವಿಶ್ವವಿದ್ಯಾನಿಲಯದ ಉಪಕುಲಪತಿಯನ್ನು ಆಯ್ದು ನಿಯಮಿಸುವುದು. ಬೇಗನೆ ಈ ಆಯ್ಕೆ ನಡೆಯಲಿದೆ. ಹುರಿಯಾಳಾಗಿ ನಿಂತಿರುವ ಮೂವರಲ್ಲಿ ಒಬ್ಬರು ಮುಂಬಯಿ ಸರಕಾರದ ಶಿಕ್ಷಣ ಮಂತ್ರಿಗಳಾಗಿ ಕಾರ್ಯಮಾಡಿ ನಿವೃತ್ತರಾದ ವಯೋವೃದ್ಧ ವಕೀಲರು, ಇನ್ನೊಬ್ಬರು ಜಿಲ್ಲಾ ನ್ಯಾಯಾಧೀಶ ಪದದಿಂದ ನಿವೃತ್ತರಾದ—ಒಂದುಕಾಲದ ಜನಪ್ರಿಯ ಮುಂದಾಳುಗಳು. ಮೂರನೆಯವರು ಕರ್ನಾಟಕದಲ್ಲಿ ದೊಡ್ಡದಾದ ಒಂದು ಶಿಕ್ಷಣಸಂಸ್ಥೆಯನ್ನು ಕಟ್ಟಿ ಅದನ್ನು ಯಶಸ್ವಿಯಾಗಿ ನಡೆಯಿಸಿ ನಿವೃತ್ತರಾಗಿರುವ ಉಪಾಧ್ಯಾಯರು. ಮೂವರೂ ಒಂದಿಲ್ಲೊಂದು ಬಗೆಯಿಂದ ಜನತೆಯ ವಿಶ್ವಾಸವನ್ನು ಗಳಿಸಿಕೊಂಡವರು. ಇವರಲ್ಲಿಯ ಯಾರೊಬ್ಬರು ಆಯ್ಕೆಹೊಂದಿ ಬಂದರೂ, ಅವರು ಬರಿಮನೆಯ ಯಜಮಾನರಾಗಿ ಬರುವರೆಂಬುದನ್ನು ನಾವೆಲ್ಲರೂ ಲಕ್ಷ್ಯದಲ್ಲಿಟ್ಟುಕೊಳ್ಳಬೇಕಾಗಿದೆ.

ಲಕ್ಷ್ಮೀ-ಸರಸ್ವತಿಯರಿಗೆ ಹುಟ್ಟುಹಗೆಯೆಂಬುದು ನಮ್ಮ ನಾಡಿನದೊಂದು ಸಮಯವಾದರೂ, ಸರಸ್ವತೀ ಮಂದಿರವಾದ ನಮ್ಮ ವಿದ್ಯಾನಿಲಯವು ಲಕ್ಷ್ಮೀಪುತ್ರರ ಸಹಕಾರ ಸಹಾನುಭೂತಿಗಳಿಂದಲೇ ಬೆಳೆದು ಬಾಳಬೇಕಾಗಿದೆ. ಕನ್ನಡ ನಾಡಿನಲ್ಲಿ ಲಕ್ಷ್ಮಿ ನೆಲಗೊಂಡು ನಿಲ್ಲಬೇಕಾದರೆ, ವಿಶ್ವವಿದ್ಯಾನಿಲಯದ ಸರಸ್ವತಿಯು ಮನಮುಟ್ಟಿ ಕಾರ್ಯ ಮಾಡಬೇಕಾದೆ. ಹಳೆಯ ಕಾಲದ ಸಮಯ ಇಂದಿನ ಹೊಸಕಾಲದಲ್ಲಿ ತಲೆಕೆಳಗಾಗಿದೆ. ಸರಸ್ವತಿಯನ್ನು ಲಕ್ಷ್ಮಿ ಪೋಷಿಸಬೇಕಾಗಿದೆ ; ಲಕ್ಷ್ಮಿಯನ್ನು ಸರಸ್ವತಿ ಸಂರಕ್ಷಿಸಬೇಕಾಗಿದೆ. ಆದುದರಿಂದ ಇವರಿಬ್ಬರಲ್ಲಿ ಸಖ್ಯವನ್ನು ಬೆಳೆಯಿಸಬಲ್ಲ ಸಂಘಟನಾಕುಶಲ ನಮಗೆ ಉಪಕುಲಪತಿಯಾಗಿ ದೊರೆಯಬೇಕಾಗಿದೆ. ಬರಿಮನೆಯ ಯಜಮಾನನಾಗಿ ಬರಲಿರುವ ಈ ಹಿರಿಯ, ವಿಶ್ವವಿದ್ಯಾನಿಲಯದ ಮಹಾಮನೆಯನ್ನು ಕಟ್ಟುವುದರಿಂದ ಮೊದಲು ಮಾಡಿ, ಸರ್ವವಿಧ ಶೃಂಗಾರ, ಅನುಕೂಲತೆ, ಲೋಕಪ್ರಯೋಜಕ

ಶಕ್ತಿ ಇವೆಲ್ಲವುಗಳನ್ನೂ ತುಂಬುವ ವರೆಗಿನ ವಿಧಾತೃವಾಗಿ ಬರಬೇಕಾಗಿದೆ. ಆದುದರಿಂದ ವೈಯಕ್ತಿಕ ದಾಕ್ಷಿಣ್ಯ, ಪಕ್ಷ-ಪಂಗಡಗಳ ಅಭಿನಿವೇಶಗಳನ್ನು ಬದಿಗಿರಿಸಿ, ಅಂತಹ ವಿಧಾಯಕ ಶಕ್ತಿಯುಳ್ಳ ವ್ಯಕ್ತಿಯನ್ನೇ ಉಪಕುಲಪತಿಯನ್ನಾಗಿ ಆರಿಸುವ ಏರ್ಪಾಡು ಮಾಡಬೇಕು. ಹುರಿಯಾಳಾಗಿ ನಿಂತವರೂ, ಆಗಬೇಕಾಗಿರುವ ಕಾರ್ಯದ ಮಹತ್ತ್ವವನ್ನರಿತು, ಸಮರ್ಥರಾಗಿ ಇರುವವರಿಗೇ ಆ ಸ್ಥಾನವು ದೊರೆಯುವಂತೆ ನಡೆದುಕೊಳ್ಳಬೇಕು. ಇದರಿಂದಲೇ ಸಂಸ್ಥೆಯು ಕಲ್ಯಾಣವಾದೀತು ನಾಡಿಗೆ ಒಳ್ಳೆಯ ಹೆಸರು ಬಂದೀತು.

(೪೦ ನೆಯ ಪುಟದಿಂದ ಮುಂದೆ ಸಾಗಿದ್ದು)

ಚಿನ್ನದ ಪದಕ

ಶ್ರೀ. ವೆಂ. ಮು. ಜೋಶಿಯವರ ೬ ಕತೆಗಳ ಸಂಗ್ರಹ. ಪ್ರತಿಭಾ ಗ್ರಂಥಮಾಲೆಯ ಒಂದು ಕಿರಣವೆಂದು ಪ್ರಕಟವಾಗಿದೆ.

ಶ್ರೀ. ಜೋಶಿಯವರು ಕಳೆದ ಯುದ್ಧದಲ್ಲಿ ಸೈನಿಕರಾಗಿ ಕಾದಿದ್ದಾರೆ. ತಮ್ಮ ಯುದ್ಧಭೂಮಿಯ ಅನುಭವಗಳನ್ನೇ ಮೊದಲನೆಯ ಮೂರು ಕತೆಗಳಲ್ಲಿ ಚಿತ್ರಿಸಿದ್ದಾರೆ. ಮಿಕ್ಕ ನಾಲ್ಕರ ವಸ್ತುಗಳು ಜೀವನದಿಂದ ಎತ್ತಿಕೊಂಡುವು. ಮೊದಲನೆಯ ಕತೆ **ಚಿನ್ನದಪದಕ** — ನಡೆದ ಘಟನೆಯನ್ನೇ ಕುಶಲತೆಯಿಂದ ಹೇಳಲಾಗಿದೆ; ಕುತೂಹಲಕಾರಿಯಾಗಿದೆ. **ಹೊಸನೋಟ:**— ಈ ಸಂಕಲನದಲ್ಲಿ ನಿಜವಾಗಿಯೂ ಒಳ್ಳೆಯ ಕತೆ. ಕತೆಗೆ ಬೇಕಾಗುವ ಲಕ್ಷಣಗಳುಳ್ಳದ್ದಾಗಿದೆ. ಮಾನವತೆಯನ್ನು ಎತ್ತಿ ತೋರಿಸುವುದು. **ಸಮರದಕಥೆ** ಅಡ್ಡಿಯಿಲ್ಲ; ಸ್ವಾರಸ್ಯವಾಗಿದೆ. ಮುಕ್ತಾಯವು ದೈವದ ವಿಚಿತ್ರ ಲೀಲೆಯ ಬಗ್ಗೆ ವಿಚಾರವನ್ನು ಪ್ರಚೋದಿಸುವುದು. **ತೆರೆಯ ಮರೆಗೆ, ಒಡೆಯದ ಒಗಟು, ದೀಪದ— ಕೆಳಗೆ** ಇವು ಕಸುಕು. ಕತೆಗಾರಿಕೆ ಅಷ್ಟು ಕಾಣದು. **ರಂಗಪ್ಪನ ಸಂಸಾರ:** ಅನೇಕ ವರ್ಷಗಳಲ್ಲಿ ನಡೆದ ಸನ್ನಿವೇಶವನ್ನೇ ಸಣ್ಣಕತೆಗೆ ವಸ್ತುವನ್ನಾಗಿ ಆರಿಸಲಾಗಿದೆ. ಆಗಬೇಕಾದಷ್ಟು ಪರಿಣಾಮಕಾರಿಯಾಗಿಲ್ಲ.

ಎಲ್ಲ ಕತೆಗಳೂ ಪ್ರಾರಂಭದಿಂದ ಕೊನೆಯ ವರೆಗೆ ಓದಿಸಿಕೊಳ್ಳುತ್ತವೆ. ಹೇಳುವ ರೀತಿಯಲ್ಲಿ ಔಚಿತ್ಯ ಇದೆ. ಹದ ಇದೆ. ಕಲ್ಪಕತೆ ಮತ್ತು ರಚನಾಚಾತುರ್ಯದ ಬದಲಾಗಿ ವಾಸ್ತವತೆಯನ್ನೇ ನಾವು ಇಲ್ಲಿ ಹೆಚ್ಚಾಗಿ ಕಾಣುತ್ತೇವೆ. ಶ್ರೀ. ಜೋಶಿಯವರ ಅನುಭವ ವಿಸ್ತಾರಗೊಂಡಂತೆ ಅವರ ಕಲಾಶಕ್ತಿ ಇದಕ್ಕೂ ಹೆಚ್ಚು ಮಾರ್ಮಿಕತೆಯನ್ನು ಪಡೆದು ಮೂಲಗ್ರಾಹಿಯಾದೀತೆಂಬ ಭರವಸೆ ಕಾಣುತ್ತದೆ.

ಎಲ್. ಜೆ. ಬಿ.



BOMBAY OFFICE : Princess Street

ಚಂದಾದಾರರಲ್ಲಿ

★

ಅಂಚೆಯ ಖಾತೆಯವರು ವಿ. ಪಿ. ವೆಚ್ಚವನ್ನು ಹೆಚ್ಚಿಸಿರುವ ಸಂಗತಿ ಎಲ್ಲರಿಗೂ ಗೊತ್ತಿರಬಹುದು. ಈಗಿನ ನಿಯಮದಂತೆ ಜಯಂತಿಯನ್ನು ವಿ. ಪಿ. ಯಿಂದ ತರಿಸಿಕೊಳ್ಳುವುದಾದರೆ ೮–೯ ಆಣೆಯಷ್ಟು ಹೆಚ್ಚಿನ ವೆಚ್ಚವನ್ನು ವಹಿಸಬೇಕಾಗುವುದು. ಆದುದರಿಂದ, ನಮ್ಮ ಚಂದಾದಾರರೆಲ್ಲರೂ ತಂತಮ್ಮ ವಾರ್ಷಿಕ ಚಂದಾಹಣವನ್ನು ಮನಿಯಾರ್ಡರ್ ಮುಖಾಂತರ ಕಳುಹುವುದು ಅನುಕೂಲವೆಂಬುದನ್ನು ನೆನಪಿನಲ್ಲಿ ಇರಿಸಿಕೊಳ್ಳಬೇಕು.

ವ್ಯ. ಜಯಂತಿ

ರೇಡಿಯೋ ಪುರಾಣ

(ಒಂದು ವಾಸ್ತವ ಚಿತ್ರ).

ಶ್ರೀಮತಿ ಇಂದಿರಾ ಲಕ್ಷ್ಮೀನರಸಿಂಹರಾವ್, ಊಟಕಮಂಡ್

★

ಸಾಮಾನ್ಯ ಘಟನೆಯನ್ನೂ ಸಾಹಿತ್ಯವನ್ನಾಗಿಸಲಿಕ್ಕೆ ಕಲಾತ್ಮಕ ದೃಷ್ಟಿಬೇಕು. ರಸಮಯವಾದ ಹೃದಯ ಬೇಕು. ಎಷ್ಟು ಜನರ ಮನೆಯಲ್ಲಿ ರೇಡಿಯೋ ಯಂತ್ರ ಕೆಡುವುದಿಲ್ಲ? ಆದರೆ ಕೆಟ್ಟ ರೇಡಿಯೋ ಯಂತ್ರದ ಕತೆಯನ್ನು ಸವಿಮಾಡಿ ಹೇಳಬಲ್ಲ ರಸಿಕರು ಎಷ್ಟು ಜನರು?

★

ರೇಡಿಯೋ ಎಂದರೆ ಯಾರಿಗೆ ತಾನೆ ಇಷ್ಟವಿಲ್ಲ? ತಾನು ನಿರ್ಜೀವವಾಗಿದ್ದರೂ, ಜೀವಂತ ಜನರ ಸಂಗೀತ, ಮಾತುಕತೆ, ವಾರ್ತೆ-ವ್ಯಾಖ್ಯಾನಗಳನ್ನು—ಒಂದೂರಿನಿಂದ ಇನ್ನೊಂದೂರಿನ ಜನರಿಗೆ—ಕೇಳಿಸುವುದು. ಕೂತಲ್ಲಿಂದಲೇ ರೇಡಿಯೋದ ಕಿವಿ ತಿರುಗಿಸಿದರಾಯಿತು. ನಮ್ಮ ಬೆಟ್ಟಗಳ ತುದಿಯ ಮೇಲೆಯೇ ವಿಶಾಲ ವಿಶ್ವ ಕುಣಿಯುವುದು. ವಿದೇಶ, ಪರದೇಶ, ಸ್ವದೇಶಗಳ ವಾರ್ತೆ-ವ್ಯಾಖ್ಯಾನಗಳನ್ನೂ, ಸಂಗೀತ ಮಾತು-ಕತೆಗಳನ್ನೂ ಮನೆಯಲ್ಲಿಯೇ, ರೇಡಿಯೋದ ಎದುರು ಕುಳಿತು ಕೇಳಬಹುದು. ಸಾವಿರಾರು ಮೈಲಿಗಳಾಚೆ ಇರುವ ದಿಲ್ಲಿ, ಕಾನಪುರ, ಕಲ್ಕತ್ತೆ, ಲಖನೌ, ಲಂಡನ್‌ಗಳಲ್ಲಿರುವ ಜನರ ಸಂಗೀತ-ಮಾತುಕತೆಗಳನ್ನು ಕೇಳಬಹುದು. ಮನೆಯ ಚಿಕ್ಕಮಕ್ಕಳು ರೇಡಿಯೋ ಪೆಟ್ಟಿಗೆಯಲ್ಲಿ ಯಾರೋ ಕುಳಿತು ಹಾಡು ಹೇಳುವರೆಂದು ಬಗೆದು ಅಚ್ಚರಿಯಿಂದ ಕೇಳುವವು. ಕೆಲವು ಮಕ್ಕಳಿಗೆ ಪೆಟ್ಟಿಗೆಯಲ್ಲಿಯ ಜನರಿಗೆ ಅನ್ನ ನೀರು ಯಾರು ಒದಗಿಸುವರೆಂಬ ಚಿಂತೆ ; ಇನ್ನೂ ಕೆಲವು ಮಕ್ಕಳಿಗೆ ಆ ಚಿಕ್ಕ ವಿದ್ಯುತ್‌ತಂತಿಯಿಂದ ಪೆಟ್ಟಿಗೆಯಲ್ಲಿ ದೊಡ್ಡದೊಡ್ಡ ಸಂಗೀತಗಾರರು ಹೇಗೆ ಬಂದು ಕುಳಿತುಕೊಳ್ಳುವರೆಂಬ ಚಿಂತೆ. ಹೀಗೆ ಎಲ್ಲ ಮಕ್ಕಳನ್ನೂ ಅಚ್ಚರಿಗೊಳಿಸಿ, ಆನಂದಗೊಳಿಸುವ ರೇಡಿಯೋ ಯಾರಿಗೆ ತಾನೆ ಬೇಡ? ಕಿವಿ ತಿರುಗಿಸಿದೆವೆಂದು ರೇಡಿಯೋಯಂತ್ರ ಎಂದಿಗೂ ಅಳುವುದಿಲ್ಲ; ಬದಲು ತಿರುಗಿಸಿದವರ ಕಿವಿಯನ್ನು ಇಂಪಾದ ಸಂಗೀತದಿಂದ ತಣಿಸುವುದು. ಮನೋಹಾರಿಗಳಾದ ಕ್ಷೇತ್ರ, ಉದ್ಯಾನ, ಜಲಪಾತಗಳ ವರ್ಣನೆಗಳಿಂದ ಕಣ್ಣುಗಳನ್ನು ಅರಳಿಸುವುದು; ರುಚಿಯಾದ ತಿಂಡಿಗಳ ವರ್ಣನೆಗಳಿಂದ ನಾಲಗೆಯಲ್ಲಿ ನೀರೂರಿಸುವುದು; ವಾದ್ಯ, ಸಂಗೀತ, ನಾಟಕ, ಕಾವ್ಯವಾಚನಗಳಿಂದ ನಮ್ಮ ಭಾವಗಳನ್ನು ಕೆರಳಿಸಿ, ಮನವನ್ನು ಅರಳಿಸುವುದು. ಇಂಥ ರೇಡಿಯೋ, ಇಂಥ 'ಬಾನುಲಿ' ಯಾರಿಗೆ ತಾನೇ ಬೇಡ ?

ರೇಡಿಯೋ ಯಂತ್ರಯುಗದ ಕಾಣಿಕೆ. ವಿದ್ಯಾರ್ಥಿಗಳಿಗೆ ವಿದ್ಯೆ ಕೊಡುವ ಗುರು. ಬುದ್ಧಿ ಹೇಳುವ, ಸಂತಯಿಸುವ ಸ್ನೇಹಿತ. ಈ ಯಂತ್ರಯುಗದಲ್ಲಿದ್ದ ಇಬ್ಬರು ಹಾಯಿಸ್ಕೂಲು ವಿದ್ಯಾರ್ಥಿನಿಯರಿಗೆ, ಇಂಥ ಸ್ನೇಹಿತ ತಮ್ಮ ಮನೆಯಲ್ಲಿಯೂ ಇರಬೇಕೆನಿಸಿತು. ಮನೆಯ ಯಜಮಾನರ ವರೆಗೂ ವರದಿ ಹೋಯಿತು. "ಮಕ್ಕಳಿರಾ ನೀವು S. S. L. C. ಪಾಸಾದರೆ, ಮನೆಗೆ ರೇಡಿಯೋ ಬರುವುದು" ಎಂದು ಕರಾರು ಹಾಕಿ, ಮಕ್ಕಳನ್ನು ಸಂತಯಿಸಿದರು. ಇಬ್ಬರೂ ಅಕ್ಕ-ತಂಗಿಯರು ಇನ್ನೂ ಹೆಚ್ಚಿನ ಉತ್ಸಾಹದಿಂದ ಓದು ಸಾಗಿಸಿದರು.

ಮನೆಯ ಯಜಮಾನರು ಮಕ್ಕಳನ್ನು ಅಚ್ಚರಿಗೊಳಿಸಬೇಕೆಂದು, S. S. L. C- ರಿಜಲ್ಟು ಬರುವ ಮೊದಲೇ ರೇಡಿಯೋ ಯಂತ್ರವನ್ನು ಮನೆಗೆ ತರಿಸಬೇಕೆಂದು ಯೋಚಿಸಿದರು. ಒಳ್ಳೆವರಿಂದಲೇ ಬಾನುಲಿ ಮನೆಗೆ ಬರಲೆಂದು, ತ್ರಿಚಿಯಲ್ಲಿರುವ ಎಲೆಕ್ಟ್ರಿಕಲ್ ಎಂಜಿನಿಯರಾದ ಒಬ್ಬ ಸ್ನೇಹಿತರಿಗೆ, ಒಂದು ಒಳ್ಳೇ ರೇಡಿಯೋವನ್ನು ಪರೀಕ್ಷಿಸಿ ಕಳಿಸಬೇಕೆಂದು ಕಾಗದ ಬರೆದರು. ಆ ಸ್ನೇಹಿತರು, ಯಜಮಾನರ ಮೇಲಿರುವ ಸ್ನೇಹ-ವಿಶ್ವಾಸಗಳ ಮೂಲಕ 'AIRMEC" ಎಂಬ ಒಂದು ಒಳ್ಳೇ ರೇಡಿಯೋವನ್ನು ತೆಗೆದುಕೊಂಡು, ಅದನ್ನು "Set" ಮಾಡ ಕೂಡಲು ಸ್ವತಃ ಊಟಿಗೆ ಬಂದರು. ೫೦೦ ರೂಪಾಯಿಯ ಬಾನುಲಿಯನ್ನು ೫೦ ರೂಪಾಯಿ ಕಡಿಮೆ ಮಾಡಿಸಿ ಸ್ನೇಹಿತರು ಕೊಡಿಸಿದರು.

ಅಂದು ಮಕ್ಕಳಿಗೆಲ್ಲಾ ಸಂತೋಷವೇ ಸಂತೋಷ. ಅಣ್ಣನೊಡನೆ ಸಿನೇಮಾ ನೋಡಿಕೊಂಡು ಮನೆಗೆ ಬರುವಷ್ಟರೊಳಗಾಗಿಯೇ ರೇಡಿಯೋ ಅವರ ಕೋಣೆಯ ಮೇಜಿನ ಮೇಲೆ ಕುಳಿತಿರುವುದು ಕಂಡು ಸಂತಸಪಟ್ಟರು. ಬಹಳ ದಿನಗಳಿಂದಲೂ ಎದುರು ನೋಡುತ್ತಿರುವ ಸ್ನೇಹಿತ, S. S. L. C. ರಿಜಲ್ಟು ಬರುವ ಮೊದಲೇ ಮನೆಗೆ ಬಂದುದನ್ನು ಕಂಡು ಕಂಡು ಕುಣಿದಾಡಿದರು.

ಮನೆಯ ಯಜಮಾನರದೊಂದು ವಿಶಿಷ್ಟ ಸ್ವಭಾವ. ಎಲ್ಲ ವಸ್ತುಗಳ ಮೇಲೆಯೂ ಅವರಿಗೆ ಅಷ್ಟೇ ಪ್ರೀತಿ; ಅಷ್ಟೇ ಆಸಕ್ತಿ. ಯಾವ ವಸ್ತುವೂ ಅಲಕ್ಷ್ಯ-ಅಸಡ್ಡೆಗಳಿಂದ ಕಳೆದು ಹೋಗ ಕೂಡದು. ಕೊಳೆಯಾಗ ಕೂಡದು. ತನ್ನ ಜೀವಮಾನವಿರುವ ವರೆಗೂ ಅದು ಇದ್ದು, ಉಪಯೋಗವಾಗಿ, ಕ್ಷೀಣವಾಗಿ, ಕೃಶವಾಗಿ ನಿರುಪಯೋಗಿಯಾಗಿ ಹೋದಾಗಲೇ ಆ ವಸ್ತುವಿಗೆ ಪೆನ್‌ಶನ್. ಯಾವ ವಸ್ತುವೂ ವ್ಯರ್ಥವಾಗಿ ಹಾಳಾಗ ಕೂಡದು. ಎಲ್ಲ ವಸ್ತುಗಳನ್ನು ಸರಿಯಾಗಿ ಬಳಸಬೇಕೆಂಬುದೇ ಅವರ ತತ್ತ್ವ. ಬರೀ ತತ್ತ್ವವಲ್ಲ; ಅವರ ಆಚರಣೆಯೂ ಹಾಗೆ ಇದೆ. ಅವರ ಹತ್ತಿರ ಇರುವ ವಸ್ತುಗಳು ಎಷ್ಟೋ ಕಾಲದಿಂದ ಬಂದು ...

ವುವು ಕರವಸ್ತ್ರ, ಫಾವುಂಟನ್‌ಪೆನ್, ಸೂಜಿ, ಗುಂಡುಸೂಜಿ, ಗುಂಡಿ, ಯಾವುದೇ ಆಗಲಿ—ಅವರ ಬಳಿ ಇದ್ದರೆ, ಅವು ೮-೧೦ ವರುಷ ಬದುಕುವುದು ಖಂಡಿತ. ಅಂಥ ಒಂದು ಸೂಜಿ ಅವರ ಬಳಿ ಇರುವುದನ್ನು ಈಗಲೂ ನೋಡಬಹುದು.

ಅಂತೆಯೇ ಅವರ ಮನೆಗೆ ಬಂದ ರೇಡಿಯೋ ಕೂಡ ಬಹಳ ದಿನ ಬದುಕಬೇಕೆಂದು ಅವರು ಬಯಸಿದುದರಲ್ಲಿ ಆಶ್ಚರ್ಯವೇನು? ಮರುದಿನವೇ ಬಾನುಲಿಯನ್ನು ಹೊದಿಸಲು ಒಂದು ಗವಸಣಿಕೆ ಸಿದ್ಧವಾಯಿತು. ಬಾನುಲಿಯ ತಲೆ ಕಾದು ಕಾದು ಸಿಡಿದು ಹೋಗಬಾರದೆಂದು, ತಲೆಯ ಮೇಲೆ ಹೊದಿಸಲು ಒಂದು ಬಿಳಿಯ ಬಟ್ಟೆಯೂ ಸಿದ್ಧವಾಯಿತು. ಮಕ್ಕಳನ್ನೆಲ್ಲಾ ಮುಂದೆ ಕೂಡಿಸಿಕೊಂಡು, ಯಾವ ಯಾವ ಕೇಂದ್ರಗಳನ್ನು ಹೇಗೆ ಹೇಗೆ ತಿರುಗಿಸಬೇಕೆಂದು ಕಲಿಸಿ ಕೊಟ್ಟರು. Sound valve ಬಹಳ ದೊಡ್ಡದನ್ನಾಗಿ ಮಾಡಿ, ರೇಡಿಯೋ ಕೆಡಿಸಕೂಡದೆಂದು ಎಲ್ಲರನ್ನೂ ಎಚ್ಚರಿಸಿದರು. ನೆರೆಮನೆಯ ಚಿಕ್ಕ ಮಕ್ಕಳು, ಅಕ್ಕ ತಂಗಿಯರೊಡನೆ ಆಟ ಆಡಿ, ರೇಡಿಯೋ ಕೇಳಲು ನಿತ್ಯ ಬರುತ್ತಿದ್ದುವು. ಅವರು ನಿತ್ಯ ಬರುವುದರಲ್ಲಿ, ಮನೆಗೆ ಹಿಂತಿರುಗುವಾಗ ನಿತ್ಯ ಪೆಪ್ಪರಮಿಂಟು ಸಿಗುತ್ತದೆಂಬ ಭರವಸೆಯೂ, ಸ್ವಾಭಾವಿಕವಾದ ಸಿಹಿ ವಸ್ತುಗಳಿಗಾಗಿ ಮಕ್ಕಳಿಗೆ ಇರುವ ಆಸೆಯೂ ಆ ಚಿಕ್ಕ ಮಕ್ಕಳಿಗಿತ್ತು. ಆ ಮಕ್ಕಳು ಬಂದಾಗೆಲ್ಲ ಅವರು ಕಣ್ಣು ತಪ್ಪಿಯೂ, ರೇಡಿಯೋ ತಿರುಗಿಸದಂತೆ, ಅಕ್ಕ-ತಂಗಿಯರಿಬ್ಬರೂ ಕಾವಲಿರುತ್ತಿದ್ದರು.

ರೇಡಿಯೋ ಬಂದಂದಿನಿಂದ ಮನೆಯವರಿಗೆಲ್ಲಾ ಸಂಭ್ರಮವೇ ಸಂಭ್ರಮ. ಯಜಮಾನರು ಬೆಳಗಿನ ೮ ಗಂಟೆ— ರಾತ್ರಿಯ ೯ ಗಂಟೆಯ ಸುದ್ದಿಗಳನ್ನು ತಪ್ಪದೆ ಕೇಳುತ್ತಿದ್ದರು. ಮನೆಯ ಅಜ್ಜಿಗೆ, ಕನ್ನಡದಲ್ಲಿಯ ದೇವರ ನಾಮ, ಹರಿಕೀರ್ತನೆಗಳನ್ನು ಕೇಳುವುದರಲ್ಲಿ ಆಸಕ್ತಿ. ವಿದ್ಯಾರ್ಥಿನಿಯರಿಗೆ ಎಲ್ಲ ಬೇಕು. ಸುಬ್ಬುಲಕ್ಷ್ಮಿ, ಪಟ್ಟಮ್ಮಾಳ್, ವಸಂತ ಕೋಕಿಲೆಯರ ಸಂಗೀತವೆಂದರೆ ಅವರಿಗೆ ಹಬ್ಬ. ಅಲ್ಲದೆ ಸಾಯಂಕಾಲ ೫-೩೦ ಕ್ಕೆ ತ್ರಿಚಿಯಿಂದ ಸಂಗೀತ ಪಾಠ ಹೇಳುವಾಗ, ಮಕ್ಕಳಿಬ್ಬರೂ ಅದನ್ನು ಕೇಳಿ ಎಷ್ಟೋ ಹಾಡುಗಳನ್ನು ಕಲಿತುಕೊಂಡರು. ಅವರಣ್ಣನಿಗೆ ಇಂಗ್ಲೀಷ್ ಸಂಗೀತ, ನಾಟಕ, ವ್ಯಾಖ್ಯಾನಗಳೆಂದರೆ ಇಷ್ಟ. ಮನೆಗೆ ಬಂದ ಸೊಸೆಗೆ ಕಾವ್ಯಗಾಯನ, ಭಾಷಣಗಳು, ಹಳಗನ್ನಡ ಕವಿತಾ ವಾಚನ, ನಾಟಕ, ಮತ್ತು ಇತರ ಕನ್ನಡ ಕಾರ್ಯಕ್ರಮ ಇವುಗಳಲ್ಲಿ ಆಸಕ್ತಿ. ಮನೆಯ ಆಳುಗಳಿಗೆ ಹಳ್ಳಿಯ ಬಂಧುಗಳ ಕಾರ್ಯಕ್ರಮದಲ್ಲಿ ಪ್ರೀತಿ. ಅಲ್ಲದೆ ಬೇರುವಸಿಯಲ್ಲಿ, ಕೇಳುವವರನ್ನು ಕುಣಿಸುವ ತಾಳದಲ್ಲಿ ಬರುವ ವಾರ್ಕೆಸ್ತ್ರಸಂಗೀತ, ರೆಕಾರ್ಡ್ ಸಂಗೀತ, ಮನೆಯ ಯಜಮಾನರಿಗೆ ಬೇಸರವೆನ್ನಿಂಟು ಮಾಡಿದರೂ, ಅದು ಮನೆಯ ಮಕ್ಕಳಿಗೆಲ್ಲಾ— ನೆರೆಮನೆಯಿಂದ ಮನೆಗೆ ಬರುವ ಮಕ್ಕಳಿಗೆಲ್ಲಾ— ತುಂಬ ಇಷ್ಟ. ಆಗಾಗ ಬರುವ ವಾದ್ಯಸಂಗೀತ, ಪ್ರಸಿದ್ಧ ಸಂಗೀತಗಾರರ ಸುದೀರ್ಘ ಸಂಗೀತ ಕಾರ್ಯಕ್ರಮಗಳನ್ನು (ರಾತ್ರಿ ೮ ರಿಂದ ೯) ಮನೆಯವರೆಲ್ಲರೂ— ಊಟಿಯ ಚಳಿಯಿಂದ ಕಾಪಾಡಿ ಕೊಳ್ಳಲು ಮುಂದೆ ಒಂದೆರಡು ಕುಮುಟಿಗಳನ್ನು ಇಟ್ಟುಕೊಂಡು— ಹರಟೆಯಾಡುತ್ತ, ನಗುತ್ತ, ಒಳ್ಳೇ ಆಲಾಪನೆ ಮಾಡುವಾಗ ಗಾನ ಲೋಲರಾಗಿ, ಸಂಗೀತದಲ್ಲಿ ಲೀನರಾಗಿ, ಮನೆಯೇ ಮೂಕವಾದಂತೆ, ಮುಗ್ಧರಾಗಿ ಎಲ್ಲರೂ ಕೇಳುತ್ತಿದ್ದರು. ಹೀಗೆ ರೇಡಿಯೋ ಮನೆಯ ಅಜ್ಜಿಯಿಂದ ಆಳುಗಳವರೆಗೆ, ಎಲ್ಲರಿಗೂ ಆಪ್ತಮಿತ್ರನಾಗಿತ್ತು. ಎಂದಾದರೂ, ನಿಸರ್ಗವು ಕೋಪಗೊಂಡು ಗುಡುಗಿನಿಂದ ಗದ್ದರಿಸಿ, ಮಳೆನೀರನ್ನು ಸುರಿದಾಗ, ಊರಿನ ವಿದ್ಯುದಧಿಕಾರಿಗಳು ಅಲಕ್ಷ್ಯ ಮಾಡಿದಾಗ, ಮನೆಯೆಲ್ಲಾ ಮೂಕವಾಗಿರುತ್ತಿತ್ತು. ಅಂದು ಬಾನುಲಿಸ್ನೇಹಿತನಿಂದ ಯಾವ ಸಾಂತ್ವನವೂ ಸಂತೋಷವೂ ಇಲ್ಲ; ಸಂಗೀತವೂ ಇಲ್ಲ. ಸಂಭ್ರಮವೂ ಇಲ್ಲ. ವಿದ್ಯುತ್ತು ಬಂದಾಗ, ಮತ್ತೆ ಎಂದಿನಂತೆ ಮನೆಯ ಮಿತ್ರ ತನ್ನ ಸೇವೆಯನ್ನು ಸಲ್ಲಿಸುತ್ತಲೇ ಇದ್ದ.

ಇಂತಹ ರೇಡಿಯೋವನ್ನು ಮನೆಯ ಯಜಮಾನರು ಬಹಳ ದಕ್ಷತೆಯಿಂದ ನೋಡಿಕೊಳ್ಳುತ್ತಿದ್ದರು. ಎಂದಾದರೂ ಮೋಡಗಳ ಮೂಲಕ, ಆ ಮಿತ್ರ 'ಖಡಖಡ' 'ಫಡಫಡ' 'ಭುಯ್ಯೋಽಽ, ಭುರ್ರ್ರ್ರಽಽ' ಎಂದು ಗುರುಗುರು ಮಾಡಿದರೆ, ರೇಡಿಯೋ ಕೆಟ್ಟಿತೆಂದು, ಆ ಸ್ನೇಹಿತನು ಸಂಕಟಪಡುವುದನ್ನು ನೋಡಿ ತಾಳಲಾರದೆ, ಸುದ್ದಿಗಳನ್ನು ಕೇಳುವುದರಲ್ಲಿ ಎಷ್ಟೇ ಆಸಕ್ತಿ ಇದ್ದರೂ, ಅದನ್ನು ತಟ್ಟನೆ ಮನೆಯ ಯಜಮಾನರು ಕಿವಿ ಹಿಡಿದು ನಿಲ್ಲಿಸಿಯೇ ಬಿಡುತ್ತಿದ್ದರು. ರೇಡಿಯೋ ರೂಮಿನಲ್ಲಿ, ರೇಡಿಯೋಕ್ಕೆ ಕಸ ಹಾರದಂತೆ ಕಸಗುಡಿಸಲು ಮನೆಯಾಳಿಗೆ ಕಟ್ಟಪ್ಪಣೆಯಾಗಿತ್ತು. ಅಲ್ಲದೆ ಅಡಿಗೆಯ ಮನೆಯ ಹೊಗೆ ರೇಡಿಯೋವಿಗೆ ತಗಲದಂತೆ, ಅಡಿಗೆಮನೆಯ ಕದವನ್ನು— ಅಡಿಗೆ ಮಾಡುವಾಗ—ಭದ್ರವಾಗಿ ಮುಚ್ಚುವಂತೆ, ಮನೆಯ ಅಜ್ಜಿಯವರಿಗೂ ಹೇಳಲಾಗಿತ್ತು. ಮಕ್ಕಳೇ ಆಗಲೀ, ಸೊಸೆಯೇ ಆಗಲಿ, ಯಾರೇ ಅಡಿಗೆಮನೆಯನ್ನು ಹೊಕ್ಕರೂ, ಆ ಕದವನ್ನು ಮಾತ್ರ ಮುಚ್ಚಿಕೊಂಡು ಹೋಗಬೇಕು, ಮುಚ್ಚಿಕೊಂಡು ಬರಬೇಕು— ಎಂಬುದನ್ನು ಮರೆಯಕೂಡದು. ನಿತ್ಯ ರಾತ್ರಿ ಮಲಗುವಾಗ, ಅದಕ್ಕೆ ಸರಿಯಾಗಿ ಗೌಸಣಿಗೆ ಹಾಕಿ, ಬಟನ್ ಒತ್ತಿ, ಎಲ್ಲ ಸರಿಯಾಗಿದೆಯೆಂಬುದನ್ನು ನೋಡಿಕೊಂಡೇ ಮನೆಯ ಯಜಮಾನರು ಮಲಗುತ್ತಿದ್ದರು. ಅದೂ ಒಂದು ತಮ್ಮ ಅಚ್ಚುಮೆಚ್ಚಿನ ಮಗುವೆಂದೇ ಅದನ್ನು ಭಾವಿಸುತ್ತಿದ್ದರು.

ಇನ್ನೂ ಒಂದು ವೈಶಿಷ್ಟ್ಯ: ಮನೆಯಲ್ಲಿ ಯಾವ ದೀಪದ ಸ್ವಿಚ್ಚನ್ನು ಹಾಕುವುದಿದ್ದರೂ, ರೇಡಿಯೋ ಹಾಡುತ್ತಿದ್ದರೆ, "ರೇಡಿಯೋ ಹಿಡಿ, ರೇಡಿಯೋ ಹಿಡಿ!" ಎಂದು ಹಾಕುವವರು ಕೂಗಬೇಕು. ಸಂದರ್ಭ ನಿಮಿಷವಾದ ಮೇಲೆ, ದೀಪದ ಸ್ವಿಚ್

ಆನ್ ಮಾಡಿದ ಮೇಲೆ "ಹೂ, ರೇಡಿಯೋ ಬಿಡುಬಿಡು!" ಇಲ್ಲವೆ ಬರೀ "ಹೂಂ ಹೂಂ ಆಯ್ತು" ಎಂದು ದೀಪಹಾಕಿದವರು ಹೇಳಬೇಕು. ಆಮೇಲೆ ಮತ್ತೆ ರೇಡಿಯೋ ತನ್ನ ಕೆಲಸ ಶುರುಮಾಡುತ್ತಿತ್ತು. ಹೊಸದಾಗಿ ಮನೆಗೆ ಬಂದ ಸೊಸೆಗೆ ಒಂದೆರಡು ದಿನ, ರಾತ್ರಿಯೆಲ್ಲಾ ದೀಪ ಹಾಕುವಾಗ, ಆರಿಸುವಾಗ, ಇದೇನು "ಹಿಡಿ ಹಿಡಿ, ಬಿಡು ಬಿಡು!" ಎಂಬ ಗಲಾಟೆ— ಎಂಬುದು ಗೊತ್ತಾಗಲಿಲ್ಲ. ಯೋಚಿಸಿದರೂ ಅರ್ಥವಾಗಲಿಲ್ಲ. ಒಂದು ದಿನ, ಒಬ್ಬ ನಾದಿನಿಯನ್ನು ಕೇಳಿಯೇ ಬಿಟ್ಟಳು: "ರಾತ್ರಿಯೆಲ್ಲಾ ಇದೇನು ಈ ಹಿಡಿ ಬಿಡು ಗಲಾಟೆ?" ಎಂದು. ಆಕೆ, "ರೇಡಿಯೋ ಹಾಕಿರುವಾಗ, ಯಾವ ದೀಪವನ್ನೇ ಆಗಲಿ ಆನ್ ಅಥವಾ ಆಫ್ ಮಾಡಿದರೆ, ರೇಡಿಯೋ ಘೊರ್, ಘೊರ್ರ್ ಎಂದು ಶಬ್ದಮಾಡುವುದರಿಂದ, ದೀಪಹಾಕುವಾಗ, ರೇಡಿಯೋದ ಉಸಿರನ್ನೇ ಶಬ್ದವನ್ನೇ ನಿಲ್ಲಿಸುವುದಗತ್ಯ—ಎಂದು ಮನೆಯ ಯಜಮಾನರು ಹೇಳಿರುವರು" ಎಂದು ಅರ್ಥವಿವರಣೆ ಮಾಡಿದಳು. "ಅಬ್ಬಬ್ಬಾ, ಅದೆಷ್ಟು ಜಾಗರೂಕತೆ ರೇಡಿಯೋ ಕುರಿತು!" ಎಂದು ಸೊಸೆ ಆಶ್ಚರ್ಯಪಟ್ಟಳು. ಇಷ್ಟೊಂದು ಮಮತೆಯಿಂದ ಬಾನುಲಿಮಗುವನ್ನು ಮನೆಯ ಯಜಮಾನರು ನೋಡಿಕೊಳ್ಳುತ್ತಿದ್ದರು.

ರೇಡಿಯೋ, ಯಜಮಾನರಿಗೂ ಮನೆಯ ಜನರಿಗೂ ಒಂದು ಗಡಿಯಾರದಂತಿತ್ತು. ರಾತ್ರಿ ೯–೧೫ ರ ವರೆಗೆ ನ್ಯೂಜ್ ಆದ ಕೂಡಲೆ, ಬೆಳಗಿನಿಂದ ಸೇವೆ ಸಲ್ಲಿಸುತ್ತಿದ್ದ ಬಾನುಲಿಗೆ ವಿಶ್ರಾಂತಿ. ಆ ಹೊತ್ತಿಗೆ ಎಷ್ಟೇ ಕೆಲಸವಿದ್ದರೂ, ಅಜ್ಜಿ ಮತ್ತು ಸೊಸೆ, ಕೆಲಸಗಳನ್ನು ಮೊದಲೇ ಮುಗಿಸಿರಬೇಕು. ಸುದ್ದಿ ನಡೆದಾಗ, ಯಾವ ಶಬ್ದವೂ ಆಗಕೂಡದು. ಪಾತ್ರೆ, ಬಾಗಿಲು, ತಟ್ಟೆಗಳು, ಲೋಟಗಳು, ಮೇಜು, ಖುರ್ಚಿ, ಯಾವುದರ ಸದ್ದೂ ಆಗಕೂಡದು. ಆದಕ್ಕಾಗಿ ಅಷ್ಟೊತ್ತಿಗೇ ಎಲ್ಲರ ಕೆಲಸ ಮುಗಿದಿರಬೇಕು. ಮನೆಯ ಅಜ್ಜಿ ಒಂದೊಂದು ಸಲ ಕೆಲಸ ಜಾಸ್ತಿಯಾದಾಗ, ಸುದ್ದಿ ಬರುವ ಹೊತ್ತಿನಲ್ಲಿಯೇ ಅಡಿಗೆಯಮನೆಯ ಕದ ಮುಚ್ಚಿಕೊಂಡು, ಅಡಿಗೆಮನೆ ಸಾರಿಸಿ, ಅಡಿಗೆಮನೆಯ ಬಚ್ಚಲನ್ನು ಪೊರಕೆಯಿಂದ ಕೆರೆದು ತೊಳೆಯುವ ಕೊನೆಯ ಕೆಲಸ ಮಾಡುತ್ತಿದ್ದರು. "ಏನದು ಆ ಕರಾಬರಾ ಕರಾಬರಾ ಶಬ್ದ? ಮೊದಲೇ ಮುಗಿಸಬಾರದೇ?" ಎಂದು ಯಜಮಾನರು ಕೇಳುವರು. ಎಷ್ಟೇ ಕೆಲಸವಿದ್ದರೂ, ಅಜ್ಜಿ ಸೊಸೆ ಇಬ್ಬರೂ ಸೇರಿ, ೯ ಗಂಟೆಯಾಗುವ ಮೊದಲೇ, ಎಲ್ಲ ಕೆಲಸವನ್ನೂ ಮುಗಿಸಿಬಿಡುತ್ತಿದ್ದರು. ಒಮ್ಮೊಮ್ಮೆ ಕಸಪೊರಕೆಯಿಂದ 'ಕರಾಬರಾ' ಎಂದು ಕೊನೆಯ ಕೆಲಸ ಮುಗಿಸುವ ಹೊತ್ತಿಗೇನೇ ನ್ಯೂಜ್ ಹೇಳುವವನು "This is All India Radio giving you the news" ಎಂದು ಬಂದೇ ಬಿಡುತ್ತಿದ್ದನು: "ಬಂದನೇ ಈ ಮಹಾರಾಯಾ?" ಎಂದು ಅಜ್ಜಿ ಉಸಿರೆಳೆಯುವರು. "ಅಮ್ಮಾ, ಅವನಿಗೆ ಕರುಣೆ ಕಕುಲಾತಿ ಎಂಬುದೇ ಇಲ್ಲ ನೋಡಿ. ಕಸಗುಡಿಸುವಾಗ ಬರಕೂಡದೆಂಬ ಬುದ್ಧಿಯೇ ಅವನಿಗಿಲ್ಲ" ಎಂದು ಸೊಸೆ ಹೇಳುವಳು. ಇಬ್ಬರೂ ನಗುತ್ತಿದ್ದರು. "ಅವನು ತನ್ನ ಹೊತ್ತಿಗೆ ಬರುವನು. ಅವನಿಗೆ ಯಾರು ಬುದ್ಧಿ ಹೇಳಬೇಕು?" ಎಂದು ಅಜ್ಜಿ ಹೇಳುವರು. ಅಂತೂ ಅವನು ಬರುವ ಮೊದಲೇ, ಎಲ್ಲ ಕಾರ್ಯಗಳನ್ನೂ ಪೂರಯಿಸಲು ಇಬ್ಬರೂ ನಿಶ್ಚಯಿಸುತ್ತಿದ್ದರು. ಹೀಗೆ ಬಾನುಲಿ ಎಲ್ಲರಿಗೂ ಗಡಿಯಾರದಂತಿತ್ತು. ನ್ಯೂಜ್ ಮುಗಿದ ಕೂಡಲೇ, ಎಲ್ಲರೂ ಎಲೆ ಅಡಿಕೆ ಹಾಕಿಕೊಂಡು ಮಲಗಲೇ ಬೇಕು. ೯-೩೦ ರ ನಂತರ ಯಾರೂ ಎಚ್ಚರಿರಕೂಡದು.

ಸಂಸ್ಕೃತ ಶ್ಲೋಕಗಳನ್ನು ಸರಾಗವಾಗಿ ಹೇಳಿದಾಗ "ವಾಹವ್ವಾ ಭೇಷ್," ಎಂದೂ, ಅಪಸ್ವರ—ಕಿವಿಗೆ ಹಿತವಾಗದ ಕಂಠದ ಸಂಗೀತ ಕೇಳಿದಾಗ "ಸಾಕು ಮಹಾರಾಯಾ, ಬೇಗ ತೊಲಗು" ಎಂದೂ ಮನೆಯ ಯಜಮಾನರು ಹೇಳುತ್ತಿದ್ದರು

ಈ ರೀತಿಯಾಗಿ ರೇಡಿಯೋ ಮನೆಯವರೆಲ್ಲರನ್ನೂ ಒಂದಿಲ್ಲೊಂದು ಬಗೆಯಲ್ಲಿ ಸಂತೋಷಪಡಿಸುತ್ತಿತ್ತು. ಎಲ್ಲರೂ ಅದನ್ನು 'ಸನ್ಮಿತ್ರಸಂಜೀವಿ,' 'ಸದುಪಯೋಗಿ' ಎಂದು ಗೌರವಿಸುತ್ತಿದ್ದರು. ಯಜಮಾನರು ತಮ್ಮ ಮೆಚ್ಚಿನ ಮಗು— ತಮ್ಮನ್ನು ಸಂತೋಷ-

ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ZANDU

PROTOCASEN

Whole Casein Hydrolysate

PALATABLE AND POWERFUL NUTRITIVE TONIC FOR ORAL ADMINISTRATION IN ALL RUNDOWN CONDITIONS OF HEALTH

Biological Laboratory

The Zandu Pharmaceutical Works, Ltd.
BOMBAY 14.

Sole Agents:—

M/s. Pranlal and Sons
Chemists, Druggists
Station Road. HUBLI

(H. O. Bangalore City)

ನಡಿಸುವ ಮಗು— ಬಹಳ ದಿನ ಬದುಕಬೇಕೆಂದೂ, ಬದುಕಿಸಬೇಕೆಂದೂ ನಿರ್ಧರಿಸಿದರು.

ಆದರೆ ?....? ವಿಧಿವಿಲಾಸವನ್ನು ಯಾರು ಬಲ್ಲರು ? ಮನೆಗೆ ಬಾನುಲಿ ಬಂದು ೩ ವರುಷಗಳಾಗಿದ್ದುವು. ಮನೆಯವರೆಲ್ಲರ ದಕ್ಷತೆಯ ಫಲವೋ, ಅದು ಎಳ್ಳಷ್ಟೂ ಕೆಟ್ಟುಹೋಗದೆ, ತನ್ನ ಕಾರ್ಯವನ್ನು ಮಾಡುತ್ತಿತ್ತು. ಎಂದೂ 'ಗೊರ್ರ್, ಗೊಂಯ್',' ಎಂದು ತಕರಾರು ಮಾಡಲಿಲ್ಲ. ಒಂದು ಸಲವಾದರೂ ರಿಪೇರಿಮನೆಗೆ ಹೋಗಲಿಲ್ಲ. ಆದರೆ ದೈವದ ಆಟವನ್ನು ಅರಿಯಲು ಯಾರಿಗೆ ತಾನೇ ಸಾಧ್ಯ ?

ಆ ದುರ್ದಿನ ಬೆಳಗಿತು- ಇದ್ದಕ್ಕಿದ್ದಂತೆಯೇ ಆ ಬೆಳಗು, ಬಾನುಲಿ ಬೇನೆಬಿದ್ದವರಂತೆ, 'ಸುಯ್ಯ್‌ss, ಸುರ್ರ್ss' ಎಂದು ನರಳಾಡತೊಡಗಿತು. 'ಘೊರ್ರ್ss ಘೊರ್ರ್ss' ಎಂದು ಗರ್ಜಿಸತೊಡಗಿತು. ಯಾವ ಕೇಂದ್ರ ತಿರುಗಿಸಿದರೂ ಸಿಡುಕಿನಿಂದ, ನಡುಕುವಿಕೆಯಿಂದ, ಅಸ್ವಸ್ಥತೆಯಿಂದ, ನಾನಾತರದ ಅಪೂರ್ವ ಶಬ್ದಗಳನ್ನು ಹೊರಡಿಸತೊಡಗಿತು. ಅದಕ್ಕೇನಾಗಿದೆಯೆಂದು ಯಾರಿಗೂ ತಿಳಿಯಲಿಲ್ಲ. ಬೆಳಗಿನ ವಾರ್ತೆಗಳನ್ನು ಕೂಡ ಹೇಳಲಿಲ್ಲ. ಸಂಗೀತ ಕೇಳುವುದೂ ದುಃಸಾಧ್ಯವಾಯಿತು. 'ಇಷ್ಟೊಂದು ದಕ್ಷತೆಯಿಂದ, ಆಸಕ್ತಿಯಿಂದ ೩ ವರುಷ ಬೆಳಸಿದ ಮಗುವಿಗೆ ಏನಾಯಿತೋ' ಎಂದು ಯಜಮಾನರಿಗೆ ಚಿಂತೆಯಾಯಿತು. ತಮ್ಮ ದಕ್ಷತೆಯಲ್ಲಿ ಇನ್ನೇನು ಕೊರತೆಯುಂಟಾಯಿತೋ ಎಂದು ಅವರಿಗೆ ಕೊರಗುಂಟಾಯಿತು. ಮಕ್ಕಳಿಗೆಲ್ಲಾ, 'ತಮ್ಮ ಸ್ನೇಹಿತ ತಮಗೆ ಕೇಳಿಸುತ್ತಿದ್ದ ಸಂಗೀತ-ನಾಟಕಗಳ ಸಂಭ್ರಮವಿಲ್ಲವಲ್ಲಾ' ಎಂಬ ಸಂಕಟವಾಗಿ, ಮುಖ ಚಿಕ್ಕದಾಯಿತು. ಆಗಾಗ ರೇಡಿಯೋ ಕಿವಿ ತಿರುಗಿಸಿ ರೇಡಿಯೋಕ್ಕೆ ಉಸಿರು ಇದೆಯೋ ಇಲ್ಲವೋ ಎಂಬುದನ್ನು ಅವರೂ ನೋಡುತ್ತಿದ್ದರು. ಮಧ್ಯಾಹ್ನದ ಬಿಸಿಲು ಏರಿದಂತೆಲ್ಲ ಬಾನುಲಿಯ ಬೇನೆ ಬಲಿಯತೊಡಗಿತು. ಹಾಕಿದಾಗೆಲ್ಲಾ ಇನ್ನೂ ಜೋರಾಗಿ 'ಘೊರ್ರ್s ಘೊರ್ರ್s' ಎಂದು ಗೋಳಿಟ್ಟಿತು. ಅಖಿಲ-ವಿಶ್ವದ ವಾರ್ತೆಗಳನ್ನೆಲ್ಲಾ ಹೇಳಿ ಹೇಳಿ ಸವೆಯುತ್ತಿರುವ ಬಾನುಲಿಗೆ, ತನ್ನ ಬೇನೆ ಏನು, ತನ್ನ ಸಂಕಟವೇನು, ತನಗೇನಾಗಿದೆ ?—ಎಂಬುದನ್ನೇ ಹೇಳಲು ಬಾಯಿಲ್ಲದಾಯಿತು. ಇದೆಂಥ ವೈಚಿತ್ರ್ಯ ! ತಮ್ಮ ಸಂಕಟಗಳನ್ನೆಲ್ಲ ಬಚ್ಚಿಟ್ಟುಕೊಂಡು, ಪರರ ಸುಖಕ್ಕಾಗಿ ತೇದು ತೇದು, ಸುಟ್ಟು ಸುಟ್ಟು, ಊದುಕಡ್ಡಿಯಂತೆ ತಮ್ಮ ಪ್ರಾಣನೀಗುವುದೇ ಯೋಗಿಗಳ ಲಕ್ಷಣವಲ್ಲವೇ ? ಅಂತೆಯೇ ಯಜಮಾನರ ಮನೆಯ ರೇಡಿಯೋ ಕೂಡ ಯೋಗಿಯೇ ಅಲ್ಲವೇ ?

ಮಧ್ಯಾಹ್ನವೆಲ್ಲಾ 'ಗೊರ್ ಗೊರ್' ಎಂದು ನರಳುವ ರೇಡಿಯೋ, ಸಾಯಂಕಾಲ ತಟ್ಟನೆ ನಿಂತೇಹೋಯಿತು. ರೇಡಿಯೋ ಉಸಿರು ನಿಂತಿತು. ಮನೆಯ ಶಾಂತಿ-ಸಂಭ್ರಮ ಮಾಯವಾಯಿತು! ಮನೆಯವರೆಲ್ಲರ ಮುಖಗಳು ಬಾಡಿದುವು. ಮನೆಯ ಯಜಮಾನರ ಕೊರಗಂತೂ ವರ್ಣಿಸಲಳವಲ್ಲ. ಮಧ್ಯಾಹ್ನವೇ ಅದು ಸಂಕಟಪಡುತ್ತಿರುವುದನ್ನು ಕಂಡು, ತಾವೂ ಸಂಕಟದಿಂದ ಕಸಿವಿಸಿಗೊಂಡು "ಸುಮ್ಮನೆ ಅದನ್ನು ಹಾಕಿ ನರಳಿಸಬೇಡಿರಮ್ಮಾ!" ಎಂದು ಹೇಳಿ ಆಫೀಸಿಗೆ ಹೊರಟುಹೋಗಿದ್ದರು. ಸಾಯಂಕಾಲ ಅದು ಉಸಿರನ್ನು ಕಳೆದುಕೊಂಡುದನ್ನು ಕಂಡು, ಅವರೂ ಒಂದು ಉಸಿರನ್ನೆಳೆದರು. "ಇನ್ನೇನು ಮಾಡುವುದು ? ನಾಳೆ ಬೆಳಗ್ಗೆಯೇ ಅದನ್ನು ರಿಪೇರಿಮನೆಗೆ ಕಳಿಸಬೇಕು" ಎಂದು ಮಗನಿಗೆ ಹೇಳಿದರು. ಆ ಸಾಯಂಕಾಲವೇ ಆಳಿಗೆ, ಎಂದಿಗಿಂತಲೂ ಮರುದಿನ ಬೇಗ ಮನೆಗೆ ಬರಲು ಹೇಳಿಕಳಿಸಿದರು. ಅಂದು ರಾತ್ರಿ ಸುದ್ದಿಸಾರುವವನು ಬರಲಿಲ್ಲವೆಂದು, ಎಲ್ಲರಿಗೂ ವಿಶೇಷವಾಗಿ ಯಜಮಾನರಿಗೆ ಬಹಳ ವ್ಯಥೆಯಾಯಿತು.

ಮರುದಿನ ಬೆಳಗು ಆಳು ಬಂದ. ರಟ್ಟಿನ ದೊಡ್ಡ ಪೆಟ್ಟಿಗೆಯಲ್ಲಿ ಅದನ್ನಿಟ್ಟ. ಒಂದು ದಾರವನ್ನು ಅದರ ಸುತ್ತು ಬಿಗಿದ. ಹೊತ್ತುಕೊಂಡು ಬಾಗಿಲ ಹೊರಗೆ ಹೊರಟ, ರಿಪೇರಿಮನೆಗೆ ಒಯ್ಯಲು. ಹಿಂದೆ ಮಗನೂ ಹೊರಟ. ತಮ್ಮ ನಚ್ಚಿನ ಸ್ನೇಹಿತನ ಆ ಸ್ಥಿತಿಯನ್ನು ಕಂಡು, ಮನೆಯ ಮಕ್ಕಳಿಗೂ ಸೊಸೆಗೂ ಕಣ್ಣೀರಿಡುವಂತಾಯಿತು.

ಮೂರು ಮೈಲಿ ದೂರದಲ್ಲಿರುವ ರೇಡಿಯೋರಿಪೇರಿ ರಾಮಯ್ಯನವರ ಮನೆಯವರೆಗೂ ಆ ಮೆರವಣಿಗೆ ನಡೆಯಿತು. ದುರದೃಷ್ಟ-

ದಿಂದ ರಿಪೇರಿ ರಾಮಯ್ಯ ಅಂದು ಮನೆಯಲ್ಲಿಯೇ ಇರಬಾರದೇ? ಆಳು ತನ್ನ ತಲೆಭಾರವನ್ನು ಅವರ ಮನೆಯಲ್ಲಿ ಇಳಿಸಿದ; ರಾಮಯ್ಯರಿಗೆ ರೇಡಿಯೋವನ್ನು ಸರಿಪಡಿಸಲು ಹೇಳುವಂತೆ ಮನೆಯವರಿಗೆ ತಿಳಿಸಿ, ಆಳು ಮತ್ತು ಮಗ ಇಬ್ಬರೂ ಹಿಂದಿರು-ಗಿದರು. ೬ ಮೈಲಿ ನಡೆದು ಬಂದರೂ, ಮಗನಿಗೆ ಬಾನುಲಿಗೆ ಏನು ಕಾಹಿಲೆ ಎಂಬುದು ಗೊತ್ತಾಗಲಿಲ್ಲ.

ಮನೆಯಲ್ಲಿ ಕಾಲಿಟ್ಟ ಕೂಡಲೆ ಮಕ್ಕಳು, ಸೊಸೆ, ಎಲ್ಲರೂ ಏಕಕಂಠದಲ್ಲಿ "ರೇಡಿಯೋಕ್ಕೆ ಏನಾಗಿತ್ತು?" ಎಂದು ಕೇಳಿದರು. "ರಿಪೇರಿಯವನು ಮನೆಯಲ್ಲಿರಲಿಲ್ಲ" ಎಂದು ಕುಗ್ಗಿದ ದನಿಯಲ್ಲಿ, ನಡೆದುಬಂದ ದಣಿವಿನಲ್ಲಿ ಮಗ ಹೇಳಿದ. ಅಡಿಗೆಯ ಮನೆಯ ಕದ ತೆರೆದು, ಅಜ್ಜಿ ಹೊರಗೆ ಬಂದು "ಏನಾಗಿತ್ತು ಮಗು?" ಎಂದು ಕೇಳಿದರು. ಮೇಲಿನ ನಿರಾಶೆಯ ಉತ್ತರವನ್ನೇ ಅಜ್ಜಿಗೂ ಮಗ ಹೇಳಿದ. ಯಜಮಾನರು ಮನೆಯಲ್ಲಿರಲಿಲ್ಲ. ಆಫೀಸಿಗೆ ಹೋಗಿದ್ದರು.

ಎರಡು ದಿನಗಳಿಂದ ಮನೆ ಮೂಕವಾಗಿತ್ತು. ಮಸಣದಂತಾ-ಗಿತ್ತು. ಮಕ್ಕಳನ್ನು ಸಂತೈಸಲು ಸುಬ್ಬುಲಕ್ಷ್ಮಿ, ಪಟ್ಟಮ್ಮಾಳ್, ವಸಂತಕೋಕಿಲೆ ಇವರಾರೂ ಓಡಿಬರಲಿಲ್ಲ. ನೆರೆಮನೆಯ ಮಕ್ಕ-ಳನ್ನು ಕುಣಿಸುವ ರೆಕಾರ್ಡುಸಂಗೀತ ಇಲ್ಲದಾಯಿತು. ಅಕ್ಕತಂಗಿ-ಯರ ಐದೂವರೆ ಗಂಟೆಯ ಸಂಗೀತವೇನು ಬರಲೇ ಇಲ್ಲ. ಮಗ ಸೊಸೆಯರನ್ನೂ ಮಕ್ಕಳನ್ನೂ ರಂಜಿಸುವ ವ್ಯಾಖ್ಯಾನ, ನಾಟಕ, ಕಾವ್ಯವಾಚನ, ಇಂಗ್ಲಿಷು ಸಂಗೀತ, ವಾದ್ಯಸಮ್ಮೇಳನ ಇದಾವುದೂ ಮನೆಯಲ್ಲಿ ಇಲ್ಲದಾಯಿತು. ಅಜಾಮಿಳ-ಪ್ರಲ್ಹಾದರ ಹರಿಕೀರ್ತನೆ ಹೇಳುವ ಹರಿದಾಸರೂ, ದೇವರ ನಾಮ ಹೇಳುವ ಸಂಗೀತಗಾರರೂ, ಯಾರೂ ಮನೆಯಜ್ಜಿಯ ಮನವನ್ನು ಸಂತೈ-ಸಲು ಬರಲಿಲ್ಲ. ಆಳುಗಳಿಗೆ ಹಳ್ಳಿಯ ಕಾರ್ಯಕ್ರಮವಿಲ್ಲ. ರಾತ್ರಿ-ಯಲ್ಲಿ "ಹಿಡಿಬಿಡು" ಗಲಾಟೆ ನಿಂತುಹೋಯಿತು. ಯಾರು ಬೇಕಾದವರು 'ಚಟ್‌ಪಟ್' ಎಂದು—'ಹಿಡಿಬಿಡು.' ಎನ್ನದೆ—ದೀಪ ಹಾಕತೊಡಗಿದರು. ಕ್ಷಣಕ್ಷಣಕ್ಕೂ ಮನೆಯವರೆಲ್ಲರಿಗೂ ಬಾನುಲಿಸ್ನೇಹಿತನ ನೆನಪು ಉಕ್ಕಿಬರುತ್ತಿತ್ತು. ಅಂದು ಬೆಳಗು-ರಾತ್ರಿ ಸುದ್ದಿಗಳಿಲ್ಲವೆಂದು, ಯಜಮಾನರಿಗೆ ಹೇಗೆ ಹೇಗೋ ಆಯಿತು. ಅವರ ಗಡಿಯಾರ ನಿಂತು ಹೋಯಿತು. ಕಸಗುಡಿ-ಸುವ ಆಳು ಕೂಡ, ದುರ್ಲಕ್ಷ್ಯದಿಂದ ಕಸಗುಡಿಸತೊಡಗಿದ. ಅಡಿಗೆ-ಮನೆಯ ಕದ ಭದ್ರವಾಗಿ ಮುಚ್ಚುವಾಗ, 'ಅಯ್ಯೋ ರೇಡಿಯೋ ಇಲ್ಲವಲ್ಲ' ಎಂದು ಎಲ್ಲರಿಗೂ ಅಳುಕು. ಕಸಪೊರಕೆಯ 'ಕರಾಬರಾ' ಆ ಎರಡು ದಿನ ಯಥೇಚ್ಛವಾಗಿ ಸಾಗಿಸುವಂತಾಯಿತು. ಆ ರೇಡಿಯೋ ರೋಗವನ್ನೇ ರಾತ್ರಿ ಆಡುತ್ತ ಆಡುತ್ತ, ಗಡಿಯಾರ-ವಾಗಿದ್ದ ಆ ರೇಡಿಯೋ ಇಲ್ಲದುದರಿಂದ ೯-೧೫ರ ಗಡುವು ಮೀರಿ ಹೋಗಿ, ಎಲ್ಲರಿಗೂ ಮಲಗಲು ಎರಡು ದಿನ ಹತ್ತು-ಹತ್ತೂವರೆ ಯಾಯಿತು. ರೇಡಿಯೋ ಇಲ್ಲವೆಂಬ ಚಿಂತೆಯಲ್ಲದೆ, ಈ ಅನಿಯ-ಮಿತತೆಯಿಂದ, ಮರುದಿನ ಯಜಮಾನರಿಗೆ ಕೊಂಚ ತಲೆನೋವೂ ಬಂತು. ಎಲ್ಲರೂ ರೇಡಿಯೋರೂಮಿನ ಖಾಲೀ ಸ್ಥಳವನು ನೋಡಿ ನೋಡಿ 'ರೇಡಿಯೋ ಇಲ್ಲವಲ್ಲ!' ಎಂದು ಮರುಗುತ್ತಿದ್ದರು. ಕ್ಷಣಕ್ಷಣಕ್ಕೂ ನೆನೆ-ನೆನೆದು ಕೊರಗುತ್ತಿದ್ದರು.

ಆಫೀಸಿನಿಂದ ಯಜಮಾನರು ಬಂದಮೇಲೆ "ಏನಾಗಿತ್ತು ರೇಡಿಯೋಕ್ಕೆ?" ಎಂದು ಮನೆಗೆ ಬಂದವರೇ, ಮಗನ ಜೊತೆಗೆ ಹೊರಟೇ ಬಿಟ್ಟರು—ರಿಪೇರಿ ರಾಮಯ್ಯನ ಮನೆಗೆ. ೩ ಮೈಲಿ ದಾರಿ ತುಳಿದ ಮೇಲೆ ರಾಮಯ್ಯನ ಮನೆ ಬಂತು. ಯಜಮಾನರ ಪರಿಚಯದವನಾದ ರಾಮಯ್ಯ, ಸುದೈವದಿಂದ ಮನೆಯಲ್ಲಿಯೇ ಇದ್ದ. ಇವರನ್ನು ಕಂಡು ನಮಸ್ಕಾರ ಮಾಡಿದವನೇ, ರಾಮಯ್ಯ ಗೊಳ್ಳನೆ ನಕ್ಕುಬಿಟ್ಟ! ಯಜಮಾನರಿಗೆ ಅವನ ನಗೆ ಅರ್ಥವಾಗ-ಲಿಲ್ಲ. 'ರೇಡಿಯೋ ಇಲ್ಲದೆ ಮನಸ್ಸು ವ್ಯಗ್ರವಾಗಿ, ತಲೆನೊಂದು, ಚಿಂತೆಯಿಂದ ಏನಾಗಿದೆಯೆಂದು ನೋಡಲು ಬಂದರೆ, ಈ ರಿಪೇರಿ ಮಹಾಶಯ ನಗುತ್ತಾನಲ್ಲಾ' ಎಂದು ಅವರಿಗೆ ಕೊಂಚ ಕೋಪವೂ ಬಂತು. ಆದರೂ ತೋರಗೊಡದೆ "ಏನಯ್ಯಾ, ಯಾಕೆ ನಗುತ್ತೀ?" ಎಂದು ಕೇಳಲು, ರಾಮಯ್ಯ ಇನ್ನೂ ಒಂದು

೧೦೦೦ ರೂಪಾಯಿ ಬಹುಮಾನ

೩೦ ವರ್ಷಗಳಿಂದ ಅನುಭವಸಿದ್ಧವಾದ— ಮಿರಜಿಯ ವೈದ್ಯ
ವಿ. ಎಸ್ ಕಾಪಸೇಯವರ
ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರ ಪಾಕ

[ರಜಿಸ್ಟರ್ಡ್]

ಮೂತ್ರದಲ್ಲಿ ಸ್ವಪ್ನದಲ್ಲಿ ವೀರ್ಯಸ್ಖಲನ, ಸ್ವರತಿ-ಯಿಂದುಂಟಾದ ಅಶಕ್ತತೆ, ವೀರ್ಯದ ಬೇರೆ ಬೇರೆ ದೋಷ-ಗಳು, ಪಿತ್ತಾಂಶ, ಉಷ್ಣ, ಸೊಂಟನೋವು, ಉಪದಂಶ-ಮೇಹರೋಗಗಳಿಂದುಂಟಾಗುವ ಕ್ಷೀಣತೆ— ಇವೆಲ್ಲ ನಷ್ಟ-ವಾಗಿ, ಚೆನ್ನಾಗಿ ಮಲಶುದ್ಧಿಯಾಗುವುದು. ಹಸಿವೆ, ಸ್ಮರಣ-ಶಕ್ತಿ, ದೇಹದ ತೂಕ ಹೆಚ್ಚುವುದು. ಹೊಸ ತಾರುಣ್ಯ ಬಂದಂತಾಗಿ ವೀರ್ಯದಲ್ಲಿ ಗರ್ಭಧಾರಕಶಕ್ತಿ ಬಲಗೊಳ್ಳು-ವುದು. ಈ ಔಷಧಿಯು ೫೩ ವನಸ್ಪತಿಗಳ ಯೋಗದಿಂದ ಸಿದ್ಧವಾಗಿದೆ. ಸಾಲಾಮಿಶ್ರಿ, ಸಫೇದಮಿಶ್ರಿ, ಪಂಜಾಬ ಮಿಶ್ರಿ-ವಚೆಕಂದ ಮೊದಲಾದ ಪದಾರ್ಥಗಳಲ್ಲಿ ವೀರ್ಯವರ್ಧಕ ಗುಣವಿಲ್ಲವೆಂದು ಸಿದ್ಧಮಾಡುವವರಿಗೆ ೧೦೦೦ ರೂಪಾಯಿ ಬಹುಮಾನ.

೨೧ ದಿನಗಳಿಗೆ ಸಾಲಬಹುದಾದ ೪೪ ತೊಲೆಯ ಒಂದು ಡಬ್ಬಿಗೆ ೫-೮-೦; ಅಂಚೆಯ ವೆಚ್ಚ ೧-೬-೦. ಶೀಘ್ರ-ಗುಣಕಾರಿಯಾದ ಸ್ಪೇಶಲ್ ಡಬ್ಬಿಗೆ ೧೦-೮-೦. (ಇದರಿಂದ ೭ ದಿನಗಳಲ್ಲಿಯೇ ಗುಣವು.) ಅಂಚೆಯ ವೆಚ್ಚ ೧-೬-೦. ೩ ಡಬ್ಬಿಗೆ ೧೫-೦-೦ ಅಂಚೆಯವೆಚ್ಚ ೨-೧೩-೦. ಒಮ್ಮೆಲೇ; ೩ ಡಬ್ಬಿಗಳನ್ನು ಬೇಡುವವರು ೫ ರೂ ಮುಂಗಡ ಕಳಿಸಬೇಕು.

ಚಾಲಕ: ವ್ಹಿ. ಎಸ್. ಕಾಪಸೇ ಮು. ಪೋ. ಮಿರಜ

ಸಲ ನಕ್ಕುಬಿಟ್ಟ. "ಏನು ಹೇಳಪ್ಪಾ, ರಾಮಯ್ಯ!" ಎನ್ನಲು "ನಿಮ್ಮ ರೇಡಿಯೋಕ್ಕೆ ಏನೂ ಆಗಿಲ್ಲ" "ಅಂದರೆ?" ಯಜಮಾನರೆಂದರು. ರಾಮಯ್ಯ ಮತ್ತೆ ನಕ್ಕು ಹೇಳಿದ: "ಒಂದು ಇಲಿಯು ಒಳಗೆ ಸೇರಿ, ಎರಡು Condensors, ಒಂದು Coil ತಿಂದು ಹಾಕಿ, ಕೆಡಿಸಿದೆ" ಎಂದು ಹೇಳಿದ. ಮೂವರೂ ಇನ್ನಷ್ಟು ಜೋರಾಗಿ ಗೊಳ್ಳೆಂದು ನಕ್ಕರು. ಎಲ್ಲರಿಗೂ ಅಚ್ಚರಿ. 'ಒಂದು ಇಲಿ ಇಷ್ಟೊಂದು ಕೆಲಸಮಾಡಿತಲ್ಲಾ!' ಎಂದು ಎಲ್ಲರಿಗೂ ಆಶ್ಚರ್ಯ 'ಎಷ್ಟೇ ದಕ್ಷತೆಯಿಂದ ನೋಡಿಕೊಂಡರೂ, ಇಲಿ ಕೆಡಿಸುವಂತಾಯಿತೇ?' ಎಂದು ಎಲ್ಲರಿಗೂ ನಗೆ. ಚಿಂತೆ. "ವಿಜ್ಞಾನ ಯುಗದಲ್ಲಿಯ ಇಲಿಗೆ Coil—Condensor ರುಚಿನೋಡುವ ಆಶೆಯಾಯಿತಲ್ಲವೇ" ಎಂದು ಮಾತಾಡಿಕೊಂಡು, ಮನೆಗೆ ತಂದೆ-ಮಗ ಬಂದರು. ರಾಮಯ್ಯರಿಗೆ, ಇಲಿ ಮಾಡಿದ ಮಹದುಪಕಾರಕ್ಕಾಗಿ ೧೫ ರೂಪಾಯಿ ತೆತ್ತು ಮನೆಗೆ ಹಿಂದಿರುಗಿದರು. ಮನೆಗೆ ಬಂದಮೇಲೆ, ಇಲಿಯ ಸಮಾಚಾರವನ್ನು ಮನೆಯವರೆಲ್ಲರೂ ಕೇಳಿ ನಕ್ಕುಬಿಟ್ಟರು. ಯಂತ್ರವೊಂದನ್ನು ಜೀವಂತ ಇಲಿಯೊಂದು,— ಪುಟ್ಟ ಇಲಿಯೊಂದು— ಹೊಕ್ಕು, ಕಂತಿಯನ್ನು ತಿಂದು, ರುಚಿನೋಡಿ, ಹಾಯಾಗಿ ಹಿಂದಿರುಗಿ, ಮೂರುದಿನ ಮನೆಯನ್ನೆಲ್ಲ ಮಸಣದಂತೆ ಮಾಡಿ, ಎಲ್ಲರ ಸಂತೋಷ-ಸಂಭ್ರಮಗಳನ್ನು ಕಸಿದುಕೊಂಡು, ಒಂದು ಚೂರು ಕಾಯಿ ತುಣುಕನ್ನು ತಿನ್ನುವ ಇಲಿ, ಮಹಾಯಂತ್ರವನ್ನೇ ಕೆಡಿಸಿ, ೧೫ ರೂಪಾಯಿ ಕೈಬಿಡುವಂತೆ ಮಾಡಿದ ಇಲಿ—ಅದನ್ನು ನೆನೆದು ಎಲ್ಲರಿಗೂ ಅದರ ಬಗ್ಗೆ ಅಚ್ಚರಿ. "ಏನನ್ನು ಮಾಡಲಾರೆ? ವಿಶ್ವವನ್ನೇ ಬೆರಳ ತುದಿಯ ಮೇಲೆ ಕುಣಿಸುವೆ. ದೇಶ-ದೇಶಗಳನ್ನು ಹತ್ತಿರ ತರಿಸುವೆ. ಯಂತ್ರಯುಗದ ವೈಜ್ಞಾನಿಕ ನಾನು. ದೇವರಿಗೆ ನಾನೇನು ಕಡಿಮೆ?" ಎಂದು ಹೆಮ್ಮೆಪಟ್ಟುಕೊಳ್ಳುವ ವೈಜ್ಞಾನಿಕನನ್ನು, ಸೃಷ್ಟಿಕರ್ತನ ಸೃಷ್ಟಿಯ ಒಂದು ಪುಟ್ಟ ಇಲಿ, ವಿಘ್ನೇಶ್ವರನ ವಾಹನ ಮೂಷಕ, ರೇಡಿಯೋ Coil ತಿಂದು ಮೂದಲಿಸಿರಬಹುದೇ? ಯಾರು ಹೇಳಬಲ್ಲರು?

ಊರಲ್ಲೆಲ್ಲಾ ಅಂದು ಅದೇ ಮಾತು: ಯಜಮಾನರ ಮನೆಯ ಬಾನುಲಿಯನ್ನು ಒಂದು ಇಲಿ ಕೆಡಿಸಿತೆಂದು. ಮನೆಗೆ ಬಂದ ಮಿತ್ರರೆಲ್ಲಾ, ದಾರಿಯಲ್ಲಿ ನೋಡಿದ ಸ್ನೇಹಿತರೆಲ್ಲಾ ಇದೇ ಸಮಾಚಾರವನ್ನು ಯಜಮಾನರನ್ನು ಕೇಳುತ್ತಿದ್ದರು. "ಅಬ್ಬಾ, ಇಲಿ ಇಷ್ಟೊಂದು ಕಾರ್ಯ ಮಾಡಿತೇ?" ಎಂದು ಅಜ್ಜಿ, ಅಲ್ಲಲ್ಲಿ ಓಡಾಡುತ್ತಿರುವ ಇಲಿಗಳನ್ನು ಕಂಡು ಉದ್ಗರಿಸಿದರು "ಮೂಷಕ ವಾಹನನ ಕೃಪಾಪ್ರಸಾದ" ಎಂದು ಸೊಸೆ ಮಕ್ಕಳು ನಕ್ಕುಬಿಟ್ಟರು.

ಎರಡು ದಿನಗಳನಂತರ ಮನೆಯ ಸ್ನೇಹಿತ ಮನೆಗೆ ಬಂದ, ಹಿಂದಿನ ಎಲ್ಲ ಸುಖ-ಸಂಭ್ರಮವನ್ನೂ ತಂದ. ಸಂಗೀತ, ವಾರ್ತೆ, ವ್ಯಾಖ್ಯಾನ ಎಲ್ಲ ಬಂತು. 'ಹಿಡಿ-ಬಿಡು' ಶುರುವಾಯಿತು. ಹರಿದಾಸರು ಬಂದರು, ಸುದ್ದಿ ಸಾರುವವ ಬಂದ. ಸುಬ್ಬುಲಕ್ಷ್ಮಿಯೂ ಬಂದಳು ಸಂಗೀತ ಮೇಷ್ಟ್ರು ಬಂದರು. ಕಸಪೊರಕೆಯು—'ಕರಾ-ಬರಾ' ಸದ್ದೇ ನಿಂತುಹೋಗತೊಡಗಿತು. ಆದರೆ—? ಯಜಮಾನರಿಗೆ ಒಂದೇ ಚಿಂತೆ: ರೇಡಿಯೋ ಹಿಂದಿರುವ ದೊಡ್ಡ ತೂತನ್ನು ಹೇಗೆ ಮುಚ್ಚಬೇಕು? ಇಲಿಯಿಂದ ಬಾನುಲಿಯನ್ನು ಹೇಗೆ ಸಂರಕ್ಷಿಸಬೇಕೆಂಬುದೇ ಚಿಂತೆ. ಮನೆಗೆಲ್ಲಾ, ಸುಣ್ಣ ಬಳಿದಿದ್ದರೂ ಸಿಮೆಂಟಿನ ನೆಲವಾಗಿದ್ದರೂ, ಊಟಿಯ ಮನೆಗಳಲ್ಲೆಲ್ಲ ಇಲಿಗಳ ಸ್ವಾತಂತ್ರ್ಯ ಹೆಚ್ಚು. ದುರ್ದೈವದಿಂದ ಇದೇ ಹೊತ್ತಿಗೇ ೬ ವರುಷಗಳಿಂದ ಮಗಳ ಮೆಚ್ಚಿಗೆಯ ಸ್ನೇಹಿತನಂತಿದ್ದ, ಹಸಿವೆಯಿಂದ ಆಗಾಗ ಎಲ್ಲರ ಕಾಲುಗಳನ್ನೂ ನೆಕ್ಕುತ್ತಿದ್ದ ಬ್ಲ್ಯಾಕೀ ಬೆಕ್ಕು ೨ ತಿಂಗಳಿಂದ ಓಡಿಹೋಗಿತ್ತು. ಇನ್ನೊಂದು ಬೆಕ್ಕಿನ ಮರಿಯನ್ನು ತರಬೇಕೆಂದು ಮಗಳು ಸೂಚಿಸಿದಳು. ಎಲ್ಲ ಆಳುಗಳಿಗೂ ಹೇಳಿಯಾಯಿತು. ದಾರಿಯಲ್ಲಿ ನೋಡಿದ ಬೆಕ್ಕುಗಳನ್ನು ಹಿಡಿಯಲು ಮಗ ಯತ್ನಿಸಿದ ಇನ್ನೂ ವರೆಗೂ ಒಂದು ಬೆಕ್ಕೂ ಸಿಕ್ಕಿಲ್ಲ ದಿನದಿನಕ್ಕೆ ಯಜಮಾನರ ಚಿಂತೆ ಹೆಚ್ಚುತ್ತಿದೆ. ಈಗ ಆ ಬಾನುಲಿಗೆ ರಾತ್ರಿ, ರಟ್ಟಿನ ಮುಸುಕನ್ನು ಭದ್ರವಾಗಿ ಹಾಕಿ, ಗೋಡೆಯ ಹಿಂದಿನ ಸಂದಿಯಲ್ಲಿ ಬಟ್ಟೆಯನ್ನು ಅಮುಕಿ ಇಡುತ್ತಿದ್ದರು. ಹೀಗೆ ಆ ದೊಡ್ಡ ತೂತಿಗೆ ಒಂದು Wire guage .... ಇಡಬೇಕೆಂದು ಯಜಮಾನರು ಯೋಚಿಸುತ್ತಿದ್ದಾರೆ. ಅಂತೂ ಮನೆಯವರಿಗೆಲ್ಲಾ ಕೈಗೆ ಒಂದು ಹೆಚ್ಚಿನ ಕೆಲಸ, ತಲೆಗೆ ಒಂದು ಹೆಚ್ಚಿನ ಯೋಚನೆ ಕೊಟ್ಟು, ರೇಡಿಯೋ ತಿಂದ ಇಲಿ ಎಲ್ಲಿಯೋ ಪರಾರಿಯಾಗಿ ಹೋಗಿಬಿಟ್ಟಿದೆ ಬಹುಶಃ ಇನ್ನೊಂದು ರೇಡಿಯೋದ, Coil, Condensor, ರುಚಿ ನೋಡಲು ಹೋಗಿದೆಯೋ ಏನೋ? ಯಾರು ಬಲ್ಲರು?

ಇಂದಿನ ಯಂತ್ರಯುಗದಲ್ಲಿ, ಸಾಮಾನ್ಯವಾಗಿ ಮನೆಮನೆಗೂ ರೇಡಿಯೋಗಳಿವೆ. ಇಂಥ ಸ್ಥಿತಿ ಬೇರೆ ಬಾನುಲಿಗಳಿಗೆ ಬರಲಿಕ್ಕಿಲ್ಲವೆಂದು ಖಂಡಿತವಾಗಿ ಯಾರು ಎದೆ ತಟ್ಟಿ ಹೇಳಬಲ್ಲರು? ರೇಡಿಯೋ ಮಾಲೀಕರೇ, ಮೂಷಕನಿಂದ ಎಚ್ಚರದಿಂದಿರಿ. ಈ ಮೂಷಕ-ಮೋಸವನ್ನು ತಪ್ಪಿಸಲು ಬೋನುಗಳನ್ನು ತಂದಿಡುವಿರಾ? ಇಲ್ಲವೇ ವಿಘ್ನೇಶ್ವರನಾದ ಮೂಷಕವಾಹನನನ್ನು ಪ್ರಾರ್ಥಿಸುವಿರಾ? ನೀವೇ ಯೋಚನೆ ಮಾಡಿ.

ರೇಡಿಯೋ ಪುರಾಣ ಕೇಳಿ, ವಾಚಕರಿಗೆ ಬೇಸರವಾಗಿದೆಯೆ? ಹಾಗಾದರೆ ನಿಮ್ಮ ಮಗ್ಗುಲಲ್ಲಿಯೇ ಇದ್ದರೆ, ನಿಮ್ಮ ರೇಡಿಯೋ ಕಿವಿ ತಿರುಗಿಸಿ ಬಿಡಿ!

ಅಂದಮಾನ-ನಿಕೋಬಾರ ನಡುಗಡ್ಡೆಗಳು

(ಪ್ರದೇಶಪರಿಚಯ) *

ಶ್ರೀ. ' ವಿದ್ಯಾರತ್ನ ' ರಾ. ಸ್ವಾ. ಪಂಚಮುಖಿ ಎಂ. ಎ , ಧಾರವಾಡ

卐

ಇಂದು ಅಂದಮಾನ, ನಿಕೋಬಾರ್ ದ್ವೀಪಗಳು ಭಾರತದಿಂದ ಪ್ರತ್ಯೇಕವಾಗಿರುವಂತೆ ಕಾಣುತ್ತ-ಲಿದ್ದರೂ, ಒಂದು ಕಾಲದಲ್ಲಿ ಅವು ಭಾರತಸಂಸ್ಕೃತಿಯನ್ನೇ ಸಂರಕ್ಷಿಸಿ ಬೆಳೆಯಿಸಿರುವುವೆಂಬ ಐತಿಹಾಸಿಕ ಸಂಗತಿ, ನಮ್ಮಲ್ಲಿ ಬಹುಜನರಿಗೆ ಗೊತ್ತಿಲ್ಲ!

卐

ಅಂದಮಾನದ ಹೆಸರನ್ನು ಕೇಳಿದೊಡನೆ, ಅದರ ಬಗ್ಗೆ ನಮ್ಮ ಮನಸ್ಸಿನಲ್ಲಿ ಜುಗುಪ್ಸೆಯು ಹುಟ್ಟುತ್ತದೆ. ಬ್ರಿಟಿಶರ ಆಡಳಿತದಲ್ಲಿ ಭಾರತದ ಅಪರಾಧಿಗಳನ್ನು ' ಕರಿನೀರಿನ ' ಶಿಕ್ಷೆಯನ್ನು ಅನುಭವಿಸಲಿಕ್ಕೆ ಅಲ್ಲಿಗೆ ಕಳಿಸುತ್ತಿದ್ದುದರಿಂದ, ಅಂದಮಾನದ ಅರ್ವಾಚೀನ ಇತಿಹಾಸವು ಭಾರತೀಯರಿಗೆ ಅಭಿಮಾನಾಸ್ಪದವಿಲ್ಲ. ಆದರೂ ಅದರ ಪೂರ್ವವೃತ್ತವನ್ನೂ, ಈಗಿನ ಸ್ವತಂತ್ರಭಾರತದಲ್ಲಿ ಅದಕ್ಕೆ ಅವಶ್ಯವಾಗಿ ಸಲ್ಲತಕ್ಕ ಸ್ಥಾನಮಾನಗಳನ್ನೂ ಮುಂದೆ ಭಾರತೀಯರ ಹೊಸ ವಸಾಹತಿಗೆ ಅಲ್ಲಿರುವ ಸ್ವಾಭಾವಿಕ ಅನುಕೂಲತೆಗಳನ್ನೂ ಸಂಕ್ಷೇಪವಾಗಿ ಇಲ್ಲಿ ವಿವರಿಸಬಹುದು

ಅಂದಮಾನ-ನಿಕೋಬಾರ ನಡುಗಡ್ಡೆಗಳು, ಬಂಗಾಲದ ಉಪಸಾಗರದಲ್ಲಿ ಬ್ರಹ್ಮದೇಶದ **ನಿಗ್ರೇಸ್** ಭೂಶಿರದಿಂದ ಸುಮಾತ್ರಾದ **ಅಚಿನ್ ಶಿರದ** ವರೆಗೆ- ಸುಮಾರು ೭೦೦ ಮೈಲು-ಹಬ್ಬಿರುತ್ತವೆ ನಿಗ್ರೇಸ್ ಮತ್ತು ಅಂದಮಾನದ ನಡುವೆ ಪ್ರಿಪರಿಸ್ ಮತ್ತು ಕೊಕಸ್ ನಡುಗಡ್ಡೆಗಳು ಇರುತ್ತವೆ. ಅಂದಮಾನ ಮತ್ತು ಸುಮಾತ್ರಾದ ನಡುವೆ ನಿಕೋಬಾರ ದ್ವೀಪಗಳು ಇರುತ್ತವೆ ಈ ನಡುಗಡ್ಡೆಗಳ ಸಾಲು ಇಷ್ಟು ಉದ್ದ ಹಬ್ಬಿದ್ದರೂ, ಅವುಗಳ ಅಡ್ಡಗಲ ಆಳತೆಯು ಸಮುದ್ರದಲ್ಲಿ ೯೦ ಮೈಲಿಗಿಂತ ಕಡಮೆ ಇರುತ್ತದೆ. ಅಂದಮಾನದಲ್ಲಿ ದೊಡ್ಡ ಅಂದಮಾನ (೧೫೬ ಮೈಲು ಉದ್ದ), ಚಿಕ್ಕ ಅಂದಮಾನ (೩೦ ಮೈಲು ಉದ್ದ) ಎಂದು ಎರಡು ಭಾಗಗಳಿರುತ್ತವೆ ನಿಕೋಬಾರ ನಡುಗಡ್ಡೆಗಳ ಉದ್ದಳತೆ ೧೬೩ ಮೈಲು; ಆಗಲಳತೆ ೩೬ ಮೈಲು.

ಅಂದಮಾನದ ಮೂಲ ಹೆಸರು ' ಹಂ ದು ಮಾ ನ ' ಆಗಿರಬೇಕೆಂದೂ ಇದು ' ಹನುಮಾನ್ ' ಇವರ ಮಲಯಾ ಭಾಷೆಯ ಉಚ್ಚಾರಣೆಯ ರೂಪವೆಂದೂ ಪಂಡಿತರ ಅಭಿಪ್ರಾಯ. ಈ ಅಭಿಪ್ರಾಯದಂತೆ ರಾಮಾಯಣದ ಕಪಿವೀರನಾದ ಹನುಮಂತನೂ ಅವನ ಪರಿವಾರವೂ ಇಲ್ಲಿ ವಾಸವಾಗಿದ್ದು, ಅವನ ಪ್ರಭಾವದಿಂದ ಈ ಭಾಗಕ್ಕೆ ಹನುಮಾನ್ ಹಂದುಮಾನ್- ಅಂದಮಾನ್ ಎಂಬ ಹೆಸರು ಬಂದಿತೆಂದು ತಿಳಿಯಬಹುದು. ಪ್ರಾಣಿಶಾಸ್ತ್ರಜ್ಞರ (Zoologists) ಸಂಶೋಧನೆಯಿಂದ, ನಿಗ್ರೇಸ್ ಭೂಶಿರದಿಂದ ಸುಮಾತ್ರಾದ ತುದಿಯ ವರೆಗಿನ ೭೦೦ ಮೈಲು, ಒಂದಾನೊಂದು ಕಾಲದಲ್ಲಿ ಭೂಭಾಗವಾಗಿತ್ತೆಂದೂ ಮುಂದೆ ಭೂಕಂಪದಿಂದ ಆ ಭಾಗವು ಸಮುದ್ರದಲ್ಲಿ ಮುಳುಗಿ ಕೆಲವು ಪರ್ವತಾವಳಿಗಳ ಶಿಖರಗಳು ಮಾತ್ರ ತಲೆಯೆತ್ತಿ ನಿಂತು, ಅಂದಮಾನ- ನಿಕೋಬಾರ ಹೆಸರಿನಿಂದ ಪ್ರಸಿದ್ಧವಾದ ನಡುಗಡ್ಡೆಗಳಾದುವೆಂದೂ ತಿಳಿಯುಬರುತ್ತದೆ. ಮೇಲಿನ ಹನುಮಾನ್ (ಹಂದುಮಾನ್-ಅಂದಮಾನ್) ಎಂಬ ಹೆಸರಿನ ವಾನರ ಸಂಸ್ಕೃತಿಯ ಅವಶೇಷವು ಈ ಊಹೆಗೆ ಬಲಕೊಡುತ್ತದೆ ವಿಲ್‌ಫ್ರೋರ್ಡ್ ಎಂಬ ಚರಿತ್ರಕಾರನು ಈ ನಡುಗಡ್ಡೆಗಳನ್ನು ಕುರಿತು ಬರೆಯುವಾಗ, ಶ್ರೀರಾಮಚಂದ್ರನು ಈ ಸ್ಥಳದಲ್ಲಿ ಸಮುದ್ರವನ್ನು ದಾಟಲಿಕ್ಕೆ ಸೇತುವೆಯನ್ನು ಕಟ್ಟಲಿಕ್ಕೆ ಆರಂಭಿಸಿದನೆಂದೂ, ಮುಂದೆ ಕಾರಣಾಂತರಗಳಿಂದ ದಕ್ಷಿಣ ಹಿಂದುಸ್ತಾನದ ತುದಿಯಲ್ಲಿ ಅದನ್ನು ಕಟ್ಟಿದನೆಂದೂ ಒಂದು ದಂತಕಥೆಯನ್ನು ಕೊಟ್ಟಿದ್ದಾನೆ. ಇದರಿಂದಲೂ ಈ ನಡುಗಡ್ಡೆಗೆ ಹನುಮಾನ್ ಕಪಿಯ ಸಂಬಂಧವಿತ್ತೆಂದು ಊಹಿಸಬಹುದು. ಇದರಿಂದ ಇಲ್ಲಿ ಇತಿಹಾಸ ಸಂಶೋಧಕರು ಮುಖ್ಯವಾಗಿ ಹಿಂದುಸ್ತಾನದ Archaeological Department ನವರು, ವಾನರ ಸಂಸ್ಕೃತಿಯ ಅವಶೇಷಗಳನ್ನು ರಾಮಾಯಣಕಾಲದ ಚರಿತ್ರೆಗೆ ಸಾಧಕವಾಗಿ ಹುಡುಕಿ ತೆಗೆಯಬೇಕೆಂದು ನಮ್ಮ ಆಗ್ರಹದ ಸೂಚನೆ ಇದೆ.

ಗ್ರೀಕ್ ಮತ್ತು ಅರಬ್ ಪ್ರವಾಸಿಕರು, ಅಂದಮಾನ-ನಿಕೋಬಾರಗಳ ಬಗ್ಗೆ ಬರೆದಿಟ್ಟ ಚಾರಿತ್ರಕ ಅಂಶಗಳನ್ನು ಮುಂದೆ ಕೊಡುತ್ತೇವೆ; ಈಗ ನಿಕೋಬಾರ ಎಂಬ ಹೆಸರಿನ ಮೂಲವನ್ನು

---

* ಧಾರವಾಡ ಬಾನುಲಿಕಟ್ಟೆಯಿಂದ ಬಿತ್ತರಗೊಂಡ ಒಂದು ಭಾಷಣವಿದು. **ಸಂ. ಜ**

ನೋಡುವಾ; ೯ ನೆಯ ಶತಮಾನದ ಅರಬ್ ಪ್ರವಾಸಿಕನು ಈ ನಡು-ಗಡ್ಡೆಗೆ 'ಲಂಖ ಬಾಲೂಸ್' ಎಂದು ಕರೆದಿದ್ದಾನೆ. ಇದೇ ಜನರ ಬಾಯಲ್ಲಿ ನಂಕಬಾರ್– ನಕ್ಕವಾರ– ನಿಕೋಬಾರ ಎಂದಾಯಿತು. 'ಲಂಖ ಬಾಲೂಸ್' ಅಂದರೆ ಬತ್ತಲೆ ತಿರುಗುವ ಜನರ ದೇಶ. ಇಲ್ಲಿಯ ಜನರು ಬತ್ತಲೆ ಇರುತ್ತಿದ್ದರೆಂದೂ ಹೊರಗಿನಿಂದ ಬಂದ ಮಾನವರನ್ನು ತಿನ್ನುತ್ತಿದ್ದರೆಂದೂ ಈ ಪ್ರವಾಸಿಕರಲ್ಲಿ ಪ್ರತೀತಿ ಇತ್ತು. ಆದರೆ ಇಲ್ಲಿಯ ಜನರು ಮನುಷ್ಯಭಕ್ಷಕರೆಂಬ ಅಪಾದನೆಯಲ್ಲಿ ತಥ್ಯಾಂಶವಿಲ್ಲವೆಂದು ಆ ದೇಶದ ಹೊಸ ಬೆಳಕೆಗಳಿಂದ ಈಗ ತಿಳಿದುಬಂದಿದೆ.

ಅಂದಮಾನ–ನಿಕೋಬಾರಗಳ ಭೌಗೋಲಿಕ ಪರಿಸ್ಥಿತಿಯನ್ನು ನೋಡಿದರೆ ಪಶ್ಚಿಮಕ್ಕೆ ಹಿಂದುಸ್ತಾನ. ಉತ್ತರಕ್ಕೆ ಬ್ರಹ್ಮದೇಶ, ಪೂರ್ವಕ್ಕೆ ಮಲಯಾ, ಇಂಡೋ–ಚೈನಾ ಇತ್ಯಾದಿ. ಮತ್ತು ದಕ್ಷಿಣಕ್ಕೆ ಜಾವಾ ಸುಮಾತ್ರಾ ಇತ್ಯಾದಿ ದೇಶಗಳು ಇರುವುವೆಂದು ಗೊತ್ತಾಗುವುದು. ಇವೆಲ್ಲ ಭಾಗಗಳು ಕ್ರಿ.ಶ. ಎಷ್ಟೋ ಶತಮಾನ ಪೂರ್ವಾವಧಿ ಕಾಲದಿಂದ ಅತ್ಯಂತ ಉನ್ನತ ಸಂಸ್ಕೃತಿಯ ಪ್ರದೇಶಗಳೆಂದು ಜಗತ್ತಿನಲ್ಲಿ ಪ್ರಖ್ಯಾತವಾಗಿವೆ. ಹೀಗಿದ್ದು, ಇವುಗಳ ಸಮೀಪದಲ್ಲಿ ಮಧ್ಯವರ್ತಿಯಾಗಿದ್ದು, ಜಗತ್ತಿನ ವ್ಯಾಪಾರದ ಜಲಮಾರ್ಗದಲ್ಲಿ ಹಡಗುಗಳಿಗೆ ನಿಲ್ದಾಣವೆಂತಿದ್ದ ಈ ನಡುಗಡ್ಡೆಗಳು ಇನ್ನೂ ಕಾಡುಸ್ಥಿತಿಯಲ್ಲಿದ್ದುದು ಆಶ್ಚರ್ಯಕಾರಕವಾಗಿದೆ. ಇಲ್ಲಿ ಭೂಮಿ, ಖನಿಜಸಂಪತ್ತಿ, ವನ ಮತ್ತು ಸೃಷ್ಟಿಸೌಂದರ್ಯ ಇತ್ಯಾದಿಗಳನ್ನು ನೋಡಿದರೆ, ಇವು ಜನವಸತಿಗೂ ಸಾಂಸ್ಕೃತಿಕ ಸಂಸರ್ಗಕ್ಕೂ ಪ್ರತಿಕೂಲವಾಗಿರುವುದಿಲ್ಲವೆಂದು ಗೊತ್ತಾಗುವುದು. ಅಂದಮಾನ-ನಿಕೋಬಾರಗಳನ್ನು ಸಂದರ್ಶಿಸಿದ ಪರದೇಶದ ಪ್ರಯಾಣಿಕರು ಕಡಮೆ. ಬಹುಶಃ ಕೇಳಿಕೆಯಿಂದ ಬರೆದಿಟ್ಟ ಟಿಪ್ಪಣಿಗಳೇ ಈಗ ನಮಗೆ ಉಪಲಬ್ಧವಾದ ಪ್ರಾಚೀನ ಇತಿಹಾಸದ ಸಾಮಗ್ರಿಗಳು.

ಮೇಲೆ ಹೇಳಿದಂತೆ ಕ್ರಿ. ಶ. ೨ ನೆಯ ಶತಮಾನದಲ್ಲಿ ಬಾಳಿದ್ದ ಅಲೆಕ್ಸಾಂಡ್ರಿಯಾದ ಗ್ರೀಕ್ ಭೌಗೋಲಿಕನಾದ ಟಾಲಮಿಯು, ಅಂದಮಾನ–ನಿಕೋಬಾರಗಳನ್ನು ಕುರಿತು ಬರೆದ ಮೊದಲನೆಯ ಪ್ರವಾಸಿಕನು. ಅವನು ಹೇಳಿದ ಬಂಗಾಲದ ಉಪಸಾಗರದಲ್ಲಿದ್ದ ನಡುಗಡ್ಡೆಗಳಲ್ಲಿ ಬಜಕತ, ಸಿಂದೈ, ಬರೋಸೈ. ಸಬದೀಬೈಗಳು ಮುಖ್ಯವಾಗಿವೆ. ಬಜಕತದ ನಿವಾಸಿಗಳನ್ನು ಆಗಿನ್ನತೈ ಅಥವಾ ಅಸಿನ್ನತೈ ಎಂದು ಕರೆದಿದ್ದಾನೆ. ಬೇರೆ ಬೇರೆ ವಿದ್ವಾಂಸರು ಟಾಲಮಿಯ ಮಾತುಗಳಿಗೆ ಬೇರೆ ಬೇರೆ ಅರ್ಥಗಳನ್ನು ಕಲ್ಪಿಸಿದ್ದಾರೆ. ಯೂಲ ಎಂಬವನು ಅಸಿನ್ನತೈ ಅಂದರೆ ಅಸಿನದ್ಧ–ಬತ್ತಲೆ ತಿರುಗಾಡುವವರು, ಬಜಕೊತ ಅಂದರೆ ಭಾಗ್ಯಶಾಲಿ (Good fortune) ದೇಶಗಳು ಅಂದಮಾನ ಮತ್ತು ಅಲ್ಲಿಯ ಜನರನ್ನು ನಿರ್ದೇಶಿಸುತ್ತವೆಂದು ಹೇಳುತ್ತಾನೆ. ೯ನೆಯ ಶತಮಾನದ ಅರಬ್ ಪ್ರಯಾಣಿಕನು ಹೇಳಿದ ಲಂಜ-ಲಂಕ (ಅಥವಾ ಲೀ ಕ-ಬಾಲುಸ, ಮಾರ್ಕೋಪೋಲೋವಿನ ನೇಕವರಂ, ರಶೀದುದ್ದೀನನ ಲಾಕವಾರಾ ಮತ್ತು ಟಾಲಮಿಯ ಬರೊಸೈಗಳು ಒಂದೇ ಆಗಿರಬೇಕೆಂದೂ ಅವು ನಿಕೋಬಾರ ನಡುಗಡ್ಡೆಗಳಿಗೆ ಅನ್ವಯಿಸುತ್ತವೆಂದೂ ವಿವರಣೆಗಳಿಂದ ತಿಳಿದುಬರುತ್ತದೆ. ಸಬ್‌ದೀಬೈ ಇದು ಯವದ್ವೀಪ (ಜಾವಾ-ದ್ವೀಪ) ದ ಅಪಭ್ರಷ್ಟ ರೂಪ. ಸಿಂದೈ ಇದು ಜಾವಾದ ಪಶ್ಚಿಮಕ್ಕಿದ್ದ ನಡುಗಡ್ಡೆ. ಹಿಂದುಸ್ತಾನದ ವ್ಯಾಪಾರಿಗಳು ಇಲ್ಲಿ ನೆಲಸಿ ಇದಕ್ಕೆ ಸಿಂದೈ ಎಂಬ ಹೆಸರನ್ನು ಕೊಟ್ಟಿರಬೇಕೆಂದು ಕೆಲವರು ಹೇಳುತ್ತಾರೆ. ಮಾರ್ಕೋಪೋಲೋನ ವಿವರಣೆಯಲ್ಲಿ ಅಂದಮಾನಕ್ಕೆ ಅಂಗಮಾನೈನ್ (ಎರಡು ಅಂದಮಾನಗಳು) ಎಂಬ ಹೆಸರು ಬಂದಿದೆ. ಕ್ರಿ. ಶ. ೧೪೪೦ ರ ನಿಕೋಲೊ ಕೋಂಟಿ ಎಂಬ ಇಟಾಲಿ ಪ್ರಯಾಣಿಕನು, ಇದನ್ನು ಹೊನ್ನಿನ ದ್ವೀಪವೆಂದೂ ಅಲ್ಲಿ ಸಿದ್ಧರಸದ ಸರೋವರವಿರುವುದೆಂದೂ ಉಲ್ಲೇಖಿಸಿದ್ದಾನೆ. ಇಂಥದೊಂದು ದೊಡ್ಡ ಕೆರೆಯು ಅಲ್ಲಿ ಈಗಲೂ ಇರುತ್ತದಂತೆ. ೧೬ನೆಯ ಶತಮಾನದ ಸೀಜಾರಿ ಫೆಡರಿಕನೂ ೧೭೨೭ ರಲ್ಲಿದ್ದ ಕ್ಯಾಪ್ಟನ್ ಹ್ಯಾಮಿಲ್ಟನನೂ ಅಂದಮಾನದ ಜನರ ವಿಷಯಕ್ಕೆ ಅನೇಕ ವಿಚಿತ್ರವಾದ ವರ್ಣನೆಗಳನ್ನು ಕೊಟ್ಟಿದ್ದಾರೆ. ೧೭೮೮–೮೯ ರಲ್ಲಿ ಬಂಗಾಲದ ಸರಕಾರವು ಅಂದಮಾನದಲ್ಲಿ ಕೈದಿಗಳಿಗೆ ದಂಡದ ವಸತಿಯನ್ನು ನಿರ್ಮಿಸಲು ಹವಣಿಸಿತು. ಕ್ಯಾಪ್ಟನ್ ಬ್ಲೇರ್ ಎಂಬವನ ಹೆಸರಿನಿಂದ ಪೋರ್ಟ್ ಬ್ಲೇರದಲ್ಲಿ ೧೭೮೯ ರಲ್ಲಿ ಅಂಥದೊಂದು ವಸತಿಯು ಸ್ಥಾಪಿಸಲ್ಪಟ್ಟಿತು. ೧೭೯೬ ೧೮೩೯, ೧೮೪೪ ಮತ್ತು ೧೮೫೫ ರಲ್ಲಿ ಯುದ್ಧದ ನೆಲೆವೀಡಾಗಿ ಈ ನಡುಗಡ್ಡೆಗಳನ್ನು ಉಪಯೋಗಿಸುತ್ತಿದ್ದರು. ೧೮೫೭ ರ ಬಂಡಾಯವಾದ ಮೇಲೆ ಅಪರಾಧಿಗಳನ್ನು ದಂಡಿಸಿ ಶಿಕ್ಷೆಯನ್ನು ಅನುಭವಿಸಲಿಕ್ಕೆ ಕರೇ ನೀರಿನ ಜಾಗೆ ಎಂಬ ಕೈದಿಗಳ ವಸಾಹತಿಯಾಗಿ ಇದನ್ನು ರೂಪಾಂತರಗೊಳಿಸಿದರು. ಅಲ್ಲಿಂದ ಈಚೆಗೆ ಕೈದಿಗಳ ವಸತಿಯೆಂದೇ ಈ ನಡುಗಡ್ಡೆ ಪ್ರಸಿದ್ಧವಾಗಿದೆ. ಸಾಂಸ್ಕೃತಿಕ ಚಟುವಟಿಕೆಗಳಿಗೆ ಇಲ್ಲಿ ಅವಕಾಶವು ದೊರೆತಿಲ್ಲವಾದ್ದರಿಂದ ಅದರ ಉನ್ನತಿಯು ಸ್ಥಗಿತವಾಗಿದೆ.

ಅಂತು ಮೇಲೆ ಹೇಳಿದಂತೆ, ಅಂದಮಾನ—ನಿಕೋಬಾರಗಳಿಗೆ ಉಜ್ವಲವಾದ ಇತಿಹಾಸವಿಲ್ಲ. ಆದರೂ ದಂತಕಥೆಗಳಿಂದಲೂ, ಹೆಸರಿನ ಅರ್ಥವಿವರಣೆಯಿಂದಲೂ ಅವುಗಳ ಪೂರ್ವವೃತ್ತವನ್ನು ರಾಮಾಯಣ ಕಾಲದವರೆಗೂ ಒಯ್ಯಬಹುದೆಂದು ತೋರುತ್ತದೆ. ಮತ್ತು ಆಗಾಗ್ಗೆ ವಿದೇಶಿ ಪ್ರವಾಸಿಕರು ಆ ದ್ವೀಪಗಳನ್ನು ತಮ್ಮ ಸಂಚಾರದ ವಿವರಣೆಗಳಲ್ಲಿ ಉಲ್ಲೇಖಿಸದೇ ಬಿಟ್ಟಿಲ್ಲ. ಇದರಿಂದ ಅವುಗಳಿಗೆ ಯಾವುದೋ ಒಂದು ವಿಶಿಷ್ಟವಾದ ಮಹತ್ತ್ವವಿತ್ತೆಂದು ತಿಳಿಯಬರುತ್ತದೆ. ಈ ನಡುಗಡ್ಡೆಗಳು ಸಮುದ್ರ ಸಂಚಾರಿ ವ್ಯಾಪಾರೀ ನೌಕೆಗಳಿಗೆ ನಿಲ್ದಾಣಗಳಾಗಿದ್ದುವು. ಆದರೆ ಈ ವ್ಯಾಪಾರಿಗಳು ಅಲ್ಲಿ ವಾಸವಾಗಿದ್ದು ತಮ್ಮ ವರ್ಚಸ್ಸನ್ನು ಅಲ್ಲಿಯ ಜನರ ಮೇಲೆ ಬಿಟ್ಟಂತೆ ತೋರುವುದಿಲ್ಲ.

ಅಂದಮಾನ—ನಿಕೋಬಾರಗಳ ಜನರ ರೀತಿ ನೀತಿಗಳಲ್ಲಿ, ನಡೆ ನುಡಿಗಳಲ್ಲಿ ದೈನಂದಿನ ಚಟುವಟಿಕೆಗಳಲ್ಲಿ ವ್ಯತ್ಯಾಸವಿರುವುದು. ಇಲ್ಲಿ ಜನವಸತಿಯಿದ್ದ ಭೂಭಾಗವು ಒಟ್ಟು ೩, ೧೪೩ ಚದರ

ನ್ಮೈಲುಗಳಿರುತ್ತದೆ. ೧೯೦೧ ರ ಜನಗಣನೆಯಂತೆ ಇಲ್ಲಿ ೨೪,೬೪೯ ಜನರು ವಾಸಿಸಿದ್ದಾರೆ. ಅವರಲ್ಲಿ ೧,೮೮೨ ಅಂದಮಾನೀ ಜನರು ೬,೫೧೧ ನಿಕೋಬಾರೀ ಜನರು, ೧೬, ೨೫೬ ಕೈದಿಗಳು. ೧೯೫೧ರ ಶಿರೋಗಣನೆಯಂತೆ ಇಲ್ಲಿಯ ಜನಸಂಖ್ಯೆಯು ೩೦೯೭೧ರ ವರೆಗೆ ಏರಿದೆ. ಅಂದಮಾನೀ ಜನಸಂಖ್ಯೆಯು ಬರು-ಬರುತ್ತ ಕಡಿಮೆಯಾಗ ಹತ್ತಿದೆ. ಅದಕ್ಕೆ ಪರದೇಶದ ಸುಧಾರಿಸಿದ ಜನರೊಡನೆ ಕೀಳು ಜನರ ಸಂಪರ್ಕವೆ ಕಾರಣವೆಂದು ಹೇಳುತ್ತಾರೆ. ಮೂಲ ನಿವಾಸಿಗಳು ಆಫ್ರಿಕದ ನಿಗ್ರೋಗಳಂತೆ ಕಾಡು ಸ್ಥಿತಿಯಲ್ಲಿದ್ದಾರೆ. ನೀಗ್ರೋ ಗುಲಾಮರಿಂದ ಈ ಜನಾಂಗವು ಹುಟ್ಟಿತೆಂದು ಕೆಲವರು ಹೇಳುತ್ತಾರೆ.

ನೀಗ್ರೋವಿನಂತೆ ಈ ಜನರ ಆಕಾರ, ಬಣ್ಣ, ಎತ್ತರ, ರೀತಿ ನೀತಿಗಳು ಇರುವುದು ಈ ಊಹೆಗೆ ಪೋಷಕವಾಗಿದೆ. ಜನರು ಭೀಕರಸ್ವರೂಪದವರು. ಕಪ್ಪು ಬಣ್ಣ, ಸೂಜಿಯಂತೆ ಚೂಪು ಬಿರುಸು ಆದ ಕೂದಲು, ೫ ಅಡಿಗಿಂತ ಹೆಚ್ಚಿಲ್ಲದ ನಿಲುವಿಕೆ, ಹುಲ್ಲು ಎಲೆಗಳ ಹೊದರುಗಳಲ್ಲಿ ವಾಸ, ಬತ್ತಲೆ ಇರುವಿಕೆ; ಆವೆ, ಮೀನ, ಹಣ್ಣುಹಂಪಲ, ಜೇನುತುಪ್ಪ ಮುಂತಾದ ವನ್ಯ ಪದಾರ್ಥಗಳಿಂದ ಉಪಜೀವನ. ಇದಲ್ಲದೆ ಮನುಷ್ಯರನ್ನು ಕೂಡ ತಿಂದು ಉಪಜೀವಿಸುವರೆಂದು ಪ್ರತೀತಿಯಿದೆ. ಆದರೆ ಅಲ್ಲಿ ಹೋದ ಜನರು ಇದನ್ನು ಅಲ್ಲಗಳೆಯುತ್ತಾರೆ. ಸಾಮಾನ್ಯವಾಗಿ ಅವರು ಶೂರರೂ ಧೀರರೂ, ಹಿಡಿದ ಕೆಲಸವನ್ನು ಕೊನೆಗಾಣಿಸದೆ ಬಿಡದವರೂ, ನಂಬಿದವರನ್ನು ಪ್ರಾಣಕ್ಕಿಂತ ಹೆಚ್ಚು ಪ್ರೀತಿಸುವವರೂ ಆಗಿದ್ದಾರೆ. ಹೆಣ್ಣುಗಂಡುಗಳಿಬ್ಬರೂ ಬುದ್ಧಿವಂತಿಕೆಯಲ್ಲಿ ಕಡಮೆಯಿಲ್ಲದವರು. 'ಸಂಘಶಕ್ತಿಯು ವಿಶೇಷವಾಗಿದೆ. ಪರರನ್ನು ತಮ್ಮ ಗುಂಪಿನಲ್ಲಿ ಸಹಸಾ ಸೇರಿಸುವುದಿಲ್ಲ. ತಮ್ಮ ಗುಂಪಿನಲ್ಲಿ ಮುಂದಿಯ ಮಕ್ಕಳನ್ನು ಸಾಕುವ ರೂಢಿಯು ಈ ಜನರಲ್ಲಿ ಕಂಡು ಬರುತ್ತದೆ. ೬-೭ ವರ್ಷಗಳಾದ ಮೇಲೆ ಮಕ್ಕಳು ತಮ್ಮ ತಂದೆ-ತಾಯಿಗಳ ಮನೆಯಲ್ಲಿ ಇರುವುದು ಅಪರೂಪ.

ಜನರು ಸಾಮಾನ್ಯವಾಗಿ ಏಕಪತ್ನೀವ್ರತವುಳ್ಳವರು. ಪರಾಂಗನಾ-ದೂರರು. ಪರಸ್ತ್ರೀಯರೊಡನೆ ತಾವೇ ಸಾಕ್ಷಾತ್ ಯಾವ ಸಂಭಾಷಣಾದಿ ವ್ಯವಹಾರಗಳನ್ನೂ ಮಾಡುವುದಿಲ್ಲ. ಬೇಟೆಯಾಡುವುದು ಅವರ ಮುಖ್ಯ ಉದ್ಯೋಗ. ಅದಕ್ಕೆ ಬೇಕಾಗುವ ಶಸ್ತ್ರಾಸ್ತ್ರಗಳನ್ನು ತಾವೇ ತಯಾರಿಸುವರು. ಕಲ್ಲಿನ ಆಯುಧಗಳಿಂದ ನಿತ್ಯ ಜೀವನದ ಉಪಾಯಗಳನ್ನು ನೆರವೇರಿಸುವರು. ಸಮುದ್ರದಲ್ಲಿ ಬುಟ್ಟಿಗಳನ್ನು ಕಟ್ಟಿಕೊಂಡು ಸಂಚರಿಸುವರು. ಅವರಲ್ಲಿ ಈಗಿನಂತೆ ಸರಕಾರದ ಕಾನೂನುಗಳಿರದಿದ್ದರೂ, ಪರಂಪರೆಯಿಂದ ಬಂದ ದೈವದವರು ಅಂದರೆ ಜನತೆಯೇ, ಎಲ್ಲ ವ್ಯವಹಾರಗಳಲ್ಲಿ ತೀರ್ಪನ್ನು ಕೊಡುವರು. ಸಾಮಾನ್ಯವಾಗಿ ಅಪರಾಧಗಳು ಕಡಮೆ.

ಅಂದಮಾನೀ ಜನರು ಭೂತ, ಪಿಶಾಚ, ರಾಕ್ಷಸ ಇತ್ಯಾದಿ ಹಿಂಸಕ ಪ್ರಾಣಿಗಳನ್ನು ನಂಬುವರು. ಅವರಿಂದ ತಮಗೆ ಬಾಧೆಯಾಗದಂತೆ ಅಂಜಿ ನಡೆಯುವರು. ಅವರ ಅಧಿದೈವವು ಪುಲಗ. ಇವನು ಆಕಾಶದಲ್ಲಿ ಇರುವನಂತೆ. ಅಲ್ಲಿಯ ಉತ್ತರ ಪರ್ವತದ ಶಿಖರದ ತುದಿಯಲ್ಲಿ ಅವನ ಅರಮನೆ ಇರುವುದೆಂದು ನಂಬುತ್ತಾರೆ. ಪುಲುಗನು ತನ್ನ ಪರಿವಾರದ ಜನರಿಂದ ಜನರನ್ನು ರಕ್ಷಿಸುತ್ತಾನಂತೆ. ಇವನನ್ನು ವಾಯುದೇವತೆ (Storm God) ಯೆಂದೂ ಇವನ ವಿರೋಧಿಗಳು ಎರೆಂಚುವಿನ್ ಮತ್ತು ಜುರುವಿನ್ ಎಂಬ ಇಬ್ಬರು ರಾಕ್ಷಸರೆಂದೂ ಹೇಳುತ್ತಾರೆ. ಮರಣಾನಂತರ ಜೀವನು ಆಕಾಶಮಾರ್ಗವಾಗಿ ಹೋಗುತ್ತಾನಂತೆ.

ಇವರ ಭಾಷೆ ಅಲ್ಪ ಶಬ್ದಗಳುಳ್ಳದ್ದು. ಉತ್ತಮ ಪುರುಷ ಪ್ರಧಾನವಾದ ವ್ಯವಹಾರವು ಬಳಕೆಯಲ್ಲಿದೆ. ಭಾಷೆಯಲ್ಲಿ ಸಂಶ್ಲೇಷದ ಲಕ್ಷಣಗಳಿರುತ್ತವೆ. ತೀರ ಕಾಡುಸ್ಥಿತಿಯಂತೆ ಇದ್ದರೂ ಅವರ ಭಾಷೆಯಲ್ಲಿ ಪ್ರಕೃತಿ-ಪ್ರತ್ಯಯಗಳನ್ನು ವಿಂಗಡಿಸಬಹುದು. ಇದರಿಂದ ಅದು ಅನೇಕ ಪೂರ್ವದ ಅವಸ್ಥೆಗಳನ್ನು ದಾಟಿ ಇಲ್ಲಿಗೆ ಬಂದಂತೆ ತೋರುತ್ತದೆ.

ಅಂದಮಾನ-ನಿಕೋಬಾರಿ ಜನರು ಯಾವ ಜನಾಂಗಕ್ಕೆ ಸೇರಿದವರೆಂದು ನಿರ್ಧರಿಸಲಿಕ್ಕೆ ಶಕ್ಯವಿಲ್ಲ. ಆದರೂ ಹೋಲಿಕೆಗಳು ಮಲಯ, ಇಂಡೋಚೀನಾ ಜನರ ಕಡೆಗೆ ಹೆಚ್ಚಾಗಿರುತ್ತವೆಂದು ತಜ್ಞರು ಹೇಳುತ್ತಾರೆ.

ಬಂಗಾಲದ ಉಪಸಾಗರದಲ್ಲಿ ತುಂಡುತುಂಡು ನಡುಗಡ್ಡೆಗಳಾಗಿದ್ದ ಅಂದಮಾನ-ನಿಕೋಬಾರಗಳು, ಜಗತ್ತಿನ ಸೃಷ್ಟಿಯಲ್ಲಿ ಪ್ರಾಚೀನವಾದ ಭೂಭಾಗಗಳಾಗಿರಬೇಕು. ಬ್ರಹ್ಮದೇಶ, ಹಿಂದುಸ್ಥಾನ, ಮತ್ತು ಸುಮಾತ್ರಾಗಳು ಭೂಮಿಯಿಂದ ಸಂಬದ್ಧವಾಗಿದ್ದ ಕಾಲದಲ್ಲಿ ಅವುಗಳಲ್ಲಿ ಜನವಸತಿ ಇದ್ದಿರಬೇಕು. ಭೂಗರ್ಭಶಾಸ್ತ್ರ, ಪ್ರಾಣಿಮೀಮಾಂಸಾಶಾಸ್ತ್ರಗಳ ಶೋಧನೆಗಳು ಈ ಊಹೆಗೆ ಪೋಷಕವಾಗಿವೆ. ಭೂಕಂಪ ಮೊದಲಾದ ಅವ್ಯವಸ್ಥೆಗಳಿಂದ ಸಮುದ್ರವು ವ್ಯಾಪಿಸಿ, ಪರ್ವತಾವಳಿಯು ಮೇಲ್ಭಾಗವನ್ನು ಮಾತ್ರ ನಡುಗಡ್ಡೆಗಳಾಗಿ ಮಾಡಿಬಿಟ್ಟಿದೆ. ಅಲ್ಲಿಯ ಜನರ ಭಾಷೆ, ತತ್ತ್ವವಿಚಾರ, ಸಮಾಜಸಂಘಟನೆ, ರೀತಿ-ನೀತಿಗಳ ಪರಂಪರೆಗಳನ್ನು ಪರ್ಯಾಲೋಚಿಸಿದರೆ, ಈ ನಡುಗಡ್ಡೆಗಳ ಇತಿಹಾಸವು ಪ್ರಾಗೈತಿಹಾಸಿಕ ಕಾಲಕ್ಕೆ ಹೊಂದುತ್ತದೆಂದು ಧಾರಾಳವಾಗಿ ಹೇಳಬಹುದು. ಬ್ರಿಟಿಶರ ಆಡಳಿತದಲ್ಲಿ ಅವುಗಳನ್ನು ಕೈದಿಗಳ ವಸಾಹತಿಗಾಗಿ ಮಾಡಿದ್ದರಿಂದ, ಪರದೇಶದ ಸಾಂಸ್ಕೃತಿಕಸಂಪರ್ಕವು ತಪ್ಪಿತು. ಪ್ರಯಾಣಸೌಕರ್ಯದಿಂದ ಪರಸ್ಪರಸಂಸರ್ಗವಾಗುವ ೧೯-೨೦ ನೆಯ ಶತಮಾನಗಳಲ್ಲಿ ಅವು ಕೇವಲ ಅಪರಾಧಿಗಳ ಕೇಂದ್ರವಾದ್ದರಿಂದ, ಅವುಗಳ ಉನ್ನತಿಗೆ ಅವಕಾಶವಿಲ್ಲದಂತಾಯಿತು. ನಾವು ಮೇಲೆ ನಿರ್ದೇಶಿಸಿದ ಮಸಕುಮಸಕಾದ ಸಾಂಸ್ಕೃತಿಕ ಹಿನ್ನೆಲೆಯಿಂದ ಆ ನಡುಗಡ್ಡೆಗಳ ಪೂರ್ವೇತಿಹಾಸವನ್ನು ತಿಳಿದು ಹೊಸ ಹೊಸ ಯೋಜನೆಗಳಿಂದ ಅವುಗಳನ್ನು ಸಾಂಸ್ಕೃತಿಕ ಪ್ರಭಾವದಲ್ಲಿ ಚಿಕಿತ್ಸೆಯಿಂದ ಉನ್ನತಗೊಳಿಸಲು ಅವಕಾಶವುಂಟೆಂದು ನಮ್ಮ ದೃಢವಾದ ನಂಬುಗೆ.

ಮೊನ್ನೆ ಬಸ್ಸು ಕೆಟ್ಟಾಗ

(ಒಂದು ಚಿತ್ರಾವಳಿ)

" ಸಂಚಾರಿ "

卐

ನಂಬಿಗೆಯಿಟ್ಟು ಕುಳಿತ ಬಸ್ಸು ದಾರಿಯಲ್ಲಿ ಕೆಟ್ಟರೆ, ದಾರಿಗರ ಜೀವನವನ್ನು ಎಷ್ಟು ರೀತಿಯಿಂದ ಕೆಡಿಸ ಬಹುದು! ಆದರೆ ಈಗಿನ ಕೆಟ್ಟ ಕಾಲದಲ್ಲಿ, ಇದ್ದ ಬಸ್ಸುಗಳೆಲ್ಲ ಕೆಟ್ಟವುಗಳೇ ಇರುವುವು!

卐

ಪ್ರಸ್ತಾವನೆ

" ಢಮ್-ಮ್-ಮ್-ಮ್! "

ನಿನ್ನೆ ಮೊನ್ನೆ. ಅದು ಸಂಜೆಯ ೭॥ ಗಂಟೆಯ ಸಮಯ. ನಾಗಾಪುರದಿಂದ ಹೊರಟ ಅಂದಿನ ಕಡೆಯ ಬಸ್ಸು ಅದು. ಕನಕಾಪುರಕ್ಕೆ ನಡೆದಿತ್ತು. ನಾಗಾಪುರದಿಂದ ಕನಕಾಪುರ ೮೩ ಮೈಲು. ೪೩ನೆಯ ಮೈಲುಗಲ್ಲು ದಾಟುವುದರಲ್ಲಿ ಬಸ್ಸಿನ ಬುಡಕ್ಕೆ 'ಢಮ್‌ಮ್' ಎಂದು ಸಿಡಿಲಿನಂತೆ ಸಪ್ಪಳವಾಯಿತು. ಆ ಬಸ್ಸು 'ಶಿವ ಪ್ರವಾಸಿಕರಿಗಾಗಿ' ಎಂದೇನೋ ಬರೆದಿತ್ತು. ಒಳಗೆ ೬೦ ಪ್ರವಾಸಿಕರಿದ್ದರು.

" ಏನಾತ್ರೀಯಪ್ಪಾ! ಗಾಡೀ ಹರೀತೇನ್ರೀ? " ಎಂದು ಒಳಗೆ ಎಲ್ಲಿಯೋ ಕುಳಿತಿದ್ದ ಒಂದು ಮುದುಕಿಯ ಧ್ವನಿ ಕೇಳಿಸಿತು. ಯಾರೋ ಉತ್ತರ ಕೊಟ್ಟರು.

" ಗಾಡೀ ಹ್ಯಾಂಗ ಹರೀತದ, ಮುದಿಕೀ? ಗಾಡೀ ಬುಡುಕಿನ ಫಾಟೀಗ್ಯಾಲಿನ ಟಾಯರ್ ಹರೀತು! "

" ಕೆಳಗ ಇಳೀರಿ ಎಲ್ಲಾರು! " ಎಂದು ಖಾಕೀಡ್ರೆಸ್ಸಿನವ— ಕಂಡಕ್ಟರನಂತೆ— ಆಜ್ಞಾಪಿಸಿದ.

ಯಾರೋ ಕೂಗಿದರು:

" ಏನಪಾ ನಮ್ಮ ಕರ್ಮ? ತಾಸಿನ ಹಿಂದ ಎಂಜಿನು ಕೆಟ್ಟು ೨ ತಾಸು ನಿಂತಿತು. ಈಗ ಟಾಯರ್ ಬಸ್ಟ್ ಆತು! ಮೊದಲs ಢಗಮಗ ಅಂತ ಜೋಲಿ ಹೊಡಕೋತ ನಡಿದಿತ್ತು. ಕಡೀಕೆ ನಿಂತs ಬಿಟ್ಟೈs!! "

ಒಳಗೆ ಕುಳಿತವರೆಲ್ಲ ತ್ರಸ್ತಭಾವದವರಾಗಿ ಇಳಿದರು.

* * * * *

ಮೊದಲನೆಯ ದೃಶ್ಯ

ಬಸ್ಸಿನಿಂದ ಕೆಳಗಿಳಿದವರಲ್ಲಿ ಇಬ್ಬರು ಪರಸ್ಪರ ಭೆಟ್ಟಿಯಾದರು.

" ನಮಸ್ಕಾರ ಬಂಡೋಪಂತ, ನೀವೆಲ್ಲಿ ಹೊಂಟಿದ್ದಿರಿ? "

" ಓಹೋ, ನಮಸ್ಕಾರ ತಾತ್ಯಾಸಾಹೇಬ್! ಏನು ವಕೀಲರ, ನೀವೂ ಇದs ಬಸ್ಸಿನೊಳಗ ಇದ್ರಿ ಏನು? ನೋಡಲೇ ಇಲ್ಲ ನಾ, ನಿಮ್ಮನ್ನ! "

" ಹ್ಯಾಂಗ ಕಾಣಿಸಲಿಕ್ಕೆ ಸಾಧ್ಯ ಅದs ಹೇಳ್ರಿ. ಕುತಿಗೀ, ಕಾಲು ಅಗಲಾಡಿಸಲಿಕ್ಕೆ ಬರತಾವ— ಅಂತ ಗೊತ್ತಾದರ ಸಾಕು; ಅಷ್ಟರಾಗs ಇನ್ನೊಬ್ಬರನ್ನ ತುರುಕತಾರ.

" ನೋಡಿದಿರಾ ಜನರನ್ನ! ನೋಡಿದರ ಒಂದೇ ಬಸ್ಸುಇದು. ಕೆಳಗ ಇಳಿದ ಮುಂದಿನ್ನ ನೋಡಿದರ, ಜಾತ್ರಿ ನಡದsದೋ ಏನೋ ಅನ್ನೂಹಾಂಗ ಕಾಣತsದ. ನಾನೇನೋ ಹೊಂಟಿದ್ದೆ ಮುಂಬಯಿಗೆ. ಈ ಬಸ್ಸು ಕನಕಾಪೂರಕ್ಕ ಹೋದಮ್ಯಾಲೆ ನಸಿಕಿನ್ಯಾಗ ಬ್ಯಾರೇ-ಬಸ್ಸಿನ್ಯಾಗ ತುಂಗಳೂರು ಸ್ಟೇಶನ್ನಕ್ಕ ಹೋಗಿ ಮೇಲು ಹಿಡೀಬೇಕು. ಬಹಳೇ ಜರೂರಿ ಕೆಲಸ ಇತ್ತು. ನಮ್ಮದಂತೂ ವ್ಯಾಪಾರೀ ಲಾಯಿನು; ವ್ಯಾಳ್ಯಾಕ್ಕ ಹೋಗದಿದ್ದರ ಹೊರಲಾರದಷ್ಟು ಲುಕ್ಸಾನು ನೋಡರಿ! "

" ಇನ್ನೆಲ್ಲಿ ಸ್ಟೇಶನ್ನು ಬಂಡೋಪಂತರs! ಬಸ್ಸು ಇನ್ನ ಲಗೂ ಮುಂದ ಹೋದರ ಮುಂದಿನ ಮಾತು. ನನಗ ಹೋಗಬೇಕಾಗೇದ ಕನಕಾಪುರಕ್ಕs. ದೊಡ್ಡ ಖಟ್ಲೆ. ನಮ್ಮದು ಕ್ರಿಮಿನಲ್ ಲಾಯಿನು. ಜಂಗೀ ಖೂನೀ ಖಟ್ಲೆ. ನಾಳೆ ಮುಂಜಾನೆ ಕಚೇರಿ. "

" ತಾತ್ಯಾಸಾಹೇಬ, ಹೀಂಗ ಇಲ್ಲೇ ಕೂತರ ಹ್ಯಾಂಗರೀ ಹಾಂಗಾದರ! ಡ್ರಾಯವರ್ ಏನಂತಾನ ಕೇಳ್ರಿ! " ಅವನೆಡೆಗೆ ಇಬ್ಬರೂ ಹೋದರು. ಅತ ಹೇಳಿದ: " ಬಸ್ಸಿನ 'ಜಾಕ್' ಮತ್ತು 'ಪಾನಾ' ಕೊಟ್ಟಿಲ್ಲ ನಮಗ. ಹಾಂಗs ಬರಬೇಕಾತು. ಮತ್ತೊಂದು 'ಸ್ಪೆಸ್ಸೀ' ಟಾಯರ್ ಇದ; ಅದರ ಬಸ್ಸು ಹ್ಯಾಂಗ

रोहिणी
TRADE MARK

ಮ್ಯಾಲೆ ಏರಿಸೋದು ಹೇಳ್ರಿ, ಜಾಕ್ ಇಲ್ಲದಽ! ಮತ್ತ ಆ ನಟ್ಟು-ನೋಳೀ ತೆಗೀಲಿಕ್ಕ 'ಪಾನಾ' ಬೇಕಲ್ರೀ"

"ಏನಪಾ ಹೀಂಗಂದರ? ಕೊಡಲಿಲ್ಲಾ ಅಂದರ ಏನು! ಕೇಳಿ ಇಸಗೊಳ್ಳಬಾರದೇನು?"

ಡ್ರೈವ್ಹರು ಮಾತಾಡದೆ ಬೀಡಿ ಹೊತ್ತಿಸಿದ.

"ಇನ್ನೊಂದು ಬಸ್ಸು ಬರತಽದೇನು ಈ ಕಡೆ?"

"ಇಲ್ಲ. ಇದೇ ಕಡೀದು!"

"ಅಂದರ ನಿನ್ನ ಬಸ್ಸಿಗೆ ಸಾಮಾನಿಲ್ಲ! ನಮಗ ಎರಡನೇ ಗತಿ ಇಲ್ಲ!"

"ನಾವೇನು ಮಾಡೋಣ್ರೀ? ನಂಮ್ಯಾಲ್ಯಾಕ ಹರಿಹಾಯ್ತೀರಿ? ನಮಗೇನು ಊರಿಗೆ ಹೋಗೋದು ಬ್ಯಾಡಾಗೇದಽ! ಇಂಥಾ ಅಡಿ-ವ್ಯಾಗ ಈ ಕತ್ತಲ್ಯಾಗ ಮುದ್ದಾಮು ಬಸ್ಸು ನಿಂದರಿಸಿ, ಗಿಡದ ಮ್ಯಾಲಿನ ತೊಪ್ಪಲಾ ತಿನಬೇಕಾಗಿರತಽದಽ ನಮಗ?" ಬೀಡಿ ಸೇದಿ ಉಫ್ ಎನ್ನುತ್ತ ಅಲ್ಲಿಂದ ಜಾರಿದನು.

"ತಾತ್ಯಾ ಸಾಹೇಬ, ಅವನ ಜೋಡಿ ಒದರ್ಯಾಡಿದರ ನಿಮ್ಮ ಖಟ್ಲಿ ಏನು ಗೆದ್ದ್ಹಾಂಗ ಆಗೂದಿಲ್ಲ. ಬಾಳೀಹಣ್ಣು ತಂದೀನಿ, ತಿನ್ನೋಣು ನಡೀರಿ!" ಎಂದರು ಬಂಡೋಪಂತರು. ಇಬ್ಬರೂ ಗಿಡದ ಮರೆಗಾದರು.

* * * *

ಎರಡನೆಯ ದೃಶ್ಯ

ಆವಳು ಬಸಿರು ಹೆಣ್ಣುಮಗಳು. ೯ನೆ ತುಂಬಿತ್ತು. ಹಳ್ಳಿಯಿಂದ ಚಕ್ಕಡಿಯಲ್ಲಿ ಬಂದು, ನಡುವೆಯೇ ಬಸ್ಸಿನಲ್ಲಿ ಏರಿದ್ದಳು. ಅವಳ ಕೂಡ ಅವಳ ತಾಯಿ. ಹೆಣ್ಣುಮಗಳು ಗಾಬರಿಯ ಧ್ವನಿಯಲ್ಲಿ ಹೇಳಿದಳು:

"ಯವ್ವಾ, ಹೊಟ್ಯಾಗ ತರಾಸಕ್ಕತಿ!"

"ಗಪ್ ಕುಂಡರಽ ಒಂದು ಜರಾ, ಸಾಂವಕ್ಕಾ! ಹಾಂಗ ತ್ರಾಸ ಮಾಡಿಕೋ ಬ್ಯಾಡ! ಗಾಡೀ ಈಗ ಗಡಾನಽ ಹೋಕ್ಕತಿ ಏಳ"

"ಇಲ್ಲಽ ಯವ್ವಾ! ಬಹಾಳ್ ತಲಾಸಕ್ಕತಿ....ಯು....ಯವ್ವಾ! ಯಾನ್ ಮಾಡಲೇಽ!....ಯವ್ವಾ!—ಯವ್ವಾ!"

"ಅಯ್ಯಽ ಸಾವಕ್ಕಾ, ಬಹಳ ತರಾಸಾಕ್ಕತೇನಽ ಮಗಳಽ? ಯಾನ್ ಮಾಡಲಿನ್ನಽ! ಯಾಕ್ ದ್ಯಾವರು ಬುದ್ಧೀ ಕೊಟ್ನಪ್ಪಾ ನಮಗಽ ಈ ಗಾಡ್ಯಾಗ ಬರಾಕ! ರಸ್ತೆ ಕೆಟ್ಟ ಐತಿ. ಗಾಡೀ ಎಲ್ಲಾ ಮುರುಕ ಐತಿ!........ ಯಾಕ್ ಸಾಂವೀ!.... ಹೀಂಗ್ಯಾಕ ಮಾಡಾಕ್ಹತ್ತೀಯಽ ನನ್ನ ಮಗಳಽ!!"

* * * *

ಮೂರನೆಯ ದೃಶ್ಯ

ಏಳೆಂಟು ಜನ ತರುಣಿಯರ ಗುಂಪು, ಇಬ್ಬರು ತರುಣರು.

"ಏನಽ ವಿಮಲಾ, ಇನ್ನೇನು ಮಾಡಬೇಕು! ನಮ್ಮ ಗತೀ ಏನಿನ್ನ!"

"ಹಣೀ ಹಣೀ ಗಟ್ಟಿಸಿಗೋಬೇಕು! ಇವತ್ತ ರಾತ್ರಿ ೧೧ಕ್ಕ ಎಕ್ಸ್‌ಪ್ರೆಸ್ ಹ್ಯಾಂಗ ಸಿಗಬೇಕು? ನಾವು ಟ್ರೇನು ಕಾಣೋ ಬಗೀ ಹ್ಯಾಂಗಿನ್ನ! ಈಗ ರಾತ್ರೀ ೯ ಹೊಡೀತು. ನಾಳೆ ಪರೀಕ್ಷೆ ೧೧ಕ್ಕ. ಆ ಡ್ರೈವ್ಹರ್-ಕಂಡಕ್ಟರರನ್ನ ನೋಡರಿ. ಹ್ಯಾಂಗ ಹೆಣಾ ಕೂತ್ಹಾಂಗ ಕೂತಾರ!....ಏನ್ರೀ, ಮಿ. ಪಂಡಿತ್, ಮಿ. ಫಾಟಕ್, ಹೀಂಗ್ಯಾಕ್ರೀ? ಏನಾರೇ ಮಾತಾಡ್ರೆಲ್ಲಾ!"

ಘಾಟಕ— ವೊತಾಪಿತರ ಬಸ್ಸು ಮುಂದ ಹೋಗ್ತದ ಏನು ಹೇಳು, ಲೀಲಾ.

ಪಂಡಿತ—ನೀ ಹ್ಯಾಂಗಾದರೂ ೨೦೦ ಪೌಂಡು ಭಾರ ಇದ್ದೀದಿ, ಘಾಟಕ್ಯಾ. ಬಸ್ಸಿನ ಬುಡಕಲೆ ಸೇರು. ವ್ಹ್ಯಾಲ ಏಳತದ.

ಘಾಟಕ—ಘಾಲೀ ಹೊರಗ ತಗೀಬೇಕಾಗತದ ಪಾನಾದಿಂದ, ನಟ್ಟುಗಳನ್ನ ತಿರುಗಿಸಿ. ಪಾನಾ ಇಲ್ಲ ಅಂತ. ನಿನ್ನ ಹಲ್ಲು ಹ್ಯಾಂಗಾದರೂ ಮುಂದ ಬಂದಾವ. ಬಾಯಿಹಾಕು ನಡಿ!"

ಎಲ್ಲಾರೂ ಬೊಳ್ಳೆಂದು ನಕ್ಕರು.

ವಿಮಲಾ ಅಂದಳು — ಮಂಗನ್ಹಾಂಗ ನಕ್ಕರೇ ಎಲ್ಲಾರು! ಹೀಂಗs ಕೂಡದಿ ಹಲ್ಲುತಕ್ಕೋತs ಬೆಳತನಕಾ! ನಾಳೆ ನಮ್ಮ ಹೆಸರ್ಲೆ, ನಮ್ಮ ಪೇಪರು ಟೇಬಲ್ ಖುರ್ಚಿನs ಬರೀತಾವ ಕಾಣಿಸತದ!

ಎಲ್ಲರೂ ತಣ್ಣಗಾದರು. ಮತ್ತೇನೋ ಗುಜುಗುಜು ಪ್ರಾರಂಭವಾಯಿತೀನೋ!

* * * *

ನಾಲ್ಕನೆಯ ದೃಶ್ಯ

ಅಜಿಯ ಗಿಡದ ಗುಂಪಿನಲ್ಲಿ ಒಂದು ಮೇಣಬತ್ತಿಯ ದೀಪದ ಸುತ್ತಲೂ ಒಂದು ಕುಟುಂಬ ಕುಳಿತಿತ್ತು. ಆ ಬದಿಯಿಂದ ಒಬ್ಬರು ಬಂದು ಅವರೊಡನೆ ಮಾತಾಡಹತ್ತಿದರು

"ಏನು ಜನಾಗೀದಾರರೇ, ಕಡೀಕ, ಇವೇ ಗಾಡೀ ಸಿಕ್ಕಿತs ನಿಮ್ಮ ನಾಶಿಗೆ. ಈ ಬಸ್ಸಿಗೆ ಹೋಗೋ ಬುದ್ಧಿ ಯಾಕ ಬಂತು ನಿಮಗ ಅಂತೇನ!"

"ಅಲ್ರೀ ಮಾಸ್ತರs, ಸ್ಪೆಶಲ್ ಬಸ್ಸು ಕೇಳಿದರ ಸಾಧ್ಯ ಇಲ್ಲಾ ಅಂತ ಉತ್ತರ ಬರೆದು ಕಳಿಸಿದರು. ಇವತ್ತ ಮುಂಜಾನೇ ಬಸ್ಸು ಅಪಘಾತಕ್ಕೀಡಾತು ಕೇಳಿದಿರಿಲ್ಲೋ. ಏನು ಹೇಳೋದದ ಹೇಳ್ರಿ, ಹೊಟ್ಯಾಗ ಸಂತಾಪಾಗೇದ. ಅರ್ಧ ಮನೀ ಜನರು ನಿನ್ನೇ ಹೋಗ್ಯಾರ. ಗುಂಡೂಗ ಲಗೂ ರಜಾ ಸಿಗಲಿಲ್ಲಾ; ಅಂತ ಇವತ್ತs ಬಂದ. ಇವನs ನೋಡ್ರಿ ಗುಂಡು, ನನ್ನ ಚಿರಂಜೀವ. ಇಷ್ಟರಾಗ 'ರುಕ್ಕೋತ' ಸುರು ಆಗಬೇಕಾಗಿತ್ತು ನೋಡರಿ."

"ಅಂದರ ರಾಯರs, ಇವರ ಲಗ್ನ ಅದs ಏನು? ಎಂದ?"

"ನಾಳಿಗೆ ಮುಂಜಾನೆ ೮॥ ಗಂಟೇಕ್ಕ. ಈಕಿ ನನ್ನ ಹೆಂಡತಿ. ನೊದಲs ದುಡುದು ದುಡುದು ಹೈರಾಣಾಗ್ಯಾಳ; ಹೀಂಗ ಘಾಳ್ಯಾಗ ಕೂತು ಗೊತ್ತಿಲ್ಲ. ಬಾಕೀ ಹುಡುಗರನ್ನ ನೋಡ್ರಿ.... ಥಿಹ್ಯಾಂಗ ಬ್ಯಾಸತ್ತು ಕೂತಾವ!"

"ಅಲ್ರೀ, ಮುಂದ ಹ್ಯಾಂಗ ಹಾಂಗಾದರ! ನಿಮ್ಮ ಕಾರು ಇತ್ತಲ್ಲs?"

"ಪೆಟ್ರೋಲಿನ ಕೊರತೀ–ಅಂತ ಹುಯಿಲು ಎಬ್ಬಿಸಿ ಬಿಟ್ಟರು–ಸುಳ್ ಸುಳ್ಳs ನಮ್ಮೂರಾಗ. ಪಂಪಿನವರು ಕೇಳ್ತಾರs ಇಷ್ಟು ಸಿಕ್ಕರs! ಕೇಳಿದಲ್ಲೆ 'ಪೆಟ್ರೋಲ್ ಇಲ್ಲs' ಅಂತ ಹೇಳಿದರು. ಕಾರು ಹಾಂಗs ಒಗದು ಬರಬೇಕಾತು."

"ಥೂ ಥೂ ರಾಯರs"

ಕೊನೆಯ ಮಾತು

ಇನ್ನೂ ಅನೇಕ ದೃಶ್ಯ ಕಾಣಬಹುದಾಗಿತ್ತು. ನನಗೋ ಹಸಿವೆಯಾಗಿ ತ್ರಾಣಹೋಗಿ, ನಿಂತಲ್ಲಿಯೇ ಕೂತು ಒರಗಿದೆ. ಅಂತೂ ಬಸ್ಸು ಬಹು ವೇಗದಿಂದ ಹೊರಟಿತ್ತು.

ಬಾಯೋಟೋನಾ

ಇದರ ಸೇವನೆಯಿಂದ

ಮಕ್ಕಳು ಮೊದಲ್ಗೊಂಡು ಮುದುಕರ ವರೆಗೆ ಸ್ತ್ರೀಪುರುಷರು ಇದನ್ನು ಸೇವಿಸ ಬಹುದು. ಮನುಕರಿಗೂ ಜೀವಾಣುಗಳಿಗೂ ಬಲವನ್ನೂ ಆರೋಗ್ಯವನ್ನೂ ಕೊಡುವ ಉತ್ತಮ ಉಪಾಯವೆಂದರೆ 'ಬಾಯೋಟೋನಾ' ಸೇವಿಸುವದೇ ಆಗಿದೆ. ೪೦ ದಿವಸ ಸಾಕಾಗುವ ಬಾಟ್ಲಿಯ ಬೆಲೆ ರೂ. ೨, ೬. ಬಿಜಾರ್ ಬೇರೆ. ಸೂಚಿಪತ್ರ ಪಡೆಯಬಹುದು.

ROY & CO. BOMBAY 2.

ಚಿತ್ರಕಲಾ ಪ್ರವೇಶ

೩ ನೆಯ ಆವೃತ್ತಿ

ಅಚ್ಚಾಗಿ ಸಿದ್ಧವಾಗಿದೆ.

ಬೇಕಾಗಿರುವವರು

ಬೇಗನೆ ಬೇಡಿಕೆ ಕಳುಹಿರಿ!

ಬರೆದವರು :

ಶ್ರೀ. ಜಿ. ಎಸ್. ಹುದ್ದಾರ

'ಅಲ್ರಿ, ಮುರಕು ಘಾಲೀವ್ಯಾಲ ಹ್ಯಾಂಗ ನಡದೀದರೀ ? '

' ಹ್ಯಾಂಗೇನು, ಹ್ಯಾಂಗಾದರೂ ಊರಿಗೆ ಹೋಗಿ ಮುಟ್ಟದರ ನಿಮ್ಮದೇನು, ಸುಮ್ಮನ ಕೂಡರಿ ?

' ರಸ್ತೇದಾಗ ಏನಾರೇ ಅದರ ಏನು ಮಾಡ್ತೀರಿ ? '

' ಮತ್ತೇನು, ನಿನ್ನೆ ಗಿಡದ ಬುಡಕ ಕೂತ್ಹಾಂಗ ಕೂಡೋದು ! '

' ಹಾ. ಹಾ. ಹಾ '

ಎಚ್ಚರಿಕೆಯಾಯಿತು. ಬೆಳಗುಮುಂಜಾನೆಯ ಕನಸು ಅದು. ಕಣ್ಣು ತಿಕ್ಕಿಕೊಳ್ಳುತ್ತಾ ಎಲ್ಲ ಕಡೆಗೆ ನೋಡಿದೆ.

೧. ಬಂಡೋಪಂತರೂ ತಾತ್ಯಾಸಾಹೇಬರೂ ಡ್ರೈವ್ಹರನ ಕೂಡ ಬಡಿದಾಡುತ್ತಿದ್ದರು.

೨. ಸಾವಕ್ಕ ಈಗಾಗಲೇ ಬಾಳಂತಿಯಾಗಿ ೫-೬ ತಾಸುಗಳಾಗಿದ್ದವು. ಕೂಸು ಚೀರುತ್ತಿತ್ತು. ಆಜೆಯು ದಟ್ಟಾಗಿ ಬೆಳೆದ ಗಿಡದ ಮರೆಯಲ್ಲಿ ಆವಳ ಶುಶ್ರೂಷೆ.

೩. ಫಾಟಕ್ ಮತ್ತು ಪಂಡಿತ್‌ರು ತಾವು ಪರೀಕ್ಷೆಗಾಗಿ ಓದಿದ ಪುಸ್ತಕಗಳನ್ನು ಸುಡುತ್ತಲಿದ್ದರು. ಅವುಗಳ ಮೇಲೆ ವಿಮಲೆ ಚಹಕ್ಕಾಗಿ ಪಾತೇಲಿ ಇಟ್ಟಿದ್ದಳು. ಶೀಲಾ ಸಕ್ಕರೆ-ಚಹದ ಪುಡಿಯನ್ನು ಅಳೆಯುತ್ತಿದ್ದಳು. ಉಳಿದವರು ನೋಡುತ್ತಿದ್ದರು. ಎಲ್ಲರೂ ನಗುವಾಗ ಅತ್ತಂತೆ ಕಾಣುತ್ತಿದ್ದರು; ಅಳುವಾಗ ನಕ್ಕಂತೆ ಕಾಣುತ್ತಿದ್ದರು.

೪. ಜಹಗೀರದಾರರು ಸಿಟ್ಟಿನಿಂದ ನಡುಗುತ್ತಿದ್ದರು. ರಾತ್ರಿಯೆಲ್ಲ ನಿದ್ರೆಯೇ ಇಲ್ಲ. ಗುಂಡುವಿನ ಕಣ್ಣುಗಳಲ್ಲಿ ನೀರು. ಜಹಾಗೀರದಾರರ ಹೆಂಡತಿಯು ಜ್ವರದಲ್ಲಿ ' ಮುಹೂರ್ತ ದಾಟಿ ಹೋತು ! ' ಎಂದು ಬಡಬಡಿಸುತ್ತಲಿದ್ದಳು !

*   *   *   *

ಸುಮಾರು ೧೧ ಗಂಟೆಗೆ ಮಾಯಾಪುರದಿಂದ ಹೊರಟ ಮೊದಲನೆಯ ಬಸ್ಸು ಬಂದಿತು. ಆದರಲ್ಲಿ ಅಲ್ಪ ಪ್ರವಾಸಿಕರು ಇದ್ದರು. ಕೆಟ್ಟ ಬಸ್ಸಿನ ಎಲ್ಲ ಪ್ರವಾಸಿಕರನ್ನೂ ಈ ಬಸ್ಸಿನಲ್ಲಿ ತುರುಕಿದರು. ಕೆಟ್ಟ ಬಸ್ಸಿನ ಎಂಜಿನಿಗೆ ಮತ್ತೇನೋ ಧಾಡಿಯಾಗಿತ್ತಂತೆ. ಡ್ರೈವರನು ಎಂಜಿನಿನಲ್ಲಿ ಮುಖ ಹಾಕಿಬಿಟ್ಟಿದ್ದನು.

ಈ ಬಸ್ಸಿನಲ್ಲಿ ಕುಳಿತ ಎಲ್ಲರೂ ಬೆಂದ ಬದನೇಕಾಯಿಯಂತೆ ಕಾಣುತ್ತಿದ್ದರು. ಆದರೂ ಒಂದು ತರದ ಸಮಾಧಾನ : ಬಸ್ಸು ಮುಂದೆ ಹೊರಟಿತಲ್ಲಾ—ಎಂದು. ' ಈ ಬಸ್ಸು ಬಂದಿದ್ದಿಲ್ಲವಾದರೆ ಕುಚ್ಚೀ ಹಿಡಿಯುವ ಪ್ರಸಂಗವಿತ್ತು ' ಎಂದು ಯಾರೋ ಅನ್ನುವಾಗ, ಎಲ್ಲ ಪ್ರವಾಸಿಕರು ಹುಚ್ಚುನಗೆ ನಕ್ಕರು. ಬಸ್ಸು ಆಗ ವೇಗದಿಂದ ಹೊರಟಿತು. ಎಲ್ಲರಿಗೂ ಆನಂದ ! ! !

ಐದಾರು ಮೈಲು ಹೋಗಿರಬೇಕು.

' ಥಮ್ ಥಮ್ ಮ್ ಮ್ ಮ್........'

ಯಾಕ್ರೀ ಮತ್ತೇನಾತ್ರಿ ! !........ಟಾಯರ್ ಪಂಕ್ಚರ್ ಆತ್ರೀ ! ....ಇದೂ ಬಸ್ಸು ಕೆಟ್ಟು ನಿಂತ್ಯ ! ! !....ಸ್ಪೆಷ್ನೀ ಅದಲ್ಲಾ ! ! ! ....ಆದರ ಈ ಬಸ್ಸಿನ ' ಜಾಕ್ ' ಮತ್ತು ' ಪಾನಾ ' ಹಿಂದಿನ ಬಸ್ಸು—ಅಂದರ ನಾವು ಮೊದಲು ಕೂತ ಬಸ್ಸಿನವಗ ಕೊಟ್ಟು ಬಂದಾರಂತ ! ! ! !........ಕೆಳಗ ಇಳೀರಿ ಎಲ್ಲಾರು !....ಛೀ ಛೀ ! ಏನಿದು........ಈ ಬಸ್ಸು ಬಂದಿದ್ದಿಲ್ಲ ಅಂದರಽನಽ ಠೀಕಿತ್ತು ! ! ಗಿಡದ ಬುಡಕಽಽರೆ ಕೂಡತಿದ್ದಿವಿ........ ಇದೇನು ಇಲ್ಲೆ.... ಕೆಟ್ಟ ಬಿಸಿಲು........ಗಿಡಾ ಇಲ್ಲ, ಗಂಟೆ ಇಲ್ಲಾ ! ! ! !..........

' ಬಗನ ' ಬಾಲಾಮೃತ

ಮಕ್ಕಳ ಸಧೃಡತೆಗಾಗಿ 'ಬಗನ' ಬಾಲಾಮೃತ-ವನ್ನು ಉಪ-ಯೋಗಿಸಿರಿ.

ಮುಖ್ಯವಾಗಿ ಮಕ್ಕಳ ಯಕೃತು ಮತ್ತು ಹೊಟ್ಟೆ ಎಂದರೆ ಅವರಿಗೆ ರೋಗದ ಭಯವಿಲ್ಲ.

ಬಗನ ಬಾಲಾಮೃತದಲ್ಲಿ ' ಗ್ರಾಯಿಪ್ ಹೀಲರಿನ ' ಅಂಶವೂ ಇರುವದರಿಂದ, ಇದು ಮಕ್ಕಳ ಉತ್ತಮ ' ಟೋನಿಕ್ಕು ' ಇರುವದು.

THE NATIONAL PHARMACIES & PHARMACEUTICALS Ltd. DHARWAR.

ಜೋಗಿ ಮತ್ತು ಗೊಂದಲಿಗರ ಕಥೆಗಳು

(ಜಾನಪದ ಸಾಹಿತ್ಯ ಪರಿಚಯ)

ಶ್ರೀ ಪಾಟೀಲ ಬಳವಂತರಾಯರು, ಬಿಟಗೇರಿ

★

ಹೊಸಕಾಲವು ಹಳೆಯಕಾಲದ ಸೌಂದರ್ಯ-ಸಂಪ್ರದಾಯಗಳನ್ನೆಷ್ಟೋ ಅಳಿಸತೊಡಗಿದೆ. ಆದರೆ ನಾವು, ಪುರಾತನವಸ್ತುಸಂಗ್ರಹದ ಬುದ್ಧಿಯಿಂದಲಾದರೂ ಅಂತಹ ಸೌಂದರ್ಯ-ಸಂಪ್ರದಾಯಗಳನ್ನು ಸಂರಕ್ಷಿಸಿ ಪರಿಚಯಮಾಡಿಕೊಳ್ಳಬೇಕಾಗಿದೆ.

★

ನಮ್ಮ ನಾಡಿನಲ್ಲಿ ರೂಢವಾಗಿರುವ ಜಾನಪದ ಕಥಾಸಮುದಾಯವು, ಕೇವಲ ಮನೋರಂಜನೆಯೊಂದಿಗೆ ಯಾವುದಾದರೊಂದು ನೈತಿಕತತ್ತ್ವವನ್ನು ಜನತೆಗೆ ತಿಳುಹಿಕೊಡಲೆಂದು ಮುಂದೆ ಬಂದುದಾಗಿರುತ್ತದೆ. ಹಿಂದಿನ ಕಾಲದಲ್ಲಿ ನಮ್ಮ ದೇಶದಲ್ಲಿ ಅಕ್ಷರಶಿಕ್ಷಣಕ್ಕೆ ಪ್ರಾಶಸ್ತ್ಯವಿರಲಿಲ್ಲವಾದರೂ, ವ್ಯಕ್ತಿಯ ಮನಸ್ಸು-ಹೃದಯಗಳು ವಿಕಾಸಗೊಂಡು ಅಲ್ಲಿ ಮಾನವತೆ ಮೂಡಿ ನಿಲ್ಲುವುದಕ್ಕೆ ಅವಕಾಶವನ್ನು ಕಲ್ಪಿಸಿ ಕೊಡುವಂತಹ ಸಾಮಾಜಿಕ ಶಿಕ್ಷಣವು ಅವಿಚ್ಛಿನ್ನವಾಗಿ ನಡೆಯುವ ಏರ್ಪಾಡು ಇದ್ದಿತು. ಇದಕ್ಕಾಗಿ ನಾಗರಿಕ ಸಮಾಜದಲ್ಲಿಯೂ ಜಾನಪದ ಸಮಾಜದಲ್ಲಿಯೂ ಹಲವು ಸಂಸ್ಥೆಗಳು ಹೇಗೋಹೇಗೋ ರೂಪುಗೊಂಡು, ಉತ್ಕಟವಾದ ಶ್ರದ್ಧೆಯಿಂದ ಕಾರ್ಯ ಮಾಡುತ್ತಲಿದ್ದುವು. ಸಮಾಜದ ಸುಖ-ಶಾಂತಿಗಾಗಿಯೂ ವ್ಯಕ್ತಿ-ವ್ಯಕ್ತಿಗಳ ಮನಸ್ಸು-ಹೃದಯಗಳ ವಿಕಾಸಕ್ಕಾಗಿಯೂ ದುಡಿಯುವ ಈ ವಿವಿಧ ಸಂಸ್ಥೆಗಳು, ಸಮಾಜದಲ್ಲಿಯ ಪ್ರತಿಯೊಂದು ವ್ಯಕ್ತಿಯ ಕಿವಿಗೂ ತಮ್ಮ ಶಿಕ್ಷಣದ ಸಂದೇಶವನ್ನು ತಲ್ಪಿಸುತ್ತಲಿದ್ದುವು. ದೇವರ ಅಸ್ತಿತ್ವ, ಆತನ ವಿಷಯದಲ್ಲಿ ಇರಿಸಬೇಕಾದ ಶ್ರದ್ಧಾಭಕ್ತಿಗಳ ವಿಚಾರ ಇವು, ಈ ಶಿಕ್ಷಣಸಂಸ್ಥೆಗಳು ಕೊಡುತ್ತಲಿದ್ದ ಮೊದಲನೆಯ ಪಾಠ. ಇನ್ನು ಈ ದೇವರ ಪ್ರೀತಿಗೆ ಪಾತ್ರವಾಗಬೇಕಾದರೆ ವ್ಯಕ್ತಿ-ವ್ಯಕ್ತಿಗಳೂ ಆಚರಣೆಯಲ್ಲಿ ಇರಿಸಿಕೊಳ್ಳಬೇಕಾಗಿದ್ದ ದಯೆ, ದಾಕ್ಷಿಣ್ಯ, ಪ್ರಾಮಾಣಿಕತನ, ಪರೋಪಕಾರ ಬುದ್ಧಿ, ದಾನಶೀಲತೆ ಇಂದ್ರಿಯ ಸಂಯಮನ, ಮಾನವಬಂಧುತ್ವ, ಸಹಾನುಭೂತಿ-ಸಹಿಷ್ಣುತೆಗಳು ಮೊದಲಾದ ಸದ್ಗುಣಗಳನ್ನು ಕಲಿಸುವುವು ಮುಂದಿನ ಪಾಠಗಳು. ಅಧಿಕೃತ ಧರ್ಮಪೀಠಗಳು ಇಂತಹ ಪಾಠಗಳನ್ನು ಕಲಿಸುವುದಕ್ಕಾಗಿ ಪ್ರಭುಸಮ್ಮಿತ ಸಾಹಿತ್ಯವಾದ ಶ್ರುತಿ-ಸ್ಮೃತಿಗಳನ್ನು ಬಳಸಿಕೊಳ್ಳುತ್ತಿರಬಹುದಾದರೂ, ಸಾಮಾನ್ಯ ಸಮಾಜ ನಿರ್ಮಿತ ಶಿಕ್ಷಣ ಸಂಸ್ಥೆಗಳು, ಮಿತ್ರಸಮ್ಮಿತ ಕಾಂತಾಸಮ್ಮಿತ ಸಾಹಿತ್ಯಪ್ರಕಾರಗಳಾದ ಪುರಾಣ-ಪುಣ್ಯಕಥೆಗಳನ್ನೂ ಕಲ್ಪಿತ ಕಥೆಗಳನ್ನೂ ಬಳಸಿಕೊಳ್ಳುತ್ತ ಬಂದಿರುವುವು.

ಉದ್ಯೋಗದ ಮೂಲಕ ನಮ್ಮ ನಾಡಿನಲ್ಲಿ ಬೇರೆ ಬೇರೆ ಜಾತಿಗಳು ಏರ್ಪಡುತ್ತ ಹೋದಂತೆ, ಈ ಸಮಾಜಶಿಕ್ಷಣದ ಕಾರ್ಯಮಾಡುವ ಗುಂಪಿನವೂ ಬೇರೆ ಬೇರೆ ಜಾತಿಗಳಾಗಿ ಏರ್ಪಟ್ಟುವು. ಈ ಜಾತಿಗಳ ಏರ್ಪಾಟ, ಇಂದಿನ ಪೂರ್ವ-ಪಶ್ಚಿಮ ಸಂಸ್ಕೃತಿಗಳ ಸಮ್ಮಿಶ್ರಣ ಕಾಲದಲ್ಲಿ ಅಸ್ವಾಭಾವಿಕವೂ ಅನುಚಿತವೂ ಎನಿಸಿ ವ್ಯಸಮ್ಯಕ್ಕೆ ಕಾರಣವಾಗಿದ್ದರೂ, ಒಂದು ಕಾಲದ ಕನ್ನಡನಾಡು, ಈ ಜಾತಿ-ಜಾತಿಗಳ ಏರ್ಪಾಡಿನಿಂದ ಸಾಮಾಜಿಕ ಸುಖ-ಶಾಂತಿಗಳನ್ನು ಗಳಿಸಿ ಸುಖ-ಸಂಕಥಾ ವಿನೋದಗಳಲ್ಲಿ ಜೀವನ ಸಾಗಿಸಿತ್ತೆಂಬ ಮಾತನ್ನು ನಾವು ಇತಿಹಾಸದಿಂದ ಕಂಡುಕೊಳ್ಳಬಹುದು. ಸಮಾಜಶಿಕ್ಷಣದ ಕಾಯಕದಿಂದ ಉಪಜೀವಿಸುತ್ತಲಿದ್ದ ಜಾತಿಗಳು ಕನ್ನಡನಾಡಿನಲ್ಲಿ ಹಲವಾರು ಇವೆ. ಇಂದು ಅವೆಲ್ಲ ಜಾತಿಗಳ ಜನರು—ಕಾಲವೈಪರೀತ್ಯದಮೂಲಕ—ನಿರುದ್ಯೋಗಿಗಳಾಗಿ, ಸಮಾಜಕ್ಕೆ ಹೊರೆಯಾಗಿ ತೋರುತ್ತಲಿದ್ದರೂ, ಒಂದು ಕಾಲದಲ್ಲಿ ನಾಡಿಗೆ ಅವರ ಕಾರ್ಯ ಪ್ರಯೋಜನಕಾರಿಯಾಗಿ ಇದ್ದಿತು. ಆದುದರಿಂದಲೇ ನಾಡಿಗರು ಅವರ ಉಪಜೀವನದ ಹೊರೆಯನ್ನು ಕರ್ತವ್ಯಬುದ್ಧಿಯಿಂದ ಹೊರುತ್ತಲಿದ್ದರು. ಎಂತಲೆ ಅವರಿಗೆ ಸಮಾಜದಲ್ಲಿ ಮನ್ನಣೆಯ ಸ್ಥಾನವಿರುತ್ತಿದ್ದಿತು.

ನಾಗರಿಕ ಜನಸಾಮಾನ್ಯರ ಸಾಮೂಹಿಕ ಶಿಕ್ಷಣಕ್ಕೆ ಪುರಾಣಿಕರು, ಕೀರ್ತನಕಾರರು, ಪ್ರವಚನಕಾರರು, ಜಂಗಮರು, ಭಾಗವತರು, ಶರಣರು, ಕಾಲಜ್ಞಾನಿಗಳು, ಗಮಕಿಗಳು ಮೊದಲಾದವರ ಕುಲಗಳಿದ್ದರೆ, ಬಹುಸಂಖ್ಯಾಕರಾದ ಜನಸಾಮಾನ್ಯರ ಶಿಕ್ಷಣಕ್ಕಾಗಿ ಗೊರವರು, ಗೊಂದಲಿಗರು, ಜೋಗಿಗಳು, ಕತೆಗಾರರು, ಕಿಳ್ಳೀಕೇತರು, ಹಾಸ್ಯಗಾರರು, ನಟ್ಟುವರು, ನಕಲಿಯವರು, ಬಹುರೂಪಿಗಳು ಮೊದಲಾದ ಜಾತಿಗಳಿದ್ದುವು. ಈ ಕುಲ-ಜಾತಿಗಳವರ

ಬಿಂದೂ

(ಸಣ್ಣಕತೆ) *

ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ

卐

ಬುದ್ಧಿ-ಹೃದಯಗಳ, ಅದರಂತೆಯೆ ವ್ಯವಹಾರ-ಆದರ್ಶಗಳ ಮುಖಗಳು ಪೂರ್ವ-ಪಶ್ಚಿಮವಾಗಿರುತ್ತವೆ. ಬಿಂದುಮತಿಯಲ್ಲಿ ಅರಳಿನಿಂತ ತಾಯಿಕರುಳು, ಬುದ್ಧಿವಾದಿಯಾದ ಇಂದ್ರಪ್ರಸಾದನಿಗೆ ಹೇಗೆ ಗೋಚರವಾಗಬೇಕು?

卐

ಬಾಗಿಲ ಚಿಲಕ ಎರಡು ಮೂರು ಸಲ ಸಪ್ಪಳಮಾಡಿತು. ಬಿಂದೂ ಲಗುಬಗೆಯಿಂದ ಬಂದು, ಚಿಲಕ ತೆಗೆಯದೆ ‘ಯಾರು ಅವರು ?’ ಎಂದು ಕೇಳಿದಳು.

‘ನಾನು !’

‘ನೀವು ಯಾರು ?’

‘ಬಾಗಿಲು ತೆರೆದರೆ ತಾನೇ ತಿಳಿಯುವುದು.’

ಬಾಗಿಲು ತೆರೆಯಿತು. ಎದುರಿಗೆ ತೇಜಸ್ವಿಯಾದ ಗೌರವರ್ಣದ ಒಬ್ಬ ತರುಣ ನಿಂತಿದ್ದ.

‘ಯಾರ ಕಡೆಗೆ ಬಂದಿದ್ದೀರಿ ?’

‘ಇಂದ್ರಪ್ರಸಾದರು ಇಲ್ಲಿಯೇ ಇರುವರಲ್ಲವೆ ?’

‘ಹೌದು, ಯಾರು ಬೇಕಿತ್ತು ?’

‘ಅವರು ಮನೆಯಲ್ಲಿದ್ದಾರೆಯೆ ?’

‘ಇಲ್ಲ ಆದರೆ ನಿಮಗೆ ಯಾರ ಕಡೆಗೆ ಕೆಲಸವಿತ್ತು ?’

‘ಬಿಂದುಮತಿ.... ಅವರಿದ್ದಾರೆಯೆ ಮನೆಯಲ್ಲಿ ? ನೀವು ಅವರಿಗೆ....’

‘ನಾನೇ ಬಿಂದುಮತಿ. ನೀವು ಯಾರು ? ನಿಮ್ಮ ಹೆಸರು ? ಈಗ ಎಲ್ಲಿಂದ ಬಂದಿರಿ ?’

‘ನಾನು ಈಗ ಬಂದದ್ದು ವಿರಮುಗಡದಿಂದ.’

ವಿರಮುಗಡದ ಹೆಸರು ಕಿವಿಗೆ ಬಿದ್ದೊಡನೆ, ಆ ತರುಣಿಯ ತುಟಿಯಲ್ಲಿ ತಿಳಿನಗೆ ಹೊರಸೂಸಿತು; ಮುಖವನ್ನು ನಾಚಿಕೆ ಆವರಿಸಿತು. ವಿರಮುಗಡವು, ಮದುವೆಯಾದಮೇಲೆ ತಾನು ಸೊಸೆಯಾಗಿ ಹೋಗಬೇಕಾಗಿದ್ದ ಊರು. ತಲೆಯ ಮೇಲಿನ ಸೆರಗನ್ನು ತುಟಿಯಂಚಿನಲ್ಲಿ ಹಿಡಿದು, ಗಂಭೀರಭಾವವನ್ನು ತಳೆದು ತರುಣಿ ಕೇಳಿದಳು:—

‘ನಾನೇ ಬಿಂದುಮತಿ, ಏನು ಕೆಲಸ ?’

‘ನಿಮಗೊಂದು ಕಾಗದ ತಂದಿದ್ದೇನೆ. ಅದನ್ನೋದಿ ನೋಡಿ. ಬ್ರಹ್ಮದೇವನು ತುಂಬಾ ಬಿಡುವಿದ್ದಾಗಲೇ ನಿಮ್ಮನ್ನು ನಿರ್ಮಿಸುವ ಪರಿಶ್ರಮವನ್ನು ಕೈಕೊಂಡಿರಬೇಕು. ಎಂತಲೇ ಭೂದೇವಿಯಂತೆ ನೀವು ತೇಜಸ್ವಿಯಾಗಿದ್ದೀರಿ. ನಿಮ್ಮ ಬಾಳು ಸುಖಪ್ರದವಾಗಲಿ !’

ಭಾವನಾವಶಳಾಗಿ ಬಿಂದುಮತಿ ಕಾಗದವನ್ನು ಸ್ವೀಕರಿಸಿ, ಅದನ್ನು ತನ್ನ ಸೆರಗಿನಲ್ಲಡಗಿಸಿದಳು. ಬಂದವನೊಡನೆ ಮುಂದೇನು ಮಾತನಾಡಬೇಕೆಂಬುದು ತೋಚದೆ ಸುಮ್ಮಗೆ ನಿಂತಳು.

‘ಆಯಿತು, ಇಷ್ಟೇ. ನಾನು ಬರುತ್ತೇನೆ ! ಎಂದು ಆ ತರುಣನು ಹೊರಟೇಬಿಟ್ಟನು !

ಬಾಗಿಲನ್ನಿಕ್ಕಿಕೊಂಡು ಬಿಂದುಮತಿ ಅಟ್ಟದ ಮೇಲಿನ ಕೋಣೆಯನ್ನು ಸೇರಿದಳು. ಮನಸ್ಸು ದಿಗಿಲುಗೊಂಡಿತ್ತು. ಪತ್ರವನ್ನೋದಿ ಕೂಡಲೆ ಉತ್ತರ ಬರೆಯಬೇಕಾಗಿದ್ದಿತಲ್ಲವೆ ?

* * * *

ವಿರಮುಗಡದಲ್ಲಿ ಕಾಂತಿಲಾಲನ ಹೆಂಡತಿ, ಮೂರು ಮಕ್ಕಳನ್ನು ಹಿಂದೆ ಬಿಟ್ಟು ತೀರಿಕೊಂಡಿದ್ದಳು. ಕಾಂತಿಲಾಲನ ಮುಪ್ಪಿನ ತಾಯಿ-ತಂದೆ ಆ ಮಕ್ಕಳನ್ನು ಸಾಕುತ್ತಿದ್ದರು. ಅವರ ಆರ್ಥಿಕ ಸ್ಥಿತಿ ಅಷ್ಟು ಚೆನ್ನಾಗಿರಲಿಲ್ಲ. ಕಾಂತಿಲಾಲ ಒಬ್ಬ ಬಡ ಕಾರಕೂನ. ಅವನು ಕೆಲಸ ಮಾಡುತ್ತಿದ್ದುದು ವಿರಮುಗಡದಿಂದ ಎಷ್ಟೋ ದೂರದಲ್ಲಿದ್ದ ತ್ರಿಕಮುಗಡ ಎಂಬ ಊರಲ್ಲಿ.

ಬಿಂದೂನ ತಂದೆಯಾದ ಇಂದ್ರಪ್ರಸಾದರು, ಕಾಂತಿಲಾಲನೊಡನೆ ಅವಳ ವಾಙ್ನಿಶ್ಚಯ ಮಾಡಿ ಈಗ ಮೂರು ವರ್ಷವಾಗಿತ್ತು. ಅವಸರದಲ್ಲಿ ತಮ್ಮಿಂದ ಇದೊಂದು ಪ್ರಮಾದವಾಯಿತೆಂದು ಅವರು ಬಿಂದೂನ ಮದುವೆಯನ್ನು ಮುಂದೂಡುತ್ತಿದ್ದರು. ಕಾಂತಿಲಾಲ ತೀರ ಬಡವ. ಇತ್ತೀಚೆಗೆ ಅವನ ತಾಯಿಯೂ ತೀರಿಕೊಂಡಿದ್ದಳು. ಮೊಮ್ಮಕ್ಕಳನ್ನು ಸಲಹುವುದು ಮುಪ್ಪಿನ ತಂದೆಗೆ ನೀಗದಾಗಲು, ಕಾಂತಿಲಾಲನು ತನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟು ಊರಲ್ಲಿಯೇ ಬಂದು ನಿಂತಿದ್ದ. ತನ್ನ ಮೂರು ಮಕ್ಕಳನ್ನೂ ಮುಪ್ಪಿನ ತಂದೆಯನ್ನೂ ನೋಡಿಕೊಂಡು ಇರುತ್ತಿದ್ದ. ಬೇಗ ಲಗ್ನವಾಗಿ ಹೆಂಡತಿ ಮನೆಗೆ ಬಂದರೆ, ತನ್ನ ಪಡಿಪಾಟು ತಪ್ಪಬಹುದೆಂದು ಅವನು ಆತುರಪಡುತ್ತಿದ್ದ. ಆದರೆ ಇಂದ್ರಪ್ರಸಾದರಿಗೆ, ಇದು ತಪ್ಪಿದರೆ ಒಳಿತಾದೀತು ಎಂದೆನಿಸುತ್ತಿತ್ತು. ಒಮ್ಮೆ ತಮ್ಮ ಅನಾರೋಗ್ಯ ! ಒಮ್ಮೆ ಬಿಂದೂನ ಅಸ್ವಾಸ್ಥ್ಯ ! ಮತ್ತೊಮ್ಮೆ ನಿರಾಧಾರಿಗಳಿಗೆ ಆಧಾರವಾಗಿರುವ ಗ್ರಹಗಳ ವಕ್ರತೆ ! ಯಾವುದೋ ಕಾರಣ ಮುಂದೆ ಬಂದು, ಮದುವೆ ಹಿಂದೆ ಬೀಳುವುದು !

ಹೀಗೆ ಎರಡು ಮೂರು ವರ್ಷಗಳು ಕಳೆದುವು. ಬಿಂದೂ ಮ್ಯಾಟ್ರಿಕ್ ಪಾಸಾಗಿ, ತನ್ನ ಮಲತಾಯಿಗೆ ಮನೆಗೆಲಸದಲ್ಲಿ ನೆರವಾಗತೊಡಗಿದಳು.

* ಸುಪ್ರಸಿದ್ಧ ಗುಜರಾಥಿ ಕತೆಗಾರರಾದ ‘ಧೂಮಕೇತು’ ಅವರ ಕತೆಯೊಂದರ ಅನುವಾದ. ಲೇ.

ಇಂದು ಬಿಂದೂನಿಗೆ ಬಂದ ಕಾಂತಿಲಾಲನ ಕಾಗದ, ಮೊದಲನೆಯ ಕಾಗದವೆಂದೇ ಹೇಳಬೇಕು. ಅದುವರೆಗೆ ಅವನು ಎಷ್ಟೋ ಕಾಗದಗಳನ್ನು ಬರೆದಿದ್ದ. ಆದರೆ ಅವುಗಳಲ್ಲಿ ಒಂದೂ ಬಿಂದೂನ ಕೈಗೆ ಮುಟ್ಟಿರಲಿಲ್ಲ. ಎಂತಲೇ ಕಾಂತಿಲಾಲನು ತನ್ನ ವಿಶ್ವಾಸದ ಗೆಳೆಯನೊಡನೆ ಈ ಕಾಗದವನ್ನು ಕಳುಹಿದ್ದ. ಲಕ್ಕೋಟೆಯನ್ನೊಡೆಯುವಾಗ, ಬಿಂದೂನ ಎದೆನಡುಕ ಕೈಯಲ್ಲಿಯೂ ಮೂಡಿತ್ತು.

ಪತ್ರ ಚಿಕ್ಕದಾಗಿತ್ತು:

‘ ಪ್ರಿಯ ಬಿಂದೂ,

‘ ಹೇಗೆ ಬರೆಯಬೇಕೊ ನನಗೆ ತಿಳಿಯದು ; ಏನು ಬರೆಯಬೇಕೆಂಬುದೂ ಬುದ್ಧಿಗೆ ತೋಚದು. ನಿನ್ನಡಿಯಲ್ಲಿ ಸಲ್ಲಿಸಲು ಯಾತನೆಗಳ ಹೊರತಾಗಿ ನನ್ನ ಬಳಿಯಲ್ಲಿ ಬೇರೆ ಏನೂ ಇಲ್ಲ. ಮರುಭೂಮಿಯಲ್ಲಿಯ ಮಾರ್ಗಸ್ಥನು ನೀರಿನ ನೆರವನ್ನು ಬಯಸುವಂತೆ, ನಾನು ನಿನ್ನ ಬರವನ್ನು ಎಷ್ಟೋಂದು ಆತುರನಾಗಿ ಕಾಯುತ್ತಿದ್ದೇನೆ. ಕಂಗಾಲನಾದ ನನ್ನ ಮನೆಯಲ್ಲಿ ನಿನ್ನನ್ನು ಸಿಂಗರಿಸಲು ಕಾರ್ಪಣ್ಯವೊಂದೇ ಉಳಿದಿದೆ. ತಾಯಿಗೆ ಎರವಾದ ಮಕ್ಕಳು ದಿನಾಲು ಕೇಳುತ್ತವೆ— ‘ ನಮ್ಮ ತಾಯಿ ಎಂದು ಬರುತ್ತಾಳೆ ?’ ಎಂದು.

ಒಮ್ಮೆ ತಾಯಿ ಹೋದಳೆಂದರೆ ತಿರುಗಿ ಬರುವಳೇ ? ಆ ಹಾದಿಯಲ್ಲಿ ಹೋದವರು ತಮ್ಮ ಸ್ಮರಣೆಯ ಸೌರಭವನ್ನಷ್ಟೇ ಹಿಂದೆ ಬಿಟ್ಟು ಹೋಗುವರೆಂಬುದನ್ನು ಆ ಮುಗ್ಧ ಜೀವಗಳೇನು ಬಲ್ಲವು? ದಿನಾಲು ನೆಪದ ನೀರನ್ನೆರೆದು ನಾನು ಅವರ ಆಶಾಲತೆಯನ್ನು ಜಾಣಿಸಿದಂತೆ ಬದುಕಿಸಿದ್ದೇನೆ. ಬೆಳಗಿನಲ್ಲಿ ಹೇಗೋ ಅವರನ್ನು ಸಮಾಧಾನಗೊಳಿಸುತ್ತೇನೆ. ರಾತ್ರಿ ಮಲಗುವಾಗ ಮಾತ್ರ ನನ್ನ ದೇಹಕ್ಕೆ [illegible] ಚೇಳು ಕಡಿದ ವೇದನೆಗಳಾಗುತ್ತವೆ. ಪ್ರತಿಯೊಂದ [illegible] ಗುವೂ ಹಟಹಿಡಿದು ಕೇಳುತ್ತದೆ:—‘ನಾಳೆ ಬೆಳಗಾದ [illegible] ತಾಯಿ ಬರುವುದು ಖಂಡಿತವಲ್ಲವೆ ? ’

[illegible] ಬವನ್ನು ನಾನು ನಿನಗೆ ಹೇಳಬಯಸುವುದಿಲ್ಲ ; ಅದನ್ನು ಸಹಿಸುವ ಸಾಮರ್ಥ್ಯವನ್ನು ದೇವರು ನನಗೆ ದಯಪಾಲಿಸಿದ್ದಾನೆ. ತಾಯಿಗಾಗಿ ಹಂಬಲಿಸುವ ಮಕ್ಕಳ ಬಾಡಿದ ಮುಖಗಳನ್ನು ನೋಡಿ, ನನ್ನನ್ನು ನಾನೇ ಪ್ರಶ್ನಿಸಿಕೊಳ್ಳುತ್ತೇನೆ:— ‘ ಸ್ತ್ರೀಯರಲ್ಲಿಯ ವಾತ್ಸಲ್ಯದ ಊಟೆ ಬತ್ತಿ ಹೋಯಿತೆ ?’

ನಿನ್ನವನು ಎಂದುಕೊಳ್ಳುವ ಅಧಿಕಾರವನ್ನಿನ್ನೂ ಪಡೆಯದವನಾದ,

ಕಾಂತಿಲಾಲ,

ಪತ್ರವನ್ನೋದಿ ಬಿಂದೂ ಮುಂದುಗಾಣದೆ ಕ್ಷಣಹೊತ್ತು ಸ್ತಬ್ಧಳಾಗಿ ಕುಳಿತಳು. ಅದು ಯಾವ ಪ್ರೇಮವೀರನೂ ತನ್ನ ಪ್ರೇಯಸಿಗೆ ಬರೆದ ಪ್ರೇಮಪತ್ರವಲ್ಲ ಅದರಲ್ಲಿ ಪ್ರೇಮದ ಒಂದು ಮಾತೂ ಇರಲಿಲ್ಲ. ಜೀವನದ ಜೊತೆಗಾತಿಯನ್ನು ಹುಡುಕಲು ಆತುರನಾದ ಒಬ್ಬ ತರುಣನ ಆರ್ತವಾಣಿಯೇ ಅದರಲ್ಲಿ ದನಿಗೊಡುತ್ತಿತ್ತು: “ ಸಹನಾವವತು ! ಸಹನೌ ಭುನಕ್ತು ! ಸಹ ವೀರ್ಯಂ ಕರವಾವಹೈ ! ”

ಪತ್ರವನ್ನೋದಿ ಬಿಂದೂ ಅತ್ತಳು; ಇಷ್ಟೇ ಅಲ್ಲ, ತನ್ನ ಮನಸ್ಸಿನಲ್ಲಿ ಒಂದು ನಿರ್ಧಾರವನ್ನೂ ಮಾಡಿದಳು. ಸ್ತ್ರೀಹೃದಯದಲ್ಲಿಯ ಜನನೀಭಾವವು ಅವಳಲ್ಲಿ ಜಾಗೃತವಾಗಿ ಹೇಳಿತು:— ‘ಯಾವಳು ತಾಯಿ ಆಗಲಾರಳೊ, ಅವಳು ನಿಜವಾದ ಸ್ತ್ರೀಯೂ ಆಗಲಾರಳು!’

(೨)

ಇಂದ್ರಪ್ರಸಾದರ ಕೈಯಲ್ಲಿಯ ತುತ್ತು ಅಲ್ಲಿಯೇ ಉಳಿಯಿತು.

‘ ಯಾರು ಹೇಳಿದರು ? ’ ಹೆಂಡತಿಯಾದ ಊರ್ಮಿಳೆಯನ್ನು ದಿಟ್ಟಿಸಿ ನೋಡುತ್ತ ಕೇಳಿದರು.

ಮಾತಿನ ಭರದಲ್ಲಿ, ‘ ಕಾಂತಿಲಾಲನನ್ನು ಬಿಂದೂ ಪ್ರೀತಿಸುತ್ತಾಳೆ! ’ ಎಂದು ಊರ್ಮಿಳೆ ಗಂಡನೆದುರಿಗೆ ಆಡಿದ್ದಳು.

“ ಇದನ್ನು ಯಾರೇನು ಹೇಳುವುದು ? ಹುಡುಗಿ ಪ್ರಬುದ್ಧಳಾಗಿದ್ದಾಳೆ. ಅವಳ ವಯಸ್ಸಿಗನುಗುಣವಾದ ಭಾವನೆಗಳನ್ನು ನಾವು ತಿಳಿದುಕೊಳ್ಳದಿದ್ದರೆ ಬೇರೆಯವರು ತಿಳಿಯಬಲ್ಲರೆ ? ” ಊರ್ಮಿಳೆ ಅಂಜುತ್ತ ನುಡಿದಳು.

“ ಇದು ನಂಬಲಸಾಧ್ಯವಾದ ಮಾತು ! ಕಂಡೂ ಕಂಡೂ ಕೊಳ್ಳದಲ್ಲಿ ಬೀಳಲು ಯಾರು ಮನಸ್ಸುಮಾಡಿಯಾರು ? ”

ಊರ್ಮಿಳೆ ಪತಿಯ ಮಾತಿಗೆ ಎದುರು ಬೆಳೆಯಿಸಲಿಲ್ಲ. ಅವರ ಸ್ವಭಾವವನ್ನು ಅವಳು ಅರಿತವಳಾಗಿದ್ದಳು. ತನ್ನ ಮಾತೇ ಸರಿ ಎಂಬ ಹಟವಾದಿ ! ಊರ್ಮಿಳೆ ಇನ್ನೊಂದು ರೀತಿಯಿಂದಲೂ ಆಲೋಚಿಸಿ ಮೌನವನ್ನು ತಳೆದಳು: ತಾನು ಬಿಂದೂನ ಮಲತಾಯಿಯಾದುದರಿಂದ ಹೀಗೆ ಹೇಳುವುದು ಸರಿಯೇ— ಎಂದು.

ತನ್ನ ಮಾತಿಗೆ ಅಪಾರ್ಥವಾದರೆ? ಎಂತಲೇ ಆಕೆ ಗಂಡನ ಮಾತಿಗೆ ಸುಮ್ಮನೆ ನಿಂತಳು. ಇಂದ್ರಪ್ರಸಾದರೆಂದರು—“ ಹುಷಾರು! ಹುಡುಗಿಯ ತಲೆಯಲ್ಲಿ ಇಲ್ಲದ ಹುಚ್ಚನ್ನು ಹೋಗಿಸಬೇಡ.” ಈ ವಾಗ್ಬಾಣವು ಊರ್ಮಿಳೆಯನ್ನು ತುಂಬ ಗಾಯಗೊಳಿಸಿತು. ಅವರು ಉಂಡು ಹೊರಬಿದ್ದ ಮೇಲೆ ಊರ್ಮಿಳೆಯು ಕಣ್ಣೀರ ಕೋಡಿಯನ್ನೇ ಹರಿಸಿದಳು. ಗಂಡುಸು ಮಾತಿನ ಆವೇಶದಲ್ಲಿ ಏನನ್ನೋ ಮಾತನಾಡಿಬಿಡುತ್ತಾನೆ. ಸ್ತ್ರೀಯ ಆಂತರಿಕ ಜೀವನದಲ್ಲಿ ಇಂತಹ ಮಾತು ಎಷ್ಟು ವೇದನೆಯನ್ನುಂಟುಮಾಡುವುದೆಂಬು- ದನ್ನು ಅವನು ಲಕ್ಷ್ಯದಲ್ಲಿಯೇ ತರುವುದಿಲ್ಲ

ತಾಯಿ ಅಳುತ್ತಿರುವುದನ್ನು ಕಂಡು ಬಿಂದೂ ಕೇಳಿದಳು:— ‘ ಅವ್ವಾ, ಯಾಕೆ ಅಳುತ್ತಿ ? ’

“ ಏನಿಲ್ಲ ಮಗು ! ತವರು ಮನೆಯ ನೆನಪಾಯಿತು ! ”

ಬಿಂದೂ ತಾಯಿಯನ್ನಪ್ಪಿಕೊಂಡು ಆಗ್ರಹದಿಂದ ಕೇಳಿದಳು:— ‘ ನಿಜ ಹೇಳದಿದ್ದರೆ ನನ್ನಾಣೆ ಇದೆ. ಹೇಳು ಏನಾಯಿತು ? ’

“ ಹೇಳಿದೆನಲ್ಲ, ಏನೂ ಇಲ್ಲ— ಎಂದು. ”

“ ಇಲ್ಲ, ನೀನು ಹೇಳಲೇಬೇಕು ನೀನು ನಿಜ ಹೇಳುವವರೆಗೆ ನಾನು ನಿನ್ನನ್ನು ಬಿಡುವುದಿಲ್ಲ. ”

“ ನಿನ್ನ ತಂದೆ ಹೇಳುತ್ತಿದ್ದರು...........

“ ಓ, ಅದೆಲ್ಲ ನಾನು ಬಲ್ಲೆ. ತಂದೆಯ ದುರಾಗ್ರಹದ ಸ್ವಭಾವ ನಾನರಿಯೆನೆ? ನೀನು ನನ್ನನ್ನು ಅದೆಷ್ಟು ಮಮತೆ- ಯಿಂದ ನೋಡುತ್ತೀ ಎಂಬುದನ್ನು ಅವರೇನು ಬಲ್ಲರು ? ”

“ ಅವರು ಹಾಗೇನೂ ಇಲ್ಲ! ನಾನಂತೂ ನಿನ್ನನ್ನು ಹೊಟ್ಟೆಯ ಮಗಳಂತೆ ಪ್ರೀತಿಸುತ್ತೇನೆ. ”

“ ನೀನು ನಿಜವಾಗಿಯೇ ನನ್ನ ಹಡೆದ ತಾಯಿ ! ”

ಊರ್ಮಿಳೆ ಬಿಂದೂನ ತಲೆಯ ಮೇಲೆ ಕೈಯಾಡಿಸುತ್ತ— “ ನೀನು ಒಳ್ಳೇ ಗುಣವಂತಿಯಾದ ಹುಡುಗಿ. ಹೀಗೇ ಸದ್ಗುಣಿ- ಯಾಗಿ ಬಾಳು. ನಿನಗಾಗಿ ಒಳ್ಳೇ ಗಂಡನನ್ನು ನಾವು ನೋಡ ಬೇಕು; ಒಳ್ಳೇ ಮನೆತನ ನೋಡಬೇಕು. ವ್ಯವಹಾರದಲ್ಲಿ ಇದ- ನ್ನೆಲ್ಲ ಮಾಡಬೇಕಾಗುವುದು, ಮಗು! ” ಎಂದಳು.

ಬಿಂದೂ ಈ ಮಾತಿನ ಧೋರಣೆಯನ್ನು ಗುರುತಿಸಿ, ತುಸು ಗಂಭೀರಳಾಗಿ ಕುಳಿತಳು.

“ ವಿರಮಗಡ ನಿನಗೆ ಸೇರುವುದೆಂದು ನಿನ್ನೆ ನೀನೇಕೆ ಹೇಳಿದೆ?” ಊರ್ಮಿಳೆ ಕೇಳಿದಳು.

“ ಹೌದು ತಾಯಿ ! ಅದು ಹಾಗೇ ಇದೆ.’

“ ಮಗು ಕಾಣಾ ಕಾಣಾ ಬಾವಿಗೆ ಬೀಳುವುದು ಸರಿಯಾದೀತೆ?”

“ ತಬ್ಬಲಿಯಾದ ನನ್ನನ್ನು ನೀವು ಹೇಗೆ ಪ್ರೇಮಸಾಗರದಲ್ಲಿ ತೇಲಾಡಿಸಿದಿರೊ, ನಿಮ್ಮ ಮಗಳಾದ ನನಗೂ ಆ ಸ್ಥಾನ ದೊರೆಯಬಾರದೆ ? ”

“ ಬಿಂದೂ, ನಿನಗೆ ಕಲಿಸಿ ಸುಶಿಕ್ಷಿತಳನ್ನಾಗಿ ಮಾಡಿದುದು ನೀನು ಆಷ್ಟಕ್ಕೀಡಾಗಬೇಕೆಂದಲ್ಲ.”

“ ತಾಯಿ, ನಾವು ಶಿಕ್ಷಣವನ್ನು ಪಡೆಯುವುದು ಮನಸ್ಸಿನ ಸಂಸ್ಕಾರಕ್ಕಾಗಿಯಲ್ಲವೆ ? ಪುರುಷರಂತೆ ನಾವು ಕೂಡ ಶಿಕ್ಷಣ ವನ್ನು ವ್ಯವಹಾರಕ್ಕಾಗಿ ಬಳಸಿದರೆ, ಅದಕ್ಕೆ ಕಲಂಕ ತಗಲುವು- ದಲ್ಲದೆ ಅದನ್ನು ಬರಡಾಗಿಸಿದಂತೆಯೇ ಸರಿ.”

ಊರ್ಮಿಳೆ ಕ್ಷಣಕಾಲ ಬಿಂದೂನನ್ನು ಎವೆಯಿಕ್ಕದೆ ನೋಡಿ- ದಳು. ತನ್ನ ಹೊಟ್ಟೆಯ ಮಗಳನ್ನು ತಾಯಿ ಯಾವ ವಾತ್ಸಲ್ಯ- ಭಾವದಿಂದ ಕೇಳಬಹುದೋ ಆ ಧ್ವನಿಯಲ್ಲಿ ಆಕೆ ಪ್ರಶ್ನಿಸಿದಳು:—

ಪರ್ಲ ಕಾಢಾ
ಶರೀರದಲ್ಲಿಯ ಅಸಹ್ಯ ಉಷ್ಣತೆಯನ್ನು ತೆಗೆದುಹಾಕುವದು.
ಪರ್ಲಕಾಢ ಶರೀರದ ಒಳಗಿನ ಮತ್ತು ಹೊರಗಿನ ಉರುವನ್ನು ತೆಗೆದು ಹಾಕಿ ಪಕ್ವತೆಯನ್ನು ತಂಪಾಗಿಡುವದು. ಅಪ ಚನ, ಅಜೀರ್ಣವನ್ನು ಸರಿಪಡಿಸುವ ವದು, ಶಾರೀರಿಕ ಮತ್ತು ಮಾನಸಿಕ ಶಕ್ತಿಯನ್ನು ಬೆಳೆಸುವದು. ಧಾತುಸ್ರಾ ವದಲ್ಲಿಯ ಉಷ್ಣತೆಯನ್ನು ಹೋಗಲಾ ಡಿಸಿ ಪುಷ್ಟಿಕರ ಮಾಡುವದು.

ಅಬಲಾಮೃತ
ಸ್ತ್ರೀಯರ ನಿಶಕ್ತಿ, ಯೌವನ, ಸೌಂದರ್ಯವನ್ನು ಸುಧಾರಿಸುತ್ತದೆ
ಬಿಳಿದುಸ್ರಾವ, ಬಿಳುಪು ಮತ್ತು ಕೆಂಪುಸ್ರಾವ, ಮಕ್ಕಳ ಹೆರಿಗೆಯಿಂದಾಗಿ ಬರುವ ಜ್ವರ ಮತ್ತು ಇತರ ಎಲ್ಲಾ ರೋಗಗಳನ್ನೂ, ನಿಶ್ಶಕ್ತಿಯನ್ನೂ, ಗರ್ಭಾಶಯದ ಅತಿಸಾರವನ್ನೂ, ತಡೆಯಲಸಾಧ್ಯವಾದ ಬೆನ್ನು ನೋವು, ಸೊಂಟನೋವು, ಕ್ರಮರಹಿತ ಮತ್ತು ಅಲ್ಪವೂ, ಧಾರಾಳವೂ ಆದ ಮುಟ್ಟುದೋಷ ಇಂತಹ ಮುಟ್ಟುದೋಷಗಳಿಂದ ಸ್ತ್ರೀಯರ ದೇಹಾರೋಗ್ಯ ವನ್ನೇ ಹಾಳುಮಾಡುತ್ತದೆ ಅಲ್ಲದೆ ಶಕ್ತಿಯನ್ನೂ, ಸೌಂದರ್ಯವನ್ನೂ ಹೋಗಲಾಡಿಸಿ ಅಕಾಲದಲ್ಲೇ ಮು- ದುಕರನ್ನಾಗಿ ಮಾಡುವುದು. ಪರ್ಲ ಅಬಲಾಮೃತವು ಈ ಎಲ್ಲಾ ದೋಷಗಳನ್ನು ಸರಿ ಪಡಿಸುವುದು.

ಪರ್ಲ ಕೆಮಿಕಲ್ ಕಂಪನಿ.
ಬೊಂಬಯಿ. ೨೭.

"ಮಗು, ಕಾಂತಿಲಾಲನೇನಾದರೂ ನಿನಗೆ ಕಾಗದವನ್ನು ಕಳಿಸಿರುವನೆ?"

ಅವನತಮುಖಿಯಾಗಿ ಬಿಂದೂ ಉತ್ತರಿಸಿದಳು :—"ಹೌದು ತಾಯಿ. ಇದು ನಿಮಗೆ ಹೇಗೆ ಗೊತ್ತಾಯಿತು?"

"ಅದರಲ್ಲಿ ಏನಿದೆ?"

"ಅಂಥ ಗೌಪ್ಯವಾದದ್ದೇನೂ ಇಲ್ಲ. ನಾನು ಚಿಕ್ಕ ಮಗು ಇರುವಾಗ ದಿನಾಲು ಎದ್ದ ಕೂಡಲೆ ನನಗೆನಿಸುತ್ತಿತ್ತು:—'ಯಾವ ಮಾಯೆಯಿಂದಲೋ ನನ್ನ ತಾಯಿ ನನ್ನನ್ನರಸುತ್ತ ಬಂದು ಬಿಡುತ್ತಾಳೆ' ಎಂದು. ಇಂಥ ಒಂದು ಮಂಗಲಪ್ರಭಾತದಲ್ಲಿ ನೀವು ಆಕಸ್ಮಾತ್ತಾಗಿ ಬಂದುಬಿಟ್ಟಿರಿ, ಮಮತೆಯ ಮಹೋದಧಿಯಲ್ಲಿಯೇ ನನ್ನನ್ನು ಮುಳುಗಿಸಿಬಿಟ್ಟಿರಿ. ಅಲ್ಲಿಯೂ ಪರದೇಶಿಯಾದ ಮಕ್ಕಳು ಒಬ್ಬ ತಾಯಿಯನ್ನೇ ಎದುರು ನೋಡುತ್ತಿವೆ. ನನ್ನ ಬರವನ್ನೇ ಅವು ಕಾಯುತ್ತಿವೆ— ಎಂದು ನನಗೆನಿಸುವುದು."

ಎದೆದುಂಬಿ ಊರ್ಮಿಳೆಯು ಮಗಳನ್ನು ತಬ್ಬಿಕೊಂಡಳು. ಕಂಬನಿಗಳು ಬಿಂದುವಿನ ತಲೆಯನ್ನು ತೋಯಿಸಿದುವು. ಎಷ್ಟೋ ಕಾಲ ಇಬ್ಬರ ಮುಖದಿಂದಲೂ ಮಾತು ಹೊರಬರಲಿಲ್ಲ. ಈ ಮೌನದಲ್ಲಿಯೇ ಪರಸ್ಪರರನ್ನು ಪೂರ್ಣವಾಗಿ ಅರಿತುಕೊಂಡರು.

(೩)

ಒಂದು ದಿನ, ವ್ಯಾವಹಾರಿಕ ದೃಷ್ಟಿಯುಳ್ಳವರಾದ ಇಂದ್ರಪ್ರಸಾದರು ಈ ಮಾತನ್ನು ಬಲವಾಗಿ ವಿರೋಧಿಸಲು, ಬಿಂದೂ ತನ್ನ ಸೀರೆಯ ಚಿಕ್ಕದೊಂದು ಗಂಟನ್ನು ಕಟ್ಟಿಕೊಂಡು ತಾಯಿಯ ಬಳಿ ಹೋದಳು.

"ತಾಯಿ, ನನಗೆ ಅಪ್ಪಣೆ ಕೊಡು. ನಾನು ಈಗ ಹೋಗುತ್ತೇನೆ."

"ಎಲ್ಲಿಗೆ ಹೋಗುತ್ತೀ?"

"ಬಡತನವನ್ನು ಎದುರುಗೊಳ್ಳುವುದಕ್ಕಾಗಿ!"

ಆ ದಿನ ತಾಯಿ ಅವಳನ್ನು ಸಮಾಧಾನಗೊಳಿಸಿ, ಹೋಗುವುದನ್ನೇನೋ ನಿಲ್ಲಿಸಿದಳು. ಆದರೆ ಮುಂದೆ ಇಂದ್ರಪ್ರಸಾದರು ಬೇರೆ ಮನೆತನ ಹುಡುಕುವುದನ್ನು ಪ್ರಾರಂಭಿಸಲು, ಒಂದು ರಾತ್ರಿ, ಹೇಳದೆ ಕೇಳದೆ ಬಿಂದೂ ಮನೆಯಿಂದ ಹೊರಬಿದ್ದಳು.

(೪)

ವಿರಮಗಡದ ಚಿಕ್ಕ ನಿಲ್ದಾಣದಲ್ಲಿ ರಾತ್ರಿ ಏಳುವರೆ ಗಂಟೆಯ ಸುಮಾರಿಗೆ, ಏಕಾಕಿನಿಯಾದ ಹೆಂಗುಸೊಬ್ಬಳು ಗಾಡಿಯನ್ನಿಳಿದು, ಕಂದೀಲಿನ ಮಸುಕುಬೆಳಕಿನಲ್ಲಿ ತನ್ನ ಗಂಟನ್ನೆತ್ತಿಕೊಳ್ಳುವ ಗಡಿಬಿಡಿಯಲ್ಲಿದ್ದಳು. ಗೇಟಿನ ಬಳಿಯಲ್ಲಿ ನಿಂತ ಕೂಲಿಯವನೊಬ್ಬನು ಮುಂದಾಗಿ ಕೇಳಿದನು :—"ತಂದುಕೊಡಲೇನು?"

ಹೆಂಗುಸು ಒಪ್ಪಿದಳು.

"ಕೂಲಿ ಏನು ಕೊಡಬೇಕು?"

"ನಿಮಗೆ ತಿಳಿದದ್ದು ಕೊಡಿ!"

ಕೂಲಿಯವನು ಗಂಟನ್ನೆತ್ತಿಕೊಂಡು ಮುಂದೆ ಮುಂದೆ ಹೊರಟನು; ಹೆಂಗುಸು ಅವನನ್ನು ಹಿಂಬಾಲಿಸಿದಳು.

ಅರ್ಧದಾರಿ ನಡೆದ ಮೇಲೆ ಕೂಲಿಯವ ಕೇಳಿದ: "ನೀವು ಯಾರ ಮನೆಗೆ ಹೋಗುವುದು? ಎಲ್ಲಿಂದ ಬಂದಿರಿ?"

"ಬಂದೆ— ರತನಗಡದಿಂದ."

"ಈ ಊರಲ್ಲಿ ಯಾರ ಮನೆಗೆ?"

"ಕಾಂತಿಲಾಲರ ಮನೆಗೆ— ಮೊದಲು ಅವರು ತ್ರಿಕಮಗಡದಲ್ಲಿರುತ್ತಿದ್ದರು; ಈಗ ಇಲ್ಲಿಯೇ ಇರುತ್ತಾರೆ."

ಕೂಲಿಯವನು ಒಮ್ಮೆಲೆ ಬೆಚ್ಚಿದವನಂತೆ ನೋಡತೊಡಗಿದನು.

"ಯಾಕೆ? ಏನಾಯಿತು?" ಬಿಂದೂ ಕೇಳಿದಳು.

"ನೀವು ಬರುವುದನ್ನು ಅವರಿಗೆ ತಿಳಿಸಿರಲಿಲ್ಲವೆ?"

"ಇಲ್ಲ. ಅವರ ಮನೆಯಲ್ಲಿ ಎಲ್ಲರೂ ಸುಖವಾಗಿದ್ದಾರಲ್ಲವೆ?"

"ಇದ್ದಾರೆ." ಕೂಲಿಯವನು ಮಾತು ಬೆಳೆಯಿಸದೆ ಮುಂದೆ ಸಾಗಿದನು.

ಊರ ಕೊನೆಯ ಭಾಗದಲ್ಲಿ ಒಂದು ಚಿಕ್ಕ ಮನೆ. ಕೂಲಿಯವನು ಅಲ್ಲಿಗೆ ಬಂದು 'ನೀವು ಕಾಂತಿಲಾಲನ ಮನೆಗೇ ಹೋಗಬೇಕಾಗಿದೆಯಲ್ಲವೆ? ನೀವು ಅವರ....... ಅವರ ಕಡೆಗೇ......."

"ಹೌದು, ಹೌದು." ಹೆಂಗುಸು ಉತ್ತರಿಸಿದಳು. "ಅವರ ಮನೆಯೇ ನನಗೆ ಬೇಕಾದುದು. ಅವರು ನನ್ನವರು. ಅದು ನನ್ನದೇ ಮನೆ."

"ನಿಮ್ಮ ಹೆಸರು? ಇದೇ ಅವರ ಮನೆ."

"ನನ್ನ ಹೆಸರು ಬಿಂದುಮತಿ!"

ಹೆಸರನ್ನು ಕೇಳಿ ಕೂಲಿಯವನು ಬೆಪ್ಪಾಗಿ ನಿಂತನು.

"ನೀವು ನನಗೆ ತಿಳುಹಲಿಲ್ಲ. ನಾನೇ ಕಾಂತಿಲಾಲ!" ಕೂಲಿಯವ ಉಸುರಿದ.

ಅಷ್ಟರಲ್ಲಿ ಮನೆಯೊಳಗಿಂದ ಎರಡು ಹುಡುಗರು ಬಂದು ಕಾಂತಿಲಾಲನನ್ನು ತಬ್ಬಿಕೊಂಡುವು. 'ನೀವು ತಿಳುಹಿಸಿ ಬರಲಿಲ್ಲ' ಕಾಂತಿಲಾಲನ ಎದೆ ಬಿಗಿದು ಮಾತು ಹೊರಬಂದಿತು.

ಕೆಲವು ಕ್ಷಣ ಇಬ್ಬರೂ ಮೂಕಭಾವದಿಂದ ನಿಂತುಕೊಂಡರು. ಕಾಂತಿಲಾಲ ಮಕ್ಕಳಿಗೆ ಹೇಳಿದ :— "ವಿನೂ! ಮಿನೂ! ತಾಯಿ ಎಂದು ಬರುವಳೆಂದು ಕೇಳುತ್ತಿದ್ದಿರಲ್ಲ? ಆ ತಾಯಿಯೇ ಇವರು. ನಾನು ಹೇಳಿದಂತೆ ಬಂದೇಬಿಟ್ಟಿದ್ದಾರೆ!"

ಬಾಲಕರು ಬಿಂದುಮತಿಯನ್ನು ಆಶೆಗಣ್ಣಿನಿಂದ ನೋಡಿದರು. ಆಕೆ ಕೈ ಮುಂದೆ ಮಾಡಿದಳು: 'ನಾನು ನಿಮ್ಮ ತಾಯಿ, ಬನ್ನಿ!'

ಮಕ್ಕಳು ಅವಳ ಮೈಗೆ ಅಂಟಿಕೊಂಡುವು.

ನೂಲನ್ನು ತೆಗೆಯುತ್ತ ಕುಳಿತ ಮುದುಕ ತಲೆಯಲ್ಲಾಡಿಸುತ್ತ ಹೊರಬಂದ. 'ಹೆ ಭಗವನ್! ಯಾವ ರೂಪದಿಂದಲೋ ಬಂದು ನೀನು ಬಡವರನ್ನು ಬದುಕಿಸುವಿ. ಇಂದು ನೀನು ಯೋಗಮಾಯೆಯ ರೂಪದಿಂದ ಬಂದೆ! ನಿನಗೆ ವಂದನೆಗಳು,' ಎಂದ.

“ಕಣ್ಣುಗಳು”

(ವಿಜಯಶಾಲಿ ಕತೆಯ ವಿಮರ್ಶೆ)

ಶ್ರೀ. ಗೌರೀಶ ಕಾಯ್ಕಿಣಿ, ಗೋಕರ್ಣ

ತಾ. ೬-೫-೫೧ರ ‘ ಸಂಯುಕ್ತ ಕರ್ನಾಟಕ ’ ದಿನಪತ್ರಿಕೆಯಲ್ಲಿ ಪ್ರಕಟವಾದ, ಅಖಿಲ ಭಾರತೀಯ ಕಥಾಸ್ಪರ್ಧೆಯಲ್ಲಿ ಮೊದಲನೆಯ ಸ್ಥಾನವನ್ನು ಪಡೆದ ‘ ಕಣ್ಣುಗಳು ” ಎಂಬ ಕತೆಯನ್ನು ಬಹುಜನ ಕನ್ನಡಿಗರು ಓದಿರಲಿಕ್ಕೆ ಸಾಕು. ಅದರ ವಿಸ್ತೃತ ವಿಮರ್ಶೆಯಿದು. ತರುಣ ವಿಮರ್ಶಕರಿಗೆ ಇದು ಮಾದರಿಯ ವಿಮರ್ಶೆಯೆನಿಸಬಹುದು.

— ಸಂ. ಜ.

ಜಾಗತಿಕ ಕಥಾಸ್ಪರ್ಧೆಯ ಅಂಗವಾಗಿ “ **ಹಿಂದುಸ್ತಾನ್ ಟೈಮ್ಸ್** ” ಪತ್ರಿಕೆಯ ವಿದ್ಯಮಾನದಲ್ಲಿ ಜರುಗಿದ ಅಖಿಲ ಭಾರತೀಯ ಕಥಾಸ್ಪರ್ಧೆಯಲ್ಲಿ “ **ಕಣ್ಣುಗಳು** ” ಎಂಬ ಮಲಯಾಳಿ ಭಾಷೆಯ ಕಥೆಯೊಂದು ಪ್ರಥಮ ಬಹುಮಾನವನ್ನು ಪಡೆಯಿತು. ಅದರ ಕನ್ನಡ ಅನುವಾದವು ೬-೫-೫೧ನೆಯ ಸಂಯುಕ್ತ ಕರ್ನಾಟಕದ ದೈನಿಕ ಸಂಚಿಕೆಯಲ್ಲಿ ಪ್ರಕಟವಾಗಿತ್ತು. ಆ ರಾಷ್ಟ್ರೀಯ ಸ್ಪರ್ಧೆಯಲ್ಲಿಯ ಅನೇಕ ದೇಶಭಾಷೆಗಳ ಕಥಾಕೃತಿಗಳಲ್ಲಿ, ಎಲ್ಲಕ್ಕೂ ಮಿಗಿಲೆನಿಸಿಕೊಂಡ ಈ ಕಥೆಯು, ಇತರೆಡೆಗಳಲ್ಲಿಯಂತೆ ನಮ್ಮ ಕನ್ನಡದ ಸಾಹಿತ್ಯರಸಿಕರ ಕಣ್ಮನಗಳನ್ನೂ ಸೆಳೆದುಕೊಂಡಿದ್ದರೆ ಅದು ಸಹಜವೇ. ನಾನೂ ಅದನ್ನು ಓದಿ ಮೆಚ್ಚಿದೆನು; ಮೆಚ್ಚಿ ಓದಿದೆನು. ನನ್ನ ಮೆಚ್ಚುಗೆಯು ನನ್ನ ಪಾಲಿಗೇ, ನನ್ನ ಓದಿನ ಸವಿಯಾಗಿ ಉಳಿದು ಬಿಡುತ್ತಿತ್ತು. ಆದರೆ ಪ್ರಿಯಮಿತ್ರ ಶ್ರೀ. ಬೆಟಗೇರಿ ಕೃಷ್ಣಶರ್ಮರು, ತಮ್ಮ “ ಜಯಂತಿ ”ಗಾಗಿ ಈ ಪ್ರಸಿದ್ಧ ಕತೆಯ ವಿಮರ್ಶೆಯನ್ನು ಬರೆಯಬೇಕೆಂದು ಹೇಳಿದರು. ಅವರ ಪ್ರೋತ್ಸಾಹಕ್ಕೆ ತಲೆಬಾಗಿ ಈ ಸಾಹಸಕ್ಕೆ ಅಣಿಯಾಗಿದ್ದೇನೆ. ಒಂದು ಅತ್ಯುತ್ತಮವೆನಿಸಿಕೊಂಡ ಲಲಿತಸಾಹಿತ್ಯಕೃತಿಯ ರಸಾಸ್ವಾದನೆಯನ್ನು “ ಜಯಂತಿ ”ಯ ಓದುಗರೊಡಗೂಡಿಯೇ ಮಾಡಿ, ಹೀಗೆ ಹಂಚಿ ಉಂಡ ಸೊಗಸನ್ನು ಹೆಚ್ಚು ಸವಿದು ಹಿಗ್ಗಲು ಅವಕಾಶವನ್ನು ಕಲ್ಪಿಸಿಕೊಟ್ಟುದಕ್ಕಾಗಿ, ಆ ಸಹೃದಯ ಸಂಪಾದಕರಿಗೂ ನಾನು ಋಣಿಯಾಗಿದ್ದೇನೆ.

ಆರಂಭದಲ್ಲಿಯೇ ಒಂದು ಮಾತನ್ನು ಒಪ್ಪಿಕೊಳ್ಳಲೇಬೇಕು; “ **ಕಣ್ಣುಗಳು** ” ಒಂದು ಉತ್ತಮ ಕಥೆ— ಅಷ್ಟೇ ಅಲ್ಲ, ಮೊದಲಿನ ಮೂರು ಕಥೆಗಳಲ್ಲಿ, ‘ **ಸುಂಟರ ಗಾಳಿ** ’ ‘ **ಪಠಾಣ** ’ ಇವೆರಡರಿಗಿಂತ ಈ ಕಥೆಯು ನಿಸ್ಸಂದೇಹವಾಗಿಯೂ ಅತ್ಯುತ್ತಮವು. ತಂತ್ರಕೌಶಲ್ಯದಲ್ಲಿ ‘ಸುಂಟರಗಾಳಿ’ಯು, “ ಕಣ್ಣುಗಳ ”ಗಿಂತಲೂ ಅಚ್ಚುಕಟ್ಟಾಗಿರಬಹುದು. ನಾಟಕೀಯವೂ ರೋಮಾಂಚಕಾರಿಯೂ ಆದ ಘಟನಾವಲಿಯಲ್ಲಿ, ‘ ಪಠಾಣ ’ ಕಥೆಯು ಮಿಗಿಲಾದ ಮೋಹಕಶಕ್ತಿಯನ್ನು ರೂಪಿಸಿರಬಹುದು. ಆದರೆ, ಸರಸತೆಯ ಪಾಕದಲ್ಲಿ, ಭಾವನಾಗುಣದ ತೂಕದಲ್ಲಿ, ‘ಕಣ್ಣುಗಳು’ ಆವೆರಡನ್ನೂ ಮೀರಿನಿಂತ ಧನ್ಯಕೃತಿ. ಭಾವದ ನಿಬಿಡತೆ, ಮನೋಧರ್ಮದ ಮಾರ್ಮಿಕತೆ, ಕಥನತಂತ್ರದ ಕುರಿತು ಸಾವಧವಿದ್ದರೂ ಕಥೆಯ ಓಘವನ್ನು ನಿರಾಯಾಸವಾಗಿ ನಿರ್ದಿಷ್ಟ ಪರಿಣಾಮದ ಕುರಿತು ಒಯ್ಯುವ ಶೈಲಿಯ ಸಹಜತೆ, ಕೊನೆಯದಾಗಿ ಚರಿತ್ರಚಿತ್ರಣದಲ್ಲಿ ವೈಚಿತ್ರ್ಯದೊಡನೆಯೂ ಸ್ಫುಟವಾಗಿ ಸಾಧಿಸಿದ ಸ್ವೈಜತೆ— ಇವೆಲ್ಲ ಜೀವಾಳದ ಲಕ್ಷಣಗಳಿಂದ ಈ ಕಥೆಯು ಉಳಿದ ಮಾದರಿಗಳಿಗಿಂತ ಹೆಚ್ಚಿನದಾಗಿದೆ.

ಕಥಾಸ್ಪರ್ಧೆಯಲ್ಲಿ ತೀರ್ಮಾನವನ್ನು ಕೊಡಲು ಕುಳಿತ ಸಾಹಿತ್ಯ ತಜ್ಞರ ಸಮಿತಿಯು ಒಂದು ರೀತಿ ಪರತಂತ್ರವಿರುತ್ತದೆ. ಅದರ ಮುಂದೆ ಬಂದ ಕಥನಶೈಲಿ-ವಸ್ತುವಿನ್ಯಾಸಗಳ ಮಾದರಿಗಳ ಒಳಗಿಂದಲೇ ಸಮಿತಿಯು ಉತ್ತಮ ಮಧ್ಯಮಗಳೆಂದು ಕೃತಿಗಳನ್ನು ಆಯ್ದು ಸಮ್ಮತಿಸಬೇಕಾಗುತ್ತದೆ. ಕಥೆಗಳನ್ನು ಹೋಲಿಸಿ ನೋಡಲಿಕ್ಕೆ ಹೊರಗಿನದೊಂದು ಆದರ್ಶ ಅದರ ಎದುರಿಗೆ ಇರುವುದಿಲ್ಲ. ಆ ದೃಷ್ಟಿಯಲ್ಲಿ **ಸ್ಪರ್ಧೆಯಲ್ಲಿ ಭಾಗವಹಿಸಿದ ಕಥಾಕೃತಿಗಳಲ್ಲಿ** “ ಕಣ್ಣುಗಳು ” ನಿಜವಾಗಿಯೂ ಸರ್ವೋತ್ಕೃಷ್ಟ ಪ್ರಯತ್ನವೆಂದು ತೀರ್ಮಾನಿಸಬಹುದು. ಆದರೆ ಇನ್ನೊಂದು ಮಾತನ್ನು ಅಷ್ಟೇ ಕಟ್ಟುನಿಟ್ಟಾಗಿ ಇಲ್ಲಿ ಒಪ್ಪಿಕೊಳ್ಳಬೇಕಾಗುತ್ತದೆ. ಅದೇನೆಂದರೆ: ಈ ಕಥೆಯನ್ನು ಬಿಡಿಯಾಗಿ ಬೇರೆಯಾಗಿ ಓದಿನೋಡಿದರೆ, **ಇದೊಂದು ಉತ್ತಮ ಕಥೆಯೆಂದೆನ್ನಬಹುದೇ ಹೊರತು, ಅತ್ಯುತ್ತಮವೆನ್ನಲು ಆಯಾಸವೆನಿಸುತ್ತದೆ.** ಈ ಅಖಿಲ ಭಾರತೀಯ ಸ್ಪರ್ಧೆಯಲ್ಲಿ ಇನ್ನೂ ಉತ್ತಮ ತರಗತಿಯ ಕತೆಗಾರರು ಭಾಗವಹಿಸಲಿಲ್ಲ; ಅಂಥ ಹಿರಿಯ ಸಾಹಿತಿಗಳ ಮಿಗಿಲಾದ ಕೃತಿಗಳು ನಿರ್ಣಾಯಕರ ಮುಂದೆ ಬರಲಿಲ್ಲ; ಆದ್ದರಿಂದಲೇ ಈ ಕಥೆಗೆ ಪ್ರಥಮ ಬಹುಮಾನ ಸಲ್ಲಬೇಕಾಯಿತು. ಇರಲಿ.

ಪ್ರಥಮ ಬಹುಮಾನವನ್ನು ಪಡೆದ ಈ ಕಥೆಯ ಒಡೆದೆದ್ದು ಒಪ್ಪುವ ಲಕ್ಷಣವು ಯಾವುದು ? ಅದು ಕಥೆಯಲ್ಲಿ ತುಂಬಿ ತುಳುಕುವ ಮಾನವತೆ— ಮನುಷ್ಯತ್ವದ ಕುರಿತು ಸ್ಫುರಿಸುವ ಕಳಕಳಿಯ ಸಹಾನುಭೂತಿ ಮತ್ತು ಅದರ ಭಾವನೆ. ತನ್ನ ಕಥೆಯ ಈ ಲಕ್ಷಣವಿಶೇಷದ ಅರಿವು ಲೇಖಕನಿಗೂ ಇಲ್ಲದಿಲ್ಲ. ಇಲ್ಲಿ ಬರುವುದು ಬರೀ

ಶಾಂತಿಸೇವಾ ಸದನದ ಸುಂದರ ಪ್ರಕಟನೆ

ವಿಜಯಶ್ರೀ

ಮಿರ್ಜಿ ಅಣ್ಣಾರಾಯರ

ಉತ್ಕೃಷ್ಟ ಸಣ್ಣ ಕತೆಗಳ ಸಂಗ್ರಹ.

ಬೆಲೆ: ಒಂದು ರೂಪಾಯಿ.

ಇದೀಗ ಪ್ರಕಟವಾಗಿದೆ.

ದೊರೆಯುವ ಸ್ಥಳ:

ಶ್ರೀ. ಮಿರ್ಜಿ ಅಣ್ಣಾರಾಯರು,

ಪೋ. **ಉಗಾರ ಬುದ್ರುಕ**

ಬೆಳಗಾಂವ

ಅಬ್ದುಲ್–ಲೀಲಾ ಅಥವಾ ಕುರೂಪಿ–ಕುರುಡಿಯರ ಪ್ರಣಯದ ಸರಸ-ವಿರಸವಲ್ಲ; ಕೇವಲ ಅಸಹಾಯ ಪ್ರೇಮದಿಂದ ವೈವೆತ್ತ ನಿರುಪಾಯದಾಂಪತ್ಯದ ಅನಿವಾರ್ಯ ವ್ಯಥೆಯು ಕಥೆಯಲ್ಲ. ಇಲ್ಲಿ ಬಡತನವಿದೆ; ಪ್ರಣಯವಿದೆ; ಧರ್ಮಬಾಹಿರ ಸ್ತ್ರೀ–ಪುರುಷ ಸಹವಾಸವಿದೆ; ಹಿಂದೂ-ಮುಸ್ಲಿಮ್ ವಿವಾಹವಿದೆ. ಭಿಕ್ಷುಕವೃತ್ತಿಯ ಬುಭುಕ್ಷಿತ ಪಾಪವಿದೆ. ಪತಿತೋದ್ಧಾರದ ಧೀರ ಯತ್ನವಿದೆ; ದುಃಖವಿದೆ; ದುರಂತವಿದೆ; ಮಾತೃವಿಯೋಗದ ಶೋಕವಿದೆ; ಪುತ್ರಪ್ರಾಪ್ತಿಯ ಪರಮ ಹರ್ಷವಿದೆ; ಒಡೆದ ಎದೆಯ ಆಕ್ರೋಶವಿದೆ, ಗಂಡುಸ್ವಾರ್ಥದ ಕುರುಡು ಹಟವಿದೆ ಕುರುಡು ಹೃದಯದ ಸ್ನಿಗ್ಧ ಮಧುರ ಪ್ರಕಾಶಲೋಕವಿದೆ—ಒಂದೊಂದು ಅಂಶವೂ ಒಂದೊಂದು ಬಿಡಿಯಾದ ಇಡಿಯಾದ ಕಥೆಯಾಗಿ ಬೆಳೆಯುವಂತಿದೆ ಆದರೆ ಇವೆಲ್ಲಕ್ಕೂ ಹಿನ್ನೆಲೆಯಾಗಿ, ಕಥೆಯ ಬೆನ್ನೆಲುಬಾಗಿ, ಸಹೃದಯರ ಕಣ್ಣುಗಳ ಬೆಳಕಾಗಿ ಈ ವಸ್ತುವನ್ನು ವ್ಯಾಪಿಸಿರುವುದು ಮಾನವತೆಯ ಅಂತರಾಳದ ಆಹ್ವಾನ; ಮನುಷ್ಯರಲ್ಲಿ ಕಲೆಯ ಮಂತ್ರದಿಂದ ಮಿಂಡಿಸುವಂತೆ ಮಾಡಿದ ಮನುಷ್ಯತ್ವದ ಆವಾಹನ.

“ ಕುರೂಪಿಗೂ ಕುರುಡಿಗೂ ಋಣಾನುಬಂಧವಾದ ಸುದ್ದಿ ” ಒಂದು ಮೋಜು, ಒಂದು ವಿಚಿತ್ರ. ಆದರೆ ಆ ಸುದ್ದಿ ಇಲ್ಲಿ ಅನನ್ಯಭಾವಸಂಪತ್ತಿಯನ್ನು ಅನೂನರಸನಿಷ್ಪತ್ತಿಯನ್ನು ಪಡೆದಿದೆ, ಹೇಗೆ? ಮಾನವ್ಯದ ತಳಮಳ ಕಳಕಳಿ ಮತ್ತು ತಲ್ಲೀನತೆಯಿಂದ ಕಥೆಯ ಉದ್ದಕ್ಕೂ ಈ ಮನುಷ್ಯತ್ವದ ಮೊರೆಯು ತಾನತಾನಾಗಿ ವಿಜೃಂಭಿಸುತ್ತದೆ.

ಮಾನವತೆಯ ಮೊರೆ

ಆರಂಭವನ್ನೇ ನೋಡಿ, ಅಬ್ದುಲ್ ಅಸಾಧಾರಣ ಕುರೂಪಿ. ರೂಪು ಆಯುಷ್ಯ ತರುವ ಒಡವೆಯಲ್ಲ; ಪಡೆದುಬರುವ ನಿಧಿ. ಇದನ್ನು ಅಬ್ದುಲ್ ಚೆನ್ನಾಗಿ ಬಲ್ಲ. ಆದರೆ ಅವನ ಎದೆಗೆ ಬರೆಕೊಡುವ ಸಂಗತಿಯಾವುದು? ಕುರೂಪಿಯಾದರೂ ಕಪಿರೂಪಿಯಾದರೂ ತಾನು ಮನುಷ್ಯನು; ಮನುಷ್ಯಸಾಮಾನ್ಯವಾದ ಮರುಕ, ಆತ್ಮೀಯತೆ ಇಲ್ಲವೆ ಸಹನೆ ತನ್ನ ಕುರಿತೂ ಜನರು ತೋರಬೇಕು– ಎಂಬುದೇ ಅವನು ದೈವಕ್ಕೆ ಮೊರೆಯಿಡುವ ದೂರು. “ ನಾನೂ ತಮ್ಮಂತೆ ಒಂದು ಮನುಷ್ಯಪ್ರಾಣಿ ಎಂದು ಭಾವಿಸಲು ಸಹ ಅವರು ಸಿದ್ಧರಿಲ್ಲದ್ದು ನೋಡಿ, ಮನುಷ್ಯಸಹಜವಾದ ನನ್ನ ಆಸೆ ಉಪೇಕ್ಷಿಸುತ್ತಿರುವುದನ್ನು ಕಂಡು ” ಅಬ್ದುಲ್‌ನಿಗೆ ತನ್ನ ಕರುಣಾಜನಕ ಪರಿಸ್ಥಿತಿಯ ಕಲ್ಪನೆಯು ಬರುವುದು. ಸೌಂದರ್ಯನೋಡಿ ಆನಂದ ಪಡುವ ಆಶೆ ಎಲ್ಲರಲ್ಲಿ ಇರುವಂತೆ ಅವನಲ್ಲಿಯೂ ಇದೆ. ಆದರೆ ಅದನ್ನು ಒಪ್ಪಲು ಕೂಡ ಜನರು ಸಿದ್ಧರಿಲ್ಲ. “ ನನ್ನಂಥವರಿಗೆ ಜಗತ್ತಿನಲ್ಲಿ ಜೀವಿಸಲು ಅಧಿಕಾರವೇ ಇಲ್ಲ ” ಎಂದು ಜಗತ್ತು ಸಾರಿ ಮಾನವತೆಯ ದ್ರೋಹವನ್ನೇ ಕಟ್ಟಿಕೊಳ್ಳುವಂತೆ ಅವನಿಗೆ ತೋರುವುದು. ಈ ದ್ರೋಹವನ್ನು ಮೆಟ್ಟಿ **ಬಾಳಬೇಕೆಂಬ ಹಟವೇ** ಅಬ್ದುಲ್‌ನ ಬದುಕಿನ ಪವಾಡವನ್ನು ಕಟ್ಟಿತು –ಅಹುದು, ಆದೂ ಒಂದು ಪವಾಡವೇ, ಮನುಷ್ಯತ್ವದ ಗೆಲುವಿನ ಪವಾಡ—ಗೆಲುವಿನ ಗಳಿಗೆಯಲ್ಲಿಯೂ ಮಾನುಷ್ಯಸುಲಭವಾದ ಮೂಢಸ್ವಾರ್ಥವು ಉಮ್ಮಳಿಸಿ ಉಂಟುಮಾಡಿದ ದಾರುಣ ಸೋಲಿನ ಪವಾಡ! ಇರಲಿ. ಹೀಗೆ ಆರಂಭದಲ್ಲಿಯೇ ನಮಗೆ ಅಬ್ದುಲ್‌ನ ದಗ್ಧಹೃದಯದ ಮಾನವತೆಯ ಮೊರೆಯು ಕೇಳಬರುತ್ತದೆ.

ಮುಂದೆ ಮಗನ ಮದುವೆಗಾಗಿ ತಾಯಿಯ ವ್ಯರ್ಥ ಪ್ರಯತ್ನ ನಡೆಯುವುದು. ಅದಕ್ಕೆ ಪ್ರತಿಫಲವೇನು? ಮೊದಲು **ನೋಡಿ** ನಗದವರು ಸಹ ಅವನನ್ನು ಕಂಡು ನಗಲಾರಂಭಿಸಿದರು. “ ದೇವರು ಇಂಥ ಮನುಷ್ಯನನ್ನು ಏಕೆ ಹುಟ್ಟಿಸುವನೋ! ” ಎಂದು ತಲೆನರೆತ ಮುದುಕರೂ ಅವನನ್ನು ಕಂಡು ಮರುಗುವಂತಾಯಿತು. ಏಕೆ? ಮದುವೆ ಮಮತೆ ಇವೆಲ್ಲ ಸುರೂಪದ ಸೊತ್ತು, ಕುರೂಪಿಯು ಮನುಷ್ಯನೇ ಅಲ್ಲವೆಂದು ಪ್ರಪಂಚದ ತೀರ್ಮಾನ!

ಅವನನ್ನು ಮನುಷ್ಯನೆಂದು ತಿಳಿದು ತಳಮಳಿಸುವ ಒಂದೇ ಜೀವವಿತ್ತು ಜಗತ್ತಿನಲ್ಲಿ; ಅದು ಅವನ ತಾಯಿ. ತಾಯಿ ತೀರಿಹೋದಳು: ಅವನ ಭಯಂಕರ ಕುರೂಪಿನಲ್ಲಿಯೂ ಸೌಂದರ್ಯವನ್ನು ಕಾಣುತಿದ್ದ ಅವನ ತಾಯಿಯೂ ಕಣ್ಮರೆಯಾದಳು. ಮಣ್ಣಿನ ಮರೆಯಾದಳು. ಪ್ರೀತಿ ಹೃದಯದ ಸತ್ತ್ವ ಕುರೂಪಿ, ಏಕಾಕಿ, ಅನಾಥ ಅಬ್ದುಲ್ಲನ ಎದೆಯಲ್ಲಿ ಪ್ರೀತಿಯ ಹಸಿವೆ ಭುಗಿಲೆದ್ದಿತು. ಅದು ಕಾಯದ ಕಾಮವಲ್ಲ, ಪ್ರಾಯದ ಪ್ರಮಾದವಲ್ಲ; ಅವನ ಬಾಳಿನ ಸೆಲೆ ಜೀವದ ನೆಲೆಯಾಗಿ ಬರಬೇಕೆನಿಸಿತು. ಆದರೆ ವಿಧಿಯ ವಿಪರೀತ ನೋಡಿ! ಯಾರಿಗೆ ಯಾತಕ್ಕಾಗಿ ಪ್ರೀತಿಯು ಅತ್ಯವಶ್ಯವೋ ಅವನಿಗೇ ಅದಕ್ಕಾಗಿಯೇ ಅದು ಅಶಕ್ಯವಾಯಿತು. ಅವನ ಮನುಷ್ಯತ್ವದ ಹಸಿವೆ ಪ್ರೇಮವನ್ನು ಬಯಸಿತು. “ ಕೊನೆಗೆ ನನಗೂ ಒಬ್ಬ ಪ್ರೇಯಸಿ ಸಿಕ್ಕಳು.” ಎಂದು ಅಬ್ದುಲ್ ಧನ್ಯೋದ್ಗಾರ ತೆಗೆಯುವಲ್ಲಿ “ ತಾನೂ ಮನುಷ್ಯನಾದೆ! ” ಎಂಬ

ಅರ್ಥವೇ ಉಕ್ಕುತ್ತದೆ. “ ನನ್ನ ಪ್ರಣಯ ಚರಿತೆ ಅಂದರೆ ನನ್ನ ಮಾನವತೆಯ ಕತೆಯೇ ! ” ಒರ್ವ ಕುರುಡಿಭಿಕ್ಷುಕಿಯನ್ನು ಅವನು ಪ್ರೇಮಸಿಯಾಗಿ ಪತ್ನಿಯಾಗಿ ಸ್ವೀಕರಿಸಿದನು. ಅವನ ಮದುವೆ ಆಯಿತು. ಎಂಥ ಮದುವೆ ? “ ಯಾವ ಧರ್ಮ ಗುರುವಿನ ಸಾಕ್ಷಿಯೂ ಇಲ್ಲದೆ, ಯಾರ ಮನ್ನಣೆಯ ದಾರಿಯನ್ನೂ ಕಾಯದೆ, ಲೀಲಾ ಮತ್ತು ಅಬ್ದುಲ್—ಜೊತೆಯಾಗಿನಿಂತು, ಜೀವನದ ಪಾಲುಗಾರರಾಗುವ ಪ್ರತಿಜ್ಞೆಯನ್ನು ಮೌನವಾಗಿ ಸ್ವೀಕರಿಸಿದೆವು.” ಈ ಪ್ರೇಮ ಮತ್ತು ಮದುವೆಯ ಹಿಂದೆ ಎರಡು ಬೆಂದ ಹೃದಯಗಳಿರುವುವೆಂಬುದನ್ನು ಇವರು ಅರಿಯದೇ ಹೋದರು.

ಆದರೆ ಈ ದಂಪತಿ ಆದರ ಪರಿವೆ ಮಾಡಲಿಲ್ಲ. ವೈವಾಹಿಕ ಜೀವನದಲ್ಲಿ ಅವರು ಒಳ್ಳೇ ಸುಖಮಯತೆಯನ್ನು ಕಾಣಲಿಲ್ಲ. ಅವರ ದಾಂಪತ್ಯ ಒಂದು ಹೊಸ ಪ್ರಯೋಗ. ಯಾತರದು ? ಮಾನವತೆಯ ಹುಚ್ಚು ಅವರ ಜೀವನ ಸಾಗಿಸಲು ಪ್ರೇರೇಪಿಸುತ್ತಿತ್ತು. ಜಾತಿ, ನೀತಿ, ಕುಲ, ಕಾಯಿದೆ, ಧರ್ಮ, ಸಮಾಜ ಇವುಗಳ ಯಾವ ಅಡೆ-ತಡೆಯನ್ನೂ ಅವರು ಒಪ್ಪಿಕೊಳ್ಳಲಿಲ್ಲ. “ ಸುಖಿಗಳಾಗಿ ಬಾಳುವೆ ಸಾಗಿಸುವೆವೆಂಬ ಭ್ರಮೆಯನ್ನು ” ಅವರು ಇಟ್ಟುಕೊಳ್ಳಲೇ ಇಲ್ಲ ! ಎಂಥ ದೊಡ್ಡ ಸಾಹಸ ! ಬದುಕುವುದು ಬದುಕುವುದಕ್ಕಾಗಿಯೇ— ಎಂಬುದೊಂದೇ ನಿರ್ಧಾರ, ಅವರ ದಾಂಪತ್ಯಜೀವನದ ಆಧಾರವಾಯಿತು. ಪುತ್ರ-ಪ್ರಾಪ್ತಿಯಲ್ಲಿ ಆ ದಾಂಪತ್ಯದ ಉದ್ಧಾರವೂ ಆಯಿತು. ಬೇವಿನ ಕಹಿಬಾಳಿಗೂ ಹೂವಿನ ನರುಗಂಪು ಸೇರಿ ಜೀವಕಳೆಯನ್ನು ತರುವುದು. ತಾನೆಂದೂ ಹಾರಯಿಸದ ಆನಂದವನ್ನು ಅಬ್ದುಲ್‌ನು ತಂದೆಯಾಗಿ ಪಡೆದನು. ಹುಟ್ಟಿದ ಕೂಸಿಗೆ ತನ್ನ ದೃಷ್ಟಿ ಮತ್ತು ಕುರುಡಿಯ ರೂಪ ಬಂದಿದ್ದುವು. ದೈವದ ಸ್ವೈರಣೆಗೆ ದೇವರ ಕರುಣೆ ಕಳಸವಿಟ್ಟಂತೆ ಅಬ್ದುಲ್‌ನಿಗೆ ಅನಿಸಿತು.

ಕಥೆಯ ಒಂದು ಘಟ್ಟ ಇಲ್ಲಿಗೆ ಮುಗಿಯುವುದು. ಇದುವರೆಗೆ ಮಾನವತೆಯು ಜಗತ್ತಿನ ವಿರುದ್ಧ, ದೈವದ ವಿರುದ್ಧ ಹೂಡಿದ ಹೋರಾಟ ಬಂದಿತು. ಆ ಹೋರಾಟಕ್ಕೆ ಗೆಲವೂ ಬಂದಿತು.

ಎರಡನೆಯ ಘಟ್ಟ

ಮುಂದಿನ ಕಥಾಭಾಗ ಮನುಷ್ಯನ ಒಂದು ಘೋರ ದೌರ್ಬಲ್ಯದ ಸೋಲಿನ ಕರ್ಮಕಥೆ. ಕುರೂಪಿಯನ್ನು ಕುರುಡಿ ವರಸಿದಳು. ಏತಕ್ಕೆ ? ಅವನ ರೂಪವನ್ನು ಆಕೆ ನೋಡುವಂತಿದ್ದಿಲ್ಲ. ಆಕೆಯನ್ನು ಊರ ಜನ “ ಮಂಗನಂಥ ಮನುಷ್ಯನ ಸೂಳೆ ” ಎಂದು ತೆಗಳಿತು. ಆಗಲೂ ಆಕೆಗೆ ಕಸವಿಸಿ ಆಗಲಿಲ್ಲ ಕಸುವುಗೆಡಲಿಲ್ಲ. ಇದು ಆಕೆಯ ಆತ್ಮದ ಸತ್ತ್ವವನ್ನು, ಶೀಲದ ಶಕ್ತಿಯನ್ನು ಕಾಣಿಸುತ್ತದೆ; ಜತೆಗೆ, ಅಜ್ಞಾನದ ಆನಂದವನ್ನೂ ಕಾಣಿಸುತ್ತದೆ. ಮಂಗನನ್ನೇ ನೋಡಲಾರದ, ರೂಪವನ್ನು ಬರೇ ಮುಟ್ಟಿ ಮೂಸಿ ತಿಳಿಯಬಲ್ಲ ಜೀವಿ ಕುರೂಪವನ್ನು ಹೇಗೆ ಹೇಸಬಹುದು ? ಆದರೆ ಈಗ ಒಂದು ದಾರುಣ, ಕರುಣಾಪ್ರಸಂಗವು ಒದಗುತ್ತದೆ-ಲೀಲೆಯನ್ನು ಉಪಚರಿಸಲು ಬಂದ ಡಾಕ್ಟರನು ಆಕೆಗೆ ಹೊಸ ದೃಷ್ಟಿಯನ್ನು ತಂದು ಕೊಡುವುದು ಶಕ್ಯವೆಂದು ಅನ್ನುತ್ತಾನೆ. ಇದರಿಂದ ಅಬ್ದುಲನ ಎದೆಯಲ್ಲಿ ಅಲ್ಲೋಲಕಲ್ಲೋಲವೇಳುತ್ತದೆ. ಎಂಥ ಧರ್ಮಸಂಕಟ ! ಈ ದೃಷ್ಟಿದಾನವು ಅವನ ದಾಂಪತ್ಯ, ಸೃಷ್ಟಿಯ ಅವಸಾನಕಾಲವನ್ನೇ ತರುವುದೆಂದು ಅಬ್ದುಲ್ ಕಂಗೆಡುತ್ತಾನೆ ! ಹುಟ್ಟುಕುರುಡಿಯ ದೃಷ್ಟಿ ಪಡೆಯುವ ಹಕ್ಕು ‘ ತನ್ನನ್ನು ಪ್ರಾಣಕ್ಕೂ ಮೀರಿ ಪ್ರೀತಿಸುವ ಪತಿಯನ್ನು ನೋಡಬೇಕು, ನೋಡಿ ಧನ್ಯಳಾಗಬೇಕು, ತನ್ನ ನೋಟದಲ್ಲಿ ಸ್ವಂತ ಪ್ರತಿಬಿಂಬವನ್ನು ಕಂಡು ಪತಿಯು ಹಿಗ್ಗಬೇಕು, ಎಂಬ ಪರಮ ಪ್ರಿಯ ಪತ್ನಿಯ ಪವಿತ್ರ ಹಂಬಲ, ಕಣ್ಣನ್ನು ಕಾಪಾಡುವ ಮನುಷ್ಯ ಧರ್ಮ— ಈ ಮೂರು ಶಕ್ತಿಗಳೊಡನೆ ಅವನ ಹೃದಯದಲ್ಲಿ ಕುರುಡು ಸ್ವಾರ್ಥದ ಹೋರಾಟ ನಡೆಯುತ್ತದೆ; ಮತ್ತು ಸ್ವಾರ್ಥವು ಗೆಲ್ಲುತ್ತದೆ. ಗೆದ್ದ ಸ್ವಾರ್ಥವು ಮುಂದೆ ಅನರ್ಥದ ಕೂಪದಲ್ಲಿ ಅವನನ್ನು ಉರುಳಿಸುತ್ತದೆ. ಹೆಂಡತಿಯ ಮುಂದೆ ಹೇಡಿಯಾಗಿ ಅಬ್ದುಲ್‌ನು, ಡಾಕ್ಟರನೇ ಸತ್ತನೆಂದು ಸುಳ್ಳಾಡುತ್ತಾನೆ. ಕಣ್ಣಿನ ಚಿಕಿತ್ಸೆ ತಡೆಯುತ್ತದೆ. ಆದರೆ ಕುರುಡಿಯು ಹಂಡೆಯೊಂದನ್ನು ಎಡವಿಬಿದ್ದು, ತಲೆಯೊಡಕೊಂಡು ಅಪಮೃತ್ಯುವಿಗೆ ತುತ್ತಾಗುತ್ತಾಳೆ. ದೃಷ್ಟಿ ಬಂದಿದ್ದರೆ ಆಕೆ ಬದುಕುತ್ತಿದ್ದಳು. ತನ್ನ ಮುದ್ದಿನ ಆ ಕೂಸನ್ನು ನೋಡುತ್ತಿದ್ದಳು. ಗಂಡನನ್ನು ನೋಡಿ ನಲಿದು

ತ್ರಿಯ ವುಡಿ

(ದಿವ್ಯೌಷಧಿ)

★

ಎ. ಬಿ. ಸಿ. ಮತ್ತು ಡಿ. ವಿಟ್ಯಾಮಿನ್‌ಗಳುಳ್ಳ ಮಹಾ ಶಕ್ತಿ-ದಾಯಕವಾದ ಔಷಧ, ಎಲ್ಲ ತರದ ನಿರ್ಬಲತೆಯನ್ನು ಹೋಗಲಾಡಿಸಿ, ನಿಮ್ಮ ಜೀವಮಾನದ ವರೆಗೆ ಸೌಖ್ಯವನ್ನು ಭೋಗಿಸಲು ಹುರಿದುಂಬಿಸುವದು. ಸಣ್ಣ ಬಾಟ್ಲಿ ರೂ. ೬—೪—೦, ದೊಡ್ಡ ಬಾಟ್ಲಿಗೆ ೧೨—೮—೦.

“ ಸಿ. ಎಮ್. ಐ. ”

ಸೈನದ ದನಗಳಿಗೆ ಹಾಲು ಹೆಚ್ಚಿಸುವ ಒಂದೇ ಒಂದು ಔಷಧ.

ಇ.

ಕೆ. ಕೆ. ದ (ವಿ. ೧೦)ವಿ.

ಕೃತಾರ್ಥಳಾಗುತ್ತಿದ್ದಳು! ಆದರೆ ಗಂಡನಿಗೆ ಹಾಗೆ ಅನಿಸಲೇ ಇಲ್ಲ. ಕಣ್ಣು ಬಂದರೆ, ತನ್ನ ಜೀವನದ ಆಧಾರವೇ ಕಡಿದು ಹೋದೀತೆಂದು ಆ ದುರ್ದೈವಿ ಹೆದರಿದನು; ತನ್ನ ಕುರೂಪ ಕಣ್ಣಿಗೆ ಬಿದ್ದು ಆಕೆ ತನ್ನನ್ನು ಹೇಸುವಳೆಂದು ಹೆದರಿದನು! ಈ ಬಾರದ ಭಯಕ್ಕೆ ಹೆದರಿ, ಬಾಳಿನ ಪಾಲುಗಾರ್ತಿಯ ಲಯಕ್ಕೆ ಕಾರಣನಾದನು. ಕುರುಡಿ ಇದ್ದರೆ ಲೀಲೆ ತನ್ನವಳಾಗಿ ಇರಬಹುದೆಂಬ ಹುಚ್ಚು ಎಣಿಕೆಗೆ ಬಲಿಯಾಗಿ, ಆ ಕುರುಡು ಎಣಿಕೆಯ ಭರದಲ್ಲಿ ಲೀಲೆಯನ್ನೇ ಕಳೆದುಕೊಂಡನು!

ಕಥೆಯ ಉತ್ತರಭಾಗವು ದುರಂತದ ಕಡೆಗೆ ಧಾವಿಸುತ್ತದೆ. ಈ ದುರಂತವು ಅನಿವಾರ್ಯವೋ, ಅಬ್ದುಲ್‌ನ ಭಯ-ಶಂಕೆ-ಸಂಕಟಗಳು ಅಪರಿಹಾರ್ಯವೋ— ಹಿಂದಿನಿಂದ ನೋಡೋಣ. ಆ ಮೊದಲು ಒಂದು ಸಂಗತಿಯನ್ನು ಗಮನಿಸಬೇಕು.

ಕಥೆಯ ಜೀವಬಿಂದು

ಕಥೆಯ ಜೀವಬಿಂದುವೇ ಈ ಭಯಸಂಕಟ. ಕುರೂಪಿ-ಕುರುಡಿಯರ ದಾಂಪತ್ಯದ ಕಥೆ ಅಷ್ಟೇನು ವಿಚಿತ್ರವಲ್ಲ. ವೈಚಿತ್ರ್ಯದ ಬುಗ್ಗೆ ಏಳುವುದು ಯಾವಾಗ? ಕುರುಡಿಯು ಕಣ್ಣನ್ನು ಪಡೆದಾಗ! ಗಂಡನ ರೂಪು ಕಂಡು ಆಕೆಗೆ ಏನೆನಿಸಬಹುದು? ಈ ಪ್ರಶ್ನೆಯ ಸುತ್ತಲೇ **ಕೆ. ಟಿ ಮುಹಮ್ಮದರ** ಈ ಕಥೆಯು ನಿಂತಿದೆ. ಇದೊಂದು ಮೂಲತಃ ಪ್ರಮೇಯಾತ್ಮಕ ಕಥೆ. ಆ ಪ್ರಮೇಯದ ಮೂಲ ಕುರೂಪಿ-ಕುರುಡಿಯರ ಒಂದು ಆಗಂತುಕ ಪ್ರಸಂಗದಲ್ಲಿ ಇಡಲಿ, ಕುರೂಪಿಯನ್ನು ಒಬ್ಬ ಅಸಾಮಾನ್ಯ ತಿಳಿವಳಿಕೆಯ ಭಾವನಾಶೀಲ, ಸತ್ತ್ವಧೀರ ಚರಿತ್ರನನ್ನಾಗಿ ಮಾಡಿ, ಅವನ ಎದೆಯ ಹೊಯ್ದಾಟದಲ್ಲಿ ಊರಿಸಿ ಮುಹಮ್ಮದರು ಅತ್ಯಂತ ಪ್ರಬಲವಾದ ಒಂದು ಮನಃಕ್ಷೋಭದ ನಿಕರ ಪ್ರಸಂಗವನ್ನು ರೂಪಿಸಲು ಸಮರ್ಥರಾಗಿದ್ದಾರೆ. ಹೀಗೆ ಒಂದೆಡೆಗೆ ಕಥೆಯು ಮನೋನಿರ್ಣಯದ ಒಂದು ಪ್ರಮೇಯವನ್ನು ಅರಳಿಸುವ ಜತೆಗೇ ಕೇವಲ ಚರಿತ್ರಪ್ರಧಾನವಾಗಿ ರೂಪುಗೊಂಡಿದೆ. ಅಬ್ದುಲ್‌ನಂತಹ ಅಂತರ್ಮುಖ ವೃತ್ತಿಯ, ಮಾನವತೆಯ ಭಕ್ತನ ಕೋಮಲ ಹೃದಯದ ವಿಶಿಷ್ಟ ಮನೋಗಂಡದ ಒಂದು ವ್ಯಕ್ತಿತ್ವವನ್ನು, ಸ್ಫುಟವಾಗಿ ಸ್ಫೂರ್ತಿಯುಕ್ತವಾಗಿ ನಿರ್ಮಿಸುವುದರಲ್ಲಿಯೇ ಕಥೆಯ ಯಶಸ್ಸು ಲೇಖಕನ ಶ್ರೇಯಸ್ಸು ಕೂಡಿಯೇ ಸಿದ್ಧವಾಗಿವೆ. ಲೀಲೆಯ ಚರಿತ್ರವೂ ಅಷ್ಟೇ ವಿಶಿಷ್ಟ ಸುಂದರವಾಗಿದೆ. ಕೈ-ಗೋಲು ಊರುತ್ತ 'ಟುಕ್ ಟುಕ್' ಸಪ್ಪಳ ಮಾಡುತ್ತ, ಪಡಸಾಲೆಯನ್ನೇರಿ ಬಿಕ್ಕೆ ಬೇಡಲು ಬಂದ ದೈನ್ಯದ ಮೂರ್ತಿ ಲೀಲೆ, ಅಬ್ದುಲ್‌ನ ಹೃದಯವನ್ನೇರಿ ಅವನ ಬದುಕಿನ ಅನುರಾಗಿಣಿಯಾಗಿ, ಅವನ ಪಾಲಿಗೆ ದಯೆಯ ದೇವಿಯಾಗಿ. ಅವನ ಸಂಸಾರವನ್ನು ಶಾಂತಿ-ತೃಪ್ತಿಯ ನೆಲೆಯಿಂದ ತುಂಬುತ್ತಾಳೆ! ಈ ಮಾತುಕಾಟಿ ದಕ್ಷ, ಆಕೆಯ ನಡೆ ನುಡಿಯಲ್ಲಿ ವ್ಯಕ್ತವಾಗುವ ಧೈರ್ಯ, ಚಾಳ್ಕೆ ಬಾಳಿನ ಆಳವಾದ ಬುದ್ಧಿವಂತಿಕೆ, ಮಾಧುರ್ಯ, ಸೌಕುಮಾರ್ಯ ಇವೆಲ್ಲ ಪರಿಪುಷ್ಟವಾಗಿ ರೂಪಿಸಲ್ಪಟ್ಟು, ಲೀಲೆ ಒಂದು ಸಜೀವ ವ್ಯಕ್ತಿಯಾಗಿ ನಿಲ್ಲುತ್ತಾಳೆ. ಒಂದು ದೃಷ್ಟಿಯಲ್ಲಿ ಅಬ್ದುಲ್‌ನಿಗಿಂತ ಲೀಲೆಯ ಚರಿತ್ರವೇ ಒಡೆದೆದ್ದು ಒಪ್ಪುತ್ತದೆ. ಅದಕ್ಕೆ ಒಂದು ಕಾರಣ ಅಬ್ದುಲ್ ಸ್ವತಃ ಕಥನಕಾರನಾಗಿದ್ದುದರಿಂದ, ಅವನು ಹಲವೊಮ್ಮೆ ಒಂದು ಹಿನ್ನೆಲೆಯಾಗಿ ಕಾಣುತ್ತಾನೆ. ಅವನ ನಿರೀಕ್ಷಕ ಪರೀಕ್ಷಕ ವ್ಯಕ್ತಿತ್ವದ ಇದುರಿಗೆ ಲೀಲೆಯು ಚಲಿಸುವ ಪಾತ್ರವಾಗಿ, ಫಲಿಸುವ ಸ್ಫೂರ್ತಿಯಾಗಿ ಕಾಣುತ್ತಾಳೆ. **ಲೀಲೆಯ ಚರಿತ್ರ** ಚಿತ್ರಣ ನಿರ್ದೋಷವಾಗಿದೆ.

ತಂತ್ರದ ಒಂದು ವಿಶೇಷ

ಪಾತ್ರಪರಿಪೋಷದಲ್ಲಿ ಮುಹಮ್ಮದರು ಸಿದ್ಧರಲ್ಲದಿದ್ದರೂ ಪ್ರವೀಣಹಸ್ತರು. (ಸಿದ್ಧರೆನ್ನುವುದಿಲ್ಲವೇಕೆಂಬುದನ್ನು ಮುಂದೆ ಓದುವಿರಿ!) ಅಲ್ಲದೆ, ಕಥನತಂತ್ರದಲ್ಲಿಯೂ ಅವರು ಒಳ್ಳೇ ಮಾರ್ಮಿಕತೆಯನ್ನು ಸೂಕ್ಷ್ಮವಾಗಿ ಕಾಣಿಸಿದ್ದಾರೆ. ಆ ಮಾರ್ಮಿಕತೆ ಇರುವುದೆಲ್ಲಿ? ಕಥನವು ತೀರ ಸಹಜ-ಸರಾಗವಾಗಿ ಸಾಗಿದಂತೆ ತೋರುತ್ತದೆ. 'ಸುಂಟರಗಾಳಿ'ಯಲ್ಲಿಯಂತೆ ತಂತ್ರಗಾರಿಕೆಯ ಒಂದು ದಕ್ಷತೆಯ ನೆನಪು, ಈ ಕಥೆಯನ್ನು ಓದುವಾಗ ವಾಚಕರಿಗೆ ಸದಾಕಾಲವೂ ಇರುವುದಿಲ್ಲ. ಓದುವವರು ಮುಹಮ್ಮದರನ್ನು ಮರೆಯುತ್ತಾರೆ; ಅಬ್ದುಲ್‌ನೊಡನೆಯೇ ಇದ್ದುಬಿಡುತ್ತಾರೆ. ಆತ್ಮವೃತ್ತಪರಶೈಲಿಯೊಂದೇ ಇದಕ್ಕೆ ಕಾರಣವಲ್ಲ; ಕಥನದ ಓಘ, ವೇಗ, ನಿರರ್ಥಕ ತಿರುವುಮುರುವು ಇಲ್ಲದ ಆಡಂಬರವಿಲ್ಲದ ನೇರಜನ, ಮಾತಿನ ಘಟನೆಯ ಚಮತ್ಕೃತಿಗಾಗಿ ಹೆಣಗುವ ಹವ್ಯಾಸಕ್ಕೆ ಬೀಳದೆ ಸಾಗುವ ಶೈಲಿಯ ಸಜೀವತೆ, ಇವೆಲ್ಲವೂ ಭಾವಪ್ರವಾಹದಲ್ಲಿ ನಮ್ಮನ್ನು ತೇಲಿಸಿ ಒಯ್ದುಬಿಡುತ್ತವೆ. ತಂತ್ರದ ಕಾಲಕ್ಕೆ ತಲೆದೂಗುವುದರಲ್ಲಿ ಆ ಕಾಲದ ಗತ್ತನ್ನೇ ನಾವು ನೆನಪಿಡುವುದಿಲ್ಲ. ನಮ್ಮ ಸೋಲಿನಲ್ಲಿಯೇ ಮುಹಮ್ಮದರ ಗೆಲವಿದೆ. ಈ ಸರಳ ನಿರರ್ಗಳ ನೇರ ಶೈಲಿ, ನಮ್ಮಲ್ಲಿ ಮಾಸ್ತಿಯವರಿಗೆ ಮೀಸಲು. ಆದರೆ ಈ ಮಲಯಾಳಿ ಮುಸ್ಲಿಮ್ ಕತೆಗಾರನು, ಮಾಸ್ತಿಯವರಿಗೂ ಮೀರಿದ ಕಥನದ ಕ್ಷಿಪ್ರತೆಯನ್ನೂ ಭಾವೋದ್ವೇಗದಿಂದೊಡಗೂಡಿದ ವೇಗವನ್ನೂ ಸಂಪನ್ನವಾದ ಸಂಕ್ಷೇಪವನ್ನೂ ಕಾಣಿಸುತ್ತಾನೆ!

ಲೇಖಕನ ತಂತ್ರದ ಒಂದು ವಿಶೇಷವೆಂದರೆ, ಕಥೆಯ ಎರಡೂ ಭಾಗಗಳಲ್ಲಿ ಅವನು ಶಕ್ತಿಯ ಸಮತೋಲವನ್ನು ಸಾಧಿಸಿದ್ದಾನೆ. ಕಥೆಯ ಪೂರ್ವಭಾಗದಲ್ಲಿ, ಅಬ್ದುಲ್ ಒಳಿತಿನ ಶಕ್ತಿ, ಬಾಳಿನ ವಿಕಾಸದ ಶಕ್ತಿ; ಆದರೆ ಬಾಹ್ಯಪ್ರಪಂಚವು ಪ್ರತಿಕೂಲ ವಿನಾಶಕ ಶಕ್ತಿ. ಕಥೆಯ ಉತ್ತರಭಾಗದಲ್ಲಿ? ದಾಂಪತ್ಯದ ಸನ್ನಿವೇಶ, ಲೀಲೆ, ಶಿಶು, ಡಾಕ್ಟರ್ ಇವರೆಲ್ಲರನ್ನೂ ಒಳಗೊಂಡ ಬಾಹ್ಯಪ್ರಪಂಚವು ಬಾಳಿನ ವಿಕಾಸದ, ಒಳಿತಿನ ಶಕ್ತಿ; ಆದರೆ ಸ್ವತಃ **ಅಬ್ದುಲ್** ಆತ್ಮವಿನಾಶದ ಶಕ್ತಿ! ದೈವದ ಎಂಥ ಉಪರೋಧ! ಇದಕ್ಕೂ ವಿಕಟವಾದ ವಿಧಿಯ ವ್ಯಂಗ್ಯವನ್ನು **ಹೂಡಿ, ಈ ಸಮತೋಲದಲ್ಲಿ**

ಲೇಖಕನು ಕಥನದ ಹದವನ್ನು ಕಟ್ಟಿದ್ದಾನೆ. ಪೂರ್ವಭಾಗದಲ್ಲಿ ಲೀಲೆ, ನಿರ್ಭಯ ನಿಚ್ಚಳ ಮಾತುಗಳಲ್ಲಿ ತನ್ನ ಪೂರ್ವಾಯುಷ್ಯದ ಕಲಂಕವನ್ನು ತೋಡಿಕೊಳ್ಳುತ್ತಾಳೆ. ಉತ್ತರ ಭಾಗದಲ್ಲಿ, ಕರ್ತವ್ಯ-ಮೂಢ ಅಬ್ದುಲ್‌ನು ತನ್ನ ಹೃದಯಕಲ್ಮಷವನ್ನು ಆಕೆಯ ಬಳಿಗೆ ಅಡಿತೋರಿಸಲು ಅಣಿಯಾಗುವುದಿಲ್ಲ. ಕತ್ತಲೆಯಲ್ಲಿ ಕಾಮುಕರ ವಾಸನೆಗೆ ಮೈಯೊಡ್ಡಿ ಬಂದೂ ಲೀಲೆಯು ಪತ್ನಿ-ಯಾಗಿ ನಿಂತು ಪವಿತ್ರಪ್ರೇಮದಿಂದ ಅಬ್ದುಲ್‌ನ ಹಾಳು ಸುರಿ-ಯುವ ಬಾಳನ್ನು ಹಸಿರುಬನವಾಗಿ ಮಾಡುತ್ತಾಳೆ; ಆದರೆ ಆಗಲೇ ಅಬ್ದುಲ್‌ನಿಗೆ ಒಂದು ಅಶಕ್ಯ ಅಸಹ್ಯ ಸಂಶಯ ಹೊಳೆದು ಬಾಳನ್ನೇ ಕದಡಿ ವಿಷಮಯವಾಗಿ ಮಾಡುತ್ತದೆ:— ತನ್ನ ರೂಪಕ್ಕೆ ಹೇಸಿ ಲೀಲೆ ತನ್ನ ಪ್ರೀತಿಯನ್ನೇ ಕಡಿದು ಹೋಗಬಹುದೆಂದು ! ಈ ವಿರೋಧದಲ್ಲಿಯೇ ವಿಧಿಯ ವ್ಯಂಗ್ಯವು ಅಡಕವಾಗಿದೆ.

ಇನ್ನು ಇಷ್ಟೆಲ್ಲ ಗುಣ-ಲಕ್ಷಣಗಳಿಂದ ಕೂಡಿದ ಈ ಕಥೆಯು ಅತ್ಯುತ್ತಮವಲ್ಲವೇಕೆ ? ಉತ್ತಮ ಕೃತಿಗಳನ್ನು ಅತಿ ಸೂಕ್ಷ್ಮ-ವಾಗಿಯೇ ಪರಿಶೀಲಿಸಿನೋಡಬೇಕು. ಚಿನ್ನವನ್ನು ತೂಗಲು ತಕ್ಕ-ದಾದ ತಕ್ಕಡಿಯು ಅಷ್ಟೇ ನಾಜೂಕಾಗಿರಬೇಕು ತಾನೆ? ಆ ದೃಷ್ಟಿ-ಯಿಂದ ಈ ಕಥೆಯಲ್ಲಿ ಒಂದು ದೊಡ್ಡ ದೋಷವು ಕಾಣುತ್ತದೆ. ಗುಣದ ಅತಿರೇಕದಿಂದಲೇ ಈ ದೋಷ ಉಂಟಾಗಿದೆ. ಅಂಥ ದೋಷ ಯಾವುದು ?

ಲೇಖಕನ ಲಕ್ಷ್ಯ ನೇರವಾಗಿ ಕೊನೆಯ ಪ್ರಸಂಗಕ್ಕೆ ಕಥೆಯನ್ನು ಒಯ್ಯುವುದಿದೆ. ದೃಷ್ಟಿಲಾಭದ ಭಯದಿಂದ ಅಬ್ದುಲ್‌ನಲ್ಲಿ ಆಗುವ ಅಸಾಧ್ಯ ಹೊಯ್ದಾಟ ಮತ್ತು ಅದರ ಅನ್ಯಾಯದುರಂತ—ಇವೇ ಆ ಪ್ರಸಂಗ. ಆದರೆ ಇಲ್ಲಿ ಪ್ರಶ್ನೆ ಇದು. ಕಥೆಯ ಉದ್ದಕ್ಕೂ ಸ್ಪಷ್ಟ-ವಾಗಿ ಚಿತ್ರಿಸಿದಷ್ಟು ವಿಚಾರಜೀವಿಯೂ ಧೀರಸತ್ತ್ವನೂ ಅಬ್ದುಲ್‌ನು ಆಗಿದ್ದರೆ, ಮಾನವತೆಯ ಮೊರೆಗೆ ಧಾವಿಸುವ ಬಂಟನಾಗಿದ್ದರೆ, ಅವನಿಗೆ ಲೀಲೆಯ ದೃಷ್ಟಿಲಾಭವನ್ನು ಅಶಕ್ಯ-ಗೊಳಿಸಬೇಕೆಂಬ ಹಟವಾಗಲಿ, ಆಕೆ ತನ್ನನ್ನು ಬಿಟ್ಟುಹೋಗ-ಬಹುದೆಂಬ ಭೀತಿಯಾಗಲಿ ಅಷ್ಟೊಂದು ಪ್ರಬಲವಾಗಿ ಪೀಡಿಸ-ಬಾರದು. ಅವನು ಮಂಗನಂಥವನೆಂಬುದನ್ನು ಮದುವೆಯ ಮುಂಚೆ ಲೀಲೆಯೇ ಎತ್ತಿಹೇಳಿ, ತನ್ನ ಮನೋಗತವನ್ನು ಒತ್ತಿ ಸಾರಿದ್ದಾಳೆ. ಅದೇನು ಅಭಾವವೈರಾಗ್ಯದ ಮಾತಲ್ಲ. ತಾನು ಕುರೂಪಿ ಅಲ್ಲವೆಂದು ಮೊದಲೇ ಆಕೆಯನ್ನು ಅಬ್ದುಲ್‌ನು ವಂಚಿ-ಸದಿದ್ದರೆ ಆ ಮಾತು ಬೇರೆ. ಹಾಗೇನೂ ಆಗಿಲ್ಲ. ಆದ್ದರಿಂದ ಲೇಖಕನ ಉದ್ದೇಶ ಮತ್ತು ಅವನ ಸಿದ್ಧಹಸ್ತದಿಂದ ಸಜೀವವಾಗಿ ಹೊರಟು ನಡೆದ ನಾಯಕಚರಿತ್ರದ ಉದ್ದೇಶ ಇವೆರಡರಲ್ಲಿ ತೊಡಕು ಉಂಟಾಗಿದೆ. ಲೇಖಕನ ಮನಃಸಂಕ್ಷೋಭವು ಅನಿಮಿತ್ತ ಅಪ್ರಸ್ತುತ ಅವಾಸ್ತವವೆನಿಸುತ್ತದೆ. ಲೇಖಕನ ಅನುಕೂಲತೆಗಾಗಿ ಅಬ್ದುಲ್‌ನ ಮೇಲೆ ಈ ಸಂದರ್ಭದಲ್ಲಿ, ಅವನಿಗೆ ಸ್ವಾಭಾವಿಕವಾದ ಡಾಂಭಿಕತೆಯು ಅಂಟಿಕೊಂಡಿದೆ.

ಡಾಂಭಿಕತನವೆನ್ನುವುದೇಕೆ ? ಅವನಿಗೆ ಒಮ್ಮೆಲೆ ಅನಿಸುವ ಈ ದಿಗಿಲು, ಅವನ ಪೂರ್ವವೃತ್ತಕ್ಕೆ ತುಸು ವಿಸಂಗತವೆ ತೋರುತ್ತದೆ. ಮಾನವತೆಯ ಪ್ರೇರಣೆ, ಸುಖಿಗಳಾಗಿ ಬಾಳುಸಾಗಿಸುವುದು ಅಶಕ್ಯವೆಂಬ ಧಾರಣೆ— ಇವುಗಳ ಮೇಲೆ ನಿಂತ ಅವನ ಅಪಾರ ಪ್ರೇಮಮಯ ಜೀವನದಲ್ಲಿ, ಸರಸ ದಾಂಪತ್ಯವು ಶಿಶುವಿನಿಂದ ಸಫಲ-ವಾಗಲಿರುವಾಗ— ಅಲ್ಲ, ಆದಾಗ— ಅವನಿಗೆ ಇಂಥ ವಿಪರೀತ ವಿಕಾರವು ತಲೆದೋರುವುದೆಂತು ? ತನ್ನ ಕುರೂಪತೆಯನ್ನೂ ಸಮಾಜದ ಕುತ್ಸಿತ ತಿರಸ್ಕಾರ ಧಿಕ್ಕಾರಗಳನ್ನೂ ನಿರ್ಲಿಪ್ತ ಬುದ್ಧಿ-ಯಿಂದ ಬಣ್ಣಿಸಬಲ್ಲ— "ಇಂತೀಪರಿ" ಯಾಗಿಯೇ ಬಾಳನ್ನು ಸಾಗಿಸಬೇಕೆಂಬ ನಿರ್ಧಾರದಿಂದ ನಡೆಯಬಲ್ಲ ಅಬ್ದುಲ್, ಪತ್ನಿಯ ದೃಷ್ಟಿಲಾಭದ ಕುರಿತು ಇಷ್ಟೊಂದು ಅಂಜುವುದು, ಅದೂ ತನ್ನ ಕುರೂಪದ ವಿಷಯ ಆಕೆಯ ಅಂತಃಕರಣದ ಮನವರಿಕೆಯಾದ ಮೇಲೆ ! — ತೀರ ಅಸಮಂಜಸವೆನಿಸುವುದು.

ಈ ಅಸಮಂಜಸಕ್ಕೆ ಬಲಿಯಾಗದೆ ಲೇಖಕನು ಕಥೆಯನ್ನು ದುರಂತವಾಗಿಯೇ ಚಿತ್ರಿಸುವುದು ಶಕ್ಯವಿತ್ತು. "ಮಾನವಪ್ರಾಣಿಗೆ ಅವಶ್ಯವಿರುವ ದೃಷ್ಟಿ ಲೀಲೆಗೆ ಬರಲಿ ! ಆದರೆ ಮಂಗನಂಥ ಮನು-ಷ್ಯನು ಏನೆಂಬುದನ್ನು ಅವಳು ಅರಿಯುವ ಮೊದಲೇ ನಾನು ಮಣ್ಣುಪಾಲಾಗಲಿ !" ಎಂದು ಅವನಿಗೆ ಎನಿಸುವುದು. ಅದೇ ಎನಿಸಿಕೆಯಂತೆ ಅವನು ನಡೆದರೆ, ಲೇಖಕನ ಉದ್ದೇಶವೂ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ.ವಿ. ಪಂಡಿತರ

ಮನೋಹರ { ನೀಲಿ } ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ { ಜೀವಿನಿ } ಟಾನಿಕ್.

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣ-ದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನ-ಗೊಳಿಸುತ್ತದೆ ; ಮತ್ತು ಔಷಧಸಾಧ್ಯಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ { ಪಂಚವಟಿ } ರಾಮಬಾಣ.

ಸದ್ವೈದ್ಯ ಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರ್ಖಾನೆ.

ಸಾಧಿಸುತಿತ್ತು; ಅಬ್ದುಲ್‌ನ ಚರಿತ್ರದ ವಿಕಾಸದ ಉದ್ದೇಶವೂ ಫಲಿಸುತಿತ್ತು. (ಲೇಖಕನ ಉದ್ದೇಶವು, ಕುರುಡಿಯು ಕಣ್ಣು ಕಾಣುವಂತಾಗುವುದರಿಂದ ಕುರೂಪಿ ಗಂಡನ ಅಂತರಂಗದಲ್ಲಿ ಉದ್ಭವಿಸುವ ದುರಂತ ಹೊಯ್ದಾಟವನ್ನು ಚಿತ್ರಿಸುವುದು. ಅಬ್ದುಲ್‌ನ ಉದ್ದೇಶವು, ಅವನ ಮಾನವತಾ ಪೋಷಕವಾದ ದೃಢಸಂಕಲ್ಪಿತ ಚರಿತ್ರಕ್ಕೆ ಅನುಗುಣವಾಗಿ ನಡೆಯುವುದು.) ಆದರೆ ಲೇಖಕನು ಹಾಗೆ ಮಾಡಲಿಲ್ಲ. ಹೆಚ್ಚಿನ ಕರುಣಾಮಯತೆಯ ಭಾವೋದ್ರೇಕವನ್ನು ಕೆರಳಿಸುವ ಮೋಹಕ್ಕೆ ಬಲಿಯಾಗಿ, ಲೀಲೆಯ ಸಾವನ್ನು ಸಂಘಟಿಸಿತಂದಿದ್ದಾನೆ.

ಇನ್ನೊಂದು ಬಗೆಯಾಗಿಯೂ ಈ ಸಮಸ್ಯೆಯನ್ನು ವಿಚಾರಿಸಬಹುದು. ಲೀಲೆಗೊರ್ವ ತಾಯಿ ಇದ್ದಾಳೆ. ಆಕೆಯೇನೂ ಕುರುಡಿಯಲ್ಲ. ಅಬ್ದುಲ್‌ನ ರೂಪ ಆಕೆಗೆ ಗೊತ್ತು. ಅದರ ಕಲ್ಪನೆಯನ್ನು ತಾಯಿ, ಕುರುಡಿ ಲೀಲೆಗೆ ಕೆಲಮಟ್ಟಿಗಾದರೂ ಕೊಡಬಲ್ಲಳು. ಅದ್ದರಿಂದ, ಅಬ್ದುಲ್‌ನು ಡಾಕ್ಟರನೇ ಸತ್ತರೆಂದು ಸುಳ್ಳು ಹೇಳಿ, ದೃಷ್ಟಿಲಾಭದ ಪ್ರಸಂಗವನ್ನು ತಪ್ಪಿಸಿಕೊಳ್ಳುವಂಥ ದುರ್ಧರ ಆಪತ್ತು ಯಾವುದಿತ್ತು? ತನ್ನ ಕುರೂಪ ಅಸಹ್ಯವೆನಿಸುವುದರಿಂದ, ಅವನಿಗೆ ಮನೋವಿಕೃತಿ ಏನಾದರೂ ಉಂಟಾಗಿದೆಯೇ? ಆಗಿದ್ದರೆ ಅವನು ತನ್ನ ರೂಪವನ್ನು ಅಷ್ಟೊಂದು ನಿರ್ಲಿಪ್ತಭಾವದಿಂದ ಹೇಗೆ ಬಣ್ಣಿಸಬಲ್ಲ?

ಸಾಹಿತ್ಯಕ ಸತ್ಯದ ವಿಚಾರ

ಇನ್ನು ಸ್ವಭಾವಚಿತ್ರ ಆದ್ಯಂತದಲ್ಲಿಯೂ ಸುಸಂಗತವಿರಲೇಬೇಕೆಂಬ ಆಗ್ರಹವೇಕೆ? ಜೀವನದಲ್ಲಿ ಒಮ್ಮೊಮ್ಮೆ ವಿಲಕ್ಷಣ ವಿಸಂಗತಿಗಳು ಮಾರ್ಪಡುವುದಿಲ್ಲವೇ? ಅಬ್ದುಲ್ಲನ ಅಳುಕೂ ಇದೇ ಮಾದರಿಯದು,!—ಹೀಗೆನ್ನಬಹುದೆ? ಇದಕ್ಕೆ ಸಾಹಿತ್ಯದ ಒಂದು ನಿಯಮ ಅಡ್ಡಬರುತ್ತದೆ. ಸಾಹಿತ್ಯಕ ಸತ್ಯಕ್ಕೂ ಸಾಂಸಾರಿಕ ಸತ್ಯಕ್ಕೂ ಒಂದು ಸೂಕ್ಷ್ಮ ವ್ಯತ್ಯಾಸವಿದೆ ಆ ವ್ಯತ್ಯಾಸವೇ ಈ ಸುಸಂಗತಿ; ಅದು ಸಂಭವನೀಯತೆಯನ್ನು ಕಥಾವಿಕಾಸದಲ್ಲಿ ಬಲವಾಗಿ ಅಪೇಕ್ಷಿಸುತ್ತದೆ. ಆ ಅಪೇಕ್ಷೆಗೆ ಈ ಕಥೆಯಲ್ಲಿ ಬಲವಾದ ಭಂಗ ಬಂದಿದೆ. ಯಾವ ಏಕಾಗ್ರ ಪರಿಣಾಮಕ್ಕಾಗಿ ಲೇಖಕನು ಯತ್ನಿಸಿದನೋ, ಅದೇ ಮನಗಾಣುವಂತೆ ಮಾಡುವುದಿಲ್ಲ.

ಕಥೆಯ ತಲೆಬರೆಹಕ್ಕೆ ತಕ್ಕುದಾಗಿ 'ಕಣ್ಣುಗಳ' ಉಲ್ಲೇಖ ಆದಿಯಿಂದಲೂ ಬಂದಿದೆ. ಆದರೂ ಓದುಗರ ಕಣ್ಣು ಲೀಲೆಯ ಕುರುಡುಕಣ್ಣುಗಳ ಮೇಲೆಯೇ ಕೇಂದ್ರೀಕರಿಸುವಂತೆ ಏನಾದರೊಂದು ವಿವರ ಕಥೆಯಲ್ಲಿ ಬರಬೇಕಿತ್ತೆಂದು ಎನಿಸುವುದು. ಇದೊಂದು ಲೋಪ. ಇನ್ನೊಂದು ದೊಡ್ಡ ದೋಷ ಕಥೆಯ ಮುಕ್ತಾಯದ್ದು. ಹಾಡುಗಾರನ ತಜ್ಞತೆ ರಾಗದ ಅವರೋಹದಲ್ಲಿ ವ್ಯಕ್ತವಾಗುವುದಂತೆ. ಕತೆಗಾರನ ನೈಪುಣ್ಯ ಕಥೆಯ ಮುಕ್ತಾಯದಲ್ಲಿ ಕಂಡುಬರುತ್ತದೆ. ಈ ಕಥೆಯು ಮುಗಿದ ಮೇಲೆಯೂ ನೀರಸವಾಗಿ ಮುಂದುವರಿದಿದೆ. ಸ್ವಾಭಾವಿಕವಾಗಿ ಅದು ಮುಗಿದದ್ದು ಎಲ್ಲಿ? "ಒಂದು ಹೃದಯದ ಕ್ರಿಯೆ ನಿಂತಿತು; ಇನ್ನೊಂದು ಹೃದಯ ಒಡೆಯಿತು!" ಇಲ್ಲಿಗೆ ಕಥೆ ಮುಗಿಯಿತು. ಮುಂದಿನ ಪಂಕ್ತಿಗಳು ಪರಿಣಾಮಕ್ಕೆ ಕುಂದು ತರುತ್ತವೆ.

ಭಾಷಾಶೈಲಿಯು ಮನೋಜ್ಞವಾಗಿದೆ. ಅನುವಾದದಲ್ಲಿಯೂ ಮೂಲದ ಕಾಂತಿ ವ್ಯಕ್ತವಾಗುತ್ತದೆ. ಭಾವದ ಮಿಡಿತಕ್ಕೆ ಮಾತಿನ ಹಿಡಿತ ಹದವಾಗಿ ಕೂಡಿ, ಯಾವ ಸನ್ನಿವೇಶಕ್ಕೂ ಭಾಷೆಯ ಬಳಕೆ ಸಮರ್ಥವಾಗಿ ಸಮರ್ಪಕವಾಗಿ ಬಂದಿದೆ. ಇದಕ್ಕೆ ಅನೇಕ ವಾಕ್ಯಗಳನ್ನು ಉದಾಹರಿಸುವ ಮೋಹವಾಗುತ್ತದೆ; ಆದರೆ ವಿಸ್ತಾರದ ಭಯವನ್ನು ಲೆಕ್ಕಣಿಕೆಯು ಲೆಕ್ಕಿಸಲೇ ಬೇಕು.

ಆದರೂ ಅವಸರದ ಅನುವಾದಕರ್ತರು ಕೆಲವು ತಪ್ಪುಗಳನ್ನು ಮಾಡಿದ್ದಾರೆ. ಇಂಗ್ಲಿಷಿನಿಂದ ಕನ್ನಡಿಸಿದುದರ ಫಲವಿರಬೇಕು. ಇದಕ್ಕೆ ಸಾಕ್ಷಿ, ಹಂಡೆ ಅನ್ನುವ ಬದಲು "ದೊಡ್ಡದಾದ ತಾಮ್ರದ ಪಾತ್ರೆ" ಎಂದು ಬರೆದದ್ದು. ಹಾಗೆಯೇ "ನಾತರ್‌ದಾಮಿನ ಗೂನು ಬೆನ್ನಿನವ" ಎನ್ನುವ ಬದಲು "ಗೂನುಬೆನ್ನಿನ ನಾತರ್ ದಾಮು" ಎಂಬ ಹಾಸ್ಯಾಸ್ಪದ ಅನುವಾದ ಆಗಿಬಿಟ್ಟಿದೆ. ಮಲಯಾಳಿಯಿಂದಲೇ ಕನ್ನಡಿಸಿದ್ದರೆ, ಕಥೆಯ ಸ್ವಾರಸ್ಯ, ಮೂಲಶೈಲಿಯ ಕಳೆ ಅನುವಾದದಲ್ಲಿಯೂ ಹೆಚ್ಚಾಗಿ ಬರುತ್ತಿತ್ತು.

ಇಲ್ಲಿ ಬರುವ ಕುರೂಪಿ ಸಾಮಾನ್ಯನಲ್ಲ. ಅಸಾಮಾನ್ಯ ತಿಳಿವಳಿಕೆಯ, ತಟಸ್ಥವೃತ್ತಿಯ ಕಠೋರ-ಕೋಮಲ ಹೃದಯದ ಚರಿತ್ರವು ಅವನದು. ಅವನಿಗೆ ದೃಷ್ಟಿಲಾಭದ ಅಸಾಧ್ಯ ತೊಡಕು ಬೀಳುವುದು (unconvincing) ಮನಗಾಣಲಾರದ ಅಂಶ-ಕಥೆಯ ಜೀವಾಳವೇ ಈ ಅಂಶದಲ್ಲಿದೆ. ಅದ್ದರಿಂದಲೇ ಇದು ಅತ್ಯುತ್ತಮ ಕಥೆ ಎನಿಸುವುದಿಲ್ಲ.

ಇದೊಂದು ಮಾತನ್ನು ಕಣ್ಮರೆಮಾಡಿದರೆ, ಮಿಕ್ಕ ಕಥೆ ಸರ್ವಾಂಗ ಸುಂದರವಾಗಿದೆ. ಲೀಲೆಯು ಅಬ್ದುಲ್‌ನ ಬಾಳನ್ನು ಪ್ರವೇಶಿಸಿ, ಅದನ್ನು ಪ್ರೀತಿಯಿಂದ ಹರಸಿ ಅವನನ್ನು ಮನುಷ್ಯನನ್ನಾಗಿ ಮಾಡಿದ ಕ್ರಮಪರಿಪಾಕವು— ಆ ನಡುವಿನ ಸಂಭಾಷಣಗಳು, ಆ ಸಂಭಾಷಣಗಳಲ್ಲಿ ಪ್ರಕಟವಾದ ಸಹೃದಯತೆ, ಉದಾತ್ತ ಮಾನವತೆ, ಹೃದಯದ್ರಾವಕ ಕರುಣ ಇವೆಲ್ಲವೂ ಈ ಕಥೆಯ ಮೋಹಕತೆಯ ಅಭೇದ್ಯ ಶಕ್ತಿಯಾಗಿ ಪಾಕಗೊಂಡಿವೆ. ಈ ಪಾಕಕ್ಕೆ ಸಂಯಮದ ಸಂಸ್ಕಾರವು ರುಚಿಕಟ್ಟಾಗಿ ಪುಟಕೊಟ್ಟಿದೆ. ಅದನ್ನು ಓದಿಯೇ ಸವಿಯಬೇಕು!

ಗೋಮಟೇಶ್ವರನ ಸನ್ನಿಧಿಯಲ್ಲಿ:

(ಪ್ರವಾಸ ಪ್ರಬಂಧ)

ಶ್ರೀ. ಎ. ಎಸ್. ರಾಮಕೃಷ್ಣ, ಮಣಿಪಾಲ, ಉಡುಪಿ

ಕಳೆದ ತಿಂಗಳಲ್ಲಿಯೆ ಕಾರ್ಕಳದ ಗೊಮ್ಮಟನಾಥನಿಗೆ ಮಹಾಮಸ್ತಕಾಭಿಷೇಕದ ಸಮಾರಂಭ ನಡೆಯಿತು. ಈ ಲೇಖನ ಅದರ ವರದಿಯಲ್ಲ; ಸಹೃದಯ ಯಾತ್ರಿಕನೊಬ್ಬನ ಅನುಭವ-ಭಾವನೆಗಳ ರಮ್ಯಚಿತ್ರಣ!

ಇಪ್ಪತ್ತೆರಡು ಮೈಲಿಗಳ ಪ್ರಯಾಣವು ಅಷ್ಟೇ ನಿಮಿಷಗಳಲ್ಲಿ ಮುಗಿದುಹೋಯಿತೆಂಬಂತೆ ಅನ್ನಿಸಿತು. ಹುಣ್ಣಿಮೆಯ ರಾತ್ರಿ. ಕಾಡು, ಬೆಟ್ಟ, ಬಯಲುಗಳು ಚಂದ್ರಿಕೆಯಲ್ಲಿ ಮಿಂದು ಥಳಥಳಿಸುತ್ತಿದ್ದುವು. ಅವುಗಳ ನಡುವೆ ರಸ್ತೆ ಸಾಗಿತ್ತು. ಇಕ್ಕೆಲದ ಸುರಗಿಯೇ ಮೊದಲಾದ ಪುಷ್ಪಿತ ವೃಕ್ಷಗಳು ದಾರಿಯುದ್ದಕ್ಕೂ ಕಂಪನ್ನು ಬೀರುತ್ತಿದ್ದುವು. ಜೊತೆಯವರ ನಗೆಮಾತಿನ ಕಂಪು ಬೇರೆ. ಕಾರ್ಕಳದಲ್ಲಿ ಮೋಟರಿನಿಂದಿಳಿಯುವಾಗ, ಎಲ್ಲರೂ ಮುಗಿಲ ನಡುವೆ ತೇಲಾಡುವವರಂತಿದ್ದೆವು.

ಸಮೀಪದಲ್ಲಿದ್ದ ಗೊಮ್ಮಟಬೆಟ್ಟದತ್ತ ಸಾಗಿದೆವು. ಸಾಮಾನ್ಯ ದಿನಗಳಲ್ಲಾಗಿದ್ದರೆ,ಅಷ್ಟು ದೂರದಲ್ಲಿರುವಾಗಲೇ ಗೋಮಟೇಶ್ವರನ ದರ್ಶನವಾಗುತ್ತಿತ್ತು, ಆದರೆ ಮಸ್ತಕಾಭಿಷೇಕದ ದಿನಗಳಾದ್ದರಿಂದ, ದೂರದಲ್ಲಿ ನಮಗೆ ಕಾಣಿಸುವುದು ಬೆಟ್ಟದ ಮೇಲಿನ ವಿದ್ಯುದ್ದೀಪಗಳ ಅಲಂಕಾರ ಮಾತ್ರ.

ಬೆಟ್ಟದ ಬುಡವನ್ನು ಸೇರಿದೆವು. ಜೊತೆಯವರು ಮೆಟ್ಟಿಲುಗಳನ್ನು ಏರತೊಡಗಿದರು. ನಾವಿಬ್ಬರು ಮಾತ್ರ ಜೊತೆಯವರಿಂದ ಬೇರೆಯಾದೆವು. ನಿಧಾನವಾಗಿ ಸಾಗುತ್ತಿದ್ದ ಜನಸಮೂಹದ ಬೆನ್ನು ಹಚ್ಚಿಕೊಂಡು ಮೇಲೇರುವುದು ಸುಖವಲ್ಲವೆನಿಸಿತು. ದಾರಿಗೀರಿಗಳನ್ನು ಲಕ್ಷಿಸದೆ ಬೆಟ್ಟದ ಒಂದು ಮಗ್ಗುಲನ್ನು ಏರಿ ಸಾಗುವುದೇ ಹಿತವೆನಿಸಿತು. ಹೀಗೆ ಏರುತ್ತಿದ್ದಂತೆ ನಡು-ನಡುವೆ ನಿಂತು, ಸುತ್ತಲೂ ಒಮ್ಮೆ ಕಣ್ಣು ಹರಿಸಿದಾಗಲೆಲ್ಲ ನಾವು ಕಾಣುತ್ತಿದ್ದ ಸೊಬಗು ಸ್ವರ್ಗೀಯವಾಗಿತ್ತು. ಬೆಟ್ಟದ ಕೆಳಗಿನ ಊರಿನ ಹಂದರವೆಲ್ಲ....ಅಸ್ಪಷ್ಟ! ಮಿಣುಕುವ ದೀಪಗಳಿಂದಲೇ ಅವನ್ನು ಗುರುತಿಸಿಕೊಳ್ಳಬೇಕು. ಆದರೆ ಸುತ್ತುಮುತ್ತು ನೋಟ ಹರಿಯುವ ತನಕ ಹಬ್ಬಿರುವ ಬಯಲು, ತೋಟ, ಗುಡ್ಡ, ಕಾಡುಗಳ ಮೇಲೆಲ್ಲ ಬೆಳುದಿಂಗಳು ಮುಚ್ಚಿರುವುದನ್ನು ಕಾಣುವಾಗ, ಎಂಥ ಸುಖವನ್ನನುಭವಿಸುತ್ತೇವೆ! ಇನ್ನು ಪೂರ್ವಕ್ಕೆ ದೃಷ್ಟಿ ಹೊರಳಿಸಿದೆವೆಂದರೆ ಆ ಮಾತೇ ಬೇರೆ. ಅನತಿದೂರದಲ್ಲಿ ಹಬ್ಬಿ ನಿಂತ ಪಶ್ಚಿಮ ಘಟ್ಟಗಳ ಶ್ರೇಣಿಗಳಿಗೆ ಹುಣ್ಣಿಮೆಯ ಚಂದ್ರನ ಬೆಳಕಿನಿಂದ ಅಪೂರ್ವವಾದ ಮೆರುಗು ಬಂದಿತ್ತು. ಶಾಂತಿ-ಗಾಂಭೀರ್ಯಗಳನ್ನು ಒತ್ತಟ್ಟಿಗೆ ರಾಶಿರಾಶಿ ಹಾಕಿ ದಂಡೆಯೆಬ್ಬಿಸಿದಂತಿತ್ತು. ಇತ್ತ, ಬೆಟ್ಟದ ಬುಡದ ರಾಮಸಾಗರದ ಸರಸ್ಸು ಹೊಳೆಯುವ ಹಾಳೆಯಾಗಿ ಹರನಿಕೊಂಡಿತ್ತು. ಈ ರೀತಿ ಕಣ್ಮನಗಳಿಗೆ ಹಬ್ಬ ಮಾಡಿಕೊಳ್ಳುತ್ತಾ ಬೆಟ್ಟದ ತುದಿಯನ್ನು ಸೇರಿದೆವು.

ನಿಸರ್ಗಸೌಂದರ್ಯದ ನಡುವೆ ತಲೆ ಎತ್ತಿ ನಿಂತಿರುತ್ತಿದ್ದ ಗೋಮಟೇಶ್ವರ, ಇಂದು ಅಟ್ಟಣಿಗೆಯ ನಡುವೆ ಸೆರೆಯಾಗಿದ್ದಾನೆ! ಇಂದು ಅವನು ಸ್ನಾನಕ್ಕಾಗಿ ಸೆರೆಹಿಡಿಯಲ್ಪಟ್ಟ ಮಗುವಿನಂತೆ! ಸೂರ್ಯ ಚಂದ್ರ ನಕ್ಷತ್ರಗಳ— ವರ್ಷಾಕಾಲದ ಮಿಂಚಿನ ಬಳ್ಳಿಗಳ ಬೆಳಕೇ ಸಾಕೆನ್ನುವಂತಿದ್ದವನನ್ನು, ನವನಾಗರೀಕತೆಯ ಕುರುಹುಗಳು ಮುತ್ತಿ ಬೆಳಗುತ್ತಿವೆ. ಹತ್ತಿರದಲ್ಲೆಲ್ಲೋ 'ಡೈನಮೊ' ಘೂಕರಿಸುತ್ತಿದೆ.

ಕ್ಷಮಿಸಿ—ಒಡಕು ನುಡಿಯತೊಡಗಿದೆನೆಂದು ಬೇಸರುಗೊಳ್ಳಬೇಡಿ. ವಿದ್ಯುದ್ದೀಪಗಳ ಪ್ರಭೆಯಿಂದ ಗೋಮಟೇಶ್ವರನ ಮುಖಮುದ್ರೆಗೆ ಹೆಚ್ಚಿನ ಸ್ಪಷ್ಟತೆಯುಂಟಾಗಿ, ಅದು ತುಂಬ ಕಳೆಗೊಂಡಿತ್ತು. ವಿಗ್ರಹದ ಸುತ್ತಲೂ ನಿರ್ಮಿಸಿದ್ದ ಅಟ್ಟಣಿಗೆಯು ನಿಜವಾಗಿಯೂ ಸೊಗಸಾಗಿತ್ತು.

ಆವಾರದೊಳಗೆ ಪ್ರವೇಶಿಸಿದರೆ, ಅಲ್ಲಿ ಸಾಸಿವೆ ಹಾಕಲೂ ಎಡೆಯಿಲ್ಲವೆನ್ನುವಂತೆ ಜನಕೂಡಿದ್ದರು. ನಾವು ಹತ್ತು ನಿಮಿಷ ನಿಂತಿದ್ದು ಸಮೀಪದಿಂದಲೇ ಗೋಮಟೇಶನನ್ನು ಕಂಡೆವು. ಆದರೆ ಆ ಶಾಂತ ಸುಂದರ ಮುಖಾಕಾರವಿಂದವು ನಮ್ಮನ್ನು ಮುಗ್ಧಗೊಳಿಸುವುದು ಕೊಂಚ ದೂರದಿಂದ ನೋಡಿದಾಗಲೇ. ಹಾಗೆಣಿಸುತ್ತಿರು

೫೫ ವರ್ಷಗಳಿಂದ ಅನುಭವಪಟ್ಟ
ಠಕೀರ್ ಮತ್ತು ಕಂಪನಿಯ
ಜ್ವರಗಡ್ಡೆಯ ಗುಳಿಗೆಗಳು
ಬಾಟ್ಲಿಗೆ ೧-೮-೦
ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.
ವಿಳಾಸ:—
ಗಣೇಶ ರಾಮಚಂದ್ರ ಠಕ್ಕರ್ ಮತ್ತು ಕಂಪನಿ
ಗಿರಗಾಂವ, ಮುಂಬಯಿ. ೪

ವಷ್ಟಕ್ಕೆ ನನ್ನ ಸೋದರಿ, ನಾವು ಬಿಟ್ಟು ಬಂದಿದ್ದ ಚಪ್ಪಲಿಗಳ ಕುರಿತು ಶಂಕೆಯನ್ನು ತಂದೊಡ್ಡಿದಳು. ಯೋಗಿಶ್ರೇಷ್ಠ ಬಾಹುಬಲಿಯ ಪದಸಾನ್ನಿಧ್ಯದಲ್ಲಿದ್ದು ಕೂಡ ಚಪ್ಪಲಿಯಂಥ ಅಲ್ಪವಿಚಾರವನ್ನು ನೆನೆಯಬಲ್ಲ ಮನೋಭಾವವನ್ನು ಮೂದಲಿಸಿದೆ; ಆದರೆ ಹೊರಗೆ ಬಂದಾಗ ಚಪ್ಪಲಿಗಳನ್ನರಸುವ ಕೆಲಸ ನಿಜಕ್ಕೂ ಕಷ್ಟದ್ದಾಯಿತು !

ಜನಸಂದಣಿಯ ನೂಕುನುಗ್ಗಲಲ್ಲಿ ಇರಲಾಗದೆ, ನಾವು ಪ್ರಾಕಾರದ ಮೂಡಲ ಬಾಗಿಲಿನಿಂದ ಹೊರಗೆ ಬಂದೆವು. ಬೆಳುದಿಂಗಳನ್ನು ಸವಿಯುತ್ತ ಅಲ್ಲೊಬ್ಬರು ಇಲ್ಲೊಬ್ಬರು ಬಂಡೆಯ ಮೇಲೆ ಚಾಚಿಕೊಂಡಿದ್ದರು. ನಾವು ಬೆಟ್ಟದ ಅಂಚಿನ ಮೇಲೆ ಬಂದು ಕುಳಿತೆವು.

ನಾನೇನೂ ಕಾರ್ಕಳಕ್ಕೆ ಹೊಸಬನಲ್ಲ. ಮೂರು ವರ್ಷಗಳ ಹಿಂದೆ ಈ ಊರಿನಲ್ಲಿ ಒಂದು ವರ್ಷವನ್ನು ಕಳೆದಿದ್ದೆ. ಈಗ ಸುಮ್ಮನೆ ಕುಳಿತು ಸುತ್ತು ಮುತ್ತು ಕಣ್ಣು ಹೊರಳಿಸಿದಾಗ, ಮನಸ್ಸಿನಲ್ಲಿ ಹಿಂದಿನ ಚಿತ್ರಗಳು ಸಾಗಿ ಹೋಗುತ್ತಿವೆ. ಸಂಜೆ, ಮುಂಜಾನೆಗಳಲ್ಲಿ ಗೆಳೆಯರೊಡನೆ ಬೆಟ್ಟವನ್ನೇರಿ ಬಂದು ಇಲ್ಲಿ ಕುಳಿತು ಸುಖಿಸುತ್ತಿದ್ದುದು ನೆನಪಿಗೆ ಬರುತ್ತದೆ. ರಾಮಸಾಗರದ ತಡಿಯಲ್ಲಿ ಅಥವಾ ಈ ಬೆಟ್ಟದ ಮೇಲೆ ಕುಳಿತು, ಸೂರ್ಯಾಸ್ತಮಾನದ ಸೊಬಗನ್ನು ತುಂಬಿಕೊಳ್ಳುತ್ತಿದ್ದ ತಾಪುಗಳನ್ನೆಲ್ಲ ಮರೆಯುವುದು ಸಾಧ್ಯವಿದೆಯೆ ? ರಾಮಸಾಗರದ ಎದೆಯನ್ನು ಬಾಲಸೂರ್ಯನ ಕಿರಣಗಳು ಬೆಳಗುವ ಮೊದಲೇ ನೀರಿಗೆ ಬಿದ್ದು ಈಜುತ್ತಿದ್ದ 'ಥ್ರಿಲ್' ಎನ್ನುವ ಅನುಭವಗಳನ್ನು ಮರೆಯಲಾಗುತ್ತದೆಯೆ ? ಕಾಲದ ಮಹಿಮೆಯಿಂದ—ಅಂದಿನ ದಿನಗಳಲ್ಲಿ ಕಟುವೆನ್ನಬಹುದಾದ ಅನುಭವಗಳೇನಾದರೂ ಇದ್ದಲ್ಲಿ— ಅವು ಈಗ ಮಾಯವಾಗಿವೆ. ಈಗ ಮನಸ್ಸಿಗೆ ಬರುವುದೆಲ್ಲ ಸುಂದರವಾದ ಚಿತ್ರಗಳೇ. ಇಂಥ ಚಿತ್ರಗಳನ್ನು ಭೂತಕನ್ನಡಿ ಜೇರಿ ಹಿಡಿದು ತೋರಿಸುತ್ತಾನೆ ಕಾಲರಾಯ. ಅಂತೆಯೇ ಆ ಚಿತ್ರಗಳನ್ನು ನನ್ನ ಭಾವೋದ್ವೇಗಗಳು ಮತ್ತೂ ರಂಗೇರಿಸಿ, ನನ್ನ ತಂಗಿಗಾಗಿ ಚಿತ್ರಿಸಿದುವು. ಆದರೆ ಒಂದು ದುರಂತವು ಮಾತ್ರ ಕರುಳನ್ನು ಹಿಂಡದೆ ಇರಲಿಲ್ಲ. ಕಾರ್ಕಳದಲ್ಲಿದ್ದಾಗ ನನಗಿಂತ ಒಂದೆರಡು ವರ್ಷ ಹಿರಿಯರೆನ್ನಬಹುದಾದ ತರುಣರೊಬ್ಬರೊಡನೆ ನನ್ನ ಸಖ್ಯ ಬೆಳೆದಿತ್ತು. ಗೋಮಟೇಶ್ವರನ ಬೃಹದಾಕಾರವೊಂದನ್ನುಳಿದರೆ ಅವರೂ ಕೂಡ ಗೋಮಟೇಶ್ವರನಂತೆಯೇ ಇದ್ದರು. ಅದೇ ಭವ್ಯಾಕೃತಿ. ಅದೇ ಶಾಂತಮುಖಮುದ್ರೆ. ಹಿತವಾದ ಸ್ವಭಾವ. ನಾವಿಬ್ಬರೂ ಅನ್ಯೋನ್ಯರಾಗಿದ್ದೆವು. ಕಾರ್ಕಳದ ಎಲ್ಲ ಸುಂದರವಾದ ತಾಣಗಳೂ ನಮಗೆ ಗೊತ್ತು. ನನ್ನ ಗೆಳೆಯರು ಬಹಳ ಹಿತವಾಗಿ ಸಂಭಾವಿಸಬಲ್ಲವರು. ಇಬ್ಬರೂ ರಾಮಸಮುದ್ರದ ಬಂಡೆಯಲ್ಲಿ ಕುಳಿತು ಮಾತಿಗೆ ತೊಡಗಿದೆವೆಂದರೆ, ರಾತ್ರಿಯಾದುದೇ ತಿಳಿಯುತ್ತಿರಲಿಲ್ಲ. ಮೇಲಿನ ಮುಗಿಲ ಸಾಲುಗಳು ನೀರಿನಲ್ಲಿ ಪ್ರತಿಬಿಂಬಿಸಲ್ಪಟ್ಟು— ಚಂದ್ರನು ಸಾವಿರಾರು ಸೌರನ್ನುಗಳಂತೆ ನೀರಿನಲೆಗಳಲ್ಲಿ ಥಳಥಳಿಸುತ್ತಿರುವಾಗ, ಮೈಮರೆತು ಮೌನವಾಗಿ ಸಮಯದ ಪರಿವೆಯಿಲ್ಲದೆ ಕುಳಿತುಬಿಡುತ್ತಿದ್ದುದುಂಟು. ಆದರೆ ಅವರು ಗೊಮ್ಮಟ ಬೆಟ್ಟವನ್ನೇರಲಾರರು. ಒಮ್ಮೆ ಹತ್ತಾರು ಮೆಟ್ಟಲುಗಳನ್ನು ಹತ್ತಿ; ಮುಂದೆ ಸಾಗಲಾರದೆ ಕೆಳಗಿಳಿಯಬೇಕಾದ ಪ್ರಸಂಗ ಒದಗಿ, ಇಬ್ಬರ ಕಣ್ಣುಗಳೂ ಹನಿಗೂಡಿದ್ದುವು. ಆ ದಿನ ನಾನು ಕಾರ್ಕಳವನ್ನು ಬಿಟ್ಟು ಹೋಗುವವನಿದ್ದೆ. ನನ್ನ ಗೆಳೆಯರು "ಇನ್ನೊಮ್ಮೆ ನೀವು ಈ ಕಡೆ ಬರುವಾಗ, ನಾನು ಹುಷಾರಾಗಿರುತ್ತೇನೆ. ಆಗ ಇಬ್ಬರೂ ಜೊತೆಗೆ ಬೆಟ್ಟವನ್ನೇರಿ ಕುಳಿತುಕೊಳ್ಳೋಣ"— ಎಂದು ತಮ್ಮ ಆಶೆಯನ್ನು ಸೂಚಿಸಿದ್ದರು. ಆ ನಂತರ ನಾನೇನೋ ಇಂದು ಬೆಟ್ಟವನ್ನೇರಿದೆ. ನನ್ನ ಗೆಳೆಯರೂ ಏರಿದರು. ಆದರೆ ಅವರು ಏರಿದ ಬೆಟ್ಟ ಕಲ್ಪನಾತೀತವಾದುದು; ಅವರು ಪಡೆದ ಶಾಂತಿಗೂ ನಾನೀಗ ಅನುಭವಿಸುತ್ತಿರುವ ಶಾಂತಿಗೂ ಹೋಲಿಕೆಯಿಲ್ಲ. ಅವರಲ್ಲಿ ಅಡಗಿದ್ದ ಕ್ಷಯವೆಂಬ ರಾಕ್ಷಸ, ನನ್ನ ಗೆಳೆಯರನ್ನು ಬಲಿ ತೆಗೆದುಕೊಂಡಿತ್ತು; ಆದರೆ ಗೋಮಟೇಶನ ಮುಖದ ದರ್ಶನವಾದಂತೆಲ್ಲ ಮತ್ತೊಂದು ಮುಖ- ನನ್ನ ಗೆಳೆಯರದು— ಮನೋರಂಗದಲ್ಲಿ ಬಂದು ನಿಲ್ಲುತ್ತದೆ.

ಬ್ಯಾಂಡು ಗರ್ನಾಲುಗಳ ಗದ್ದಲಕ್ಕೆ ಪ್ರಾರಂಭವಾಯಿತು. ಅಭಿಷೇಕದ ಕಾಲ ಸನ್ನಿಹಿತವಾಯಿತು. ಈ ಗದ್ದಲಗಳು ಎಲ್ಲ ಉತ್ಸವಗಳಲ್ಲಿಯೂ ಸಾಮಾನ್ಯ. ಆದರೆ ಯೋಗೀಶ್ವರ ಬಾಹುಬಲಿಯ ಮುಖಾರವಿಂದದಲ್ಲಿ ಕಣ್ಣು ನೆಟ್ಟಿರುವಾಗ, ಈ ಬಾಜಾಬಜಂತ್ರಿಗಳ ಗಲಭೆ ನಗುಬರಿಸುತ್ತದೆ.

ಅಭಿಷೇಕ ಪ್ರಾರಂಭವಾಯಿತು ಮೊತ್ತಮೊದಲು ಕಲಶೋದಕ ಸ್ನಾನ. ಮೇಲೆ ನಿಂತ ಕೆಲವರು, ಸುಗ್ಗಿಯ ಗದ್ದೆಗಳಿಗೆ ನೀರೆರಚಿದಂತೆ ಆ ಭವ್ಯಮೂರ್ತಿಯ ಮೇಲೆ ನೀರು ಸುರಿಯುತ್ತಿರುವುದ

ಮನಸ್ಸಿಗೆ ಹಿತವೆನಿಸುವುದಿಲ್ಲ. ಆದರೂ ಅಷ್ಟೊಂದು ಜಲಧಾರೆಗಳು ಮುಖದ ಮೇಲಿಳಿದುಬಂದು ದೇಹವನ್ನು ತೊಯ್ಯುವಾಗ, ಮೂರ್ತಿಗೆ ಒಂದು ರೀತಿಯ ಸಜೀವತೆಯುಂಟಾದ ಕಲ್ಪನೆಯಾಗುತ್ತದೆ.

ಅನಂತರ ತೆಂಗಿನ ಹಾಲಿನ ಅಭಿಷೇಕ ನಡೆಯುತ್ತದೆ. ಆಗ ಗೋಮಟೇಶ್ವರ ಶ್ವೇತವರ್ಣೀಯನಾಗುತ್ತಾನೆ ವಿದ್ಯುದ್ದೀಪಗಳ ಪ್ರಭೆಯಿಂದಾಗಿ ಆ ದೃಶ್ಯ ತುಂಬ ಮನೋಹರವಾಗಿರುತ್ತದೆ. ಮತ್ತೊಮ್ಮೆ ಕಲಶಾಭಿಷೇಕವಾಗಿ, ಅನಂತರ ಕಾಳುಬೇಳೆಗಳನ್ನು ಸುರಿಯುತ್ತಾರೆ.

ಗೋಮಟೇಶ್ವರ ಮಾತನಾಡುವವನಾಗಿದ್ದರೆ "ಈ ದುರ್ಭಿಕ್ಷೆಯ ಕಾಲದಲ್ಲಿ ಲೋಕದಲ್ಲಿ ಬಹುಮಂದಿ ಹಸಿದಿರುವಾಗ, ಹೀಗೆ ಕಾಳು ಬೇಳೆ ಸುರಿದಾಡಬೇಡಿರೋ"— ಎಂದುಬಿಡುತ್ತಿದ್ದ; ಆದರೆ ಆ ವಸ್ತುಗಳೊಂದೂ ವ್ಯರ್ಥವಾಗುವುದಿಲ್ಲ. ಅವು ಕೆಳಗೆ ಸುರಿಯುವಾಗ, ಮೂರ್ತಿಯ ನಾಸಿಕಾಗ್ರವನ್ನು ಮಾತ್ರ ಸೋಕುತ್ತವೆ; ಪದತಳದಲ್ಲಿ ಸಂಗ್ರಹಿಸಲ್ಪಡುತ್ತವೆ. ಬಾಹುಬಲಿ ಒಳಗೊಳಗೇ ನಗುತ್ತಿರಲಾರನೇ ಈ ಆಟಗಳನ್ನು ಕಂಡು? ಘೃತಾಭಿಷೇಕಕ್ಕೆ ತೊಡಗಿರುತ್ತಾರೆ. 'ಮೂಗಿಗೆ ತುಪ್ಪಹಚ್ಚಿದರೂ ಗೋಮಟೇಶ್ವರ ಬಗ್ಗಲಾರದೆ ಹೋದನಲ್ಲ!' ಎನಿಸುತ್ತದೆ.

ಇನ್ನೊಮ್ಮೆ ಗೋಮಟೇಶ್ವರ, ತಾನು ಕಲ್ಲು ಎನ್ನುತ್ತಾನೆ. "ಅಮರೇಂದ್ರೋನ್ನತಿ, ಖೇಚರೇಂದ್ರ ವಿಭವಂ, ಭೋಗೀಂದ್ರ ಭೋಗಂ, ಮಹೇಂದ್ರ ಮಹೈಶ್ವರ್ಯಂ, ಇವೆಲ್ಲಂ ಅಧ್ರುವಂ. ಇವಂ ಬೇಳ್ಪಂತು ಬೆಳ್ಳಲ್ಲೆನ್" ಎನ್ನುವಂತೆ ದೀಕ್ಷಾಬದ್ಧನಾಗಿ ಕರ್ಮಕ್ಷಯವನ್ನು ಕಂಡ ಮಹಾವೀರಸ್ವಾಮಿಯ ಮೇಲೆ ನಾಣ್ಯಗಳನ್ನು ಸುರಿಯುವಾಗ, ಆತ ಶಿಲೆಯಾಗಿಯೇ ವರ್ತಿಸುತ್ತಾನೆ. ನಾಣ್ಯಗಳು ಠಣ್ ಠಣ್ ಎಂದು ಸದ್ದುಮಾಡಿ ಉರುಳಿಬೀಳುತ್ತವೆ. 'ನಮ್ಮ ಉತ್ಸವಗಳೆಲ್ಲ ನಿಜವಾಗಿಯೂ ಮಕ್ಕಳಾಟಗಳು' ಎಂದು ನೆನೆದುಕೊಂಡರೆ, ಆಗ ಸಮಾಧಾನವುಂಟಾಗುತ್ತದೆ. ಗೋಮಟೇಶ್ವರನ ಸಾನ್ನಿಧ್ಯದಲ್ಲಿ ಖೇದಕ್ಕೆ ಅವಕಾಶವೆಲ್ಲಿ?

ಚಂದನೋದಕವನ್ನೆರೆದಾಗ, ಗೋಮಟೇಶ್ವರನು ಜಗತ್ತಿನ ಎಲ್ಲ ರಕ್ತಪಾತಗಳಿಗೂ ತಲೆಯೊಡ್ಡಿ ನಿಂತಂತೆ ಭಾಸವಾಗುತ್ತದೆ. ಆದರೆ ತುಟಿಯ ಮೇಲಣ ಎಳನಗು ಶಾಂತಿಮಂತ್ರವನ್ನು ಸಾರುತ್ತಿರುತ್ತದೆ— ಮೌನವಾಗಿ.

ಕೊನೆಯದಾಗಿ ಶುದ್ಧೋದಕ ಸ್ನಾನವಾಗುತ್ತದೆ ಹಟಮಾಡದೆ ಸ್ನಾನ ಮಾಡಿಸಿಕೊಂಡು, ತಾಯ ಕೈಯಿಂದ ಮೈಯೊರಸಿಕೊಳ್ಳಲೆಂದು ಗಂಭೀರವಾಗಿ ನಿಂತ ಮಗುವಿನಂತೆ ಕಾಣಿಸುತ್ತಾನೆ ಗೋಮಟೇಶ. ಪ್ರೇಕ್ಷಕರನ್ನೆ ಮಕ್ಕಳೆಂದು ತಿಳಿಯುವುದಾದರೆ— ತನ್ನ ಮೇಲೆ ನೀರೆರಚಲು ಬಂದ ಮಕ್ಕಳ ಹುಡುಗಾಟಿಕೆಯನ್ನು ಕಂಡು ಮುಗುಳ್ನಗೆ ನಗುತ್ತಿರುವ ಹಿರಿಯನಾಗಿ ಕಾಣುತ್ತಾನೆ ಆತ.

ಈ ಹುಡುಗಾಟಿಕೆಯೇನೋ ಚೆನ್ನು. ಆದರೆ ಸಮ್ಯಗ್‌ದರ್ಶನ, ಸಮ್ಯಗ್‌ಜ್ಞಾನ, ಸಮ್ಯಕ್ಚಾರಿತ್ರಗಳೆಂಬ ಜೈನಸಿದ್ಧಾಂತದ ಮೂಲ ಮಂತ್ರಗಳಿಗೆ ದಿಕ್ಕಿಲ್ಲದೆ, ಅಶುಭಾಸ್ರವಗಳ ಮೇಲುಗೈಯಾಗಿ— ಜೈನರೆನ್ನುವ ಅವಸರ್ಪಿಣೀಕಾಲ ಜಗತ್ತಿಗೆ ಒದಗುತ್ತಿದೆಯಲ್ಲ— ಎಂಬ ಪರಿತಾಪ, ಬಾಹುಬಲಿಯನ್ನು ಕಾಡುತ್ತಿರಬಹುದೆ? ಆದರೆ ಆತ ಯೋಗಿಶ್ರೇಷ್ಠ; ಅನಾಸಕ್ತ. 'ಉತ್ಸರ್ಪಿಣೀ ಕಾಲವನ್ನು ಈ ಜನ ಕಾಣುವಂತಾಗಲಿ!' ಎಂಬ ಶುಭಾಕಾಂಕ್ಷೆಯೊಡನೆ ಧ್ಯಾನಾಸಕ್ತನಾಗಿ ನಿಂತಿರುವಂತೆ ಕಾಣಿಸುತ್ತಾನೆ.

ಗೋಮಟೇಶ್ವರನ ಅಭಿಷೇಕ ಸಾಗಿದಂತೆಲ್ಲ ಮನಸ್ಸಿನಲ್ಲಿ, ಹೀಗೆ ಹಲವಾರು ಭಾವನೆಗಳು ಸುಳಿದುಹೋದುವು. ಇತರ ಉತ್ಸವಗಳಲ್ಲಿ— ಇಷ್ಟು ಅಲ್ಪ ಸಮಯದಲ್ಲಿ— ಭಾವಗಳು ಈ ರೀತಿ ಪ್ರಚೋದಿಸಲ್ಪಡಲಾರವೊ ಅನ್ನಿಸುತ್ತದೆ.

ಅದೇನಿದ್ದರೂ ಗೋಮಟೇಶ್ವರನ ಈ ಉತ್ಸವದಲ್ಲೊಂದು ವೈಶಿಷ್ಟ್ಯವಿದೆ. ಉಳಿದೆಡೆಗಳಲ್ಲಿ ಉತ್ಸವಮೂರ್ತಿಗಳು ಜನರ ಕೈಗೊಂಬೆಗಳಾದಂತೆ ಕಾಣಿಸುತ್ತವೆ. ಮೂರ್ತಿಗಳಂತೆಯೇ ಭಕ್ತಿ ಭಾವಗಳೂ, ಗದ್ದಲ–ಆಡಂಬರಗಳ ನಡುವೆ ತಲೆಮರೆಸಿಕೊಳ್ಳುತ್ತವೆ ಕೋಲಾಹಲಗಳೇ ಮುಖ್ಯವಾಗಿಬಿಡುತ್ತವೆ. ಆದರೆ ಇಲ್ಲಿ ಹಾಗಲ್ಲ. ಉತ್ಸವದ ಗೊಂದಲಗಳೇನೇ ಇರಲಿ— ಗೋಮಟೇಶ್ವರ ಅವುಗಳೆಲ್ಲಕ್ಕೂ ಅತೀತನಾಗಿರುವಂತೆ ಕಾಣುವನು. ತನ್ನ ಔನ್ನತ್ಯದಿಂದ— ಮುಖದ ಶಾಂತಿಯಿಂದ — ನಮ್ಮ ಮನಸ್ಸು ಹೃದಯಗಳನ್ನು ಸೆರೆಹಿಡಿಯುತ್ತಾನೆ. ಭಕ್ತಿಭಾವಕ್ಕೆ ಮಾನವಹೃದಯದಲ್ಲಿ ಎಡೆಯಿರುವುದು ನಿಜವಾದರೆ, ಅದು ಗೋಮಟೇಶ್ವರನ ಸಾನ್ನಿಧ್ಯದಲ್ಲಿ ಉದ್ದೀಪನಗೊಳ್ಳದಿರಲಾರದು. ನಮ್ಮ ಮನಸ್ಸಿನಲ್ಲಿ

ಆನಂದ ಗ್ರಂಥಮಾಲಾ, ಹುಬ್ಬಳ್ಳಿ

ಸಂಪಾದಕ ಶ್ರೀ. ಪ. ವೆಂಕೋಬಾಚಾರ್ಯ, ಬಿ.ಎ.ಬಿ.ಟಿ.

ಒಂದು ವರುಷದಲ್ಲಿ ಸುಂದರ ನಾಲ್ಕು ಪುಸ್ತಕಗಳು

ವಾರ್ಷಿಕ ಚಂದಾ:

ವಾಚನಾಲಯ, ಶಾಲೆ ಕಾಲೇಜುಗಳಿಗೆ ೬-೮-೦ ಸಾಮಾನ್ಯ ೫-೮-೦

ಇದೀಗ ಪ್ರಕಟವಾಗಿದೆ:

"ಕಾಂತಂ ಮತ್ತು ಶರದ್ರಾತ್ರಿಗಳು"

ರಸಮಯ, ಶೃಂಗಾರ ಕಾದಂಬರಿ:

ಸಾದಾ ಪ್ರತಿ ೧-೬-೦ ಉತ್ತಮ ಪ್ರತಿ ೨-೦-೦

ಮಾರಾಟಗಾರರಿಗೆ ವಿಶೇಷ ಸವಲತುಗಳು.

ಗವಳೀಗಲ್ಲಿ, ಹುಬ್ಬಳ್ಳಿ

ವ್ಯವಸ್ಥಾಪಕರು
ಆನಂದ ಗ್ರಂಥಮಾಲಾ.

ತುಂಬಿಕೊಂಡು, ಅನಂತರ ನಮ್ಮನ್ನು ಸೆಳೆದೊಯ್ಯುವ ಸಾಮರ್ಥ್ಯ ಈ ವಿಗ್ರಹಕ್ಕಿದೆ.

ಹಾರವೊಂದು ಇಳಿದು ಬಂದು ಗೋಮಟೇಶ್ವರನ ಮುಂದೆ ತೂಗಿತೆಂದರೆ, ಅಂದಿನ ಉತ್ಸವ ಮುಗಿದಂತೆಯೆ.

ಕಡೆಗೊಮ್ಮೆ ಗೋಮಟೇಶ್ವರನನ್ನು ಕಣ್ತುಂಬ ನೋಡಿದೆವು. ಕೈಗಳು ಜೋಡಿಸಿಕೊಂಡುವು.

" ಇಷ್ಟೆಲ್ಲ ಅಭಿಷೇಕಗಳೇನೋ ಚೆನ್ನು ; ಆದರೆ ತುಂಬಾ ಹೂಗಳನ್ನು ಕೂಡಿಸಿ ಎರಚಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು " ಎಂದು ನನ್ನ ತಂಗಿಯ ಅಭಿಪ್ರಾಯ.

" ಅದೆಲ್ಲ ಹುಡುಗಿಯರಿಗೆ ಚೆನ್ನು ; ಗೋಮಟೇಶ್ವರನ ನಿಜವಾದ ಸ್ನಾನವನ್ನ ನೋಡುವುದಕ್ಕೆ ಆಷಾಢಕ್ಕೆ ಬರೋಣ ! " ಎಂದೆ.

" ಆಗ ಏನಿದೆ ? " ಎಂಬ ಪ್ರಶ್ನೆಗೆ ನನ್ನ ಹಿಂದಿದ ಅನುಭವವೊಂದನ್ನು ವಿವರಿಸಲೇ ಬೇಕಾಯಿತು : ಮಲಬಾರಿನಿಂದ ಗೆಳೆಯರೊಬ್ಬರು ಬಂದಿದ್ದರು. ಬೆಟ್ಟವನ್ನೇರಿ ಬಹಳ ಹೊತ್ತು ಕುಳಿತಿದ್ದೆವು. ಇದ್ದಕ್ಕಿದ್ದಂತೆ ಮೋಡಗಳು ದಟ್ಟೈಸಿಕೊಂಡುವು; ಬಿರುಗಾಳಿ ಪ್ರಾರಂಭವಾಯಿತು; ಮಳೆಯೂ ಹನಿಯಿತು. ಇಬ್ಬರೊಡನೆಯೂ ಛತ್ರಿಗಳಿದ್ದಿಲ್ಲ. ಕೆಳಗಿಳಿದು ಹೋಗೋಣವೆಂದರೆ ನನ್ನ (Romantic) ಪ್ರವೃತ್ತಿಯ ಗೆಳೆಯರು ' ಉಹುಂ ' ಎಂದುಬಿಟ್ಟರು. ಗೋಮಟೇಶ್ವರನ ಆವಾರದಲ್ಲೇ ಆಶ್ರಯವನ್ನರಸಿದೆವು. ಸಿಡಿಲು-ಮಿಂಚುಗಳ ಆರ್ಭಟ ಬಲವಾದಂತೆಲ್ಲ, ನಮ್ಮ ಮಾತು ನಿಂತು ಹೋಯಿತು. ಸುತ್ತ ನೋಡಲೂ ಭಯ. ಮಳೆಯೂ ದಿಕ್ಕುಮುಖವಿಲ್ಲದೆ ಸುರಿಯತೊಡಗಿತು ನಾವು ಗೋಮಟೇಶನನ್ನೇ ದಿಟ್ಟಿಸುತ್ತ ನಿಂತೆವು ಝಗ್ಗೆಂದು ಮಿಂಚು ಹೊಳೆದಾಗೆಲ್ಲ ಆತ ಕಾಣಿಸಿಕೊಂಡ ಪರಿಯನ್ನು ಮರೆಯುವಂತಿಲ್ಲ. ಭೀಮಾಕಾರನಾದ ದಿವ್ಯ ಪುರುಷನೊಬ್ಬ, ಮಿಂಚಿನೊಡನೆಯೇ ಇಳಿದು ಒಂದು ಕ್ಷಣ ದರ್ಶನವಿತ್ತು ಅದೃಶ್ಯನಾಗುತ್ತಿದ್ದಂತೆ ಅನುಭವವಾಗುತ್ತಿತ್ತು. ಅವಿರತವಾಗಿ ಮಿಂಚಲು ತೊಡಗಿದಾಗ, ಗೋಮಟೇಶ್ವರನ ನಿಜವಾದ ಸ್ನಾನವನ್ನು ಕಂಡೆವು. ಆ ಭವ್ಯಾಕೃತಿ, ತನ್ನ ಘನತೆಗೆ ತಕ್ಕುದಾದ ಅಭಿಷೇಕದಿಂದ ದೀಪಾರ್ಚನೆಗಳಿಂದ—ಸಂತೃಪ್ತನಾಗಿ ನಿಂತಂತೆ ಕಾಣಿಸುತ್ತಿತ್ತು. ಚಿರಕಾಲ ಮನಸ್ಸಿನಲ್ಲಿ ನಿಲ್ಲುವಂಥ ನೋಟವದು.

ಬೆಟ್ಟದಿಂದ ಕೆಳಗಿಳಿಯುವಾಗ, ಗೋಮಟೇಶ್ವರನ ಭವ್ಯತೆಯ ಕುರಿತು ಬಾಯ್ತುಂಬ ಆಡಿದ್ದಾಯಿತು. ಆದರೆ ಆ ಭವ್ಯತೆ ನಮಗೇನು ಕಲಿಸಬಹುದೆಂಬುದರ ಕಡೆಗೆ ಮನಸ್ಸು ಹೋಯಿತು.

ಮಾನವರು ಮಹಾತ್ಮರನ್ನು ದೇವರೆಂದು ಅರ್ಚಿಸತೊಡಗಿದರೆಂದರೆ, ಆ ವಿಭೂತಿಗಳ ಮಾರ್ಗದರ್ಶನವನ್ನು ಅವರು ಕಳೆದುಕೊಳ್ಳಲು ಸಿದ್ಧರಾದರೆನ್ನಬೇಕು ಮಹಾವ್ಯಕ್ತಿಗಳ ಮೂಲ ತತ್ತ್ವಗಳನ್ನು ಅಲ್ಲಗಳೆಯಲು ಪ್ರಥಮಸೋಪಾನವೆಂದರೆ ಆ ವ್ಯಕ್ತಿಗಳನ್ನು ಪೂಜಿಸತೊಡಗುವುದು. ಆದ್ದರಿಂದ ಮಹಾಯೋಗಿ ಬಾಹುಬಲಿಯ ದರ್ಶನವು ಚಿತ್ತಸ್ಥೈರ್ಯ ಆತ್ಮಸಂಯಮಗಳನ್ನು ನಮ್ಮಲ್ಲಿ ಉಂಟುಮಾಡುವ ಕುರಿತು ಆಡದಿರುವುದೇ ವಿವೇಕ. ಆದರೆ ಒಂದು ಮಾತು: ಈ ಆಟಂ ಯುಗದ ಕೋಲಾಹಲದ ನಡುವೆ ಬಾಳುವವರು ನಾವು. ಅಂಥವರು ಬೆಳುಗೊಳದ—ಕಾರ್ಕಳದ—ಗೋಮಟೇಶ್ವರರ ಮುಖಕಮಲಗಳನ್ನು ಕಣ್ತುಂಬ ನೋಡುವುದರಿಂದ, ತುಂಬ ಪ್ರಯೋಜನವಿದೆ. ಮನೋರಾಜ್ಯವು ಬೋರಲು ಬಿದ್ದು ಬೆಂಗಾಡಾಗಿರುವಾಗ, ಆ ಮುಖಾರವಿಂದಗಳು ಚಿತ್ತಾಕಾಶದಲ್ಲಿ ಸುಳಿದರೆ, ಒಂದು ಹನಿಯಷ್ಟಾದರೂ ಶಾಂತಿಯ ಸಿಂಚನವಾಗದೆ ಇರದು. ಒಂದು ರೇಣುವಿನಷ್ಟು ಮಕರಂದವಾದರೂ ಲಭಿಸದಿರದು. ಆಗ ಬಾಳು ಬರಿದಾಗಿ ಉಳಿಯದು—ಫಲಿಸಬಹುದು.

ಕಸೂತಿ ಕಲಿಯಬೇಕೆ?

ಕೈ ಕಸೂತಿ

ಶ್ರೀಮತಿ ಸುಶೀಲಾದೇವಿ ಹಳಪೇಟೆ,
ಕರ್ನಾಟಕ ಹೊಲಿಗೆಯ ವಿದ್ಯಾಲಯ, ಧಾರವಾಡ

★

ಕಳೆದ ಸಂಚಿಕೆಯಲ್ಲಿ ಶ್ಯಾಡೋವರ್ಕ್ ವಿಷಯ ತಿಳಿಸಿದ್ದೇನೆ. ಈ ಸಲ ಇನ್ನೊಂದು ತರದ ಕಸೂತಿಯನ್ನು ಹಾಕಲು ತಿಳಿಸಬೇಕೆಂದಿದ್ದೇನೆ.

ಈ ಲೇಖನದಲ್ಲಿ ಬಂದ ಒಂದನೆಯ ಚಿತ್ರದಲ್ಲಿ ತೋರಿಸಿದ ಕಸೂತಿಯನ್ನು ತುಂಬುವಾಗ, ಅದೇ ತರದ ಚಿತ್ರವನ್ನು ತೆಗೆಯಬೇಕು. ಎಂದರೆ ಔಟ್‌ಲಾಯಿನ್ ತುಂಬುವಂತಹದೇ ಇರಬೇಕು. ಅಂದರೇನೆ ಈ ಕಸೂತಿಯನ್ನು ತುಂಬಲು ಬರುತ್ತದೆ; ಮತ್ತು ಹೂವಿನ ಆಯಾ ಭಾಗದ ಪಕಳೆಗಾಗಲಿ ಎಲೆಗಳಿಗಾಗಲಿ ಛಿದ್ರಗಳು ಇರಕೂಡದು. ಇದನ್ನು ತುಂಬುವ ಪದ್ಧತಿ:—ಚಿತ್ರವನ್ನು ಬೇಕಾದ ಆಕಾರದಂತೆ ತೆಗೆಯಬಹುದು. ಈ ಚಿತ್ರವನ್ನು ತೆಗೆಯುವಾಗ ೮" ಅಗಲ ೮" ಉದ್ದವಾದ ಒಂದು ಬಟ್ಟೆಯ ತುಂಡನ್ನು ತೆಗೆದುಕೊಂಡು, ಅದರ ಮೇಲೆ ಕಾರ್ಬನ್ನಿನ ಸಹಾಯದಿಂದ ಚಿತ್ರವನ್ನು ಮೂಡಿಸಿಕೊಳ್ಳಬೇಕು. ಅನಂತರ ರಿಂಗಿನಲ್ಲಿ ಅರಿವೆ ಬಿಗಿಯಾಗಿ ಕೂಡುವಂತೆ ಹಾಕಬೇಕು. ಬಳಿಕ ಡಿ. ಎಮ್. ಸಿ. ದಾರವನ್ನು ಆಯಾ ಹೂವಿಗೆ ತಕ್ಕಂತೆ ತೆಗೆದುಕೊಂಡು ಕಸೂತಿಯನ್ನು ಪ್ರಾರಂಭಿಸಬೇಕು. ಸರಪಳಿ ಹೊಲಿಗೆಯಂತೆಯೇ ಇದನ್ನು ಹಾಕುವುದಿರುತ್ತದೆ. ಆದರೆ ನೋಡಲು ಸರಪಳಿಹೊಲಿಗೆಯಂತೆ ಕಾಣುವುದಿಲ್ಲ. ಯಾಕೆಂದರೆ ಹೂವಿನ ಒಂದೇ ಪಕಳೆಯ ಮೇಲೆ ಒಂದೇ ಸರಪಳಿಯು ಬರುತ್ತದೆ. ಹೇಗೆಂದರೆ ಪಕಳೆಯ ಕೆಳಗಿನ ಭಾಗಕ್ಕೆ ಸೂಜಿಯನ್ನು ಚುಚ್ಚಿ, ಅದರ ಬಾಹ್ಯರೇಷೆಯ ಸುತ್ತಲೂ ದಾರವು ಕೂಡುವಂತೆ ಸಡಿಲಾಗಿ ತೆಗೆದುಕೊಂಡು, ಮತ್ತೆ ಅದೇ ಜಾಗದಲ್ಲಿ ಸೂಜಿಯನ್ನು ಚುಚ್ಚಿ, ಪಕಳೆಯ ತುದಿಯ ಭಾಗಕ್ಕೆ ಸೂಜಿಯ ತುದಿಯನ್ನು ತೂರಿಸಿ, ತೆಗೆದುಕೊಳ್ಳಬೇಕು. ಮತ್ತು ಪಕಳೆಯ ಸುತ್ತಲೂ ಬಂದ ದಾರವನ್ನು ಪಕಳೆಯ ತುದಿಯ ಕಡೆಗೆ



ಅದೇ ದಾರದಿಂದ ಟಾಕೆಯನ್ನು ಹಾಕಿ, ದಾರವು ಸರಿದಾಡದಂತೆ ಗಟ್ಟಿಮಾಡಿಕೊಳ್ಳಬೇಕು. ಇದರಂತೆ ಎಲೆಯನ್ನು ತುಂಬಬೇಕು.

ಅಂದದ ಹೊಲಿಗೆಗಳಲ್ಲಿ ಇದು ಸುಲಭವಾದದ್ದು ಮತ್ತು ವೇಳೆ ಹಿಡಿಯದೇ ಸ್ವಲ್ಪ ವೇಳೆಯಲ್ಲಿ ಮುಗಿಯುವುದು ಈ ಕಸೂತಿಯನ್ನು ಟೇಬಲ್ ಕ್ಲಾಥಿಗೂ, ಪ್ಲೇನ್ ಅರಿವೆಯಲ್ಲಿ ಉಡುಪನ್ನು ತಯಾರಿಸಿ ಆ ಉಡುಪಿನ ತುಂಬಾ ಒಂದೊಂದೇ ಹೂವನ್ನಾಗಿ ಕಸೂತಿಯಂತೆ ತುಂಬಿದರೆ, ಅರಿವೆಯಲ್ಲಿಯೇ ಕಸೂತಿಯನ್ನು ನೆಯ್ದಂತೆ ಕಾಣುತ್ತದೆ. ಈ ಕಸೂತಿಗೆ ಇಂಗ್ಲಿಷಿನಲ್ಲಿ 'ಲೇಝೀಡಾಯಸಿ' ಎನ್ನುತಾರೆ.

ಎರಡನೆಯ ಚಿತ್ರದಲ್ಲಿಯ ಕಸೂತಿಯನ್ನು ತುಂಬುವ ಪದ್ಧತಿ: ಇದಕ್ಕೆ ಗಂಟಿನ ಹೊಲಿಗೆ ಎನ್ನುತ್ತಾರೆ. ಕಸೂತಿಗೇ ಮೀಸಲಾದ ಯಾವ ಚಿತ್ರವೂ ಈ ಕಸೂತಿಗೆ ಬೇಕಾಗುವುದಿಲ್ಲ. ಚಿತ್ರದಲ್ಲಿ ತೋರಿಸಿದಂತೆ ಬರೇ ಶೋಭೆಗಾಗಿ ಇರುತ್ತದೆ. ಪ್ಲೇನು ಅರಿವೆಯ ಉಡುಪುಗಳ ಮೇಲೆ, ಈ ರೀತಿಯ ಸಣ್ಣ ಸಣ್ಣ ಗಂಟುಗಳನ್ನು ಹಾಕಿದರೆ, ಚಿಕ್ಕೆಯಂತೆ ಅಂದವಾಗುತ್ತದೆ. ಮತ್ತು ಜೋಳದ ತೆನೆಯಂತಹ ಚಿತ್ರವನ್ನು ತುಂಬುವಾಗ, ಹೂವಿನ ಒಳಗಿನ ಪರಾಗಗಳನ್ನು ತೋರಿಸಲಿಕ್ಕೆ ಮತ್ತು ಟಿಬಿಕೆಯ ಡಿಝಾಯನ್ ತುಂಬಿತೋರಿಸುವಾಗ, ಈ ಕಸೂತಿಯನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ



ಈ ಕಸೂತಿಯನ್ನು ತುಂಬುವ ಪದ್ಧತಿ :— ಆಯಾ ಚಿತ್ರದ ಭಾಗದ ಬಣ್ಣಕ್ಕನುಸರಿಸಿ ದಾರವನ್ನು ಸೂಜಿಯಲ್ಲಿ ಪೋಣಿಸಿ, ಕೆಳಗಿನಿಂದ ಸೂಜಿಯನ್ನು ಮೇಲಕ್ಕೆ ತೂರಿಸಿಕೊಂಡು ದಾರವನ್ನು ಪೂರ್ಣ ಎಳೆದುಕೊಂಡ ನಂತರ, ಅರಿವೆಗೆ ಹೊಂದಿ ದಾರಕ್ಕೆ ಗಂಟುಹಾಕಬೇಕು. ಆ ಮೇಲೆ ಸೂಜಿಯನ್ನು ತೆಗೆದುಕೊಂಡ ಜಾಗದಲ್ಲಿಯೇ ಮತ್ತೆ ಸೂಜಿಯನ್ನು ಕೆಳಗೆ ಎಳೆದುಕೊಳ್ಳಬೇಕು. ಇದರಂತೆ ಪೂರ್ಣ ತುಂಬಿದಮೇಲೆ, ಈ ಕಸೂತಿಯು ಸುಂದರ ಕಾಣುತ್ತದೆ. ಇದಕ್ಕೆ 'ಗಂಟಿನ ಹೊಲಿಗೆ' ಎನ್ನುತ್ತಾರೆ. ಇದರಂತೆ ಇನ್ನೂ ಒಂದು ಬಗೆಯಾಗಿ ಮಾಡಲು ಬರುತ್ತದೆ. ಮೇಲೆಹೇಳಿದಂತೆ ಕೆಳಗಿನಿಂದ ಸೂಜಿಯನ್ನು ಮೇಲಕ್ಕೆ ತೆಗೆದುಕೊಂಡು, ಅರಿವೆಗೆ ಹೊಂದಿರುವ ಅದೇ ದಾರವನ್ನು ಸೂಜಿಗೆ ೨-೪ ಸುತ್ತುಸುತ್ತಿ, ಆ ಸುತ್ತಿದ ದಾರದ ಸುರುಳಿಯನ್ನು ಅರಿವೆಗೆ ಹೊಂದುವಂತೆ ಸೂಜಿಯಿಂದ ಎಳೆದು ಕೊಳ್ಳಬೇಕು. ಅದೇ ಜಾಗದಲ್ಲಿ ಮತ್ತೆ ಸೂಜಿಯನ್ನು ಕೆಳಗೆ ತೆಗೆದುಕೊಂಡರೆ, ಈ ಹೊಲಿಗೆಯು ಪೂರ್ಣ ಮುಗಿದಂತಾಯಿತು. ಈ ಕಸೂತಿಗೆ "ಫ್ರೆಂಚ್ ನಾಟ್"ಎನ್ನುವರು.

ಮಂಜುಳಾ

(ಸ್ವತಂತ್ರ ಸಾಮಾಜಿಕ ಕಾದಂಬರಿ)

ಬರೆದವರು ಶ್ರೀ. ಕೃಷ್ಣಮೂರ್ತಿ ಪುರಾಣಿಕ, ಬಿ.ಎ., ಬಿ.ಟಿ. ಗೋಕಾಕ
ಮೈಸೂರಿನ ಉಷಾ ಗ್ರಂಥಮಾಲೆಯ ೨೮-೨೯ನೆಯ ಗ್ರಂಥ.
ಬೆಲೆ ೩-೦-೦

ಇದರ ಕತೆ ಸ್ವಲ್ಪದರಲ್ಲಿ ಹೇಳುವುದಾದರೆ ಹೀಗಿವೆ : ಸಾಹುಕಾರರಾದ ಹಯವದನರಾಯರಿಗೆ ರಾಧಾ ಎಂಬ ಹೆಂಡತಿ, ಬದರಿನಾಥ ಎಂಬ ಮಗ, ಮಂಜುಳಾ ಎಂಬ ಮಗಳು ಇರುತ್ತಾರೆ. ನಿಷ್ಕಾಂಚನನೂ ನಿರಾಧಾರಿಯೂ ಆದ ರಮಾಕಾಂತನೆಂಬ ಒಬ್ಬ ಹುಡುಗನಿಗೆ ರಾಯರು ತಮ್ಮ ಮನೆಯಲ್ಲಿರಲು ಆಶ್ರಯಕೊಟ್ಟಿರುತ್ತಾರೆ. ಅವನೊಬ್ಬನೇ ಸೇರಿ; ಮಿಕ್ಕ ನಾಲ್ಕು ಜನರದೆಲ್ಲ ಒಂದೇ ಗುಟ್ಟಾಗಿ, ಮಂಜುಳಾ-ರಮಾಕಾಂತರು ನಾಟ್ಯಕಲೆಗಾಗಿಯೂ, ಬದರಿಯು ಚಿತ್ರಕಲೆಗಾಗಿಯೂ ಜೀವನವನ್ನು ಮುಡಿಪಿಡಲು ನಿರ್ಧರಿಸುತ್ತಾರೆ. ಮಂಜುಳಾ-ರಮಾಕಾಂತರ ಸಲುಗೆ ಬೆಳೆದು, ಪ್ರೇಮದಲ್ಲಿ ಪರಿಣತಗೊಳ್ಳುತ್ತದೆ. ಅವನು ಮಂಜುಳೆಗೆ ನೃತ್ಯ, ಗಾಯನ, ನಟನೆ ಎಲ್ಲವನ್ನೂ ಕಲಿಸುತ್ತಾನೆ; ಆಕೆಯೊಡನೆ ನಾಟಕಗಳಲ್ಲಿ ಪಾತ್ರವಹಿಸುತ್ತಾನೆ. ಇಷ್ಟೊಂದು ಆತ್ಮೀಯನಾಗಿ ರಮಾಕಾಂತನು ೫ ವರ್ಷಗಳಿಂದ ತೀರ ಮನೆಯವನಂತಿದ್ದರೂ ಪರಂಪರಾಭಿಮಾನಿಗಳಾದ ಹಯವದನರಾಯರು ಮಾತ್ರ ಒಮ್ಮೆ ಕೂಡ ಆತನ ಕುಲಗೋತ್ರಗಳನ್ನು ವಿಚಾರಿಸಿರುವುದಿಲ್ಲ! ಮಗಳೊಡನೆ ಅವನು ಬೆಳೆಯಿಸಿರುವ ಸಲುಗೆಯನ್ನು ಲಕ್ಷಿಸಿರುವದಿಲ್ಲ! ಹೆಂಡತಿಯೊಡನೆ ಎಂದೂ ಈ ವಿಷಯ ಚರ್ಚಿಸಿರುವುದಿಲ್ಲ!! ಜನರು ಆಡಿಕೊಳ್ಳುವುದು ಕಿವಿಗೆ ಬೀಳಲು, ಕೊನೆಗೆ ಒಂದು ದಿನ ಅವನನ್ನು ಹೊರಗೆ ಹಾಕಲು ನಿಶ್ಚಯಿಸುತ್ತಾರೆ. ಅದಕ್ಕೆ ಹೆಂಡತಿ ಎದುರು ವಾದಿಸುತ್ತಾಳೆ, ಮಂಜುಳಾ ವಿರೋಧಿಸುತ್ತಾಳೆ, ಬದರಿ ಅಸಮ್ಮತಿಯನ್ನು ಸೂಚಿಸುತ್ತಾನೆ. ನಿರ್ವಾಹವಿಲ್ಲದೆ ಗಂಡನ ಪತಿಯಿಂದ ಮಗಳ ಮನವೊಲಿಸಲು ರಾಧಾಬಾಯಿ ಪ್ರಯತ್ನಿಸುತ್ತಾಳೆ. 'ಸ್ವಾತಂತ್ರ್ಯವೃತ್ತಿ ಹರಡುವದರಲ್ಲಿ ಅನೇಕ ಸಮಸ್ಯೆಗಳನ್ನು ತಂದೊಡ್ಡಬಹುದೆಂದು ಇವರು (ಗಂಡ) ಭೀತರಾಗಿದ್ದಾರೆ.' ಎಂದು ರಾಧಾಬಾಯಿ ಮಗಳಿಗೆ ಹೇಳಿದಾಗ, 'ನಾನು ಸಂಯಮದ ಯಾವ ಗಡಿಯನ್ನು ದಾಟಿದ್ದೇನೆ, ಕೇಳಬಹುದೇ ?' ಎಂದು ತಾಯಿಗೆ ಮರು ಸವಾಲು ಹಾಕುತ್ತಾಳೆ ಈ ಕುಮಾರಿಕೆ! ಆದರೆ ಆ ಹೊತ್ತಿಗೆ ತನ್ನ ಕೌಮಾರ್ಯವನ್ನು ಭಂಗಿಸುವಂತಹ ಎಲ್ಲ ಕೃತಿಗಳನ್ನೂ ರಮಾಕಾಂತನೊಡನೆ ಮಾಡಿ ಮುಗಿಸಿಬಿಟ್ಟಿರುತ್ತಾಳೆ!

'ಕಲಾವಿದರಿಗೆ ಕಲೆಯೇ ಕುಲ, ಅದುವೆ ಸರ್ವಸ್ವ,' ಕುಲ ಘನವಲ್ಲ, ಮಾನವನ ಕಲೆ ಘನವಾದುದು. ನಿಮ್ಮ ಮಗಳು ಕಲಾವಿದೆ, ಅವಳಲ್ಲಿ ಕಲಾವಿದನೊಬ್ಬನ ಸ್ನೇಹ ಉಂಟಾಗುವುದು ಪ್ರಕೃತಿಸಿದ್ಧವಾದ ನಿಯಮ. ಸತೀಧರ್ಮವು ಕೂಡ ಒಂದು ಶ್ರೇಷ್ಠವಾದ ಕಲೆಯೇ ಆಗಿದೆ. ಈ ಕಲಾಧರ್ಮವನ್ನು ಅವಳು (ಮಂಜುಳಾ) ಪಾಲಿಸುತ್ತಿದ್ದಳು. ನೀವು ತಿಳಿದುಕೊಂಡಂತೆ ನಾನು ಅವಳನ್ನು ಅಡ್ಡದಾರಿಗೆ ಒಯ್ಯುತ್ತಿರುವುದಿಲ್ಲ. ನಿಮ್ಮ ಅನ್ನದ ಋಣವನ್ನು ನಾನು ತೀರಿಸಬೇಡವೆ ?' ಎಂದು ರಾಯರೆದುರು ತನ್ನ ಆದರ್ಶವಾದದ ತತ್ತ್ವಗಳನ್ನು ಸುರುವ ಈ ರಮಾಕಾಂತ ಕಲಾಚಕ್ರವರ್ತಿ ಅವರ ಮಗಳೊಡನೆ ಜಾರತನವನ್ನು ಮಾಡಿ ಅನ್ನದ ಋಣವನ್ನು ತೀರಿಸಿಬಿಟ್ಟಿರುತ್ತಾನೆ! ಮುಂದೆ ಒಂದುದಿನ ರಮಾಕಾಂತನ ತೋಳತೆಕ್ಕೆಯಲ್ಲಿಯೇ ಮಂಜುಳೆಯನ್ನು ರಾಯರು ಪ್ರತ್ಯಕ್ಷವಾಗಿ ಕಾಣುತ್ತಾರೆ. ಮಾತು ದೀರ್ಘಕ್ಕೆ ಹೋಗುತ್ತದೆ. ರಮಾಕಾಂತರಾಯರಿಂದ ಕೆನ್ನೆಗೆ ಹೊಡೆಯಿಸಿಕೊಂಡು ಹೊರಬೀಳುತ್ತಾನೆ. ಹೋಗುವಾಗ ಯಾರಿಗೂ ಹೇಳದೆ ಒಂದು ಕಾಗದವನ್ನು ಬರೆದಿಟ್ಟು ಹೋಗುತ್ತಾನೆ. ಇದು ನಡೆದ ಕುಸು ದಿನಗಳಲ್ಲಿಯೇ ಮಂಜುಳಾ ಬದರೀನಾಥರೂ ತಂದೆತಾಯಿಗಳಿಂದ ಸಿಡಿದು ಹೋಗಿ ಬೇರೆ ಇರುತ್ತಾರೆ. ರಾಯರು ಆ ಉದ್ವಿಗ್ನತೆಯಲ್ಲಿ ಹೆಂಡತಿಯೊಡನೆ ಯಾತ್ರೆಗೆ ಹೊರಡುತ್ತಾರೆ. ಅಲ್ಲಿ ಹೆಂಡತಿ ಸಾಯುತ್ತಾಳೆ. ವಿಧುರಾವಸ್ಥೆಯಲ್ಲಿ ಊರಿಗೆ ಮರಳುತ್ತಾರೆ.

ಇತ್ತ ರಮಾಕಾಂತನು ಒಂದು ನಾಟಕ ಕಂಪನಿಯನ್ನು ಸೇರಿ, ಮುಖ್ಯಪಾತ್ರವನ್ನು ವಹಿಸುತ್ತ, ಊರೂರು ಅಲೆಯುತ್ತಾನೆ. ಅಲ್ಲಿಯೂ ಕಂಪನಿಯ ಒಂದು ಹೆಣ್ಣು ಇವನ ಕಲಾಶಕ್ತಿಗೆ ಮೆಚ್ಚಿ, ಇವನಿಗೆ ಮರುಳಾಗುತ್ತದೆ. ಅವಳಿಗೂ ಆದರ್ಶಜೀವನವನ್ನು ಬೋಧಿಸುತ್ತಾನೆ!

ರಮಾಕಾಂತ ಸತ್ತನೆಂದು ಮಂಜುಳೆಗೂ, ಮಂಜುಳೆ ಬೇರೆ ಮದುವೆಯಾದಳೆಂದು ರಮಾಕಾಂತನಿಗೂ ತಿಳಿಯುವಂತೆ ಸುಳ್ಳು ಸುದ್ದಿಯನ್ನು ಹರಡುತ್ತಾರೆ ತಂದೆ ಹಯವದನರಾಯರು! ಆದರೂ ಮಂಜುಳೆ ಮದುವೆ ಆಗುವದಿಲ್ಲ. ಆಕೆಗೆ ಮಗ ಹುಟ್ಟುತ್ತದೆ. ರಮಾಕಾಂತನ ವಿಧವೆಯಂತೆ ಜೀವನ ನಡೆಯಿಸುತ್ತಾಳೆ, ತನ್ನ ಜೀವನಾದರ್ಶವಾದ ನಾಟ್ಯಕಲೆಯ ಉದ್ಧಾರಕ್ಕಾಗಿ ಒಂದ

ಮಹಿಳಾಸಂಸ್ಥೆಯಲ್ಲಿ ಸೇರಿಕೊಂಡು, ಕಲಾಸೇವೆ ಮಾಡುತ್ತ, ನಾಟ್ಯಮಂದಿರಕ್ಕಾಗಿ ಹಣವನ್ನು ಸೇಖರಿಸುತ್ತಾಳೆ ಕಟ್ಟಡವನ್ನು ಪ್ರಾರಂಭಿಸುತ್ತಾಳೆ. ಈ ಕಾಲದಲ್ಲಿ ಬದರೀನಾಥ ಶಾಂತಿನಿಕೇತನಕ್ಕೆ ಹೋಗಿ ಬರುತ್ತಾನೆ.

ಕಂಪನಿಯಲ್ಲಿ ಕಲಾಸೇವೆಯನ್ನು ನಡೆಯಿಸಿದ ಕಲಾಚಕ್ರವರ್ತಿಯಾದ ಈ ರಮಾಕಾಂತ 'ಧರ್ಮದೃಷ್ಟಿ', 'ಅಭಿನಯ ಸನ್ಯಾಸಿ' ಎಂಬೆರಡು ಅದ್ಭುತ ನಾಟಕಗಳನ್ನು ಬರೆದು, ಅವನ್ನು ಸುಟ್ಟುಬಿಡುತ್ತಾನೆ! ಕೊನೆಗೆ ಅಲ್ಲಿಯ ಜೀವನಕ್ಕೆ ಬೇಸತ್ತು ಅಲ್ಲಿಂದ ಹೊರಬೀಳುತ್ತಾನೆ. ಇವನನ್ನು ಮೆಚ್ಚಿದ ಕಂಪನಿಯ ಹೆಣ್ಣು ಕಮಲಾ ಮಂಜುಳಾನಕಡೆಗೆ ಬಂದು ರಮಾಕಾಂತನ ಸುದ್ದಿಯನ್ನು ಅರಹುತ್ತಾಳೆ. ಇಬ್ಬರೂ ಅಕ್ಕತಂಗಿಯರಂತೆ ಇದ್ದು, ಕಲಾಸೇವೆ ಮುಂದುವರಿಸುತ್ತಾರೆ! ಕೆಲಕಾಲದ ನಂತರ ರಮಾಕಾಂತನೇ ಅಲ್ಲಿಗೆ ಬರುತ್ತಾನೆ. ಅದೇ ಊರ ಆಸ್ಪತ್ರೆಯಲ್ಲಿ ತುಸು ದಿನ ಕಳೆದು, ಸನ್ನಿಬಾತನಂತೆ ಹೊರಬಿದ್ದು, ಪಶ್ಚಾತ್ತಾಪದಗ್ಧ ಹಯವದನರಾಯರಿಗೆ ಆಕಳಸಕಳ ಮಾತನಾಡಿ, ಅರಮರ್ಧ ತಯಾರಾದ ನಾಟ್ಯಮಂದಿರದ ಪಾವಟಿಗೆಯ ಮೇಲೆ ಬಿದ್ದು ಸಾಯುತ್ತಾನೆ! ಮಂಜುಳಾ, ಕಮಲಾ, ಬದರಿನಾಥ ಎಲ್ಲರಿಗೂ ಈ ಸುದ್ದಿ ತಿಳಿದು ಅಲ್ಲಿಗೆ ಬರುತ್ತಾರೆ. ಮಂಜುಳಾ ಅವನನ್ನು ಗುರುತಿಸಿ, ತಾನೂ ಅವನ ಮುಖದ ಮೇಲೆ ಮುಖವಿಟ್ಟು ನಿಶ್ಚೇಷ್ಟಿತಳಾಗಿ ಬಿದ್ದುಬಿಡುತ್ತಾಳೆ! ಕಥೆ ಮುಗಿಯುತ್ತದೆ.

ಯಾವುದೆ ಧ್ಯೇಯ ಎಂಬುದು ಒಂದು ಉಚ್ಚವಾದ ಆದರ್ಶ. ಅದನ್ನು ಸಾಧಿಸಬೇಕೆಂದು ಹವಣಿಸುವ ಜೀವ ತನ್ನ ಮನೋವೃತ್ತಿಯನ್ನು ಶುದ್ಧವಾಗಿಸಬೇಕು, ಅದನ್ನು ಸಂಯಮದಲ್ಲಿರಿಸಬೇಕು, ಅದು ಸನ್ಮಾರ್ಗದಲ್ಲಿಯೇ ಪ್ರವೃತ್ತವಾಗುವಂತೆ ಜಾಗರೂಕತೆ ವಹಿಸಬೇಕು. ಇಂತಹ ನೈತಿಕ ಜೀವನದಿಂದಲೇ ಉತ್ಕಟ ಭಾವನೆಗಳುಂಟಾಗುವುವು. ಈ ಭಾವನೆಗಳೇ ಆ ಜೀವದಲ್ಲಿ ಸ್ಫೂರ್ತಿಯ ಸೆಲೆಯನ್ನುಂಟು ಮಾಡಿ, ಅದರ ಕರ್ತೃತ್ವಶಕ್ತಿಯನ್ನು ಬೆಳೆಯಿಸಲು ಕಾರಣವಾಗುವುವು. ಸಮಾಜದ ಸ್ವಾಸ್ಥ್ಯಕ್ಕಾಗಿ ಪ್ರತಿಯೊಂದು ವ್ಯಕ್ತಿಯು ರಾಷ್ಟ್ರದ ಕಾಯದೆ ಕಾನೂನುಗಳನ್ನು, ಸಮಾಜದ ನೀತಿನಿಯಮಗಳನ್ನು ಧಾರ್ಮಿಕ ಪರಂಪರೆಗಳನ್ನು ಪಾಲಿಸುವುದು ಅವಶ್ಯಕವಾಗಿದೆ. ವೈಯಕ್ತಿಕ ಹಾಗು ಸಾಮಾಜಿಕ ಧ್ಯೇಯಗಳು ಯಾವಾಗಲೂ ಪರಸ್ಪರ ಸಂಬದ್ಧವಾದುವು. ವ್ಯಕ್ತಿಯು ತನ್ನ ವೈಯಕ್ತಿಕ ಧ್ಯೇಯಸಾಧನೆಗೇ ಪ್ರಾಧಾನ್ಯತೆಯನ್ನು ಕೊಟ್ಟು ಸಾಮಾಜಿಕ ಹಾಗು ಧಾರ್ಮಿಕ ನೀತಿನಿಯಮಗಳನ್ನು ತಿರಸ್ಕರಿಸಿ ನಡೆದರೆ ಜೀವನವು ಸ್ವಾರ್ಥಪರವಾಗಿ ಅದು ವಿಪರ್ಯಾಸಕ್ಕೊಳಗಾಗುವುದು ಖಂಡಿತ.

ಇದರಲ್ಲಿಯ ನಾಯಕ-ನಾಯಿಕೆಯರು ಇಂತಹ ವಿಪರ್ಯಸ್ತ ಜೀವನದ ಪ್ರತೀಕಗಳಾಗಿದ್ದಾರೆ. ಸಾಮಾಜಿಕ ನೀತಿನಿರ್ಬಂಧಗಳನ್ನು ನಿರಾಕರಿಸಿದ ಯಾವ ಕಲಾವಿದನು ತನ್ನ ಆದರ್ಶವನ್ನು ಸಾಧಿಸಿದ್ದಾನೆ? ಅದರಲ್ಲಿ ನಾಟ್ಯಕಲೆ ಎಂಬುದು ಕೇವಲ ಸಾಮಾಜಿಕವಾದುದು. ಸಾಮಾಜಿಕ ಸಂಘಟನೆಯಿಂದಲೇ ಅದರ ಬೆಳವಣಿಗೆ ಆಗತಕ್ಕುದು. ಇಂತಹ ಕಲೆಯ ಉದ್ಧಾರಕ್ಕಾಗಿ ಕಂಕಣಬದ್ಧನಾದವನು, ತಾನು ಅಸಾಮಾಜಿಕರೀತಿಯಿಂದ ನಡೆದು, ಸಮಾಜವನ್ನು ದೂಷಿಸುವುದು ಸರಿಯಾಗಬಹುದೆ? ಆದರ್ಶವನ್ನು ಸಾಧಿಸಬೇಕೆಂಬುವವನಲ್ಲಿ ಚಾರಿತ್ರ್ಯ ಬೇಕು. ಸಂಯಮ ಬೇಕು, ಸಹಿಷ್ಣುತೆ ಬೇಕು. ಯದ್ವಾ ತದ್ವಾ ಬಾಯಿಗೆ ಬಂದಂತೆ ಕುಳಿತಲ್ಲಿ ನಿಂತಲ್ಲಿ ಬರಿ ತತ್ತ್ವದ ಮಾತುಗಳನ್ನಾಡುವುದರಿಂದ ಆದರ್ಶ ಸಾಧಿಸದು. ಕಥಾನಾಯಕನಾದ ರಮಾಕಾಂತನು ಹಯವದನ ರಾಯರ ಮನೆಯ ಅನ್ನವನ್ನುಂಡು, ಅವರ ಕೃಪಾಛತ್ರದಲ್ಲಿ ಬೆಳೆದು, ಅವರ ಹಣದಿಂದಲೇ ವಿದ್ಯೆ ಕಲಿತು, ಅವರೊಡನೆ ನಡೆದುಕೊಂಡ ರೀತಿ ಅತ್ಯಂತ ಗರ್ಹಣೀಯವೂ ನೀತಿಬಾಹಿರವೂ ಆಗಿದೆ. ಗಾಢವಾದ ಪ್ರೇಮವುಳ್ಳ ಗಂಡು-ಹೆಣ್ಣು ಗಂಡ-ಹೆಂಡತಿಯಾಗಿ ಬಾಳಬೇಕೆಂದರೆ ಸಾಮಾಜಿಕ ಹಾಗು ಧಾರ್ಮಿಕ ಬಂಧನಗಳು ತೊಡಕಾಗಿ ನಿಲ್ಲಬಾರದು. ಆದರೆ ಇಂತಹ ಪವಿತ್ರವಾದ ಪ್ರೇಮದಿಂದ ಕೂಡಿದ ವ್ಯಕ್ತಿಗಳು ತಮ್ಮ ಆಚರಣೆಯನ್ನು ಅಷ್ಟೇ ಶುದ್ಧವಾಗಿಡಬೇಕಾಗುವುದು. ಮದುವೆಗೆ ಮೊದಲೇ ಬಸಿರೆಯಾಗುವುದು ಯಾವ ನೀತಿ ನಿಯಮಕ್ಕೆ ಒಳಪಟ್ಟಿದೆ? 'ಕಟ್ಟು ನಿಟ್ಟಿಲ್ಲದ ಇಂಥ ವಿವೇಕಕ್ಕೆ ಸ್ನೇಹವೆನ್ನುತ್ತಾರೆಯೆ?' ಎಂದು ಹಯವದನರಾಯರು ಕೇಳಿದರೆ, 'ಸ್ನೇಹಕ್ಕೆ ಯಾವ ಸೀಮಾರೇಖೆಗಳೂ ಇರುವದಿಲ್ಲವೆಂಬುದನ್ನು ದಾದಾಸಾಹೇಬರು ಅರಿತುಕೊಳ್ಳದಿರುವುದು ನನ್ನ ತಪ್ಪಲ್ಲ' ಎಂದು ರಮಾಕಾಂತನು ತನ್ನನ್ನು ಸಮರ್ಥಿಸಿಕೊಳ್ಳುವುದು ನೀತಿಯ ಕೊಲೆಯೇ ಸರಿ!

ತಲೆಯ ಮೇಲಿನ ಮಾಸ ಹಾರದ ಎರಡು ಮೂರು ಎಳಕ ಜೀವಗಳ ತಲೆಯಲ್ಲಿ ಆದರ್ಶವಾದದ ವಿಸಂಗತ ಕಲ್ಪನೆಗಳನ್ನು ತುಂಬಿ, ಅವರಿಗೆ ಲಂಡೋಭಂಡೊ ಕೃತಿಗಳನ್ನು ಮಾಡಹಚ್ಚಿ, ಕೊನೆಗೆ ಅವರ ಜೀವನವನ್ನು ದುರಂತದಲ್ಲಿ ಕೊನೆಗಾಣಿಸಿದ ಚಿತ್ರ-

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್‌ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

Wanted Agents

Wanted Agents to secure orders for our quality Calendars.

Write for

Agency literature.

Palshikar Calendars,

Post Box No. 605. POONA

ವಿದು. ಈ ದುರಂತಕ್ಕೆ 'ಒಂದು ಕಟ್ಟಿನಲ್ಲಿ ಬೆಳೆದು ಬಂದ ಸಮಾಜ. ರಚನೆಯ ಸಂಕುಚಿತ ಮನೋಭಾವ, ಆ ವ್ಯಕ್ತಿಯನ್ನು ತಿಳಿದು-ಕೊಳ್ಳದ ಅಜ್ಞಾನ ಇವುಗಳೇ ಕಾರಣ ಎಂದು ತೋರಿಸಲು ಗ್ರಂಥ-ಕರ್ತರು ತುಂಬ ಶ್ರಮಿಸಿದ್ದಾರೆ. ಆದರೆ ಅವರ ಈ ಪ್ರಯತ್ನ ಸಫಲವಾಗಿಲ್ಲ. ಯಾರ ಬಗ್ಗೆ ಅದರ ಸಹಾನುಭೂತಿಗಳುಂಟಾಗ-ಬೇಕೊ ಅವರ ಬಗ್ಗೆ ಜುಗುಪ್ಸೆಯುಂಟಾಗುತ್ತದೆ; ಮತ್ತು ಯಾರ ವಿಷಯದಲ್ಲಿ ನಮಗೆ ತಿರಸ್ಕಾರ ಉಂಟಾಗಬೇಕೆಂದು ಲೇಖಕರು ಪ್ರಯತ್ನಿಸಿದ್ದಾರೆಯೊ ಅವರ ಬಗ್ಗೆ ಕನಿಕರವುಂಟಾಗುತ್ತದೆ. ಇದು ಈ ಕೃತಿಯ ದುರಂತ !

ಶ್ರೀ. ಪುರಾಣಿಕರಲ್ಲಿ ಬೇಸಾಗಿ ಬರೆಯುವ ಶಕ್ತಿ ಇದೆ, ಕಾವ್ಯ-ಮಯವಾಗಿ ವರ್ಣಿಸುವ ಕಲ್ಪನಾರಮ್ಯತೆ ಇದೆ. ಸೂಕ್ಷ್ಮವಾದ ಮನೋಭಾವನೆಗಳನ್ನೂ ಅವರು ಕುಶಲತೆಯಿಂದ ಚಿತ್ರಿಸಬಲ್ಲರು. ಈ ಕೃತಿಯಲ್ಲಿ ತಮ್ಮ ಈ ಸಾಮರ್ಥ್ಯವನ್ನೂ ಅವರು ಓದುಗರ ಮನಮೆಚ್ಚುವಂತೆ ತೋರಿಸಿದ್ದಾರೆ. ಆದರೆ ನಾವು ಅವರಿಂದ ಇದಕ್ಕೂ ಒಳ್ಳೆಯ ಕೃತಿಗಳನ್ನು ಅಪೇಕ್ಷಿಸುತ್ತೇವೆ. ಎಲ್. ಜೆ. ಬಿ.

ಕೇಡಿಗನ ಕಿಡಿಗಳು

ಬರೆದವರು ಶ್ರೀಮಾನ್ ನಾಡಿಗೇರ ಕೃಷ್ಣರಾಯರು.

ಪ್ರಕಾಶಕರು ಬೆಂಗಳೂರಿನ ಶಾರದಾಸಾಹಿತ್ಯ ಮಾಲೆಯವರು.

ಇದೊಂದು ನಗೆಯ ನೈವೇದ್ಯದ ತುಂಬಿದೆಡೆ ತಿಂದು ನೋಡಿ. ಬೇಕೆನ್ನುವವರಿಗೆ—ಉಪ್ಪು-ಕಾರದುವಾದರೂ— ರುಚಿಕಟ್ಟಾಗಿರುವ ವಿವಿಧ ಬಗೆಯ ಉಣಿಸು-ತಿನಿಸುಗಳಿವೆ ಇದರಲ್ಲಿ.

ತಮ್ಮ ಈ ನಗೆಯ ಉಣಿಸು-ತಿನಿಸುಗಳಿಗೆ ಲೇಖಕರು 'ಕಿಡಿಗಳು' ಎಂದು ಹೆಸರನ್ನು ಕೊಟ್ಟಿದ್ದಾರೆ. ಅಲ್ಲದೆ 'ಕೇಡಿಗನ ಮಾತು' ಎಂಬ ತಮ್ಮ ಮಾತಿನಲ್ಲಿ 'ಇವು ಹೂವಿನ ಕಡ್ಡಿಯ ಕಿಡಿಗಳಂತೆ ನಿರುಪದ್ರವ ಹಾಸ್ಯದ ಕಿಡಿಗಳು' ಎಂದು ಹೇಳಿರು-ವರು. ಆದರೆ ಹತ್ತು ಜನ ಸಾಮಾಜಿಕರನ್ನು ನಗಿಸುವ ಮಾತು ಎಂದೂ ನಿರುಪದ್ರವಿಯಾಗಿರದು. ಯಾವನಾದರೂ ಒಬ್ಬನನ್ನು ಅಳಿಸುವಂತಹ ಮಾತು ಹತ್ತು ಜನರ ನಗೆಗೆ ಕಾರಣವಾಗುವು-ದೆಂಬುದನ್ನು ಇದರಲ್ಲಿಯ ಒಂದೊಂದು ಕಿಡಿಯೂ ಸಾರಿ ಹೇಳುವುದು.

ವಿಡಂಬನೆ, ಉಪಹಾಸ, ಅಣಕ, ವ್ಯಂಗ್ಯಗಳು ನಗೆಯನ್ನು ಹುಟ್ಟಿಸಬಲ್ಲವಾದರೂ ಅವು ಒಂದಿಲ್ಲೊಂದು ವ್ಯಕ್ತಿಯ ಅಶಕ್ತತೆ, ಅಜ್ಞಾನ, ಸ್ವಭಾವ, ವಿಗುಣಗಳನ್ನು ಛೇಡಿಸುವಂತಹದಾಗಿರು-ವುವು. ಛೇಡಿಸಿಕೊಂಡ ವ್ಯಕ್ತಿಯೂ ನಿರ್ವಿಕಾರದ ನಗೆಯನ್ನು ನಕ್ಕರೆ ಅದು ನಿರುಪದ್ರವಿಯಾದ ನಗೆಯಾದೀತು. ಇಲ್ಲವಾದರೆ ಆ ಆ ವ್ಯಕ್ತಿಗಳ ಮಟ್ಟಿಗೆ ಅದು ಉಪದ್ರವಿಯೆ.

ಈ ಸಂಕಲನದಲ್ಲಿ ವೈಯ್ಯಕ್ತಿಕ ವಿಡಂಬನೆಯ ಕಿಡಿಗಳು ಹೆಚ್ಚಾಗಿ ಇಲ್ಲವಾದರೂ ಸಮಾಜದಲ್ಲಿ ಮುಂದುವರಿದ ಜನರ ವೆನಿಸಿಕೊಳ್ಳುವ ವೃತ್ತಿಗಳ ವಿಡಂಬನೆ ಸಾಕಷ್ಟು ಇದೆ. ಡಾಕ್ಟರು, ವಕೀಲ, ವಿದ್ಯಾರ್ಥಿ, ಶಿಕ್ಷಕ, ನ್ಯಾಯಾಧೀಶ ದೇಶಭಕ್ತ, ಸರ-ಕಾರದ ನೌಕರ, ಮಂತ್ರಿಗಳು, ಕವಿ, ಕಾದಂಬರಿಕಾರ, ಸಂಪಾದಕ ಪತ್ರಿಕಾವ್ಯವಸಾಯಿ, ರೇಶನ್ ಅಧಿಕಾರಿ, ರಾಷ್ಟ್ರ-ರಾಷ್ಟ್ರದ ರಾಜಕಾರಣಿಗಳು, ಕಾಂಗ್ರೆಸ್ಸಿಗ, ಸೋಶಾಲಿಸ್ಟ್, ಕಮ್ಯೂನಿಸ್ಟ್, ಎಲ್ಲರೂ ಇಲ್ಲಿ ವಿಡಂಬನೆಗೆ ಗುರಿಯಾಗಿದ್ದಾರೆ. ಸದ್ಯದ ರೇಶನಿನ ವ್ಯವಸ್ಥೆಯಂತೂ ಅಲ್ಲಲ್ಲಿ ಅಣಕಿಸಿಕೊಂಡಿದೆ. ಮೈಸೂರಿಗ, ಧಾರ-ವಾಡಿಗ, ಮಂಗಳೂರಿನವ ಮೊದಲಾದ ಪ್ರಾದೇಶಿಕ ಸ್ವಭಾವ ವೈಶಿಷ್ಟ್ಯಗಳ ವಿಡಂಬನೆಯೂ ಎಡೆ ಎಡೆಯಲ್ಲಿ ಕಾಣುತ್ತದೆ;

೯೦ ಪುಟಗಳ ಈ ಪುಸ್ತಕದಲ್ಲಿಯ ಹೆಚ್ಚಿನ ಪುಟಗಳನ್ನು ಪುಟ್ಟ ಪುಟ್ಟ ತುಣುಕು-ಮಿಣುಕುಗಳೇ ವ್ಯಾಪಿಸಿಕೊಂಡಿವೆ. 'ಚಪ್ಪಲ ಅನುಭವ' 'ತಾರೆ ಸಿಂಹ' 'ನೀತಿಯ ಕಥೆ' 'ಸುಬ್ಬರಾಯನ ಪಡಿಪಾಟ' ಮೊದಲಾದ ಕಿರುಗತೆಗಳೂ 'ದ್ವಾದಶರಾಶಿಭವಿಷ್ಯ' 'ಪ್ರಶ್ನಪತ್ರಿಕೆ' 'ವಿದ್ಯಾರ್ಥಿಗಳಿಗೆ ಹಿತೋಕ್ತಿ' ಮೊದಲಾದ ದೀರ್ಘ ವಿಡಂಬನೆಗಳೂ 'ವನಸ್ಪತಿ' 'ಅರ್ಪಣೆ' 'ಕವಿ-ಹೃದಯ' ಮೊದಲಾದ ಹರಟೆಗಳೂ, ಅಣಕವಾಡುಗಳೂ, ಹಲವು ಹಾಸ್ಯಪ್ರಸಂಗಗಳೂ ಇದರಲ್ಲಿವೆ.

ಶ್ರೀ. ನಾಡಿಗೇರರ ವಿಡಂಬನೆ-ಹಾಸ್ಯಗಳಲ್ಲಿ ಅವರದೇ ಆದ ಒಂದು ವಿಶಿಷ್ಟತನವಿದೆ ಎಲ್ಲೋ ಅಲ್ಲೊಂದು ಇಲ್ಲೊಂದು ನಗೆಯ ತುಣುಕು ಈ ಮೊದಲು ಕೇಳಿದ್ದೆನಿಸಿದರೂ ಹೆಚ್ಚು ಭಾಗವೆಲ್ಲ ನಾಡಿಗೇರರ ವಿಡಂಬಕ ಲೆಕ್ಕಣಿಕೆಯ ನಿರ್ಮಿತಿ. ಕೆಲ-ವೊಂದು ಸಾಂದರ್ಭಿಕ ಹಾಸ್ಯಗಳು ಕೇವಲ ಸಾಂದರ್ಭಿಕವೇ ಆದು-ದರಿಂದ, ಅಂದಿನ ದಿನಪತ್ರಿಕೆಯಲ್ಲಿ ಬಂದಾಗ ಅವು ಅನೇಕರನ್ನು ನಗಿಸಿರಬಹುದು. ಆದರೆ ಇಂದು ಹಳೆಯ ವಿಷಯವಾಗಿ ಕಾಣು-ವುದರಿಂದ ಬಹಳ ಜನರನ್ನು ನಗಿಸಲಾರವು.

ಶ್ರೀ. ನಾಡಿಗೇರ ಕೃಷ್ಣರಾಯರು ಎಂದೆಂದೋ—ಎಲ್ಲಿಯೆ-ಲ್ಲಿಯೋ—ಮಿನುಗಿಸಿದ ಹಾಸ್ಯದ ಕಿಡಿಗಳನ್ನು ಒಂದೆಡೆಯಲ್ಲಿ ಕೂಡಿಸಿ, ಕನ್ನಡಿಗರಿಗೆ ಒಂದು ನಗೆಯ ಸಾಹಿತ್ಯವನ್ನು ಒದವಿಸಿ-ಕೊಟ್ಟ ಪ್ರಕಾಶಕರಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳು.

—ಬಿ. ಪಿ. ಎಸ್. ರಾವ್.

(೪ ನೆಯ ಪುಟ ನೋಡಿರಿ)

ಸಾದರ ಸ್ವೀಕಾರ

★

೧. **ದೇಶಾಂತರದ ಕತೆಗಳು** (ಕಥಾಸಂಕಲನ) ಅನುವಾದಿಸಿ ಸಂಗ್ರಹಿಸಿದವರು ಶ್ರೀ. ದೇವುಡು. ಪ್ರಕಾಶಕರು ಆನಂದ ಬ್ರದರ್ಸ್ ಬೆಂಗಳೂರು. ಕ್ರೌ. ಅ. ೧೮೮ ಪುಟ. ಬೆಲೆ ೧-೮-೦

೨. **ಮಾಂಗಲ್ಯ** (ಸಾಮಾಜಿಕ ನಾಟಕ) ಬರೆದವರು ಶ್ರೀ. ಜಿ ಸದಾಶಿವಯ್ಯ. ಪ್ರಕಾಶಕರು ಆನಂದಬ್ರದರ್ಸ್, ಬೆಂಗಳೂರು ೨. ಕ್ರೌ. ಅ. ೯೦ ಪುಟಗಳು. ಬೆಲೆ ೧-೪-೦.

೩. **ತರುಣ** (ಹೊಸಮಾಸಪತ್ರಿಕೆ) ಸಂಪಾದಕರು ಶ್ರೀ. ರಾ. ಕೃ ನಾಯಕ., ತರುಣ ಕಾರ್ಯಾಲಯ, ಮಂಗಳೂರು. ಕ್ರೌ. ಅ. ೭೮ ಪುಟಗಳು. ವಾ. ಚಂದಾ ೩-೦-೦. ಬಿಡಿ ಸಂಚಿಕೆಗೆ ೦-೪-೦.

ಮೊದಲನೆಯ ಈ ಸಂಚಿಕೆ ಚೆನ್ನಾಗಿ ಹೊರಟಿದೆ. ಆದೇನೋ ಮಂಗಳೂರಲ್ಲಿ ತರುಣ ಸಾಹಿತ್ಯಿಕರು ಪತ್ರಿಕೆಗಳನ್ನು ಹೊರಡಿಸುವುದೂ ಹೆಚ್ಚು; ಅವು ಬೇಗನೇ ಮುಳುಗುವುದೂ ಹೆಚ್ಚು. 'ತರುಣ' ಪತ್ರಿಕೆಯ ಸಂಪಾದಕರು ಇದರ ವಿಚಾರವನ್ನು ಪೂರ್ಣವಾಗಿ ಮಾಡಿಕೊಂಡೇ ಹೊರಟಿರಬಹುದೆಂದು ನಂಬುಗೆ. ಪತ್ರಿಕೆ ಸತ್-ಪಥದಲ್ಲಿ ಸಾಗಲಿ.

೪. **ಪಾಪಚ್ಚಿ** (ಮಕ್ಕಳ ಮಾಸಪತ್ರಿಕೆ), ಸಂಪಾದಕರು ಶ್ರೀ. ಕುಮಾರ ವೆಂಕಣ್ಣ, ೧೯ ಪಾರ್ಕ್ ರೋಡು, ಬೆಂಗಳೂರು ೨. ಕ್ರೌ. ಅ. ೨೪ ಪುಟ. ಬಿಡಿ ಸಂಚಿಕೆಗೆ ೦-೨-೦.

'ಪಾಪಚ್ಚಿ' ಬಹುಕಾಲ ಬಾಳಿ, ಕನ್ನಡ ಮಕ್ಕಳ ಮನಸ್ಸು-ಬುದ್ಧಿಗಳ ವಿಕಾಸಕ್ಕಾಗಿ ದುಡಿಯುತ್ತಿರಲಿ.

೫. **ಉಪಾಯ ವೇದಾಂತ** (ಹರಟೆಗಳ ಸಂಕಲನ) ಬರೆದವರು ಶ್ರೀ. ನಾ. ಕಸ್ತೂರಿಯವರು. ಧಾರವಾಡದ ಲಲಿತ ಸಾಹಿತ್ಯ ಮಾಲೆಯ ೨೯ ನೆಯ ಕುಡಿ. ಕ್ರೌ. ಅ. ೧೨೬ ಪುಟಗಳು. ಬೆಲೆ ಒಳ್ಳೆಯ ಪ್ರತಿಗೆ ೨-೮-೦ ; ಸಾದಾ ಪ್ರತಿಗೆ ೧-೧೨-೦

೬. **ಕಾರವಾನ್** (ಕಥಾಸಂಕಲನದ ೨ ನೆಯ ಆವೃತ್ತಿ) ಬರೆದವರು ಶ್ರೀ. ಬಸವರಾಜ ಕಟ್ಟೀಮನಿ. ಪ್ರಕಾಶಕರು ಶಾರದಾ ಪ್ರಕಟನಾಲಯ, ಅರಳೇಪೇಟೆ– ಬೆಂಗಳೂರು ೨. ಕ್ರೌ. ೧೨೪ ಪುಟಗಳು. ಬೆಲೆ ೧-೫-೦.

೭. **ಕೇಡಿಗನ ಕಿಡಿ** (ನಗೆಯ ಕಿಡಿಗಳ ಸಂಕಲನ). ಬರೆದವರು ಶ್ರೀ. ನಾಡಿಗೇರ ಕೃಷ್ಣರಾಯರು. ಬೆಂಗಳೂರಿನ ಶಾರದಾ ಸಾಹಿತ್ಯ ಮಾಲೆಯ ೧೪ನೆಯ ಕಿರಣ. ಕ್ರೌ. ಅ. ೯೨. ಪುಟಗಳು. ಬೆಲೆ ೧-೦-೦.

೮. **ದೇವತೆಗಳು ನಕ್ಕಾಗ** (ಕಥಾಸಂಕಲನ) ಬರೆದವರು ಶ್ರೀ. ವೈ. ಎಂ. ಷಣ್ಮುಖಯ್ಯ. ಮೇಲಿನ ಶಾರದಾ ಸಾಹಿತ್ಯ-ಮಾಲೆಯ ೧೫ ನೆಯ ಕಿರಣ ಕ್ರೌ. ಅ. ೯೮ ಪುಟಗಳು. ಬೆಲೆ ೧-೪-೦.

೯. **ಹಂಬಲ** (ಕಥಾಸಂಕಲನ) ಬರೆದವರು ಶ್ರೀ. ಕೃಷ್ಣ-ಮೂರ್ತಿ ಕಿತ್ತೂರ, ಬೆಳಗಾಂವಿ. ಪ್ರಕಾಶಕರು ಅಜಿತ ಪ್ರಕಾಶನ, ಬೆಳಗಾಂವಿ. ಕ್ರೌ. ಅ. ೮೦ ಪುಟಗಳು. ಬೆಲೆ ೧-೦-೦.

೧೦. **ಭರತೇಶ ವೈಭವದ ಶೋಭನ ಸಂಧಿಗಳು** (ಪದ್ಯ-ಗ್ರಂಥ) ಸಂಪಾದಕರು ಶ್ರೀ. ಮಿರ್ಜಿ ಅಣ್ಣಾರಾಯರು. ಪ್ರಕಾಶಕರು. ಶಾಂತಿಸೇವಾ ಸದನ ಸೇಡಬಾಳ, ಜಿಲ್ಲಾ ಬೆಳಗಾಂವಿ. ಕ್ರೌ. ಅ. ೪೬ ಪುಟಗಳು. ಬೆಲೆ ೧-೦-೦.

೧೧. **ಪದ್ಮಾವತಿ** (ಸ್ವತಂತ್ರ ಸಾಮಾಜಿಕ ಕಾದಂಬರಿ ಬರೆದವರು ಶ್ರೀಮತಿ ವೈ. ವಿ. ಇಂದಿರಾಬಾಯಿ ಎಂ. ಎಸ್‌ಸಿ. ಮೈಸೂರಿನ ಹಂಸ ಸಾಹಿತ್ಯ ಮಾಲೆಯ ೫ ನೆಯ ಗ್ರಂಥ. ಕ್ರೌ. ಅ. ೨೧೧ ಪುಟಗಳು. ಬೆಲೆ ೨-೮-೦.

೧೨. **ಪಥವಿಹೀನ** (ಪ್ರಹಸನ) ಬರೆದವರು ಶ್ರೀ. ನರೇಂದ್ರ ಬಾಬು. ಪ್ರಕಾಶಕರು ಹಂಸ ಲಿಮಿಟೆಡ್. ಮೈಸೂರು. ಕ್ರೌ. ಅ ೨೨ ಪುಟ. ಬೆಲೆ ೦-೬-೦.

೧೩. **ವಿದ್ಯಾರ್ಥಿ** (ತ್ರೈಮಾಸ ಪತ್ರಿಕೆ). ಸಂಪಾದಕರು ಶ್ರೀ. ಟಿ. ಕೆ. ನಾಯಕ ಬಿ ಎಸ್‌ಸಿ., ಬಿ. ಟಿ. ಪ್ರಕಾಶಕರು. ಶ್ರೀ. ವೆಂ ಭೀ. ನಾಯಕ ಎಂ. ಎ, ಎಲ್‌ಎಲ್. ಬಿ. ಕರ್ನಾಟಕ ವೈಭವ ಮುದ್ರಣಾಲಯ, ವಿಜಾಪುರ. ಡೆ. ಅ. ೪೫ ಪುಟಗಳು ವಾ. ಚಂದಾ ೩-೦-೦.

ಮುಲಕೀ ಪರೀಕ್ಷೆಗೆ ಕೂಡಲಿರುವ ವಿದ್ಯಾರ್ಥಿಗಳ ಪ್ರಯೋಜನಕ್ಕಾಗಿ ಹೊರಟ ಪತ್ರಿಕೆಯಿದು. ಎಲ್ಲ ವಿಷಯಗಳನ್ನೂ ಪರಿಚಯ ಮಾಡಿಕೊಡುವಂತಹ ಲೇಖನಗಳು ಪ್ರಕಟವಾಗುವುವು.

೧೪. **ವ್ಯಾಪಾರೀ ಸಿಂಪಿ** (ಮರಾಠಿ ದ್ವೈಮಾಸಪತ್ರಿಕೆ). ಸಂಪಾದಕರು ಮತ್ತು ಪ್ರಕಾಶಕರು ಶ್ರೀ. ದತ್ತಾತ್ರೇಯ ಬಳವಂತರಾವ್ ಭೂತಕರ, ೬೯೨ ಶಿವಾಜೀನಗರ, ಡೆಕ್ಕನ್ ಜಿಮಖಾನಾ, ಪುಣೆ ೪. ಕ್ರೌ. ಕ್ವಿದ ೧೬ ಪುಟಗಳು. ವಾರ್ಷಿಕ ಚಂದಾ ೩-೮-೦. ಬಿಡಿಸಂಚಿಕೆಗೆ ೦-೧೪-೦.

೧೫. **ಕಳಚಲಿದೆ ರತ್ನ** (ಕಥಾಸಂಕಲನ) ಲೇಖಕರು ಶ್ರೀ. ಎ. ಬಿ. ಮುತ್ತಾಳ. ಪ್ರಕಾಶಕರು ಶ್ರೀ. ಎಂ ಬಿ. ಅನ್ನದಾನಪ್ಪ, ಕೊಪ್ಪಳ. ಕ್ರೌ. ಅ ೮೨ ಪುಟಗಳು. ಬೆಲೆ ೧-೦-೦.

೧೬. **ಮೋಳಿಗೆಯ ಮಾರಯ್ಯ ಮತ್ತು ರಾಣಿ ಮಹಾದೇವಿಯವರ ವಚನಗಳು** (ವಚನ ಸಂಕಲನ). ಸಂಶೋಧಕರು ಶ್ರೀ. ಉತ್ತಂಗಿ ಚೆನ್ನಪ್ಪನವರು ಮತ್ತು ಶ್ರೀ. ಸಂ ಶಿ. ಭೂಸನೂರಮಠ ಎಂ. ಎ. ಅವರು. ಪ್ರಕಾಶಕರು ಶ್ರೀ. ವೀರಭದ್ರಪ್ಪ ಹಾಲಭಾವಿ, ನಿವೃತ್ತ ೧ನೆಯ ವರ್ಗದ ನ್ಯಾಯಾಧೀಶರು. ಕಲಾಮಂದಿರ, ಧಾರವಾಡ. ಕ್ರೌ. ಅ. ೩೨೪ ಪುಟಗಳು. ಬೆಲೆ ಸುಂದರ ಪ್ರತಿಗೆ ೬-೦-೦ ; ಸಾದಾ ಪ್ರತಿಗೆ ೫-೦-೦.

ನಿಮ್ಮ ಮನೆ, ಹೊಲ ಅಥವಾ ಕಾರಖಾನೆಯಲ್ಲಿ ನೀರಿನ
ಸಮಸ್ಯೆ ಪರಿಹಾರವಾಗಬೇಕಾಗಿದ್ದರೆ
ಕಿರ್ಲೋಸ್ಕರ್
'ಸೆಂಟ್ರಿ ಫ್ಯೂಗಲ್ ಪಂಪ'ನ್ನೇ
ಉಪಯೋಗಿಸಿರಿ.



ಸೆಂಟ್ರಿ ಫ್ಯೂಗಲ್ ಪಂಪುಗಳು

ಯು. ಪಿ. ಟೈಪ್ ಪಂಪ್

ಒಕ್ಕಲತನ ಮತ್ತು ಕಾರಖಾನೆಯ ಉದ್ಯೋಗಗಳಿಗೆ ಅತ್ಯಂತ ಉಪಯುಕ್ತವಾದುದು. ನೀಟಿಕೆ, ಭದ್ರವಾದ ರಚನೆ ಮತ್ತು ಆಕೃತಿ ಇವುಗಳ ಸಲುವಾಗಿ ದಿನದಿನಕ್ಕೂ ಬೆಳೆಯುತ್ತಿರುವ ಲೋಕಪ್ರಿಯತೆಯನ್ನು ಪಡೆಯುತ್ತಲಿದೆ ಈ ಪಂಪು

ಬಿ. ಎಸ್. ಎ. ಪಂಪು

ಅತ್ಯಂತ ಆಧುನಿಕ ಹಾಗು ಯಾಂತ್ರಿಕ ರಚನೆಯು ಶೋಧಿಸಿ ತಯಾರಿಸಲ್ಪಟ್ಟಿರುವುದು. ನಿರಾತಂಕ ಕೆಲಸವು ನಮ್ಮ ಪ್ರತಿಯೊಂದು ಪಂಪನ್ನು ಖಾತ್ರಿಯಾಗಿ ಪರೀಕ್ಷಿಸಲಾಗುತ್ತಿದೆ. ಈ ಪಂಪುಗಳು ಔದ್ಯೋಗಿಕ ಹಾಗು ಒಕ್ಕಲತನ ಕ್ಷೇತ್ರಗಳಲ್ಲಿ ವ್ಯಾಪಕವಾಗಿ ಉಪಯೋಗಿಸಲ್ಪಡುತ್ತದೆ.



ಕಿರ್ಲೋಸ್ಕರ ಬಂಧುಗಳು ಲಿ. ಕಿರ್ಲೋಸ್ಕರವಾಡಿ

Printed by V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office Dharwar—3290 51.

JAYANTI

•

JULY
1951

ಜೂಲೈ
೧೯೫೧

ಬೆಲೆ
೮ ಆಣೆ

ನಾಡಿನ ಹಿರಿಯ ಸಾಹಿತ್ಯಿಕರಾದ
ರಾಜಸೇವಾಪ್ರಸಕ್ತ ಶ್ರೀ. ಮಾಸ್ತಿ ವೆಂಕಟೇಶ ಅಯ್ಯಂಗಾರ್ರು.

ಜಯಂತಿ

ಈ ಸಂಚಿಕೆಯಲ್ಲಿ:

ಜನಿವಾರ್ಯಾರಿಯ ನಿರ್ಮೂಲನ (ಸಂಪಾದಕೀಯ)
ಸಂಪಾದಕರು ೪೧
ನಾಡನಡೆ (ಪ್ರಾಸಂಗಿಕ ಟಿಪ್ಪಣಿಗಳು)
'ಕಾಲಭೈರವ' ೪೩
ಆದರ್ಶ (ಸಣ್ಣ ಕತೆ)
ಶ್ರೀ. ಸಗರ ಕೃಷ್ಣ ಇನಾಮದಾರ, ರಹಪೂರ ೪೫
ದಿ. ಕೆರೂರ ವಾಸುದೇವಾಚಾರ್ಯರು ಮತ್ತು ಸಣ್ಣ ಕತೆ (ಸಾ ವಿಮರ್ಶೆ)
ಶ್ರೀ ವಸಂತ ಬಾರ್ಲಿ ಬಾಗಲಕೋಟೆ ೫೦
ಕಲ್ಪನಾ ವಿಲಾಸ (ಕವನ)
ಶ್ರೀ ಎಚ್. ಜೆ ಉಪಾಧ್ಯಾಯ ಎಂ ಎ ಹೈದರಾಬಾದ್ ೫೫
ತಿರುಪು ಮುರುಪು (ವ್ಯಂಗ್ಯರೂಪಕ)
ಶ್ರೀ. ಜೇಂಪ್ರೆ ಲಕ್ಷ್ಮಣರಾಯರು, ಧಾರವಾಡ ೫೬
ಕಲಾಭಿಜ್ಞನ ಕಣ್ಣೀರು (ವಿಚಾರಪ್ರಚೋದಕ ಪ್ರಬಂಧ)
ಶ್ರೀ ಕ. ಗುರುರಾಜ ಉಪಾಪ ಬಿ. ಎಸ್‌ಸಿ. ಕಿನ್ನಿಗೋಳಿ ೬೦
ನಾನು ಕಂಡ ನಾಡು (ಪ್ರವಾಸಪ್ರಬಂಧ)
ಶ್ರೀ. ಮಿರ್ಜಿ ಅಣ್ಣಾರಾಯರು, ಉಗಾರ ೬೩
ಕಗ್ಗತ್ತಲಲ್ಲಿ ಮಿನುಗಿದ ಚಿಕ್ಕೆ (ಸಣ್ಣ ಕತೆ)
ಶ್ರೀ ವರ್ಗಿ ಮಾರ್ತಾಂಡರಾಯರು
ಎಂ.ಎ ಬಿ.ಟಿ. ಧಾರವಾಡ ೬೯
ಕವನತೆ ಕಲಿಯಬೇಕೆ? (ಕೈಕಸೂತಿ)
ಶ್ರೀಮತಿ ಸುಶೀಲಾದೇವಿ ಹೆಳವೇಟೆ, ಧಾರವಾಡ ೭೫
ಪುಸ್ತಕವಿಮರ್ಶೆ (ಪದ್ಮಾವತಿ ಮತ್ತು ಬೇರೆ ಪುಸ್ತಕಗಳು)
'ಎಲ್ ಜೆ ಟಿ' ೭೬
ಸಾದರ ಸ್ವೀಕಾರ ೮೦

ಚಂದಾಹಣ ಮನಿಯಾರ್ಡರು ಮೂಲಕ ಕಳುಹಿಸಿರಿ!

ಜಯಂತಿಯ ಚಂದಾದಾರರು ಜಯಂತಿಯನ್ನು V. P. ಮೂಲಕ ತರಿಸಿಕೊಳ್ಳುವದಕ್ಕಿಂತ, ಮನಿಯಾರ್ಡರ್ ಮೂಲಕ ಹಣ ಕಳುಹಿಸುವುದು ಅನುಕೂಲ. ಯಾಕೆಂದರೆ ಅವರಿಗೆ ಇದು ರೂಪಾಯಿಗೆ ಕಳ್ಳಿಸುವ ಮನಿಯಾರ್ಡರ್ ಕಮಿಶನ್ ಮಾತ್ರ ವೆಚ್ಚಿಗೆ ಬೀಳುವುದು. V. P. ಯಿಂದ ತರಿಸಿಕೊಂಡರೆ ರಜಿಸ್ಟರ್ ಫೀ ೫ ರೂ. ೬ ಆಣೆಗೆ ಕಳುಹಬೇಕಾಗುವದರಿಂದ, ಈ ಆಣೆಯಲ್ಲಿನ ಹೆಚ್ಚಿನ ಮನಿಯಾರ್ಡರ್ ವೆಚ್ಚವನ್ನು ವಹಿಸಬೇಕಾಗುವದು. ಆದುದರಿಂದ, ನಮ್ಮ ಎಲ್ಲ ಚಂದಾದಾರರೂ M. O. ಮೂಲಕ ಹಣ ಕಳುಹಿ, ಹೆಚ್ಚಿನ ವೆಚ್ಚ ಉಳಿಸಿಕೊಳ್ಳಬೇಕು.

ವ್ಯಾ. ಜ.

ಶರತ್ ಪ್ರಕಾಶನಮಂದಿರ

ವಿಜಯ ರೋಡು— ಧಾರವಾಡ

ಕನ್ನಡದಲ್ಲಿಯ ಸುಪ್ರಸಿದ್ಧ ಲೇಖಕರ ಲಲಿತಸಾಹಿತ್ಯಗ್ರಂಥಗಳನ್ನೂ ಜೀವನಸ್ವಾಸ್ಥ್ಯಕ್ಕೆ ಸಂಬಂಧಿಸಿದ ವಿಚಾರಪ್ರಚೋದಕ ಗ್ರಂಥಗಳನ್ನೂ ಹಳೆಯ ಕನ್ನಡ ಗ್ರಂಥಗಳನ್ನೂ ಒಳ್ಳೆಯ ರೀತಿಯಿಂದ ಸಂಪಾದಿಸಿ, ಸುಂದರವಾಗಿ ಪ್ರಕಟಿಸುವುದೇ ಈ ಮಂದಿರದ ಉದ್ದೇಶ.

ಮೊದಲನೆಯ ಪ್ರಕಟನೆಯಾಗಿ

'ಬೆಳವಡಿ ಮಲ್ಲಮ್ಮ ಮತ್ತು ಬೇರೆ ರೂಪಕಗಳು"

ಎಂಬ 'ಆನಂದಕಂದರ' ರೂಪಕಸಂಕಲನ ಪ್ರಕಟವಾಗುವುದು.

'ಆನಂದಕಂದ'ರ ಹಲವು ರಸಕೃತಿಗಳು ಈ ಪ್ರಕಾಶನ ಮಂದಿರದಿಂದ ಒಂದೊಂದಾಗಿ ಪ್ರಕಟವಾಗುತ್ತ ಹೋಗುವುವಲ್ಲದೆ, ಬೇರೆಯವರ ಗ್ರಂಥಗಳೂ ಬೆಳಕಿಗೆ ಬರುವುವು

★

ಎರಡು ರೂಪಾಯಿ ಇಡುಗಂಟನ್ನು ಸಲ್ಲಿಸಿ ಮಂದಿರದ ಗ್ರಾಹಕಸದಸ್ಯರಾದವರಿಗೆ, ಪ್ರಕಟವಾಗುವಪುಸ್ತಕಗಳನ್ನೆಲ್ಲ ಕ್ಕಿ ಬೆಲೆಗೆ ಕೊಡಲಾಗುವುದು. ಇಷ್ಟವಿದ್ದವರು ಇಡುಗಂಟಿನ ಹಣದೊಂದಿಗೆ ಕಾಗದ ಬರೆದು, ತಮ್ಮ ವಿಳಾಸವನ್ನು ರಜಿಸ್ಟರ್ ಮಾಡಿಸಬೇಕು.

ಉತ್ತಮ ಗ್ರಂಥಭಾಂಡಾರ ಮನೆಮನೆಯಲ್ಲಿಯೂ ನೆಲೆಗೊಳ್ಳಬೇಕು.

ಗ್ರಂಥಭಾಂಡಾರವೇ ಹೊಸಕಾಲದ ದೇವಮಂದಿರ!

ಶ್ರೀ. ಎಸ್. ಡಿ. ಇನಾಮದಾರ, ಸಂಚಾಲಕ

ಜಯಂತಿ

ಸಂ. ೧೪.　　　ಸಂ. ೨.

ಕುಟುಂಬದಲ್ಲಿಯ
ಪ್ರತಿಯೊಬ್ಬರೂ ಓದಿ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಪತ್ರಿಕೆ.

★

ಸಂಪಾದಕರು :
ಶ್ರೀ ಬೆಟಗೇರಿ ಕೃಷ್ಣಶರ್ಮ

★

ವ್ಯ. ಸಂಪಾದಕರು :
ಶ್ರೀ. ಎಲ್. ಜಿ. ಬೇಂದ್ರೆ.

★

ಪ್ರಕಾಶಕರು :
ಶ್ರೀ. ಎಮ್. ವಿ. ಮುಳ್ಳಿಗಟ್ಟಿ.

★

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

★

ವಾರ್ಷಿಕ ವರ್ಗಣಿ ೩ ರೂ.
ಬಿಡಿ ಸಂಚಿಕೆ ೪ ಆಣೆ.

★

ಜಾಹಿರಾತು ಕೊಡಬಯಸುವವರು
ದರಗಳಿಗಾಗಿ
ವ್ಯವಸ್ಥಾಪಕರಿಗೆ ಬರೆಯಬೇಕು.

★

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

★

ಸಂಪಾದಕೀಯ

★

ಜಮೀನುದಾರೀ ನಿರ್ಮೂಲನ

ಭಾರತದಲ್ಲಿಯ ಯಾವುದೇ ಒಂದು ರಾಜಕೀಯ ಪಕ್ಷವೂ ತನ್ನ ರಾಜಕೀಯ ಧೋರಣೆಯಲ್ಲಿ ಜಮೀನುದಾರೀ ನಿರ್ಮೂಲನದ ಘೋಷಣ ಉಗ್ಗಡಿಸುತ್ತಿರುವುದು ಎಲ್ಲರ ಅನುಭವದ ಸಂಗತಿಯಾಗಿದೆ. ಮಿಕ್ಕವರಿಗೆಲ್ಲ ಈ ವಿಷಯ ಸಮಂಜಸವಾಗಿ ತೋರುತ್ತಲಿದ್ದರೂ, ಬಹುಕಾಲದಿಂದಲೂ ಜಮೀನುದಾರಿಯ ಸುಖಭೋಗಗಳನ್ನು ಅನುಭವಿಸುತ್ತ ಬಂದಿರುವವರಿಗಿದು ತೀರ ಅಸಮಂಜಸವಾಗಿ ಕಾಣುತ್ತಲಿದೆ. ಈ ಸಮಂಜಸತೆ-ಅಸಮಂಜಸತೆಗಳನ್ನು ತಾತ್ತ್ವಿಕವಾಗಿ ಇಲ್ಲಿ ನಾವು ಚರ್ಚೆಮಾಡಬೇಕೆಂದಿದ್ದೇವೆ.

ಜಮೀನುದಾರಿಯು ಮೊದಲು ಅಸ್ತಿತ್ವದಲ್ಲಿ ಬಂದುದು ಯಾವ ರಾಜಕೀಯ ಅನುಕೂಲತೆಗಾಗಿ ? ಭಾರತದ ಸಾವಿರಾರು ವರ್ಷದ ರಾಜಕೀಯ ಚರಿತ್ರೆಯನ್ನು ನೋಡಿದರೆ, ರಾಜಪ್ರಧಾನ ಆಡಳಿತ ಪದ್ಧತಿಯೇ ನಮ್ಮಲ್ಲಿ ಬಹುಕಾಲದಿಂದ ನೆಲೆಗೊಂಡು ಬಂದಿರುವುದನ್ನು ಸ್ಪಷ್ಟವಾಗಿ ಕಾಣುತ್ತೇವೆ. ಜಿಗಿಷು ವೃತ್ತಿಯ ಒಬ್ಬ ರಾಜ ಬಲಿಷ್ಠನಾಗಿ ಇನ್ನೊಬ್ಬ ರಾಜನನ್ನು ಸೋಲಿಸಿದರೆ, ಸೋತ ರಾಜ್ಯದ ಪ್ರಜೆಗಳು, ಗೆದ್ದ ರಾಜನ ಆಧಿಪತ್ಯವನ್ನು ಸಹಜವಾಗಿ ಒಪ್ಪಿಕೊಂಡುಬಿಡುತ್ತಲಿದ್ದರು. ಯುದ್ಧವೆಂಬುದು ಹೆಚ್ಚಾಗಿ ರಾಜಧಾನಿನಗರಗಳಿಗೆ ಸಂಬಂಧಿಸಿರುತ್ತಿದ್ದಿತಲ್ಲದೆ, ನಾಡಿನ ಬೇರೆ ಭಾಗಗಳಿಗೆ ಅದರ ಕಾವು ಅಷ್ಟೊಂದು ತಗಲುತ್ತಿರಲಿಲ್ಲ. ಆರ್ಥಿಕ ದೃಷ್ಟಿಯಿಂದಲೂ ಸಂರಕ್ಷಣೆಯ ದೃಷ್ಟಿಯಿಂದಲೂ ಪ್ರತಿಯೊಂದು ಹಳ್ಳಿಯೂ ಸ್ವಾವಲಂಬಿಯಾಗಿರುತ್ತಿದ್ದುದರಿಂದ, ಜೀವನಾವಶ್ಯಕ ಪದಾರ್ಥಗಳಿಗಾಗಿ ರಾಜಧಾನಿನಗರಗಳತ್ತ ನೋಡುವ ಪ್ರಸಂಗವೇ ಹಳ್ಳಿಗರಿಗೆ ಬರುತ್ತಿರಲಿಲ್ಲ. ಯಾವುದೇ ಒಬ್ಬ ಸಾರ್ವಭೌಮನ ಇಲ್ಲವೆ ಮಾಂಡಲಿಕನ ಅಧಿನೇತೃತ್ವವನ್ನು ಹಳ್ಳಿಗಳು ಒಪ್ಪಿಕೊಂಡಿರುತ್ತಲಿದ್ದವುವಾದರೂ, ಆತನಿಂದ ನಿತ್ಯಜೀವನದಲ್ಲಿ ವಿಶೇಷವಾದ ಯಾವ ನೆರವನ್ನೂ ಅಪೇಕ್ಷಿಸುವ ಸಂದರ್ಭವಿರಲಿಲ್ಲ. ಆದರೂ ದೊರೆಯು ದೇವರ ಸಮಾನನೆಂಬ ಶ್ರದ್ಧೆ ಜನಸಾಮಾನ್ಯರಲ್ಲಿ ರೂಢಮೂಲವಾಗಿದ್ದುದರಿಂದ, ದೊರೆಯು ಯುದ್ಧಾದಿ ಉಪಸರ್ಗದಲ್ಲಿ ಸಿಕ್ಕಿದಾಗ, ಜನಸಾಮಾನ್ಯರು ಆತನಿಗೆ ಶ್ರದ್ಧೆಯಿಂದ ಸಹಾಯವನ್ನು ಸಲ್ಲಿಸುತ್ತಲಿದ್ದರು. ಹೀಗೆ ಸಹಾಯ ಸಲ್ಲಿಸಿದ ಜನಸಾಮಾನ್ಯರ ಮುಂದಾಳುಗಳು ದೊರೆಯ ಪ್ರೀತಿಗೆ ಪಾತ್ರರಾಗಿ, ಹಳ್ಳಿಗೆ-ಹಳ್ಳಿಗಳ ಗುಂಪಿಗೆ—ಅಧಿಪತಿಗಳಾಗಿ, ರಾಜಪ್ರತಿನಿಧಿಗಳಂತೆ ಅಲ್ಲಲ್ಲಿ ಅಧಿಕಾರವನ್ನು ನಡೆಯಿಸುತ್ತಿದ್ದರು. ಈ ಪ್ರಾತಿನಿಧ್ಯಕ್ಕೆ ಮೇಲಿನ ರಾಜರು ನಾಣ್ಯರೂಪದಿಂದ ಸಂಬಳ ಕೊಡದೆ, ಅವರು ಆಳುವ ಪ್ರದೇಶಭಾಗಗಳನ್ನು, ಉಂಬಳಿ ಹಾಕಿ ಕೊಡುತ್ತಲಿದ್ದರು. ಅಲ್ಲದೆ ಪ್ರವಾಸಾನುಕೂಲವಿಲ್ಲದ ಅಂದಿನ ಕಾಲದಲ್ಲಿ, ದೂರದ ರಾಜಧಾನಿಯಲ್ಲಿ ವಾಸಿಸಿರುವ ರಾಜರು, ರಾಜ್ಯದ ಬೇರೆಬೇರೆ ಭಾಗಗಳ ರಾಜಕೀಯ ವ್ಯವಸ್ಥೆಯನ್ನು ನಿರ್ವಹಿಸಿಕೊಂಡು ಹೋಗಲು, ಆ ಆ ಭಾಗಗಳಲ್ಲಿಯ ಬಲಿಷ್ಠ ವ್ಯಕ್ತಿಗಳನ್ನು ಅಧಿಕಾರಿಗಳನ್ನಾಗಿ ನಿಯಮಿಸುತ್ತಲಿದ್ದರು. ಈ ಅಧಿಕಾರಿಗಳಿಗೂ ನಾಣ್ಯರೂಪದಿಂದ ಸಂಬಳ ಕೊಡದೆ, ಭೂಮಿಯನ್ನೇ ಉಂಬಳಿಹಾಕಿ ಕೊಡುತ್ತಿದ್ದರು. ಮೊದ-ಮೊದಲು ವ್ಯಕ್ತಿಗಳಿಗೆ ಕೊಟ್ಟಿರಬಹುದಾದ ಈ ರಾಜಕೀಯ ಉಂಬಳಿಗಳು, ಕ್ರಮವಾಗಿ ಕುಲಪರಂಪರೆಯವಾಗಿ ಪರಿಣಾಮಗೊಂಡುವು. ಹೀಗಾಗಿ ನಮ್ಮ ನಾಡಿನಲ್ಲಿ ಹಳ್ಳಿಯ ಗೌಡ-ಕರಣಿಕರಿಂದ ಮೊದಲು ಮಾಡಿ ಏರಿಕೆಯ ಕ್ರಮದಲ್ಲಿ ನಾಡಗೌಡ, ನಾಡಕರಣಿಕ, ನಾಡಿಗ, ಪನ್ನೆಯ, ಸಾಮಂತ, ಮಾಂಡಲಿಕ ಮೊದಲಾಗಿ ಬಗೆ-ಬಗೆಯ ಉಂಬಳಿಗಾರರು ರೂಪುಗೊಂಡು ನಿಂತರು.

ರಾಜಕಾರಣಕ್ಕಾಗಿ ಉಂಬಳಿಗಾರರು ರೂಪುಗೊಂಡಂತೆ, ಸಾಮಾಜಿಕ-ಸಾಂಸ್ಕೃತಿಕ ಕಾರಣಗಳಿಂದಲೂ ಹಲವು ಜನ ಉಂಬಳಿಗಾರರು ಮುಂದೆ ಬರುತ್ತ ಹೋದರು. ಧರ್ಮ, ದೇವರು, ಸಾಹಿತ್ಯ, ಸಂಗೀತ, ವೈದ್ಯಕ, ಜ್ಯೋತಿಷ ಮೊದಲಾದುವುಗಳನ್ನು ಸಂರಕ್ಷಿಸುವ ಸಂವರ್ಧಿಸುವ

ಉದ್ದೇಶದಿಂದಲೂ ಕೆಲವು ಕುಲಗಳು ಉಂಬಳಿಯನ್ನು ಪಡೆದುವು. ಇವರೆಲ್ಲ ಇಂದು ಜಮಿನ್‌ದಾರರೆಂದು ಕರೆಯಿಸಿಕೊಳ್ಳುತ್ತಿರುವರು.

ಈ ಉಂಬಳಿಗಾರರೆಲ್ಲ ಅಂದಿನ ಸಾಮಾಜಿಕರ ಅಪೇಕ್ಷೆಯಂತೆ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತ ಹೋದುದರಿಂದ, ಅವರ ಅಸ್ತಿತ್ವ ಮೇಲಿನ ದೊರೆಗಳಿಗೂ ಅವಶ್ಯವೆನಿಸಿತ್ತು; ಜನಸಾಮಾನ್ಯರಿಗೂ ಅವಶ್ಯವೆನಿಸಿತ್ತು. ಹಳ್ಳಿಯ ಉಂಬಳಿಗಾರರು ಆ ಹಳ್ಳಿಯ ಸರ್ವಾಂಗೀಣ ಉನ್ನತಿಯ ಧ್ಯೇಯದಿಂದ ದುಡಿಯುತ್ತಿದ್ದರು. ನಾಡಿನ ಉಂಬಳಿಗಾರರು ನಾಡಿನ ಜನರ ಸುಖಜೀವನ-ಸಂಸ್ಕೃತಿ ಪ್ರಸಾರಗಳತ್ತ ಕಣ್ಣಿಟ್ಟು ಕೆಲಸಮಾಡುತ್ತಲಿದ್ದರು. ಜನಸಾಮಾನ್ಯರಲ್ಲಿರುವ ಧಾರ್ಮಿಕ ಶ್ರದ್ಧೆ, ಧರ್ಮ–ದೇವರುಗಳ ಹೆಸರಿನ ಉಂಬಳಿಗಾರರಿಗೂ ವಿರೋಧವನ್ನು ಮಾಡುವ ಸಂದರ್ಭತರಲಿಲ್ಲ. ಆದುದರಿಂದಲೆ ಬ್ರಿಟಿಷರು ಭಾರತಕ್ಕೆ ಬಂದು ಇದನ್ನು ಅಧೀನಪಡಿಸಿಕೊಳ್ಳುವವರೆಗೂ ಎಲ್ಲ ಉಂಬಳಿಗಾರರ ಉಂಬಳಿಗಳೂ ನಿರಾತಂಕವಾಗಿ ನಡೆದುಕೊಂಡು ಬಂದುವು.

ಬ್ರಿಟಿಷರ ಆಧಿಪತ್ಯ ಪ್ರಾರಂಭವಾಯಿತು. ಮೊದ-ಮೊದಲಿನ ಸರ್ವಾಧಿಪತಿಗಳಿಗೆ ಈ ಉಂಬಳಿಗಾರರ ಅಸ್ತಿತ್ವ ಅನಿಷ್ಟವೆನಿಸಿತೇನೋ ? ಆದುದರಿಂದ, ಯಾವುದಾದರೊಂದು ನೆಪ-ಅಪವಾದಗಳನ್ನೊಡ್ಡಿ, ಈ ಉಂಬಳಿಗಾರರನ್ನು ನಷ್ಟಪಡಿಸಲು ಪ್ರಯತ್ನಿಸಿದರು. ನಿಷ್ಪತ್ರಿಕರಾಗಿ ಕೊನೆಗಂಡ ಉಂಬಳಿಗಾರರಿಗೆ ದತ್ತಕ ತೆಗೆದುಕೊಳ್ಳಲಿಕ್ಕೆ ಅಧಿಕಾರ ಕೂಡ ಕೊಡದೆ, ಕೆಲವು ಉಂಬಳಿಗಳನ್ನು ನಷ್ಟಪಡಿಸಿದರು. ಮುಂದೆ ಮುಂದೆ ಈ ನೀತಿ ಅವಿವೇಕದ್ದೆಂದೂ, ಈ ಉಂಬಳಿಗಾರರನ್ನು ಸಂರಕ್ಷಿಸಿ ಪ್ರೀತಿಯಿಂದ ನಡೆಯಿಸಿಕೊಳ್ಳುವುದೇ ತಮ್ಮ ಆಡಳಿತದ ಸುರಕ್ಷಿತತೆಗೆ ಅನುಕೂಲವೆಂದೂ ಎನಿಸುತ್ತ ಬಂದುದರಿಂದ, ಉಂಬಳಿಗಾರರ ಅಸ್ತಿತ್ವವನ್ನು ಒಪ್ಪಿಕೊಂಡರು; ಇವರನ್ನು ಮಾನ-ಮನ್ನಣೆಗಳಿಂದಲೂ ನೋಡಿಕೊಳ್ಳಲು ತೊಡಗಿದರು.

ಬ್ರಿಟಿಷರ ಆಡಳಿತದಲ್ಲಿ, ನಮ್ಮ ರಾಜಕೀಯ ಸಾಮಾಜಿಕ ವ್ಯವಸ್ಥೆಗಳೆಲ್ಲ ತಲೆಕೆಳಗಾದುವು. ಸರಕಾರದ ನೌಕರವರ್ಗವೆಲ್ಲ ನಾಣ್ಯಗಳ ವೇತನ ತೆಗೆದುಕೊಂಡು ದುಡಿಯುವವರದಾಯಿತು. ಆದುದರಿಂದ, ನಮ್ಮ ಉಂಬಳಿಗಾರರಿಗೆ ಸರಕಾರದಲ್ಲಿ ಕಾರ್ಯವೂ ಸ್ಥಾನವೂ ಇಲ್ಲದೆ ಹೋಯಿತು. ಯಾವ ಕೆಲಸವೂ ಇಲ್ಲದೆ ಉಂಬಳಿಗಳನ್ನು ಉಪಭೋಗಿಸುವ ಅವಕಾಶ ದೊರೆತು, ಅವರು ಜೀವನದ ಧ್ಯೇಯವನ್ನೇ ಮರೆತುಬಿಟ್ಟರು. ಸಾಮಾಜಿಕ ಉನ್ನತಿ, ಸಂಸ್ಕೃತಿ ಪ್ರಚಾರಗಳ ಕಡೆಗೂ ಕಣ್ಣುಮುಚ್ಚಿಬಿಟ್ಟುದರಿಂದ, ಈ ಉಂಬಳಿಗಾರರ ಉಪಯೋಗ ಜನಸಾಮಾನ್ಯರಿಗೂ ಇಲ್ಲದಂತಾಯಿತು. ಆದರೂ ಸಂಸ್ಕಾರದಿಂದ ಈ ಉಂಬಳಿಗಾರರಿಗೆ ಸಿಕ್ಕುತ್ತಲಿದ್ದ ಮನ್ನಣೆಯ ಅಭ್ಯಾಸ, ಪರಂಪರೆಯಿಂದಲೂ ಜನಸಾಮಾನ್ಯರಲ್ಲಿ ಇವರ ಬಗ್ಗೆ ನೆಲೆಗೊಂಡ ಪ್ರೀತಿ-ವಿಶ್ವಾಸ— ಇವುಗಳ ಬಲದ ಮೇಲೆ, ಈ ಉಂಬಳಿಗಾರರೆಲ್ಲ ಇದುವರೆಗೆ ಬದುಕಿಕೊಂಡು ಬಂದರು. ಆದರೆ ಇವರ ಅಸ್ತಿತ್ವದಿಂದ ಸರಕಾರಕ್ಕು ಪ್ರತ್ಯಕ್ಷ ಉಪಯೋಗವಿರಲಿಲ್ಲ, ಜನತೆಗೂ ಉಪಯೋಗವಿರಲಿಲ್ಲ. ಉಂಬಳಿಗಾರರಲ್ಲಿ ಹಣಕ್ಕೆ ಕೊರತೆಯಿರಲಿಲ್ಲ; ಆದುದರಿಂದಲೆ ಅವರಿಗೆ ಸುಶಿಕ್ಷಣ ಸಂಪಾದನೆಗೆ ತಡೆಯಿರಲಿಲ್ಲ. ಆದರೆ ದೇಶಕ್ಕೆ ಇವರ ಸಿರಿ-ಶಿಕ್ಷಣಗಳ ಪ್ರಯೋಜನ ಯಾವ ರೀತಿಯಿಂದಲೂ ಸಿಕ್ಕಲಿಲ್ಲ. ಇವರ ಸಂಪತ್ತು ನಿರುದ್ಯೋಗಿಗಳಾದ ಭೋಗವಿಲಾಸಿಗಳನ್ನು ಹೊರೆಯುವ ಸಾಧನಮಾತ್ರವಾಗಿ ನಿಂತಿತು. ಇಷ್ಟೇ ಅಲ್ಲದೆ ಭಾರತವನ್ನು ತಮ್ಮ ಅಧೀನದಲ್ಲಿಯೆ ಇರಿಸಿಕೊಳ್ಳಬೇಕೆಂಬ ಬ್ರಿಟಿಷರಿಗೆ, ಇವರಿಂದ ಕಾಲಕಾಲಕ್ಕೆ ಬೇಕಾದ ಸಹಕಾರ ಸಿಕ್ಕಲು ತೊಡಗಿತು; ಭಾರತಸ್ವಾತಂತ್ರ್ಯಸಾಧನೆಗೆ ಇವರ ಅಸ್ತಿತ್ವವೊಂದು ದೊಡ್ಡ ಅಡ್ಡಗಾಲಾಗಿ ನಿಂತಿತು.

ಬ್ರಿಟಿಷರ ಸರ್ವಾಧಿಪತ್ಯ ಹೋಗಿ, ಈಗ ಭಾರತದಲ್ಲಿ ಪ್ರಜಾಧಿಪತ್ಯ ಬಂದಿದೆ. ಹೊಸ ರಾಜ್ಯಘಟನೆಯನ್ನು ಮಾಡಿಕೊಂಡು, ಹೊಸ ಬಗೆಯ ರಾಜ್ಯತಂತ್ರದಿಂದ ಪ್ರಜಾಪ್ರಭುತ್ವ ತನ್ನ ಅಧಿಪತ್ಯವನ್ನು ನಡೆಯಿಸಲಿದೆ. ಸಾಮಾಜಿಕ ವ್ಯವಸ್ಥೆಯಲ್ಲಿಯೂ ತುಂಬ ವ್ಯತ್ಯಾಸಗಳಾಗಿವೆ. ಎಲ್ಲ ದೇಶಗಳಲ್ಲಿಯಂತೆ ಇಲ್ಲಿಯೂ ನಾಣ್ಯಕ್ಕೇ ಪ್ರಾಧಾನ್ಯ ಬಂದುಬಿಟ್ಟಿದೆ. ಪ್ರವಾಸಸೌಕರ್ಯಗಳೂ ಹೆಚ್ಚಾಗಿವೆ. ಜನಸಾಮಾನ್ಯರೊಳಗಿಂದಲೇ ಆಡಳಿತತಜ್ಞರನ್ನೂ ಸರಕಾರೀ ನೌಕರರನ್ನೂ ಆರಿಸಬೇಕಾಗುವುದರಿಂದ, ವಂಶಪರಂಪರೆಯ ಅಧಿಕಾರಿಗಳೂ ನೌಕರರೂ ಇಂದು ಬೇಕಾಗಿಲ್ಲ. ಆದುದರಿಂದ ಇಂದಿನ ಸರಕಾರಕ್ಕೆ ಉಂಬಳಿಗಾರರ ಎಂದರೆ ಜಮಿನುದಾರರ ಅವಶ್ಯಕತೆಯು ಯಾವ ಬಗೆಯಿಂದ ನೋಡಿದರೂ ಇಲ್ಲ. ಅದರಂತೆಯೆ ನಮ್ಮ ಸಾಮಾಜಿಕ ಧಾರ್ಮಿಕ-ಕಲ್ಪನೆಗಳು ಮಾರ್ಪಟ್ಟು ಹೋಗಿರುವುದರಿಂದ, ಆ ಕಾರಣಕ್ಕಾಗಿ ಕೊಟ್ಟ ಉಂಬಳಿಗಳೂ ಇಂದು ಸಾರ್ವಜನಿಕರಿಗೆ ಉಪಯೋಗ ಬೀಳುವಂತಿಲ್ಲ. ಸರಕಾರಕ್ಕೆ ಅವಶ್ಯಕವಿಲ್ಲ; ಸಾಮಾಜಿಕರಿಗೆ ಬೇಕಾಗಿಲ್ಲ; ಇಂತಹ ಸಂಸ್ಥೆ ಇಲ್ಲವೆ ಆರ್ಥಿಕ ವ್ಯವಸ್ಥೆ, ನಾಡಿನಲ್ಲಿ ಏತಕ್ಕೆ ಇರಬೇಕು ? ಈ ವಿಚಾರವನ್ನು ಸಂಪೂರ್ಣವಾಗಿ ವಿವೇಚಿಸಿ ನೋಡಿದುದರಿಂದಲೇ ಇಂದು ಭಾರತದಲ್ಲಿರುವ ಪ್ರತಿಯೊಂದು ರಾಜಕೀಯ ಪಕ್ಷವೂ ಜಮಿನುದಾರಿಯನ್ನು ನಿರ್ಮೂಲಗೊಳಿಸುವ ಪ್ರತಿಜ್ಞೆಯನ್ನು ಮಾಡುತ್ತಲಿದೆ ಹಿಂದೂ ಮಹಾಸಭೆಯಂತಹ ಪರಂಪರಾಭಿಮಾನಿ ರಾಜಕೀಯ ಪಕ್ಷವೂ, ತನ್ನ ರಾಜಕೀಯ ಧೋರಣೆಯಲ್ಲಿ ಜಮಿನ್‌ದಾರಿ ನಿರ್ಮೂಲನೆಯನ್ನೂ ಒಂದು ಮುಖ್ಯಾಂಗವನ್ನಾಗಿ ಇಟ್ಟುಕೊಂಡಿದೆ. ನಮ್ಮ ಜಮಿನ್‌ದಾರರು ತಮ್ಮ ಇಂದಿನ ವಿರೋಧಕ ವಾತಾವರಣದ ಹೊಣೆಯನ್ನು ಯಾವುದೇ ವ್ಯಕ್ತಿಯ ಇಲ್ಲವೆ ರಾಜಕೀಯ ಪಕ್ಷದ ಮೇಲೆ ಹಾಕಿ ಸಂತಾಪಗೊಳ್ಳುತ್ತ ಕುಳಿತುಕೊಂಡರೆ, ಅದರಿಂದ ಅವರಿಗೂ ಹಿತವಿರದು; ರಾಷ್ಟ್ರದ ಸುಖ-ಶಾಂತಿಗೂ ಸಹಕಾರಿಯಾಗದು. ಆದುದರಿಂದ ಜಮಿನುದಾರರೂ ಇಂದು ವಿವೇಕದಿಂದ ವಿಚಾರ ಮಾಡಿ ನೋಡಬೇಕು.

— ಸಂಪಾದಕರು.

ನಾಡನಡೆ

(ಕಾಲಭೈರವ)

★

ಕನ್ನಡ ಹಿರಿಯರಿಬ್ಬರಿಗೆ ಜನತೆಯ ಮನ್ನಣೆ

೧

ಕಳೆದ ತಿಂಗಳ ೬ನೆಯ ತಾರೀಖಿಗೆ, ನಮ್ಮ ನಾಡಿನ ಹಿರಿಯ ಸಾಹಿತ್ಯಿಕರಾದ **ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರ್** ಅವರಿಗೆ ೬೦ ವರ್ಷಗಳು ತುಂಬಿ ೬೧ನೆಯ ವರ್ಷಕ್ಕೆ ಮೊದಲಾಯಿತು. ಸಾಂಪ್ರದಾಯಿಕವಾದ ಷಷ್ಟ್ಯಬ್ದಪೂರ್ತಿ ಶಾಂತಿಯ ಮಹೋತ್ಸವವನ್ನು ಶ್ರೀ. ಮಾಸ್ತಿಯವರು, ತಿರುಪತಿಯ ಶ್ರೀ. ವೆಂಕಟೇಶನ ಸನ್ನಿಧಿಯಲ್ಲಿ ಜರುಗಿಸಿದರಲ್ಲದೆ, ಕನ್ನಡನಾಡಿನ ಕೆಲವೊಂದು ಎಡೆಗಳಲ್ಲಿ ಈ ೬೧ನೆಯ ಹುಟ್ಟುಹಬ್ಬದ ನಿಮಿತ್ತವಾಗಿ ಶ್ರೀ. ಮಾಸ್ತಿಯವರಿಗೆ ಆಯುರಾರೋಗ್ಯಗಳನ್ನು ಹಾರಯಿಸುವ ಸಭೆಗಳು ನಡೆದುವು. ಅವರ ಅಭಿಮಾನಿಗಳು ಕೆಲವರು ಬೆಂಗಳೂರಲ್ಲಿ, ಎರಡು ದಿನಗಳವರೆಗೆ— ಈ ಹುಟ್ಟುಹಬ್ಬದ ಅಂಗವಾಗಿ— ಸಾಹಿತ್ಯಮಹೋತ್ಸವವನ್ನೇ ನಡೆಯಿಸಿದರು. ಈ ಎಲ್ಲ ಕಾರ್ಯಕಲಾಪ, ಕನ್ನಡ ಜನತೆಯಲ್ಲಿರುವ ರಸಾಭಿಲಾಷೆಯನ್ನೂ ಕೃತಜ್ಞತಾಬುದ್ಧಿಯನ್ನೂ ಪ್ರಕಟಿಸುವಂತಹದಾಗಿದೆ. ಇಂತಹ ಸಹೃದಯರು ಹೆಚ್ಚಿದ ನಾಡೂ ಧನ್ಯವೆನಿಸಬಲ್ಲದು; ಇಂತಹ ನಾಡಿಗರ ನಡುವೆ ಹುಟ್ಟಿದ ಸಾಹಿತ್ಯಿಕನ ಜೀವನವೂ ಧನ್ಯವೆನಿಸಬಹುದು.

ಸಂಪೂರ್ಣ ಕನ್ನಡನಾಡಾದ ಮೈಸೂರುಕರ್ನಾಟಕದಲ್ಲಿಯೂ ಕನ್ನಡ ಸಾಹಿತ್ಯ ಒಂದು ಕಾಲದಲ್ಲಿ ಉಪೇಕ್ಷೆಯ ಸ್ಥಾನವನ್ನೇ ಪಡೆದಿದ್ದಿತು. ಸಾಂಪ್ರದಾಯಿಕವಾಗಿ ಬಂದಿದ್ದ ಕನ್ನಡಸಾಹಿತ್ಯಕ್ಕೆ ಪದ್ಧತಿಯಂತೆ ರಾಜಮರ್ಯಾದೆ ಸಲ್ಲುತ್ತಿದ್ದಿತಾದರೂ, ಹೊಸ ಕಾಲದ ಜನತೆಯ ಹೃದಯವನ್ನದು ಆಕರ್ಷಿಸಲು ಅಸಮರ್ಥವಾಗಿದ್ದಿತು. ಈ ಕೊರತೆಯನ್ನು ಕಂಡು, ಕನ್ನಡಸಾಹಿತ್ಯದಲ್ಲಿ ಹೊಸ ರಸ-ಭಾವಗಳನ್ನು ತುಂಬುವ ನವೋದ್ಯಮಕ್ಕೆ ತೊಡಗಿದ— ಮೈಸೂರಿನ ಸುಶಿಕ್ಷಿತ ಹಿರಿಯರಲ್ಲಿ—ಮೊದಮೊದಲು ಮುಂದೆ ಬಂದವರು ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಎಂದರೆ ' ಶ್ರೀನಿವಾಸ ' ಅವರೂ ಒಬ್ಬರು.

ಶ್ರೀನಿವಾಸರು ಕನ್ನಡಸಾಹಿತ್ಯದಲ್ಲಿ ಮೊತ್ತಮೊದಲು ಕಾಣಿಸಿಕೊಂಡುದು ಸಣ್ಣಕತೆಗಾರರಾಗಿ. ಕನ್ನಡ ಜನತೆ ಹೆಸರನ್ನು ಕೂಡ ಕೇಳಿರಲಿಲ್ಲವಾದರೂ ' ಶ್ರೀನಿವಾಸ 'ರ ಸಣ್ಣಕತೆಗಳು ೩೦–೩೫ ವರ್ಷಗಳ ಹಿಂದೆ ' ಮಧುರವಾಣಿ ' ಮಾಸಪತ್ರಿಕೆಯಲ್ಲಿ ಪ್ರಕಟವಾಗಿ ಬಂದಾಗ, ಹೊಸರೀತಿಯನ್ನು ಬಯಸುತ್ತಿದ್ದ ಕನ್ನಡ ವಾಚಕರಿಗೆ ಅಮೃತೋದಯದ ಆನಂದವನ್ನು ಒದವಿಸಿದುವು. ಅವುಗಳ ಗುಣದ ಬೆಲೆಯನ್ನು ಅರಿಯದ ಸಾಂಪ್ರದಾಯಿಕರು ಅಂದು ಆ ಕತೆಗಳನ್ನು ಟೀಕಿಸಿದುದೂ ಉಂಟು. ಆದರೆ ಇಂದು ' ಶ್ರೀನಿವಾಸ 'ರ ಸಣ್ಣಕತೆಗಳನ್ನು ಮೆಚ್ಚದ ಸಹೃದಯ ಕನ್ನಡಿಗನು ದೊರೆಯಲಾರ. ಮೊದಲಿಗತನದಿಂದಲೂ ಕಥಾಗುಣದಿಂದಲೂ ಸಂಖ್ಯಾಬಾಹುಲ್ಯದಿಂದಲು ಮಾಸ್ತಿಯವರು, ಕನ್ನಡ ಸಣ್ಣಕತೆಗಾರರಲ್ಲಿ ಮೊದಲಿಗರಾಗಿಯೆ ನಿಲ್ಲಬಲ್ಲರು.

ಕತೆಗಾರಿಕೆಯೊಂದೇ ಅಲ್ಲದೆ ಮಾಸ್ತಿಯವರು, ಸಾಹಿತ್ಯನಿರ್ಮಿತಿಯ ಪ್ರಯೋಗವನ್ನು ವಿವಿಧಮುಖದಿಂದ ಮಾಡಿ ಕೃತಕಾರ್ಯರಾಗಿವರು. ಕವಿತೆ, ನಾಟಕ, ಕಾದಂಬರಿ, ವಿಮರ್ಶೆ, ಜೀವನಚರಿತ್ರೆ, ಪ್ರಾಚೀನ ಕಾವ್ಯರಹಸ್ಯ— ಒಂದೇ ಎರಡೇ ? ಸಾಹಿತ್ಯದ ಯಾವ ಅಂಗವನ್ನೂ ಮಾಸ್ತಿಯವರ ಸಿದ್ಧಹಸ್ತ ಸ್ಪರ್ಶಿಸದೆ ಬಿಟ್ಟಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯೆನಿಸದು. ಈ ನಿರ್ಮಿತಿಯ ಕೆಲಸದೊಂದಿಗೆ ಈಗ ' ಜೀವನ ' ಮಾಸಪತ್ರಿಕೆಯ ಸಂಪಾದನೆಯ ಕೆಲಸವನ್ನೂ ಕೈಕೊಂಡಿದ್ದಾರೆ.

ಸಾಮಾಜಿಕ ಧಾರ್ಮಿಕ ವಿಚಾರಗಳ ದೃಷ್ಟಿಯಿಂದ ನೋಡಿದರೆ ಮಾಸ್ತಿಯವರು ಹಳಬರೂ ಅಲ್ಲ; ಹೊಸಬರೂ ಅಲ್ಲ. ಸಮನ್ವಯವಾದಿಗಳು. ಎಂತಲೇ ಹೊಸಬರಿಗೆ ಹಳೆಯರಾಗಿ ತೋರುತ್ತಾರೆ; ಹಳೆಯವರಿಗೆ ಹೊಸಬರಾಗಿ ತೋರುತ್ತಾರೆ. ಎಂತಲೇ ದೋಷೈಕದೃಷ್ಟಿಯವರಾದ ಎರಡು ವರ್ಗದವರ ಟೀಕೆಗೂ ಗುರಿಯಾಗುತ್ತಾರೆ; ಗುಣೈಕದೃಷ್ಟಿಯವರಾದ ಎರಡು ವರ್ಗದವರಿಂದಲೂ ಹೊಗಳಿಕೆಯನ್ನೂ ಪಡೆಯುತ್ತಾರೆ ಮಧ್ಯಮಮಾರ್ಗವೆ ಜೀವನಕ್ಕೆ ವಿಧಾಯಕವೆಂಬುದು ಶಾಶ್ವತನಾದರೂ, ಪಕ್ಷಾಭಿನಿವೇಶದ ದುಡುಕು-

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ.ವಿ. ಪಂಡಿತರ

ಮನೋಹರ { ನೀಲಿ } ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ನುಣುಪಾಗಿ ಬೆಳೆಸುತ್ತದೆ. ಬಾಲ ನರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ { ಜೀವನಿ } ಟಾನಿಕ್.

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾನ್ನಿಧ್ಯಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ { ಪಂಚಪಟಿ } ರಾಮಬಾಣ.

ಸದ್ವೈದ್ಯ ಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರ್ಖಾನೆ.

ಜನರಿಂದ ಅಂತಹವರು ಬೈಗುಳನ್ನು ತಿನ್ನಲೇಬೇಕಾಗುವುದು. ಹಾಗೆ ಶ್ರೀ. ಮಾಸ್ತಿಯವರೂ ತಿಂದಿದ್ದರೆ ಅದಕ್ಕಾಗಿ ಯಾರೂ ಅಚ್ಚರಿ ಪಡಬೇಕಾಗಿಲ್ಲ.

ಶ್ರೀ. ಮಾಸ್ತಿಯವರು ಆದರ್ಶವಾದಿಗಳು, ಭಾವುಕರು. ದೇವರ ವಿಷಯದಲ್ಲಿ ಸಂಪೂರ್ಣ ಶ್ರದ್ಧೆಯುಳ್ಳವರು. ಅದರಂತೆಯೇ ಲೌಕಿಕ ವಿಚಾರವನ್ನೂ ಚೆನ್ನಾಗಿ ಅರಿತವರು. ಅಂತೆಯೇ ಕರ್ನಾಟಕದ ಪ್ರೀತಿ, ಭಾರತದ ರಾಷ್ಟ್ರಾಭಿಮಾನಗಳ ಮಹತ್ತ್ವ ಎಂತಹದೆಂಬುದನ್ನೂ ಅರಿತು ಆಚರಿಸುವವರು. ಮಾನವತೆಯ ಶ್ರೇಷ್ಠತೆಯ ಮಾತಂತೂ ಅವರ ಸಾಹಿತ್ಯದ ಹಾಸು-ಹೊಕ್ಕಾಗಿದೆ. ಅರುವತ್ತು ವರ್ಷದ ಮುಪ್ಪಿನವರಾದರೂ ತರುಣರಲ್ಲಿ ಕಂಡು ಬಾರದ ಕಾರ್ಯೋತ್ಸಾಹ ಶ್ರೀಯುತರಲ್ಲಿದೆ. ಕನ್ನಡಿಗರಲ್ಲಿ ಆಳವಾದ ಸಂಸ್ಕೃತಿಯನ್ನು ಅಭ್ಯಾಸಿಸಿದವರು ಬೆರಳೆಣಿಕೆಯ ಜನರು. ಅಂತಹರಲ್ಲಿ ಮಾಸ್ತಿಯವರ ಸ್ಥಾನ ನೊದಮೊದಲು ಬರುವಂತಹದು.

ಕನ್ನಡಿಗರು ಶ್ರೀ. ಮಾಸ್ತಿಯವರಿಂದ ಬಯಸಬಹುದಾದ ಸಾಂಸ್ಕೃತಿಕ ಕಾರ್ಯ ತುಂಬ ಇದೆ. ಅದನ್ನು ನೆರವೇರಿಸುವ ಇಚ್ಛೆಯೂ ಸಾಮರ್ಥ್ಯವೂ ಶ್ರೀ. ಮಾಸ್ತಿಯವರಲ್ಲಿ ಸಾಕಷ್ಟು ಇವೆ. ನಮ್ಮೆಲ್ಲರ ಭಾಗ್ಯವಿಧಾತ, ಅವರಿಗೆ ಆಯುರಾರೋಗ್ಯಗಳನ್ನು ದಯಪಾಲಿಸಿ, ಅವರಿಂದ ಕನ್ನಡಿಗರಿಗಾಗಿ ಒಳ್ಳೊಳ್ಳೆಯ ಕೆಲಸಮಾಡಿಸಬೇಕು; ಶ್ರೀ. ಮಾಸ್ತಿಯವರು ಬಹುಕಾಲ ಬಾಳಿ ನಾಡಿಗರ ಬದುಕಿನ ಬೆಳಕಿಗೆ ಕಾರಣರಾಗಬೇಕು— ಎಂಬುದೇ ನಮ್ಮ ಹಾರಯಿಕೆ.

* * * *

೨

ಕನ್ನಡ ಜನತೆಯಿಂದ ಮನ್ನಣೆ ಪಡೆದ ಇನ್ನೊಬ್ಬ ಹಿರಿಯರೆಂದರೆ ನಮ್ಮ ರಾಜಕಾರಣಿಗಳಲ್ಲಿ ಹಿರಿಯರಾಗಿರುವ **ಶ್ರೀಮಾನ್ ಗಂಗಾಧರರಾವ್ ದೇಶಪಾಂಡೆಯವರು.** ಕಳೆದ ಜೂನ್ ೨೧ನೆಯ ದಿನಾಂಕ ಬೆಳಗಾಂವಿಯಲ್ಲಿ ಇವರ ಆನೆಯ ಹುಟ್ಟು ಹಬ್ಬದ ಸಮಾರಂಭ ಸಾರ್ವಜನಿಕವಾಗಿ ನಡೆಯಿತು. ಸಮಾರಂಭಕ್ಕೆ ಹಿರಿಯರಾಗಿ ಕೇಂದ್ರ ಶಾಸನಸಭೆಯ ಅಧ್ಯಕ್ಷರಾದ ಶ್ರೀಮಾನ್ ಮಾವಳಣಕರರು ದಯಮಾಡಿಸಿದ್ದರು. ಕರ್ನಾಟಕದ ಹಿರಿಯ ರಾಜಕಾರಣಿಗಳೊಬ್ಬರ ಸಮಾರಂಭದಲ್ಲಿ ತಾವೂ ಅವಶ್ಯವಾಗಿ ಭಾಗವಹಿಸಬೇಕೆಂದೇ ಮಾನ್ಯಮಂತ್ರಿ ಶ್ರೀ ದಿವಾಕರರೂ ಆಗಮಿಸಿದ್ದರು. ಉತ್ಸವದ ಅಂಗವಾಗಿ ಏರ್ಪಟ್ಟ ಸಾರ್ವಜನಿಕ ಸಭೆಯಲ್ಲಿ, ಶ್ರೀಮಾನ್ ಗಂಗಾಧರರಾಯರ ಕಾರ್ಯವನ್ನೂ ವ್ಯಕ್ತಿತ್ವವನ್ನೂ ಪುರಸ್ಕರಿಸಿ, ಪ್ರಶಂಸಿಸಿ, ಹಲವು ಮುಂದಾಳುಗಳು ಮಾತನಾಡಿದರು; ರಾಯರಿಗೆ ಆಯುರಾರೋಗ್ಯಭಾಗ್ಯಗಳನ್ನು ಕೋರಿದರು.

ಶ್ರೀಮಾನ್ ಗಂಗಾಧರರಾಯರು ಕರ್ನಾಟಕದ ಸಾಂಸ್ಕೃತಿಕ ಕ್ಷೇತ್ರದಲ್ಲಿ ಹೇಳಿಕೊಳ್ಳುವಂತಹ ಯಾವ ಕಾರ್ಯವನ್ನೂ ಮಾಡಿದವರಾಗಿರದಿದ್ದರೂ, ಕರ್ನಾಟಕದಲ್ಲಿ ರಾಜಕೀಯ ಕಾರ್ಯಕ್ಷೇತ್ರವನ್ನು ಮೊತ್ತಮೊದಲು ಆರಂಭಿಸಿದ ಸಂಪೂರ್ಣ ಶ್ರೇಯಸ್ಸು ಇವರಿಗೇ ಸಲ್ಲುವುದು. ಅಚ್ಚಕನ್ನಡ ಮನೆತನದಲ್ಲಿ ಹುಟ್ಟಿದವರಾದರೂ ಪರಿಸ್ಥಿತಿಯ ಕೈಯಲ್ಲಿ ಸಿಕ್ಕಿ, ರಾಯರು ಮರಾಠಿಯಲ್ಲೆ ಶಿಕ್ಷಣ ಪಡೆಯಬೇಕಾಯಿತು. ಉಚ್ಚ ಶಿಕ್ಷಣ ಪಡೆಯಲಿಕ್ಕೆ ಅಂದು ಕನ್ನಡನಾಡಿನಲ್ಲಿ ಅನುಕೂಲಾವಕಾಶವೇ ಇರಲಿಲ್ಲವಾದುದರಿಂದ, ಮಹಾರಾಷ್ಟ್ರದ ಕೇಂದ್ರನಗರವಾದ ಪುಣೆಯಲ್ಲಿದ್ದುಕೊಂಡು ಕಾಲೇಜಿನ ಶಿಕ್ಷಣ ಪಡೆಯಬೇಕಾಯಿತು. ಆ ಕಾಲದಲ್ಲಿ ಪುಣೆಯ ವಾತಾವರಣ, ಸಾಮಾಜಿಕ ದೃಷ್ಟಿಯಿಂದಲೂ ರಾಜಕೀಯ ದೃಷ್ಟಿಯಿಂದಲೂ ಆಕರ್ಷಕವಾದುದಾಗಿದ್ದಿತು. ರಾಜಕೀಯ ಪ್ರಪಂಚದಲ್ಲಿ ದಿ. ಲೋಕಮಾನ್ಯ ತಿಲಕ, ದಿವಂಗತ ಗೋಪಾಲ ಕೃಷ್ಣ ಗೋಖಲೆಯವರಂತಹ ಪ್ರಭಾವಶಾಲಿ ಮುಂದಾಳುಗಳು; ಸಾಮಾಜಿಕ ಕಾರ್ಯಕ್ಷೇತ್ರದಲ್ಲಿ ದಿ. ಆಗರಕರರಂತಹ ತೇಜಸ್ವಿ ಧುರೀಣರು. ಇವರೆಲ್ಲರ ಕಾರ್ಯದ ಪರಿಣಾಮದಿಂದ ಪುಣೆಯು ಚೈತನ್ಯಪೂರ್ಣವಾಗಿದ್ದಿತು. ರಾಯರ ತರುಣ ಮನಸ್ಸು ಇಲ್ಲಿಯ ಚೈತನ್ಯವನ್ನೇ ತುಂಬಿಕೊಂಡಿತು. ಆದುದರಿಂದಲೇ ಬೆಳಗಾಂವಿ-

(೭೮ನೇ ಪುಟ ನೋಡಿರಿ.)

ಆದರ್ಶ ?!

(ಸಣ್ಣ ಕತೆ)

ಶ್ರೀ. ಸಗರ ಕೃಷ್ಣ ಇನಾಮದಾರ್, ಶಹಪುರ

卐

ಹಿಂದೆ 'ಮಂಡೆ ಬೋಳಾದವರ ಕಂಡು ನಂಬಲು ಬೇಡ' ಎಂದು ಸರ್ವಜ್ಞ ಕವಿ ಹೇಳಿದ್ದಾನೆ; ಇಂದು ಅವನು ಬದುಕಿದ್ದರೆ 'ಖಾದಿ ಹಾಕುವರೆಲ್ಲ ಸಾಧುಗಳು ಎನಬೇಡ' ಎಂದು ಹೇಳಬಹುದಾಗಿತ್ತು. 'ಕಡುಗಲಿ' ಮೋಹನರಾಯನೂ ಇಂತಹ ಸೋಗಿನ ಖಾದೀಧಾರಿ!

卐

ಅಂದಿನ ಆ ಸನ್ನಿವೇಶ ನನ್ನನ್ನು ಇಂದೆಯೂ ಬಾಧಿಸುತ್ತಲಿದೆ. ನಾನೊಮ್ಮೆ ಕಾಮಪುರಕ್ಕೆ ಹೋಗಿದ್ದೆ. ಕಾಮಪುರದ ಪ್ರತಿಷ್ಠಿತರಲ್ಲಿ ಮೋಹನರಾಯರು ಅಗ್ರಗಣ್ಯರು. ಅವರು ಆ ಊರಿನ ಶ್ರೇಷ್ಠ ಮುಂದಾಳುಗಳಷ್ಟೇ ಅಲ್ಲದೆ, ಸಾಹಿತ್ಯಪ್ರೇಮಿಗಳೂ ಆಗಿದ್ದರು. ಒಂದೆರಡು 'ಪ್ರೇಮಗೀತೆ' ಗಳನ್ನೋ 'ಪ್ರಣಯ'ದ ಕತೆಗಳನ್ನೋ ಬರೆದು, ಸುತ್ತಲಿನ ಜನರಿಂದ 'ಉದ್ದಾಮ ಸಾಹಿತಿ' ಗಳೆಂದೂ ಹೊಗಳಿಸಿಕೊಂಡಿದ್ದರು.

ಮೋಹನರಾಯರಿಗೆ ಹೈದರಾಬಾದಿನ 'ಬಾರ್ಡರ್ ಆ್ಯಕ್ಶನ್' ಕಾಲಕ್ಕೆ, ಅವರ ಸಂಗಡಿಗರಿಂದ 'ಕಡುಗಲಿ' ಎಂಬ ಬಿರುದು ಸಿಕ್ಕಿತ್ತು. ಆ ಕಾಲಕ್ಕೆ ಅವರು ಅಂತಹ ಯಾವ ಕಲಿತನ ತೋರಿಸಿದ್ದರೋ ಎಂಬುದು ಗೊತ್ತಿಲ್ಲವಾದರೂ, ಒಂದು ಸಾಹಸವನ್ನು ಅವರು ಮಾಡಿದ್ದುದು ಮಾತ್ರ ನನಗೆ ಅಲ್ಲಿಗೆ ಹೋದಾಗ ತಿಳಿದುಬಂತು.

ಕಡುಗಲಿ ಮೋಹನರಾಯರು ಬಿ. ಎ. ಓದುತ್ತಿರುವಾಗಲೆ ವಿಶ್ವವಿದ್ಯಾನಿಲಯಕ್ಕೆ ಶರಣು ಹೊಡೆದು, ರಾಜಕೀಯ ಆಂದೋಲನದಲ್ಲಿ ದುಮುಕಿದ್ದರಂತೆ! ಅವರಿಗೆ ಹೈದರಾಬಾದಿನಲ್ಲಿ ನಡೆದ ಪಾಶವೀಕೃತ್ಯಗಳು ಸರಿಬಾರದುದರಿಂದ, ಒಂದೆರಡು ಸಲ ವಿರೋಧವನ್ನು ಪ್ರಕಟಿಸಿ ಸೆರೆಮನೆಯನ್ನೂ ಕಂಡಿದ್ದರಂತೆ! ಸೆರೆಮನೆಯಲ್ಲಿದ್ದಾಗಿನ ಅವರ ಅನುಭವದ ಮೇಲಿಂದ, ಹುರುಪಿನ ಕಾರ್ಯಕರ್ತರು ಜೈಲಿನಲ್ಲಿ ಕೊಳೆಯುವುದರಿಂದ ರಾಷ್ಟ್ರಕ್ಕೆ ಹಿತವಾಗದೆಂದೆನಿಸಿ, ಬಾರ್ಡರ್ ಮೇಲೆ ತಮ್ಮ ಸೇವೆ ಸಲ್ಲಿಸಲು ಹೋಗಿದ್ದರಂತೆ! .... ಅಂತೂ ಈಗವರು ಹೈದರಾಬಾದಿನ ಮುಂದಾಳುಗಳಲ್ಲೊಬ್ಬರು. ಖಾದಿಯ ಬಟ್ಟೆ ಧರಿಸಿ ಒಂದು ಬೆಡಗಿನಿಂದ ಹೊರಹೊರಟಾಗ, 'ನಿಜವಾಗಿ ಮುಂದಾಳುಗಳಿವರು' ಎನ್ನುವಷ್ಟು ಮೋಹಗೊಳಿಸುವಂತಿದೆ ಇವರ ದೇಹಯಷ್ಟಿ! ಮುಖದ ಗಾಂಭೀರ್ಯ!!

ಇವರು ಬಿ. ಎ. ಓದುವಾಗ ಕನ್ನಡವನ್ನು ಐಚ್ಛಿಕವಾಗಿ ತೆಗೆದುಕೊಂಡದ್ದಕ್ಕೆ, ಕನ್ನಡದ ಮೇಲೆ ಇವರಿಗೆ ತುಂಬ ಪ್ರೇಮ. ರಾಜಕಾರಣದಲ್ಲಿ ಮುಂಗೈಜೋರಿನಿಂದ ಮುಂದಾಳುತನ ಗಳಿಸಿಕೊಂಡಂತೆ, ಸಾಹಿತ್ಯಪ್ರಪಂಚದಲ್ಲಿಯೂ ಸಂಘ-ಸಂಸ್ಥೆಗಳ ಮುಖಾಂತರ ಮರ್ಯಾದೆಯ ಸ್ಥಾನ ಪಡೆದುಕೊಳ್ಳಬೇಕೆಂಬ ಹಂಬಲ ಇವರಿಗೆ. ಅದರ ಫಲವಾಗಿಯೇ ಕರ್ನಾಟಕ ಸಂಘದ ಪರವಾಗಿ 'ವಸಂತ ಸಾಹಿತ್ಯೋತ್ಸವ' ವನ್ನು ಹೂಡಿದ್ದುದು.

ನಾನು ಕಾಮಪುರಕ್ಕೆ ಹೋದುದು ಈ ಉತ್ಸವದ ನಿಮಿತ್ತವಾಗಿ. ಮೂರು ದಿನಗಳ ವರೆಗೂ ನನ್ನ ಭಾಷಣ, ಕವಿತಾವಾಚನ ಮುಂತಾದ ಕಾರ್ಯಕ್ರಮಗಳನ್ನು ಇಟ್ಟಿದ್ದರು. ನಾನು ಅತಿಥಿಯಾಗಿ ಉಳಿದದ್ದು ಈ 'ಕಡುಗಲಿ' ಮೋಹನರಾಯರಲ್ಲಿಯೇ ಎಂದು ಬೇರೆ ಹೇಳಬೇಕಾದುದೇನಿಲ್ಲ. ಅತಿಥಿಸೇವಾನಿರತರೆಂದು ತೋರ್ಪಡಿಸಲೋ ಏನೋ, ಅವರು ನನ್ನನ್ನಗಲಿ ಇರುತ್ತಿರಲಿಲ್ಲ. ನಾನು ಹೊರಹೊರಡುವುದು ಕಾರ್ಯಕ್ರಮದ ಕಾಲಕ್ಕಷ್ಟೆ! ಕಾರ್ಯಕ್ರಮ ಮುಗಿದ ಕೂಡಲೆ, ನನ್ನನ್ನು ಕಾಣಲು ಬಯಸುವವರೊಡನೆ ಒಂದೆರಡು ಯೋಗಕ್ಷೇಮದ ಮಾತುಗಳನ್ನಾಡುತ್ತಿರುವಾಗಲೆ, "ತಮಗೆ ಆಯಾಸವಾಗಿದೆ; ಮನೆಗೆ ಹೋಗೋಣ." ಎಂದು ಎಳೆದುಕೊಂಡು ಹೋಗಿಯೇ ಬಿಡುತ್ತಿದ್ದರು. ಅಲ್ಲಿದ್ದ ಎರಡು ದಿನಗಳವರೆಗೂ, ಉಳಿದವರೊಡನೆ ವಿಶೇಷ ಸಂಪರ್ಕ ಬೆಳೆಯಿಸಲು ನನಗೆ ಅನುಕೂಲ ಒದಗಲಿಲ್ಲ. ಒಬ್ಬಿಬ್ಬರು ಬಂದರೂ, ಔಪಚಾರಿಕವಾದ ಮಾತುಗಳು ಜರುಗುತ್ತಿದ್ದುವೇ ಹೊರತು, ಹೃದಯ ಬಿಚ್ಚಿ ಮಾತನಾಡುವ ಸುಯೋಗ ದೊರೆಯುತ್ತಿರಲಿಲ್ಲ. ಮುಕ್ತಹೃದಯಿಯಾದ ನನಗೆ ಈ ಬಾಳು ಬೇಸರವಾಗಿತ್ತಾದರೂ, ಮೋಹನರಾಯರ ದಾಕ್ಷಿಣ್ಯಕ್ಕೆ ಸಹಿಸಿಕೊಂಡಿರಲೇಬೇಕಾಗಿತ್ತು.

ಮೂರನೆಯ ದಿನ ಮುಂಜಾವಿನಲ್ಲಿ, ಅವಸರದ ಕೆಲಸದ ನಿಮಿತ್ತ ಮೋಹನರಾಯರಿಗೆ ಸಮೀಪದ ಹಳ್ಳಿಗೆ ಹೋಗಬೇಕಾಗಿ ಬಂತು. ನನ್ನನ್ನಗಲಿರುವುದು ಅವರಿಗೆ ಬೇಡವೆನಿಸುತ್ತಿತ್ತು; ಆದರೂ ಅದು ಅನಿವಾರ್ಯವಾಗಿತ್ತು. ಏನೋ ವಿಚಾರ ಹಾಕಿ, "ತಾವೂ ನನ್ನ ಸಂಗಡ ಬರುತ್ತೀರಾ? ಸ್ವಲ್ಪ ತಿರುಗಾಡಿಕೊಂಡು ಬರೋಣವಂತೆ; ಅಷ್ಟೇನು ದೂರದ ಹಳ್ಳಿಯಲ್ಲ. ಬೇಗ ಬಂದು ಬಿಡುವೆವು!" ಎಂದರು ರಾಯರು. ನನಗೆ ಅವರೊಡನೆಯೇ ಇದ್ದು ಬೇಸರಿಕೆ ಬಂದಿತ್ತಾದ್ದರಿಂದ, ಏನೋ ಒಂದು ಕುಂಟುನೆವ ಹೇಳುತ್ತ "ನನಗೆ ಬಿಸಿಲು ಒಗ್ಗದು. ವಸಂತಕಾಲದ ಕೊನೆಯ ಈ ಪ್ರಖರತೆಗೆ ನನ್ನ ಹೃದಯ ಪಂಜರವನ್ನೊಡ್ಡುವಷ್ಟು ಸಾಮರ್ಥ್ಯ ನನ್ನಲ್ಲಿಲ್ಲ. ಒಂದು ವೇಳೆ ಜಾಗೆ ಮಾಡಿದ್ದಾದರೆ ನನ್ನ ಇಂದಿನ ಭಾಷಣಕ್ಕೆ

ತಳೆಕಟ್ಟಲಿಕ್ಕಿಲ್ಲ." ಎಂದುಕೊಂಡು ಪಾರಾದೆ. ಅವರೂ ಉಪಾಯ-ಗಾಣದೆ ಕಾಲ್ತೆಗೆದರು.

ಪ್ರಭಾತಕಾಲದ ತಂಗಾಳಿಯಲ್ಲಿ ತಿರುಗಾಡುವುದು ನನ್ನ ದಿನದ ರೂಢಿಯಾಗಿದ್ದಿತು. ಅರ್ಧಗಂಟೆ ಕಾಲ ಬಯಲು ಪ್ರದೇಶದ ಶುದ್ಧ ಹವೆ ಸೇವಿಸುವುದರಿಂದ ನನಗೆ ಅದೊಂದು ತರದ ಚೈತನ್ಯ ಬಂದಂತಾಗುತ್ತಿತ್ತು. ಮೋಹನರಾಯರು ಹೋದ ಮರುಕ್ಷಣದಲ್ಲಿಯೇ, ನಾನೂ ಸ್ವಲ್ಪ ಅಡ್ಡಾಡಿಕೊಂಡು ಬರಲು ಹೊರಟೆ. ಮೊದಲು ರಾಜಮಾರ್ಗದ ಗುಂಟ ಹೋಗುವ ಮನಸ್ಸಾದರೂ, ವಾಹನಗಳ ಓಡಾಟದಿಂದೇಳುವ ಧೂಳು, ದುಮ್ಮುಸ್ಸು- ನೆನೆದು-ಕೊಂಡು, ಒಂದು ಸಣ್ಣ ಕವಲುದಾರಿ ಹಿಡಿದು ಹೊರಟೆ.

ನಾಲ್ಕಾರು ಫರ್ಲಾಂಗು ಹೋಗುವುದರೊಳಗಾಗಿ ಒಂದು ಸುಂದರ ತೋಟ ಕಾಣಿಸಿತು. ವಿವಿಧ ಫಲ-ಪುಷ್ಪಗಳಿಂದಲಂಕೃತ-ವಾದ ಆ ತೋಟ ರಮಣೀಯವಾಗಿದ್ದಿತು. ಸೌಂದರ್ಯಗ್ರಾಹಿ-ಯಾದ ನನ್ನ ಭಾವನಾಪ್ರಧಾನ ಮನಸ್ಸು ಅದರೊಳಕ್ಕೆ ಹೊಗಲು ಹಾತೊರೆದರೆ ಆಶ್ಚರ್ಯವೇನು ? ಅಂತೂ ಬಂಧನದಿಂದ ಮುಕ್ತಿ-ಹೊಂದಿದ ಹಕ್ಕಿಯಂತೆ ನಾನು ಒಳನುಗ್ಗಿದೆ. ಆ ತೋಟದಲ್ಲಿ, ವಸಂತಕಾಲದಲ್ಲಿ ಬೇಕಾದ ಎಲ್ಲ ಫಲ-ಪುಷ್ಪಗಳಿಂದಲೂ ಗಿಡ-ಮರಗಳು ತುಂಬಿಕೊಂಡಿದ್ದುವು. ಪಕ್ಷಿನಿಕರವು ಬಾಲಾರ್ಕನನ್ನು ಸ್ವಾಗತಿಸುತ್ತಿರುವುವೋ ಎಂಬಂತೆ ಹರ್ಷೋದ್ಗಾರಗಳನ್ನು ತೆಗೆ-ಯುತ್ತಲಿದ್ದುವು. ಒಂದು ಕೋಗಿಲೆಯೂ ಸುಮಧುರ ಕಂಠದಿಂದ ಹಾಡುತ್ತಿತ್ತಾದರೂ ನಡು-ನಡುವೆ ಸ್ವಲ್ಪ ದನಿ ಕುಗ್ಗಿಸುತ್ತಿತ್ತು. ಅದೇಕೆಂಬುದರ ಸರಿಯಾದ ಅರ್ಥ ನನಗಾಗದಿದ್ದರೂ, ಒಂದು ಹೃದಯೋದ್ವಾವಕ ನೋಟದ ಕಲ್ಪನೆಯನ್ನು ಮಾತ್ರ ನನ್ನೆದುರಿಗೆ ತಂದೊಡ್ಡುತ್ತಲಿದ್ದಿತು. ಭಾವನಾಪರವಶನಾಗಿ ಮುಂದಕ್ಕೆ ಸಾಗು-ತ್ತಿರುವಾಗಲೆ, ಒಂದು ಹೆಣ್ಣಿನ ಅಳುವ ಧ್ವನಿ ನನ್ನನ್ನು ಎಚ್ಚರಿ-ಸಿತು 'ಇಂತಹ ಮಂಗಲಪ್ರಭಾತದಲ್ಲಿ ಇದೆಲ್ಲಿಯ ಅಮಂಗಲ ಸ್ವರ! ' ಎಂದುಕೊಂಡು, ಅರ್ಧ ಧೈರ್ಯ— ಅರ್ಧ ಗಾಬರಿಯಲ್ಲಿ, ಮುಂದೆ ಚಾಚಿಕೊಂಡು ಬಂದ ಬಳ್ಳಿ-ಕಂಟಿಗಳನ್ನು ಹಿಂದಕ್ಕೆ ತಳ್ಳುತ್ತ ಇನ್ನಿಷ್ಟು ದೂರ ಹೋದೆ. ಬಾವಿಯ ಹತ್ತಿರದಲ್ಲಿ ಒಂದು ಪುಟ್ಟ ಮನೆ ಕಂಡಿತು. ಅದು ಆಕೃತಿಗೆ ತಕ್ಕಂತೆ ಸುಂದರವೂ ಆಗಿದ್ದಿತು. ನನಗದು ಮೊದಲು ವಿಲಾಸಿಗಳ 'ವಿಲಾಸಗೃಹ' ಎಂಬಂತೆ ಗೋಚರಿಸಿತಾದರೂ, ಅದರ ಹಿಂದೆ ಯಾವುದೋ ಒಂದು ರುದ್ರ-ಭೀಷಣ ಚಿತ್ರ ಮರೆಯಾಗಿದೆ— ಎಂಬುದರ ಕಲ್ಪನೆ-ಯಾಯಿತು. ಮೊದ-ಮೊದಲು ಅದರ ಸಮೀಪ ಹೋಗಲು ಮನಸ್ಸು ಸ್ವಲ್ಪ ಹಿಂಜರಿಯಿತು; ಆದರೆ, ಆ ಅಳುವ ಧ್ವನಿ ನನ್ನನ್ನು ಬಹುಕಾಲ ದೂರ ನಿಲ್ಲಗೊಡಲಿಲ್ಲ. ಪರ್ಯಾಯವಾಗಿ ಬಾಗಿಲ ಮುಂದೆ ಬಂದು ನಿಂತೆ. ನನ್ನನ್ನು ಕಂಡೊಡನೆಯೆ ಒಳಗೆ ಒಂದು ಮೂಲೆಯಲ್ಲಿ ಅಳುತ್ತ ಕುಳಿತಿದ್ದ ಆ ಹೆಂಗುಸು ಗಾಬರಿ-ಗೊಂಡವಳಂತೆ ಎದ್ದು ಒಳಕೋಣೆ ಹೊಕ್ಕಳು; ನಾನು ನಿರುತ್ಸಾಹಿ-ಯಾದೆ. ಹೊಸಬನಾದ ನನ್ನನ್ನು ಕಂಡು ಅವಳು ಸಂಕೋಚ-ಪಟ್ಟುಕೊಂಡಿರಬೇಕೆಂದು, " ನಾನೇನು ನಿನಗೆ ಅಹಿತವನ್ನು ಬಯಸಲು ಬಂದವನಲ್ಲ ; ನಿನ್ನ ಅಳುವನ್ನು ಕೇಳಿ ಎದೆ ಕರಗಿ-ದವನಾಗಿ ಬಂದಿದ್ದೇನೆ. " ಎಂದು ನುಡಿದೆ. ಅವಳಿಗೆ ಏನೆನಿಸಿ-ತೇನೋ ! ಸುಮ್ಮಗಿದ್ದುಬಿಟ್ಟಳು. ಅವಳಾರೆಂದೂ ಅಳುವ ಕಾರಣವೇನೆಂದೂ ತಿಳಿದುಕೊಳ್ಳುವ ಆತುರ ನನಗೆ. ಅವಳ ಮಾನವನ್ನೊಲಿಸಲು ಮತ್ತಾವ ಉಪಾಯ ಕೈಕೊಳ್ಳಬೇಕೆಂಬು-ದನ್ನು ಯೋಚಿಸಿಯೇ ಯೋಚಿಸಿದೆ. ಕೊನೆಗೆ, "ಅಮ್ಮಾ ! ನಾನು ನಿನ್ನ ಹಿತಚಿಂತಕನೆಂದು ತಿಳಿ ! ನಿನ್ನ ದುಃಖದಲ್ಲಿ ನಾನೂ ಭಾಗಿಯಾಗಲು ಬಂದಿದ್ದೇನೆ. ನಿನ್ನ ದುಃಖದ ಕಾರಣವನ್ನಾ-ದರೂ ತಿಳಿಸು ! " ಎಂದು ಮತ್ತೆ ಆತ್ಮೀಯಭಾವದಿಂದ ನುಡಿದೆ. ಅವಳಿಗೆ ಸ್ವಲ್ಪ ಧೈರ್ಯ ಬಂದಂತಾಗಿರಬಹುದು. ಅಳುವುದನ್ನು ನಿಲ್ಲಿಸಿ ಎರಡು ಹೆಜ್ಜೆ ಮುಂದೆ ಬಂದು, "ನನ್ನ ಕೊರಳಾಣೆಯೆ ? ನನ್ನನ್ನು ನೀವು ವಂಚಿಸುವುದಿಲ್ಲವೆ ? " ಎಂದು ಸಂದಿಗ್ಧಭಾವ-ದಿಂದಲೇ ಕೇಳಿದಳಾಕೆ. " ಇಲ್ಲವಮ್ಮಾ, ನನಗೂ ನಿನ್ನಂತಹ ಹೆಣ್ಣುಮಕ್ಕಳಿದ್ದಾರೆ ಮನೆತುಂಬ ! " ಎಂದೆ. ಅವಳಿಗೆ ಮತ್ತಿಷ್ಟು ಧೈರ್ಯ ಬಂದಿತು. "ಸ್ವಲ್ಪ ಒಳಕ್ಕೆ ಬನ್ನಿ. ಹೊರಗಿನಿಂದ ಯಾರಾದರೂ ನಮ್ಮನ್ನು ನೋಡಿದರೆಂದರೆ......." ಎನ್ನುವಷ್ಟ-ರೊಳಗಾಗಿ ಕಂಠಬಿಗಿದು ಮಾತು ಹೊರಡಲಿಲ್ಲ. ಅವಳ ಮುಖದ ಮೇಲೆ ಅರ್ಧಗಾಬರಿ, ಅರ್ಧಭಯ ಒಡಮೂಡಿತ್ತು. ನನಗೆ, 'ಈ ಹೆಣ್ಣುಮಗಳು ಒಬ್ಬಳೇ....ಇಲ್ಲೇಕೆ ? ಇದೇನು ಒಗಟು ? ' ಎನ್ನುವಂತಾಗಿ, ಆಪಾದಮೌಳಿಪರ್ಯಂತ ಅವಳನ್ನು ಎವೆಯಿಕ್ಕದೆ ನಿರೀಕ್ಷಿಸಿದೆ. ಅವಳೂ ನನ್ನನ್ನೊಮ್ಮೆ ಕಣ್ತುಂಬ— ಹೃದಯ-ತುಂಬ— ನೋಡಿ ಮೋರೆ ಕೆಳಗಿಟ್ಟಳು. ಆಗವಳ ಹೃದಯದಲ್ಲಿ ನನ್ನ ಬಗ್ಗೆ ಎಳ್ಳನಿತೂ ಸಂಶಯ ಉಳಿದಿರಲಾರದಾದರೂ, ಈ ಸನ್ನಿವೇಶದಿಂದ ತನಗೆ ಮತ್ತಾವ ತೊಂದರೆ ಒದಗಬಹುದೊ !— ಎಂಬ ಸಂಶಯಪಿಶಾಚಿ ಮಾತ್ರ ಅವಳನ್ನು ಬಾಧಿಸುತ್ತಿದ್ದಂತೆ ತೋರಿತು. ನಾನವಳ ಅಪೂರ್ವಸೌಂದರ್ಯರಾಶಿಯನ್ನು ಕಂಡು ಮುಗ್ಧನಾದೆ. ಎಳಹರೆಯದ ಆ ತರುಣಿಯ ಅನುಪಮ ಸಹಜ ಸೌಂದರ್ಯ, ಮನ್ಮಥನನ್ನೂ ಮೋಹಗೊಳಿಸುವಂತಿತ್ತು. ನಾನು ಒಳಹೊಕ್ಕುದು ತಪ್ಪಾಯಿತೇನೋ— ಅನ್ನಿಸಿತು. ಅವಳ ಕ್ಷಮೆ ಕೋರಿ ಹೊರಟುಬಿಡಲೊ !— ಎಂದೂ ಎನ್ನಿಸಿತು. ಹೊರಡಲೂ ಆಣಿಯಾದೆ. ನನ್ನ ಈ ಪೇಚಾಟವನ್ನು ಕಂಡ ಆ ಧೂರ್ತ ತರುಣಿ 'ತಾವು ಸಂಕೋಚಪಟ್ಟುಕೊಳ್ಳಬೇಡಿರಿ. ನನ್ನ ಪಾಲಿಗೆ ದೇವರೇ ತಮ್ಮಾಕೃತಿಯಲ್ಲಿ ಬಂದಂತಾಗಿದೆ.' ಎಂಬ ಭಾವವನ್ನೇ ಸೂಚಿ-ಸುವಂತೆ ಕಣ್ಣುಗಳನ್ನು ಹೊರಳಿಸಿ, ಕೂಡುವಂತೆ ಕೈಸನ್ನೆ ಮಾಡಿದಳು. ನಿರುಪಾಯನಾಗಿ ಕುಳಿತೆ, ಸುಮ್ಮನೆ ಕುಳಿತೆ; ಹುಚ್ಚನಂತೆ ಕುಳಿತೆ.

ಅವಳಿಗೂ ಮಾತು ಹೇಗೆ ಪ್ರಾರಂಭಿಸಬೇಕೆಂಬುದು ತಿಳಿಯದೆ ಹೋಗಿರಬೇಕು; ಮೋರೆ ಕೆಳಗಿಟ್ಟವಳು ಕೆಲ ಹೊತ್ತು ಮೇಲಕ್ಕೆ

ಎತ್ತಲೇಯಿಲ್ಲ. ನಾನೇ ಮಾತಿಗೆ ಪ್ರಾರಂಭಿಸಿದೆ: "ತಂಗಿ, ನೀನಾರು ? ನಿನ್ನ ದುಃಖಕ್ಕೆ ಕಾರಣವೇನು ?"

"ಎಲ್ಲವೂ ನನ್ನ ಕರ್ಮಕಥೆ" ಎಂದಳವಳು.

"ಹಾಗೆಂದರೆ ?" ನಾನು ಅಂತಃಕರಣಪೂರ್ವಕವಾಗಿ ಕೇಳಿದೆ.

ಅವಳು ಸ್ವಲ್ಪ ಮುಖ ಮೇಲಕ್ಕೆತ್ತಿದಳು. ಎರಡೂ ಕಣ್ಣು-ಗಳಲ್ಲಿ ಕಂಬನಿಗಳು ತುಂಬಿದ್ದುವು. ಅವುದೋ ಒಂದು ಬೇಗೆ ಅವಳ ದೇಹವನ್ನೆಲ್ಲ ದಹಿಸುತ್ತಿದ್ದಂತೆ ತೋರಿತು. ಅವಳು ತನ್ನ ಸೆರಗಿನಿಂದ ಕಣ್ಣೊರಸಿಕೊಂಡಳು. ಸ್ವಲ್ಪ ತಡೆದು, ತನ್ನಾ ಕರ್ಮ-ಕಥೆಯನ್ನು ಹೇಳಲುದ್ಯುಕ್ತಳಾದಳು.

ತನ್ನ ಕತೆ ಪ್ರಾರಂಭಿಸುವುದಕ್ಕಿಂತ ಮುಂಚೆ ಒಮ್ಮೆ ಬಾಗಿಲ-ಬಳಿಗೆ ಹೋಗಿ ಅತ್ತಿತ್ತ ಹಣಿಕಿಕ್ಕಿ ನೋಡಿದಳು. "ಅದೇಕೋ ಒಮ್ಮೆಯೇ ಹೋಗಿದ್ದಾರೆ ಆ ಮುಂಡೇಮಕ್ಕಳು." ಎನ್ನುತ್ತ ಒಳಗೆ ಬಂದಳು.

"ಯಾರವರು ?" ಎಂದೆ ನಾನು.

"ನನ್ನ ಮೇಲಿರುವ ಕಾವಲುಗಾರರು !" ಎಂದಳವಳು.

"ನೀನು ಕಾವಲಿನಲ್ಲಿದ್ದೀಯಾ ?"

"ಹೌದು," ಎಂದಳವಳು.

"ಯಾರಿಟ್ಟಿದ್ದಾರೆ ?" ಎಂಬುದನ್ನು ಕೇಳುವ ಇಚ್ಛೆ ನನಗಿದ್ದಿ-ತಾದರೂ ಕೇಳುವ ಸಾಹಸ ಮಾಡಲಿಲ್ಲ. ಅಷ್ಟರಲ್ಲಿ ಅವಳೇ ಮಾತಿಗೆ ಮೊದಲಿಟ್ಟಳು. ನಾನೂ ಮೂಕನಂತೆ ಕುಳಿತುಬಿಟ್ಟೆ.

* * * *

"ಅದೊಂದು ದಿನ; ಉತ್ಪಾತಯೋಗದ ದಿನ ! ನಮ್ಮ ಸಂಸಾರನೌಕೆಯನ್ನೇ ನುಚ್ಚುನೂರು ಮಾಡಿದ ದಿನ ! ತಂದೆ ! ....ಅಯ್ಯೋ !.... ಆ ದಿನದ ನೆನಪಾದರೆ ಇಂದಿಗೂ ಮೈ ಜುಮ್ಮೆನ್ನು-ತ್ತದೆ. ಕಂಪನ ಹುಟ್ಟುತ್ತದೆ. ನಾನಂದು ಮನೆಯಲ್ಲಿ ನನ್ನ ಗಂಡನೊಡನೆ ಊಟ ಮಾಡಲು ಕುಳಿತಿದ್ದೆ. ಅದೇಕೋ ಅಂದು ಬಯಸಿದ ಪಕ್ವಾನ್ನಗಳನ್ನು ಮಾಡಿಕೊಂಡಿದ್ದೆವು. ಕೈಯ ತುತ್ತು ಬಾಯಲ್ಲಿ ಬೀಳುವುದರಲ್ಲಿತ್ತು. ಹೊರಗೆ ಒಮ್ಮಿದೊಮ್ಮೆ ಕೋಲಾಹಲವೆದ್ದಿತು. ಇಬ್ಬರ ಕೈಯೊಳಗಿನ ತುತ್ತು ಜಾರಿ-ದುವು. ಬೆಪ್ಪಾಗಿ ಒಬ್ಬರ ಮುಖ ಒಬ್ಬರು ನೋಡುತ್ತ ಕುಳಿ-ತೆವು. ಅಷ್ಟರಲ್ಲಿ ಸಮವಸ್ತ್ರಧಾರಿಗಳೂ ಆಯುಧಪಾಣಿಗಳೂ ಆದ ಕೆಲ ಪುಂಡರು ಮನೆಯೊಳಕ್ಕೆ ನುಗ್ಗಿದರು. ನನ್ನ ಗಂಡನ ಹತ್ತಿರ ಹೋಗಿ, 'ನಿನ್ನಲ್ಲಿದ್ದುದನ್ನೆಲ್ಲಾ ಒಪ್ಪಿಸು; ಇಲ್ಲವಾದರೆ ಇದೋ ಗುಂಡಿಗೀಡಾಗುವೆ !' ಎಂದು ಅಂಜಿಸಿದರು. ಅವರು ಗಾಬರಿಗೊಂಡು, ಜೀವ ಉಳಿದರೆ ಸಾಕೆಂದು ನೆನೆದು, ತಮ್ಮಲ್ಲಿದ್ದ ಬೀಗದ ಕೈಗಳನ್ನೆಲ್ಲ ಅವರಿಗೊಪ್ಪಿಸಿದರು. ನಮ್ಮದು ಮೊದಲಿ-ನಿಂದಲೂ ಖ್ಯಾತಿವೆತ್ತ ಮನೆತನ. ಯಜಮಾನರೂ ಸಾಕಷ್ಟು ಗಳಿಸಿ ಹಾಕಿದ್ದರು. ಬೆಳ್ಳಿ-ಬಂಗಾರಕ್ಕೂ, ಬಟ್ಟೆ-ಬರೆಗಳಿಗೂ, ನಗದು ಹಣಕ್ಕೂ ಕೊರತೆಯೇನಿರಲಿಲ್ಲ. ಸುಮಾರು ೫೦ ಸಾವಿರ ನಗದು ಹಣ, ೬೦ ತೊಲಿ ಬಂಗಾರ, ೫೦೦ ತೊಲೆ ಬೆಳ್ಳಿ ಮತ್ತು ಬೆಲೆ ಬಾಳುವ ವಸ್ತ್ರಗಳನ್ನೆಲ್ಲ ಅಪಹರಿಸಿ, ಆ ಮೇಲೆ ಆ ಪುಂಡರು ನನ್ನ ಮೇಲೂ ಕೈಮಾಡಿದರು. "ಇಷ್ಟೆಲ್ಲಾ ಸುಲಿದದ್ದಾಯಿತು. ನಮಗೆ ಜೀವದಾನ ಕೊಡಿರಿ !" ಎಂದು ನಮ್ಮ ಯಜಮಾನರು ಕಾಲಮೇಲೆ ಬಿದ್ದು ಹೊರಳಾಡಿದರೂ ಆ ಪುಂಡರಿಗೆ ಕನಿಕರ ಬರ-ಲಿಲ್ಲ. ಅವರನ್ನು ಆಚೆಗೆ ತಳ್ಳಿ ನನ್ನ ಕೈ ಹಿಡಿದರು. "ನಾನು



ನಿಮ್ಮ ಅಕ್ಕ-ತಂಗಿಯರ ಸಮಾನ, ದಯೆಯಿಟ್ಟು ನನ್ನನ್ನು ಬಿಡಿರಿ." ಎಂದು ಸೆರಗೊಡ್ಡಿ ಬೇಡಿಕೊಂಡೆ. ಉನ್ಮತ್ತರಾದ ಆ ಪುಂಡರಿಗೆ ದಯೆಯಿಲ್ಲಿ; ಮಾಯೆಯಿಲ್ಲಿ! ಅವರು ನನ್ನನ್ನು ಮುಂದಕ್ಕೆ ಎಳೆಯಹತ್ತಿದರು; ನಾನು ಹಿಂದಕ್ಕೆ ಕೊಸರಿಕೊಳ್ಳ ತೊಡಗಿದೆ. ಆದರೆ ಆ ದೈತ್ಯರ ಮುಂದೆ ನನ್ನ ಸಾಹಸ ಎಷ್ಟರದು! ಯಜಮಾನರೂ ನನ್ನನ್ನು ಬಿಟ್ಟುಕೊಡಲು ಮತ್ತೊಮ್ಮೆ ಅಂಗ-ಲಾಚಿ ಬೇಡಿಕೊಂಡರು. ಆದರೆ ಅದೆಲ್ಲ ವ್ಯರ್ಥವಾಯಿತು. ಆ ಪುಂಡರು ಯಜಮಾನರ ಎದೆಗೆ ಪಿಸ್ತೂಲಿನ ಗುರಿಯಿಟ್ಟರು. ಅವರು ದಿಗ್ಭ್ರಮೆಗೊಂಡು, ಅಲ್ಲಿಂದ ಕಾಲಿಗೆ ಬುದ್ಧಿ ಹೇಳಿದರು. ದಿಡ್ಡಿ ಬಾಗಿಲಿಂದ ಹೊರಗೆ ಹಾರಿ ಎಲ್ಲಿಯೋ ಹೋಗಿಬಿಟ್ಟರು. ನಾನು ಅವರು ಹೋದದ್ದನ್ನು ಕಂಡು ಚಿಟ್ಟನೆ ಚೀರಿದೆ. ಸ್ಮೃತಿ ತಪ್ಪಿತು. ಮುಂದೇನಾಯಿತೋ ನಾನರಿಯೆ. ನಾನು ಪುನಃ ಸ್ಮೃತಿ ಹೊಂದಿದಾಗ ಒಂದು ಮನೆಯಲ್ಲಿ ಸೆರೆಯಾಳಾಗಿದ್ದೆ. ಅಲ್ಲಿ ನನ್ನಂತಹ ಅನೇಕ ಸುಂದರಿಯರೂ ಬೇರೆ ಬೇರೆ ಕೊಠಡಿಗಳಲ್ಲಿ ಬಂಧಿಸಲ್ಪಟ್ಟಿದ್ದರು.

" ನಮಗಲ್ಲಿ ಬೇಡಿದ ಪದಾರ್ಥಗಳು ತಿನ್ನಲಿಕ್ಕೆ ಸಿಕ್ಕುತ್ತಿದ್ದುವು. ಆದರೆ ನಮ್ಮ ನಮ್ಮ ಕೊಠಡಿಗಳಿಂದ ಹೊರಗೆ ಬರಲಿಕ್ಕೆ ಮಾತ್ರ ಅಪ್ಪಣೆಯಿದ್ದಿರಲಿಲ್ಲ. ನಾವಲ್ಲಿ ಎಷ್ಟು ದಿನ ಕಳೆದೆವೋ ಅರ್ಥ-ವಾಗಲಿಲ್ಲ. ನನಗಂತೂ ನನ್ನ ಜೀವನದ ಬಹುಭಾಗ ಅಲ್ಲಿಯೇ ಕಳೆದಂತೆನಿಸುತ್ತಿತ್ತು. ಕೈಸನ್ನೆ-ಬಾಯಿಸನ್ನೆಯಿಂದಾದರೂ ನಾವು ಒಬ್ಬರ ದುಃಖ ಇನ್ನೊಬ್ಬರ ಮುಂದೆ ತೋಡಿಕೊಳ್ಳಬೇಕೆಂದರೂ, ಅದೂ ಸಾಧ್ಯವಿರಲಿಲ್ಲ. ಮೂರು ನಾಲ್ಕು ಜನ ಕಾವಲುಗಾರರು ಸರತಿಯಂತೆ ಅಹರ್ನಿಶಿ ನಮ್ಮನ್ನು ಕಾಯುತ್ತಲೇ ಇದ್ದರು. ಅವರ ಕಣ್ಣು ತಪ್ಪಿಸಿ ಮಾತನಾಡಿಕೊಳ್ಳುವುದು ಅಸಾಧ್ಯವಷ್ಟೇ ಅಲ್ಲ; ಅಸಂಭವವೂ ಆಗಿತ್ತು. ಒಟ್ಟಿಗೆ ಆ ದಿನಗಳನ್ನು ಹೇಳಲಸಾಧ್ಯ-ವಾದ ಇಕ್ಕಟ್ಟಿನಲ್ಲಿ ಕಳೆದೆ.

" ಆ ಅಸಹ್ಯವಾದ ದಿನಗಳನ್ನು ನೆನೆದುಕೊಂಡರೆ ನನಗೆ ಈಗಲೂ ಹೇಸಿಕೆಯೆನಿಸುತ್ತದೆ. ನಿತ್ಯವೂ ಪುಂಡರು ಬಂದು, ' ನಮ್ಮ ಒಡೆಯನೊಡನೆ ಇರುತ್ತೀಯಾ ! ' ಎಂದು ಕೇಳುತ್ತಿದ್ದರು. ಅದಕ್ಕೆ, ಸರ್ವಸ್ವವನ್ನೂ ಕಳೆದುಕೊಂಡು ಪರಾಧೀನಳಾಗಿದ್ದ ನಾನು ಏನೆಂದು ಉತ್ತರ ಕೊಡಬೇಕು? ದೇವರು ದೊಡ್ಡವನು ! ಚಿತ್ರಹಿಂಸೆಗೊಳಗಾದರೂ ಆ ದುರ್ದಿನಗಳನ್ನು ಯಾವುದೋ ಒಂದು ದೂರದ ಆಶೆಯ ಸಂಭ್ರಮದಲ್ಲಿ ಕಳೆದೆ.

"ಕೆಲವೇ ದಿನಗಳಲ್ಲಿ ಭಾರತ ಸರಕಾರದ ಪೋಲೀಸ ಕಾರ್ಯಾ-ಚರಣೆ ಜರುಗಿತು. ಮೂರು ದಿನಗಳ ವರೆಗೆ ನಾಲ್ಕೂ ದಿಕ್ಕಿನಲ್ಲಿ ಉಲ್ಲೋಲಕಲ್ಲೋಲವಾಯಿತೆಂದು ಕಿವಿಯಿಂದ ಕೇಳಿದೆನಷ್ಟೆ. ಸಾಯುವವರು ಸತ್ತರು; ಉಳಿದವರಿಗೆ ಹಬ್ಬವಾಯಿತು. ನನಗೆ ಮಾತ್ರ ಯಾವುದೂ ತೋಚದ ಮಬ್ಬುಕವಿದಂತಾಯಿತು. ಇಂತಹ ಕೋಲಾಹಲವಾದ ಮೇಲೂ ' ನನ್ನ ಯಜಮಾನರು ಜೀವಿಸಿರ-ಬಹುದೆ? ' ಎಂದು ಯೋಚಿಸಿ ಕಣ್ಣೀರು ತೆಗೆದೆ; ಮನಬಿಚ್ಚಿ ಅತ್ತೆ. ಅಸಹಾಯ ಸ್ಥಿತಿಯಲ್ಲಿದ್ದ ನಾನು ಇದಕ್ಕೂ ಹೆಚ್ಚಿನ-ದೇನನ್ನು ಮಾಡಬಲ್ಲೆ ?

" ಕೆಲವೇ ದಿನಗಳಲ್ಲಿ ನನ್ನನ್ನು ಸ್ಥಾನಾಂತರಿಸಿ ಇನ್ನೆಲ್ಲಿಯೋ ಇಡಲಾಯಿತು. ಆಗ ಆ ಪುಂಡರ ಹಾವಳಿ ಮಾತ್ರ ಕಡಿಮೆ-ಯಾದಂತಾಗಿ, ಈ ತೋಟದೊಡೆಯರು ನನ್ನ ಬಳಿ ಬರು-ಹೋಗುವುದು ಹೆಚ್ಚಾಯಿತು. ಖಾದಿಬಟ್ಟೆ ಧರಿಸುವವರು ಸದ್ಗೃಹಸ್ಥರೆಂದು ತಿಳಿದುಕೊಂಡಿದ್ದ ನಾನು, ಅವರ ಬಗ್ಗೆ ಸಂಶಯಪಟ್ಟುಕೊಳ್ಳಲಿಲ್ಲ. ನನ್ನನ್ನು ಮುಕ್ತಮಾಡಲು ಬಂದ ದೇವತೆಯೆಂದೇ ತಿಳಿದು, ನಾನವರ ಬಗ್ಗೆ ಗೌರವ ತಾಳಿದೆ. ಬಂದಾಗಲೆಲ್ಲ ಅವರ ಕಡೆಗೆ ದೈನ್ಯದೃಷ್ಟಿ ಬೀರುತ್ತಿದ್ದೆ. ಅದಕ್ಕ-ವರು ' ಅಪಾರ್ಥ ' ಮಾಡಿಕೊಂಡರೋ ಏನೋ ! ಈಗ ೮–೧೦ ತಿಂಗಳಿಂದ ನನ್ನನ್ನು ಇಲ್ಲಿಗೆ ವರ್ಗಾಯಿಸಿದ್ದಾರೆ. ನಾನು ಬೇಡ-ದಿದ್ದರೂ ಬೇಕಾಗುವ ಪದಾರ್ಥಗಳನ್ನೆಲ್ಲ ಒದಗಿಸುತ್ತಿದ್ದಾರೆ. ಇದರ ಮೇಲಿಂದ ನಾನವರ ' ಸಂಗಾತಿ 'ಯೆಂಬುದರ ಕಲ್ಪನೆ ತಮಗಾಗುತ್ತಿರಬಹುದು. ಆಗುವುದು ನ್ಯಾಯವೇ ಆಗಿದೆ. ಆದರೆ ನಿಜವೂ ತಾವು ಹಾಗೆ ತಿಳಿಯುತ್ತೀರಾ ? " ಎಂದು ಮಥ್ಯೆ ಪ್ರಶ್ನಿಸಿದಳವಳು. " ನನಗಾವುದೂ ತೋಚದಮ್ಮಾ ! ಸುಮ್ಮನೆ ಹೇಳುತ್ತ ಹೋದರೆ ಕೇಳುವ ಆಶೆ ಮಾತ್ರ ಬಲವಾಗಿದೆ ನೋಡು ! " ಎಂದೆ. ಅವಳು ಮತ್ತೆ ಪ್ರಾರಂಭಿಸಿದಳು :

ಈ ತೋಟದೊಡೆಯರು ಇಲ್ಲಿಯ ಸುಪ್ರಸಿದ್ಧ ಮುಂದಾಳುಗಳು. ಅವರನ್ನು ನೆನಸಿದಾಗ ಹರಿಯುವ ಹಾವೂ ನಿಲ್ಲುತ್ತದಂತೆ. ಬಾರ್ಡರ್ ಆ್ಯಕ್ಶನ್‌ನಲ್ಲಿ ಅವರ ಹೊಗಳುಬಂಟರು ಅವರಿಗೆ ' ಕಡುಗಲಿ ' ಎಂಬ ಬಿರುದೂ ಕೊಟ್ಟಿದ್ದಾರೆ. (ನಾನು ಸ್ವಲ್ಪ ಗಾಬರಿಗೊಂಡೆ, ಆದರೂ ಅವಳಿಗೆ ತೋರಗೊಡದಂತೆ ಮತ್ತೆ ಗಂಭೀರನಾದೆ) ಜನ್ಮತಃ ಅವರು ಅಷ್ಟು ದುಷ್ಟರೂ, ದುಡುಕಿನ ಸ್ವಭಾವದವರೂ ಅಲ್ಲವೆಂಬುದು ಈ ವರೆಗಿನ ಅನುಭವದ ಮೇಲಿಂದ ನಾನು ಬಲ್ಲೆನಾದರೂ, ಅವರ ಸಹವಾಸ ಒಳ್ಳೆಯವರ ಜೊತೆಯ-ಲ್ಲಿಲ್ಲ. ಬಾರ್ಡರ್ ಆ್ಯಕ್ಶನ್ ಕಾಲಕ್ಕೆ ಈ ರೀತಿಯ ಅನೀತಿಗೆ ಪ್ರಚೋದಿಸಿದವರು ಆ ಗುಂಡಾಬಂಧುಗಳೆ ! ಇಲ್ಲಿಗೆ ಕರೆತಂದ ಮೇಲೆ ರಾಯರು ಆಗಾಗ ನನ್ನೆಡೆಗೆ ಬರುತ್ತಿದ್ದರು. ಮೃದುವಚನ-ಗಳಿಂದ ನನ್ನನ್ನು ಸಂತೈಯಿಸಲು ಹವಣಿಸುತ್ತಿದ್ದರು. 'ಮೋಹಿನಿ!' ಎಂದು ಸಂಬೋಧಿಸಿ, ನನ್ನ ಮನಸ್ಸನ್ನಾಕರ್ಷಿಸಲು ಪ್ರಯತ್ನಿಸು-ತ್ತಿದ್ದರು ಆ ಮೋಹನರಾಯರು ! (ನಾನು ಮತ್ತಷ್ಟು ಬೆಪ್ಪಾದೆ) ನಾನೊಮ್ಮೆ ಯಾವ ಉಪಾಯವೂ ಕಾಣದೆ, ' ದಯವಿಟ್ಟು ನನ್ನನ್ನು ಕೆಲಕಾಲ ನನ್ನ ಪಾಡಿಗೆ ಬಿಟ್ಟು ಬಿಡಿರಿ. ನನ್ನ ಬುದ್ಧಿ ಸ್ತಿಮಿತಕ್ಕೆ ಬಂದಮೇಲೆ ತಮ್ಮೊಡನೆ..............'ಎಂದಿಷ್ಟೇ ನುಡಿದು ಸುಮ್ಮನಾದೆ. ಅವರಿಗೆ ಅದಾವ ಆಶೆ ಕಂಡಿತೋ ನಾನರಿಯೆ. ಅಂದಿನಿಂದ ನನ್ನ ಗೊಡವೆಗೆ ಬಂದಿಲ್ಲ. ದೂರ-

ನಿಂದಲೇ ನನ್ನ ಯೋಗಕ್ಷೇಮ ತೆಗೆದುಕೊಳ್ಳುತ್ತಿದ್ದಾರೆ. ಪಾಪ! ಅವರಿಗೂ ಈ ತುಂಬಿದ ಯೌವನ, ಈ ರೂಪರಾಶಿ ಅನೀತಿಗಾಗಿ ಪ್ರಚೋದಿಸುತ್ತಿರಬಹುದು. ನಾನೇನು ಮಾಡಲಿ? ಈ ರೂಪರಾಶಿಯನ್ನು ಕೊಟ್ಟು ಈ ರೀತಿಯ ಸತ್ತ್ವಪರೀಕ್ಷೆಗೆ ಗುರಿಮಾಡಿದ ಆ ವಿಶ್ವಕರ್ಮನ ತಪ್ಪು ಇದು! ನನಗೊಂದು ಬಗೆಯಿಂದ ಇಲ್ಲಿ ಸುಖವಿದ್ದರೂ, ನನ್ನ ಸುಖದ ಚಂದಿರನನ್ನು ಅಗಲಿದ್ದುದಕ್ಕೆ ಎಲ್ಲವೂ ನನ್ನೆದುರಿಗೆ ಶೂನ್ಯವಾಗಿದೆ; ಕಗ್ಗತ್ತಲೆಯಾಗಿದೆ. ಪೋಲೀಸ್ ಕಾರ್ಯಾಚರಣೆಯ ಕಾಲಕ್ಕೆ ನನ್ನ ಯಜಮಾನರು ಯಾರ ಕೈಯಲ್ಲಾದರೂ ಸಿಕ್ಕಿ ಮೃತಪಟ್ಟಿರಬೇಕೆಂದು ಒಮ್ಮೊಮ್ಮೆ ಎನಿಸುತ್ತಿದ್ದರೂ, ಅದಾವುದೋ ಒಂದು ಸುಪ್ತಸ್ವರ, ಹೃದಯದ ನರ-ನಾಡಿಗಳಲ್ಲೆಲ್ಲ 'ಇಲ್ಲ' ಎಂಬಂತೆ ನುಡಿಯುತ್ತಲಿದೆ. ಅದೊಂದರ ಆಧಾರದ ಮೇಲೆ ಇಲ್ಲಿಯ ವರೆಗೂ ಜೀವಿಸಿದ್ದೇನೆ. ಆ ಕನಸು ನನಸಾದರೆ ಒಳ್ಳೆಯದು; ಇಲ್ಲವಾದರೆ.......... ನನ್ನ ಕೊನೆಯ ನಿರ್ಣಯಕ್ಕಾಗಿ, ಇದೋ....... (ಒಂದು ಹೊಳೆಯುವ ಜಂಬಿಯಾ ತೋರಿಸುತ್ತ) ಸಿದ್ಧವಿದೆ!"

ಇಷ್ಟಕ್ಕೆ ಅವಳು ತನ್ನ ಕತೆ ಮುಗಿಸಿದಳು. ನಾನಾಗ ಭಾವನಾಲೋಕದಿಂದ ಸತ್ಯಸೃಷ್ಟಿಗಿಳಿದೆ. ಮತ್ತೊಮ್ಮೆ ಅವಳನ್ನು ಕಣ್ಣು ಸಾಲದೆ ನೋಡಿದೆ. ನನ್ನ ಮನಸ್ಸಾಗ ವಿಹ್ವಲವಾಗಿದ್ದಿತು.

"ತಾವು ನನ್ನಲ್ಲಿ ಕಾಫಿ ತೆಗೆದುಕೊಳ್ಳುತ್ತೀರಾ?" ಎಂದಳವಳು.

ಯಾವುದೂ ತೋಚದೆ, "ಪರಿಪಾಠವಿಲ್ಲ; ಸ್ವಲ್ಪ ಹಾಲು ಕೊಟ್ಟು ಬಿಡಿ" ಎಂದೆ.

ಅವಳು ಒಳಗೆ ಹೋಗಿ ಬೆಳ್ಳಿಯ ಪಾತ್ರೆಯೊಂದರಲ್ಲಿ ತುಸು ಹಾಲು-ಸಕ್ಕರೆ ಬೆರಸಿ ತಂದಳು. ಆ ಪಾತ್ರೆಯನ್ನು ತುಟಿಗಳ ಮಧ್ಯೆ ಹಿಡಿದೆ. ನಾನವಳ ಅಂತಃಕರಣವನ್ನೇ ಹೀರುತ್ತಿರುವಂತೆ ಭಾಸವಾಗುತ್ತಿದ್ದಿತು. ಮಧ್ಯೆ ಬಾಯಿ ಹಾಕಿ, "ನಿನ್ನ ಹೆಸರೇನಮ್ಮಾ?" ಎಂದೆ. ಅವಳು ತುಸು ನಾಚಿಕೊಂಡು, "ಹಸೀನಾ" ಎಂದಳು. ನಿಜವಾದ ಹೆಸರು!

ಇನ್ನು ಹೆಚ್ಚು ಕಾಲ ಕೂಡುವುದರಿಂದ ಇಬ್ಬರಿಗೂ ಹಿತವಲ್ಲವೆಂದು ಬಗೆದು ಮೆಲ್ಲಗೆ ಎದ್ದೆ. ಕಂಬನಿ ತುಂಬಿಕೊಂಡು "ಹೊರಡುವಿರಾ?" ಎಂದಳವಳು.

"ನೀನು ಎಲ್ಲಿಗಾದರೂ ಹೋಗುವುದಾದರೆ ಸಹಾಯ ಮಾಡುವೆ; ಹೋಗುವೆಯಾ?" ಎಂದೆ.

"ದಾರಿಯಲ್ಲಿ ಮತ್ತಾವ ಕ್ರೂರಪಶುಗಳು ನನ್ನ ಸಲುವಾಗಿ ಕಾದಿವೆಯೊ! ನನ್ನ ಮನದಾಶೆ ಫಲಿಸುವ ವರೆಗೂ ಕೆಲಕಾಲ ಇಲ್ಲಿರುವುದೇ ಲೇಸು!" ಎಂದಳು.

"ಹಾಗಾದರೆ ಬರುವೆ; ದೇವರು ನಿನ್ನಿಷ್ಟ ಪೂರ್ತಿಮಾಡಲಿ!" ಎಂದು ನುಡಿದು ಹೊರಹೊರಟೆ. ಆಗ ಹೊಟ್ಟೆಯ ಕರುಳನ್ನಗಲುತ್ತಿರುವಂತಹ ವೇದನೆಯಾಗುತ್ತಿದ್ದಿತು.......... ನನ್ನ ಪುಣ್ಯಕ್ಕೆ ತೋಟದವರಾರೂ ಬಂದಿರಲಿಲ್ಲ. ಮಾರ್ಗಕ್ಕೆ ಹತ್ತಿದೆ. ಅನೇಕ ವಿಚಾರಗಳು ತಲೆತಿನ್ನಹತ್ತಿದುವು. ಕಾಂಗ್ರೆಸ್ಸಿನ ಉದಾತ್ತ ಧ್ಯೇಯ-ಧೋರಣೆಗಳ ಹೋಳಿಮಾಡುತ್ತಿರುವ ಈ ಕೃತ್ರಿಮ ಕಾಂಗ್ರೆಸ್ ಕಾರ್ಯಕರ್ತರ ಬಗ್ಗೆ ಮನಸ್ಸು ಮರುಗಿತು. 'ಈ ಜನ, ಮಹಾತ್ಮರ ಆದರ್ಶತತ್ತ್ವಗಳ ಅವಹೇಳನೆ ಮಾಡುತ್ತಿರುವರಲ್ಲಾ!' ಎಂದು ಹೃದಯ ನೊಂದಿತು. ಕಡುಗಲಿ ಮೋಹನರಾಯರು ನನ್ನನ್ನಗಲಡೆ ಇರುತ್ತಿದ್ದುದರ ಗುಟ್ಟು ಈಗ ರಟ್ಟಾಯಿತು. ಅವರ ಆತಿಥ್ಯದ ಸರಿಯಾದ ಅರ್ಥವನ್ನು ಈಗ ಮಾಡಿಕೊಂಡೆ. 'ನಾನವರ ಜೊತೆಯಲ್ಲಿ ಇಂದು ಆ ಹಳ್ಳಿಗೆ ಹೋಗಿದ್ದರೆ, ಈ ಮರ್ಮಭೇದಕ ರಹಸ್ಯದ ಪರಿಚಯವಾಗುತ್ತಿತ್ತೇ?' ಎಂದುಕೊಂಡೆ. ಆಗ ನನ್ನೆದುರು ಒಂದೆಡೆ ಮೋಹನರಾಯರ ಆದರ್ಶ, ಇನ್ನೊಂದೆಡೆಗೆ ಹಸೀನಾಳ ಆದರ್ಶ ಮೂರ್ತಿಮಂತವಾಗಿ ನಿಂತುವು. ಒಳಗೊಳಗೆಯೇ ನಕ್ಕುಬಿಟ್ಟೆ. ನನ್ನ ಸಹವಾಸದಿಂದ ಅವಳ ಮನಸ್ಸಿಗೆ ಸ್ವಲ್ಪ ಹಾಯೆನಿಸಿದರೆ, ನನಗೆ ಕತೆಗೊಂದು ಕರುಣಾರಸಪೂರ್ಣ ಸನ್ನಿವೇಶ ದೊರೆತಂತಾಯಿತೆಂದುಕೊಂಡು ಮನೆಯ ದಾರಿ ಹಿಡಿದೆ. ಯಾವಾಗ ಮನೆ ಮುಟ್ಟಿದೆನೋ ತಿಳಿಯಲಿಲ್ಲ.

'ಬಗನ' ಬಾಲಾಮೃತ

ಮಕ್ಕಳ ಸದೃಢತೆಗಾಗಿ 'ಬಗನ' ಬಾಲಾಮೃತ-ವನ್ನು ಉಪ-ಯೋಗಿಸಿರಿ.

ಮುಖ್ಯವಾಗಿ ಮಕ್ಕಳ ಯಕೃತು ಮತ್ತು ಹೊಟ್ಟೆ ಎಂದರೆ ಅವರಿಗೆ

ರೋಗದ ಭಯವಿಲ್ಲ.

ಬಗನ ಬಾಲಾಮೃತದಲ್ಲಿ 'ಗ್ರಾಯಿಪ್ ಹೀಲರಿನ' ಅಂಶವೂ ಇರುವದರಿಂದ, ಇದು ಮಕ್ಕಳ ಉತ್ತಮ 'ಟೋನಿಕ್ಕು' ಇರುವದು.

THE NATIONAL PHARMACIES & PHARMACEUTICALS Ltd. DHARWAR.

ದಿವಂಗತ ಕೆರೂರ ವಾಸುದೇವಾಚಾರ್ಯರು ಮತ್ತು ಸಣ್ಣಕತೆಗಳು

ಶ್ರೀ. ಅನಂತ ಬುರ್ಲಿ, ಬಾಗಲಕೋಟೆ

★

ದಿವಂಗತ ವಾಸುದೇವಾಚಾರ್ಯ ಕೆರೂರ ಅವರೆಂದರೆ ಉತ್ತರಕರ್ನಾಟಕದ ಮೊತ್ತಮೊದಲಿನ ಕತೆಗಾರರು. ಕರ್ನಾಟಕದಲ್ಲಿ ಇಂದು ಸಣ್ಣಕತೆಯು ಪ್ರಪಂಚ ವಿವಿಧಮುಖವಾಗಿ ಬೆಳೆದಿದೆ-ಯಾದರೂ, ಆಚಾರ್ಯರ ಕತೆಗಳು ಇಂದೆ ಕೂಡ ಜನರ ಹೃದಯವನ್ನು ಸೆಳೆದುಕೊಳ್ಳುವಂತಹ ಕಲೆಯಿಂದ ಕೂಡಿವೆ.

★

ಸಾಹಿತ್ಯ ಸಂತೋಷಕ್ಕಾಗಿ. ಸುಖ-ದುಃಖಗಳ ದ್ವಂದ್ವದಲ್ಲಿ ಸಿಲುಕಿ ನರಳುವ ಮಾನವನ ನೋವನ್ನು ಕ್ಷಣಕಾಲ ಮರೆಯಿಸಿ ಹೊಸ ಚೈತನ್ಯ ಉತ್ಸಾಹಗಳನ್ನು ತರುವುದಕ್ಕಾಗಿ. ಕುಗ್ಗಿದ ಮನವನ್ನು ಬಡಿದೆಬ್ಬಿಸಿ ಮುಂದಿನ ಹೊಂಗನಸುಗಳ ತೋರಿ ಮುನ್ನಡೆಯಿಸು-ವುದಕ್ಕಾಗಿ. ಮಾನವತೆಯು ದಿವ್ಯ ದರ್ಶನ ಗೈಯಿಸಿ ದೇವತ್ವದೆಡೆಗೆ ಸಾಗಿಸುವುದಕ್ಕಾಗಿ. ಇಂತು ಯಾವುದೊಂದು ರೀತಿಯಲ್ಲಿ ಮಾನವನ ಮನಕ್ಕೆ ಮೋದಬೀರಿ, ಹೃದಯ ಹಿಗ್ಗಿಸಿ, ಅಂತರಂಗ ಅರಳಿಸು-ವುದೇ ಸಾಹಿತ್ಯದ ಗುರಿಯಾಗಿ ಬಂದಿದೆ ಆದಿನಿಂದಿಂದಿಗೂ.

ಕನ್ನಡ ಸಾಹಿತ್ಯದಲ್ಲಿ ಇತ್ತೀಚೆಗೆ, ಸಣ್ಣಕತೆಗಳು ವಿಪುಲವಾಗಿ ಕಾಣಿಸಿಕೊಳ್ಳುತ್ತಿದ್ದರೂ, ಪೂರ್ವದಿಂದಲೂ ಅವುಗಳ ರೂಪವನ್ನು ನಾವು ಬೇರೆ ಬೇರೆಯಾಗಿ ಕಂಡುಕೊಳ್ಳಬಹುದಾಗಿದೆ. ಕನ್ನಡ ಸಾಹಿತ್ಯಕ್ಕೆ ಅತಿ ಪ್ರಾಚೀನಕಾಲದಿಂದಲೂ ಕಾವ್ಯಸ್ಫೂರ್ತಿಯ ನೆಲೆ-ಯಾಗಿ ನಿಂದ ರಾಮಾಯಣ-ಮಹಾಭಾರತಗಳಲ್ಲಿ ತತ್ತ್ವೋಪ-ದೇಶಗಳಿಗಾಗಿ ಬಳಸಿಕೊಂಡ ಸುಂದರ ಕಥಾನಕಗಳನ್ನು ತುಂಬಾ ಕಾಣಬಹುದು. ಅಂತೆಯೆ ಕನ್ನಡ ಭಾರತಗಳಲ್ಲಾಗಲಿ, ಇನ್ನಿತರ ಜೈನ ಪುರಾಣಗಳಲ್ಲಾಗಲಿ, ಹರಿಹರನ ರಗಳೆಗಳಲ್ಲಾಗಲಿ ಸೇರ-ವಾದ ಉಪಕತೆಗಳನ್ನೂ. ಒಳ್ಳೆಯ ಸಣ್ಣಕತೆಗಳ ರೂಪ ಪಡೆಯ-ಬಹುದಾದ ಸೂಕ್ಷ್ಮ ಸನ್ನಿವೇಶ, ನಯವಾದ ಭಾವನಿರೂಪಣೆ, ನಿಚ್ಚಳವಾದ ಕಲಾಪೂರ್ಣ ಪಾತ್ರಸೃಷ್ಟಿಗಳನ್ನೂ ಕಾಣಬಹುದು. ಸಂಸ್ಕೃತ ಸಾಹಿತ್ಯದಲ್ಲಿ ಹೆಸರುಗೊಂಡ ಹಿತೋಪದೇಶ, ಪಂಚ-ತಂತ್ರದ ಕತೆಗಳು ನೇರವಾಗಿ ಕನ್ನಡಸಾಹಿತ್ಯದಲ್ಲಿ ಮೊದಲ ಕತೆಗಳಾಗಿ ಬಂದಿವೆ. ಇನ್ನು ಸಾಹಿತ್ಯದಲ್ಲಿ ರೂಪ ತಳೆಯದೆ, ಅನೇಕ ಶತಮಾನಗಳಿಂದ ಅಜ್ಜ-ಅಜ್ಜಿಯರಿಂದ ಸೋರಿಕೊಂಡು ಬಂದ ದಂತಕಥೆಗಳಿಗೆ ಲೆಕ್ಕವಿಲ್ಲ. ಮಕ್ಕಳ ಗುಬ್ಬಿ-ಕಾಗೆಗಳ ಕತೆಗಳೂ, ಇತ್ತೀಚೆಗೆ ಪ್ರಚಾರದಲ್ಲಿರುವ ಬೀರಬಲ್ಲ, ತೆನ್ನಾಲಿ ರಾಮಕೃಷ್ಣರ ಕತೆಗಳೂ ಬಹುದಿನಗಳಿಂದ ರೂಪಗೊಂಡು ಬಂದಿರಲು ಸಾಕು.

ಇಂದು ಕನ್ನಡ ಸಾಹಿತ್ಯದಲ್ಲಿ ಕಾಣಬರುವ ಸಣ್ಣಕತೆಗಳು ಅವುಗಳ ರೂಪರೇಷೆಗಳು ಇಂಗ್ಲಿಷ್ ಸಾಹಿತ್ಯದ ಪ್ರಭಾವದಲ್ಲಿ ಬೆಳೆದುಬಂದುವುಗಳು. ಮೂಲವಾಗಿ ಭಾರತದಲ್ಲಿ ಸಣ್ಣಕತೆಗಳ ಪ್ರಾರಂಭ ಬಂಗಾಲಿಭಾಷೆಯಲ್ಲಾದರೂ,- ಆಂಗ್ಲ ಸಾಹಿತ್ಯಾಭ್ಯಾಸ ಎಲ್ಲೆಡೆಗೆ ಹಬ್ಬಿದಂತೆ, ಹೊಸ ಸಾಹಿತ್ಯದ ಬಗೆ ತಲೆದೋರಿತು ಅಲ್ಲಲ್ಲಿ. ಕಾವ್ಯಗಳಿಗೆ ಬೇಕಾಗುವ ವಿಶ್ವತೋಮುಖ ಜೀವನದ ಪೂರ್ಣಚಿತ್ರ ಕತೆಯಲ್ಲಿ ಒಡಮೂಡಬೇಕಿಲ್ಲ. ವಿವಿಧಾಲಂಕಾರ-ಗಳು, ನವರಸಗಳ ಹೊನಲು ಕಾಣಿಸಿಕೊಳ್ಳಬೇಕಿಲ್ಲ. ಇಲ್ಲಿ ಬೆಡಗು ಬಂಧಗಳ ಬಿನ್ನಾಣ ಇಲ್ಲಿಯ ಶೈಲಿಯ ಜತೆಗೂಡಬೇಕಿಲ್ಲ. ಹತ್ತಾರು ಪಾತ್ರಗಳು ಸುತ್ತಿ ಭಾವ ಪ್ರದರ್ಶನ ಗೈಯಬೇಕಿಲ್ಲ. ಮಾನವನ ಮನ ಮಿಡಿಯುವ, ಬಗೆ ಕಲಕುವ ಜೀವನದ ಯಾವುದೊಂದು ಚಿಕ್ಕ ಘಟನೆಯೂ ಕಥೆಗೆ ವಸ್ತುವಾಗಿ ನಿಲ್ಲಬಲ್ಲದು. ಆ ಘಟನೆಗೆ ಸಂಬಂಧಿಸಿದ ನಾಲ್ಕಾರು ಪಾತ್ರಗಳು ಕ್ಷಣಕಾಲ ಕಣ್ಣೆದುರು ಸುಳಿದುಹೋದರೂ, ಓದುಗರ ಮನದಲ್ಲಿ ಬಿಂಬಿಸಬೇಕಾದುದನ್ನು ಮೂಡಿಸಿದರಾಯ್ತು. ಉದ್ದುದ ವರ್ಣನೆಗಳು ಇಲ್ಲದಿದ್ದರೂ, ಆಯಾ ಸನ್ನಿವೇಶಗಳ, ಸೂಕ್ಷ್ಮಭಾವಗಳ, ವ್ಯಕ್ತಿಸ್ವಭಾವಗಳ ಉಚಿತವಾಗಿ ಅಂದವಾಗಿ ನಾಲ್ಕಾರು ಮಾತುಗಳಲ್ಲಿ ಹೇಳಿ, ಕಲಾ-ತ್ಮಕವಾಗಿ ಓದುಗರ ಮನ ಮುಟ್ಟುವಂತೆ ಹೇಳಿದರೆ ಸರಿ; ಕತೆಯ ಶೈಲಿ ರೂಪಗೊಂಡಂತೆಯೆ. ಆಯಾ ಕತೆಗಾರರ ಜ್ಞಾನಾನುಭವಗಳ ಆಳಕ್ಕೆ ತಕ್ಕಂತೆ ವಿವಿಧರೂಪಗಳಲ್ಲಿ ಕತೆಗಳು ಕಾಣಿಸಿಕೊಳ್ಳುತ್ತವೆ. ಅವರು ಹೊಂದಿದ ಸಂಸ್ಕಾರ, ಜೀವನದಲ್ಲಿ ಪಡೆದ ಅನುಭವಗಳು, ಅವರವರಿಗೆ ವಿಶಿಷ್ಟರೀತಿಯಲ್ಲಿ, ಬಹುಮುಖ ಮಾನವಜೀವನದ ಬಗೆಗಾಣುವ ಒಳಗಣ್ಣುಗಳನ್ನು ನೀಡುತ್ತವೆ.

ಅಂತೆಯೇ ಕಥಾವಸ್ತುಗಳಿಗೆ ಮೂಲವಾದ ಜೀವನ ಒಂದೇ ಆದರೂ, ಸುಖ-ದುಃಖ, ಹಿಗ್ಗು-ತಗ್ಗುಗಳು, ಏರಿಳಿತಗಳು, ಕಹಿ-ಸಿಹಿಗಳು ನಿತ್ಯ ಕಾಣಿಸಿಕೊಳ್ಳುವ ಬಗೆ ಒಂದೆಯಾದರೂ—ಒಂದೆ ತೆರನಾದರೂ ಅವುಗಳನ್ನು ನೋಡುವವರ ದೃಷ್ಟಿ ಮಾತ್ರ ಭಿನ್ನವಾಗಿ, ತಕ್ಕಂತೆ ಅನುಭವಿಸುವವರ ಭಾವನೆಗಳು ಭಿನ್ನವಾಗಿ, ಸಹಸ್ರಾರು ರೂಪಗಳ ತಾಳಿ ನಿಲ್ಲುತ್ತದೆ ಜೀವನ, ಕಥಾಸಾಹಿತ್ಯದಲ್ಲಿ. ಒಂದೊಂದೂ ಮಾನವ ಜೀವನದ ಸೂಕ್ಷ್ಮ ಒಳನಿರಿಗೆಗಳ ನಯವಾದ ಚಿತ್ರವಾಗುತ್ತದೆ. ಅಂತೆಯೇ ಇಂದು ಯಾವ ಸಾಹಿತ್ಯದಲ್ಲೂ ಸಣ್ಣ ಕತೆಗಳು ಮುಪ್ಪಿನವರಿಂದ ಮಕ್ಕಳವರೆಗೂ ಎಲ್ಲರ ಮನ ತಣಿಸುವ ಸಾಧನಗಳಾಗಿವೆ; ಜನಪ್ರಿಯವಾಗಿವೆ.

ಕನ್ನಡ ಕಥಾಸಾಹಿತ್ಯದಲ್ಲಿ ಸಣ್ಣ ಕತೆಗಳಿಗೆ ಜನ್ಮವಿತ್ತವರು ಶ್ರೀನಿವಾಸರು. ಇಡಿ ಕನ್ನಡ ನಾಡೇ ಅವರನ್ನು 'ಸಣ್ಣ ಕತೆಗಳ ಜನಕ'ರೆಂದು ಒಪ್ಪಿದೆ. ಜೀವನವನ್ನು ಕಾಣುವ ದೃಷ್ಟಿ, ರೂಪಿಸುವ ಬಗೆ, ಹೇಳುವ ಹದ ಎಲ್ಲ ಅವರವೇ. ಇಂತು ವಿಶ್ವಕಥಾ ಸಾಹಿತ್ಯದಲ್ಲಿ ಸರಿಸಾಟಿಯಾಗಿ ನಿಲ್ಲಬಲ್ಲ ಕತೆಗಳ ನಿರ್ಮಾಣ ಕನ್ನಡದಲ್ಲಿ ಯಾರಿಂದಾದರೂ ಆಗಿದ್ದಲ್ಲಿ, ಅದು ಶ್ರೀನಿವಾಸರಿಂದ. ಶ್ರೀನಿವಾಸರು ಕೇವಲ ಕತೆಗಾರರಲ್ಲದೆ, ಕತೆಗಾರರ ನಿರ್ಮಾಪಕರೂ ಅಹುದು. ಶ್ರೀನಿವಾಸರ ಕಲಾಪೂರ್ಣ ಕತೆಗಳನ್ನು ಓದಿ ತಣಿದು ಅಭ್ಯಾಸಗೈದು ಅಳವಡಿಸಿಕೊಂಡು, ಅಷ್ಟೇ ಅತ್ಯುತ್ತಮ ಕತೆಗಾರರೂ ಕನ್ನಡ ಸಾಹಿತ್ಯಪ್ರಪಂಚದಲ್ಲಿ ಉದಯಿಸಿದ್ದಾರೆ; ಶ್ರೇಷ್ಠ ಕತೆಗಳನ್ನು ನೀಡಿದ್ದಾರೆ. ಅವರ ದಾರಿಯನ್ನೇ ತುಳಿದರೂ ತಮ್ಮ ವ್ಯಕ್ತಿತ್ವವನ್ನು ಉಳಿಸಿಕೊಂಡು ಕಥಾಸಾಹಿತ್ಯದಲ್ಲಿ ತಮ್ಮದೇ ಆದ ಸ್ಥಾನಗಳಿಸಿಕೊಂಡ ಅನೇಕ ಕತೆಗಾರರು ಇಂದು ಕನ್ನಡಿಗರಿಗೆ ಅಪರಿಚಿತರಲ್ಲ. ಆನಂದ, ಆನಂದಕಂದ, ಎಮ್. ವ್ಹಿ. ಸೀತಾರಾಮಯ್ಯನವರಾಗಲಿ, ಕಾವ್ಯಮಯವಾಗಿ ಕತೆ ಹೆಣೆಯುವ ಕು. ವೆಂ. ಪು. ಗಳಾಗಲಿ, ಸಮಾಜದ ಹುಳುಕು-ಕೊಳಕುಗಳನ್ನು ಕೆದಕಿ ತೋರುವ ಅ.ನ.ಕೃ. ಕಾರಂತರಾಗಲಿ, ದಿವಂಗತ ಗೌರಮ್ಮನವರಾಗಲಿ ಕನ್ನಡ ಸಾಹಿತ್ಯಕ್ಕೆ ಒಳ್ಳೆಯ ಕತೆಗಳ ಕಾಣಿಕೆಯಿತ್ತಿದ್ದಾರೆ. ಇವರೊಡನೆ ನೂರಾರು ತರುಣ ಕತೆಗಾರರು ಉದಯಿಸಿ ಕಥಾಸಾಹಿತ್ಯವನ್ನು ಸಾಗರದಷ್ಟು ವಿಶಾಲವಾಗಿಸಿದ್ದಾರೆ. ಅದೆಲ್ಲ ಯೋಗ್ಯತೆಯಿಂದ ಉತ್ತಮ ಮಟ್ಟದ್ದಾಗದಿದ್ದರೂ, ಬಹುಭಾಗ ಒಳ್ಳೆಯದಾಗಬಲ್ಲುದು. ಉಳಿದ ಯಾವುದೆ ಭಾಷೆಯ ಕತೆಗಳ ಮಟ್ಟಕ್ಕೆ ನಿಲ್ಲಬಲ್ಲದು.

ಶ್ರೀನಿವಾಸರು ಆದಾಗ ಕನ್ನಡದಲ್ಲಿ ಸಣ್ಣ ಕತೆಗಳನ್ನು ಪ್ರಾರಂಭಿಸಿದ ಕಾಲದಲ್ಲಿಯೆ ಉತ್ತರ ಕರ್ನಾಟಕದಲ್ಲಿ—ದಕ್ಷಿಣ ಮಹಾರಾಷ್ಟ್ರವೆಂದು ಕರೆಯಿಸಿಕೊಳ್ಳುತ್ತಿದ್ದ—ಕನ್ನಡ ಮರೆತು ಮರಾಠಿಯ ವ್ಯಾಮೋಹದಲ್ಲಿ ಸಿಲುಕಿದ ಕನ್ನಡಿಗರ ನಾಡಿನಲ್ಲಿ—ಕನ್ನಡಕ್ಕೆ ಬೆಂಬದಿ ಮುಖ ತಿರುಹುವವರ ಬರಸೆಳೆದು ಕನ್ನಡದ ದೀಕ್ಷೆ ಕೊಡುವಲ್ಲಿ ಶ್ರಮಿಸಿದವರು ಕೆರೂರ ವಾಸುದೇವಾಚಾರ್ಯರು. ತಮ್ಮ ಸರಸ ಬರೆಹಗಳಿಂದ, ಸುರಸ ಕಾದಂಬರಿ-ಕತೆಗಳಿಂದ, ಅಂದಿನ ನಿರಭಿಮಾನಿ ಕನ್ನಡಿಗರಲ್ಲಿ ಕನ್ನಡದ ಬಗೆಗೆ ಪ್ರೀತಿ-ಅಭಿಮಾನಗಳನ್ನು ಮೊಳೆಯಿಸಿದರು. ಮುಖ್ಯವಾಗಿ ಕಾದಂಬರಿ ನಾಟಕಗಳನ್ನು ಬಹುವಾಗಿ ಬರೆದರೂ, ಕೆಲ ಕತೆಗಳನ್ನು ಬರೆದು ಉತ್ತರ ಕರ್ನಾಟಕದಲ್ಲಿ ಕಥಾ ಸಂಪ್ರದಾಯವನ್ನು ಸಾಹಿತ್ಯದಲ್ಲಿ ಪ್ರಾರಂಭಿಸಿದರೆಂದು ಹೇಳಬಹುದು. ಕನ್ನಡಸಾಹಿತ್ಯದಲ್ಲಿ ದಿ. ಕೆರೂರ ವಾಸುದೇವಾಚಾರ್ಯರೇ ಕತೆಗಳನ್ನು ಪ್ರಾರಂಭಿಸಿದರೆಂದು ಕೆಲ ಅವರ ಅಭಿಮಾನಿಗಳು ವಾದಿಸಬಹುದಾದರೂ "ಶ್ರೀನಿವಾಸರೇ ಕನ್ನಡ ಕತೆಗಳ ಆದ್ಯ ಪ್ರವರ್ತಕರೆಂದು" ವಾಸುದೇವಾಚಾರ್ಯರ ಕೃತಿ ವಿಮರ್ಶಕರಾದ 'ರಂಗನಾಥರು' ಕ್ರಿ. ಶ. ೧೯೨೭ ರಲ್ಲಿಯೇ ಒಪ್ಪಿಕೊಂಡಿದ್ದಾರೆ. ಅಂತೆಯೇ ಆ ವಾದವನ್ನು ಮುಂದುವರಿಸುವಲ್ಲಿ ಪ್ರಯೋಜನವಿಲ್ಲ. ಏನಿದ್ದರೂ ವಾಸುದೇವಾಚಾರ್ಯರ ಅಂತಃಪ್ರತಿಭೆ ಸಾಹಿತ್ಯದ ವಿವಿಧರಂಗಗಳಲ್ಲಿ ಕಾಣಿಸಿಕೊಂಡಿದೆ. ನಾಟಕ-ಕಾದಂಬರಿಗಳಲ್ಲಿ ಕಾಣುವ ವಾಸುದೇವಾಚಾರ್ಯರ ಹಿರಿಮೆಯನ್ನು ಕತೆಗಳಲ್ಲೂ ಕಾಣಬಹುದು. ಅದೇ ಸಮಸಂಸ್ಕೃತ ಶಬ್ದಗಳು ನುಸುಳಿ ಬರುವುದನ್ನು, ಹಳೆ ಹೊಸ ವಿಚಾರಗಳ ತಿಕ್ಕಾಟವನ್ನು, ಯಾವುದನ್ನೂ ಅರಗಿಸಿಕೊಳ್ಳದೆ ಎಲ್ಲವನ್ನು ಬಲ್ಲವರಂತೆ ತೋರಿಕೊಳ್ಳುವ ಆಡಂಬರದ ವ್ಯಕ್ತಿಗಳನ್ನು, ನಾಟಕ ಕಾದಂಬರಿಗಳಲ್ಲಿಯಂತೆ ಕತೆಗಳಲ್ಲೂ ಕಾಣುತ್ತೇವೆ. ಪರಂಪರೆ ರೂಢಿ ನಂಬಿಗೆಗಳ

ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಅಂತಹ ಧಾರ್ಮಿಕ ವಾತಾವರಣದಲ್ಲೂ ಆಚಾರ್ಯರ ದೃಷ್ಟಿ ಎಷ್ಟು ಕ್ರಾಂತಿಕಾರಿಯಾಗಿತ್ತೆಂಬುದನ್ನು ನೆನೆದರೆ, ಅವರಿಂದ ನಿರ್ಮಿತವಾದ ಕೃತಿಗಳ ಮಹತಿ ಇನ್ನೂ ಹೆಚ್ಚುತ್ತದೆ. ವಂಶಪರಂಪರಾಗತವಾಗಿ ಬಂದ ನಿಷ್ಠ ವೈದಿಕ ಮನೆತನದವರಾದ ಆಚಾರ್ಯರು ತಮ್ಮ ಕತೆ ಕಾದಂಬರಿಗಳಲ್ಲಿ ತೋರುವ ವಿವಿಧ ಸಮಸ್ಯೆಗಳು, ಅವುಗಳ ವಿಷಯವಾಗಿ ತಮ್ಮ ನಿರ್ದುಷ್ಟ ವಿಚಾರಗಳು, ಕಾಲಕ್ಕೆ ಹೊಂದಿಕೊಂಡು ನಡೆಯುವ ಅವರ ಸ್ವಭಾವ. ಜನತೆಯೆದುರು ವಿಚಾರಗಳನ್ನು ಮಂಡಿಸುವ ಜಾಣತನದ ರೀತಿಗಳಿಗೆ ನಿದರ್ಶನಗಳಾಗಿವೆ. ಇಂಗ್ಲೀಷ ಸಾಹಿತ್ಯವನ್ನು ಚೆನ್ನಾಗಿ ಅಭ್ಯಾಸಗೈದುದರಿಂದ ಅವರ ಅನೇಕ ಕೃತಿಗಳು ಭಾಷಾಂತರಗಳಾದರೂ, ಅವುಗಳನ್ನು ಕನ್ನಡನಾಡ ಸನ್ನಿವೇಶ, ಭಾಷೆ ಸಂಸ್ಕೃತಿ ತಿಸ್ವಾಜಾರಗಳಿಗೆ ಒಗ್ಗಿಸಿಕೊಳ್ಳುವ ರೀತಿ ಅವರ ಸೌಲ್ಕ್ಯಯನ್ನೆ ಸಾರುತ್ತದೆ.

ವಾಸುದೇವಾಚಾರ್ಯರ ಉಪಲಬ್ಧವಿರುವ ಸಣ್ಣಕತೆಗಳಲ್ಲಿ ಮುಖ್ಯವಾದವುಗಳು ತೊಳೆದ ಮುತ್ತು, ಪ್ರಕೃತಿಬಲ, ಮಲ್ಲೇಶಿಯ ನಲ್ಲೆಯರು, ಪ್ರೇಮವಿಜಯ ಅಲ್ಲದೆ ಅನುವಾದವಾದ ಬೆಳ್ಳಿಯ ಚಿಕ್ಕೆ ಇವಿಷ್ಟು. ಗಾತ್ರದಲ್ಲಿ ಕಡಿಮೆಯಾದರೂ, ಗುಣದಿಂದ ಕಾಣಬೇಕಾದುದು ಈ ಕತೆಗಳಲ್ಲಿ ಸಾಕಷ್ಟಿದೆ. ಕತೆಗಳ ವಸ್ತು. ರೂಪ, ರೀತಿನೀತಿಗಳ ಕುರಿತು ವಿಮರ್ಶಿಸುವಲ್ಲಿ, ಇಂದಿನ ಅಳತೆಗೋಲು ಹಿಡಿದಲ್ಲಿ ವಿಮರ್ಶೆಗೆ ದ್ರೋಹ ಬಗೆದಂತೆಯಾದೀತು. ಆಚಾರ್ಯರು ಕತೆಗಳನ್ನು ಬರೆದ ಕಾಲ, ಸಮಾಜ ರೀತಿ ನೀತಿಗಳ ಹಿನ್ನೆಲೆಯಲ್ಲಿಯೇ ಕತೆಗಳ ವಿಮರ್ಶಿಸಬೇಕಾದುದು ವಿಮರ್ಶಕರ ಪಾತ್ರಕಾರ್ಯ. ಅಂತೆಯೇ ಅವರು ಬರೆದ ಕತೆಗಳನ್ನು ಒಂದೊಂದಾಗಿ ವಿಮರ್ಶಿಸಿ ಆಚಾರ್ಯರ ಸಾಹಿತ್ಯ ಪ್ರತಿಭೆ ಕಾಣಬೇಕಾದುದು ಪ್ರಸ್ತುತ ಕಾರ್ಯವಾಗಿದೆ.

ಆಧುನಿಕ ಸಣ್ಣ ಕತೆಗಳ ಕಾಣುವ ನವೀನ ರೀತಿಯಂಗಳು ಆಚಾರ್ಯರ ಕತೆಗಳಲ್ಲಿ [illegible]ಲಾರವು. 'ಸತ್ತ್ವದಿಂದ, ದೃಷ್ಟಿಯಿಂದ ಗಾತ್ರದಿಂದ ಆಚಾ[illegible] ಕತೆಗಳು ನೀಳ್ಗತೆಗಳು' ಎಂದು 'ರಂಗನಾಥ'ರು [illegible]ಯಲ್ಲಿ ಹೇಳಿದ್ದಾರೆ. ಅಂತೆಯೆ ಸಾಮಾನ್ಯವಾಗಿ [illegible] ಕತೆಗಳಲ್ಲಿ ನಾವು ಕಾಣುವುದು ಕಾದಂಬರಿಯ ಛಾಯೆಯಷ್ಟೇ. ಅನೇಕ ಒಳ್ಳೆಯ ಕಾದಂಬರಿಗಳ ಬರೆದ ಅವರ [illegible] ಕತೆಗಳ ನಿರ್ಮಿಸುವಲ್ಲಿ ಕೂಡ ಜೀವನದ ಬಹುಭಾಗ[illegible] ಬಿಚ್ಚಿ ತೋರುತ್ತದೆ., ವಿವರವಾಗಿ ಪಾತ್ರಗಳ ಒಳ[illegible]ಗುಗಳ ಕಾಣಿಸುತ್ತದೆ. ಅಲ್ಲಲ್ಲಿ ಅಂದವಾದ ವರ್ಣನೆಗಳೂ, [illegible]ಪದೇಶಗಳೂ ತಲೆಹಾಕುತ್ತವೆ. ಇಂತಾಗಿ ಮೂಲವಸ್ತು ಕತೆಯ ರೀತಿಜಾಡುಗಳನ್ನೇ ಅನುಸರಿಸಿದ್ದರೂ, ರೂಪ-ರಂಗಗಳು ನೀಳ್ಗತೆಯಾಗಿ ಹೊರಬಂದಿವೆ. ಹೀಗಿರುವಾಗ ಕೆಲ ವಿಮರ್ಶಕರು ಸಣ್ಣಕತೆಗಳ ಲಕ್ಷಣಗಳೇ ಇಲ್ಲಿ ಕಾಣಬಾರದೆಂದು ವಾದಿಸಬಹುದಾದರೂ, ಕನ್ನಡ ಸಾಹಿತ್ಯದಲ್ಲಿ ಅದಿನ್ನೂ ಕತೆಗಳ ಪ್ರಾರಂಭದ ಕಾಲ, ಪ್ರಯೋಗದ ಕಾಲವೆಂಬುದನ್ನು ನೆನೆದಲ್ಲಿ, ಆಚಾರ್ಯರ ಕತೆಗಳ ಒಳಹೊಕ್ಕು [illegible]ಂಡಲ್ಲಿ, ಸಣ್ಣ ಕತೆಗಳ ಲಕ್ಷಣಗಳೂ ಇವೆಯಿಲ್ಲಿ ಎಂಬುದನ್ನು ತಿಳಿಯಬಹುದಾಗಿದೆ.

'ತೊಳೆದ ಮುತ್ತು' ಕತೆಯನ್ನು ಬರೆದ ಕಾಲ ಕ್ರಿ. ಶ. ೧೯೧೩. ಮೊದಲಲ್ಲಿ ಸ್ವತಂತ್ರ ಭಾರತದಲ್ಲಿ ಪ್ರಕಟಗೊಂಡಿತು. ವಾಸುದೇವಾಚಾರ್ಯರ ಬರೆಹಗಳಿಗಾಗಿ ಕಾದುಕುಳ್ಳಿರುತ್ತಿದ್ದ ಅಂದಿನ ಓದುಗರು ತಾಂಬಾ ಸ್ವಾಗತಿಸಿದರು. ಆಚಾರ್ಯರ ಕಥನ ಕಲೆ ಕಂಡು ಹೊಗಳಿದರು. ಕಥಾ ವಸ್ತುವು ನಿಜವಾಗಿಯೂ ಸಣ್ಣ ಕತೆಯ ವಸ್ತುವಿಗೆ ತಕ್ಕುದು. 'ಮದುವೆಯು ಪ್ರೇಮದ ನಂತರವಲ್ಲಿ' ಎಂಬ ಆಧುನಿಕ ವಿಚಾರವುಳ್ಳ ತರುಣನು ತಂದೆ ತಾಯಿಯವರ ಒಲುಮೆಗೊಳಗಾಗಿ, ಚೆನ್ನಾಗಿ ನೋಡದೆ ಮಾಡಿಕೊಂಡು, ಮಡದಿಯನ್ನು ತಂದ ನಂತರ ಕುರೂಪಿಯೆಂದೆಣಿಸಿ ಬಿಟ್ಟಾಗ, ತನ್ನ ಜಾಣೆಯಾದ ಅಕ್ಕನ ಯತ್ನದ ಮೂಲಕ ಮತ್ತೆ ಮತ್ತೆ ಕಾಣಾಗಿ ಇಚ್ಛಿಸಿ ಕೂಡಿಕೊಳ್ಳುವ ಸುಂದರ ದೃಶ್ಯವಿಲ್ಲಿ ಚಿತ್ರಿತವಾಗಿದೆ. ಕತೆಯ ತುಂಬೆಲ್ಲ ಆಚಾರ್ಯರ ಹಾಸ್ಯ ಅಲ್ಲಲ್ಲಿ ಲಾಸ್ಯವಾಡುತ್ತದೆ. ಪ್ರಾರಂಭದಲ್ಲಿ ಸ್ವಲ್ಪದರಲ್ಲಿಯೇ ಕತೆಯನ್ನು ವೇಗವಾಗಿ ಸೆಳೆದೊಯ್ದು ಮುಂದೆ ಮುಖ್ಯವಾಗಿ ಹೇಳಬೇಕಾದುದನ್ನು ನಾವಧಾನವಾಗಿ ಸಾಗಿಸಿಕೊಂಡೊಯ್ಯುವ ರೀತಿ ಅಂದವಾಗಿದೆ. ಕತೆಯ ಮೊದಲಲ್ಲಿಯೇ ಅಂದಿನ ವಿದ್ಯಾರ್ಥಿಗಳ ವಿದ್ಯಾಭ್ಯಾಸಗಳ ರೀತಿ ನೀತಿ, ತಮ್ಮಲ್ಲಿಯ ಜಾಣತನಗಳನ್ನು ವ್ಯಂಗ್ಯವಾಗಿ ಹೇಳುವ ಬಗೆ ಆಚಾರ್ಯರ ಹಾಸ್ಯದ ರೀತಿಯನ್ನು ತೋರುತ್ತವೆ. ಆಚಾರ್ಯರ ಹಾಸ್ಯ ಮನ ಕುಗ್ಗಿಸುವುದಲ್ಲ; ಹಿಗ್ಗಿಸುವಂತಹುದು. ಸಮಾಜದಲ್ಲಿಯ ಲೋಪ-ದೋಷಗಳ ಸೂಕ್ಷ್ಮವಾಗಿ ಎತ್ತಿ ತೋರಿ ಟೀಕಿಸಿಯೂ, ಕಾಣದಂತೆ ನಗೆಯಲ್ಲಿ ತೇಲಿಸಿ ಒಯ್ಯುವ ರೀತಿ ಅವರದೇ ಆಗಿದೆ. "ಗುಂಡಕ್ಕನು ತಪ್ಪುತಡೆಯಾದ ಒಗಟುಗಳನ್ನು ಹಾಕುವಾಗ........" ನೋಡು ಬಾ " ಎಂದು ಕರೆವಲ್ಲಿ' ಎಂದು ಹೇಳುವಾಗ ತೋರಿದ ಆಚಾರ್ಯರ ಕಲಾದೃಷ್ಟಿ ಅಂದವಾಗಿದೆ. ಮಾಧವನ ಮನದ ರೀತಿಯನ್ನೂ, ಅವನ ತಾಯಿಯ ಉದ್ದೇಶವನ್ನೂ, ತನಗೆ ಹೇಳಬೇಕಾದುದನ್ನೂ ಒಂದೇ ಮಾತಿನಲ್ಲಿ ಹೇಳುವುದನ್ನು ಕಂಡಾಗ, ಆಚಾರ್ಯರ ಜಾಣ್ಮೆ ಕಂಡು ಬಾರದೆ ಇರದು. ಮುಂದೆ ಕತೆ ಸಾಗಿಸುವಲ್ಲಿ ಓದುಗರಿಗೆ ಯಾವ ವಿಚಾರಗಳೂ ಹೊಳೆಯದಂತೆ ಆತುರ, ಕುತೂಹಲಗಳನ್ನು ಹುಟ್ಟಿಸುವ ರೀತಿ ಆಚಾರ್ಯರ ಉತ್ತಮ ಕತೆಗಾರಿಕೆಯ ಗುರುತಾಗಿದೆ. ಮಾಧವ ಚಂದ್ರಭಾಗೆಯರು ಮತ್ತೆ ಸಂದರ್ಶಿಸುವ ಸನ್ನಿವೇಶವನ್ನು ಆಚಾರ್ಯರು ಬಹು ಕೌಶಲ್ಯದಿಂದ ಚಿತ್ರಿಸಿದ್ದಾರೆ. ಅಲ್ಲಲ್ಲಿ ಪಾಶ್ಚಾತ್ಯರ ರೀತಿ ನೀತಿಗಳ ಅಂಧಾನುಕರಣ ಮಾಡುವ ಸುಧಾರಕರನ್ನು ಟೀಕಿಸುತ್ತ ನಗೆಗಡಲಲ್ಲಿ ಮುಳುಗಿಸುತ್ತ ತಾವು ಸಾಧಿಸಬೇಕಾದ ಕಾರ್ಯವನ್ನು ಸಾಧಿಸಿದ್ದಾರೆ. ಸುಶಿಕ್ಷಿತ, ಸುಧಾರಕ ತರುಣನಿಗೆ, ಮರುಳುಗೊಳಿಸುವ ಒಯ್ಯಾರದ ರೀತಿಯಲ್ಲಿ ಕಾಣಿಸಿಕೊಂಡಾಗಲೇ, ಗುಂಡಕ್ಕ ಚಂದ್ರಭಾಗೆಯಾಗಿ ಒನಪು ಒಯ್ಯಾರದ ಓರಣಗಳಲ್ಲಿ ಮೋಹಗೊಳಿಸಿದಾಗಲೇ

ಮಾಧವನು ಅವಳನ್ನು ಸ್ವೀಕರಿಸುವನೆಂತೆಂಬುದನ್ನು ತೋರುತ್ತ, ಆಚಾರ್ಯರು ಬದಲಾಗುತ್ತಿರುವ ಕಾಲ ವಿಚಾರಗಳನ್ನು ತೋರಿ, ನವಯುವಕರ ಓಟವೆತ್ತ ಸಾಗಿದೆಯೆಂಬುದನ್ನು ವ್ಯಂಗ್ಯವಾಗಿ ಕಾಣಿಸುವ ಬಗೆ ಯಥಾಯೋಗ್ಯವಾಗಿವೆ. ಆಚಾರ್ಯರು ಹೊಸದನ್ನು ಎತ್ತಿಹಿಡಿದಿಲ್ಲ. ಹಳೆಯದನ್ನು ತಲೆಯ ಮೇಲೆ ಹೊತ್ತಿಲ್ಲ. ಆದರೆ ಹಳೆಯದರಲ್ಲಿಯ ಒಳ್ಳೆಯದರ ಜತೆ ಹೊಸ ಯುಕ್ತ ವಿಚಾರಗಳ ಸಂಗಮವಾಗಬೇಕೆಂಬ— ಅವರದೇ ಆದ— ವಾದಸರಣಿ, ಇಲ್ಲಿ ಹಿನ್ನೆಲೆಯಲ್ಲಿ ಪ್ರತಿಮಾತುಗಳಲ್ಲಿಯೂ ವ್ಯಕ್ತವಾಗುತ್ತದೆ. ಈ ಕಥೆಯಲ್ಲಿ ಮುಖ್ಯವಾಗಿ ಓದುಗರ ಮನ ಮೆಚ್ಚುವಂತೆ ಮಾಡುವಂತಹವು ಆಚಾರ್ಯರ ಕಥನರೀತಿ, ಭಾವುಕ್ಯದ ಜಾಣತನದ ಕಲ್ಪನೆ, ಕತೆಯ ತುಂಬಾ ಕಾಣುವ ತಿಳಿನಗೆಗಳು. ಶೈಲಿ ಹಳೆಯ ರೀತಿಯನ್ನು ಅನುಸರಿಸಿದರೂ ಬೇಸರು ಬರುವಂತಹದಿಲ್ಲ. ಸನ್ನಿವೇಶಗಳ ಚಿತ್ರಿಸುವಲ್ಲಿ, ಲೋಪದೋಷಗಳ ಎತ್ತಿತೋರುವಲ್ಲಿ ಆಚಾರ್ಯರು ಉಪಯೋಗಿಸುವ ಭಾಷೆ ಬಹು ಮಾರ್ಮಿಕವಾದುದು. ಜನಸಾಮಾನ್ಯರ ಮನೆಮಾತುಗಳಲ್ಲಿಯೇ ಚಿತ್ರಿಸಿ ಓದುಗರಿಗೆ ಯಥಾವತ್ತಾಗಿ ಕತೆಯ ಕಲ್ಪನೆಯನ್ನುಂಟುಮಾಡಿಕೊಡುವ ರೀತಿ ಯುಕ್ತವಾಗಿದೆ.

ಪ್ರಕೃತಿಬಲವು ವಾಸುದೇವಾಚಾರ್ಯರ ಕ್ರಾಂತಿಮಾರ್ಗದ ಪ್ರತೀಕವು. ಹಳೆ ಹೊಸ ವಿಚಾರಗಳ ತಿಕ್ಕಾಟದ ಕಾಲ ಅವರದು. ಮಹಾರಾಷ್ಟ್ರದಲ್ಲೆಲ್ಲಾ ಪುನರ್ವಿವಾಹದ ಗುಲ್ಲೆದ್ದು, ಅನೇಕ ಪಂಡಿತರು, ಮಠಾಧೀಶರು, ಸುಧಾರಕರು ವಾದ-ವಿವಾದಗಳಲ್ಲಿ ತೊಡಗಿದ್ದ ಕಾಲವದು. ಯಾವುದೂ ಇತ್ಯರ್ಥವಾಗದೆ ಪರಸ್ಪರ ದೋಷಾರೋಪಣೆಯಲ್ಲಿಯೇ ವೇಳೆ ಕಳೆಯುತ್ತ ಬಾಯಿಮಾತುಗಳಲ್ಲಿಯೇ ಸುಧಾರಣೆ ಎಸಗಲು ಯತ್ನಿಸುತ್ತಿದ್ದ ಸುಧಾರಕರ ಕಾಲವದು. ಇಂತಹ ಪ್ರಕ್ಷುಬ್ಧ ವಾತಾವರಣದಲ್ಲಿ ವೈದಿಕಮನೆತನದ, ಅದೂ ಸುಪ್ರಸಿದ್ಧ ಆಚಾರ್ಯ ಮನೆತನದವರಾದ ವಾಸುದೇವಾಚಾರ್ಯರು, ಈ ಮೊದಲು ಪೂರ್ಣವಾಗಿ ವಿರೋಧಿಸದಿದ್ದರೂ ವಿಧವಾವಿವಾಹವನ್ನು ಒಪ್ಪದವರು, ಇದೀಗ ಪುನರ್ವಿವಾಹವು ಅಂತಃಕರಣಕ್ಕೆ ಒಪ್ಪುವ ಮಾತೆಂಬುದನ್ನು ಇಲ್ಲಿ ಹೇಳಹೊರಟಿದ್ದಾರೆ— ಎಂದಲ್ಲಿ, ಅಂದಿನ ಧಾರ್ಮಿಕರಲ್ಲಿ ಅದೆಂತಹ ಭಾವನೋದ್ರೇಕಗಳಿಗೆ ಆಚಾರ್ಯರು ಕಾರಣರಾಗಿರಬಹುದು ಎಂಬುದನ್ನು ಕಲ್ಪಿಸಬಹುದಾಗಿದೆ. ಅಂತೆಯೆ ಆಚಾರ್ಯರು ಕ್ರಾಂತಿಕಾರರಾಗಿ ಅಂದಿನ ಕನ್ನಡಿಗರಿಗೆ ಕಂಡಿದ್ದಲ್ಲಿ ಆಚ್ಚರಿಯಿಲ್ಲ. ಆಚಾರ್ಯರಲ್ಲಿ, ತಮ್ಮ ನಿರ್ಮಲಾಂತಃಕರಣಕ್ಕೆ ಎನಿಸಿದುದನ್ನು ನಿರ್ಭಯವಾಗಿ ಮಂಡಿಸುವ ಕೆಚ್ಚಿತ್ತೆಂಬುದನ್ನು ಅಂದಿನ ಕನ್ನಡಿಗರು ಕಂಡಮಾತಾಗಿತ್ತು. 'ಇಂದಿರೆ' ಯಲ್ಲಿ ಕಾಣಬರುವ ಆಚಾರ್ಯರ ವಿಚಾರಗಳ ತಾಕಲಾಟವೇ ಇಲ್ಲಿಯೂ ಕಾಣಬರುತ್ತವೆ. ಆದರೆ ಅಲ್ಲಿ ತೋರದ ಧೈರ್ಯವನ್ನು ಇಲ್ಲಿ ತೋರಿ, ವಿಧವಾವಿವಾಹ ಗೈಯಿಸಿದ್ದಾರೆ. ಅನ್ಯೋನ್ಯವಾಗಿ ಬೆಳೆದು ಬಂದ ಆನಂದ-ವತ್ಸಲೆಯರ ವಿವಾಹವು, ಅವರ ತಂದೆ ತಾಯಿಗಳ ವಿಚಾರಗಳ ತಿಕ್ಕಾಟದ ಮೂಲಕ ತಪ್ಪಿ, ವತ್ಸಲೆಯ ವಿವಾಹವು ಅಯೋಗ್ಯನೊಡನೆ ಆಗುತ್ತದೆ. ಕೆಲದಿನಗಳಲ್ಲಿಯೇ ಪತಿಯೊಂದಿಗೆ ಬಾಳಲಾಗದೆ ಮನೆಗೆ ಬರುತ್ತಾಳೆ. ಮುಂದೆ ಕೆಲ ವರುಷಗಳಲ್ಲಿ ವಿಧವೆಯಾದಾಗ, ಮತ್ತೆ ಆನಂದನಲ್ಲಿ ಪ್ರೇಮವಂಕುರಿಸುತ್ತದೆ. ಆದರೂ ಅವನಲ್ಲಿ ವಿವೇಕವಿರುವ ಮೂಲಕ ಸುಮ್ಮನಿರುತ್ತಾನೆ. ಮನದಲ್ಲಿ ಅವಳ ಪಾಡಿಗಾಗಿ ಕೊರಗುತ್ತಿದ್ದಾಗಲೆ, ಮಾಧವರಾಯರು ಪುನರ್ವಿವಾಹದ ವಿಚಾರ ಆವನೆದುರು ಮಂಡಿಸುವರು. ಬಹುವಿಚಾರದ ನಂತರ ಒಪ್ಪಿ ವತ್ಸಲೆಯ ಒಪ್ಪಿಗೆ ಕೇಳಿದಾಗ, ಅವಳು ತಡವರಿಸಿದರೂ ಮತ್ತೆ ಆಶೆ ಒಪ್ಪಹಚ್ಚುವುದು. ಕೊನೆಗೆ ಅವರಿಬ್ಬರ ವಿವಾಹದಲ್ಲಿ ಕತೆ ಮುಗಿಯುತ್ತದೆ. ಸಮಾಜದ ಒಂದು ಹೊಸ ಚಿತ್ರವನ್ನು ಇಲ್ಲಿ ಕತೆಯಾಗಿ ರೂಪಿಸಿದ್ದಾರೆ. ಉದ್ದೇಶ ನೇರವಾಗಿ ಸಾಧಿಸಿದೆ. ಆನಂದ-ಮಾಧವರಾಯರ ಮುಖವಾಗಿ ತಮ್ಮ ವಿಚಾರಗಳನ್ನೆಲ್ಲ ಹೊರಹೊರಡಿಸಿ, ವಿಧವಾವಿವಾಹವನ್ನು ಮಾಡಲಡ್ಡಿಯಿಲ್ಲವೆಂಬ ಅಭಿಪ್ರಾಯಕ್ಕೆ ಓದುಗರನ್ನು ಅಣಿಗೊಳಿಸುತ್ತಾರೆ. ಆದರೆ ಸ್ತ್ರೀಪುರುಷರಲ್ಲಿ ನಿಸರ್ಗವಾದ ಪ್ರೇಮಬಂಧನವಿದ್ದರೆ ಮಾತ್ರ—ಎಂದು ಅಪ್ರತ್ಯಕ್ಷವಾಗಿ ತೋರುತ್ತಾರೆ. ಅಂತೆಯೆ ತಮ್ಮ ವಿಚಾರವನ್ನು, ಕತೆಯ ತಲೆಬರೆಹ 'ಪ್ರಕೃತಿಬಲ' ದಲ್ಲಿ ತುಂಬ ಉಚಿತವಾಗಿ ವ್ಯಕ್ತಗೊಳಿಸಿದ್ದಾರೆ. ಕೇವಲ ಸುಧಾರಣೆಗಳನ್ನೆಲ್ಲ ಕಣ್ಣು ಮುಚ್ಚಿ ಒಪ್ಪಬೇಕೆನ್ನುವ ಗುಂಪಿಗೆ ಸೇರಿದವರಲ್ಲ ಆಚಾರ್ಯರು. ಮನಕ್ಕೆ, ಸದಸದ್ವಿವೇಕಕ್ಕೆ ಸರಿಯೆನಿಸುವುದನ್ನು, ಅಂತಃಕರಣಕ್ಕೆ ಉಚಿತ ಎನಿಸುವುದನ್ನು ಮಾತ್ರ ವಿಚಾರಿಸಿ ಒಪ್ಪುವವರು ಅವರು, ಎಂಬುದನ್ನು ಇಲ್ಲಿ ನಾವು ಮನಗಾಣುತ್ತೇವೆ. ಆಚಾರ್ಯರು ಚಿತ್ರಿಸಿದ ಆನಂದನ ಪಾತ್ರವು ಓದುಗರ ಮನದಲ್ಲಿ ಕೊನೆಯವರೆಗೆ ನಿಲ್ಲುವಂತಹದು. ಸುಶಿಕ್ಷಿತ ಸುಸಂಸ್ಕೃತನಾದ ತರುಣನಲ್ಲಿ ವಿವೇಕದ ಜತೆಗೂಡಿ ಆದರ್ಶಪ್ರಾಯನಾಗಿದ್ದಾನೆ. ಎಂತಹ ಪ್ರಸಂಗದಲ್ಲೂ ವಿವೇಕ ಜಾಗೃತವಾಗಿದೆ; ಸಂಯಮವಿದೆ; ಸುವಿಚಾರ ಶಕ್ತಿಯಿದೆ. ಜತೆಯೆ ಅಂತಃಕರಣಕ್ಕೆ ಬಗ್ಗುವ ಕಾಲಕ್ಕೆ ತಲೆಬಾಗುವ ವಿನಯ-ವಿವೇಕವೂ ಇದೆ. ಅಂತೆಯೆ ವತ್ಸಲೆಯನ್ನು ದೀರ್ಘಕಾಲದ ವಿಚಾರದನಂತರ ವಿವಾಹವಾಗಲು ಒಪ್ಪುತ್ತಾನೆ. ವತ್ಸಲೆಯು ಕೂಡ ಸುಶಿಕ್ಷಿತಳಾಗಿ ಸುವಿಚಾರಿಯಾಗಿ ಆದರ್ಶ ಹಿಂದು ಮಹಿಳೆಯಾಗಿ ಓದುಗರ ಮುಂದೆ ನಿಲ್ಲುತ್ತಾಳೆ. ಕತೆಯಲ್ಲಿಯ ಮಾಧವರಾಯರು ಸುಧಾರಕರ ಪ್ರತಿನಿಧಿಗಳಾಗಿದ್ದಾರೆ. ಒಟ್ಟಾರೆ ಇಲ್ಲಿಯ ಪಾತ್ರಗಳು ಒಳ್ಳೆ ಉದಾತ್ತವಾಗಿದ್ದು ಕತೆಗಾರರ ಉದ್ದೇಶಕ್ಕೆ ಅನುಕೂಲವಾಗಿ ಸಾಗುತ್ತವೆ.

'ಪ್ರೇಮವಿಜಯ'ವು ಐತಿಹಾಸಿಕ ಕತೆಯು. ಧೈರ್ಯ, ಸಾಹಸ, ಪ್ರೇಮಗಳಿಂದೊಡಗೂಡಿದ ರೋಮಾಂಚಕಾರಿ ಕಥಾವಸ್ತು. ಆದರೂ ಇಲ್ಲಿ ಬರುವ ಕನ್ನಡನಾಡ ವರ್ಣನೆ ತುಂಬಾ ಸುಂದರವಾಗಿ ವಾಚಕರ ಮನ ತಣಿಸುತ್ತದೆ. ಆಚಾರ್ಯರು ಇದೇ ನಾಡವರಾದ್ದರಿಂದ, ಬಾದಾಮಿಯ ಸುತ್ತುಮುತ್ತಣ ಚೆಲುವನ್ನು

ಸೂರೆಗೊಂಡಿದ್ದಾರೆ ಇಲ್ಲಿ. ದಂತಿವರ್ಮನ ಧೈರ್ಯ-ಸಾಹಸ-ಸ್ಥಿರ ಪ್ರೇಮಗಳು ಬಹು ಅಂದವಾಗಿ ಒಡಮೂಡಿವೆ. ಪದ್ಮಿನಿಯ ಪ್ರೇಮವು ಅಸದೃಶವಾದುದು ಎಂಬುದನ್ನು ಚಾತುರ್ಯದಿಂದ ಕಾಣಿಸಿದ್ದಾರೆ. ದಂತಿವರ್ಮನು ಮರಣಹೊಂದಿದನೆಂದು ನಂಬಿ ಸಾಯಲೆಳಸಿದಾಗ, ಯೋಗಿಯಾಗಿ ಕಪಟವೇಷದಲ್ಲಿ ಬರುವ ದಂತಿವರ್ಮನೊಡನೆಯ ಸಂಭಾಷಣೆಯಲ್ಲಿ ಗಾಂಭೀರ್ಯ ತುಂಬಿದೆ. ಶಬ್ದಗಳು ಉಚಿತವಾಗಿ ಬಳಸಲ್ಪಟ್ಟಿವೆ. ಇಬ್ಬರ ವ್ಯಕ್ತಿತ್ವವನ್ನೂ ಎತ್ತಿ ತೋರುತ್ತವೆ. ಜಗ್ಗನಂತಹ ನೀಚಾಧಮರು ಅಲ್ಲಲ್ಲಿ ಇದ್ದರೂ, ಅವರಿಗೆ ತಕ್ಕ ಶಾಸ್ತಿ ಅಂದಿನ ದೊರೆಗಳಿಂದ ದೊರೆಯುತ್ತಿತ್ತೆಂಬುದನ್ನು ತೋರಿ, ಕನ್ನಡನಾಡ ಉಜ್ವಲ ಇತಿಹಾಸವನ್ನು ಅಭಿಮಾನದಿಂದ ಕಾಣಿಸಿದ್ದಾರೆ. ಪುಲಿಕೇಶಿಯ ಔದಾರ್ಯವನ್ನು ಕಾಣಿಸಿ ಕಳಸನಿಟ್ಟಿದ್ದಾರೆ ಕತೆಗೆ. ಭಾಷೆ ತುಂಬಾ ಬೆಡಗು-ಬಿಗುಹುಗಳಿಂದೊಡಗೂಡಿದೆ. ಸಮಸಂಸ್ಕೃತ ಶಬ್ದಗಳು ಧಾರಾಳವಾಗಿ ಉಪಯೋಗಿಸಲ್ಪಟ್ಟಿದ್ದರೂ ಅರ್ಥಪೂರ್ಣವಾಗಿ ತುಂಬು-ಚಿತ್ರಗಳಿಂದೊಡಗೂಡಿವೆ. ಕತೆ ಎಲ್ಲಿಯೂ ನಿಲ್ಲದೆ ಸರಾಗವಾಗಿ ಓಡುತ್ತದೆ. ಕುತೂಹಲ ಕೆರಳಿಸುತ್ತದೆ; ಅಭಿಮಾನ ಉಕ್ಕಿಸುತ್ತದೆ. ಪ್ರೇಮವು ಸಣ್ಣಕತೆಯ ವಸ್ತುವಾಗಿದ್ದರೂ ಅನೇಕ ಘಟನೆಗಳು ಪಾತ್ರಗಳು ಬಂದು, ಚಿಕ್ಕ ಕಾದಂಬರಿಯನ್ನಾಗಿಸಿವೆ 'ಪ್ರೇಮ-ವಿಜಯ'ವನ್ನು.

'ಬೆಳ್ಳಿಯ ಚಿಕ್ಕೆ'ಯು ಕಾನನ್ ಡಾಯಿಲ್‌ರ ಕತೆಯ ಅನುವಾದವು. ಅನುವಾದವೆನಿಸದಷ್ಟು ತುಂಬಾ ಸ್ವಾಭಾವಿಕವಾಗಿ ಕತೆ ಹೇಳುತ್ತಾರೆ ಆಚಾರ್ಯರು. ಆಂಗ್ಲದೇಶದ ವಾತಾವರಣವನ್ನು ಕನ್ನಡ ದೇಶದ ವಾತಾವರಣಕ್ಕೆ ಒಗ್ಗಿಸಿಕೊಂಡರೀತಿ ಉಚಿತವಾಗಿದೆ. 'ಪತ್ತೇದಾರಿ' ಕಥೆಯಾದರೂ, ಆಚಾರ್ಯರ ಕಟೂಕ್ತಿ, ವ್ಯಂಗ್ಯಗಳು ಅಲ್ಲಲ್ಲಿ ಕಾಣಿಸಿಕೊಂಡು ಕಳೆ ತುಂಬಿವೆ. ಸರಲಾಕ್ಷ ಹುಲಿಮೀಸೆಯ ಮಧುರಸ್ವಭಾವ ಓದುಗರ ಮನ ಸೆಳೆಯುತ್ತದೆ.

ಕೊನೆಯದಾಗಿ 'ಮಲ್ಲೇಶಿಯ ನಲ್ಲೆಯರು' ಆಚಾರ್ಯರ ಹಾಸ್ಯವೈಖರಿಯನ್ನು ಪ್ರತಿಬಿಂಬಿಸುವ, ಅವರ ಪ್ರತಿಭೆಯನ್ನು ಎತ್ತಿ ತೋರುವ ಉತ್ತಮ ಕಲಾಕೃತಿಯಾಗಿದೆ. ಆಚಾರ್ಯರ ತಿಳಿಹಾಸ್ಯ ಹಳ್ಳಿಯ ಜೀವನದ ಹಿನ್ನೆಲೆಯಲ್ಲಿ ತುಂಬ ಅಂದವಾಗಿ ಸ್ವಾಭಾವಿಕವಾಗಿ ಮೂಡಿಬಂದಿದೆ. ಇಲ್ಲಿ ಬರುವ ಮಲ್ಲೇಶಿ ಅಶಿಕ್ಷಿತನಾದರೂ ತುಂಬ ಸಂಸ್ಕೃತಿಯುಳ್ಳವನು. ಒಡೆಯನ ಸೇವೆ ಸಲ್ಲಿಸುವಲ್ಲಿ ಮೋಸವಿಲ್ಲ. ಭೂಮಿಯನ್ನು ತಾಯಿಯಾಗಿ ಕಂಡು, ಬೆವರುಹರಿಯುವಂತೆ ದುಡಿದು, ಮಣ್ಣಿಂದ ಹೊನ್ನು ದೊರಕಿಸುವ ಶಕ್ತಿ-ಸಾಮರ್ಥ್ಯಕ್ಕೆ ಕಡಿಮೆಯಿಲ್ಲ ಮಲ್ಲೇಶಿಯಲ್ಲಿ. ಇವನಲ್ಲಿಯ ಪೆದ್ದತನವನ್ನು ಇಲ್ಲದಾಗಿಸಿ ಶಿಕ್ಷಣವಿತ್ತು ತನ್ನ ಪತಿಯನ್ನಾಗಿ ಸ್ವೀಕರಿಸಿದ ಗಿರಿಬಾಯಿಯ ಪಾತ್ರವು ಆದರ್ಶವೂ ಅನುಕರಣೀಯವೂ ಆಗಿದೆ. ಪ್ರಾರಂಭದಿಂದಲೇ ಕನ್ನಡನಾಡ ಹಳ್ಳಿಯ ಜೀವನ ಓದುಗರ ಕಣ್ಣೆದುರು ಕುಣಿಯುತ್ತದೆ. ಜಡೆಯ ಹಾಸ್ಯವು ತೇಲಿಬರುತ್ತದೆ. ಮಲ್ಲೇಶಿಯ ಮಾತು-ಮಾತುಗಳಲ್ಲಿಯೂ ಅಂದವಾದ ದೇಸಿಭಾಷೆಯಲ್ಲಿ ಹಾಸ್ಯ ಹೊನಲಾಗಿ ಹರಿಯುತ್ತದೆ. "ಹೆಂಗು ಸೊಂದೆಯೋ ಆಡಮುಟ್ಟ ಮಿಕ ನೋಡ್ರಿ! ಆದರ ನೆಲೆ ಮಾತ್ರ ಯಾರಿಗೂ ಸಿಕ್ಕಿಲ್ಲ" ಎಂದು ಮಲ್ಲೇಶಿ ಹೇಳುವ ಪ್ರಸಂಗ ಯಾರನ್ನೂ ಹೊಟ್ಟೆ ಹುಣ್ಣಾಗುವಂತೆ ನಗಿಸುವುದು. ಮಲ್ಲೇಶಿಯ ನಾಲ್ಕಾರು ಮಾತುಗಳನ್ನು ಕೇಳುವಲ್ಲಿಯೆ ಅವನ ವ್ಯಕ್ತಿತ್ವ ಪೂರ್ಣವಾಗಿ ಮೂಡಿ ನಿಲ್ಲುತ್ತದೆ ಓದುಗರ ಮನದಲ್ಲಿ. ಮದುವೆಯ ಬಗೆಗೆ ಅವನಲ್ಲಿರುವ ವಿಚಾರಗಳನ್ನು ಅವನ ಭಾಷೆಯಲ್ಲಿಯೇ ಕೇಳಬೇಕು; ಆಚಾರ್ಯರ ಲೆಕ್ಕಣಿಕೆ ಮೂಡಿಸಬೇಕು. ಮಲ್ಲೇಶಿ— ಧಣಿಯರ ಸಂಭಾಷಣೆ, ಬೇಡವೆಂದರೂ ತುಂಬ ನಗೆ ತರುತ್ತದೆ ಓದುಗರಲ್ಲಿ. ಈ ನಗೆಯೆ ಕೊನೆಯ ವರೆಗೆ ಸಾಗಿಬರುತ್ತದೆ ಓದುಗರೊಡನೆ. ಆಚಾರ್ಯರ ವ್ಯಕ್ತಿತ್ವ, ಪ್ರತಿಭೆ ಇಲ್ಲಿ ಮೂಡಿನಿಂತಿವೆ. ಮಲ್ಲೇಶಿಯ ಪಾತ್ರನಿರೂಪಣೆಯಲ್ಲಿ ಆಚಾರ್ಯರ ಕಲಾಸೃಷ್ಟಿ ಸೂರೆಗೊಂಡು ನಿಂತಿದೆ. ಮಲ್ಲೇಶಿಯು ಕನ್ಯಾಶೋಧಕ್ಕೆ ಹೊರಟ ಪ್ರಸಂಗ ಇನ್ನೂ ಅಂದವಾದುದು. ಆಚಾರ್ಯರ, ಮಾನವಸ್ವಭಾವ ಒಳಹೊಕ್ಕು ಕಾಣುವ ಅಂತರ್ದೃಷ್ಟಿಯ ಪರಿಚಯ ಇಲ್ಲಿ ಆಗದಿರದು.

ಮಲ್ಲೇಶಿಯ ಮರುಳುತನ ಹೋಗಲಾಡಿಸಿ ಸಾವಧಾನವಾಗಿ ತಿಳಿವಿತ್ತು ಸುಶಿಕ್ಷಿತನನ್ನಾಗಿಸುವ ಗಿರಿಬಾಯಿಯು ಓದುಗರ ಮನ ಸೆಳೆಯುತ್ತಾಳೆ ಕತೆಯ ಕೊನೆಯ ಭಾಗದಲ್ಲಿ. ಧಣಿಯರ ಔದಾರ್ಯ ಸ್ಮರಣೀಯವಾಗಿದೆ. ಮನೆಯಲ್ಲಿ ಆಳುಗಳನ್ನು ಮಕ್ಕಳನ್ನಾಗಿ ಕಾಣುವ ಬಗೆ ಆದರ್ಶವಾಗಿದೆ. ಹಳ್ಳಿಯ ಸಾಮಾನ್ಯ ಹೆಣ್ಣುಮಗಳಾದರೂ, ಇಂದಿನ ಸುಶಿಕ್ಷಿತ ಸುಸಂಸ್ಕೃತ ಸ್ತ್ರೀಯರನ್ನು ಯಾವುದೇ ಮಟ್ಟದಲ್ಲಿ ಮೀರಿಸುವ ಯೋಗ್ಯತೆಯುಳ್ಳ ಗಿರಿಬಾಯಿಯ ಪಾತ್ರವನ್ನು ತುಂಬಾ ಅಂದವಾಗಿ ಚಿತ್ರಿಸಿದ್ದಾರೆ ಆಚಾರ್ಯರು. ಮಲ್ಲೇಶಿ-ಗಿರಿಬಾಯಿಯರಲ್ಲಿ ಒಡಮೂಡುವ ಪ್ರೇಮ ನಿರ್ಮಲವಾದುದು. ಮದುವೆಯೆ ಬೇಡವೆಂದ ಮಲ್ಲೇಶಿಯು, ರಸಿಕರಂಗನಾಗಿ ಗಿರಿಬಾಯಿಯ ಪ್ರೇಮಮೂರ್ತಿಯಾಗಿ ನಿಲ್ಲುವ ಬಗೆ ತುಂಬಾ ಸುಂದರವಾಗಿ ಯುಕ್ತವಾಗಿ ಒಡಮೂಡಿ ಬಂದಿದೆ. ಒಟ್ಟಾರೆ ಆಚಾರ್ಯರ ಕಲಾಸೃಷ್ಟಿಯಲ್ಲಿಯ ರತ್ನವಿದು 'ಮಲ್ಲೇಶಿಯ ನಲ್ಲೆಯರು' ಎಂದು ಹೇಳಬಹುದು. ಭಾಷೆ, ಕತೆಹೇಳುವ ರೀತಿ, ಕತೆ ಮುಂದೋಡಿಸಿಕೊಂಡೊಯ್ವ ಬಗೆ ಎಲ್ಲ ಒಂದಕ್ಕಿಂತ ಒಂದು ಅಂದವಾಗಿವೆ.

ಇಂತು ತಮ್ಮ ಕಲಾಪ್ರತಿಭೆಯಿಂದ ಸಾಹಿತ್ಯಸೇವೆಗೈದ ವಾಸುದೇವಾಚಾರ್ಯರು, ತಮ್ಮ ಕತೆಗಳಿಂದ ಕನ್ನಡ ಸಾಹಿತ್ಯದಲ್ಲಿ ತಮ್ಮದೇ ಆದ ಸ್ಥಾನ ಪಡೆದಿದ್ದಾರೆ. ಯಾರಿಲ್ಲದ ಕಾಲದಲ್ಲಿ ಮುಂಬರಿಗಿ ಬಂದು ಕಥಾಪ್ರಪಂಚ ಪ್ರಾರಂಭಿಸಿ, ಮುಂದಿನ ದಾರಿಯನ್ನು ತೋರಿ ಮುನ್ನಡೆಸಿದ ಕೀರ್ತಿ ಉತ್ತರ ಕರ್ನಾಟಕದಲ್ಲಿ ಅವರಿಗೆ ಸಲ್ಲುತ್ತದೆ. ಅವರಿಗೆ ಕನ್ನಡ ನಾಡು ಎಂದಿಗೂ ಋಣಿಯಾಗಿದೆ.

ಕಲ್ಪನಾವಿಲಾಸ

ಶ್ರೀ. ಎಚ್.ಜಿ. ಉಪಾಧ್ಯಾಯ ಎಂ.ಎ ಹೈದರಾಬಾದ್

ಕಲ್ಪನೆ ಯೆಂಬುದು ದೇವ ಮಾನವಗೆ
ಕರುಣಿಸಿ ಕೊಟ್ಟಿರುವ ವರದಾನವು
ಬಾಳ್ವೆಯ ಮರುಭೂಮಿ ಹರಗುತಿರ್ದವಗೆ
ಇದರ ವಿಲಾಸವೆ ವರಮಾನವು.

ಜೀವನದಿತಿಮಿತಿಯರಿತ ಮಾನವನು
ಅದರ ಕಾರ್ಪಣ್ಯತೆಗೆ ಸೊರಗಿ ಸೋತಿಹನು.
ಅದಕೆಂದೆ ಕಲ್ಪನಾ ಲೋಲನಾಗಿಹನು—
ಅದರ ವಿಲಾಸದಿ ಬದುಕಿ ಬಾಳಿಹನು.

ಹೃದಯದೌದಾರ್ಯದ ತಳಹದಿ ಇರಿಸಿ
ಸದ್ಭಾವ ಮಂದಿರದ ಕಟ್ಟಡವ ನಿಲಿಸಿ
ತಾದಾತ್ಮ್ಯ ತೈಲದ ನಿಡುಧಾರೆ ಸುರಿಸಿ
ಅನುಭೂತಿ ಜ್ಯೋತಿಯ ಎಡೆಬಿಡದೆ ಉರಿಸಿ
ಕಲ್ಪನಾ ದೇವಿಯನಾರಾಧಿಸಿಹನು
ತನ್ನನೆ ತಾಮರೆತು ಆನಂದಿಸಿಹನು. ೧

ಓ! ದೇವಿ! ನೀ ಮಾಟಗಾತಿಯೆಂದು
ಹಳಿವನು ವ್ಯವಹಾರವಾದಿ ನೊಂದು.
ನಿನ್ನಯ ಸೊಗವದು ಬರಿಭ್ರಮೆಯೆಂದು
ಜರೆವನು ವಾಸ್ತವವಾದಿ ಬೆಂದು.

ಮುಗಿಲ ಮಲ್ಲಿಗೆಯೆಂದು ಮೃಗಜಲವೆಂದು
ಬರಿಬಯಲ ಭ್ರಮೆಯೆಂದು ಸ್ವರ್ಣಮೃಗವೆಂದು
ಹಲತೆರದಿ ನಿನ್ನನು ದೂಷಿಸಿಹರು
ವ್ಯರ್ಥವಾದದಿ ಮನವ ಶೋಷಿಸಿಹರು.

ನೀ ಸತ್ಯ ಬೋಧಿನಿಯು ಸುಖದ ಸಾಧನೆಯು
ತೃಪ್ತಿದಾಯಕ ತಪ ಆರಾಧನೆಯು.
ಕಾಣದ ತಂಗಾಳಿ ಸುಳಿ ತೀಡಿಬರಲು
ಮೈಯೊಡ್ಡಿ ಮನವದು ಸುಖಿಸದಿಹುದೆ!
ಬಾನಂಗಳವದು ಶೂನ್ಯವಿದ್ದೇನು?
ವಿಹರಿಪ ವಿಹಗಕೆ ಸುಖವೀಯದೆ!

ಓ! ದೇವಿ! ನಿನಗಿದೊ ಶರಣೆಂಬೆ
ಎನ್ನ ಜೀವನವನ್ನು ಬೆಳಗಂಬೆ! ೨

ನಿನ್ನ ಮಿತ ಒಲುಮೆಯ ಬಲದಿಂದೆ
ನಿರ್ಜೀವ ಕಲ್ಲಿನ ಕೆತ್ತನೆಯಿಂದೆ
ಚೆಲುವ ತುಂಬಿಹನಿದೊ ರೂವಾರಿ
ಜಗ 'ಭಲೆ' ಯೆಂದಿತು ಹೌಹಾರಿ.

ಲೋಹದ ಅತಿಕಠಿಣ ತಂತಿಯಿಂದೆ
ಮೃದು ಮಧುರಭಾವದ ಬೆರಳಿಂದೆ
ನುಡಿಸಿದ ವೈಣಿಕ ನಯದಿಂದೆ
ಜಗ ಕೇಳಿ ನಲಿದುದಕೆ ಏನೆಂಬೆ! ೩

ಕವಿಕಾಳಿದಾಸನ ವಿರಹ ಕಲ್ಪನೆಯು
ಪ್ರಣಯಿನೀಜನಕಮರ ಸಂದೇಶವು—
ಕವಿವಾಲ್ಮೀಕಿಯ ರಾಮಾಯಣವು
ಭುವನಾಧಿಪತಿಗಳಿಗೆ ಆದರ್ಶವು.
ಕವಿ ಷೇಕ್ಸ್ಪಿಯರನ ಪಾತ್ರಕಲ್ಪನೆಯು
ಮಾನವ ಹೃದಯಕೆ ಕನ್ನಡಿಯು.
ವ್ಯಾಸ ಮಹರ್ಷಿಯ ಭಾರತಕಥೆಯು
ವ್ಯವಹಾರ ನೀತಿಗೆ ಮುನ್ನುಡಿಯು.
ಮಾತುಮನ ಸತ್ಯದ ಅನುರ ಕಲ್ಪನೆಯು
ಪರತಂತ್ರ ಜನರಿಗೆ ವರಮುಕ್ತಿ ಪಥವು.
ಜವಹರನ ಜನರಾಜ್ಯದತುಲ ಕಲ್ಪನೆಯು
ಮಾನವತೆ ಒಂದೆಂಬ ದೃಢಸತ್ಯವು. ೪

ಅಮೆಥೂಸ ಬಂದರದಿ ಇರುತಿರ್ದನಂತೆ
ಪಿಗ್ಮ್ಯಾಲಿಯನೆಂಬ ವರಶಿಲ್ಪಿಯಂತೆ
ಚೆಲುವಾದ ಮೂರುತಿಯ ಕಟೆದನಂತೆ
ಸ್ತ್ರೀರೂಪದಲಿ ಮಿಗಿಲಾಯಿತಂತೆ—
ಮಧುರಾಕೃತಿಯನು ಕಾಣುತಂತೆ
ಅದರಲ್ಲಿ ಅನುರಕ್ತನಾದನಂತೆ;
ಅದೆ ಅವಗೆ ಬಾಳುಸಿರು ಆಯಿತಂತೆ
ಅನ್ನೋದಕಗಳ ಮರೆತನಂತೆ—
ಮೆಚ್ಚಿದಳು ರತಿದೇವಿ ಆರಾಧನೆಗೆ
ಒಲಿದು ಕೃಪೆಗೈದಳು ಪ್ರೇಮಾರ್ತನಿಗೆ
ಸುಂದರ ತರುಣಿಯು ನಿಜಪ್ರಾಣತಳೆದು
ಬಾಳಿದಳು ಶಿಲ್ಪಿವರನನು ಒಲಿದು.

ನೀ ಸತ್ಯಬೋಧಿನಿಯು ಸುಖದ ಸಾಧನೆಯು
ತೃಪ್ತಿದಾಯಕತಪ ಆರಾಧನೆಯು.
ಓ! ದೇವಿ! ನಿನಗಿದೋ ಶರಣೆಂಬೆ
ಎನ್ನ ಜೀವನವನ್ನು ಬೆಳಗಂಬೆ! ೫

ತಿರುವುಮುರುವು

(ವ್ಯಂಗ್ಯರೂಪಕ)

ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ

●

ಪಾತ್ರಪರಿಚಯ

ಇಂದ್ರ (ಸ್ವರ್ಗಾಧಿಪ). ಬ್ರಹ್ಮಚಾರಿ (ಹೆಂಡತಿಗಾಗಿ ಹಂಬಲಿಸುವ ನಡುಹರಯದವ) ಸಂಸಾರಿಗ (ಹೆಂಡತಿ ಮಕ್ಕಳಿದ್ದೂ ಇರಲು ಮನೆ ದೊರೆಯದೆ ಒಂಟಿಗನಾಗಿ ಬಳಲುತ್ತಿದ್ದ ನಗರವಾಸಿ) ಅಪ್ಸರೆ (ಬ್ರಹ್ಮಚಾರಿಗಾಗಿ ಭೂಲೋಕಕ್ಕಿಳಿದ ಸುರಸುಂದರಿ). ವಿಶ್ವಕರ್ಮ (ಮನೆಯಿಲ್ಲದ ಸಂಸಾರಿಗನಿಗೆ ಮನೆಯನ್ನೊದಗಿಸಲು ಬಂದ ಸ್ವರ್ಗದ ವಾಸ್ತುಶಿಲ್ಪಿ.)

●

[ಸುರಪತಿಯಾದ ದೇವೇಂದ್ರನು ಸಿಂಹಾಸನದಲ್ಲಿ ವಿರಾಜಮಾನನಾಗಿದ್ದಾನೆ. ಇಕ್ಕೆಲದಲ್ಲಿ ಅಪ್ಸರೆಯರು ದಿವ್ಯಗಂಧವನ್ನು ತಳೆದ ಬೀಸಣಿಗೆಗಳಿಂದ ಗಾಳಿ ಹಾಕುತ್ತಿದ್ದಾರೆ. ಮಿಕ್ಕ ದೇವತೆಗಳೂ ಗಂಧರ್ವರೂ ತಮ್ಮ ತಮ್ಮ ಸ್ಥಾನವನ್ನಲಂಕರಿಸಿ ಕುಳಿತಿದ್ದಾರೆ. ಅಪ್ಸರೆಯರು ಮನೋಹರ ನೃತ್ಯಗೀತಗಳಿಂದ ಸಭಿಕರನ್ನು ಆನಂದಗೊಳಿಸುತ್ತಿದ್ದಾರೆ. ಆಗ ಮೃತ್ಯುಲೋಕದಿಂದ— ಆರ್ತಸ್ವರದಲ್ಲಿ ಯಾರೋ ಕೂಗಿಕೊಳ್ಳುವಂತೆ ಕೇಳುವುದು. ದೇವೇಂದ್ರನು ನೃತ್ಯಗೀತಗಳನ್ನು ಅಷ್ಟಕ್ಕೆ ನಿಲ್ಲಿಸಲು ಆಜ್ಞೆವಿಧಿಸಿ, ಕೂಗಿದವನು ಯಾರೆಂದು ಕೇಳುವನು.]

ಬ್ರಹ್ಮಚಾರಿ— ದೇವಾಧಿದೇವಾ! ಇಂದ್ರದೇವಾ ! ನಾನೊಬ್ಬ ಮೃತ್ಯುಲೋಕದ ನಿವಾಸಿಯಾದ ಬ್ರಹ್ಮಚಾರಿ.

ಇಂದ್ರ— ಇಷ್ಟು ಸಣ್ಣ ದನಿಯಲ್ಲಿ ಏಕೆ ಕೂಗಿಕೊಳ್ಳುವೆ ?

ಬ್ರಹ್ಮಚಾರಿ— ದೇವಾ ! ರೇಶನ್ ಅನ್ನವನ್ನುಂಡು ನಿತ್ರಾಣ; ಗಟ್ಟಿಯಾಗಿ ಕೂಗಲಿಕ್ಕೆ ಶಕ್ತಿ ಸಾಲದು.

ಇಂದ್ರ— ಇರಲಿ, ಸಣ್ಣ ದನಿಯಲ್ಲಿಯೇ ಹೇಳು. ನನಗೆ ಕೇಳಬರುತ್ತದೆ. ನಿನಗೇನು ಬೇಕಾಗಿದೆ ?

ಬ್ರಹ್ಮಚಾರಿ— ಅಪ್ಸರೆಯರಿಗೆ ಒಡೆಯನಾದ ಸಹಸ್ರಾಕ್ಷ ! ನನ್ನ ಮೇಲೆ ಕೃಪೆಮಾಡು. ನನಗೆ ಈಗ ೩೫ ವರ್ಷ ವಯಸ್ಸಾಗುತ್ತ ಬಂತು. ಇನ್ನೂ ಮದುವೆಯಿಲ್ಲ. ತಿಂಗಳಿಗೆ ನೂರು ರೂಪಾಯಿ ಸಂಬಳ ತರುತ್ತೇನೆ. ಆದರೂ ಹೆಂಡತಿಯ ಹೊಟ್ಟೆಗೆ ಹಾಕುವ ಸಾಮರ್ಥ್ಯ ನನಗೆ ಸಾಲದು— ಎಂದು ಜನ ಭಾವಿಸುತ್ತಾರೆ. ಈ ಪಟ್ಟಣದಲ್ಲಿ ಸಾವಿರಾರು ಜನ ಮದುವೆ ಆಗದ ಕನ್ಯೆಯರಿದ್ದಾರೆ ! ಒಬ್ಬರಾದರೂ ನನ್ನ ಅದೃಷ್ಟಕ್ಕೆ ದೊರೆಯದಿರುವುದು ಅನ್ಯಾಯವಲ್ಲವೆ? ಇನ್ನು ಐದು ವರ್ಷ ನಾನು ಇದೇ ಸ್ಥಿತಿಯಲ್ಲಿ ಕಳೆದರೆ, ವರಗಳ ಪಟ್ಟಿಯೊಳಗಿನ ನನ್ನ ಹೆಸರೇ ಹೋಗಿಬಿಡುತ್ತದೆ. ಆಮೇಲೆ ನನ್ನ ಲಗ್ನವಾಗುವ ಬಗೆ ಎಂತು ? ಈ ಪರಿಸ್ಥಿತಿಯಲ್ಲಿ ನನಗೆ ಹುಚ್ಚು ಹಿಡಿದರೆ ಯಾರು ಜವಾಬ್ದಾರರು ? ದೇವಾ ! ಬ್ರಹ್ಮಚರ್ಯದ ನನ್ನ ಕಷ್ಟಗಳನ್ನು ಲಕ್ಷ್ಯಕ್ಕೆ ತಂದು, ಸದ್ಯಕ್ಕೆ ಒಬ್ಬ ಅಪ್ಸರೆಯನ್ನಾದರೂ ಕಳಿಸುವ ಕೃಪೆಮಾಡು. ಎಂದರೆ ಒಂದು ದಿನವನ್ನಾದರೂ ಸುಖ-ಸಮಾಧಾನದಲ್ಲಿ ಕಳೆಯುತ್ತೇನೆ.

ಇಂದ್ರ— ದುಃಖಿತ ಕರುಣಾ, ನಿನ್ನ ಬೇಡಿಕೆಯನ್ನು ಪೂರ್ಣ ಮಾಡುತ್ತೇನೆ, ನಿಶ್ಚಿಂತನಾಗಿರು, ಹೋಗು.

(ಬ್ರಹ್ಮಚಾರಿ ಹೋಗುವನು.)

[ಮತ್ತೆ ನೃತ್ಯಗೀತಗಳು ಪ್ರಾರಂಭವಾಗುವುವು. ಆಗ ಇನ್ನೊಂದು ಅಂಥದೇ ಆರ್ತಧ್ವನಿಯು ಕೇಳಬರುವುದು. ನೃತ್ಯಗೀತಗಳು ನಿಲ್ಲುವವು.]

ಇಂದ್ರ— ಯಾರವರು? ಮತ್ತೆ ಮೊರೆಯಿಡುವವರು ?

ಸಂಸಾರಿಗ— ಹೇ ನಾಕಾಧಿಪನೆ, ನಾನು ತಾಪತ್ರಯದಿಂದ ಬಳಲಿದ ಒಬ್ಬ ಸಂಸಾರಿಗ. ಮೃತ್ಯುಲೋಕದಲ್ಲಿ ನನ್ನ ದುಃಖವನ್ನು ಕೇಳಿಕೊಳ್ಳುವ ಒಬ್ಬ ಸಜ್ಜನನೂ ಇಲ್ಲ! ಅಂತೇ ಸಾಯುವ ಮೊದಲು ಸ್ವರ್ಗಕ್ಕೆ ಮೊರೆಯಿಡುವ ಸಾಹಸ ಮಾಡಿದ್ದೇನೆ. ನೀನಾದರೂ ನನಗೆ ಒದಗಿರುವ ಕಷ್ಟವನ್ನು ನಿವಾರಿಸಿ, ನನ್ನನ್ನು ಕೃತಾರ್ಥನನ್ನಾಗಿ ಮಾಡು.

ಇಂದ್ರ— ಇದೇನು ? ನೀನು ಗಂಡುಸಾಗಿಯೂ ಹೀಗೇಕೆ ಲಜ್ಜಿತನಾಗಿ ನಿಂತಿರುವೆ? ನಿನ್ನ ಮೈಮೇಲಿನ ವಸ್ತ್ರಗಳೆಂಥ ವಿಚಿತ್ರ? ನೀನು ಉಟ್ಟಿರುವುದೇನು ಪಂಚೆಯೊ ಪತ್ತಲವೊ !

ಸಂಸಾರಿಗ— ದೇವಾ, ಅದು ಹೆಂಗುಸರುಡುವ ಪತ್ತಲ! ಈಗ ನನಗೆ ಪಂಚೆಯಾಗಿದೆ! ಒಂದು ಪತ್ತಲ ಕೊಂಡು ಎರಡು ತುಂಡು ಮಾಡಿದ್ದೇನೆ! ಅರ್ಧವನ್ನು ಹೆಂಡತಿ ಉಡುತ್ತಾಳೆ. ಅರ್ಧ ನಾನು ಉಡುತ್ತೇನೆ. ಕಲಿಯ ದವಡೆಯಲ್ಲಿ ಸಿಕ್ಕ ನಳ-ದಮಯಂತಿಯರಂತೆ ನಮ್ಮದೂ ಅವಸ್ಥೆ ಆಗಿದೆ. ಅಂತೆಯೇ ನಾಚಿಗೆ.

ಇಂದ್ರ— ಇರಲಿ. ನಿನ್ನ ಮುಖ್ಯ ತಾಪತ್ರಯವಾದರೂ ಏನು? ಒಮ್ಮೆ ಹೇಳಿ ಬಿಡು. ಇದುವರೆಗೆ ಯಾರೂ ಮೃತ್ಯುಲೋಕದ ಕಷ್ಟಗಳನ್ನು ನಮ್ಮೆದುರು ತೋಡಿಕೊಂಡವರಿಲ್ಲ. ಆಗಲೇ ಒಬ್ಬ ಬ್ರಹ್ಮಚಾರಿ ಮಾತ್ರ ತನ್ನ ದುಃಖನಿವಾರಣೆಗಾಗಿ ನನ್ನನ್ನು ಪ್ರಾರ್ಥಿಸಿಕೊಂಡ. ನಿನ್ನ ದುಃಖವೇನು?

ಸಂಸಾರಿಗ— ನಾನೊಬ್ಬ ಬಡ ಸಂಸಾರಿಗ-ಹೊಟ್ಟೆಪಾಡಿಗಾಗಿ ಪಟ್ಟಣಕ್ಕೆ ಬಂದಿದ್ದೇನೆ. ಅನೇಕ ವರ್ಷಗಳಿಂದ ಹೆಂಡಿರುಮಕ್ಕಳನ್ನಗಲಿ ಇಲ್ಲಿ ಕಾಲಕಳೆಯುತ್ತಿದ್ದೇನೆ. ಎಷ್ಟು ದಿನ ನಾನು ಈ ವಿರಹತಾಪದಲ್ಲಿ ಕಳೆಯಲಿ ? ನನಗೂ ಮುಪ್ಪಿನ ಕಾಲ ಸಮೀಪಿಸುತ್ತ ಬಂತು. ಇನ್ನಾದರೂ ನನ್ನ ಹೆಂಡಿರು ಮಕ್ಕಳೊಡನೆ ಕೂಡಿಕೊಂಡಿದ್ದು ಜೀವನವನ್ನು ಕಳೆಯಬೇಕೆಂದಿದ್ದೇನೆ. ಆದರೆ ಹಾಗೆ ಮಾಡಬೇಕೆಂದರೆ ನನಗೆ ಚಿಕ್ಕದಾದರೂ ಸರಿ, ಒಂದು ಮನೆಯೆಂಬುದು ಇಲ್ಲ. ಮೃತ್ಯುಲೋಕದಲ್ಲಿ ಈಗ ಮಡದಿ-ಮಕ್ಕಳು ದೊರೆಯಬಹುದು; ಮನೆ ದೊರೆಯುವುದು ದುಸ್ತರವಾಗಿದೆ. ಕಾರಣ ಒಂದು ಮನೆ ದೊರೆಯುವಂತೆ ಮಾಡು. ಮನೆ ಹಿಡಿದುಕೊಂಡಿರುವವರು ಯಾರೂ ಮನೆ ಬಿಡಲು ಸಿದ್ಧರಿಲ್ಲ, ಹೊಸ ಮನೆಗೆ ಬುನಾದಿ ತೋಡಿದ ದಿನವೇ ಹತ್ತಹತ್ತು ವರ್ಷದ ಮುಂಗಡ ಬಾಡಿಗೆ ಕೊಟ್ಟು, ಅವನ್ನು ದುಡ್ಡುಳ್ಳವರು ಹಿಡಿದು ಬಿಡುತ್ತಾರೆ ನನ್ನಲ್ಲಿ ಆ ಶಕ್ತಿ ಇಲ್ಲ. ಇತ್ತೀಚೆಗೆ ಹೊಸತಾಗಿ ಬಳಕೆಯಲ್ಲಿ ಬಂದಿರುವ ಸಿದ್ಧಗೃಹ-

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್‌ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಅ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

ವೊಂದನ್ನು ನನಗೆ ಕಳುಹು. ನಾನು ಈ ಸುದ್ದಿಯನ್ನು ಯಾರಿಗೂ ಅರುಹದೆ ಗುಪ್ತವಾಗಿಡುತ್ತೇನೆ. ನನ್ನಮೇಲೆ ಕರುಣಿಸು. ನನ್ನನ್ನು ನಿರಾಶೆಗೊಳಿಸಬೇಡ.

ಇಂದ್ರ— ಎಲೋ ದುರ್ದೈವಿಯಾದ ಮಾನವನೆ, ನಿನ್ನ ಕಷ್ಟವನ್ನು ಕೇಳಿ ನನ್ನ ಅಂತಃಕರಣವು ದ್ರವಿಸಿತು. ಮೃತ್ಯುಲೋಕದ ಮಾನವರಿಗೆ ಎಂಥೆಂಥ ತಾಪತ್ರಯಗಳು! ಇರಲಿ. ನಾವು ಮೃತ್ಯುಲೋಕಕ್ಕೆ ಯಾವ ಸಹಾಯವನ್ನೂ ಇತ್ತೀಚೆಗೆ ಮಾಡುತ್ತಿಲ್ಲ. ಯಾಕೆಂದರೆ ಅಲ್ಲಿಯ ಜನರು ಪರಸ್ಪರರ ದ್ವೇಷ, ಜಗಳಾಟಗಳಲ್ಲಿ ಮನುಷ್ಯತ್ವವನ್ನೇ ಮರೆತುಬಿಟ್ಟಿದ್ದಾರೆ. ನೀನೇನೋ ನನ್ನತನಕ ಬರುವ ಧೈರ್ಯ ಮಾಡಿದ್ದೀಯೆ. ಯಾಚನೆಗೆ ಬಂದವರನ್ನು ಬರಿಗೈಯಿಂದ ಕಳುಹುವುದು ನನ್ನ ಶೀಲವಲ್ಲ. ನಿನ್ನ ಮನೋವಾಂಛಿತವನ್ನು ಪೂರ್ಣಗೊಳಿಸುತ್ತೇನೆ. ನೀನು ನಿನ್ನ ಹೆಂಡರುಮಕ್ಕಳನ್ನು ಕೂಡಲೆ ಕರೆಯಿಸಿಕೊ.

ಸಂ— ಆಗಲಿ ದೇವಾ. ತಂತಿಕೊಟ್ಟು ಇಂದೇ ಅವರು ಬರುವಂತೆ ಮಾಡುತ್ತೇನೆ!

[ದೇವೇಂದ್ರನು ಒಬ್ಬ ಅಪ್ಸರೆಯನ್ನು ಕರೆದು ಬ್ರಹ್ಮಚಾರಿಯ ಬಳಿಗೆ ಹೋಗಬೇಕೆಂದೂ, ವಿಶ್ವಕರ್ಮನನ್ನು ಕರೆದು ಒಂದು ಸಿದ್ಧಗೃಹವನ್ನು ಸಂಸಾರಿಗನಿಗೆ ಮುಟ್ಟಿಸಿ ಬರಬೇಕೆಂದೂ ಆಜ್ಞೆಯನ್ನಿತ್ತನು. ಅವರು ತಮ್ಮ ತಮ್ಮ ಸಿದ್ಧತೆಯೊಂದಿಗೆ ವಿಮಾನಾರೂಢರಾಗಿ ಮೃತ್ಯುಲೋಕಕ್ಕೆ ಬಂದು, ಅಲ್ಲಿಯ ಪೂರೈಕೆ ಮಂತ್ರಿಯನ್ನು ಕಂಡರು. 'ಸರಕಾರದ ಅಪ್ಪಣೆಯಿಲ್ಲದೆ ಯಾವುದೂ ಯಾರಿಗೂ ದೊರಕುವಂತಿಲ್ಲ' ಎಂಬ ಇಲ್ಲಿಯ ಕಾನೂನಿನ ಮೇರೆಗೆ ಅವರು ನಡೆಯಬೇಕಾಯಿತು. ಪೂರೈಕೆ ಮಂತ್ರಿಗಳು ಕೈಕೆಳಗಿನವರಿಗೂ, ಕೈಕೆಳಗಿನವರು ತಮ್ಮ ಕೈಕೆಳಗಿನವರಿಗೂ ಅಪ್ಪಣೆ ವಿಧಿಸುತ್ತ ನಡೆದರು. ಅಪ್ಸರೆ-ವಿಶ್ವಕರ್ಮರು ಕೆಲವು ಬಾರಿ ಉಗಿಬಂಡಿಯಲ್ಲಿ, ಕೆಲವು ಅಂತರ ಬಸ್ಸಿನ ಮೂಲಕ ಕ್ರಮಿಸಿ, ಕೊನೆಗೊಮ್ಮೆ ತಮ್ಮ ನಿರ್ದಿಷ್ಟ ಸ್ಥಳಕ್ಕೆ ಬಂದು ಮುಟ್ಟಿದರು. ಈ ಮಾರ್ಗಕ್ರಮಣದಲ್ಲಿ ಸಾಗಿಸುವ ಅಧಿಕಾರಿಗಳ ತಪ್ಪಿನ ಮೂಲಕ ತಿರುವುಮುರುವಾಗಿ, ಬ್ರಹ್ಮಚಾರಿಯ ಕಡೆಗೆ ವಿಶ್ವಕರ್ಮನೂ ಮುಪ್ಪಿನ ಸಂಸಾರಿಗನ ಕಡೆಗೆ ಅಪ್ಸರೆಯೂ ಹೋದರು.]

ಬ್ರಹ್ಮಚಾರಿ— ಯಾರವರು ? ಬಾಗಿಲು ತಟ್ಟುವವರು ?

ವಿಶ್ವಕರ್ಮ— ನಾನು ವಿಶ್ವಕರ್ಮ. ಬಾಗಿಲು ತೆರೆಯಿರಿ.

ಬ್ರಹ್ಮಚಾರಿ— ನನ್ನ ಕಡೆಗೇನು ಕೆಲಸ ?

ವಿಶ್ವಕರ್ಮ— ದೇವೇಂದ್ರನಿಂದ ಬಂದಿದ್ದೇನೆ. ನಿಮಗಾಗಿ ಸಿದ್ಧಗೃಹವನ್ನು ತಂದಿದ್ದೇನೆ. ಅದನ್ನು ಎಲ್ಲಿರಿಸಲಿ ?

ಬ್ರಹ್ಮಚಾರಿ— ಸಿದ್ಧಗೃಹ ? ನಾನು ದೇವೇಂದ್ರನಿಗೆ ಅಪ್ಸರೆಯನ್ನು ಕಳುಹಲು ಕೇಳಿಕೊಂಡಿದ್ದೆ! ನಿಮ್ಮ ಸಿದ್ಧಗೃಹವನ್ನು ತಕ್ಕೊಂಡು ಏನು ಮಾಡಲಿ ? ಅದರಲ್ಲಿ ನೇಣುಹಾಕಿಕೊಂಡರೆ ಸರಿ! ನನಗೆ ಸಿದ್ಧಗೃಹ ಬೇಕಾಗಿಲ್ಲ. ಸಿದ್ಧಗೃಹಿಣಿ ಬೇಕು! ಅವಳಿಗಾಗಿ ಈಗ ೮ ವರ್ಷಗಳಿಂದಲೂ ಬಳಲುತ್ತಿದ್ದೇನೆ; ನನಗೆ ಈಗಿದ್ದ ಈ ಗೇಣಂಕಣದ ಕೋಣೆಯೇ ಸಾಕು. ಒಬ್ಬನೇ ಇರುವುದಾದರೆ ಈ ಮಠವೇ ಇರಲಿ. ನೀವು ತಂದ ಮನೆ ನನಗೆ ಬೇಕಾಗಿಲ್ಲ. ಅದನ್ನು ಕಟ್ಟಿಕೊಂಡು ನೀವು ಸ್ವರ್ಗಕ್ಕೆ ತಿರುಗಿ ಹೋಗಿಬಿಡಿರಿ! ಅಯ್ಯೊ ಅದೃಷ್ಟವೆ!

[ವಿಶ್ವಕರ್ಮನು ನಿರುಪಾಯನಾಗಿ ಮನೆಯನ್ನು ಬೆನ್ನಿಗೆ ಕಟ್ಟಿಕೊಂಡು ಸ್ವರ್ಗಕ್ಕೆ ಮರಳುವನು. ಇತ್ತ ಅಪ್ಸರೆ ಮುದುಕನಾದ ಸಂಸಾರಿಗನತ್ತ ಹೋಗುವಳು. ಅವನು ರೈಲು ನಿಲ್ದಾಣದ ಪ್ಲಾಟ್‌ಫಾರ್ಮಿನ ಮೇಲೆಯೇ ಹೆಂಡತಿಮಕ್ಕಳೊಡನೆ ವಾಸ್ತವ್ಯಮಾಡಿರುತ್ತಾನೆ. ಅಪ್ಸರೆ ಅಲ್ಲಿಗೆ ಹೋದಾಗ, ಸಂಸಾರಿಗನ ಹೆಂಡತಿ ಮಕ್ಕಳು ಮಲಗಿ ನಿದ್ರೆ ಹೋಗಿರುತ್ತಾರೆ. ಸಂಸಾರಿಗ ಮಾತ್ರ ಸ್ವರ್ಗದ ಕಡೆಗೆ ಕಣ್ಣಿಟ್ಟು ಸಚಿಂತನಾಗಿ ಕುಳಿತು ಬಿಟ್ಟಿರುತ್ತಾನೆ.]

ಅಪ್ಸರೆ— ಇಂದ್ರನ ಕಡೆಗೆ ಬಂದವರು ತಾವೇ ಏನು ?

ಸಂಸಾರಿಗ— ಹೌದಮ್ಮ ಯಾಕೆ ? ತಾವು ಇಂದ್ರಲೋಕದಿಂದ ಬಂದಿದ್ದೀರಾ ?

ಅಪ್ಸರೆ— ಅಹುದು! ತಮ್ಮ ಸೇವೆಗೆ ಬಂದಿದ್ದೆನೆ.

ಸಂಸಾರಿಗ— ನನ್ನ ಸೇವೆಗೆ ? ಅಯ್ಯೊ ರಾಮ ರಾಮಾ! ತಮ್ಮಂಥ ಸ್ವರ್ಗಾಂಗನೆಯರು ನನ್ನ ಸೇವೆ ಮಾಡುವುದೆ ?

ಅಪ್ಸರೆ— ತಾವು ಸಂಕೋಚಪಟ್ಟುಕೊಳ್ಳಬಾರದು. ನಮ್ಮ ಒಡೆಯನಾದ ದೇವೇಂದ್ರನು ನನಗೆ ಅಪ್ಪಣೆ ವಿಧಿಸಿದ್ದಾನೆ. ನಾನು ಸದ್ಯಕ್ಕೆ ತಮ್ಮ ದಾಸಿ—ತಮಗೆ ಸುಖ ಕೊಡಲು ಬಂದಿದ್ದೇನೆ.

ಸಂಸಾರಿಗ— ಅಯ್ಯೊ ಮಹಾರಾಯತಿ, ಆ ಕೆಲಸವನ್ನು ಮಾತ್ರ ಸರ್ವಥಾ ಮಾಡಬೇಡ! ತುಸು ಮೆತ್ತಗೆ ಮಾತನಾಡು; ನನ್ನ ಹೆಂಡತಿ ಇಲ್ಲಿಯೇ ಮಲಗಿದ್ದಾಳೆ.

ಅಪ್ಸರೆ— ಅಂದರೆ ತಾವು ಬ್ರಹ್ಮಚಾರಿಗಳಲ್ಲವೆ ?

ಸಂಸಾರಿಗ— ಹ ಹ ಹ! ಬ್ರಹ್ಮಚಾರಿ! ಹೌದು ಬ್ರಹ್ಮಚಾರಿಯೇ ನಿಜ. ಹೆಂಡತಿಯಿದ್ದೂ ಈಗ ೮ ವರ್ಷ ಬ್ರಹ್ಮಚಾರಿಯಂತೆ ಕಾಲ ಕಳೆದೆ. ಮನೆ ಇಲ್ಲದ್ದಕ್ಕಾಗಿ ಬ್ರಹ್ಮಚಾರಿ ಆಗಿದ್ದೇನಾಗಲಿ, ಹೆಂಡತಿ ಇಲ್ಲದ್ದಕ್ಕಾಗಿ ಅಲ್ಲ.

ಅಪ್ಸರೆ— ಹಾಗಾದರೆ ನೀವು ದೇವೇಂದ್ರನಿಗೆ ಕೇಳಿದ್ದೇನು ? ಮನೆಯನ್ನೋ ? ನನ್ನನ್ನೋ ?

ಸಂಸಾರಿಗ— ನಿನ್ನನ್ನು ಕೇಳಿ ನಾನು ಯಾವ ಸುಡುಗಾಡಿಗೆ ಹೋಗಲಿ ? ನನಗೊಂದು ಮನೆ ಸಿಕ್ಕರೆ ನನ್ನ ಹೆಂಡತಿಯೇ ನನಗೆ ಅಪ್ಸರೆ. ನಾನು ದೇವೇಂದ್ರನಿಗೆ ಕೇಳಿದ್ದು ಮನೆಯಾಗಲಿ, ನಿನ್ನನ್ನಲ್ಲ ಮಹರಾಯತಿ ! ಹೆಚ್ಚು ಕಾಲ ಇಲ್ಲಿ ನಿಲ್ಲಬೇಡ. ದಯಮಾಡಿ ಬೇಗನೆ ನಿನ್ನ ಸ್ವಸ್ಥಾನಕ್ಕೆ ತೆರಳು. ನಿನ್ನ ಮಾತಿಗೆ ಹೆಂಡತಿ ಎಚ್ಚತ್ತು, ನಿನ್ನನ್ನು ನನ್ನೊಡನೆ ನೋಡಿದಳೆಂದರೆ, ಬಂದ ಹಾದಿಯಿಂದ್ಲೇ ತಿರುಗಿ ಹೋದಾಳು. ಆ ಮೇಲೆ ಮನೆಯೂ ಇಲ್ಲ, ಮಡದಿಯೂ ಇಲ್ಲದಂತಾದರೆ ನಾನು ಇಂದೇ ಸ್ವರ್ಗಸ್ಥನಾಗಬೇಕಾದೀತು ! ಇನ್ನೂ ಮಕ್ಕಳ ಮದುವೆ ಮಾಡಬೇಕಾಗಿದೆ. ಪೆನ್‌ಶನ್ ಪಡೆಯಬೇಕಾಗಿದೆ. ಆಗಲಿ ನೀನಿನ್ನು ಹೊರಡು ! ಹೆಂಡತಿ ಮಕ್ಕಳೊಡನೆ ಕೂಡಿಕೊಂಡಿರುವುದು ನನ್ನ ದೈವದಲ್ಲಿಯೆ ಇಲ್ಲದಿರುವಾಗ ದೇವೇಂದ್ರನಾದರೂ ಏನು ಮಾಡಿಯಾನು ?

ಅಪ್ಸರೆ— ಹಾಗಾದರೆ ನಾನು ಹೊರಡಲಾ ?

ಸಂಸಾರಿಗ— ಆಗಲಿ.

[ವಿಶ್ವಕರ್ಮನೂ ಅಪ್ಸರೆಯೂ ದೇವಲೋಕಕ್ಕೆ ಮರಳಿಬಂದು ದೇವೇಂದ್ರನಿಗೆ ತಮ್ಮ ತಮ್ಮ ಕಾರ್ಯದ ವರದಿಯನ್ನೊಪ್ಪಿಸಿ, ಪೂರ್ವಿಕ ಹಾಗು ಸಾರಿಗೆ ಖಾತೆಯಲ್ಲಿಯ ಅಪ್ಪಣೆಗೆ ತಾವು ಒಳಗಾಗಿ ನಡೆಯಬೇಕಾದುದರಿಂದ ಹೀಗಾಯಿತಾಗಲಿ ತಮ್ಮ ಕಡೆಗೇನೂ ದೋಷವಿಲ್ಲೆಂದು ಬಿನ್ನಗೊಂಡರು. ದೇವೇಂದ್ರನು ಬ್ರಹ್ಮಚಾರಿಯನ್ನೂ ಸಂಸಾರಿಗನನ್ನೂ ಕರೆಕಳುಹಿದನು.]

ಇಂದ್ರ— ಎಲೈ ದುರ್ದೈವಿಯಾದ ತರುಣನೆ, ಈಗ ನೀನೆನ್ನುವದೇನು ?

ಬ್ರಹ್ಮಚಾರಿ— ದೇವಾ, ನನ್ನ ಬ್ರಹ್ಮಚರ್ಯದ ಬವಣೆಯನ್ನು ನೀಗಿಸಿಕೊಳ್ಳಬೇಕೆಂದು ದೇವಾಧಿದೇವನಾದ ನಿನ್ನನ್ನು ಆಶ್ರಯಿಸಿದೆ. ನೀನು ಕರುಣೆಯನ್ನು ತೋರಿ, ಭೂಮಿಯಲ್ಲಿ ಯಾವ ತರುಣನಿಗೂ ದೊರೆಯದವಳಾದ ಅಪ್ಸರೆಯನ್ನು ಕಳುಹಿದರೂ ನನಗೆ ಅವಳು ಲಭಿಸಲಿಲ್ಲ. ಭೂಮಿಯ ಮೇಲೆ ಈಗ ಎಲ್ಲೆಡೆಯಲ್ಲಿಯೂ ಹೀಗೆಯೇ ನಡೆದಿದೆ. ಬೇಕಾದದ್ದು ದೊರೆಯುವುದಿಲ್ಲ; ಬೇಡವಾದದ್ದು ನಮ್ಮ ಪಾಲಿಗೆ ಬರುತ್ತದೆ.

ಇಂದ್ರ— ನಿನ್ನ ವೃತ್ತಾಂತ ಕೇಳಿದಂತಾಯಿತು. ಸಂಸಾರಿಗನು ಏನು ಹೇಳುತ್ತಾನೆ ?

ಸಂಸಾರಿಗ—ಹೆ ಶಚೀಪತಿ, ಮಡದಿ-ಮಕ್ಕಳೊಡಗೂಡಿ ಬಾಳುವೆ ಮಾಡಿಕೊಂಡು ನಿಲ್ಲಬೇಕೆಂದರೆ ಒಂದು ತಾಣವಿಲ್ಲದೆ ಬಳಲಿದವನಾದ ನನ್ನ ಪಡಿಪಾಟಲನ್ನು ಕೇಳಿ, ನೀವು ಸುಂದರವಾದ ಒಂದು ಸಿದ್ಧಗೃಹವನ್ನು ಕಳುಹಿದರೆ, ನನ್ನ ಪಾಲಿಗೆ ಗೃಹ ಹೋಗಿ ಅಪ್ಸರೆ ಬರಬೇಕೆ ? ಪಾಲಿಗೆ ಬಂದದ್ದನ್ನು ಬಿಡಬಾರದು ಎಂಬ ಮನಸ್ಸುಳ್ಳವನು ನಾನಲ್ಲ. ಆದುದರಿಂದ ಅಪ್ಸರೆಯನ್ನು ಹಿಂದಿರುಗಿ ಕಳುಹಿದೆ. ಇಂಥದಕ್ಕೆ ಆಶೆಮಾಡಿ ಮೈಸುಟ್ಟುಕೊಂಡ ಅನುಭವ ನಿಮಗೂ ಇದೆ ! ಅದು ಹಾಗಿರಲಿ. ಕೊಡುವ ದೇವರು ಕೊಟ್ಟರೂ ನಮ್ಮನ್ನು ಕಾಡುವ ಕಾಲ ಇನ್ನೂ ಮುಗಿದಿಲ್ಲ.

ಇಂದ್ರ— ಎಲೋ ಮೃತ್ಯುಲೋಕದ ಮಾನವಪ್ರಾಣಿಗಳೇ, ನೀವು ವಿವೇಕದಿಂದ ನಡೆದರೆ ನಿಮ್ಮ ಮೃತ್ಯುಲೋಕವನ್ನೇ ಸ್ವರ್ಗವಾಗಿಸಬಹುದು ! ಆಗ ನಾವು ಕೂಡ ಅಲ್ಲಿಗೆ ಬರಲು ಅಪೇಕ್ಷಿಸುತ್ತೇವೆ. ನಿಮ್ಮಲ್ಲಿಯೇ ವಿವೇಕವಿಲ್ಲದಾಗ ನಾವು ಕೊಟ್ಟರೂ ನಿಮಗದು ಲಭಿಸುವುದಿಲ್ಲ ಹೋಗಿರಿ, ಆ ವಿವೇಕವನ್ನು ಮೊದಲು ಎಲ್ಲರೂ ನಿಮ್ಮಲ್ಲಿ ಬೆಳೆಯಿಸಿಕೊಳ್ಳಿರಿ !

ಬ್ರ ಸಂ— ಆಗಲಿ ಪ್ರಭೋ ! ದೈವದಲ್ಲಿಲ್ಲದಾಗ ದೇವೇಂದ್ರನಾದರೂ ಏನುಮಾಡಿಯಾನು ?

(ಎನ್ನುತ್ತ ಮೃತ್ಯುಲೋಕಕ್ಕೆ ಇಳಿಯುತ್ತಿರುವಾಗ ಅವರ ದನಿ ವಾತಾವರಣದಲ್ಲಿ ವಿಲೀನವಾಗುವುದು.)

೧೦೦೦ ರೂಪಾಯಿ ಬಹುಮಾನ

೩೦ ವರ್ಷಗಳಿಂದ ಅನುಭವಸಿದ್ಧವಾದ— ಮಿರಜಿಯ ವೈದ್ಯ

ವಿ. ಎಸ್ ಕಾಪಸೇಯವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರ ಪಾಕ

[ರಜಿಸ್ಟರ್ಡ್]

ಮೂತ್ರದಲ್ಲಿ ಸ್ವಪ್ನದಲ್ಲಿ ವೀರ್ಯಸ್ಖಲನ, ಸ್ವರತಿಯಿಂದುಂಟಾದ ಅಶಕ್ತತೆ, ವೀರ್ಯದ ಬೇರೆ ಬೇರೆ ದೋಷಗಳು, ಪಿತ್ತಾಂಶ, ಉಷ್ಣ, ಸೊಂಟನೋವು, ಉಪದಂಶಮೇಹರೋಗಗಳಿಂದುಂಟಾಗುವ ಕ್ಷೀಣತೆ— ಇವೆಲ್ಲ ನಷ್ಟವಾಗಿ, ಚೆನ್ನಾಗಿ ಮಲಶುದ್ಧಿಯಾಗುವುದು. ಹಸಿವೆ, ಸ್ಮರಣಶಕ್ತಿ, ದೇಹದ ತೂಕ ಹೆಚ್ಚುವುದು. ಹೊಸ ತಾರುಣ್ಯ ಬಂದಂತಾಗಿ ವೀರ್ಯದಲ್ಲಿ ಗರ್ಭಧಾರಕಶಕ್ತಿ ಬಲಗೊಳ್ಳುವುದು. ಈ ಔಷಧಿಯು ೫೩ ವನಸ್ಪತಿಗಳ ಯೋಗದಿಂದ ಸಿದ್ಧವಾಗಿದೆ. ಸಾಲಾಮಿಶ್ರಿ, ಸಫೇದಮಿಶ್ರಿ, ಪಂಜಾಬ ಮಿಶ್ರಿ-ವಚಕಂದ ಮೊದಲಾದ ಪದಾರ್ಥಗಳಲ್ಲಿ ವೀರ್ಯವರ್ಧಕ ಗುಣವಿಲ್ಲವೆಂದು ಸಿದ್ಧಮಾಡುವವರಿಗೆ ೧೦೦೦ ರೂಪಾಯಿ ಬಹುಮಾನ.

೨೧ ದಿನಗಳಿಗೆ ಸಾಲಬಹುದಾದ ೮೪ ತೊಲೆಯ ಒಂದು ಡಬ್ಬಿಗೆ ೫-೮-೦; ಅಂಚೆಯ ವೆಚ್ಚ ೧-೬-೦. ಶೀಘ್ರಗುಣಕಾರಿಯಾದ ಸ್ಪೇಶಲ್‌ಡಬ್ಬಿಗೆ ೧೦-೮-೦. (ಇದರಿಂದ ೭ ದಿನಗಳಲ್ಲಿಯೇ ಗುಣವು.) ಅಂಚೆಯ ವೆಚ್ಚ ೧-೬-೦. ೩ ಡಬ್ಬಿಗೆ೧೫-೦-೦ ಅಂಚೆಯವೆಚ್ಚ೨-೧೩-೦. ಒಮ್ಮೆಲೇ ೩ ಡಬ್ಬಿಗಳನ್ನು ಬೇಡುವವರು ೫ ರೂ ಮುಂಗಡ ಕಳಿಸಬೇಕು.

ಮಾಲಕ: **ವ್ಹಿ. ಎಸ್. ಕಾಪಸೇ** ಮು. ಪೋ. ಮಿರಜ

ಕಲಾಭಿಜ್ಞನ ಕಣ್ಣೀರು

ಶ್ರೀ. ಕೆ. ಗುರುರಾಜ ಉಡುಪ ಬಿ.ಎಸ್‌ಸಿ. ಕಿನ್ನಿಗೋಳಿ

卐

ಯಾವುದೊಂದು ರಾಷ್ಟ್ರದ ಸಂಸ್ಕೃತಿಯನ್ನು ಅಲ್ಲಿ ವಿಕಾಸಗೊಂಡಿರುವ ವಿವಿಧಮುಖ ಕಲೆಗಳಿಂದ ಅಳೆಯಿಸು ಹೇಳುವರು. ಆದರೆ ಕನ್ನಡನಾಡಿನಲ್ಲಿ ಸದ್ಯ ಅಂತಹ ಕಲೆಗಳ ವಿಕಾಸಕ್ಕೆ ತಕ್ಕ ವಾತಾವರಣವಿದೆಯೆ? ಕಲಾಭಿಜ್ಞರಿಗೆ ಪೋಷಣೆಯಿದೆಯೆ?

★

" ಕಲಾವಿದನ ಕೃತಿಯ ಮುಂದೆ, ಪ್ರೇಕ್ಷಕ ಮೈಮರೆತು ಪ್ರದರ್ಶಿತ ವಸ್ತುವಿನಲ್ಲಿ ಒಂದಾಗಿದ್ದಾನೆಯೇ? ಕಲಾವಿದನ ಮನೋಭಾವವನ್ನು ಅದರ ಮೂಲಕ ಅರಿತಿದ್ದಾನೆಯೆ! ಅರಿತು ಅದರಿಂದ ಭಾವವಶನಾಗಿದ್ದಾನೆಯೇ? ಎಂಬುದು ಕಲೆಗೆ ಸಂಬಂಧಪಟ್ಟ ವಿಷಯ " ಎಂದು ಕಲೆಯ ಕುರಿತು ಶಿವರಾಮ ಕಾರಂತರು ವಿಮರ್ಶೆ ಮಾಡಿದರೆ, " ಕಲಾವಿದ ನಾಡಸಂಸ್ಕೃತಿಯನ್ನು ರೂಪುಗೊಳಿಸುವ ರೂವಾರಿ; ಜೀವನವನ್ನು ಹೆಚ್ಚು ಹೆಚ್ಚು ಸುಂದರದಾಗಿ ಮಾಡುತ್ತ ಹೋಗುವುದೇ ಕಲಾವಿದನ ಗುರಿ; ಲಲಿತಕಲಾವಿದ ತನ್ನ ಕೃತಿಯಿಂದ ಸಾಧಿಸುವುದು ಮಾನವ್ಯದ ಪೂರ್ಣ ವಿಕಾಸ, ಆತ್ಮನ ಅನಂತ— ಅಮರಸ್ವರೂಪದರ್ಶನ " ಎಂಬಂತೆ ಅ. ನ. ಕೃಷ್ಣರಾಯರು ಇನ್ನೊಂದೆಡೆ ಕಲಾವಿದನ ಕುರಿತು ಹೇಳಿದ್ದಾರೆ. ಜೀವನವು ಬೀಭತ್ಸ, ಭಯಾನಕ, ದುಃಖಪೂರ್ಣವಾಗಿದ್ದರೂ ಅದೆಲ್ಲವನ್ನೂ ಒಂದರೆಗಳಿಗೆ ಮರೆಯುವಂತೆ ಮಾಡಿ ಆನಂದವನ್ನೂ, ಸಂತಸದ ಸುಖಾನುಭವವನ್ನೂ ಹೊಂದುವಂತೆ ಮಾಡಿ 'ಜೀವನದ ಮಧು'ವನ್ನು ತಂದು ಕೊಡುವಾತ ಕಲಾವಿದ, ಹಾಗೂ ಆತನ ಕೃತಿ— ಎಂದು ಎಲ್ಲರೂ ಒಪ್ಪತಕ್ಕದ್ದೇ ಆಗಿದೆ.

ಸಂಗೀತಗಾರನೊಬ್ಬ ತನ್ನ ಮಂಜುಲಕಂಠದಲ್ಲಿ ಮೃದುಮಧುರವಾಗಿ ಹಾಡುತ್ತಾನೆ. ನಮ್ಮ ಮನಸ್ಸು ಅದರಲ್ಲೇ ತನ್ಮಯತೆಯನ್ನು ಹೊಂದುವುದು ಕಲಾವಿದನ ಭಾವಪರವಶತೆಯ ಪ್ರಮಾಣದಲ್ಲಿಯೇ. ಅಂತೆಯೇ ಸುಂದರ ಚಿತ್ರವೊಂದನ್ನು ಸೂಕ್ಷ್ಮವಾಗಿಯೂ, ಜಾಗ್ರತೆಯಾಗಿಯೂ ಕಲ್ಲಿನಲ್ಲಿ ಮೂಡಿಸಿದ ಶಿಲ್ಪಿಯ ಕೈಚಳಕವನ್ನು ಕಂಡು ನಮ್ಮ ಮನಸ್ಸು ಪ್ರಫುಲ್ಲಿತವಾಗುವುದು. ನುರಿತ ಸಾಹಿತ್ಯಿಕನೊಬ್ಬ ತನ್ನ ಕವಿತೆ, ಕತೆ, ಕಾದಂಬರಿ, ನಾಟಕಗಳಲ್ಲಿ ಚಿತ್ರಿಸಿದ ನೈಜಸ್ವಭಾವ, ರಸಮಯ ಸನ್ನಿವೇಶ, ಭಾಷೆಯ ಶೈಲಿ ಇವು ನಮ್ಮನ್ನು ನಾವೇ ಕ್ಷಣಕಾಲ ಮರೆಯುವಂತೆ ಮಾಡುವುವು. ಹೇಗಿದ್ದರೂ ಕಲಾವಿದನ ಶಕ್ತಿ ಅಪರಿಮಿತವಾದುದು. ಅನರ್ಘವಾದುದು. ಜೀವನದ ನಂಜನ್ನುಂಡು ಚಡಪಡಿಸುತ್ತಿರುವ ಮಾನವಜೀವಿಯ ನಚ್ಚಿನ ಸಂಗಾತಿ— ಜೀವದ ಗೆಳೆಯನಾತ.

ಕಲೆಗಾರನ ನೆರವಿಲ್ಲದೆ ಜೀವನವು ಸುಗಮವಾಗದೆ? ಕಲೆಗಾರ ಕೆಲಸಕ್ಕೆ ಬಾರದ ಆಲಸಿಗನಲ್ಲವೆ? ಕಲೆಯಿಂದ ಹೊಟ್ಟೆ ತುಂಬುವುದೆ?— ಎಂಬ ಡೊಂಕುಪ್ರಶ್ನೆಯನ್ನು ಹಾಕುವವರು ಎಷ್ಟಿಲ್ಲ? ಹೌದು, ದೇಹವು ಬೆಳೆದು ದೊಡ್ಡದಾಗಲು ಮುಖ್ಯವಾಗಿ ಬೇಕಾದುದು ಪೌಷ್ಟಿಕ ಆಹಾರ, ನಿರ್ಮಲವಾದ ಗಾಳಿ, ನೀರು! ಆದರೆ 'ಬರಿಯ ದೇಹವೇ ಮನುಷ್ಯನೆ?' ಎಂಬುದು ಇನ್ನೊಂದು ಪ್ರಶ್ನೆ. ಮಾನವನಿಗೆ ಮುಖ್ಯವಾದ ಮನಸ್ಸು, ವಿಕಸಿತ ಬುದ್ಧಿ ಬೆಳವಣಿಗೆಯಾದರೆ ಮಾತ್ರ ಆತ ವಸ್ತುತಃ ಮಾನವನಾಗುವನು. ಮನಸ್ಸು ಹಾಗೂ ಬುದ್ಧಿಯ ಆಹಾರವೇ ಸೌಂದರ್ಯಾಸ್ವಾದನೆ. ಕೇಳಲು ಸುಶ್ರಾವ್ಯವಾದ ಸಂಗೀತ, ನೋಡಲು ಸುಂದರ ಚಿತ್ರ, ಓದಲು ಉಚ್ಚತರಗತಿಯ ಕತೆ, ಕಾದಂಬರಿ, ಕವನ ಇವು ಬುದ್ಧಿಯ ಆಹಾರಗಳು. ಇದಕ್ಕೇ ಬೇಕು ನಮಗೆ ಸೌಂದರ್ಯೋಪಾಸಕನಾದ ಕಲೆಗಾರನ ನೆರವು—ಆಶ್ರಯ. ಹೀಗಾಗಿ ಸಮಾಜದ ಸಾಮಾಜಿಕ ಸಾಮೂಹಿಕ ಬೆಳವಣಿಗೆಗೆ (Hormonious development) ವ್ಯಾಪಾರಿಗಳು, ಕೃಷಿಕರು, ವೈದ್ಯರು, ವಕೀಲರು, ಶ್ರಮಜೀವಿಗಳೇ ಮೊದಲಾದವರ ಅವಶ್ಯಕತೆ ಸಮಾಜಕ್ಕೆ ಎಷ್ಟಿದೆಯೋ ಅಷ್ಟೇ ಕಲೆಗಾರನ ನೆರವೂ ಅಗತ್ಯ. ವ್ಯಾಪಾರಿಯು ನಮಗೆ ಜೀವನಾವಶ್ಯಕ ಸಾಮಗ್ರಿಗಳನ್ನೊದಗಿಸುವನು, ವೈದ್ಯರು ಚಿಕಿತ್ಸೆ ಮಾಡುವರು, ವಕೀಲರು ನಮಗಾಗಿ ವ್ಯವಹರಿಸುವರು, ಶ್ರಮಜೀವಿಗಳು ನಮಗಾಗಿ ದುಡಿಯುವರು. ಅಂತೆಯೇ ಕಲೆಗಾರ ನಮಗಾಗಿ ಮನೋಲ್ಲಾಸಕ ರಸವಸ್ತುಗಳನ್ನೊದಗಿಸಿಕೊಡುವನು.

ಅಂತಹ ಕಲೆಗಾರನ ಬದುಕು ಸಮಾಜದಲ್ಲಿ ಎಷ್ಟರದು— ಎಂಬುದನ್ನು ಸ್ಥೂಲವಾಗಿ ವಿವೇಚಿಸುವುದೇ ಈ ಲೇಖನದ ಉದ್ದೇಶ. ಕಾವೇರಿ, ತಾಮ್ರಪರ್ಣಿ, ಗೋದಾವರಿ, ಕೃಷ್ಣಾ ಮೊದಲಾದ ನದಿಗಳು ಹರಿದುಕೊಂಡುಹೋಗಿ, ಭೂಮಿಯನ್ನು ಫಲವತ್ತಾದುದನ್ನಾಗಿ ಮಾಡಿ, ಬೆಳೆಯ ಹೊಳೆಯನ್ನು ಹರಿಸಿ ಸಂಪತ್ಸಮೃದ್ಧಿಯ ತವರೂರನ್ನಾಗಿಸಿದ ತಮಿಳುನಾಡಿನಲ್ಲಿ, ಹಿಂದಕ್ಕೆ ಹಲವಾರು ಸಂಗೀತಗಾರರು, ಶಿಲ್ಪಿಗಳು, ಕವಿಗಳು, ಚಿತ್ರಗಾರರು ಬಾಳಿ ಬದುಕಿ, ತಮ್ಮ ಅಮರ ಕೃತಿಗಳನ್ನಿತ್ತು ಕೃತಾರ್ಥರಾದರು. ದೇಶದ ಇತರೆಡೆಗಳಿಗಿಂತಲೂ ಇಲ್ಲಿಯೇ ಸುಂದರ ಶಿಲ್ಪಕಲೆಯಿದೆ. ಹಾಗಾಗಿ ಎಲ್ಲಿ ಉಣ್ಣಲು ತಿನ್ನಲು ಸಾಕಷ್ಟಿದೆಯೊ, ಅಲ್ಲಿಯ ಮಂದಿ ತಮ್ಮ ಬಿಡುಸಮಯವನ್ನು ಕಲೆಗಾಗಿ ವ್ಯಯಿಸುವರು; ಸೌಂದರ್ಯೋಪಾಸನೆಯಲ್ಲಿ ಕಳೆಯುವರು. ಎಲ್ಲಿ ಸಮೃದ್ಧಿ, ಸಂತೃಪ್ತಿ ಸಮಾಧಾನವೋ ಅಲ್ಲಿಯೇ ಕಲೆಯ ಉತ್ಪತ್ತಿ, ಕಲೆಗಾರನ ತವರೂರು.

ಪರಿಸ್ಥಿತಿ ಹೀಗಿರುವಾಗ, ಜಾಗತಿಕ ಯುದ್ಧಗಳಿಂದ ಕಂಗೆಟ್ಟ— ಆಹಾರದ ಅಭಾವವೇ ಮೊದಲಾದ ಸಮಸ್ಯೆಗಳಿಂದ ಬಳಲಿ ಬೆಂಡಾದ— ಸಂಪತ್ಸಮೃದ್ಧಿ, ವಿರಾಮ, ಸಮಾಧಾನದ ಬದಲಾಗಿ ಎಲ್ಲೆಲ್ಲೂ ದಾರಿದ್ರ್ಯ, ಅಸಮಾಧಾನ, ಅತೃಪ್ತಿಯೇ ಎದ್ದು ತೋರುತ್ತಿರುವ ನಮ್ಮ ಸಮಾಜದಲ್ಲಿ, ಕಲೆಗಾರನ ದುಃಸ್ಥಿತಿ ಎಲ್ಲಿಯವರೆಗೆ ಮುಟ್ಟಿದೆ? ಕಲೆಯು ಯಾವ ಗುರಿಯನ್ನು ಮುಟ್ಟಿದೆ? ಸಂಗೀತದಲ್ಲಿ ಅಭಿರುಚಿ ಇರುವ ತರುಣನೊಬ್ಬ, ಅದರಲ್ಲಿ ವ್ಯಾಸಂಗವನ್ನು ಮಾಡಿ ತಾನೂ ಸಂತಸಪಟ್ಟು ತನ್ನವರನ್ನೂ ಆ ಸುಖದಲ್ಲಿ ಭಾಗಿಗಳನ್ನಾಗಿ ಮಾಡಲು, ಆ ವಿದ್ಯೆಯಲ್ಲಿ ನೈಪುಣ್ಯವನ್ನು ಪಡೆಯಲು ಉತ್ಸುಕನಾಗಿರುವನು; ಮಹದಾಸೆ (Ambition)ಯಿಂದಿರುವನು. ಏಕಚಿತ್ತದಿಂದ ಅದರ ಅಭ್ಯಾಸಕ್ಕಾಗಿ ತನ್ನ ಹೆಚ್ಚಿನ ಸಮಯವನ್ನು ಅದಕ್ಕಾಗಿ ವ್ಯಯಿಸಬೇಕಾಗುವುದು. ಈ ವ್ಯಾಸಂಗದ ಎಡೆಯಲ್ಲಿ ತನ್ನ ನಿತ್ಯದ ಶಾಲಾಶಿಕ್ಷಣಕ್ಕೆ ತಡೆಯಾಗುವಂತಾಗಿ, ಆತನ ಹೆತ್ತವರು ಇದರಲ್ಲಿ ಅಡ್ಡಗಾಲಿಡಲಾರಂಭಿಸುವರು. ಕಾರಣ ಈ ಕಲೆ ಅವನಿಗೆ ಅನ್ನವನ್ನು ಕೊಡಲಾರದೆಂದು ಅವರಿಗೆ ಗೊತ್ತು. ತನ್ನ ಧನಸಂಚಯದ ಆಶೆ, ಸುಖದ ಆಶೆ, ತಂದೆ-ತಾಯಿಗಳ ಪ್ರೀತಿಗೆ ಪಾತ್ರನಾಗುವ ಆಶೆಗಳೆಲ್ಲವನ್ನೂ ಆತ ತ್ಯಾಗಮಾಡಬೇಕಾಗಿ ಬರುವುದು. ಈ ಕಲೋಪಾಸನೆಗಾಗಿ ಕೊನೆಗೆ ತನ್ನ ತನು-ಮನ-ಧನಗಳನ್ನರ್ಪಿಸಿ ಸಂಪಾದಿಸಿದ ಈ ಸಂಗೀತ ಕಲಾನಿಪುಣನು, ವ್ಯವಹಾರ ಪ್ರಪಂಚಕ್ಕೆ ಕಾಲಿಟ್ಟಾಗ, ವಿದ್ಯಾಭ್ಯಾಸದ ಸಂದರ್ಭದಲ್ಲಿ ಕಟ್ಟಿದ್ದ ಗಾಳಿಗೋಪುರಗಳೆಲ್ಲವೂ ಜರಿದು ಬೀಳುವುದನ್ನು ಕಾಣುವನು. ತನಗೆ ಯಾವ ಗೌರವಯುತ ಸ್ಥಾನವು ಸಿಕ್ಕೀತೆಂದು ಆತ ಯೋಚಿಸಿದ್ದನೋ, ಅದರ ಒಂದಂಶವೂ ಆಧುನಿಕ ಸಮಾಜದಲ್ಲಿ ಸಿಕ್ಕದಿರುವುದನ್ನು ಕಂಡು ಆತ ಸಂತಾಪಪಡುವನು, ಪರಿತಾಪಪಡುವನು, ಪಶ್ಚಾತ್ತಾಪಪಡುವನು, ಕಣ್ಣೀರು ಸುರಿಸುವನು. ಆದರೇನು? 'ಆಟ್ಟಮೇಲೆ ಉರಿ, ಕೆಟ್ಟಮೇಲೆ ಬುದ್ಧಿ'! ಎಲ್ಲವನ್ನೂ ಬಿಟ್ಟು ಹೊಟ್ಟೆಹೊರೆಯುವುದೇ ಆತನಿಗೆ ಒಂದು ದೊಡ್ಡ ಸಮಸ್ಯೆಯಾಗುವುದು. ತನ್ನ ಹೆಂಡತಿ-ಮಕ್ಕಳ ದುರವಸ್ಥೆಯನ್ನು ಕೇಳಿ ಫಲವಿಲ್ಲ. ಸಂಗೀತಗಾರ ತನ್ನ ಜೀವನನಿರ್ವಹಣೆಗಾಗಿ ಮನೆ-ಮನೆಯ ಹೆಮ್ಮಕ್ಕಳಿಗೆ 'ಸರಿಗಮ' ಕಲಿಸಿ, ಬಂದ ಆರುಕಾಸು, ಮೂರುಕಾಸು ಒಟ್ಟುಹಾಕಿ, ತನ್ನ ಮಕ್ಕಳ ಹಸಿವನ್ನು ನೀಗಬೇಕಾಗುವುದು. ಅವನ ಜೀವನಾರಂಭವೂ ಇದೇ— ಕೊನೆಯೂ ಇದೇ ಸ್ಥಿತಿಯಲ್ಲಿ. ಅವನ ಬುದ್ಧಿಯ ವಿಕಾಸಕ್ಕೆ ಎಲ್ಲಿ ಎಡೆ? 'ಚಲಚ್ಚಿತ್ರಗಳ ಸಂಗೀತವೇ ಸಂಗೀತ, ಉಳಿದುದೆಲ್ಲವೂ ಬರಿ ಗುಲ್ಲು, ನಿದ್ದೆಗೇಡು!' ಎನ್ನುವ ನಮ್ಮ ಸಮಾಜದ ಬಹುವ್ಯಕ್ತಿಗಳ ಮುಂದೆ, ಈ ಶಾಸ್ತ್ರೀಯ ಶಾಸ್ತ್ರೋಕ್ತ ಸಂಗೀತ, ಆಲಾಪನೆಯ ರುಚಿ, ಅಭ್ಯಾಸದ ಪ್ರದರ್ಶನ ಎಲ್ಲವೂ 'ಕೋಣನ ಮುಂದೆ ಬಾರಿಸಿದ ಕಿನ್ನರಿ, ಬೋರ್ಗಲ್ಲ ಮೇಲೆ ಸುರಿದ ಮಳೆ!'

ಮತ್ತೊಬ್ಬ ಲೇಖಕ, ಕತೆಗಾರ, ಕವಿ, ಕಾದಂಬರಿಕರ್ತ, ನಾಟಕಕಾರ, ರಾತ್ರಿ-ಹಗಲು ನಿದ್ದೆಬಿಟ್ಟು ಅಭ್ಯಾಸಮಾಡಿ, ವಿಷಯ ಸಂಗ್ರಹಮಾಡಿ ಬರೆದ ಲೇಖನವನ್ನು ಪತ್ರಿಕೆಗಳಿಗೆ ಕಳುಹುವನು. ಉತ್ತಮವಿದ್ದಲ್ಲಿ ಪ್ರಕಟಿತವಾದರೂ, ಅದಕ್ಕೆ ತಕ್ಕ

ZANDU

PROTOCASEN

Whole Casein Hydrolysate

PALATABLE AND POWERFUL NUTRITIVE TONIC FOR ORAL ADMINISTRATION IN ALL RUNDOWN CONDITIONS OF HEALTH

Biological Laboratory

The Zandu Pharmaceutical Works, Ltd.
BOMBAY 14.

Sole Agents:—

M/s. Pranlal and Sons
Chemists, Druggists
Station Road. HUBLI

(H. O. Bangalore City)

ಪ್ರತಿಫಲವನ್ನು ಕೊಡುವಷ್ಟರ ಸ್ಥಿತಿ ನಮ್ಮ ಪತ್ರಿಕೋದ್ಯಮಿಗಳದಲ್ಲ. ಅವರೂ ಇದೇ ಕಲೋಪಾಸನೆಗಾಗಿ ರಾತ್ರಿ ಹಗಲೆನ್ನದೆ ದುಡಿದು ಜೀವಿಸುವಂತಹರು. ಅವರ ಸತತ ಪರಿಶ್ರಮಕ್ಕೆ ತಕ್ಕ ಪ್ರತಿಫಲವು ದೊರೆತಮೇಲಲ್ಲವೆ ಲೇಖಕರಿಗೆ ಪುರಸ್ಕಾರಕೊಡುವ ಪ್ರಶ್ನೆ. ಕನ್ನಡನಾಡಿನಲ್ಲಿ ಒಮ್ಮೆ ಬೆಳಗಿ ಒಮ್ಮೆ ಕಂದುವ ಪತ್ರಿಕೆಗಳನ್ನು ಕಾಣುವಾಗಲೆ, ಪತ್ರಿಕಾಕರ್ತರ ದುರವಸ್ಥೆ ವೇದ್ಯವಾಗುವುದಿಲ್ಲವೇ ? ಮೇಲ್ಮಟ್ಟದ ಪತ್ರಿಕೆಗಳೆಂದೆನಿಸಿದ ಪತ್ರಿಕಾಕರ್ತರೂ ಕೆಲವೊಮ್ಮೆ ತಮ್ಮ ಕಷ್ಟ-ನಷ್ಟಗಳ ಕತೆಯನ್ನು ಹೇಳುವಾಗ, ಯಾರ ಮನಸ್ಸು ಕರಗದಿರದು ? ಕಾದಂಬರಿಕಾರನ, ಕವನಕರ್ತನ ಪಾಡು ಇದಕ್ಕೂ ಕೆಳತರಗತಿಯದು. ತನ್ನ ಸರ್ವಸ್ವವನ್ನು ಅದಕ್ಕಾಗಿ ತ್ಯಾಗಮಾಡಿ ಬರೆದ ಪುಸ್ತಕವನ್ನು, ಪ್ರಕಟಿಸುವುದೇ ಕಷ್ಟದ ಕೆಲಸ; ಪ್ರಕಟವಾಯಿತೆಂದರೆ ಅದನ್ನು ಕೊಂಡುಕೊಳ್ಳುವವರಾರು ? ಉತ್ತಮವೆನಿಸಿದ ಪ್ರಸಿದ್ಧ ಸಾಹಿತ್ಯಿಕರಿಂದ ಬರೆಯಲ್ಪಟ್ಟ ಕೆಲವು ಪುಸ್ತಕಗಳು ಧಾರಾಳವಾಗಿ ಖರ್ಚಾದರೂ, ಹೊಸ ಬರೆಹಗಾರರ ಕೃತಿಗಳನ್ನು ಓದುವವರೆ ವಿರಳ, ಅದರಲ್ಲೂ ಹಣಕೊಟ್ಟು ಓದುವವರಂತೂ ತೀರ ವಿರಳ. ಹೀಗಿರುವಾಗ ಅದರ ಕರ್ತನ ಪಾಡೇನು? ಹೀಗಿರುವಾಗ, ಹೊಸ ಪುಸ್ತಕಗಳನ್ನು ಬರೆಯುವ ಉತ್ಸಾಹ ಎಲ್ಲಿಂದ ಬರಬೇಕು ? ಆರ್ಥಿಕದುಃಸ್ಥಿತಿಯಿಂದ ಪಾಡುಪಡುತ್ತಿರುವ ಕಲೆಗಾರನ ಕೈಯಿಂದ ಉತ್ತಮಕೃತಿ ಹೇಗೆ ಹೊರಡಬಲ್ಲದು ?

ಇನ್ನೊಬ್ಬ ಚಿತ್ರಗಾರ. ತನ್ನ ಕೈಯನ್ನು ಪಳಗಿಸಲಿಕ್ಕಾಗಿ ತನ್ನ ಜೀವನವನ್ನು ಮೀಸಲಾಗಿಡುವನು. ಸುಂದರ ದೃಶ್ಯವೊಂದನ್ನು ಕಂಡು ಆತ ಸಂತಸಪಡುವನು. ಅದನ್ನು ತನ್ನ ಕುಂಚದ ಸಹಾಯದಿಂದ ಚಿತ್ರಿಸುವನು. ಒಂದು ಚಿತ್ರವನ್ನು ಬರೆಯಲು ಅವನೆಷ್ಟು ನಿದ್ರೆಯಿಲ್ಲದ ರಾತ್ರಿಯನ್ನು ಕಳೆಯಬೇಕಾಗುವದು ? ಇಷ್ಟುಪರಿಶ್ರಮದಿಂದ ಮಾಡಿದ ಚಿತ್ರಕ್ಕೆ ತಕ್ಕ ಪ್ರತಿಫಲ ಅವನಿಗೆಲ್ಲಿಂದ ದೊರೆಯಬೇಕು ? ಪ್ರತಿಫಲ ದೊರೆಯದಿದ್ದಲ್ಲಿ, ಅವನ ಹೊಟ್ಟೆಯ ಸಮಸ್ಯೆಯನ್ನು ಬಿಡಿಸುವವರಾರು ? ಅಂಚೆವೆಚ್ಚವನ್ನೂ ತಾನೆ ವಹಿಸಿ ಪತ್ರಿಕಾ ಸಂಪಾದಕರಿಗೆ ಕಳುಹಿಸಿದ ಚಿತ್ರ ಪತ್ರಿಕೆಯಲ್ಲಿ ಅಚ್ಚಾದರೆ, ಅವನಿಗೆಷ್ಟು ಸಮಾಧಾನ ? ಇದಕ್ಕೂ ಎಷ್ಟು ದುರ್ಧರ ಪ್ರಸಂಗಗಳು ? ಇಂತಹ ಧನಹೀನವ್ಯಕ್ತಿ ಸಮಾಜದಲ್ಲಿ ತಲೆಯೆತ್ತಿ ಹೇಗೆ ಬಾಳಬೇಕು ? ಕೊನೆಗೆ ಸರಕಾರೀ ಪರೀಕ್ಷೆಗಳನ್ನು ಕೊಟ್ಟು, ಹೊಟ್ಟೆಯ ಪಾಡಿಗಾಗಿ ಶಾಲಾ ಕಾಲೇಜುಗಳನ್ನು ಸೇರುವವರು ಎಷ್ಟುಮಂದಿ ? ಈ ರೀತಿಯ ಚಿತ್ರಗಳು ಈಗ ಯಾರಿಗೂ ಬೇಡವಾಗಿವೆ. ನಮಗೆ ಬೇಕಾದ ಚಿತ್ರಗಳನ್ನು, ಸುಂದರ ದೃಶ್ಯಗಳನ್ನು ನಾವಿಂದು ಚಲಚ್ಚಿತ್ರಮಂದಿರಗಳಲ್ಲಿ ಅಗ್ಗವಾಗಿ ಪಡೆದು ಆನಂದ ಪಡೆಯಬಹುದಾಗಿದೆ. ಬಿಂಬಗ್ರಾಹಿ (Camera) ಗಳು ನಮಗೆ ಸುಂದರಚಿತ್ರಗಳನ್ನೊದಗಿಸುವುವು. ಕಲೆಯ ಹೆಸರಿನಲ್ಲಿ ಚಲಚ್ಚಿತ್ರಗಳು ಸಮಾಜದ ಹಣಕಾಸನ್ನು ಸೂರೆಗೊಂಡು, ನಿಜವಾದ ಚಿತ್ರಗಾರನ ಸ್ಥಾನ-ಮಾನಗಳನ್ನು ಕಸಿದುಕೊಂಡಿವೆ. ಕೊನೆಗೆ ಚಿತ್ರಗಾರ ‘ ಸ್ಟುಡಿಯೋ ’ಗಳಿಗೆ ಶರಣುಹೊಡೆದು, ಹೊಟ್ಟೆಗಾಗಿ ಅದರ ಮಾಲಕರನ್ನು ಅವಲಂಬಿಸಿಕೊಂಡಿರಬೇಕಾಗುವುದು. ಈ ಚಲಚ್ಚಿತ್ರಗಳ ಪ್ರೇಮಪ್ರಧಾನವಾದ ಚಿತ್ರ, ಕತೆ, ಸಂಗೀತಗಳೇ ನಿಜವಾದ ಕಲೆಯೆ ? ಮಾನವನ ಮನವನ್ನು ಅವು ಪೂರ್ಣಾನಂದದಲ್ಲಿ ಮುಳುಗಿಸಬಲ್ಲವೆ ?

ಸಿಮೆಂಟಿನ ಆವಿಷ್ಕಾರದಿಂದಾಗಿ ಎಲ್ಲೆಲ್ಲೂ ಸಿಮೆಂಟಿನ ಗೋಡೆ, ನೆಲ, ಕುರ್ಚಿ, ಮೇಜು ಮೊದಲಾದ ಸಾಧನ-ಸಾಮುಗ್ರಿಗಳನ್ನು ಕಡಿಮೆ ಖರ್ಚಿನಿಂದ ಪಡೆಯಬಹುದಾದ ಇಪ್ಪತ್ತನೆಯ ಶತಮಾನದಲ್ಲಿ, ಶಿಲ್ಪಿಗಳ ಹೆಸರಂತೂ ಕೇಳಬರುವುದೇ ಇಲ್ಲ. ಕಲ್ಲನ್ನು ಕೊರೆಯುವ ರಗಳೆಯ ಕೆಲಸಕ್ಕೆ ಕೈ ಹಚ್ಚುವ ಬಿಡು, ವಿರಾಮ ಯಾರಿಗಿದೆ ? ಹಳೆಯ ಬಸದಿ, ದೇವಸ್ಥಾನಗಳಲ್ಲಿ ಮಾತ್ರ ಶಿಲ್ಪಿಗಳ ಅಮರಕೃತಿಯನ್ನು ಕಂಡು ನಾವು ಆನಂದಿಸಬೇಕಷ್ಟೇ ! ಹಾಗೆ ಒಬ್ಬೊಬ್ಬ ಶಿಲ್ಪಿಯೂ ಈಗಲೂ ಕಂಡು ಬಂದರೂ, ಅವರ ಸ್ಥಿತಿಯೂ ಇತರ ಕಲೆಗಾರರ ವರ್ಗಕ್ಕಿಂತ ಯಾವ ವಿಧದಲ್ಲೂ ಮೇಲ್ತರಗತಿಯಲ್ಲಿಲ್ಲ. ವಿವಿಧ ವರ್ಣದ ತೈಲ ಚಿತ್ರ, ಪೈಂಟ್ ಮೊದಲಾದ ಆಧುನಿಕ ಚಿತ್ರವಿಧಾನಗಳಿರುವಾಗ, ಈ ಕಲ್ಲಿನಲ್ಲಿ ಕೊರೆವ ಶಿಲ್ಪಕಲೆ ಯಾರಿಗೆ ಬೇಕಾಗಿದೆ ?

ಇದೇ ರೀತಿಯ ತಿರಸ್ಕೃತ ಧೋರಣೆಯನ್ನೇ ಈ ಕಲೆಗಾರರ ಕುರಿತಾಗಿ ನಮ್ಮ ಸಮಾಜ ಮುಂದುವರಿಸಿದರೆ, ಕ್ರಮೇಣ ಅವರು ಹೇಳಹೆಸರಿಲ್ಲದಂತಾಗಲಾರರೆ ? ಈ ರೀತಿಯ ಅದೂರದರ್ಶಿ ಧೋರಣೆಯಿಂದಾಗಿ, ನಮ್ಮ ಸಮಾಜದ ಸೌಂದರ್ಯೋಪಾಸಕರ ಸಂಖ್ಯೆಯನ್ನು ಕಡಿಮೆಮಾಡಿದಂತಾಗಲಿಲ್ಲವೆ ? ಜೀವನದ ಶಾಂತಿ, ತೃಪ್ತಿ, ಪರಮಾನಂದಗಳು ಬರಿಯ ಕನ್ನಡಿಯೊಳಗಿನ ಗಂಟಾಗಲಿಕ್ಕಿಲ್ಲವೆ ? ವ್ಯಾಪಾರಿ, ವೈದ್ಯ ವಕೀಲರಿಗೆ ಕೊಡುವ ಸ್ಥಾನಮಾನಗಳನ್ನು ನಾವು ಕಲೆಗಾರರಿಗೇಕೆ ಕೊಡುವುದಿಲ್ಲ? ದೇಹಕ್ಕೆ ಮನಸ್ಸಿದ್ದಂತೆ ಸಮಾಜಕ್ಕೊಬ್ಬ ಕಲೆಗಾರ. ನಮ್ಮಲ್ಲಿ ಶ್ರೀಮಂತರು ಸಂಗೀತಗಾರರಿಗೆ, ಚಿತ್ರಕಾರರಿಗೆ, ಶಿಲ್ಪಿಗಳಿಗೆ, ಸಾಹಿತಿಗಳಿಗೆ ತಕ್ಕ ಮನ್ನಣೆಯನ್ನು ಸಲ್ಲಿಸಬೇಕು. ಹಿಂದೆ ರಾಜಾಶ್ರಯದಲ್ಲಿ ಬೆಳೆದು ಬಂದ ಕಲೆ, ಇಂದು ನಮ್ಮ ಶ್ರೀಮಂತ ವರ್ಗದ ಸಹಾಯದಿಂದ ಪುನರ್ವರ್ಧಿಸಲಿ. ಕಲಾಭಿಜ್ಞನು ಕಣ್ಣೀರನ್ನು ಸುರಿಸದಿರಲಿ. ಅವನೂ ನಮ್ಮ ಸಮಾಜದಲ್ಲಿ ಐಕ್ಯವಾಗಲಿ ! ಸಮಾಜದ ಸಾಮೂಹಿಕ ಬೆಳೆವಣಿಗೆ ಆಗಮಾತ್ರ ಆಗಬಲ್ಲದು.

ನಾನು ಕಂಡ ನಾಡು

(ಪ್ರವಾಸ ಪ್ರಬಂಧ)

ಶ್ರೀ. ಮಿರ್ಜಿ ಅಣ್ಣಾರಾಯರು, ಉಗಾರ

ಕನ್ನಡನಾಡಿನ ಜ್ಞಾನದಕೀರ್ತಿಯು ಕೊಂಡಾಟ
ಬಿಹಾರದ ಒಂದು ಪ್ರಮುಖ ಸಾಂಸ್ಕೃತಿಕ ಸಂಸ್ಥೆ-
ಯಲ್ಲಿ! ಈ ನೋಟ ಯಾವ ಕನ್ನಡದ ಅಭಿ-
ಮಾನಿಯ ಹೃದಯವನ್ನು ಹಿಗ್ಗಿಸಲಿಕ್ಕಿಲ್ಲ !
ನಮ್ಮ ಮುಳುಗುಂದದ ನಯಸೇನಕವಿ,
ಆರಾದವರಿಗೆ ಜ್ಞಾನದಾನ ಮಾಡುತ್ತಿದ್ದಾನೆ !

卐

(೯) ಗುಲಜಾರಿಬಾಗ-ಆರಾಗಳಲ್ಲಿ

ಭಕ್ತಿಯಾರಪುರದಲ್ಲಿ ನಾವು ಬರುವಷ್ಟರಲ್ಲಿ, ಪಾಟಣಾದ ಕಡೆಗೆ ಹೋಗುವ ಉಗೆಬಂಡಿಯು ಹೋಗಿಬಿಟ್ಟಿದ್ದಿತು ನಾಲಂದದಿಂದ ಹೊರಟ ನಾವು ಬಿಹಾರ ಲಾಯಿಟ್ ರೇಲ್ವೆಯಿಂದ ಈಸ್ಟ್ ಇಂಡಿಯನ್ ರೇಲ್ವೆಯ ಮುಖ್ಯದಾರಿಯನ್ನು ಸೇರುವುದು ಭಕ್ತಿಯಾರ ಪುರದಲ್ಲಿ. ಇದೊಂದು ಉಗೆಬಂಡಿಯ ಕೂಡುಮನೆ. ಆದರೆ ನಾವು ಬರುವ ಗಾಡಿಗೂ ಅಲ್ಲಿಂದ ಹೋಗುವ ಗಾಡಿಗೂ ಹೊಂದಿಕೆಯಾಗಲಿಲ್ಲ. ಆದುದರಿಂದ, ಆ ದಿನ ಸಾಯಂಕಾಲದವರೆಗೆ ನಿಲ್ಮನೆಯಲ್ಲಿಯೇ ಕಾಲಕಳೆಯಬೇಕಾಯಿತು.

ಬಿಸಿಲುಗಾಲ; ಅದರಲ್ಲೂ ಮಧ್ಯಾಹ್ನ. ಚಹ ತೆಗೆದುಕೊಳ್ಳದ ನಮಗೆ, ನೀರನ್ನೂ ಕುಡಿಯಲಿಕ್ಕೆ ಕೊಡಲಿಲ್ಲ ಹೋಟೇಲಿನವರು. ಈ ಲೋಕವ್ಯವಹಾರಕ್ಕೆ ಬೇಸತ್ತು, ಬಿಸಿಲುಹೊತ್ತಿನಲ್ಲಿ ಬಾವಿಯನ್ನು ಶೋಧಿಸುತ್ತ ತಿರುಗಬೇಕಾಯಿತು. ಸಮೀಪದಲ್ಲಿಯೇ ಇರುವ ಬಾವಿಯನ್ನು ತೋರಿಸದ ಜನವದು ಎಂಥ ಜನ ! ಇದಕ್ಕೆ ಜನರು 'ವ್ಯಕ್ತಿಯಾರಪುರ'ವೆಂದೇ ಕರೆಯುವುದೇ ಸಮರ್ಪಕವೆನಿಸಿತು. ಒಂದು ಕ್ಷಣ ಹಾಗೆಯೇ ಆ ಭಾಗದ ಪ್ರಾಚೀನ ಸಂಸ್ಕೃತಿಯನ್ನು ನೆನೆದರೆ, ಇಂದಿನ ಸ್ಥಿತಿಯನ್ನು ಕಂಡು ಇನ್ನೂ ಕೊರಗುವಂತಿದ್ದಿತು. ಅಲ್ಲಿಂದ ಇಪ್ಪತ್ತು ಮೈಲಿನ ಒಳಗೇ **ಪಾಟಲೀಪುತ್ರ**. ಮೌರ್ಯರ ಪ್ರಾಚೀನ ರಾಜಧಾನಿ. ಜೈನರ ಸಿದ್ಧ ಕ್ಷೇತ್ರ. ಸುರಸುಂದರೀಸದೃಶ ಅಭಯರಾಣಿಯ ಮೋಹಪಾಶದಿಂದ ಮುಕ್ತನಾದ **ಸುದರ್ಶನ** ಇಲ್ಲಿಯೇ ಬಾಳಿದವ. ಅವನ ಚರಣಚಿಹ್ನಗಳು ಪಾಟಲಿಪುತ್ರದ ಗುಲಜಾರಿಬಾಗ್ ನಿಲ್ದಾಣದ ನೆರೆಯಲ್ಲಿಯೇ, ಒಂದು ದಿನ್ನೆಯ ಮೇಲೆ ಈಗಲೂ ವಿರಾಜಮಾನವಾಗಿವೆ. ಈ ಪಾಟಲಿಪುತ್ರದಲ್ಲಿಯೇ ಉದಯನನು ಅನೇಕ ಜಿನಮಂದಿರಗಳನ್ನು ಕಟ್ಟಿಸಿದ. ಅಲ್ಲದೆ ಅದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡ. ಇವನ ಅಜ್ಜ— ಶಿಶುನಾಗವಂಶದ ರಾಜಾ ಅಜಾತಶತ್ರು ಪ್ರ. ಇಂದ್ರಭೂತಿ ಹಾಗೂ ಸುಧರ್ಮಾಚಾರ್ಯರಿಂದ ಜೈನದೀಕ್ಷೆಯನ್ನು ಪಡೆದನು. ಮೌರ್ಯಕಾಲದ ಜಿನಬಿಂಬಗಳೂ ಇಲ್ಲಿ ನೆಲವನ್ನು ಅಗಿಯುವಾಗ ಸಿಕ್ಕುತ್ತಿವೆ. ಅಂಥವುಗಳಲ್ಲಿ ಕೆಲವನ್ನು ಅಲ್ಲಿಯ ಸಂಶೋಧನ ಸಂಸ್ಥೆಯಲ್ಲಿ ಇಂದಿಗೂ ನಾವು ಕಾಣಬಹುದು. ಇಂಥ ಸಂಸ್ಕೃತಿಸಂಪನ್ನವಾದ ನಾಡು ಈಗ ಎಂಥ ಕಾಡಾಗಿದೆಯಲ್ಲ !

ಆ ವ್ಯಕ್ತಿಯಾರಪುರದಲ್ಲಿ ಒಂದರ್ಧದಿನ ಕಳೆಯುವುದೆಂದರೆ ಒಂದು ಯುಗ ಕಳೆದಂತಾಯಿತು ನನಗೆ ! ಇರುಳು ಕಲಕತ್ತೆಯಿಂದ ದಿಲ್ಲಿಗೆ ಮಾನವಜೀವಿಗಳನ್ನು ಹೊತ್ತುಕೊಂಡು ಹೋಗುವ ಉಗೆಬಂಡಿಯನ್ನು ಸೇರಿ, **ಪಾಟಣಾ** ನಿಲ್ದಾಣವನ್ನು ತಲುಪಿದೆವು. ಅಲ್ಲಿಯೂ ಅದೇ ಅನುಭವ ! ಪ್ಯಾಸೆಂಜರ್ ಗಾಡಿಯ ಟಿಕೇಟನ್ನು ಪಡೆದ ನಾವು ಎಕ್ಸ್‌ಪ್ರೆಸ್ಸಿನಲ್ಲಿ ಪ್ರಯಾಣ ಮಾಡಿದ್ದೆವು. ಆ ತಪ್ಪಿಗಾಗಿ ಟಿಕೆಟ್ ಕಲೆಕ್ಟರ್ ದಂಡ ಕೇಳುವವ; ರುದ್ದು ಕೊಟ್ಟು ಪಾವತಿ ಕೇಳಿದರೆ "ಹೆಚ್ಚಾಗುವುದು. ಸುಮ್ಮನೆ ಏಕೆ ದುಡ್ಡು ಕಳಕೊಳ್ಳುವಿರಿ ! ದೂರದ ಪ್ರಯಾಣಿಕರು ಬೇರೆ...." ಎಂದು ನಮ್ಮ ಮೇಲೆ ಕನಿಕರದ ಅಸ್ತ್ರಪ್ರಯೋಗ !

"ಎಕ್ಸ್‌ಪ್ರೆಸ್ಸನಲ್ಲಿ ನಾವು ಪ್ರಯಾಣ ಮಾಡಿದ್ದೇ ಹದಿನೆಂಟು ಮೈಲಿನಷ್ಟಲ್ಲ !" ಎಂಬುದು ನನ್ನ ವಾದ.

"ಹಾಗಲ್ಲ, ನೀವು ದಕ್ಷಿಣ ದೇಶದಿಂದ ಬಂದವರು ಎಂದೆ...." ಅವನ ಸಮಾಧಾನ.

"ಅಂದರೇನು ? ನಮ್ಮೂರಿನಿಂದ ಇಲ್ಲಿಯವರೆಗೆ, ಎಕ್ಸ್‌ಪ್ರೆಸ್ಸಿನ ಚಾರ್ಜು ತುಂಬಬೇಕೆನ್ನುವಿರೋ ಏನು ನೀವು ?"



“ ಅಲ್ಲ, ಪೆನಲ್ಟಿ ಬೀಳುವುದು ! ”

“ ಕೊಡುತ್ತೇನಲ್ಲ ! ”

“ ಪಾಪ ! ಸುಮ್ಮನೆ ಕಳೆದುಕೊಳ್ಳುತ್ತೀರಲ್ಲ ! ”

“ ಸುಮ್ಮನೆ ಹೇಗೆ ? ಎಕ್ಸಪ್ರೆಸ್ಸಿನಲ್ಲಿ ಬಂದುದೇನು ಸುಳ್ಳೇ ? ”

“ ನಾನು ಹೇಳಿದ್ದೇ ನಿಮಗೆ ಅರ್ಥವಾಗದಲ್ಲ ! ”

ನನಗೆಲ್ಲ ಅರ್ಥವಾಗಿತ್ತು. ಹಿರಿಯರು ನಮ್ಮ ವಾದಕ್ಕೆ ಬೇಸತ್ತು ‘ ಏನಾದರೂ ಕೇಳಿದ್ದು ಕೊಟ್ಟು ನಡೆ ! ’ ಎನ್ನುತ್ತಿದ್ದರು. ಇಂಥ ಕಳ್ಳವ್ಯವಹಾರದಿಂದ ರೋಸಿಹೋದ ಮನಸ್ಸು, ಯಾವುದಕ್ಕೂ ಆಗ ಬಾಗುವಂತಿರಲಿಲ್ಲ. ಯೋಗ್ಯ ಹಣ ಕೊಟ್ಟು ಪಾವತಿ ಪಡೆಯುವ ಕಡೆಗೇನೇ ಅದರ ಗಮನವಿತ್ತು. ಆದರೆ ನನ್ನ ಕೈಯೊಳಗಿನ ಟಿಕೀಟುಗಳನ್ನು ಅವನ ಕೈಯಲ್ಲಿ ಕೊಟ್ಟು ಪರಾಧೀನನಾಗಿದ್ದೆ. ಅವನು ಟಿಕೀಟುಗಳನ್ನು ತಕ್ಕೊಂಡು ತನ್ನ ಆಫೀಸಿನ ಕಡೆಗೆ ನಡೆದ. ಕೈಯ ಹಿಡಿದರೆ ಮೈ ತಾನೆ ಬಹುದೆಂಬಂತೆ, ನಾನು ಅವನನ್ನು ಹಿಂಬಾಲಿಸಬೇಕಾಯಿತು. ನಮ್ಮ ಸಾಮಾನುಗಳನ್ನು ಕಾಯುತ್ತ ಹಿರಿಯರು ಅಲ್ಲಿಯೇ ನಿಂತರು, ಗಾಬರಿಯಾದರು. ನಾನು ಮಾತ್ರ ಹಾಗೆಯೇ ಹಿಂಬಾಲಿಸಿದೆ. ಅವನು ಆಫೀಸಿನಲ್ಲಿ ಹೋಗಿ ಕುಳಿತು, ಮತ್ತೆ ನನಗೆ ಬುದ್ಧಿ ಹೇಳಹತ್ತಿದ. ಒಬ್ಬ ಹಮಾಲನ ಕಡೆಯಿಂದಲೂ ಹೇಳಿಸಿದ. ಕೊನೆಗೆ ಯಾವುದಕ್ಕೂ ನಾನು ಒಪ್ಪದಿರಲು, ಹಣ ತಕ್ಕೊಂಡು ಪಾವತೀ ಕೊಟ್ಟ. ತಕ್ಕೊಂಡು ಮರಳಿದೆ. ‘ ಹುಚ್ಚ ! ಸುಮ್ಮನೆ ಎರಡು ಮೂರು ರೂಪಾಯಿ ಕಳಕೊಂಡಿತು ! ’ ಎಂಬರ್ಥದ ಮಾತೊಂದು ಕಿವಿಗೆ ಬಿದ್ದಿತು. ಅಹುದು; ಇಂಥ ಜಗತ್ತಿನಲ್ಲಿ ನನ್ನ ನಡತೆಯೊಂದು ಹುಚ್ಚೇನೋ ನಿಜ. ಆದರೆ ಆ ಹುಚ್ಚಿನಿಂದ ಆಗುವ ಆನಂದ ಎಂಥದು ? ಕೋಟಿ ರೂಪಾಯಿಗಳನ್ನು ಕೊಟ್ಟರೂ ಅದು ಲಭಿಸೀತೆ ?

ಪಾಟಣಾ ದೊಡ್ಡ ಪಟ್ಟಣ. ಅದಕ್ಕೆ ಮೂರು ಉಗಿಬಂಡಿಯ ನಿಲ್ದಾಣಗಳು. ನಾವು ಇಳಿದದ್ದು ಪಾಟಣಾ ಸಿಟಿ. ನಮಗೆ ಹೋಗಬೇಕಾದದ್ದು ಗುಲಜಾರಬಾಗ ನಿಲ್ದಾಣಕ್ಕೆ. ಅದು ಪಾಟಣಾಕ್ಕೆ ಸೇರಿದ ಇನ್ನೊಂದು ನಿಲ್ಮನೆಯು. ಅಲ್ಲಿ ಎಕ್ಸಪ್ರೆಸ್ ನಿಲ್ಲುತ್ತಿರಲಿಲ್ಲ. ಅದಕ್ಕಾಗಿ ಪಾಟಣಾ ಸಿಟಿ ನಿಲ್ದಾಣದಲ್ಲಿಯೇ ಇರುಳೆಲ್ಲ ಕಳೆಯುವುದಿತ್ತು. ಅದಕ್ಕೆ ಆ ಟಿಕೀಟ್‌ಕಲೆಕ್ಟರ್ ಹಾಗೂ ಹಮಾಲ ಕೂಡಿ ಅಡ್ಡಿ ಮಾಡಿದರು, ತೊಂದರೆ ಕೊಡಹತ್ತಿದರು. ಆದರೆ ನಾವು ಯಾವುದಕ್ಕೂ ಮಣಿಯಲಿಲ್ಲ. ಅವರ ಕೂಡ ಹೋರಾಡುತ್ತ ಅಲ್ಲಿಯೇ ಉಳಿದೆವು. ಅಪರಿಚಿತ ಸ್ಥಳದಲ್ಲಿ, ಇರುಳು ಊರಲ್ಲಿ ಹೋಗುವಂತಿರಲಿಲ್ಲ. ಆದರಿಂದ ನಿದ್ರೆ ಮಾಡದೆ, ಎಂದರೆ ಒಬ್ಬರ ತರುವಾಯ ಒಬ್ಬರು ಮಲಗಿ ಏಳುತ್ತ ರಾತ್ರಿಯನ್ನು ಕಳೆದೆವು. ಅಂದರೂ ಇನ್ನೂ ನಸುಕಿರುವಾಗಲೇ ‘ ಟಂ ಟಂ ’ (ಒಂದು ಜಾತಿಯ ಬಂಡಿ) ಒಂದನ್ನು ಗೊತ್ತುಮಾಡಿಕೊಂಡು, ಆ ಸ್ಥಳವನ್ನು ಬಿಟ್ಟೆವು.

ಗುಲಜಾರಬಾಗ ನಿಲ್ದಾಣದ ಸಮೀಪದಲ್ಲಿಯೇ ಒಂದು ಜಿನಮಂದಿರವಿದೆ; ಅದರ ಎದುರಿಗೇನೇ ಧರ್ಮಶಾಲೆ. ಸುತ್ತಲೂ ಹೊಲಸು ಉಡಿಗೆ-ತೊಡಿಗೆಗಳನ್ನು ತೊಟ್ಟ ಸಾಮಾನ್ಯ ಕೂಲಿಕಾರ ಜನರು. ಅಲ್ಲಿ ಜೈನರಾರೂ ಇದ್ದಂತೆ ತೋರಲಿಲ್ಲ. ನಾವು ಧರ್ಮಶಾಲೆಯ ಎದುರಿಗೆ ‘ ಟಂ ಟಂ ’ ದಿಂದ ಇಳಿದೊಡನೆಯೇ ಒಂದು ಮುದುಕಿ— ಹಣ್ಣು ಹಾಗಲ ಹಣ್ಣಿನಂತೆ ತೋರುವ ಮುದುಕಿ— ಎದುರಿಗೆ ಬಂದಳು. ಉಟ್ಟಿದ್ದು ಬಿಳಿಯ ದಪ್ಪ ದೋತರ. ಅದೂ ತುಂಬ ಹೊಲಸಾದುದು, ಬಿಳಿಯ ತಲೆ. ಎಣ್ಣೆ-ನೀರುಗಳನ್ನು ಕಂಡು ಎಷ್ಟು ದಿನಗಳಾಗಿದ್ದುವೋ ಏನೋ ! ಕಪ್ಪು ಬಣ್ಣದ ಮುಖದ ಮೇಲೆ ನಿರಿಗೆಗಳು ಬಿದ್ದಿದ್ದುವು. ಒಳನಟ್ಟ ಕಣ್ಣು. ಮೈಯಲ್ಲಿ ಕುಪ್ಪಸವಿಲ್ಲ. ಕಾಣಲಿಕ್ಕೆ ಎಂಥ ಅಸಹ್ಯ ವ್ಯಕ್ತಿಯದು ! ಆದರೆ ಹೃದಯ ಎಂಥದು. ಭಾರತೀಯ ಸಂಸ್ಕೃತಿಯ ಕೆನೆ, ಸಂಪನ್ನತೆಯ ತೆನೆ ! ಇದನ್ನು ಗುರುತಿಸಲಿಕ್ಕೆ ನಮಗೆ ಹೆಚ್ಚು ಹೊತ್ತುಗಳು ಹತ್ತಲಿಲ್ಲ.

ಅವಳು ಧರ್ಮಶಾಲೆಯ ಕಸ ಗುಡಿಸುವ ಮುದುಕಿ. ನಾವು ದಕ್ಷಿಣದೇಶದವರೆಂಬುದನ್ನು ಆ ಟಿಕೀಟ್ ಕಲೆಕ್ಟರನಿಗಿಂತಲೂ ಬೇಗನೆ ಕಂಡುಹಿಡಿದಳು. ತನ್ನ ಮನೆಗೆ ಪೂರ್ವಪರಿಚಿತ ಆಪ್ತರೊಬ್ಬರು ಬಂದಂತೆ ಸಲುಗೆಯಿಂದ ನಮ್ಮನ್ನು ಸ್ವಾಗತಿಸಿದಳು. ಧರ್ಮಶಾಲೆಯ ಕೋಣೆಯೊಂದನ್ನು ತೆರೆದು ಕೊಟ್ಟಳು. ತನ್ನ ಮನೆಗೆ ಓಡಿ ಹೋಗಿ, ಬಿಂದಿಗೆಯೊಂದನ್ನು ತಂದು, ಸಮೀಪದ ಬಾವಿಯೊಂದರಿಂದ ನೀರನ್ನು ಸೇದಿ ತಂದಿಟ್ಟಳು.

“ ಜಾಗರಣೆಯಾದಂತಿದೆ. ಮೊದಲು ಮುಖ ತೊಳೆದುಕೊಳ್ಳಿ. ಕಾಲು ತೊಳೆಯಿರಿ. ಭಗವಂತನ ದರ್ಶನ ಮಾಡಿಕೊಳ್ಳಿ. ನಿಮಗೆಲ್ಲ ಅನುಕೂಲ ಮಾಡಿಕೊಡುವೆ. ಬಾಬು ಊರಲ್ಲಿಲ್ಲ. ಆದರೂ ತೊಂದರೆಯಾಗದು. ಅಸಮಾಧಾನ ಮಾಡಿಕೊಳ್ಳಬೇಡಿ ! ” ಎಂದು ವಿನಯದಿಂದ ಹೇಳಿಕೊಂಡಳು.

“ ಇಲ್ಲ, ನೀವಿದ್ದೀರಲ್ಲ ! ” ಎಂದೆ.

‘ ಬಾಬು ಇವಳ ಮಗ ಇರಬೇಕು, ” ಎಂದಳು ತಾಯಿ.

“ ಅಲ್ಲ; ಇತ್ತ ಎಲ್ಲರಿಗೂ ಬಾಬು ಎಂದು ಹೇಳುವ ರೂಢಿ. ಈ ಧರ್ಮಸಾಲೆಯ ಸಂಚಾಲಕನಿರಬೇಕು. ಭಾರತೀಯ ದಿಗಂಬರ ಜೈನ ಕ್ಷೇತ್ರ ಕಮೀಟಿಯ ನೌಕರನಾತ. ”

ಎಂದು ವಿವರಿಸಿದೆ. ಅವನ ವಿಷಯವನ್ನು ರಾಜಗೃಹದಲ್ಲಿ ಇರುವ ‘ ಮುನೀಮ ’ನಿಂದಲೇ ತಿಳಿದುಕೊಂಡಿದ್ದೆ. ಅವನಿಗೂ ಈ ಬಾಬುವಿಗೂ ಹತ್ತಿರದ ಸಂಬಂಧವಂತೆ. ಅದರ ಆಧಾರದಿಂದ ನಾನು ತಾಯಿಗೆ ಹೇಳಿದೆ. ಇಷ್ಟು ಮಾತನಾಡುವಷ್ಟು ವೇಳೆ ಕೂಡ ಆ ಮುದುಕಿಗೆ ವಿಲಂಬವಾದಂತೆ ಎನಿಸಿತೇನೋ ! ಏನೋ ಭಾವಿಸಿ ಮತ್ತೆ ಹೇಳಿದಳು :

“ ನನ್ನ ನೀರು ತಕ್ಕೊಳ್ಳದಿದ್ದರೆ, ಬಾವಿಯನ್ನು ತೋರಿಸುವೆ. ನೀವೇ ತರಬಹುದು. ಇಲ್ಲಿ ಸಮೀಪದಲ್ಲಿ ಜೈನರಾರೂ ಇಲ್ಲ ! ” ಎಂದು ವಿಷಾದ ವ್ಯಕ್ತಪಡಿಸಿದಳು.

ಇಂತಹ ಪವಿತ್ರಾತ್ಮಳ ನೀರು ಉಪಯೋಗಿಸುವುದಿಲ್ಲವೆನ್ನುವ ಮನಸ್ಸಂತೂ ನನಗಾಗಲಿಲ್ಲ. ಎದ್ದು ಕೈಕಾಲು ಮುಖಗಳನ್ನು ತೊಳೆದುಕೊಂಡೆ. ಹಿರಿಯರಿಗೆ ಇನ್ನೊಂದು ಬಿಂದಿಗೆ ನೀರು ತಂದುಕೊಟ್ಟೆ. ಆಮೇಲೆ ಯಥಾಪ್ರಕಾರ ದೇವರ ದರ್ಶನ, ಅಡಿಗೆ-ಊಟಗಳೆಲ್ಲ ನಡೆದುವು. ಊರಲ್ಲಿಯ ಉಳಿದ ಜಿನಮಂದಿರಗಳ ದರ್ಶನವೂ ಆಯಿತು. ಎಲ್ಲದಕ್ಕೂ ಆ ಮುದುಕಿಯೇ ನಮಗೆ ಸಾರಥಿ. ಅವಳ ಆಶ್ರಯದಲ್ಲಿ ಒಂದು ದಿನವನ್ನು ಮಾತ್ರ ಅಲ್ಲಿ ಕಳೆದು, ಮರುದಿನ ಆರಾ ಪಟ್ಟಣಕ್ಕೆ ಹೊರಟುನಿಂತೆವು. ಆ ಕ್ಷೇತ್ರವಾಸಕ್ಕಿಂತಲೂ ಆ ಮುದುಕಿಯ ಸಹವಾಸವೇ ನನ್ನ ಹೃದಯಕ್ಕೆ ಹೆಚ್ಚು ಶಾಂತಿ-ಸಮಾಧಾನಗಳನ್ನಿತ್ತಿತು. ಆ ಮಹಾಮುನಿ ಸುದರ್ಶನನ ಮಹಾತಾಯಿಯೆಂದೇ ಅವಳನ್ನು ಕಂಡೆ. ತುಂಬಿದ ಹೃದಯದಿಂದ ಬೀಳ್ಕೊಂಡು ಹೊರಟೆ. ಹೊರಡುವ ಕ್ಷಣದ ವರೆಗೂ ನನ್ನಿಂದ ಒಂದು ಕಾಸನ್ನೂ ಕೂಡ ಅಪೇಕ್ಷಿಸಲಿಲ್ಲ ಅವಳು. ಬಗಲಲ್ಲಿ ಮಗುವೊಂದನ್ನು ಎತ್ತಿಕೊಂಡು ಓಡಾಡಿ, ನಮಗೆ ಗಾಡಿಯನ್ನು ಬಾಡಿಗೆಗೆ ಗೊತ್ತುಮಾಡಿ ಕೂಡ ಕೊಟ್ಟಳು. ಸಾಮಾನು ಹಾಕಿಸಿದಳು. ನಾನೇ ಬಂಡಿಯಲ್ಲಿ ಏರುವಾಗ, ಅವಳ ಮೊಮ್ಮಗುವಿನ ಕೈಯಲ್ಲಿ ಐದುರೂಪಾಯಿಯ ನೋಟೊಂದನ್ನು ಇಟ್ಟೆ. 'ಒಲ್ಲೆ ಒಲ್ಲೆ!' ಎನ್ನುತ್ತ ಸ್ವೀಕರಿಸಿದಳು. ಬಂಡಿ ಮುಂದೆ ಸಾಗಿತು. ಧರ್ಮಶಾಲೆಯ ಕಟ್ಟೆಯ ಮೇಲೆ ನಿಂತು, ಹತ್ತಿರದ ಬಂಧುಗಳನ್ನು ಬೀಳ್ಕೊಡುವ ರೀತಿಯಲ್ಲಿ, ಬಹಳ ಹೊತ್ತಿನ ವರೆಗೆ ನಮ್ಮನ್ನೇ ನೋಡುತ್ತ ನಿಂತಿದ್ದಳು ಮುದುಕಿ. ನಿಶ್ಚಲವಾಗಿ ನಿಂತ ಆ ಮುದುಕಿಯ ಚಿತ್ರ ಇಂದಿಗೂ ನನ್ನ ಹೃತ್ಪಟಲದಲ್ಲಿ ಅಚ್ಚಳಿಯದೆ ಮೂಡಿನಿಂತಿದೆ.

ಮಧ್ಯಾಹ್ನದ ಹನ್ನೆರಡು ಗಂಟೆಗೆಂದರೆ ಆರಾ ನಿಲ್ದಾಣದಲ್ಲಿ ಬಂದಿಳಿದೆವು. ಅಲ್ಲಿಂದ ನೆಟ್ಟಗೆ ಚೌಕಬಾಜಾರದಲ್ಲಿರುವ ಹರಪ್ರಸಾದರ ಧರ್ಮಸಾಲೆಗೆ ಹೋದೆವು. ಅಲ್ಲಿ ಉಳಿದುಕೊಳ್ಳುವ ವ್ಯವಸ್ಥೆಯೆಲ್ಲ ಸುಲಭವಾಗಿಯೇ ಆಯಿತು. ಸ್ವಲ್ಪ ಹೊತ್ತಿನಲ್ಲಿ ಅಡಿಗೆ-ಊಟಗಳೆಲ್ಲ ತೀರಿದುವು. ಅಷ್ಟರಲ್ಲಿ ಬಿಸಿಲೂ ಕಡಿಮೆಯಾಗಿದ್ದಿತು. ಅದು ಹೊರಗೆ ಹೊರಡುವ ಹೊತ್ತು. ಆದರೆ ಪ್ರವಾಸದ ಆಯಾಸದಿಂದ ಹಿರಿಯರಿಬ್ಬರ ಮೈಯಲ್ಲೂ ನೆಟ್ಟಗಿರಲಿಲ್ಲ; ಆದರಿಂದ ನಾನೊಬ್ಬನೇ ಊರಲ್ಲಿ ಸುತ್ತಾಡಿಕೊಂಡು ಬರಲೆಂದು ಹೊರಟೆ. ಈ ನಗರದಲ್ಲಿಯೇ ಶ್ರೀಮಾನ್—ಸ್ವರ್ಗೀಯ—ಬಾಬು ದೇವಕುಮಾರರು ಸ್ಥಾಪಿಸಿದ 'ಶ್ರೀಜೈನಸಿದ್ಧಾಂತಭವನ' ಇದೆಯೆಂದು ಮೊದಲಿನಿಂದಲೂ ಕೇಳಿದ್ದೆ. ಆ ಸಂಸ್ಥೆಯಿಂದ ಹೊರಡುವ 'ಜೈನಸಿದ್ಧಾಂತ ಭಾಸ್ಕರ' ಎಂಬ ತ್ರೈಮಾಸಿಕವನ್ನು ನೋಡಿದ್ದೆ. ಆದರಿಂದ ಆ ಸಂಸ್ಥೆಯನ್ನು ಮೊದಲು ಕಾಣುವ ಕುತೂಹಲ ನನ್ನಲ್ಲಿತ್ತು. ಅದನ್ನೇ ಶೋಧಿಸುತ್ತ ನಡೆದೆ. ಸ್ವಲ್ಪ ದೂರ ಹೋಗುವಷ್ಟರಲ್ಲಿ, ಪೇಟೆಯಲ್ಲಿರುವ ಒಂದು ಭವ್ಯ ಜಿನಮಂದಿರ ಸಿಕ್ಕಿತು. ಅಲ್ಲಿ ಹೋಗಿ ವಿಚಾರಿಸಲು, ಅದರ ನೆರೆಯಲ್ಲಿಯೇ ಆ ಸುಂದರ ಸರಸ್ವತಿಯ ಮಂದಿರವಿದೆಯೆಂದು ತಿಳಿಯಿತು. ಅಲ್ಲಿ ಹೋದೆ. ಸಿದ್ಧಾಂತ ಭವನದ ತಲೆಬಾಗಿಲಿನ ಮೇಲೆ ವಾಗ್ದೇವಿಯ ಮೂರ್ತಿ! ಅದನ್ನು ಕಂಡೇ ಯಾರ ಮನಸ್ಸೂ ಪ್ರಸನ್ನವಾಗಬೇಕು. ಆವಾರದ ಗೋಡೆಯ ಒಳಗೆ ಕಿರಿಯ ಗಲಾದ ಅಂಗಳ. ಅದರ ಆಚೆಗೆ ಸರಸ್ವತೀ ಭವನ. ಅದರೊಳಗೆ ಅಪಾರವಾದ ಗ್ರಂಥರಾಶಿ! ಇಲ್ಲಿ ಅನೇಕ ಓಲೆಗರಿಯ ಗ್ರಂಥಗಳನ್ನು ಸಂಗ್ರಹಿಸಿ ಇಡಲಾಗಿದೆ. ಅಲ್ಲದೆ ಅವುಗಳ

ಬಾಯೋಟೋನಾ
ಇದರ ಸೇವನೆಯಿಂದ
ಮಕ್ಕಳು ಮೊದಲ್ಗೊಂಡು ಮುದುಕರ ವರೆಗೆ ಸ್ತ್ರೀಪುರುಷರು ಇದನ್ನು ಸೇವಿಸಬಹುದು. ಮಿದುಳಿಗೂ ಜೀವಾಣುಗಳಿಗೂ ಬಲವನ್ನೂ ಆರೋಗ್ಯವನ್ನೂ ಕೊಡುವ ಉತ್ತಮ ಉಪಾಯವೆಂದರೆ '**ಬಾಯೋಟೋನಾ**' ಸೇವಿಸುವುದೇ ಆಗಿದೆ. ೪೦ ದಿವಸ ಸಾಕಾಗುವ ಬಾಟ್ಲಿಯ ಬೆಲೆ ರೂ. ೨. ಟ. ಖರ್ಚು ಬೇರೆ. ಸೂಚಿಪತ್ರ ಪಡೆಯಬಹುದು.
ROY & CO. BOMBAY 2.

ಚಿತ್ರಕಲಾ ಪ್ರವೇಶ
೩ ನೆಯ ಆವೃತ್ತಿ
ಅಚ್ಚಾಗಿ ಸಿದ್ಧವಾಗಿದೆ.
ಬೇಕಾಗಿರುವವರು
ಬೇಗನೆ ಬೇಡಿಕೆ ಕಳುಹಿರಿ!
ಬರೆದವರು:
ಶ್ರೀ. ಜಿ. ಎಸ್. ಹುದ್ದಾರ

ಆಹಾರದ ಕೊರತೆಯಿಂದ

ಕ್ಷೀಣವಾಗುತ್ತಿರುವ ಬಲವನ್ನು ವೃದ್ಧಿಗೊಳಿಸಲು

ಚವನಪ್ರಾಶವನ್ನು

ಸೇವಿಸಿರಿ. ಇದು ರಸರಕ್ತಾದಿ ಧಾತುಗಳನ್ನು ಪರಿಪುಷ್ಟ
ಗೊಳಿಸಿ ಶಕ್ತಿಯನ್ನು ಹೆಚ್ಚಿಸುವ ಪೌಷ್ಟಿಕವಾದ
ಔಷಧಿ ಆಹಾರವು

卐

ದಿ ನೂತನ
ಆಯುರ್ವೇದ ಕಾರ್ಯಾಲಯ ಲಿ.
ವಿ ಜಾ ಪು ರ .

ಸಂಶೋಧನೆ, ಸಂರಕ್ಷಣೆಗಳಿಗೆ ತಗಲುವಷ್ಟು ಹಣದ ವ್ಯವಸ್ಥೆಯನ್ನೂ ದೇವಕುಮಾರರು ಮಾಡಿದ್ದಾರೆ. ಆ ಹಣದಲ್ಲಿ ಒಬ್ಬ ವಿದ್ವಾಂಸನನ್ನೂ ಸಂಸ್ಥೆಯು ಸಂಬಳ ಕೊಟ್ಟು ಕೆಲಸಮಾಡಿಸಿಕೊಳ್ಳುವಷ್ಟು ಸಂಪನ್ನವಾಗಿದೆ. ಆದರಿಂದ ಸಂಸ್ಥೆಯ ಕಾರ್ಯ, ಶಿಸ್ತು, ವ್ಯವಸ್ಥೆ ಮೊದಲಾದುವುಗಳೆಲ್ಲ ಸ್ಪೃಹಣೀಯವಾಗಿವೆ.

ವಾಗ್ದೇವಿಯ ಭಾಂಡಾರದಲ್ಲಿ ಹೊಕ್ಕೆ. ಹೃದಯದಲ್ಲಿ ಆನಂದದ ತೆರೆಗಳೇಳತೊಡಗಿದುವು. ಬೆರಗಿನಿಂದ ಸುತ್ತಲೂ ನೋಡಿದೆ. ಒಂದು ಬದಿಗೆ ಪೀಠದಲ್ಲಿ ಕುಳಿತು, ನಗ್ನಮುನಿಗಳೊಬ್ಬರು, ಯಾವುದೋ ಓಲೆಗರಿಯ ಗ್ರಂಥವೊಂದನ್ನು ಓದುತ್ತಿದ್ದಾರೆ. ಹತ್ತಿರ ಹೋಗಿ—ವಂದಿಸಿದೆ. ಆಶೀರ್ವದಿಸಿ, ಕೂಡಲಿಕ್ಕೆ ಹೇಳಿದರು. ಸ್ವಲ್ಪ ಹೊತ್ತಿನ ಮೇಲೆ ಮುನಿಗಳು ನನ್ನೊಡನೆ ಮಾತಿಗೆ ಆರಂಭಿಸಿದರು. ನನ್ನನ್ನು ಕಂಡು ಅವರಿಗೆ ಹರ್ಷವಾದಂತಿತ್ತು.

"ಎಲ್ಲಿಂದ ಬಂದಿರಿ ನೀವು ? ನಿಮ್ಮ ಹೆಸರೇನು ?" ಬಿಹಾರದ ನಗರವೊಂದರಲ್ಲಿ, ಅಚ್ಚ ಕನ್ನಡದಲ್ಲಿ ನುಡಿಯುವ ಮುನಿಗಳ ಈ ಮಾತು ಕೇಳಿ, ನನಗೆ ಒಂದು ಕ್ಷಣ ಆಶ್ಚರ್ಯವೇ ಆಯಿತು. ಆದರೆ ಅವರು ಶ್ರೀವಿದ್ಯಾಸಾಗರ ಮುನಿಗಳೆಂದೂ, ಅವರ ಹುಟ್ಟು-ಬೆಳೆವಣಿಗೆಗಳೆಲ್ಲ ಕರ್ನಾಟಕ ಪ್ರಾಂತದಲ್ಲಿಯೇ ಆಗಿವೆಯೆಂದೂ ಹಿಂದಿನಿಂದ ತಿಳಿಯಿತು. ಅವರಿಂದಲೇ ನನಗೆ, ಆಗ ಆರಾ ಪಟ್ಟಣದಲ್ಲಿ 'ಶ್ರೀದೇಶಭೂಷಣ ಮಹಾಸ್ವಾಮಿಗಳ ಸಂಘ' ಇರುವುದೆಂದು ಗೊತ್ತಾಯಿತು. ಆ ಸಂಘದೊಳಗಿನ ಮುನಿಗಳಲ್ಲಿ ವಿದ್ಯಾಸಾಗರರೂ ಒಬ್ಬರಾಗಿದ್ದರು.

ಆಚಾರ್ಯ ಶ್ರೀ ೧೦೮ ದೇಶಭೂಷಣ ಮುನಿಗಳು ನನಗೆ ತುಂಬ ಪರಿಚಿತರು— ಸಾಹಿತ್ಯಪ್ರೇಮಿಗಳು. ಕನ್ನಡದ ಉಜ್ವಲ ಅಭಿಮಾನಿಗಳು. ಅಲ್ಲದೆ ನಾನು ಸಂಪಾದಿಸಿದ 'ಚಿನ್ಮಯ ಚಿಂತಾಮಣಿ'ಯನ್ನು ಈಗಾಗಲೇ ಮರಾಠಿಗೆ ಅನುವಾದಿಸಿ ಪ್ರಕಟಿಸಿದವರು. ಈ ಎಲ್ಲ ಸಂಬಂಧವನ್ನು ನೆನೆದು, ನನ್ನ ಮನಸ್ಸು ಅವರನ್ನು ಕಾಣಲು ಆತುರಗೊಂಡಿತು, ಹರ್ಷಗೊಂಡಿತು. ವಿದ್ಯಾಸಾಗರರಿಂದ ಅವರಿರುವ ಸ್ಥಳವನ್ನು ಕೇಳಿಕೊಂಡೆ.

ಆರಾ ಪಟ್ಟಣದಿಂದ ಎರಡು ಮೈಲಿನ ಮೇಲೆ ಧನುಪುರವೆಂಬ ಹಳ್ಳಿಯೊಂದಿದೆ. ಅದರ ನೆರೆಯಲ್ಲಿಯೇ 'ಧರ್ಮಕುಂಜ'ದಲ್ಲಿ 'ಜೈನಬಾಲಾ ವಿಶ್ರಾಮ'ವಿದೆ. ಆಶ್ರಮದಿಂದ ಆ ಹಳ್ಳಿಯು, ಆರಾ ಪಟ್ಟಣದ ಉಪನಗರವಾಗಿದೆ ಈಗ. ಅಲ್ಲಿಯೇ ಮುನಿಸಂಘ ಇರುವುದೆಂದು ತಿಳಿಯಿತು. ಮಹಿಲಾಶ್ರಮವನ್ನು ನಿರೀಕ್ಷಿಸುವುದೂ ನನ್ನ ಪ್ರವಾಸದ ಮುಖ್ಯ ಉದ್ದೇಶಗಳಲ್ಲಿ ಒಂದಾಗಿದ್ದಿತು. ಆದರಿಂದ ಕೂಡಲೆ ಅತ್ತ ತೆರಳಿದೆ.

ಇದೀಗ ಸಾಯಂಕಾಲವಾಗಲಿದ್ದಿತು. ಪಡುವಣ ದಿಕ್ಕಿನಲ್ಲಿ ರವಿಯು ಭೂದೇವಿಯ ಹಣೆಯ ಕುಂಕುಮದಂತೆ, ಕಂಗೊಳಿಸುತ್ತಿದ್ದನು. ಆವನ ಸ್ವರ್ಣವರ್ಣದಿಂದ ಸುತ್ತಲಿನ ಗಿಡ-ಮನೆಗಳೆಲ್ಲ ಮನೋಹರವಾಗಿ ಒಪ್ಪುತ್ತಿದ್ದುವು. ಈ ಹಕ್ಕಿಗಳ ಚಿಲಪಿಲಾಟವು ಮನಸ್ಸಿಗೆ ಅಮಂದಾನಂದವನ್ನುಂಟು ಮಾಡಿತ್ತು. ಆಗ ಗಿಡಗಳ ಗುಂಪಿನಲ್ಲಿ ಸುಂದರವಾಗಿದ್ದ 'ಬಾಲಾವಿಶ್ರಾಮ'ವು ಕಣ್ಣಿಗೆ ಬಿತ್ತು. ದೂರದಿಂದಲೇ ಕಾಣುವ ಆಶ್ರಮದ ಎತ್ತರವೂ ಭವ್ಯವೂ ಆದ ಆವಾರದ ಗೋಡೆಯು, ಸಂಸ್ಥೆಯ ಭದ್ರತೆಯನ್ನು ಪ್ರದರ್ಶಿಸುವಂತಿತ್ತು. ಅಲ್ಲದೆ ಒಂದು ಕೋಟೆಯ ಗೋಡೆಯ ಕಲ್ಪನೆಯನ್ನು ತರುವಂತಿದೆ. ಆದಕ್ಕೆ ಇರುವ ಪ್ರವೇಶದ್ವಾರವೂ ಒಂದೇ. ಆ ದ್ವಾರದ ಬಳಿ ಹೋದೊಡನೆಯೇ ಮೊದಲು ಹತ್ತುವುದೇ ಮಹಿಲಾರತ್ನ ಪಂಡಿತಾ ಚಂದಾಬಾಯಿಯವರ ನಿವಾಸಸ್ಥಾನವು. ಅವರೇ ಆಶ್ರಮದ ಸಂಸ್ಥಾಪಕರು, ಮುಖ್ಯ ವ್ಯವಸ್ಥಾಪಕರು. ಅವರ ಅಪ್ಪಣೆಯಿಲ್ಲದೆ ಆಶ್ರಮದಲ್ಲಿ ಯಾರಿಗೂ ಪ್ರವೇಶವಿಲ್ಲ. ಸಂಸ್ಥೆಯ ನಿಯಮಕ್ಕನುಸರಿಸಿ ನಾನೂ ಪಂ. ಚಂದಾಬಾಯಿಯವರನ್ನು ಮೊದಲು ಕಂಡು, ಒಳಗೆ ಮುನಿಗಳ ದರ್ಶನಕ್ಕೆ ತೆರಳಿದೆ.

ಇನ್ನೂ ಸೂರ್ಯಾಸ್ತವಾಗಿರಲಿಲ್ಲ. ಆಶ್ರಮದ ಅಂಗಳದಲ್ಲಿರುವ ಒಂದು ಮಾವಿನ ವೃಕ್ಷದ ಅಡಿಯಲ್ಲಿ ಕಲ್ಲಿನ ಆಸನವೊಂದರಲ್ಲಿ ಶ್ರೀದೇಶಭೂಷಣ ಮುನಿಗಳು ಕುಳಿತಿದ್ದರು. ಸಮೀಪದಲ್ಲಿಯೇ ಇನ್ನಿಬ್ಬರು ಸಾಧುಗಳು ಇದ್ದರು. ಅಲ್ಲದೆ ಮುನಿಗಳ ದರ್ಶನಕ್ಕೆಂದು ಬಂದ ಊರೊಳಗಿನ ಶ್ರೇಷ್ಠಿಗಳ ಬಳಗವೊಂದು ಅವರ ಎದುರಿಗೆ ನೆಲದ ಮೇಲೆ ಕುಳಿತಿದ್ದಿತು. ದೂರದಲ್ಲಿ ನಾನು

ಬರುವುದನ್ನು ಕಂಡು ಸ್ವಾಮಿಗಳ ಮುಖ ಅರಳಿತು. ಅದರಲ್ಲಿ ಆಶ್ಚರ್ಯವೂ ಮೂಡದೆ ಇರಲಿಲ್ಲ. ಅಕಸ್ಮಾತ್ ನಾನು ಹೀಗೆ ಬಂದುದಕ್ಕೆ ಬೆರಗುಗೊಂಡು ಕೇಳಿದರು:

"ಯಾವ ಕಡೆಯಿಂದ ಬರುವುದಾಯಿತು ಅಣ್ಣಾರಾವ್?"

"ಹೀಗೆಯೇ.... ಸಮ್ಮೇದಗಿರಿಯ ಯಾತ್ರೆಗೆ ಬಂದಿದ್ದೆ.... ಇತ್ತ ಬಂದೆ."

ನಮಸ್ಕಾರಮಾಡಿ, ಎದುರಿಗೆ ಕೂಡುತ್ತ ನುಡಿದೆ.

"ಈ ದಿನಗಳಲ್ಲಿ?"

"ಯಾತ್ರೆಗೆ ಯಾವ ದಿನವೇನು?"

"ಆಯಿತು; ಯಾರು ಯಾರು ಬಂದಿರುವಿರಿ?"

"ಜೊತೆಯಲ್ಲಿ ತಂದೆ-ತಾಯಿಗಳಿದ್ದಾರೆ."

"ಮೂರೇ ಜನರು!"

ಸುಮ್ಮನೆ ನಕ್ಕುಬಿಟ್ಟೆ. ಮುನಿಗಳೇ ಮತ್ತೆ ಕೇಳಿದರು.

"ಅವರೆಲ್ಲಿ?"

"ಧರ್ಮಶಾಲೆಯಲ್ಲಿದ್ದಾರೆ."

"ಇಲ್ಲೇಕೆ ಕರೆದುತರಲಿಲ್ಲ?"

"ನಾಳೆ ಕರೆದುಕೊಂಡುಬರುವೆ."

"ಬೇಡ; ಈಗಲೇ ಕರೆಯಿಸೋಣ."

ಎಂದವರೇ ಮುನಿಗಳು ಎದುರಿಗೆ ಕುಳಿತ ಶೇಡಜಿಗೆ ಹೇಳಿದರು, ತಮ್ಮ ಕಾರಿನಲ್ಲಿ ಹಿರಿಯರನ್ನು ಆಶ್ರಮಕ್ಕೆ ತಂದು ಮುಟ್ಟಿಸಲಿಕ್ಕೆ. ಅದರಂತೆ ಮರುಕ್ಷಣದಲ್ಲಿಯೇ ವ್ಯವಸ್ಥೆಯಾಯಿತು. ಆಶ್ರಮದ ಅತಿಥಿಭವನದಲ್ಲಿ ನಮ್ಮ ಬಿಡಾರ ಮಾಡಲಾಯಿತು.

"ಇನ್ನು ನಾಲ್ಕು ದಿನಗಳಲ್ಲಿ ನಮ್ಮ ಕೇಶಲುಂಛನವಿದೆ. ಅದಾದ ತರುವಾಯವೇ ನೀವು ಮುಂದೆ ಪ್ರಯಾಣಬೆಳೆಸತಕ್ಕದ್ದು" ಎಂದು ಸ್ವಾಮಿಗಳು ನುಡಿದು, ಸೂರ್ಯಾಸ್ತವಾದುದರಿಂದ ಮೌನಧಾರಣಮಾಡಿದರು, ತಮ್ಮ ನಿವಾಸಕ್ಕೆ ತೆರಳಿದರು.

ಸುತ್ತಲೂ ಒಮ್ಮೆ ಕಣ್ಣಾಡಿಸಿ ನೋಡಿದೆ. ಈಗಾಗಲೇ ಎಲ್ಲ ಕಡೆಗೂ ವಿದ್ಯುದ್ದೀಪಗಳು ಹೊತ್ತಿದ್ದುವು. ವಿಸ್ತಾರವಾದ ಒಂದು ತೋಟ. ಅದರಲ್ಲಿ ಮಾವು, ತೆಂಗು, ಅಡಿಕೆ ಮೊದಲಾದ ಮರಗಳು ಅಲ್ಲದೆ ಅನೇಕ ಹೂವಿನ ಗಿಡಗಳೂ ಬಳ್ಳಿಗಳೂ ತುಂಬಿದ್ದುವು. ನಡುವೆ ಅಲ್ಲಲ್ಲಿ ಸುಂದರವಾದ ಆಸನಗಳೂ ನೀರಿನ ನಲ್ಲಿಗಳೂ ಇದ್ದುವು. ಆ ತೋಟದ ಸುತ್ತಲೂ ಆಶ್ರಮವಾಸಿಗಳ ಭವನಗಳು. ಒಂದೆಡೆಗೆ ಅತಿಥಿಭವನ, ಅದರ ಮಗ್ಗುಲಲ್ಲಿಯೇ ಶಿಕ್ಷಿಕೆಯರ ಮನೆಗಳು ಇನ್ನೊಂದೆಡೆಗೆ ವಿದ್ಯಾರ್ಥಿನಿಯರ ವಸತಿಗೃಹ, ಊಟದ ಮನೆಗಳು. ಮತ್ತೊಂದು ಮಗ್ಗುಲು ವಿದ್ಯಾಲಯ, ಜಿನಮಂದಿರಗಳು. ಇವಲ್ಲದೆ ಹೂದೋಟದ ಒಂದು ಮೂಲೆಯಲ್ಲಿ ಕೃತ್ರಿಮ-ಪರ್ವತದ ಮೇಲೆ ನಿರ್ಮಿಸಿದ ಶ್ರೀಗೊಮ್ಮಟಜಿನನ ಮೂರ್ತಿ. ಹೀಗೆ ಆಶ್ರಮ ಸುಂದರವಾಗಿದ್ದಿತು, ಸ್ವಯಂಪೂರ್ಣವಾಗಿದ್ದಿತು.

ಈ ಆಶ್ರಮದಲ್ಲಿ ಈಗ ಸದ್ಯಕ್ಕೆ ನೂರಿಪ್ಪತ್ತರಷ್ಟು ಬಾಲಿಕೆಯರು ಓದುತ್ತಿದ್ದಾರೆ. ಅವರು ಭಾರತದ ವಿವಿಧ ಪ್ರಾಂತಗಳಿಂದ ಬಂದವರು. ಅವರ ಊಟ-ಉಡಿಗೆಗಳೆಲ್ಲ ಅಲ್ಲಿಯೇ ನಡೆಯುತ್ತವೆ. ಅವರಲ್ಲಿ ವಿಧವೆಯರೂ ಕುಮಾರಿಕೆಯರೂ ಇದ್ದಾರೆ. ಹಲವರು ಸಿರಿವಂತರ ಮನೆತನದಲ್ಲಿ ಹುಟ್ಟಿದವರೂ ಆಗಿದ್ದಾರೆ. ಇಲ್ಲಿ ಸಂಸ್ಕೃತ, ಹಿಂದಿ, ಇಂಗ್ಲೀಷು ಈ ಮೂರು ಭಾಷೆಗಳಲ್ಲಿ ಅಭ್ಯಾಸ ಸಾಗುತ್ತದೆ. ಉಚ್ಚತರಗತಿಯ ಧಾರ್ಮಿಕ ಶಿಕ್ಷಣ ದೊರೆಯುತ್ತದೆ. ಇಲ್ಲಿ ಓದಿದ ಹೆಣ್ಣುಮಕ್ಕಳು ಒಳ್ಳೆಯ ಗೃಹಿಣಿಯರೂ ಸಮಾಜಸೇವಿಕೆಯರೂ ಆಗುವರು. ಈ ಸಂಸ್ಥೆಯಿಂದ ಶಿಕ್ಷಣ ಹೊಂದಿದ ಅನೇಕ ಮಹಿಳೆಯರು, ಭಾರತದ ವಿವಿಧಭಾಗಗಳಲ್ಲಿ ಕನ್ಯಾಪಾಠಶಾಲೆಗಳನ್ನು ನಡೆಯಿಸುತ್ತಿದ್ದುದನ್ನು ನಾವು ಕಾಣಬಹುದು. ಇಲ್ಲಿ ಎಲ್ಲರ ಉಡಿಗೆ-ತೊಡಿಗೆಗಳು ಬಿಳಿಯ ಬಟ್ಟೆಯಲ್ಲಿ ನಿರ್ಮಿಸಲ್ಪಟ್ಟವು. ಯಾವಾಗಲೂ ಸ್ವಚ್ಛತೆ, ಅಚ್ಚುಕಟ್ಟುತನಗಳು ಎದ್ದುಕಾಣುತ್ತವೆ. ಹೆಣ್ಣುಮಕ್ಕಳು ತಮ್ಮ ಎಲ್ಲ ಕೆಲಸವನ್ನು ತಾವೇ ಮಾಡಿಕೊಳ್ಳಬೇಕಾಗುತ್ತದೆ. ಬಡ ವಿದ್ಯಾರ್ಥಿನಿಯರಿಗೆ ಊಟ ಪುಕ್ಕಟೆಯಾಗಿ ದೊರೆಯುತ್ತದೆ. ಸಿರಿವಂತರ ಮಕ್ಕಳು ತಮ್ಮ ವೆಚ್ಚವನ್ನು ಸಂಸ್ಥೆಗೆ ಸಲ್ಲಿಸಬೇಕಾಗುತ್ತದೆ. ತಿಂಗಳಿಗೆ

Calchemico's RENUKA TOILET POWDER

ರೇಣುಕಾ ಫೇಸ ಪೌಡರ

ಇದು ಕೋಮಲವಾದ ಸುಗಂಧಿತ (ಬೇವಿನ) ಪೌಡರ್. ಬೊರೇಟೆಡ್ ಟಾಲ್ಕಮ್, ಝಿಂಕ ಮತ್ತು ಮ್ಯಾಗ್ನಿಸಿಯಂ ಕಣಗಳನ್ನೊಳಗೊಂಡಿದೆ. ಇದರ ಕ್ರಮವಾದ ಉಪಯೋಗದಿಂದ ಶರೀರದ ದುರ್ವಾಸನೆ, ಉಷ್ಣವಲಯ ಪ್ರದೇಶಗಳ ಚುಚ್ಚುವ ಶಕೆ, ಇತರ ಚರ್ಮಸ್ಫೋಟನ ನಿವಾರಣೆಯಾಗುತ್ತದೆ.

CALCUTTA CHEMICAL

ಮುಂಬಯಿ ಆಫೀಸ:— ದೇವಕರಣ ಮ್ಯಾನ್‌ಶನ್, ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ.

ಮಲೇರಿಯಾ
ಇನ್‌ಫ್ಲುಯೆಂಜಾ
ಮತ್ತು
ಯಾವತ್ತೂ ಜ್ವರಗಳು

ಒಡನೆ ವಾಸಿ ಹೊಂದುತ್ತವೆ.

ಶ್ರೀಮಂತರ-ಬಡಬಗ್ಗರ-ಕೂಲಿಕಾರರ ಎಲ್ಲರ ಸಲುವಾಗಿ ಜ್ವರಗಳ ಮೇಲೆ ರಾಮಬಾಣ ಔಷಧ.

ಮಾದನ್ ಸನ್ಸ್ ಮತ್ತು ಕಂ. ಕೆಮಿಸ್ಟ್ಸ್,
ಮುಂಬಯಿ—೨.

೨೫ರಿಂದ ೩೦ ರೂಪಾಯಿಗಳಷ್ಟು ಪ್ರತಿಯೊಬ್ಬರಿಗೆ ವೆಚ್ಚ ಬರುತ್ತದೆ.

ಈ ಆಶ್ರಮವನ್ನು ಕ್ರಿ. ಶ. ೧೯೨೧ನೆಯ ವರ್ಷ ಭಾರತ ಮಹಿಳಾ ಭೂಷಣ ಶ್ರೀಮತಿ ಪಂಡಿತಾ ಚಂದಾಬಾಯಿಯವರು ಸ್ಥಾಪಿಸಿದರು, ಚಂದಾಬಾಯಿಯವರು ಬಾಲವಿಧವೆ. ವಿಧವೆಯರಿಗೆ ಮನೆತನದಲ್ಲಿಯೂ ಸಮಾಜದಲ್ಲಿಯೂ ಎಂಥ ಕಷ್ಟನಷ್ಟಗಳನ್ನು ಅನುಭವಿಸಬೇಕಾಗುತ್ತಿದೆ—ಎಂಬುದರ ಅನುಭವ ಅವರಿಗಿದ್ದಿತು. ಅದರಿಂದ ವಿಧವೆಯರಿಗಾಗಿ ಒಂದು ಸಂಸ್ಥೆ ಬೇಕೆಂದು, ತಮ್ಮ ತೋಟದಲ್ಲಿ ಈ 'ಬಾಲಾವಿಶ್ರಾಮ'ವನ್ನು ಕಟ್ಟಿಸಿದರು. ಅದೇ ಬೆಳೆದು ಇಂದು ಈ ಭವ್ಯಸಂಸ್ಥೆಯಾಗಿ ನಿಂತಿದೆ. ಇದಕ್ಕೆ ಸ್ವತಃ ಚಂದಾಬಾಯಿಯವರೇ ಇಲ್ಲಿಯ ವರೆಗೆ ಸುಮಾರು ಅರುವತ್ತು ಸಾವಿರ ರೂಪಾಯಿಗಳನ್ನು ವೆಚ್ಚ ಮಾಡಿದ್ದಾರೆ. ಹಣವನ್ನು ವೆಚ್ಚ ಮಾಡಿದ್ದಲ್ಲದೆ, ತಮ್ಮ ತನುಮನಗಳನ್ನೂ ಸವೆಯಿಸುತ್ತಿದ್ದಾರೆ. ಸ್ವತಃ ಅವರು ಸಂಸ್ಕೃತ ಪಂಡಿತರಾಗಿದ್ದು, ಒಳ್ಳೆಯ ಲೇಖಿಕೆಯರೂ ಆಗಿದ್ದಾರೆ ಇವರ ಸಂಪಾದಕತ್ವದಲ್ಲಿ ಹೊರಡುತ್ತಿರುವ 'ಮಹಿಲಾದರ್ಶ' ಎಂಬ ಹಿಂದೀ ಮಾಸಿಕವು ಉತ್ತಮ ಪತ್ರಿಕೆಗಳಲ್ಲಿ ಒಂದಾಗಿದೆ ಇವರಿಗೆ ಭಾರತ ಸರಕಾರದಲ್ಲಿಯೂ ಬಿಹಾರಪ್ರಾಂತದಲ್ಲಿಯೂ ತುಂಬ ಗೌರವದ ಸ್ಥಾನ-ಮಾನಗಳು ದೊರೆತಿವೆ. ಪಂಡಿತ ಜವಹರರ ಹತ್ತಿರ ಹಾಗೂ ಬಿಹಾರ ರತ್ನ ಶ್ರೀ. ಬಾಬು-ರಾಜೇಂದ್ರರ ಹತ್ತಿರ ಇವರ ಮಾತು ನಡೆಯುವಂತಿದೆ. ಭಾರತದಲ್ಲಿ ಕವೀಂದ್ರ ರವೀಂದ್ರರ ಶಾಂತಿನಿಕೇತನದ ತರುವಾಯ, ಈ ಬಾಲಾ-ವಿಶ್ರಾಮಕ್ಕೆ ಸಾಂಸ್ಕೃತಿಕದೃಷ್ಟಿಯಿಂದ ಬಹು ಮಹತ್ತ್ವದ ಸ್ಥಾನವಿದೆ.

ಈ ಆಶ್ರಮದಲ್ಲಿ ನಾಲ್ಕು ದಿನಗಳೆಂದರೆ ನಾಲ್ಕು ಗಳಿಗೆಗಳಂತೆ ಉರುಳಿದುವು ದಿನಾಲು ಮಧ್ಯಾಹ್ನದಲ್ಲಿ ಸ್ವಾಮಿಗಳು ನಯಸೇನನ ಧರ್ಮಾಮೃತವನ್ನು ಓದಿ, ಹಿಂದಿಯಲ್ಲಿ ಅರ್ಥ ವಿವರಿಸುತ್ತಿದ್ದರು. ನಿಜವಾಗಿಯೂ ಕನ್ನಡದ ಕೀರ್ತಿಧ್ವಜವನ್ನು ಬಿಹಾರದ ವರೆಗೆ ಒಯ್ದು ಹಾರಿಸಿದ ಶ್ರೇಯವು ಇಂಥ ಮುನಿಗಳಿಗೇನೇ ಸಲ್ಲುತ್ತಿದೆ. ಬಿಹಾರದಲ್ಲಿ ಜೈನಮುನಿಗಳಿಗೆ ತುಂಬ ಆದರ ಆತಿಥ್ಯಗಳು ಲಭಿಸುತ್ತಿವೆ. ಜೈನರಿಂದಷ್ಟೇ ಅಲ್ಲ; ಜೈನೇತರರಿಂದಲೂ ಕೂಡ. ಮುನಿಗಳ ಕೇಶಲುಂಚನ ಸಮಾರಂಭಕ್ಕೆ ನಾಲ್ಕೈದು ಸಾವಿರ ಜನ ಸೇರುತ್ತಾರೆ. ದಿನಾಲು ಅವರು ಬೋಧಿಸುವ ಉಪದೇಶಕ್ಕೆ ಸಾವಿರಾರು ಜನರು ಮೆಚ್ಚಿ ಕೂಡುತ್ತಾರೆ. ಇಸ್ಲಾಂ ಧರ್ಮದ ಸಿರಿವಂತರೊಬ್ಬರು, ಮುನಿಸಂಘಕ್ಕೆ ಇರಲೆಂದು ಮೋಟಾರೊಂದನ್ನು ಕಾಣಿಕೆಯಾಗಿ ಕೊಟ್ಟದ್ದೂ ಉಂಟು. ಅದರಲ್ಲಿ ಕುಳಿತೇ ನಾವು ರೇಲ್ವೆ ನಿಲ್ದಾಣಕ್ಕೆ ನುರಳಿದೆವು. ಮುಂದೆ ಬನಾರಸ ದಾರಿಯನ್ನು ಹಿಡಿದೆವು. ಆದರೂ ಕೂಡ ನಮ್ಮ ಮನಸ್ಸು ಆ ಪಂಡಿತಾ ಚಂದಾಬಾಯಿ, ಅವರ ಬಾಲಾವಿಶ್ರಾಮ, ಆ ದೇಶಭೂಷಣ ಮುನಿಗಳು ಈ ತ್ರಿಕೂಟಾಚಲದಲ್ಲಿಯೇ ವಿಹರಿಸುತ್ತಿದ್ದಿತು. ಆ ತ್ಯಾಗ, ಸೇವೆ, ತಪಸ್ಸುಗಳಿಂದ ನಮ್ಮ ಜೀವನಕ್ಕೇ ಒಂದು ಹೊಸ ಬೆಳಕು ಬಂದಂತಾಗಿದ್ದಿತು. ತೀರ್ಥಯಾತ್ರೆಯಿಂದ ಬರುವ ಪುಣ್ಯಫಲವೆಂಬುದು ಇದೇ ಅಲ್ಲವೆ ?

ಕಗ್ಗತ್ತಲಲ್ಲಿ ಮಿನುಗಿದ ಚಿಕ್ಕೆ

(ಒಂದು ಕತೆ)

ಶ್ರೀ. ವರಗಿರಿ ಮಾರ್ತಾಂಡರಾಯ, ಎಂ. ಎ., ಬಿ. ಟಿ. ಧಾರವಾಡ

★

ಮುತ್ತಿಗಾಗಿ ಒದಗಲಿದ್ದ ಕೊಲೆಯ ಕುತ್ತ, ನೀಲಮ್ಮನ ಮಾನವಹೃದಯದ ಮೂಲಕ ಎತ್ತಲೋ ಹೋಯಿತು. ಅವಳ ಮಾನವತೆಗೆ ಕಾಣಿಕೆಯಾಗಿ ಮುತ್ತುಗಳೂ ದೊರೆತುವು.

★

ಬೇಡರ ತಿಮ್ಮನ ತಮ್ಮ— ಕನ್ನ— ಎಮ್ಮೆಯನ್ನು ಮೇಯಿಸಿಕೊಂಡು ಮನೆಗೆ ಮರಳಿದಾಗ, ಆಗಲೇ ಸಂಜೆಯಾಗಿ ಮನೆಯಲ್ಲಿ ದೀಪ ಮಾಡಿತ್ತು. ತುಂಬ ಹಸಿದು ಬಂದಿದ್ದ. ನಡುಮನೆಯ ಮೂಲೆಯಲ್ಲಿ ಎಮ್ಮೆಯನ್ನು ಕಟ್ಟಿ, ಮುಂದೆ ಹಿಡಿ ಮೇವು ಒಗೆದು, ಕೈಕಾಲು ತೊಳೆಯಲು ಅಡುಗೆಯ ಮನೆಯಲ್ಲಿ ಕಾಲಿಟ್ಟ. ಅಡುಗೆಯ ಒಲೆಯಲ್ಲಿ ಒಂದು ಕಿಡಿಯೂ ಕಾಣಲಿಲ್ಲ. ಗೋಡೆಗೆ ಆನಿಸಿದ್ದ ರೊಟ್ಟಿಯ ಹಂಚು ಇದ್ದಲ್ಲಿಯೇ ಇದ್ದಿತು. ಕಿಡಿಕಿಡಿಯಾದ. ಅತ್ತ ಇತ್ತ ಕಣ್ಣು ಹೊರಳಿಸಿದಾಗ, ಮೂಲೆಯಲ್ಲಿ ನೀಲವ್ವ— ತಿಮ್ಮನ ಹೆಂಡತಿ— ಮಿಟ್ಟನೆ ಮಿಸುಕದೆ ಕುಳಿತಿದ್ದುದನ್ನು ಕಂಡ. ಕೋಪ ಇನ್ನೂ ಹೆಚ್ಚಿತು. ನೇರವಾಗಿ ನೀರಿನ ಮಡಕೆಯ ಬಳಿ ಹೋಗಿ ನೀರು ತೆಗೆದುಕೊಂಡು, ನಡುಮನೆಯಲ್ಲಿ ಥೇನಿಸುತ್ತ—ಚಿಲುಮೆಗೆ ಬೆಂಕಿ ಹೊತ್ತಿಸುತ್ತ— ಕುಳಿತಿದ್ದ ತಿಮ್ಮನ ಕಡೆಗೊಮ್ಮೆ ಮುಖ ಹೊರಳಿಸಿ ಹೊರಕ್ಕೆ ಹೋದ.

ತಾನು ಅಡವಿಗೆ ಹೋದಾಗ ಅಣ್ಣ-ಅತ್ತಿಗೆಯರ ನಡುವೆ ವಾಗ್ಯುದ್ಧವಾಗಿರಬಹುದೆಂದು ಅರಿಯಲು ಕನ್ನನಿಗೆ ಹೊತ್ತು ಹಿಡಿಯಲಿಲ್ಲ. ಗಂಡ-ಹೆಂಡಿರ ನಡುವಿನ ಗಲಭೆಯ ಕಾರಣದ ಸುಳಿವು ಅವನಿಗೆ ಮುಂಜಾನೆಯೇ ಆಗಿತ್ತು. ಆ ದಿನ ಆ ಊರಿಗೆ ಮುತ್ತುಗಾರ ಬಂದಿದ್ದ. ಊರ ಹೆಂಗುಸರಿಗೆಲ್ಲ ಅಂದು ಸಂಭ್ರಮ. ಕೆಲವರು ಮುತ್ತುಗಳನ್ನು ಕೊಂಡು ಸಂತುಷ್ಟರಾಗಿದ್ದರು; ಇನ್ನೂ ಕೆಲವರು ಮುತ್ತುಗಳನ್ನು ಹಾಗೇ ತೆಗೆ-ತೆಗೆಸಿ ನೋಡಿ, ತಮ್ಮ ಮನಸ್ಸಿನ ಹಂಬಲವನ್ನು ಕಡಿಮೆ ಮಾಡಿಕೊಂಡಿದ್ದರು. ತಮ್ಮ ಸರಿಕರೂ ನೆರೆಹೊರೆಯವರೂ ಹೆಮ್ಮೆಯಿಂದ ದುಡ್ಡು ಸೂರೆಮಾಡಿ ಮುತ್ತು ಕೊಂಡು, ಅಟ್ಟಹಾಸದಿಂದ ಮನೆಗೆ ಬರುತ್ತಿದ್ದುದನ್ನು ನೋಡಿ, ಅಸೂಯೆಯಿಂದರ್ಧ—ತಮ್ಮಲ್ಲಿ ಕೊಳ್ಳುವ ಸಾಮರ್ಥ್ಯವಿಲ್ಲವೆಂಬ ಅಸಹಾಯತೆಯಿಂದರ್ಧ, ನೊಂದುಕೊಂಡಿರುವ ಹೆಂಗುಸರಿಗೂ ಕಡಿಮೆಯಿರಲಿಲ್ಲ. ಕನ್ನನ ಅತ್ತಿಗೆ ಇಂಥ ಜನರಲ್ಲಿ ಒಬ್ಬಳು ಎಂಬುದು ಆತನಿಗೆ ಗೊತ್ತಿದ್ದಿತು. ಅತ್ತಿಗೆ ಆಗದಾಕೆಯೊಬ್ಬಳು, ಮುಂಜಾನೆ ತಾನು ಕೊಂಡ ಮುತ್ತುಗಳನ್ನು ಬೇಕೆಂತಲೇ ಅತ್ತಿಗೆಗೆ ತೋರಿಸಿ, ಅವಳ ಹೊಟ್ಟೆಯಲ್ಲಿ ಕಿಚ್ಚನ್ನು ಹೊತ್ತಿಸಿದುದೂ ತನಗೂ ಮುತ್ತುಗಳನ್ನು ಕೊಡಿಸಲು ಆಕೆ ಅಣ್ಣನಿಗೆ ದುಂಬಾಲು ಬಿದ್ದುದೂ ಕನ್ನನಿಗೆ ನೆನಪಿದ್ದಿತು. ಕಲಹ ಮುಂಜಾನೆಯೇ ಸುರುವಾಗಬೇಕಿತ್ತು. ಆದರೆ ತಿಮ್ಮ, ತಿಮ್ಮನ ಹೆಂಡತಿ—ಇಬ್ಬರೂ ಕನ್ನನಿಗೆ ಹೆದರುತ್ತಿದ್ದರಾದ್ದರಿಂದ, ಅವನು ಮನೆಯಲ್ಲಿದ್ದಾಗ, ಜಗಳ ಸೌಮ್ಯರೂಪದಲ್ಲಿಯೇ ಇದ್ದು, ಅವನು ಅಡವಿಗೆ ಹೋದಾಗ ವಿಕೋಪಕ್ಕೆ ಹೋಗಿರಬಹುದೆಂದೂ, ಈಗ ತಾನೇ ತಾತ್ಕಾಲಿಕವಾಗಿ— ತಮ್ಮಣೆಯಾಗಿರಬಹುದೆಂದೂ, ಈ ರಸಕಸಿಯ ಮೂಲಕವೇ ಅತ್ತಿಗೆ ಸಂಜೆಯ ಅಡುಗೆಯನ್ನು ಮಾಡದೇ ಕೋಪಿಸಿ ಕುಳಿತಿರಬೇಕೆಂದೂ, ಆತ ತರ್ಕಿಸಿದ.

ಅಣ್ಣ-ಅತ್ತಿಗೆಯರು ತನಗೆ ಹೆದರುತ್ತಿದ್ದುದರ ಕಾರಣ ಅವನಿಗೆ ಗೊತ್ತಿತ್ತು. ಅತ್ತಿಗೆಯ ತಿಳಿಗೇಡಿತನ, ಕಂಡುಕಂಡುದರ ಬಗೆಗೆ ಇರುವ ಅವಳ ಆಶೆ, ಮುಂತಾದುವುಗಳು ಅಣ್ಣನ ಹುಂಬತನವನ್ನು ಪ್ರಚೋದಿಸಿ, ಒಂದಲ್ಲ ಹತ್ತು ಸಲ ಗಂಡ-ಹೆಂಡಿರನ್ನು ಪೇಚಿನಲ್ಲಿ ಕೆಡಹಿದಾಗೆಲ್ಲ, ತಾನು ಮುಂದೆ ಬಂದು, ಕಂಡಕಂಡವರ ಕಾಲು ಹಿಡಿದುಕೊಂಡು, ಅವರನ್ನು ಸಂಕಟದಿಂದ ಮುಕ್ತಮಾಡಿದುದರ ಫಲವಾಗಿ, ಅವರಿಬ್ಬರೂ ತನ್ನ ನೈತಿಕಬಲದ ಮುಂದೆ ತಲೆಬಾಗಲೇಬೇಕಿದ್ದಿತೆಂಬುದನ್ನು ಅವನು ಕಂಡುಕೊಂಡಿದ್ದ. ಮೂರು ವರುಷಗಳ ಹಿಂದೆಯಂತೂ ಹೆಂಡತಿಯ ದುರಾಶೆಗೆ ಬಲಿಬಿದ್ದು, ದುಷ್ಟಸಂಗತಿಯ ವರ್ಚಸ್ಸಿಗೆ ಒಳಗಾಗಿ, ತಿಮ್ಮ ಕಳವಿನ ಅಪರಾಧದಲ್ಲಿ ಸಿಕ್ಕಿಕೊಂಡಿದ್ದ. ಮೂರು ವರುಷ ಸಶ್ರಮ ಶಿಕ್ಷೆಯನ್ನು ಅನುಭವಿಸಿ, ಆಗ ತಾನೇ ಮುಕ್ತನಾಗಿ ಬಂದಿದ್ದ. ಕನ್ನ ಅಣ್ಣನ ಸೆರೆವಾಸದ ದುರ್ದೆಸೆಗೆ ಹಳಹಳಿಪಟ್ಟಿದ್ದ; ಸಿಡಿಮಿಡಿಗೊಂಡಿದ್ದ. ಅಣ್ಣನ ಕಾರಾಗೃಹವಾಸದ ಅವಧಿಯಲ್ಲಿ, ಅತ್ತಿಗೆ ತನ್ನ ತವರು ಮನೆಯಲ್ಲಿ ಇರುತ್ತಿದ್ದಳಾದರೂ ಕನ್ನ ಕೂಲಿಯನ್ನು ಮಾಡಿ ಗಳಿಸಿ ಉಳಿಸಿದ ಹಣದಿಂದ—ವರುಷಕ್ಕೆ ಎರಡು ಸಲ—ಅತ್ತಿಗೆಗೆ ಸೀರೆಯನ್ನು ಕೊಂಡುಕೊಟ್ಟು ಬರುತ್ತಿದ್ದ. ಬಿಡುಗಡೆ ಹೊಂದಿ ಬಂದು ಒಂದು ತಿಂಗಳ ಮೇಲೆ ಆಗುತ್ತ ಬಂದಿತ್ತಾದರೂ, ಅಣ್ಣ-ಅತ್ತಿಗೆಯ

ಹೊಟ್ಟೆಯ ಭಾರ ಇನ್ನೂ ಕನ್ನನ ಮೇಲೆಯೇ ಬಿದ್ದಿದ್ದಿತು.

ಸಿಟ್ಟಿನ ಭರದಲ್ಲಿಯೇ ಕನ್ನ ಯಾಂತ್ರಿಕವಾಗಿ ಕೈಕಾಲು ತೊಳೆದು-ಕೊಂಡು, ಅಡುಗೆಯ ಮನೆಯಲ್ಲಿಯ ನೆಲುವಿನ ಗಡಿಗೆಯಲ್ಲಿ ಕೈಹಾಕಿ, ತಂಗಳು ರೊಟ್ಟಿಯನ್ನು ತೆಗೆದುಕೊಂಡ; ಮೊಸರು-ಕಾರಪುಡಿಯ ಸಾಧನೆಯೊಡನೆ ರೊಟ್ಟಿಯನ್ನು ತಿಂದು, ಎಮ್ಮೆ-ಯನ್ನು ಹಿಂಡಿಕೊಂಡು, ಒಲೆ ಹೊತ್ತಿಸಿ ಹಾಲುಕಾಯಲು ಇಟ್ಟ; ಒಂದು ತುಟಿ ಎರಡು ಮಾಡದೆ, ನಿತ್ಯಕ್ರಮದಂತೆ ಗರುಡಿಯ ಮನೆಗೆ ಹೋಗಿಬಿಟ್ಟ.

ಕನ್ನ ಹೊರ-ಹೊರಡುವುದೊಂದೇ ತಡ; ತಿಮ್ಮನ ಹೆಂಡತಿ ತಡೆಹಿಡಿದ ಕಣ್ಣೀರ ಸೆಲೆಯನ್ನು ಸಡಿಲು ಬಿಟ್ಟಳು. ಬಾಯಿಯೂ ಒಟಗುಟ್ಟಹತ್ತಿತು.

“ ನನ್ನ ಹಣೇಬಾರದಾಗ ಸುಕಾ ಅನ್ನೋದs ಇಲ್ಲ. ಮೂರು ವರಸಗಟ್ಲೆ ತಿವಕೊಂಡು ಬಂದೀಕಾನಿಗೆ ಹೋದಿ. ನನ್ ಹೊಟ್ಟೇಗತೀ ಏನು—ನನ್ ನೆತ್ತೀಗತೀ ಏನು? ಇದರ ಗ್ಯಾನ ಇತ್ತs ನಿನಗ?.... ಸರೀಕರು ಬೆಳ್ಳೀ ತೋಡೇವು ಮಾಡಿಸ್ಯಾರ, ಬಂಗಾ-ರದ ಟೀಕೀ ಮಾಡಿಸ್ಯಾರ! ನನ್ ಜೋಕ್ಯಾಗ ಕಾಸುಅಡೇದ ನಾಕು ಮುತ್ತಿನ ಬೆಂಡ್ವಾಲಿ ಸೈತಾ ಇರಾಕಿಲ್ಲ?....ನಮ್ ಕೊಂಪಿ-ಗೇನು ಮುತ್ತಗಾರ್ರು ವರಸ-ವರಸಾ ಬಂದಾರs ಒರ್ತಾರs?.... ವಿನಾಸೀ ಹೊತ್ತೀದಿ. ಮನಿಉದ್ದಾ ಬೆಳದೀದಿ. ನಿನ್ ಮಕಕ್ಕ ನಾಕು ಮಾರಾ ದುಡ್ಡು ಹುಟ್ಟಲಿಲ್ಲ?....ಅಯ್ಯ ನನ್ ಬಾಳೇವs!”

ಎಂದು ಆಕೆ ಹಣೆ ಹಣೆ ಗಟ್ಟಿಸಿಕೊಂಡಳು.

ತಿಮ್ಮ ಮಾತ್ರ ಪಿಳಿಪಿಳಿ ಕಣ್ಣುಬಿಡುತ್ತ ಸುಮ್ಮನೆ ಕುಳಿತು ಬಿಟ್ಟಿದ್ದ. ಮಾಡುವನೇನು? ಬರಿಗೈಯ ಜೋರ. ಕಳ್ಳನೆಂದು ಮುದ್ರೆ ಒತ್ತಿಸಿಕೊಂಡವನಿಗೆ ಸಾಲವಾದರೂ ಹುಟ್ಟುವುದೆಂತು?

ಇಷ್ಟರಲ್ಲಿ ಅರೆದೆರೆದ ಮುಂಬಾಗಿಲಲ್ಲಿ “ ಯಾರು ಇದ್ದೀರಮ್ಮಾ ಮಳ್ಯಾಕ? ” ಎಂದು ಕೂಗಿದ ದನಿ ಕೇಳಿಸಿತು.

– ೨ –

ತಿಮ್ಮ ಕುಳಿತಲ್ಲಿಯೇ ಕುಳಿತು, ‘ ಯಾರವರು? ’ ಎಂದು ಗರ್ಜಿಸುವ ಸಮಯದಲ್ಲಿ, ನೀಲವ್ವ ಹೊರಗೆ ಬಂದು, ‘ ಯಾರು ಬೇಕಾಗಿತ್ತಪ್ಪ? ’ ಎನ್ನುತ್ತ ಬಾಗಿಲ ಕಡೆಗೆ ದಿಟ್ಟಿಸಿದಳು; ಬಾಗಿ-ಲಿನ ಹೊರಗೆ ಒಬ್ಬ ವ್ಯಕ್ತಿ ನಿಂತುದನ್ನು ಕಂಡಳು.

ಆತನ ಮೈಮೇಲೆ ಒಂದು ಶರ್ಟ್, ಮೊಣಕಾಲವರೆಗಿದ್ದ ಅರ್ಧ ಚೊಣ್ಣ, ಎಡದ ಹೆಗಲ ಮೇಲೆ ಮಡಿಚಿ ಹಾಕಿಕೊಂಡಿದ್ದ ಗೊಂಗಡಿಯೊಂದು ಅದರ ಮೇಲೆ ಹಸಿಬೆಯೊಂದು ಜೋತು ಬಿದ್ದಿದ್ದುವು. ಬಲಗೈಯಲ್ಲಿ ಒಂದು ಕೋಲು; ತಲೆಯ ಮೇಲೆ ಸಂಜಾಪಿನ ಬುಚುಡ.

ಆತನನ್ನು ನೋಡಿದೊಡನೆ ಆತ ಮುತ್ತುಮಾರುವವ ಎಂದು ತಿಳಿಯಲು ಆಯಾಸವಾಗಲಿಲ್ಲ.

“ ಕೊಂಚ ಮಲಗೋಕೆ ಸ್ಥಳ ಕೊಡತೀರೇನಮ್ಮಾ? ನಾನು ಮುತ್ತುಗಾರ. ಇಲ್ಲೇ ದೇವಸ್ಥಾನದಲ್ಲಿ ತಂಗಿಕೊಂಡಿದ್ದೆ. ಅಮಾ-ವಾಸ್ಯೆಯ ಕಾವಳ. ದೇವಸ್ಥಾನದಲ್ಲಿ ಒಬ್ಬನೇ ಆಗತೀನೆ ಅಂತ ಬಂದೆ! ” ಎಂದನಾತ.

“ ಬಾ, ಯಣ್ಣ ಮಲಗಿಕೋ. ಬೇಕಾದಷ್ಟು ಜಾಗೇವು ಐತಿ ” ಎನ್ನುತ್ತ ನೀಲವ್ವ ಒಪ್ಪಿಗೆಯ ನಿರೀಕ್ಷಣೆಯಲ್ಲಿ ಗಂಡನ ಕಡೆ-ಗೊಮ್ಮೆ ನೋಡಿದಳು. ಮುತ್ತುಗಾರನ ಬಗ್ಗೆ ಆಕೆಗೆ ಇಂದು ಎಂದೂ ಇಲ್ಲದ ಆದರ, ಕುತೂಹಲ. ಆವಳ ಬಾಡಿದ ಮುಖದ ಮೇಲೆ ಈಗ ಆನಂದದ ನಗೆಯ ಮಿದುವಾದ ತರಂಗವೊಂದು ಮೂಡಿ ಮಾಯವಾಯಿತು.

“ ಕುಂತುಗೋ, ಯಜಮಾನಾ! ಅಲ್ಲಿ ಕುಂತುಗೋ! ” ಎಂದು ತಿಮ್ಮ ಒಪ್ಪಿಗೆಯನ್ನಿತ್ತ. ನೀಲಮ್ಮ ನಾಗೊಂದಿಗೆಯ ಮೇಲೆ ಸುರುಳಿ ಸುತ್ತಿ ಇಟ್ಟಿದ್ದ ಚಾಪೆಯೊಂದನ್ನು ಕೆಳಗೆ ಉರುಳಿಸಿದಳು.

ಮುತ್ತುಗಾರನು ಆಕಸ್ಮಿಕವಾಗಿ ತನ್ನ ಮನೆಗೆ ಬಂದುದು ನೀಲವ್ವನ ಹೃದಯದಲ್ಲಿ—ನಿರಾಶೆಯಿಂದ ಬತ್ತತೊಡಗಿದ—ಮುತ್ತಿನ ಹಂಬಲದ ಬುಗ್ಗೆಯನ್ನು ಮತ್ತೆ ನೀರೊಡೆಸಿತು. ಆಕೆ ಅಡುಗೆಯ ಮನೆಯಲ್ಲಿಯ ಚಿಮಣಿಯನ್ನು ಕೈಯಲ್ಲಿ ಹಿಡಿದು-ಕೊಂಡು ಅಡುಗೆಯ ಮನೆಯ ಹೊಸತಿಲ ಮೇಲೆ ಕುಳಿತು, ಆತುರತೆಯಿಂದ ಕೇಳಿದಳು:

“ ಯಣ್ಣಾ, ಚೆಲೋ ಮುತ್ತು ಅದಾವೋ, ತೀರೀದಾವೋ? ”

“ ಅದಾವಮ್ಮಾ, ಬೇಕಾದಷ್ಟು ಅದಾವು! ಹಳ್ಳಿಗಳಲ್ಲಿ ಕೊಳ್ಳೋರು ಎಷ್ಟು ಜನ? ”

“ ನನಗ ಒಂದು ಎಂಟು ಮುತ್ತು ಬೇಕಾಗಿದಾವು. ಉದ್ರೀ ಕೊಟ್ಟು ಹೋಗತೀಯಾ? ಸುಗ್ಗೀ ತಲಿಮ್ಯಾಗ ರೊಕ್ಕಾ ಮುಟ್ಟಸ ತೇನಿ ” ಎಂದಳು ನೀಲಮ್ಮ ಅನುಮಾನಿಸುತ್ತ.

ಆತಿಥ್ಯದ ದಾಕ್ಷಿಣ್ಯಕ್ಕೆ ಒಳಗಾದ ಆ ಮುತ್ತುಗಾರ, ಅನು-ಮಾನಿಸುತ್ತಲೇ ಉತ್ತರವಿತ್ತ: “ ಉದ್ರೀ ಕೊಡೋಕೆ ಏನೂ ಪರವಾ ಇಲ್ಲಮ್ಮಾ! ಆದ್ರೆ ಈವಾಗ ಕೊಡೋಕೆ ಬರುವಂತಿಲ್ಲ. ನಮ್ಮ ಊರಿಗೆ ವಾಪ್ಸು ಹೋದ ತಕ್ಷಣ, ರೋಖು ಹಣಾನ್ನೂ ಶಿಲ್ಕು ಉಳಿದ ಮಾಲನ್ನೂ ಸಾಪ್ಕಾರರಿಗೆ ವಾಪಸು ಮಾಡಬೇಕು.”

ತಿಮ್ಮ ಬಾಯಿಬಿಟ್ಟ: “ ಕೊಟ್ಟು ಹೋಗೋ ಯಜಮಾನಾ! ರೊಕ್ಕೇನು ಓಡಿ-ಗೀಡಿ ಹೋಗತಾವೇನು? ಉದ್ರೀ ಕೊಡದಿದ್ರ ವ್ಯವಹಾರ ಹ್ಯಾಂಗ ನಡೀತೈತಿ? ಜನಾ ಏನು ಕೈಯಾಗ ಗಂಟು ಕಟಿಗೊಂಡs ಕುಂತಿರತಾರೇನು? ಮುಂದಿನ ಸರತಿ ಬಂದಾಗ ಜಣಾಜಣಾ ರೊಕ್ಕಾ ಎಣಿಸಿಕೊಂಡು ಹೋಗ್ವಂತೀ. ನೀಚ ಮಂದಿ ಸುಮಾಕs ನನ್‌ಮ್ಯಾಗ ಕಳವು ಹೊರಸಿ ಬಂದೀಕಾನ್ಯಾಗ ಕೂಡಿ ಸಿದ್ರು. ಇಲ್ಲದಿದ್ರೇನು? ನಾನೂ ಬೆವರು ಸುರಿಯೋತಂಕಾ ದುಡಿಯೋವಾ. ನಿನ್ನ ರೊಕ್ಕಾ ನಾಕು ದಿನದಾಗ ಗಳಿಸೋ ಸಗತಿ ಐತಿ ನಂಗ! ”

“ ಬೇಡ ಕಣ್ರೀ ! ಸುಮ್ಮಕೇ ನಂಗೆ ತೊಂದ್ರೆ ಕೊಡಬೇಡಿ. ನಾನೂ ಬಡವ. ಬಂಡವಾಳ ಇಲ್ಲ; ನಾನೇ ಸಾವುಕಾರನಿಗೆ ‘ ಅಪ್ಪಾ, ಅಣ್ಣಾ ’ ಅಂದು ಹೊಟ್ಟೀ ತುಂಬಿಕೊಳ್ಳೋವ.” ಎಂದು, ಮುತ್ತುಗಾರ ಕಿಸೆಯೊಳಗಿನಿಂದ ಎರಡು ಬೀಡಿಗಳನ್ನು ತೆಗೆದು, ಒಂದನ್ನು ತಿಮ್ಮನಿಗೆ ಕೊಟ್ಟ; ಇನ್ನೊಂದನ್ನು ತಾನು ಹೊತ್ತಿಸಿದ.

ನೀಲಮ್ಮನ ಆಶೆ ಮತ್ತೆ ಕಮರಿತು. ಆದರೂ, ಆಕೆಯ ಕುತೂಹಲ ಕುಂದಲಿಲ್ಲ.

“ ಯೆಣ್ಣಾ, ತಗದಾರ ತಗೀ ನೋಡೋಣ, ಹ್ಯಾಂಗ ಅದಾವ್ರೋ ಮುತ್ತು ! ” ಎಂದು ಆಕೆ ಚಿಮಣಿಯ ಬುಡ್ಡಿಯೊಡನೆ ಅವನ ಮುಂದೆ ಬಂದು ಕುಳಿತಳು.

ಮುತ್ತುಗಾರನಿಗೆ ರಾತ್ರಿಯಲ್ಲಿ ಮುತ್ತುಗಳ ಪೆಟ್ಟಿಗೆಯನ್ನು ತೆರೆಯುವ ಮನಸ್ಸು ಇರಲಿಲ್ಲ. ಆತ ವಿನಯದಿಂದಲೇ ಎಂದ:

“ ಈಗ ಬೇಡ ಕಣ್ರೀ. ಮುಂಜಾನೆ ಕುಂತುಗೊಳ್ಳೋಣ; ನೋಡುವಂತ್ರಿ. ಚಿಲಚಿಲೋ ಮುತ್ತು ಅದಾವೆ. ರಾತ್ರೀ ಸಮಯ. ಸುಮ್ಮಗೀ ಯಾರು ತೊಂದ್ರೆ ತಗೋಬೇಕು ? ಮೇಲಾಗಿ, ದೀಪದ ಬೆಳಕಿನಲ್ಲಿ ಮುತ್ತಿನ ಕಿಮ್ಮತ್ತು ಗೊತ್ತು ಆಗೋಲ್ಲಾ ! ” ಎನ್ನುತ್ತಲೇ ಆತ ಮಾತು ಮುಗಿಸಿ, ಗೋಡೆಗೆ ಇಟ್ಟ ಹಸುಬೆಗೆ ಒರಗಿ ಚಾಪೆಯ ಮೇಲೆ ಕಾಲು ಚಾಚಿದ.

ತಿಮ್ಮನಾಗಲಿ, ನೀಲವ್ವನಾಗಲಿ, ಹೆಚ್ಚಿಗೆ ಮಾತನಾಡಲಿಲ್ಲ.

ಇಡಿಯ ದಿನದ ಔದಾಸೀನ್ಯ ಈಗ ಸ್ವಲ್ಪ ಕಡಿಮೆಯಾಗಿದ್ದಿ-ತಾದ್ದರಿಂದ, ನೀಲವ್ವ ಅಡುಗೆಯ ಮನೆಗೆ ಹೋಗಿ, ಗಂಗಾಳ ತೊಳೆದು, ಗಂಡನಿಗೆ ಕೈಕಾಲು ತೊಳೆಯಲು ನೀರು ತಂದಿಟ್ಟಳು. ಮುಂಜಾನೆಯ ತಂಗುಳನ್ನೇ ಗಂಡ-ಹೆಂಡಿರು ಉಂಡರು ; ಎಲೆ-ಯಡಿಕೆ ಹಾಕಿಕೊಂಡರು. ತಿಮ್ಮ ಮತ್ತೊಮ್ಮೆ ಚಿಲಿಮೆಯನ್ನು ಹೊತ್ತಿಸಿದ. ಎಮ್ಮೆಗೆ ಮೇವು ಹಾಕಿದ. ನೀಲಮ್ಮ ಕೆಲಸ ಮುಗಿಸಿ ಹಾಲಿಗೆ ಹೆಪ್ಪು ಹಾಕಿ. ಅಡುಗೆಯ ಮನೆಯಲ್ಲಿ ಗಂಡನಿಗೆ ಹಾಸಿಗೆ ಹಾಕಿದಳು. ಒಳಗಿನಿಂದ ಒಂದು ಗೊಂಗಡಿಯನ್ನು ತಂದು ಮುತ್ತುಗಾರನ ಮುಂದೆ ಒಗೆದು :

“ ಹೊತಗುಣ್ಣಾಕ ತಗೋ ಯೆಣ್ಣಾ ಈ ಗೊಂಗಡೀನಾ.” ಎಂದಳು “ ಬೇಡಾ ತೊಗೊಳ್ಳವ್ವಾ. ನಂಗೆ ಹೊದಿಕೆ ಐತಿ.” ಎಂದ ಮುತ್ತುಗಾರ.

“ ಇರಲಿ ಬಿಡೋ ನಮ್ಮಪ್ಪಾ ! ಬೆಳಗು ತಂಡಿ ಮುಂಜಾನೆ ಬೀಳತೈತಿ. ಗದಗುಟ್ಟಿ ನಡಿಗಿ ಹೋದೀ. ” ಎಂದು ಆಕೆ ಒಳಗೆ ಹೋದಳು. ಆ ಮುತ್ತುಗಾರ ನಿರ್ವಾಹವಿಲ್ಲದೆ, ಆ ಕಂಬಳಿಯನ್ನು ತೆಗೆದು ಹತ್ತಿರ ಇಟ್ಟುಕೊಂಡ.

ತಿಮ್ಮ ಕುಳಿತಲ್ಲಿಯೇ ಕುಳಿತಿದ್ದ. ಚಿಲಿಮೆಯ ತಂಬಾಕು ಮುಗಿಯಿತು. ಚಿಲಿಮೆಯ ಬಾಯಿಯನ್ನು ನೆಲಕ್ಕೆ ಅಪ್ಪಳಿಸಿ, ಒಳಗಿನ ಗುಂಡು ತೆಗೆದು, ಚಿಲಿಮೆಯ ತುದಿಗೆ ಬಾಯಿ ಇರಿಸಿ ಊದಿ, ಅದನ್ನು ಸ್ವಚ್ಛ ಮಾಡಿದ. ಅವನ ತಂಬಾಕಿನ ತಲಬು ಇನ್ನೂ ತಣಿದಿರಲಿಲ್ಲ. ಮತ್ತೊಮ್ಮೆ ತಂಬಾಕನ್ನು ತುಂಬಿ ಮನದಣಿಯೆ ಸೇದಿದ. ಚಟಕ್ಕನೇ ಮೇಲೆದ್ದು, ಒರಗಿ-ಕೊಂಡಿದ್ದ ಮುತ್ತುಗಾರನ ಕಡೆಗೆ ಹೊರಳಿ :

“ ಹೊರ‍್ಯಾಕ ಹೋಗಿಬಂದ ಮ್ಯಾಕ, ಅಗಳೀ ಏನೂ ಹಾಕ ಬ್ಯಾಡ. ನನ್ ತಮ್ಮಗಳ್ದೀ ಮನೀಗೆ ಹೋಗ್ಯಾನ. ಅವ ಏನು ಅಲ್ಲೇ ಮಕ್ಕೋತಾನೋ ತಿರುಗಿ ಬರತಾನೋ ಹೇಳಾಕ ಬರೋದಿಲ್ಲ ! ” ಎಂದು ಅಡುಗೆಯ ಮನೆಯ ಕಡೆಗೆ ಹೊರಟ. ಹೊಸತಿಲ ಬಳಿ ನಿಂತು ಮುತ್ತುಗಾರನ ತಲೆಯ ಬಳಿ ಇದ್ದ ಹಸಿಬೆಯನ್ನೊಮ್ಮೆ ಹುಳು ಹುಳು ನೋಡಿದ.

ಮುತ್ತುಗಾರನ ಎದೆ ಝಲ್ಲೆಂದಿತು. ಅಡುಗೆಯ ಮನೆಯ ಬಾಗಿಲೂ ಇಕ್ಕಿತು.

೪

ತಿಮ್ಮ ಮಲಗಲು ಒಳಗೆ ಹೋಗಿ ಬಾಗಿಲು ಹಾಕಿಕೊಂಡಾಗ ರಾತ್ರಿ ಹನ್ನೊಂದು ಗಂಟೆ ಮೀರಿರಬಹುದು. ಮೂಲೆಯಲ್ಲಿಯ ಎಮ್ಮೆ ದಂಟು ಕಡಿಯುವ ಸಪ್ಪಳವೊಂದನ್ನುಳಿದರೆ, ಎಲ್ಲವೂ ಶಾಂತ. ಆದರೆ ಆ ಶಾಂತತೆ ಮುತ್ತುಗಾರನ ಹೃದಯದಲ್ಲಿ ಭೀತಿಯ ತಳಮಳವನ್ನು ಉಕ್ಕಿಸಹತ್ತಿತು. ತನಗೆ ಅಪರಿಚಿತವಾದ ಪರಸ್ಥಳ; ಅದರಲ್ಲಿಯೂ ಹಾಳುಕೊಂಪೆ ; ತಾನೋ ಒಬ್ಬನೇ ಒಬ್ಬ. ಅಮಾವಾಸ್ಯೆಯ ರಾತ್ರಿ ಬೇರೆ. ಈ ಬಗೆಯ ಪರಿಸ್ಥಿತಿ ಯಾವಾಗಲೂ ಸಂಚಾರ ಮಾಡುತ್ತಲಿದ್ದ ಆ ಮುತ್ತುಗಾರನಿಗೆ ತೀರ ಹೊಸತೇನೂ ಅಲ್ಲ. ಆದರೆ ಆ ದಿನ ಅವನು ಒಂದು ವೈಶಿಷ್ಟ್ಯವನ್ನು ಕಂಡ. ಬೆಲೆಯುಳ್ಳ ಮುತ್ತುಗಳನ್ನಿಟ್ಟುಕೊಂಡು ಊರ ಹೊರಗಿನ ಗುಡಿಯಲ್ಲಿ ಒಬ್ಬನೇ ಮಲಗಿಕೊಳ್ಳುವುದು ಸ್ವಲ್ಪ

ಶಾಂತಿಸೇವಾ ಸದನದ ಸುಂದರ ಪ್ರಕಟನೆ

ವಿಜಯಶ್ರೀ

ಮಿರ್ಜಿ ಅಣ್ಣಾರಾಯರ

ಉತ್ಕೃಷ್ಟ ಸಣ್ಣಕತೆಗಳ ಸಂಗ್ರಹ.

ಬೆಲೆ: ಒಂದು ರೂಪಾಯಿ.

ಇದೀಗ ಪ್ರಕಟವಾಗಿದೆ.

ದೊರೆಯುವ ಸ್ಥಳ :

ಶ್ರೀ. ಮಿರ್ಜಿ ಅಣ್ಣಾರಾಯರು,

ಪೊ. ಉಗಾರ ಬುದ್ರುಕ

ಬೆಳಗಾಂವ

ಘಾತುಕವಾದುದೆಂದು ಬೆದರಿ ಆತ ತಿಮ್ಮನ ಮನೆಯ ಆಶ್ರಯವನ್ನೇನೋ ಕೋರಿದ. ಹೊಸತಿಲಲ್ಲಿ ಕಾಲಿಟ್ಟಾಗ ಸುರಕ್ಷಣೆಯ ಸಮಾಧಾನವನ್ನೂ ಹೊಂದಿದ್ದ.

ಆದರೆ ತನ್ನ ಮುತ್ತು ಆ ಗಂಡ-ಹೆಂಡಿರ ಸಂಭಾಷಣೆಯ ಸಮಯದಲ್ಲಿ, ತಿಮ್ಮ ಕಳವಿನ ಅಪರಾಧದ ಶಿಕ್ಷೆಗೆ ಗುರಿಯಾದವನೆಂಬುದು ಅವನ ಮಾತಿನಿಂದಲೇ ಹೊರಬಿದ್ದಾಗ, ಆ ಮುತ್ತುಗಾರನಲ್ಲಿ ಸಂಶಯ ಒಡಮೂಡಿದ್ದಿತು. ಮೊದಲೇ ಅವನಲ್ಲಿ ಮನೆ ಮಾಡಿಕೊಂಡಿದ್ದ ಭಯ ಮತ್ತೆ ಚೇತರಿಸಿಕೊಂಡು ಎದ್ದಿತು. ಆಗಿನಿಂದ ತಿಮ್ಮನನ್ನು ಸೂಕ್ಷ್ಮವಾಗಿ ಸಂಶಯದೃಷ್ಟಿಯಿಂದಲೇ ನಿರೀಕ್ಷಿಸುತ್ತಲಿದ್ದ. ಆತನ ನೀಳವಾದ ನಿಲುವು, ತೊಲೆಯ ತುಂಡಿನಂಥ ಹುರಿಕಟ್ಟಾದ ಕೈಕಾಲುಗಳು, ಬೆಳೆದು ನಿಂತ ಗಡ್ಡ-ಮೀಸೆಗಳು, ಎದೆಯ ಮೇಲಿನ ಕೂದಲುಗಳು, ಅವನ ತಾಮಸವೃತ್ತಿ—ಎಲ್ಲವೂ, ಕ್ರೌರ್ಯವೇ ಮೈದಾಳಿ ಬಂದಿರುವುದೇನೋ ಎನ್ನುವಂತೆ ಇದ್ದುವು. ಮಲಗಲು ಹೋಗುವ ಮುನ್ನ ಅವನು ತನ್ನ ಮುತ್ತಿನ ಹಸಿಬೆಯ ಮೇಲೆ ಎಸೆದ ನೋಟವಂತೂ ಅವನ ಹೃದಯವನ್ನು ನೇರವಾಗಿ ಪ್ರವೇಶಿಸಿ, ಆತನ ಧೈರ್ಯ-ಸ್ಥೈರ್ಯಗಳ ನೆತ್ತಿಯನ್ನು ಕುಕ್ಕಿದ್ದಿತು; ಸ್ವಾಸ್ಥ್ಯವನ್ನು ಸೆಳೆದುಕೊಂಡಿದ್ದಿತು.

ಆತ ಮಲಗಿದ್ದಾದ. ಮಧ್ಯರಾತ್ರಿ ಸಮೀಪಿಸಿದಂತೆ ಭೀತಿ ತೀಕ್ಷ್ಣವಾಗಹತ್ತಿತು. ತಾಯಿಯ ಬಳಿ ನಿಶ್ಚಿಂತೆಯಿಂದ ಮಲಗಿಕೊಂಡಿದ್ದ ಎಮ್ಮೆಯ ಕರುವೂ ಮಾಡಿನಲ್ಲಿ ಶಾಂತವಾಗಿ ಮಿನುಗುತಲಿದ್ದ ದೀಪವೂ ಅವನಲ್ಲಿ ಅಸೂಯೆಯನ್ನು ಹುಟ್ಟಿಸಿದುವು.

ಅಡಿಗೆಯ ಮನೆಯಲ್ಲಿ ಮಿದುವಾಗಿ ಮಾತನಾಡುವ ಧ್ವನಿ ಕೇಳಿಸಿತು ಆತ ಕೊಡಹಿಕೊಂಡು ಮೇಲೆದ್ದ. ಒಂದು ಕ್ಷಣ ಅಚಲನಾಗಿ ನಿಂತುಬಿಟ್ಟ. ಅವರು ಒಳಗೆ ಏನು ಮಾತಾಡುತ್ತಿರುವರೋ ಎಂಬುದನ್ನು ಕೇಳಲು ಹೊರಟ; ಆತನ ಸೌಜನ್ಯ 'ಗಂಡ-ಹೆಂಡಿರು ಏಕಾಂತದಲ್ಲಿ ನಡೆಸಿದ ಸಂಭಾಷಣೆಯನ್ನು ಆಲಿಸುವುದು ಅನೀತಿಯಲ್ಲವೇ?' ಎಂದು ಅವನನ್ನು ಒಂದುಕ್ಷಣ ತಡೆಯಿತು. ಆದರೂ ಅವನ ಸಂಶಯ ಭೀತಿಗಳು ಅವನನ್ನು ಮುಂದೆ ದೂಡಿದುವು. ಮೆಲ್ಲಗೆ ಅಡುಗೆಯ ಮನೆಯ ಬಾಗಿಲಕಡೆಗೆ ಹೋದ. ಬಾಗಿಲ ಬಿರುಕಿಗೆ ಕಿವಿಯನ್ನಿರಿಸಿ ನಿಂತುಕೊಂಡ.

ಒಳಗಿನ ಮಿದುವಾದ ಅಸ್ಪಷ್ಟವಾದ ಸಂವಾದ ಅವನ ಕಿವಿಯಲ್ಲಿ ಪ್ರವೇಶಿಸಿದಂತೆ, ಅದರ ಪರಿಣಾಮವಾಗಿ ಅವನ ಹೃದಯದಲ್ಲಿ ನಾನಾಬಗೆಯ ಭಾವ ಪಲ್ಲಟವಾದಂತೆ, ಅವನ ಮುಖಚರ್ಯೆಯಲ್ಲಿಯೂ ಹೆಚ್ಚು ಕಡಿಮೆಯಾಗುತ್ತಿದ್ದುದನ್ನು ಮಾಡಿನಲ್ಲಿಯ ದೀವಿಗೆಯ ಮಂದಪ್ರಕಾಶದಲ್ಲಿ ಸಹ ಯಾರಾದರೂ ಸ್ಪಷ್ಟವಾಗಿ ಕಾಣುವಂತಿತ್ತು. ಅವನು ಒಳಗಿನ ಮಾತುಗಳನ್ನು ಆಲಿಸಿದಂತೆ, ಅವನ ದೇಹ ಅಡಿಯಿಂದ ಮುಡಿಯವರೆಗೆ ಕಂಪಿಸಿತು. ಅಸಾಹಾಯ್ಯತೆಯು ನೀರಾಗಿ ಕಣ್ಣಲ್ಲಿ ಒಸರಿತು.

ಮುತ್ತುಗಾರ ಬಾಗಿಲಿನಿಂದ ಹಿಂದಕ್ಕೆ ಸರಿದು ಬಂದ; ಲಗುಬಗೆಯಿಂದ ತನ್ನ ಗೊಂಗಡಿ-ಹಸಿಬೆಗಳನ್ನು ಹೆಗಲ ಮೇಲೆ ಹಾಕಿಕೊಂಡು, ಮೂಲೆಯಲ್ಲಿಯ ಕೈಗೋಲನ್ನು ತೆಗೆದುಕೊಂಡು, ತಲಬಾಗಿಲನ್ನು ಮೆಲ್ಲನೆ ತೆರೆದು ಹೊರಗೆ ನಿಟ್ಟಿಸಿದ.

ಎಲ್ಲೆಲ್ಲಿಯೂ ಗಾಢವಾದ ಅಂಧಕಾರ. ಅವನು ಮೇಲೆ ದಿಟ್ಟಿಸಿದ. ನೂರಾರು ಸಾವಿರಾರು ನಕ್ಷತ್ರಗಳಲ್ಲಿ ಒಂದೂ ಅವನ ಜೊತೆಗೆ ಇರಲಿಲ್ಲ. ಅವನ ಸತ್ತ್ವದ ಪರೀಕ್ಷೆಗಾಗಿ ಎಲ್ಲವೂ ಹೊಂಚು ಹಾಕಿಕೊಂಡು, ಮೋಡಗಳ ಹಿಂದೆ ಹುದುಗಿಕೊಂಡು ಕುಳಿತಂತಿದ್ದುವು. ಹಗಲು ಆಶ್ರಯ ಕೊಟ್ಟ ಹಾಳುಗುಡಿ ದೂರದಲ್ಲಿ ಅಸ್ಪಷ್ಟವಾಗಿ ಸುಳಿವುದೋರುತ್ತಲಿತ್ತು. ಅಲ್ಲಿ ಮೊಣಕಾಲುಮಟ ಬಿದ್ದ ಹೊಲಸು, ಕಣ್ಣುಕಪ್ಪಟಿಗಳ ಹಾವಳಿ, ಹುಡಿಯ ವೈಶಾಲ್ಯ, ಹುಳುಹುಪ್ಪಡಿಗಳು, ಹಾವು-ಚೇಳುಗಳು, ನಿರಾತಂಕವಾಗಿ ತಾಂಡವನೃತ್ಯ ಮಾಡುತ್ತಿರಬಹುದೆಂಬ ಕಲ್ಪನೆ— ಇವೆಲ್ಲ ಅವನನ್ನು ಮುಂದೆ ಹೆಜ್ಜೆ ಇಡಗೊಡದಾದುವು. ಆದರೂ ತನ್ನಲ್ಲಿಯ ಧೈರ್ಯವನ್ನೆಲ್ಲ ಒಂದುಗೂಡಿಸಿ ಒಂದಡಿಯನ್ನು ಹೊಸತಿಲಿನಾಚೆ ಇಟ್ಟ. ಗುಡಿಯ ದಿಶೆಯಲ್ಲಿ ಆದರಿಂದಾಚೆ ಯಾರೋ ಕೂಗಿದಂತೆ ಕೇಳಿಸಿತು. ಮುಂದಿಟ್ಟ ಅಡಿ ಮತ್ತೆ ಹಿಂದೆಗೆಯಿತು. ಆ ಧ್ವನಿ ನರಿಯ ಕೂಗು ಎಂದು ಆತನಿಗೆ ತತ್‌ಕ್ಷಣ ಹೊಳೆಯಿತಾದರೂ, ಅವನ ಅಧೈರ್ಯ ಇಮ್ಮಡಿಸಿತು. ಗುಡಿಯ ಹಿಂಬದಿಯಲ್ಲಿ ಹಳ್ಳವಿದ್ದುದು ನೆನಪಿಗೆ ಬಂತು. ಹಳ್ಳದ ದಂಡೆಗುಂಟ ನಿಬಿಡವಾದ ಈಚಲ ಮರಗಳಿದ್ದುದನ್ನು ಆತನು ಕಣ್ಣಾರೆ ಕಂಡಿದ್ದ. ಎತ್ತ ನೋಡಿದತ್ತ ಕಂಟಿಗಳು ಬೆಳೆದಿದ್ದುದೂ ಅವನ ಕಣ್ಣಮುಂದೆ ಕಟ್ಟಿದಂತಿತ್ತು. ಅವನ ಕಲ್ಪನೆಗೆ ಪ್ರತಿಯೊಂದು ಕಂಟಿಯ ಹಿಂದೂ ತಿಮ್ಮನಂಥವರು ಅವಿತುಕೊಂಡು ಕುಳಿತಂತೆ ಭಾಸವಾಯಿತು. ಆತ ಮುಂಗಾಣದಾದ.

ಅಷ್ಟರಲ್ಲಿ, ಆಗಸದಲ್ಲಿ ಮೋಡಗಳ ಸಂದಿಯೊಂದರಲ್ಲಿ ಒಂದು ಚಿಕ್ಕೆ ಮಿನುಗಿತು. ಆ ಚಿಕ್ಕೆಯ ಪ್ರತಿಬಿಂಬವೋ ಏನೋ ಎನ್ನುವಂತೆ ಅವನ ತಲೆಯಲ್ಲಿ ಒಂದು ಹಂಚಿಕೆ ಮಿಂಚಿತು.

೪

ಆತ ಮುಖವನ್ನು ಹಿಂದೆ ತಿರುಹಿದ. ಎಮ್ಮೆಯನ್ನು ಕಟ್ಟಿದ ಮೂಲೆಯಿಂದಾಚೆ, ದೂರದಲ್ಲಿ ಗೋಡೆಗೆ ಹೊಂದಿ ಎತ್ತರವಾದ ಉದ್ದವಾದ ಗೋದಲೆಯೊಂದಿತ್ತು. ಅದರ ತುಂಬ ಹೊಟ್ಟು ತುಂಬಿತ್ತು. ಮುತ್ತುಗಾರ ಮೆಲ್ಲಗೆ ಅತ್ತ ಸಾಗಿದ. ಸದ್ದಾಗದಂತೆ ಹೊಟ್ಟನ್ನು ಬದಿಗೆ ಮಾಡಿ, ಒಳಗೆ ಹುದುಗಿಕೊಂಡು ಮಲಗಿದ! ಆ ಭೀಕರ ಪ್ರಸಂಗದಲ್ಲಿ ತನ್ನ ಅಸಾಹಾಯ್ಯತೆ ಅದೆಂತಹ ವಿಚಿತ್ರವಾದ ಆಶ್ರಯ ಬಯಸಿತಲ್ಲ— ಎಂದು ಅಂದುಕೊಂಡನಾತ. ಆತನ ಅದುರಿದ ಹೃದಯ ಸ್ವಲ್ಪ ಸಮಾಧಾನವನ್ನು ತಾಳಿತು; ಬೆಳಗಿನ ದಾರಿಯನ್ನು ಕಾಯಹತ್ತಿತು.

ಹತ್ತು ನಿಮಿಷ ಸಂದುವು. ಮುಂಬಾಗಿಲು ತೆರೆದಂತಾಯಿತು. ಒಮ್ಮಿಂದೊಮ್ಮೆ ಒಳಗೆ ನುಗ್ಗಿದ ತಂಪುಗಾಳಿ, ಬಾಗಿಲು ತೆರೆದುದನ್ನು

ಅವನಿಗೆ ಮನವರಿಕೆ ಮಾಡಿಕೊಟ್ಟಿತು. ಗಾಳಿಯೇ ಬಾಗಿಲು ತೆರೆಯಿತೇನೋ ಎಂದು ಅವನು ತರ್ಕಿಸುವಷ್ಟರಲ್ಲಿ, ಬಾಗಿಲು ಮುಚ್ಚಿದ ಸಪ್ಪಳವೂ ಆಯಿತು. ಮುತ್ತುಗಾರ ಮತ್ತೆ ಬೆಚ್ಚಿದ. ಮಲಗಿದಲ್ಲಿಯೇ ಸ್ವಲ್ಪ ಓರೆಯಾಗಿ ಕತ್ತಲಲ್ಲಿಯೇ ಕತ್ತನ್ನೆತ್ತಿ, ಬಾಗಿಲ ಕಡೆ ನೋಡಿದ. ಎದೆ ಬಡಿಯುತ್ತಿತ್ತು. ಯಾವನೋ ಬಾಗಿಲ ಅಗಳಿಯನ್ನು ಹಾಕುತ್ತಿದ್ದುದನ್ನು ಕಂಡ. ಮರುಕ್ಷಣವೇ ಆತನಿಗೆ ನೆನಪಾಯಿತು— ತಿಮ್ಮನ ತಮ್ಮ ಗರುಡಿಯ ಮನೆಗೆ ಹೋಗಿರುವುದಾಗಿ ತಿಮ್ಮ ಹೇಳಿದ ಮಾತು. ಅವನೇ ಈತ— ಎಂದು ಆತ ಎಂದುಕೊಂಡ.

ಕನ್ನ ಬಾಗಿಲ ಅಗಳಿಯನ್ನು ಭದ್ರವಾಗಿ ಹಾಕಿಕೊಂಡು, ಆಗಲೇ ಹಾಸಿಯೇ ಇದ್ದ ಚಾಪೆಯ ಕಡೆಗೆ ಹೋದ. ಚಾಪೆಯ ತುದಿಗೆ ಗೊಂಗಡಿ ಇದ್ದುದನ್ನು ಕಂಡ. ತನ್ನ ಅತ್ತಿಗೆ ತನಗಾಗಿಯೇ ಹಾಸಿ ಹೊದ್ದಿಕೆಯನ್ನು ಅಣಿಮಾಡಿ ಇಟ್ಟಿರುವುದಾಗಿ ತರ್ಕಿಸಿದ. ಆಕೆಗೆ ಈ ಬುದ್ಧಿ ಹೊಳೆದಿದೆಯೆಂದ ಮೇಲೆ, ಗಂಡ-ಹೆಂಡಿರ ಜಗಳ ಮುಕ್ತಾಯವಾಗಿರಬೇಕೆಂದೂ, ಮನೆಯಲ್ಲಿ ಮತ್ತೆ ಶಾಂತತೆ ನೆಲೆಸಿರಬೇಕೆಂದೂ ಸಮಾಧಾನ ಹೊಂದಿದ. ನಿದ್ರೆ ಬಂದಿತ್ತು. ದಣಿವೂ ಆಗಿತ್ತು. ಆತ ಗೊಂಗಡಿಯನ್ನು ತುಂಬ ಹೊದ್ದುಕೊಂಡುದೊಂದೇ ತಡ; ಗೊರಕೆಯೇ ಸುರುವಾಯಿತು.

ಮುತ್ತುಗಾರನಿಗೆ ಮಾತ್ರ ನಿದ್ರೆ ಬರಲಿಲ್ಲ. ಆ ಮನೆಯಿಂದ ಸುರಕ್ಷಿತನಾಗಿ ಪಾರಾಗಿ ಹೋಗುವ ವಿಚಾರದಲ್ಲಿಯೇ ಅವನ ಮನ ತೊಳಲುತ್ತಿದ್ದಿತು. ನಡುನಡುವೆ ಕನ್ನನ ವೈವಿಧ್ಯಪೂರ್ಣವಾದ ಗೊರಕೆಯ ಏರಿಳಿತದ ಕಡೆಗೂ ಅವನ ಚಿತ್ತ ಓಡುತ್ತಲಿತ್ತು. ಅಷ್ಟೊಂದು ವಸ್ತುವನ್ನು ಇಟ್ಟುಕೊಂಡು ಏಕಾಕಿಯಾಗಿ ಸಂಚರಿಸುವುದು ಅದೆಷ್ಟು ಘಾತುಕವಾದುದು ಎಂದು ಅವನು ಚಿಂತಿಸುತ್ತಿದ್ದಂತೆಯೇ ಅಡುಗೆಯ ಮನೆಯ ಬಾಗಿಲು ತೆರೆಯಿತು.

ನೀಲವ್ವ ಮೆಲ್ಲಗೆ ಬಾಗಿಲಲ್ಲಿ ಇಣುಕಿ ನೋಡಿದಳು. ಚಾಪೆಯ ಕಡೆಗೆ ದಿಟ್ಟಿಸಿ, ಮೆಲ್ಲಗೆ "ಮುತ್ತಗಾರಣ್ಣಾ !" ಎಂದಳು.

ಮುಸುಕು ಹಾಕಿದ ಗೊಂಗಡಿ ಮಿಸುಗಲಿಲ್ಲ.

ನೀಲವ್ವ ಒಳಗೆ ಗಂಡನ ಕಡೆಗೆ ಮೋರೆದಿರುಹಿ ಮಿದುವಾಗಿಯೇ ಅಂದಳು: "ಮುತ್ತಗಾರ ಮಲಗ್ಯಾನ; ಗಡದ್ದು ನಿದ್ದಿ ಹತ್ತೇತಿ."

ಆಕೆ ನಿಂತಲ್ಲಿಯೇ ನಿಂತು ಬಾಗಿಲನ್ನು ಪೂರ್ಣ ತೆರೆದಳು.

ತಿಮ್ಮ ಹೊರಗೆ ಬಂದ. ನೀಲಮ್ಮನ ಕೈಯಲ್ಲಿಯ ಚಿಮಣಿಯನ್ನು ಇಸಿದುಕೊಂಡು ಮೆಲ್ಲಗೆ ಚಾಪೆಯ ಕಡೆಗೆ ಹೋದ. ಮಲಗಿದ ವ್ಯಕ್ತಿಯ ತಲೆಯ ಕಡೆಗೆ ನೋಡಿದ. ಮುತ್ತಿನ ಹಸುಬೆ ಅಲ್ಲಿ ಇರಲಿಲ್ಲ. ಒಂದು ಕ್ಷಣ ಥೇನಿಸಿದ.

ಬಾಗಿಲಲ್ಲಿಯೇ ನಿಂತಿದ್ದ ನೀಲವ್ವ "ಹಸಬೀನ ಗೊಂಗಡೀ ಒಳ್ಯಾಕ ಇಟಗೊಂಡು ಮಲಗ್ಯಾನ ಕಾಣತ್ತೇತಿ." ಎಂದಳು.

ತಿಮ್ಮ ಇನ್ನೂ ಹತ್ತಿರ ಹೋದ. ಗೊಂಗಡಿಯನ್ನು ತೆಗೆಯುವ ಹವಣಿಕೆಯಲ್ಲಿಯೇ ಒಂದು ಕ್ಷಣ ಸುಮ್ಮನೆ ಕುಳಿತ.

ಎಲ್ಲೆಲ್ಲಿಯೂ ನಿಶ್ಶಬ್ದ. ನೀಲವ್ವ ನಡುಗುತ್ತಿದ್ದಳು. ಗೋದಲೆಯಲ್ಲಿ ಅವಿತುಕೊಂಡಿದ್ದ ಮುತ್ತುಗಾರ, ಆ ವಿಚಿತ್ರ ಚಿತ್ರವನ್ನು ವಿಸ್ಮಯಚಿತ್ತನಾಗಿ ನೋಡುತ್ತಲಿದ್ದ; ಆ ಸನ್ನಿವೇಶ ಮುಂದೆ ಯಾವ ರೂಪವನ್ನು ತಾಳುವುದೆಂಬುದನ್ನು ಕುತೂಹಲದಿಂದ ನಿರೀಕ್ಷಿಸುತ್ತಲಿದ್ದ.

"ಕುಂತೆಲ್ಲಿ ಸುಮಕ" ಎಂದಳು ನೀಲವ್ವ.

ತಿಮ್ಮ ಮಾತನಾಡಲಿಲ್ಲ. ಅದೇಕೋ ಗೊಂಗಡಿಯನ್ನು ತೆಗೆಯುವ ಧೈರ್ಯವೂ ಆಗಲಿಲ್ಲ. ಮತ್ತೆ ಒಂದು ಕ್ಷಣ ಥೇನಿಸಿದ. ಮುಖದ ಮೇಲೆ ಯಾವುದೋ ಒಂದು ದೃಢನಿಶ್ಚಯದ ಮುದ್ರೆ ಒಡೆದು ಕಾಣುತ್ತಿತ್ತು. ಅದರಲ್ಲಿ ಕ್ರೌರ್ಯದ ಛಿಂತೆಯೂ ಇತ್ತು.

ಆತ ಮೇಲೆ ಎದ್ದ. ಕಣ್ಣನ್ನು ನಾಲ್ಕೂ ದಿಟ್ಟಿನಲ್ಲಿ ಹೊರಳಿಸಿ, ಏನನ್ನೋ ಹುಡುಕಿದ. ಅವನ ಕಣ್ಣು ಗೋದಲೆಯ ಕಡೆಗೆ ತಿರುಗಿದಾಗ, ಮುತ್ತುಗಾರನ ಜೀವ ಹಾರಿಹೋದಂತಾಯಿತು. ತಿಮ್ಮ ಗೋದಲೆಯ ವರೆಗೆ ಹೋಗಿ, ಮೂಲೆಯಲ್ಲಿಯ ಜೋಳದ ಚೀಲದ ಸಂದಿಯಲ್ಲಿ ಕೈ ಹಾಕಿದ. ಅಲ್ಲಿ ಏನೂ ಇರಲಿಲ್ಲ.

"ಏನು ಹುಡುಕತೀ ?" ಎಂದಳು ನೀಲವ್ವ.

"ನೀ ಸುಮ್ಮಕಿರು." ಎಂದ ತಿಮ್ಮ.

ಆತ ಮತ್ತೆ ಅಡುಗೆಯ ಮನೆಯಲ್ಲಿ ಹೋದ. ಮರುಕ್ಷಣವೇ ತಿರುಗಿ ಹೊರಗೆ ಬಂದಾಗ, ನೀಲಮ್ಮ ಆತನ ಬಗಲಲ್ಲಿ ಕಂದಲಿಯನ್ನು ಕಂಡಳು. ಆಕೆ ಬೆಚ್ಚಿದಳು; ನಡುಗಿದಳು; ಬೆದರುಗಣ್ಣಿನಿಂದ ಗಂಡನನ್ನು ನೋಡಿ,

"ಅದನ್ಯಾಕ ತಂದಿ ?" ಎಂದಳು.

"ನೀ ಸುಮ್ಮಕ ಇರಬಾರದs ?" ಎಂದು ಆತ ಆಕೆಯನ್ನು ಮಿದುವುದನಿಯಲ್ಲಿಯೇ ಗದ್ದರಿಸಿಕೊಂಡು, ಮಲಗಿದ ವ್ಯಕ್ತಿಯ ಕಡೆಗೆ ಹೋದ.

೫೫ ವರ್ಷಗಳಿಂದ ಅನುಭವಪಟ್ಟ
ಕರ್ಕೀ ಮತ್ತು ಕಂಪನಿಯು
ಜ್ವರಗಡ್ಡೆಯ ಗುಳಿಗೆಗಳು
ಬಾಟ್ಲಿಗೆ ೧-೮-೦
ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.
ವಿಳಾಸ :—
ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ
ಗಿರಗಾಂವ, ಮುಂಬಯಿ. ೪

ಆನಂದ ಗ್ರಂಥಮಾಲಾ, ಹುಬ್ಬಳ್ಳಿ

ಸಂಪಾದಕ ಶ್ರೀ. ಪ. ವೆಂಕೋಬಾಚಾರ್ಯ, ಬಿ.ಎ ಬಿ.ಟಿ.

ಒಂದು ವರುಷದಲ್ಲಿ ಸುಂದರ ನಾಲ್ಕು ಪುಸ್ತಕಗಳು

ವಾರ್ಷಿಕ ಚಂದಾ :

ವಾಚನಾಲಯ, ಶಾಲೆ ಕಾಲೇಜುಗಳಿಗೆ ೭-೮-೦ ಸಾಮಾನ್ಯ ೫ ೮-೦

ಇದೀಗ ಪ್ರಕಟವಾಗಿದೆ:

" ಕಾಂತಂ ಮತ್ತು ಶರವ್ಯಾತ್ರಿಗಳು "

ದಸಮಂಡು. ಪೃಂದಾವ ಕಾವೇರಿ :

ಸಾದಾ ಪ್ರತಿ ೧-೭-೦ ಉತ್ತಮ ಪ್ರತಿ ೨-೦-೦

ಪ್ರಾಹಕರಿಗೆ ವಿಶೇಷ ಸವಲತ್ತುಗಳು.

ಗವರ್ನಗಲ್ಲಿ, ವ್ಯವಸ್ಥಾಪಕರು

ಹುಬ್ಬಳ್ಳಿ **ಆನಂದ ಗ್ರಂಥಮಾಲಾ.**

ತಿಮ್ಮನ ಮನಸ್ಸಿನಲ್ಲಿದ್ದುದು ನೀಲವ್ವನಿಗೆ ಹೊಳೆಯಿತು. ಆ ಭೀಕರತೆ ಆವಳ ಅಂಗಾಂಗವನ್ನು ಆವರಿಸಿತು. ಆಕೆಗೆ ತಡೆಯಲು ಆಗಲಿಲ್ಲ.

ಆಕೆ ಗಟ್ಟಿಯಾಗಿಯೆ ಎಂದಳು; "ಬ್ಯಾಡ, ಅಂತಾ ಕೆಲಸಾ ಮಾತ್ರ ಮಾಡಬ್ಯಾಡ. ನನ್ ಬಾಳೀವೂ ಮಣ್ಣು ಮುಕ್ಕಿಹೋದೀತು. ನನಗ ಮುತ್ತು ಬೇಕಾಗಿಲ್ಲ. ಸುಮ್ಮಕಽ ಹಿಂದಕ ಬಾ. "

ಆತ ಕೇಳಲಿಲ್ಲ; ಚಾಪೆಯ ಕಡೆಗೆ ಮುಂದೆ ಸಾಗಿದ. ಆಕೆಯ ಭಯದ ಎಲ್ಲೆ ಮೀರಿತು. "ಏ, ಮು ತ ಗಾ ರ ಯ ಜ್ಜಾ, ಮ್ಯಾಕೇಳು ! " ಎಂದು ಚೀರಿಕೊಂಡಳು. ಅದೇ ಸಮಯದಲ್ಲಿ, ಎದೆಯೊಡೆದು ನೀರಾಗಿದ್ದ ಮು ತ್ತು ಗಾ ರ, ತಾಳ್ಮೆ ಮೀರಿ "ಹೇ ! ಹೇ ! ಏನು ನಡಿಸೀದೀಯ ? " ಎಂದೆಂದು ಗೋದಲಿಯಿಂದ ಹೊರಗೆ ಬಂದ.

ಈ ಗಲಭೆ ಕನ್ನನನ್ನು ಎಬ್ಬಿಸಿತು

ಒಂದೆಡೆಗೆ ಕೈಯ್ಯಲ್ಲಿ ಕಂದಲಿಯನ್ನು ಹಿಡಿದ ತಿಮ್ಮ; ಅವನ ಹಿಂದೆ ಗಾಬರಿಯಾಗಿ ನಿಂತ ನೀಲವ್ವ; ಇನ್ನೊಂದೆಡೆಗೆ ಆಕಸ್ಮಿಕವಾಗಿ ನಿಂತುಕೊಂಡಿದ್ದ ಮುತ್ತುಗಾರ—ಈ ಚಿತ್ರ ಕನ್ನನನ್ನು ವಿಸ್ಮಯಗೊಳಿಸಿತು. ಇದೇನು ಕನಸೋ ಎಂದುಕೊಂಡ ಒಂದು ಕ್ಷಣ.

ಅತ್ತ ಗೋದಲೆಯಿಂದ ಹೊರಗೆ ಬಂದ ಮುತ್ತುಗಾರ; ಇತ್ತ ಗಾಬರಿಯಾಗಿ ಗೊಂಗಡಿಯೊಳಗಿಂದ ಎದ್ದು ಕುಳಿತ ಕನ್ನ—ಈ ಚಿತ್ರ ತಿಮ್ಮ-ನೀಲವ್ವರನ್ನು: ಅಚ್ಚರಿಗೊಳಿಸಿತು.

ತಿಮ್ಮ ಗಾಬರಿಯಾಗಿ ಕೆಳಕ್ಕೆ ಕುಸಿದ; ತಲೆ ಕೆಳಗೆ ಹಾಕಿದ; ತನ್ನಲ್ಲಿಯ ದುಷ್ಟಚೇತನೆಯು ಬೆನ್ನುಹತ್ತಿ ತಮ್ಮನ ತಲೆಯನ್ನೇ ತೆಗೆದುಕೊಳ್ಳುತ್ತಿದ್ದೆನಲ್ಲ— ಎಂದು ಅಳುಕಿದ; ತಳಮಳಿಸಿದ; ತಮ್ಮನ ಕಾಲುಗಳನ್ನು ಗಟ್ಟಿಯಾಗಿ ಹಿಡಿದುಕೊಂಡ. ಮೈಯೆಲ್ಲ ಬೆವರಿ ನೀರೊಡೆಯಿತು— ಪಶ್ಚಾತ್ತಾಪದಿಂದ ಕರಿಯ ಕಲ್ಲೂ ಕಣ್ಣೀರಿಟ್ಟಂತೆ.

ಕೋಪಾತಿರೇಕದಿಂದ ತೊಳಲುತ್ತಿದ್ದ ಕನ್ನನಿಗೆ ಆ ಮುತ್ತುಗಾರ, ಅಂದಿನ ಆ ವಿಸ್ಮಯಕಾರಕ ಸನ್ನಿವೇಶದ ಹಿನ್ನೆಲೆಯನ್ನೆಲ್ಲ ಸಾದ್ಯಂತವಾಗಿ ವಿವರಿಸುತ್ತಿದ್ದಾಗಲೇ ನಸುಕಾಯಿತು. ಹೊರಹೊರಡಲು ಉದ್ಯುಕ್ತನಾದ ಆತನು ಎಂಟು ಒಳ್ಳೆಯ ಮುತ್ತುಗಳನ್ನು ಜುಲುಮೆಯಿಂದ ನೀಲವ್ವನ ಕೈಯಲ್ಲಿಟ್ಟು, " ತೆಗೆದುಕೊಳ್ಳವ್ವಾ ಇವೇನೋ ಕಾಸರಿಯದ ಮುತ್ತು. ಆದರೆ ಇವುಗಳ ಆಶೆ ದುರಂತವಾಗಿ ಕೊನೆಗೊಳ್ಳಲಿಲ್ಲ. ಇಷ್ಟೇ ಆನಂದ ! " ಎಂದ.

* * * *

ಮುತ್ತುಗಾರ ಹಳ್ಳವನ್ನು ದಾಟಿ ಬಂಡೆಯನ್ನು ಏರುತ್ತಲಿದ್ದ. ಆಗ ಅವನಿಗೆ ಹಿಂದಿನಿಂದ " ಮುತ್ತುಗಾರಣ್ಣಾ ! " ಎಂಬ ಕೂಗು ಕೇಳಿಸಿತು. ಹಿಂದೆ ತಿರುಗಿದ. ಹಳ್ಳದ ಆಚೆಯ ದಂಡೆಯಲ್ಲಿ ತಿಮ್ಮ ಓಡಿಓಡಿ ಬರುತ್ತಿದ್ದ. ಮುತ್ತುಗಾರ " ಯಾಕಯ್ಯಾ, ಏನು ಕೆಲಸ ? " ಎಂದ.

" ಈ ಉಡುದಾರ ತಗೋ " ಎಂದು ತಿಮ್ಮ ಬೆಳ್ಳಿಯ ಉಡುದಾರವೊಂದನ್ನು ಮುಂದೆ ಮಾಡಿದ.

" ಯಾರದಯ್ಯಾ ಅದು ? "

" ನನ್ ತಮ್ಮಂದು. "

" ಅದನ್ನೇಕೆ ತಂದಿ ಕಣೋ ? "

" ಅತನ ಟೊಂಕದಾಗಿತ್ತು. ಬಿಚ್ಚಿ ಕೊಟ್ಟ. ನಿನ್ನ ಮುತ್ತಿನ ಕಿ ಮ್ಮ ತ್ತಿ ನ ಬದ್ಲೀ ಇದನ್ನ ಕೊಟ್ಟುಬಾ ಅಂದ. —ತಗೋ ಇದನ್ನ "

" ಬೇಡಪ್ಪಾ, ತಿರುಗಿ ಒಯ್ದು ಬಿಡು. ಮುತ್ತುಗಳನ್ನ ನಾನು ಮೋಘತನ್ತಾಗಿ ಕೊಟ್ಟಿದೇನೆ. "

ತಿಮ್ಮ ಕೇಳಲಿಲ್ಲ. ಅವನ ದಾರಿಯಲ್ಲಿ ಅಡ್ಡ ಮಲಗಿದ. ಹಾಗೆಯೇ ಹೋದರೆ ಕನ್ನನ ಆಣೆಯಿಂದು ತನ್ನ ತಮ್ಮನ ಆಣೆಯಿಟ್ಟ. ತನ್ನ ಕೈಗಳು ಬೇಡಿಯ ಹವ್ಯಾಸಕ್ಕೆ ಹೋಗದಿದ್ದರೆ ಸಾಕು; ತನ್ನ ತಮ್ಮನಿಗೆ ಬಂಗಾರದ ಉಡುದಾರ ಮಾಡಿಸಬಹುದು ಎಂಬುದಾಗಿ, ತನ್ನ ಹೃದಯಾಂತರಾಳದ ಆಶೆಯನ್ನು ಆತ ವ್ಯಕ್ತಮಾಡಿದಾಗ, ಮುತ್ತುಗಾರ ಆ ಮಾತಿನಲ್ಲಿ ತಿಮ್ಮನ ಅಂತಃಕರಣವನ್ನು ಕಂಡ.

ಮುತ್ತುಗಾರನ ಚಿತ್ತ ಹಳ್ಳದ ನೀರಿನೆಡೆಗೆ ಹೋಯಿತು. ನಿನ್ನೆ ಹಳ್ಳದ ನೀರು ಮಲಿನವಾಗಿ ರಭಸದಿಂದ ಹರಿಯುತ್ತಿತ್ತು. ಈ ದಿನ ತಿಳಿಯಾಗಿ ಮಂದವಾಗಿ ಶಾಂತವಾಗಿ ಹರಿಯುತ್ತಿದೆ. ಮುತ್ತುಗಾರ ನಸುನಕ್ಕ. " ಈ ನೀರು ಹೀಗೆಯೇ ತಿಳಿಯಾಗಿಯೇ ಉಳಿದೀತೇ ? ಉಳಿಯಲಿ ಎಂದು ಆಶೆ ! " ಎಂದ.



ಕಸೂತಿ ಕಲಿಯ ಬೇಕೆ?

ಕೈ ಕಸೂತಿ

★

ಶ್ರೀಮತಿ ಸುಶೀಲಾದೇವಿ ಹಳಪೇಟೆ, ಶಿಕ್ಷಿಕೆ
ಕರ್ನಾಟಕ ಹೊಲಿಗೆ ವಿದ್ಯಾಲಯ, ಧಾರವಾಡ

ಹೋದಸಲದ ಲೇಖನದಲ್ಲಿ ಗಂಟಿನ ಹೊಲಿಗೆ, ಲೇಝಿಡಾಯ್ಸಿ ಎಂಬ ಹೂವು ತುಂಬುವ ಹೊಲಿಗೆಯನ್ನು ಹೇಳಲಾಗಿತ್ತಷ್ಟೇ? ಅದೇ ರೀತಿಯಾಗಿ ಇನ್ನೊಂದು ಹೊಲಿಗೆಯಿಂದ ಹೂವನ್ನೂ, ಎಲೆಯನ್ನೂ ತುಂಬುವುದನ್ನು ತಿಳಿಸುತ್ತೇನೆ.

ಈ ಹೊಲಿಗೆಗೆ ವಿಶಿಷ್ಟರೀತಿಯ ಡಿಝಾಯಿನ್ ಇರುವುದಿಲ್ಲ. ಯಾವ ನಮೂನೆಯದಿದ್ದರೂ ನಡೆಯುತ್ತದೆ. ಹೋದಸಲ ಹೇಳಿದಂತೆ ೮″ ಉದ್ದ ೮″ ಅಗಲ ಇರುವ ಅರಿವೆಯ ತುಂಡನ್ನು ತೆಗೆದುಕೊಂಡು, ಅದರ ಮೇಲೆ ನಿಮಗೆ ಇಷ್ಟವಿದ್ದ ಚಿತ್ರವನ್ನು ಕಾರ್ಬನ್ನಿನ ಸಹಾಯದಿಂದ ಮೂಡಿಸಿಕೊಳ್ಳಬೇಕು. ಆ ಬಳಿಕ ರಿಂಗನ್ನು ಅರಿವೆಗೆ ಬಿಗಿಯಾಗಿ ಕೂಡುವಂತೆ ಹಾಕಿ, ಅನಂತರ ಕಸೂತಿಯನ್ನು ಪ್ರಾರಂಭ ಮಾಡಬೇಕು.

ಡಿ. ಎಮ್. ಸಿ. ರೇಶಿಮೆಯ ಲಡಿಯನ್ನು ತೆಗೆದುಕೊಂಡು ಅದರಲ್ಲಿಯ ಎರಡೇ ಎಳೆಯನ್ನು, ಆಯಾ ಚಿತ್ರಕ್ಕೆ ಒಪ್ಪುವಂತಹ ಬಣ್ಣದ ದಾರವನ್ನು ಆರಿಸಿ ತೆಗೆದುಕೊಳ್ಳಬೇಕು. ಮೊದಲನೆಯ ಚಿತ್ರದಲ್ಲಿ ತೋರಿಸಿದಂತೆ ಹೂವನ್ನಾಗಲೀ ಎಲೆಯನ್ನಾಗಲೀ ತುಂಬಬೇಕಾದರೆ ಚಿತ್ರದ ಬಾಹ್ಯರೇಷೆಯಿಂದ ಮೊದಲುಮಾಡಿ, ಒಳಗಿನ ಭಾಗದ ಮೇಲೆ ಬರೀ ದಾರವನ್ನೇ ಅಡ್ಡ ತಂದು, ಇನ್ನೊಂದು ಬದಿಯ ಬಾಹ್ಯ ರೇಷೆಯ ಮೇಲೆ ಸೂಜಿಯನ್ನು ಚುಚ್ಚಿ ಕೆಳಗೆ ತೆಗೆದುಕೊಳ್ಳಬೇಕು. ಇದರಂತೆ ಸುತ್ತಲಿನ ಗೆರೆಯೊಂದಿಗೆ ತುಂಬುತ್ತ ಹೋದಂತೆ ಈ ಚಿತ್ರದ ಒಳಗಿನ ಭಾಗವು ತುಂಬುತ್ತದೆ. ಇದಕ್ಕೆ ತುಂಬುಹೊಲಿಗೆ (ಸಾಟಿನ್‌ಸ್ಟಿಚ್) ಎನ್ನುತ್ತಾರೆ. ಇದನ್ನು ಹಾಕುವಾಗ ದಾರವನ್ನು ಬಿಗಿಯಾಗಿ ಎಳೆಯಬಾರದು. ಮತ್ತು ಸಡಿಲಾಗಿಯೂ ಬಿಡಬಾರದು. ಬಿಗಿಯಾಗಿ ತೆಗೆದುಕೊಂಡರೆ ಅರಿವೆಯು ಮುದ್ದೆಯಾಗುತ್ತದೆ. ಸಡಿಲಾಗಿ ಬಿಟ್ಟರೆ ದಾರವು ಸಡಿಲಾಗಿ ಅರಿವೆಯು ಕಾಣಹತ್ತುತ್ತದೆ. ಆದ್ದರಿಂದ ದಾರವು ಅರಿವೆಯ ಮೇಲೆ ಸರಿಯಾಗಿ ಕಾಣುವಂತೆ ಹಾಕಬೇಕು. ಇದರಿಂದ ದೇಟು ಎಲೆಯನ್ನು ಸಹ ತುಂಬಲು ಬರುತ್ತದೆ. ಈ ಹೊಲಿಗೆ ತುಂಬಲು ಬಹಳ ಸುಲಭ; ಆದರೆ ಸುಂದರವಾಗುವುದು. ಇನ್ನೂ ಸುಂದರವಾಗಿ ಕಾಣಿಸಬೇಕಾದರೆ, ಚಿತ್ರದ ಒಳಗಿನ ಭಾಗವನ್ನು ದಪ್ಪಗಿನ ದಾರದಿಂದ ಮೊದಲು, ಹೂವು ಎಲೆಗಳ ಮಧ್ಯವನ್ನು ಉದ್ದುದ್ದ ಎಳೆಗಳಿಂದ ಪೂರ್ಣ ತುಂಬಿಕೊಳ್ಳಬೇಕು; ಅನಂತರ ಮೇಲೆ ಹೇಳಿದಂತೆ ಸುತ್ತಲಿನ ಗೆರೆಗುಂಟ ಸೇಡಿಂಗ್ ದಾರದಿಂದ ತುಂಬಿದರೆ, ನಡುವಿನ ಬಟ್ಟೆಯ ಮೇಲೆ ದಾರವು ಉಬ್ಬಿ ಮೇಲಕ್ಕೆ ಎದ್ದು ಬರುವುದು. ಆದ್ದರಿಂದ ಗಿಡದಿಂದ ಕೊಯಿದು ತಂದ ಹೂವನ್ನೇ ಅರಿವೆಯ ಮೇಲೆ ಇಟ್ಟಂತೆ ಎದ್ದು ಕಾಣುವುದು. ಈ ಕಸೂತಿಯನ್ನು ಬೇಕಾದಲ್ಲಿ ಉಪಯೋಗ ಮಾಡಬಹುದು. ಕುಶಲತೆಯಿಂದ ಈ ಹೊಲಿಗೆಯನ್ನು ಹಾಕಿದರೆ, ಆ ಚಿತ್ರವು ಬಣ್ಣದಿಂದ ತುಂಬಿದಂತೆ ಕಾಣುತ್ತದೆ.



ಬಟ್ಟೆಯಲ್ಲಿಯ ಎಳೆಯನ್ನು ತೆಗೆದು ಅದರಲ್ಲಿ ವಿವಿಧ ರೀತಿಯಿಂದ ಗಂಟು ಹಾಕುತ್ತಾರೆ. ಮತ್ತು ಬಣ್ಣದ ದಾರದಿಂದ ಎಳೆತೆಗೆದ ಭಾಗವನ್ನು ವಿವಿಧ ರೀತಿಯಿಂದ ತುಂಬುತ್ತಾರೆ. ಅದಕ್ಕೆ ಎಳೆ ತೆಗೆದ ಕಸೂತಿ ಎನ್ನುತ್ತಾರೆ.

ಉಪಯೋಗ— ಈ ಕಸೂತಿಯನ್ನು ಶೋಭೆಗಾಗಿ ಕರವಸ್ತ್ರದ ಸುತ್ತಲೂ ಎಳೆ ತೆಗೆದು ೩-೪ ಎಳೆಗಳನ್ನು ಎಣಿಸಿ, ಎರಡನೆಯ ಚಿತ್ರದಲ್ಲಿ ತೋರಿಸಿದಂತೆ ಕಟ್ಟುತ್ತಾರೆ. ಇದೇ ರೀತಿ ಬಣ್ಣದ ದಾರದಿಂದ ತುಂಬಿದರಂತೂ ಇನ್ನೂ ಸುಂದರ ಕಾಣಿಸುವುದು. ಇದರಂತೆ ಎಳೆ ತೆಗೆಯುವ ಕಸೂತಿಯನ್ನು ಟೇಬಲ್‌ಕ್ಲಾಥ್ ಮತ್ತು ಪರಕರ-ಫ್ರಾಕುಗಳ ಅಂಚಿನಲ್ಲಿ ೧″ ಅಥವಾ ೨″ ಅಗಲ ಎಳೆಯನ್ನು ತೆಗೆದು, ಎರಡೂ ಬದಿಗೆ ಎಳೆಗಳನ್ನು ಎಣಿಸಿ ಕಟ್ಟಬೇಕು. ಬಳಿಕ ನಡುವಿನ ಎಳೆಯನ್ನು ಬಣ್ಣದ ದಾರದಿಂದ ನಿಮಗೆ ಇಷ್ಟವಿದ್ದಂತೆ ತುಂಬಿದರೆ, ಆ ಭಾಗವು ಗಿರಣಿಯಲ್ಲೇ ತಯಾರಾಗಿ ಬಂದ ಅಂಚಿನಂತೆ ಕಾಣುತ್ತದೆ. ಇದರಂತೆ ಟೇಬಲ್ ಕ್ಲಾಥಿನ ಮೂಲೆಯಲ್ಲಿ ಅಥವಾ ಮಧ್ಯದಲ್ಲಿ ದೊಡ್ಡ ಆಕೃತಿಯಲ್ಲಿ ಚಿತ್ರವನ್ನು ಮೂಡಿಸಿಕೊಂಡು, ಅದರ ಒಳಭಾಗವನ್ನು ಚೌಕು ಮನೆಯಂತೆ ಅಡ್ಡ ಉದ್ದದ ಎಳೆಯನ್ನು ತೆಗೆಯಬೇಕು, ಆಮೇಲೆ ಬಣ್ಣದ ದಾರದಿಂದ ಚೌಕಾದ ಮನೆಯನ್ನು ವಿವಿಧ ರೀತಿಯಿಂದ ತುಂಬಲು ಬರುತ್ತದೆ. ಇದಕ್ಕೆ ‘ ಎಳೆ ತೆಗೆದ ಕಸೂತಿ ’ ಅನ್ನುವರು.





ಪದ್ಮಾವತಿ

(ಸ್ವತಂತ್ರ ಸಾಮಾಜಿಕ ಕಾದಂಬರಿ)

ಬರೆದವರು ಶ್ರೀಮತಿ ವೈ. ವಿ. ಇಂದಿರಾಬಾಯಿ ಎಂ. ಎಸ್‌ಸಿ. ಹಂಸ ಸಾಹಿತ್ಯ ಲಿಮಿಟೆಡ್‌ನವರ ಪ್ರಕಟನೆ. ಪುಟ ಸಂಖ್ಯೆ ೨೧೧. ಬೆಲೆ ರೂ. ೨-೮-೦.

ಲೆಕ್ಕಣಿಕೆಯನ್ನು ಎತ್ತುತ್ತಲೇ, ಈ ಕಾದಂಬರಿಯನ್ನು ನಾನು ಹೊಗಳುವವನಿದ್ದೇನೆ ಎಂದು ಹೇಳಿಬಿಡುತ್ತೇನೆ. ನಿಜವಾಗಿಯೇ ಇದನ್ನು ಓದಿ ನಾನು ಆನಂದಪಟ್ಟಿದ್ದೇನೆ. ಅದರಲ್ಲಿಯೂ ಒಬ್ಬ ತಂಗಿ ಇದನ್ನು ಬರೆದಿರುವುದನ್ನು ನೋಡಿಯಂತೂ, ಕೌತುಕದ ಜೊತೆಗೆ ಅಭಿಮಾನವೂ ಎನಿಸಿತು ನನಗೆ !

ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಸ್ತ್ರೀಲೇಖಿಕೆಯರ ಕಾದಂಬರೀ-ಪ್ರಪಂಚ ಇನ್ನೂ ಪ್ರಾರಂಭವೇ ಆಗಿಲ್ಲ ಎಂದು ಹೇಳಬಹುದು. ಪೂರ್ವಕ್ಕೆ ಏನಾದರೂ ತುಸು ಇದ್ದರೆ, ನಾಮನಿರ್ದೇಶದ ಮಟ್ಟಿಗೇ ಇದೆಯಾಗಲಿ, ನಾಮಸಾರ್ಥಕತೆಯ ಮಟ್ಟಕ್ಕೆ ಇಲ್ಲ !

ಸ್ತ್ರೀಯರು ಮಿಕ್ಕ ಜೀವನವ್ಯವಹಾರದಲ್ಲಿ ಪುರುಷರನ್ನು ಸರಿಗಟ್ಟದಿದ್ದರೂ ಶಿಕ್ಷಣದಲ್ಲಿ ಮಾತ್ರ ಅವರಿಗೆ ಸರಿಸಮಾನರಾಗಿ ಬರುತ್ತಿದ್ದಾರೆ. ಜೀವನದ ಅರಿವು ಹೆಚ್ಚುತ್ತಿರುವಂತೆ, ಅದನ್ನು ವಿಶ್ಲೇಷಿಸುವ ಸಾಮರ್ಥ್ಯವೂ ಅವರಲ್ಲಿ ಬೆಳೆಯುತ್ತಲಿದೆ. ಪುರುಷ-ಲೇಖಕರು, ತಾವು ಸ್ತ್ರೀಹೃದಯವನ್ನೂ, ಅವರ ಜೀವನರಹಸ್ಯ-ವನ್ನೂ ಬಲ್ಲವರೆಂದು ಎಷ್ಟೇ ತಿಳಿದರೂ, ಅವರು ಯಾವಾಗಲೂ ನೋಡುವುದು ತಮ್ಮ ಗಂಡುನೋಟದಿಂದ ! ಈ ಕಾರಣದಿಂದಲೇ ಅವರು ಚಿತ್ರಿಸುವ ಸ್ತ್ರೀಪಾತ್ರಗಳು ಏಕಾಂಗಿಯಾಗಲು ಸಾಕು. ಇದಕ್ಕೆ ಅಪವಾದವೆಂದು ಕೆಲವರನ್ನು ತೋರಿಸಬಹುದಾದರೂ ಸ್ತ್ರೀಹೃದಯವನ್ನೂ, ಅವಳ ಆಂತರಿಕ ಸೂಕ್ಷ್ಮಭಾವನೆಗಳನ್ನೂ ಸ್ತ್ರೀಯೇ ತನ್ನ ಪ್ರಾತಿಭಶಕ್ತಿಯಿಂದ ಯಥಾರ್ಥವಾಗಿ ಅರಳಿಸಿ ತೋರಿಸಬಲ್ಲಳು. ಇಷ್ಟೇ ಅಲ್ಲ, ಗಂಡಿನ ಮನಸ್ಸನ್ನು ಕೂಡ ಸರಿಯಾಗಿ ಅರ್ಥಮಾಡಿಕೊಳ್ಳುವ ಚಾಣಾಕ್ಷತನವು ಹೆಣ್ಣಿನಲ್ಲಿ ಪ್ರಕೃತಿಸಹಜವಾಗಿದೆ. ತನ್ನ ಅನೇಕ ಆವ್ಯಾಪಾರೇಷು ವ್ಯಾಪಾರದ ಗೊಂದಲದಲ್ಲಿ ಹೆಣ್ಣಿನ ಕಡೆಗೆ ಲಕ್ಷ್ಯಕೊಡಲು ಗಂಡಿಗೆ ಸಮಯವೂ ಸಿಕ್ಕುವುದಿಲ್ಲ, ಅಗತ್ಯವೂ ಎನಿಸುವುದಿಲ್ಲ. ಆದರೆ ಗಂಡಿನ ಅನುನಯವೇ ಹೆಣ್ಣಿಗೆ ಜೀವನದ ಮುಖ್ಯಾಂಶವಾಗಿರುವು-ದರಿಂದ, ಸ್ತ್ರೀಯಲ್ಲಿ ಆನುವಂಶಿಕವಾಗಿಯೇ ಈ ಬುದ್ಧಿ ಬೆಳೆದಿದ್ದರೆ ಆಶ್ಚರ್ಯವಲ್ಲ.

ಪ್ರಸ್ತುತ ಕಾದಂಬರಿಯಲ್ಲಿ ತಂಗಿ ಇಂದಿರಾ-ಬಾಯಿಯವರು ಎರಡು ಗಂಡು, ಎರಡು ಹೆಣ್ಣಿನ ಜೀವನದಲ್ಲಿ ಪ್ರೇಮ, ಕರ್ತವ್ಯ ಮತ್ತು ತ್ಯಾಗ ಈ ಪವಿತ್ರ ಭಾವನೆಗಳ ತೊಡಕನ್ನುಂಟುಮಾಡಿ ಅದನ್ನು ಬಹು ಕುಶಲತೆಯಿಂದ ಬಿಡಿಸಿದ್ದಾರೆ. ಇಂತಹ ಈ ಕಾದಂಬರಿಯ ಕಥಾವಸ್ತುವಿನ ಸ್ಥೂಲ ಪರಿಚಯವನ್ನು ನಾಲ್ಕೇ ಮಾತಿನಲ್ಲಿ ಹೇಳುತ್ತೇನೆ.

ಪದ್ಮಾವತಿ ಮತ್ತು ಶಾಂತಾ ಇಬ್ಬರೂ ಒಂದೇ ಶಾಲೆಯಲ್ಲಿ ಶಿಕ್ಷಿಕೆಯರಾಗಿ ಕೆಲಸಮಾಡುತ್ತಿರುತ್ತಾರೆ. ಚಿಕ್ಕಂದಿನಲ್ಲಿಯೇ ಶಾಂತಾಗೆ ಮದುವೆ ಆಗಿರುತ್ತದೆ. ಆದರೆ ಅವಳ ಗಂಡ ಶೇಖರ, ತಂದೆಯ ಹೇಳಿಕೆಗೆ ಒಳಗಾಗಿ, ಇವಳನ್ನು ಬಿಟ್ಟು, ಇನ್ನೊಬ್ಬಳನ್ನು ಮದುವೆ ಆಗಿರುತ್ತಾನೆ. ಕೇಳಿದಾಗ ಕೇಳಿದಷ್ಟು ಹಣ ಶಾಂತಾಳ ತಂದೆ ತೆರಲಿಲ್ಲವೆಂಬುದೇ ಅವಳನ್ನು ಬಿಡಲು ಮುಖ್ಯ ಕಾರಣವಾಗಿರುತ್ತದೆ. ಶಾಂತಾ ಗಂಡನ ಆಶೆ ತೊರೆದು, ವಿದ್ಯೆ ಕಲಿಯುತ್ತಾಳೆ. ಅವಳ ಅಣ್ಣ ಪ್ರಭಾಕರ, ತಂಗಿಗಾಗಿ ತಾನೂ ಮದುವೆ ಆಗದೆ, ಹಾಗೇ ಉಳಿಯಲು ನಿಶ್ಚಯಿಸುತ್ತಾನೆ. ತಂದೆ ತಾಯಿ ಈ ದುಃಖದಿಂದ ಕಾಲಾಧೀನರಾಗುತ್ತಾರೆ. ಶಾಂತಾ ಶಿಕ್ಷಿಕೆಯಾಗಿ ಕೆಲಸಮಾಡುತ್ತಿರುವಾಗ, ಶೇಖರನ ಅಕ್ಕನಿಂದ ಶಾಂತಾಗೆ ಅಕಸ್ಮಾತ್ ಕಾಗದ ಬರುತ್ತದೆ. ಡಾಕ್ಟರನಾದ ಶೇಖರನು ಕಾಲು ಮುರಿದುಕೊಂಡಿರುವನೆಂದೂ, ಅವನ ಎರಡನೆಯ ಹೆಂಡತಿ ಅವನನ್ನು ತ್ಯಜಿಸಿ ಹೋಗಿರುವಳೆಂದೂ, ಶೇಖರನ ತಪ್ಪನ್ನು ಮನ್ನಿಸಿ, ಬಂದು, ಮನೆಯಲ್ಲಿ ನಿಲ್ಲಬೇಕೆಂದೂ ಅದರಲ್ಲಿ ಬರೆದಿರುತ್ತದೆ. ಈ ಪತ್ರದಿಂದ ಶಾಂತಾಳ ಶಾಂತ ಮನಸ್ಸಿನಲ್ಲಿ ಬಿರುಗಾಳಿ ಏಳುತ್ತದೆ. ಪದ್ಮಾವತಿಗೆ ತನ್ನ ಜೀವನದ ಈ ಪೂರ್ವಕಥೆಯನ್ನು ಶಾಂತಾ ಸವಿಸ್ತಾರವಾಗಿ ಹೇಳುತ್ತಾಳೆ. ಅವ-ರಿಬ್ಬರಲ್ಲಿಯೂ ಆತ್ಮೀಯತೆ ಬೆಳೆಯುತ್ತದೆ.

ಕಾಗದ ಬಂದ ದಿನದಿಂದ ಶಾಂತಾಳ ವೈಮನಗಳಲ್ಲಿ ಸ್ವಾಸ್ಥ್ಯ-ವಿಲ್ಲದಾಗುತ್ತದೆ. ಗಂಡನೆಡೆಗೆ ಹೋಗಬೇಕೆಂಬ ಹಂಬಲ, ಪ್ರಭಾಕರನು ಆ ಬಗೆಗೆ ತಾಳಿರುವ ಕಠಿಣವೃತ್ತಿ, ಈ ದ್ವಂದ್ವದಲ್ಲಿ ಅವಳ ಹೃದಯಕ್ಕುಂಟಾದ ತಳಮಳ, ಪದ್ಮಾವತಿ ಇದೆಲ್ಲವನ್ನೂ ಅರಿತು, ಮನಕರಗಿ, ಈ ಸಮಸ್ಯೆಗೆ ಪರಿಹಾರ ಹುಡುಕುವುದರಲ್ಲಿ ವಹಿಸಿದ ಹಿರಿಯ ಪಾತ್ರ, ಕೊನೆಗೆ ಆ ಕಾರ್ಯದಲ್ಲಿ ಜಯಶೀಲ-ಳಾಗುವುದರ ಜೊತೆಗೆ ತಾನೂ ಪ್ರಭಾಕರನಿಗೆ ಮನಸೋತು, ಅವನೊಡನೆ ಮದುವೆಗೆ ಸಮ್ಮತಿಸುವ ಸುಖದ ಪ್ರಸಂಗ ಇವು ಈ ಕಾದಂಬರಿಯ ಮಹತ್ವದ ಅಂಶಗಳು.

ಶಾಂತಾ, ಪದ್ಮಾವತಿಯ ಎದುರು ತನ್ನ ಪೂರ್ವವೃತ್ತಾಂತವನ್ನು ನಿವೇದಿಸುವಾಗ, ಕೇವಲ ಹಣದಾಶೆಗಾಗಿ, ಆದ ಮದುವೆಯನ್ನು ಮುರಿದು, ಎರಡನೆಯ ಸೊಸೆಯನ್ನು ಸಿನೆಮಾದಲ್ಲಿ

ಹಾಡಿಸಿ, ಹಣಗಳಿಸುವ ಶಾಂತಾಳ ಮಾವನ ಚಿತ್ರ, ಇದಕ್ಕೆಲ್ಲ ಸಮ್ಮತಿಸಿದ ಗಂಡನಾದ ಶೇಖರನ ವ್ಯಕ್ತಿತ್ವ, ತಂಗಿ ಅನಾಥಳಾದಳೆಂದು ತಾನೂ ಮದುವೆಯಾಗದೆ ಅವಳಿಗಾಗಿ ಬ್ರಹ್ಮಚಾರಿಯಾಗಿ ಇರಲು ನಿಶ್ಚಯಿಸುವ ಪ್ರಭಾಕರನ ತ್ಯಾಗ, ಇವುಗಳ ಸಮಂಜಸತೆಯ ಬಗ್ಗೆ ಪ್ರಾರಂಭಕ್ಕೆ ಓದುಗರು ಸಾಶಂಕರಾಗುವಂತಿದೆ! ಆದರೆ ಮುಂದೆ ಕಥೆ ಬೆಳೆದ ರೀತಿ ತುಂಬ ಹೃದಯಸ್ಪರ್ಶಿಯಾಗಿದೆ. ಶಾಂತಾ, ಪದ್ಮಾವತಿ: ಅದರಂತೆಯೇ ಶೇಖರ, ಪ್ರಭಾಕರ. ಇವರ ನಡೆನುಡಿಗಳಲ್ಲಿ ನಮಗೆ ಮೂರ್ತಿಮತ್ತಾಗಿ ಕಾಣುವ ವಿಶೇಷಗುಣ, ಅವರ ಹೃದಯವಂತಿಕೆ, ಸಂಯಮ, ಮಾನವತೆ. ಸಂಸ್ಕೃತಿಯ ಮೂರು ಶ್ರೇಷ್ಠಗುಣಗಳ ಸಾಕಾರ ಮೂರ್ತಿಗಳೇ ಆಗಿದ್ದಾರೆ ಈ ನಾಲ್ವರು. ಪದ್ಮಾವತಿ ಪ್ರಭಾಕರರಲ್ಲಿಯ ಅಜ್ಞಾತಪ್ರೇಮದ ಬೆಳವಣಿಗೆಯನ್ನು ಬಹು ಮನೋಜ್ಞವಾಗಿ, ಹೃದಯಂಗಮವಾಗಿ ಅರಳಿಸಿ ತೋರಿಸಲಾಗಿದೆ. ಅವರಿರ್ವರಲ್ಲಿ ನಡೆಯುವ ಭೆಟ್ಟಿಯ ಪ್ರಸಂಗಗಳಂತೂ ಸಂಯಮಿತ ಸಂಭಾಷಣೆಯ ಉತ್ತಮ ಮಾದರಿಗಳಾಗಿವೆ.

ಸುಂದರವಾದ ಪವಿತ್ರಸ್ಥಾನವನ್ನು ಸಂದರ್ಶಿಸಿದಾಗ, ಮನಸ್ಸು ಹೇಗೆ ಒಂದು ಸಾತ್ವಿಕಾನಂದಕ್ಕೆ ಎಡೆಗೊಡುವುದೋ, ಅಂತಹ ಕೆಲ ಸದ್ಭಾವನೆಗಳು ಈ ಕಾದಂಬರಿಯ ವಾಚನದಿಂದ ಜಾಗೃತವಾಗುತ್ತವೆ.

ತಂಗಿ ಇಂದಿರಾಬಾಯಿಯವರಿಂದ ಇಂತಹ ಅನೇಕ ಸುಂದರ ಕೃತಿಗಳು ಬರಲಿ; ಕನ್ನಡ ಸಾಹಿತ್ಯದೇವಿಗೆ ಅವರ ಕೃತಿಗಳು ಕಂಠಾಭರಣವಾಗಿ ರಾರಾಜಿಸಲಿ.

ಅವರಿಗೆ ಒಂದೇ ಮಾತನ್ನು ನಾನು ಸೂಚಿಸಬಯಸುತ್ತೇನೆ: ಅವರು ತಮ್ಮ ಬರೆಹದ ಶೈಲಿಯನ್ನು ಮಾತ್ರ ಇದಕ್ಕೂ ಸತ್ತ್ವಯುತವಾಗಿ ಮಾಡಿಕೊಳ್ಳಬೇಕು.

ಎಲ್. ಜೆ. ಬಿ.

ಸಂಪಗೆ

(ಕಥಾಸಂಕಲನ)

ಲೇ. ಶ್ರೀ. ನರೇಂದ್ರಬಾಬು. ಮೈಸೂರಿನ ಹಂಸ ಲಿಮಿಟೆಡ್‌ನವರ ಪ್ರಕಾಶನ. ಪುಟ ೬೬, ಬೆಲೆ ರೂ ೧-೧೨-೦.

ಇದೊಂದು ೬ ಸಣ್ಣ ಕತೆಗಳ ಸಂಗ್ರಹ. ಕೊನೆಯ ಕತೆಯಾದ 'ಮರವೆ' ಒಂದನ್ನುಳಿದು, ಮಿಕ್ಕ ಕತೆಗಳನ್ನೆಲ್ಲ ವಿದ್ಯಾರ್ಥಿದಶೆಯಲ್ಲಿದ್ದಾಗ ಬರೆದದ್ದು — ಎಂದು ನರೇಂದ್ರಬಾಬುಗಳು ತಮ್ಮ ಅರಿಕೆಯಲ್ಲಿ ಹೇಳಿಕೊಂಡಿದ್ದಾರೆ.

ನವತಾರುಣ್ಯದಲ್ಲಿ, ನಡೆನುಡಿಗಳಲ್ಲಿ ಹಿಡಿತ ಕಡಿಮೆ ಇದ್ದಂತೆ, ಬರೆವಣಿಗೆಯಲ್ಲಿಯೂ ಅದರ ಕೊರತೆ ಕಂಡುಬಂದರೆ ಆಶ್ಚರ್ಯವಿಲ್ಲ. ಸಾಮಾನ್ಯ ಮಾತಿಗೂ ಅತಿಶಯೋಕ್ತಿಯ ಬಣ್ಣ ಬೆರೆಸಿ ಹೇಳುವ ರೀತಿ ನಗೆಹಬ್ಬಕ್ಕೆ ಒಪ್ಪುತ್ತದೆ; ಕಥಾಲೇಖನಕ್ಕೆ ಸರಿಹೋಗದು. ಸ್ವಭಾವ ರೂಪುಗೊಳ್ಳಲು ಬಹಳ ಕಾಲ ಬೇಕಾಗುವಂತೆ, ಅದರಲ್ಲಿ ಪರಿವರ್ತನಕ್ಕೂ ಅವಧಿ ಹಿಡಿಯುತ್ತದೆ. ದೀಪದ ಸ್ವಿಚ್ ಕೆಳಗೆ ಮಾಡಿದರೆ ಬೆಳಕು, ಮೇಲೆ ಮಾಡಿದರೆ ಕತ್ತಲು— ಈ ರೀತಿಯಲ್ಲೆಂದೂ ಮನುಷ್ಯ ಸ್ವಭಾವದಲ್ಲಿ ಮಾರ್ಪಾಟುಗಳಾಗುತ್ತಿರುವುದಿಲ್ಲ. ಆದರೆ ಈ ಕಥಾಸಂಕಲನದಲ್ಲಿಯ ವ್ಯಕ್ತಿಗಳ ಸ್ವಭಾವಚಿತ್ರಣವು ಮಾತ್ರ—ಸಾಮಾನ್ಯವಾಗಿ—ಈ ಮಾದರಿಯ ಮೇಲಿದೆ. ಚಂದು, ದೇವಣ್ಣ, ಪುಟ್ಟಣ್ಣ, ತಾರೆ, ರಾಯರು, ದಾಸಣ್ಣನವರು, ನರಸಿಂಗರಾಯರು ಮುಂತಾದ ವ್ಯಕ್ತಿಸ್ವಭಾವಗಳು ಇದಕ್ಕೆ ಸಾಕ್ಷಿಯಾಗಿವೆ. ಪಾಡಿಗೆ ಬರದ ಕಾಯನ್ನು ಒತ್ತಾಯಕ್ಕೆ ಹಣ್ಣು ಮಾಡಿ, ಮಾರಾಟಕ್ಕೆ ತರುವ ಸಂಪ್ರದಾಯವು ಸಾಹಿತ್ಯ ಕ್ಷೇತ್ರದಲ್ಲಿಯೂ ನಡೆದುಬಿಟ್ಟಿದೆ!

ಈ ಸಂಕಲನದ ಲೇಖಕರು ಇವನ್ನು ವಿದ್ಯಾರ್ಥಿಯಾಗಿರುವಾಗ ಬರೆದುವು— ಎಂಬ ಕೌತುಕದಿಂದ ನಾವು ಓದಿದರೆ, ಬರೆವಣಿಗೆ ನಿಜವಾಗಿಯೇ ಕೌತುಕಾಸ್ಪದವಾಗಿದೆ!

ಎಲ್. ಜೆ. ಬಿ.

ಗಾಳಿಗುದುರೆ

(ಲಲಿತ ಪ್ರಬಂಧಗಳ ಚಿಕ್ಕ ಸಂಗ್ರಹ.)

ಲೇಖಕರು ಶ್ರೀ. ಬಿ. ಆರ್. ವಾಡಪ್ಪಿಯವರು ಎಂ. ಎ. ಬಿ. ಟಿ. ಧಾರವಾಡ

ಅಭಿಜಾತ ರಸಿಕ ದೃಷ್ಟಿಯೇ ಲಲಿತಪ್ರಬಂಧಗಳ ಜೀವಾಳ. ಯಾವುದನ್ನೇ ರಸಿಕತೆಯಿಂದ ಕಂಡು, ಮನೋಜ್ಞವಾಗಿ ಮಾತಿನಲ್ಲಿ ಪವಣಿಸುವ ಪ್ರತಿಭೆ ಇದಕ್ಕೆ ಅಗತ್ಯ. ವ್ಯಕ್ತಿತ್ವ ವಿಕಾಸಗೊಂಡಷ್ಟು ಇದು ಕಳೆ ಕಟ್ಟುತ್ತದೆ. ಈ ಪ್ರಬಂಧಪ್ರಕಾರದಲ್ಲಿ ಬರೆಹಗಾರನೇ ತನ್ನ ಬಹುಶ್ರುತತೆಯ ಹಂದರದ ಮೇಲೆ ಸ್ವಾನುಭವದ ಹೂಬಳ್ಳಿಯನ್ನು ಹಬ್ಬಿಸಿ ಮನೋವಿಲಾಸದ ಸುವಾಸನೆ-ಹೂವನ್ನರಳಿಸುತ್ತಾನೆ. ಅವನೊಬ್ಬ ಬಹುರೂಪಿ. ತನ್ನ ವಿಲಾಸದೊಡನೆ ನಮ್ಮಲ್ಲಿಯೂ ರಸಾನುಭೂತಿಯನ್ನುಂಟುಮಾಡುವುದೇ ಅವನ ಗುರಿ. ಶ್ರೀ. ವಾಡಪ್ಪಿಯವರು ಇಂತಹ ಗುರಿಗಾರರಾಗಿ ನಿಂತಿದ್ದಾರೆ; ಕುದುರೆಯನ್ನೇರಿದ್ದಾರೆ. ಅವರ ಶಬ್ದವೇಧ, ಎರಡು ತಪ್ಪಿದರೂ ಮೂರನೆಯದಾದರೂ ಗುರಿಯನ್ನು ಭೇದಿಸುವಷ್ಟು ಸಮರ್ಥವಾಗಿದೆ. ಸಹಜಸುಂದರವಾದ ಭಾಷೆ, ಕಲ್ಪನೆಗಳನ್ನು ಹರಿಬಿಡದೆ ಸಂಯಮದಲ್ಲಿರಿಸಿಕೊಂಡು ಬಂದಿರುವ ಔಚಿತ್ಯ, ಕ್ಷುಲ್ಲಕವೆನಿಸುವುದನ್ನೂ ತಾತ್ತ್ವಿಕ ದೃಷ್ಟಿಯಿಂದ ನೋಡುವ ಆಂತರಿಕ ದೃಷ್ಟಿ ಇವುಗಳನ್ನು ಪ್ರಬಂಧಗಳಲ್ಲಿ ನಾವು ಕಾಣಬಹುದು. ಸರಾಸರಿಯಲ್ಲಿ ಪ್ರಬಂಧಗಳು ಸರಸವಾಗಿವೆ.

ಎಲ್. ಜೆ. ಬಿ.

(೪೪ ನೆಯ ಪುಟದಿಂದ ಮುಂದೆಸಾಗಿದ್ದು)

ಯಲ್ಲಿ ಇವರು ಸಾರ್ವಜನಿಕ ಚಳವಳಿಯನ್ನು ಪ್ರಾರಂಭಿಸಿದಾಗ, ಮಹಾರಾಷ್ಟ್ರದ ಮುಂದಾಳುಗಳನ್ನೇ ತಮ್ಮ ಆದರ್ಶವನ್ನಾಗಿ ಇಟ್ಟುಕೊಂಡು, ಅವರ ಚಟುವಟಿಕೆಗಳನ್ನು ಪೋಷಿಸುವಂತಹ ಕಾರ್ಯಗಳನ್ನೆ ನಡೆಯಿಸುತ್ತಲಿದ್ದರು. ಅಂದಿನ ಸ್ವಾತಂತ್ರ್ಯ-ಚಳವಳಿಯು ಕೇವಲ ಸುಶಿಕ್ಷಿತರದಷ್ಟೇ ಆದುದರಿಂದ, ಸುಶಿಕ್ಷಿತರ ಅಭಾವವಿದ್ದ ಕರ್ನಾಟಕದಲ್ಲಿ ರಾಯರಿಗೆ ಹೆಚ್ಚಿನ ಬೆಂಬಲಿಗರು ಸಿಕ್ಕಲಿಲ್ಲ. ಎಂತಲೇ ಏನೋ, ಶ್ರೀ. ಗಂಗಾಧರರಾಯರಿಗೆ ಮೊದ-ಮೊದಲು ಕರ್ನಾಟಕದ ಸ್ವರೂಪದರ್ಶನವೂ ಆಗಿರಲಿಲ್ಲ.

ಕರ್ನಾಟಕದಲ್ಲಿ ಹೊಸ ಶಿಕ್ಷಣವು ಹಬ್ಬಿ ಕನ್ನಡ ತರುಣರಲ್ಲಿ ಕರ್ನಾಟಕತ್ವದ ಭಾವನೆ ಜಾಗೃತಗೊಂಡಿತು; ಕರ್ನಾಟಕ ಪ್ರಾಂತೀಕರಣದ ಮಾತುಗಳು ನಾಡಿನಲ್ಲಿ ಆಗಾಗ ಏಳಲು ತೊಡಗಿದುವು. ರಾಜಕೀಯ ಕ್ಷೇತ್ರದಲ್ಲಿ ಕಾರ್ಯ ಮಾಡುತ್ತಿದ್ದ ಕನ್ನಡ ತರುಣರು ಕೆಲವರು ಅದಕ್ಕಾಗಿ ಚಳವಳಿಯನ್ನು ಮಾಡಿ, ರಾಷ್ಟ್ರೀಯ ಮಹಾಸಭೆಯಿಂದ ಕರ್ನಾಟಕವೊಂದು ಪ್ರಾಂತವೆಂಬ ಮನ್ನಣೆಯನ್ನು ದೊರಕಿಸಿದರು. ಕರ್ನಾಟಕ ಪ್ರಾಂತದ ಮನ್ನಣೆಯೊಂದಿಗೇ ರಾ ಮ ಸಭೆಯು ದೇಶದಲ್ಲಿ ಅಸಹಕಾರದ ಯುದ್ಧವನ್ನು ಹೂಡಿತು. ಅಂದಿನ ಕನ್ನಡಿಗರು ರಾಜಕೀಯ ಕ್ಷೇತ್ರದಲ್ಲಿ ಎಲ್ಲ ರೀತಿಯಿಂದಲೂ ಹಿರಿಯರಾಗಿದ್ದ ಶ್ರೀಮಾನ್ ದೇಶಪಾಂಡೆಯವರನ್ನು ತಮ್ಮ ನಾಡಿನ ಹಿರಿಯ ಮುಂದಾಳನ್ನಾಗಿ ಮಾಡಿಕೊಂಡು ಉತ್ಸಾಹದಿಂದ ಅಸಹಕಾರಯುದ್ಧವನ್ನು ಆರಂಭಿಸಿದರು. ಆ ಕಾಲದಲ್ಲಿಯೇ ದೇಶಭಕ್ತ ಗಂಗಾಧರರಾಯರು 'ಕರ್ನಾಟಕ ಸಿಂಹ' ಎಂಬ ಪದವಿಯನ್ನು ಪಡೆದುದು.

ರಾಜಕೀಯ ಚಟುವಟಿಕೆಗಳಲ್ಲಿ ಶ್ರೀಯುತರು ದುಡಿದುದು, ಅಷ್ಟಿಷ್ಟೆಂದು ಹೇಳಲಿಕ್ಕೆ ಬಾರದಂತಹದು. ಆಗರ್ಭಶ್ರೀಮಂತರಾದ ಇವರು, ಸೆರೆಮನೆಯ ವಾಸದ ಕಷ್ಟ ಎಷ್ಟು ಸಲ ಬಂದರೂ ಅವಕ್ಕೆ ಸಿದ್ಧರಾಗಿ ಅನುಭವಿಸಿದರು. ರಾಯರ ಸಂಘಟನಾನೈಪುಣ್ಯ ಅನ್ಯಾದೃಶವಾದುದು. ಧುರೀಣತೆಗೆ ಒಪ್ಪುವಂತಹ ಗಂಭೀರ ಸುಂದರ ವ್ಯಕ್ತಿತ್ವ. ಬಲಹೀನರಲ್ಲಿಯೂ ಚೈತನ್ಯವನ್ನು ತುಂಬುವಂತಹ ಭಾವನಾಮಯ ವಾಕ್‌ಪಟುತ್ವ. ಸಿರಿವಂತಿಕೆಯ ಕಾರಣದಿಂದ ಇರುವ ಇವರ ಸಾಮಾಜಿಕ ಪ್ರತಿಷ್ಠೆ—ಇವೆಲ್ಲ ಇವರ ಚಟುವಟಿಕೆಗೆ ಪೋಷಕವಾಗಿ ಪರಿಣಮಿಸಿ, ಜೀವನದಲ್ಲಿ ಜಯವನ್ನು ಒದಗಿಸಿಕೊಡಲು ಸಮರ್ಥವಾದುವು.

ಸದ್ಯದ ರಾಜಕಾರಣದಿಂದ — ವಯಸ್ಸಿನ ಮೂಲಕ — ರಾಯರು ನಿವೃತ್ತರಾಗಿದ್ದಂತೆ ಇದ್ದರೂ, ಇವರ ಸಾನ್ನಿಧ್ಯ ಕನ್ನಡಿಗರೆಲ್ಲರಿಗೂ ತುಂಬ ಇಷ್ಟವಾದುದಾಗಿದೆ. ಆದುದರಿಂದಲೇ ರಾಯರಿಗೆ ಚಿರಾಯುಷ್ಯವನ್ನೂ ಆರೋಗ್ಯಜೀವನವನ್ನೂ ಮನಃಪೂರ್ವಕ ಬಯಸುತ್ತೇನೆ.

ಜನಕ್ಕೆ ಬೇಕಾದುದು ಜೀವನಸೌಖ್ಯದ ರಾಜ್ಯ.

ಭಾರತದಲ್ಲಿ ಮುಂದಾಳುಗಳೆನಿಸಿಕೊಳ್ಳುವವರು ಇಂದು ಒಬ್ಬರ ಮೇಲೊಬ್ಬರು ಮಾಡುತ್ತಿರುವ ಆರೋಪಗಳನ್ನು ಕೇಳಿದ ಜನತೆಗೆ ಮುಂಗಾಣದೆ ಕಂಗೆಟ್ಟು ಹೋಗುವಂತಾಗಿದೆ. ಸ್ವಾತಂತ್ರ್ಯ-ಯುದ್ಧದ ಕಾಲದಲ್ಲಿ ತಮ್ಮ ತ್ಯಾಗ-ಸೇವೆಗಳ ಮೂಲಕ ಜನತೆಯ ಆದರ-ವಿಶ್ವಾಸಗಳಿಗೆ ಪಾತ್ರರಾಗಿದ್ದ ಮುಂದಾಳುಗಳೇ ಇಂದು ಪ್ರತ್ಯಕ್ಷ ಸ್ವಾತಂತ್ರ್ಯವನ್ನು ಅನುಭವಿಸಬೇಕಾಗಿ ಬಂದಿರುವಾಗ, ಒಬ್ಬೊಬ್ಬರು ಒಂದೊಂದು ಕಡೆಗೆ ಸಿಡಿದು ನಿಂತು, ಒಬ್ಬರನ್ನೊಬ್ಬರು ಬಾಯಿಗೆ ಬಂದಂತೆ ಆಡಿಕೊಳ್ಳಲು ತೊಡಗಿದ್ದಾರೆ. ಸ್ವಾತಂತ್ರ್ಯಯುದ್ಧದ ಕಾಲದಲ್ಲಿ, ಯಾವ ತತ್ತ್ವದ ವಿಚಾರವನ್ನೂ ಮಾಡದೆ ಮುಂದಾಳುಗಳಿಗೆ ಬೆಂಬಲವನ್ನಿತ್ತ ಜನಸಾಮಾನ್ಯರಿಗೆ, ಇಂದು ಯಾವ ಮುಂದಾಳು ಹೇಳುವುದು ಸತ್ಯವಿರಬಹುದೆಂಬುದೇ ತಿಳಿಯದಂತಾಗಿದೆ.

ನಮ್ಮ ಜನಸಾಮಾನ್ಯರಿಗೆ ಇಂದು ಯಾವುದೇ ಒಂದು ರಾಜಕೀಯ ತತ್ತ್ವದ ರಾಜ್ಯ ಬೇಕಾಗಿಲ್ಲ; ಜೀವನದಲ್ಲಿ ಸುಖ-ಶಾಂತಿಗಳನ್ನು ನೆಲೆಗೊಳಿಸುವ ರಾಜ್ಯ ಬೇಕಾಗಿದೆ. ಇಂತಹ ಸುಖ-ಶಾಂತಿಗಳನ್ನು ನೆಲೆಗೊಳಿಸುವುದಕ್ಕೆ ನಮ್ಮ ಮುಂದಾಳುಗಳಲ್ಲಿ ಸ್ವಾರ್ಥರಹಿತವಾದ ಜನತಾಕಲ್ಯಾಣದ ಇಚ್ಛೆಯೊಂದಿದ್ದರೆ ಸಾಕು. ಅದಕ್ಕಾಗಿ ಯಾವುದೊಂದು ರಾಜಕೀಯ ವಾದವನ್ನು ಪುರಸ್ಕರಿಸಲೇಬೇಕಾದ ಕಾರಣವಿಲ್ಲ. ಇಂದು ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷವೇ ನಿಸ್ವಾರ್ಥಭಾವದಿಂದ ಜನತೆಯ ಕಲ್ಯಾಣಕ್ಕಾಗಿ ದುಡಿಯುತ್ತ ಬಂದಿದ್ದರೆ, ಇನ್ನೊಂದು ಪಕ್ಷ ತಲೆದೋರಿ ನಿಲ್ಲಲಿಕ್ಕೆ ಅಸ್ಪದವೇ ಉಂಟಾಗುತ್ತಿದ್ದಿಲ್ಲ; ಜನತೆಯೂ ಅವಿಶ್ವಾಸಭಾವದಿಂದ, ಬೇರೊಂದು ಪಕ್ಷದವರಿಂದಲಾದರೂ ಸುಖಶಾಂತಿಗಳು ದೊರೆತಾವೆಂಬ ಆಶೆಯಿಂದ, ಬೇರೆ ಬೇರೆ ಪಕ್ಷಗಳ ಮಾತುಗಳಿಗೆ ಮರುಳಾಗಿ ಹೋಗುವುದು ಸಾಧ್ಯವಿರಲಿಲ್ಲ. ಹೆಮ್ಮೆಯಿಂದ ಸ್ವಾತಂತ್ರ್ಯೋತ್ಸವವನ್ನು ಮಾಡಿ ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರ ವಹಿಸಿಕೊಟ್ಟು, ಅದರ ಜಯಜಯಕಾರ ಮಾಡಿ, ಸುಖದ ಕನಸುಗಳನ್ನು ಕಾಣುತ್ತಲಿದ್ದ ಜನತೆಗೆ ಸಿಕ್ಕಿದ ಸುಖವೇನು ? ಉಪವಾಸ, ಬರಿಮೈ, ಸುಖದ ಆಶೆ ಕೂಡ ಇಲ್ಲದಂತಹ ಅಸಹ್ಯಜೀವನ ! ಕಾಯುವ ಬೇಲಿಯೆಂದು ತಿಳಿದುದೆಲ್ಲ ಮೇಯುವ ಹುಲಿಯಾಗಿ, ಎಲ್ಲರ ಎಲ್ಲವನ್ನೂ ತಿನ್ನಲು ತೊಡಗಿದೆ. ಧುರೀಣತೆಯ ಹೆಸರಿನಿಂದಲೂ ಸ್ವಾರ್ಥಸಾಧನೆ; ಸರಕಾರದ ಹೆಸರಿನಿಂದಲೂ ಸ್ವಾರ್ಥಸಾಧನೆ. ಜನತೆ ಯಾರನ್ನು ನಂಬಬೇಕು ? ಯಾರಿಗೆ ಮೊರೆಯಿಡಬೇಕು ?

ತ್ಯಾಗಶೀಲರೆಂಬ ಶ್ರದ್ಧೆಯಿಂದ ಕಂಡ ಕಾಂಗ್ರೆಸ್ಸಿನ ಮುಂದಾಳುಗಳ ಆಡಳಿತವೇ ಇಂತಹ ಸುಖ ಸುರಿಯಲು ಹಚ್ಚಿತೆಂದ ಮೇಲೆ, ಜನತೆಯ ವಿಶ್ವಾಸ ನಿಕ್ಕಪಕ್ಷದ ಮುಂದಾಳುಗಳ ಮೇಲೆ ಹೇಗೆ ಕೂಡಬೇಕು ? ಆದುದರಿಂದಲೇ ಬರಲಿರುವ ಚುನಾವಣೆಯ ಬಗ್ಗೆ ಜನಸಾಮಾನ್ಯರಲ್ಲಿ ಉತ್ಸಾಹವಿಲ್ಲವಿಷ್ಟೇ ಅಲ್ಲ;

ಪ್ರಜಾಪ್ರಭುತ್ವವೆಂಬುದನ್ನೇ ಅವರು ಸಾಶಂಕಭಾವದಿಂದ ನೋಡಲು ತೊಡಗಿದ್ದಾರೆ. ಆಡಳಿತದಲ್ಲಿ ಯಾರೇ ಬರಲಿ, ಅವರು ಸುಖದ ದಿನಗಳನ್ನು ತರಲಿ— ಎಂಬುದೇ ಅವರೆಲ್ಲರ ಹಾರೈಕೆ. ನಮ್ಮ ಕನ್ನಡ ಜನಸಾಮಾನ್ಯರಲ್ಲಂತೂ ಬೇರೆ ಬೇರೆ ಪಕ್ಷಗಳ ಕಲ್ಪನೆಯಿರುವವರು ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆಯಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಗೊತ್ತಿದ್ದ ಒಂದು ಪಕ್ಷವಾದ ಕಾಂಗ್ರೆಸ್ಸು ಅವರ ವಿಶ್ವಾಸವನ್ನು ಕಳೆದುಕೊಂಡುಬಿಟ್ಟಿದೆ. ಹೀಗಿರುವಾಗ, ನಮ್ಮ ಜನತೆ ಅಪೇಕ್ಷಿಸುತ್ತಿರುವ— ಸುಖಜೀವನವನ್ನುಂಟುಮಾಡುವಂತಹ—ಆಡಳಿತವನ್ನು ನಿರ್ಮಿಸಬಲ್ಲ ಧುರೀಣರು ನಮಗೆಲ್ಲಿಂದ ದೊರೆತಾರು ?

ಚುನಾವಣೆಯ ಸಿದ್ಧತೆ

ಬರಲಿರುವ ಮಹಾಚುನಾವಣೆಯ ಸಿದ್ಧತೆಯ ಮಾತುಗಳು ಎಲ್ಲೆಲ್ಲಿಯೂ ಕೇಳಬರುತ್ತಲಿವೆ. ಮಹತ್ವಾಕಾಂಕ್ಷಿಗಳೂ ಅಧಿಕಾರಲಾಲಸೆಯವರೂ ಆದ ಹಲವು ಜನರು ಚುನಾವಣೆಗೆ ಹುರಿಯಾಳಾಗಿ ನಿಲ್ಲುವ ಎತ್ತುಗಡೆ-ಏರ್ಪಾಡುಗಳನ್ನು ನಡೆಯಿಸಿದ್ದಾರೆ. ಸದ್ಯ ಅಧಿಕಾರದಲ್ಲಿರುವ ಕಾಂಗ್ರೆಸಿನ ಹುರಿಯಾಳುಗಳ ಮಾತನ್ನಂತೂ ಬೇರೆಯಾಗಿ ಹೇಳಲೆಬೇಕಿಲ್ಲ. ಅವರ ಸುರಾಜ್ಯದ ಆಡಳಿತದ ಅನುಭವ ಈಗಾಗಲೆ ಸಾಕಷ್ಟು ಬಂದಿದೆ. ಇನ್ನು ಬೇರೆ ಸುಸಂಘಟಿತ ಪಕ್ಷಗಳು ನಮ್ಮ ಕನ್ನಡನಾಡಿನಲ್ಲಿ ಇಲ್ಲ. ಆದರೂ ಕಾಂಗ್ರೆಸ್ ಹುರಿಯಾಳುಗಳು ಸ್ಪರ್ಧೆಯಲ್ಲಿ ಬೇರೆಯವರನ್ನು ಎದುರಿಸಬೇಕಾದುದು ಖಂಡಿತವಾದ ಮಾತು. ಚುನಾವಣೆಯಲ್ಲಿ ಸ್ಪರ್ಧಿಸಲು ಯಾವುದಾದರೊಂದು ತಾತ್ಪೂರ್ತಿಕ ಪಕ್ಷವನ್ನು ಸಂಘಟಿಸಿಕೊಂಡಾಗಲಿ, ಸ್ವತಂತ್ರರೀತಿಯಿಂದಾಗಲಿ, ಕಾಂಗ್ರೆಸ್ಸಿಗರಲ್ಲದ ಹುರಿಯಾಳುಗಳು ನಿಂತೇ ನಿಲ್ಲುವರು. ಆದರೆ ಹೀಗೆ ನಿಲ್ಲುವ ಹುರಿಯಾಳುಗಳಾದರೂ ನಿಜವಾಗಿ ಜನಹಿತದ ಬುದ್ಧಿಯಿಂದ ನಿಂತರೆ ಒಳ್ಳೆಯದು; ಅವರೂ ಅಧಿಕಾರದುರಾಶೆಯಿಂದಲೇ ನಿಂತವರಾದರೆ, ಜನತೆಯ ಕಲ್ಯಾಣದ ದಾರಿಗೆ ಮುಳ್ಳುಹರಡಿದಂತೆಯೆ ಸೈ. ಹುಲಿಯನ್ನು ಬಿಟ್ಟು ಕತ್ತೆಗಿರುಬಿನ ಕೆಳೆಯನ್ನು ಬಯಸಿದಂತಾದೀತು, ಇಂತಹರ ಪ್ರತಿನಿಧಿತ್ವದ ಪರಿಣಾಮ. ಆದುದರಿಂದ ಮತಾಧಿಕಾರವುಳ್ಳ ಪ್ರತಿಯೊಬ್ಬ ಕನ್ನಡಿಗನೂ ನಿಸ್ವಾರ್ಥಿಯಾದ— ಜನತಾಕಲ್ಯಾಣದ ಬುದ್ಧಿಯುಳ್ಳ ಹುರಿಯಾಳನ್ನೇ ಆರಿಸಿಕೊಟ್ಟು, ತನಗಿರುವ ಅಧಿಕಾರದ ಸದುಪಯೋಗಮಾಡಿಕೊಳ್ಳಬೇಕು. ನಂಟತನ, ಗೆಳೆತನ, ದಾಕ್ಷಿಣ್ಯಗಳ ಮೋಹದಿಂದ ಅನಧಿಕಾರಿಗಳನ್ನು ಆರಿಸಿ ಕೊಟ್ಟರೆ, ಆತ್ಮನಾಶಮಾಡಿಕೊಂಡಂತಾಗುವುದೆಂಬುದರ ಎಚ್ಚರ ಎಲ್ಲರಿಗೂ ಇರಬೇಕು.



BOMBAY OFFICE : Princess Street

ಏಜಂಟರು ಬೇಕು

ಜಯಂತಿಯನ್ನು ಮಾರಾಟ ಮಾಡಲಿಕ್ಕೆ ಕರ್ನಾಟಕದ ಬೇರೆ ಬೇರೆ ನಗರಗಳಲ್ಲಿ, ಪ್ರಾಮಾಣಿಕ ಏಜಂಟರು ಬೇಕು. ಯೋಗ್ಯ ಕಮಿಶನ್ ಕೊಡಲಾಗುವುದು. ಕರಾರುಗಳಿಗಾಗಿ ಪತ್ರವ್ಯವಹಾರ ಮಾಡಿ ತಿಳಿದುಕೊಳ್ಳಬೇಕು. ಮನೆ ಮನೆಗೂ ಇರಬೇಕಾದ ಈ ಪತ್ರಿಕೆಯನ್ನು ಮನೆಮನೆಗೂ ತಲ್ಪಿಸುವ ಏರ್ಪಾಡನ್ನು ಮಾಡಿ, ಕೈತುಂಬ ಕಾಸನ್ನೂ ಸಂಪಾದಿಸಿರಿ!

ವ್ಯ. ಜ.

ಸಾದರ ಸ್ವೀಕಾರ

★

೧೬. **ರಾಜ್ಯತೃಷ್ಣೆ** (ಸರ್ಗಗಳಲ್ಲಿ ಬರೆದ ಐತಿಹಾಸಿಕ ನಾಟಕ). ಬರೆದವರು ಶ್ರೀಕೃಷ್ಣ ಪಾಟೀಲ ಬೆಳಗಾಂವಿಯ ಸುವರ್ಣ ಭಾರತೀ ಗ್ರಂಥಮಾಲೆಯ ೪ನೆಯ ಕುಸುಮ. ಕ್ರೌ. ಅ. ೪೬ ಪುಟಗಳು. ಬೆಲೆ ೦-೧೨-೦.

೧೭. **ಅಪಾರಕರುಣೆ** (ಕವನ ಸಂಕಲನ) ಬರೆದವರು 'ರಸಿಕರಂಗ'. ಪ್ರಕಾಶಕರು ಪ್ರೊ. ರಂ. ಶ್ರೀ. ಮುಗಳಿ, ವಿಲಿಂಗ್ಡನ್ ಕಾಲೇಜ್, ಸಾಂಗಲಿ. ಕ್ರೌ ಅ. ೧೦೦ ಪುಟಗಳು. ಬೆಲೆ ಸುಂದರ ಪ್ರತಿಗೆ ೧-೮-೦ ಸಾದಾ ಪ್ರತಿಗೆ ೧-೦-೦.

೧೮. **ಬ್ಯಾಂಕ್ ವ್ಯವಸಾಯದ ಕೈಪಿಡಿ** (ಪರಿಚಯಾತ್ಮಕ ಗ್ರಂಥ) ಬರೆದವರು ಶ್ರೀ. ಬಿಂದುರಾವ್ ರಾಘವೇಂದ್ರರಾವ್ ಕೆಂಭಾವಿ ಬಿ. ಎ. (ಆನರ್ಸ್). ಧಾರವಾಡದ ಮಿಂಚಿನಬಳ್ಳಿಯ ೧೩ನೆಯ ವರ್ಷದ ೩ನೆಯ ಕುಡಿ. ಕ್ರೌ. ಅ. ೧೫೬ ಪುಟಗಳು. ಬೆಲೆ ಸುಂದರ ಪ್ರತಿಗೆ ೨-೮-೦ ಸಾದಾ ಪ್ರತಿಗೆ ೨-೦-೦.

೨೦. **ಕಾಂತಂ ಮತ್ತು ಶರದ್ರಾತ್ರಿಗಳು** (ಲಲಿತ ಚಿತ್ರಗಳ ಸಂಕಲನ). ಮೂಲ ತೆಲುಗು ಲೇಖಕರು ಶ್ರೀ. ಮುನಿಮಾಣಿಕ್ಯಂ ನರಸಿಂಹರಾವ್ ಅನುವಾದಕರು ಶ್ರೀ. ಪಿ ವೆಂಕೋಬಾಚಾರ್ಯ ಬಿ. ಎ. ಬಿ. ಟಿ. ಹುಬ್ಬಳ್ಳಿಯ ಆನಂದ ಗ್ರಂಥಮಾಲೆಯ ೨ನೆಯ ವರ್ಷದ ೧ನೆಯ ಕುಸುಮ. ಕ್ರೌ. ಅ. ೧೧೨ ಪುಟಗಳು. ಬೆಲೆ ೧-೬-೦.

೨೧. **ಹೈದರಾಬಾದ್ ಸಹಕಾರ ಪತ್ರಿಕೆ.** (ನಿಯತಕಾಲಿಕ) ಸಂಪಾದಕರು ಶ್ರೀಯುತರುಗಳಾದ ನರಸಿಂಹರಾಯರು, ಅನ್ವರಿ ಮಾಧವರಾಯರು, ಕೆ. ಆಯ್. ವಿದ್ಯಾಸಾಗರ, ಡಾ. ಆರ್. ವಿ. ರಾವ್ ಅವರು. ಹೈದರಾಬಾದಿನ ಕೇಂದ್ರ ಸಹಕಾರ ಸಮಿತಿಯವರು ಪ್ರಕಾಶಕರು. ರೊ. ಅ. ೪೮ ಪುಟಗಳು. ವಾ ಚಂ. ೪-೦-೦. ಬಿಡಿ ಸಂಚಿಕೆಗೆ ೧-೦-೦.

೨೨. **ಜೀವನ ಸಂಸಾರ** (ನಗೆಯಾಟ) ಲೇಖಕರು ಶ್ರೀ. ಸಗರ ಕೃಷ್ಣ ಇನಾಮದಾರರು. ಪ್ರಕಾಶಕರು ಕನ್ನಡ ಸಾಹಿತ್ಯ ಸಂಘ, ರಂಗಂಪೇಟೆ (ಸುರಪುರ). ಕ್ರೌ. ಅ. ೧೬ ಪುಟಗಳು. ಬೆಲೆ ೦-೪-೦.

೨೩. **ಅರುಳು-ಮರುಳು** (ಸಾಮಾಜಿಕ ಕಾದಂಬರಿ) ಬರೆದವರು ಶ್ರೀ. ಅ. ನ. ಕೃಷ್ಣರಾಯರು. ಪ್ರಕಾಶಕರು ಆನಂದ ಬ್ರದರ್ಸ್, ಬೆಂಗಳೂರು ೨. ಕ್ರೌ. ಅ. ೩೨೨ ಪುಟಗಳು. ಬೆಲೆ ೪-೮-೦.

೨೪. **ಕಿತ್ತೂರ ರಾಣಿ ಚೆನ್ನಮ್ಮ** (ರೇಡಿಯೋ ನಾಟಕ) ಬರೆದವರು ಶ್ರೀ ಅ. ನ. ಕೃಷ್ಣರಾಯರು. ಪ್ರಕಾಶಕರು ಆನಂದ ಬ್ರದರ್ಸ್, ಬೆಂಗಳೂರು. ಕ್ರೌ. ಅ. ೩೮ ಪುಟಗಳು. ಬೆಲೆ -೧೨-೦

೨೫. **ಆಲ್ ಕರ್ನಾಟಕ ಡಿರೆಕ್ಟರಿ** (ಕರ್ನಾಟಕ ವೈಭವ ಪ್ರಕಾಶ-ಇಂಗ್ಲೀಷಿನಲ್ಲಿ). ಪ್ರಕಾಶಕರು ದೀಕ್ಷಿತ ಪ್ರಿಂಟಿಂಗ್‌ಪ್ರೆಸ್ ದಾವಣಗೇರಿ. ಡೆ. ೩ದ ೨೦೦ ಪುಟಗಳಲ್ಲದೆ, ಬೇರೆ ಚಿತ್ರಪುಟಗಳು. ಕೊನೆಗೊಂದು ಕರ್ನಾಟಕದ ದೊಡ್ಡ ನಕ್ಷೆ. ಬೆಲೆ ೫-೦-೦.

ಕರ್ನಾಟಕದ ವಿವಿಧಮುಖದ ಪರಿಚಯಾತ್ಮಕ ಲೇಖನಗಳಲ್ಲದೆ, ಕರ್ನಾಟಕದ ವ್ಯಾಪಾರೋದ್ಯಮಿಗಳ ಪರಿಚಯವೂ ಇದರಲ್ಲಿ ಬಂದಿದ್ದು, ಎಲ್ಲರಿಗೂ ಉಪಯುಕ್ತವಾದುದಾಗಿದೆ. ಇಂತಹದೊಂದು ಪ್ರಕಟನೆಯ ಸಾಹಸಕಾರ್ಯವನ್ನು ಕೈ ಕೊಂಡು, ಯಶಸ್ವಿಯಾಗಿ ನಡೆಯಿಸಿದುದು ತುಂಬ ಅಭಿನಂದನೆಯ **ಸಂಗತಿ.**

೨೬ **The Kanarite** (ಕ್ಯಾನರಾ ಕಾಲೇಜ್ ಮಿಸಿಲೆನಿ) ಮುಖ್ಯ ಸಂಪಾದಕರು ಶ್ರೀ. ಜಿ. ಎಸ್. ಆಮೂರ ಎಂ. ಎ. ಪ್ರಕಾಶಕರು ಕ್ಯಾನರಾ ಕಾಲೇಜು, ಕುಮಟಾ. ಕ್ರೌ. ೩ದ ೬೬ ಪುಟಗಳು.

೨೭. **ಭಾರತದಲ್ಲಿ ಕಮ್ಯುನಿಸ್ಟರ ಹಿಂಸಾಚಾರ** (ಪರಿಚಯಾತ್ಮಕ). ಭಾರತ ಸರಕಾರದ ಗೃಹಶಾಖೆಯು ಪ್ರಕಟಿಸಿದ ಇಂಗ್ಲಿಷ ಪುಸ್ತಿಕೆಯ ಕನ್ನಡ ರೂಪಾಂತರ. ಪ್ರಕಾಶಕರು ಮುಂಬಯಿ ಸರಕಾರದ ಪ್ರಸಿದ್ಧಿ ಶಾಖೆ. ಡೆ. ಅ. ೬೦. ಪುಟ.

೨೮ **ಭೂಗತ ಸಂಘಟನೆ** (ಪರಿಚಯಾತ್ಮಕ). ಮುಂಬಯಿ ಸರಕಾರದ ಪ್ರಸಿದ್ಧಿ ಶಾಖೆಯ ಪ್ರಕಟನೆ. ಕ್ರೌ. ಅ. ೧೪ ಪುಟಗಳು

೨೯. **ಹೆಚ್ಚು ಆಹಾರಬೆಳೆಯಲು ಸಹಾಯ** (ಪರಿಚಯಾತ್ಮಕ). ಮುಂಬಯಿ ಸರಕಾರದ ಪ್ರಸಿದ್ಧಿಶಾಖೆಯ ಪ್ರಕಟನೆ. ಕ್ರೌ. ಅ. ೨೮ ಪುಟಗಳು.

೩೦ **ಮಂತ್ರಿ, ಕಲೆಕ್ಟರ್ ಮತ್ತು ನೀವು** (ಮಾನ್ಯ ಮಂತ್ರಿ ಮುರಾರಜಿ ದೇಸಾಯಿಯವರು ಮಾಡಿದ ಒಂದು ಭಾಷಣದ ಸಾರ). ಮುಂಬಯಿ ಸರಕಾರದ ಪ್ರಸಿದ್ಧಿ ಶಾಖೆಯ ಪ್ರಕಟನೆ. ಡೆ. ಅ. ೩೪ ಪುಟಗಳು. ಬೆಲೆ ೦-೧-೦.

೩೧. **ರಕ್ತಾಂಜಲಿ** (ಅನುವಾದಿತ ಗ್ರಂಥ). ಮೂಲ ಲೇಖಕರು ಜೆಕೊಸ್ಲೋವಾಕಿಯಾದ ಪುರೋಗಾಮಿ ಜೂಲಿಯಸ್

ಪೂಚಿನ್ ಅವರು. ಅನುವಾದಕರು ಶ್ರೀ. ವಾಸುದೇವ. ಪ್ರಕಾಶಕರು ಪುರೋಗಾಮಿ ಪ್ರಕಾಶನ, ಚಾಮರಾಜಪೇಟೆ, ಬೆಂಗಳೂರು. ಕ್ರೌ. ಅ. ೧೭೦ ಪುಟ. ಬೆಲೆ ೧-೮-೦.

೩೨. **ಪಾಶ್ಚಾತ್ಯ ಕಲಾವಿದರು** (ವ್ಯಕ್ತಿಪರಿಚಯ ಸಂಕಲನ) ಬರೆದವರು ಶ್ರೀ. ಕಲಮದಾನಿ ಗುರುರಾಯರು. ಹುಬ್ಬಳ್ಳಿಯ ಸಂಜೀವಿನೀ ಗ್ರಂಥಮಾಲೆಯ ೪ನೆಯ ವರ್ಷದ ೩೪ನೆಯ ಗ್ರಂಥ. ಕ್ರೌ. ಅ. ೯೨ ಪುಟಗಳು. ಬೆಲೆ ೩-೦-೦.

೩೩. **ಬೇಟೆಯ ನಾಯಿ** (ಪತ್ತೇದಾರಿ ಕಾದಂಬರಿ). ಬರೆದವರು ಶ್ರೀ. ಹರಿಜಾತ. ಇದೂ ಸಂಜೀವಿನಿ ಗ್ರಂಥಮಾಲೆಯ ಪ್ರಕಟನೆ. ೫ನೆಯ ವರ್ಷದ ೧ನೆಯ ಗ್ರಂಥ. ಕ್ರೌ ಅ ೧೬೮ ಪುಟಗಳು. ಬೆಲೆ ೨-೮-೦.

೩೪. **ಕವಿಜಿಹ್ವಾಬಂಧನ** (ಪ್ರಾಚೀನ ಛಂದಶ್ಶಾಸ್ತ್ರ ವಿಷಯಕ ಗ್ರಂಥ) ಈಶ್ವರಕವಿ ವಿರಚಿತ. ಸಂಪಾದಕರು ವಿದ್ಯಾರತ್ನ ಆರ್. ಎಸ್. ಪಂಚಮುಖಿ ಎಂ ಎ. ಡೈರೆಕ್ಟರ್ ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ. ಡೆ. ಅ. ೩೪+೫೪+೧೬ ಪುಟಗಳು. ಬೆಲೆ ೧-೪-೦.

೩೫. **ಸಂಪಗೆ** (ಕಥಾಸಂಕಲನ) ಬರೆದವರು ಶ್ರೀ. ನರೇಂದ್ರ ಬಾಬು. ಪ್ರಕಾಶಕರು ಹಂಸ ಲಿಮಿಟೆಡ್, ಮೈಸೂರು. ಕ್ರೌ. ಅ. ೭೬ ಪುಟಗಳು. ಬೆಲೆ ೧-೨-೦.

೩೬. **ಗ್ರಾಮಾಭ್ಯುದಯ ಮತ್ತು ಸಹಕಾರ** (ಮಾಸಪತ್ರಿಕೆಯ ಯುಗಾದಿ ವಿಶೇಷಸಂಚಿಕೆ) ಸಂಪಾದಕರು ಶ್ರೀ. ಜೀರಿಗೆ ಕಟ್ಟಿಬಸವಪ್ಪ ಬಿ. ಎ. ಅವರು. ಮೈಸೂರು ಸರಕಾರದ ಗ್ರಾಮಾಭ್ಯುದಯ ಶಾಖೆಯ ಪ್ರಕಾಶನ. ಕ್ರೌ. ೧/೮ ದ ೧೫೨ ಪುಟಗಳು. ಬೆಲೆ ?

೩೭. **ಹೊಸಗನ್ನಡ ಪಂಚತಂತ್ರ** (ಮೂಲ ಸಂಸ್ಕೃತದ ಅನುವಾದ). ಅನುವಾದಕರು ' ದೇವುಡು '. ಪ್ರಕಾಶಕರು ಶ್ರೀಕೃಷ್ಣ ಅಂಡ್ ಕೋ. ಬೆಂಗಳೂರು ೨ ಕ್ರೌ. ಅ. ೨೭೬ ಪುಟಗಳು. ಬೆಲೆ ೪-೦-೦.

೩೮. **ಈಜಿಪ್ಟಿನ ಕಥೆ** (ಇತಿಹಾಸ ಗ್ರಂಥ) ಲೇಖಕರು ಶ್ರೀ. ಆರ್. ಹನುಮಪ್ಪ ಎಂ ಎ, ಎಲ್ ಎಲ್. ಬಿ., ಡಿ. ಕಾಂ. ಅವರು. ಪ್ರಕಾಶಕರು ವೆಂಕಟೇಶ್ವರ ಪ್ರಕಟನಾಲಯ, ೨೪೪ ಈಸ್ಟ್ ರೋಡು, ವಿಶ್ವೇಶ್ವರಪುರಂ, ಬೆಂಗಳೂರು ನಗರ. ಕ್ರೌ. ಅ. ೧೧೨ ಪುಟಗಳು ಬೆಲೆ ೧-೦-೦.

೩೯. **ಮಹರ್ಷಿ ದೇವೇಂದ್ರನಾಥ ಠಾಕೂರ** (ಜೀವನ ಚರಿತ್ರೆ) ಬರೆದವರು ಶ್ರೀ ' ಧನ್ವಂತರಿ 'ರು ಪ್ರಕಾಶಕರು ಎಚ್. ಎಸ್. ರಾವ್ ಬ್ರದರ್ಸ್, ಬೆಂಗಳೂರು ನಗರ. ಕ್ರೌ. ಅ. ೬೬ ಪುಟಗಳು. ಬೆಲೆ ೦-೧೪-೦.

೪೦. **ಹೆಣ್ಣಾಸ್ಪರ್ಟ್ ಮತ್ತು ಶಾರದಾ** (ಎರಡು ಏಕಾಂಕಗಳು) ಬರೆದವರು ಶ್ರೀ. ಕೆ. ಎ. ಕುಲಕರ್ಣಿ, ಗದಗ. ಪ್ರಕಾಶಕರು ಶ್ರೀ. ಎಂ ಜೀವನ, ತರಂಗ ಪ್ರಕಟನಾಲಯ, ಗದಗ. ಕ್ರೌ ಅ. ೪೬ ಪುಟಗಳು. ಬೆಲೆ ೦-೮-೦.

೪೧. **ಟ್ವಿನ್ ರೆಕಾರ್ಡುಗಳು**— ನಂ FT 17327 ಮತ್ತು FT. 17328. (ಕನ್ನಡ ಹಾಡುಗಳು).

ಮೊದಲನೆಯ ರೆಕಾರ್ಡಿನಲ್ಲಿ ' ಜಯ ಜಯ ಜಯ ಜಯ ' ಮತ್ತು ' ಮತಿಯುಳ್ಳ ಪತಿವ್ರತಾ ' ಎಂಬೆರಡು ಜಾನಪದ ಗೀತಗಳಿದ್ದು ಶ್ರೀಮತಿ ಗಂಗೂಬಾಯಿ ಮಣಿಕಟ್ಟಿ ಮತ್ತು ಮೇಳದವರು ಕೂಡಿ ಹಾಡಿರುವರು.

ಎರಡನೆಯ ರೆಕಾರ್ಡಿನಲ್ಲಿ ' ಸೋಮಲಿಂಗ ' ಎಂಬ ಜಾನಪದ ಕವಿಯಿಂದ ನಿರ್ಮಿತವಾದ ' ಕನ್ಯಾದಾನ ' ಎಂಬ ಸೋಬಾನೆ ಪದವೇ ಎರಡೂ ಪಕ್ಕಗಳಲ್ಲಿ ಮುದ್ರಿತವಾಗಿರುವುದು. ಹಾಡಿದವರು ಶ್ರೀ ಸೋಮಲಿಂಗಪ್ಪ ಮತ್ತು ಪೂಜಾರ ನೀಲಪ್ಪ.

೪೨. **ಹೀಜ್ ಮಾಸ್ಟರ್ಸ್ ವ್ಹಾಯ್ಸ್** ಕಂಪನಿಯ ಕನ್ನಡ ರೆಕಾರ್ಡುಗಳು. ನಂ. N. 25954 ಮತ್ತು N. 25955.

ಎರಡೂ ರೆಕಾರ್ಡುಗಳ ಎರಡೂ ಮಗ್ಗುಲುಗಳಲ್ಲಿಯೂ ಶ್ರೀ. ಬಸಪ್ಪಾ ಮಾಸ್ತರ, ಹುಲಕುಂದ ಅವರಿಂದ ರಚಿತವಾದ ಕಿತ್ತೂರ ರುದ್ರಸರ್ಜ ಮತ್ತು ರಂಜನಿಯರ ಮಿಲನ—ಎಂಬ ಕಥಾತ್ಮಕ ಲಾವಣಿಯು ಧ್ವನಿಮುದ್ರಿತವಾಗಿದೆ. ಮುಂಬೈ ಗ್ರಾಮೋಫೋನ್ ಕಂಪನಿಯವರು ಇತ್ತೀಚೆಗೆ, ಕನ್ನಡ ಜಾನಪದಗೀತಗಳನ್ನು ಹೆಚ್ಚು-ಹೆಚ್ಚಾಗಿ ಹೊರಡಿಸುತ್ತಿರುವುದು ಸಂತೋಷದ ಸಂಗತಿ.

೪೩. **ಕಂದನ ಕೈಪಿಡಿ** (ಸಚಿತ್ರ ವಿಶೇಷ ಸಂಚಿಕೆ). ಸಂಪಾದಕ ಮಂಡಲಿಯಲ್ಲಿ ಶ್ರೀ. ತ. ಸು. ಶಾಮರಾವ್ ಮೊದಲಾದ ೧೫ ಜನರಿದ್ದಾರೆ. ಪ್ರಕಾಶಕರು ಶಿಶುಸಾಹಿತ್ಯ ಸಂಘ. ವನಿತಾಸದನ, ಜಯನಗರ— ಮೈಸೂರು ಕ್ರೌ. ೧/೮ ದ ೩೨ ಪುಟಗಳು.

ನಿಮ್ಮ ಮನೆ, ಹೊಲ ಅಥವಾ ಕಾರಖಾನೆಯಲ್ಲಿ ನೀರಿನ ಸಮಸ್ಯೆ ಪರಿಹಾರವಾಗಬೇಕಾಗಿದ್ದರೆ

ಕಿರ್ಲೋಸ್ಕರ್

'ಸೆಂಟ್ರಿ ಫ್ಯೂಗಲ್ ಪಂಪ'ನ್ನೇ

ಉಪಯೋಗಿಸಿರಿ.



ಸೆಂಟ್ರಿ ಫ್ಯೂಗಲ್ ಪಂಪುಗಳು

ಯು. ಪಿ. ಟೈಪ್ ಪಂಪ್

ಒಕ್ಕಲತನ ಮತ್ತು ಕಾರಖಾನೆಯ ಉದ್ಯೋಗಗಳಿಗೆ ಅತ್ಯಂತ ಉಪ-ಯುಕ್ತವಾದುದು. ತಾಳಿಕೆ, ಭದ್ರವಾದ ರಚನೆ ಮತ್ತು ಆಕೃತಿ ಇವುಗಳ ಮೂಲಕ ದಿನದಿನಕ್ಕೂ ಬೆಳೆಯುತ್ತಿರುವ ಲೋಕಪ್ರಿಯತೆಯನ್ನು ಪಡೆಯುತ್ತಲಿದೆ ಈ ಪಂಪು

ಬಿ. ಎಸ್. ಎ. ಪಂಪು

ಅತ್ಯಂತ ಆಧುನಿಕ ಹಾಗು ಯಾಂತ್ರಿಕ ರಚನೆಯ ಮೇರೆಗೆ ತಯಾರಿಸಲ್ಪಟ್ಟಿರುವುದು. ಗಿರಾಕಿಗೆ ಕಳಿಸುವ ಮುನ್ನ ಪ್ರತಿಯೊಂದು ಪಂಪನ್ನು ಸೂಕ್ಷ್ಮವಾಗಿ ಪರೀಕ್ಷಿಸಲಾಗುತ್ತಿದೆ. ಈ ಪಂಪುಗಳು ಔದ್ಯೋಗಿಕ ಹಾಗು ಒಕ್ಕಲತನ ಕ್ಷೇತ್ರಗಳಲ್ಲಿ ವ್ಯಾಪಕವಾಗಿ ಉಪಯೋಗಿಸಲ್ಪಡುತ್ತವೆ.



ಕಿರ್ಲೋಸ್ಕರ ಬಂಧುಗಳು ಲಿ: ಕಿರ್ಲೋಸ್ಕರವಾಡಿ

Printed by V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar—3335 51.

JAYANTI

★

AUGUST

★

1951

★

ಆಗಸ್ಟ

●

೧೯೫೧

●

ಈ ಸಂಚಿಕೆಯಲ್ಲಿ

ಶ್ರೀ ಎನ್. ವಿ. ಗಾಡಗೀಳ, ಕೇಂದ್ರ
ಕಾರ್ಮಿಕ ಹಾಗು ಲೋಕೋಪಯೋ
ಮಂತ್ರಿಗಳು.
ಶ್ರೀ ದ. ರಾ. ಬೇಂದ್ರೆ. ಎಮ್. ಎ.
ಶ್ರೀ. ವಿ ಎಸ್. ಕರ್ಕಿ, ಎಮ್. ಎ.
ಶ್ರೀ. ದಿನಕರ ದೇಸಾಯಿ, ಎಮ್. ಎ.
ಮುಂತಾದವರ ಲೇಖನ, ಕವನಗಳು
ಶ್ರೀ. ಅ. ನ. ಕೃ. ಅವರ ಕಿತ್ತೂರ ಚೆ
ಎಂಬ ರೇಡಿಯೋ ರೂಪಕದ ಮೇಲೆ
ಶ್ರೀ. ಬೆಟಗೇರಿ ಕೃಷ್ಣಶರ್ಮರ ವಿ
ಇವುಗಳನ್ನು ಓದಬಹುದು.

★

ಕರ್ನಾಟಕ ವಿಶ್ವವಿದ್ಯಾಲಯದ ಜನನಿಯುಕ್ತ ಉಪಕುಲಗುರು
ಶ್ರೀ. ಚ. ಚ. ಹುಲಕೋಟಿಯವರು

ಸಂಪುಟ ೧೪ | ೧ ನೆಯ ಆಗಸ್ಟ ೧೯೫೧ | ಸಂಚಿಕೆ ೩

ಈ ಸಂಚಿಕೆಯಲ್ಲಿ:

ಭಾರತ ಸ್ವಾತಂತ್ರ್ಯದ ೪ನೆಯ ವರ್ಷ (ಸಂಪಾದಕೀಯ)
ಸಂಪಾದಕರು ೮೧
ನಾಡನಡೆ (ಪ್ರಾಸಂಗಿಕ ಟಿಪ್ಪಣಿಗಳು)
'ಕಾಲಜ್ಞರನ' ೮೩
ಕನ್ಯಾಪೃಶ್ನೆ (ಸಾಮಾಜಿಕ ರೂಪಕ)
ತಿರುಪತಿ ಹನುಮಸಾಗರ, ಹೈದರಾಬಾದ್ ೮೫
ನಮ್ಮ ನಾಡಿನ ನಗೆಯ ಕಥೆಗಳು (ಜಾನಪದ ಸಾಹಿತ್ಯ ಪರಿಚಯ)
ಶ್ರೀ. ದ. ರಾ. ಬೇಂದ್ರೆ ಎಂ. ಎ. ಸೊಲ್ಲಾಪುರ ೯೧
ವಿರಾಮಲಾಗು ವಿರಾಮಲಿಕೆ (ಕವನ)
ಡಾ. ಡಿ ಎಸ್. ಕರ್ಕಿ ಎಂ. ಎ, ಪಿಎಚ್. ಡಿ. ಬೆಳಗಾಂವಿ ೯೪
ಜನತೆಯ ಸೌಭಾಗ್ಯ (ಕವನ)
ಶ್ರೀ ದಿನಕರ ದೇಸಾಯಿ ಎಂ. ಎ. ಮುಂಬಯಿ ... ೯೪
ಕಂಡೆ ನಾನು ಮೃಗೇಂದ್ರನ (ಅನುಭವಚಿತ್ರ)
ಮಾನ್ಯ ಮಂತ್ರಿ ಶ್ರೀ ಎನ್. ವಿ ಗಾಡಗೀಳ, ದಿಲ್ಲಿ ೯೫
ಲಂಡನ್ನಿನ ಟಾಯಿಮ್ಸ್ ಪತ್ರಿಕೆ (ಪರಿಚಯಾತ್ಮಕ ಲೇಖನ)
ಶ್ರೀ ಎ. ಎಸ್. ರಾಮಕೃಷ್ಣ, ಮಣಿಪಾಲ-ಉಡುಪಿ ೧೦೨
ಚಿತ್ರಗಳು (ಅನುವಾದಿತ ಕಥೆ)
ಶ್ರೀ. ಕೆ. ಜಿ. ನಾಯಕ, ಹೈದರಾಬಾದ್ ೧೦೯
ಪಥಿಕ (ಕವನ)
ಶ್ರೀ. ಚೆನ್ನವೀರ ಕಣವಿ ಬಿ. ಎ. (ಆನರ್ಸ್), ಧಾರವಾಡ ೧೧೨
ದಿವ್ಯದರ್ಶನ (ಕವನ)
ಶ್ರೀ. ಪಾಲಕೆರೆ ಅನ್ನದಾನಿ ಬಿ ಎ. (ಆನರ್ಸ್) ಬೆಳಗಾಂವಿ ೧೧೨
ಆಹ್ವಾನ (ಕವನ)
ಶ್ರೀ. ಎಸ್. ಎಸ್. ಬಸುಪಟ್ಟದ ಎಂ. ಎ, ಗುಳೇದಗುಡ್ಡ ೧೧೨
ಕ್ರೈಸ್ಟ್ ಕಾರ್ಯಾಸಂಸ್ಥೆಯ ಶತಮಾನೋತ್ಸವ (ಪರಿಚಯ)
'ಭಾಸ್ಕರ' ೧೧೩
ಪುಸ್ತಕವಿಮರ್ಶೆ
ಶ್ರೀ. ಬೆಟಗೇರಿ ಕೃಷ್ಣಶರ್ಮ ಮತ್ತು
ಬಿ. ಪಿ ಎಸ್. ರಾವ್. ೧೧೬
ವಿಮರ್ಶೆಯ ಶಿಕ್ಷಣರಂಗದ ಬೇಡಿಕೆ (ಎರಡು ಪತ್ರಗಳು)
ಜಯಂತಿಯ ವಾಚಕರಿಬ್ಬರು ೧೧೯
ಸಾದರಸ್ವೀಕಾರ ೧೨೦

ವಿ. ಸಂ:— ಈ ಸಂಚಿಕೆಯ ಮುಖಪುಟದ ಮೇಲೆ ಪ್ರಕಟವಾದ ಶ್ರೀಮಾನ್ ಹುಲಕೋಟಿಯವರ ಛಾಯಾಚಿತ್ರದ ಪಡಿಯಚ್ಚು ಸಂಯುಕ್ತ ಕರ್ನಾಟಕ ಕಾರ್ಯಾಲಯದವರ ಕೃಪೆಯಿಂದ ದೊರೆತಿದೆ.

ಕಳೆದ ಸಂಚಿಕೆಯ ಮೇಲೆ ಪ್ರಕಟವಾದ ಶ್ರೀಮಾನ್ ಮಾಸ್ತಿಯವರ ಪಡಿಯಚ್ಚು ಶ್ರೀ. ಎಸ್. ಜಿ. ಕುಲಕರ್ಣಿ (ಸಾಧನ ಪ್ರೆಸ್) ಅವರ ಕೃಪೆಯಿಂದ ದೊರೆತುದು. ಕಳೆದ ಸಂಚಿಕೆಯಲ್ಲಿ ಈ ಮಾತನ್ನು ಹೇಳಬೇಕಾದುದು ತಪ್ಪಿ ಉಳಿದಿದೆ.

ಸಂ. ಜ.

ಶರತ್ ಪ್ರಕಾಶನಮಂದಿರ

ವಿಜಯ ರೋಡು— ಧಾರವಾಡ

ಕನ್ನಡದಲ್ಲಿಯ ಸುಪ್ರಸಿದ್ಧ ಲೇಖಕರ ಲಲಿತಸಾಹಿತ್ಯಗ್ರಂಥಗಳನ್ನೂ ಜೀವನಸ್ವಾಸ್ಥ್ಯಕ್ಕೆ ಸಂಬಂಧಿಸಿದ ವಿಚಾರಪ್ರಬೋಧಕ ಗ್ರಂಥಗಳನ್ನೂ ಹಳೆಯ ಕನ್ನಡ ಗ್ರಂಥಗಳನ್ನೂ ಒಳ್ಳೆಯ ರೀತಿಯಿಂದ ಸಂಪಾದಿಸಿ, ಸುಂದರವಾಗಿ ಪ್ರಕಟಿಸುವುದೇ ಈ ಮಂದಿರದ ಉದ್ದೇಶ.

ಮೊದಲನೆಯ ಪ್ರಕಟನೆಯಾಗಿ

"ಬೆಳವಡಿ ಮಲ್ಲಮ್ಮ
ಮತ್ತು
ಬೇರೆ ರೂಪಕಗಳು"

ಎಂಬ 'ಆನಂದಕಂದರ' ರೂಪಕಸಂಕಲನ ಪ್ರಕಟವಾಗುವುದು

'ಆನಂದಕಂದ'ರ ಹಲವು ರಸಕೃತಿಗಳು ಈ ಪ್ರಕಾಶನ ಮಂದಿರದಿಂದ ಒಂದೊಂದಾಗಿ ಪ್ರಕಟವಾಗುತ್ತ ಹೋಗುವುವಲ್ಲದೆ, ಬೇರೆಯವರ ಗ್ರಂಥಗಳೂ ಬೆಳಕಿಗೆ ಬರುವುವು.

ಎರಡು ರೂಪಾಯಿ ಇಡುಗಂಟನ್ನು ಸಲ್ಲಿಸಿ ಮಂದಿರದ ಗ್ರಾಹಕಸದಸ್ಯರಾದವರಿಗೆ, ಪ್ರಕಟವಾಗುವಪುಸ್ತಕಗಳನ್ನೆಲ್ಲ ಕ್ಕಿ ಬೆಲೆಗೆ ಕೊಡಲಾಗುವುದು. ಇಷ್ಟವಿದ್ದವರು ಇಡುಗಂಟಿನ ಹಣದೊಂದಿಗೆ ಕಾಗದ ಬರೆದು, ತಮ್ಮ ವಿಳಾಸವನ್ನು ರಜಿಸ್ಟರ್ ಮಾಡಿಸಬೇಕು.

ಉತ್ತಮ ಗ್ರಂಥಭಾಂಡಾರ ಮನೆಮನೆಯಲ್ಲಿಯೂ ನೆಲೆಗೊಳ್ಳಬೇಕು.

ಗ್ರಂಥಭಾಂಡಾರವೇ ಹೊಸಕಾಲದ ದೇವಮಂದಿರ!

ಶ್ರೀ. ಎಸ್. ಡಿ. ಇನಾಮದಾರ, ಸಂಚಾಲಕ

ಜಯಂತಿ

ಸಂ. ೧೪. ಸಂ. ೪.

ಕುಟುಂಬದಲ್ಲಿಯ
ಪ್ರತಿಯೊಬ್ಬರೂ ಓದಿ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಪತ್ರಿಕೆ.

★

ಸಂಪಾದಕರು :
ಶ್ರೀ ಬೆಟಗೇರಿ ಕೃಷ್ಣಶರ್ಮ

★

ವ್ಯ. ಸಂಪಾದಕರು :
ಶ್ರೀ. ಎಲ್. ಜೆ. ಬೇಂದ್ರೆ.

●

ಪ್ರಕಾಶಕರು :
ಶ್ರೀ. ಎಸ್. ವಿ. ಮೊಳ್ಳಿಗಟ್ಟಿ.

★

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

●

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ.

★

ಜಾಹಿರಾತು ಕೊಡಬಯಸುವವರು
ದರಗಳಿಗಾಗಿ
ವ್ಯವಸ್ಥಾಪಕರಿಗೆ ಬರೆಯಬೇಕು.

★

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

★

ಸಂಪಾದಕೀಯ

ಭಾರತ ಸ್ವಾತಂತ್ರ್ಯದ ನಾಲ್ಕನೆಯ ವರ್ಷ

ಇದೇ ತಿಂಗಳ ಹದಿನೈದನೆಯ ದಿನಾಂಕಕ್ಕೆ ಭಾರತವು ತನ್ನ ಸ್ವಾತಂತ್ರ್ಯದ ಆರನೆಯ ವರ್ಷವನ್ನು ಪೂರ್ತಿಗೊಳಿಸುವುದು. ' ಸ್ವಾತಂತ್ರ್ಯ ' ಎಂಬ ಶಬ್ದವು ಸುಖ-ಶಾಂತಿಗಳ ಅಸ್ತಿತ್ವ, ಸಂವರ್ಧನೆಗಳನ್ನು ಸೂಚಿಸುವಂತಹದಾದರೂ, ಇಂದು ಭಾರತವು ಅನುಭವಿಸುತ್ತಲಿರುವ ಸ್ವಾತಂತ್ರ್ಯದಲ್ಲಿ ಸುಖಕ್ಕೂ ಎಡೆಯಿಲ್ಲ; ಶಾಂತಿಗೂ ಎಡೆಯಿಲ್ಲ.

ಯಾವುದೇ ವಸ್ತುವಾಗಲಿ, ಅವಸ್ಥೆಯಾಗಲಿ, ಅದನ್ನು ಸುಪರಿಣಾಮಕರವಾಗಿ ಅನುಭವಿಸಲಿಕ್ಕೆ ವಾತಾವರಣವು ಅನುಕೂಲವಾಗಿರಬೇಕಲ್ಲದೆ, ದೇಶದ ಜನತೆಯಲ್ಲಿಯೂ ವಿಶಿಷ್ಟರೀತಿಯ ಸಂಸ್ಕೃತಿಯು ಬೆಳೆದಿರಬೇಕಾಗುತ್ತದೆ. ಇವೆರಡೂ ನಮ್ಮ ದೇಶದಲ್ಲಿ ಇವೆಯೆ ?

ಭಾರತೀಯರ ಸ್ವಾತಂತ್ರ್ಯದ ಸುಖ-ಶಾಂತಿಮಯ ಜೀವನಕ್ಕೆ ಇಂದಿನ, ಜಾಗತಿಕ ಪ್ರಕ್ಷುಬ್ಧ ರಾಜಕಾರಣವು ತಡೆಯನ್ನೊಡ್ಡುತ್ತಲಿದೆಯೇನೋ ಸರಿಯೆ ! ಪರ್ವತದ ಮೇಲೆ ಮಳೆ ಬಿದ್ದರೂ, ದೂರದ ಬಯಲುನೆಲದಲ್ಲಿ ವಾಸಿಸುವ ಜನರಿಗೆ ಹೊಳೆ-ಹಳ್ಳಗಳ ಕಲಕುನೀರನ್ನೆ ಕುಡಿಯಬೇಕಾಗುವುದು. ಹಾಗಾಗಿದೆ ಇಂದಿನ ಭಾರತೀಯರ ಪರಿಸ್ಥಿತಿ. ಕಳೆದ ಮಹಾಯುದ್ಧದ ಪ್ರತ್ಯಕ್ಷ ಸಂಬಂಧವು ಭಾರತಕ್ಕೆ ಇರಲಿಲ್ಲವಾದರೂ, ಯುದ್ಧೋತ್ತರದ ಆರ್ಥಿಕಮುಗ್ಗಟ್ಟು ಎಲ್ಲ ದೇಶಗಳಂತೆ ಭಾರತದ ಜೀವವನ್ನೂ ತಿನ್ನಲು ತೊಡಗಿದೆ. ಮಹಾಯುದ್ಧದ ಕಾರಣದಿಂದ ಆ ಕಾಲದ ಭಾರತ ಸರಕಾರವು, ಬ್ರಿಟಿಷರಿಗೆ ಕೊಟ್ಟ ದಾನ, ಸಾಲ, ಕಾಣಿಕೆಗಳ ಮೂಲಕ, ಭಾರತವನ್ನು ಬರಿಮನೆಯನ್ನಾಗಿ ಮಾಡಿಬಿಟ್ಟಿದ್ದರು. ಈ ಬರಿಮನೆಯಲ್ಲಿಯೂ ಒಳಜಗಳದ ಬೆಂಕಿಯನ್ನು ಹುಟ್ಟಿಸಿ, ಎರಡು ಭಾಗವನ್ನಾಗಿಸಿತು. ಈಗ ಎರಡೂ ಭಾಗಗಳು ಸ್ವತಂತ್ರ ರಾಷ್ಟ್ರಗಳೆಂದು ಮೆರೆಯಲು ತೊಡಗಿದ್ದರೂ, ಅಂದು ಹೊತ್ತಿದ ದಾಯಾದಕಲಹದ ಬೆಂಕಿ ಇದುವರೆಗೂ ನಂದದೆ ಇದೆ. ಇಂದು ಬಲಿಷ್ಠವಾಗಿ, ಪ್ರಪಂಚವನ್ನೇ ನುಂಗಲು ಹವಣಿಸುತ್ತಲಿರುವ ಸ್ವಾರ್ಥಸಾಧಕ ಮಹಾರಾಷ್ಟ್ರಗಳು, ಭಾರತ ಮತ್ತು ಪಾಕಿಸ್ತಾನ ಬಂಧುರಾಷ್ಟ್ರಗಳ ಸಂಬಂಧದಲ್ಲಿ, ಕುಟಿಲ ರಾಜಕೀಯ ತಂತ್ರಗಳನ್ನೊಡ್ಡಿ, ಉರಿಯುವ ಬೆಂಕಿಗೆ ಎಣ್ಣೆಯನ್ನೊಯ್ಯುತ್ತಲಿವೆ. ಬುದ್ಧಿವಂತರಾದ ಭಾರತೀಯರು ರಾಜಕಾರಣದಲ್ಲಿ, ಅವರ ಕುಟಿಲ ರಾಜಕಾರ್ಯ ನಿಷ್ಫಲವಾಗಿರುವುದು, ಆ ಸ್ವಾರ್ಥಸಾಧಕ ಮಹಾರಾಷ್ಟ್ರಗಳ ಮತ್ಸರವನ್ನು ಇನ್ನಷ್ಟು ಹೆಚ್ಚಿಸಿಬಿಟ್ಟಿದೆ. ಆದುದರಿಂದಲೆ ಭಾವನಾತ್ಮಕ ಜನರಿಂದ ತುಂಬಿದ ಪಾಕಿಸ್ತಾನದಲ್ಲಿಯೆ ಅವು ತಮ್ಮ ಕಸರತ್ತುಗಳನ್ನು ನಡೆಯಿಸಿವೆ. ಇದೇ ಕಾರಣದಿಂದ, ಪಾಕಿಸ್ತಾನವು ಭಾರತದೊಂದಿಗೆ ಯುದ್ಧಹೂಡುವ ಸಿದ್ಧತೆಯನ್ನು ರಭಸದಿಂದ ನಡೆಯಿಸಿದೆ; ಯುದ್ಧದ ಮಾತುಗಳನ್ನೂ ಹಮ್ಮಿನಲ್ಲಿ ಕೇಳಿಸುತ್ತಲಿವೆ. ಭಾರತವು ತನ್ನ ಸ್ವಾತಂತ್ರ್ಯದ ನಾಲ್ಕನೆಯ ವರ್ಷದಲ್ಲಿ, ಇಂತಹ ಯುದ್ಧದ ಮಾತುಗಳನ್ನು ಆಗಾಗ ಕೇಳಬೇಕಾಗಿ ಬಂದಿದೆ. ಆದರ್ಶರಾಜ್ಯವನ್ನು ಕಟ್ಟಿ ತೋರಿಸಬೇಕೆಂದು ಮನಸ್ಸಿದ್ದ ಭಾರತದ ಸಂಸ್ಕಾರಸಂಪನ್ನ ಧುರೀಣರಿಗೆ, ಯುದ್ಧಮಾಡಬೇಕೆಂಬ ಅಪೇಕ್ಷೆ ಇಲ್ಲವಾದರೂ, ಸಂರಕ್ಷಣೆಯ ಸುವ್ಯವಸ್ಥೆಯನ್ನಾದರೂ ಅನಿವಾರ್ಯವಾಗಿ ಮಾಡಿಕೊಳ್ಳಬೇಕಾಗಿದೆ.

ಅನ್ನ-ವಸ್ತ್ರ, ಅಲ್ಲದೆ ಬೇರೆ ಜೀವನೋಪಯೋಗಿ ಪದಾರ್ಥಗಳ ಅಭಾವವು ಭಾರತವನ್ನು ಬಾಧಿಸುತ್ತಿರುವುದರಿಂದ, ನಮ್ಮ ಸರಕಾರವನ್ನು ನಡೆಯಿಸುವ ಧುರೀಣರು, ಈ ವಿಧಾಯಕ ಸಲಕರಣೆಗಳ ಸಂಪಾದನೆಗಾಗಿಯೆ ಬಹಳ ತೊಂದರೆ ಸಹಿಸಬೇಕಾಗಿದೆ ಇಂತಹ ಕಾಲದಲ್ಲಿಯೇ ಆಕ್ರಮಣಯುದ್ಧದ ಭೀತಿ ಮುಂದೆ ನಿಂತು, ಅವರ ತೊಂದರೆಯನ್ನು ಇನ್ನಷ್ಟು ಹೆಚ್ಚಿಸಿಬಿಟ್ಟಿದೆ. ಈಗವರು ಜನತೆಯ ಸುಖ-ಶಾಂತಿಗಳ ವಿಚಾರವನ್ನೂ ಮಾಡಬೇಕು; ಸಬಲವಾದ ಸಂರಕ್ಷಕ ವ್ಯವಸ್ಥೆಯನ್ನೂ ಏರ್ಪಡಿಸಬೇಕು. ಇದೆಲ್ಲವೂ ಭಾರತದ ಬರಿಮನೆಯಲ್ಲಿ ನಡೆಯಬೇಕಾಗಿದೆ. ಆದುದರಿಂದಲೇ ಈ ಸ್ವಾತಂತ್ರ್ಯದ ನಾಲ್ಕನೆಯ ವರ್ಷದಲ್ಲಿ, ನಮ್ಮ ರಾಷ್ಟ್ರದಲ್ಲಿ ಆರ್ಥಿಕ ಮುಗ್ಗಟ್ಟು ದಿನ-

ದಿನದಿನಕ್ಕೆ ಹೆಚ್ಚುಹೆಚ್ಚಾಗಿ ಬೆಳೆಯುತ್ತ ಬಂದಿದೆ. ಅದು ನಮ್ಮ ಸ್ವಾತಂತ್ರ್ಯ ಸಂಪಾದನೆಯ ಸಂತೋಷದ ಭಾವನೆಯನ್ನು ಮರೆಯಾಗಿಸಿಬಿಡುವಷ್ಟು ಭೀಕರವಾಗಿದೆ. ಎಲ್ಲಿ ನೋಡಿದರೂ ಗಳಿಕೆಯ ಪ್ರಮಾಣಕ್ಕೆ ನಾಲ್ಕುಮಡಿಯಷ್ಟು ಬಳಕೆಯಾಗಿ ಜನತೆ ಕಂಗೆಟ್ಟು ಕಂಗಾಲಾಗಿದೆ.

ಇನ್ನೊಂದು ವಿಷಯವೆಂದರೆ, ನಮ್ಮ ರಾಷ್ಟ್ರದ ಆಂತರಿಕ ಪರಿಸ್ಥಿತಿ. ಭಾರತರಾಷ್ಟ್ರ ಪ್ರತಿಯೊಂದು ವ್ಯಕ್ತಿಯದೆಂದೂ, ಪ್ರತಿಯೊಂದು ವ್ಯಕ್ತಿ ಭಾರತದ ಭದ್ರಸಮಾಜದ ಘಟಕವೆಂದೂ ಇರಬೇಕಾದ ತಿಳವಳಿಕೆ, ನಮ್ಮ ಜನರಲ್ಲಿ ಸಾಕಷ್ಟು ಇಲ್ಲ. ಬ್ರಿಟಿಷರ ಆಳಿಕೆಯ ಪರಾಧೀನ ಭಾರತಸಮಾಜದಲ್ಲಿ, ಅವರು ಈ ತಿಳವಳಿಕೆಗೆ ತಡೆ ಹಾಕಿದರೇನೋ ಸರಿಯೆ. ಆದರೆ ಇಂದಿನ ಸ್ವತಂತ್ರ ಭಾರತದ ಸಮಾಜದಲ್ಲಿಯೂ ಆ ತಿಳವಳಿಕೆ ಬೆಳೆಯುವಂತಹ ವಾತಾವರಣವು ಇಲ್ಲ. ಭಾರತರಾಷ್ಟ್ರದ ರಾಜಕಾರಣವು ಜಾತ್ಯತೀತ ರಾಷ್ಟ್ರಭಾವನೆಯನ್ನು ಒಪ್ಪಿಕೊಂಡಿದ್ದರೂ, ಜನರ ಆಚರಣೆಯಲ್ಲಿ ಅದು ಇಳಿದೇ ಇಲ್ಲ; ಇಷ್ಟೇ ಅಲ್ಲ, ಅವರ ಬುದ್ಧಿ-ಭಾವನೆಗಳಿಗೂ ಅದರ ಪ್ರಯೋಜನದ ಅರ್ಥವಾಗಿಲ್ಲ. ನಮ್ಮ ರಾಜಕೀಯ ಧುರೀಣರೂ ಸರಕಾರವೂ ಅಪೇಕ್ಷಿಸುತ್ತಿರುವ ಜಾತ್ಯತೀತರಾಷ್ಟ್ರದ ತತ್ತ್ವವು ನಮ್ಮ ಜನರ ನಿತ್ಯಾಚರಣೆಯಲ್ಲಿ ಬಂದರೆ, ಇಂದು ನಾವು ಅನುಭವಿಸುತ್ತಲಿರುವ ಕಷ್ಟದಲ್ಲಿ ಬಹುಭಾಗವನ್ನು ಕಡಿಮೆ ಮಾಡಿಕೊಳ್ಳಬಹುದು. ಆದರೆ ನಮ್ಮ ಈ ಸ್ವಾತಂತ್ರ್ಯದ ನಾಲ್ಕನೆಯ ವರ್ಷದಲ್ಲಿಯೂ ಅದು ಸಾಧ್ಯವಾಗಿಲ್ಲ; ಸಾಧ್ಯವಾಗುವ ಲಕ್ಷಣಗಳೂ ಕಾಣುತ್ತಿಲ್ಲ. ರಾಷ್ಟ್ರದ ಶಾಸನವು ಇಟ್ಟುಕೊಂಡ ಧೋರಣೆಯಲ್ಲಿಯೂ ಜನತೆಯ ಆಚಾರ-ವಿಚಾರಗಳಲ್ಲಿಯೂ ಭೂಮ್ಯಾಕಾಶಗಳ ಅಂತರವು ಇರುತ್ತಿದ್ದರೆ, ಅಂತಹ ರಾಷ್ಟ್ರ ಅಭ್ಯುದಯದ ದಾರಿಯಲ್ಲಿ ನಡೆದಿದೆಯೆಂದು ಹೇಗೆ ತಿಳಿದುಕೊಳ್ಳಬೇಕು?

ಪಾಕಿಸ್ತಾನಕ್ಕೆ ಹೊರಟು ಹೋಗಿರುವ ಮುಸಲ್ಮಾನರಂತೂ ಭಾರತದ ಕಡುವೈರಿಗಳಂತೆ ವರ್ತಿಸುತ್ತಿರುವುದು ಸರಿಯೆ. ಆದರೆ ಜಾತ್ಯತೀತ ತತ್ತ್ವವನ್ನು ಅನುಸರಿಸಬೇಕೆನ್ನುವ ಭಾರತದಲ್ಲಿ ವಾಸಿಸುತ್ತಿರುವ ಮುಸಲ್ಮಾನರಲ್ಲಿ, ಆ ತತ್ತ್ವಭಾವನೆ ಎಂದಾದರೂ ಬೆಳೆಯಬಹುದೇ ?— ಎಂದು ಯಾರೂ ಸಂದೇಹಪಡುವಂತಿದೆ. ಏಕೆಂದರೆ, ಮತಶ್ರದ್ಧೆ ಎಲ್ಲಕ್ಕಿಂತ ಹೆಚ್ಚಿನದೆಂಬ ಅವರ ಸಾಂಪ್ರದಾಯಿಕ ಮನೋವೃತ್ತಿಯನ್ನು ಕಳೆಯಲಿಕ್ಕೆ ಸರಕಾರದಿಂದಾಗಲಿ, ಆ ಸಮಾಜದ ಧುರೀಣರಿಂದಾಗಲಿ, ಯಾವ ಪ್ರಯತ್ನಗಳು ನಡೆದಿವೆ? ಹಾಗೆ ಪ್ರಯತ್ನ ಮಾಡಿದರೂ ಅವರ ಸಾಂಪ್ರದಾಯಿಕ ಬುದ್ಧಿಯನ್ನು ಬದಲಿಸಲಿಕ್ಕೆ ಸಾಧ್ಯವಿದೆಯೆ? ಭಾರತದ ಉದಾರ ರಾಜಕಾರಣದಲ್ಲಿ ಎಲ್ಲರಿಗೂ ಒಂದೆ ಬಗೆಯ ಸ್ವಾತಂತ್ರ್ಯವನ್ನು ಕೊಡಲಾಗಿದೆ. ದುರ್ದೈವದಿಂದ ಪಾಕಿಸ್ತಾನವು ಯುದ್ಧವನ್ನೇ ಹೂಡಿದರೆ, ಈ ಜನರು ಭಾರತದೊಂದಿಗೆ ತಮ್ಮ ಹಿತಸಂಬಂಧವನ್ನು ಕೊನೆಯ ವರೆಗೂ ಕಾಯ್ದುಕೊಂಡಾರೆ? ಇದೊಂದು ಸಮಸ್ಯೆ. ಈ ಸ್ವಾತಂತ್ರ್ಯದ ನಾಲ್ಕನೆಯ ವರ್ಷದಲ್ಲಿದು, ಭಾರತೀಯರಿಗೆ ಇನ್ನಷ್ಟು ತೊಡಕಿನ ಸಮಸ್ಯೆಯಾಗಿ ಕಾಣಲು ತೊಡಗಿದ್ದರೆ ಅದೊಂದು ಆಶ್ಚರ್ಯದ ಸಂಗತಿಯಲ್ಲ.

ಇನ್ನೊಂದು ಮಹತ್ತ್ವದ ಸಂಗತಿಯೆಂದರೆ, ಭಾರತದ ಸ್ವಾತಂತ್ರ್ಯಸಾಧನೆಯ ಕಾಲದಲ್ಲಿದ್ದ ಸಂಘಟನಾಬಲವು, ಸ್ವಾತಂತ್ರ್ಯೋತ್ತರ ದಿನಗಳಲ್ಲಿ, ಅನೇಕ ಕಾರಣಗಳಿಂದ ಶಿಥಿಲವಾಗುತ್ತ ಬಂದು, ಈ ನಾಲ್ಕನೆಯ ವರ್ಷದಲ್ಲಂತೂ ಅದು ಸಾವಿರಾರು ತೂತುಗಳು ಬಿದ್ದ ಹಡಗಿನಂತಾಗಿದೆ. ಅಂದು ಸರ್ವತೋಮುಖವಾಗಿ ಸುಸಂಘಟಿತವಾದ ಬಲವೆಂದರೆ ಭಾರತ ರಾಷ್ಟ್ರಸಭೆಯದು. ಆದರೆ ಇಂದು ಅದರಿಂದಲೆ ಸಿಡಿದ ಅನೇಕ ಜನ ತರುಣರು, ಕಮ್ಯುನಿಸ್ಟ್‌ಪಕ್ಷ ಕಟ್ಟಿಕೊಂಡಿದ್ದಾರೆ. ಅವರಲ್ಲಿ ಎರಡು ಮೂರು ಸಂಗಡಗಳಿವೆ. ಇವರಂತೆಯೆ ಇನ್ನು ಕೆಲವು ಜನರು ಸಿಡಿದು, ಸೋಶಾಲಿಸ್ಟ್ ಸಂಗಡ ಕಟ್ಟಿಕೊಂಡಿದ್ದಾರೆ; ಅದರಲ್ಲಿಯೂ ಮತ್ತೆ ಉಪಸಂಗಡಗಳು. ಇನ್ನು ಇದೇ ವರ್ಷವೇ ಕಾಂಗ್ರೆಸ್ಸಿನಿಂದ ಹೊರಬಿದ್ದ ರಾಷ್ಟ್ರಸಭೆಯ ಧುರೀಣರು ಕೆಲವರು, ಹೊಸ ಪಕ್ಷವೊಂದನ್ನು ಸ್ಥಾಪಿಸಿಕೊಂಡು, ರಾಷ್ಟ್ರಸಭೆಯ ಶಕ್ತಿಯನ್ನಷ್ಟೇ ಅಲ್ಲ; ಭಾರತ ಸರಕಾರದ ಶಕ್ತಿಯನ್ನೂ ಕಡಿಮೆಮಾಡಲು ತೊಡಗಿದ್ದಾರೆ. ಇವೆಲ್ಲ ಪಕ್ಷ-ಸಂಗಡಗಳಲ್ಲಿ ಸ್ನೇಹ-ಸಹಕಾರಗಳಿಗೆ ಆಸ್ಪದವಿಲ್ಲವಿಷ್ಟೇ ಅಲ್ಲ; ಒಂದನ್ನೊಂದು ದ್ವೇಷಿಸುತ್ತಿರುವುವು. ಒಂದಕ್ಕೊಂದು ಬಾಯಿಗೆ ಬಂದಂತೆ ಬೈದಾಡತೊಡಗಿರುವುವು. ಇವನ್ನೆಲ್ಲ ನೋಡುತ್ತಿರುವ ಜನತೆ ವಿಪರೀತ ಸಂದೇಹಗ್ರಸ್ತವಾಗಿದೆ. ಯಾವ ಪಕ್ಷ ಸತ್ಯಪಕ್ಷವೆಂಬುದೇ ಅದಕ್ಕೆ ತಿಳಿಯದಂತಾಗಿದೆ. ಯಾವ ಪಕ್ಷವನ್ನೂ ಸಂದೇಹ ಭಾವದಿಂದ ಕಾಣುತ್ತಿರುವ ಜನತೆಯಲ್ಲಿ, ಯಾವುದಾದರೊಂದು ಪಕ್ಷದ ವಿಷಯದಲ್ಲಿ ಉತ್ಕಟವಾದ ಶ್ರದ್ಧೆ ಹೇಗೆ ಮೂಡಿ ಬೆಳೆಯಬೇಕು? ಅಂತಹ ಶ್ರದ್ಧಾರಹಿತ ಜನತೆ ಯಾವ ಭಾವನಾಸೂತ್ರದಲ್ಲಿ ಸಂಘಟಿತವಾಗಬೇಕು? ಹೊರಗಿನಿಂದ ಯುದ್ಧಭೀತಿ; ಒಳಗೆ ಇಂತಹ ಅವ್ಯವಸ್ಥಿತ ರಾಜನೀತಿ. ಇಂತಹ ಪರಿಸ್ಥಿತಿಯು ನಮ್ಮ ಜನರಿಗೆ ಸ್ವಾತಂತ್ರ್ಯದ ಸುಖ-ಸಮಾಧಾನಗಳನ್ನು ಒದಗಿಸುವ ಬಗೆ ಹೇಗೆ? ಅನ್ನ-ವಸ್ತ್ರಗಳ ಅಭಾವದೊಂದಿಗೆ, ಮನಸ್ಸಿನ ಸ್ವಾಸ್ಥ್ಯದ ಅಭಾವವನ್ನೂ ಹೆಚ್ಚಿಸಿ ಬಿಟ್ಟಿದೆ....ಈ ಸ್ವಾತಂತ್ರ್ಯದ ನಾಲ್ಕನೆಯ ವರ್ಷ. ನಮ್ಮ ಧುರೀಣರೂ ಜನಸಾಮಾನ್ಯರೂ ಈ ವಿಷಮ ಪರಿಸ್ಥಿತಿಯ ವಿಚಾರವನ್ನು ಮುಂಗಂಡು ಮಾಡಬೇಕು. ಸಮಂಜಸತನದಿಂದ ಸಮಸ್ಯೆಗಳನ್ನು ಬಿಡಿಸಿ, ರಾಷ್ಟ್ರವನ್ನು ಸುಸಂಘಟಿತಗೊಳಿಸಬೇಕು. —ಸಂಪಾದಕ.

⊙ ನಾಡನಡೆ ⊙

ಕರ್ನಾಟಕ ವಿಶ್ವವಿದ್ಯಾನಿಲಯದ

ಲೋಕನಿಯುಕ್ತ ಉಪಕುಲಪತಿಗಳು

ಕಳೆದ ತಿಂಗಳಲ್ಲಿ ನಡೆದ ಆಯ್ಕೆಯಲ್ಲಿ ಶ್ರೀಮಾನ್ ಸಿ. ಸಿ. ಹುಲಕೋಟಿಯವರು ಗೆಲವು ಪಡೆದು, ಉಪಕುಲಪತಿಗಳ ಪೀಠವನ್ನೇರಿದರು. ಲೋಕಪ್ರಿಯರಾಗಿದ್ದರೂ ಸರಕಾರದಿಂದ ನಿಯುಕ್ತರಾದ ಶ್ರೀಮಾನ್ ಆರ್. ಎ. ಜಹಗೀರದಾರರು, ತಮ್ಮ ಆಳ್ಕೆಯ ಅವಧಿಯ ಕಾರ್ಯವನ್ನು ಯಶಸ್ವಿಯಾಗಿ ಮುಗಿಸಿ, ಹೊಸ ಉಪಕುಲಪತಿಗಳ ಕೈಗೆ ವಿಶ್ವವಿದ್ಯಾನಿಲಯದ ಸೂತ್ರಗಳನ್ನು ಒಪ್ಪಿಸಿ, ನಿವೃತ್ತರಾದರು. ಶ್ರೀಮಾನ್ ಜಹಗಿರದಾರರು ಮಾಡಿದ ಪ್ರಾರಂಭದ ಕಾರ್ಯ, ಲೋಕದ ಕಣ್ಣಿಗೆ ಎದ್ದು ತೋರುವಂತಹದಾಗಿಲ್ಲವೆಂದು ಕೆಲವು ಜನರು ಹೇಳುತ್ತಿದ್ದರೂ, ವಿಶ್ವವಿದ್ಯಾನಿಲಯದ ಭದ್ರವಾದ ತಳಹದಿಯ ದೃಷ್ಟಿಯಿಂದ ನೋಡಿದರೆ, ಅವರು ಸಾಧಿಸಿರುವ ಕಾರ್ಯ ಮಹತ್ತ್ವಪೂರ್ಣವಾದುದಾಗಿದೆ. ವಿಶ್ವವಿದ್ಯಾನಿಲಯದ ಆಡಳಿತವನ್ನು ಹೇಗೆ ಹೇಗೆ ಸಾಗಿಸಿಕೊಂಡು ಹೋಗುವುದರಿಂದ ಅದು ಅಭಿವೃದ್ಧಿಯ ಮಾರ್ಗದಲ್ಲಿ ಮುಂದುವರೆಯುವುದೆಂಬುದನ್ನು ಸಾಕಷ್ಟು ವಿಚಾರಮಾಡಿ, ಅವರು ತಳಹದಿಯನ್ನು ಹಾಕಿದ್ದಾರೆ; ಆಡಳಿತದ ಘಟನೆ-ಶಾಸನಗಳನ್ನು ಸಜ್ಜುಗೊಳಿಸಿಕೊಟ್ಟಿದ್ದಾರೆ. ಈ ಕ್ಷೇತ್ರದಲ್ಲಿಯೂ ಜಾತಿಜಗಳ ತಲೆಯೆತ್ತಬಹುದೆಂದು ತಾಳಿದ್ದ ಹಲವರ ಸಂದೇಹವನ್ನು, ಶ್ರೀಮಾನ್ ಜಹಗೀರದಾರರು ತಮ್ಮ ಕಾಲದಲ್ಲಂತೂ ಸುಳ್ಳುಮಾಡಿ ತೋರಿದ್ದಾರೆ. ಇಂತಹ ಪಕ್ಷ-ಪಂಗಡರಹಿತ ಆಡಳಿತಕ್ಕೆ ಶ್ರೀಯುತರ ನಿಜವಾದ ನ್ಯಾಯಬುದ್ಧಿಯೇ ಕಾರಣವಾಗಿದೆ. ಅವರ ನ್ಯಾಯಬುದ್ಧಿಗೆ ಅವರು ಜೀವನಪದ್ದಕ್ಕೂ ಮಾಡಿಕೊಂಡು ಬಂದಿರುವ ನ್ಯಾಯವಾದಿತ್ವವೂ ನ್ಯಾಯಾಧೀಶತ್ವವೂ ಕಾರಣವಾಗಿದೆ. ಸಮಂಜಸ ರೀತಿಯಿಂದ ಉಪಕುಲಪತಿಯ ಕಾರ್ಯನಿರ್ವಹಿಸಿದ ಶ್ರೀಮಾನ್ ಜಹಗೀರದಾರರಿಗೆ ನಮ್ಮ ಕೃತಜ್ಞತಾಪೂರ್ವಕ ಧನ್ಯವಾದಗಳು.

ಈಗ ಲೋಕನಿಯುಕ್ತ ಉಪಕುಲಪತಿಗಳಾಗಿ ಬಂದಿರುವ ಶ್ರೀಮಾನ್ ಸಿ. ಸಿ. ಹುಲಕೋಟಿಯವರೂ ಕೃತಾರ್ಥತೆಯನ್ನು ಪಡೆದ ನ್ಯಾಯವಾದಿಗಳು; ನ್ಯಾಯಾಧೀಶರು. ಇವರು ಕೂಡ ನ್ಯಾಯದ ತೂಕದಿಂದಲೇ ವಿಶ್ವವಿದ್ಯಾನಿಲಯದ ಆಡಳಿತವನ್ನು ಸಾಗಿಸುವರೆಂಬುದರಲ್ಲಿ ಸಂದೇಹವಿಲ್ಲ.

ಶ್ರೀಮಾನ್ ಹುಲಕೋಟಿಯವರು ಕರ್ತೃತ್ವಶಾಲಿಗಳಾದ ಕನ್ನಡಿಗರು. ಅವರು ಧಾರವಾಡದಲ್ಲಿ ವಕೀಲಿಮಾಡುತ್ತಿರುವಾಗಲೆ ತಮ್ಮ ವ್ಯಕ್ತಿತ್ವದ ಪ್ರಭಾವವನ್ನು ಸ್ಫುಟವಾಗಿಸಿದ್ದರು. ವಕೀಲಿಯಲ್ಲಿ ಹೆಸರುವಾಸಿಯನ್ನು ಗಳಿಸಿದ್ದರಲ್ಲದೆ, ತಮ್ಮ ಸಾಮಾಜಿಕ ಚಟುವಟಿಕೆಗಳ ಪರಿಣಾಮವಾಗಿ ಸಾರ್ವಜನಿಕರ ಆದರ-ವಿಶ್ವಾಸಗಳಿಗೂ ಪಾತ್ರರಾಗಿದ್ದರು. ಮೊದಲಿನಿಂದಲೂ ಶ್ರೀಯುತರು ಉದಾರಮತವಾದಿಗಳು. ರಾಜಕೀಯದಲ್ಲಿ ಪ್ರಾಗತಿಕವಿಚಾರದವರು. ತಮ್ಮ ಉದ್ಯಮದ ಯಶಸ್ಸಿನ ಕಡೆಗೇ ಕಣ್ಣಿರಿಸಿದವರಲ್ಲದೆ, ದೂರದ ರಾಜಕಾರ್ಯದ ಕಡೆಗೆ ಕಣ್ಣುಹಾಕಿದವರಲ್ಲ. ಆದುದರಿಂದಲೆ ವಕೀಲಿಯಲ್ಲಿ ಗಳಿಸಿದ ಇವರ ಅಭೂತಪೂರ್ವ ನೈಪುಣ್ಯ, ಅಂದಿನ ಸರಕಾರದ ಮನ್ನಣೆಗೆ ಪಾತ್ರವಾಯಿತು; ಇವರನ್ನು ನ್ಯಾಯಾಧೀಶನ ಗದ್ದುಗೆಯನ್ನೇರಿಸಿತು. ಅಲ್ಲಿಯೂ ಇವರ ಸಾಮರ್ಥ್ಯ ಚೆನ್ನಾಗಿ ಪ್ರಕಟವಾಯಿತು.

ನ್ಯಾಯಾಧೀಶನ ಪದದಿಂದ ನಿವೃತ್ತರಾದ ಮೇಲೆ, ಇಂದಿನ ಪ್ರಜಾಪ್ರಭುತ್ವದ ಸರಕಾರವೂ ಶ್ರೀಯುತ ಹುಲಕೋಟಿಯವರ ಯೋಗ್ಯತೆಯನ್ನರಿತು, ಇವರನ್ನು ಪಬ್ಲಿಕ್ ಸರ್ವಿಸ್ ಕಮಿಶನಿನ ಸದಸ್ಯರನ್ನಾಗಿ ನಿಯಮಿಸಿದ್ದರು. ಸರಕಾರದ ರೀತಿಯಿಂದ ನೋಡಿದರೆ, ದೊಡ್ಡ ಸ್ಥಾನ-ಮಾನಗಳಲ್ಲಿ ಇವರು ಇದ್ದರೂ, ಕನ್ನಡಿಗರ ಸೇವೆಗೆ ಸಿದ್ಧರಾಗಿ ಕರ್ನಾಟಕ ವಿ. ವಿ. ನಿಲಯದ ಕುಲಪತಿಯ ಸ್ಥಾನಕ್ಕೆ ಹುರಿಯಾಳಾಗಿ ನಿಂತು, ಆಯ್ಕೆಯಲ್ಲಿ ಉತ್ತೀರ್ಣರಾಗಿ ಬಂದುದು ಇವರ ವ್ಯಕ್ತಿತ್ವದ ಪ್ರಭಾವಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿದೆ. ಈ ನೂತನ ಕುಲಪತಿಗಳಿಗೆ ನಮ್ಮ ಸಂತೋಷದ ಸ್ವಾಗತ. ಆದರಪೂರಿತ ಅಭಿನಂದನೆ.



ಕರ್ನಾಟಕ ವಿದ್ಯಾವರ್ಧಕ ಸಂಘ

ತನ್ನ ಕಾರ್ಯದಿಂದ ಕನ್ನಡಿಗರನ್ನು ಜಾಗೃತಗೊಳಿಸಿದ, ಕರ್ನಾಟಕತ್ವದ ಭಾವನೆಯಿಂದ ಕನ್ನಡಿಗರನ್ನು ಸಂಘಟಿಸಲು ಮನವಾರೆ ಪ್ರಯತ್ನಿಸಿ ಕೃತಕೃತ್ಯತೆಯನ್ನು ಪಡೆದ ಕರ್ನಾಟಕ ವಿದ್ಯಾವರ್ಧಕ ಸಂಘವು, ತನ್ನ ಜೀವನದ ೬೦ನೆಯ ವರ್ಷವನ್ನು ಮುಗಿಸಿ ೬೧ನೆಯ ವರ್ಷದಲ್ಲಿ ಕಾಲಿರಿಸಿತು. ಅದರ ಘನತೆಗೆ ಸರಿಯಾಗಿ ಕನ್ನಡಿಗರೆಲ್ಲ ಸೇರಿ, ಅದರ ವಜ್ರಮಹೋತ್ಸವವನ್ನು ನಡೆಯಿಸಬೇಕಾದುದು ಅವರ ಕರ್ತವ್ಯವಾಗಿದೆಯೆಂದು ಬೇರೆಯಾಗಿ ಹೇಳಬೇಕಾದ ಕಾರಣವೇನೂ ಇಲ್ಲ. ಸುವರ್ಣಮಹೋತ್ಸವ (೧೯೪೦) ವನ್ನು ಮಾಡಿ ನಾವು ಆ ಸಂಸ್ಥೆಯ ತಲೆಯ ಮೇಲಿರುವ ಋಣಭಾರವನ್ನು ಇಳಿಸಿ ಹಗುರುಗೊಳಿಸಿದೆವೇನೋ ಸರಿಯೇ; ಆದರೆ ಈ ಸಂಸ್ಥೆ ಸಾಧಿಸಬೇಕೆಂದಿರುವ ಸಾಂಸ್ಕೃತಿಕ ಗುರಿ ತುಂಬ ದೊಡ್ಡದಾಗಿದೆ. ಅದಕ್ಕಾಗಿ ಸಮರ್ಥವಾದ ಸಂಚಾಲಕ ವರ್ಗ, ಸಂಪತ್ತು ಇವುಗಳ ಆವಶ್ಯಕತೆಯಿರುವುದು. ತಾ. ೨೯-೬-೫೧ ನೆಯ ದಿನ ನಡೆದ ವಾರ್ಷಿಕ ಸಭೆಯಲ್ಲಿ, ಉತ್ಸಾಹಶಾಲಿಗಳಾದ ಹೊಸ ಹೊಸ ಜನರ ಸಂಚಾಲಕ ಮಂಡಲವೇನೋ ಆಯ್ಕೆಯಾಗಿ ಬಂದಿದೆ. ಇನ್ನುಳಿದಿದೆ ಜನತೆಯ ಸಹಕಾರದ ಕಾರ್ಯ. ಅವರ ಕೊಡಗೈ ಮುಂದೆ ಬಂದು ತುಂಬುಗೈಯಿಂದ ಕಾಣಿಕೆ ಸಲ್ಲಿಸಿದರೆ, ಸಂಘದ ರಜತಮಹೋತ್ಸವದ ನೆಪದಿಂದ ಅನೇಕ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಯಿಸಲಿಕ್ಕೆ ಅನುಕೂಲವಾದೀತು. ಸಂಸ್ಥೆಗಳ ಮುಖಾಂತರವೇ ಕಾರ್ಯಕಾರಿಯಾಗಬಹುದಾಗಿರುವ 'ಜ್ಞಾನಕೋಶ' 'ಶಬ್ದಕೋಶ' 'ಕರ್ನಾಟಕದ ಇತಿಹಾಸ' 'ಸಮಾಜಶಾಸ್ತ್ರ' 'ಭಾಷಾಶಾಸ್ತ್ರ' 'ಸಾಹಿತ್ಯಚರಿತ್ರೆ' ಮೊದಲಾದ ಉಪಯುಕ್ತ ವಾಙ್ಮಯನಿರ್ಮಾಣಕಾರ್ಯವನ್ನು ಕೈಕೊಳ್ಳಲು ಸಾಧ್ಯವಾದೀತು. ವಿದ್ಯಾವರ್ಧಕ ಸಂಘದ ನೇತೃತ್ವದಲ್ಲಿ ನಡೆದಿರುವ 'ಕನ್ನಡ ಗ್ರಂಥಾಲಯ' ವೂ ಪರಿಪುಷ್ಟಿಗೊಳ್ಳಬೇಕಾದರೆ, ವಿದ್ಯಾವರ್ಧಕಸಂಘವೇ ತಾಯಿಬೇರಾಗಿ ಅದಕ್ಕೆ ಆಹಾರಸತ್ತ್ವವನ್ನು ಒದಗಿಸಬೇಕಾಗಿದೆ. ಆದುದರಿಂದ ಉಳ್ಳವರು ಬಹಳವಾಗಿ, ಮಿಕ್ಕವರು ಶಕ್ಯವಿದ್ದಷ್ಟು ಧನದ ಸಹಾಯವನ್ನು ಒದಗಿಸಿ, ಕ. ವಿದ್ಯಾವರ್ಧಕ ಸಂಘದ ಕಾರ್ಯಕ್ಷೇತ್ರದ ವ್ಯಾಪ್ತಿಯನ್ನು ಹೆಚ್ಚಿಸಬೇಕು.

ಮೈಸೂರು ಕನ್ನಡಿಗರ ಮುಂದಡಿ

ಕಳೆದ ತಿಂಗಳ ಎರಡನೆಯ ವಾರದಲ್ಲಿ, ಬೆಂಗಳೂರಲ್ಲಿ ಅಖಿಲ ಕರ್ನಾಟಕ ಏಕೀಕರಣದ ಪರಿಷತ್ತು ಸೇರಿದ್ದಿತು. ಮೈಸೂರಿನ ವಿಚಾರವಂತ ಕನ್ನಡಿಗರೆಲ್ಲ ಸೇರಿ, ಕರ್ನಾಟಕ ಏಕೀಕರಣದ ಜಗತ್ತತೆಯನ್ನು ಮನಗಂಡು, ಬೆಂಗಳೂರಲ್ಲಿಯೇ ಸೇರಲಿದ್ದ ಎ. ಐ. ಸಿ. ಸಿ. ಯ ಅಧಿವೇಶನ ನೆರೆಯುವುದಕ್ಕೆ ಮೊದಲೇ ಈ ಪರಿಷತ್ತನ್ನು ನೆರೆಯಿಸಿ, ಅಖಿಲ ಕರ್ನಾಟಕದ ಹೃದಯದ ಬೇಡಿಕೆಯೇನಿದೆಯೆಂಬುದನ್ನು, ಅಖಿಲ ಭಾರತದ ಮುಂದಾಳುಗಳಿಗೆ ಮನವರಿಕೆ ಮಾಡಿಕೊಡುವಂತಹ ಎತ್ತುಗಡೆ ಮಾಡಿದುದಕ್ಕಾಗಿ ಈ ಪರಿಷತ್ತಿನ ಸಂಚಾಲಕರು ಕನ್ನಡಿಗರೆಲ್ಲರ ಅಭಿನಂದನೆಗೆ ಪಾತ್ರರಾಗಿದ್ದಾರೆ.

ಮೈಸೂರು ಸಂಸ್ಥಾನದ ರಾಜಕೀಯ ಧುರೀಣರೇ ಮುಂದಾಗಿ ಈ ಕಾರ್ಯವನ್ನು ಮಾಡಬೇಕಾಗಿತ್ತು. ಆದರೆ ಅಧಿಕಾರಮುಗ್ಧರಾಗಿರುವ ಅವರಿಗೆ ಕರ್ನಾಟಕ ಏಕೀಕರಣದ ಬರಲಿರುವ ಸುಖಕ್ಕಿಂತ, ಇಂದು ಕೈಯಲ್ಲಿರುವ ಅಧಿಕಾರಭೋಗದ ಸೌಖ್ಯವೇ ಹೆಚ್ಚಿನದಾಗಿ ತೋರಿರಬಹುದಾಗಿದೆ. ಏಕೀಕರಣಕ್ಕೆ ಮೈಸೂರಿನ ಜನತೆ ಸಿದ್ಧವಿಲ್ಲವೆಂದು, ಇದುವರೆಗೂ ಇವರು— ಜನತೆಯ ನಿಜವಾದ ಪ್ರತಿನಿಧಿಗಳು ತಾವೇ ಎಂಬಂತೆ— ಸಾರುತ್ತ ತಿರುಗುತ್ತಿದ್ದರು. ಮೈಸೂರಿನ ಜನತೆ, ಇವರ ಆಂತರಿಕಸ್ವಾರ್ಥವನ್ನು ಅರಿತುಕೊಂಡು, ಇವರ ಮೇಲೆ ಅವಲಂಬಿಸಿ ಪ್ರಯೋಜನವಿಲ್ಲವೆಂದು ಮನಗಂಡು, ತನ್ನ ನಿಜವಾದ ಆಶೆಯೇನಿದೆಯೆಂಬುದನ್ನು ಈ ಪರಿಷತ್ತಿನ ಮುಖಾಂತರ ಪ್ರಕಟಗೊಳಿಸಿ, ಸ್ತುತ್ಯವಾದ ಕಾರ್ಯವನ್ನು ಮಾಡಿದೆ. ಮೈಸೂರಿನ ಆಡಳಿತದಲ್ಲಿ ಅಧಿಕಾರಿಗಳ ಗದ್ದುಗೆಗಳನ್ನು ಹಿಡಿದುಕೊಂಡು ಕುಳಿತ ಧುರೀಣಬ್ರುವರಿಗೆ ಜನತೆಯ ಈ ಕೃತಿಯು ಅಪಥ್ಯಕರವೆಂದೇ ಎನಿಸಿದ್ದೀತು. ಏಕೆಂದರೆ, ಅವರೆಲ್ಲ ಈ ಪರಿಷತ್ತಿನ ನಿರ್ಣಯದ ವಿಚಾರದಲ್ಲಿ ತಮ್ಮ ಬಾಯನ್ನು ಬಿಗಿಹಿಡಿದಂತೆಯೇ ಮಾಡಿದ್ದಾರೆ. ಆದರೆ ಮೈಸೂರಿನ ಜನತೆ ಬೇರೆ ಮುಂದಾಳುಗಳನ್ನು ಮುಂದೆ ಮಾಡಿಕೊಂಡು, ಅಖಿಲಕರ್ನಾಟಕದ ಏಕೀಕರಣಕ್ಕಾಗಿ ತನ್ನ ಉತ್ಕಟಭಾವನೆಯನ್ನು ತೋರಿಸಿ, ಮುಂದಡಿಯನ್ನಿರಿಸಿದುದು ಶುಭಭವಿಷ್ಯದ ಸೂಚನೆಯಾಗಿದೆ.

ಭಾಷಾನ್ವಯ ಪ್ರಾಂತದ ಘೋಷಣೆ

ಬೆಂಗಳೂರಲ್ಲಿ ಸೇರಿದ ಎ. ಐ. ಸಿ. ಸಿ. ಯಲ್ಲಿ ಪುರಸ್ಕೃತವಾದ ಕಾಂಗ್ರೆಸಿನ ಚುನಾವಣೆಯ ಘೋಷಣೆಯಲ್ಲಿ, ಭಾಷಾನ್ವಯ ಪ್ರಾಂತರಚನೆಯನ್ನು ಮತ್ತೆ ಒಪ್ಪಿಕೊಳ್ಳಲಾಗಿದೆ. ಕರ್ನಾಟಕ ಏಕೀಕರಣವನ್ನು ಮನವಾರೆ ಬಯಸುವ ಕನ್ನಡಿಗರು, ಇದುವರೆಗಿನ ಆಶೆ-ನಿರಾಶೆಗಳ ಅನೇಕ ಸಂದರ್ಭವಲ್ಲಿ ನಡೆದುಬಂದವರಾದುದರಿಂದ, ಈ ಘೋಷಣೆಯಲ್ಲಿಯ ಭಾಷಾನ್ವಯಪ್ರಾಂತೀಕರಣದ ಒಪ್ಪಿಗೆಯ ಪುನರುಚ್ಚಾರಣೆಯ ಮಾತುಗಳನ್ನು ಆಶೆಯಿಂದೇನೂ ಸ್ವಾಗತಿಸುವಂತಿಲ್ಲ. ಆದುದರಿಂದಲೇ ಇದೊಂದು ಚುನಾವಣೆಯ ಪ್ರಚಾರದ ಸಾಧನವೆಂದು ಸಂದೇಹದಿಂದ ಕಾಣುವವರೇ ಬಹಳ ಜನರಿದ್ದಾರೆ. ಮಾತುಕೊಟ್ಟು ತಪ್ಪಿಸಲು ಹೋಗುವ ತಂದೆ-ತಾಯಿಗಳನ್ನು ಅವರ ಎಳೆಯ ಮಕ್ಕಳೂ ಅವಿಶ್ವಾಸದಿಂದ ಕಾಣುವುದು ಲೋಕದ ವಹಿತೆ. ಅದರಂತೆಯೆ ನಮ್ಮ ಮುಂದಾಳುಗಳೂ ಬೇಕಾದಾಗ ಮಾತುಕೊಟ್ಟು, ಬೇಡವಾದಾಗ ಮುರಿಯುತ್ತಲಿದ್ದರೆ, ಅನುಯಾಯಿಗಳ ವಿಶ್ವಾಸ ಅವರಲ್ಲಿ ಉಳಿಯುವ ಬಗೆ ಹೇಗೆ? ಘೋಷಣೆಯಲ್ಲಿಯ ಮಾತನ್ನು ನಮ್ಮ ಕಾಂಗ್ರೆಸ್ಸಿನ ಧುರೀಣರು, ಈ ಸಲವಾದರೂ ನಡೆಯಿಸಿಕೊಟ್ಟು ಜನತೆಯ ವಿಶ್ವಾಸಕ್ಕೆ ಪಾತ್ರರಾಗಲಿ!

ಕನ್ಯಾಪ್ರಶ್ನೆ

(ಒಂದು ಸಾಮಾಜಿಕರೂಪಕ)

ಶ್ರೀ. ತಿರುಪತಿ ಹನುಮಸಾಗರ, ಹೈದರಾಬಾದ್

★

ಪಾತ್ರಪರಿಚಯ

ಕಿಷನ್‌ರಾಯರು (ಕನ್ಯೆಯ ತಂದೆ), ಇಂದಿರಾಬಾಯಿ (ಕನ್ಯೆಯ ತಾಯಿ), ಕಮಲಾ (ಕನ್ಯೆ), ಪುರೋಹಿತರು (ಲಗ್ನಸಂಘಟಕರು)

ಕಾಯಿದೆಯಿಂದ ನಿಯಂತ್ರಿತವಾದ ಪದಾರ್ಥದ ವ್ಯಾಪಾರವೆಲ್ಲಾ ಕಳ್ಳಪೇಟೆಯಲ್ಲಿ ನಡೆಯುವಾಗ, ವರದಕ್ಷಿಣೆಯ ನಿಯಂತ್ರಣದ ಕಾಯಿದೇ ಪಾಸಾದಾಗ, ವರಗಳ ವ್ಯಾಪಾರವೂ ಕಳ್ಳಪೇಟೆಯಲ್ಲಿಯೇ ನಡೆಯಬೇಕಲ್ಲವೆ? ಇದೀಗ ಈ ನಿಯಂತ್ರಣ ಯುಗದ ನೈಸರ್ಗಿಕ ನಿಯಮ!

೧ನೆಯ ದೃಶ್ಯ

(ಒಂದು ಚಿಕ್ಕದಾದ ಮನೆ. ರಮಾಬಾಯಿ ಗಡಿಬಿಡಿಯಿಂದ ಪ್ರವೇಶಿಸಿ)

ಇಂದಿರಾಬಾಯಿ:—ಕಮ್ಮೀ ಕಮ್ಮೀ, ಏ ಕಮ್ಮೀ, ಈ ಕತ್ತಿ-ಹುಡುಗೇರದು ಕಿವೀ ಸೇದಿ ಹೋಗಿರತದ. ಒಂದೂ ಸವನೂ ಗಂಟ್ಲ ಹರಿಯೋ ಹಾಂಗ ಚೀರಿಕೊಳ್ಳಿಕ್ಕೆ ಹತ್ತೀನಿ. ದಾದೂ ಇಲ್ಲ. ಎಲ್ಲಿ ಒಂದು ಕಥೀ ಪುಸ್ತಕಾ ಹಿಡಕೊಂಡು ಕುಕ್ಕರಸ್ಯಾಳೋ ಏನೋ!

(ಕೈಯಲ್ಲಿ ಒಂದು ಕಾದಂಬರಿಯನ್ನು ಹಿಡಿದುಕೊಂಡು, ಕಮಲೆ ಒಳಗಿನಿಂದ ಪ್ರವೇಶಿಸುತ್ತಾಳೆ. ನವತರುಣಿಗೆ ಒಪ್ಪುವಂತೆ ಆವಳು ಉಡುಪನ್ನು ಧರಿಸಿದ್ದಾಳೆ).

ಕಮಲಾ :— ಏನವ್ವಾ..........ಯಾಕ ಕರೀಲಿಕ್ಕೆ ಹತ್ತೀದಿ? ಈಗೊಂದಿಷ್ಟು ಪುರಸತ್ತು ಆಗಿತ್ತು; ಲೈಬ್ರರಿಯಿಂದ ಪುಸ್ತಕಾ ತಂದು ಎಂಟು ದಿವಸ ಆತು.... ಒಂದು ಹಾಳೀನೂ ಓದೋದು ಆಗಿಲ್ಲ. ಎರಡು ಸಾಲು ಓದಿದ್ನ್ಯೋ ಇಲ್ಲೋ....ಆಗ್ಲೇ ಕರೀಲಿಕ್ಕೆ ಹತ್ತೀದಿ.

ಇಂದಿರಾಬಾಯಿ :— ಮತ್ತ ಆ ಕಾದಂಬರೀ ಹಿಡ್ದೀ ಹೌದಲ್ಲೋ? ಕಥೀ ಪುಸ್ತಕಾ ಓದಿ ತಲಿ ಕೆಡಿಸ್ಗೋ ಬ್ಯಾಡಂತ ಸಾವಿರ ಸಾರೇ ಹೇಳೀನಿ. ಒಂದು ದೇವರೂ, ದಿಂಡರೂ, ಏನ ಬರ್ತದ ಆ ಪುಸ್ತಕದಾಗ ಮಾರೀ ಇಟುಗೊಂಡು ಕೂತ್ರ? ನಿಮಗ್ಯಾಕ ಬೇಕ್ರೇ ಆ ಕಾದಂಬ್ರಿ... ನಾಳೆ ಲಗ್ನಾಮಾಡಿಕೊಂಡು ಸಂಸಾರಾ ಮಾಡೋರ್‍ಗೆ?

ಕಮಲಾ :— ನಾವು ಓದದಿದ್ರ ಯಾರು ಓದಬೇಕವ್ವಾ ಆವನ್ನ? ಪುರಾಣದಾಚಾರ್‍ರು ಓದಿಹೇಳಬೇಕೂ, ಅವನ್ನ ಬತ್ತೀ ಮಾಡೋರ್‍ಗೆ!

ಇಂದಿರಾ :— ತಲೆಹರ್‍ಕಿ! ಇಗಾ ಮಂಡ ಮಂಡ ಹಾಕ್ಯಾಡ ಬ್ಯಾಡ; ದೇವರ ಮುಂದ ಐದು ತುಪ್ಪದ ದೀವಿಗೀ ಹಚ್ಚಿಡು! ಅಂವಾ ಎಲ್ಲಿದ್ದಾನ ರಾಮಾ? ಆವನ್ನ ಪ್ಯಾಟಿಗೆ ಕಳಿಸಿ, ನಾಲ್ಕು ಟೆಂಗಿನಕಾಯಾ ತರ್‍ಸು! ಆ ಅರಸಿಣಪುಡೀ ಡಬ್ಯಾಗ ರೂಪಾಯಿ ಹಾಕೀನಿ....ತಗದು ಕೊಡು ಅವಗ!

ಕಮಲಾ :— ಯಾಕವ್ವಾ ಐದು ತುಪ್ಪದ ದೀವಿಗಿ? ನಿನ್ನೆ ಅಪ್ಪ ಅಂತಿದ್ರು....ತುಪ್ಪ ಪ್ಯಾಟೀಯೊಳಗ ತುಟ್ಟಿ ಆಗಲಿಕ್ಕೆ ಹತ್ತೇದಂತ. ಸುಮ್ಮ ಸುಮ್ಮನೂ ಐದು ದೀವಿಗಿ ಯಾಕ?

ಇಂದಿರಾ :— ಅಯ್ಯ ಖೋಡಿ! ನಿನ್ನೆ ಇವರೂ ಹೇಳ್ಯಾರ. ಯಾಕಂದರ ಗೊತ್ತಿಲ್ಲೇನು? ನಿನಗೇನ ಗೊತ್ತಿರತದ? ಸರಕಾರದವರು ವರದಕ್ಷಿಣೀ ಕಾಯ್ದೆ ಪಾಸ ಮಾಡ್ಯಾರಂತ! ಅವರು ಹೇಳ್ದಾಗ ಒಂದೂ ತಿಳೀಲೇ ಇಲ್ಲಾ. ಆಗ ಅವರೂ ತಿಳ್ಸಿ ಹೇಳಿದ್ರು. 'ವರದಕ್ಷಣೀ ತಗೊಂಡೋರ್‍ಗೆ ಮೂರು ವರ್ಷ ಶಿಕ್ಷಾ' ಅಂತ.... ೫೦೦ ರೂ. ದಂಡ ಅಂತ! ಹುಂ ಹೋಗು, ದೀವಿಗೀ ಹಚ್ಚಿಡು ಹೋಗು!

ಕಮಲಾ :—ಹೂನವ್ವಾ! ತುಪ್ಪಬ್ಯಾರೆ ಸ್ವಲ್ಪ ಐದ, ಇದ್ದಷ್ಟು ಹಾಕಿ ಹಚ್ಚೀನಿ.

(ಕಮಲಾ ಹೋಗುವಳು. ವೆಂಕಟೇಶದೇವರ ಚಿತ್ರಕ್ಕೆ ಕೈಮುಗಿದು ಇಂದಿರಾಬಾಯಿ, ಏನೋ ಒಂದು ಭಾರ ತಪ್ಪಿದಂತೆ)

ಇಂದಿರಾ :— ಸ್ವಾಮಿ! ವೆಂಕಟೇಶಾ! ಹೆಣ್ಣಿನ ತಾಯಿ-ತಂದಿಗಳ ಮ್ಯಾಲೆ ಈಗ ದಯಾ ತೋರಿಸಿದ್ಯಾ? ನಿನಗ ಯಾರ ಸರಿ ಇದ್ದಾರಪಾ! ನನ್ನ ಉಳಿದ ಎರಡು ಹುಡಿಗೇರ ಲಗ್ನಾ ವರದಕ್ಷಿಣಿ ಇಲ್ದ ಮಾಡ್ತೀನಿ. ನನ್ನ ಲಗ್ನದ [illegible] ಪಾಸಾಗಿದ್ದರ, ನಮ್ಮಪ್ಪಗ ತ್ರಾಸೂ ಆಗ್ತಿದ್ದಿಲ್ಲ. ಅಂವ ಸರಿಸಂ-ಯಿಂದ ಭವಣಿಬಟ್ಟ. ಅದೂ ಹೋಗ್ಲಿ, ನನ್ನ ಲಗ್ನ ಆದಕೂಡ್ಲೆ ಆದರೂ ಪಾಸಾಗಿದ್ದರ, ನನ್ನ ಎಲ್ಲಾ ಮಕ್ಕಳ ಲಗ್ನಾ ವರದಕ್ಷಿಣೆ ಇಲ್ದ ಆಗ್ತಿದ್ವಪ್ರೋ ಏನೊ! ಇರವೊಲ್ದ್ಯಾಕ; ಅವರ ನಾಲಿಗೆ ಬಡಿಯೋದಿತ್ತು....ಬಡದ್ವಿ.

(ಕಮಲಾ ಬರುವಳು)

ಕಮಲಾ :— ಅವ್ವಾ, ಬತ್ತೀನೇ ಸಿಗವೊಲ್ಲವು! ಎಲ್ಲಿ ಇಟ್ಟಿದಿಯೋ ಏನೊ!

ಇಂದಿರಾ :— ಮೊನ್ನೆ ಇನ್ನೂ ಲಕ್ಷ ಬತ್ತೀ ಮುಗ್ಸೀನಿ.... ಬತ್ತಿ ಇಲ್ಲ? ಹತ್ತೀಬುಟ್ಟ್ಯಾಗ ನೋಡು ಛಂದಾಗಿ! ಅಬ್ಬಬ್ಬಾ! ಆ ರಮಾಬಾಯೀದು ಎಷ್ಟು ಬಿಗುವೂ ಅಂತ ತಿಳಿದೀದಿ? ಒಂದು ನಾಕಾರು ಗಂಡುಹುಡುಗರು ಅವ....ಏನ ತುರಾಯಿ ಹಚ್ಚಿದ್ಹಾಂಗ

ಆತೆ? ಏನ ಕೋಡು ಮೂಡಿದ್ಹಾಂಗ ಆತೆ? ಒಂದೇ ಸವನ ಉರೀತಾಳ! ನಮ್ಮ ಕಮ್ಲಾನ್ನ ತೋರಿಸಲಿಕ್ಕೆ ಹೋದಾಗ, ನಾಕುಸಾವಿರ ವರದಕ್ಷಿಣೀ ಕೇಳಿದ್ರು. ಏನೋ ಒಳ್ಳೇಹುಡುಗಾ; ನಾಕಕ್ಷರ ಕಲ್ತಾನ... ಅದೂ ನಮ್ಮ ಹುಡಿಗೀನೂ ಅವನ್ನೇ ಮಾಡ್ಕೋತೀನಿ ಅಂದ್ಲು. ಅಂತ ಕೊಡಲಿಕ್ಕೆ ಹೋದರ, ಇಷ್ಟು ವರದಕ್ಷಿಣೀ ಕೇಳಬೇಕ? ಅದೂ ಸಾವಿರಗಟ್ಲೆ! ಇವತ್ತ ಇವರು ಬರ್ಲಿ; ಆ ರಮಾಬಾಯೀ ಹತ್ಲೇನೇ ಕಳಿಸ್ತೀನಿ.

(ಒಳಗಿನಿಂದ ಧ್ವನಿ. ಒಂದು ಪೇಪರು ಧೊಪ್ಪನೆ ಪಡಸಾಲೆಯಲ್ಲಿ ಬೀಳುವುದು)

ಏ, ಕಮಲೀ, ವರ್ತಮಾನಪತ್ರ ಬಂದೂ ನೋಡವ್ವಾ, ನಿನ್ನ ಕಾಯ್ದೇದ್ದು ಏನಾರೇ ಬರ್ದಾರೇನು ಓದಿ ಹೇಳು!

(ಪೇಪರನ್ನು ಎತ್ತಿ)

ಕಮಲಾ:—ಇಲ್ನೋಡವ್ವಾ, ಮೊದಲ್ನೇ ಪುಟದಾಗೇ ಹ್ಯಾಂಗ ಬರದಾರ! "ಕನ್ಯಾಸಮಸ್ಯೆಯ ಪರಿಹಾರ. ಕನ್ಯಾಪಿತೃಗಳಿಗೆ ಭಾಗ್ಯೋದಯ. ವರದಕ್ಷಿಣೀ ನಿರ್ಬಂಧಕಾಯ್ದೆ, ಮೊದಲನೆಯ ತಾರೀಖಿನಿಂದ ಜಾರಿಯಲ್ಲಿ ಬರುವುದು!"

ಇಂದಿರಾ:— (ಹರ್ಷದಿಂದ) ಆಹಾ! ಮುತ್ತಿನಹಾಂಗ ಛಾಪಿಸ್ಯಾರ. ಟ್ರಂಕಿನ್ಯಾಗ ಒಯ್ದು ಇಡು. ನಾಳೆ ಆ ರಮಾಬಾಯೀ ಮೋರಿಗೆ ಒಯ್ದು ಹಿಡಿಯೋಣಂತ!

ಕಮಲಾ:— ಆಗಲೆವ್ವಾ!

ಇಂದಿರಾ:— ನಾ ಇಲ್ಲೇ ಭಾಗೀರಥೀಬಾಯಿ ಮನೀಗೆ ಪುರಾಣಕ್ಕ ಹೋಗಿಬರ್ತೀನಿ. ಇವರು ಬಂದರಂದರ, ಒಂದು ಕಪ್ಪು ಚಹಾ ಮಾಡಿಕೊಡು. ಇನ್ನ್ಯಾಕ ನಮ್ಮ ಮನ್ಯಾಗ ಹೆಚ್ಚು ದಿವಸ ಇದ್ದೀಯವ್ವಾ! ನಾಳ್ಯೋ ನಾಡ್ದೋ ನಿನ್ನ ಲಗ್ನ ಆಗಿಬಿಟ್ತೆಂದ್ರ ಹೋಗಿಬಿಡ್ತೀದಿ ಅತ್ತೀಮನಿಗೆ!

೨ನೆಯ ದೃಶ್ಯ

(ಅದೇ ಮೊದಲಿನ ಮನೆ. ಗೋಡೆಯ ಮೇಲಿನ ಗಡಿಯಾರ ೫ ಗಂಟೆಯನ್ನು ತೋರಿಸುತ್ತಲಿದೆ.)

(ಆರು ತಿಂಗಳುಗಳನಂತರ)

ಇಂದಿರಾ:— ಆಗಲೇ ಐದು ಗಂಟೆ ಆತು. ಇನ್ನೂ ಬರಲೇ ಇಲ್ಲ. ಜಲ್ದೀ ಕೇಳ್ಕೊಂಡು ಬರ್ರೀ ಅಂತ ಒಂದಿಪ್ಪತ್ತು ಸಾರೇ ಹೇಳೀನಿ. ಇವತ್ತೊಂದು ದಿವಸ ಕಚೇರಿಗೆ ಹೋಗಬ್ಯಾಡ್ರೀ ಅಂದೆ, ಕೇಳ್ತಾರ ಎಲ್ಲಿ ನನ್ಮಾತು? ತಾಳೀ ಕಟಿಗೊಂಡು ಬಂದಿದ್ದೇ ಬಂದೀನಿ. ಒಂದರೇ ಮಾತು ನಡಿಸ್ಯಾರೇ ಇವರು ನಂದು? ಮಗಳ ತಲೀಮ್ಯಾಲೆ ನಾಕು ಅಕ್ಕೀಕಾಳು ಹಾಕಿ ಸಾಯ್ಬೇಕಂತ ಮಾಡೀನಿ. ಅದನ್ನ ಸಹಿತ ದೇವರು ನಡಿಸಿಕೊಡವ್ರೊಲ್ಲ! ರಾಮಾ, ಇಂಥಾ ದೈವ ಯಾರಿಗೂ ಬ್ಯಾಡಪಾ!

(ಒಳಗಿನಿಂದ ಬಾಗಿಲ ಸಪ್ಪಳ)

ಕಮಲಾ:— (ಪ್ರವೇಶಿಸಿ) ಅಪ್ಪ ಬಂದ್ನೋಡು, ಸುಮ್ನೇ ಒದರ್ಯಾಡ್ತೀ! ಯಾರದಾದರೂ ಭೆಟ್ಟಿ ಆಗಿದ್ದೀತು...ಮಾತಾಡಿಕೋತ ನಿಂತಿದ್ದಾರಾದೀತು!

(ಕಿಷನ್‌ರಾಯರು ಪ್ರವೇಶಿಸಿ, ಏನೂ ಅರಿಯದವರಂತೆ ಒಳಗೆ ಹೋಗುವರು.)

ಇಂದಿರಾ:— ಬಂದಿರ್ಯಾ? ಮನೀ ನೆನಪಾತೇ ಇವತ್ತ? ಸಾಯೋ ಕಾಲಕ್ಕ ನಾಕು ಗುಟುಗು ನೀರು ಹಾಕಲಿಕ್ಕೆ ಹೇಳಬೇಕು ನೋಡ್ರಿ ನಿಮ್ಮಂಥವರಿಗೆ.......ಮಾತು ಸಹಿತ ಆಡೋದಿಲ್ಲ! ಹಾಂಗೇ ಹೋದ್ರ್ರಿ ಖೋಲ್ಯಾಗ! ತಾವು ತಡಾಮಾಡಿ ಬರೋದು; ಮತ್ತ ನನ್ನ ಮ್ಯಾಲೆ ಸಿಟ್ಟು.......(ಅಳುವ ಧ್ವನಿಯಿಂದ) ಮಗಳ ತಲೀಮ್ಯಾಲೆ ನಾಕು ಅಕ್ಕೀ ಕಾಳು ಬೀಳ್ಲೀ ಅಂತ ಜನ್ಮ-ಜನ್ಮಾಂತರ ದೀಪಾ ಹಚ್ಚಿಗೋತ ಬಂದೀನಿ; ಆದರಾಗೂ ವಿಘ್ನ ಬರಲಿಕ್ಕೆ ಹತ್ಯಾವ! ದೇವರೇ, ಸ್ವಾಮಿಯಾ, ಇಂಥಾ ಪರಿಯಿಂದ ಇಡೋದಕ್ಕಿಂತಾ ಕಣ್ಮುಚ್ಚಿ ಬಿಡಪ್ಪಾ!

ಕಿಷನ್‌ರಾವ್:— (ಪ್ರವೇಶಿಸಿ) ಏ ಏ ಹಿಂಗ್ಯಾಕ ಸುರುವು ಮಾಡೀದೀ? ಸನ್ನಿ ಬಡ್ದೋರ್ಹಾಂಗ? ದೇವರೇ ಅಂತ ಈಗ ಇನ್ನೂ ಕಾಲಿಡೋದು ಇಡ್ತೀನಿ; ಮನ್ಯಾಗ ಸುರುವು ಆಗೇದ ನಿನ್ನ ಬಾಯಿಯಾ ಝಗಾಂಗಟಿ! ಕಚೇರಿಂದ ಬಂದೀನಿ; ಸ್ವಲ್ಪ ಚಹಾ ಕಾಫೀ ಕೊಡೋದು ಬಿಟ್ಟು ಹಿಂಗ್ಯಾಕ ಸುರುವು ಮಾಡೀದಿ? ಸಾಕಾಗಿ ಹೋಗೇದ ನಿನ್ನ ಒದರಾಟದ ಕಾಲಾಗ!

ಇಂದಿರಾ:— ನಾ ಸಾಕಾಗಿ ಹೋಗಿದ್ದರ, ಇನ್ನೊಬ್ಬಾಕಿನ್ನ ಮಾಡಿಕೊಳ್ರಲ್ಲಾ! ಹೊಸಾ ಸಂಸಾರ ಹೂಡ್ರಿ!

ಕಿಷನ್:— (ಹಾಸ್ಯದಿಂದ) ನಾ ಮಾಡಿಕೋಬೇಕಂದ್ರ ಕನ್ಯಾಕ್ಕೇನು? ಕಾಸಿಗೆ ಒಂದು....ಕೊಸರಿಗೆ ಒಂದು! ಸುಮ್ನ ನಿನ್ನ ಗೋಳು ಯಾಕ ಕಟಿಗೋಬೇಕಂತ! ಮಗಳ ಲಗ್ನಾ ಒಂದು ಮಾಡಬೇಕಾಗೇದ.

ಇಂದಿರಾ:— (ಆಕ್ರೋಸದಿಂದ) ಅಯ್ಯ! ಮಗಳ ಲಗ್ನೇನು ಹರಕತ್ತಾಗೇದ? ನಿಮ್ಮದಾಗಲಿ ಮೊದಲ!

ಕಿಷನ್:— ಹಾಕ್ಯಾಡ್ಲಿಕ್ಕಂತೂ ಹಿರಿದು ನೋಡು ನೀ! ಇನ್ನೊಬ್ಬರ ಮನ್ಯಾಗ, ಗಂಡ ಮನಿಗೆ ಬಂದ ಕೂಡ್ಲೆ, ಕಾಲಾಗಿನ ಬೂಟು ಬಿಚ್ತಾರ; ಕೈಕಾಲ್ಮ್ಯಾರಿಗೆ ನೀರು ಕೊಡತಾರ; ಚಹಾದ ಸಂಗಡ ಏನಾದರೂ ಮಾಡಿಕೊಡ್ತಾರ! ನೀ ಏನ್ ಕೇಳಬ್ಯಾಡ; ಸುಮ್ಮನಿರೇ ಕೂತಾಳಂದ್ರ ಅದೂ ಆಗವ್ರೊಲ್ದು ನಿನ್ನ ಕಡಿಂದ!

ಇಂದಿರಾ:— ಅಯ್ಯ! ಮುಪ್ಪಿನ ಕಾಲಕ್ಕ ನಿಮ್ಮ ಬೂಟುನೂ ಬಿಚ್ಚಬೇಕೇನು ನಾನು? ಏನು ಹಾಂಗೇ ಹೊಸ್ತಾಗಿ ಬಂದೀನಿ ಮೊದಲ್ಗಿತ್ತಿ ಮನಿಗೆ....ಸುರುವು ಮಾಡ್ತೀನಿ ನಿಮ್ಮ ಸೇವಾನ! ಸಾಯೋಕಾಲ ಬಂದ್ತು; ಇನ್ನೂ ಹೊಸಾ ಹೊಸಾ ಬಯ್ಕೆನೇ

...ಕ್ಕೆ ಹೆತ್ತ್ಯಾವ ನಿಮಗ! ಮಗಳು ಕೇಳಿದರ ನಕ್ಕಾಳು. ...ಹಾದ ಸಂಗಡ ಏನಾರೂ ಮಾಡ್ಬೇಕಂತ! ಮೊನ್ನೆ ಇನ್ನೂ ...ಕ್ಕಿಟ್ಟು ಹಾಕಿಟ್ಟೀನಿ. ಇನ್ನೇನು ಬೇಕು ನಿಮಗ?

ಕಿಷನ್ :— ಖರೇ ಅದ ನೋಡು ನಿನ್ನ ಮಾತು! ಅದಕs ಇಷ್ಟು ದಿವಸ ನಿನ್ನ ಸಂಗಡ ಬದುಕಿ ಸಂಸಾರಾ ಮಾಡೀನಿ; ಇಲ್ಲಿ-ದ್ದರ ಸಾಧ್ಯಾನ ಇದ್ದಿಲ್ಲ. ಕಮಲ್ಯಾ ಎಲ್ಲಿಗೆ ಹೋಗ್ಯಾಳ?

ಇಂದಿರಾ :— ಇಲ್ಲೇ ಆ ಜೋಯಿಸರ ಕೌಸಲ್ಯಾನ ಮನೀಗೆ ಕೂಡ್ಲಿಕ್ಕೆ ಹೋಗ್ಯಾಳ. ಹೋಗಿದ್ರೇನು ರಮಾಬಾಯಿ ಮನಿಗೆ?

ಕಿಷನ್ :— ಹೌದು ಹೋಗಿದ್ದೆ.

ಇಂದಿರಾ :— ಏನಾಯಿತು?

ಕಿಷನ್ :—ಏನಾಗೋದು ಅಪ್ಪರದೃಷ್ಟಿ! ನಾ ನಿನಗ ಆಪ್ರೊತ್ತs ಹೇಳೀನಿ. ಗಂಡಿನವರು ಮಣ್ಯಾದಿಲ್ಲಾ— ಮಣ್ಯಾದಿಲ್ಲಾಂತ! ಇನ್ನೂ ಏನು ನೀನು ಬೇಗಿತ್ತೀಬಿಂಕಾ ಬಿಡವೊಲ್ಲಿ! ಇನ್ನs ಹೀಂಗ ಎಷ್ಟು ದಿವಸ ಬೆಳಸ್ತೀದ್ಯೋ ಬೆಳ್ಸು.

ಇಂದಿರಾ:— ಏನಾದದ್ದು ಹೇಳ್ತೀರಾ? ಏನು ಹೀಂಗ ನನ್ನ ಮ್ಯಾಲೇ ರೇಗಾಡ್ತಿರಾ?

ಕಿಷನ್ :— ಏನಾತು! ನಂದೂ ನಿಂದೂ ಸಂತಿ ಆತು! ಅವರಂತೂ ಹೇಳಿಬಿಟ್ಟರು: ನಮ್ಮ ಹುಡ್ಗ ಲಗ್ನಾ ಒಲ್ಲೇ ಅಂತಾನ; Ph. D. ಡಿಗ್ರೀ ಬ್ಯಾರೇ ಪಡಕೋತಾನ— ಅಂತ!

ಇಂದಿರಾ :— ಏನ ಡಿಗ್ರೀ ಪಡಕೋತಾನೋ? ಏನ ಪಗಡೀ ಹಕ್ಕೋತಾನೋ? ನನಗಂತೂ ಹುಡಿಗಿ ಎದೀಮ್ಯಾಲೆ ಕೂತ್ಹಂಗ ಆಗೇದ. ವರದಕ್ಷಿಣೀ ಕಳವಿನಿಂದಾದ್ರೂ ಕೊಟ್ಟು ಲಗ್ನಾ ಮಾಡಿಬಿಡ್ರಿ!

ಕಿಷನ್ :— 'ವರದಕ್ಷಿಣೀ ಕಾಯ್ದೆ' 'ವರದಕ್ಷಿಣೀ ಕಾಯ್ದೇ' ಅಂತ ಹಾರ್ಯಾಡಿದಿ. ಇನ್ನೊಂದಿಷ್ಟು ಹಾರ್ಯಾಡು! ನಾ ಅಂತೂ ಕಾಯ್ದೇ ವಿರುದ್ಧ ಹೋಗೋದಿಲ್ಲ. ನಿನಗೇನು? ಚಾತುರ್ಮಾಸೀ ರಂಗೋಲೀ ಹಕ್ಕೋತ ಕೂತೀ; ಜೇಲಿಗೆ ನನ್ನ ಒಯ್ತಾರ. ಮುಪ್ಪಿನ ಕಾಲಕ್ಕ ಸೇರಸ್ಬೇಕಂತಿ ಏನು ಜೇಲ್ನಾಗಷ್ಟು?

ಇಂದಿರಾ :— ಅಯ್ಯ, ನಾ ಯಾಕ ಸೇರಸ್ಲಿ ನಿಮ್ಮನ್ನ ಜೇಲ್ನಾಗ? ಏನಾರ ಮಾತಾಡಿದ್ರ ಹೀಂಗ ವಿಪರೀತs ತಿಳ್ಕೊಂಡು ಜಗಡಾಡ್ತೀರಿ! ನೀವು ವರದಕ್ಷಿಣೀ ಕೊಡದಿದ್ದರ, ಕನ್ಯಾದಾನ ಆಗೂದಿಲ್ಲಾಂತ ನನಗ ಗೊತ್ತs ಅದ. ಆ ಹುಡುಗಿನ್ನೇನು ಭಾವೀನೂಕಿಸಬೇಕs? ಚಾತುರಮಾಸಿಗೆ ಸ್ವಾಮಿಗೋಳು ಬ್ಯಾರೇ ಇಲ್ಲೇ ಕೂಡವರು ಇದ್ದಾರಂತ; ನೋಡಿ ಏನಂದಾರು? ವೆಂಕಟೇಶಾ, ಏನ ತಂದೆಪಾ ಮುಪ್ಪಿನಕಾಲಕ್ಕ?

ಕಿಷನ್ :— ಆತನ ಹೆಸರು ಯಾಕ ತಗೀತಿದಿಯೋ ತಂಪು ಹೊತ್ತ್ಯಾಗ?.... ಓದವೊಲ್ಲಣ್ಯಾಕ.... ಕಾಲೇಜಿಗೆ ಹೋಗ್ಲಿ!

ಇಂದಿರಾ :— ಹುಂ, ಓದಸ್ರಿ; ಇನ್ನಿಷ್ಟು ಓದಸ್ರಿ. ಅದಿಷ್ಟು ಮುದಿಹೆದ್ದಿನ ಕಳೀ ಬರ್ಲಿ ಮಾರೀಮ್ಯಾಲ. ಮಾಡಿಕೊಳ್ಳೋರು ಸಹಿತ ಅಂಜಿ ಓಡಿಹೋಗ್ಲಿ!

ಕಿಷನ್ :— ಮತ್ತೇನ ಮಾಡಂದಿ?

ಇಂದಿರಾ :— ನಾ ಆಗ್ಲೇ ಹೇಳಿದೆನಲ್ರೀ, ಏನಾದರೂ ಒಳಗಿಂದೊಳಗ ಕೊಟ್ಟು, ಲಗ್ನಾ ಮುಗಿಸಿಬಿಡ್ರೀ ಅಂತ. ರಮಾ-ಬಾಯಿಗೆ ದುಡ್ಡಿನ ಆಶೇ ಬಹಳ ಅದ. ದುಡ್ಡು ಕೊಟ್ಟುಬಿಟ್ಟರ ನಮ್ಮ ಹುಡುಗೀ ರೂಪದ್ದು—ವಯಸ್ಸಿಂದು—ಯಾವ ತಂಟೇನೂ ತಗೀದ ಒಪ್ಪೇ ಬಿಡ್ತಾಳ.

ಕಿಷನ್:— ರಮಾಬಾಯಿಗೇ ಯಾಕ? ನಿನಗಿಲ್ಲೇನು ದುಡ್ಡಿನ ಆಶಾ? ಸರ್ಪ ಇದ್ಹಾಂಗ ಇದ್ದೀ ನೀ ಸರ್ಪ! ನನ್ನ ಹತ್ತರಂತೂ ಒಂದು ದುಡ್ಡು ಇಲ್ಲಾ! ನಿನ್ನ ಹೆಸರ್ಲೆ ಪೋಸ್ಟಿನೊಳಗ ಇಟ್ಟೀನಲ್ಲಾ ೩,೦೦೦ ರೂಪಾಯಿ? ಅವನ್ನ ಖರ್ಚುಮಾಡಂದ್ರ ಮಾಡ್ತೀನಿ.

ಇಂದಿರಾ :— ಹುಂ, ಹೂಡಿದ್ರೇನು ಆಟಾ ಆಗ್ಲೇ? ನನ್ನ ದುಡ್ಡಿಗೊಂದs ಕೈ ಹಚ್ಚರಿ; ಇಲ್ಲೇ ನಿಮ್ಮ ಹೊಸ್ತಿಲ್ದಾಗ ಜೀವಾ ಕೊಡತೀನಿ.

ಕಿಷನ್ :— ಹಂಗಾದರ ಬಿಡು.... ಮಗಳ ಲಗ್ನಾನs ಆಗೋದಿಲ್ಲ!

ಮಲೇರಿಯಾ
ಇನ್‌ಫ್ಲುಯೆಂಜಾ
ಮತ್ತು
ಯಾವತ್ತೂ ಜ್ವರಗಳು
ಒಡನೆ ವಾಸಿ ಹೊಂದುತ್ತವೆ.
ಶ್ರೀಮಂತರ–ಬಡಬಗ್ಗರ–ಕೂಲಿಕಾರರ ಎಲ್ಲರ ಸಲುವಾಗಿ
ಜ್ವರಗಳ ಮೇಲೆ ರಾಮಬಾಣ ಔಷಧ.
ಮಾದನ್ ಸನ್ಸ್ ಮತ್ತು ಕಂ. ಕೆಮಿಸ್ಟ್ಸ್,
ಮುಂಬಯಿ—೨.

ಇಂದಿರಾ:—ನಿಮ್ಮ ಹತ್ತರ ಇದ್ದ ದುಡ್ಡು ಖರ್ಚು ಮಾಡ್ರೆಲ್ಲಾ.

ಕಿಷನ್ :— ನನ್ನ ಹತ್ತರ ಇರೋವೆಷ್ಟು? ಮೊನ್ನೆ ಇನ್ನೂ ೧೫೦೦೦ ಕೊಟ್ಟು ಮನೀ ತಗೊಂಡೀನಿ! ಇನ್ನ ಆ ಸೆಂಟ್ರಲ್ ಬ್ಯಾಂಕಿನ್ಯಾಗ ಒಂದು ಹತ್ತು ಸಾವಿರ ಅದ!.... ಮಗಾ ಇದ್ದಾನ.... ಇದಲ್ಲದ— ಹಡಿದೀದಿಯಲ್ಲಾ ಕಡೀ ರತ್ನಾನ....ಆಕೀಗೆ ಬೇಕಪ್ಪ.

ಇಂದಿರಾ :— ಮುಂದಿನ ಮಾತು ಮುಂದ. ಈಗಂತೂ ದಾಟಿ ಹಾಕ್ರಿ!

ಕಿಷನ್ :— ಏನ ದಾಟ ಹಾಕೋದು? ನಾನಽ ದಾಟೋ ಹೊತ್ತು ಬಂದದ!

ಇಂದಿರಾ :— (ಬಿಕ್ಕುತ್ತಾ) ನಿಮಗೇನಾದ್ರೂ ಹೆಣ್ಣಿನ ಕರುಳು ಗಿರುಳು ಗೊತ್ತಿದ್ದರ ಚಿಂತಿಲ್ಲಾ! ಇಷ್ಟು ಘಳಿಸಿದ್ರಿ; ಮಕ್ಕಳಿಗೆ ಮಾಡಲಾರದಽ ಬ್ಯಾಂಕಿನ್ಯಾಗ ಇಟ್ಟರ ಏನ ಬರ್ತಽದ? ಆಕಿನ್ನ ಅಡವೀಗೆ ಅಟ್ಟೀರಾ? ಅಟ್ರಿ!

ಕಿಷನ್ :— ಅಲ್ಲೇ, ನನ್ನ ಜೊತೀಲಿ ಇಷ್ಟು ವರ್ಷ ಸಂಸಾರಾ ಮಾಡ್ತಿ; ನಿನ್ಮಾತುಗಳೇನೂ ಸುಧಾರಿಸಿಲ್ಲ ನೋಡು!

ಇಂದಿರಾ :— ಸುಧಾರಿಸ್ಬೇಕೋ ಬಿಡಬೇಕೋ ನನಗೊಂದೂ ಗೊತ್ತಾಗೋದಿಲ್ಲಾ. ನನಗ ಬರೋ ಮಾತು ಅಷ್ಟ! ಮಂದೀ-ಮನಿಗೆ ಏನ ಕಡಕ್ಕ ಹೋಗ್ಲ್ಯ? ಹ್ಯಾಂಗ ಮಾತಾಡಿದ್ರ ಭಾಗ್ಯಾ ಏನು? ನಿಮಗಂತೂ ತಿಳೀತೋ ಇಲ್ಲೋ? ಕಮ್ಮೀನ್ನ ಸಾಲಿಗೆ ಕಳಿಸೋದು ಸಾಕು; ಆಕೀ ಲಗ್ನಾ ಲಗೂನೆ ಮಾಡ್ಲಿಕ್ಕೇ ಬೇಕು. ನೀವು ಮಾಡ್ಲಿಲ್ಲಾಂದ್ರ ನನ್ನ ಆಶಾ ಬಿಟ್ಟು ಬಿಡ್ರಿ. ಎಲ್ಲ್ಯಾರೇ ಕೆರೀ ಭಾವೀ ಬಿದ್ದು ಜೀವಾ ನೀಗ್ತೀನಿ.

ಕಿಷನ್ :— ಕೆರೀ-ಭಾವೀದೊಂದು ದೊಡ್ಡ ಅಂಜಿಕೀ ಹಾಕ-ತೀದಿ. ಹೋಗು, ಬೀಳು ಹೋಗು! ಹಾದೀ ತೋರಸ್ಲೇನು ಭಾವೀದು? ಹುಂ! ತನ್ನ ಜೀವ ತನ್ನ ಕೈಯಾಗ ಅದ ಅಂತ ತಿಳ್ದಾಳ!

ಇಂದಿರಾ:— (ಅಳುತ್ತಾ) ಅಯ್ಯ, ನನ್ನ ಜೀವಾನೂ ಬ್ಯಾಡಾತಽ, ನಿಮಗ?

ಕಿಷನ್ :—ಇದೇನು ಭಾವೀ ಬೀಳೂ ಅಂದ್ರ ಅಳ್ಳಿಕ್ಕೆ ಹತ್ತೀ-ದೆಲ್ಲಾ! ಘಳಿಗ್ಗೊಮ್ಮೆ ಅಂಜಿಕೀ ತೋರಿಸ್ತೀರಿ ನೀವು ಹೆಂಗಸ್ರು! ನನ್ಗೂ ಆಕೀ ಲಗ್ನದ ಕಾಳಜಿ ಅದ ಅಂತ ಇಪ್ಪತ್ತು ಸಾರೇ ಹೇಳೀನಿ; ಅದಕ್ಕಂತ್ಲೇ ಈಗ ಬರೋ ಕಾಲಕ್ಕ ಪುರೋಹಿತನ್ನ ಕಳಿಸಿ ಬಂದೀನಿ. ಏನಾದ್ರೂ ಬಗೀ ಹರ್ಸಿಗೊಂಡು ಬಂದು ಹೇಳ್ತೀನಿ— ಅಂದಾನ.

ಇಂದಿರಾ :— ಸರಿ ಹಂಗಾದ್ರ! ಅವರದಂತೂ ಹಿಂಗಾತು.... ಮತ್ತ ನಿಮ್ಮ ಗೆಳೆಯರ ಮಕ್ಕಳು ಯಾರೋ ಇದ್ದಾರಂತ ಅಂತಿದ್ರಿ; ಅವರ ಕಡಿಂದ ಏನಾದ್ರೂ ಸುದ್ದಿ ಬಂದಽದ?

ಕಿಷನ್ :— ಬಂದಽದಲ್ಲಾ ಇವತ್ತ ಕಾಗದಾ! ಯಾ ಗೆಳೆ-ಯರು ಯಾಕ ಆಗ್ತಾರ ನಮ್ಮ ಹೊತ್ತಿಗೆ? ಅವರು ತಮ್ಮ ಮಕ್ಕಳಿಗೆ ೫ ವರ್ಷ ಲಗ್ನಾನಽ ಮಾಡೋದಿಲ್ಲಂತ.

(ಮೋಟಾರು ಬರುವ ಸಪ್ಪಳ ಮತ್ತು ಹಾರ್ನ್)

ಇಂದಿರಾ :— ಅಯ್ಯ, ಮೋಟಾರು ಬಂತು ನೋಡ್ರಿ, ಮನೀ-ಮುಂದ! ನಿಮ್ಮ ಸಾಹೇಬ್ರು ಬಂದಾರೋ ಏನೋ?

ಕಿಷನ್ :— ಸಾಹೇಬ್ರು ಯಾಕ ಬರ್ತಾರಲ್ಲೆ ಹಾಳಗ್ವಾಡ್ಯಾಗ ಬೀಳ್ಳಿಕ್ಕೆ? ಪುರೋಹಿತರು ಬಂದಿರಬಹುದು.

ಇಂದಿರಾ :— ಪುರೋಹಿತಗ ಮೋಟಾರು ಎಲ್ಲಿಂದ ಬಂತು? ತೊನಿಸಿಬಡಕ ಕುದರಿ ಏನಾತು ಆತಂದು?

ಕಿಷನ್ :— ಇದು ನೋಡು....ವರದಕ್ಷಿಣೀ ಕಾಯ್ದೇದ ಕರಾ-ಮತ್ತು! ಆ ಕಾಯ್ದೇ ಪಾಸಾಗಿ ಆರೇಳು ತಿಂಗಳು ಆಗೇದೋ ಇಲ್ಲೋ.... ಪುರೋಹಿತ ಒಂದು ಬಂಗ್ಲೇ ಖರೀದೀ ತಗೊಂಡಾ; ತಿರುಗಾಡಲಿಕ್ಕೆ ಒಂದು ಮೋಟಾರು ಮಾಡಿದಾ!

ಇಂದಿರಾ :— ಅಯ್ಯ, ಇಷ್ಟು ರೊಕ್ಕ ಎಲ್ಲಿಂದ ಬಂತ್ರೀ ಆಚ್ಯಾರಿಗೆ?

ಕಿಷನ್ :— ನಿನ್ನ ತಲ್ಯಾಗ ಗೊಬ್ಬರ ತುಂಬೇದ ಗೊಬ್ಬರ! ನೀನು ಭಕ್ರೀ ಮಾಡೂದಿಲ್ಲಾಂತ ಕಾಲುಚಾಚಿ ಅಡ್ಡ ಕೂತಾಗ, ನಾನು ಅಕ್ಕೀ ಎಲ್ಲಿಂದ ತರ್ತೀನಿ ಗೊತ್ತದನ?

ಇಂದಿರಾ :— ರಾಮನ ಕೈಯಾಗ ರೂಪಾಯಿ ಕೊಡತೀರಿ.... ಅದೇನೋ ಅಂತಾರಲ್ಲ ಕಳ್ಳಸಂತಿ.... ಅದರಾಗ ತರ್ತಾನ.... ರೂಪಾಯಿಗೆ ಸೇರೋ ಮೂರುಪಾವೋ ಕೊಡ್ತಾರ!

ಕಿಷನ್ :— ಹಾಂ, ಇದರಿಂದ ಅಂಗ್ಡಿಯವರಿಗೆ ಎಷ್ಟು ಲಾಭ ಆಗತಽದಂತ ಮಾಡೀದಿ? ಒಬ್ಬೊಬ್ಬರು ಎಂತೆಂಥಾ ಮನೀ ಕಟ್ಟಿಸ್ಯಾರ ನೋಡಿದಿಲ್ಲೊ? ಈ ಪುರೋಹಿತ, ವರದ ಬ್ಲ್ಯಾಕ್ ಮಾರ್ಕೇಟು. ನಡಿಸ್ಯಾನ....ದಿನಾ ದಿನಾ ಉಬ್ಬಲಿಕ್ಕೆ ಹತ್ಯಾನ.

ಇಂದಿರಾ :— ಹೌದು ನೋಡ್ರಿ. ಈಗ ತಿಳೀತು, ಆ ಪಿಟಪಿಟ ರಂಗಪ್ಪಗಂತೂ ಅರಳೀದಿಂಡಿನಂತಾ ಹೊಟ್ಟಿ ಬಂದಽದ!

ಕಿಷನ್ :— ಈತ್ಗೇನು ಕಡಿಮಿ ಬಂದದಂತ ತಿಳ್ದೀ ಏನು? ಈತನ ಬಲಗೈ ಇದ್ದಾನಲ್ಲಾ, ಆ ನುಚ್ಚು-ಭಕ್ರೀ ತಮಣಾಚಾರಿ? ಆತನದಂತೂ ಹೇಳ್ಲಾಸಲ್ಲ.

(ಮತ್ತೊಮ್ಮೆ ಹಾರ್ನ್)

ಇಗಾ ಕರ್ಕೊಂಡು ಬರ್ತೀನಿ. ಹುಷಾರಿಯಿಂದ ಮಾತಾಡಬೇಕು ನೋಡು!

ಇಂದಿರಾ :— ಬ್ರಾಹ್ಮಣ ಮನಿಗೆ ಬಂದಾನ; ಒಂದಿಷ್ಟು ಅಳ್ಳಿಟ್ಟು ಕಲಸಲ್ಯಾ?

ಕಿಷನ್ :— ಆಹಾ! ಜಗತ್ತಿಷ್ಟು ಬದಲಾಯಿಸಿ, ನೀ ಏನ ಬದ್ಲಾಸಲಿಲ್ಲ. ನಾ ಆತನ್ನ ಹಿಂದಾಗಡೆ ಕರಕೊಂಡು ಹೋಟ್ಲಿಗೇ ಹೋಗ್ತೀನಂತ.

(ಪುರೋಹಿತರ ಪ್ರವೇಶ. ಮೈಮೇಲೆ ಜರತಾರಿ ಸೇಟಾ, ಅಂಚಿನ ಧೋತರ, ಸಿಲ್ಕಿನ ನೆಹರುಷರಟು, ಚಿನ್ನದ ಗಡಿಯಾರ.)

ಕಿಷನ್ / ಇಂದಿರಾ }:— ಹುಂ, ಹಿಂಗ ಬರ್ರಿ ಆಚಾರ! ಹಿಂಗ ಹೀಂಗ, ವ್ಯಾಲಕ್ಕ ಬರ್ರಿ.

ಪುರೋಹಿತರು:— ಹುಂ, ಹುಂ, ಬರ್ತೀನಿ. ಏನ್ರೆವ್ವಾ ನೆಟ್ಟಗಿದ್ದೀರಾ?

ಇಂದಿರಾ:— ಹೂಂನ್ರೆಪಾ ನೆಟ್ಟಗs ಇದ್ದೀನಿ. ನೀವಂತೂ ಮನೀಕಡಿಗೆ ಬರೋದು ಬಿಟ್ಟsಬಿಟ್ಟೀರಿ ಇತ್ತಿತ್ತಲಾಗ!

ಪುರೋಹಿತ:— ಹೌದ್ನೋಡ್ರಿ. ಪುರಸತ್ತೇ ಆಗೋದಿಲ್ಲ. ಇವತ್ತ ನಾಳೆ ನಾಕೈದು ಕಡೆ ವರಾ ನೋಡೂ ಕೆಲಸ ಬ್ಯಾರೇ ಹತ್ತೇದ. ಮೊನ್ನೆs ಆ ಮಲ್ಲಪ್ಪನ ತೋಟಾ ಬ್ಯಾರೇ ಖರೀದಿ ತಗೊಂಡೀನಿ. ಅದರ ಕೆಲ್ಸಾನೂ ಬಹಳಾಗಿಬಿಟ್ಟದ. ಇಷ್ಟು ದಿವಸ ವಾಸ್ಯಾ ಇರತಿದ್ದಾ; ಹೊಲಾ ಮನೀ ನೋಡ್ಕೊಂಡು ಹೋಗ್ತಿದ್ದಾ. ಮೊನ್ನೆ ಅವನೂ ಮುಂಬಯಿಗೆ ಕಲೀಲಿಕ್ಕೆ ಹೋದಾ.

ಇಂದಿರಾ:— ಮ್ಯಾಟ್ರಿಕ್ ಪಾಸಾಗಿ ನೌಕ್ರೀ ಮಾಡತಿದ್ದ ನಲ್ಲಾ?

ಪುರೋಹಿತ:— ಹೌದು, ಆಗ ದೇವರು ಅನುಕೂಲಾ ಕೊಟ್ಟಿದ್ದಿಲ್ಲಾ. ಅದಕ ನೌಕ್ರಿಗೆ ಹಚ್ಚಿದ್ದೆ. ಈಗ ದೇವರು ಅನುಕೂಲಾ ಒದಗಿಸಿ ಕೊಟ್ಟಾ; ಕಳಿಸಿ ಕೊಟ್ಟೇನಿ ಮುಂಬಯಿಗೆ.

ಇಂದಿರಾ:— ನೆಟ್ಟಗಾತ್ರೆಪಾ; ಗಂಡು ಹುಡುಗುರು ಕಲ್ತರs ನೆಟ್ಟಗ.

ಪುರೋಹಿತ:— ಹಂsss, ಮತ್ತೇನ ಸುದ್ದಿ? ಮಗಳ ಲಗ್ನಾ ಹೊಡಸ್ಯಾಡಿ ಮಾಡಿಬಿಡಬೇಕಂತ ಮಾಡೀರಂತಲ್ಲಾ.

ಇಂದಿರಾ:— ನಾವೇನ್ರೀ ಬೇಕಾದ್ದು ಮಾಡಬೇಕಂತೀವಿ; ದೇವರು ಒದಗಿಸಿ ಕೊಡಬೇಕಲ್ಲ!

ಪುರೋಹಿತ:— ಮಾತಗ್ದೀ ನೋಳಾ ಆಣೆ ಆಡಿದ್ರಿ ನೋಡ್ರಿ! ನಕ್ಷತ್ರಾನುಕೂಲ ಆಗ್ದs ಯಾವ ಕೆಲಸ ಸಾಧ್ಯ ಅದ?

ಕಿಷನ್:— ಅದ್ಯಾಕ್ರಿ? ಲಕ್ಷ್ಮೀ ಅನುಕೂಲ ಒಂದಾಗ ಬೇಕಲ್ಲ.

ಪುರೋಹಿತ:— ಹುಂsss ಕಲ್ಯಾಣಕಾರ್ಯ; ಲಕ್ಷ್ಮೀ ಇಲ್ಲದ ಹ್ಯಾಂಗ ಸಾಧ್ಯ?

(ಹೊರಗೆ ಲಕ್ಷ್ಯವನ್ನು ಹೊರಳಿಸಿ)

ತಮ್ಣಾ ಚ್ಯಾರಿ! ಏ ತಮ್ಣಾ ಚ್ಯಾರಿ! ಆ ನಾಶೀಡಬ್ಬಿ, ಕಾರ್ನ್ಯಾಗ ಉಳಿದು ಹೋಗೇದ; ತೊಗೊಂಡು ಬಾ!

ಕಿಷನ್:— ಹೋಗಿದ್ದಿರೇನು ರಮಾಬಾಯಿಮಾ ಮನೀಕಡೀಗೆ?

ಪುರೋಹಿತ:— ಹುಂ, ಹೋಗಿದ್ದೆನಲ್ಲಾ! ನಿಮ್ಮನ್ನ ಇತ್ಲಾಗ ಕಳಿಸಿ, ನಾ ಅತ್ಲಾಗ ಹೋದೆ! ಜಾತ್ಕಾ ಅಂತೂ ಮೊದಲs ಕೂಡಿಸಿ ನೋಡೀನಿ!

ಕಿಷನ್:— ಹೌದು, ಕೂಡಿಸಿ ನೋಡಿ ಏಳೆಂಟು ತಿಂಗಳಾತು.

ಪುರೋಹಿತ:— ನಾ ಹೋದ ಕೂಡಲೆ ಅವರಿಗೆ ಗೊತ್ತೇ ಆಗಿ ಬಿಟ್ಟಿತು.... ಪುರೋಹಿತರು ಬಂದದ್ದ ಮನಿಗೆ ಕನ್ಯಾ ತಗೊಂಡೇ ಬರ್ತಾರಂತ. ರಾಯರಂತೂ 'ನುಗನ ಲಗ್ನಾ ಮಾಡೋದಿಲ್ಲಾ... ಆವ ಇನ್ನೂ ಮುಂದ ಓದತಾನ' ಅಂತ ಹೇಳಿದ್ರು.

ಇಂದಿರಾ:— ಆಯ್ತು, ಮುಂದೇನ ಗತೀ ಅಂತೀನಿ.

ಪುರೋಹಿತ:— ನೀವ್ಯಾಕ ಘಾಬ್ರಿ ಆಗ್ತೀರಿ? ನಾ ಇದ್ದೀನಲ್ಲಾ! ನಮ್ಮ ಬ್ಯಾಳಿ ರಾಯರ ಹತ್ತರ ಬೆಯ್ಯೋದಿಲ್ಲಾಂತ ಗೊತ್ತಿತ್ತು; ಸೀದಾ ಅಡಿಗೀ ಮನಿಗೆ ಹೋದೆ.

ಇಂದಿರಾ:— ಏನಂದ್ರು ಅವರು?

ಪುರೋಹಿತ:— ನಾ ಹೋದ ಮ್ಯಾಲೆ ಇಲ್ಲಾಂತ ಹ್ಯಾಂಗ ಅಂತಾರ? ಹಾಗೂ ಹೀಗೂ ಮಾಡಿ ೫೦೦೦ಕ್ಕ ಒಗೀಹರಿಸಿಗೊಂಡು ಬಂದೀನಿ. ನೀವು ಒಪ್ಪತಿದ್ದರ ಇದs ವೈಶಾಖಮಾಸದಾಗ, ತುಳಜಾಭವನದಾಗ ಮಾಡಿಬಿಡೋಣಂತ!

'ಬಗನ' ಬಾಲಾಮೃತ

ಮಕ್ಕಳ ಸದೃಢತೆಗಾಗಿ 'ಬಗನ' ಬಾಲಾಮೃತವನ್ನು ಉಪಯೋಗಿಸಿರಿ.

ಮುಖ್ಯವಾಗಿ ಮಕ್ಕಳ ಯಕೃತು ಮತ್ತು ಹೊಟ್ಟೆ ಎಂದರೆ ಅವರಿಗೆ

ರೋಗದ ಭಯವಿಲ್ಲ.

ಬಗನ ಬಾಲಾಮೃತದಲ್ಲಿ 'ಗ್ರಾಯಿಪ್ ಹೀಲರಿನ' ಅಂಶವೂ ಇರುವದರಿಂದ, ಇದು ಮಕ್ಕಳ ಉತ್ತಮ 'ಟೋನಿಕ್ಕು' ಇರುವದು.

THE NATIONAL PHARMACIES & PHARMACEUTICALS Ltd. DHARWAR.

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

- ಧ್ವನಿವಾಹಕ-ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್‌ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಅ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

ಇಂದಿರಾ:— ಅಲ್ರೀ, ವರದಕ್ಷಿಣೀ ತಗೋಬಾರದಂತ ಕಾಯ್ದೀ ಪಾಸಾಗೇದ....ಅವರಿಗೆ ಗೊತ್ತು ಇಲ್ಲ?

ಪುರೋಹಿತ :— ಹೌದ್ರೀ, ಪಾಸ್ ಆಗೇದ! ಎಲ್ಲೀತನಕ ನಡೀಲಿಕ್ಕೆ ಸಾಧ್ಯ ಅದ ಕಾಯ್ದೆ ಪ್ರಕಾರ? ಇಂಥಾವಕ್ಕೆಲ್ಲಾ ಕಾಯ್ದೀ ಏನ ಕೆಲ್ಸಾ ಕೊಡತಾವ? ಸರಕಾರನs ಯಾವ ಯಾವ ಕಾಯ್ದೀ ಪ್ರಕಾರ ನಡದsದ ಹೋಳ್ರಿ. ಜನರೊಳಗ ಬದಲಾವಣಿ ಆಗ್ಬೇಕ್ರೀ! ಕಾಯ್ದೀ ಪಾಸ ಮಾಡಿದ್ರು; ಅದರ ಪರಿಣಾಮದ ವಿಚಾರ ಮಾಡಿದರ? ಈ ಕಾಯ್ದೀದ ಕಾಲಾಗ ಎಷ್ಟು ಹುಡಿಗಿಯರು ಲಗ್ನ ಆಗಲಾರದ ಕೂತಾರ ನೋಡಿದ್ರ್ಯಾ? ನನ್ನ ಡೈರೀ ಒಳಗs ನೋಡ್ರಿ, ೧೫೦ ಕನ್ಯಾಗಳ ಹೆಸರು ಅದ. ಅವಕ್ಕೆಲ್ಲಾ ಎಂದು ವರಾ ಸಿಗಬೇಕು? ಎಂದು ಲಗ್ನ ಆಗಬೇಕು? ಈ ಸರಕಾರದ ಕಾಲಾಗ ಸಾಕಾಗಿ ಹೋಗೇದ!

ಕಿಷನ್ :— ಹೌದ್ರೀ ಆಚ್ಯಾರ! ಇದೇ ರಮಾಬಾಯಿ ನಾವು ಮೊದಲು ಕೇಳಿದಾಗ, ನಾಲ್ಕು ಸಾವಿರ ಅಂದಿದ್ಲು. ಈಗಾಗಲೇ ೫೦೦೦ಕ್ಕೆ ಬಂದಾಳ. ಎಲ್ಲಿ ನಡೀತಾವರೀ ಕಾಯ್ದೆ ಪಾಯ್ದೆ? ಕಾಯ್ದೀ ಪಾಸಾಗಿ ಎಂಟು ತಿಂಗಳಾತು. ಕನ್ಯಾ ಸಮಸ್ಯಾ ಏನೂ ಬಗೀಹರಿದಿಲ್ಲಾ.

ಪುರೋಹಿತ :— ಅದು ಹ್ಯಾಂಗ ಬಗಿಹರಿತದ. ಇಂಥಾವೆಲ್ಲಾ ಅಫಸ್ಸನಸ್ಥಾಗ ರಫಾದಫೀ ಆಗೋ ಕೆಲ್ಸ! ನಮ್ಮ ದೇಶ ಇನ್ನೂ ಅಷ್ಟು ಸುಧಾರಿಸಿಲ್ರಿ! ಅಕ್ಕಿ-ಜೋಳಾ, ಬ್ಲ್ಯಾಕ್‌ಮಾರ್ಕೆಟು ಮಾಡಿ, ಹೊಟ್ಟೀ ಬೆಳ್ಸೋ ಜನ ಅದ ಇಲ್ಲಿ. ಇದ್ನೋಡ್ರಿ, ಈ ಊರಾಗ D. S. P. ಒಳ್ಳೆಯವ ಇದ್ದಾನಂತ ನಡದsದ. ಏನೋ ನಾಲ್ಕಾರು ಕೇಸೇದಾಗ ಹಾಕಿದ್ರ, ಪಡಪ ಬಿಡ್ತsದ. ಇಲ್ಲದಿದ್ದರ ಸಾಧ್ಯ ಇತ್ತs, ಎಂಟು ಲಗ್ನಾ ಮಾಡ್ಸೋದು. ಈ ವರ್ಷದಾಗ ಹ್ಯಾಂಗೋ ಅವನ್ನ ಒಳಗ ಹಕ್ಕೊಂಡು ಕೆಲ್ಸಾ ಸಾಗಸೀನಿ.

ಕಿಷನ್ :— ಮತ್ತೆ ನ ಮಾಡ್ಬೇಕಂತಿದೇ?

ಇಂದಿರಾ :— ಅಯ್ಯ, ನನ್ಗೇನ್ಗೊತ್ತು. ಏನ್ ನನ್ನ ಕೇ ಮಾಡ್ತೀರೇನು ಎಲ್ಲಾ ಕೆಲ್ಸಾನ ದುಡ್ಡು ಖರ್ಚು ಮಾಡೋರು ನಾನೋ, ನೀವೋ

ಕಿಷನ್ :— ನಾ ಆಗಲೇ ಹೇಳಿದಿನಲ್ಲಾ, ೨೦೦೦ದ ಮ್ಯಾಲೆ ಒಂದು ಬಿಲ್ಲಿ ಆಗೋದಿಲ್ಲಾಂತ.

ಇಂದಿರಾ:— ಆಗದಿದ್ದರ ಬಿಡ್ರಿ!

ಕಿಷನ್ :— ಪುರೋಹಿತರs, ಹಾಂಗಾದರ ಸಾಧ್ಯ ಇಲ್ಲಾಂತ ಹೇಳ್ರಿ.

ಪುರೋಹಿತ :— ಓಹೋ! ಏನ ಅಡ್ಡಿ ಇಲ್ಲಾ; ಹಂಗs ಹೇಳ್ತೀನಂತ! ನಿಮ್ಮ ನಿಮ್ಮ ಅನುಕೂಲ.

ಇಂದಿರಾ :— ಅಲ್ರೀ ಆಚ್ಯಾರ, ಮತ್ತೆಲ್ಲಾದರೂ ವರಾ ಇದ್ದರ ಹೇಳ್ರಿಪಾ!

ಪುರೋಹಿತ :— ನೋಡ್ರಿ, ನಿಮಗ ತಿಳೀಲಿಕ್ಕಿಲ್ಲ, ಸುಮ್ಮನೆ ಒಪ್ಪಿಕೊಂಡು ಬಿಡ್ರಿ. ಆ ತಹಸೀಲ್ದಾರ ಗೋವಿಂದರಾಯು, ನನಗ ಮೊದಲs ಹೇಳಿಟ್ಟಾನ! ಏನೋ ನಮ್ಮ ನಮ್ಮ ಮಂದೀ ಅಂತ ನಿಮ್ಮ ಕನ್ಯಾ ಕೊಡಿಸಬೇಕಂತ ಮಾಡೀನಿ!

ಕಿಷನ್ :— ಹೌದೇಳ್ರಿ ಆಚ್ಯಾರ! ಈ ಹೆಣ್ಣಮಕ್ಕಳಿಗೆ ಏನ ತಿಳೀತದ? ಮನ್ಯಾಗ ಕೂತಿರತಾರ....ಹೊರಗಿನ ಗೋಳು ಇವರೇನು ಬಲ್ರು?

ಇಂದಿರಾ :— ಆದರಾಯಿತು ಮಹರಾಯರ! ನನ್ನ ದುಡ್ಡು ತಗೊಂಡು ಮಾಡ್ತೀರೋ ಇಲ್ಲೊ? ಏನ ಮನ್ಯಾಗ ಕೂಡಿಸಿಗೊಂಡು ಕೂಡೋದsನ ಹುಡುಗಿನ್ನ?

ಕಿಷನ್ :— ಹಾಂ ಒಪ್ಪಿಗೊಂಡಿಲ್ಲೊ? ಆಚ್ಯಾರ, ನಮಗ ಒಪ್ಪಿಗಿ ಅದs ಅಂತ ಹೇಳಿಬಿಡ್ರಿ! ವೈಶಾಖಮಾಸದಾಗ ಮಾಡಿಬಿಡೋಣಂತ.

(ಲೇಶಾವಶಿ ನಗೆಯಿಂದ)

ಪುರೋಹಿತ :— ಅದಕ್ಯರೀ 'ಶುಭಸ್ಯ ಶೀಘ್ರಂ' ಅಂತ ಅನ್ನೋದು! ನಮ್ಮ ಬಾಬಂತೂ ನಿಮಗ ಗೊತ್ತು ಇರಬೇಕಲ್ಲ?

ಕಿಷನ್ :— ಇಲ್ರೀ, ನಮಗೇನ್ ಗೊತ್ತಿಲ್ಲ! ಈ ಕಾಯ್ದೀ ಬಂದ ಮ್ಯಾಲೆ ಇದೇ ಮೊದಲನೇ ಲಗ್ನಾ ಮಾಡೋದು.

ಪುರೋಹಿತ :— ಹೆಚ್ಚೇನಿಲ್ಲ; ೫೦೦ ರೂ.ಗಳಷ್ಟೇ! ಇದರೊಳಗ ೩೦೦ ರೂ.ಗಳಂತು D, S, P, ಗೆ ಹೋಗತಾವ. ಉಳಿದದ್ದರೊಳಗ ಬ್ರಾಹ್ಮಣನ ಹೊಟ್ಟೆ ತುಂಬತsದ. ಮುಹೂರ್ತ ನೋಡಿ ತಿಳಸತೀನಂತ.

ಇಂದಿರಾಬಾಯಿ :— ಆಚ್ಯಾರ, ಸ್ವಲ್ಪ ನಿಂದರ್ರಿ....ಕಮ್ಲಾ ಇವನ್ನಿಷ್ಟು ಆಚ್ಯಾರಿಗೆ ಕೊಟ್ಟು ನಮಸ್ಕಾರ ಮಾಡವ್ವಾ!

(ತಾಂಬೂಲ-ತೆಂಗಿನಕಾಯಿಗಳನ್ನೊಳಗೊಂಡ ತಟ್ಟೆಯನ್ನು ಕಮಲ್ಕಗೆ ಕೊಡುವಳು. ಕಮಲಾ ಪುರೋಹಿತರಿಗೆ ಕೊಟ್ಟು ನಮಸ್ಕರಿಸುವಳು.)

ಪುರೋಹಿತ :— ಸುಮಂಗಲೀಭವ! ಸಮಸ್ತ ಸನ್ಮಂಗಳಾನಿ ಭವಂತು!!

ನಮ್ಮ ನಾಡಿನ ನಗೆಯ ಕಥೆಗಳು

(ಜಾನಪದ ಸಾಹಿತ್ಯಪರಿಚಯ) *

ಶ್ರೀ. ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಎಂ. ಎ. ಸೊಲ್ಲಾಪುರ

★

ನಮ್ಮ ನಾಡಿನ ಸಾಮಾನ್ಯರ ಸಾಹಿತ್ಯದಲ್ಲಿ ಹೆಚ್ಚಾಗಿ ನಗೆಯೇ ಹಾಸು-ಹೊಕ್ಕು ! ವ್ಯಕ್ತಿ-ವ್ಯಕ್ತಿಗಳ ಸ್ವಭಾವಗಳನ್ನು ಅಣಕಿಸಿ ತೋರಿಸಲು ಹೊರಟ ಕತೆಗಳಂತೂ ನಗೆಯ ಹೊನಲುಗಳಂತಿರುವುವು.

★

ಭರತಖಂಡದ ಜನರು ಕಥಾಪ್ರಿಯರು. ಎಲ್ಲಿಯ ಜನವೂ ಹೀಗೇ ಎಂದು ತೋರುತ್ತದೆ. ಹಾಡು, ಕಥೆ, ಕುಣಿತ, ಆಟ, ಕೀರ್ತನೆ ಪುರಾಣಶ್ರವಣ— ಇವೆಲ್ಲ ಇಲ್ಲದೆ ಇದ್ದರೆ ದಿವಸ ಭಣಭಣ ಎನಿಸುತ್ತದೆ. ಏನಿಲ್ಲೆಂದರೂ ಪ್ರತಿ ದಿನ ಸಂಜೆಗೆ ಈ ವಿನೋದ ಬೇಕು. ಆದಾಗದಿದ್ದರೆ ನಿದ್ದೆ ಹೋಗುವ ಮೊದಲಾದರೂ, ಕಥೆ ಹೇಳದಿದ್ದರೆ— ಕೇಳದಿದ್ದರೆ— ಸುಖನಿದ್ರೆ ಬರುವುದಿಲ್ಲ. ಅದಿಲ್ಲದಿದ್ದರೆ, ಊರ ಉಸಾಬರಿಯ ಸಂಸಾರದ ಕಥೆಗಳಾದರೂ ಬೇಕು. ಪರವೂರಿಂದ ಒಂದೂರಿಗೆ ಕಥೆಗಾರ ಬಂದರೆ, ಅವನ ಸುತ್ತಲೂ, ಜನ ಮುಕರುತ್ತಾರೆ. ಯಾವನೋ ' ಯಜ್ಜ'ನೋ ' ಮುದುಕಿ'ಯೋ ಕಥೆ ಹೇಳುವವರಿದ್ದರೆ, ಬಹಳ ಆದರದಿಂದ ಅವನ ಹತ್ತಿರ ಜನರು ನೆರೆಯುತ್ತಾರೆ, 'ಯಜ್ಜಾ ! ಒಂದು ಕಥೀ ಹೇಳು' ಎಂದೋ ' ಹೇಳಬೇ ಮುಧುಕಮ್ಮಾ; ಒಂದು ಕಥೀ ಹೇಳು ಬೇಸ್ಯಾಗ ! ' ಎಂದೋ ಸ್ವಾಗತ ಪ್ರಾರಂಭವಾಗುವುದು.

ಹಳೆಯ ಪುರಾಣ- ಇತಿಹಾಸಗಳೂ ಇತ್ತೀಚಿನ ಬಖೈರುಗಳೂ ಕಥೆಗಳ ಖಣಿಗಳೇ. ಏನೋ ಮಾತಿಗೆ ಹಳೆಯ ಉದಾಹರಣೆ ಕೊಡಲು ಒಂದು ' ಗಾಥೆ ' ಮುಂದೆ ಬರುತ್ತದೆ. ಅದು ಒಂದು ಶ್ಲೋಕ, ಅದರ ಹಿಂದೊಂದು ಕಥೆ. ಈ ಕಥೆಯೆ ಗಾಥೆ, ಈ ಗಾಥೆಯೆ ಗಾದೆ. ಒಂದೊಂದು ಗಾದೆಮಾತಿಗೂ ಒಂದು ಕಥೆ ಇರುತ್ತದೆ— ಅಸ್ತಿವಾರಕ್ಕೆ. ಗಾದೆಮಾತು ನಾಣ್ಣುಡಿ; ಕಥಾಚಮತ್ಕಾರವನ್ನು ಕೇಂದ್ರೀಕರಿಸುವ ಸುಭಾಷಿತರತ್ನ, ನಗೆಯ ಹಳುಕು. ಮಾತು ಮಾತಿಗೆ ಸಾಮತಿ ಹೇಳುವವಳಿಗೆ ' ಹಿಂಗ್ಯಾಕಂತಾರ ? ' ಎಂದು ಕೇಳಿದರೆ ಬಂತೊಂದು ಕಥೆ. ಇಂಥ ಕಥೆ ವೀರ, ಶೃಂಗಾರ, ಅದ್ಭುತ ರಸದ್ದಾಗಿರುವಂತೆ ನೀತಿಯ ಕಥೆಯೂ ಆಗಿರುತ್ತದೆ. ಕೆಲವೊಂದು ಕಥೆಗಳ ಪ್ರಾಣ ಆದರ ನಗೆಯ ನೀತಿಯಲ್ಲಿರುತ್ತದೆ. ಅಥವಾ ಈ ನೀತಿ, ನಗೆಯ ರೀತಿಯಲ್ಲಿಯೂ ಹೊರಸೂಸುತ್ತದೆ. ಇಂಥ ಕಥೆಗಳ ಅದ್ಭುತ ಸಂಗ್ರಹವೆಂದರೆ ಗುಣಾಢ್ಯನ ' ಬೃಹತ್‌ಕಥಾ ! ' ಇದರಲ್ಲಿರುವ ಕತೆಗಳು ಮೂಲದಲ್ಲಿ ಪೈಶಾಚೀ ಭಾಷೆಯಲ್ಲಿದ್ದುವು, ಭೂತಗಳೇ ಹೇಳಿದ ಕಥೆಗಳವು. ಈ ಭೂತರೆಂದರೆ, ವಿಂಧ್ಯಾದ್ರಿಯ ಸುತ್ತುಮುತ್ತಲೂ, ಉತ್ತರಕ್ಕೂ ದಕ್ಷಿಣಕ್ಕೂ ಹಬ್ಬಿದ ಶಿವಗಣಗಳೇ ಇಹುದು. ಯಾವುದೋ ಶಾತವಾಹನರಾಜನ ಸಂಸ್ಕೃತ ಬಲ್ಲ ಜಾಣೆಯಾದ ರಾಣಿ ಜಲಕ್ರೀಡೆಯಾಡುವಾಗ ' ಮೋದಕೈಃ ತಾಡಯ ಮಾಂ ! ' ಎಂದಳಂತೆ. ' ಮಾ ಉದಕೈಃ ತಾಡಯಮಾಂ ' ಎಂದರೆ ' ನನ್ನ ಮೇಲೆ ನೀರು ಉಗ್ಗಬೇಡ ' ಎಂದಂತೆ. ಮಾ+ಉದಕೈಃ ಕೂಡಿ ಸಂಸ್ಕೃತ ಸಂಧಿಯಾಗಿ ' ಮೋದಕೈಃ ' ಆಯಿತು. ಪ್ರಾಕೃತ ಮಾತನಾಡುವ ರೂಢಿಯಿದ್ದ ರಾಜನನ್ನು (ಏನು, ಶಾತವಾಹನರು ಕನ್ನಡ, ಆಂಧ್ರ, ದ್ರಾವಿಡ ಜಾತಿಯ ಮಾತಾಡುತ್ತಿದ್ದರೋ ಏನೋ ?) ಈ ' ಮೋದಕ 'ದ ಮಾತು ದಿಗಿಲುಗೊಳಿಸಿತು. ಅವನು ಬೇರೆ ಅರ್ಥ ಮಾಡಿಕೊಂಡ; ಏನೆಂದರೂ ರಸಿಕ ರಾಜ. ಅಕ್ಕಿಯ ಕಡುಬಿನಲ್ಲಿ ಕೊಬ್ಬರಿ ಬೆಲ್ಲದ ಹೂರಣ ತುಂಬಿಸಿ, ಗಣಪ್ಪನ ಕೈಗೆ ಕೊಡಬಹುದಾದ, ನೂಟ ಮಾಟ ಮೋದಕಗಳನ್ನು ಬುಟ್ಟಿತುಂಬಿಸಿ, ತಾತ್ಕಾಲ ತರಿಸಿದ. ಮುದ್ದಿನಂತೆ ತುಟಿ ಮುಗಿದುಕೊಂಡ ಈ ಬೆಲ್ಲದ ಬದುಕನ್ನು ' ಮೋದಕ 'ದ ಬಯಕೆಯಾದ ಆ ಸಂಸ್ಕೃತ ಸುಂದರಿಯ ಗಲ್ಲಕ್ಕೆ ಎಸೆಯಲಿಕ್ಕೆ ಹತ್ತಿದ. ಆಕೆ ಖೊಕ್ಕೆಂದು ನಕ್ಕಳು ' ಛೀಸ್, ಇದಕ್ಕೆ ಮೋದಕದ ಅರ್ಥ ಆಗಲಿಲ್ಲ ! ' ಎಂದು ರಾಜನಿಗೆ ಅಪಮಾನವಾಯಿತು. ಆಗಿಂದಾಗ ಸಂಸ್ಕೃತ ಪಂಡಿತ ಆಗಬೇಕು—ಎಂದುಕೊಂಡ. ರಾಜನವ; ಕೇಳುವವರಾರು? ಮಂತ್ರಿಗಳನ್ನು ಕರೆಸಿದ. ಯಾರು ' ಹನ್ನೆರಡು ವರ್ಷ ಬೇಕು ಅದಕ್ಕೆ ! ' ಅಂದರು; ರಾಜಾ ತಲೆ ಅಲ್ಲಾಡಿಸಿದ. ಇನ್ನೊಬ್ಬರೆಂದರು ' ಆರು

---

* ತಾ. ೩೦-೫-೧೯೪೧ನೆಯ ರಾತ್ರಿ, ಧಾರವಾಡದ ಬಾನುಲಿಕಟ್ಟೆಯಿಂದ ಬಿತ್ತರಗೊಂಡ ಭಾಷಣವಿದು. **ಸಂ. ಜ.**

ಶಾಂತಿಸೇವಾ ಸದನದ ಸುಂದರ ಪ್ರಕಟನೆ

ವಿಜಯಶ್ರೀ

ಮಿರ್ಜಿ ಅಣ್ಣಾರಾಯರ

ಉತ್ಕೃಷ್ಟ ಸಣ್ಣಕತೆಗಳ ಸಂಗ್ರಹ.

ಬೆಲೆ: **ಒಂದು ರೂಪಾಯಿ.**

ಇದೀಗ ಪ್ರಕಟವಾಗಿದೆ.

ದೊರೆಯುವ ಸ್ಥಳ:

ಶ್ರೀ. ಮಿರ್ಜಿ ಅಣ್ಣಾರಾಯರು,

ಪೋ. **ಉಗಾರ ಬುದ್ರುಕ**

ಬೆಳಗಾಂವ

ವರ್ಮ !' ಅನಕ್ಕಾ ರಾಜನು ತಲೆ ಅಲ್ಲಾಡಿಸಿದ. ಅದು ಮೊದಲೇ ರಾಜನ ತಲೆ. ಸುಮ್ಮನೇ ಕೂಡುತ್ತದೆಯೆ? ರಾಜ ತಲೆ ಅಲ್ಲಾಡಿಸಿದರೆ, ರಾಜ್ಯವೆಲ್ಲಾ ಕೈಕಾಲು ಅಲ್ಲಾಡಿಸುತ್ತದೆ. ಉಳಿದವರು ಮೈಯೆಲ್ಲಾ ಅಲ್ಲಾಡಿಸಿದರೂ, ಹುಲ್ಲುಕಡ್ಡಿ ಕೂಡ ಅಲ್ಲಾಡುವುದಿಲ್ಲ. ಶಾತವಾಹನ ರಾಜನಿಂದ ತಲೆ ಅಲ್ಲಾಡಿಸಿ ಅಲ್ಲಾಡಿಸಿ, ಸಂಸ್ಕೃತ ವ್ಯಾಕರಣವನ್ನು ಆರು ತಿಂಗಳಲ್ಲಿ ಕಲಿಸುವ ಪ್ರತಿಜ್ಞೆ ಮಾಡಿಸಿತು, 'ಶರ್ವವರ್ಮ' ನೆಂಬ ಮಂತ್ರಿಯಿಂದ. ಈ ಮಾತು ನಿಜವಾದರೆ ಸಂಸ್ಕೃತ, ಪ್ರಾಕೃತ, ಅಪಭ್ರಂಶ ಈ ಯಾವ ಭಾಷೆಯನ್ನೂ ತಾನು ಏಕೆ ಆಡಬೇಕು? ಮೂರೂ ಮಾತನ್ನೇ ಬಿಟ್ಟೇನು! ಎಂದು ಪ್ರತಿಜ್ಞೆ ಮಾಡಿದ ಗುಣಾಢ್ಯ ಮಂತ್ರಿ. ಶರ್ವವರ್ಮ ರಾತ್ರಿಯೆಲ್ಲ ಘೋರ ತಪಶ್ಚರ್ಯ ಮಾಡಿ, ಬೆಳಗಾಗಿ ವರ ಪಡೆದುಕೊಂಡ; ರಾಜನಿಗೆ ಆರು ತಿಂಗಳಲ್ಲಿ ಸಂಸ್ಕೃತ ಕಲಿಸಿದ 'ಕಾತಂತ್ರ' ಎಂಬ ವ್ಯಾಕರಣ ರಚಿಸಿ. ಈ ಕಾತಂತ್ರ ವ್ಯಾಕರಣದ ಶರ್ವವರ್ಮನ ಸಂಪ್ರದಾಯ— ನಮ್ಮ ಕನ್ನಡ ವ್ಯಾಕರಣಕಾರರಲ್ಲಿದೆ. ಈ ಗುಣಾಢ್ಯನ ಕಥೆಯನ್ನು, ಸೋಮದೇವ, ಕ್ಷೇಮೇಂದ್ರ, ಬುಧವರ್ಮ ಇವರು ಸಂಸ್ಕೃತದಲ್ಲಿ ಮಾಡಿದರು. ಇವರೆಲ್ಲರಿಗಿಂತ ಮೊದಲು, ನಮ್ಮ ಗಂಗರಾಜ ದುರ್ವಿನೀತ ಇದನ್ನು ಸಂಸ್ಕೃತಕ್ಕಿಳಿಸಿದನೆಂದು ಕವಿಚರಿತೆಯ ನರಸಿಂಹಚಾರ್ಯರು ಪ್ರಸಿದ್ಧಪಡಿಸಿದ್ದಾರೆ. ಅಂತೂ ಶಾತವಾಹನ ರಾಜನ ನಗೆಯಾಟದ ನೆವವಾಗಿ ಮೂರೂ ಭಾಷೆ ಬಿಟ್ಟು ನಾಲ್ಕನೆಯದೇ ಆದ ಪೈಶಾಚಿಯಲ್ಲಿ, ಗುಣಾಢ್ಯನು ಅನಂತ ಕಥೆಗಳನ್ನು ಹೇಳಿದ. ಅವುಗಳನ್ನು ತನ್ನ ರಕ್ತದಿಂದ ಓಲೆಗಳಲ್ಲಿ ಬರೆದ. ಅವುಗಳನ್ನು ಕೇಳುವ ರಾಜರಿಲ್ಲವಲ್ಲ— ಎಂದು ಅರಣ್ಯದ ಪಶುಪಕ್ಷಿಗಳಿಗೆ ಅವುಗಳನ್ನು ಹೇಳುತ್ತ ಹೇಳುತ್ತ, ಹೇಳಿ ಹೇಳಿದ ಹಾಗೆ ಅವುಗಳ ಹೋಮ ಮಾಡಿದ. ಆ ಕಥೆ ಕೇಳಲು ಕುಳಿತ ಪಶುಪಕ್ಷಿಗಳು ಅನ್ನನೀರು ಬಿಟ್ಟು ಕೇಳಿದುವು. ಬೇಟೆಗಾರರು ಆ ರಕ್ತಹೀನ ಪಶುಗಳನ್ನ ಒಯ್ದರು. ಅಡಿಗೆಯವರು ಅವುಗಳನ್ನೇ ಬೇಯಿಸಿದರು. ರಾಜನಿಗೆ ಅಡಿಗೆ ರುಚಿಯೆನಿಸಲಿಲ್ಲ ಏಕೆ? ವಿಚಾರ ನಡೆಯಿತು. ಗುಣಾಢ್ಯನ ಕಥೆಯು ಕಥೆ ಹೊರಬಿತ್ತು. ಅಷ್ಟರಲ್ಲಿ ಆರು ಲಕ್ಷ ಕಥೆ ಸುಟ್ಟು ಹೋಗಿದ್ದುವು. ಒಂದು ಲಕ್ಷ ಉಳಿದಿತ್ತು. ರುಚಿಗಾರ ರಾಜನಿಗೆ ಅನ್ನ ರುಚಿ ಹತ್ತದಾಗ, ದೇಶದ ಸಾಹಿತ್ಯವೆಲ್ಲ ಸುಟ್ಟು ಹೋಗುತ್ತಿದೆ— ಎಂಬುದು ಲಕ್ಷ್ಯದಲ್ಲಿ ಬಂತು, ಅದೂ ದೇವರ ಪುಣ್ಯ! ಈ ಕಥೆಗಳ ಮೂಲ, ಗುಣಾಢ್ಯನ ಹಿಂದೆ ಶಿವಪಾರ್ವತಿಯ ವರೆಗೆ ಹೋಗುತ್ತದೆ.

("ಕೈಲಾಸೇ ಧೂರ್ಜಟೇರ್ವಕ್ತ್ರಾತ್
ಪುಷ್ಪದಂತಂ ಗಣೇಶ್ವರಮ್
ತಸ್ಮಾತ್ ವರರುಚೇರ್ಭೂತಾತ್
ಕಾಣಭೂತಿಂಚ ಭೂತಲೇ
ಕಾಣಭೂತೇರ್ಗುಣಾಢ್ಯಂಚ
ಗುಣಾಢ್ಯಾತ್ ಸಾತವಾಹನಂ......"

ಎಂದರೆ,) ಶಿವನಿಂದ ಪುಷ್ಪದಂತನಿಗೂ, ಪುಷ್ಪದಂತನಿಂದ ವರರುಚಿಗೂ, ವರರುಚಿಯಿಂದ ಕಾಣಭೂತಿಗೂ, ಕಾಣಭೂತಿಯಿಂದ ಗುಣಾಢ್ಯನಿಗೂ, ಗುಣಾಢ್ಯನಿಂದ ಸಾತವಾಹನನಿಗೂ ಈ ಶಿವಗಣಗಳ ಜಾನಪದ ಕಥಾವೇದ ಬಂದಿತು. ಬಂದದ್ದು ಗೋದಾವರಿಯ ದಂಡೆಯಮೇಲೆ. ಅಲ್ಲಿಂದ ಅದು ಕರ್ಣಾಟ-ದ್ರಾವಿಡ ದೇಶಗಳನ್ನು ದಕ್ಷಿಣದಲ್ಲೂ, ಆಂಧ್ರಮಹಾರಾಷ್ಟ್ರಗಳನ್ನು ಪೂರ್ವ-ಪಶ್ಚಿಮಗಳಲ್ಲೂ, ಉತ್ತರಕ್ಕೆ ಗುಜರಾಥ, ಹಾಗೇ ವಿಂಧ್ಯಾದ್ರಿ ದಾಟಿ, ಕಾಶ್ಮೀರ-ನೇಪಾಳಗಳಲ್ಲೂ, ಅಂತೂ ಭರತಖಂಡವನ್ನೇ ವ್ಯಾಪಿಸಿತು. ಇದರ ಹೊಟ್ಟೆಯಲ್ಲೇ ಪಂಚತಂತ್ರದ ನಗೆಯ ನೀತಿಯ ಕಥೆಗಳೂ, ಬಾಣನ ಕಾದಂಬರಿಯ ಅದ್ಭುತರಮ್ಯ ಕಥೆಗಳೂ, ಭಾಸ-ಕಾಲಿದಾಸರ ಉದಯನ ಕಥೆಗಳೂ, ಭವಭೂತಿಯ ಮಾಲತೀಮಾಧವದಂತಹ ನಾಟಕಕಥೆಗಳೂ ಹುಟ್ಟಿ ವಿವಿಧಾಕಾರವಾಗಿ ಹರಿದಿವೆ. ಶಿವನ ಪುಷ್ಪದಂತನೇ ನಂಬಿಯಣ್ಣನಾಗಿ ಬಂದನೆಂದು ಪೆರಿಯಪುರಾಣ, ಹರಿಹರನ ರಗಳೆಗಳೂ ಹೇಳುವುವು. ಈ ಪುಷ್ಪದಂತ (ದತ್ತ)ನೆ ವರರುಚಿಯಾಗಿ ಬಂದನೆಂದು ನಮ್ಮ ಜಾನಪದ ವೇದಕವಿ ಸರ್ವಜ್ಞ ಹೇಳುತ್ತಾನೆ:

"ಅಂದಿನಾ ಪುಷ್ಪದತ್ತ | ಬಂದ ವರರುಚಿಯಾಗಿ
ಮುಂದವ ನಾಲೆ ಸರ್ವಜ್ಞನೆಂದೆನಿಸಿ
ನಿಂದವನು ನಾನೆ ಸರ್ವಜ್ಞ"

ಅಂತೂ ಶಿವಪಾರ್ವತಿಯರ ಕಥಾವೇದ ಸರ್ವಜ್ಞನ ತ್ರಿಪದಿಗಳ ವರೆಗೆ ಬಂದು ಹೀಗೆ ಮುಟ್ಟುತ್ತದೆ. ಹಿಂದೆ ಹೋದರೆ, ಭೋಜರಾಜನ ಕಾಲಕ್ಕೋ, ಸಾತವಾಹನನ ಕಾಲಕ್ಕೋ, ವಿಕ್ರಮ ರಾಜನ ಕಾಲಕ್ಕೊ ಅದಕ್ಕೂ ಹಿಂದೋ ಹೋಗುತ್ತದೆ.

ಈ ಕಥೆಗಳಿಂದಲೇ ರಾಜರು ಮಹಾರಾಜರು ಸುಖಸಂಕಥಾ ವಿನೋದದಿಂದ ಕಾಲಕಳೆದರು. ಇವರ ಆಸ್ಥಾನಗಳಲ್ಲಿಯೆ ಮತ್ತೆ

ಕಥೆ ಹುಟ್ಟಿದುವು. ಭೋಜ–ಕಾಲಿದಾಸರ ಕಥೆಗಳು, ಅಕಬರ–ಬೀರಬಲ್ಲನ ಕಥೆಗಳು, ರಾಯರ ಅಪ್ಪಾಜಿ ಕಥೆಗಳು, ತೆನ್ನಾಲ ರಾಮಕೃಷ್ಣನ ಕಥೆಗಳು, ಬಥೋಳ್ಳನ ಕಥೆಗಳು– ಇದಲ್ಲದೆ ಕೋಮಟಿಗರ ಜಪುಣತೆ ನಿಪುಣತೆಯ ಕಥೆಗಳು, ಬೇರೆ ಬೇರೆ ಜಾತಿಕಾಯಕದವರು ಪರಸ್ಪರರನ್ನು ನಿಂದಿಸುವ ಕುಹಕ ಕುಟಿಲ ನಗೆಯ ಕಥೆಗಳು, ಅಜ್ಜಿ ಮೊಮ್ಮಕ್ಕಳಿಗೆ ಹೇಳುವ ಕಥೆಗಳು, ಶೃಂಗಾರಿಕ ಹಾಸ್ಯದ ಶುಕಸಪ್ತತಿ ಕಥೆಗಳು, ಬತ್ತೀಸಪುತ್ತಳಿ ಕಥೆ, ವೇತಾಳ ಪಂಚವಿಂಶತಿಕಥೆ, ವಡ್ಡಾರಾಧನೆಗಳು, ರಾಜಪುತ್ರರ ಕಥೆಗಳು, ಕುಂಟಲಗಿತ್ತಿಯರ ಕಥೆಗಳು, ಕೀರ್ತನಕಾರರ ಅಡ್ಡ-ಕಥೆಗಳು— ಹೀಗೆ ಅನಂತಮುಖವಾಗಿ ಜಾನಪದ ಕಥಾಕೋಶ ತುಂಬಿಕೊಂಡಿದೆ.

ಇನ್ನು ಇದರಲ್ಲಿ ಹಾಸ್ಯವೆಲ್ಲಿದೆ?—ಎಂದು ಕೇಳಬಹುದು. ಇಷ್ಟು ತಡಮಾಡಿ ಈ ಪ್ರಶ್ನೆ ಕೇಳಿದ್ದೇ ಹಾಸ್ಯಾಸ್ಪದ. ನಗೆಯು ತಂತ್ರವೆ ಚಮತ್ಕಾರ. ಕೆಲವರಿಗೆ ಒಂದು ಮಾತು ಕೇಳಿ ನಗೆ ಬಂದರೆ, ಇನ್ನೊಬ್ಬರಿಗೆ ಸಿಟ್ಟು ಬರುತ್ತದೆ; ಈ ಸಿಟ್ಟನ್ನು ನೋಡಿದರೆ ಮತ್ತೊಬ್ಬರಿಗೆ ನಗೆ ಬರುತ್ತದೆ. ಅಂತೂ ಇಂತೂ ನಗೆಯ ಚಕ್ರ ಹಾಗೂ ಉರುಳುತ್ತದೆ, ಹೀಗೂ ಉರುಳುತ್ತದೆ. ನಗೆ ಕಂಡು ನಗೆ ಬರುವುದು; ನಗುವವರ ಕೂಡ ನಗುವುದೂ ನಗೆಯ ರೀತಿ. ನಾನು ರೇಡಿಯೋದ ಮುಂದೆ ಹಾಸ್ಯದ ಕಥೆಹೇಳುವುದು ಹಾಸ್ಯಾಸ್ಪದ; ನೀವು ನಕ್ಕದ್ದು ಬಿಟ್ಟದ್ದು ನನಗೆ ತಿಳಿಯುವಂತಿಲ್ಲ. ಇದು ನನಗೆ ತಿಳಿಯದಿದ್ದರೆ, ಇದು ನಗೆಯ ಕಥೆಯಾಯಿತೋ ಇಲ್ಲವೋ ತಿಳಿಯಲು ಹಾದಿ ಇಲ್ಲ.

ಕೆಲವು ಕಥೆ ಹಾಡಿನಲ್ಲಿರುತ್ತವೆ. ಕೆಲವು, ಹಾಡಿನಲ್ಲಿ ಕೊನೆಗೊಳ್ಳುತ್ತವೆ. ನೂಲದ ಚೆನ್ನಿಯ ನಗಗೇಡಿತನದ ಕಥೆ ಹಾಡಿನಲ್ಲಿದೆ. ಆ ಹಾಡು ಕೇಳಿದಾಗ, ಚೆನ್ನಿಯ ಉಡಾಳತನವನ್ನು ನೋಡಿ ನಗಬೇಕೋ, ಆಕೆಯ ಹೇಳಿಕೆಯಂತೆ ಕುಣಿದ ಗಂಡನ ಮುಠ್ಠಾಳತನವನ್ನು ಕಂಡು ನಗಬೇಕೋ— ಎನಿಸಿ, ಎರಡನ್ನೂ ನೆನೆಸಿ ಪಾಳಿಪಾಳಿಯಿಂದ ನಗೆ ಬರುತ್ತದೆ. ನೀವು ಆ ಹಾಡು ಕೇಳಿರಬಹುದು.

ಕುಂಟ-ಕುಂಟರಿಗೆ ಗಂಟು ಬಿದ್ದರೂ ಗರ್ದಿ ಆಗಲದ ಗಮ್ಮತ್ತ— ಎಂಬುದು ಇನ್ನೊಂದು ನಗೆಗತೆ. ಬೀಗನ ಬಾಯ್ಬಿಡದು ಹೋಳಿಗಿ ಊಟಮಾಡಬೇಕು ಎಂದ ಗಂಡ-ಹೆಂಡಿರ ಬಾಯಿಗೆ ಹೋಳಿಗೆ ಬೀಳದಂತೆ ತಾನೇ ತಿಂದು, ಡರಕಿ ಹೊಡೆದ ಬೆರ್ಕಿ ಬೀಗನ ಕಥೆ ಅದರಲ್ಲಿದೆ. ‘ ಬೊಮ್ಮ ಬಲ್ಲವ ಸುಮ್ಮನಿರಬೇಕು ’ ಎಂದು ಒಂದು ಗಾದೆ, ‘ ಕಳವಿಗೆ ಹೋಗಿ ಕೆಮ್ಮಿ ಸಿಕ್ಕರಂತೆ ’ ಎಂದು ಇನ್ನೊಂದು ಗಾದೆ. ಸರ್ವಜ್ಞ ಎರಡನ್ನೂ ಜೋಡಿಸಿದು “ಬೊಮ್ಮವನು ಅರಿದಿಹರೆ ಸುಮ್ಮನೆ ಇರಬೇಕು” “ ಬೊಮ್ಮವನು ಅರಿದು–ಉಸುರಿದರೆ ಕಳಹೋಗಿ ಕೆಮ್ಮಿದಂತಕ್ಕು ಸರ್ವಜ್ಞ ” ಎಂದು ಹೇಳುತ್ತಾನೆ. ಇಲ್ಲಿ ಯಾವುದೋ ಕಥೆ ಇರಬೇಕು. ‘ ಹೆಪ್ಪಳಾ ನುಂಗಿ ಸಪ್ಪಳಾ ನುಂಗಲಿಕ್ಕೆ ಬರದೆ ’ ಕಳವು ಹೊರಬಿದ್ದ ಅನುಭವ ಕೆಲವರಿಗಾದರೂ ಇರಬೇಕು. ‘ ಬಂದದ್ದಲ್ಲ ಬಾರಿಸಿದ್ದಲ್ಲ ’ ಎಂಬ ಗಾದೆಯ ಕತೆ ಇಂಥ ಜಾತಿಯದೆ. ಒಬ್ಬ ಜಾತಿವಂತ ಮಡಿವಂತರ ಹುಡುಗ ಉಡಾಳರ ಸಂಗತಿಗೆ ಬಿದ್ದು, ಕಳವು ಮಾಡಲಿಕ್ಕೂ ಕಲಿತನಂತ. ಒಂದು ರಾತ್ರಿ ಒಬ್ಬ ವೈಷ್ಣವರ ಮನೀ ಕನ್ನಾ ಹಾಕಿದರಂತ. ಈ ಹುಡುಗನs ಮುಂದಾದನಂತ. ಒಳಗೆ ಇಳಿದ, ಥೇಟ ದೇವರ ಮನೀಒಳಗ. ಪೂಜೀಗೀಜಿಗೆ ಸಜ್ಜುಮಾಡಿ ಇಟ್ಟಿತ್ತು. ಬೆಳ್ಳೀದೇವರೂ ಗೀವರೂ ಇದ್ದುವಂತ. ಹಾಂಗs ಎತ್ತಲಿಕ್ಕೆ ಮನಸ್ಸು ಆಗವೊಲ್ಲದು. ಮೆಲ್ಲಗ ಸ್ನಾನಾಮಾಡಿದನಂತ, ಮಡಿ ಪಂಜೀ ಉಟ್ಟನಂತ, ಗಡಿಬಿಡೀಲೆ ಪೂಜೀಮುಗಿಸತs ಬಂದ. ಗರ್ಕ ಆದಮನಸಿಲೇ ಆರತಿ ಎತ್ತಿ, ಘಂಟೇಬಾರಿಸಿದನಂತ. ಏಕಾದಶಿ ಉಪವಾಸಕ್ಕ ಅರಎಚ್ಚರು ಇದ್ದು, ಅಡಿಗೆಯ ಮನೆಯಕಡೇಗೆ ಲಕ್ಷ್ಯಇದ್ದ ಒಬ್ಬರು, ಒಳಗಬಂದು ನೋಡುತ್ತಾರೆ; ಗೋಡೆಗೆ ಕನ್ನಾ; ಒಳಗ ಈ ಬ್ರಾಹ್ಮಣ ಸಂಪನ್ನಾ! ‘ಎಲಾ ಇವನ ಬೆಳ್ಳೀ ದೇವರ್ನ ಒಯ್ತಿದ್ದ ಬಾ ! ’ ಎಂದು ಮಡಿಗೀಡೀ ನೋಡದs, ಆ ಹುಡಗನ್ನ ‘ ಧಪಾ ಧಪಾ ’ ಹೊಡೆದರಂತ—ಹಿಂಗ್ಯಾಕೋ ಅಂತ ಕೇಳಿದರಂತ—ಅಂವ ‘ ಬಂದಿದ್ದಲ್ಲ ಬಾರಿಸಿದ್ದಲ್ಲ ! ’ ಅಂದನಂತ. ಹಾಂಗಂದರೇನು ಅಂದರಂತ. ‘ ಕಳವಿಗೇ ಬರಬಾರದಿತ್ತು ಬಂದೆ. ಬಂದು ಘಂಟೀ ಬಾರಿಸಬಾರದಿತ್ತು ಬಾರಿಸಿದೆ. ಅದs, ಬಂದದ್ದಲ್ಲಾ ಬಾರಿಸಿದ್ದಲ್ಲಾ ! ’ ಅಂದನಂತ. ಹುಟ್ಟುಗುಣ ಸುಟ್ಟರೂನೂ ಹೋಗೋದಿಲ್ಲ ಅಂಬೋದು ಇದs. ಉದ್ಯೋಗಿಲ್ಲದ ಬಡಿಗನ ಕಥೆ, ಓದಿ ಓದಿ ಮರುಳಾದ ಕೂಸುಭಟ್ಟನ ಕಥೆ, ವೈಕುಂಠದ ಹಾದಿಯ ಮೇಲಿನ ಕುಂಟದಾಸರ ಕಥೆ— ಹೀಂಗs ಏನೇನೋ ಇರಬೇಕು. ‘ ಕಲ್ಲಪ್ಪ ಗುಂಡಪ್ಪನವರ ತಿಕ್ಕಾಟದಾಗ ಮೆಣಸಪ್ಪ ಪುಡಿಯಾದ ’ ಎಂಬುದು ಗಾದೆಯೂ ಹೌದು; ಒಡಗತೆಯೂ ಹೌದು, ನೀತಿಯ ಪಾಠಕಲಿಸಲು ಕಟ್ಟಿದ ಕತೆಯೂ ಹೌದು.

ಸುಳ್ಳರ ಕಥೆ, ಕಳ್ಳರ ಕಥೆ, ಚಾಡಿಖೋರರ ಕಥೆ, ಅತ್ತೆ-ಸೊಸೆಯರ ಏರಾಟದ ಕಥೆ, ಅಳಿಯಂದಿರ ಅವಿವೇಕದ ಕಥೆ, ಮೊದಲಾದ ಬೇರೆ ಗ್ರಾಮ್ಯಕಥೆಗಳೂ ಇವೆ. ಗ್ರಾಮದ ಕಥೆಗಳಲ್ಲಿ ಗ್ರಾಮ್ಯಬಾರದೆ ಹೇಗೆ ಉಳಿದೀತು. ನಾಡಿನ ನಾಗರಿಕರಿಗೆ ಅಂಥವು ರುಚಿಸಲಾರವು. ಬೇಡರ ಮುದುಕಿಯೊಬ್ಬಳು ಎಂಟು ಕಾಲಿನ ಬೇಟೆಕೊಡುವೆನೆಂದು ಹಳ್ಳಿಯ ಹನುಮಪ್ಪನಿಂದ ಕೆಲಸಮಾಡಿಸಿಕೊಂಡು, ಕೆಲಸವಾದ ಮೇಲೆ ಜೇಡುಬುಡವನ್ನೆ ಒಪ್ಪಿಸಿದಳಂತೆ. ಅದನ್ನು ನೋಡಿ ಕಲ್ಲಿನ ಹನುಮಪ್ಪ ಟೊಂಕದಮೇಲಿನ ಕೈಯೆತ್ತಿ ಬಾಯಮೇಲೆ ಇಟ್ಟುಕೊಂಡನಂತೆ. ಆ ಕೈ ತೆಗೆಸಲು ಮುದುಕಿ ಮಾಡಿದ ಹರಾಕ್ರಮವನ್ನ ಎಷ್ಟೋ ಹಳ್ಳಿಯವರು ಕೇಳಿರಬಹುದು. ಕೇಳಿ ನಕ್ಕಿರಬಹುದು. ನಗೆಯಲ್ಲಿ ಭೇದವಿದೆ. ಇಷ್ಟೇ! ನಮಸ್ಕಾರ.

ಮಿಾಸಲಾಗು ಮಿಾಸಲಕೆ!

ಶ್ರೀ ಡಿ. ಎಸ್. ಕರ್ಕಿ, ಎಂ.ಎ., ಪಿಎಚ್.ಡಿ. ಬೆಳಗಾಂವಿ.

★

ಮಿಾಸಲಕೆ— ಮಿಾಸಲಾಗಿ
ಸೂಸು ಕವನವೇ,
ಹಾಸ— ಸೂಸು ಕವನವೇ! || ಪಲ್ಲವಿ ||

ಮೂಡಿ ಹೊಸತು ದಿನದೆದೆಯಲಿ
ಆಡಿ ಸುಳಿವ ಹೊಸತೆಲರಲಿ
ಕೂಡಿ ಹೊಳೆವ ದಳದಳದಲಿ
ಅರಳು ಕವನವೇ !
ಮಿಾಸಲಕೆ— ಹಾಸವನು
ಸೂಸು ಕವನವೇ ! ೧

ನವ ಪವನಾವೇಶದಲಿ
ನವ ಮೇಘವಿಲಾಸದಲಿ
ನವ ಸಲಿಲಸುಹಾಸದಲಿ
ಸೂಸು ಕವನವೇ !
ನೀ ಹರಿಸಿದ ಹೊಸ ಹೊಳೆಯಲಿ
ಈಸು ಕವನವೆ ! ೨

ಶುಚಿಯನಾಂತು ರುಚಿಯಲ್ಲಿ—
ರುಚಿಯನಾಂತು ಶುಚಿಯಲ್ಲಿ—
ಮಮ ಮಾನಸ ಸರಸಿಯಲಿ
ಏಳು ಕವನವೇ !
ಮಿಾಸಲುಗಂಪಿನ ತೋಷವ
ಸೂಸು ಕವನವೇ ! ೩

ನೈಜದೊಳಿದೆ ಸೌಂದರವು
ಸತ್ಯವೊಂದೆ ಬಂಧುರವು
ತುಳು-ತುಳುಕಿರೆ ತಿಳಿಯೊಲವು
ಬಾರ ಕವನವೇ !
ಅನುಭಾವದ ಕಿರಣಾಳಿಯ
ತೂರು ಕವನವೇ ! ೪

* *

ಮಿಾಸಲಕೆ-ಮಿಾಸಲಾಗಿ
ಸೂಸು ಕವನವೇ
ಹಾಸ-ಸೂಸು ಕವನವೇ !

ಜನತೆಯ ಸೌಭಾಗ್ಯ

ಶ್ರೀ. ದಿನಕರ ದೇಸಾಯಿ ಎಂ.ಎ. ಮುಂಬಯಿ

★

ರಂಡೆಯು ತುರುಬಿನ ಬೆಂಡಿನ ಹೂವೊಲು
ಜನತೆಯ ಸೌಭಾಗ್ಯ ;
ಸಂಸಾರಿಗೆ ಸಹ ಸಂನ್ಯಾಸಿಯವೊಲು
ಬಂದಿದೆ ವೈರಾಗ್ಯ. ೧

ತರಣಿಯು ಬೆಳಕಿಗೂ ವಿರಳತೆಯೆನ್ನುವ
ಜಾಣೆಯು ನೀನಾರೆ ?
ಕತ್ತಲೆ-ಪೇಟಿಯೊಳೆಲ್ಲಾ ದೊರೆವುದು—
ಸಿಗುವುದು ಧ್ರುವತಾರೆ ! ೨

ಚಂದ್ರನ ಬಿಂಬದ ಬೆಳ್ಳಿಯು ಕರಗಿಸಿ
ಮಾಡಿದ ರೂಪಾಯಿ
ದೊರಕಿಸಿಕೊಂಡರೆ ಎಲ್ಲಾ ದೊರೆವುದು—
ಹಣ್ಣೂ ಹೂ ಕಾಯಿ. ೩

ಸಕ್ಕರೆಗೂ ಸಹ ಸವಿಯಿಲ್ಲಾದರೆ
ಕಬ್ಬಿನ ಗುಣವಂತೆ ;
ಮಲ್ಲಿಗೆಗೂ ಪರಿಮಳವಿಲ್ಲಾಗುವ
ಕಾಲವು ಬಂದಂತೆ. ೪

ಈ ಹೊಸ ಕಾಲಕೆ ನೂತನ ಜಾಲಕೆ
ಬಡ ಜನತೆಯೆ ಮೀನು;
ರಾಮನ ಹೆಸರಲಿ ರಾವಣನಾಳಲು
ಕಲಿಯುಗವಲ್ಲೇನು ? ೫

ಮಕರಂದವು ಹುಳಿಮಜ್ಜಿಗೆಯಾಗಲು
ದುಂಬಿಗು ಹೊಸ ಬೇನೆ;
ರಂಡೆಯ ತುರುಬಿನ ಬೆಂಡಿನ ಹೂವೇ,
ನಿನಗೇ ಸೋಬಾನೆ ! ೬

ರಂಡೆಯು ಮುಡಿದಿಹ ಬೆಂಡಿನ ಹೂವೊಲು
ಜನತೆಯ ಸೌಭಾಗ್ಯ;
ಸಂಸಾರಿಯು ಸಂನ್ಯಾಸಿಯು ತೆರದೊಳೆ
ತಳೆದಿಹ ವೈರಾಗ್ಯ ! ೭

"ಕಂಡೆ ನಾನು ಮೃಗೇಂದ್ರನ!"

(ಒಂದು ಅನುಭವ ಚಿತ್ರ)

★

ಭಾರತದ ಕೇಂದ್ರ ಸರಕಾರದಲ್ಲಿ ಮಂತ್ರಿಗಳಾದ ಶ್ರೀಮಾನ್ ಎನ್. ವಿ. ಗಾಡಗೀಳರು ಮರಾಟಿಯಲ್ಲಿ ಬರೆದ ಪ್ರಬಂಧದ ಅನುವಾದವಿದು. ಶ್ರೀ. ಬೇಂದ್ರೆ ಲಕ್ಷ್ಮಣರಾಯರು ಅನುವಾದ ಮಾಡಿದ್ದಾರೆ. ರಸಪೂರ್ಣವಾದ ಅನುಭವ ಚಿತ್ರಣವಿದು.

★

"ಶ್ಚ್ಯೂ-ಶ್ಚ್ಯೂ! ಇಂಥ ಹೊತ್ತಿನಲ್ಲೇ ನೀವು ಕ್ಯಾಮೆರಾ ತರುವುದಕ್ಕೆ ಹೇಗೆ ಮರೆತಿರಿ? ಕರ್ಮನಿಷ್ಠ ಬ್ರಾಹ್ಮಣನ ಕೊರಳಲ್ಲಿಯ ಜನಿವಾರದಂತೆ, ಯಾವಾಗಲೂ ನಿಮ್ಮ ಹೆಗಲಿಗೆ ನೇತಾಡುವ ಅದು, ಇಂದೇ ಹೇಗೆ ಇಲ್ಲದಾಯಿತು?"

"ಇದು ನೋಡ್ರಿ, ಅದನ್ನು ನಾನು ಮರೆತು ಬಂದದ್ದಂತೂ ನಿಜವೇ! ಹೋಗಲಿ, ಸಿಂಹವೇನೋ ಕ್ಯಾಮೆರಾಕ್ಕೆ ಬೆದರುವುದಂತಲ್ಲ? ಹಾಗೆ ಹೇಳುವುದನ್ನು ಕೇಳಿದ್ದೇನೆ."

"ನನಗಂತೂ ಆ ಮಾತು ನಿಜ ಎಂದೆನಿಸುವುದಿಲ್ಲ. ಯಾಕೆಂದರೆ ಕ್ಯಾಮೆರಾಕ್ಕೆ ಬೆದರುವ ಮುಂದಾಳಾಗಲಿ, ಅನ್ಯ ಪ್ರಾಣಿಯಾಗಲಿ ಈ ಕಾಲದಲ್ಲಿ ಇರುವುದು ಅಪರೂಪ! ಇನ್ನೇನು, ಮುಂದಾಳು ಹೇಗೆ ಕ್ಯಾಮೆರಾಕ್ಕೆ ಮುಂದಾಗಿ ನಿಲ್ಲುತ್ತಾನೋ ಹಾಗೆ ಸಿಂಹ ಮಾತ್ರ ಮಾಡಲಿಕ್ಕಿಲ್ಲ, ಆದರೆ, ಅದು ಕ್ಯಾಮೆರಾ ನೋಡಿ ಗಾಬರಿಗೊಂಡೀತೆಂದು ನನಗೇನೂ ಎನಿಸುವುದಿಲ್ಲ."

ಗೀರದ ಕಟ್ಟಡವಿ. ಸಿಂಹದ ಬೇಟೆಗೆಂದು ಗಿಡದ ಮೇಲೆ ಕಟ್ಟಿದ ಮಂಚಿಕೆಯಲ್ಲಿ ಕುಳಿತಾಗ, ರಾಷ್ಟ್ರಪತಿ ರಾಜೇಂದ್ರ ಬಾಬುಗಳ ಎ. ಡಿ. ಸಿ ಮತ್ತು ನನ್ನ ನಡುವೆ ನಡೆದ ಸಂವಾದ ಇದು.

ಅಪರಾಹ್ಣದ ಮೂರು-ಮೂರುವರೆ ಗಂಟೆಯ ಸಮಯ. ಪಟ್ಟಡವಿಯಲ್ಲಿ ನಾವು ಗುಪ್ತವಾಗಿ ನಡೆಯಿಸಿದ್ದಾದರೂ ಏನು?— ಎಂಬುದನ್ನು ನೋಡುವ ಕುತೂಹಲದಿಂದಲೇ ಏನೋ ಎನ್ನುವಂತೆ, ದಿನಮಣಿ ಗಿಡದ ಪಲ್ಲವಗಳೊಳಗಿಂದ ನಮ್ಮನ್ನು ಇಣಿಕಿ ಇಣಿಕಿ ನೋಡುತ್ತಿದ್ದ!

* * * *

ಕಳೆದ ಮೇ ತಿಂಗಳ ೯ನೆಯ ದಿನಾಂಕ. ಸೋಮನಾಥನ ಪ್ರತಿಷ್ಠಾ ಸಮಾರಂಭಕ್ಕಾಗಿ ಮಧ್ಯಾಹ್ನ ನಾವೆಲ್ಲರೂ ಹೊರಟಾಗ ಇಂಥ ವನವಾಸ— ವಾನರವಾಸ ನಮ್ಮ ಪಾಲಿಗೆ ಬಂದೀತೆಂದು ನಮ್ಮ ಕನಸುಮನಸಿನಲ್ಲಿಯೂ ಇರಲಿಲ್ಲ. ಆ ದಿನ ಹೊರಡುವಾಗ ನಮ್ಮ ವಿಮಾನದಲ್ಲಿ ರಾಷ್ಟ್ರಾಧ್ಯಕ್ಷರು, ನಾನು, ಇಬ್ಬರು ಸುದ್ದಿಗಾರರು, ಇಬ್ಬರು ಪ್ರಾಧ್ಯಾಪಿಕೆಯರು ಹೀಗೆ ವಿವಿಧ ಸ್ವರೂಪದ ಯಾತ್ರಿಕರಿದ್ದೆವು. ಬೆಳಗಿನ ಹೊತ್ತಿನಲ್ಲಿ ಹೊರಟರೆ ಒಳ್ಳೆಯದು ಎಂದು ಸಲಹೆ ಕೊಡಲಾಗಿದ್ದರೂ, ಅದನ್ನು ಲೆಕ್ಕಿಸದೆ, ನಾವು ಮುಂದಾಳುಗಳಿಗೆ ಒಪ್ಪುವ ರೀತಿಯಲ್ಲಿ ದಿಲ್ಲಿಯ ಕೆಲಸ ಮುಗಿಸಿಕೊಂಡು ಮಧ್ಯಾಹ್ನವೇ ಹೊರಟೆವು. ದಿಲ್ಲಿಯಿಂದ ಕಿಶೋದದ ವರೆಗಿನ ಪ್ರವಾಸದ ಸುಖದುಃಖ, ನಾನು ಈ ಮೊದಲೇ ಒಂದೆರಡು ಸಲ ಅನುಭವಿಸಿದ್ದೇನೆ. ಆದರೆ ಈ ಸಲದ ಪ್ರವಾಸ ಮಾತ್ರ ನಮ್ಮನ್ನು ತೀರ ನಿರ್ವಿಣ್ಣಗೊಳಿಸಿತು! ನಮ್ಮ ಜೊತೆಗಿದ್ದ ಶ್ರೀಧರಾಣಿಯಂತೂ ಮೃತ್ಯುಪತ್ರವನ್ನೇ ಬರೆಯಲು ಸಿದ್ಧನಾಗಿದ್ದ! ಅವನು ಪ್ರಾರಂಭದಿಂದಲೇ ಅನಂತಶಯನ ಮೂರ್ತಿಯಂತೆ, ತನ್ನ ಬೀಸಾದ ದೇಹವನ್ನು ಕುರ್ಚಿಗಳ ಸಾಲಿನ ಮಧ್ಯದ ತೆರವುಜಾಗದಲ್ಲಿ ಹರಬಿಟ್ಟು, ಬಿದ್ದುಕೊಂಡಿದ್ದ. ನನ್ನೊಬ್ಬನನ್ನು ಬಿಟ್ಟು ಮಿಕ್ಕವರೆಲ್ಲರೂ ಗಾಳಿ-ಬೇನೆ (ಹವಾ-ಆಜಾರ್)ಗೆ ಹಣ್ಣಾಗಿದ್ದರು. ದಿಲ್ಲಿಯಿಂದ ಹೊರಟ ವಿಮಾನ, ಪಾಕಿಸ್ತಾನಾಭಿಮುಖವಾಗಿ ಸಾಗಿತ್ತು. ವಿಮಾನದಲ್ಲಿ ಸೇವಿಕೆಯರಾರೂ ಇರದ್ದರಿಂದ, ಸಂಕಟಕಾಲದಲ್ಲಿ ಸೌಂದರ್ಯದಿಂದ ದೊರೆಯುವ ಧೈರ್ಯವೂ ನಮ್ಮ ಪಾಲಿಗೆ ಇರಲಿಲ್ಲ! ಆದರೆ

TRADE MARK
रोहिणी अगरबत्ती
पण्डित कार्यालय,
पो बॉ ४०२६
मुंबई ४

ಎತ್ತರದ— ಕಡಿಯ ಪ್ಯಾಯ— ಟೋಣಪನೊಬ್ಬನೇ ಮಾತ್ರ, ನಡುನಡುವೆ ಪೆಪ್ಪರಮಿಂಟ್ ಹಾಗು ಪಾನೀಯವನ್ನು ಕೊಡುವ ಸಿನ್ನತೆಯನ್ನು ತೋರುವ. ಆದರೆ ಅವನಿಂದ ಈ ಸೇವೆಯನ್ನು ಹೊಂದಲು ಯಾರಿಗೂ ಮನಸ್ಸಾಗುತ್ತಿರಲಿಲ್ಲ! ಹತ್ತು ಸಾವಿರ ಅಡಿ ಎತ್ತರದಲ್ಲಿ ಹೋಗುತ್ತಿದ್ದ ನಮ್ಮ ವಿಮಾನವು ಮೇಲೊಮ್ಮೆ, ಕೆಳಗೊಮ್ಮೆ, ಎಡಕ್ಕೊಮ್ಮೆ, ಬಲಕ್ಕೊಮ್ಮೆ ಹೊರಳುತ್ತ, ದಾರಿ ನಡೆಯುವ ಮುಂಧೋರಣದ ಮುದುಕಿಯಂತೆ ನಡೆದಿತ್ತು. ಕೆಳಗೆ ರುಕ್ಷವಾದ ರಾಜಪುತಾನೆಯ ಮಾಲುಕಾಮಯ ಪ್ರದೇಶ. ವಿಮಾನದೊಳಗೆ ಗಾಳಿ-ಬೇನೆಯಿಂದ ದುರ್ದಶೆಗೀಡಾದ ನಮ್ಮ ಜನ. ಏನಾದರೂ ವಿನೋದವಾಗಿ ಹರಟೆಹೊಡೆಯಬೇಕೆಂದರೆ, ಋಷಿಸಮಾನರಾದ ರಾಜರ್ಷಿಗಳು ಮಗ್ಗುಲಲ್ಲಿಯೇ ಕುಳಿತದ್ದರಿಂದ, ನಮ್ಮ ಶ್ರೀಮದ್‌ಗಾಂಭೀರ್ಯಕ್ಕೆ ಅವರ ಎಣಿಕೆಯಲ್ಲಿ ಕೊರತೆ ಕಂಡೀತಲ್ಲ—ಎಂದು, ಬಾಯಿಗೆ ಬೀಗ ಹಾಕಬೇಕಾಯಿತು. 'ಹಿಂದುಸ್ಥಾನ್ ಟೈಮ್ಸ್'ದ ನಮ್ಮ ದುರ್ಗಾದಾಸರು, ಹರಟೆ ಹೊಡೆಯುವುದರಲ್ಲಿ ಬಲು ಜಾಣರು. ಅದರಂತೆಯೇ ನಮ್ಮ ಶ್ರೀಧರಾಣಿ—ಗಾಂಧೀ ಆಶ್ರಮದಲ್ಲಿ ಸ್ಪೆಶಲ್ಲಾಗಿ ತಯಾರಾದ ಸರಕು—ಮೇಲೆ, ಅಮೇರಿಕೆಯಲ್ಲಿ ರಸಿಕ-ಸಂಸ್ಕಾರ ಹೊಂದಿದ ವ್ಯಕ್ತಿ. ಆದರೆ ಗಾಳಿ-ಬೇನೆಯಿಂದ ಇಬ್ಬರೂ ನಿಷ್ಪ್ರಭರಾಗಿದ್ದರು. ಸುದ್ದಿಗಾರರ ನಾಲಗೆಗಳು ಹೀಗೆ ನಿಶ್ಶಬ್ದವಾದದ್ದನ್ನು ನನ್ನ ಆಯುಷ್ಯದಲ್ಲಿ ಇದೇ ಮೊದಲ ಸಲ ನೋಡಿದೆ!

ಸಾಯಂಕಾಲದ ಐದೂವರೆ ಸುಮಾರಿಗೆ ನಮ್ಮ ವಿಮಾನವು ಕೆಶೋದಕ್ಕೆ ಬಂದಿಳಿಯಿತು. ಕೂಡಲೇ ನಮ್ಮೆಲ್ಲರನ್ನು ಚೋರಗಡದ ಅರಮನೆಗೆ ಕರೆದೊಯ್ದರು. ಕಡಲ ದಂಡೆಯಲ್ಲಿ ಕಟ್ಟಿದ ಆ ರಾಜಗೃಹವು ಸುಂದರವೂ ಪ್ರಶಸ್ತವೂ ಆಗಿತ್ತು. ಗಾಳಿ ತಿನ್ನಬೇಕೆನ್ನುವವರಿಗೆ ಇದು ಉತ್ತಮ ಸ್ಥಳವಂತೆ. ಈ ಕಾರಣದಿಂದಲೇ ಗಾಳಿ ತಿಂದು ನಾವು ಸಂತುಷ್ಟರಾಗಬೇಕೆಂಬ ರೀತಿಯಲ್ಲಿಯೇ ಅಲ್ಲಿಯ ಊಟದ ವ್ಯವಸ್ಥೆಯೂ ಇತ್ತು! ಕೆಲಸಕ್ಕೆ ನಿಯೋಜಿತರಾದ ಸ್ವಯಂಸೇವಕರೊಬ್ಬರಿಗೂ ಹಿಂದೀ ಬರುತ್ತಲಿರಲಿಲ್ಲ; ಇಂಗ್ಲೀಷು ತಿಳಿಯುತ್ತಿರಲಿಲ್ಲ. ಸ್ವಾತಂತ್ರ್ಯಯುಗದ ನಾಗರಿಕರಲ್ಲವೇ ಅವರು! ನಾನೊಬ್ಬನೇ ಹರಕು ಮುರುಕು ಗುಜರಾಥಿಯಲ್ಲಿ ನನಗೆ ಬೇಕಾದದ್ದನ್ನು ಬೇಡುತ್ತಿದ್ದೆ, ಬೇಡವಾದದ್ದನ್ನೆ ಅವರು ತಂದಿರಿಸುತ್ತಿದ್ದರು! ಅಲ್ಲಿ ತಂಗಿರುವ ನಾವು ಹತ್ತು ಹನ್ನೆರಡು ಜನರೇನೋ ಸ್ಪೆಶಲ್ ಅತಿಥಿಗಳು ಎಂದು ಕರೆಯಿಸಿಕೊಳ್ಳುತ್ತಿದ್ದೆವು! 'ಅನ್ನಪೂರ್ಣೆ'ಯ ರಾಜ್ಯದಲ್ಲಿ ನಾವಿದ್ದುದರಿಂದ, ಬೇಳೆಯ ಪದಾರ್ಥಗಳೇ ನಮಗೆ ಅನ್ನವಾಗಿದ್ದವು!

ಮೇ ೧೧ನೆಯ ದಿನಾಂಕವೆಲ್ಲ, ಯಾವ ಮುಖ್ಯ ಕಾರ್ಯಕ್ಕಾಗಿ ನಾವು ಅಲ್ಲಿಗೆ ಹೋಗಿದ್ದೆವೊ ಅದರ ವಿಮಂಚನೆಯಲ್ಲಿಯೇ ಹೋಯಿತು. ಮರುದಿನ ಜರುಗಲಿರುವ ಸಮಾರಂಭದ ನಿರ್ವಹಣೆಗೆ, ವಿಶ್ವಸ್ತರಾದ ನಾವು ಜವಾಬುದಾರರಲ್ಲವೆ? ಮೇಲಾಗಿ ರಾಷ್ಟ್ರಪತಿಗಳು ಆ ಸಮಾರಂಭಕ್ಕೆ ಬರುವವರು. ಅವರನ್ನು ಸಮಾರಂಭದಿಂದ ಕರೆದೊಯ್ಯುವ ಮಾರ್ಗ, ಪೋಲೀಸ್ ಬಂದೋಬಸ್ತು, ಜನರು ಬರುಹೋಗುವ ಸೌಕರ್ಯ ಮುಂತಾದ ಅನೇಕ ತಪಶೀಲುಗಳನ್ನು ನಾವು ನಿರ್ಧರಿಸಬೇಕಾಗಿತ್ತು. ಈ ಪ್ರತಿಷ್ಠಾ ಸಮಾರಂಭದ ವಿಶ್ವಸ್ತನಾದ ನಾನು, ಕೆಲವೊಂದು ಧಾರ್ಮಿಕ ವಿಧಿಗಳಲ್ಲಿಯೂ ಭಾಗವಹಿಸಬೇಕೆಂದು ತರ್ಕತೀರ್ಥ ಲಕ್ಷ್ಮಣ ಶಾಸ್ತ್ರಿಗಳು ಹಾಗು ಕೇವಲಾನಂದ ಸರಸ್ವತಿಗಳು ನನಗೆ ಆಜ್ಞೆ ಮಾಡಿದ್ದರು. ನಾನಂತೂ ನಸುಕು ಹರಿಯುವುದರೊಳಗಾಗಿ ಸ್ನಾನ ಮುಗಿಸಿ, ಧೌತವಸ್ತ್ರಗಳನ್ನು ಪರಿಧಾನ ಮಾಡಿಕೊಂಡು ಸಿದ್ಧನಾಗಿದ್ದೆ. ಆದರೆ ನಮ್ಮದು ಜಾತ್ಯತೀತ ರಾಜ್ಯವಿದ್ದರೂ, ಹಿಂದೂ ಮಂತ್ರಿಗೂ ಈ ಧರ್ಮಕಾರ್ಯವನ್ನು ನೆರವೇರಿಸಲು ಜನಿವಾರ ತೊಡಲೊಂದು ಸಿದ್ಧತೆ ಮಾಡಬೇಕಾಯಿತು! ನನ್ನ ತಲೆಯ ಮೇಲೆ ಶಿಖೆ (ಚಂಡಿಕೆ) ಇಲ್ಲದ್ದು ಯಾರ ಲಕ್ಷ್ಯಕ್ಕೂ ಬರಲಿಲ್ಲ. ಇಲ್ಲವಾದರೆ ನಾಪಿತನಿಂದ ಇದೂ ಒಂದು ಸಂಸ್ಕಾರವು ನಮ್ಮ ಮೇಲಾಗುವುದಿತ್ತು! ಸರಿ! ತುಸು ಹೊತ್ತಿನಲ್ಲಿಯೇ, 'ಯಜ್ಞೋಪವೀತಂ ಪರಮಂ ಪವಿತ್ರಂ ಪ್ರಜಾಪತೇರ್ಯತ್ ಸಹಜಂ ಪುರಸ್ತಾತ್' ಎನ್ನುವ ರೀತಿಯಲ್ಲಿ, ೩/೪ ಜನಿವಾರಗಳನ್ನು ಕೊರಳಲ್ಲಿ ತೂಗು ಬಿಟ್ಟು, ವೇಷಭೂಷಣಗಳಿಂದ ಸಜ್ಜಾಗಿ ನಟನು ರಂಗಭೂಮಿಯನ್ನು ಪ್ರವೇಶಿಸುವಂತೆ, ಅಸ್ಮಾದಿಕರು ಮಂದಿರವನ್ನು ಪ್ರವೇಶಿಸಿದೆವು! ಒಂದು ಗಂಟೆಯವರೆಗೆ ಯಾವ ದೇಶದ ಹಾಗೂ ನದಿಗಳ ಹೆಸರುಗಳು—ನಾನು ಓದಿದ ಶಾಲೆಯ ಭೂಗೋಲದಲ್ಲಾಗಲಿ—ನನ್ನ ಐವತ್ತೈದು ವರ್ಷದ ಆಯುಷ್ಯದಲ್ಲಾಗಲಿ—ಕಿವಿಯ ಮೇಲೆ ಕೂಡ ಬಿದ್ದಿರಲಿಲ್ಲವೋ, ಅಂಥ ನದಿಗಳ ಜಲ-ಮೃತ್ತಿಕೆಗಳಿಂದ, ಆ ಜ್ಯೋತಿರ್ಲಿಂಗದ ಅರ್ಚನೆ ನಡೆಯಿತು.

ಊರಲ್ಲೆಲ್ಲ ಅನೇಕ ಸುಳ್ಳು ಸುದ್ದಿಗಳು ಹರಡಿದ್ದುವು: ಕರಾಚಿ ರೇಡಿಯೊ ಹಾಗೆ ಹೇಳಿತು, ಇದರಿಂದ ಮುಸಲ್ಮಾನರು ಹೀಗೆ ರೇಗಿಕೊಂಡಾರು, ಜಾತ್ಯತೀತ ರಾಷ್ಟ್ರಕ್ಕೆ ಇದು ವಿಸಂಗತವಾದುದು.... ಒಂದಲ್ಲ ಎರಡಲ್ಲ ತರತರದ ಸುದ್ದಿಗಳನ್ನು ಗಂಭೀರ ಮುಖಮಾಡಿಕೊಂಡು ಜನರು ಆಡಿಕೊಳ್ಳುತ್ತಿದ್ದರು. ಆದರೂ ನೆರೆದವರೆಲ್ಲರಿಗೂ, ರಾಷ್ಟ್ರಪತಿಗಳ ಅಮೃತಹಸ್ತದಿಂದ ಈ ಪ್ರತಿಷ್ಠಾ ಸಮಾರಂಭ ಜರುಗುವುದು ಎಂದು, ತುಂಬ ಸಂತೋಷವಾಗಿತ್ತು. ಇಂಥ ಯುಗಪ್ರವರ್ತಕ ಕಾರ್ಯವು ರಾಷ್ಟ್ರದ ಜ್ಯೇಷ್ಠ ಹಾಗು ಶ್ರೇಷ್ಠ ಪುರುಷನಿಂದ ನೆರವೇರುವ ಯೋಗ ನನ್ನ ಪ್ರಯತ್ನದಿಂದಲೇ ಕೂಡಿಬಂದಿತ್ತು. ಈ ಕಾರಣದಿಂದ ಅದು ನಿರ್ವಿಘ್ನವಾಗಿ ಕೊನೆಗೊಳ್ಳುವಂತೆ ನೋಡಿಕೊಳ್ಳುವ ಹೊಣೆ ನನ್ನ ಮೇಲೆಯೇ ಇತ್ತೆಂದು ಹೇಳಬಹುದು.

ದಿನಾಂಕ ೧೧ ಕ್ಕೆ ನಾವೆಲ್ಲರೂ ಚೋರಗಡ ಅರಮನೆಯಿಂದ ಹೊರಟು, ಹನ್ನೆರಡು ಮೈಲಿನ ಮೇಲಿರುವ ಪ್ರಭಾಸ ಪಟ್ಟಣಕ್ಕೆ ಬಂದೆವು. ಪ್ರತ್ಯಕ್ಷ ಸಮುದ್ರವನ್ನು ಕೂಡ ಮೀರುವಂತೆ ಜನ-

ಸಮುದ್ರ ಸೇರಿದು ಬಿಟ್ಟಿತ್ತು. ಸರಿಯಾಗಿ ೯-೩೦ ಗಂಟೆಗೆ ಧೌತವಸ್ತ್ರಗಳನ್ನು ಪರಿಧಾನ ಮಾಡಿಕೊಂಡು, ಕೊರಳಲ್ಲಿ ರುದ್ರಾಕ್ಷಿ ಸರವನ್ನು ಧರಿಸಿ, ಬರಿಗಾಲಿನಿಂದ ರಾಜೇಂದ್ರ ಬಾಬು-ಗಳು ಮಂದಿರದಲ್ಲಿ ಕಾಲಿಟ್ಟರು. ಒಂದು ಗಂಟೆಯಲ್ಲಿ ಎಲ್ಲ ವೇದೋಕ್ತ ವಿಧಿಗಳು ಮುಗಿದುವು ಸೌರಾಷ್ಟ್ರದ ಮುಖ್ಯ ಪ್ರಧಾನರಾದ ಧೇಬರೂ ಬಾಯಿಯವರು ' ಜಯ ಸೋಮನಾಥ ' ಎಂದು ಉದ್ಘೋಷಿಸಿದರು. ಕ್ಷಣಾರ್ಧದಲ್ಲಿ ಪಶ್ಚಿಮ ದಿಕ್ಕಿಗೆ ತೋಪು ಹಾರತೊಡಗಿ, ಎಂಟುನೂರು ವರ್ಷಗಳ ಕಾಲ ನಷ್ಟವಾಗಿದ್ದ ಪವಿತ್ರ ಮಂದಿರದ ನಮ್ಮ ಕನಸು ಅಂದು ನನಸಾಯಿತು! ನಾವೆ-ಲ್ಲರೂ ಕೃತಕೃತ್ಯರಾದೆವು. ಯಾಜಮಾನ್ಯ ವಹಿಸಿದವರು ಅಂದು ಮನೆಯಲ್ಲಿಯೇ ಊಟಮಾಡಬೇಕೆಂದು ಪುರೋಹಿತರು ಹೇಳಿ-ದ್ದರು. ಈ ಧರ್ಮಾಜ್ಞೆಯ ಅರ್ಥ ನನಗೇನು ತಿಳಿಯಲಿಲ್ಲ. ಶ್ರೀ. ಡೇಗೆ ಪತಿ-ಪತ್ನಿಯರು ಮಾತ್ರ ಇದನ್ನು ಅಕ್ಷರಶಃ ಪಾಲಿಸಿದರು. ನಾನಂತೂ ಜೋರಗಡದಲ್ಲಿ ಊಟ ಮಾಡದೆ, ಒಮ್ಮೆಯಾದರೂ ಸೋಮನಾಥದಲ್ಲಿ—ಮನುಷ್ಯನಿಗೆ ಅವಶ್ಯವಾದ ಅನ್ನವನ್ನೇ ಉಣ್ಣುವುದು—ಎಂದು ನಿಶ್ಚಯಿಸಿದ್ದೆ. ಆದರೆ ಇದು ಕೈಗೂಡು-ವುದು ಹೇಗೆ— ಎಂಬ ವಿಚಾರದಲ್ಲಿದ್ದಾಗ, ಜಾಮಸಾಹೇಬರು ರಾಜೇಂದ್ರಬಾಬುಗಳೊಡನೆ ನನಗೂ ಊಟಕ್ಕೆ ಆಮಂತ್ರಣ ವಿತ್ತರು.

ಊಟ ಮುಗಿಯಿತು. ಅಂದಿನ ೧೧ ಗಂಟೆಯ ಸಮಾರಂಭ ನಿರ್ವಿಘ್ನವಾಗಿ ಕೊನೆಗಂಡುದರಿಂದ, ಎಲ್ಲರ ಮನಸ್ಸು ಸುಪ್ರಸನ್ನ-ವಾಗಿತ್ತು. " ಗೀರವನದಲ್ಲಿ ಸಿಂಹದ ಬೇಟೆಯ ಏರ್ಪಾಡು ಮಾಡುವವನಿದ್ದೇನೆ. ರಾಜೇಂದ್ರಬಾಬುಗಳು ಬರುತ್ತಾರೆ, ನೀವೂ ಬನ್ನಿರಿ! " ಎಂದು ಜಾಮಸಾಹೇಬರು ನನ್ನನ್ನು ಕರೆದರು. ನಾನು ಕೂಡಲೆ ಅದಕ್ಕೆ ಒಪ್ಪಿದೆ. ನಮ್ಮ ಗುಂಪಿನ ಶ್ರೀಯುತ ದುರ್ಗಾದಾಸ, ಶ್ರೀಧರಾಣಿ, ಕಾಂಗ್ರೆಸ್ಸಿನ ಜನರಲ್ ಸೆಕ್ರೆಟರಿ-ಗಳಾದ ಗೌತಮರು ಮತ್ತು ಇಬ್ಬರು ಪ್ರಾಧ್ಯಾಪಿಕೆಯರು ನನ್ನೊಡನೆ ತಾವೂ ಬರುವುದಾಗಿ ಇಚ್ಛೆಯನ್ನು ವ್ಯಕ್ತಪಡಿಸಿದರು ಸಿನೇಮಾ ಮಂದಿರದಲ್ಲಿ ಟಿಕೇಟು ಕೊಂಡು ಜಾಗದೊರಕಿಸುವುದು ಎಷ್ಟು ಸುಲಭಸಾಧ್ಯವೊ ಅಷ್ಟೇ ಇದು ಸುಲಭ ಎಂದು ಅವರು ಭಾವಿಸಿದ್ದರೇನೊ! ಜಾಮಸಾಹೇಬರಿಗೆ ಈ ಜನರನ್ನು ಒಯ್ಯುವು ದೇನು ಅಸಾಧ್ಯವಿರಲಿಲ್ಲ. ಆದರೂ ಒಂದು ಗಂಟೆಯ ವರೆಗೆ ' ಸಿಂಹದ ಬೇಟೆ ಎಂದರೆ ಎಂಥ ಗಂಡಾಂತರದ್ದು! ' ಎಂಬುದನ್ನು ತಿಳಿಸಿ ಹೇಳಿದರು. ಆದರಿಂದ ನಮಗೆ ಅದರ ಕಷ್ಟದ ಕಲ್ಪನೆ ಬಂದರೂ ಕುತೂಹಲ ಕೆರಳಿತು. ನೋಡಿಯೇ ತೀರಬೇಕೆಂಬ ಉತ್ಸಾಹ ಬೆಳೆಯಿತು. ಜಾಮಸಾಹೇಬರಂಥ ಚಾಟುಗೋಷ್ಠಿಯ ಮಲ್ಲ ಇನ್ನೊಬ್ಬರಿಲ್ಲ! ಎಲ್ಲವನ್ನೂ ಬಲ್ಲೆನೆಂಬ ಅಹಮ್ಮಿನಿಂದ ನಡೆಯುವ ನಾನು ಕೂಡ, ನಡುವೆ ಬಾಯಿಹಾಕದೆ ಮುಗ್ಧನಾಗಿ ಅವರ ಮಾತುಗಳನ್ನು ಕೇಳುತ್ತಿದ್ದೆ. ಪತ್ರಿಕೆಗಳೊಳಗಿನ ಸಾಲ್ಕು ತುಣುಕುಮಿಣುಕುಗಳನ್ನೋದಿ, ಸಾಯಂಕಾಲ ಉಪನ್ಯಾಸ

ಬಿಗಿಯುವ ಮುಖಂಡರ ಮುಖ್ಯ ಲಕ್ಷಣ ನನ್ನಲ್ಲಿಯೂ ರಕ್ತಗತ-ವಾಗಿವೆ! ಆದಿತ್ಯವಾರಪೇಟೆಯಲ್ಲಿ ಕೊಂಡು, ಬುಧವಾರಪೇಟೆ-ಯಲ್ಲಿ ಮಾರುವ ಪುಣೇರೀ ವೃತ್ತಿ, ಪುಣೆಯಲ್ಲಿ ಕಳೆದ ನನ್ನಲ್ಲಿಯೂ ಇದ್ದರೆ ಆಶ್ಚರ್ಯವೇನು? ಜಾಮುಸಾಹೇಬರಿಂದ ಕೇಳಿದ ಶಿಕಾರಿ-ಸುದ್ದಿಯ ಅಲ್ಪ ಬಂಡವಾಳವನ್ನು ಬಳಸಿ, ನಾನು ನಮ್ಮ ಗುಂಪಿ-ನವರ ಮೇಲೆ ತುಂಬ 'ಛಾಪು' ಹಾಕಿದ್ದೆ! ಅಲ್ಲಿಯ ಜಿಲ್ಲಾಧಿ-ಕಾರಿಗಳು ಸಿಂಹದ ಬೇಟೆಯ ಮೇಲಿನ ಎರಡು ಪುಸ್ತಕಗಳನ್ನೂ ನನಗೆ ತಂದುಕೊಟ್ಟರು. ಪತ್ರಿಕೆಗಳಲ್ಲಿ ಅಭಿಪ್ರಾಯ ಬರುವ ಮಾದರಿಯಲ್ಲಿ, ಪ್ರಸ್ತಾವನೆ ಉಪಸಂಹಾರ ಎರಡನ್ನೂ ಓದಿ ಶಿಕಾರಿಯ ಎಲ್ಲ ಜ್ಞಾನವನ್ನೂ ದೊರಕಿಸಿದ ಸಮಾಧಾನಹಚ್ಚಿ-ಕೊಳ್ಳಬೇಕೆಂದು ಒಮ್ಮೆ ಎನಿಸಿತು. ಆದರೆ ಅದಕ್ಕೆ ಮನಸ್ಸು ಒಪ್ಪಲಿಲ್ಲ. 'ಸಿಂಹದ ಬೇಟೆಯೆಂದರೆ ಸಾಮಾನ್ಯವಲ್ಲ. ಜೀವನ-ದಲ್ಲಿಯೇ ಇಂಥ ಅನುಭವ ದೊರೆಯುವುದು ಅಪರೂಪ. ಕಡಿದಷ್ಟೇ ಕುರಿಸಿಕೊಂಡು ಜ್ಞಾನಲವದುರ್ವಿದಗ್ಧನಾಗುವುದು ಬೇಡ!' ಎಂದೆನಿಸಿ, ಎರಡೂ ಪುಸ್ತಕಗಳನ್ನು ಸಮಗ್ರವಾಗಿ ಓದಿದೆ. ಓದಿದಮೇಲೆನಿಸಿತು: ಸಿಂಹದ ಶಿಕಾರಿ ಎಂದರೆ, ಸಾಧಿಸಿದರೆ ಸಾಫಲ್ಯ; ತಪ್ಪಿದರೆ ಸಾವು!

ಆ ದಿನ ರಾತ್ರಿ ಜೋರಗಡದ ಅರಮನೆಯ ಸುಸಜ್ಜಿತವಾದ ಕೋಣೆಯಲ್ಲಿ ಮಲಗಿದ್ದರೂ ನನಗೆ ಗಾಢನಿದ್ರೆ ಬರಲಿಲ್ಲ. ಕಡಲ ಮೊರೆತ ಸಿಂಹದ ಗರ್ಜನೆಯಂತೆ ಕೇಳುವುದು. ಮಲಗಿದ ಮಂಚ ಮಂಚಿಗೆಯಂತೆ ಭಾಸವಾಗುವುದು. ಸುತ್ತಲಿನ ಗೋಡೆಗಳು ನಿಬಿಡವಾದ ವೃಕ್ಷರಾಶಿಗಳಂತೆ ಕಾಣುವುವು. ಪಹರೆಮಾಡುವ ಸಂರಕ್ಷಕರು 'ಸೋ'ಹಾಕುವ ಶಿಕಾರಿ ಜನರಂತೆ ಎನಿಸುವರು! ಗೀರವನ ಹೇಗಿದ್ದೀತು? ಸಿಂಹ ಹೇಗೆ ಬರಬಹುದು? ಬಹಳ ದಿನಗಳಲ್ಲಿ ಬಂದೂಕು ಹಿಡಿಯದ ನನ್ನ ಕೈಯಿಂದ ಹಾರಿದ ಗುಂಡು ತಿರುಗಿ ಬಂದರೆ ಹೇಗೆ?— ಮುಂತಾದ ಕನಸಿನ ಸಂಭ್ರಮದಲ್ಲಿ ಕಣ್ಮುಚ್ಚಿ ಬಿದ್ದುಕೊಂಡಿರುವಾಗ, ಕಾಠೇವಾಡೀ ಭಾಷೆಯಲ್ಲಿ ಸ್ವಯಂಸೇವಕನು ಚಹ ತಂದ ಸಂಕೇತವನ್ನು ಕೊಟ್ಟನು. ಮೃಗರಾಜನ ಮೇಲೆ ಗುಂಡು ಹಾರಿಸಲು ಸನ್ನದ್ಧ-ನಾದ ವೀರಶಿಕಾರಿಯಂತೆ ನಾನು ಕೈ ಮುಷ್ಟಿಮಾಡಿ, ಮೊಂಡೆ-ಗಾಲೂರಿದ ಬಿಂಕದಲ್ಲಿ ಎದ್ದೆ. ಎದುರಿಗೆ ಸ್ವಯಂಸೇವಕನನ್ನು ನೋಡಿ ನನ್ನದು ನನಗೇ ನಗು ಬಂದಿತು! 'ಈ ಕೇಂದ್ರ ಮಂತ್ರಿವರ್ಯನಿಗೆ ತಲೆ ಕೆಟ್ಟಿರಬೇಕು' ಎಂದುಕೊಂಡನೋ ಏನೋ ಆ ಸ್ವಯಂಸೇವಕ!

ಪ್ರಾತರ್ವಿಧಿ ಸ್ನಾನಾದಿಗಳನ್ನು ಮುಗಿಸಿಕೊಂಡು, ಸರಿಯಾಗಿ ೧೧ ಗಂಟೆಗೆ ರಾಷ್ಟ್ರಪತಿಗಳಿಗಾಗಿ ಏರ್ಪಾಡಾದ ಸ್ಪೆಶಲ್ ರೇಲ್ವೆ-ಯಲ್ಲಿ ನಾವೆಲ್ಲರೂ ಹೋಗಿ ಕುಳಿತೆವು. ನಮ್ಮ ಗುಂಪಿನಲ್ಲಿ ದುರ್ಗಾದಾಸ, ಶ್ರೀಧರಾಣಿ, ಗೌತಮರು, ಇಬ್ಬರು ಪ್ರಾಧ್ಯಾಪಿಕೆ-ಯರು ಮತ್ತು ಒಬ್ಬ ಅನ್ನಸಮಿತಿಯ ಕೆಲಸಗಾರರು ಇಷ್ಟು ಜನ ಇದ್ದರು. ಗಾಡಿ ಬಿಡುವ ಹೊತ್ತಿಗೆ ನನ್ನ ಉಡುಪನ್ನು ನೋಡಿ ಜಿಲ್ಲಾಧಿಕಾರಿ ಎಂದ: 'ಈ ಪೋಷಾಕು ನಡೆಯಲಾರದು. ಕೆಂಪು-ಬಿಳಿ ಬಟ್ಟೆಗಳಿಗೆ ಸಿಂಹ ಬೆದರುತ್ತದೆ.' ನನ್ನ ಹತ್ತಿರ ಬೇರೆ ಬಟ್ಟೆಗಳಿರಲಿಲ್ಲ. ಪೇಟೆಯಲ್ಲಿ ಕೊಂಡು ತರಬೇಕೆಂದರೆ ಅವಕಾಶ-ವೆಲ್ಲಿತ್ತು? ನಮ್ಮ ಜೊತೆಗೆ ಬಂದ ಸ್ತ್ರೀಯರಲ್ಲಿ ಇಬ್ಬರು ಮಹಾ-ಶ್ವೇತೆಯರಾಗಿದ್ದರು; ಒಬ್ಬಳು ಹಸಿರು ಜಾರ್ಜೆಟ್ ಉಟ್ಟಿದ್ದಳು. ಕ್ಷಣದಲ್ಲಿ ವೀರಾವಳದಿಂದ ಗಾಡಿ ಹೊರಟಿತು. ತಕ್ಕ ವೇಷದ ಅಭಾವದ ಮೂಲಕ ಶಿಕಾರಿ ಎಲ್ಲಿ ತಪ್ಪುವುದೊ ಎಂದು ಮನಸ್ಸು ತುಸು ವ್ಯಗ್ರವಾಗಿತ್ತು. ಆಗ ಹಿಂದಿನದೊಂದು ಪ್ರಸಂಗ ಸ್ಮರಣೆಗೆ ಬಂತು: ವಿಟ್ಠಲಭಾಯಿಯವರು ಅಧ್ಯಕ್ಷಸ್ಥಾನದ ಮೇಲೆ ನಿಯೋ-ಜಿತರಾದಾಗ, ಹೊತ್ತಿಗೆ ಗೌನ್ ದೊರೆಯಲಿಲ್ಲವೆಂದು ಸರೋಜಿನಿ ನಾಯಡುರವರ ಕರಿಸೀರೆಯನ್ನೇ ಕೈಗಡ ಕೇಳಿಕೊಂಡು, ಗೌನಿನಂತೆ ಧರಿಸಿ ಅಧ್ಯಕ್ಷಸ್ಥಾನದಮೇಲೆ ವಿರಾಜಮಾನರಾಗಿದ್ದರಂತೆ! ವಿಟ್ಠಲ-ಭಾಯಿಯವರ ವಯಸ್ಸು, ಅವರ ರಸಿಕತೆಯನ್ನು ಗಮನಿಸಿದರೆ, ಸರೋಜಿನೀದೇವಿಯರನ್ನು ಹಾಗೆ ಕೇಳಲು ಅವರಿಗೆ ಸಂಕೋಚ-ವೆನಿಸಿರಲಾರದು. ಅವರು ಹಾಗೆ ಮಾಡಿದರೆಂದು, ನಾನೂ ಆ ಹಸಿರು ಪತ್ತಲದ ಹೆಣ್ಣಿನ ಹತ್ತಿರ ಅರೆ-ವಸ್ತ್ರಕ್ಕಾಗಿ ಯಾಚನೆ ಮಾಡಿದರೆ ನಡೆದೀತೆ? ನಾನೇನು ಅಷ್ಟು ವಯಸ್ಸು ಮೀರಿದವನೂ ಅಲ್ಲ; ಅಲ್ಲದೆ ಆ ಸ್ತ್ರೀಯಂತೂ ತರುಣಿಯೇ ಆಗಿದ್ದಳು! ಈ ಸಂದರ್ಭದಲ್ಲಿ ನನ್ನ ಯಾಚನೆಯ ವಿಪರೀತ ಅರ್ಥವಾಗಿ ಮಹಾ-ಭಾರತದ ದ್ರೌಪದಿಯ ಪ್ರಸಂಗವುಂಟಾದರೆ ಕಠಿಣ! ಮೇಲಾಗಿ ಆಕೆಯ ಸಂಗ್ರಹದಲ್ಲಿಯೂ ಬೇರೆ ಸೀರೆ ಇದ್ದಂತೆ ಕಾಣಲಿಲ್ಲ. ಮನಸ್ಸು ಅಷ್ಟಕ್ಕೇ ಬಿಗಿಹಿಡಿದೆ. ಶಿಷ್ಟಾಚಾರವೊಂದಿದೆಯಲ್ಲ!

ಗಾಡಿ ಸಾಗಿತ್ತು. ನಗೆ-ಉತ್ಸಾಹಗಳ ವಾತಾವರಣಕ್ಕೆ ಕಳೆ ಬಂದಿತ್ತು. ನಾನು ಹೆಂಗುಸರಿಗೆಂದೆ:— "ನೋಡಿ, ನೀವೇನೋ ಸಿಂಹದ ಬೇಟೆಗೆ ಅಣಿಯಾಗಿದ್ದೀರಿ. ಅದಕ್ಕೆ, ನಿಮ್ಮ ಮನಸ್ಸಿನ-ವಿರುದ್ಧ ಎರಡು ಮಾತುಗಳನ್ನು ನೀವು ಮಾಡಬೇಕಾದೀತು. ಒಂದನೆಯದು, ಆಧುನಿಕ ಪ್ರಸಾಧನದಿಂದ, ಪಕ್ವಬಿಂಬಾಧರದಂತೆ ಕೆಂಪೇರಿದ ನಿಮ್ಮ ಓಷ್ಠದ್ವಯಗಳನ್ನು ನೀವು ಕರಿದಾಗಿಸಬೇಕು. ಎರಡನೆಯದು, ಮಂಚಿಗೆಯ ಮೇಲೆ, ಎರಡು ಮೂರು ಗಂಟೆಗಳ ಕಾಲ ಪಿಟ್ಕೆನ್ನದೆ ಮೌನವಾಗಿ ಕೂಡಬೇಕು. ಸಿಂಹದ ಖ್ಯಾತಿ ಹೀಗೆ ಹೇಳುತ್ತಾರೆ: ಅದು ಸ್ತ್ರೀಜಾತಿಯನ್ನು ಗೌರವದಿಂದ ಕಾಣುತ್ತಿ-ದ್ದರೂ, ಅವರ ವಾಚಾಳಿತನದ ಬಗ್ಗೆ ಅದಕ್ಕೆ ತುಂಬ ಸಿಟ್ಟಂತೆ! ಮತ್ತೆ ನೀವು ತಪ್ಪಿಯಾದರೂ 'ಅಮ್ಮಾ' ಎಂದು ಕೂಗಿದ್ದಾಗಲಿ, ಕೈವಸ್ತ್ರ ಹಾರಿಸಿದ್ದಾಗಲಿ ಇಲ್ಲವೆ ನೇತ್ರಕಟಾಕ್ಷವನ್ನು ಬೀರಿದ್ದಾ-ಗಲಿ ಅದಕ್ಕೆ ತಿಳಿಯ ಬಂತೆಂದರೆ, ಅದೇನು ನಿಮ್ಮ ಮೇಲೆ ಹಲ್ಲೆ-ಮಾಡದೆ ಬಿಡುವುದಿಲ್ಲ. ಆಮೇಲೆ ನಿಮ್ಮ ಕಥಾನಕ ದುಃಖಾಂತ-ವಾದೀತು. ನೋಡಿಕೊಳ್ಳಿ"!

ನಾನು ಬೇಟೆಯ ಮೇಲಿನ ಎರಡು ಗ್ರಂಥಗಳನ್ನು ಓದಿದ್ದ-ರಿಂದ, ನ್ಯಾಯಾಧೀಶನ ಗಾಂಭೀರ್ಯದಲ್ಲಿ ಮಾತನಾಡುತ್ತಿದ್ದೆ. ನಾನು ಹೇಳಿದ್ದೆಲ್ಲವನ್ನೂ ಹೆಂಗುಸರು ನಂಬದಿದ್ದರೂ, ಕೆಲವನ್ನು-

ದರೂ ವಿಶ್ವಾಸವಿಟ್ಟು ಗ್ರಹಿಸಿದರು. ಹಾಗೆ ಅವರು ಆಧುನಿಕ ರಾಜಕಾರಣದ ಪರಿಚಯವುಳ್ಳವರಾಗಿದ್ದರಿಂದ, ಮುಖಂಡರು ಹೇಳುವ ಮಾತಿನಲ್ಲಿ ಹುರುಳೆಷ್ಟು, ಜೊಳ್ಳೆಷ್ಟು ಎಂಬುದನ್ನು ಕೂಡಲೆ ಕಳೆಹಿಡಿಯುತ್ತಿದ್ದರು. ಊರು ಬರುವವರೆಗೆ ಡಬ್ಬಿಯ ಒಂದು ಮೂಲೆಯಲ್ಲಿ ಕುಳಿತು, ಆ ಮೂವರು ಕನ್ನಿಕೆಯರು ಚಿಟಗುಬ್ಬಿಯಂತೆ ಚಿವ್ ಚಿವ್ ನಡೆಯಿಸಿಯೇ ಇದ್ದರು !

ಸುಮಾರು ಒಂದೂವರೆ ಗಂಟೆ ಹೀಗೆ ಪ್ರವಾಸಮಾಡಿ, ೧೨–೩೦ರ ಹೊತ್ತಿಗೆ ನಾವು ಸಾಸವನಗೀರ ಎಂಬ ನಿಲ್ದಾಣಕ್ಕೆ ಬಂದೆವು. ಕಾಡಿನಲ್ಲಿಯ ನಿಲ್ದಾಣ. ಅಲ್ಲಿಯ ಕೆಲಸಗಾರರು ಕೂಡ ವನಚರ ಪ್ರಾಣಿಗಳಂತೆ ಕಾಣುತ್ತಿದ್ದರು. ರಾಷ್ಟ್ರಪತಿಗಳು, ಅವರ ಜನರು ಇಳಿದರು. ನಾವೂ ಇಳಿದೆವು ಎಲ್ಲರೂ ನಡೆದುಕೊಂಡು ನಿಲ್ದಾಣದಿಂದ ಅರ್ಧ ಫರ್ಲಾಂಗು ಅಂತರದ ಮೇಲಿರುವ ಶಿಕಾರಿ ಬಂಗ್ಲೆಗೆ ತಲ್ಪಿದೆವು. ಬಂಗಲೆ ಮರಡಿಯ ಮೇಲೆ ಕಟ್ಟಲಾಗಿದೆ. ರಾಜ-ಮಹಾರಾಜರು, ವೈಸ್‌ರಾಯ-ಬಾದಶಹರು ಶಿಕಾರಿಗೆ ಬಂದರೆ, ಇಳಿದುಕೊಳ್ಳಲು ಅತ್ಯಾಧುನಿಕ ವ್ಯವಸ್ಥೆ ಇದರಲ್ಲಿದೆ. ಸರಿ. ಬೇರೆ ಬೇರೆ ಕೋಣೆಗಳಲ್ಲಿ ನಮ್ಮೆಲ್ಲರನ್ನೂ ಹಂಚಿಹಾಕಿದರು. ರಾಷ್ಟ್ರಪತಿಗಳು ಮಾತ್ರ ಮಧ್ಯ ಚೌಕದಲ್ಲಿ ತಂಗಿದರು. ಕಟ್ಟಡದ ಗೋಡೆಗಳು ಬೇಟೆಯ ಚಿತ್ರಗಳಿಂದ ಚಿತ್ರಿಸಲ್ಪಟ್ಟಿದ್ದುವು. ನೆಲವೆಲ್ಲ ಬೇಟೆಗೆ ಬಲಿಬಿದ್ದ ವನ್ಯಪ್ರಾಣಿಗಳ ಚರ್ಮಗಳಿಂದ ಅಲಂಕೃತವಾಗಿತ್ತು. ಮಾನವ ವಸತಿಯಿಂದ ದೂರವಾಗಿದ್ದ ಆ ಅರಣ್ಯವು ಇಂದು ಗಜಬಜಿಸಿ ಹೋಗಿತ್ತು. ರಾಜಧಾನಿಯಲ್ಲಿ ಕೂಡ ದೊರೆಯದ ಆತಿಥ್ಯ ನಮಗೆ ದೊರೆತದ್ದರಿಂದ, ದೇಶದ ಅನ್ನಧಾನ್ಯದ ಪರಿಸ್ಥಿತಿಯನ್ನು ಕೇವಲ ಕರ್ತವ್ಯಬುದ್ಧಿಯಿಂದಲೇ ನೆನೆದು, ನಾವು ಹೊಟ್ಟೆತುಂಬ ಊಟ ಮಾಡಿದೆವು. ಬೇಟೆಗೆ ಹೊರಡಲು ಇನ್ನೂ ಅವಕಾಶವಿದ್ದುದರಿಂದ 'ನಮ್ಮ ನಮ್ಮ ಕೋಣೆಯಲ್ಲಿ ಒಂದು ಜಂಪು ನಿದ್ದೆಯನ್ನಾದರೂ ಮಾಡೋಣ' ಎಂದು ಮಂಚಕ್ಕೆ ಮೈಯೊಡ್ಡಿದೆವು. ಮೂರು ಬಡಿಯಲು ಕಾಲುಗಂಟೆ ಇರುವಾಗ, ಬೈಠಕ್‌ಖಾನೆಯಲ್ಲಿ ಎಲ್ಲರೂ ಸೇರಿದರು. ನಾನು ಅಡ್ಡಾಗಿದ್ದಾಗ ಹಾಸಿಗೆಯ ಮೇಲಿನ ಚದ್ದರನ್ನು ನೋಡಿ, ಇದನ್ನೇ ಹೊದ್ದುಕೊಂಡು ಶಿಕಾರಿಗೆ ಹೋದರಾಯಿತು—ಎಂದು ತಲೆಯಲ್ಲಿ ಬಂದು, ಕೂಡಲೇ ಅದನ್ನು ಜಾರಿಯಲ್ಲಿ ತಂದೆ. ಚದ್ದರ್ ಸುತ್ತಿಕೊಂಡು ಬೈಠಕ್‌ಖಾನೆಯಲ್ಲಿ ಪ್ರವೇಶಿಸಿದ ಕೂಡಲೆ, ನಾನು ಸಿಂಹವಲ್ಲದಿದ್ದರೂ ಅಲ್ಲಿ ನೆರೆದ ಹರಿಣಿಯರೆಲ್ಲ ಚೆಂಗನೆ ಬೆದರಿದರು ! ಆದರೂ ನನ್ನ ಈ ಕೃತಿಯು ನಮ್ಮ ಗುಂಪಿನವರಿಗೆಲ್ಲ ಮನಸ್ಸಿಗೆ ಬಂದು, ದುರ್ಗಾದಾಸ-ಶ್ರೀಧರಾಣಿಯವರು ತಕ್ಷಣ ಅದನ್ನು ಅನುಕರಿಸಿದರು. ಹೆಂಗುಸರೂ ನಮ್ಮಂತೆ ಚದ್ದರಿಗೇ ಮೊರೆಹೋದರು ! ಹೀಗೆ ನಾವೆಲ್ಲರೂ ಒಂದೊಂದು ಚದ್ದರನ್ನು ಸುತ್ತಿಕೊಂಡು, ಗೋಷಾದ ಸುಂದರ ಸ್ತ್ರೀ-ಪುರುಷರಾಗಿ ಬೇಟೆಗೆ ಸಜ್ಜಾದೆವು. ಆರೇಳು ಮೋಟರುಗಳು, ಒಂದೆರಡು ಜೀಪುಗಳು, ಪೋಲಿಸ್ ಸಂರಕ್ಷಕರು ಫಾರೆಸ್ಟ್ ಅಧಿಕಾರಿಗಳು, ಗಾರ್ಡುಗಳು,— ತಂಡತಂಡವಾಗಿ ಹೊರಟರು. ಒಂದು ಮೋಟರಿನಲ್ಲಿ ನಾನು, ರಾಜೇಂದ್ರಬಾಬುಗಳು, ಜಾಮಸಾಹೇಬರು, ಏ. ಡಿ. ಸಿ. ಇಷ್ಟು ಜನರಿದ್ದೆವು. ತುಸು ಹೊತ್ತಿನಲ್ಲಿ ಎಲ್ಲರೂ ಅರಣ್ಯವನ್ನು ಸೇರಿದೆವು. ಕಾಡು ನೋಡಿ ಮೈ ನಡುಗಿತು !

ಕೆಲವೊಂದು ಅಂತರ ಹೋದಮೇಲೆ, ಸುಮಾರು ನೂರು ಜನರು ಕೈಯಲ್ಲಿ ವಿವಿಧ ಆಯುಧಗಳನ್ನು ಧರಿಸಿ ನಿಂತಿದ್ದರು. ಅವರೆಲ್ಲರೂ

ಬಾಯೋಟೋನಾ
ಇದರ ಸೇವನೆಯಿಂದ

ಮಕ್ಕಳು ಮೊದಲ್ಗೊಂಡು ಮುದುಕರವರೆಗೆ ಸ್ತ್ರೀಪುರುಷರು ಇದನ್ನು ಸೇವಿಸಬಹುದು. ಮುದುಕರಿಗೂ ಜೀವಾಣುಗಳಿಗೂ ಬಲವನ್ನೂ ಆರೋಗ್ಯವನ್ನೂ ಕೊಡುವ ಉತ್ತಮ ಉಪಾಯವೆಂದರೆ 'ಬಾಯೋಟೋನಾ' ಸೇವಿಸುವದೇ ಆಗಿದೆ. ೪೦ ದಿವಸ ಸಾಕಾಗುವ ಬಾಟ್ಲಿಯ ಬೆಲೆ ರೂ. ೩. ಟಿ. ಖರ್ಚ ಬೇರೆ. ಸೂಚಿಪತ್ರ ಪಡೆಯಬಹುದು.

ROY & CO. BOMBAY 2.

ಚಿತ್ರಕಲಾ ಪ್ರವೇಶ

೪ನೆಯ ಆವೃತ್ತಿ

ಅಚ್ಚಾಗಿ ಸಿದ್ಧವಾಗಿದೆ.

ಬೇಕಾಗಿರುವವರು

ಬೇಗನೆ ಬೇಡಿಕೆ ಕಳುಹಿರಿ!

ಬರೆದವರು :

ಶ್ರೀ. ಜಿ. ಎಸ್. ಹುದ್ದಾರ

೫೫ ವರ್ಷಗಳಿಂದ ಅನುಭವಪಟ್ಟ

ಕರ್ಶೀ ಮತ್ತು ಕಂಪನಿಯ

ಜ್ವರಗಡ್ಡೆಯ ಗುಳಿಗೆಗಳು

ಬಾಟ್ಲಿಗೆ ೧-೮-೦

ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.

ವಿಳಾಸ :—

ಗಣೇಶ ರಾಮಚಂದ್ರ ಕರ್ಶೀ ಮತ್ತು ಕಂಪನಿ

ಗಿರಗಾಂವ, ಮುಂಬಯಿ. ೪

ಎರಡು ಸಾವಿರ ವರ್ಷದ ಶಸ್ತ್ರಾಸ್ತ್ರಗಳ ಪ್ರಗತಿಯನ್ನು ತೋರಿಸಲು ನೆರೆದಿರುವರೇನೊ ಎನ್ನುವಂತಿತ್ತು ! ನಾವು ಮೋಟರಿನಿಂದ ಇಳಿದ ಕೂಡಲೆ, ಭವ್ಯ ಆಕಾರದ ಇಳಿವಯಸ್ಸಿನ ಗಂಡುಗಲಿಯೊಬ್ಬನು ಎದುರಿಗೆ ಬಂದನು. ಅವನ ಮುಕ್ಕಾಲು ಪಾಲು ಮುಖವೆಲ್ಲ ಗಡ್ಡ-ಮೀಸೆಗಳಿಂದಲೇ ಆವೃತವಾಗಿತ್ತು. ಜಾಮುಸಾಹೇಬರು ಅವನೊಡನೆ ಮಾತನಾಡತೊಡಗಿದರು. ಜಾಮುಸಾಹೇಬರ ಮಾತು ಬಲು ಸವಿ. ಅವರು ಆ ವೃದ್ಧನನ್ನು ಬಹು ಮರ್ಯಾದೆಯಿಂದ ಸಂಬೋಧಿಸಿ, ಅವನಿಂದ ತಿಳಿಯಬೇಕಾದದ್ದನ್ನು ತಿಳಿದುಕೊಂಡರು. ನನಗೆ ಕಾಠೇವಾಡದ ಭಾಷೆ ಬಾರದಿದ್ದರೂ, ಅವನು ಹೇಳುವುದನ್ನು ಸಂದರ್ಭದ ಮೇಲೆ ಗ್ರಹಿಸಿಕೊಂಡೆ: “ ಒಂದು ಗಂಡು, ಒಂದು ಹೆಣ್ಣು, ಅದರ ಮರಿ ಆಹಾರ ತಿನ್ನುತ್ತಾ ಇವೆ. ” ಎಂದು ಹೇಳಿದನು. ಅದನ್ನು ಕೇಳಿ ಜಾಮುಸಾಹೇಬರಿಗೆ ಬಲು ಆನಂದವಾಯಿತು.

ಎರಡು ಗುಡ್ಡಗಳ ನಡುವಿನ ಕೊಳ್ಳ. ಸಣ್ಣ ಹಳ್ಳವೊಂದು ಹರಿಯುತ್ತದೆ. ನಡುವಿನ ಅಂತರ ಸುಮಾರು ಒಂದು ಮೈಲು ಇರಬಹುದು. ಎರಡೆರಡು ಫರ್ಲಾಂಗಿಗೊಂದರಂತೆ ನಾಲ್ಕೈದು ಮಂಚಿಕೆಗಳು ಸಿದ್ಧವಾಗಿದ್ದುವು. ಕೊನೆಯ ಮಂಚಿಕೆಯಲ್ಲಿ ನಾನು ಜಾಮುಸಾಹೇಬರು, ರಾಜೇಂದ್ರಬಾಬುಗಳು, ಅವರ ಏ. ಡಿ. ಸಿ., ಆದರಾಚೆಯ ಮಂಚಿಕೆ ನಮ್ಮ ಜೊತೆಗೆ ಬಂದವರಿಗಾಗಿ ಎಂದು ಏರ್ಪಾಡಾಗಿತ್ತು. ಅಲ್ಲಿಂದ ಮೋಟರ್ ಬಿಟ್ಟು ಅರ್ಧ ಮೈಲು ನಡೆಯುತ್ತ ಹೊರಟೆವು. ಮುಂದೆ ೧೦–೧೨ ಜನ ಶಸ್ತ್ರಧಾರಿಗಳು; ಹಿಂದೆ ೧೦–೧೨ ಜನ ಶಸ್ತ್ರಧಾರಿಗಳು ! ಯರವಡಾ ಜೇಲಯಾತ್ರೆ ಮತ್ತೆ ವಕ್ರಿಸಿದಂತೆನಿಸಿತು ! ಹೀಗೆ ಅರ್ಧ ಮೈಲು ದಾರಿ ತುಳಿದ ಮೇಲೆ, ಒಂದು ಮರದಡಿ ಬಂದೆವು. ಆ ಮರದ ಮೇಲೆ ಎರಡು ಹೊರಸುಗಳನ್ನು ತಿರುವಿ ಕಟ್ಟಿ, ಅದರ ಮೇಲೆ ಗಾದಿ-ತಿವಾಸಿಗೆಗಳನ್ನು ಹಾಸಿ, ಮಂಚಿಕೆ ಸಿದ್ಧಪಡಿಸಲಾಗಿತ್ತು. ಈ ಮಂಚಿಕೆ ನೆಲದಿಂದ ಸುಮಾರು ೨೦ ಅಡಿ ಎತ್ತರದ ಮೇಲಿರಬಹುದು. ನಾನು ಜಾಮುಸಾಹೇಬರನ್ನು ಪ್ರಶ್ನಿಸಿದೆ:— ‘ ಹೆಚ್ಚೆಂದರೆ ಸಿಂಹ ಎಷ್ಟು ಅಡಿ ಎತ್ತರ ಜಿಗಿಯುತ್ತದೆ ? ’. ಅವರು— ‘ ೨೦ ಅಡಿ ’ ಎಂದು ಹೇಳಿ, ಹಿಂದಕ್ಕೆ ಒಬ್ಬ ಯುರೋಪಿಯನ್ ಯುವತಿಯ ಗುರಿ ತಪ್ಪಿದ್ದರಿಂದ, ಅವಳ ಮೇಲೆ ಸಿಂಹ ಜಿಗಿದು ಅವಳನ್ನು ಗಾಯಗೊಳಿಸಿದ ಕಥೆಯನ್ನೂ ಹೇಳಿದರು ! ನನ್ನ ಮೈಗೂದಲು ನೆಟ್ಟಗಾದುವು.

ಜಾಮುಸಾಹೇಬರ ಅಣತಿಯಂತೆ ರಾಜೇಂದ್ರಬಾಬುಗಳು ಪೋಷಾಕು ಮಾಡಿದ್ದರು. ಬಕ್ಕ ತಲೆ, ಮೈಯಲ್ಲಿ ಕರಿಯ ಕೋಟು; ಆದರೆ ಬಿಳಿಪಂಚೆಯುಟ್ಟಿದ್ದರಿಂದ, ಆ ಭಾಗದಲ್ಲಿ ಒಂದು ಚದ್ದರ ಸುತ್ತಿಕೊಂಡಿದ್ದರು ! ೫–೧೦ ನಿಮಿಷ ಫೋಟೋದ ಸಂಭ್ರಮ ನಡೆಯಿತು. ನಾನೂ ಮನಸ್ಸಿನಲ್ಲಿ ವಿಚಾರ ಮಾಡಿದೆ:— ಇರಲಿ, ಏನಾದರೂ ಅಪಘಾತ ಸಂಭವಿಸಿದರೆ ನಮ್ಮ ಕೊನೆಯ ಫೋಟೋ ಎಂದು ಅಜರಾಮರವಾಗಿ ಇತಿಹಾಸದಲ್ಲಿ ಉಳಿದೀತಲ್ಲ !

ಮೊದಲು ನಾನು ನಿಚ್ಚಣಿಕೆಯನ್ನು ಏರಿದೆ, ನನ್ನ ಹಿಂದೆ ಏ. ಡಿ. ಸಿ , ತರುವಾಯ ರಾಜೇಂದ್ರಬಾಬುಗಳು, ಕೊನೆಗೆ ಜಾಮುಸಾಹೇಬರು. ನಾವೆಲ್ಲರೂ ಮಂಚಿಕೆಯ ಮೇಲೆ ಕುಳಿತೆವು. ನಾನು ಜಾಮುಸಾಹೇಬರಿಗೆ ಪ್ರಶ್ನೆ ಹಾಕಿದೆ:— ‘ ಎಷ್ಟು ಹೊತ್ತು ಸಿಂಹಕ್ಕಾಗಿ ಕಾಯಬೇಕಾದೀತು ? ’ ಅವರೆಂದರು— ‘ ಅದೆಲ್ಲ ಸಿಂಹದ ಲಹರಿಯ ಮೇಲೆ ಅವಲಂಬಿಸಿದೆ. ಕಾಲುಗಂಟೆಯಲ್ಲಿಯೂ ಬಂದೀತು, ಇಲ್ಲವೆ ಒಂದು ಪ್ರಹರವನ್ನೂ ತಕ್ಕೊಂಡೀತು. ಅಂತೇ ಆರು ಹೊಡೆಯುವ ತನಕ ಇಲ್ಲಿ ನಿಲ್ಲುವುದು ಎಂದು ಕಾರ್ಯಕ್ರಮ ಗೊತ್ತುಮಾಡಿದ್ದಾಗಿದೆ. ಯಾರೂ ಮಾತನಾಡುವ ಹಾಗಿಲ್ಲ, ಕೆಮ್ಮುವ ಹಾಗಿಲ್ಲ, ಸೀಕರಿಸುವ ಹಾಗಿಲ್ಲ, ಮೈ ಹೊಯ್ದಾಡಿಸುವ ಹಾಗಿಲ್ಲ.” ಜಾಮುಸಾಹೇಬರ ಅಜ್ಞೆ ಅದು. ನಾವು ವ್ರತದಂತೆ ಪಾಲಿಸಬೇಕಾಯಿತು. ಅವರೊಂದು ರಾಯಫಲ್ ತಂದಿದ್ದರು. ‘ ನನಗೂ ಒಂದು ಕೊಡಿ ’ ಎಂದು ನಾನು ಕೇಳಿದೆ. ಅವರು ಅದನ್ನೇ ನನ್ನ ಕೈಯಲ್ಲಿರಿಸಿ, ನನ್ನ ಮುಖ ನೋಡಿದರು. ನಾನು ಇಂಥದೇನನ್ನಾದರೂ ಮಾಡುವುದು ಅವರಿಗೆ ರುಚಿಸಲಿಲ್ಲ. ನನಗೂ ಎನಿಸಿತು:— ಎಷ್ಟು ವರ್ಷಗಳ ಮೇಲೆ ನಾನು— ಇಂದು ಬಂದೂಕನ್ನು ಕೈಯಲ್ಲಿ ಹಿಡಿಯುತ್ತಿದ್ದೇನೆ ? ನನ್ನ ೩೪ ವರ್ಷಗಳ ಅಹಿಂಸಾ ತಪಶ್ಚರ್ಯೆಯ ಪ್ರಭಾವದಿಂದ, ನಾನು ಹಾರಿಸುವ ಗುಂಡು ಹೂವಾಗಿ ಬಿಟ್ಟರೆ ! ಮತ್ತೆ ಹೀಗೂ ಒಂದು ವಿಚಾರ ಬಂತು: ನಿನ್ನೆಯೇ ಒಂದು ಪವಿತ್ರ ಸಮಾರಂಭವನ್ನು ಮಾಡಿ, ಇಂದು ಈ ಹಿಂಸಾತ್ಮಕ ಕಾರ್ಯಕ್ರಮವನ್ನೆಸಗುವುದು ನಮ್ಮ ಇದುವರೆಗಿನ ಪಂಥಕ್ಕೆ ತೀರ ಅನುಚಿತ !— ಬಂದೂಕನ್ನು ಜಾಮುಸಾಹೇಬರಿಗೆ ತಿರುಗಿ ಕೊಟ್ಟೆ !

ವಾತಾವರಣವು ನೀರವವಾಗಿತ್ತು. ನಮ್ಮ ಎಡಬಲ ಮಗ್ಗುಲು ೧೫ ಅಡಿ ಅಂತರದ ಮೇಲೆ ಒಬ್ಬೊಬ್ಬ ಗುರಿಗಾರಶಿಕಾರಿಯನ್ನು ಗಿಡದ ಮೇಲೆ ಕುಳ್ಳಿರಿಸಲಾಗಿತ್ತು. ನಾವೆಲ್ಲರೂ ಕುಳಿತ ಭಂಗಿ.

ಯನ್ನು ನೋಡಿದರೆ, ಮನುಷ್ಯರಲ್ಲದ ಪ್ರಾಣಿಗಳಿಗೆ ನಾವು ಆ ಗಿಡದ ಬಣ್ಣ ಬಣ್ಣದ ಹಣ್ಣುಗಳೇ ಇರಬಹುದೆಂದೆನಿಸುವಂತಿತ್ತು. ನಿಸರ್ಗದ ಜೊತೆಗೆ ಇಷ್ಟೊಂದು ಸಾಮರಸ್ಯವನ್ನು ನನ್ನ ಐವತ್ತೈದು ವರ್ಷದ ಆಯುಷ್ಯದಲ್ಲಿಯೇ ನಾನು ಅನುಭವಿಸಿರಲಿಲ್ಲ. ಆಸು ಹೊತ್ತಿನಲ್ಲಿಯೇ ಸಿಂಹ ಬಂದರೂ ಬಂದೀತು, ಗುಂಡು ಹಾರಿದರೂ ಹಾರೀತು, ಒಂದು ವೇಳೆ ಅದು ತಪ್ಪಿಸಿಕೊಂಡು ಹೋದರೂ ಹೋದೀತು. ಇಷ್ಟೆಲ್ಲ ನಡೆಯುವಾಗ ಕ್ಯಾಮೆರಾ ಇದ್ದರೆ ಎಷ್ಟು ಚೆನ್ನಾಗಿತ್ತು ? ಎಂತಲೆ, ಪ್ರಾರಂಭಕ್ಕೆ ಹೇಳಿದಂತೆ, ನನ್ನ ಮತ್ತು ಎ. ಡಿ. ಸಿ. ನಡುವೆ ಆ ವಿಷಯದಲ್ಲಿ ಮಾತು ನಡೆದಿದ್ದುವು. ಕ್ಯಾಮೆರಾ ಇಲ್ಲದ್ದಕ್ಕೆ ಬಹಳ ಹಳಹಳಿ ಎನಿಸಿತು. ಆದರೆ ಆಗೇನು ಮಾಡಲು ಸಾಧ್ಯವಿತ್ತು ? ನಾವೆಲ್ಲರೂ ಕಣ್ಣು ಸಹ ಮಿಟುಕಿಸದೆ ನೋಡುತ್ತ ಕುಳಿತೆವು. ಸುಮಾರು ಮುಕ್ಕಾಲು ಗಂಟೆ ಹೀಗೆ ಕಳೆದಮೇಲೆ, ನೂರು ಗಜ ಅಂತರದ ಮೇಲೆ ಲೀಲೆಯಲ್ಲಿ ಹೆಜ್ಜೆಯಿಕ್ಕುತ್ತ, ಬಾಲವನ್ನು ನಿಗುರಿಸಿ ಮೃಗರಾಜನು ನಮ್ಮೆದುರಿನಲ್ಲಿಯೇ ಬರುವುದನ್ನು ಕಂಡೆವು ! ಯಾವ ಕ್ಷಣವನ್ನು ನಾವು ಆತುರದಿಂದ ನಿರೀಕ್ಷಿಸುತ್ತಿದ್ದೆವೊ ಆ ಕ್ಷಣ ಸನ್ನಿಹಿತವಾಯಿತು. ನಮ್ಮ ಸಮೀಪಕ್ಕೆ ಆಸು ಅಂತರ ಬಂದು, ನಾವು ಕುಳಿತ ದಿಕ್ಕನ್ನು ದೃಷ್ಟಿಸಿ, ಅದು ಬಲಗಡೆಗೆ ಹೊರಳಿತು. ಇದಕಿಷ್ಟು ಮುಂದೆ ಬರುವುದೆಂದರೆ ಭಾರತಾಧೀಶನ ಅಪಮಾನವೆಂದೇ ಅದಕ್ಕೆನಿಸಿರಬೇಕು ! ಎಂತಲೇ ಮರ್ಯಾದೆಯಿಂದ ಅದು ಬಲಮಗ್ಗುಲು ಹೊರಳಿ, ಒಮ್ಮೆ ಹಿಂದೆ ನೋಡುತ್ತ, ಒಮ್ಮೆ ಇಕ್ಕೆಲಗಳನ್ನವಲೋಕಿಸುತ್ತ, ರಾಜಲೀಲೆಯಲ್ಲಿ ಹೋಗತೊಡಗಿತು. ಎದೆನಡುಕವನ್ನು ಹುಟ್ಟಿಸುವ ಭವ್ಯರೂಪ, ತುಂಬಿದ ಆಯಾಲು, ಉಗ್ರವಾದ ಕೋರೆದಾಡೆ, ಹೃದಯವನ್ನು ಭೇದಿಸುವ ದೃಷ್ಟಿ, ನಿಡಿದಾದ ಸಣ್ಣ ನಡುವು, ಇವೆಲ್ಲವನ್ನೂ ನೋಡಿ ಕವಿವರ್ಣನೆ ಎಷ್ಟು ಅನ್ವರ್ಥಕವಾಗಿದೆ—ಎಂದೆನಿಸಿತು ! ವನರಾಜನು ಮುಂದೆ ಎಲ್ಲಿಗೆ ಹೋಗುವುದೆಂಬುದರ ಕಯಾಸಕಟ್ಟುವುದು ಕಠಿಣವಾಯಿತು. ಜಾಮಸಾಹೇಬರು ಬಂದೂಕಿನ ಕುದುರೆಯೇರಿಸಿ ಕುಳಿತಿದ್ದರೂ, ಅವರ ಮನಸ್ಸಿನಲ್ಲಿ ಇಂದು ಶಿಕಾರಿಯಾಡುವ ಲವಲವಿಕೆಯಿರಲಿಲ್ಲ. ನಾವಂತೂ ಚಿತ್ರದ ಬೊಂಬೆಗಳಂತೆ ಎವೆಯಿಕ್ಕದೆ ಅದನ್ನೇ ನೋಡುತ್ತ ಸ್ತಬ್ಧವಾಗಿ ಕುಳಿತುಬಿಟ್ಟಿದ್ದೆವು. ಕ್ಷಣಕಾಲ ಸೃಷ್ಟಿಯ ವ್ಯವಹಾರಗಳೇ ನಿಂತುಹೋದಂತಿದ್ದುವು ! ಗಂಡು ಸಿಂಹವು ಹೀಗೆ 'ನಮಯತೀವ ಗತಿರ್ಧರಿತ್ರೀಮ್' ಎಂಬ ಅಟ್ಟಹಾಸದಲ್ಲಿ ನಡೆವಾಗ, ಎದುರಿನಿಂದ ಒಂದು ಹೆಣ್ಣು ಸಿಂಹ, ಅದರ ಮರಿ ಬರತೊಡಗಿದುವು. ಕೂಡಲೆ ನಮ್ಮೆಲ್ಲರ ದೃಷ್ಟಿಗಳು ಅತ್ತ ಹೊರಳಿದುವು. ಇವು ಕೂಡ ನಮ್ಮ ದಿಕ್ಕನ್ನು ಹಿಡಿದೇ ಬರುತ್ತಿದ್ದುವು. ೩-೪ ನಿಮಿಷಗಳಲ್ಲಿ ನಮ್ಮ ಮಂಚಿಕೆಯಿಂದ ೧೦-೧೫ ಅಡಿ ಅಂತರದ ಮೇಲೆ, ಮಹಾಮಾಯೆಯಂತಿರುವ ಹೆಣ್ಣು ಸಿಂಹವು ಬಂದು, ಗುರುಗುರನೆ ಘೂಕರಿಸಿ, ಒಂದು ಸಲ ನಮ್ಮ ಕಡೆಗೆ ಕಣ್ಣ ಕಟಾಕ್ಷ ಬೀರಿ, ಭಾರತಾಧೀಶನಿಗೆ ಮರ್ಯಾದೆ ಸಲ್ಲಿಸುವಂತೆ ಕತ್ತು ಬಾಗಿಸಿ, ನಮ್ಮ ಹಿಮ್ಮಗ್ಗಲು ಹೊರಟುಹೋಯಿತು! ಒಂದೆರಡು ನಿಮಿಷದಲ್ಲಿ ಮರಿಯೂ ಬಂದು, ತಾಯಿಯಂತೆಯೇ ಯೌವನಸುಲಭ ತುಚ್ಛತೆಯಿಂದ ಮೋರೆ ತಿರುವಿಕೊಂಡು, ಎಡಮಗ್ಗುಲು ಜಿಗಿದು ಕಾಣದಾಯಿತು. ಈ ಮೂರು ಪ್ರಾಣಿಗಳು ಮರಳಿ ಬರುವವೋ ಹೇಗೆ?—ಎಂಬುದನ್ನು ಜಾಮಸಾಹೇಬರಿಗೆ ಕೇಳುವ ಪ್ರಯತ್ನ ಮಾಡಿದೆ. ಆದರೆ ಅವರು ಬಾಯಮೇಲೆ ಕೈಯಿಟ್ಟು ನನ್ನನ್ನು ಸುಮ್ಮಗಿರಿಸಿದರು. ಮತ್ತೆ ೧೦ ನಿಮಿಷ ತಟಸ್ಥರಾಗಿ ಕಳೆದೆವು. 'ಸೋ' ಹಾಕುವವರ ಕೇಕೆಗಳು ಹಿಮ್ಮಗ್ಗಲು ಕೇಳತೊಡಗಿದವು. ಪ್ರಾಣಿಗಳು ಮೂಡಲದಿಕ್ಕಿನ ಬೆಟ್ಟವನ್ನು ಸೇರಿದುವೆಂದು ಸಂಜ್ಞೆ ದೊರೆಯಿತು.

ಮಂಚಿಕೆಯಿಂದ ಎಲ್ಲರೂ ಕೆಳಗಿಳಿದೆವು. ಮೃಗರಾಜನನ್ನು ನೋಡಿದ ಸಮಾಧಾನ ಎಲ್ಲರ ಮುಖದ ಮೇಲೂ ವಿರಾಜಿಸುತ್ತಿತ್ತು.

"ನೀವು ಸಿಂಹದ ಮೇಲೆ ಗುಂಡು ಏಕೆ ಹಾರಿಸಲಿಲ್ಲ ?" ನಾನು ಜಾಮಸಾಹೇಬರನ್ನು ಕೇಳಿದೆ.

"ಇಂದು ಶಿಕಾರಿ ಮಾಡಬಹುದಿತ್ತು; ಆದರೆ ನನ್ನ ಉದ್ದೇಶ, ಮೃಗೇಂದ್ರ ಹಾಗು ರಾಜೇಂದ್ರ ಇವರಿರ್ವರ ದರ್ಶನ ಮಾಡಿಸುವುದಷ್ಟೇ ಇತ್ತು." ಜಾಮಸಾಹೇಬರೆಂದರು.

ಶಿಕಾರಿ ಆಡದಿದ್ದರೇನಾಯಿತು? ಅದರ ಸಾಹಸ, ಸುಖ, ಉತ್ಕಟತೆ ಎಲ್ಲವನ್ನೂ ಅನುಭವಿಸಿದ್ದೆವು. ಮೇಲೆ ನಮ್ಮ ಅಹಿಂಸಾಪಾಲನೆಗೂ ಭಂಗತಂದುಕೊಂಡಿರಲಿಲ್ಲ!



ಲಂಡನ್ನಿನ 'ಟ್ಯಾಮ್ಸ್' ಪತ್ರಿಕೆ

ಶ್ರೀ. ಎ. ಎಸ್. ರಾಮಕೃಷ್ಣ ಮಣಿಪಾಲ—ಉಡುಪಿ.

★

ಪತ್ರಿಕೆಗಳು ನಿಜವಾಗಿಯೂ ಪತ್ರಿಕೆಗಳ ಕರ್ತವ್ಯಪಾಲನೆಯ ಧೋರಣೆಯಿಂದಲೆ ಕೆಲಸ ಮಾಡುತ್ತಲಿದ್ದರೆ, ಅವುಗಳ ಘನತೆ ಎಷ್ಟು ಹೆಚ್ಚುವುದೆಂಬುದಕ್ಕೆ 'ಲಂಡನ್ ಟಾಯಿಮ್ಸ್' ಇಂದು ಪ್ರತ್ಯಕ್ಷಪ್ರಮಾಣವಾಗಿದೆ.

卐

೧೯೪೦ ನೆಯ ಸಪ್ಟಂಬರ್ ೭ನೆಯ ದಿನಾಂಕ; ಲಂಡನ್ನಿನ ಮೇಲೆ ಉಗ್ರವಾದ ವಿಮಾನ ಧಾಳಿ ನಡೆಯುತ್ತಿತ್ತು. ಟ್ಯಾಮ್ಸ್ ಪತ್ರಿಕೆಯ ಕಚೇರಿಗೂ ಒಂದು ಹೊಡೆತ ಬಿತ್ತು. "ಇಂಗ್ಲೆಂಡಿನ ಉಸಿರನ್ನೇ ಅಡಗಿಸಿದೆವು" ಎಂದು ನಾಜಿಗಳ ಆಕಾಶವಾಣಿ ಸಾರಿತು. ಆದರೆ ಅದು ಹಾಗಾಗಲಿಲ್ಲ. ಟ್ಯಾಮ್ಸ್ ಪತ್ರಿಕೆ ಎಂದಿನಂತೆ ಹೊರಟಿತು. ಯುದ್ಧಕಾಲದಲ್ಲಿ ಎಂಥ ಧಾಳಿಗಳಾದರೂ ಟ್ಯಾಮ್ಸ್ ಪತ್ರಿಕೆ ತಪ್ಪದೆ ಪ್ರಕಟವಾಗುತ್ತಿತ್ತು. ೧೭೮೫ ವರ್ಷಗಳಿಂದ, ರಜಾದಿನಗಳ ಹೊರತು ಬೇರೆ ಯಾವ ದಿನದಲ್ಲೂ ಅದು ಹೊರಡದೆ ಇದ್ದುದಿಲ್ಲ. ಪ್ರಕಾಶನಕಾರ್ಯದಲ್ಲಿ ಇಂಥ ಅಸಾಧಾರಣ ನಿಷ್ಠೆಯನ್ನು ಕಾಪಾಡಿಕೊಂಡು ಬಂದಿರುವುದು ಈ ಪತ್ರಿಕೆಯ ಹಿರಿಮೆ.

ಸಮರ್ಥ ಸಂಪಾದಕತ್ವಕ್ಕೋಸ್ಕರ ಪ್ರಾಮಾಣಿಕ ಹಾಗೂ ನಿರ್ಭೀತ ಧೋರಣೆಯಿಂದ ಮುಂದುವರಿದ ಟ್ಯಾಮ್ಸ್, ಜಗತ್ತಿನ ಅತ್ಯಂತ ಪ್ರಭಾವೀ ಪತ್ರಿಕೆಯೆನಿಸಿಕೊಂಡಿದೆ. ಅದು ತನ್ನ ದೇಶದಲ್ಲಿ ವಾಕ್‌ಸ್ವಾತಂತ್ರ್ಯಕ್ಕಾಗಿ ಹೋರಾಡಿತು. ಜನತೆಯ ಹಿತಸಾಧನೆಯನ್ನು ಆದರ್ಶವಾಗಿಟ್ಟುಕೊಂಡು ದುಡಿಗಿದ ಈ ಪತ್ರಿಕೆ, ಕಾರ್ಮಿಕರು ಕಾರ್ಖಾನೆಗಳ ಮಾಲೀಕರು ಎಂಬ ಭೇದವಿಲ್ಲದೆ, ತಪ್ಪುತಪ್ಪಿದಾಗ ಎಲ್ಲರನ್ನೂ ಕಠಿನವಾದ ವಿಮರ್ಶೆಗೊಳಪಡಿಸಿ ಕಟುವಾಗಿ ಟೀಕಿಸಿದ್ದುಂಟು. ಟ್ಯಾಮ್ಸ್, ಇಂಗ್ಲೆಂಡಿನ ಪಕ್ಷಗಳನ್ನೂ ಸರಕಾರಗಳನ್ನೂ ಬದುಕಿಸಲು ಸಹಾಯಕವಾದುದೂ ಇದೆ, ಅವುಗಳನ್ನು ಉರುಳಿಸಲು ಹೇತುವಾದುದೂ ಇದೆ. ವಿದೇಶಗಳ ಅರಸರನ್ನೂ ಪ್ರಧಾನಿಗಳನ್ನೂ ಎಷ್ಟೋ ಸಲ ಅಲುಗಾಡಿಸಿದ್ದೂ ಇದೆ; ಅದರಿಂದಾಗಿ ಎಷ್ಟೋ ಸಾಮಾಜಿಕ ಸುಧಾರಣೆಗಳಾಗಿವೆ. ಟ್ಯಾಮ್ಸ್ ಪತ್ರಿಕೆಯ ಹೆಚ್ಚಳವನ್ನು ಅದರ ವಿರೋಧೀ ಪತ್ರಿಕೆಗಳು ಕೂಡ ಒಪ್ಪಿಕೊಳ್ಳುತ್ತವೆ. ಕೆಲವರು ಅದನ್ನು ಹೊಗಳಿದರು; ಕೆಲವರು ಅದನ್ನು ತೆಗಳಿದರು. ಆದರೆ ಎಲ್ಲ ಕಾಲದಲ್ಲೂ ಎಲ್ಲರೂ ಅದನ್ನು ಗೌರವ ದೃಷ್ಟಿಯಿಂದ ನೋಡಿದರು. "ಬಹುಶಃ ಮಿಸಿಸಿಪಿ ನದಿಯೊಂದನ್ನುಳಿದರೆ, ಲಂಡನ್ ಟ್ಯಾಮ್ಸ್‌ನಷ್ಟು ಶಕ್ತಿಯುತವಾದುದು ಜಗತ್ತಿನಲ್ಲಿ ಬೇರೊಂದಿಲ್ಲ." ಅಬ್ರಹಾಂ ಲಿಂಕನ್‌ನೇ ಹೇಳಿದ್ದುಂಟು. ಅಂಥ ಸಾಮರ್ಥ್ಯ ನಿಜವಾಗಿಯೂ ಈ ಪತ್ರಿಕೆಗಿದೆ. ಸಾರ್ವಜನಿಕ ಅಭಿಪ್ರಾಯ ತನಗೆ ವ್ಯತಿರಿಕ್ತವಾಗಿರುವಾಗ ಕೂಡ ಟ್ಯಾಮ್ಸ್ ಎದೆಗೆಡುವುದೆಂದಿಲ್ಲ.

ಟ್ಯಾಮ್ಸ್ ಪತ್ರಿಕೆಯನ್ನು ಸ್ಥಾಪಿಸಿದ ಜಾನ್ ವಾಲ್ಟರ್ ಜನಿಸಿದುದು ೧೭೩೯ರಲ್ಲಿ. ಈತ ಕಲ್ಲಿದ್ದಲಿಯ ವ್ಯಾಪಾರ ಮಾಡುತ್ತಿದ್ದವನು. ಅದರಲ್ಲಿ ತುಂಬ ಹಣ ಕಳೆದುಕೊಂಡನು. ಅನಂತರ ಲ್ಯಾಯಿಡ್ಸ್ ಬ್ಯಾಂಕಿನ ದಳ್ಳಾಳಿಯಾಗಿ ಕೆಲಸ ಮಾಡಿದನು. ಆಗಲೂ ಸೋಲಾಯಿತು. ಆಗ ಹೆನ್ರಿ ಜಾನ್ಸನ್‌ನೆಂಬ ಲಂಡನ್ ಮುದ್ರಣಕಾರನ ಪರಿಚಯವಾಯಿತು. ಈತನು ಮೊಳೆ ಜೋಡಿಸುವುದರಲ್ಲಿ ಮತ್ತು ಅಚ್ಚೊತ್ತುವುದರಲ್ಲಿ ಸುಧಾರಿತ ಕ್ರಮವೊಂದನ್ನು ಕಂಡುಹಿಡಿದಿದ್ದನು. ವಾಲ್ಟರನು ಆ ಸಂಶೋಧನೆಯ ಸ್ವಾಮ್ಯವನ್ನು ಪಡೆದುಕೊಂಡನು. ಕೆಲವರು ಗೆಳೆಯರು ದ್ರವ್ಯಸಹಾಯವನ್ನು ನೀಡಿದರು. ಒಂದು ಮುದ್ರಣಾಲಯವನ್ನು ತೆರೆದದ್ದಾಯಿತು. "Logographic Press" ಎಂದು ಕರೆದದ್ದಾಯಿತು. ಆದರೆ ಮುದ್ರಣಕಾರ್ಯ ಸಾಕಷ್ಟು ದೊರೆಯಬೇಕಲ್ಲ! ವಾಲ್ಟರನ ಮುದ್ರಣವಿಧಾನ ಸುಧಾರಿತವಾದುದು. ಆದರೂ ಮುದ್ರಣ ಕೆಲಸಗಳು ಸಾಕಷ್ಟು ಸಿಕ್ಕಲಿಲ್ಲ. ಆಗಲೇ ವಾಲ್ಟರನಿಗೆ 'ಪತ್ರಿಕೆ ಹೊರಡಿಸಿ ನೋಡೋಣ!' ಎಂಬ ಯೋಚನೆ ಮೂಡಿತು. ಸರಿ— "Daily Universal Register" ಎಂಬ ಪತ್ರಿಕೆ ಹೊರಟಿತು. ಇದು ೧೭೮೫ನೆಯ ಜನವರಿಯಲ್ಲಿ. ಹಡಗುಗಳ ಚಲನವಲನಗಳ ಕುರಿತು ಸುದ್ದಿ, ಪೇಟೆಯ ಧಾರಣೆ—ಇಷ್ಟೇ ಈ ಪತ್ರಿಕೆಯಲ್ಲಿ ಬರುತ್ತಿದ್ದುವು. ಆ ಮೊದಲು ಲಂಡನ್ನಿನಲ್ಲಿ ಬೇರೆ ಎಂಟು

ಪತ್ರಿಕೆಗಳಿದ್ದುವು. ಅವುಗಳು ಹೊಸಪತ್ರಿಕೆಯ ಮೇಲೆ ಕೆಂಡ ಕಾರಿದುವು. ಇನ್ನು ಈ ಪತ್ರಿಕೆಯ ಹೆಸರೋ— ವಿಚಿತ್ರವಾದುದು— ಎಲ್ಲರ ಪರಿಹಾಸಕ್ಕೆ ಗುರಿಯಾಯಿತು.

೧ನೆಯ ಜನವರಿ ೧೭೮೮ರಲ್ಲಿ, ವಾಲ್ಟರನು ಪತ್ರಿಕೆಯ ಹೆಸರನ್ನು ಬದಲಿಸಿದನು. "The Times" ಎಂದು ಕರೆದನು. ಅಂದಿನಿಂದ ಪತ್ರಿಕೆಗೆ ಬಲಗೂಡಿ ಬಂತು. ದಿನವೂ ೧೫೦೦ರಷ್ಟು ಪ್ರತಿಗಳು ಖರ್ಚಾಗತೊಡಗಿದುವು. ಹದಿನೆಂಟನೆಯ ಶತಮಾನದಲ್ಲಿ ಆ ಸಂಖ್ಯೆ ದೊಡ್ಡದೆಂದೇ ಹೇಳಬೇಕು.

ಆ ಕಾಲದ ಬ್ರಿಟಿಷ್ ಪತ್ರಿಕೆಗಳಿಗೆ ಸರಕಾರವು ಸಹಾಯ-ದ್ರವ್ಯವನ್ನು ನೀಡುವ ಪರಿಪಾಠವಿತ್ತು. ಯಾವ ಅಂಶಗಳನ್ನು ಪ್ರಕಟಿಸಬೇಕು, ಯಾವುದನ್ನು ಬಿಡಬೇಕು— ಎಂದು ಸರಕಾರದಿಂದ ನಿರ್ದೇಶಗಳು ಬರುತ್ತಿದ್ದುವು. ಅವುಗಳಿಗನುಗುಣವಾಗಿ ನಡೆದುಕೊಂಡುದಕ್ಕೆ ವಿಶೇಷ ಸಂಭಾವನೆಗಳು ದೊರೆಯುತ್ತಿದ್ದುವು. ಟ್ಯಾಮ್ಸ್ ಪತ್ರಿಕೆ, ಪ್ರಾರಂಭದಲ್ಲಿ ನಡೆದು ಬಂದ ಈ ಪದ್ಧತಿಗೆ ಹೊರತಾಗಿರಲಿಲ್ಲ. ಆದರೆ ಬಹಳ ಕಾಲ ಹಾಗಿರಲಿಲ್ಲ. ಪತ್ರಿಕೆ ಸ್ವತಂತ್ರ ಅಭಿಪ್ರಾಯಗಳನ್ನು ಮಂಡಿಸತೊಡಗಿತು. ಸುದ್ದಿ-ವಿಷಯಗಳನ್ನು ನಿರ್ದಾಕ್ಷಿಣ್ಯವಾಗಿ ವಿಮರ್ಶಿಸಿ ಟೀಕಿಸಲು ಪ್ರಾರಂಭಿಸಿತು. ಅಧಿಕಾರದಲ್ಲಿರುವವರನ್ನು ತರಾಟೆಗೆ ತೆಗೆದುಕೊಂಡಿತು. ಇದರ ಪರಿಣಾಮವಾಗಿ, ಸಂಪಾದಕ ಜಾನ್ ವಾಲ್ಟರನು, ಪಿಲೊರಿ ಪೆಟ್ಟಿಗೆಯಲ್ಲಿ ಒಂದು ಗಂಟೆಯ ತನಕ ಬಂಧಿಸಲ್ಪಡುವ ಶಿಕ್ಷೆಯನ್ನು ಅನುಭವಿಸಬೇಕಾಯಿತು— ಮಾತ್ರವಲ್ಲದೆ, ಹದಿನೆಂಟು ತಿಂಗಳು ತುರಂಗವಾಸವನ್ನು ಕಾಣಬೇಕಾಯಿತು. ಬಿಡುಗಡೆಯಾಗಿ ಹೊರಬಂದ ಸಂಪಾದಕನು, ಪತ್ರಿಕಾಸ್ವಾತಂತ್ರ್ಯದ ಕುರಿತು ದೃಢಮನಸ್ಕನಾಗಿದ್ದನು. ಹಾಗೆಯೇ ಕೊಂಚ ಜಾಗರೂಕತೆಯಿಂದ ವರ್ತಿಸಬೇಕಾದುದರ ಅಗತ್ಯವನ್ನು ಮನಗಾಣದಿರಲಿಲ್ಲ!

ಮುಂದೆ ಟ್ಯಾಮ್ಸ್ ಪತ್ರಿಕೆ ಹಲವಾರು ಪ್ರಸಿದ್ಧ ವ್ಯಕ್ತಿಗಳೊಡನೆಯೂ ಸಂಸ್ಥೆಗಳೊಡನೆಯೂ ಸೆಣಸಾಟಕ್ಕೆ ನಿಲ್ಲಬೇಕಾದ ಪ್ರಸಂಗಗಳೊದಗಿದುವು. ವಿಲಿಯಂ ಪಿಟ್‌ನಂತಹ ಪ್ರಭಾವಶಾಲೀ ಧುರೀಣನೊಡನೆ ಅದು ಕಾದಾಟ ನಡೆಸಿದೆ. ಒಂದು ಕಾಲದಲ್ಲಿ ಬ್ರಿಟಿಷ್ ಅಂಚೆಯ ಖಾತೆಯವರ ಆಗ್ರಹಕ್ಕೆ ಗುರಿಯಾಗಿದೆ. ಈ ಪತ್ರಿಕೆಯನ್ನು ಹತ್ತಿಕ್ಕಲು ಸರಕಾರ ತನ್ನ ತೆರಿಗೆ ಹೊರಿಸುವ ಅಧಿಕಾರವನ್ನೂ, ಅಪ್ಪಣೆ ಒದಗಿಸುವ ಕಾಯಿದೆಯನ್ನೂ ಬಳಸಿಕೊಂಡದ್ದಿದೆ. ಅಂಚೆಯ ಖಾತೆಯವರು ಪತ್ರಿಕೆಯ ಪತ್ರವ್ಯವಹಾರವನ್ನು ತಡೆಹಿಡಿದದ್ದಿದೆ. ಅಂಚೆಯ ಸೌಲಭ್ಯಗಳನ್ನು ತಪ್ಪಿಸುತ್ತೇವೆಂದು ಬೆದರಿಸಿದ್ದಿದೆ. ಆದರೆ ಟ್ಯಾಮ್ಸ್ ಇದಾವುದಕ್ಕೂ ಸೊಪ್ಪು ಹಾಕಿದ್ದಿಲ್ಲ. ಅದು ನಿರ್ಭೀತವಾಗಿ ಮುಂದುವರಿಯಿತು. ಪತ್ರಿಕಾಸ್ವಾತಂತ್ರ್ಯದ ಮೂಲಸೂತ್ರಗಳೇನೆಂಬುವನ್ನು ಎತ್ತಿ ತೋರಿಸಿ, ಅವುಗಳ ನಿಸ್ಸ್ವಾರ್ಥವನ್ನು ಸ್ಪಷ್ಟಪಡಿಸಿತು. ಸರಕಾರ ಪ್ರಾರಂಭದಲ್ಲಿ ನೀಡುತ್ತಿದ್ದ ೩೦೦ ಪೌಂಡು ವಾರ್ಷಿಕ ಸಂಭಾವನೆಗೆ ಬಾಯಿಬಿಡುತ್ತ ಕುಳಿತಿರುತ್ತಿದ್ದರೆ, ಇಂದು ಟ್ಯಾಮ್ಸಿನ ಹೆಸರು ನಮಗೆ ಕೇಳಿಸುತ್ತಿತ್ತೋ ಇಲ್ಲವೋ!

ಪತ್ರಿಕೆಯ ಸಂಸ್ಥಾಪಕನು ೧೮೧೨ರಲ್ಲಿ ಕಾಲವಾದನು. ಅವನ ಮಗ ಎರಡನೆಯ ಜಾನ್ ವಾಲ್ಟರನು ಆಡಳಿತವನ್ನು ವಹಿಸಿಕೊಂಡನು. ತಂದೆ ಪತ್ರಿಕೆ ಹೊರಡಿಸಿದ್ದು ಹೊಟ್ಟೆಯ ಪಾಡಿಗಾಗಿ; ಆದರೆ ಮಗನು ಪತ್ರಿಕೆಯನ್ನು ಸಂಪಾದನೆಯ ಸಾಧನವೆಂದು ತಿಳಿಯಲಿಲ್ಲ. ಪತ್ರಿಕೆಗೆ ಹೆಚ್ಚಿನ ಮಹತ್ತ್ವವನ್ನು ತಂದುಕೊಡುವುದೇ ಇವನ ಅಭಿಲಾಷೆ. ೧೮೧೪ರಿಂದ ಟ್ಯಾಮ್ಸ್ ಪತ್ರಿಕೆ Steam Press ಎಂಬ ಸುಧಾರಿತ ಯಂತ್ರಗಳಲ್ಲಿ ಅಚ್ಚಾಗತೊಡಗಿತು. ಈತನ ಕಾಲದಲ್ಲಿ ಪತ್ರಿಕೆ ಎಂಥ ಪ್ರಾಮುಖ್ಯತೆ ಪಡೆಯಿತೆಂಬುದನ್ನು ಒಂದು ನಿದರ್ಶನದಿಂದ ಮನಗಾಣಬಹುದು:

೧೮೧೩ನೆಯ ಇಸ್ವಿಯ ಸಪ್ಟಂಬರ್ ೧೮ರಂದು, ಬ್ರಿಟನ್ನಿನ ವಿದೇಶಾಂಗ ಖಾತೆಯ ಕಾರ್ಯದರ್ಶಿಗಳು, ಟ್ಯಾಮ್ಸ್ ಸಂಪಾದಕರಿಗೆ ಒಂದು ಪತ್ರ ಬರೆಯಿಸಿ, ಈ ರೀತಿ ವಿಚಾರಿಸಿಕೊಂಡರು: "ಡ್ರೆಸ್ಡೆನ್ ಬಳಿಯಲ್ಲಿ ನೆಪೋಲಿಯನ್ನನ ಸೇನೆಗಳು ಪರಾಜಯ

೧೦೦೦ ರೂಪಾಯಿ ಬಹುಮಾನ

೩೦ ವರ್ಷಗಳಿಂದ ಅನುಭವಸಿದ್ಧವಾದ— ಮಿರಜೆಯ ವೈದ್ಯ ವಿ. ಎಸ್. ಕಾಪಸೇಯವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರ ಪಾಕ

[ರಜಿಸ್ಟರ್ಡ]

ಮೂತ್ರದಲ್ಲಿ ಸ್ವಪ್ನದಲ್ಲಿ ವೀರ್ಯಸ್ಖಲನ, ಸ್ವರತಿಯಿಂದುಂಟಾದ ಅಶಕ್ತತೆ, ವೀರ್ಯದ ಬೇರೆ ಬೇರೆ ದೋಷಗಳು, ಪಿತ್ತಾಂಶ, ಉಷ್ಣ, ಸೊಂಟನೋವು, ಉಪದಂಶ-ಮೇಹರೋಗಗಳಿಂದುಂಟಾಗುವ ಕ್ಷೀಣತೆ— ಇವೆಲ್ಲ ನಷ್ಟವಾಗಿ, ಚೆನ್ನಾಗಿ ಮಲಶುದ್ಧಿಯಾಗುವುದು. ಹಸಿವೆ, ಸ್ಮರಣಶಕ್ತಿ, ದೇಹದ ತೂಕ ಹೆಚ್ಚುವುದು. ಹೊಸ ತಾರುಣ್ಯ ಬಂದಂತಾಗಿ ವೀರ್ಯದಲ್ಲಿ ಗರ್ಭಧಾರಕಶಕ್ತಿ ಬಲಗೊಳ್ಳುವುದು. ಈ ಔಷಧಿಯು ೫೩ ವನಸ್ಪತಿಗಳ ಯೋಗದಿಂದ ಸಿದ್ಧವಾಗಿದೆ. ಸಾಲಾಮಿಶ್ರಿ, ಸಫೇದಮಿಶ್ರಿ, ಪಂಜಾಬ ಮಿಶ್ರಿ-ವಚಕಂದ ಮೊದಲಾದ ಪದಾರ್ಥಗಳಲ್ಲಿ ವೀರ್ಯವರ್ಧಕ ಗುಣವಿಲ್ಲವೆಂದು ಸಿದ್ಧಮಾಡುವವರಿಗೆ ೧೦೦೦ ರೂಪಾಯಿ ಬಹುಮಾನ.

೨೧ ದಿನಗಳಿಗೆ ಸಾಲಬಹುದಾದ ೮೮ ತೊಲೆಯ ಒಂದು ಡಬ್ಬಿಗೆ ೫-೮-೦; ಅಂಚೆಯ ವೆಚ್ಚ ೧-೬-೦. ಶೀಘ್ರ-ಗುಣಕಾರಿಯಾದ ಸ್ಪೇಶಲ್‌ಡಬ್ಬಿಗೆ ೧೦-೮-೦. (ಇದರಿಂದ ೭ ದಿನಗಳಲ್ಲಿಯೇ ಗುಣವು.) ಅಂಚೆಯ ವೆಚ್ಚ ೧-೬-೦. ೩ ಡಬ್ಬಿಗೆ ೧೫-೦-೦ ಅಂಚೆಯವೆಚ್ಚ ೨-೧೩-೦. ಒಮ್ಮೆಲೇ ೩ ಡಬ್ಬಿಗಳನ್ನು ಬೇಡುವವರು ೫ ರೂ ಮುಂಗಡ ಕಳಿಸಬೇಕು.

ಮಾಲಕ: ವ್ಹಿ. ಎಸ್. ಕಾಪಸೇ ಮು. ಪೋ. ಮಿರಜ

ಹೊಂದಿದ್ದು ನಿಜವೇ?"— ಎಂದು. ಸರಕಾರಕ್ಕೆ ತಿಳಿಯುವ ಮೊದಲೇ ಟ್ಯಾಮ್ಸಿಗೆ ಸುದ್ದಿಗಳು ತಲಪುತ್ತವೆ— ಎಂದಂತಾಯಿತು. ಈ ಪತ್ರಿಕೆಯ ಸುದ್ದಿಸಂಗ್ರಹಕಾರ್ಯ ಅಷ್ಟು ವಿಶಿಷ್ಟರೀತಿಯದಾಗಿತ್ತು.

ಸ್ವಲ್ಪ ಕಾಲ ಸಂಪಾದಕನಾಗಿದ್ದುಕೊಂಡು ಕೆಲಸ ಮಾಡಿದ ಎರಡನೆಯ ಜಾನ್ ವಾಲ್ಟರನು, ಅನಂತರ ಸಂಪಾದಕೀಯ ಜವಾಬ್ದಾರಿಯನ್ನು ಜಾನ್ ಬಾರ್ನ್ಸ್ ಎಂಬಾತನಿಗೆ ವಹಿಸಿಕೊಟ್ಟನು. ಈತನು ಮೊದಲು ಟ್ಯಾಮ್ಸಿನ ಪಾರ್ಲಿಮೆಂಟರಿ ಬಾತ್ಮೀದಾರನಾಗಿದ್ದನು. ಈತನಿಗೆ ಸಂಪತ್ತು ಗಳಿಸುವ ಹಂಬಲವಿರಲಿಲ್ಲ. ವೈಯಕ್ತಿಕ ಮಹತ್ವಾಕಾಂಕ್ಷೆಯೂ ಇರಲಿಲ್ಲ. ಉನ್ನತಾಧಿಕಾರವೂ ಬೇಕಿರಲಿಲ್ಲ. ತನಗೆ ಏನೂ ಬೇಡ. ಪತ್ರಿಕೆಗೋ— ಎಲ್ಲವೂ ಬೇಕು— ಎನ್ನುವಂಥವನು. ಪತ್ರಿಕೆಗಾಗಿ ಈತ ತುಂಬ ದುಡಿದನು. ಆದರೆ ಇವನು ಟ್ಯಾಮ್ಸಿನ ಸಂಪಾದಕನೆಂದು ಹಲವರಿಗೆ ತಿಳಿದಿರಲಿಲ್ಲ. ಇವನ ಕಾಲದಲ್ಲಿ ಟ್ಯಾಮ್ಸ್ ಪತ್ರಿಕೆ ಸರಕಾರದ ವಿರೋಧಿಯೂ ಅಲ್ಲ, ಅದರ ಪರವೂ ಅಲ್ಲ— ಎಂಬಂತಿದ್ದು, ತನ್ನದೇ ಒಂದು ಧೋರಣೆಯನ್ನು ಅನುಸರಿಸಿತು. ಉಳಿದ ಪತ್ರಿಕೆಗಳಿಗೆ ಈ ನೀತಿ ಸಹಿಸಲಾಗಲಿಲ್ಲ. ಇದೊಂದು ದಾಕ್ಷಿಣ್ಯಹೀನತನವೆನಿಸಿತು. ಅವೆಲ್ಲವೂ ಟ್ಯಾಮ್ಸಿನ ಮೇಲೆ ಉರಿದುಬಿದ್ದುವು. ಆದರೇನು— ಟ್ಯಾಮ್ಸಿನ ಹಿರಿಮೆಗೆ ಕುಂದಿಲ್ಲವಾಯಿತು. ೧೮೪೧ರಲ್ಲಿ ಜಾನ್ ಬಾರ್ನ್ಸ್ ತನ್ನ ೫೬ನೆಯ ವಯಸ್ಸಿನಲ್ಲಿ ತೀರಿಕೊಂಡಾಗ, ಟ್ಯಾಮ್ಸ್ ಪತ್ರಿಕೆ ಬ್ರಿಟನ್ನಿನ ಪ್ರಮುಖಪತ್ರಿಕೆ ಎನ್ನಿಸಿಕೊಂಡಿತ್ತು. ಪತ್ರಿಕೋದ್ಯೋಗಕ್ಕೆ ಅಂದು ಘನತೆ ಕೂಡಿಬಂದಿತ್ತು. ಟ್ಯಾಮ್ಸಿಗೆ The Thunderer ಎಂಬ ಬಿರುದು ಕೂಡ ದೊರೆತಿತ್ತು.

ಹೌದು "Thunderer"! ಜನತೆಯ ಹಿತಕ್ಕಾಗಿ ಎಷ್ಟೊಂದು ಸಲ ಅದು ಗುಡುಗಲಿಲ್ಲ! ರಾಜಕೀಯ ತೊಡರುಗಳನ್ನೂ ಆರ್ಥಿಕ ಅಡಚಣೆಗಳನ್ನೂ ಗುಡುಗುತ್ತಲೇ ಮುಂದುವರಿದು, ನಿವಾರಿಸಿಕೊಂಡ ಪತ್ರಿಕೆ ಟ್ಯಾಮ್ಸ್. ೧೮೩೪ರಲ್ಲಿ ಇಂಗ್ಲೆಂಡು ಈ ಪತ್ರಿಕೆಗೆ ಲಾಂಛನವೊಂದನ್ನು ಅರ್ಪಿಸಿ, ಅದನ್ನು ಗೌರವಿಸಿತು. ಅಂಥ ಮನ್ನಣೆ ಇತರ ಯಾವ ಪತ್ರಿಕೆಗೂ ದೊರೆತುದಿಲ್ಲ. ಆ ಲಾಂಛನದಲ್ಲಿಯೂ ಸಿಡಿಲುಗುಡುರಿಯ ಗುರುತಿದೆ. ಆಗ್ರಹಗೊಂಡು ಟ್ಯಾಮ್ಸ್ ಪತ್ರಿಕೆ ತನ್ನ ಅಭಿಪ್ರಾಯಗಳನ್ನು ಮಂಡಿಸತೊಡಗಿತೆಂದರೆ, ಪತ್ರಿಕಾಕಾಶದಲ್ಲಿ ಬರಸಿಡಿಲುಗಳು ಮೊಳಗಿದಂತೆಯೇ! ಅದನ್ನು ಯಾರೂ ನಿರ್ಲಕ್ಷ್ಯಿಸುವಂತಿಲ್ಲ. ಏಕೆಂದರೆ ಅದು ಅಷ್ಟು ಪ್ರಭಾವಯುತವಾದುದು.

ಬಾರ್ನ್ಸ್‌ನ ಅನಂತರ ಜಾನ್ ವಾಲ್ಟರನು ಡಿಲೇನ್ ಎಂಬಾತನನ್ನು ಸಂಪಾದಕನನ್ನಾಗಿ ನೇಮಿಸಿದನು. ಆಗ ಡಿಲೇನ್‌ಗೆ ಕೇವಲ ೨೪ ವರ್ಷ ಪ್ರಾಯ. ಆದರೆ ಈತ ತುಂಬ ಪ್ರತಿಭಾಶಾಲಿ. ಇಂಗ್ಲೆಂಡಿನಲ್ಲಿ ಸರ್ವತ್ರ ಪ್ರಖ್ಯಾತವೆನಿಸಿದ್ದ ಪತ್ರಿಕೆಯನ್ನು ಬೆಳೆಯಿಸಿ, ಅದರ ಕಾರ್ಯರಂಗವನ್ನು ವಿಸ್ತರಿಸಿ, ಜಗತ್ತಿನ ಹಲವು ಕಡೆಗಳಲ್ಲಿ ಅದು ತನ್ನ ವರ್ಚಸ್ಸನ್ನು ಬೀರುವಂತೆ ಮಾಡಿದವನು ಡಿಲೇನ್. ೩೬ ವರ್ಷಗಳ ಕಾಲ ಈತನು ಸಂಪಾದಕನಾಗಿದ್ದನು. ಪತ್ರಿಕೆಗಾಗಿ ತನ್ನ ಜೀವವನ್ನು ತೇದು, ದೇಹಾರೋಗ್ಯವನ್ನು ಕೂಡ ಕಡೆಗಣಿಸಿ ದುಡಿದು ತುಂಬ ಬಳಲಿದ್ದನು. ಅಸ್ವಸ್ಥನಾಗಿದ್ದನು. ಆದರೂ ನಿವೃತ್ತಿಹೊಂದಿ ಪತ್ರಿಕೆಯಿಂದ ದೂರವಾಗಲು ಇವನಿಗೆ ಇಷ್ಟವಿರಲಿಲ್ಲ. ಪತ್ರಿಕೆಯೇ ಜೀವಾಳವಾಗಿತ್ತು. ಪತ್ರಿಕೆಯ ಒಡೆತನವನ್ನು ವಹಿಸಿಕೊಂಡ ಮೂರನೆಯ ಜಾನ್ ವಾಲ್ಟರನು, ಒತ್ತಾಯದಿಂದ ಒಪ್ಪಿಸಿ ಡಿಲೇನ್‌ನನ್ನು ನಿವೃತ್ತಿಗೊಳಿಸಬೇಕಾಯಿತು. ನಿವೃತ್ತಿಹೊಂದುವ ದಿನ ಸಂಪಾದಕನು ವಾಲ್ಟರನಿಗೆ ಪತ್ರಬರೆದು ತಿಳಿಸಿದ ಮಾತುಗಳು ಮರೆಯಲಾಗದಂಥವು:

"ನಾನಿನ್ನು ಕೆಲವು ತಿಂಗಳ ಕಾಲ ಬದುಕಬಹುದು; ಬದುಕದಿರಬಹುದು; ಆದರೆ ನನ್ನ ನಿಜವಾದ ಬಾಳು ಇಂದಿಗೆ ಮುಗಿಯಿತು" ಪತ್ರಿಕೆಯೇ ಅವನ ಪ್ರಾಣವಾಗಿತ್ತು. ಅಂತಹ ಅಸಾಮಾನ್ಯ ದಕ್ಷತೆಯುಳ್ಳ ಸಂಪಾದಕರ ಕೈಗೆ ಸಿಕ್ಕಿದ ಪತ್ರಿಕೆ, ಈ ರೀತಿ ಬೆಳೆದು ಬಂದುದರಲ್ಲಿ ಆಶ್ಚರ್ಯವಿಲ್ಲವೆನ್ನಬೇಕು.

ಬದುಕನ್ನು ವಿಸ್ತರಿಸಿಕೊಂಡು ತುಂಬುಜೀವನದ ಸವಿಯನ್ನು ಉಣ್ಣುವುದು ವ್ಯಕ್ತಿಯ ಹಿರಿಮೆಯನ್ನು ತೋರಿಸುತ್ತದೆ. ಸಂಸ್ಥೆಗಳಿಗೂ ಈ ಮಾತು ಒಪ್ಪುತ್ತದೆ. ಸುದ್ದಿಸಂಗ್ರಹ— ಪ್ರಕಾಶನಗಳಲ್ಲದೆ ಟ್ಯಾಮ್ಸ್ ಪತ್ರಿಕೆ, ಅನೇಕ ಚಿಕ್ಕ ದೊಡ್ಡ ಸತ್ಕಾರ್ಯಗಳನ್ನೂ ಮಾಡಿದೆ.

೧೮೫೦ ರಲ್ಲಿ, ಅಂತರರಾಷ್ಟ್ರೀಯವಾಗಿ ಪಸರಿಸಿಕೊಂಡು, ನಾನಾ ತರದ ಸುಳ್ಳುಪತ್ರಗಳನ್ನು ತಯಾರಿಸಿ, ಹಲವಾರು ಬ್ಯಾಂಕಿಂಗ್ ಮತ್ತು ಇನ್ಶೂರೆನ್ಸ್ ಸಂಸ್ಥೆಗಳನ್ನು ವಂಚಿಸುತ್ತಿದ್ದ ಮೋಸಗಾರರ ತಂಡವೊಂದನ್ನು ಪತ್ರಿಕೆ ಬಯಲಿಗೆಳೆಯಿತು. ಆ ಕೆಲಸಕ್ಕಾಗಿ ಅಪಾರ ಹಣವನ್ನು ವೆಚ್ಚ ಮಾಡಬೇಕಾಯಿತು. ಇತ್ತ ಲಂಡನ್ನಿನ ವ್ಯಾಪಾರೀ ಪ್ರಮುಖರು ಎಷ್ಟು ಸಂತುಷ್ಟರಾದರೆಂದರೆ, ಅವರು, ಟ್ಯಾಮ್ಸ್ ಪತ್ರಿಕೆಗೆ ಆ ಕಾರ್ಯಕ್ಕಾಗಿ ತಗಲಿದ ಖರ್ಚೆಲ್ಲವನ್ನೂ ಕೊಡುವೆವೆಂದು ಮುಂದೆ ಬಂದರು. ಪತ್ರಿಕೆ ಅದನ್ನು ನಿರಾಕರಿಸಿತು. ಕೊನೆಗೆ ಆ ನಿಧಿಯನ್ನು, ಟ್ಯಾಮ್ಸಿನ ಹೆಸರಿನಿಂದ ವಿದ್ಯಾರ್ಥಿವೇತನಗಳನ್ನು ಕೊಡುವುದಕ್ಕೆಂದು ನಿಯೋಜಿಸಲಾಯಿತು.

ಮೊತ್ತಮೊದಲು ರಣರಂಗಕ್ಕೆ ಬಾತ್ಮೀದಾರನಾಗಿ ಹೋದವನು ಟ್ಯಾಮ್ಸ್ ಪತ್ರಿಕೆಯವನು. ವಿಲಿಯಂ ಹಾವಾರ್ಡ್ ರಸೆಲ್ ತನ್ನದೇ ಒಂದು ದಾರಿ ಹಿಡಿಯುವ ಒಂದು ರೀತಿಯ ಶುದ್ಧವಿಕ್ಷಿಪ್ತ. ಯಾರಿಗೂ ಬಗ್ಗುವವನಲ್ಲ. ೧೮೫೪ರ ಕ್ರಿಮಿಯನ್ ಯುದ್ಧದ ಕಾಲವದು. ಬ್ರಿಟಿಷ್ ಸೈನ್ಯಾಧಿಕಾರಿಗಳಿಗೆ, ಈತನು ತಮ್ಮ ನಡುವಿರುವುದು ರುಚಿಸಲಿಲ್ಲ. ಸಮರಾಂಗಣದ ಶಿವಪೂಜೆಗೆ ಬಂದ ಈ ಸುದ್ದಿಗಾರಕರಡಿಯನ್ನು ದೂರೀಕರಿಸಲು ಯತ್ನಿಸಿದರು. ಆದರೆ, ಈತನು ತನ್ನದೇ ಒಂದು ಡೇರೆ ಹೊಡೆದು ಪ್ರತ್ಯೇಕವಾಗಿ ಪ್ರತಿಷ್ಠಿತನಾದನು. ಆ ಗೂಡಾರವನ್ನೂ ಕೆಡವಿ ಹಾಕಿಸಿದರು.

ಈತನೇನೂ ಜಗ್ಗಲಿಲ್ಲ. ಹೊಟ್ಟೆ ಹಸಿವು, ವಿಪರೀತ ಛಳಿ-ಯಾವುದನ್ನೂ ಲಕ್ಷ್ಯಿಸಲಿಲ್ಲ. ತನ್ನ ನಾಡಿನ ಜನಕ್ಕೆ ಸೇನಾಮುಖದ ಆಗುಹೋಗುಗಳ ಕುರಿತು ಸುದ್ದಿ ಕಳುಹಿಸುತ್ತ ನಿಂತನು "ನಮ್ಮ ಸೇನೆ ಅವ್ಯವಸ್ಥೆಗೊಳಗಾಗಿದೆ; ಸೈನ್ಯಾಧಿಕಾರಿಗಳು ಸಾಮರ್ಥ್ಯಹೀನರು; ಹೋರಾಡುವವರಿಗೆ ಯೋಗ್ಯವಾದ ಆಹಾರಗಳಿಲ್ಲ; ಉಡಿಗೆ-ತೊಡಿಗೆಗಳಿಲ್ಲ; ಪಾದರಕ್ಷೆಗಳಿಲ್ಲ; ಘಾಸಿ ಹೊಂದಿದವರಿಗೆ ಔಷಧೋಪಚಾರಗಳಿಲ್ಲ; ಪರಿಸ್ಥಿತಿ ಸುಧಾರಿಸದಿದ್ದರೆ ಸರ್ವನಾಶವೇ ಖಂಡಿತ"-ಎಂದೆಲ್ಲ ವಸ್ತುಸ್ಥಿತಿಯನ್ನು ತಿಳಿಯಪಡಿಸಿ, ಇಂಗ್ಲೆಂಡಿನ ಜನರನ್ನು ಜಾಗೃತಗೊಳಿಸಿದನು. ಸರಕಾರವೇನೋ ಈ ಸುದ್ದಿಗಳನ್ನೆಲ್ಲ ಅಲ್ಲಗಳೆಯಿತು; ಆದರೆ ರಸೆಲ್, ವಾಸ್ತವಾಂಶಗಳನ್ನು ಕುರಿತು ಸುದ್ದಿಗಳನ್ನು ಎಡೆಬಿಡದೆ ಕಳುಹಿಸುತ್ತಲೇ ಇದ್ದನು ಇತ್ತ ಸಮರ್ಥನಾದ ಸಂಪಾದಕನು ಅವುಗಳಿಗೆ ಬೆಂಬಲಕೊಟ್ಟು ಎತ್ತಿ ಹಿಡಿಯುತ್ತಿದ್ದನು. ರಸೆಲ್‌ನ ಪ್ರಾಮಾಣಿಕ ನಿರೂಪಣೆಗಳಿಂದಾಗಿ ಜನರ ಮನಸ್ಸಿನಲ್ಲಿ ತುಂಬ ತಳಮಳವುಂಟಾಯಿತು. ಸೈನಿಕರ ಹಿತಕ್ಕಾಗಿ ವಿನಿಯೋಗಿಸುವ ಬಗ್ಗೆ ಟ್ಯಾಮ್ಸಿನೊಡನೆ ಅವರು ದ್ರವ್ಯಸಹಾಯವನ್ನು ನೀಡತೊಡಗಿದರು. ಪತ್ರಿಕೆಯ ಕೈಯಲ್ಲಿ ಕೂಡಿಬಂದ ಈ ನಿಧಿಯ ಸಹಾಯವನ್ನು ಪಡೆದು, ಜಗತ್ಪ್ರಸಿದ್ಧ ಫ್ಲಾರೆನ್ಸ್ ನೈಟಿಂಗೇಲ್ ರಣರಂಗದಲ್ಲಿ ಚಿಕಿತ್ಸಾಲಯಗಳನ್ನು ಏರ್ಪಡಿಸಿದಳು. ಈ ಹೊತ್ತಿಗೆ ಟ್ಯಾಮ್ಸಿನ ಗರ್ಜನೆಯಿಂದಾಗಿ, ಬ್ರಿಟಿಷ್ ಮಂತ್ರಿಮಂಡಲ ಚಡಪಡಿಸತೊಡಗಿತ್ತು. ಹೊಸ ಮಂತ್ರಿಮಂಡಲವೊಂದು ರಚಿಸಲ್ಪಡಬೇಕಾಯಿತು. ಆಗ ಸೇನಾವಿಭಾಗಗಳೆಲ್ಲ ಪುನರ್ವ್ಯವಸ್ಥೆಗೊಳಿಸಲ್ಪಟ್ಟುವು. ರಣರಂಗದಲ್ಲಿ ಗೆಲವು ಲಭಿಸಿತು.

ಪತ್ರಿಕಾ ಪ್ರಪಂಚದ ಒಂದೊಂದು ಕಾರ್ಯವಿಭಾಗದಲ್ಲೂ ಸುಧಾರಣೆಗಳನ್ನು ಮೊತ್ತ ಮೊದಲು ಕಂಡುಕೊಂಡ ಖ್ಯಾತಿ ಟ್ಯಾಮ್ಸ್ ಪತ್ರಿಕೆಗೆ ಸಲ್ಲುತ್ತದೆ. ಉಗಿಯಂತ್ರಗಳಿಂದ ಮೊದಲು ಅಚ್ಚುಮಾಡತೊಡಗಿದ್ದು ಟ್ಯಾಮ್ಸ್; ರೋಟರಿ ಯಂತ್ರಗಳನ್ನು ಮೊದಲು ಬಳಸಿಕೊಂಡಿದ್ದೂ ಅದೇ. ರೇಡಿಯೋ ಮೂಲಕ ಸುದ್ದಿಸಂಗ್ರಹ ಕಾರ್ಯವನ್ನು ನಡೆಸತೊಡಗಿದ್ದು ಕೂಡ ಟ್ಯಾಮ್ಸ್ ಪತ್ರಿಕೆಯೆ. ಪತ್ರಿಕೆಯ ಹಿನ್ನೆಲೆಯಲ್ಲಿ, ಒಂದೊಂದು ವಿಭಾಗದಲ್ಲಿಯೂ ವಿಚಕ್ಷಣತೆಯನ್ನು ಗಳಿಸಿದ ತಜ್ಞರ ಒಂದೊಂದು ತಂಡವೇ ಇದೆ. ಅವರೆಲ್ಲರೂ ಪತ್ರಿಕೆಯನ್ನು ಉತ್ತಮಗೊಳಿಸವುದಕ್ಕಾಗಿ ಶ್ರಮಿಸುತ್ತಿರುತ್ತಾರೆ.

ಓದಲು ತುಂಬ ಅನುಕೂಲವಾಗುವಂಥ, ಅತ್ಯಂತ ಸ್ಪಷ್ಟತೆಯುಳ್ಳ ಅಕ್ಷರಗಳ ಮೊಳೆಗಳನ್ನು ತಯಾರಿಸುವುದಕ್ಕಾಗಿ, ದೃಷ್ಟಿ ತಜ್ಞರು ಮೂರು ವರ್ಷಗಳ ಕಾಲ ಪ್ರಯೋಗಗಳನ್ನು ನಡೆಸಿದರು. ಹೀಗೆ ಟ್ಯಾಮ್ಸ್, ಓದುಗರ ಹಿತವನ್ನು ಸದಾ ಲಕ್ಷ್ಯದಲ್ಲಿಟ್ಟುಕೊಂಡಿರುತ್ತದೆ.

ಹಿಂದೊಮ್ಮೆ ಪ್ರಶ್ಯಾದೇಶದ ಬಿಸ್‌ಮಾರ್ಕನ ಸೇನೆಗಳು ಫ್ರಾನ್ಸ್ ದೇಶವನ್ನು ಆಕ್ರಮಿಸಿಕೊಂಡಿದ್ದ ಕಾಲದಲ್ಲಿ, ಟ್ಯಾಮ್ಸ್ ಪ್ರತಿಗಳು ಅಲ್ಲಿಗೆ ತಲುಪುವಂತಿರಲಿಲ್ಲ. ಆಗ ಪತ್ರಿಕೆ ಏನು ಮಾಡಿತು ಗೊತ್ತೆ? ಎರಡೆರಡು ಪುಟಗಳು ಛಾಯಾ ಪ್ರತಿಗಳನ್ನು ತೆಗೆದು ಅವುಗಳನ್ನು ಅಂಚೆಯ ಚೀಟಿಗಳ ಗಾತ್ರಕ್ಕೆ ಸಂಕುಚಿತಗೊಳಿಸಿ, ಗುಟ್ಟಾಗಿ ಫ್ರಾನ್ಸಿಗೆ ಕಳುಹಲಾಯಿತು. ಅಲ್ಲಿ ಅವುಗಳನ್ನು ಮಾಯಾದೀಪಗಳ ಮೂಲಕ ವಿಸ್ತರಿಸಿ ಓದುವಂತಾಯಿತು.

ಸುದ್ದಿಗಳನ್ನು ಹೇಗೆ ಸಂಗ್ರಹಿಸಬೇಕು; ಯಥಾವತ್ತಾಗಿ, ಕ್ಷಿಪ್ರವಾಗಿ ಹೇಗೆ ಸಂಗ್ರಹಿಸಬೇಕು—ಎಂಬುದರ ಕುರಿತು ಟ್ಯಾಮ್ಸ್ ಪತ್ರಿಕೆ ತುಂಬ ಪರಿಶ್ರಮಿಸಿದೆ. ನಾವೆಗಳು, ಗುಪ್ತಚಾರರು, ವಾಹಕ ಪಾರಿವಾಳಗಳು-ಹೀಗೆ ಎಲ್ಲ ತರದ ಸಾಧನಗಳನ್ನೂ ಸುದ್ದಿಸಂಗ್ರಹಕ್ಕಾಗಿ ಬಳಸಿಕೊಂಡಿದೆ. ಅನೇಕ ಸಲ ಮಿಂಚಿನಂತೆ ಸುದ್ದಿಗಳನ್ನು ಪ್ರಕಟಗೊಳಿಸಿ, ಪ್ರತಿಸ್ಪರ್ಧಿ ಪತ್ರಿಕೆಗಳನ್ನು ಪೆಚ್ಚುಗೊಳಿಸಿದೆ.

ವಿದೇಶಗಳಲ್ಲಿರುವ ಟ್ಯಾಮ್ಸ್ ಬಾತ್ಮೀದಾರರಿಗೆ, ಆಯಾಯ ದೇಶಗಳಲ್ಲಿ ವಿಶೇಷಮನ್ನಣೆಯಿದೆ. ವಾಶಿಂಗ್‌ಟನ್ನಿನಲ್ಲಿದ್ದ ಟ್ಯಾಮ್ಸ್ ಪ್ರತಿನಿಧಿ ಸರ್ ವಿಲ್ಮಟ್ ಲೂಯಿ ಎಂಬವನು, ಬ್ರಿಟನ್ನಿನ ಅನಧಿಕೃತ ರಾಯಭಾರಿ ಎನ್ನಿಸಿಕೊಂಡಿದ್ದನು. ಅನೇ-

ರಿಕದ ಅಧ್ಯಕ್ಷರು ಟ್ಯಾಮ್ಸ್ ಪ್ರತಿನಿಧಿಯನ್ನು ವೈಟ್‌ಹೌಸಿಗೆ ಕರೆಯಿಸಿಕೊಂಡು, ಪರ್ಯಾಲೋಚನೆ ನಡೆಸಿದ್ದಿದೆ. ಅಮೇರಿಕನ್ ಕಾಂಗ್ರೆಸ್ಸಿನ ಸದಸ್ಯರು ಟ್ಯಾಮ್ಸ್ ಬಾತ್ಮೀದಾರನ ವರದಿಗಳನ್ನು ಆಸಕ್ತಿಪಟ್ಟು ಓದುತ್ತಾರೆ.

ಟ್ಯಾಮ್ಸಿನ ಬಾತ್ಮೀದಾರರ ತಂಡದಲ್ಲಿ ಹಲವರು ಅಸಾಧಾರಣ ವ್ಯಕ್ತಿಗಳಿದ್ದರು. ಅವರಲ್ಲಿ ಒಬ್ಬ ಮಹಾನುಭಾವನ ಕತೆಯನ್ನು ಕೇಳಿ :

೧೮೭೮ ರಲ್ಲಿ ಫ್ರಾನ್ಸ್-ಪ್ರಶ್ಯಾ ಯುದ್ಧಸಂಧಾನ ಸಮಿತಿ ಬರ್ಲಿನ್ನಿನಲ್ಲಿ ಸಮಾವೇಶಗೊಂಡಿತ್ತು. ಕಾರ್ಯಕಲಾಪಗಳೆಲ್ಲ ಗೌಪ್ಯವಾಗಿ ನಡೆದಿದ್ದುವು. ಆ ದಿನದ ಕಾರ್ಯಕ್ರಮಗಳು ಕೊನೆಗೊಂಡುವು. ಪ್ರತಿನಿಧಿಯೊಬ್ಬನು, ಅಂದಿನ ಕಾರ್ಯಕಲಾಪಗಳ ವಿವರಗಳನ್ನೊಳಗೊಂಡ ಪಟ್ಟಿಯನ್ನು ತನ್ನ ಹ್ಯಾಟಿನೊಳಕ್ಕೆ ತೂರಿಸಿ, ಭೋಜನಗೃಹಕ್ಕೆ ಬಂದನು ಹ್ಯಾಟನ್ನು ಒಂದೆಡೆ ತಗಲಿಸಿಟ್ಟು, ಊಟಕ್ಕೆ ಕುಳಿತನು. ಅಲ್ಲಿಯೇ ಟ್ಯಾಮ್ಸಿನ ಬಾತ್ಮೀದಾರರ ಸವಾರಿ ಊಟಕ್ಕೆ ಕುಳಿತಿತ್ತು. ಸಮ್ಮೇಳನದ ಪ್ರತಿನಿಧಿಯೂ ಈ ಬಾತ್ಮೀದಾರನೂ ಗೆಳೆಯರು. ಆದರೆ ತುಟಿ ಪಿಟಿಕ್ಕೆನಿಸಲಿಲ್ಲ— ಮಾತ್ರವಲ್ಲ; ಗೆಳೆಯನನ್ನು ಮುಖವೆತ್ತಿ ನೋಡಲಿಲ್ಲ. ಸುದ್ದಿಗಾರರ ಮುಂದೆ ಬಾಯಿಬಿಡುವುದೆಂದರೆ ವಾಯುದೇವರ ಕೈಯಲ್ಲಿ ಕಸ್ತೂರಿ ಕೊಟ್ಟ ಹಾಗೇ ಅಲ್ಲವೆ? ಮಾತೆತ್ತಿದರೆ ಗುಟ್ಟೆಲ್ಲ ರಟ್ಟು !

ಊಟ ಮುಗಿದೊಡನೆ ಬಾತ್ಮೀದಾರನು, ಪ್ರತಿನಿಧಿಯ ಹ್ಯಾಟಿನ ಪಕ್ಕದಲ್ಲಿಟ್ಟಿದ್ದ— ಅದರಂತೆಯೇ ಇದ್ದ-- ತನ್ನ ಹ್ಯಾಟನ್ನು ಬಿಟ್ಟು, ಆತನ ಹ್ಯಾಟನ್ನು ಎತ್ತಿಕೊಂಡು ತೆಪ್ಪಗೆ ಜಾರಿಬಿಡುತ್ತಾನೆ. ಗೌಪ್ಯವಾಗಿ ನಡೆದ ಸಮ್ಮೇಳನದ ವಿವರಗಳೆಲ್ಲ ಟ್ಯಾಮ್ಸಿನಲ್ಲಿ ಅಚ್ಚಾಗಿ ಬರುತ್ತವೆ. ಈ ಘಟನೆಯಿಂದ ಪ್ರಶ್ಯಾದ ಬಿಸ್‌ಮಾರ್ಕ್ ಎಷ್ಟರ ಮಟ್ಟಿಗೆ ಕಿಲುಕುಳ ಪಡುತ್ತಾನೆಂದರೆ, ಇನ್ನೊಂದು ದಿನ ಸಮ್ಮೇಳನ ಪ್ರಾರಂಭವಾದಾಗ, ಮೇಜಿನ ಮೇಲೆ ಹಾಸಿದ್ದ ಬಟ್ಟೆಯನ್ನು ಮೇಲಕ್ಕೆತ್ತಿ "ಟ್ಯಾಮ್ಸ್ ಪತ್ರಿಕೆಯ ಆ ಹಾಳಾದ ಬಾತ್ಮೀದಾರನೇನಾದರೂ ಇಲ್ಲಿ ಅವಿತುಕೊಂಡಿರುವನೋ ಎಂದು ನೋಡುತ್ತಿದ್ದೇನೆ" ಎಂದನಂತೆ !

ಸಂಧಿಪತ್ರ ಸಿದ್ಧವಾದಾಗ ಕೂಡ ಹಾಗೆಯೇ. ಈ ಬಾತ್ಮೀದಾರನಿಗೆ ಅದರ ಕೊಂಚಭಾಗ ಮಾತ್ರ ಹೇಗೋ ದೊರೆಯಿತು. ಮುಖ್ಯವಾದ ಪೀಠಿಕಾ ಭಾಗವೇ ಸಿಕ್ಕಲಿಲ್ಲ. ಹಿಂದೆ ಹೇಳಿದ ತನ್ನ ಗೆಳೆಯ ಪ್ರತಿನಿಧಿಯನ್ನು ಕೇಳಿದರೆ ಅವನೆನ್ನುತ್ತಾನೆ: "ಬೇಕಿದ್ದರೆ ಒಮ್ಮೆ ಗಟ್ಟಿಯಾಗಿ ಓದಿ ಹೇಳುತ್ತೇನೆ"—ಎಂದು. ಈತನಿಗೆ ಬೇಕಾಗಿದ್ದುದೂ ಅಷ್ಟೆ. ಮತ್ತೊಂದು ಗಂಟೆಯೊಳಗೆ ಬಾತ್ಮೀದಾರನು ಎಲ್ಲ ವಿವರವನ್ನೂ ಕಾರ್ಯದರ್ಶಿಗೆ ಹೇಳಿ ಬರೆಸಿ, ಆ ಕಾಗದವನ್ನು ಸಹಾಯಕನೊಬ್ಬನ ಕೋಟಿಗೆ ಹೊಲಿದುಬಿಟ್ಟು, ಆತನನ್ನು ಬ್ರುಸೆಲ್ಸಿಗೆ ಸಾಗಿಸಿದನು. ಪ್ರತಿಸ್ಪರ್ಧಿಗಳಿಗೇನಾದರೂ ವಾಸನೆ ಹೊಡೆದೀತೆಂಬ ಶಂಕೆಯಿಂದ ತಾನು ಬಲು ಬೇಗನೆ ಬರ್ಲಿನ್ನಿಗೆ ಹಿಂದಿರುಗಿದನು. ಮಾರನೆಯ ದಿನ ಸಂಧಿಪತ್ರಕೆ ಸದಸ್ಯರ ಸಹಿಗಳು ಬೀಳುವ ಹೊತ್ತಿಗೆ, ಲಂಡನ್ ಜನರು ಸಂಧಿಯ ವಿವರಗಳನ್ನೆಲ್ಲ ಟ್ಯಾಮ್ಸ್‌ನಲ್ಲಿ ಓದುತ್ತಿದ್ದರು. ಇದೆಲ್ಲವೂ ಈ ಬಾತ್ಮೀದಾರನ ಚಮತ್ಕಾರದಿಂದಾಗಿ; ಸಾಧನೆಯಿಂದಾಗಿ; ಅವನ ಅದ್ಭುತ ಸ್ಮರಣ ಶಕ್ತಿಯಿಂದಾಗಿ. ಇದೇ ಬಾತ್ಮೀದಾರನು ಟ್ಯಾಮ್ಸಿನ ಪ್ಯಾರಿಸ್ ಪ್ರತಿನಿಧಿಯಾಗಿದ್ದಾಗ, ಫ್ರೆಂಚ್ ಪ್ರಧಾನಿಗಳು ಪ್ರತಿನಿಧಿ ಸಭೆಯನ್ನುದ್ದೇಶಿಸಿ ಮಾಡಿದ ನೂರು ಕಾಲಂ ಉದ್ದದಷ್ಟಾಗುವ ಭಾಷಣವನ್ನು, ಕೇವಲ ಸ್ಮರಣಶಕ್ತಿಯಿಂದಲೇ— ಕೊಂಚವೂ ತಪ್ಪಿಲ್ಲವಂತೆ—ಭಾಷಣಾನಂತರ ಬರೆದುಕೊಂಡು, ತಂತಿ ಮೂಲಕ ಪತ್ರಿಕೆಗೆ ಕಳುಹಿಸಿ ಬೆರಗುಗೊಳಿಸಿದ್ದನಂತೆ !

ಶೀಘ್ರವಾಗಿ ಸುದ್ದಿಗಳನ್ನು ಪ್ರಕಟಿಸಲು ಹಾತೊರೆಯುವ ಟ್ಯಾಮ್ಸ್, ಕೆಲವೊಮ್ಮೆ ಒಂದೊಂದು ಸುದ್ದಿಯನ್ನು ವಾರದ ಅನಂತರ ಪ್ರಕಟಿಸಿದ್ದಿದೆ. ಏಕೆಂದರೆ ನಿಷ್ಪಕ್ಷತೆಯ ಕಡೆಗೆ ಅದರ ಲಕ್ಷ್ಯ ಬಹಳವಾಗಿದೆ. ಯಾವುದೇ ಅಂಶದ ಯಥಾರ್ಥತೆಯ ಕುರಿತು ಸಾಕಷ್ಟು ಅರಿವಿಲ್ಲದೆ ದುಡುಕಿ ಪ್ರಕಟಿಸುವುದು ಪತ್ರಿಕೆಗೆ ಹಿಡಿಸದು. ಎಲ್ಲ ಸಮಾಚಾರಗಳ ಕುರಿತು, ವಿಷಯಗಳ ಕುರಿತು ನಿಷ್ಪಕ್ಷವಾದ ತಿಳಿವುಂಟಾಗಬೇಕಾದರೆ, ಟ್ಯಾಮ್ಸ್ ಪತ್ರಿಕೆಯನ್ನು ಅಭ್ಯಸಿಸಬೇಕೆಂದು ಹೇಳುವುದುಂಟು. ನಮ್ಮ ದೇಶದಲ್ಲಿ "ಹಿಂದು" ಪತ್ರಿಕೆಯ ಕುರಿತು ಆ ರೀತಿ ಅಭಿಪ್ರಾಯಪಟ್ಟದ್ದಿದೆ. ಇದಲ್ಲದೆ ಹಲವಾರು ವಿಷಯಗಳಲ್ಲಿ "ಹಿಂದು" ಪತ್ರಿಕೆ ಲಂಡನ್ ಟ್ಯಾಮ್ಸಿನ ನೀತಿಯನ್ನು ಸ್ವಲ್ಪ ಮಟ್ಟಿಗೆ ಅನುಸರಿಸುತ್ತಿದೆಯೆನ್ನಬಹುದು.

ನಿಷ್ಪಕ್ಷತೆಯೇ ಧ್ಯೇಯವೆಂಬಂತಿದ್ದರೂ, ಟ್ಯಾಮ್ಸ್ ಹಲವಾರು ಸಲ ಎಡವಿದೆ; ತಪ್ಪು ಮಾಡಿದೆ. ಆನೆ ಕೂಡ ಮುಗ್ಗರಿಸುವುದಿಲ್ಲವೆ? ಟ್ಯಾಮ್ಸಿನ ಹಿನ್ನೆಲೆಯಲ್ಲಿರುವವರೂ ಮಾನವರೇ ತಾನೆ? ಪತ್ರಿಕೆ ಕೆಲವು ಹಿಮಾಲಯದಂಥ ಪ್ರಮಾದಗಳನ್ನು ಮಾಡಿದೆ. ಭಾರತದ ಸ್ವಾತಂತ್ರ್ಯಸಮರಕಾಲದಲ್ಲಿ ಈ ದೇಶದ ಕುರಿತು ಕೆಲವು ತಪ್ಪು ಅಭಿಪ್ರಾಯಗಳನ್ನು ಪ್ರಕಟಿಸಿದೆ. ಅದು ನಮ್ಮ ದೃಷ್ಟಿಯಿಂದಿರಬಹುದು; ಆದರೆ ಕೆಲವು ಅಯಥಾರ್ಥ ಸುದ್ದಿಗಳನ್ನೂ ಪ್ರಕಟಿಸಿದ್ದಿದೆ.

ಐರಿಶ್ ಹೋಂರೂಲ್ ಚಳುವಳಿಯ ಸಂದರ್ಭದಲ್ಲಿ, ಟ್ಯಾಮ್ಸ್ ಪತ್ರಿಕೆ ಗ್ಲ್ಯಾಡ್‌ಸ್ಟನ್‌ನೊಡನೆ ಹೋರಾಡಬೇಕಾದ ಸಂದರ್ಭವೊದಗಿತ್ತು. ಆಗ ತನ್ನ ವಾದಸಮರ್ಥನೆಗಾಗಿ, ಐರಿಶ್ ಮುಂದಾಳೊಬ್ಬನು ಬರೆದುವೆಂದು ಹೇಳಲಾದ ಕೆಲವು ಪತ್ರಗಳನ್ನು, ಟ್ಯಾಮ್ಸ್ ಅನುಕ್ರಮವಾಗಿ ಪ್ರಕಟಿಸಿತು. ಆ ಪತ್ರಗಳಲ್ಲೊಂದು ಕೊನೆಗೆ ಕೋರ್ಟಿನಲ್ಲಿ ಸುಳ್ಳು ಎಂದು ರುಜುವಾತುಗೊಳಿಸಲ್ಪಟ್ಟು, ಟ್ಯಾಮ್ಸ್ ೨೦,೦೦೦ ರೂ. ಗಳಷ್ಟು ದಂಡ ತೆರಬೇಕಾಯಿತು. ಆದರೂ ಟ್ಯಾಮ್ಸಿನ ಸಹಜ ವರ್ಚಸ್ಸಿನ ಮುಂದೆ ಈ ಅಂಶಗಳೆಲ್ಲ ಗೌಣವೆಂದು ತಿಳಿಯಬೇಕು.

ಸಾರ್ವಜನಿಕರಿಂದ ಧನಸಹಾಯವನ್ನು ಶೇಖರಿಸಿ, ಟ್ಯಾಮ್ಸ್ ಎಷ್ಟೋ ಸತ್ಕಾರ್ಯಗಳನ್ನು ಸಾಧಿಸಿದೆ. ವೆಸ್ಟ್ ಮಿನಿಸ್ಟರ್

ಮತ್ತು ಸೆಂಟ್‌ಪಾಲ್ಸ್ ಮಂದಿರಗಳನ್ನು ಊರ್ಜಿತಗೊಳಿಸಲು ಮಿಲಿಯಗಟ್ಟಲೆ ಹಣವನ್ನು ತನ್ನ ಸಂಗ್ರಹಿತ ನಿಧಿಯಿಂದ ತೆತ್ತಿದೆ. ೧೯೩೯ರಲ್ಲಿ ಬ್ರಿಟಿಷ್ ಆಸ್ಪತ್ರೆಗಳಿಗೆ ರೇಡಿಯಂ ಕೊಂಡುಕೊಂಡು ಒದಗಿಸುವುದಕ್ಕಾಗಿ, ಲಕ್ಷಾಂತರ ಪೌಂಡುಗಳನ್ನು ಕೂಡಿಸಿತು. ಕಳೆದ ಮಹಾಯುದ್ಧದ ಕಾಲದಲ್ಲಿ ರೆಡ್‌ಕ್ರಾಸ್ ಸಂಸ್ಥೆಗೆಂದು ಸಾರ್ವಜನಿಕರಿಂದ ಎರಡು ಕೋಟಿ ಪೌಂಡುಗಳಿಗೂ ಮಿಕ್ಕಿ ದ್ರವ್ಯವನ್ನು ಸಂಗ್ರಹಿಸಲು ಈ ಪತ್ರಿಕೆ ಸಮರ್ಥವಾಯಿತೆಂದರೆ, ಅದರ ಪ್ರಭಾವವನ್ನು ಊಹಿಸಿಕೊಳ್ಳಬಹುದು

ಇಷ್ಟೆಲ್ಲ ಮಾಡಿದ ಪತ್ರಿಕೆ, ನಡುವೆ ತುಂಬ ಆರ್ಥಿಕ ದುಸ್ಥಿತಿಯನ್ನನುಭವಿಸಿದೆ. ಯಾವುದಾದರೊಂದು ರಾಜಕೀಯ ಪಕ್ಷದ ಬಾಲಹಿಡಿದು ಬದುಕುವುದಾಗಿದ್ದರೆ, ಟೈಮ್ಸ್ ಪತ್ರಿಕೆ ಅಪಾರ ಸಂಪತ್ತನ್ನು ಗಳಿಸಬಹುದಿತ್ತು. ತನ್ನ ಮಟ್ಟವನ್ನು ಮೂರು ಕಾಸು ಮಾಡಿಕೊಂಡು ಕಾಸು ಮಾಡಬಹುದಾಗಿತ್ತು: ಹಾಗೇನಾದರೂ ಆಗಿದ್ದರೆ ಅದು ಇಂದಿರುವ ಹಾಗಿರುವುದು ಸಾಧ್ಯವಾಗುತ್ತಿತ್ತೆ ?

೧೮೯೮ ರಲ್ಲಿ ಪತ್ರಿಕೆಯು ತೀರ ದುಸ್ಥಿತಿಯಲ್ಲಿತ್ತು. ಆಗ ಅದನ್ನು ಬದುಕಿಸಿದವರು ಇಬ್ಬರು ಅಮೇರಿಕನ್ನರು. Encyclopaedia Britannicaದ ಪ್ರತಿಗಳು ಮುಗಿದು ಹೋಗಿದ್ದ ಕಾಲವದು. ಹೂಪರ್ ಮತ್ತು ಜಾಕ್ಸನ್ನರಿಗೆ ಈ ವಿಶ್ವಕೋಶದ ಪುನರ್ಮುದ್ರಣ ಕಾರ್ಯವನ್ನು ಕೈಗೊಳುವ ಸಂದರ್ಭ ಒದಗಿತು. ಅವರು ಅದಕ್ಕಾಗಿ ಟೈಮ್ಸ್‌ಪತ್ರಿಕೆಯ ಸಹಕಾರವನ್ನು ಕೋರಿದರು. ಟೈಮ್ಸ್ ಒಪ್ಪಿತು. ಪತ್ರಿಕೆಯ ಹೆಸರಿನಲ್ಲಿ ಪ್ರಕಾಶನಕಾರ್ಯ ನಡೆಯಿತು. ಪತ್ರಿಕೆಯ ಮೂಲಕ ಪ್ರಚಾರವೂ ನಡೆಯಿತು. ಸಾವಿರಾರು ಪ್ರತಿಗಳು ಖರ್ಚಾದುವು. ಇಂಗ್ಲೆಂಡಿನಲ್ಲಿ ಮಾರಾಟವಾದ ಒಂದೊಂದು ಪ್ರತಿಗೂ, ಟೈಮ್ಸಿಗೆ ಇಂತಿಷ್ಟು ಸಂಭಾವನೆ ದೊರೆಯಬೇಕೆಂದು ಮೊದಲೇ ಗೊತ್ತಾಗಿತ್ತು. ಟೈಮ್ಸ್ ತತ್ಕಾಲಕ್ಕೆ ಬದುಕಿ ಹೋಯಿತು.

ಆದರೆ ಇಂಥ ಆಟ ಎಷ್ಟುದಿನ ನಡೆದೀತು ? ೧೯೦೮ ರಲ್ಲಿ ಪತ್ರಿಕೆ ಲಾರ್ಡ್ ನಾರ್ತ್‌ಕ್ಲಿಫ್‌ನ ಕೈಸೇರಿತು. ಪತ್ರಿಕೆಯ ಸಾಂಪತ್ತಿಕ ಸ್ಥಿತಿ ಸುಭದ್ರಗೊಳಿಸಲ್ಪಟ್ಟಿತು. ಹೀಗೆ ಕೈ ಬದಲಾಯಿಸಿದರೂ, ಪತ್ರಿಕೆಯ ಮೂಲ ನೀತಿಯ ಗೊಡವೆಗೆ ಯಾರೂ ಬರುವಂತಿರಲಿಲ್ಲ.

ಇನ್ನು ಪತ್ರಿಕೆಯ ಇಂದಿನ ಸ್ವರೂಪದ ಕುರಿತು ಕೆಲವಂಶಗಳನ್ನು ನಿರೂಪಿಸಬಹುದು.

ಈಗ ಟೈಮ್ಸ್ ಪತ್ರಿಕೆಯ ಒಂದು ಪ್ರತಿಯು ಟಿಲೆ ಮೂರು ಪೆನ್ನಿಗಳಿರಬೇಕು. ಹೊರನೋಟಕ್ಕೆ ಪತ್ರಿಕೆ ಮನಸೆಳೆಯುವಂಥದಲ್ಲ. ಮುಖಪತ್ರವೆಲ್ಲ ಚಿಣಾಕುಜಾಹೀರಾತುಗಳಿಂದ ತುಂಬಿದ ಕುರುಚಲು ಕಾಡು ! ಮೊದಲಿಗೆ ಹುಟ್ಟು, ವಿವಾಹ ಹಾಗೂ ಸಾವಿನ ಕುರಿತಾದ ಪ್ರಕಟನೆಗಳು. ಈ ಭಾಗವನ್ನು "Hatch, Patch, Despatch" ಎಂದು ಕರೆಯುವುದುಂಟು. ಜಾಸಗಿ ಪ್ರಕಟನೆಗಳ ಸಾಲಿನಲ್ಲಿ ಒಮ್ಮೊಮ್ಮೆ ಬಹು ಸ್ವಾರಸ್ಯವಾದ ಅಂಶಗಳಿರುವುದೂ ಇದೆ.

ಪಾರ್ಲಿಮೆಂಟ್ ಅಧಿವೇಶನ ನಡೆಯುತ್ತಿರುವ ಕಾಲವಾದರೆ ಎರಡನೆಯ ಪುಟದಲ್ಲಿ ಅಲ್ಲಿಯ ಕಾರ್ಯಕಲಾಪಗಳ ವರದಿಯಿರುತ್ತದೆ. ಮೂರನೆಯ ಪುಟದಲ್ಲಿ ಇಂಗ್ಲೆಂಡಿನ ಕುರಿತಾದ ಸುದ್ದಿಗಳು. ಈ ಪುಟದಲ್ಲಿ ವಾರಕ್ಕೆ ಮೂರು ಸಲ Law Report ಗಳೆಂಬ ನ್ಯಾಯನಿಬಂಧನೆಗಳಿಗೆ ಸಂಬಂಧಿಸಿದ ವರದಿಗಳು ಬರುತ್ತವೆ. ತಜ್ಞರೇ ಇವುಗಳನ್ನು ಬರೆಯುತ್ತಾರೆ. ನ್ಯಾಯಾಲಯದ ದಾಖಲೆಗಳಿಗೆ ಸಮಾನಾದುವೆಂದು ಅವನ್ನು ಪರಿಗಣಿಸುತ್ತಾರೆ. ಟೈಮ್ಸಿನಲ್ಲಿ ಪ್ರಕಟವಾದ ಅಂಶಗಳ ನಿಷ್ಕೃಷ್ಟತೆಯನ್ನು ನ್ಯಾಯಸ್ಥಾನಗಳಲ್ಲಿ ಕೂಡ ಒಪ್ಪುತ್ತಾರೆ. ನ್ಯಾಯಶಾಸ್ತ್ರವ್ಯಾಸಂಗವನ್ನು ನಡೆಸುತ್ತಿರುವ ಯಾವನೊಬ್ಬ ವಿದ್ಯಾರ್ಥಿಯೂ ಈ ವರದಿಗಳನ್ನು ಉಪೇಕ್ಷಿಸುವಂತಿಲ್ಲ. ಕಾನೂನುಗಳು ಪ್ರಾಯೋಗಿಕವಾಗಿ ಹೇಗೆ ಅನ್ವಯಿಸಲ್ಪಡುತ್ತವೆಂಬುದನ್ನು ಅರಿತುಕೊಳ್ಳಲು ಈ ವರದಿಗಳು ಬಹಳ ಸಹಕಾರಿಯಾಗುತ್ತವೆ.

ನಾಲ್ಕನೆಯ ಪುಟ ಕ್ರೀಡಾರಂಗಕ್ಕೆ ಸಂಬಂಧಿಸಿದುದು. ಐದನೆಯ ಪುಟದಲ್ಲಿ, ಟೈಮ್ಸ್ ಬಾತ್ಮೀದಾರರ ಚಿಕ್ಕ ಚಿಕ್ಕ ವರದಿಗಳಿರುತ್ತವೆ ಆರನೆಯ ಪುಟದಲ್ಲಿ, ಪ್ರಾಮುಖ್ಯವಾದ ಜಾಗತಿಕ

ZANDU

PROTOCASEN

Whole Casein Hydrolysate

PALATABLE AND POWERFUL NUTRITIVE TONIC FOR ORAL ADMINISTRATION IN ALL RUNDOWN CONDITIONS OF HEALTH

Biological Laboratory

The Zandu Pharmaceutical Works, Ltd.
BOMBAY 14.

Sole Agents:—

M/s. Pranlal and Sons
Chemists, Druggists
Station Road. HUBLI

(H. O. Bangalore City)

ಸಮಾಚಾರಗಳಿರುತ್ತವೆ. ಇಲ್ಲಿ ಜೋಡ ತೀರ ದಪ್ಪಕ್ಷರದ ತಲೆಬರಹಗಳಿರುವುದಿಲ್ಲ, ಮಾತ್ರವಲ್ಲದೆ, ಅವೆಲ್ಲ ನಿರುದ್ವೇಗಕರವಾದುವುಗಳು; ಎರಡು ಕಾಲಂ ಮೀರದಂಥವು.

ಟ್ಯಾಮ್ಸ್ ಪತ್ರಿಕೆ, ತನ್ನ ಓದುಗರೆಲ್ಲರೂ ಸುಶಿಕ್ಷಿತರು, ಗಂಭೀರ ಪ್ರವೃತ್ತಿಯವರು; ಸುದ್ದಿಗಳನ್ನು ಆಸೂಲಾಗ್ರವಾಗಿ ಓದಿಕೊಂಡು ಮನನ ಮಾಡಿಕೊಳ್ಳುವಷ್ಟು ತಾಳ್ಮೆಯುಳ್ಳವರು— ಎಂದು ಭಾವಿಸಿದಂತಿದೆ. ಸಾಮಾನ್ಯವಾಗಿರುವ ಪರಿಪಾಠದಂತೆ, ಮೊದಲನೆಯ ಪ್ಯಾರಾದಲ್ಲಿಯೇ ಸುದ್ದಿಯ ಸಾರಾಂಶವನ್ನೊದಗಿಸಿ, ಉಳಿದ ವಿವರವನ್ನು ಸಮಗ್ರವಾಗಿ ಓದುವ ಕುತೂಹಲವನ್ನು ಕೆಡಿಸುವುದಿಲ್ಲ. ಯಾರೋ ಒಬ್ಬ ಅರಸನನ್ನು ಕೊಲೆಮಾಡಿದ ಸುದ್ದಿಯನ್ನು ಪ್ರಕಟಿಸುವಾಗ, ಮೊಟ್ಟಮೊದಲು ಆ ಅರಸುಮನೆತನದ ಕುರಿತಾದ ವಿವರಗಳನ್ನು ಸುದೀರ್ಘವಾಗಿ ನಿರೂಪಿಸಿ, ಅನಂತರವೇ ಕೊಲೆಯ ಸಮಾಚಾರವನ್ನು ತಿಳಿಸೀತು !

ಟ್ಯಾಮ್ಸಿನ ಏಳನೆಯ ಪುಟ ಅತಿ ಮುಖ್ಯವಾದುದು. ಅದರಲ್ಲಿಯೇ ಸಂಪಾದಕೀಯ ಲೇಖನಗಳಿರುವುದು. ಸಾಮಾನ್ಯವಾಗಿ ನಾಲ್ಕು ಸಂಪಾದಕೀಯಗಳು ದಿನವೂ ಪ್ರಕಟವಾಗುತ್ತವೆ. ಮೊದಲನೆಯದು ಮುಖ್ಯವಾದ ಒಂದು ರಾಜಕೀಯ ವಿಷಯವನ್ನು ಕುರಿತು; ಎರಡನೆಯದು ಸಾಮಾನ್ಯ ಘಟನೆಗಳನ್ನು ಪರಾಮರ್ಶಿಸುವಂತಹದು; ಮೂರನೆಯದು ಇಂಗ್ಲೀಷರಿಗೇ ಹೆಚ್ಚಾಗಿ ರುಚಿಸುವ ವಿಷಯಗಳ ಕುರಿತಾಗಿರುತ್ತದೆ. ನಾಲ್ಕನೆಯದು ಎಲ್ಲರೂ ತುಂಬ ಆಸಕ್ತಿಯಿಂದ ಓದುವಂಥದು. ಪತ್ರಿಕೆ ಕೈಸೇರಿದೊಡನೆ, ಮೊದಲು ಹುಡುಕುವುದು ಈ ಕೊನೆಯ ಸಂಪಾದಕೀಯವನ್ನು ! ಚಮತ್ಕಾರೋಕ್ತಿಗಳ ಗಂಭೀರಹಾಸ್ಯದಿಂದ ಕೂಡಿದ ಈ ಲೇಖನವನ್ನು ಪೂರ್ಣವಾಗಿ ಅರ್ಥಮಾಡಿಕೊಂಡು, ಅದರ ಸವಿಯನ್ನನುಭವಿಸಲು, ಇಂಗ್ಲಂಡಿನಲ್ಲಿ ಎಂದೂ ವಾಸಿಸದಿದ್ದವರಿಗೆ ಸಾಧ್ಯವಿಲ್ಲವಂತೆ. ಮುಂದಿನ ನಾಲ್ಕು ಪುಟಗಳಲ್ಲಿ ನ್ಯಾಯಾಲಯಗಳಿಗೆ ಸಂಬಂಧಿಸಿದ ಪ್ರಕಟನೆಗಳೂ, ಕಲೆಗಳ ಕುರಿತಾದ ಸಮಾಚಾರಗಳೂ, ಆರ್ಥಿಕ ವಿಚಾರಗಳ ಕುರಿತು ಬರಹಗಳೂ, ನಗರಸಮಾಚಾರ ವಾಣಿಜ್ಯ ವ್ಯವಹಾರಗಳ ಕುರಿತು ವರದಿಗಳೂ— ಇರುತ್ತವೆ. ಕೊನೆಯ ಪುಟ ಚಿತ್ರಗಳಿಗೆ ಮೀಸಲು.

ಇಂತಹ ಪತ್ರಿಕೆಯನ್ನು ಪೂರ್ತಿಯಾಗಿ ಓದುವುದೆಂದರೆ ಯಾರಿಗೂ ಸಮಯವಿರದು; ಆದರೆ ವಿಷಯಗಳನ್ನು ಸಂಗ್ರಹಿಸಿ ಜೋಡಿಸುವುದರಲ್ಲಿ ಒಂದು ವಿಶಿಷ್ಟ ಕ್ರಮವಿರುವುದರಿಂದ, ಓದುಗರು ತಮ ತಮಗೆ ಇಷ್ಟವಿರುವ ವಿಭಾಗಗಳನ್ನು ಬೇಗನೆ ಕಂಡುಕೊಳ್ಳಲು ಸುಲಭವಿದೆ.

ಅಚ್ಚಾಗುವ ಪ್ರತಿಗಳ ಸಂಖ್ಯೆಯ ದೃಷ್ಟಿಯಿಂದಾದರೆ, ಟ್ಯಾಮ್ಸಿನ ಪ್ರಸರಣ ಅಷ್ಟೇನೂ ಅಗಾಧವಾದುದೆಂದು ಹೇಳುವಂತಿಲ್ಲ; ಆದರೆ ಅದು ಎಷ್ಟೊಂದು ಕುಟುಂಬಗಳಲ್ಲಿ ಎಡೆಮಾಡಿಕೊಂಡಿದೆಯೆಂಬುದೇ ಮುಖ್ಯ. ಹಾಗೆ ವಿವೇಚಿಸಿದರೆ, ಅದರ ಪ್ರಚಾರ ಸಾಮರ್ಥ್ಯ ತೀರ ಮಹತ್ವದ್ದೆನ್ನಬೇಕಾಗುತ್ತದೆ.

ಯುದ್ಧಕಾಲದಲ್ಲಿ ಕಾಗದದ ಅಭಾವ ಉಂಟಾಗಿದ್ದಾಗ, ಉಳಿದ ಪತ್ರಿಕೆಗಳು ಪುಟಗಳನ್ನು ಕಡಿಮೆ ಮಾಡಿ ಅದಷ್ಟುಮಟ್ಟಿಗೆ ಪ್ರತಿಗಳ ಸಂಖ್ಯೆಯನ್ನು ಹೆಚ್ಚಿಸಲು ಯತ್ನಿಸಿದರೆ, ಟ್ಯಾಮ್ಸ್ ಪತ್ರಿಕೆ ಕಡಿಮೆ ಪ್ರತಿಗಳನ್ನು ಅಚ್ಚು ಹಾಕಿಸಿತೇ ಹೊರತು ಪುಟಸಂಖ್ಯೆಗೆ ಅಷ್ಟೊಂದು ಕಡಿತ ಹಾಕಲಿಲ್ಲ.

೧೯೨೨ ರಲ್ಲಿ ಪತ್ರಿಕೆಯ ಒಡೆತನವನ್ನು, ಅದರ ಸ್ಥಾಪಕನ ಮರಿಮೊಮ್ಮಗನಾದ ಜಾನ್ ವಾಲ್ಟರ್ ಮತ್ತು ಕರ್ನಲ್ ಆಸ್ಟರ್ ಎಂಬವರು ವಹಿಸಿಕೊಂಡರು.

ಕಾಸುಳ್ಳವರ ಪ್ರಭಾವಕ್ಕೆ ಸೆರೆಬಿದ್ದು, ಆಗಾಗ ಕೈ ಬದಲಾಯಿಸಿ ಪತ್ರಿಕೆ ಅಲ್ಪರ ಪಾಲಾಗಿ ಹೋಗದಂತೆ, ಈಗ ಒಂದು ವ್ಯವಸ್ಥೆ ಮಾಡಲಾಗಿದೆ. ಇಂಗ್ಲೆಂಡಿನ ರಾಯಲ್ ಸೊಸೈಟಿಯ ಅಧ್ಯಕ್ಷರು, ಬ್ಯಾಂಕ್ ಆಫ್ ಇಂಗ್ಲಂಡಿನ ಗವರ್ನರರು, ಹಾಗೂ ಇಂಗ್ಲಂಡಿನ ಪ್ರಧಾನ ನ್ಯಾಯಾಧೀಶರನ್ನೊಳಗೊಂಡ ಸಮಿತಿಯೊಂದು ರಚಿಸಲ್ಪಟ್ಟಿದೆ. ಈ ಸಮಿತಿಯ ಅನುಮತಿಯಿಲ್ಲದೆ ಪತ್ರಿಕೆಯನ್ನು ಮಾರಾಟ ಮಾಡುವಂತಿಲ್ಲ. ಹಲವಾರು ವಿಷಯಗಳಲ್ಲಿ ವೃತ್ತಪತ್ರಿಕಾ ಪ್ರಪಂಚಕ್ಕೆ ಮೇಲಪಂಕ್ತಿ ಹಾಕಿಕೊಟ್ಟ ಈ ಪತ್ರಿಕೆ, ಈ ರೀತಿ ತನ್ನ ಸ್ವಾತಂತ್ರ್ಯವನ್ನೂ ಗೌರವವನ್ನೂ ಭದ್ರಪಡಿಸಿಕೊಂಡು ಮಾದರಿಯಾಗಿದೆ.

ಫ್ಲೀಟ್‌ಸ್ಟ್ರೀಟಿನ ಇತರ ಪತ್ರಿಕಾಲಯಗಳಂತೆ ಟ್ಯಾಮ್ಸ್ ಕಟ್ಟಡ ಅಗಾಧವಾದುದೇನೂ ಅಲ್ಲ; ಮನ ಸೆಳೆಯುವಂತಹದಲ್ಲ. ಆದರೇನಾಯಿತು. ಅದು ಬೆಳೆಸಿ ಕಾಪಾಡಿಕೊಂಡ ವೈಲಕ್ಷಣ್ಯ, ಅಂತಸ್ತು ಗೌರವಗಳ ದೃಷ್ಟಿಯಿಂದ, ಗಳಿಸಿದ ಕೀರ್ತಿಯ ದೃಷ್ಟಿಯಿಂದ, ಟ್ಯಾಮ್ಸ್ ಪತ್ರಿಕೆ ಅತ್ಯಂತ ಸತ್ತ್ವಶಾಲಿಯೆನಿಸಿಕೊಂಡು ಜಗತ್ತಿನ ಪತ್ರಿಕೆಗಳಲ್ಲಿ ಏಕಮೇವಾದ್ವಿತೀಯವೆಂಬಂತಿದೆ. ಇಂಗ್ಲಂಡಿನ ಜನರಿಗೆ, ಟ್ಯಾಮ್ಸ್ ಬರಿಯ ಒಂದು ವೃತ್ತಪತ್ರಿಕೆಯಲ್ಲ; ಹೆಮ್ಮೆಪಡಬಹುದಾದಂಥ ಒಂದು ರಾಷ್ಟ್ರೀಯ ಸಂಸ್ಥೆಯಾಗಿದೆ. *

ಜಿ. ಪಿ. ಕೀರ್ ಮತ್ತು ಜಾರ್ಜ್ ಕೆಂಟ್‌ರವರ ಲೇಖನಗಳಿಂದ ಸಂಗ್ರಹಿತ :— **ಲೇಖಕ.**



⦿ ಚಿತ್ರಗಳು ⦿

(ಒಂದು ಕತೆ) *

ಶ್ರೀ. ಕೆ. ಜಿ. ನಾಯಕ, ಹೈದರಾಬಾದ್.

★

ಮಾನವಜೀವನ, ಸಂಸ್ಕೃತಿ-ವಿಕೃತಿಗಳ ಸಂಮಿಶ್ರ-ಸಂಸಾರ! ದೀನ-ದರಿದ್ರರಿಗಾಗಿ ಮರುಗಿ ಮೊರೆಯಿಡು-ವುದನ್ನೂ ಕಾಣಬಹುದಿಲ್ಲ; ದೀನ-ದರಿದ್ರರ ದುಃಖವನ್ನು ಗಣಿಸದೆ, ಅವರಿಂದ ಸ್ವಾರ್ಥ-ಸಾಧಿಸಬಯಸುವ ಕಾಮುಕವೃತ್ತಿಯನ್ನೂ ನೋಡಬಹುದಿಲ್ಲ!

★

ದಂಡೆಯ ಮೇಲೆ ಕುಳಿತು ಒಂದೊಂದೇ ಹರಳುಗಳನ್ನು ನೀರಲ್ಲಿ ಒಗೆಯತೊಡಗಿದ್ದಳು. ಆ ಹರಳುಗಳು ನೀರಿಗೆ ತಗುಲಿ ಹುಟ್ಟುವ ಸಣ್ಣ ಸಣ್ಣ ತೆರೆಗಳು, ಅದೇಕೋ—ಅವಳ ಮನಸ್ಸಿಗೆ ಆನಂದ-ವನ್ನು ಕೊಡಹತ್ತಿದ್ದುವು. ನೀರಿನ ಮೇಲ್ಭಾಗದಿಂದ ಹುಟ್ಟುವ ದುಂಡುದುಂಡಾದ ತೆರೆಗಳು, ತಿರುಗುತ್ತ ತಿರುಗುತ್ತ ಹೋಗಿ ದಂಡೆಗೆ ಬಡಿಯುವುದನ್ನು ನೋಡಿ, ಅವಳಿಗೆ ಸ್ವಲ್ಪ ಉದಾಸೀನತೆ ಹುಟ್ಟುತ್ತಿತ್ತು. ಗುಣುಗುಣಿಸತೊಡಗುವಳು! "ನಾನು ಕೂಡ ಒಂದು ತೆರೆಯಂತೆ ಇದ್ದೇನೆ. ಲೋಭ ಮತ್ತು ಮೋಹದ ಕಲ್ಲಿನ ದಂಡೆಗೆ ಬಡಿದು, ಒಂದುದಿನ ಮೃತ್ಯುವಿನ ಅಂತರಾಳದಲ್ಲಿ ಲೀನಳಾಗಿ-ಬಿಡುತ್ತೇನೆ."

ದಂಡೆ ಮತ್ತು ತೆರೆಗಳ ಕಣ್ಣುಮುಚ್ಚಾಲೆಯಾಟ, ಅವಳನ್ನು ವರ್ತಮಾನದಿಂದ ಬಹುದೂರ ಒಯ್ದು ಒಗೆಯಿತು. ತನ್ನ ಹಿಂದಿನ ಜೀವನದ ಚಿತ್ರಗಳು, ನಡುಗುತ್ತ ತೆರೆತೆರೆಯಾಗಿ ಅವಳ ಕಣ್ಣೆದುರಿಗೆ ಬರಲು ತೊಡಗಿದುವು. ಒಂದು ಕಾಲಕ್ಕೆ ಅವಳ ಜೀವನದಲ್ಲಿ ಸುಖ, ಶಾಂತಿ, ಸಂತೋಷಗಳು ನಲಿದಾಡುತ್ತಿದ್ದುವು. ಪತಿಯ ಪ್ರೇಮ, ಮಾತೆಯ ಮಮತೆ, ತಂದೆಯ ಸ್ನೇಹ ಇವನ್ನೆಲ್ಲ ಕಂಡಿದ್ದಳು.

ಚಲಚ್ಚಿತ್ರದ ಪಟ್ಟಿಯಂತೆ, ಕೂಡಲೇ ಅವಳ ವಿಚಾರಗಳ ಸಾಲು ಕತ್ತರಿಸಿತು. ಆ ಸುಖ-ಶಾಂತಿಯಲ್ಲಿ, ಸ್ಥಿರವಾದ ಜೀವನ-ದಲ್ಲಿ, ಹರಳುಗಳು ಕೋಲಾಹಲವನ್ನೆಬ್ಬಿಸಿದುವು.

ದೀಪಗಳು ನಂದಿದುವು. ಕತ್ತಲು—ಕಾರ್ಗತ್ತಲು ಹಬ್ಬಿತು. "ಹೊಡೆ, ಬಡಿ, ಕಡಿ, ಕತ್ತರಿಸು, ಬೆಂಕಿಯಿಡು!" ಓಡಾಟ, ಚೀರಾಟ, ಹೆದರಿಸುವುದು, ಉಪದ್ರವ ಕೊಡುವುದು—ಅವ್ಯಾಹತ-ವಾಗಿ ನಡೆದುವು. ಸ್ತ್ರೀಯರ ಆರ್ತನಾದ, ಮಕ್ಕಳ ಚೀತ್ಕಾರಗಳು ಕಿವಿ ಗಡಚಿಕ್ಕುವಂತೆ ಮಾಡಿದುವು. ಬರುಬರುತ್ತ ಏರಾಟ ತಣ್ಣಗೆ ಆಯಿತು; ಇದೆಲ್ಲವೂ ಕಡಿಮೆಯಾಗುತ್ತ ನಡೆಯಿತು. ಮನೆಗಳು ಮಣ್ಣಿನ ಗುಂಪೆಗಳಾದುವು. ಗುಡಿಸಿಲುಗಳು ಭಸ್ಮವಾದುವು. ಸಾವಿರಾರು ಮಾನವಜೀವಿಗಳು ಮರಣವನ್ನಪ್ಪಿದರು.

ಮಾನಿನಿಯರ ಮುಗುಳುನಗೆ, ಕಣ್ಣೀರು ಮತ್ತು ಶೋಕದಲ್ಲಿ ಪರಿವರ್ತನೆಯಾಗಿತ್ತು.

ಆನಂದದ ಆಲಾಪ, ಮರಣದ ದುಃಖದ ರಾಗದಲ್ಲಿ ಪರಿಣಮಿ-ಸಿತ್ತು.

ಪೈಶಾಚಿಕ ಜ್ವಾಲಾಮುಖಿಯು ಉಗುಳಿದ ಲಾವಾರಸವು, ಹಸಿದು ತುಂಬಿದ ಹೊಲಗಳನ್ನಷ್ಟೇ ಸುಟ್ಟಿರಲಿಲ್ಲ. ಮನುಷ್ಯತ್ವದ ಮೋರೆಯನ್ನೇ ಹುರುಪಳಿಸಿಬಿಟ್ಟಿತ್ತು.

ಮನುಷ್ಯ ಓಡಹತ್ತಿದ. ತನ್ನಂತೆಯೇ ಮನುಷ್ಯನಾಗಿದ್ದವನ ಅತ್ಯಾಚಾರದಿಂದ ಹೆದರಿ, ಮರಣದಿಂದ ದೂರ—ರಕ್ಷಣೆಯ ಶೋಧದಲ್ಲಿ ಹೊರಟಿದ್ದ.

ಹೊತ್ತಿಗೆ ತಕ್ಕಂತೆ ಅವಳೂ ನಡೆಯಬೇಕಾಯಿತು. ಜೀವ ಮರಸಿಕೊಂಡು ಅವಳೂ ಓಡಿದಳು; ಓಡೋಡಿ ಕಡೆಗೆ ಪೀಡಿತರ—ದುಃಖಿಗಳ—ಒಂದು ಗುಂಪನ್ನು ಸೇರಿದಳು.

ಜೀವವನ್ನು ಬಲಿಕೊಟ್ಟ ಗಂಡ, ತಂದೆ, ತಾಯಿಗಳನ್ನೂ ಕಳೆದುಕೊಂಡು, ಮನೆ-ಮಠಗಳನ್ನೂ ತೊರೆದು, ಹೊರ ಹೊ-ರಟಿದ್ದಳು. ಮಾನವನೇ ಮಾನವನ ಕೊಲೆಗೆ ಕಾರಣನಾಗಿದ್ದ.

ಕತ್ತಿ, ಭಾಲೆ, ಬಂದೂಕು, ಬಾಂಬು, ರಾಷ್ಟ್ರೀಯ ಮತ್ತು ಧಾರ್ಮಿಕ ವಿಜಯಘೋಷಣೆಗಳ ಜೋಗುಳಪದದಿಂದ ಅವ-

---

* ಶ್ರೀ. ಆಯಾಜ್ ಅಸ್ಮಿಯವರ ಹಿಂದೀಕತೆಯೊಂದರ ಅನುವಾದವಿದು. ಲೇ.



ಆನಂದ ಗ್ರಂಥಮಾಲಾ, ಹುಬ್ಬಳ್ಳಿ.

ಜಿನೆತ್ : ಗಾಯ. ದ. ಮೊಪಾಸಾನ ರಸಮಯ ಶೃಂಗಾರರಸ-ಪ್ರಧಾನ ಕಾದಂಬರಿ— ಇದೇ ಜುಲೈ ಕೊನೆಯಲ್ಲಿ ಪ್ರಕಟವಾಗಲಿದೆ.

ಸಾದಾ ಪ್ರತಿ ೧-೧೨-೦ ಉತ್ತಮ ಪ್ರತಿ ೨-೮-೦

ಕಾಂತಂ ಮತ್ತು ಶರದ್ರಾತ್ರಿಗಳು: ಹಾಸ್ಯಮಯ ಶೃಂಗಾರ ಜೀವನಚಿತ್ರಗಳು. ಈಗಾಗಲೇ ಪ್ರಕಟವಾಗಿ ಜನಪ್ರಿಯವಾಗಿದೆ.

ಸಾದಾ ಪ್ರತಿ ೧-೪-೦ ಉತ್ತಮ ಪ್ರತಿ ೨-೦-೦

ವಾರ್ಷಿಕ ಚಂದಾ ನಾಲ್ಕು ಪುಸ್ತಕಗಳಿಗೆ ಸಾಮಾನ್ಯ ರೂ. ೫-೦-೦
ವಿಶೇಷ ರೂ. ೬-೦-೦.

ಏಜಂಟರಿಗೆ ಮಾರಾಟಗಾರರಿಗೆ ಹೆಚ್ಚು ಕಮೀಶನ್.

ಪಿ. ವೆಂಕೋಬಾಚಾರ್ಯ— ಸಂಪಾದಕ,
ಗವಳಿಗಲ್ಲಿ— ಹುಬ್ಬಳ್ಳಿ.

ರೆಲ್ಲ ನಿದ್ದೆ ಹೋಗಿದ್ದರು. ಯಾರು ಮಲಗಿರಲಿಲ್ಲವೋ ಅವರಿಗೆ ಓಡುವ ಪ್ರಸಂಗ ಬಿತ್ತು.

ಪುನಃ ಈ ಚಿತ್ರದ ಹೊರಮೈ ಮಸಕಾಯಿತು. ಮತ್ತೊಂದು, ನಡುಗಿಸುವ ಭೀಕರ ಚಿತ್ರ ಅವಳೆದುರಿಗೆ ಬಂತು.

೨

ಪತಿ ಮತ್ತು ತಂದೆ-ತಾಯಿಯ ಶವಗಳನ್ನು ಅಲ್ಲಿಯೇ ಬಿಟ್ಟು ಒಬ್ಬಳೇ ಓಡಿ ಬಂದಿದ್ದಳು. ಅವಳಿಗೆ ಯೋಚನೆ ಬಂತು.

ಒಂದು ವೇಳೆ ನಾನು ಹೆಣಗಳನ್ನು ತಂದಿದ್ದರೆ, ನನ್ನ ಮುಂದಾಳುಗಳಿಗೆ—ನಾಯಕರಿಗೆ—ಆ ಶವಗಳನ್ನು ತೋರಿಸಿ ಹೇಳುತ್ತಿದ್ದೆ:—

"ಇಕೋ, ಇಲ್ಲಿದೆ ನಿಮ್ಮ ಸ್ವಾತಂತ್ರ್ಯದ ರಹಸ್ಯ! ಈ ಹೆಣಗಳನ್ನು ಮುಚ್ಚಿಟ್ಟು, ನಿಮ್ಮ ಇತಿಹಾಸ ಬರೆಯುವವರಿಗೆ ಎಚ್ಚರಿಕೆ ಕೊಡಿರಿ! ಈ ಹೆಣಗಳ ವಿಷಯಕ್ಕೆ ಮಾತ್ರ ಒಂದು ಚಕಾರ ಶಬ್ದವನ್ನೂ ಎತ್ತದಂತೆ ಹೇಳಿರಿ. ಏಕೆಂದರೆ ಮುಂಬರುವ ಪೀಳಿಗೆಯ ಯಾವುದೇ ವ್ಯಕ್ತಿ, ದೇಶದ ಇತಿಹಾಸದ ಪುಟಗಳನ್ನು ತಿರುವಿಹಾಕುವ ಕಾಲಕ್ಕೆ, ಈ ಹುತಾತ್ಮರ ವರ್ಣನೆಯನ್ನು ಓದಿದರೆ, ನಿಮ್ಮ ಪ್ರೀತಿಯ ಅನುಯಾಯಿಗಳು, ಕೂಡುದಾರಿಗಳಲ್ಲಿ, ಪಾರ್ಕಿನಲ್ಲಿ ನಿಲ್ಲಿಸಿದ ನಿಮ್ಮ ಮೂರ್ತಿಗಳನ್ನು, ಮುಸುಕಿನಿಂದ ಮುಚ್ಚಿ ಮರೆಮಾಡುವ ಪ್ರಯತ್ನ ಮಾಡಬಹುದು."

"ಆದರೆ............ಈ ಕೆಲವು ಶವಗಳನ್ನು ಮುಚ್ಚಿಡುವುದರಿಂದ ಏನಾದೀತು? ನಿಮ್ಮೆದುರಿಗೆ ಲಕ್ಷಗಟ್ಟಲೆ ಅಡ್ಡಾಡುವ ಸಜೀವ ಹೆಣಗಳು ನಿಂತು ಬಿಕ್ಕೆ ಬೇಡಹತ್ತಿವೆ."

"ಆದರೆ ನೀವು ನಿಮ್ಮ ಎತ್ತೆತ್ತರ ಭವನಗಳ ಕಿಟಕಿಗಳನ್ನು ಮುಚ್ಚಿಟ್ಟಿದ್ದೀರಿ. ನಿಮ್ಮ ದೊಡ್ಡ ದೊಡ್ಡ ಬಾಗಿಲುಗಳ ಎದುರಿಗೆ ಲೋಹದ ಅಸ್ತ್ರಗಳ ಕಾವಲು ಇಟ್ಟಿದ್ದೀರಿ. ಅದಕ್ಕೆ ಕಾರಣ, ಯಾರ ಹತ್ಯೆ ನೀವು ಮಾಡಿದ್ದೀರೋ, ಅವರೊಳಗಿನ ಯಾವುದೇ ಒಂದು ಅಶಾಂತ ಆತ್ಮ ನಿಮ್ಮ ಅರಮನೆಯಲ್ಲಿ ನುಗ್ಗೀತು—ಎಂಬ ಭಯ. ಆ ಹೆಣಗಳ ಚೀತ್ಕಾರವನ್ನು ಗುಂಡಿನ ಸಪ್ಪಳದಲ್ಲಿ ಅಡಗಿಸಿಡುವ ಪ್ರಯತ್ನ ನಡೆಸಿದ್ದೀರಿ."

....ನಿನ್ನಿನ ಒಂದು ಚಿತ್ರ ಅವಳೆದುರಿಗೆ ಎದ್ದು ಬಂತು.

ನಿನ್ನೆ ಲಕ್ಷಗಟ್ಟಲೆ, ಲೂಟಿಗೆ ಗುರಿಯಾದ, ದುಃಖೀ ಜನರು ಯಾವಾಗ ಈ ಊರಲ್ಲಿ ಪ್ರವೇಶಿಸಿದರೋ ಆಗ, ಅವರ ಕೈಯಲ್ಲಿ ಕೈ ಕೊಟ್ಟು, ಪ್ರೀತಿಯಿಂದ ಬರಮಾಡಿಕೊಂಡರು. ಅವರ ಸಲುವಾಗಿ ರಿಲೀಫ್‌ಫಂಡು, ಕ್ಯಾಂಪು, ಚಂದಾ ನಡೆಯಿತು. ಕೆಲವೆ ದಿನಗಳು ಉರುಳಿದುವು. ಪುನಃ ಹಸಿವು,—ಬೇಕಾರಿತನ ಹೆಚ್ಚಿತು. ಎರಡನೆಯವರ ಕಡೆಗೆ ಹೊರಳಿ ನೋಡುವ ಸಹಾನುಭೂತಿ ಕೂಡ ತಣ್ಣಗಾಗುತ್ತ ನಡೆಯಿತು. ಸೇವೆ, ಒಳ್ಳೆಯತನ, ಸಹಾನುಭೂತಿಯ ಸ್ಥಳಗಳನ್ನು ಹೊಲಸು ಸ್ವಾರ್ಥ, ಮತ್ತು ಪಾಪಗಳು ಆಕ್ರಮಿಸಿದುವು.

ಆ ಮಧ್ಯಾಹ್ನದ ಹೊತ್ತು! ಅದನ್ನು ಅವಳು ಹೇಗೆ ಮರೆತಾಳು. ಕ್ಯಾಂಪಿನ ಒಬ್ಬ ಸ್ವಯಂಸೇವಕ ಕಣ್ಣು ಚಿಮ್ಮಟಿ, ಒಂದು ಕುಟಿಲ ಸಂಜ್ಞೆಯಿಂದ ಅವಳನ್ನು ತನ್ನೆಡೆಗೆ ಕರೆದಾಗ, ಒಂದು ವಿಷಪೂರಿತ ನಗೆ ಅವಳ ತುಟಿಯ ಮೇಲೆ ಸುಳಿದಾಡಿ, ಅವನೆಡೆಗೆ ಹೋಗಿ "ಅಣ್ಣಾ, ನಿನಗೇನಾದರೂ ಹೇಳುವುದಿದೆಯೋ?" ಎಂದು ಕೇಳಿದರೆ, ಸ್ವಯಂಸೇವಕ ಮೋರೆ ತಿರುವಿ ಕಿಸಕ್ಕೆಂದು ನಕ್ಕ.

"ಪಿಶಾಚಿ ನೀನು!" ಅವಳ ಬಾಯಿಂದ ಹೊರಟಿತು. ಯೋಚಿಸಿದಳು: "ನನ್ನ ಸ್ಥಳದಲ್ಲಿ ಇವನ ಅಕ್ಕ ಅಥವಾ ತಂಗಿ ಇದ್ದರೂ ಈ ಹುಡುಗ ಇದರಂತೇ ಮಾಡುತ್ತಿದ್ದ." ಈ ರೀತಿ ಬಡಬಡಿಸಿ, ಅವಳು ತನ್ನ ಮನಸ್ಸನ್ನು ಹಿಡಿತದಲ್ಲಿ ತಂದುಕೊಂಡಳು. ಮೆಲ್ಲ ಮೆಲ್ಲನೆ ಅವಳು ಈ ಅನುಭವವನ್ನು ಕಂಡಳು: ಹೆಚ್ಚಾಗಿ ಜನರು ಶರಣಾರ್ಥಿಗಳ ವಿಷಯಕ್ಕೆ ಸಹಾನುಭೂತಿಯು ಈ ರೀತಿ ನೋಗುಹಾಕಿದ್ದಾರೆ; ಏನೆಂದರೆ ಅವರಿಗೆ ಚೇಷ್ಟೆ ಮಾಡಬೇಕು, ಅವರ ಹತ್ತಿರ ಹರಿದ ಚಿಂದಿಯುಟ್ಟ ಹರಯದ ಹೆಣ್ಣುಗಳಿದ್ದಾರೆ; ಅವರಿಗೆ ಮೋಸದ ಆಶ್ರಯಕೊಟ್ಟು ಒಲಿಸಿಕೊಂಡು, ತಮ್ಮ ರಾತ್ರಿಯ ರಾಣಿಯರನ್ನಾಗಿ ಮಾಡಿಕೊಳ್ಳಬೇಕೆಂದು ತಿಳಿದಿದ್ದಾರೆ.

ಅವಳು ಹಾಗೆಯೇ ಯೋಚಿಸುತ್ತ ಹೊರಟಳು. ದೇಶದಲ್ಲಿ ಯಾವುದೇ ವಿಪತ್ತು ಬಂದರೂ, ಅದು ಈ ಎತ್ತರ ಬಂಗಲೆಗಳ ಸ್ವಾರ್ಥೀ ಜನರ ಫಲಸ್ವರೂಪವಾಗಿಯೇ. ಅವಳ ಕಣ್ಣೆದುರಿಗೆ ಬಂಗಾಲದ ಭಯಂಕರ ಬರಗಾಲದ ಚಿತ್ರ ಕುಣಿಯಹತ್ತಿತು. ಯಾವ ಪ್ರಕಾರ ಈ ಜನರು, ಒಂದು ದೊಡ್ಡ ಜನಸಂಖ್ಯೆಯ

ಬಾಯಿಂದ ತುತ್ತನ್ನು ಕಸಿದುಕೊಂಡು ಅದನ್ನು ಬಂಗಾರದ ಪಟ್ಟಿಯ ರೂಪದಲ್ಲಿ ಅಕ್ಕನ ತಿಜೋರಿಯನ್ನು ತುಂಬಿದರು? ಲಕ್ಷಾವಧಿ ಜನರು ಕೂಳು ಕೂಳೆಂದು ಹೊಟ್ಟೆ ಬಡಿದುಕೊಂಡು ರಸ್ತೆಯಲ್ಲಿ ಸಾಯಲಿಲ್ಲವೆ? ಇವರ ಸೆರಗಿಗೆ ಎಷ್ಟು ಹಸಿದ ಹರೆಯದ ಹೆಣ್ಣುಗಳ ಸತೀತ್ವದ ರಕ್ತದ ಕಲೆಗಳು ಹತ್ತಿರಲಿಕ್ಕಿಲ್ಲ? ಹಿಂದಿನಿಂದ ಇಂದಿನವರೆಗೆ, ಈ ಅರಮನೆಗಳು ಗುಡಿಸಿಲುಗಳಿಗೆ ಮೋಸ ಮಾಡುತ್ತಲೇ ಬಂದಿವೆ. ಈ ಮಣ್ಣಿನ ಗುಡಿಸಿಲುಗಳಲ್ಲಿ ಜೀವಿಸುವ ಪ್ರಾಣಿ ನಿಜವಾಗಿಯೂ ಮಣ್ಣಿನ ಮೂರ್ತಿಯೇ ಆಗಿರಬೇಕು.

ಒಂದು ಶರಣಾರ್ಥಿಗಳ ಕೂಸು ಹಸಿವಿನಿಂದ ಒದ್ದಾಡಿ ಚೀರಹತ್ತಿತು. ಅವಳ ವಿಚಾರಧಾರೆ ಕತ್ತರಿಸಿತು. ಆ ಎಳೆಯ ಪ್ರಾಣಿಗೆ ಹಾಲು ಎಲ್ಲಿಂದ ಸಿಗಬೇಕು? ತಾಯಿಯ ಮೊಲೆಯಿಂದ—ಅವಳ ಹಸಿವು—ಹನಿಹನಿಯೂ ಬಿಡಲಾರದಂತೆ ಹೀರಿಕೊಂಡು ಬಿಟ್ಟಿತ್ತು. ನಿನ್ನೆಯವರೆಗೆ ಅದರ ತಂದೆ-ತಾಯಿಗಳು ಎರಡನೆಯ ಕೂಸುಗಳ ವಿಷಯಕ್ಕೆ ಮರುಗಿ ತಳಮಳಿಸುತ್ತಿದ್ದರು. ಆದರೆ ಈ ಹೊತ್ತು ತನ್ನ ಮಗು ಹಸಿವಿನಿಂದ ಚೀರಿಕೊಳ್ಳಹತ್ತಿದರೆ, ಅವರು ಕಲ್ಲಿನ ಮೂರ್ತಿಯಂತಿದ್ದಾರೆ.

೩

ಪುನಃ ಅವಳ ವಿಚಾರಧಾರೆ ಮುನ್ನಡೆಯಿತು. ಅವಳೆದುರಿಗೆ ಮತ್ತೊಂದು ಪ್ರಶ್ನೆ ಧುತ್ತೆಂದು ನಿಂತಿತು.

"ನೀವು ಒಬ್ಬರೇ ಈ ಖೋಲಿಯಲ್ಲಿ ವಾಸಿಸಲಾರಿರಿ. ಇದರಿಂದ ಕ್ಯಾಂಪಿಗೆ ಕೆಟ್ಟ ಹೆಸರು ಬರುವ ಸಂಭವವಿದೆ. ನೀವು ಸ್ವಲ್ಪ ಆಫೀಸಿನೊಳಗೆ ನಡೆಯಿರಿ!" ಎಂದು ಕ್ಯಾಂಪಿನ ಅಧಿಕಾರಿ ಹೇಳಿ ಮುನ್ನಡೆದ. ತನ್ನ ಗಂಟಿನಲ್ಲಿ ಇದ್ದುದರಲ್ಲೇ ಸ್ವಲ್ಪ ಸ್ವಚ್ಛವಾಗಿದ್ದ ಸೀರೆಯೊಂದನ್ನು ಉಟ್ಟು, ಆಫೀಸಿನ ಖೋಲಿಯಲ್ಲಿ ಬಂದು ನಿಂತಳು.

"ಇದು ನೋಡಿರಿ, ನಾನು ಕಾಯಿದೆಗೆ ಬದ್ಧನಾಗಿರಬೇಕಾಗುತ್ತದೆ. ಒಂದೇ ವ್ಯಕ್ತಿಗೆ ಇಡೀ ಒಂದು ಖೋಲಿಯನ್ನು ಕೊಡಲಾಗುವುದಿಲ್ಲ!" ಎಂದು ಅಧಿಕಾರಿ ಹೇಳಿದ.

"ಹಾಗಾದರೆ ನಾನೆಲ್ಲಿ ಹೋಗಬೇಕು?"......

"ನಾನು ಅದನ್ನು ಶೀಘ್ರ ನಿಮ್ಮ ಸಲುವಾಗಿ ಒಂದು ಮನೆಯನ್ನು ನೋಡುತ್ತೇನೆ. ಒಂದು ವೇಳೆ ನೀವು ತಪ್ಪು ತಿಳಿದುಕೊಳ್ಳದಿದ್ದರೆ, ನಾನು ನನ್ನ ಮನೆಯ ಒಂದು ಖೋಲಿಯನ್ನು— ನಿಮ್ಮ ಸಲುವಾಗಿ ಮಾತ್ರ— ಖಾಲಿಮಾಡಿ ಕೊಡುತ್ತೇನೆ......ಸದ್ಯಕ್ಕೆ ನನ್ನ ಅಭಿಪ್ರಾಯ ಹೀಗಿದೆ......."

"ಸ್ವಾಮೀ, ಈ ನಿಮ್ಮ ಉಪಕಾರಕ್ಕೆ ಧನ್ಯವಾದಗಳು" ಅವಳು ಅಧಿಕಾರಿಯ ಮಾತನ್ನು ಅಲ್ಲಿಗೇ ನಿಲ್ಲಿಸಿದಳು. ಅವಳ ಮೋರೆಯ ಗೆರೆಗಳು, ದುಃಖ ಮತ್ತು ಸಿಟ್ಟಿನ ಪ್ರದರ್ಶನ ಮಾಡಹತ್ತಿದುವು.

ತನ್ನ ಸದ್ಯದ ಪರಿಸ್ಥಿತಿಯ ಅರಿವಾಗಿ ತಲೆಯನ್ನು ಕೆಳಗೆ ಹಾಕಿದಳು. ಅವಳ ತಪ್ತ ಭಾವನೆಗಳನ್ನು ಪರಿಸ್ಥಿತಿ, ಬರ್ಫಿನ ಗುಡ್ಡದ ಕೆಳಕ್ಕೆ ಅದುಮಿ ಬಿಟ್ಟಿತ್ತು. "ನಿಮ್ಮ ಮನಸ್ಸಿಗೆ ಬಂದಂತೆ...." ಮತ್ತೇನು ವಿಚಾರ ಬಂತೋ ಅವಳಿಗೆ; ತಲೆ ತಗ್ಗಿಸಿ ಆಫೀಸಿನಿಂದ ಹೊರಹೊರಟಳು.

ಕ್ಯಾಂಪು ಬಿಡುವ ಮುನ್ನ ಅವಳು ಸುತ್ತಲೂ ಒಮ್ಮೆ ದೃಷ್ಟಿ ಹಾಕಿದಳು. ಆ ಗುಡಿಸಿಲುಗಳನ್ನೂ, ಕಲ್ಲಿನ ತುಂಡುಗಳನ್ನೂ ಅಲ್ಲಿಯ ಜನರನ್ನೂ ಒಂದು ದಯಾಪೂರಿತದೃಷ್ಟಿಯಿಂದ ನೋಡಿದಳು. ಗಲ್ಲದ ಮೇಲೆ ಕಣ್ಣೀರ ಹನಿಗಳು ಉದುರಿದುವು. ಒಂದು ಕಾಲಕ್ಕೆ ಇಲ್ಲಿ ಮನುಷ್ಯರು ವಾಸಿಸಿರಬಹುದು. ಆದರೆ ಇಂದು "ರಿಫ್ಯೂಜಿ" ಇದ್ದಾರೆ. ಅದೇಕೆ ಈ ಜನರು, ಹೊಲಸು ಹುಳುಗಳಂತೆ ಸದ್ಯದ ನೀಚ ಜೀವನದಿಂದ ಸಂತುಷ್ಟರಾಗಿದ್ದಾರೋ!

ಅಲ್ಲಿ ವಾಸಿಸುವವರ ಮೋರೆಯ ಮೇಲೆ ಮರಣದ ಛಾಯೆ ಹಬ್ಬಿತ್ತು. ಅಲ್ಲಿಯ ವಾತಾವರಣದಲ್ಲಿ ಒಂದು ನಿಃಶಬ್ದತೆ ಹೆಚ್ಚಿತ್ತು.

—o—

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ.ವಿ. ಪಂಡಿತರ

ಮನೋಹರ {ನೀಲಿ} ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ {ಜೀವಿನಿ} ಟಾನಿಕ್.

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ {ಪಂಚವಟಿ} ರಾಮಬಾಣ.

ಸದ್ವೈದ್ಯ ಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರ್ಖಾನೆ.

ಪಥಿಕ

ಶ್ರೀ. ಚೆನ್ನವೀರ ಕಣವಿ, ಧಾರವಾಡ

●

ಯಾವ ಋತುವಿನೊಳಂತು ಕನಸುಕಂಡಳೊ ಪೃಥಿವಿ
ಆಕೆಬೀಜಗಳೆನಿತೊ ಮಡಿಲೊಳಿರಿಸಿ—
ಮೊಳೆಯುರೂಪದಿ ಮುಗಿಲು ಮುತ್ತಿಡಲು ಮತ್ತೀರಿ
ಹೊತ್ತು ನಿಂತಿಹಳವಿತ ವೃಕ್ಷರಾಶಿ.

ಮಾವು ಬೇವೂ ತೆಂಗು ಕೌಂಗು ನೇರಳೆ ಹಲಸು
ಹುಣಿಸೆ ಹುಲುಗಲ ತಾಳೆ ಬಾಳೆಯಂತೆ—
ಮಾಧವಿ ತಮಾಲ ಮಾಲತಿ ಹೊಂಗೆ ಶ್ರೀಗಂಧ
ಸೀತಾಳೆ ಬಕುಳ ಸಂಪಿಗೆಗಳಂತೆ!

ದೇವಕನ್ನೆಯರಿಳೆಗೆ ಇಳಿತಂದು ಗುಟ್ಟಿನಲಿ
ತೊಟ್ಟಿಲನು ತೂಗಿ ಹೆಸರಿಟ್ಟರೇನೊ!
ಹೆಸರಿಲ್ಲದೆಯು ಹಸಿರ ಚಿಮ್ಮಿಸುವ ಪಸದನಕೆ
ಜುಮ್ಮೆಂದು ಮನಸೋತು ಬಿಟ್ಟರೇನೊ!

ಇಲ್ಲಿ ಬಣ್ಣದ ತಳಿರ ತುಟಿಯಲ್ಲಿ ಹೂನಗೆಯು,
ಅಲ್ಲಿ ಹಣ್ಣಿನ ಗೊನೆಗೆ ಗಿಣಿಗಳೆರಡು!
ಸೀಳುದಾರಿಯ ಬದಿಗೆ ಸಾಲು ಮರಗಳ ನೆಳಲು
ಗಾಳಿಯೂದುವ ಕೊಳಲು — ಹಕ್ಕಿಹಾಡು.

ಜಗದ ನೂರೆಂಟು ತೆರ ಕಲಹ ಕಂಟಕಗಳಿಗೆ
ತಾವು ಕಾರಣವಲ್ಲವೆಂಬ ಹಾಗೆ
ಹುಲ್ಲುಮೇಯುವ ಹಸುಗಳಲ್ಲಿ ಮೆಲುಕಾಡಿಸಿವೆ
ಹುಲ್ಲುಗದ್ದೆಯು ತಮ್ಮದೆಂಬಹಾಗೆ.

ನೆಳಲ ಸೆರಗನು ಹಿಡಿದು ಬಿಸಿಲು ಮುಂದೋಡುತಿದೆ
ದೂರದೂರದ ತನ್ನ ಮನೆಯ ನೆನೆದು
ಬಿಳಿಯ ಮೋಡವದೊಂದು ಬೆಟ್ಟದುದಿಯಲಿ ನಿಂದು
ಎಲ್ಲಬಲ್ಲವರಂತೆ ಸುಮ್ಮನಿಹುದು.

ಬಾಳ ಬಿಸಿಲಲಿ ಬಳಲಿ ದಣಿದು ಬಂದಿಹ ಪಥಿಕ,
ಮರದ ತಣ್ಣೆಳಲೊಂದೆ ನಿನಗಾಸರು;
ಇಲ್ಲಿ ದಣಿವಾರಿ ಮನ ಶಾಂತಿಸಂತಸ ಪಡೆಯೆ
ಮುಂದೆ ನಡೆಯುವ ದಾರಿ ಎನಿತು ಹಗುರು!

ಪ್ರಕೃತಿ ತನ್ನೆದೆಯ ಮಧುವಾಟಿಕೆಯ ತೆರೆದಿರಲು
ಅದನು ತಣಿಹೀರದೆಯೆ ಸಾಗಬಹುದೆ?
ಯಾರಿಗೀ ಸುಂದರತೆ, ಯಾರಿಗೀ ಪರವಶತೆ?
ಯಾರ ಸುಖಕೀ ಸೃಷ್ಟಿ— ನಿನಗಲ್ಲದೆ?

ದಿವ್ಯದರ್ಶನ

ಶ್ರೀ. ಹಾಲಕೆರೆಯ ಅನ್ನದಾನಿ ಬಿ.ಎ. (ಆನರ್ಸ್), ಬೆಳಗಾಂವಿ

●

ಇದು ಏನು ಸೋಜಿಗವು ಹೆತ್ತಮ್ಮ ನಿನ್ನಲ್ಲಿ!
ಸಂತಸದ ಬುಗ್ಗೆ ಈ ಪುಟಿಯುವುದೆ ಏನಿಲ್ಲೀ!
ಚಿನ್ನ ಕಂಕಣವಿಟ್ಟ ಕೈಯ ಬೇಡಿಗಳು ಎಲ್ಲಿ!
ರನ್ನದುಡುಗೆಯನುಟ್ಟ ಹರಿದ ಚಿಂದಿಗಳ ಚೆಲ್ಲಿ!!
ಆಸರಿಲ್ಲದೆ ನೀನು ಹಿಂದೊಮ್ಮೆ ಬೇಸರಲಿ
ಕಣ್ಣಿನಲಿ ನೀರ್ತುಂಬಿ ಮೊಗವ ತೋರಿದೆ ಆಗ,
ಮನದಿ ಕಸವಿಸಿಗೊಂಡೆ ನಾ ಕಂಡು ನಿನ್ನ ಮೊಗ;
ಕಣ್ಣನೀರಿನ ಹೊಳೆಯು ಹರಿದಿತ್ತು ಕೆನ್ನೆಯಲಿ—

ಮಕ್ಕಳೀನಿವರು ಮೂವತ್ತು ಮೂರುಕೋಟಿ
ಎಂಬೊರಲಿದ್ದೆ ನೀಂ ಮನದ ತಂತಿಯ ಮೀಟಿ
ನಂದನವು ತೋರುತಿದೆ ಬೆಂದೆದೆಯ ಬಯಲಿನಲಿ
ಹರುಷವೆಂಬುವ ಬಳ್ಳಿ ಚೆಲ್ಲವರಿದಿಹುದಿಲ್ಲಿ;
ಏಕೆ ಹೇಳೌ ತಾಯೆ ನೀ ಬಂದ ಕಾರಣವು,
ಮನದ ಇಂಗಿತ ಪೇಳಿ ಮನದುಂಬಿ ನೀ ಹರಸು!

ಆಹ್ವಾನ

ಶ್ರೀ. ಎಸ್. ಎಸ್. ಬಸುಪಟ್ಟದ ಎಂ.ಎ., ಗುಳೇದಗುಡ್ಡ

●

ಬಣ್ಣಬಣ್ಣದ ಚಿಟ್ಟೆ ಕಣ್ಮುಂದೆ ಸುಳಿಸುಳಿದು
ಮನವ ಹೊಯ್ದಾಡಿಸಿತು ಕಣ್-ಸೆಳೆದು ಸೆರೆಹಿಡಿದು;
ಹಾದಿಗಾಣದೆ ಜೀವ ಅಲೆದಲೆದು ಸುತ್ತೆಲ್ಲ
ನೋವು- ನಲಿವನು ಉಂಡು ಪಡೆಯೆ ಶಕ್ತಿಯನೆಲ್ಲ
ಆತ್ಮವದು ಹುರಿಗೊಂಡು ವಿಶ್ವಾತ್ಮನೊಡಗೂಡಿ,
ದಿವ್ಯದೀಪ್ತಿಯನಾಂತು ದಿಕ್ಕೆಲ್ಲ ಅಲೆದಾಡಿ,
ಬಂದುದನು ಎದುರಿಸಲು ಸನ್ನದ್ಧವಾಗುವುದು;—
ಕೊನೆಯ ಕಾಳೆಗಕಾಗಿ ಕಾದು ನಿಲ್ಲುವುದು.

ಖಡ್ಗಪಾಣಿನಿಯಾಗಿ ಗಂಡುಗಚ್ಚೆಯ ಹಾಕಿ
ಕೋಪದಾವೇಶದಲಿ ಚಾಚಿ ಕೆನ್ನಾಲಗೆಯ
ದಂಷ್ಟ್ರಘರ್ಷಣರವದಿ ಗುಡುಗಿಟ್ಟು ಶಂಕಿನಿಯ
ಭೀಕರ ಭಯಾನಕತೆ ತೊಟ್ಟು ಬಾ ಢಾಕಿಣಿಯೆ!
ಪ್ರಳಯತಾಂಡವನೃತ್ಯ ವೈಖರಿಯ ಬೆಳಗು ಬಾ;
ಎದುರುಗೊಳ್ವುದು ಜೀವ ಬಾಳಸಂಗ್ರಾಮದಲಿ.

ರಾಯಿಟರ್ ವಾರ್ತಾ ಸಂಸ್ಥೆಯು

ಶತಮಾನೋತ್ಸವ ಮತ್ತು ಕತೆ

'ಭಾಸ್ಕರ'

卐

ಇಂದು ಜಗತ್ತಿನ ಎಲ್ಲ ಕಡೆಯ ಸುದ್ದಿ-ಸಂಗತಿಗಳನ್ನೂ ಜಗತ್ತಿನ ಮೂಲೆಮೂಲೆಗಳಿಗೂ ಕಳುಹುವುದರಲ್ಲಿ ಕೃತಾರ್ಥವಾದ ಸಂಸ್ಥೆಯೆಂದರೆ, ರಾಯಿಟರ್ ನ್ಯೂಜ್ ಏಜನ್ಸಿ. ದಾರಿದ್ರ್ಯದಲ್ಲಿಯೆ ಪ್ರಾರಂಭವಾದ ಈ ಸಂಸ್ಥೆ, ಇಂದು ಜಾಗತಿಕ ಪ್ರಾಶಸ್ತ್ಯಕ್ಕೆ ಪಾತ್ರವಾಗಿರುವುದರ ರಹಸ್ಯ ಏತರಲ್ಲಿದೆಯೆಂಬುದನ್ನು ನೋಡಿರಿ!

ಇದೇ ಜುಲಾಯಿ ತಿಂಗಳಲ್ಲಿ, ಲಂಡನ್ನಿನ ಫ್ಲೀಟ್ ಸ್ಟ್ರೀಟಿನಲ್ಲಿರುವ ರಾಯಿಟರ್ ಮುಖ್ಯ ಕಚೇರಿಯಲ್ಲಿ, ಪ್ರಪಂಚದಲ್ಲೆಲ್ಲ ದೊಡ್ಡದಾದ ವಾರ್ತಾಸಂಸ್ಥೆಯ ಶತಮಾನೋತ್ಸವ ಸಮಾರಂಭ ನಡೆಯಿತು. ಇದರಲ್ಲಿ ಭಾಗವಹಿಸಲು ಸಾವಿರಕ್ಕಿಂತ ಹೆಚ್ಚುಮಂದಿ ಪ್ರತಿನಿಧಿಗಳು—ವಿಶ್ವದ ಐವತ್ತು ದೇಶಗಳಿಂದ—ಬಂದಿದ್ದರು.

ಈ ಸಮಾರಂಭಕ್ಕಾಗಿ ಏರ್ಪಡಿಸಿದ್ದ ಸತ್ಕಾರ ಕೂಟದಲ್ಲಿ, ಲೋಕದ ಸುಪ್ರಸಿದ್ಧ ಪತ್ರಿಕೋದ್ಯಮಿಗಳೂ, ಸಂಪಾದಕರುಗಳೂ ಮಾತ್ರವಲ್ಲದೆ, ಬೇರೆ ಬೇರೆ ಉದ್ಯಮಗಳ—ಎಂದರೆ, ವಕೀಲಿ, ಸಾಹಿತ್ಯ, ಕೈಗಾರಿಕೆ, ವಿಜ್ಞಾನ, ಮನೋರಂಜನ ಮತ್ತು ಕ್ರೀಡಾಪ್ರಪಂಚ ಇವೆಲ್ಲವುಗಳ ಪಟುಗಳೂ ಹಾಜರಿದ್ದರು. ಸತ್ಕಾರಕೂಟದಲ್ಲಿ ಆಸ್ಟ್ರೇಲಿಯದ ಒಂದು ಸೂಪೂ, (Soup) ಭಾರತದಿಂದ ಆಗ ತಾನೇ ವಿಮಾನಮೂಲಕ ತರಿಸಿದ ಮಾವಿನ ಹಣ್ಣುಗಳೂ ಇದ್ದು, ಯುದ್ಧಾನಂತರ ಯೂರೋಪಿನಲ್ಲಿ ಎಂದೂ ಇಲ್ಲದಷ್ಟು ವಿಜೃಂಭಣೆಯಿಂದ ಭೋಜನ ಸಮಾರಂಭ ನಡೆಯಿತು.

ಬ್ರಿಟನ್ನಿನ ಮುಖ್ಯಮಂತ್ರಿ ಮಿ. ಕ್ಲೆಮೆಂಟ್ ಅಟ್ಲಿಯವರು, ಈ ಸಮಾರಂಭದಲ್ಲಿ ರಾಯಿಟರ್ ವಾರ್ತಾಸಂಸ್ಥೆಯನ್ನು, ಒಂದು ನೂರು ವರುಷಗಳ ಲೋಕಸೇವೆಗಾಗಿ ಅಭಿನಂದಿಸುತ್ತಾ, "ಇದು ನಿಜವಾಗಿಯೂ ಒಂದು ಅಪೂರ್ವಸಂಸ್ಥೆ; ಯಾಕೆಂದರೆ, ಇದು ಸರಕಾರ ಮತ್ತು ರಾಜಕೀಯಗಳ ಹಿಡಿತದಿಂದ ಸ್ವತಂತ್ರವಾದ ಸಂಸ್ಥೆ," ಎಂದು ಹೇಳಿದರು.

ಇಷ್ಟು ದೊಡ್ಡ ವಾರ್ತಾಸಂಗ್ರಹಣ ಮಾಡುವ ಮತ್ತು ವರದಿ ಮಾಡುವ ರಾಯಿಟರ್ ವಾರ್ತಾಸಂಸ್ಥೆಯು ಹೇಗೆ ಹುಟ್ಟಿತು, ಮತ್ತು ಕಳೆದ ನೂರು ವರುಷಗಳಲ್ಲಿ ತನ್ನ ಪ್ರಭಾವವನ್ನು ಹೇಗೆ ಬೆಳಸಿಕೊಂಡು ಬಂದಿದೆ—ಎಂಬುದನ್ನು ನಾವೀಗ ವಿಮರ್ಶಿಸೋಣ.

ಈ ವಾರ್ತಾಸಂಸ್ಥೆಯ ಸಂಸ್ಥಾಪಕನು, ಜ್ಯೂಲಿಯಸ್ ರಾಯಿಟರ್ ಎಂಬ ಜರ್ಮನಿ ದೇಶದ ಓರ್ವ ಯೆಹೂದ್ಯನು. ಈ ವಾರ್ತಾಸಂಸ್ಥೆಯನ್ನು ಸ್ಥಾಪಿಸುವ ಮೊದಲು ಇವನು ಬರ್ಲಿನ್ ಪಟ್ಟಣದಲ್ಲಿ ಬ್ಯಾಂಕ್ ಗುಮಾಸ್ತೆಯಾಗಿಯೂ ಪುಸ್ತಕ ವ್ಯಾಪಾರಿಯಾಗಿಯೂ ಕೆಲಸಮಾಡಿದ್ದಲ್ಲದೆ, ಪ್ಯಾರಿಸ್ಸಿನಲ್ಲಿ "ಹಾವಾಸ್" ಎಂಬ ವಾರ್ತಾಸಂಸ್ಥೆಯಲ್ಲಿ ಅನುವಾದಕನಾಗಿಯೂ ಕೆಲಸಮಾಡಿದ್ದನು. ಈತನಿಗೆ, ಲಂಡನ್ ನಗರದಲ್ಲಿರುವ ಹಣವ್ಯಾಪಾರಿಗಳಿಗೆ ಯೂರೋಪಿನ ಧಾರಣೆಗಳನ್ನೂ, ವಾರ್ತೆಗಳನ್ನೂ ತಿಳಿಸುವ ಕೆಲಸ ಲಾಭದಾಯಕವೆನ್ನಿಸಿತು. ೧೮೫೧ರಲ್ಲಿ ಜ್ಯೂಲಿಯಸ್‌ನು ಲಂಡನ್ನಿಗೆ ಬಂದು, ಎರಡು ಖೋಲಿಗಳನ್ನು ಬಾಡಿಗೆಗೆ ತೆಗೆದುಕೊಂಡು, ತನ್ನ ವಾರ್ತಾಯೋಜನೆಯನ್ನು ಪ್ರಾರಂಭಿಸಿದನು. ಇವನಿಗೆ ಸಹಾಯಮಾಡಲು ೧೨ ವಯಸ್ಸಿನ ಒಬ್ಬ ಹುಡುಗ ಮಾತ್ರ ಇದ್ದನು. ಆಗ ಟೆಲಿಫೋನ್‌ಗಳಿರಲಿಲ್ಲ. ಟೆಲಿಗ್ರಾಫ್ ಆಫೀಸಿನಿಂದ ಬಂದ ತಂತಿ-ಸಮಾಚಾರಗಳನ್ನು, ಇವನೂ ಆ ಹುಡುಗನೂ ಕೈಯಿಂದಲೇ ಬರೆದು, ಕಾಲ್ನಡಿಗೆಯಿಂದ ಹೋಗಿ, ತಮ್ಮ ಗಿರಾಕಿಗಳಿಗೆ ಮಾರಿ ಬರುತ್ತಿದ್ದರು.

ಆಗ ಈಗಿರುವಂತೆ, ಎಲ್ಲಾ ದೇಶಗಳಲ್ಲಿಯೂ ತಂತಿಯ ಸೌಕರ್ಯಗಳಿರಲಿಲ್ಲ. ಬ್ರಿಟನ್, ಫ್ರಾನ್ಸ್ ಮತ್ತು ಜರ್ಮನಿಗಳಲ್ಲಿ ಮಾತ್ರ ತಂತಿಯಸಮಾಚಾರ ಪದ್ಧತಿ ಇದ್ದಿತು. ಅಟ್ಲಾಂಟಿಕ್ ಸಾಗರದಾಚೆ, ಅಮೇರಿಕೆಗಾಗಲಿ, ಮೆಡಿಟರೇನಿಯನ್ ಸಮುದ್ರದ ತೀರದ ದೇಶಗಳಿಗಾಗಲಿ, ತಂತಿಯ ಸೌಕರ್ಯವಿರಲಿಲ್ಲ. ಏಷ್ಯ, ಆಸ್ಟ್ರೇಲಿಯ ಖಂಡಗಳಂತೂ ಬಹು ದೂರದಲ್ಲಿದ್ದುವು. ಸಮಾಚಾರವೆಲ್ಲವೂ ಸಾಮಾನ್ಯವಾಗಿ ಹಡಗುಗಳ ಮೂಲಕ—ಕೇವಲ ನಿಧಾನವಾಗಿ—ಪರಡಬೇಕಾಗಿತ್ತು. ಮೊದಮೊದಲು ಯಾವ

ವಾರ್ತಾಪತ್ರಿಕೆಯೂ ರಾಯಿಟರನ ಸಹಾಯವನ್ನಪೇಕ್ಷಿಸಲಿಲ್ಲ. ವಾರ್ತಾಪತ್ರಿಕೆಗಳಲ್ಲಿ ಅಭಿರುಚಿ ಹುಟ್ಟಿಸಲು ಈತನು ಬಹಳ ಹೆಣಗಾಡಬೇಕಾಯಿತು. ಆದರೂ ಎದೆಗುಂದದೆ, ಯೂರೋಪಿನಲ್ಲೆಲ್ಲ ತನ್ನ ಸುದ್ದಿಗಾರರ ಕಚೇರಿಗಳನ್ನು ಸ್ಥಾಪಿಸಿ, ಅವರಿಂದ ಬರುವ ಸುದ್ದಿಗಳನ್ನು ವ್ಯಾಪಾರಿಗಳಿಗಂತೂ ಹಂಚಿ, ಅವರ ಮನ್ನಣೆ ಪಡೆದನು. ೧೮೫೫ರಲ್ಲಿ ಒಂದು ದಿನ ಲಂಡನ್ನಿನ ಸ್ಟಾಕ್ ಎಕ್ಸ್‌ಚೇಂಜ್(ಹಣದ ಸಂತೆ)ಗೆ ರಾಯಿಟರ್ ಹುಡುಗನು "ಸೆಬಾಸ್ಟಪೋಲಿನಿಂದ ಒಳ್ಳೆಯ ಸುದ್ದಿ" ಎಂಬ ತಂತಿಯನ್ನು ತಂದು ಹಂಚಿದನಂತೆ. ಪರಿಣಾಮವಾಗಿ, ಷೇರುಗಳ ಬೆಲೆ ಏರಿತು. ಅಲ್ಲಿದ್ದ— ಲಾಭಗಳಿಸಿದ ವ್ಯಾಪಾರಿಗಳು, ಆ ಹುಡುಗನನ್ನು ಉತ್ಸಾಹದಿಂದ ಹೊಗಳಿದರಲ್ಲದೆ. ಅವನಿಗಾಗಿ ಟೋಪಿಯನ್ನು ಹಿಡಿದು ಎಲ್ಲರಿಂದಲೂ ಚಂದಾವಸೂಲಿ ಮಾಡಿಕೊಟ್ಟರು.

ಲಂಡನ್ನಿನ ಅತಿದೊಡ್ಡ ಪತ್ರಿಕೆಯಾದ "ಟೈಮ್ಸ್" ಪತ್ರಿಕೆಗೆ ತನ್ನ ಸುದ್ದಿ ಸೇವೆ ನಡೆಯಿಸಿದರೆ, ಬೇರೆ ಪತ್ರಿಕೆಗಳೂ "ಟೈಮ್ಸ್"ನ್ನು ಅನುಸರಿಸಿ ತನ್ನ ಸಹಾಯ ಕೇಳುವುವು ಎಂದು ತಿಳಿದ ರಾಯಿಟರನು, ಅನೇಕ ಸಲ ಆ ಪತ್ರಿಕೆಯ ಕಚೇರಿಗೆ ಭೇಟಿ ಕೊಟ್ಟು ಸಂಪಾದಕರನ್ನು ಕೇಳಿಕೊಂಡನು. ಆದರೆ ಏಳು ವರುಷಗಳ ವರೆಗೆ ಆ ಪತ್ರಿಕೆಯು ರಾಯಿಟರನ ಸಲಹೆಗೆ ಒಪ್ಪಲಿಲ್ಲ. ಕಡೆಗೆ ೧೮೫೮ ರಲ್ಲಿ ನಿರಾಶೆಯಿಂದ "ಮಾರ್ನಿಂಗ್ ಸ್ಟ್ಯಾಂಡರ್ಡ್" ಎಂಬ ಪತ್ರಿಕೆಯ ಸಂಪಾದಕನನ್ನು ನೋಡಿ, ಅವನಿಗೆ ಹದಿನಾಲ್ಕು ದಿನಗಳು ಮುಫತ್ತಾಗಿ ತನ್ನ ಸುದ್ದಿಗಳನ್ನು ಹಂಚುವುದಾಗಿಯೂ, "ಈ ಹದಿನಾಲ್ಕು ದಿನಗಳನಂತರ ನಿಮಗೆ ನನ್ನಿಂದ ಪ್ರಯೋಜನವಾಗಲಿಲ್ಲವಾದರೆ, ಇದರ ವಿಷಯಬಿಟ್ಟು, ನಿಮಗೆ ಏನೂ ತೊಂದರೆ ಕೊಡುವುದಿಲ್ಲ"ಎಂದೂ ಒಪ್ಪಿಕೊಂಡನು. ಅಂದಿನಿಂದ ರಾಯಿಟರನ ವಾರ್ತಾಸಂಸ್ಥೆಯು ಬೆಳೆಯಲು ಅನುಕೂಲವಾಯಿತು.

ಸಾವಿರದ ಎಂಟುನೂರ ಐವತ್ತೊಂಬತ್ತರಲ್ಲಿ (೧೮೫೯) ಯೂರೋಪಿನಲ್ಲೆಲ್ಲ ಯುದ್ಧದ ಭಯ ಹಬ್ಬಿತ್ತು. ಫ್ರಾನ್ಸಿನ ಲೂಯಿ ನೆಪೋಲಿಯನ್ನನು, ಆಸ್ಟ್ರಿಯದ ಮೇಲೆ ಆರೋಪ ಮಾಡಿ ಯುದ್ಧ ಹೂಡುವುದರಲ್ಲಿದ್ದನು. ಫೆಬ್ರುವರಿ ೭ನೆಯ ತಾರೀಖಿನ ದಿನ ನೆಪೋಲಿಯನ್ನನು ಫ್ರೆಂಚ್ ಪ್ರತಿನಿಧಿಸಭೆ (Legislative Chamber)ಯನ್ನುದ್ದೇಶಿಸಿ ಮಾಡುವ ಭಾಷಣದಲ್ಲಿ, ಈ ಯುದ್ಧಘೋರಣೆಯನ್ನೂ ವಿವರಿಸುವವನಿದ್ದನು. ಆಗ ರಾಯಿಟರನು ಪ್ಯಾರಿಸ್ಸಿನಲ್ಲಿದ್ದ ತನ್ನ ಸುದ್ದಿಗಾರನಿಗೆ, ಚಕ್ರವರ್ತಿಯ ಭಾಷಣದ ಪ್ರತಿಯೊಂದನ್ನು ಮೊದಲೇ ಪಡೆಯಲು ಪ್ರಯತ್ನಿಸಹೇಳಿದನು. ಈ ರೀತಿಯಾಗಿ ಮುಂಪ್ರತಿಯನ್ನು ಪಡೆಯುವುದಕ್ಕೆ ಇದುವರೆಗೆ ಎಂದೂ ಯಾರೂ ಪ್ರಯತ್ನಿಸಿರಲಿಲ್ಲ. ರಾಯಿಟರ್ ಸುದ್ದಿಗಾರನು, ನೆಪೋಲಿಯನ್ನನ ಭಾಷಣದ ಪ್ರತಿಯೊಂದನ್ನು ಪಡೆದನು; ಆದರೆ ಅದನ್ನು ಇರಿಸಿದ ಲಕೋಟೆಯನ್ನು, ನೆಪೋಲಿಯನ್ನನು ಸಭೆಯನ್ನುದ್ದೇಶಿಸಿ ಭಾಷಣ ಮಾಡಲು ಆರಂಭಿಸುವಗಳಿಗೆಯ ವರೆಗೂ ಒಡೆಯಬಾರದೆಂಬ ಆಜ್ಞೆಯೊಂದಿಗೆ ಪಡೆದನು.

ಅದು ಸಿಕ್ಕಿದೊಡನೆಯೇ ರಾಯಿಟರನು, ಲಂಡನ್–ಪ್ಯಾರಿಸ್ ಟೆಲಿಗ್ರಾಫ್ ತಂತಿಯೊಂದನ್ನು ಭಾಷಣದ ಆರಂಭದ ನಿಮಿಷದಿಂದ ಒಂದು ಗಂಟೆಯ ವರೆಗೆಂದು ಬಾಡಿಗೆ ಹಿಡಿದನು. ಪ್ಯಾರಿಸ್ಸಿನಲ್ಲಿ ನೆಪೋಲಿಯನನು ತನ್ನ ಸಮರ ಭಾಷಣ ಮಾಡುತ್ತಿದ್ದಂತೆಯೆ ರಾಯಿಟರನು ಲಂಡನಿನಲ್ಲಿ ಆ ಭಾಷಣವನ್ನು ಬರೆದುಕೊಂಡು, ಪತ್ರಿಕಾಕಚೇರಿಗಳಿಗೆ ಮುಟ್ಟಿಸಿದನು. ಈ ಸಲ ರಾಯಿಟರನ ದೂತರು ಕುದುರೆಗಾಡಿಗಳಲ್ಲಿ ಹೋಗಿ ಭಾಷಣದ ವಿವರಗಳನ್ನು ಮುಟ್ಟಿಸಿದರು; ನಡೆದುಕೊಂಡು ಹೋಗಲಿಲ್ಲ!

ಅಮೇರಿಕೆಯಲ್ಲಿ ಅಂತರಿಕ ಜಗಳವಾದಾಗಲೂ, ರಾಯಿಟರಿನ ಸುದ್ದಿಗಾರನು ನ್ಯೂಯಾರ್ಕಿನಿಂದ ಹಡಗುಗಳಲ್ಲಿ ತನ್ನ ವಾರ್ತೆಯನ್ನು ಕಳುಹಿಸುತ್ತಿದ್ದನು.

ಪ್ರೆಸಿಡೆಂಟ್ ಲಿಂಕನ್ನರ ಕೊಲೆಯ ಸುದ್ದಿಯನ್ನು ಕಳುಹುವುದರಲ್ಲಿ ರಾಯಿಟರನ ಸಂಸ್ಥೆಯು ಅದ್ವಿತೀಯ ಜಾಣತನ ತೋರಿಸಿ, ಬೇರೆಯೆಲ್ಲಾ ವಾರ್ತಾಸಂಸ್ಥೆಗಳನ್ನು ಹಿಂದೆ ಹಾಕಿತು. ರಾಯಿಟರ್ ಬಾತ್ಮೀದಾರನಾದ ಮೆಕ್ಲೀನನಿಗೆ, ಇತರ ಸುದ್ದಿಗಾರರಿಗೆ ಸಿಕ್ಕಿದಂತೆಯೇ ಲಿಂಕನ್ನನ ಕೊಲೆಯ ವಾರ್ತೆಯು, ಟಪಾಲ್‌ಹಡಗು ನ್ಯೂಯಾರ್ಕನ್ನು ಬಿಟ್ಟುಹೋದ ಮೇಲೆ ತಡವಾಗಿ ಸಿಕ್ಕಿತು. ಬೇರೆ ಸುದ್ದಿಗಾರರು ಮತ್ತೊಂದು ಹಡಗಿಗಾಗಿ ಕಾಯುತ್ತಿರಲು, ರಾಯಿಟರ್ ಸುದ್ದಿಗಾರನು ಒಂದು ಚಿಕ್ಕ ಹಡಗನ್ನು ಬಾಡಿಗೆ ಹಿಡಿದು, ಕೆಲವು ಗಂಟೆಗಳ ಮುಂಚೆ ಹೊರಟ ಟಪಾಲು ಹಡಗನ್ನು ಸಮುದ್ರದಲ್ಲಿ ಹಿಂಬಾಲಿಸಿ, ಹಿಡಿದು, ಅದರಲ್ಲಿ ತನ್ನ ಬಾತ್ಮಿಯನ್ನು ಕಳುಹಿ ಬಂದನು.

ಯುರೋಪ್ ಮತ್ತು ಅಮೇರಿಕೆಗಳಲ್ಲಿ ತನ್ನ ಸಂಸ್ಥೆಯನ್ನು ಸ್ಥಾಪಿಸಿ ಆದ ಮೇಲೆ, ರಾಯಿಟರನು ಇಂಡಿಯಾ, ಆಸ್ಟ್ರೇಲಿಯಾಗಳ ಕಡೆಗೆ ತಿರುಗಿದನು. ಇಂಡಿಯಾದಿಂದ ಬ್ರಿಟನ್ನಿಗೆ ತಂತಿಮಾರ್ಗವು ಪರ್ಶಿಯಾ ರಷ್ಯಗಳ ಮೂಲಕ ಸ್ಥಾಪನೆಯಾಗಲು, ರಾಯಿಟರನ ತೈವಾಡವೂ ಇದ್ದಿತು. ಹೆನ್ರಿ ಕೊಲಿನ್ಸ್ ಎಂಬ ಯುವಕನು ಭಾರತಕ್ಕೆ ಬಂದು, ಇಲ್ಲಿಂದ ದೂರಪ್ರಾಚ್ಯದಲ್ಲಿಯೂ, ಮಧ್ಯಪ್ರಾಚ್ಯದಲ್ಲಿಯೂ ಪ್ರತಿಯೊಂದು ಪಟ್ಟಣದಲ್ಲಿಯೂ ರಾಯಿಟರ್ ಕಚೇರಿಗಳನ್ನು ತೆರೆದನು. ೧೮೭೦ರ ಹೊತ್ತಿಗೆ, ಈಜಿಪ್ತದಿಂದ ಜಪಾನಿನವರೆಗೆ ಎಲ್ಲಾ ದೇಶಗಳಲ್ಲಿಯೂ ರಾಯಿಟರ್ ವಾರ್ತಾಸಂಸ್ಥೆಯ ಕಚೇರಿಗಳಿದ್ದುವು. ೧೮೭೨ರಲ್ಲಿ ರಾಯಿಟರ್ ಆಸ್ಟ್ರೇಲಿಯಾ ಖಂಡಕ್ಕೂ ತಂತಿಯನ್ನು, ಹಾಕಿ ಲೋಕದಲ್ಲೆಲ್ಲಾ ದೊಡ್ಡ ವಾರ್ತಾಸಂಸ್ಥೆಯ ಕಳಹದಿಯನ್ನೂ ಹಾಕಿದನು.

ಬೋಯರ್ ಯುದ್ಧವು ಆಫ್ರಿಕಾದಲ್ಲಿ ನಡೆದಾಗ ಮೆಫೆಕಿಂಗ್ (Mafeking) ನಗರದ ಬಿಡುಗಡೆಯ ಸುದ್ದಿಯನ್ನೂ ರಾಯಿಟರ್ ಬಾತ್ಮಿದಾರನು ಅಸಾಧಾರಣ ರೀತಿಯಲ್ಲಿ ವರದಿ ಮಾಡಿದರು. ಬೋಯರ್ ಜನರು ಈ ಸುದ್ದಿಯನ್ನು ದೇಶದ ಹೊರಗೆ ಕಳು-

ಹಿಸಲು ಈತನಿಗೆ ಅಸಾಧ್ಯವೆಂದು ತಿಳಿದು, ಪ್ರಿಟೋರಿಯಾ (Pretoria) ದಲ್ಲಿ ಮೇಫಿಕಿಂಗ್ ನಗರದ ಪತನದ ವಿಷಯ ತಿಳಿಸಿದರು. ಆದರೆ ಈ ಸುದ್ದಿಗಾರನು, ಅಷ್ಟು ವಿಶೇಷ ಸುದ್ದಿ-ಯನ್ನು ತಿಳಿದು ಸುಮ್ಮನಿರುವನೇ? ಕರಾವಳಿಯ ಕಡೆಗೆ ಹೋಗು-ತ್ತಿದ್ದ ರೈಲಿನ ಇಂಜಿನ್ ಡ್ರೈವರನೊಬ್ಬನನ್ನು ಹಿಡಿದು, ಸಮಾ-ಚಾರವನ್ನು ಲೊರೆಂಕೋ ಮಾರ್ಕ್ವೆಸ್‌ಗೆ ಹೋದ ಕೂಡಲೇ ತಂತಿ ಮೂಲಕ ಲಂಡನ್ನಿಗೆ ಕಳುಹಬೇಕೆಂದು ಹೇಳಿದನು. ಪರಿಣಾಮ-ವಾಗಿ, ಮಾರನೆಯ ದಿನವೇ ಲಂಡನ್ನಿನಲ್ಲಿ, ಮುಖ್ಯ ಮಂತ್ರಿ ಜೋಸೆಫ್ ಚೇಂಬರ್‌ಲೇನರು ಪಾರ್ಲಿಮೆಂಟಿನಲ್ಲಿ ಈ ಸುದ್ದಿ-ಯನ್ನು ತಿಳಿಸುತ್ತಾ ಹೀಗೆ ಹೇಳಿದರು: "ಈ ಸರಕಾರಕ್ಕೆ ಅಧಿಕಾರ-ಯುತ ಸುದ್ದಿ ಇನ್ನೂ ಬಂದಿಲ್ಲ; ಆದರೆ ರಾಯಿಟರ್ ಸುದ್ದಿ ಸರಿಯಲ್ಲವೆಂದು ಸಂಶಯ ಪಡಲು ಕಾರಣ ನನಗೆ ತಿಳಿಯದು!" ಇದಲ್ಲವೇ ಸುದ್ದಿವರದಿಗಾರರ ಜಾಣತನ?

ಜ್ಯೂಲಿಯಸ್ ರಾಯಿಟರನು ೧೮೯೯ರಲ್ಲಿ ತೀರಿಕೊಂಡನು. ಅಷ್ಟರಲ್ಲಿ ಆತನು ಸ್ಥಾಪಿಸಿದ ವಾರ್ತಾಸಂಸ್ಥೆಯು ವಿಶ್ವದಲ್ಲೆಲ್ಲಾ ಹರಡಿದ್ದಿತು. ಆತನ ಮಗನಾದ ಹರ್ಬರ್ಟನು ಸಂಸ್ಥೆಯ ಕಾರ್ಯಗಳನ್ನು ಮುಂದುವರಿಸಿದನು. ಆದರೆ ಆತನೂ ೧೯೧೫ರಲ್ಲಿ ಮರಣಹೊಂದಿದನು. ಇವನ ನಂತರ ದಕ್ಷಿಣ ಆಫ್ರಿಕಾದ ರೋಡರಿಕ್ ಜೋನ್ಸ್ ಎಂಬವರು ಜನರಲ್ ಮೇನೇಜರರಾದರು.

ಬ್ರಿಟನ್ನಿನ ಪತ್ರಿಕಾಸಂಸ್ಥೆಯೊಂದು ರಾಯಿಟರ್ ಸಂಸ್ಥೆಯ ಅರ್ಧಭಾಗ ಶೇರುಗಳನ್ನು ೧೯೨೬ರಲ್ಲಿ ಕೊಂಡುಕೊಂಡಿತು. ೧೯೪೧ರಲ್ಲಿ ಬ್ರಿಟನ್ನಿನ ಪತ್ರಿಕಾ ಪ್ರೊಪ್ರೈಟರ್‌ಗಳ ಸಂಸ್ಥೆಯು ಉಳಿದ ಅರ್ಧ ಭಾಗ ಶೇರುಗಳನ್ನು ಕೊಂಡು, ರಾಯಿಟರ್ ಸಂಸ್ಥೆಯು ಬ್ರಿಟನ್ ದೇಶದ ಪತ್ರಿಕೆಗಳ ಸ್ವಂತ ಸಂಸ್ಥೆಯಾಗಿ ಪರಿಣಮಿಸಿತು. ಈ ವಾರ್ತಾ ಸಂಸ್ಥೆ ಒಂದುಸಲ ರಾಷ್ಟ್ರೀಕರಣದ ಬೆದರಿಕೆಗೂ ಸಿಕ್ಕಿದ್ದಿತು. ಆದರೆ ಇದರ ಅಪಾಯದಿಂದ ತಪ್ಪಿಸಿಕೊಂಡು, ತನ್ನನ್ನು ಯಾವ ಸರ್ಕಾರವೇ ಆಗಲಿ, ಯಾವುದೊಂದು ಪತ್ರಿಕೆಗಳ ಸಣ್ಣ ಗುಂಪಾಗಲಿ, ಪಕ್ಷವಾಗಲಿ ಹಿಡಿಯದಂತೆ ಮಾಡಿಕೊಂಡಿತು. ಈ ಸಂಸ್ಥೆಯು ನಿಷ್ಪಕ್ಷಪಾತ ಧೋರಣೆಯೂ ಸ್ವತಂತ್ರ ನೀತಿಯೂ ಅದರ ಬೆಳೆವಣಿಗೆಗೆ ಸಹಾಯವಾದುವು.

ಕಳೆದ ಯುದ್ಧವಾದ ಮೇಲೆ ರಾಯಿಟರ್ ಸಂಸ್ಥೆಯು ಇನ್ನೂ ಪ್ರಗತಿಪರ ರೀತಿಯಲ್ಲಿ ಬೆಳೆಯತೊಡಗಿತು. ೧೯೪೭ನೇಯ ಡಿಸೆಂಬರ್ ತಿಂಗಳಲ್ಲಿ, ರಾಯಿಟರ್ ಸಂಸ್ಥೆಯು ರಾಷ್ಟ್ರೀಯ ಸಹಕಾರೀ ಸುದ್ದಿಸಂಸ್ಥೆಯಾಗಲು ಇನ್ನೊಂದು ಹೆಜ್ಜೆ ಮುಂದಿಟ್ಟಿತು. ಆಗ ಆಸ್ಟ್ರೇಲಿಯದ ಪ್ರೆಸ್ ಅಸೋಸಿಯೇಶನ್ ಮತ್ತು ನ್ಯೂಜೀಲೆಂಡ್ ಅಸೋಸಿಯೇಟೆಡ್ ಪ್ರೆಸ್ ಇವುಗಳೂ ಸಹ ರಾಯಿಟರ್ ಸಂಸ್ಥೆಯ ಜೊತೆ ಪಾಲೀಕರಾದುವು. ಮುಂದಿನ ಹೆಜ್ಜೆಯೆಂದರೆ ೧೯೪೯ನೆಯ ಫೆಬ್ರುವರಿ ತಿಂಗಳಿನ ಮೊದಲನೆಯ ತಾರೀಖಿನ ದಿನ ಭಾರತದ ಪತ್ರಿಕೆಗಳೂ ರಾಯಿಟರ್ ಸಂಸ್ಥೆಯ ಪಾಲೀಕರಾದರು. ಇದರ ಪರಿಣಾಮವೇ ನಾವೀಗ ಪ್ರತಿಯೊಂದು ಸುದ್ದಿಯ ಕೆಳಗಡೆ ನೋಡುವ "ಪಿ. ಟಿ. ಆಯ್. ರಾಯಿಟರ್" ಎಂಬ ಪದ ಅಂದರೆ "ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ-ರಾಯಿಟರ್" ವರದಿ ಎಂದು.

ಈ ರೀತಿಯಲ್ಲಿ ಸುದ್ದಿ-ಸಮಾಚಾರಗಳನ್ನು ಮಾರುವ ಉದ್ದಿಮೆಯೇ ಅವುಗಳ ಸ್ವತಂತ್ರಕ್ಕೆ ಕಾರಣ. ಸರಕಾರವು ಎಲ್ಲಿ ಸುದ್ದಿಯನ್ನು ತನ್ನದಾಗಿ ಮಾಡಿಕೊಳ್ಳುವುದೋ ಅಲ್ಲಿ ನಿಜವಾದ ಸುದ್ದಿ-ಸ್ವಾತಂತ್ರ್ಯವಿರಲಾರದು. ಈಗ ರಾಯಿಟರ್ ಸಂಸ್ಥೆಯ ಮ್ಯಾನೇಜರರಾದ ಕ್ರಿಸ್ಟೋಫರ್ ಚಾನ್ಸೆಲರ್ ಹೇಳಿದಂತೆ "ಸುದ್ದಿ-ಯನ್ನು ಕೊಳ್ಳುವವರು ಯಾರೋ ಅವರು ಸುದ್ದಿಸ್ವಾತಂತ್ರ್ಯಕ್ಕೆ ಬೆಲೆ ಕೊಡುವವರು. ಸ್ವಾತಂತ್ರ್ಯದ ಸುದ್ದಿಗೂ ಸರಕಾರೀ ಪ್ರಚಾರಕ್ಕೂ ಇರುವ ವ್ಯತ್ಯಾಸವೇ ಇದು" ಎಂದು. ಈಗ ರಾಯಿಟರ್ ಸಂಸ್ಥೆಯು ಸುಮಾರು ೨,೦೦೦ ಕ್ಕಿಂತ ಹೆಚ್ಚು ಮಂದಿ ಸುದ್ದಿಗಾರರನ್ನೂ, ಅಧಿಕಾರಿಗಳನ್ನೂ, ಟೆಲಿಪ್ರಿಂಟರ್ ನಡೆಸುವವ-ರನ್ನೂ ಇತರರನ್ನೂ ಕೆಲಸದಲ್ಲಿಟ್ಟುಕೊಂಡು, ಲೋಕದ ಪ್ರತಿ ದಿನದ ಘಟನೆಗಳನ್ನೂ ಯಾವ ಪಕ್ಷಪಾತವೂ ಇಲ್ಲದೆ, ಮೂಲೆ ಮೂಲೆಗೂ ವರದಿ ಮಾಡುತ್ತದೆ. ಇದೇ ರಾಯಿಟರ್ ಸಂಸ್ಥೆಯ ನೂರು ವರುಷಗಳ ಬೆಳೆವಣಿಗೆಯ ಕಥೆ.

ಕುಟಜಾರಿಷ್ಟ
ಆಮಾಂಶ-ಸಂಗ್ರಹಣಿಗಳಿಗೆ.

ಕಾಸಶ್ವಾಸಾರಿ
ದಮ್ಮು-ಕೆಮ್ಮುಗಳಿಗೆ.

ಎಲ್ಲ ಬಗೆಯ ಆಯುರ್ವೇದ ಔಷಧಗಳಿಗಾಗಿ
ಬರೆಯಿರಿ :

卐
ದಿ ನೂತನ
ಆಯುರ್ವೇದ ಕಾರ್ಯಾಲಯ ಲಿ.
ವಿಜಾಪುರ.



ಕಿತ್ತೂರ ರಾಣಿ ಚೆನ್ನಮ್ಮ

(ರೇಡಿಯೋನಾಟಕ)

ಬರೆದವರು ಶ್ರೀ. ಅ. ನ. ಕೃಷ್ಣರಾಯರು. ಪ್ರಕಾಶಕರು ಆನಂದ ಬ್ರದರ್ಸ್, ಬೆಂಗಳೂರು-೨.

ಈ ನಾಟಕದ ಒಂದು ವೈಶಿಷ್ಟ್ಯವೆಂದರೆ, ಇದರ ಹಿಂದೀ ಅನುವಾದವು—ದಿಲ್ಲಿಯ ಆಕಾಶವಾಣಿ ಕೇಂದ್ರವು ಕಳೆದ ಮಾರ್ಚ್ ತಿಂಗಳಲ್ಲಿ ಏರ್ಪಡಿಸಿದ್ದ— 'ನಾಟಕಮಹೋತ್ಸವ'ದಲ್ಲಿ, ಕನ್ನಡ ನಾಟಕದ ಪ್ರತಿನಿಧಿಯಾಗಿ ಬಿತ್ತರಗೊಂಡಿತು. ಮುಂದೆ ಏಪ್ರಿಲ್ ೧ನೆಯ ದಿನಾಂಕದಂದು ಮೈಸೂರು ಆಕಾಶವಾಣಿಯ ಕೇಂದ್ರದಿಂದ ಮೂಲ ಕನ್ನಡನಾಟಕವು ಬಿತ್ತರಗೊಂಡಿತು.

ಕಿತ್ತೂರರಾಣಿ ಚೆನ್ನಮ್ಮ ೧೮೨೪ರಲ್ಲಿ, ಕೈಬಿಡಲಿದ್ದ ಕಿತ್ತೂರ ದೇಸಗತಿಯನ್ನು ಉಳಿಸಿಕೊಳ್ಳಲು, ಬ್ರಿಟಿಷರೊಂದಿಗೆ ಯುದ್ಧವನ್ನು ಹೂಡಿ, ಬ್ರಿಟಿಷರ ಪ್ರಚಂಡ ಬಲಕ್ಕೆ ಈಡಾಗದೆ ಸೋತು ಸೆರೆಯಾಳಾದ ಐತಿಹಾಸಿಕ ಕತೆಯೇ ಈ ನಾಟಕದ ವಸ್ತು. ವೀರರಾಣಿ ಚೆನ್ನಮ್ಮನ ಗಂಡುಗಲಿತನ ಕನ್ನಡಿಗರಲ್ಲೆಲ್ಲ ಹೆಮ್ಮೆಯನ್ನು ಹುಟ್ಟಿಸುವಂತಹದೇನೋ ಸರಿಯೇ. ಈಗಾಗಲೆ ಈ ಐತಿಹಾಸಿಕ ವಸ್ತುವನ್ನು ಬಳಸಿಕೊಂಡು ಬರೆದ, ಕಂಪನಿಯವರು ಆಡುತ್ತಲಿದ್ದ 'ಕಿತ್ತೂರ ಚೆನ್ನಮ್ಮ' ಎಂಬ ನಾಟಕವು, ನಮ್ಮ ಜನಸಾಮಾನ್ಯರ ಮನಸ್ಸನ್ನು ತುಂಬ ಆಕರ್ಷಿಸಿಬಿಟ್ಟುದು ಅನೇಕರಿಗೆ ಗೊತ್ತಿರುವ ಸಂಗತಿ. ಅದರ ಮೇಲೆ ಇದು ಬಾನುಲಿರೂಪಕವಾಗಿ ಬಿತ್ತರಗೊಂಡು, ಈಗ ಅಚ್ಚಾಗಿ ಕನ್ನಡಿಗರ ವಾಚನಕ್ಕೂ ಒದಗಿಬಂದಿದೆ.

ಐತಿಹಾಸಿಕ ದೃಷ್ಟಿಯಿಂದ ಈ ನಾಟಕವನ್ನು ನೋಡಿದರೆ, ಈ ನಾಟಕವು ತುಂಬ ಆಭಾಸಮಯವಾಗಿದೆ. ಐತಿಹಾಸಿಕ ಸತ್ಯಸಂಗತಿಗಳು ಅರಿತೋ ಅರಿಯದೆಯೋ ಇದರಲ್ಲಿ ಕಲೆಕೆಳಗಾಗಿ ಬಿಟ್ಟಿವೆ. ಚೆನ್ನಮ್ಮರಾಣಿ ಬ್ರಿಟಿಷರೊಂದಿಗೆ ವಿರೋಧವಾಗಿ ನಿಂತುದು ೧೮೨೪ರಲ್ಲಿ. ಆಗ ಚೆನ್ನಮ್ಮರಾಣಿಯ ಪತಿ ಮಲ್ಲಸರ್ಜ ಕೈಲಾಸವಾಸಿಯಾಗಿ ಐದು ವರ್ಷವಾದುದು ಐತಿಹಾಸಿಕ ಸತ್ಯಸಂಗತಿ. ಅವನು ಪುಣೆಯಲ್ಲಿ ಪೇಶವೆಯರ 'ನಜರಬಂದಿ'ಯಾಗಿರುವಾಗಲೇ ಅವನ ಹೇಳಿಕೆಯಂತೆ, ಹಿರಿಯಮಗ ಶಿವಲಿಂಗರುದ್ರಸರ್ಜನಿಗೆ ದೇಸಗತಿ ಪಟ್ಟವಾಗಿ, ಅವನು ೧೮೨೪ರ ವರೆಗೆ ಬದುಕಿದ್ದ. ರೋಗಿಷ್ಠನಾದ ಇವನು ಸಾಯುವುದಕ್ಕೆ ಮೊದಲೋ ಸತ್ತ ಮೇಲೆಯೋ, ಮಾಸ್ತಮರಡಿಯ ಗೌಡನ ಮಗನನ್ನು ದತ್ತಕ ತೆಗೆದುಕೊಂಡ. ಈ ದತ್ತಕದಿಂದ ಹುಟ್ಟಿದ ಗೃಹಕಲಹವೇ ಕಿತ್ತೂರು ದೇಸಗತಿಯ ಅಸ್ತಮಾನಕ್ಕೆ ಕಾರಣವಾಯಿತು. ಇದೆಲ್ಲ ಐತಿಹಾಸಿಕ ಸತ್ಯಸಂಗತಿ. ಆದರೆ ಈ ನಾಟಕದಲ್ಲಿ ೧೮೨೪ರಲ್ಲಿ 'ಮಲ್ಲಸರ್ಜನ(?)' ಇನ್ನೂ ಬದುಕಿದ್ದಾನೆ. ಅವನ ಮಕ್ಕಳೆಲ್ಲ ಚಿಕ್ಕತನದಲ್ಲಿಯೆ ಅಲ್ಪಾಯುಷಿಗಳಾಗಿ ತೀರಿಕೊಂಡಿದ್ದರಂತೆ. ದತ್ತಕ ತೆಗೆದುಕೊಂಡವನು, ಮಗ ಶಿವಲಿಂಗರುದ್ರಸರ್ಜನಲ್ಲ; ತಂದೆಯಾದ ಮಲ್ಲಸರ್ಜನ. ಇದೆಲ್ಲ ಬದಲಾವಣೆಗೆ ಏನು ಕಾರಣ? ಇತಿಹಾಸದ ಅಜ್ಞಾನವೋ, ಕೃತಿಯ ರಸಪೋಷಣೆಯ ಅಪೇಕ್ಷೆಯೋ ? ಕೃತಿಯ ರಸಪೋಷಣೆಗಾಗಿ ಈ ಬದಲಾವಣೆ ಮಾಡಿಕೊಂಡಿದ್ದಾರೆಂದು ಒಂದು ಕ್ಷಣ ಭಾವಿಸೋಣ; ಆದರೆ ಈ ಬದಲಾವಣೆ ರಸಸಿದ್ಧಿಗೆ ಸಾಧಕವಾಗಿಲ್ಲವಷ್ಟೇ ಅಲ್ಲ; ಬಾಧಕವಾಗಿದೆ. 'ಮಲ್ಲಸರ್ಜ'ನನ್ನು 'ಮಲ್ಲಸರ್ಜನ'ಎಂದು ಹೆಸರಿಸಿರುವುದರಲ್ಲಿಯೂ ಇಂತಹ ಐತಿಹಾಸಿಕ ಆಭಾಸವೇ ಕಂಡುಬರುತ್ತದೆ. 'ಸರ್ಜ' ಎಂಬುದು ಮಹಮ್ಮದೀಯರ ಕಾಲದ ಒಂದು ಬಿರುದಿನ ಪದ. ಅದನ್ನೇ ಸೇರಿಸಿ 'ಮಲ್ಲಸರ್ಜ' 'ರುದ್ರಸರ್ಜ' 'ಶಿವಲಿಂಗಸರ್ಜ' ಎಂದು ಹೇಳುತ್ತಿದ್ದರು. ಅದನ್ನು ಬಿಟ್ಟು, ಈ ನಾಟಕದಲ್ಲಿ ಉದ್ದಕ್ಕೂ 'ಮಲ್ಲಸರ್ಜನ' ಎಂದು ಬಳಸಲಾಗಿದೆ. 'ಸರ್ಜನ' ಎಂಬುದರ ಅರ್ಥವೇನು ? ಯಾವ ಭಾಷೆಯ ಪದವೆಂದು ಅದನ್ನು ಬಳಸಲಾಗಿದೆಯೋ !

ಇನ್ನೂ ಒಂದು ಮುಖ್ಯವಾದ ಐತಿಹಾಸಿಕದೋಷವೆಂದರೆ: ಕಿತ್ತೂರು ಯಾವಾಗಲೂ ಒಂದು ಸ್ವತಂತ್ರ ರಾಜ್ಯವಾಗಿ ಇರಲಿಲ್ಲವೆಂಬುದು ಈ ಲೇಖಕರಿಗೆ ಗೊತ್ತಿದ್ದಂತಿಲ್ಲ. ಕಿತ್ತೂರು ಒಂದು 'ಸರಪರಗಣೆ'. ಇದರ ಅಧಿಪತ್ಯವನ್ನು ಪಡೆದ ಮಲ್ಲಸರ್ಜನ ಮೂಲಪುರುಷರು 'ಸರದೇಸಾಯಿ' ಎಂಬ ಅಧಿಕಾರಸ್ಥಾನದಲ್ಲಿಯೆ ಬಂದವರು. ವಿಜಾಪುರದ ಆದಿಲ್‌ಶಾಹಿಯ ಅಧೀನದಲ್ಲಿ ಕೆಲವು ದಿನ; ಮುಂದೆ ಪೇಶ್ವೆಯ ರಾಜ್ಯದ ಅಧೀನದಲ್ಲಿ; ೧೮೧೮ರಲ್ಲಿ ಅದು ಕೊನೆಗೊಳ್ಳಲು, ಬ್ರಿಟಿಷರ ಅಧಿಪತ್ಯದಲ್ಲಿ—ಇರುತ್ತ ಬಂದವರು. ರಾಣಿ ಚೆನ್ನಮ್ಮ ಬ್ರಿಟಿಷರಿಗೆ ವಿರೋಧಿಯಾಗಿ ನಿಂತುದು ನಾಡಿನ ಸ್ವಾತಂತ್ರ್ಯ ರಕ್ಷಣೆಗಾಗಿ ಅಲ್ಲ; ಕಿತ್ತೂರ ದೇಸಗತಿಯನ್ನು ತಮ್ಮ ಅಧೀನದಲ್ಲಿ ಉಳಿಸಿಕೊಳ್ಳಲಿಕ್ಕೆ. ಚೆನ್ನಮ್ಮರಾಣಿಯ ಮಲಮಗ ಶಿವಲಿಂಗರುದ್ರಸರ್ಜನೇ ಬ್ರಿಟಿಷರ ಆಧಿಪತ್ಯವನ್ನು ಒಪ್ಪಿಕೊಂಡುಬಿಟ್ಟಿದ್ದ. ಹಾಗವನು ಒಪ್ಪಿಕೊಳ್ಳದೆ ಇದ್ದರೆ, ಕಿತ್ತೂರಿನ ದೇಸಗತಿಯ ಪ್ರಕರಣವು ಧಾರವಾಡದ ಬ್ರಿಟಿಷ್ ಕಲೆಕ್ಟರನಾಗ ಥ್ಯಾಕರೇಸಾಹೇಬನ ವಿಚಾರಣೆಗೆ ಬರುವ ಕಾರಣವೇ ಇರಲಿಲ್ಲ. ಇವೆಲ್ಲ ಐತಿಹಾಸಿಕ ಸತ್ಯಗಳನ್ನು ಒಪ್ಪಿಕೊಂಡೂ, ಚೆನ್ನಮ್ಮರಾಣಿಯ ವೀರವ್ಯಕ್ತಿತ್ವವನ್ನು ಕೊರತೆಯಿಲ್ಲದಂತೆ

ಸಂಪೋಷಿಸಿ ತೋರಿಸಬಹುದಾಗಿದ್ದಿತು. ಆದರೆ ಈ ನಾಟಕದಲ್ಲಿ ಐತಿಹಾಸಿಕಸತ್ಯಕ್ಕೂ ಅವಕಾಶವಿಲ್ಲದಂತಾಗಿದೆ; ಕಥಾಚಮತ್ಕೃತಿ, ಪಾತ್ರಪುಷ್ಟಿ, ರಸಪುಷ್ಟಿಗೂ ಅವಕಾಶವಿಲ್ಲದಂತಾಗಿದೆ.

ಇತಿಹಾಸದ ಘಟನೆಗಳಿಗೆ ಲೇಖಕರು ಅಪರಿಚಿತರಾಗಿರುವಂತೆ, ಐತಿಹಾಸಿಕ ಹಿನ್ನೆಲೆಯನ್ನು ನಿರ್ಮಿಸುವುದರಲ್ಲಿಯೂ ತಮ್ಮ ಅಸಮರ್ಥತೆಯನ್ನು ತೋರಿಸಿಕೊಂಡಿರುವರು. ಎರಡನೆಯ ಪ್ರವೇಶದಲ್ಲಿಯೆ ವೀಣೆಯನ್ನು ನುಡಿಸುವ ಚೆನ್ನಮ್ಮರಾಣಿ ನಮಗೆ ಕಾಣುವಳು. ಆದರೆ ತುಂಗಭದ್ರೆಯಿಂದೀಚಿನ ಪ್ರದೇಶದಲ್ಲಿ, ೨೦೦ ವರ್ಷಗಳಿಂದಲೂ ವೀಣೆ ಅಪರಿಚಿತವೆ! ಅದರಲ್ಲಿಯೂ ಚೆನ್ನಮ್ಮರಾಣಿ ಬೆಳಗಾಂವಿಯ ಬಳಿಯ ಕಾಗತಿಯ ಧೂಳಪ್ಪ ದೇಸಾಯಿಯ ಮಗಳು. ಅವಳು ವೀಣೆಬಾರಿಸಲು ಕಲಿತೇ ಇದ್ದಳೆಂದು ಲೇಖಕರು ಹಟಹಿಡಿದರೆ ಉಪಾಯವಿಲ್ಲ. ಇನ್ನು ಚೆನ್ನಮ್ಮ-ಮಲ್ಲಸರ್ಜರ (ಇವನು ಸತ್ತು ಐದು ವರ್ಷಗಳಾಗಿವೆ.) ಮಾತುಗಳಂತೂ ಐತಿಹಾಸಿಕ ಹಿನ್ನೆಲೆಯ ಅಜ್ಞಾನದ ಮೂಲಕ ನೀರಸವಾಗಿಬಿಟ್ಟಿವೆ. ಮೂರನೆಯ ಪ್ರವೇಶದಲ್ಲಿ ಥ್ಯಾಕರೇ ಮೊದಲಾದವರು ಆಡುವ ಮಾತುಗಳೂ, ಸ್ವಾರ್ಥಸಾಧಕರಾಗಿ ಬಂದ ಮಲ್ಲಪ್ಪಸೆಟ್ಟಿ-ವೆಂಕಟರಾಯರ ಮಾತುಗಳೂ ಕತೆಯನ್ನು ಮುಂದುವರಿಸಲು ಮಾತ್ರ ಉಪಯೋಗವಾಗಿವೆಯಷ್ಟೆ; ಯಾವುದೇ ಭಾವದ ಬೆಳವಣಿಗೆಯನ್ನಾಗಲಿ, ಪಾತ್ರದ ಬೆಳವಣಿಗೆಯನ್ನಾಗಲಿ, ಇಲ್ಲಿ ಕಾಣುವಂತಿಲ್ಲ. ಇಷ್ಟೇ ಅಲ್ಲ; ಬ್ರಿಟಿಷ್ ರಾಜ್ಯತಂತ್ರಜ್ಞನಾದ ಥ್ಯಾಕರೆಯೂ ಹೀಗೆ ಮೊದ್ದನಂತೆ ಮೊಂಡು-ಮೋಡಾಗಿ ಮಾತನಾಡುತ್ತಿದ್ದನೇ?— ಎಂದು ಆಶ್ಚರ್ಯಪಡುವಂತಿದೆ. ಮಲ್ಲಪ್ಪಸೆಟ್ಟಿ ವೆಂಕಟರಾಯರಂತೂ, ಲೇಖಕರು ಹೇಳಿದಂತೆ ಕೈಕಾಲುಗಳನ್ನಾಡಿಸುವ ಅರಿವೆಯ ಗೊಂಬೆಗಳು.

೫ನೆಯ ವಿಭಾಗದಲ್ಲಿಯೋ, ತಂತ್ರದೃಷ್ಟಿಯಿಂದ ನಾಟಕವು ನಗೆಗೆ ಈಡಾಗುವಂತಿದೆ. ಕೋಟೆಯ ಹೆಬ್ಬಾಗಿಲನ್ನು ಹಾಕಿಸಿದ ಚೆನ್ನಮ್ಮರಾಣಿ ಕೋಟೆಯ ಒಳಗಿರುವಳು; ಕೋಟೆಗೆ ಮುತ್ತಿಗೆ ಹಾಕಿದ ಥ್ಯಾಕರೇದೊರೆ ಕೋಟೆಯ ಹೊರಗೆ ಇರುವನು. ಇಬ್ಬರಲ್ಲಿಯೂ ಬಹಳ ವೇಳೆಯ ವರೆಗೆ ಮಾತು-ಕತೆ, ವಾದ-ವಿವಾದ ನಡೆಯುವುದು. ಕೋಟೆಯ ಗೋಡೆಯೆಂದರೆ ನಡುವೆ ಇಳಿಬಿಟ್ಟ ನಾಟಕದ ಪರದೆಯೆಂದು ಲೇಖಕರ ಭಾವನೆಯಿದ್ದಂತೆ ಕಾಣುವುದು. ಏಕೆಂದರೆ ಒಳಗಿದ್ದ ಚೆನ್ನಮ್ಮರಾಣಿಯೂ ಹೊರಗಿದ್ದ ಥ್ಯಾಕರೇದೊರೆಯೂ ಎದುರೆದುರು ನಿಂತು ಸಹಜವಾಗಿ ಮಾತನಾಡಿದಂತೆ ಕೇಳುವವರಿಗೆ ಎನಿಸುವುದು. ಒಂದು ವೇಳೆ ಇಬ್ಬರೂ ಕೂಗಿ ಕೂಗಿ ಮಾತನಾಡಿದರೂ, ಒಬ್ಬರೊಬ್ಬರ ಮಾತು ಒಬ್ಬರೊಬ್ಬರಿಗೆ ಕೇಳಿಸಲು ಸಾಧ್ಯವೇ?.... ಮುತ್ತಿಗೆ ಹಾಕಿದ ಕೋಟೆಯ ಬಳಿಯಲ್ಲಿ, ಸರಿ, ಇಬ್ಬರ ವಾದ-ವಿವಾದ ಮುಗಿದೊಡನೆಯೆ ಕೋಟೆಯ ಬಾಗಿಲು ತೆರೆಯುತ್ತದೆ. ಮುಂದೆ ಒಂದೆರಡು ನಿಮಿಷದ ವೇಳೆಯನ್ನೂ ಕೊಟ್ಟಿಲ್ಲ. ಥ್ಯಾಕರೇನ ಬಂದೂಕಿನೇಟು ಚೆನ್ನಮ್ಮರಾಣಿಯ ಅಂಗರಕ್ಷಕ ಬಾಳಾಸಾಹೇಬ (?) ನನ್ನು ಬಲಿತೆಗೆದುಕೊಳ್ಳುತ್ತದೆ. ಕೂಡಲೇ ಚೆನ್ನಮ್ಮರಾಣಿಯ ಬರ್ಜಿಯೇಟು ಥ್ಯಾಕರೇ ದೊರೆಯ ಪ್ರಾಣವನ್ನು ತೆಗೆದುಕೊಳ್ಳುತ್ತದೆ. ಸಾಯುವಾಗ ಅವನು 'ಓ ಗಾಡ್ :I am dying' ಎಂದು ಹೇಳಿಯೇ ಸಾಯುತ್ತಾನೆ. ಆಗ ಒಬ್ಬನೇ ಕಿತ್ತೂರ ಸೈನಿಕ 'ಥ್ಯಾಕರೇ ಸಾಹೇಬ ಬಿದ್ದ....' ಎನ್ನುತ್ತಾನೆ. ಒಬ್ಬನೇ ಇಂಗ್ಲಿಷ್ ಸೈನಿಕ 'ಇನ್ನೇನು ನಮ್ಮ ಗತಿ! ನಮ್ಮ ನಾಯಕ ನೆಲಕ್ಕುರುಳಿದ!' ಎಂದು ಕಂಗೆಟ್ಟು ನುಡಿಯುತ್ತಾನೆ. ಲೇಖಕರು ಈ ರೇಡಿಯೋ ರೂಪಕ ಬರೆಯುವುದಕ್ಕೆ ಮೊದಲು, ಇಂಗ್ಲಿಷ್ ಭಾಷೆಯಲ್ಲಿರುವ ಎಷ್ಟೋ ತಂತ್ರಗ್ರಂಥಗಳನ್ನು ಓದಿ ಅಭ್ಯಾಸಮಾಡಿಕೊಂಡಿದ್ದಾರಂತೆ ಆ ಅಭ್ಯಾಸದ ಫಲವೇ ಇದಾಗಿದ್ದರೆ ಆಶ್ಚರ್ಯದ ಸಂಗತಿಯೇ ಸರಿ!

೬ನೆಯ ವಿಭಾಗದಲ್ಲಿಯ ಚೆನ್ನಮ್ಮನ ದರ್ಬಾರಿನಲ್ಲಿಯ ನ್ಯಾಯ ವಿಚಾರಣೆಯ ಗಡಬಡಿ, ಭಾವಾಭಾಸದ ಮುದ್ದೆ. ಸೆರೆಯಾಳುಗಳಾದ ಸ್ಟೀವನ್‌ಸನ್, ಇಲಿಯಟ್ಟರುಗಳ ಮಾತುಗಳ ಮುಖಾಂತರ, ಚೆನ್ನಮ್ಮರಾಣಿಯ ಉದಾರಸ್ವಭಾವವನ್ನು ಪೋಷಿಸಬೇಕೆಂಬ ಪ್ರಯತ್ನವಿಲ್ಲಿ ಕಾಣುವುದಾದರೂ, ಪ್ರಯತ್ನ ಫಲಕಾರಿಯಾಗಿಲ್ಲ. ಸೋತ ಬ್ರಿಟಿಷರು ಮತ್ತೆ ಕಿತ್ತೂರಿನ ಮೇಲೆ ಸಾಗಿ ಬಂದು, ಮೋಸದಿಂದ ಕಿತ್ತೂರವರನ್ನು ಸೋಲಿಸಿ, ಚೆನ್ನಮ್ಮರಾಣಿಯನ್ನು ಸೆರೆಹಿಡಿದ ಪ್ರಸಂಗವೂ, ಅಳಿದ ಕಿತ್ತೂರ ದೇಸಗತಿಯನ್ನು ಮರಳಿ ಸ್ಥಾಪಿಸಲು ಸಂಗೊಳ್ಳಿ ರಾಯಣ್ಣ ಮಾಡಿದ ಪ್ರಯತ್ನದ ಸಂಗತಿಯೂ, ಆ ಪ್ರಯತ್ನವು ಸಫಲವಾಗದೆ ರಾಯಣ್ಣನು ಬ್ರಿಟಿಷರ ಕೈಗೆ ಸಿಕ್ಕು ಗಲ್ಲಿಗೇರಿದ ಸಂಗತಿಯೂ ೯-೧೦ ೧೧ ನೆಯ ಭಾಗವಾಗಿ ಬಂದಿರುವುವು. ರಾಯಣ್ಣನಿಗಾದ ಗಲ್ಲಿನ ಸುದ್ದಿ ತಿಳಿದಾಗ ಚೆನ್ನಮ್ಮರಾಣಿ, ನಿರಾಶೆಯಿಂದ ನಿಟ್ಟುಸಿರಿಟ್ಟು

ಪ್ರಕೃತಿ

★

ವಯಸ್ಕರಿಗೆ ಮತ್ತು ವಿವಾಹಿತರಿಗೆ ಮಾತ್ರ

ಕೋಕಶಾಸ್ತ್ರ:— ಎರಡು ನೂರು ಬಣ್ಣದ ಚಿತ್ರಗಳುಳ್ಳ ಈ ಪುಸ್ತಕವನ್ನು ಕೆಳಗೆ ಕಾಣಿಸಿದ ವಸ್ತುಗಳನ್ನು ತರಿಸುವವರಿಗೆ **ಉಚಿತವಾಗಿ** ಕೊಡಲಾಗುವದು.

೧. ೨೫ ಶಯ್ಯಾಗೃಹದ ಚಿತ್ರಗಳು ಬೆಲೆ ರೂ. ೩.

೨. ಅದ್ಭುತ ಕನ್ನಡಕ-ಜೊತೆಗೆ ೧೨ ಸುಂದರಿಯರ ಚಿತ್ರಗಳು. ಬೆಲೆ ರೂ. ೩.

ಇಷ್ಟೇ ಅಲ್ಲದೆ ೧೨೦ ಸುಂದರಿಯರ ಫೋಟೋಗಳ ಒಂದು ಸೆಟ್ಟು ಉಚಿತ.

ಬೆಲೆ ಮುಂಗಡ ಕಳಿಸಬೇಕು.

Radiant Health (6/H) AMRITSAR

ಪ್ರಲಾಪಿಸಿ 'ನೋಡು ನೆಲದ ಮೇಲೆ ದೊಪ್ಪನೆ ಬೀಳುವಳು!' ಈ ದುರಂತಸೂಚನೆಯೊಂದಿಗೆ ರೂಪಕವು ಕೊನೆಗೊಳ್ಳುವುದು.

ಈ ನಾಟಕದಲ್ಲಿ ಐತಿಹಾಸಿಕ ಸತ್ಯಘಟನೆಯೂ ಇಲ್ಲ; ನಾಟಕೀಯತೆಯ ರಸಸಂವಿಧಾನವೂ ಇಲ್ಲ. ರಸವಿರದಿದ್ದರೆ ಹೋಗಲಿ; ಶುದ್ಧ ಇತಿಹಾಸವನ್ನಾದರೂ ಇದು ಚಿತ್ರಿಸುತ್ತಿದೆಯೆಂದರೆ, ಅಷ್ಟರಮಟ್ಟಿಗೆ ಇದರ ಉಪಯುಕ್ತತೆಯನ್ನು ಒಪ್ಪಿಕೊಳ್ಳಬಹುದಾಗಿತ್ತು. ಆದರೆ ಅದು ಇಲ್ಲ.

ಶ್ರೀ. ಅ. ನ. ಕೃಷ್ಣರಾಯರ ಸಾಹಿತ್ಯದಲ್ಲಿ ಯಾವಾಗಲೂ ಕಂಡುಬರುತ್ತಿರುವ— 'ಅವಕುಂಠನ' 'ರಾಣಾ ಪ್ರತಾಪ' 'ದುರಂಧರೆ' 'ವೀರಪುಂಗ' 'ವೈಢೂರ್ಯ'— ಮೊದಲಾದ ಅಪಪ್ರಯೋಗಗಳಿಗೆ ಇದರಲ್ಲಿಯೂ ಎಡೆ ಇದ್ದೇ ಇದೆ.

ಇಂತಹ ಅಭಾಸಪೂರ್ಣ, ಇತಿಹಾಸದ ಆಧಾರಗಳಿಗೆ ದೂರವಾಗಿರುವ ಈ ನಾಟಕವು, ಕನ್ನಡನಾಟಕಗಳ ಪ್ರತಿನಿಧಿಯಾಗಿ ದಿಲ್ಲಿಯ ಆಕಾಶವಾಣಿ ಕೇಂದ್ರದಲ್ಲಿ ಬಿತ್ತರಗೊಂಡುದೆಂದರೆ ನಗೆ ಬರುವ ಮಾತು. ಶ್ರೀ. ಅ. ನ. ಕೃಷ್ಣರಾಯರು ಬೇರೆ ತಮ್ಮ ಕೃತಿಗಳಲ್ಲಿ ತಮ್ಮ ಕಲಾಪ್ರವೀಣತೆಯನ್ನು ತೋರಿಸಿರಬಹುದು. ಇದರಲ್ಲಿ ಮಾತ್ರ ಕಲೆಯು ತಲೆಯನ್ನೇ ಮೇಲೆ ಎತ್ತಿಲ್ಲವೆಂಬ ಮಾತನ್ನು ಹೇಳಬೇಕಾಗಿ ಬಂದುದಕ್ಕಾಗಿ ವಿಷಾದವೆನಿಸುತ್ತದೆ.

— ಬೆಟಗೇರಿ ಕೃಷ್ಣಶರ್ಮ.

ಬೇಟೆಯ ನಾಯಿ

(ಪತ್ತೇದಾರಿ ಕಾದಂಬರಿ)

ಬರೆದವರು 'ಪರಿಜಾತ'—ಹುಬ್ಬಳ್ಳಿಯ ಸಂಜೀವಿನಿ ಗ್ರಂಥಮಾಲೆಯ ಪ್ರಕಾಶನ. ಬೆಲೆ ೩—೮—೦.

ಪ್ರಕಾಶಕರು ಈ ಪುಸ್ತಕದ ಕೊನೆಯಲ್ಲಿ ಬರೆದ 'ಒಡೆಯನ ನುಡಿ'ಯಲ್ಲಿ ಪಾಶ್ಚಾತ್ಯ ಪತ್ತೇದಾರಿ ಕತೆಗಾರನಾದ ಶರ್ಲಾಕ್ ಹೋಮ್ಸ್‌ನ 'ಗ್ರಂಥಗಳನ್ನು ಓದಿಯೇ ಈ ಬೇಟೆಯ ನಾಯಿಯನ್ನು ಬರೆದುದಾಗಿ ಹರಿಜಾತರು ಹೇಳಿದರು' ಎಂದು ಹೇಳಿದ್ದಾರೆ. ಆದರೆ ಈ ಕಾದಂಬರಿಯನ್ನು ಓದಿ ಮುಗಿಸಿದವರಿಗೆ, ಇದು ಯಾವುದೋ ಒಂದು ಇಂಗ್ಲಿಷ್ ಕಾದಂಬರಿಯ ಅನುವಾದವಲ್ಲದೆ, ಸ್ವತಂತ್ರರೀತಿಯಿಂದ ಕಲ್ಪಿಸಿ ಬರೆದುದಲ್ಲವೆಂಬುದು ಒಡೆದು ಕಾಣುವಂತಿದೆ. ಕಾದಂಬರಿಯಲ್ಲಿಯ ಪಾತ್ರಗಳ ಹೆಸರು ಮಾತ್ರ ಭಾರತೀಯ ರೀತಿಯವು ಇವೆಯಷ್ಟೆ! ಅವುಗಳ ಸ್ವಭಾವ, ಸಂಸ್ಕೃತಿ, ಆಚಾರ-ವಿಚಾರ, ನಡೆ ನುಡಿ ಒಂದೂ ಭಾರತೀಯವಾಗಿ ಕಾಣುವುದಿಲ್ಲ. ಕಥೆಯ ಸಂವಿಧಾನಕ, ಹಿನ್ನೆಲೆ— ಇವೂ ಭಾರತಿಯ ಪದ್ಧತಿಗೆ ಅನುಗುಣವಾದುವೆಂದು ಎನಿಸುವುದಿಲ್ಲ.

ಒಂದು ಜಮೀನ್‌ದಾರಿಯ ದೂರದ ದಾಯಾದಿಯೊಬ್ಬ, ತಂತ್ರ-ಕುತಂತ್ರಗಳನ್ನು ಹೂಡಿ, ಜಮೀನ್‌ದಾರನಾದ ಚಿದಂಬರ್ ಬಾಸ್ಕ್ಯಾರ್‌ಕರ್ ಎಂಬವರನ್ನು ಉಪಾಯದಿಂದ ಕೊಲೆಮಾಡಿದ್ದ. ಮುಂದೆ ಅವನ ವಾರಸದಾರನಾಗಿ, ಆ ಜಮೀನ್‌ದಾರಿಗೆ ಮಾಲಕನಾಗಿ ಬಂದ ಸರ್ ಹರೀಣೇಂದ್ರನನ್ನೂ ಕೊಂದು, ಆ ಆಸ್ತಿಗೆ ತಾನು ಮಾಲಕನಾಗಬೇಕೆಂದು ಹೊಂಚುಹಾಕಿದ್ದ. ಪತ್ತೇದಾರನಾದ ಸರಲಾಕ್ಷ ಹುಲಿಮೀಸೆಯು, ತನ್ನ ಸ್ನೇಹಿತನಾದ ವಾಮನರಾಯರ ಸಹಕಾರದಿಂದ, ಗಂಡಾಂತರಕ್ಕೆ ಒಳಗಾಗಲಿದ್ದ ಹರೀಣೇಂದ್ರರನ್ನು ಪಾರು ಮಾಡಿ, ಹೊಂಚುಗಾರನ ಸಂಚನ್ನೆಲ್ಲ ಹೊರಗೆ ಹಾಕಿದ ಈ ಕುತೂಹಲಕಾರಿಯಾದ ಘಟನೆಯೆ ಕಾದಂಬರಿಯ ಕಥಾವಸ್ತು. ಕಳೆದ ಶತಮಾನದ ಕೊನೆಯ ಭಾಗ, ಕಥೆ ನಡೆದ ಕಾಲಖಂಡ. ಕಥಾಕ್ಷೇತ್ರವಾಗಿದ್ದ 'ಬಾಸ್ಕ್ಯಾರ್‌ಕರ್ ಭವನ' ಇದ್ದಂತಹ ಕಗ್ಗಾಡಿನ ಪ್ರದೇಶವರ್ಣನೆಯೂ, ಪತ್ತೇದಾರ ಸರಲಾಕ್ಷನಿರುವ ನಗರದ ವರ್ಣನೆಯೂ ಕನ್ನಡ ವಾಚಕರಿಗೆ ತೀರ ಅಪರಿಚಿತವಾಗಿ— ವಿದೇಶೀಯವಾಗಿ ತೋರದಿರವು.

'ಬಾಸ್ಕ್ಯಾರ್‌ಕರ್ ಭವನದ' ಡಾಕ್ಟರರಾದ ಜೋಶೀ ಮಾಧವೇಶರು, ಸರಲಾಕ್ಷ ಹುಲಿಮೀಸೆಯವರಲ್ಲಿ ಮರೆತು ಹೋದ ಕೈಬಡಿಗೆಯ ಕತೆಯಿಂದ ಮೊದಲುಮಾಡಿ, ದಾಯಾದಿ ಪರಮೇಶ್ವರಯ್ಯನ ಕ್ರೂರ ಬೇಟೆಯ ನಾಯಿ ಹಿಡಿತದಿಂದ ಹರೀಣೇಂದ್ರನನ್ನು ಉಳಿಸುವ ಕೊನೆಯ ಸಂಗತಿಯ ವರೆಗೂ, ಕಾದಂಬರಿಯ ಪ್ರತಿಯೊಂದು ಘಟನೆಯೂ ವಾಚಕರಲ್ಲಿ ಕುತೂಹಲವನ್ನು ಕೆರಳಿಸಿ, ಕೊನೆಯವರೆಗೂ ಓದಲು ಹಚ್ಚುವಂತಹ ಗುಣದಿಂದ ಕೂಡಿದೆ. ಆದರೆ, ವಿಮರ್ಶಾದೃಷ್ಟಿಯಿಂದ ಓದುವವರನ್ನು, ಅನೇಕ ಸಂದರ್ಭಸಂಗತಿಗಳು ತಡೆದು ನಿಲ್ಲಿಸುವುವು. ಅವರಲ್ಲಿ ತಲೆದೋರಿದ ಸಂದೇಹಗಳಿಗೆ ತಕ್ಕ ಉತ್ತರವನ್ನು ಕೊಡುವುದಕ್ಕೆ ಶಕ್ತಿಯಿಲ್ಲದೆ, ಕತೆಯ ಶಕ್ತಿಯನ್ನು ಕಡಿಮೆ ಮಾಡುವುವು. ದೇಶ-ಕಾಲ-ಪರಿಸ್ಥಿತಿಗಳ ಹಿನ್ನೆಲೆಯಲ್ಲಿ ಹೊಂದಿಕೆಯೆ ಕಾಣುವುದಿಲ್ಲ.

ಕಾದಂಬರಿಯ ಭಾಷೆ ಸುಲಭಾರ್ಥಬೋಧಕವಾಗಿದೆಯಾದರೂ, ಇಂಗ್ಲಿಷಿನಿಂದ ಅನುವಾದಿತವಾಗಿ ಬಂದುದರಿಂದಲೋ ಏನೋ, ಅಲ್ಲಲ್ಲಿ ಕೆಲವು ವಾಕ್ಯಗಳ ರೀತಿ ಕನ್ನಡವೆಂದು ಎನಿಸುವುದಿಲ್ಲ. ಶಬ್ದಶುದ್ಧಿಯ ಕಡೆಗೂ ಮುದ್ರಣಶುದ್ಧಿಯ ಕಡೆಗೂ ಇನ್ನಷ್ಟು ಹೆಚ್ಚಿಗೆ ಲಕ್ಷ್ಯಕೊಡಬೇಕಾಗಿತ್ತು. ಹಾಗೆ ಕೊಟ್ಟಿಲ್ಲವೆಂತಲೇ 'ಕೂಲಂಕಷ' ಎಂದಿರಬೇಕಾದುದು 'ಕೂಲಂಕುಷ' ಎಂದಾಗಿದೆ. 'ಮಾತ್ರ' ಎಂಬ ಶಬ್ದ 'ಮೂತ್ರ'ವಾದುದೂ 'ಗಡ್ಡ' ಶಬ್ದವು 'ಗುಡ್ಡ'ವಾದುದೂ (ಇಂತಹ ದೋಷ ತುಂಬ ಇವೆ.) ಮುದ್ರಣ ದೋಷದ ಮೋಜಿನ ಮಾದರಿಗಳು.

ಪತ್ತೇದಾರಿ ಕಾದಂಬರಿಗಳ ನಿರ್ಮಿತಿ ಇತ್ತೀಚೆಗೆ ನಮ್ಮಲ್ಲಿ ತೀರ ಕಡಿಮೆಯಾಗಿದೆ. ಆದರೆ ಅವುಗಳನ್ನು ಅಪೇಕ್ಷಿಸುವ ವಾಚಕರ ಸಂಖ್ಯೆ ತುಂಬ ಇದೆ. ಅಂತಹರಿಗಾಗಿ 'ಹರಿಜಾತ'ರು ಈ 'ಬೇಟೆಯ ನಾಯಿ'ಯನ್ನು ನಿರ್ಮಿಸಿಕೊಟ್ಟಿದ್ದಾರೆ. ಅನೇಕ ಕನ್ನಡಿಗರ ಮನೋರಂಜನೆಗೆ ಇದು ಅವಕಾಶವನ್ನು ಒದಗಿಸಿಕೊಡಬಲ್ಲದು. ಆದುದರಿಂದ ಲೇಖಕರಿಗೂ ಪ್ರಕಾಶಕರಿಗೂ ನಮ್ಮ ಅಭಿನಂದನೆಗಳು.

— ಬಿ. ಪಿ. ಎಸ್. ರಾವ್.

ವಿಮರ್ಶೆಯ ಶಿಕ್ಷಣರಂಗದ ಬೇಡಿಕೆ

ಕಳೆದ ಸಂಪುಟದ ಸಂಚಿಕೆಗಳಲ್ಲಿ ಪ್ರತಿ ತಿಂಗಳೂ ಪ್ರಕಟವಾಗುತ್ತಲಿದ್ದ 'ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ'ವನ್ನು ನಾವು ನಿಲ್ಲಿಸಿದ್ದೇವಷ್ಟೇ? ಆದರೆ ನಮ್ಮ ವಾಚಕವರ್ಗದಿಂದ ಅದರ ಆವಶ್ಯಕತೆಯನ್ನು ಅಪೇಕ್ಷಿಸಿ, ಆಗಾಗ ಕಾಗದಗಳು ಬಂದೇಬರುತ್ತಲಿವೆ. ಈಗಾಗಲೇ ೨೫–೩೦ ಜನರಿಂದ ಬಂದಿವೆ. ಅವುಗಳಲ್ಲಿ ಅವರು ಆ ಲಾಕ್ಷಣಿಕೆಯ ಬಗೆಗೆ ಎಷ್ಟೊಂದು ಉತ್ಕಟಭಾವದವರಾಗಿದ್ದಾರೆಂಬುದು ಕಂಡುಬರುವಂತಿದೆ. ಮಾದರಿಗಾಗಿ ಎರಡು ಪತ್ರಗಳನ್ನು ಕೆಳಗೆ ಪ್ರಕಟಿಸಲಾಗಿದೆ.

ಸಂ. ಜ.

೧

ಸನ್ಮಾನ್ಯ ಸಂಪಾದಕರೆ,

"ಮುಂಬರಲಿರುವ ನೂತನವರ್ಷವು ಜಯಂತಿಯ ಮಹೋನ್ನತವಾದ ಮೇಲ್ಮೆಗೆ ಕಾರಣವಾಗಲೆಂದೇ ಜಗದೀಶನಲ್ಲಿ ಬೇಡಿಕೆ

ಈ ಶುಭಾಕಾಂಕ್ಷೆಯಲ್ಲೇ ತಮ್ಮಲ್ಲೊಂದು ನಿವೇದನೆ—

ತಮ್ಮ ಈ ಬಾರಿಯ ಸಂಚಿಕೆಯ ಅವಲೋಕನದ ಬಳಿಕುಂಟಾದ ವಿಷಾದದಿಂದ ಈ ನಿವೇದನೆಗೆಡೆಗೊಟ್ಟಿರುವೆನು.

ಸಾಮಾನ್ಯವಾಗಿ, ವರ್ತಮಾನ ಶತಮಾನದಲ್ಲಿ ಪುಸ್ತಕ ಬರೆವವರ ಸಂಖ್ಯೆಯು ಮಿಗಿಲಾಗಿರುತ್ತ, ವಿಮರ್ಶೆಗಾಗಿ ಪತ್ರಿಕೆಗಳಿಗೆ ಬರುತ್ತಿರುವುದು ಸ್ವಾಭಾವಿಕವಾಗಿದೆ. ಅವನ್ನು ವಿಮರ್ಶಿಸುವುದು ಪತ್ರಿಕೆಗಳ ಕರ್ತವ್ಯವೇ ಸರಿ. ಅದಕ್ಕೆಂದೇ ಎಲ್ಲಾ ಪತ್ರಿಕೆಗಳೂ ಕೆಲವು ಪುಟಗಳನ್ನು ಮೀಸಲಾಗಿಸಿ ವಿಮರ್ಶೆಗಳನ್ನೀಯುತ್ತಿವೆ. ಇದು ಪತ್ರಿಕೆಗಳ ದೃಷ್ಟಿಯಿಂದ ಸಾಮಾನ್ಯವಾದ ಮಾತು. ಆದರೆ ಜಯಂತಿಯು ಈವರೆಗೆ ನಡೆಯಿಸಿಕೊಂಡು ಬರುತ್ತಿದ್ದ "ವಿಮರ್ಶಾ ಶಿಕ್ಷಣರಂಗ"ವೆಂಬುದು, ಪ್ರಚಲಿತ ಪತ್ರಿಕೆಗಳ ದೃಷ್ಟಿಯಿಂದ ನೋಡಿದರೆ, ನಿಜವಾಗಿ ಅದೊಂದು ಮಾರ್ಗದರ್ಶೀ ಸಾಂಸ್ಕೃತಿಕ ನೂತನ ವಿಶಿಷ್ಟಮಾರ್ಗವಾಗಿದೆ. ಈ ರಂಗವು ತರುಣ ವಿಮರ್ಶಕರ ವಿಮರ್ಶಾವ್ಯವಸಾಯವನ್ನು ಬೆಳೆಯಿಸಿ, ವಾಚಕ ವೃಂದದ ದೃಷ್ಟಿಯನ್ನು ಸೆಳೆವ ವಿಭಾಗವಾಗಿದೆಯೆಂದು, ನನ್ನ ಹಾಗೂ–ನನ್ನ ಸ್ನೇಹಿತರ ಅಭಿಮತವಾಗಿದೆ. ಇಂತಹ ವಿಭಾಗವನ್ನು 'ಪುಸ್ತಕ ವಿಮರ್ಶೆಗಾಗಿ ಪುಟಗಳು ಬೇಕಾಗಿವೆ' ಎಂಬ ಕಾ ರ ಣ ದಿಂ ದ ದೂರಗೊಳಿಸುವುದು ಸ ರ್ವ ಥಾ ಉಚಿತವಲ್ಲವೆಂದೂ, ಹಾಗೆ ಜಯಂತಿಯು ಈ ಒಂದು ಅತ್ಯುತ್ಕೃಷ್ಟ ವಿಭಾಗವನ್ನು ತಳ್ಳಬಾರದೆಂದೂ ನಾನು ನಿವೇದಿಸುತ್ತೇನೆ.

—ಕೆ. ಎಸ್. ಶರ್ಮಾ, ಕಾಸರಗೋಡು.

೨

ಮಾನ್ಯ ಸಂಪಾದಕರೇ,

ನಿಮ್ಮ ಮೇ ತಿಂಗಳ ಸಂಚಿಕೆಯನ್ನು ಓದಿದೆ ವಾಡಿಕೆಯಂತೆ "ವಿಮರ್ಶಾ ಶಿಕ್ಷಣರಂಗ"ವನ್ನೂ ನೋಡಿದೆ. ಆದರೆ ಮುಂದಿನ ತಿಂಗಳಿಂದ "ವಿಮರ್ಶಾ ಶಿಕ್ಷಣರಂಗ" ವಿಭಾಗವನ್ನು ನಿಲ್ಲಿಸಿ ಬಿಡುವುದನ್ನು ಓದಿದಾಗ, ಸ್ವಲ್ಪ ಅಸಮಾಧಾನವಾಯಿತು. ಕರ್ನಾಟಕದಲ್ಲಿ ಇಷ್ಟೊಂದು ಮಾಸಪತ್ರಿಕೆ, ವಾರಪತ್ರಿಕೆ ಹಾಗೂ ದಿನಪತ್ರಿಕೆಗಳು ಇದ್ದಾಗ್ಯೂ, ಸಾಹಿತ್ಯದ ಅಭ್ಯಾಸಿಗಳಿಗೆ ಪ್ರತ್ಯಕ್ಷ ಭಾಗ ತೆಗೆದುಕೊಳ್ಳಲು "ವಿಮರ್ಶೆಗಾಗಿ" ಯಾವ ಒಂದು ಸ್ಥಾನವನ್ನೂ ಕಲ್ಪಿಸಿಲ್ಲ. "ಜಯಂತಿ"ಯ ಈ ಉಪಕ್ರಮ, ಕರ್ನಾಟಕದಲ್ಲಿಯೇ ಮೊದಲನೆಯದಾಗಿತ್ತು. ಜಯಂತಿಯಿಂದ ಉತ್ತೇಜಿತರಾಗಿ ಅದೆಷ್ಟೋ ತರುಣಲೇಖಕರಿಂದು ಒಳ್ಳೆಯ ವಿಮರ್ಶಕರೂ ಆಗಹತ್ತಿದ್ದಾರೆಂಬುದು, ಹೆಮ್ಮೆಯಿಂದ ಹೇಳುವ ಸಂಗತಿಯಾಗಿದೆ. ವಿಮರ್ಶೆ ಕೇವಲ ಓದುವುದರಿಂದ ಬಾರದು; ಅದರಲ್ಲಿ ಕೈ ಪಳಗಬೇಕಾದರೆ, ವಿಮರ್ಶಕನು ಪ್ರತ್ಯಕ್ಷವಾಗಿಯೇ ಭಾಗ ತೆಗೆದುಕೊಳ್ಳಬೇಕು. ಆಗಲೇ ಅವನಿಗೆ ತನ್ನ ವಿಮರ್ಶೆಯ ತೂಕ ತಿಳಿಯುವುದು. ಆದುದರಿಂದ ನೀವು ಈ ವಿಭಾಗವನ್ನು ನಿಲ್ಲಿಸಿ ಬಿಡುವುದರಿಂದ, ಅದೆಷ್ಟೋ ಉದಯೋನ್ಮುಖ ಲೇಖಕರಿಗೂ ಹಾಗೂ ವಿಮರ್ಶಕರಿಗೂ ನಿರುತ್ಸಾಹ ಮಾಡಿದಂತಾಗುವುದು. ಈ ವಿಭಾಗದಿಂದ ನಿಮಗೆ ಸ್ವಲ್ಪ ತೊಂದರೆಯಾದುದೇನೋ ನಿಜ; ಆದರೆ ಅದೆಷ್ಟೋ ಹೊಸ ಲೇಖಕರು ನಿಮಗೆ ಚಿರಋಣಿಯಾಗಿರುವರೆಂಬುದು ಮರೆಯದ ಮಾತಾಗಿದೆ ಆದುದರಿಂದ ನೀವು ದಯವಿಟ್ಟು, ಹೊಸ ಲೇಖಕರಲ್ಲಿ ಅಡಗಿರುವ ಉತ್ಸಾಹ ಶಕ್ತಿಯನ್ನು ಕಮರಿಸದೆ, ಈಗಿದ್ದ ವಿಭಾಗವನ್ನು ಮುಂದುವರಿಸುವಿರಾಗಿ ನಂಬುವೆ. ಈ ವಿಭಾಗಕ್ಕೆ ಇಷ್ಟೊಂದು ಪುಟಗಳನ್ನು ಕೊಡುವುದು ಸಾಧ್ಯವಾಗದೆ ಹೋಗಬಹುದು; ಅದಕ್ಕಾಗಿ ಈ ವಿಭಾಗಕ್ಕೆ ಪುಟಸಂಖ್ಯೆಯ ನಿಯಮವಿಟ್ಟಾದರೂ ಈ ವಿಭಾಗವನ್ನು ಮುಂದುವರಿಸಬೇಕಾಗಿ ಬಿನ್ನಹ. ಒಮ್ಮೆಲೇ ಅದನ್ನು ನಿಲ್ಲಿಸಿ ಬಿಡುವುದು ಹೊಸ ಲೇಖಕರಿಗೆ ನಿರುತ್ಸಾಹದ ವಿಷಯವೇ ಸರಿ.

ಮತ್ತೊಮ್ಮೆ ನಿಮಗೆ ಈ ವಿಭಾಗವನ್ನು ಮುಂದುವರಿಸಲು ಅವಶ್ಯವಾಗಿ ಬೇಡುವ,

ನಿಮ್ಮ

ಹ. ನ. ದೇಶಪಾಂಡೆ, ವಿಜಾಪುರ

ಸಾದರ ಸ್ವೀಕಾರ

卐

೪೪. **ಬೇತಾಳಗಳ ಕುಣಿತ ಅಥವಾ ಸಿದ್ಧ ಸಭೆಯ ಕಾರ್ಯ** (ವಿಡಂಬನ ಕೃತಿ) ಬರೆದವರು ಶ್ರೀ. ಬ. ಹೆ. ಶ್ರೀಧರ ಎಂ. ಎ. ಅವರು. ಹುಬ್ಬಳ್ಳಿಯ ಸರ್ವೋದಯ ಸಾಹಿತ್ಯಮಾಲೆಯ ೩ನೆಯ ವರ್ಷದ ೩ನೆಯ ಕುಸುಮ ಕ್ರಾ ಅ. ೯೬ ಪುಟಗಳು. ಬೆಲೆ ೧-೦-೦.

೪೫. **ಕೆರೆಗೆ ಹಾರ** (ಜಾನಪದ ಕಾದಂಬರಿ) ಬರೆದವರು ಶ್ರೀ. ಕುಲಕರ್ಣಿ ಬಿಂದುಮಾಧವರು. ಬಾದಾಮಿಯ ಶಾಂತಿ ಸಾಹಿತ್ಯಮಾಲೆಯ ೪ನೆಯ ಕುಸುಮ. ಕ್ರಾ. ಅ ೧೩೦ + ೮ ಪುಟಗಳು. ಬೆಲೆ ೧-೧೨-೦.

೪೬. **ಜೀವನದರ್ಶನ** (ಕಥಾಸಂಕಲನ) ಬೇರೆಬೇರೆ ಕತೆಗಾರರು ಬರೆದುದು ಬಾದಾಮಿಯ ಶಾಂತಿ ಸಾಹಿತ್ಯಮಾಲೆಯ ೫ನೆಯ ಕುಸುಮ. ಕ್ರಾ. ಅ. ೧೪೦ ಪುಟಗಳು. ಬೆಲೆ ೧-೧೨-೦.

೪೭. **ಬೆಳಗಾಂವಿಯ ಸಾರ್ವಜನಿಕ ವಾಚನಾಲಯದ ವಾರ್ಷಿಕ ವರದಿ** (೧೯೫೦-೫೧). ಗೌರವ ಕಾರ್ಯದರ್ಶಿಗಳು ಶ್ರೀಯುತರುಗಳಾದ ಕೆ. ಜಿ. ಜೋಶಿ, ಆರ್. ಬಿ. ಪೋತದಾರ ಫು. ಸ್ಕ್ಯಾ. ಫೋ. ೪ ಪುಟಗಳು.

ಬೆಳಗಾಂವಿಯ ಕನ್ನಡಿಗರ ಆಚಾರೋಕತೆಯ ಮೂಲಕ, ಕನ್ನಡ ಭಾಷೆಗೆ ಗೌರವ-ಪ್ರಾಶಸ್ತ್ಯಗಳು ಒಂದು ಕಾಲದಲ್ಲಿ, ಈ ಸಾರ್ವಜನಿಕ ವಾಚನಾಲಯದಲ್ಲಿ ಇರಲೇ ಇಲ್ಲ. ಇಂದು ಕನ್ನಡ ಗ್ರಂಥ-ಪತ್ರಿಕೆಗಳಿಗೂ ಇದು ಸಾಕಷ್ಟು ಅವಕಾಶವನ್ನು ಕಲ್ಪಿಸಿಕೊಟ್ಟಿರುವುದು, ಬೆಳಗಾಂವಿಯ ಕನ್ನಡಿಗರ ಜಾಗೃತಿಯ ಕುರುಹಾಗಿದೆ. ಎಲ್ಲ ಬಗೆಯ ಅನುಕೂಲತೆಗಳೂ ಇರುವ ಈ ವಾಚನಾಲಯವು, ಕರ್ನಾಟಕದಲ್ಲಿ ಒಂದು ಮಾದರಿಯ ವಾಚನಾಲಯವಾಗಿ ಬೆಳೆಯಲಿ!

೪೮. **ಸಂಸ್ಕೃತ ವ್ಯಾಕರಣ ಚಂದ್ರಿಕಾ** (ಭಾಗ ೧) ಬರೆದವರು ಶ್ರೀಮಾನ್ ವಾ. ಗ. ಮುಳಗುಂದ ಅವರು. ಪ್ರಕಾಶಕರು ಶ್ರೀಮಾನ್ ವಾ. ಹು. ನಾಗರಹಳ್ಳಿ, ಮುಖ್ಯಾಧ್ಯಾಪಕರು ಪಿ. ಡಿ. ಜೆ ಹೈಸ್ಕೂಲ್, ವಿಜಾಪುರ. ಕ್ರಾ ಅ. ೧೯೬ ಪುಟಗಳು ಬೆಲೆ ೦-೧೪-೦.

೪೯. **ಮುತ್ತಿನ ಮಲ್ಲಿ** (ಶೃಂಗಾರಕಥೆ) ಬರೆದವರು ಶ್ರೀಮಾನ್ ಜಿ. ಪಿ. ರಾಜರತ್ನಂ. ಪ್ರಕಾಶಕರು ಆನಂದ ಬ್ರದರ್ಸ್, ಬೆಂಗಳೂರು ೨. ಕ್ರಾ. ಅ. ೧೩೮ ಪುಟಗಳು. ಬೆಲೆ ೧-೧೨-೦

೫೦. **ಕರಿಯ ಕಂಬಳಿ** (ಕಥಾಸಂಕಲನ) ಬರೆದವರು ಶ್ರೀಮಾನ್ ಜಿ.ಪಿ. ರಾಜರತ್ನಂ. ಪ್ರಕಾಶಕರು ಆನಂದ ಬ್ರದರ್ಸ್, ಬೆಂಗಳೂರು ೨. ಕ್ರಾ. ಅ. ೧೪೮ ಪುಟಗಳು; ಬೆಲೆ ೧-೧೨-೦.

೫೧ **ಭಾವಸಂಧಿ** (ಕಥಾಸಂಕಲನ) ಬರೆದವರು ಶ್ರೀ. ರಾಮಲಿಂಗಯ್ಯ. ಪ್ರಕಾಶಕರು ಪೂರ್ಣಿಮಾ ಗ್ರಂಥಮಾಲೆ, ಅಳಿಕೆ, ದ. ಕ. ಜಿಲ್ಲಾ. ಕ್ರಾ. ಅ. ೭೮ ಪುಟಗಳು. ಬೆಲೆ ೦-೧೪-೦.

೫೨. **ಬಾಲಬಂಧು** (ಮಕ್ಕಳ ಮಾಸಪತ್ರಿಕೆಯ ವಿಶೇಷ ಸಂಚಿಕೆ). ಸಂಪಾದಕರು ಶ್ರೀ. ಎನ್. ಡಿ. ರಾಮಮೂರ್ತಿ ಅವರು. ಪ್ರಕಾಶಕರು ಆರ್. ಎನ್. ನ್ಯೂಜ್ ಏಜನ್ಸಿ, ೬೬೫, ಚಿಕ್ಕಪೇಟೆ, ಬೆಂಗಳೂರು ೨. ಡೆ. ಅ. ೧೬ ದ ೧೦೦ ಪುಟಗಳು. ಬೆಲೆ ೦-೪-೦.



BOMBAY OFFICE : Princess Street

ಏಜಂಟರು ಬೇಕು

ಜಯಂತಿಯನ್ನು ಮಾರಾಟ ಮಾಡಲಿಕ್ಕೆ ಕರ್ನಾಟಕದ ಬೇರೆ ಬೇರೆ ನಗರಗಳಲ್ಲಿ, ಪ್ರಾಮಾಣಿಕ ಏಜಂಟರು ಬೇಕು. ಯೋಗ್ಯ ಕಮಿಶನ್ ಕೊಡಲಾಗುವುದು. ಕರಾರುಗಳಿಗಾಗಿ ಪತ್ರವ್ಯವಹಾರ ಮಾಡಿ ತಿಳಿದುಕೊಳ್ಳಬೇಕು. ಮನೆ ಮನೆಗೂ ಇರಬೇಕಾದ ಈ ಪತ್ರಿಕೆಯನ್ನು ಮನೆಮನೆಗೂ ತಲ್ಪಿಸುವ ಅಗತ್ಯವಿದೆ.

ವ್ಯ. ಜ.

ಪರಿಪೋಷಿಸಿ ತೋರಿಸಬಹುದಾಗಿದ್ದಿತು. ಆದರೆ ಈ ನಾಟಕದಲ್ಲಿ ಐತಿಹಾಸಿಕಸತ್ಯಕ್ಕೂ ಅವಕಾಶವಿಲ್ಲದಂತಾಗಿದೆ; ಕಥಾಚಮತ್ಕೃತಿ, ಪಾತ್ರಪುಷ್ಟಿ, ರಸಪುಷ್ಟಿಗೂ ಅವಕಾಶವಿಲ್ಲದಂತಾಗಿದೆ.

ಇತಿಹಾಸದ ಘಟನೆಗಳಿಗೆ ಲೇಖಕರು ಅಪರಿಚಿತರಾಗಿರುವಂತೆ, ಐತಿಹಾಸಿಕ ಹಿನ್ನೆಲೆಯನ್ನು ನಿರ್ಮಿಸುವುದರಲ್ಲಿಯೂ ತಮ್ಮ ಅಸಮರ್ಥತೆಯನ್ನು ತೋರಿಸಿಕೊಂಡಿರುವರು. ಎರಡನೆಯ ಪ್ರವೇಶದಲ್ಲಿಯೆ ವೀಣೆಯನ್ನು ನುಡಿಸುವ ಚೆನ್ನಮ್ಮರಾಣಿ ನಮಗೆ ಕಾಣುವಳು. ಆದರೆ ತುಂಗಭದ್ರೆಯಿಂದೀಚಿನ ಪ್ರದೇಶದಲ್ಲಿ, ೨೦೦ ವರ್ಷಗಳಿಂದಲೂ ವೀಣೆ ಅಪರಿಚಿತವೆ! ಅದರಲ್ಲಿಯೂ ಚೆನ್ನಮ್ಮರಾಣಿ ಬೆಳಗಾಂವಿಯ ಬಳಿಯ ಕಾಗತಿಯ ಧೂಳಪ್ಪ ದೇಸಾಯಿಯ ಮಗಳು. ಅವಳು ವೀಣೆಬಾರಿಸಲು ಕಲಿತೇ ಇದ್ದಳೆಂದು ಲೇಖಕರು ಹಟಹಿಡಿದರೆ ಉಪಾಯವಿಲ್ಲ. ಇನ್ನು ಚೆನ್ನಮ್ಮ ಮಲ್ಲಸರ್ಜರ (ಇವನು ಸತ್ತು ಐದು ವರ್ಷಗಳಾಗಿವೆ.) ಮಾತುಗಳಂತೂ ಐತಿಹಾಸಿಕ ಹಿನ್ನೆಲೆಯ ಅಜ್ಞಾನದ ಮೂಲಕ ನೀರಸವಾಗಿಬಿಟ್ಟಿವೆ. ಮೂರನೆಯ ಪ್ರವೇಶದಲ್ಲಿ ಥ್ಯಾಕರೇ ಮೊದಲಾದವರು ಆಡುವ ಮಾತುಗಳೂ, ಸ್ವಾರ್ಥಸಾಧಕರಾಗಿ ಬಂದ ಮಲ್ಲಪ್ಪಸೆಟ್ಟಿ-ವೆಂಕಟರಾಯರ ಮಾತುಗಳೂ ಕತೆಯನ್ನು ಮುಂದುವರಿಸಲು ಮಾತ್ರ ಉಪಯೋಗವಾಗಿವೆಯಷ್ಟೆ; ಯಾವುದೇ ಭಾವದ ಬೆಳವಣಿಗೆಯನ್ನಾಗಲಿ, ಪಾತ್ರದ ಬೆಳವಣಿಗೆಯನ್ನಾಗಲಿ, ಇಲ್ಲಿ ಕಾಣುವಂತಿಲ್ಲ ಇಷ್ಟೇ ಅಲ್ಲ; ಬ್ರಿಟಿಷ್ ರಾಜ್ಯತಂತ್ರಜ್ಞನಾದ ಥ್ಯಾಕರೆಯೂ ಹೀಗೆ ಮೊದ್ದನಂತೆ ಮೊಂಡು-ಮೊಂಡಾಗಿ ಮಾತನಾಡುತ್ತಿದ್ದನೇ ?— ಎಂದು ಆಶ್ಚರ್ಯಪಡುವಂತಿದೆ. ಮಲ್ಲಪ್ಪಸೆಟ್ಟಿ ವೆಂಕಟರಾಯರಂತೂ, ಲೇಖಕರು ಹೇಳಿದಂತೆ ಕೈಕಾಲುಗಳನ್ನಾಡಿಸುವ ಅರಿವೆಯ ಗೊಂಬೆಗಳು.

೫ನೆಯ ವಿಭಾಗದಲ್ಲಿಯೋ, ತಂತ್ರದೃಷ್ಟಿಯಿಂದ ನಾಟಕವು ನಗೆಗೆ ಈಡಾಗುವಂತಿದೆ. ಕೋಟೆಯ ಹೆಬ್ಬಾಗಿಲನ್ನು ಹಾಕಿಸಿದ ಚೆನ್ನಮ್ಮರಾಣಿ ಕೋಟೆಯ ಒಳಗಿರುವಳು; ಕೋಟೆಗೆ ಮುತ್ತಿಗೆ ಹಾಕಿದ ಥ್ಯಾಕರೇದೊರೆ ಕೋಟೆಯ ಹೊರಗೆ ಇರುವನು. ಇಬ್ಬರಲ್ಲಿಯೂ ಬಹಳ ವೇಳೆಯ ವರೆಗೆ ಮಾತು-ಕತೆ, ವಾದ-ವಿವಾದ ನಡೆಯುವುದು. ಕೋಟೆಯ ಗೋಡೆಯೆಂದರೆ ನಡುವೆ ಇಳಿಬಿಟ್ಟ ನಾಟಕದ ಪರದೆಯೆಂದು ಲೇಖಕರ ಭಾವನೆಯಿದ್ದಂತೆ ಕಾಣುವುದು. ಏಕೆಂದರೆ ಒಳಗಿದ್ದ ಚೆನ್ನಮ್ಮರಾಣಿಯೂ ಹೊರಗಿದ್ದ ಥ್ಯಾಕರೇದೊರೆಯೂ ಎದುರೆದುರು ನಿಂತು ಸಹಜವಾಗಿ ಮಾತನಾಡಿದಂತೆ ಕೇಳುವವರಿಗೆ ಎನಿಸುವುದು. ಒಂದು ವೇಳೆ ಇಬ್ಬರೂ ಕೂಗಿ ಕೂಗಿ ಮಾತನಾಡಿದರೂ, ಒಬ್ಬರೊಬ್ಬರ ಮಾತು ಒಬ್ಬರೊಬ್ಬರಿಗೆ ಕೇಳಿಸಲು ಸಾಧ್ಯವೇ ?.... ಮುತ್ತಿಗೆ ಹಾಕಿದ ಕೋಟೆಯ ಬಳಿಯಲ್ಲಿ. ಸರಿ, ಇಬ್ಬರ ವಾದ-ವಿವಾದ ಮುಗಿದೊಡನೆಯೆ ಕೋಟೆಯ ಬಾಗಿಲು ತೆರೆಯುತ್ತದೆ. ಮುಂದೆ ಒಂದೆರಡು ನಿಮಿಷದ ವೇಳೆಯನ್ನೂ ಕೊಟ್ಟಿಲ್ಲ. ಥ್ಯಾಕರೇನ ಬಂದೂಕಿ ನೇಟು ಚೆನ್ನಮ್ಮರಾಣಿಯ ಅಂಗರಕ್ಷಕ ಬಾಳಾಸಾಹೇಬ (?) ನನ್ನು ಬಲಿತೆಗೆದುಕೊಳ್ಳುತ್ತದೆ. ಕೂಡಲೇ ಚೆನ್ನಮ್ಮರಾಣಿಯ ಬರ್ಚಿಯೇಟು ಥ್ಯಾಕರೇ ದೊರೆಯ ಪ್ರಾಣವನ್ನು ತೆಗೆದುಕೊಳ್ಳುತ್ತದೆ. ಸಾಯುವಾಗ ಅವನು 'ಓ ಗಾಡ್ :I am dying' ಎಂದು ಹೇಳಿಯೇ ಸಾಯುತ್ತಾನೆ. ಆಗ ಒಬ್ಬನೇ ಕಿತ್ತೂರ ಸೈನಿಕ 'ಥ್ಯಾಕರೇ ಸಾಹೇಬ ಬಿದ್ದ....' ಎನ್ನುತ್ತಾನೆ. ಒಬ್ಬನೇ ಇಂಗ್ಲಿಷ್ ಸೈನಿಕ 'ಇನ್ನೇನು ನಮ್ಮ ಗತಿ! ನಮ್ಮ ನಾಯಕ ನೆಲಕ್ಕುರುಳಿದ!' ಎಂದು ಕಂಗೆಟ್ಟು ನುಡಿಯುತ್ತಾನೆ. ಲೇಖಕರು ಈ ರೇಡಿಯೋ ರೂಪಕ ಬರೆಯುವುದಕ್ಕೆ ಮೊದಲು, ಇಂಗ್ಲಿಷ್ ಭಾಷೆಯಲ್ಲಿರುವ ಎಷ್ಟೋ ತಂತ್ರಗ್ರಂಥಗಳನ್ನು ಓದಿ ಅಭ್ಯಾಸಮಾಡಿಕೊಂಡಿದ್ದಾರಂತೆ. ಆ ಅಭ್ಯಾಸದ ಫಲವೇ ಇದಾಗಿದ್ದರೆ ಆಶ್ಚರ್ಯದ ಸಂಗತಿಯೇ ಸರಿ!

೬ನೆಯ ವಿಭಾಗದಲ್ಲಿಯ ಚೆನ್ನಮ್ಮನ ದರ್ಬಾರಿನಲ್ಲಿಯ ನ್ಯಾಯವಿಚಾರಣೆಯು ಗಡಬಡಿ, ಭಾವಾಭಾಸದ ಮುದ್ದೆ. ಸೆರೆಯಾಳುಗಳಾದ ಸ್ಟೀವನ್‌ಸನ್, ಇಲಿಯಟ್ಟರುಗಳ ಮಾತುಗಳ ಮುಖಾಂತರ, ಚೆನ್ನಮ್ಮರಾಣಿಯ ಉದಾರಸ್ವಭಾವವನ್ನು ಪೋಷಿಸಬೇಕೆಂಬ ಪ್ರಯತ್ನವಿಲ್ಲಿ ಕಾಣುವುದಾದರೂ, ಪ್ರಯತ್ನ ಫಲಕಾರಿಯಾಗಿಲ್ಲ. ಸೋತ ಬ್ರಿಟಿಷರು ಮತ್ತೆ ಕಿತ್ತೂರಿನ ಮೇಲೆ ಸಾಗಿಬಂದು, ಮೋಸದಿಂದ ಕಿತ್ತೂರವರನ್ನು ಸೋಲಿಸಿ, ಚೆನ್ನಮ್ಮರಾಣಿಯನ್ನು ಸೆರೆಹಿಡಿದ ಪ್ರಸಂಗವೂ, ಅಳಿದ ಕಿತ್ತೂರ ದೇಸಗತಿಯನ್ನು ಮರಳಿ ಸ್ಥಾಪಿಸಲು ಸಂಗೊಳ್ಳಿ ರಾಯಣ್ಣ ಮಾಡಿದ ಪ್ರಯತ್ನದ ಸಂಗತಿಯೂ, ಆ ಪ್ರಯತ್ನವು ಸಫಲವಾಗದೆ ರಾಯಣ್ಣನು ಬ್ರಿಟಿಷರ ಕೈಗೆ ಸಿಕ್ಕು ಗಲ್ಲಿಗೇರಿದ ಸಂಗತಿಯೂ ೯-೧೦-೧೧ನೆಯ ಭಾಗವಾಗಿ ಬಂದಿರುವುವು. ರಾಯಣ್ಣನಿಗಾದ ಗಲ್ಲಿನ ಸುದ್ದಿ ತಿಳಿದಾಗ ಚೆನ್ನಮ್ಮರಾಣಿ, ನಿರಾಶೆಯಿಂದ ನಿಟ್ಟುಸಿರಿಟ್ಟು

ಪ್ರಕಟಿ

★

ವಯಸ್ಕರಿಗೆ ಮತ್ತು ವಿವಾಹಿತರಿಗೆ ಮಾತ್ರ

ಕೋಕಶಾಸ್ತ್ರ:— ಎರಡು ನೂರು ಬಣ್ಣದ ಚಿತ್ರಗಳುಳ್ಳ ಈ ಪುಸ್ತಕವನ್ನು ಕೆಳಗೆ ಕಾಣಿಸಿದ ವಸ್ತುಗಳನ್ನು ತರಿಸುವವರಿಗೆ **ಉಚಿತವಾಗಿ** ಕೊಡಲಾಗುವದು.

೧. ೨೫ ಶಯ್ಯಾಗೃಹದ ಚಿತ್ರಗಳು ಬೆಲೆ ರೂ. ೩.

೨. ಅದ್ಭುತ ಕನ್ನಡಕ-ಜೋಡಿಗೆ ೧೨ ಸುಂದರಿಯರ ಚಿತ್ರಗಳು. ಬೆಲೆ ರೂ. ೩.

ಇಷ್ಟೇ ಅಲ್ಲದೆ ೧೫೦ ಸುಂದರಿಯರ ಫೋಟೋಗಳ ಒಂದು ಸೆಟ್ಟು ಉಚಿತ.

ಬೆಲೆ ಮುಂಗಡ ಕಳಿಸಬೇಕು.

Radiant Health (6/H) AMRITSAR

ಪ್ರಲಾಪಿಸಿ 'ಸೋತು ನೆಲದ ಮೇಲೆ ದೊಪ್ಪನೆ ಬೀಳುವಳು !' ಈ ದುರಂತಸೂಚನೆಯೊಂದಿಗೆ ರೂಪಕವು ಕೊನೆಗೊಳ್ಳುವುದು.

ಈ ನಾಟಕದಲ್ಲಿ ಐತಿಹಾಸಿಕ ಸತ್ಯಘಟನೆಯೂ ಇಲ್ಲ; ನಾಟಕೀಯತೆಯ ರಸಸಂವಿಧಾನವೂ ಇಲ್ಲ. ರಸವಿರದಿದ್ದರೆ ಹೋಗಲಿ; ಶುದ್ಧ ಇತಿಹಾಸವನ್ನಾದರೂ ಇದು ಚಿತ್ರಿಸುತ್ತಿದೆಯೆಂದರೆ, ಅಷ್ಟರಮಟ್ಟಿಗೆ ಇದರ ಉಪಯುಕ್ತತೆಯನ್ನು ಒಪ್ಪಿಕೊಳ್ಳಬಹುದಾಗಿತ್ತು. ಆದರೆ ಅದು ಇಲ್ಲ.

ಶ್ರೀ. ಅ. ನ. ಕೃಷ್ಣರಾಯರ ಸಾಹಿತ್ಯದಲ್ಲಿ ಯಾವಾಗಲೂ ಕಂಡುಬರುತ್ತಿರುವ— 'ಅವಕುಂಠನ' 'ರಾಣ ಪ್ರತಾಪ' 'ದುರಂಧರೆ' 'ವೀರಪುಂಗ' 'ವೈಢೂರ್ಯ'— ಮೊದಲಾದ ಅಪಪ್ರಯೋಗಗಳಿಗೆ ಇದರಲ್ಲಿಯೂ ಎಡೆ ಇದ್ದೇ ಇದೆ.

ಇಂತಹ ಆಭಾಸಪೂರ್ಣ, ಇತಿಹಾಸದ ಆಧಾರಗಳಿಗೆ ದೂರವಾಗಿರುವ ಈ ನಾಟಕವು, ಕನ್ನಡನಾಟಕಗಳ ಪ್ರತಿನಿಧಿಯಾಗಿ ದಿಲ್ಲಿಯ ಆಕಾಶವಾಣಿ ಕೇಂದ್ರದಲ್ಲಿ ಬಿತ್ತರಗೊಂಡುದೆಂದರೆ ನಗೆ ಬರುವ ಮಾತು. ಶ್ರೀ. ಅ. ನ. ಕೃಷ್ಣರಾಯರು ಬೇರೆ ತಮ್ಮ ಕೃತಿಗಳಲ್ಲಿ ತಮ್ಮ ಕಲಾಪ್ರವೀಣತೆಯನ್ನು ತೋರಿಸಿರಬಹುದು. ಇದರಲ್ಲಿ ಮಾತ್ರ ಕಲೆಯು ತಲೆಯನ್ನೇ ಮೇಲೆ ಎತ್ತಿಲ್ಲವೆಂಬ ಮಾತನ್ನು ಹೇಳಬೇಕಾಗಿ ಬಂದುದಕ್ಕಾಗಿ ವಿಷಾದವೆನಿಸುತ್ತದೆ.

— ಬೆಟಗೇರಿ ಕೃಷ್ಣಶರ್ಮ.

ಬೇಟೆಯ ನಾಯಿ

(ಪತ್ತೇದಾರಿ ಕಾದಂಬರಿ)

ಬರೆದವರು 'ಹರಿಜಾತ'—ಹುಬ್ಬಳ್ಳಿಯ ಸಂಜೀವಿನಿ ಗ್ರಂಥಮಾಲೆಯ ಪ್ರಕಾಶನ, ಬೆಲೆ ೨—೮—೦.

ಪ್ರಕಾಶಕರು ಈ ಪುಸ್ತಕದ ಕೊನೆಯಲ್ಲಿ ಬರೆದ 'ಒಡೆಯನ ನುಡಿ'ಯಲ್ಲಿ ಪಾಶ್ಚಾತ್ಯ ಪತ್ತೇದಾರಿ ಕತೆಗಾರನಾದ ಶೆರ್ಲಾಕ್ ಹೋಮ್ಸ್‌ನ 'ಗ್ರಂಥಗಳನ್ನು ಓದಿಯೇ ಈ ಬೇಟೆಯ ನಾಯಿಯನ್ನು ಬರೆದುದಾಗಿ ಹರಿಜಾತರು ಹೇಳಿದರು' ಎಂದು ಹೇಳಿದ್ದಾರೆ. ಆದರೆ ಈ ಕಾದಂಬರಿಯನ್ನು ಓದಿ ಮುಗಿಸಿದವರಿಗೆ, ಇದು ಯಾವುದೋ ಒಂದು ಇಂಗ್ಲಿಷ್ ಕಾದಂಬರಿಯ ಅನುವಾದವಲ್ಲದೆ, ಸ್ವತಂತ್ರರೀತಿಯಿಂದ ಕಲ್ಪಿಸಿ ಬರೆದುದಲ್ಲವೆಂಬುದು ಒಡೆದು ಕಾಣುವಂತಿದೆ. ಕಾದಂಬರಿಯಲ್ಲಿಯ ಪಾತ್ರಗಳ ಹೆಸರು ಮಾತ್ರ ಭಾರತೀಯ ರೀತಿಯವು ಇವೆಯಷ್ಟೆ! ಅವುಗಳ ಸ್ವಭಾವ, ಸಂಸ್ಕೃತಿ, ಆಚಾರ-ವಿಚಾರ, ನಡೆ ನುಡಿ ಒಂದೂ ಭಾರತೀಯವಾಗಿ ಕಾಣುವುದಿಲ್ಲ. ಕಥೆಯ ಸಂವಿಧಾನಕ, ಹಿನ್ನೆಲೆ— ಇವೂ ಭಾರತೀಯ ಪದ್ಧತಿಗೆ ಅನುಗುಣವಾದುವೆಂದು ಎನಿಸುವುದಿಲ್ಲ.

ಒಂದು ಜಮೀನ್‌ದಾರಿಯ ದೂರದ ದಾಯಾದಿಯೊಬ್ಬ, ತಂತ್ರ-ಕುತಂತ್ರಗಳನ್ನು ಹೂಡಿ, ಜಮೀನ್‌ದಾರನಾದ ಚಿದಂಬರ್ ಬಾಸ್ಕ್ಯುರ್‌ಕರ್ ಎಂಬವರನ್ನು ಉಪಾಯದಿಂದ ಕೊಲೆಮಾಡಿದ್ದ. ಮುಂದೆ ಅವನ ವಾರಸದಾರನಾಗಿ, ಆ ಜಮೀನ್‌ದಾರಿಗೆ ಮಾಲಕನಾಗಿ ಬಂದ ಸರ್ ಹರಿಣೇಂದ್ರನನ್ನೂ ಕೊಂದು, ಆ ಆಸ್ತಿಗೆ ತಾನು ಮಾಲಕನಾಗಬೇಕೆಂದು ಹೊಂಚುಹಾಕಿದ್ದ. ಪತ್ತೇದಾರನಾದ ಸರಲಾಕ್ಷ ಹುಲಿಮೀಸೆಯು, ತನ್ನ ಸ್ನೇಹಿತನಾದ ವಾಮನರಾಯರ ಸಹಕಾರದಿಂದ, ಗಂಡಾಂತರಕ್ಕೆ ಒಳಗಾಗಲಿದ್ದ ಹರಿಣೇಂದ್ರರನ್ನು ಪಾರು ಮಾಡಿ, ಹೊಂಚುಗಾರನ ಸಂಚನ್ನೆಲ್ಲ ಹೊರಗೆ ಹಾಕಿದ. ಈ ಕುತೂಹಲಕಾರಿಯಾದ ಘಟನೆಯೆ ಕಾದಂಬರಿಯ ಕಥಾವಸ್ತು. ಕಳೆದ ಶತಮಾನದ ಕೊನೆಯ ಭಾಗ, ಕಥೆ ನಡೆದ ಕಾಲಖಂಡ. ಕಥಾಕ್ಷೇತ್ರವಾಗಿದ್ದ 'ಬಾಸ್ಕ್ಯುರ್‌ಕರ್ ಭವನ' ಇದ್ದಂತಹ ಕಗ್ಗಾಡಿನ ಪ್ರದೇಶವರ್ಣನೆಯೂ, ಪತ್ತೇದಾರ ಸರಲಾಕ್ಷನಿರುವ ನಗರದ ವರ್ಣನೆಯೂ ಕನ್ನಡ ವಾಚಕರಿಗೆ ತೀರ ಅಪರಿಚಿತವಾಗಿ— ವಿದೇಶೀಯವಾಗಿ ತೋರದಿರವು.

'ಬಾಸ್ಕ್ಯುರ್‌ಕರ್ ಭವನದ' ಡಾಕ್ಟರರಾದ ಜೋಶೀ ಮಾಧವೇಶರು, ಸರಲಾಕ್ಷ ಹುಲಿಮೀಸೆಯವರಲ್ಲಿ ಮರೆತು ಹೋದ ಕೈಬಡಿಗೆಯ ಕತೆಯಿಂದ ಮೊದಲುಮಾಡಿ, ದಾಯಾದಿ ಪರಮೇಶ್ವರಯ್ಯನ ಕ್ರೂರ ಬೇಟೆಯ ನಾಯ ಹಿಡಿತದಿಂದ ಹರಿಣೇಂದ್ರನನ್ನು ಉಳಿಸುವ ಕೊನೆಯ ಸಂಗತಿಯ ವರೆಗೂ, ಕಾದಂಬರಿಯ ಪ್ರತಿಯೊಂದು ಘಟನೆಯೂ ವಾಚಕರಲ್ಲಿ ಕುತೂಹಲವನ್ನು ಕೆರಳಿಸಿ, ಕೊನೆಯವರೆಗೂ ಓದಲು ಹಚ್ಚುವಂತಹ ಗುಣದಿಂದ ಕೂಡಿದೆ. ಆದರೆ, ವಿಮರ್ಶಾದೃಷ್ಟಿಯಿಂದ ಓದುವವರನ್ನು, ಅನೇಕ ಸಂದರ್ಭಸಂಗತಿಗಳು ತಡೆದು ನಿಲ್ಲಿಸುವುವು. ಅವರಲ್ಲಿ ತಲೆದೋರಿದ ಸಂದೇಹಗಳಿಗೆ ತಕ್ಕ ಉತ್ತರವನ್ನು ಕೊಡುವುದಕ್ಕೆ ಶಕ್ತಿಯಿಲ್ಲದೆ, ಕತೆಯ ಶಕ್ತಿಯನ್ನು ಕಡಿಮೆ ಮಾಡುವುವು. ದೇಶ-ಕಾಲ-ಪರಿಸ್ಥಿತಿಗಳ ಹಿನ್ನೆಲೆಯಲ್ಲಿ ಹೊಂದಿಕೆಯೆ ಕಾಣುವುದಿಲ್ಲ.

ಕಾದಂಬರಿಯ ಭಾಷೆ ಸುಲಭಾರ್ಥಬೋಧಕವಾಗಿದೆಯಾದರೂ, ಇಂಗ್ಲಿಷಿನಿಂದ ಅನುವಾದಿತವಾಗಿ ಬಂದುದರಿಂದಲೋ ಏನೋ, ಅಲ್ಲಲ್ಲಿ ಕೆಲವು ವಾಕ್ಯಗಳ ರೀತಿ ಕನ್ನಡವೆಂದು ಎನಿಸುವುದಿಲ್ಲ. ಶಬ್ದಶುದ್ಧಿಯ ಕಡೆಗೂ ಮುದ್ರಣಶುದ್ಧಿಯ ಕಡೆಗೂ ಇನ್ನಿಷ್ಟು ಹೆಚ್ಚಿಗೆ ಲಕ್ಷ್ಯಕೊಡಬೇಕಾಗಿತ್ತು. ಹಾಗೆ ಕೊಟ್ಟಿಲ್ಲವೆಂತಲೇ 'ಕೂಲಂಕಷ' ಎಂದಿರಬೇಕಾದುದು 'ಕೂಲಂಕುಷ' ಎಂದಾಗಿದೆ. 'ಮಾತ್ರ' ಎಂಬ ಶಬ್ದ 'ಮೂತ್ರ'ವಾದುದೂ 'ಗಡ್ಡ' ಶಬ್ದವು 'ಗುಡ್ಡ'ವಾದುದೂ (ಇಂತಹ ದೋಷ ತುಂಬ ಇವೆ.) ಮುದ್ರಣ ದೋಷದ ಮೋಜಿನ ಮಾದರಿಗಳು.

ಪತ್ತೇದಾರಿ ಕಾದಂಬರಿಗಳ ನಿರ್ಮಿತಿ ಇತ್ತೀಚೆಗೆ ನಮ್ಮಲ್ಲಿ ತೀರ ಕಡಿಮೆಯಾಗಿದೆ. ಆದರೆ ಅವುಗಳನ್ನು ಅಪೇಕ್ಷಿಸುವ ವಾಚಕರ ಸಂಖ್ಯೆ ತುಂಬ ಇದೆ. ಅಂತಹರಿಗಾಗಿ 'ಹರಿಜಾತ'ರು ಈ 'ಬೇಟೆಯ ನಾಯಿ'ಯನ್ನು ನಿರ್ಮಿಸಿಕೊಟ್ಟಿದ್ದಾರೆ. ಅನೇಕ ಕನ್ನಡಿಗರ ಮನೋರಂಜನೆಗೆ ಇದು ಅವಕಾಶವನ್ನು ಒದಗಿಸಿಕೊಡಬಲ್ಲದು. ಆದುದರಿಂದ ಲೇಖಕರಿಗೂ ಪ್ರಕಾಶಕರಿಗೂ ನಮ್ಮ ಅಭಿನಂದನೆಗಳು.

—ಬಿ. ಪಿ. ಎಸ್. ರಾವ್.

ವಿಮರ್ಶೆಯ ಶಿಕ್ಷಣರಂಗದ ಬೇಡಿಕೆ

ಕಳೆದ ಸಂಪುಟದ ಸಂಚಿಕೆಗಳಲ್ಲಿ ಪ್ರತಿ ತಿಂಗಳೂ ಪ್ರಕಟವಾಗುತ್ತಲಿದ್ದ ‘ ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ ’ವನ್ನು ನಾವು ನಿಲ್ಲಿಸಿದ್ದೇವಷ್ಟೇ ? ಆದರೆ ನಮ್ಮ ವಾಚಕವರ್ಗದಿಂದ ಅದರ ಆವಶ್ಯಕತೆಯನ್ನು ಅಪೇಕ್ಷಿಸಿ, ಆಗಾಗ ಕಾಗದಗಳು ಬಂದೇಬರುತ್ತಲಿವೆ. ಈಗಾಗಲೇ ೨೫–೩೦ ಜನರಿಂದ ಬಂದಿವೆ. ಅವುಗಳಲ್ಲಿ ಅವರು ಆ ಲಾಕ್ಷಣಿಕೆಯ ಬಗೆಗೆ ಎಷ್ಟೊಂದು ಉತ್ಕಟಭಾವದವರಾಗಿದ್ದಾರೆಂಬುದು ಕಂಡುಬರುತ್ತಿದೆ. ಮಾದರಿಗಾಗಿ ಎರಡು ಪತ್ರಗಳನ್ನು ಕೆಳಗೆ ಪ್ರಕಟಿಸಲಾಗಿದೆ.

ಸಂ. ಜ.

೧

ಸನ್ಮಾನ್ಯ ಸಂಪಾದಕರೆ,

“ ಮುಂಬರಲಿರುವ ನೂತನವರ್ಷವು ಜಯಂತಿಯ ಮಹೋನ್ನತವಾದ ಮೇಲ್ಮೆಗೆ ಕಾರಣವಾಗಲೆಂದೇ ಜಗದೀಶನಲ್ಲಿ ಬೇಡಿಕೆ

ಈ ಶುಭಾಕಾಂಕ್ಷೆಯಲ್ಲೇ ತಮ್ಮಲ್ಲೊಂದು ನಿವೇದನೆ—

ತಮ್ಮ ಈ ಬಾರಿಯ ಸಂಚಿಕೆಯ ಅವಲೋಕನದ ಬಳಿಕುಂಟಾದ ನಿಷ್ಠಾದದಿಂದ ಈ ನಿವೇದನೆಗೆಡೆಗೊಟ್ಟಿರುವೆನು

ಸಾಮಾನ್ಯವಾಗಿ, ವರ್ತಮಾನ ಕಾಲಮಾನದಲ್ಲಿ ಪುಸ್ತಕ ಬರೆವವರ ಸಂಖ್ಯೆಯು ಮಿಗಿಲಾಗಿರುತ್ತ, ವಿಮರ್ಶೆಗಾಗಿ ಪತ್ರಿಕೆಗಳಿಗೆ ಬರುತ್ತಿರುವುದು ಸ್ವಾಭಾವಿಕವಾಗಿದೆ. ಅವನ್ನು ವಿಮರ್ಶಿಸುವುದು ಪತ್ರಿಕೆಗಳ ಕರ್ತವ್ಯವೇ ಸರಿ. ಆದಕ್ಕೆಂದೇ ಎಲ್ಲಾ ಪತ್ರಿಕೆಗಳೂ ಕೆಲವು ಪುಟಗಳನ್ನು ಮೀಸಲಾಗಿಸಿ ವಿಮರ್ಶೆಗಳನ್ನೀಯುತ್ತಿವೆ. ಇದು ಪತ್ರಿಕೆಗಳ ದೃಷ್ಟಿಯಿಂದ ಸಾಮಾನ್ಯವಾದ ಮಾತು. ಆದರೆ ಜಯಂತಿಯು ಈವರೆಗೆ ನಡೆಯಿಸಿಕೊಂಡು ಬರುತ್ತಿದ್ದ “ವಿಮರ್ಶಾ ಶಿಕ್ಷಣರಂಗ ”ವೆಂಬುದು, ಪ್ರಚಲಿತ ಪತ್ರಿಕೆಗಳ ದೃಷ್ಟಿಯಿಂದ ನೋಡಿದರೆ, ನಿಜವಾಗಿ ಅದೊಂದು ಮಾರ್ಗದರ್ಶೀ ಸಾಂಸ್ಕೃತಿಕ ನೂತನ ವಿಶಿಷ್ಟಮಾರ್ಗವಾಗಿದೆ. ಈ ರಂಗವು ತರುಣ ವಿಮರ್ಶಕರ ವಿಮರ್ಶಾವ್ಯವಸಾಯವನ್ನು ಬೆಳೆಯಿಸಿ, ವಾಚಕ ವೃಂದದ ದೃಷ್ಟಿಯನ್ನು ಸೆಳೆವ ವಿಭಾಗವಾಗಿದೆಯೆಂದು, ನನ್ನ ಹಾಗೂ–ನನ್ನ ಸ್ನೇಹಿತರ ಅಭಿಮತವಾಗಿದೆ. ಇಂತಹ ವಿಭಾಗವನ್ನು ‘ ಪುಸ್ತಕ ವಿಮರ್ಶೆಗಾಗಿ ಪುಟಗಳು ಬೇಕಾಗಿವೆ ’ ಎಂಬ ಕಾರಣದಿಂದ ದೂರಗೊಳಿಸುವುದು ಸರ್ವಥಾ ಉಚಿತವಲ್ಲವೆಂದೂ, ಹಾಗೆ ಜಯಂತಿಯು ಈ ಒಂದು ಅತ್ಯುತ್ಕೃಷ್ಟ ವಿಭಾಗವನ್ನು ತಳ್ಳಬಾರದೆಂದೂ ನಾನು ನಿವೇದಿಸುತ್ತೇನೆ.

—ಕೆ. ಎಸ್. ಶರ್ಮಾ, ಕಾಸರಗೋಡು.

೨

ಮಾನ್ಯ ಸಂಪಾದಕರೇ,

ನಿಮ್ಮ ಮೇ ತಿಂಗಳ ಸಂಚಿಕೆಯನ್ನು ಓದಿದೆ. ವಾಡಿಕೆಯಂತೆ “ ವಿಮರ್ಶಾ ಶಿಕ್ಷಣರಂಗ ” ವನ್ನೂ ನೋಡಿದೆ. ಆದರೆ ಮುಂದಿನ ತಿಂಗಳಿಂದ “ ವಿಮರ್ಶಾ ಶಿಕ್ಷಣರಂಗ ” ವಿಭಾಗವನ್ನು ನಿಲ್ಲಿಸಿಬಿಡುವುದನ್ನು ಓದಿದಾಗ, ಸ್ವಲ್ಪ ಅಸಮಾಧಾನವಾಯಿತು. ಕರ್ನಾಟಕದಲ್ಲಿ ಇಷ್ಟೊಂದು ಮಾಸಪತ್ರಿಕೆ, ವಾರಪತ್ರಿಕೆ ಹಾಗೂ ದಿನಪತ್ರಿಕೆಗಳು ಇದ್ದಾಗ್ಯೂ, ಸಾಹಿತ್ಯದ ಅಭ್ಯಾಸಿಗಳಿಗೆ ಪ್ರತ್ಯಕ್ಷ ಭಾಗ ತೆಗೆದುಕೊಳ್ಳಲು “ ವಿಮರ್ಶೆಗಾಗಿ ” ಯಾವ ಒಂದು ಸ್ಥಾನವನ್ನೂ ಕಲ್ಪಿಸಿಲ್ಲ. “ ಜಯಂತಿ ” ಯ ಈ ಉಪಕ್ರಮ, ಕರ್ನಾಟಕದಲ್ಲಿಯೇ ಮೊದಲನೆಯದಾಗಿತ್ತು. ಜಯಂತಿಯಿಂದ ಉತ್ತೇಜಿತರಾಗಿ ಅದೆಷ್ಟೋ ತರುಣಲೇಖಕರಿಂದು ಒಳ್ಳೆಯ ವಿಮರ್ಶಕರೂ ಆಗಹತ್ತಿದ್ದಾರೆಂಬುದು, ಹೆಮ್ಮೆಯಿಂದ ಹೇಳುವ ಸಂಗತಿಯಾಗಿದೆ. ವಿಮರ್ಶೆ ಕೇವಲ ಓದುವುದರಿಂದ ಬಾರದು; ಅದರಲ್ಲಿ ಕೈ ಪಳಗಬೇಕಾದರೆ, ವಿಮರ್ಶಕನು ಪ್ರತ್ಯಕ್ಷವಾಗಿಯೇ ಭಾಗ ತೆಗೆದುಕೊಳ್ಳಬೇಕು. ಆಗಲೇ ಅವನಿಗೆ ತನ್ನ ವಿಮರ್ಶೆಯ ತೂಕ ತಿಳಿಯುವುದು. ಆದುದರಿಂದ ನೀವು ಈ ವಿಭಾಗವನ್ನು ನಿಲ್ಲಿಸಿಬಿಡುವುದರಿಂದ, ಅದೆಷ್ಟೋ ಉದಯೋನ್ಮುಖ ಲೇಖಕರಿಗೂ ಹಾಗೂ ವಿಮರ್ಶಕರಿಗೂ ನಿರುತ್ಸಾಹ ಮಾಡಿದಂತಾಗುವುದು. ಈ ವಿಭಾಗದಿಂದ ನಿಮಗೆ ಸ್ವಲ್ಪ ತೊಂದರೆಯಾದುದೇನೋ ನಿಜ; ಆದರೆ ಅದೆಷ್ಟೋ ಹೊಸ ಲೇಖಕರು ನಿಮಗೆ ಚಿರಋಣಿಯಾಗಿರುವರೆಂಬುದು ಮರೆಯದ ಮಾತಾಗಿದೆ ಆದುದರಿಂದ ನೀವು ದಯವಿಟ್ಟು ಹೊಸ ಲೇಖಕರಲ್ಲಿ ಅಡಗಿರುವ ಉತ್ಸಾಹ ಶಕ್ತಿಯನ್ನು ಕಮರಿಸದೆ, ಈಗಿದ್ದ ವಿಭಾಗವನ್ನು ಮುಂದುವರಿಸುವಿರಾಗಿ ನಂಬುವೆ. ಈ ವಿಭಾಗಕ್ಕೆ ಇಷ್ಟೊಂದು ಪುಟಗಳನ್ನು ಕೊಡುವುದು ಸಾಧ್ಯವಾಗದೆ ಹೋಗಬಹುದು; ಆದಕ್ಕಾಗಿ ಈ ವಿಭಾಗಕ್ಕೆ ಪುಟಸಂಖ್ಯೆಯ ನಿಯಮವಿಟ್ಟಾದರೂ ಈ ವಿಭಾಗವನ್ನು ಮುಂದುವರಿಸಬೇಕಾಗಿ ಬಿನ್ನಹ. ಒಮ್ಮೆಲೇ ಅದನ್ನು ನಿಲ್ಲಿಸಿಬಿಡುವುದು ಹೊಸ ಲೇಖಕರಿಗೆ ನಿರುತ್ಸಾಹದ ವಿಷಯವೇ ಸರಿ.

ಮತ್ತೊಮ್ಮೆ ನಿಮಗೆ ಈ ವಿಭಾಗವನ್ನು ಮುಂದುವರಿಸಲು ಆವಶ್ಯವಾಗಿ ಬೇಡುವ,

ನಿಮ್ಮ

ಹ ನ. ದೇಶಪಾಂಡೆ, ವಿಜಾಪುರ

ಸಾದರ ಸ್ವೀಕಾರ

卐

೪೪. ಬೇತಾಳಗಳ ಕುಣಿತ ಅಥವಾ ಸಿದ್ಧ ಸಭೆಯ ಕಾರ್ಯ (ವಿಡಂಬನ ಕೃತಿ) ಬರೆದವರು ಶ್ರೀ. ಬ. ಹ. ಶ್ರೀಧರ ಎಂ. ಎ. ಅವರು. ಹುಬ್ಬಳ್ಳಿಯ ನವೋದಯ ಸಾಹಿತ್ಯಮಾಲೆಯ ೩ನೆಯ ವರ್ಷದ ೩ನೆಯ ಕುಸುಮ ಕ್ರೌ ೮. ೯೬ ಪುಟಗಳು. ಬೆಲೆ ೧-೦-೦.

೪೫. **ಕೆರೆಗೆ ಹಾರ** (ಜಾನಪದ ಕಾದಂಬರಿ) ಬರೆದವರು ಶ್ರೀ. ಕುಲಕರ್ಣಿ ಬಿಂದುಮಾಧವರು. ಬಾದಾಮಿಯ ಶಾಂತಿ ಸಾಹಿತ್ಯಮಾಲೆಯ ೪ನೆಯ ಕುಸುಮ. ಕ್ರೌ. ೮. ೧೩೦ + ೮ ಪುಟಗಳು. ಬೆಲೆ ೧-೧೨-೦.

೪೬. **ಜೀವನದರ್ಶನ** (ಕಥಾಸಂಕಲನ) ಬೇರೆಬೇರೆ ಕತೆಗಾರರು ಬರೆದುವು. ಬಾದಾಮಿಯ ಶಾಂತಿ ಸಾಹಿತ್ಯಮಾಲೆಯ ೫ನೆಯ ಕುಸುಮ. ಕ್ರೌ ೮. ೧೪೦ ಪುಟಗಳು. ಬೆಲೆ ೧-೧೨-೦.

೪೭. ಬೆಳಗಾಂವಿಯ **ಸಾರ್ವಜನಿಕ ವಾಚನಾಲಯದ ವಾರ್ಷಿಕ ವರದಿ** (೧೯೫೦-೫೧). ಗೌರವ ಕಾರ್ಯದರ್ಶಿಗಳು ಶ್ರೀಯುತರುಗಳಾದ ಕೆ. ಜಿ. ಜೋಶಿ, ಆರ್. ಬಿ. ಪೋತದಾರ ಫೂ ಕ್ಯಾ. ಫೋ. ೪ ಪುಟಗಳು.

ಬೆಳಗಾಂವಿಯ ಕನ್ನಡಿಗರ ಉದಾರಶೀಲತೆಯ ಮೂಲಕ, ಕನ್ನಡ ಭಾಷೆಗೆ ಗೌರವ-ಪ್ರಾಶಸ್ತ್ಯಗಳು ಒಂದು ಕಾಲದಲ್ಲಿ, ಈ ಸಾರ್ವಜನಿಕ ವಾಚನಾಲಯದಲ್ಲಿ ಇರಲೇ ಇಲ್ಲ. ಇಂದು ಕನ್ನಡ ಗ್ರಂಥ-ಪತ್ರಿಕೆಗಳಿಗೂ ಇದು ಸಾಕಷ್ಟು ಅವಕಾಶವನ್ನು ಕಲ್ಪಿಸಿಕೊಟ್ಟಿರುವುದು, ಬೆಳಗಾಂವಿಯ ಕನ್ನಡಿಗರ ಜಾಗೃತಿಯ ಕುರುಹಾಗಿದೆ. ಎಲ್ಲ ಬಗೆಯ ಅನುಕೂಲತೆಗಳೂ ಇರುವ ಈ ವಾಚನಾಲಯವು, ಕರ್ನಾಟಕದಲ್ಲಿ ಒಂದು ಮಾದರಿಯ ವಾಚನಾಲಯವಾಗಿ ಬೆಳೆಯಲಿ!

೪೮. **ಸಂಸ್ಕೃತ ವ್ಯಾಕರಣ ಚಂದ್ರಿಕಾ** (ಭಾಗ ೧) ಬರೆದವರು ಶ್ರೀಮಾನ್ ವಾ. ಗ. ಮುಳಗುಂದ ಅವರು. ಪ್ರಕಾಶಕರು ಶ್ರೀಮಾನ್ ವಾ. ಹು. ನಾಗರಹಳ್ಳಿ, ಮುಖ್ಯಾಧ್ಯಾಪಕರು ಪಿ. ಡಿ. ಜೆ ಹೈಸ್ಕೂಲ್, ವಿಜಾಪುರ. ಕ್ರೌ ೮. ೧೯೬ ಪುಟಗಳು ಬೆಲೆ ೦-೧೪-೦.

೪೯. **ಮಾತಿನ ಮಲ್ಲಿ** (ಶೃಂಗಾರಕಥೆ) ಬರೆದವರು ಶ್ರೀಮಾನ್ ಜಿ. ಪಿ. ರಾಜರತ್ನಂ. ಪ್ರಕಾಶಕರು ಆನಂದ ಬ್ರದರ್ಸ್, ಬೆಂಗಳೂರು ೨. ಕ್ರೌ ೮. ೧೩೮ ಪುಟಗಳು. ಬೆಲೆ ೧-೧೨-೦

೫೦. **ಕರಿಯ ಕಂಬಳಿ** (ಕಥಾಸಂಕಲನ) ಬರೆದವರು ಶ್ರೀಮಾನ್ ಜಿ.ಪಿ. ರಾಜರತ್ನಂ. ಪ್ರಕಾಶಕರು ಆನಂದ ಬ್ರದರ್ಸ್, ಬೆಂಗಳೂರು ೨. ಕ್ರೌ. ೮. ೧೪೮ ಪುಟಗಳು; ಬೆಲೆ ೧-೧೨-೦.

೫೧ **ಭಾವಸಂಧಿ** (ಕಥಾಸಂಕಲನ) ಬರೆದವರು ಶ್ರೀ. ರಾಮಲಿಂಗಯ್ಯ. ಪ್ರಕಾಶಕರು ಪೂರ್ಣಿಮಾ ಗ್ರಂಥಮಾಲೆ, ಅಳಿಕೆ, ದ. ಕ. ಜಿಲ್ಲಾ. ಕ್ರೌ. ೮. ೭೮ ಪುಟಗಳು. ಬೆಲೆ ೦-೧೪-೦.

೫೨. **ಬಾಲಬಂಧು** (ಮಕ್ಕಳ ಮಾಸಪತ್ರಿಕೆಯ ವಿಶೇಷ ಸಂಚಿಕೆ). ಸಂಪಾದಕರು ಶ್ರೀ. ಎನ್. ಡಿ. ರಾಮಮೂರ್ತಿ ಅವರು. ಪ್ರಕಾಶಕರು ಆರ್. ಎಸ್. ನ್ಯೂಜ್ ಏಜನ್ಸಿ, ೬೬೫, ಚಿಕ್ಕಪೇಟೆ, ಬೆಂಗಳೂರು ೨. ಡೆ. ೮. ೧/೧೬ ದ ೧೦೦ ಪುಟಗಳು. ಬೆಲೆ ೦-೪-೦.

BOMBAY OFFICE : Princess Street

ಏಜಂಟರು ಬೇಕು

ಜಯಂತಿಯನ್ನು ಮಾರಾಟ ಮಾಡಲಿಕ್ಕೆ ಕರ್ನಾಟಕದ ಬೇರೆ ಬೇರೆ ನಗರಗಳಲ್ಲಿ, ಪ್ರಾಮಾಣಿಕ ಏಜಂಟರು ಬೇಕು. ಯೋಗ್ಯ ಕಮಿಶನ್ ಕೊಡಲಾಗುವುದು. ಕರಾರುಗಳಿಗಾಗಿ ಪತ್ರವ್ಯವಹಾರ ಮಾಡಿ ತಿಳಿದುಕೊಳ್ಳಬೇಕು. ಮನೆ ಮನೆಗೂ ಇರಬೇಕಾದ ಈ ಪತ್ರಿಕೆಯನ್ನು ಮನೆಮನೆಗೂ ತಲ್ಪಿಸುವ ಅಗತ್ಯವಿದೆ.

ವ್ಯ. ಜ.

ಕಣ್ಣಿಗೆ ಚಿಕ್ಕದಾಗಿ ಕಂಡರೂ ಮಕ್ಕಳಿಗೆ ಉಪಯುಕ್ತವಾದ ವಿವಿಧ ಲೇಖನಗಳಿಂದ ತುಂಬಿವೆ. ಸಂಪಾದಕರ ಈ ಪ್ರಯತ್ನ ತುಂಬ ಅಭಿನಂದನೀಯ.

೫೩. **ದಾಂಪತ್ಯಜೀವನ** (ಕಾಮವಿಜ್ಞಾನ, ಸಂತಾನ-ವಿಜ್ಞಾನ, ದಾಂಪತ್ಯವಿಜ್ಞಾನ, ಆರೋಗ್ಯವಿಜ್ಞಾನಗಳಿಗೆ ಮೀಸಲಾದ ಹೊಸ ಮಾಸಪತ್ರಿಕೆ). ಸಂಪಾದಕರು ಡಾ. ಡಿ. ವೆಂಕಟಗಿರಿರಾವ್ ಪ್ರಕಾಶಕರು ಸಾಧನ ಪ್ರಕಟನಾಲಯ, ದೊಡ್ಡಬಳ್ಳಾಪುರ ಡೆ ಅ ೩೨ ದ ೩೨ ಪುಟಗಳು. ವಾ. ಚಂ. ೪-೦-೦. ಬಿಡಿಸಂಚಿಕೆಗೆ ೦-೫-೦.

ಸಂಯಮಯುಕ್ತ ಭಾಷೆಯಲ್ಲಿ, ಜೀವನಸ್ವಾಸ್ಥ್ಯದ ವಿಷಯಕ ಉಪಯುಕ್ತ ಲೇಖನಗಳು ಇದರಲ್ಲಿ ಬರುತ್ತಿವೆ. ಈ ಮೊದಲನೆಯ ಸಂಚಿಕೆಯಲ್ಲಿ ಕಂಡುಬರುವ ಗಾಂಭೀರ್ಯವನ್ನೇ ಮುಂದುವರಿಸಿದರೆ, ಕನ್ನಡಿಗರಿಗೆ ಈ ಪತ್ರಿಕೆ ನಿಜವಾಗಿಯೂ ಪ್ರಯೋಜನಕಾರಿಯಾಗಬಲ್ಲದು

೫೪. **ಬೆಳುದಿಂಗಳ ರಾತ್ರಿಯಲ್ಲಿ** (ಕಥಾಸಂಕಲನ) ಕತೆಗಾರರು ಶ್ರೀ ಎಸ್. ಅನಂತನಾರಾಯಣರು. ಪ್ರಕಾಶಕರು ಹಂಸ ಸಾಹಿತ್ಯಪ್ರಕಾಶನ ಸಂಸ್ಥೆ, ಮೈಸೂರು. ಕ್ರೌ. ಅ. ೧೭೨ ಪುಟಗಳು. ಬೆಲೆ ೧-೪-೦.

೫೫. **ಒಲಿದು ಬಂದ ಹೆಣ್ಣು** (ಸ್ವತಂತ್ರ ಸಾಮಾಜಿಕ ಕಾದಂಬರಿ). ಬರೆದವರು ಶ್ರೀ ತ್ರಿವಿಕ್ರಮ. ಪ್ರಕಾಶಕರು ಆನಂದ ಬ್ರದರ್ಸ್, ಬೆಂಗಳೂರು ೨. ಕ್ರೌ. ಅ. ೨೩೮ ಪುಟಗಳು. ಬೆಲೆ ೩-೮-೦.

೫೬. **ಬಯಕೆಯ ಬೇಲಿ** (ಕಥಾಸಂಕಲನ). ಕತೆಗಾರರು ಶ್ರೀ. ಎಸ್. ಅನಂತನಾರಾಯಣರು, ಪ್ರಕಾಶಕರು ಹಂಸ ಸಾಹಿತ್ಯ ಪ್ರಕಾಶನ ಸಂಸ್ಥೆ, ಮೈಸೂರು. ಕ್ರೌ. ಅ. ೧೧೨ ಪುಟಗಳು. ಬೆಲೆ ೧-೮-೦.

೫೭. **ಮನೆಯಲ್ಲಿ ಹೊಲಿಗೆ** (ಹೊಲಿಗೆಯ ಪರಿಚಯ ಗ್ರಂಥ). ಬರೆದವರು ಶ್ರೀಮಾನ್ ಹಳಪೇಟೆ ಚಿಂತಾಮಣಿ ರಾಯರು ಮತ್ತು ಶ್ರೀಮತಿ ಹಳಪೇಟೆ ಸುಶೀಲಾದೇವಿ ಪ್ರಕಾಶಕರು ಕರ್ನಾಟಕ ಟೆಲರಿಂಗ್ ಕಾಲೇಜ್, ಧಾರವಾಡ. ಕ್ರೌ. ಅ. ೧೧೨ ಪುಟಗಳು. ಬೆಲೆ ೧-೮-೦.

೫೮. **ಕನ್ನಡ ಕನ್ನಡಿ ಅರ್ಥಾತ್ ಎಸ್. ಎಸ್. ಸಿ. ಕನ್ನಡ ಗೈಡ್** (ಮ್ಯಾಟ್ರಿಕ್ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ೧೯೫೭-೫೩-೫೪) ಸಂಪಾದಕರು ಶ್ರೀ. ಹೋಳೀಕಟ್ಟಿ. ಪ್ರಕಾಶಕರು ಎಸ್. ಬಿ. ಹುಕ್ಕೇರಿ, ಸ್ಟೂಡಂಟ್ಸ್ ಓನ್ ಬುಕ್ ಡಿಪೋ, ಧಾರವಾಡ. ಕ್ರೌ. ಅ. ೪೪೦ ಪುಟಗಳು. ಬೆಲೆ ೩-೪-೦.

೫೯. **ವಿಕಾಸ** (ಮಾಸಪತ್ರಿಕೆ). ಸಂಪಾದಕರು ಶ್ರೀ. ಎಸ್. ಕೆ. ದೇಶಪಾಂಡೆ. ವಿಕಾಸ ಪಬ್ಲಿಕೇಶನ್ಸ್, ಬಾಗಲಕೋಟೆ. ಕ್ರೌ. ೧/೮ ದ ೩೩ ಪುಟಗಳು. ವಾರ್ಷಿಕ ಚಂದಾ ೩-೮-೦, ಬಿಡಿಸಂಚಿಕೆಗೆ ೦-೫-೦.

೬೦. **ಮಾಧವ ಕರುಣಾವಿಲಾಸ** (ಕರ್ನಾಟಕ ಐತಿಹಾಸಿಕ ಕಾದಂಬರಿಯ ಪೂರ್ವಾರ್ಧ. ಕ್ರೌ. ಅ. ೩೮೦ ಪುಟಗಳು. ಬೆಲೆ ೪-೮-೦.

೬೧. **ಮೇಲಿನ ಕಾದಂಬರಿಯ ಉತ್ತರಾರ್ಧ** ಕ್ರೌ. ಅ. ೩೭೨ ಪುಟಗಳು. ಬೆಲೆ ೪-೮-೦.

ದಿವಂಗತ ಗಳಗನಾಥರವರು ಬರೆದು ಬಹಳ ದಿನಗಳ ಹಿಂದೆ ಪ್ರಕಟಿಸಿದ ಬೃಹತ್‌ಕಾದಂಬರಿಯಿದು. ವಿಜಯನಗರದ ರಾಜ್ಯ ಪ್ರತಿಷ್ಠಾಪನೆಯ ಮನೋಹರ ಐತಿಹಾಸಿಕ ಪ್ರಸಂಗ, ಈ ಕಾದಂಬರಿಯ ವಸ್ತು. ದಿ. ಗಳಗನಾಥರ, ಕಾದಂಬರಿಯ ಲೋಕಪ್ರಿಯತೆಯನ್ನು ಕುರಿತು ಹೆಚ್ಚಾಗಿ ಬರೆಯುವ ಕಾರಣವೇ ಇಲ್ಲ. ದುರ್ಮಿಳವಾಗಿದ್ದ ಈ ಕಾದಂಬರಿಯನ್ನು ಸುಂದರವಾದ ರೀತಿಯಿಂದ ಮುದ್ರಿಸಿ ಪ್ರಕಟಿಸಿದ ಶ್ರೀ. ಬಿ. ವಿ. ಕುಲಕರ್ಣಿ, ಗಳಗನಾಥ ಸುದಸಗ್ರಂಥಮಾಲೆ, ಧಾರವಾಡ ಅವರಿಗೆ ನಮ್ಮ ಅಭಿನಂದನೆಗಳು.

೬೨ **ಮುಂಬಯಿ ರಾಜ್ಯದಲ್ಲಿ ಕಮ್ಯುನಿಸ್ಟರ ಚಟುವಟಿಕೆಗಳು**-೨ (ಏರಂಡಗಾಂವ ಹಿಂಸಾಚಾರದ ಕತೆ.) ಮುಂಬಯಿ ಸರಕಾರದ ಪ್ರಸಿದ್ಧೀ ಶಾಖೆಯ ಪ್ರಕಟನೆ. ಡೆ. ಅ. ೨೨ ಪುಟಗಳು.

೬೩. **ಮಿಂಚುಹುಳ** (ಕವಿತಾಸಂಗ್ರಹ) ನೂರಾರು ಲೇಖಕರು ಬರೆದುದು. ಸಂಪಾದಕರು ಶ್ರೀ. ಹ. ರಾ. ಕೆದಿಯೂರು. ತೊದಲ್ನುಡಿ ಪ್ರಕಾಶನ ಸಮಿತಿ, ಧಾರವಾಡ ಅವರ ಪ್ರಕಟನೆ. ಕ್ರೌ. ಅ. ೯೬ ಪುಟಗಳು. ಬೆಲೆ ೧-೦-೦.

೬೪. **ಆರೋಗ್ಯಜೀವನ** (ಆರೋಗ್ಯವಿಜ್ಞಾನ ವಿಷಯಕ ಗ್ರಂಥ). ಬರೆದವರು ಶ್ರೀ. ಎನ್. ಬಿ. ನಾಡಗೀರ ಬಿ. ಎ. (ಆನರ್ಸ್), ನಿವೃತ್ತ ಶಿಕ್ಷಣಾಧಿಕಾರಿ, ಧಾರವಾಡ. ಪ್ರಕಾಶಕರು ಹೊಂಬಾಳಿ ಬಂಧುಗಳು, ಗದಗ ಹಾಗೂ ಹುಬ್ಬಳ್ಳಿ. ಕ್ರೌ. ಅ. ೨೪೪ ಪುಟಗಳು. ಬೆಲೆ ೨-೮-೦

Wanted Agents

for the sale of our

NEW DESIGN FOUNTAINPENS

on Rs. 300/— to Rs. 500/— P. M.
Salary or Commission Basis:
Apply for

TERMS AND SAMPLES TO:

Lawrence Brothers (J. D.)
NAGDEVI, BOMBAY 3.

ನಿಮ್ಮ ಮನೆ, ಹೊಲ ಅಥವಾ ಕಾರಖಾನೆಯಲ್ಲಿ ನೀರಿನ
ಸಮಸ್ಯೆ ಪರಿಹಾರವಾಗಬೇಕಾಗಿದ್ದರೆ
ಕಿರ್ಲೋಸ್ಕರ್
'ಸೆಂಟ್ರಿಫ್ಯೂಗಲ್ ಪಂಪ'ನ್ನೇ
ಉಪಯೋಗಿಸಿರಿ.

ಸೆಂಟ್ರಿಫ್ಯೂಗಲ್
ಪಂಪುಗಳು

ಯು. ಪಿ. ಟೈಪ್ ಪಂಪ್

ಒಕ್ಕಲತನ ಮತ್ತು ಕಾರಖಾನೆಯ ಉದ್ಯೋಗಗಳಿಗೆ ಅತ್ಯಂತ ಉಪಯುಕ್ತವಾದುದು. ತಾಳಿಕೆ, ಭದ್ರವಾದ ರಚನೆ ಮತ್ತು ಆಕೃತಿ ಇವುಗಳ ಮೂಲಕ ದಿನದಿನಕ್ಕೂ ಬೆಳೆಯುತ್ತಿರುವ ಲೋಕಪ್ರಿಯತೆಯನ್ನು ಪಡೆಯುತ್ತಲಿದೆ ಈ ಪಂಪು

ಬಿ. ಎಸ್. ಎ. ಪಂಪು

ಅತ್ಯಂತ ಆಧುನಿಕ ಹಾಗು ಯಾಂತ್ರಿಕ ರಚನೆಯ ಮೇರೆಗೆ ತಯಾರಿಸಲ್ಪಟ್ಟಿರುವುದು. ಗಿರಾಕಿಗೆ ಕಳಿಸುವ ಮುನ್ನ ಪ್ರತಿಯೊಂದು ಪಂಪನ್ನು ಸೂಕ್ಷ್ಮವಾಗಿ ಪರೀಕ್ಷಿಸಲಾಗುತ್ತದೆ. ಈ ಪಂಪುಗಳು ಔದ್ಯೋಗಿಕ ಹಾಗು ಒಕ್ಕಲತನ ಕ್ಷೇತ್ರಗಳಲ್ಲಿ ವ್ಯಾಪಕವಾಗಿ ಉಪಯೋಗಿಸಲ್ಪಡುತ್ತವೆ.



ಕಿರ್ಲೋಸ್ಕರ ಬಂಧುಗಳು ಲಿ. ಕಿರ್ಲೋಸ್ಕರವಾಡಿ

Printed by V. Y. Jathar at the Karnatak Printing Works, Dharwar, and Published for the Pro... Jayanti Publications, by M. V. Melligatti at the Jayanti Office, Dharwar—3370-51.

JAYANTI

SEPTEMBER 1951

ಸಪ್ಟಂಬರ್ ೧೯೫೧, ಬೆಲೆ ೮ ಆಣೆ

ಪ್ರೊ. ಕೆ. ಎ. ಎನ್. ರಾವ, ಪ್ರೊ. ಎನ್. ಜಿ. ಕಟ್ಟಿ,
ಡಾ. ಅಣ್ಣಾರಾಯರು, ಡಾ. ಆರ್. ಬಿ. ಕುಲಕರ್ಣಿ
ಮೊದಲಾದವರ ಲೇಖನಗಳು.

ಸಂಪುಟ ೧೪ | ೧ನೆಯ ಸಪ್ಟೆಂಬರ್ ೧೯೫೧ | ಸಂಚಿಕೆ ೪

ಈ ಸಂಚಿಕೆಯಲ್ಲಿ:

ಪ್ರಧಾನ ಮಂತ್ರಿಗಳು, ರಾ ಮ. ಸಭೆಯ ಅಧ್ಯಕ್ಷರು
ಸಂಪಾದಕರು ೧೨೧

ನಾಡನಡೆ (ಪ್ರಾಸಂಗಿಕ ಟಿಪ್ಪಣಿಗಳು)
'ಕಾಲಭೈರವ'.... .... ೧೨೩

ನಾಲಿಗಾರ (ಲಲಿತಪ್ರಬಂಧ)
ಶ್ರೀ. ಕೆ. ಎ. ಎಸ್. ರಾವ್, ಬನಾರಸ ... ೧೨೫

ಮಕ್ಕಳ ಕತೆಗಳು (ಮಾನಸದೃಷ್ಟಿಯಲ್ಲಿ)
ಶ್ರೀ ಮಿರ್ಜಿ ಅಣ್ಣಾರಾಯರು, ಉಗಾರ ೧೩೦

ಭಾರತ ಭೂಮಾತೆ (ಕವನ)
' ಆನಂದಕಂದ ' ೧೩೩

ಮಭಾಗ್ಯನ ಭಾಗ್ಯ (ಸಣ್ಣ ಕತೆ)
ಶ್ರೀ. ಆರ್. ಬಿ ಕುಲಕರ್ಣಿ ಬಿ ಎ. ಹುಬ್ಬಳ್ಳಿ ೧೩೪

ಹೊಸಬಾಳಿನ ಕೈದೀವಿಗೆ-ವಿಜ್ಞಾನ (ವಿ. ಪ್ರ. ಪ್ರಬಂಧ)
ಶ್ರೀ. ಎಸ್. ಜಿ. ಕಟ್ಟಿ ಬಿ ಎಸ್‌ಸಿ. (ಆನರ್ಸ್),
ಬಿ. ಎಸ್‌ಸಿ (ಟೆಕ್) ಕೊಲ್ಹಾಪುರ ೧೪೫

ಹಳ್ಳಿಯ ಹುಡುಗಿಗೆ (ಕವನ)
ಶ್ರೀ. ಪೋತೆ ಶ್ರೀಕಾಂತ, ಶಮನೇವಾಡಿ ೧೫೧

ಕೂಸಿನ ಲೀಲೆ (ಕವನ)
ಶ್ರೀ. ಭುಜೇಂದ್ರ, ಮಹಿಷವಾಡಿಗಿ ೧೫೨

ರಾಯಭಾರ (ಪರಿಚಯಾತ್ಮಕ)
ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ ೧೫೩

ಮಹಾಸತಿ (ಅನುವಾದಿತ ಸಣ್ಣ ಕತೆ)
ಶ್ರೀ. ವೆ ಮು. ಜೋಶಿ, ಧಾರವಾಡ ೧೫೪

ಪುಸ್ತಕಪರಿಚಯ (ಅರಳುಮರುಳು)
ಶ್ರೀ. ಬಿ ಪಿ. ಎಸ್. ರಾವ್, ... ೧೫೮

ಸಾಭಾರಸ್ವೀಕಾರ ೧೬೦

ಶರತ್ ಪ್ರಕಾಶನಮಂದಿರ

ವಿಜಯ ರೋಡು— ಧಾರವಾಡ

ಕನ್ನಡದಲ್ಲಿಯ ಸುಪ್ರಸಿದ್ಧ ಲೇಖಕರ ಲಲಿತಸಾಹಿತ್ಯಗ್ರಂಥ-
ಗಳನ್ನೂ ಜೀವನಸ್ವಾಸ್ಥ್ಯಕ್ಕೆ ಸಂಬಂಧಿಸಿದ ವಿಚಾರ-
ಪ್ರಚೋದಕ ಗ್ರಂಥಗಳನ್ನೂ ಹಳೆಯ ಕನ್ನಡ
ಗ್ರಂಥಗಳನ್ನೂ ಒಳ್ಳೆಯ ರೀತಿಯಿಂದ
ಸಂಪಾದಿಸಿ, ಸುಂದರವಾಗಿ
ಪ್ರಕಟಿಸುವುದೇ
ಈ ಮಂದಿರದ ಉದ್ದೇಶ.

ಮೊದಲನೆಯ ಪ್ರಕಟನೆಯಾಗಿ

'ಬೆಳವಡಿ ಮಲ್ಲಮ್ಮ

ಮತ್ತು

ಬೇರೆ ರೂಪಕಗಳು"

ಎಂಬ 'ಆನಂದಕಂದರ' ರೂಪಕಸಂಕಲನ
ಪ್ರಕಟವಾಗುವುದು.

'ಆನಂದಕಂದ'ರ ಹಲವು ರಸಕೃತಿಗಳು ಈ ಪ್ರಕಾಶನ
ಮಂದಿರದಿಂದ ಒಂದೊಂದಾಗಿ ಪ್ರಕಟವಾಗುತ್ತ
ಹೋಗುವುವಲ್ಲದೆ, ಬೇರೆಯವರ ಗ್ರಂಥಗಳೂ
ಬೆಳಕಿಗೆ ಬರುವುವು.

●

ಎರಡು ರೂಪಾಯಿ ಇಡುಗಂಟನ್ನು ಸಲ್ಲಿಸಿ ಮಂದಿರದ
ಗ್ರಾಹಕಸದಸ್ಯರಾದವರಿಗೆ, ಪ್ರಕಟವಾಗುವಪುಸ್ತಕ-
ಗಳನ್ನೆಲ್ಲ ¾ ಬೆಲೆಗೆ ಕೊಡಲಾಗುವುದು.
ಇಷ್ಟವಿದ್ದವರು ಇಡುಗಂಟಿನ ಹಣ-
ದೊಂದಿಗೆ ಕಾಗದ ಬರೆದು,
ತಮ್ಮ ವಿಳಾಸವನ್ನು
ರಜಿಸ್ಟರ್ ಮಾಡಿಸಬೇಕು.

**ಉತ್ತಮ ಗ್ರಂಥಭಾಂಡಾರ ಮನೆಮನೆಯಲ್ಲಿಯೂ
ನೆಲೆಗೊಳ್ಳಬೇಕು.**

ಗ್ರಂಥಭಾಂಡಾರವೇ ಹೊಸಕಾಲದ ದೇವಮಂದಿರ!

ಶ್ರೀ. ಎಸ್. ಡಿ. ಇನಾಮದಾರ, ಸಂಚಾಲಕ

ಜಯಂತಿ

ಸಂ. ೧೪. ಸಂ. ೪.

ಕುಟುಂಬದಲ್ಲಿಯ
ಪ್ರತಿಯೊಬ್ಬರೂ ಓದಿ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಪತ್ರಿಕೆ.

★

ಸಂಪಾದಕರು :
ಶ್ರೀ ಬೆಟಗೇರಿ ಕೃಷ್ಣಶರ್ಮ

★

ವ್ಯ. ಸಂಪಾದಕರು :
ಶ್ರೀ. ಎಲ್. ಜೆ. ಬೇಂದ್ರೆ.

ಪ್ರಕಾಶಕರು :
ಶ್ರೀ. ಎಮ್. ವಿ. ಮೊಳ್ಳಿಗಟ್ಟಿ.

★

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ.

★

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ
ವ್ಯವಸ್ಥಾಪಕರಿಗೆ ಬರೆಯಬೇಕು.

★

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

★

ಸಂಪಾದಕೀಯ

ಪ್ರಧಾನ ಮಂತ್ರಿಗಳು—ರಾ. ಸ. ಸಭೆಯ ಅಧ್ಯಕ್ಷರು.

ಇಂದು ಕಾಂಗ್ರೆಸಿಗರೆನಿಸಿಕೊಳ್ಳುವವರೆಲ್ಲರ ಮನದೆದುರೂ, ಭಾರತದ ಪ್ರಧಾನ ಮಂತ್ರಿ ಜವಾಹರಲಾಲ ಮತ್ತು ಭಾರತದ ರಾಷ್ಟ್ರಸಭೆಯ ಅಧ್ಯಕ್ಷ ಪುರುಷೋತ್ತಮದಾಸ ಟಂಡನ್ ಇವರಿಬ್ಬರಲ್ಲಾದ ಭಿನ್ನಾಭಿಪ್ರಾಯವು, ಒಂದು ದೊಡ್ಡ ಸಮಸ್ಯೆಯಾಗಿ ನಿಂತಿದೆ. ವ್ಯಕ್ತಿ-ವ್ಯಕ್ತಿಗಳ ನಡುವಿನ ಭಿನ್ನಾಭಿಪ್ರಾಯವಿದ್ದರೆ, ಕಾಂಗ್ರೆಸ್ಸಿಗರು ಈ ಸಮಸ್ಯೆಗಾಗಿ ಕಂಗೆಡುವ ಕಾರಣವಿರಲಿಲ್ಲ; ಆದರೆ ಈ ಭಿನ್ನಾಭಿಪ್ರಾಯ ಎರಡು ರಾಜಕೀಯ ಧೋರಣಗಳಲ್ಲಿ ಉಂಟಾದಂತಾಗಿದೆ. ಇಂದು ಕಾಂಗ್ರೆಸ್ಸಿಗರಲ್ಲಿ ಟಂಡನರ ವಿಚಾರಪ್ರಣಾಲಿಯನ್ನು ಎತ್ತಿಹಿಡಿಯುವವರೂ ಬಹುಜನರಿದ್ದಾರೆ; ಜವಾಹರಲಾಲರ ವಿಚಾರಪ್ರಣಾಲಿಯನ್ನು ಪುರಸ್ಕರಿಸುವವರೂ ಬಹುಜನರಿದ್ದಾರೆ. ದುರ್ದೈವದ ಸಂಗತಿಯೊಂದು : ಸ್ವಾತಂತ್ರ್ಯೋತ್ತರ ಕಾಲದ ಕಾಂಗ್ರೆಸ್ಸಿನ ಜೀವನದ ಕಡೆಗೆ ನೋಡುತ್ತ ಬಂದರೆ, ಮತಭೇದದ ಪ್ರಸಂಗ ಬಂದಾಗಲೆಲ್ಲ, ಬಹುಮತ ಪಕ್ಷದವರು ಕಾಂಗ್ರೆಸ್ಸಿನಲ್ಲಿ ಉಳಿಯುತ್ತ ಬಂದುದೂ ವಿರೋಧಪಕ್ಷದ ಅಲ್ಪಸಂಖ್ಯಾಕರು ಕಾಂಗ್ರೆಸ್ಸಿನಿಂದ ಸಿಡಿದುಹೋಗುತ್ತಲಿದ್ದುದೂ ಎಲ್ಲರೂ ಕಾಣುವ ಸಂಗತಿಯಾಗಿದೆ. ಆದುದರಿಂದಲೇ, ಕಾಂಗ್ರೆಸ್ಸಿನ ಕಾರ್ಯಕ್ಕಾಗಿ ಜೀವನವನ್ನು ಮುಡಿಪಾಗಿ ಮಾಡಿದ ವೀರಧುರೀಣರನೇಕರೇ ಇಂದು ಬೇರೆ ಬೇರೆ ಪಕ್ಷ-ಪಂಗಡಗಳನ್ನು ಕಟ್ಟಿಕೊಂಡು, ಕಾಂಗ್ರೆಸ್ಸನ್ನು ಬೈಯುತ್ತ ಹೊರಟಿದ್ದಾರೆ. ಈಗಲೂ ಅಂತಹ ದುರ್ಧರ ಪ್ರಸಂಗವನ್ನೆ ಎದುರಿಸಬೇಕಾಗುವುದೇನೋ ಎಂದು ಜನಸಾಮಾನ್ಯರು ಭಾವಿಸಿಕೊಂಡಿದ್ದರೆ, ಅದೊಂದು ಆಶ್ಚರ್ಯದ ಸಂಗತಿಯಲ್ಲ. ಟಂಡನರ ಪಕ್ಷ ಬಹುಮತದ್ದಾದರೆ, ಜವಾಹರರು ಕಾಂಗ್ರೆಸ್ ರಾಜಕಾರ್ಯದಿಂದ ಹಿಂದೆ ಸರಿಯಬಹುದು; ಜವಾಹರರ ಪಕ್ಷ ಬಹುಮತದ್ದಾದರೆ, ಟಂಡನರ ಪಕ್ಷವು ಕಾಂಗ್ರೆಸ್ಸಿನಿಂದ ಸಿಡಿದು ದೂರ ಉಳಿಯಬಹುದು.

ಮತಧರ್ಮದಲ್ಲಿ ಭಿನ್ನಾಭಿಪ್ರಾಯಗಳು ಬೇಕಾದಷ್ಟು ಆದರೂ, ಅದು ಕೇವಲ ವೈಚಾರಿಕ-ಲೋಕದ್ದಾದುದರಿಂದ, ಜನತೆಯ ಪ್ರತ್ಯಕ್ಷ ಜೀವನವ್ಯವಹಾರದ ಮೇಲೆ ಅದರಿಂದ ವಿಶೇಷ ದುಷ್ಪರಿಣಾಮಗಳೇನೂ ಆಗವು; ಆದರೆ ರಾಜಕೀಯ ತತ್ತ್ವವು ಜನಜೀವನಕ್ಕೆ ಪ್ರತ್ಯಕ್ಷವಾಗಿ ಸಂಬಂಧಿಸುವುದಾದುದರಿಂದ, ಹೊಣೆಗಾರಧುರೀಣರಲ್ಲಿಯ ಭಿನ್ನಾಭಿಪ್ರಾಯದ ದುಷ್ಪರಿಣಾಮವನ್ನು ದೇಶದ ಜನತೆ ಪ್ರತ್ಯಕ್ಷವಾಗಿ ಅನುಭವಿಸಬೇಕಾಗುವುದು. ಧರ್ಮಕ್ಕಿಂತ ರಾಜಕಾರಣವು ಇಂದಿನ ಜನಜೀವನಕ್ಕೆ ಹೆಚ್ಚು ಸಮೀಪದ್ದಾಗಿರುವುದು. ಹೊಣೆಗಾರರಾದ ರಾಜಕೀಯ ಧುರೀಣರಲ್ಲಿಯ ಮತವೈಷಮ್ಯದ ಪರಿಣಾಮ, ದೇಶದ ರಾಜಕಾರಣದ ಮೇಲೆ ಆಗುವುದು ಖಂಡಿತ.

ನಮ್ಮ ಧುರೀಣರಾರೂ ಸರ್ವಾಂಗಪರಿಪೂರ್ಣ ಸರ್ವಜ್ಞರಲ್ಲ. ಒಬ್ಬೊಬ್ಬರಲ್ಲಿಯೂ ಒಂದೊಂದು ಬಗೆಯ ವ್ಯಕ್ತಿತ್ವವು ವಿಕಾಸಗೊಂಡಿರುತ್ತದೆ. ಎಲ್ಲರ ವ್ಯಕ್ತಿತ್ವವು ಸಮರಸಗೊಂಡು ಒಂದು ಶಕ್ತಿಯಾಗಿ ಕಾರ್ಯಮಾಡತೊಡಗಿದರೆ, ಅದು ಸಹಸ್ರಾಕ್ಷಶಕ್ತಿಯಾಗಿ ರಾಷ್ಟ್ರದ ಶಾಂತಿ-ಪುಷ್ಟಿ-ತುಷ್ಟಿಗಳನ್ನು ಹೆಚ್ಚಿಸಬಲ್ಲದು. ಹಾಗಾಗದೆ, ಮತಭೇದವುಂಟಾಗಿ ವಿಶೇಷವ್ಯಕ್ತಿಗಳೆಲ್ಲ ಸಿಡಿದು ದೂರನಿಲ್ಲುತ್ತ ಹೊರಟರೆ, ಕಾಂಗ್ರೆಸ್ಸೂ ನಿರ್ಬಲವಾಗುವುದು; ಕಾಂಗ್ರೆಸ್ಸು ನಿರ್ಮಾಣಮಾಡಿರುವ ಭಾರತಸರಕಾರದ ಶಕ್ತಿಯೂ ವಿಸ್ಖಲಿತವಾಗುವುದು. ಹೀಗಾಗದಂತೆ, ದೇಶದ ಹೊಣೆಗಾರಿಕೆಯನ್ನರಿತ ಪ್ರಾಮಾಣಿಕ ಮುಂದಾಳುಗಳು, ಹಟಕ್ಕೆಬೀಳದೆ, ಹೊಂದಿಕೊಂಡುಹೋಗುವ ಒಪ್ಪಂದದ ಬುದ್ಧಿಯಿಂದ ಸಾಗಬಾರದೆ ?

ಒಂದೊಂದು ಸಂದರ್ಭ ಹೀಗೂ ಬರಬಹುದು: ರಾಷ್ಟ್ರದಲ್ಲಿಯ ಬಹುಮತಪಕ್ಷ, ಒಬ್ಬ ಧುರೀಣನ ವೈಯಕ್ತಿಕ ವಿಚಾರವನ್ನು— ಅವನ ದೃಷ್ಟಿಯಲ್ಲಿ ಅದೆಷ್ಟೇ ಸಮಂಜಸವಿದ್ದರೂ—ಒಪ್ಪದೆ ಹೋಗಬಹುದು. ಆಗ ಆ ಧುರೀಣ, ಬಹುಮತಪಕ್ಷದೊಂದಿಗೆ ಹೊಂದಿಕೊಂಡು ಹೋಗುವುದರಲ್ಲಿ ದೇಶದ ಹಿತವಿದೆಯಲ್ಲದೆ, ಸಿಡಿದುನಿಂತು ಬೇರೆ ಪಕ್ಷಕಟ್ಟಲು ಹೊಂಚುಹಾಕುವುದರಲ್ಲಿ ಹಿತವಿಲ್ಲ.

ಆದರೆ ನಮ್ಮ ನೂತನ ಪ್ರಜಾಪ್ರಭುತ್ವದ ಭಾರತದಲ್ಲಿ, ಇಂದು ಪ್ರಜೆಗಳ ಅಭಿಪ್ರಾಯಕ್ಕಿಂತ ಧುರೀಣರ ವೈಯಕ್ತಿಕ ಅಭಿರುಚಿಗಳ ಕಾಲಾಟವೇ ವಿಶೇಷವಾಗಿ ನಡೆದಂತೆ ಕಾಣುತ್ತಲಿದೆ. ಕಾಂಗ್ರೆಸ್ಸೂ ಕಾಂಗ್ರೆಸ್ಸಿನ ಸರಕಾರಗಳೂ ಒಪ್ಪಿಕೊಂಡಿದ್ದ ಭಾಷಾನ್ವಯ ಪ್ರಾಂತೀಕರಣದ ತತ್ತ್ವ, ಅಧಿಕಾರದಲ್ಲಿರುವ ವ್ಯಕ್ತಿಗಳ ಲಹರಿಯ ಮೂಲಕವಾಗಿಯೆ ಮೂಲೆಗೆ ಬೀಳುತ್ತ ಬಂದಿದೆ. ಕಾಂಗ್ರೆಸ್ಸೂ ಕಾಂಗ್ರೆಸ್ಸಿನ ಸರಕಾರಗಳೂ ಭಾರತವು ಜಾತ್ಯತೀತರಾಷ್ಟ್ರವೆಂದು ಒಪ್ಪಿಕೊಂಡಿದ್ದರೂ, ಕೆಲವೊಂದು ವ್ಯಕ್ತಿಗಳ ಪ್ರಾಮಾಣಿಕ ಅಭಿಪ್ರಾಯವನ್ನೂ, ಸ್ವಾರ್ಥಸಾಧಕ ದೃಷ್ಟಿಯನ್ನೂ, ಜಾತೀಯ ಭಾವನೆಯಿಂದಲೆ ಆಡಳಿತವನ್ನು ಸಾಗಿಸಬೇಕೆಂದು ಹೊಂಚುಹಾಕುತ್ತಲಿವೆ. ಇದರಂತೆಯೆ ಆಹಾರವಸ್ತು-ನಿಯಂತ್ರಣ ವಿಚಾರ. ನಿಯಂತ್ರಣಗಳನ್ನೆಲ್ಲ ತೆಗೆದುಹಾಕಬೇಕೆಂದು ಕೆಲವು ಹೊಣೆಗಾರ ಧುರೀಣರ ಅಭಿಪ್ರಾಯವಿದ್ದರೆ, ನಿಯಂತ್ರಣ ವಿಧಿಸುವುದೇ ಒಳ್ಳೆಯದೆಂದು ಇನ್ನು ಕೆಲವು ಧುರೀಣರ ಅಭಿಪ್ರಾಯ. ಇವೆಲ್ಲ ವಿಷಯಗಳಲ್ಲಿ ಭಿನ್ನಾಭಿಪ್ರಾಯವಾಗುವುದೇನೋ ಸ್ವಾಭಾವಿಕವೇ; ಆದರೆ ಪ್ರಜಾಪ್ರಭುತ್ವದ ತತ್ತ್ವದಂತೆ ಇಂತಹ ಭಿನ್ನಾಭಿಪ್ರಾಯಗಳನ್ನೆಲ್ಲ ಬಹುಜನಮತದ ಎದುರು ಮರೆತುಬಿಡಬೇಕಾಗುತ್ತದೆ. ಆದರೆ, ಧಾರ್ಮಿಕ ಮತಭಿನ್ನತೆಗಳ ಮೂಲಕ ಬೇರೆ ಬೇರೆ ಮತಗಳನ್ನು ಕಟ್ಟಿಕೊಂಡು ಹೊರಡುವ ದೋಷವು ರಕ್ತಗತವಾಗಿರುವ ನಮ್ಮ ನಾಡಿನಲ್ಲಿ, ಇದಕ್ಕೆ ಅವಕಾಶವೇ ಇಲ್ಲದಂತಾಗಿದೆ. ಎಂತಲೆ ಬರಲಿರುವ ಮಹಾಚುನಾವಣೆಯಲ್ಲಿ ಭಾಗವಹಿಸಲಿರುವ ಅಧಿಕೃತ ರಾಜಕೀಯ ಪಕ್ಷಗಳು ನಮ್ಮಲ್ಲಿ ಎಂಟಕ್ಕಿಂತ ಹೆಚ್ಚಿಗೆ ಇವೆ. ಇಷ್ಟೊಂದು ಸಂಖ್ಯೆಯ ಪಕ್ಷಗಳು ಭಾರತದ ಹೊರತು ಇನ್ನೊಂದು ಯಾವ ರಾಷ್ಟ್ರದಲ್ಲಿಯೂ ಇರಲಾರವು. ಈಗ ಟಂಡನ್ ಮತ್ತು ನೆಹರು ಅವರಲ್ಲಿರುವ ಭಿನ್ನಾಭಿಪ್ರಾಯವು, ಚುನಾವಣೆಯ ಪಕ್ಷಗಳಲ್ಲಿ ಇನ್ನೊಂದು ಸಂಖ್ಯೆಯನ್ನು ಹೆಚ್ಚಿಸಿದರೆ, ಅದಕ್ಕಾಗಿ ಆಶ್ಚರ್ಯಪಡಬೇಕಾದ ಕಾರಣವೂ ಇಲ್ಲ. ಆದರೆ ಹೀಗಾಗುವುದು, ನಾಡಿನ ಐಕ್ಯಕ್ಕೆ—ಸುಸಂಘಟಿತ ಸಂಸ್ಥೆಯಾದ ಕಾಂಗ್ರೆಸ್ಸಿಗೂ ಒಳ್ಳೆಯದಲ್ಲ; ಭಾರತ ರಾಷ್ಟ್ರಕ್ಕೂ ಒಳ್ಳೆಯದಲ್ಲ.

ಧುರೀಣ ಧುರೀಣರಲ್ಲಿಯ ಮತಭೇದಗಳು ತಾತ್ತ್ವಿಕ ತಳಹದಿಯವೇ ಇರಬಹುದು. ಆದರೆ ಆ ಧುರೀಣರ ಅನುಯಾಯಿವರ್ಗ, ಪಕ್ಷದ ಕನ್ನಡಕವನ್ನು ಹಾಕಿಕೊಂಡು, ಅತಾತ್ತ್ವಿಕರೀತಿಯಲ್ಲಿ ಹೇಗೆ ವರ್ತಿಸುವುದೆಂಬುದಕ್ಕೆ, ಮಧ್ಯಭಾರತದ ಮಂತ್ರಿಗಳೊಬ್ಬರಾದ ಶ್ರೀ. ಡಿ. ಪಿ ಮಿಶ್ರರು ಜವಾಹರಲಾಲರಿಗೆ ಬರೆದಿರುವ ಉಗ್ರಭಾಷೆಯ ಪತ್ರಗಳು ಪ್ರತ್ಯಕ್ಷಪ್ರಮಾಣಗಳಾಗಿವೆ. ತತ್ತ್ವದ ಜಗಳಾಟಕ್ಕಿಂತ ವ್ಯಕ್ತಿದ್ವೇಷದ ಕಿಡಿಯೆ ಆ ಪತ್ರಗಳಲ್ಲಿ ಹೆಚ್ಚಾಗಿ ಹಾರಿದುವುದನ್ನು ನಾವು ಕಾಣಬಹುದು. ಭಾರತಜನಮಾನ್ಯರೂ ತತ್ತ್ವನಿಷ್ಠರೂ ಎನಿಸಿಕೊಳ್ಳುವ ರಾಷ್ಟ್ರಾಧ್ಯಕ್ಷ ಟಂಡನ್ನರು, ತಮ್ಮ ಅನುಯಾಯಿಗಳಿಂದ ಇಂತಹ ಅವಿವೇಕದ ಕಾರ್ಯ ನಡೆಯದಂತೆ ಮುನ್ನೆಚ್ಚರಿಕೆ ವಹಿಸಿದ್ದರೆ ಚೆನ್ನಾಗುತ್ತಿತ್ತು. ಇಂದು ಭಾರತದ ಜನತೆಯ ವಿಶ್ವಾಸ, ಪಂಡಿತ ಜವಾಹರರ ಮೇಲಿರುವಷ್ಟು ಇನ್ನಾರ ಮೇಲೆಯೂ ಇಲ್ಲವೆಂಬುದು, ಇನ್ನು ಕೆಲವೇ ದಿನಗಳಲ್ಲಿ ಎಲ್ಲರಿಗೂ ಗೊತ್ತಾಗಬಹುದು. ಈ ಪರಿಸ್ಥಿತಿಯು ಸಂಪೂರ್ಣತಿಳಿವಳಿಕೆಯಿರುವ ಹಿರಿಯರಾದ ಟಂಡನ್ನರು, ಶ್ರೀ. ಮಿಶ್ರರಂತಹರ ದುಡುಕಿಗೆ ಅವಕಾಶವನ್ನು ಒದಗಿಸಿಕೊಡುತ್ತಿರುವುದು, ದೇಶಕ್ಕೆ ಒಳ್ಳೆಯಕೆಲಸವನ್ನೇನೂ ಮಾಡಿದಂತಲ್ಲ.

ಬ್ರಿಟಿಷರನ್ನು ಭಾರತದಿಂದ ಓಡಿಸುವಾಗ ಕಾಂಗ್ರೆಸ್ಸು ಒಂದೆ ಒಂದು ಗುರಿಯಿಂದ ಕಾರ್ಯಮಾಡಿ, ಗೆಲವನ್ನು ಪಡೆಯಿತು. ಆದರೆ ಆ ಗೆಲವು ಭಾರತಕ್ಕೆ ಹಲವುಸಂಕಟಗಳನ್ನು ತಂದೊಡ್ಡಿದೆ. ಈ ಸಂಕಟಗಳನ್ನೆಲ್ಲ ನೀಗಲಿಕ್ಕೆ ನಮ್ಮಲ್ಲಿ, ಮೊದಲಿನ ಕಾಂಗ್ರೆಸ್ಸಿನ ಸಂಘಟನೆಗಿಂತ ನೂರುಮಡಿ ಹೆಚ್ಚಿನ ಸಂಘಟನೆ ಬೇಕಾಗಿದೆ. ಆದರೆ ವಸ್ತುಸ್ಥಿತಿ ಇದಕ್ಕೆ ವಿಪರೀತವಾಗಿದೆ. ಮತಭೇದಗಳ ಮೂಲಕ ಭಾರತದಲ್ಲಿ ಪಾಳೆಯಗಾರಿಕೆ ಬೆಳೆಯುತ್ತಲಿದೆ. ಈ ಪಾಳೆಯಗಾರಿಕೆಯ ಸಂಕುಚಿತ ಸಂಘಟನೆಗಳು, ಭಾರತದ ಸುಖಶಾಂತಿಗಳನ್ನು ಕಬಳಿಸಲು ಬಾಯ್ದೆರೆದು ನಿಂತ ವಿರೋಧಕಶಕ್ತಿಗಳನ್ನು ಎದುರಿಸಲಾರವು. ಆದುದರಿಂದ ಇಂದು ರಾಜಕೀಯವಿಷಯಕವಾಗಿ ವೈಯಕ್ತಿಕ ಅಭಿಪ್ರಾಯವೇನೇ ಇದ್ದರೂ, ಭಾರತದ ವಿರೋಧಕ ಶಕ್ತಿಯ ಮುಂದೆ ಭಾರತದ ಶಕ್ತಿಯೆಲ್ಲ ಸುಸಂಘಟಿತವಾಗಿನಿಲ್ಲಬೇಕಾಗಿದೆ. ಈಗ ನೆಹರು-ಟಂಡನರ ಮತಭೇದದ ವಿಚಾರದಲ್ಲಿ ನಿರ್ಣಯ ಕೊಡಲು ಕೂಡಲಿರುವ ಎ. ಆಯ್. ಸಿ. ಸಿ. ಯ ಅಧಿವೇಶನವು, ಯಾವುದೇ ಒಂದು ವ್ಯಕ್ತಿಯ ವಿಷಯಕವಾದ ನಿಷ್ಠೆಯಿಂದ ವಿಚಾರಮಾಡದೆ, ಭಾರತದ ಶಕ್ತಿ ಸುಸಂಘಟಿತವಾಗುವಂತಹ ದಾರಿಯನ್ನು ಕಂಡುಹಿಡಿದು, ಆ ದಾರಿಯಲ್ಲಿ ಧುರೀಣರೂ ಜನತೆಯೂ ಸಾಗುವಂತೆ ಮಾಡಬೇಕೆಂದು ಜನರೆಲ್ಲರ ಹಾರಯಿಕೆ.

⊙ ನಾಡನಡೆ ⊙

(ಕಾಲಜ್ಞರನ)

ಭಾರತದ ಮುಸಲ್ಮಾನರ ಪರೀಕ್ಷಾ ಪ್ರಸಂಗ

ಕಳೆದ ಸಂಚಿಕೆಯ ಸಂಪಾದಕೀಯದಲ್ಲಿ ಜಯಂತಿಯ ಸಂಪಾದಕರು, ಭಾರತದಲ್ಲಿಯ ಮುಸಲ್ಮಾನರ ಜಾತ್ಯತೀತ ಭಾವನೆಯನ್ನು ಶಂಕಿಸಿ ಬರೆದಿದ್ದರು. ಹಾಗವರು ಬರೆಯುವುದಕ್ಕೆ ಮುಸಲ್ಮಾನರಲ್ಲಿಯ ತೀಕ್ಷ್ಣ ಧರ್ಮಾಭಿಮಾನವೂ, ಇದುವರೆಗೂ ಪಾಕಿಸ್ತಾನದ ಪ್ರತಿಭಟನೆಯ ವಿಷಯದಲ್ಲಿ ತಮ್ಮ ವಿರೋಧಾಭಿಪ್ರಾಯವನ್ನು ಪ್ರಕಟಿಸದೆ ಸುಮ್ಮನಿದ್ದುದೂ ಕಾರಣವಾಗಿರಬಹುದು. ಜಯಂತಿಯ ಸಂಪಾದಕೀಯ ಪ್ರಕಟವಾದ ಒಂದೆರಡು ದಿನಗಳಲ್ಲಿಯೇ, ಹುಬ್ಬಳ್ಳಿಯಲ್ಲಿ ಕರ್ನಾಟಕದ ಮುಸ್ಲೀಮ್ ಧುರೀಣರ ಸಭೆಯೊಂದು ನೆರೆದು, ಭಾರತರಾಷ್ಟ್ರದ ಬಗೆಗೆ ತನ್ನ ನಿಷ್ಠೆಯನ್ನೂ, ಭಾರತ ಸರಕಾರದ ರಾಜಕೀಯ ಧೋರಣವನ್ನೂ ಒಪ್ಪಿಕೊಳ್ಳಲಾಯಿತಲ್ಲದೆ, ಪಾಕಿಸ್ತಾನದ ಯುದ್ಧಾಹ್ವಾನದ ಮಾತುಗಳನ್ನು ನಿಷೇಧಿಸುವ ಗೊತ್ತುವಳಿಯನ್ನೂ ಪುರಸ್ಕರಿಸಿತು. ಕರ್ನಾಟಕದಂತೆ ಮಿಕ್ಕ ಪ್ರಾಂತಗಳ ಮುಸ್ಲೀಂ ಧುರೀಣರೂ ಅಲ್ಲಲ್ಲಿ ಒಟ್ಟುಗೂಡಿ, ಭಾರತದೊಂದಿಗಿರುವ ತಮ್ಮ ಅಭೇದ್ಯವಾದ ಹಿತಸಂಬಂಧವನ್ನೂ ಅದಕ್ಕಾಗಿ ಭಾರತ ಸರಕಾರದೊಂದಿಗೆ ಸಂಪೂರ್ಣ ಸಹಕರಿಸುವ ವಿಚಾರವನ್ನೂ ಸಾರಿ ಸಾರಿ ಹೇಳಿದ್ದಾರೆ. ಇದೆಲ್ಲವೂ—ರಾಷ್ಟ್ರದ ಜನತೆಯ ಪರಸ್ಪರ ವಿಶ್ವಾಸದ ದೃಷ್ಟಿಯಿಂದ ನೋಡಿದರೆ—ಇಷ್ಟವಾದ ಮಾತೇ ಆಗಿದೆ. ಅಂದಿನ ಮುಸ್ಲಿಂಲೀಗಿನ ಕಾಲದ ವಿಘಾತಕ ಚಟುವಟಿಕೆಗಳಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಿ, ಹಿಂದುಗಳೆಂದರೆ ವೈರಿಗಳೆಂದು ಸಾರುತ್ತ ಬೀದಿಬೀದಿಗಳಲ್ಲಿ ತಿರುಗಿದ ಮುಸಲ್ಮಾನರೇ ನಮ್ಮ ನೆರೆಹೊರೆಯ ಮುಸಲ್ಮಾನರಲ್ಲಿ ಹೆಚ್ಚಾಗಿ ಇರುವುದರಿಂದ, ಅಂತಹ ಜನರು ಈಗ ಒಂದು ರೀತಿಯಲ್ಲಿ ಭಾರತಕ್ಕಾಗಿ ಸ್ವಾರ್ಥತ್ಯಾಗವನ್ನು ಮಾಡಿ, ಹಿಂದುಗಳ ಪ್ರೀತಿ-ವಿಶ್ವಾಸಗಳನ್ನೂ ಬಂಧುಭಾವವನ್ನೂ ಗಳಿಸಿಕೊಳ್ಳಬೇಕಾಗಿದೆ. ಬಹಳ ಜನ ಹಿಂದಿ ಮುಸಲ್ಮಾನರಲ್ಲಿ ಭಾರತರಾಷ್ಟ್ರ ಭಾವನೆಯು ಮೂಡಿರಬಹುದಾದರೂ, ಹಿಂದುಸ್ತಾನಕ್ಕಿಂತ ಪಾಕಿಸ್ತಾನವನ್ನೇ ಆತ್ಮೀಯ ದೃಷ್ಟಿಯಿಂದ ಕಾಣುವ ಅದೂರದರ್ಶಿಗಳ ಸಂಖ್ಯೆಯು ಇನ್ನೂ ಸಾಕಷ್ಟು ಇದ್ದುದು ಅಲ್ಲಲ್ಲಿ ದೃಷ್ಟಿಗೆ ಬೀಳುತ್ತಲಿದೆ. ಆದುದರಿಂದ, ಹೊಣೆಗಾರರಾದ ಮುಸ್ಲೀಂ ಮುಖಂಡರು, ಅಂತಹ ಹೊಣೆಗೇಡಿಗಳ ಉಲುಹು ತಲೆಯೆತ್ತದಂತೆ ನೋಡಿಕೊಳ್ಳುವುದು ಅತ್ಯವಶ್ಯವಾಗಿದೆ. ಇದೀಗ ಹಿಂದೀ ಮುಸಲ್ಮಾನರ ಭಾರತಭಕ್ತಿಯ ಪರೀಕ್ಷಾ ಪ್ರಸಂಗ. ಈ ಪರೀಕ್ಷೆಯಲ್ಲಿ ಉತ್ತೀರ್ಣರಾದರೆ, ಅವರಿಗೂ ಕಲ್ಯಾಣವಿದೆ; ದೇಶಕ್ಕೂ ಕಲ್ಯಾಣವಿದೆ.

ಪಾಕಿಸ್ತಾನದ ಪ್ರಚಾರಭೂತ

ಭಾರತದಲ್ಲಿಯ ಕೆಲವೊಂದು ಗಣ್ಯರಾದ ಮುಸ್ಲೀಂ ಮುಂದಾಳುಗಳು, ಸಂಯುಕ್ತ ರಾಷ್ಟ್ರಗಳ ಸಂಘದಿಂದ ಕಾಶ್ಮೀರ ವಿಚಾರದ ಪ್ರತಿನಿಧಿಗಳಾಗಿ ಬಂದಿರುವ ಡಾ. ಗ್ರಾಹಾಮರಿಗೆ, ಭಾರತದ ಮುಸಲ್ಮಾನರ ಪರವಾಗಿ ವಿಶೇಷ ಪತ್ರವೊಂದನ್ನು ಬರೆದು, ಭಾರತೀಯ ಮುಸಲ್ಮಾನರ ಮನೋಗತವನ್ನು ಸ್ಪಷ್ಟೀಕರಿಸಿದ್ದಾರೆ. ಅದರಲ್ಲಿ ಮಿಕ್ಕೆಲ್ಲ ಮಾತುಗಳಾವುವೂ ಭಾರತದ ದೃಷ್ಟಿಯಿಂದ ಆಕ್ಷೇಪಾರ್ಹವಾಗಿಲ್ಲವಾದರೂ, ಪಾಕಿಸ್ತಾನದ ಧುರೀಣರ ದೋಷವನ್ನು ಎತ್ತಿ ತೋರಿಸುವ ತರ್ಕದ ಭರದಲ್ಲಿ, ಪಾಕಿಸ್ತಾನಿಗಳ ಆಂತರಿಕ ರಾಜನೀತಿ, ಭಾರತದ ಮುಸಲ್ಮಾನರ ವಿಷಯದಲ್ಲಿ ಮಿಕ್ಕ ಬಹುಸಂಖ್ಯಾಕರಲ್ಲಿ ನಿರಂತರವಾದ ಭೀತಿ ಸಂದೇಹಗಳನ್ನು ಹುಟ್ಟಿಸುವಂತಹದಾಗಿದೆಯೆಂಬರ್ಥದ ಮಾತುಗಳನ್ನು ಬರೆದಿರುವರು. ಪಾಕಿಸ್ತಾನಿಗಳ ಮೇಲೆ ತಪ್ಪು ಹೊರಿಸುವ ಭಾವನೆಯಿಂದವರು ಈ ಮಾತುಗಳನ್ನು ಬರೆದಿದ್ದರೂ, ಪಾಕಿಸ್ತಾನದ ಗೊಬೆಲ್ಸರು ಇವೇ ಮಾತುಗಳನ್ನು, ತಮ್ಮ ಭಾರತವಿರೋಧ ಪ್ರಚಾರ ಸಂದರ್ಭಗಳಲ್ಲಿ ಭರದಿಂದ ಬಳಸುತ್ತಲಿದ್ದಾರೆ. ಇದರಿಂದ ಆ ವಿಶೇಷಪತ್ರ ಬರೆದ ಮುಸಲ್ಮಾನ್ ಧುರೀಣರ ಬಗ್ಗೆ ಭಾರತದಲ್ಲಿಯ ಕೆಲವು ಜನರು ತಪ್ಪು ಭಾವನೆಯನ್ನೂ ಮಾಡಿ-



ಮುಂಬಯಿ ಆಫೀಸ:— ದೇವಕರ್ಣ ಮ್ಯಾನ್‌ಶನ್, ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ

ಕೊಳ್ಳಬಹುದಾಗಿದೆ. ಆದರೆ ವಸ್ತುಸ್ಥಿತಿಯನ್ನು ಸೂಕ್ಷ್ಮವಾಗಿ ನೋಡಿದವರಿಗೆ, ಪಾಕಿಸ್ತಾನಿಗಳ ಪ್ರಚಾರದ ಮಾತುಗಳು ಎಷ್ಟು ಪೊಳ್ಳೆಂಬುದರ ಅರ್ಥವಾಗದೆ ಹೋಗದು. ಪತ್ರಬರೆದ ಮುಸ್ಲಿಂ ಧುರೀಣರೆಲ್ಲ,ಹವಿನಾರಾಣೆ ಭಾರತೀಯ ರಾಷ್ಟ್ರಭಾವನೆಯುಳ್ಳವರು; ಭಾರತದ ಸ್ವಾತಂತ್ರ್ಯಕ್ಕಾಗಿಯೂ ಅಖಂಡಭಾರತದ ಅಸ್ತಿತ್ವಕ್ಕಾಗಿಯೂ ಮೊದಲಿನಿಂದಲೂ ಪ್ರಮಾಣಪೂರ್ವಕವಾಗಿ ಕಾರ್ಯ ಮಾಡುತ್ತ—ಭಾರತೀಯರ ವಿಶ್ವಾಸಕ್ಕೆ ಪಾತ್ರರಾದವರು. ಈಗ ಬರೆದಿರುವ ಪತ್ರದಲ್ಲಿಯೂ ಭಾರತದ ಹಿತಸಂಬಂಧಗಳೇ ತಮ್ಮ ಹಿತಸಂಬಂಧಗಳೆಂಬುದನ್ನು ಸ್ಪಷ್ಟವಾಗಿ ಒಪ್ಪಿಕೊಂಡವರು. ಇಂತಹವರನ್ನೂ ಪಾಕಿಸ್ತಾನದ ಪ್ರಚಾರಭೂತ ಸಂದೇಹದಿಂದ ನೋಡಲಿಕ್ಕೆ ಹಚ್ಚುವುದು ಆಶ್ಚರ್ಯದ ಮಾತಾಗಿದೆ. ಭಾರತ ಸರಕಾರ ಬ್ರಾಹ್ಮಣೀ ಸರಕಾರವೆಂದು ಸಾರಿ ಭಾರತೀಯರಲ್ಲಿ ಆಂತರಿಕ ವಿಶುಷ್ಟಿ ಹುಟ್ಟುವಂತೆ ಮಾಡುವ ಪ್ರಚಾರಪ್ರಯತ್ನವಂತೆಯೇ ಇದೀಗ ಭಾರತೀಯರು ಭಾರತನಿಷ್ಠ ಮುಸ್ಲಿಮರನ್ನು ಸಂದೇಹದಿಂದ ನೋಡುವಂತೆ ಮಾಡಬೇಕೆಂಬ ವಿಷಪ್ರಚಾರ. ಇಂತಹ ಪ್ರಚಾರದ ಮಾತುಗಳನ್ನು ಆರೆದು ಒರೆದು ಪ್ರಮಾಣಿಸಿ ನೋಡುವವರಿಗೂ ನಮ್ಮ ಜನರು ನಂಬಿ ಮೋಸಹೋಗಬಾರದು!

ಕಾಂಗ್ರೆಸ್ಸಿನ ಅಧ್ಯಕ್ಷರ ಕರ್ನಾಟಕ ಸಂಚಾರ

ಸಂಕಲ್ಪಿಸಿದಂತೆ ಅಖಿಲ ಭಾರತ ರಾಷ್ಟ್ರೀಯ ಮಹಾಸಭೆಯ ಅಧ್ಯಕ್ಷರಾದ ಶ್ರೀಮಾನ್ ಟಂಡನರು, ಬರಲಿರುವ ಚುನಾವಣೆಯ ಪೂರ್ವಪ್ರಚಾರಕ್ಕಾಗಿ, ಉತ್ತರ ಕರ್ನಾಟಕದ ನಾಲ್ಕೂ ಜಿಲ್ಲೆಗಳಲ್ಲಿ ಸಂಚಾರಮಾಡಿ ಮರಳಿದರು. ವಿಜಾಪುರದ ಹರಿಜನ ಸೇವಕ ಕಾಕಾ ಕಾರಖಾನೀಸರ ರನ್ನಮಹೋತ್ಸವದಿಂದ ಪ್ರಾರಂಭವಾದ ಟಂಡನರ ಭಾಷಣದ ಕಾರ್ಯಕ್ರಮವು, ಕನ್ನಡನಾಡಿನ ಅನೇಕ ಪಟ್ಟಣ-ಗ್ರಾಮಗಳಲ್ಲಿ ವಿಜೃಂಭಣೆಯಿಂದ ನಡೆಯಿತು. ಶ್ರೀಮಾನ್ ಟಂಡನರಿಗೆ ಕನ್ನಡ ನಾಡಿನಲ್ಲಿ ಎಲ್ಲೆಲ್ಲಿಯೂ ಸಂಭ್ರಮದ ಸ್ವಾಗತ ಸಿಕ್ಕಿತಾದರೂ, ಆ ಸ್ವಾಗತದಲ್ಲಿ ಕನ್ನಡಿಗರ ಹೃದಯದ ಸಂಪೂರ್ಣವಾದ ಸವಿಯು ಇರಲಿಲ್ಲ. ದಿಲ್ಲಿಯಲ್ಲಿ ಪ್ರಧಾನ ಮಂತ್ರಿ ಜವಾಹರಲಾಲರು, ಕಾಂಗ್ರೆಸ್ಸಿನ ಕಾರ್ಯಕಾರಿ ಮಂಡಲಿಗೂ ಚುನಾವಣೆಸಮಿತಿಗೂ ರಾಜೀನಾಮೆಯನ್ನಿತ್ತ ಸಂಗತಿಯು ಪತ್ರಿಕೆಯಲ್ಲಿ ಪ್ರಕಟವಾಗಿ ಬಂದು, ಕನ್ನಡಿಗರ ಹೃದಯದಲ್ಲಿ ಕಳವಳದ ಕಹಿಯನ್ನು ಹಬ್ಬಿಸಿಬಿಟ್ಟಿದ್ದಿತು. ಮನೆಗೆ ಬಂದ ಅತಿಥಿಗೆ ಮನ್ನಣೆ ಸಲ್ಲಿಸಬೇಕೆಂಬ ಕನ್ನಡಿಗರ ಗೃಹಸ್ಥಪರಂಪರೆಯ ದಾಕ್ಷಿಣ್ಯವೃತ್ತಿ; ಕಳವಳದ ಕಹಿಯನ್ನು ಹೊರಕ್ಕೆ ತೋರಿಸದೆ, ಟಂಡನರಿಗೆ ಗೌರವದ ಸ್ವಾಗತವನ್ನು ಸಲ್ಲಿಸಿತು. ಈ ಸ್ವಾಗತವು ರಾಷ್ಟ್ರೀಯ ಸಭಾಧ್ಯಕ್ಷರ ಪದವಿಗೆಂಬುದನ್ನು ಟಂಡನರು ಲಕ್ಷ್ಯದಲ್ಲಿರಿಸಿಕೊಳ್ಳುವುದು ಒಳ್ಳೆಯದು. ಏಕೆಂದರೆ ಕನ್ನಡಿಗರು ಸಲ್ಲಿಸಿದ ಮಾನ-ಸನ್ಮಾನದ ಅರ್ಥವನ್ನು ಅವರು ವೈಯಕ್ತಿಕ ದೃಷ್ಟಿಯಿಂದ ವಿಚಾರಮಾಡಿ, ಆಶೆಯನ್ನು ತಳೆದು ಕುಳಿತರೆ, ಆ ಮೇಲೆ ಪಶ್ಚಾತ್ತಾಪಪಡಬೇಕಾದೀತು. ಮುಂಬಯಿಯಲ್ಲಿ ಅವರು ಪತ್ರಿಕಾಕರ್ತರೆದುರು ತೆಗೆದ ಉದ್ಗಾರದಲ್ಲಿ 'ಕರ್ನಾಟಕವು ಸಂಪೂರ್ಣವಾಗಿ, ಕಾಂಗ್ರೆಸ್ಸಿನ ಅಭಿಮಾನಿಪ್ರಾಂತ' ಎಂದು ಸಮಾಧಾನದಿಂದ ಹೇಳಿರುವರು. ಆದರೆ ಕರ್ನಾಟಕ ಕಾಂಗ್ರೆಸ್ಸಿನ ಅಭಿಮಾನಿಪ್ರಾಂತವೇ ಹೊರತು, ಟಂಡನ್ ಅಭಿಮಾನಿಪ್ರಾಂತವಲ್ಲವೆಂಬುದನ್ನು ಅವರು ಮರೆಯಲಾಗದು.

ಭಾಷಾನ್ವಯ ಪ್ರಾಂತದ ಪ್ರಶ್ನೆಯ ಪುನರ್ಜನ್ಮ

ದಿವಂಗತ ವಲ್ಲಭಭಾಯಿಯವರ ಆಡಳಿತದಲ್ಲಿ ಮೂರ್ಛೆಹೋಗಿ ಬಿದ್ದಿದ್ದ ಭಾಷಾನ್ವಯ ಪ್ರಾಂತದ ಪ್ರಶ್ನೆಯು, ಚುನಾವಣೆಯ ಮುಂಗಾಳಿ ತಗುಲಿ, ಮತ್ತೆ ಚೇತರಿಸಿಕೊಂಡು ಎದ್ದಿದೆ. ಅಧ್ಯಕ್ಷ ಟಂಡನರು ಕನ್ನಡನಾಡಿನ ಪ್ರತಿಯೊಂದು ಊರಲ್ಲಿಯೂ ಭಾಷಾನ್ವಯ ಪ್ರಾಂತೀಕರಣದ ಅಭಯವಚನವನ್ನು ಕೊಟ್ಟು ಹೋದರು. ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯಲ್ಲಿಯೂ ಇದರ ಬಗ್ಗೆ ವಿಚಾರ—ಚರ್ಚೆ ನಡೆದು, ಕೆಲವೊಂದು ಕರಾರುಗಳನ್ನು ಹಾಕಿ, ಭಾಷಾನ್ವಯ ಪ್ರಾಂತಗಳನ್ನು ಅಪೇಕ್ಷಿಸುವ ಪ್ರಾಂತಗಳ ಜನರು ಆ ಕರಾರುಗಳನ್ನೊಪ್ಪಿಕೊಂಡು ಬಂದರೆ, ಪ್ರಾಂತೀಕರಣದ ಬಗ್ಗೆ ಮುಂದೆ ಹೆಜ್ಜೆಯನ್ನಿಕ್ಕಲು ಸರಕಾರಕ್ಕೆ ಅನುಕೂಲವಾಗುವುದು—ಎಂಬುದಾಗಿ ಕಾಂ. ವ. ಕಮಿಟಿಯು ನಿರ್ಣಯಿಸಿದೆ. ಈ ನಿರ್ಣಯವನ್ನು ಒಪ್ಪಿ ಮುಖ್ಯಪ್ರಧಾನ ಜವಾಹರಲಾಲರೂ ತಮ್ಮ ಅಭಿಮತವನ್ನು ಹೊರಕ್ಕೆ ಹಾಕಿರುವರು. ಭಾಷಾನ್ವಯ ಪ್ರಾಂತಾಪೇಕ್ಷಿಗಳಿಗೆ ಮತ್ತೆ ಆಶೆಯ ಕಾಲ ಒದಗಿ ಬಂದಿದೆ. ಇದರ ಸದುಪಯೋಗಮಾಡಿಕೊಳ್ಳುವುದು, ಅವರ ಕೈಯಲ್ಲಿಯ ಮಾತಾಗಿದೆ! ದಕ್ಷಿಣಭಾರತದಲ್ಲಿಯ ಪ್ರಾಂತಾಪೇಕ್ಷೀ ಭಾಷೆಯ ಬೇರೆ ಬೇರೆ ಜನರೆಲ್ಲ ಬೆರೆತು, ತಮ್ಮ ತಮ್ಮೊಳಗೆ ಮಾತನಾಡಿ, ಗಡಿಯ ಸಂಬಂಧದಲ್ಲಿ ಒಂದು ನಿರ್ಣಯಕ್ಕೆ ಬರಬೇಕು. ಒಂದು ತತ್ತ್ವವನ್ನು ಎಲ್ಲರೂ ಒಪ್ಪಿಕೊಂಡು ಮುಂದುವರಿದರೆ, ಅದು ಮನಸ್ತಾಪಕ್ಕೆ ಕಾರಣವಾಗದು. ಇಲ್ಲದ ಹಾನಿಯ ಹೆದರಿಕೆಯನ್ನೂ ಹುಟ್ಟಿಸದು.



ಸಾಲಗಾರ

(ಲಲಿತಪ್ರಬಂಧ)

ಶ್ರೀ. ಕೆ. ಎ. ಎಸ್. ರಾವ್, ಬನಾರಸ

★

ಇಂದು ಎಲ್ಲೆಲ್ಲಿಯೂ ಯುದ್ಧದ ಮಾತುಗಳು ನಡೆದಿವೆ. ಹಿಂದುಸ್ಥಾನದ ಸಿಂಹಾಸನವನ್ನೆ ಆಕ್ರಮಿಸುವ ಗುಡುಗನ್ನು ಪಾಕಿಸ್ತಾನದ ಜನರು ಹೊಡೆಯುತ್ತಲಿದ್ದಾರೆ. ಆದರೆ, ಒಂದೊಂದು ಪ್ರಸಂಗದಲ್ಲಿ ಮನುಷ್ಯ, ಕ್ಷುದ್ರವಾದ ಸೊಳ್ಳೆಯೊಂದಿಗೆ ಹೂಡಿದ ಯುದ್ಧದಲ್ಲಿಯೂ ಸೋತು ಸುಣ್ಣವಾಗುವ.

★

" 'ಸಾಂಟಾಕ್ರೂಸ್' ಇದು ಎಲ್ಲಿದೆ, ಏತಕ್ಕೆ ಪ್ರಸಿದ್ಧಿ ? "

" ಇದು ಮುಂಬಯಿನ ವಿಸ್ತರಣಗಳಲ್ಲೊಂದು. ಸೊಳ್ಳೆಗೆ ಪ್ರಸಿದ್ಧಿ. "

ಹುಂ. ಪೂರ್ತಿ ನಂಬರು ಸಿಕ್ಕಬೇಕಾದರೆ, ವಿದ್ಯಾರ್ಥಿಯು ಇದೇ ಉತ್ತರವನ್ನು ಬರೆಯಬೇಕು— ನಾನು ಪರೀಕ್ಷಕನಾದರೆ. ಸಾಂಟಾಕ್ರೂಸಿನ 'ಜುಹು'— ಸಮುದ್ರತೀರ, ಅಲ್ಲಿಯ ವಿಮಾನ ಮೈದಾನ, ಇವಕ್ಕೆಲ್ಲ ಎರಡನೆಯ ಸ್ಥಾನ. ಸೊಳ್ಳೆಗೇ ಮೊದಲನೆಯದು. ಇಲ್ಲಿಯ ಸೊಳ್ಳೆಗಳು ಸಾಮಾನ್ಯ ಅಂದುಕೊಳ್ಳಬೇಡಿ. ಅವೇನು ನಿಮ್ಮ ಮೈಸೂರು, ಬೆಂಗಳೂರಿನ ಚಿಕ್ಕ ಸೊಳ್ಳೆಗಳಲ್ಲ; ತಿಳಿಯಿತೆ ? ಮುಂಬಯಿನ ಗಾತ್ರಕ್ಕೆ, ಘನತೆಗೆ ತಕ್ಕಂತೆ ದೊಡ್ಡವು. ಆಫ್ರಿಕದ ಕಾಡುಗಳಲ್ಲಿ ವಾಸಿಸುವ 'ಡ್ರೈವರ್' ಇರುವೆಗಳ ವಿಷಯವನ್ನು ನೀವು ಕೇಳಿರಬಹುದು. ಇಲ್ಲದಿದ್ದರೆ ನೀವು ಭೂಗೋಳ ಓದಿದುದೆಲ್ಲ ಬರಿಯ ವ್ಯರ್ಥವೆಂದುಕೊಂಡು ಬಿಡಿ; ಅಲ್ಲದೆ ನೀವು ಹೇಗೆ ಪ್ಯಾಸು ಮಾಡಿದಿರೋ ನನಗಂತೂ ತಿಳಿಯುವುದಿಲ್ಲ. ಇರಲಿ. ಸಾಂಟಾಕ್ರೂಸಿನ ಸೊಳ್ಳೆಗಳನ್ನೂ ಡ್ರೈವರು ಸೊಳ್ಳೆಗಳೆಂದು ಕರೆಯದಿದ್ದರೆ, ಅವುಗಳ ಮರ್ಯಾದೆಯೇ ಕಡಿಮೆ ಎನ್ನುವುದು ನನ್ನ ನಿರ್ಧರವಾದ ಅಭಿಪ್ರಾಯ. ಆಫ್ರಿಕದ ಡ್ರೈವರ್ ಇರುವೆಗಳು ಗುಂಪುಗುಂಪಾಗಿ ಬಂದು, ಮಲಗಿದ್ದ ಪ್ರಾಣಿಯನ್ನು— ಮನುಷ್ಯನನ್ನೂ ಸೇರಿಸಿಕೊಂಡು— ಕಿತ್ತು ತಿಂದು, ಬರಿಯ ಮೂಳೆಯನ್ನಾಗಿ ಮಾಡುತ್ತವಂತೆ. ಇದಕ್ಕೆ ಒಪ್ಪುವ ಸಾಮ್ಯವಂತೆ ಸಾಂಟಾಕ್ರೂಸ್ ಸೊಳ್ಳೆಗಳೂ ತಂಡತಂಡವಾಗಿ ದಾಳಿಯಿಟ್ಟು; ಯಾವ ಮನುಷ್ಯನಾದರೂ ರಾತ್ರಿಯ ಹೊತ್ತು ರಕ್ಷಣೆಯಿಲ್ಲದೆ ಕೊಂಚ ಸಮಾಧಿಗೆ ಹೋದನೆಂದರೆ ಸಾಕು; ಅವನ ರಕ್ತವನ್ನು ಹೀರಿ, ಅವನನ್ನು ನಿಂಬೆಯ ಚಟ್ಟನಂತೆ ಮಾಡಿ ಹಾಕುತ್ತವೆಂದು ಹೇಳಬಲ್ಲೆ. ನಿಮಗೆ ನಂಬಿಕೆಯುಂಟಾಗದಿದ್ದರೆ, ದೇವರಾಣೆಯನ್ನಿಟ್ಟು ಪ್ರಮಾಣವನ್ನೂ ಮಾಡಬಲ್ಲೆ. ಡ್ರೈವರು ಇರುವೆ, ಸಾಂಟಾಕ್ರೂಸು ಸೊಳ್ಳೆ ಅಥವಾ – ನೀವು ಅಪ್ಪಣೆ ಕೊಡುವುದಾದರೆ – ಡ್ರೈವರು ಸೊಳ್ಳೆಗಳಿಗೆ ಇರುವ ಹೋಲಿಕೆಯಂತೆ ಒಂದು ವ್ಯತ್ಯಾಸವು ನಿಮಗೆ ಈ ವರೆಗೆ ಕಂಡಿದ್ದರೆ, ಅದು ಒಂದು ಗುಂಪು ನೆಲದ ಮೇಲೆ ಹರಿಯುತ್ತದೆ, ಇನ್ನೊಂದು ಮೇಲೆ ಹಾರಾಡುತ್ತದೆ ಎಂಬುದು ನಿಜ. ಹೀಗಿದ್ದು ಸಾಂಟಾಕ್ರೂಸ್ ಸೊಳ್ಳೆಗಳನ್ನು ಲೋಕಸ್ಟು ಚಿಟ್ಟೆಗಳಿಗೆ ಹೋಲಿಸಿದರೂ ಹೋಲಿಸಬಹುದು. ಇವು ಬಹುಮಟ್ಟಿಗೆ ಚೀಣಾದೇಶದಲ್ಲಿ ವಿಶೇಷವಾಗಿದ್ದು, ಕೋಟ್ಯನುಕೋಟಿಗಳಲ್ಲಿ ಒಮ್ಮೆಯೇ ಹಾರಿ ಬಂದು, ಪೈರುಗಳ ಮೇಲೆ ಕುಳಿತು, ಕೆಲವು ನಿಮಿಷಗಳಲ್ಲಿ ಕಾಳಿನ ಹುಟ್ಟೇ ಇರದಂತೆ ಮಾಡಿ, ರೈತನಿಗೆ ಸುಗ್ಗಿಯ ಕುಯ್ಲಿನ ಕಷ್ಟವನ್ನೇ ತಪ್ಪಿಸುತ್ತವಂತೆ. ಇದು ತಮಗೆ ಇನ್ನೂ ತಿಳಿದಿರದಿದ್ದರೆ, ತಮ್ಮ ಸಾಮಾನ್ಯಜ್ಞಾನ ಶೂನ್ಯವೆಂದು ನನ್ನ ಅಧಿಕಾರದ ಮೇಲೆ ತೆಗೆದುಕೊಳ್ಳಿ. ಈ ಲೋಕಸ್ಟುಗಳ ಹಾವಳಿಯು "The good Earth" ಎಂಬ ಚಿತ್ರದಲ್ಲಿ ಚೆನ್ನಾಗಿ ಕಾಣಿಸಲ್ಪಟ್ಟಿದ್ದಿತು. ಇದನ್ನೂ ತಾವು ನೋಡಿರದಿದ್ದರೆ ತಾವು ಏನು ಸಿನಿಮಾಕ್ಕೆ ಹೋಗುತ್ತೀರೋ ಏನೋ! ನನಗಂತೂ ತಮ್ಮ ಬಗ್ಗೆ ಬಹಳ 'ಬಡ' ಅಭಿಪ್ರಾಯವೇ. ಹೋಗಲಿ. ಸಾಂಟಾಕ್ರೂಸ್ ಸೊಳ್ಳೆಗಳಿಗೇ ಹಿಂತಿರುಗೋಣ.

ಆವರಿವರು 'ಹೇಳಿ ಬರೆಯಿಸಿದ' ಪ್ರಕಾರ ತಾವು, 'ಸೊಳ್ಳೆಗಳು ನಿಂತ ನೀರಿನಲ್ಲಿ ವಾಸಮಾಡುತ್ತವೆ, ಅಲ್ಲಿಯೇ ಮೊಟ್ಟೆಗಳನ್ನು ಇಡುತ್ತವೆ, ಮರಿಗಳೆಲ್ಲವೂ ಅಲ್ಲಿ ಬೆಳೆಯುತ್ತವೆ.', ಮೊದಲಾಗಿ ಮಾತ್ರ ಬಾಯಿಪಾಠ ಮಾಡಿರಬಹುದು ಅನ್ನಿ. ಆದರೆ ತಾವು ಸಾಂಟಾಕ್ರೂಸಿನಲ್ಲಿ ಈ ಬಡವನ ಮನೆಗೆ ದಯಮಾಡಿಸಿದರೆ ಸಾಕು; ಕೊಚ್ಚೆಗಿಚ್ಚೆಯ ಮಟ್ಟಕ್ಕಿಳಿಯದೆ, ನಮ್ಮ ಮಟ್ಟದಲ್ಲೇ ಹುಟ್ಟಿಬೆಳೆಯುವ ಶ್ರೀಷ್ಮ ಸೊಳ್ಳೆಗಳ ಪರಿಚಯವಾಗುತ್ತದೆ. ಇಗೋ ಇಲ್ಲಿ ನೋಡಿ, ಇದು ನನ್ನ ಅಂಗಿಯ ಗೂಟ. ನೋಡಿ, ಈಗ ಕಚೇರಿಯ ಹೊತ್ತಾದುದರಿಂದ ಷರಟನ್ನು ತೆಗೆದುಕೊಳ್ಳುತ್ತೇನೆ, ಹ! ಮುಟ್ಟಿದೊಡನೆಯೇ ನೋಡಿದಿರಾ, ಹೇಗೆ 'ಜಯ್' ಎಂದವು, ಎಷ್ಟು ನೂರು– ಸಾವಿರವೋ– ಸೊಳ್ಳೆಗಳು ಎದ್ದುವು? ನನ್ನ 'ಷೂ'-ಗಳನ್ನು, ಈ ಸ್ಟ್ಯಾಂಡಿನ ಮೇಲಿನಿಂದ ತೆಗೆದುಕೊಳ್ಳುತ್ತೇನೆ. ಕೊಂಚ ಪರಿಶೀಲಿಸೋಣವಾಗಲಿ. ಇಲ್ಲೆಷ್ಟು ಲಕ್ಷವಿರಬಹುದು ? ಹೋಗಲಿ, ಇನ್ನು ಅಂಗಿ, ಹ್ಯಾಟುಗಳು ಕಾಣಿಸುವ ಸೊಳ್ಳೆಗಳೆಂದೆಲ್ಲ ತಮ್ಮನ್ನು ಏಕೆ ದಣಿಸಲಿ ? ಕಡೆಯದಾಗಿ ಈ ಛತ್ರಿಯ ಮೂಲೆಯೊಂದನ್ನು ನೋಡಿಬಿಡಿ. ಇದೇ ಸೊಳ್ಳೆ ಬಾಹುಳ್ಯದ ಪರಮಾವಧಿ. ಇಲ್ಲಂತೂ ರಾಜಸಂತತಿಯಂತೆ ಎಷ್ಟೆಷ್ಟು ಸೊಳ್ಳೆಸಂತತಿಯು, ತಳೆದು, ಮೊಳೆದು, ಬೆಳೆದು ಅಳಿದಿದೆಯೋ ನಾನಂತೂ ಹೇಳಲಾರೆ, ನೀವೂ ಹೇಳಲಾರಿರಿ. ಅದು ಊಹೆಗೂ ನುಣುಚಿಕೊಳ್ಳುವ ವಿಷಯ— ನಕ್ಷತ್ರವಿಷಯಗಳಂತೆ. ಇರಲಿ. ಈ ಪಾಡು ದಿನವೂ ಕೈಯಾಡುವ ಜಾಗದಲ್ಲಿ ಎಂದರೆ, ಕೆಲಕೆಲವು ದಿನಕ್ಕೆ

ಮಾತ್ರವೇ ಜರುಗಿಸಲ್ಪಡುವ ಸೆಟ್ಟಿಗೆ, ಪುಸ್ತಕಗಳ ಹಿಂದೆ, ಇನ್ನೂ ಮನೆಯ ನೂರಾರು ಮೂಲೆ-ಸಂದುಗಳಲ್ಲಿ ಏನು ಗತಿಯೋ! ಅವುಗಳ ಹತ್ತಿರವೇ ಹೋಗದಿರುವುದು ವಾಸಿ.

'ಬೇಸಿಗೆಯಲ್ಲಿನ ಕತೆಯೇ ಹೀಗಾದರೆ, ರಾತ್ರಿಯ ಭಂಗವೇನು?' ಹ! ತಾವು ಸರಿಯಾಗಿ ಕೇಳಿದಿರಿ. ತಮಗೆ ಎಂದೂ ನನ್ನ ಮನೆಯಲ್ಲಿ ರಾತ್ರಿಯೊಂದನ್ನು ಕಳೆಯುವ ಭಾಗ್ಯವು ದೊರಕಿಲ್ಲದಿರುವುದಕ್ಕಾಗಿ ತಾವು ವಿಧಿಗೆ ಕೃತಜ್ಞರಾಗಿರಬೇಕು. ಜೋಕೆ! ವಿಧಿಯನ್ನು ಇದಿರು ಹಾಕಿಕೊಂಡೀರಿ! ಆ ಶಿಕ್ಷೆಗೆ ಸಿಕ್ಕಿದ್ದರೆ, ಇದುವರೆಗೆ ತಾವು ತಮ್ಮ ಸರ್ವಪಾಪದಿಂದಲೂ ಮುಕ್ತಿ ಹೊಂದುತ್ತಿದ್ದಿರಿ. ಪಾಪ, ತಮಗೆ ಎಲ್ಲಿಯದು ಆ ಪುಣ್ಯ! ಅದು ತಮಗೆ ಬೇಡ. ಕೇಳಿ; ಸಂಜೆಯ ಮಬ್ಬಾಯಿತೆಂದರೆ ಸಾಕು. ಈ ಧೈರ್ಯವರು ಸೊಳ್ಳೆಗಳೋ, ಲೋಕಸಸ್ಯ ಸೊಳ್ಳೆಗಳೋ, ತಮ್ಮ ಅರಮನೆಗಳನ್ನು ತೊರೆದು ತಮ್ಮ ಲಕ್ಷೋಪಲಕ್ಷದಲ್ಲಿ, ತಮ್ಮದೇ ಆದ ಸುಸ್ವರದ ಸಂಗೀತದಿಂದ, ಮನೆಯನ್ನೆಲ್ಲ ತುಂಬಿ ಹಾರಾಡತೊಡಗಿ, ತಮ್ಮ 'ಬೇಟೆ'ಯನ್ನು ಬಳಸುತ್ತವೆ, ಮುತ್ತುತ್ತವೆ. ಒಂದಲ್ಲ, ಎರಡಲ್ಲ, ನೂರಾರು ಏಕಕಾಲದಲ್ಲಿ. ಇವು ನಮ್ಮಂತೆ ರಕ್ತದಲ್ಲಿ ಭೇದ ತೋರಿಸುವುದಿಲ್ಲ. ನಮಗೆಂದರೆ, ಹತ್ತಿರದ ಬಂಧುರಕ್ತಕ್ಕೆ, ದೊಡ್ಡವಂಶದ 'ನೀಲಿ' ರಕ್ತಕ್ಕೆ, ಎಳೆಯ ಬಿಸಿರಕ್ತಕ್ಕೆ ಆಕರ್ಷಣೆ ಹೆಚ್ಚು, ಪಕ್ಷಪಾತ ಬುದ್ಧಿ. ಆದರೆ ಈ ಸೊಳ್ಳೆಗಳಿಗೆ ಮಾತ್ರ ಈ ದುರ್ಬುದ್ಧಿಯಿಲ್ಲ. ಅವಕ್ಕೆ ನನ್ನ ರಕ್ತವು ಹೇಗೋ— ಹಾಗೇ ನನ್ನ ಮುದಿ ತಂದೆಯದು, ನನ್ನ ಹೆಂಡತಿಯದು, ನನ್ನ ಮಗು ಚಿಕ್ಕಮೂರ್ತಿಯದು, ಎಲ್ಲವೂ ಒಂದೇ. ಸರ್ವಸಮಾನತ್ವ, ಸಂಚಿತನ ಸಮದರ್ಶನ. ಹಾಗೆಯೇ ಇವಕ್ಕೆ ಋತುಭೇದವೂ ಇಲ್ಲ. ನಾವಾದರೋ ವಸಂತವೆಂದರೆ ನಲಿಯುತ್ತೇವೆ, ಗ್ರೀಷ್ಮವೆಂದರೆ ನಲುಗುತ್ತೇವೆ; ವರ್ಷವೆಂದರೆ ಹಿಗ್ಗುತ್ತೇವೆ, ಶಿಶಿರವೆಂದರೆ ಕುಗ್ಗುತ್ತೇವೆ. ಆದರೆ ಸ್ಯಾಂಟಾಕ್ರೂಸಿನ ಸೊಳ್ಳೆಗಳೋ ಪಾಪ, ಯಾವಾಗಲೂ ಒಂದೇ ಸಮನಾಗಿರುತ್ತವೆ. ಅಲ್ಪ ಸ್ವಲ್ಪ ವ್ಯತ್ಯಾಸವೆಂದರೆ, ಮದರಾಸಿನ ಎರಡು ಕಾಲಗಳು—ಸೆಕೆ, ಹೆಚ್ಚುಸೆಕೆಗಳ ಕಾಲಗಳಂತೆ, ಇಲ್ಲಿ ಸೊಳ್ಳೆಕಾಲ, ಹೆಚ್ಚು ಸೊಳ್ಳೆಕಾಲ; ಅಷ್ಟೆ. ಅವು ಮರೆಯಾಗಿರುವ ಹೊತ್ತೆಂದರೆ ಮಧ್ಯಾಹ್ನ. ಆಗ ಕಷ್ಟಪಟ್ಟುಕೊಂಡು ಹೇಗೆ ಅಡಗಿಕೊಂಡಿರುತ್ತವೋ ಏನೋ. ಸಂಜೆಯಾಯಿತೆಂದರೆ ಮದುವೆಗೆ ನೆಂಟರು ಬರುವಂತೆ, ಹೇಳಿ ಕರೆಯಿಸಿದಂತೆ, ಗೊತ್ತಾದ ಸಮಯದಂತೆ, ತಮ್ಮ ತಮ್ಮ ಕೋಟೆಗಳನ್ನು ಬಿಟ್ಟು ದಿಗ್ವಿಜಯಕ್ಕಾಗಿ ಒಟ್ಟೊಟ್ಟಿಗೆ ಝೇಂಕಾರದಿಂದ ಹೊರಡುತ್ತವೆ. ರಾತ್ರಿ ಮನೆಗೆ ಬಂದಾಗ, ಇವುಗಳದೇ ಮೊದಲನೆಯ ಸ್ವಾಗತ— 'ಬಾ, ನೀಡು ನಿನ್ನ ಬಿಸಿರಕ್ತವ' ಎಂದು. ಒಂದು ಪತ್ರಿಕೆಯನ್ನೋ ಪುಸ್ತಕವನ್ನೋ ಹಿಡಿದುಕೊಂಡರೆ, ಕಣ್ಣಿಗಿಂತ ಕೈಯಿಗೇ ಕೆಲಸ ಜಾಸ್ತಿ. ಎಡದ ಕೈಯಿ ಯಂತ್ರದ ಅಂಗದಂತೆ ಚಲಿಸುತ್ತಲೇ ಇರಬೇಕು. ಈಗ ಹಣೆ ಚಚ್ಚಿಕೊಳ್ಳುವುದು, ಈಗ ಕೆನ್ನೆ ಹೊಡೆದುಕೊಳ್ಳುವುದು, ಈಗ ಬಾಯಿ ಬಡಿದುಕೊಳ್ಳುವುದು, ಈಗ ತೋಳು-ತೊಡೆಗಳನ್ನು ತಟ್ಟುವುದು; ಕಿವಿ, ಕತ್ತು, ಪಾದ ಇವುಗಳು ಒಂದಾದ ಮೇಲೊಂದನ್ನೂ 'ಚಟೇರ್, ಫಟೇರ್' ಅಂತ ಹೊಡೆದುಕೊಳ್ಳುತ್ತಿರುವುದು— ಎಲ್ಲವೂ ಸೊಳ್ಳೆಯನ್ನು ಹೊಡೆಯುವುದೇ. ಕೈಯಿಗೆ ಪುರುಸೊತ್ತೇ ಇಲ್ಲ— ಇದಲ್ಲದೆ ತಲೆ, ಕಾಲು ಮೊದಲಾದುವನ್ನು ಅಲ್ಲಾಡಿಸಿಯೂ ಸೊಳ್ಳೆಗೆ ಅಷ್ಟು ಆತಂಕವನ್ನು— ಅಡ್ಡಿಯಲ್ಲ— ಉಂಟುಮಾಡುವುದು ಬೇರೆ. ಹಾಗೂ ಸೊಳ್ಳೆಗಳು ಮೈಗೆ ಹಾರಿ ಅಲ್ಲಲ್ಲಿ ಕಚ್ಚಿ ರಸ ಹೀರಿದಾಗ 'ಹಾ! ಹಾ!' ಎನ್ನುವುದು, ಕೆರೆಯುವುದು, ತಿಕ್ಕುವುದು, ಹಿಸುಕುವುದು ಇದ್ದೇ ಇರುತ್ತವೆ. ಇದಕ್ಕಾಗಿ ನಾನು ಮುಖ್ಯವಾದ ಕೆಲಸವನ್ನು ಮಾಡುವ ದಿನ, ಪರದೆಯೊಳಗೇ ಕುಳಿತುಕೊಂಡು ಸಾಗಿಸುತ್ತೇನೆ. ಮೊದಮೊದಲು ಈ ಭಂಗವು ಹೊಸ ಅನುಭವವಾದಾಗ 'ಇಲ್ಲಿ ಬಾಳುವುದು ಹೇಗೆ?' ಎಂದು ಚಿಂತೆ ಹುಟ್ಟುತ್ತಿದ್ದಿತು. ಈಗಲೋ, ನನ್ನ ಕೈಯಿ ಕಾಲಿನ ಆಟಗಳು 'automatic' ಆಗಿ, ಸೊಳ್ಳೆಯೊಡನೆ 'ಶಕ್ತಿವರಸೆ' ನಡೆಸುವುದು ರೂಢಿಯಾಗಿ, ಈ ಆತ್ಮರಕ್ಷಣೆಯ ವಿದ್ಯೆಯಲ್ಲಿ ನಿಪುಣನಾಗಿಬಿಟ್ಟಿದ್ದೇನೆ. ಉಸಿರಾಡುವಂತೆಯೇ ಇದೂ ಒಂದು ಪ್ರಕೃತಿಗತಿಯಾಗಿ ಹೋಗಿದೆ. ಹೀಗಿದ್ದರೂ ದಿನದಿನವೂ ನನ್ನಿಂದ ಎಷ್ಟು ತೊಟ್ಟು ರಕ್ತವು ಕಳುವಾಗುತ್ತದೆಯೋ ಶಿವನೇ ಬಲ್ಲ. ಇನ್ನು ನನ್ನ ಕಡೆಯಿಂದ ಎಷ್ಟು ಸೊಳ್ಳೆಗಳು ಕೊಲೆಯಾಗುತ್ತವೆಯೋ ಅವಕ್ಕಂತೂ ಲೆಕ್ಕವೇ ಇಲ್ಲ. ನನ್ನ ಪಾಡೇ ಹೀಗಾದ ಮೇಲೆ, ಚಿಕ್ಕಮೂರ್ತಿಯ ಗತಿಯಂತೂ ಹೇಳುವಂತೆಯೇ ಇಲ್ಲ. ಊಟಕ್ಕೆ ಕುಳಿತಾಗ ಅವನಿಗೆ ಊಟ ತ್ತಬೇಕೋ, ಸೊಳ್ಳೆಯಿಂದ ತಪ್ಪಿಸಿಕೊಳ್ಳಬೇಕೋ ತಿಳಿಯದು. ಒಂದೊಂದು ವೇಳೆ ಅತ್ತೇ ಬಿಡುತ್ತಾನೆ. ಅನ್ನವೇ ಸಾಗುವುದಿಲ್ಲ. ತಂದೆಯವರು, ಎಷ್ಟೇ ಸೆಕೆಯಾದರೂ ಸರಿಯೆ— ಮುಸುಕು ಹಾಕಿಕೊಂಡೇ ಕುಳಿತುಬಿಡುತ್ತಾರೆ. ನಮ್ಮವಳಿಗೆ ಕೆಲಸದ ಓಡಾಟದಲ್ಲಿ ಕಾಲು ಕೈ ಒದರಿ ಕೆರೆದುಕೊಳ್ಳುವ ಅಗತ್ಯವಿದ್ದೇ ಇರುತ್ತದೆ. ಅವಳು ಅನೇಕ ವೇಳೆ 'ಈ ಹಾಳು ಸೊಳ್ಳೆ ಇರದ ಮನೆಯೊಂದು ಸಿಕ್ಕಲಿ' ಎಂದು ತನ್ನ ಬಾಳಿನ ಒಂದೇ ಒಂದು ಹಂಬಲನ್ನು ಜಪಿಸುತ್ತಲೇ ಇರುತ್ತಾಳೆ.

ಹಾಗೂ ಹೀಗೂ ಮಲಗುವ ಹೊತ್ತಾಯಿತೆಂದರೆ ಹಾಸಿಗೆಯನ್ನು ಎಚ್ಚರಿಕೆಯಿಂದ ಹಾಸಿ, ಪರದೆಯನ್ನು ಬಿಟ್ಟುಕೊಂಡು ಚೆನ್ನಾಗಿ ಪರೀಕ್ಷಿಸಬೇಕು. ಎಲ್ಲಾದರೂ ಒಂದು ಸೊಳ್ಳೆಯು ಒಳಕ್ಕೆ ಸೇರಿತೆಂದರೆ ಸಾಕು; ರಾತ್ರಿಯ ನಿದ್ರೆಯನ್ನೆಲ್ಲ ಅದು ಏಳ್ಳಂತೆಯೇ. ಇದಕ್ಕಾಗಿ ತಂದೆಯವರು, ಮೊದಲೇ ಒಂದು ಟವೆಲಿನಿಂದ ಮಂಚವನ್ನೆಲ್ಲ, ಚಪ್ರಾಸಿಗಳು ಧೂಳು ಜಾಡಿಸುವಂತೆ ಹೊಡೆದು, ಪರದೆಯನ್ನು ಬಿಟ್ಟು, ಎಲ್ಲಿಯೂ ಕಿಂಡಿಯಿರದಂತೆ ಸುತ್ತಲೂ ಹಾಸಿಗೆಯ ಕೆಳಗೆ ಸಿಕ್ಕಿಸಿ, ಅನಂತರ ಕಡೆಯ ಪರೀಕ್ಷೆಯನ್ನು ಮಾಡಿ, ಏನಾದರೊಂದು ಸೊಳ್ಳೆ ಇದ್ದರೆ ಚಪ್ಪಾಳೆ ಹೊಡೆದು ತಿಕ್ಕಿಯೋ, ಟವಲಿನಿಂದ ಗುಡಿಸಿ ಸಾಯಿಸಿಯೋ, ಶತ್ರುಗಳು ನಿರ್ಮೂಲವಾದರೆಂದು ನಂಬಿಕೆಯಾದ ಮೇಲೇ ದೇಹವನ್ನು ಹಾಸಿ-

ಗೆಯ ಮೇಲೆ ನೀಡಿಕೊಳ್ಳುತ್ತಾರೆ. ಒಂದು ಬಾರಿ ಒಳಗೆ ಸೇರಿದ-ರೆಂದರೆ, ಅವರು ಬೆಳಗಿನ ವರೆಗೂ ಹೊರಬರುವಂತಿಲ್ಲ. ಕೆಲಸ-ವೇನಾದರೂ ಉಳಿದಿದ್ದರೆ, ಅದು ಮರುದಿನಕ್ಕೆ ಕಾಯಬೇಕು. ಆ ದಿನಕ್ಕೆ ಅವರ ಕಾರ್ಯಕ್ರಮ ಮುಗಿದುಹೋಯಿತು. ಮತ್ತೆ ಪರದೆಯಿಂದ ಹೊರಬಂದು, ಒಳಹೊಕ್ಕು, ಸೊಳ್ಳೆಗೆ ಸಿಕ್ಕುವ ಫಜೀ-ತಿಯು ಅವರಿಗೆ ಬೇಡ. ನಾನೂ ಇದೇ ರೀತಿ ಮಾಡಿದರೂ, ದೀಪ-ವಾರಿಸುವ ಸರದಿಯು ಸಾಮಾನ್ಯವಾಗಿ ನನ್ನದಾಗಿ, ಪರೀಕ್ಷೆಯು ಮುಗಿದ ಮೇಲೆ ಮತ್ತೆ ಚಮತ್ಕಾರದಿಂದ ಹೊರಬಂದು ಹಾಗೆಯೇ ಒಳಹೋಗಬೇಕಾಗುತ್ತದೆ. ಆಗ, ಸೊಳ್ಳೆಯೇನಾದರೂ ಒಳ-ಸೇರಿತೋ ಏನೋ ಎನ್ನುವ ಅನುಮಾನವು ಸೊಳ್ಳೆಗಿಂತಲೂ ಹೆಚ್ಚಾಗಿಯೇ ಕುಕ್ಕುತ್ತಿರುತ್ತದೆ—ನಿದ್ದೆ ಬರುವ ವರೆಗೆ. ಒಂದೊಂದು ವೇಳೆ ನಾನು ಮಲಗುವಾಗ, ನಮ್ಮವಳು ಇನ್ನೂ ಅಲ್ಲಿಲ್ಲಿ ಓಡಾಡು-ತ್ತಿದ್ದುದನ್ನು ಕಂಡರೆ 'ದೀಪ ಆರಿಸಿಬಿಡು ಅಂದ್ರೆ' ಎಂದು, ಈ ಪರದೆಯಿಂದ ಹೊರಬಂದು ಒಳಹೊಗುವ ಸರಕಸ್ಸಿನಿಂದ ತಪ್ಪಿಸಿ-ಕೊಳ್ಳುತ್ತೇನೆ. ಆಗ ನನಗೆ ಬಹಳ ಆನಂದ. ಮೂರ್ತಿಯ ಪರದೆ-ಯಲ್ಲಿ ಆಗ ಈಗ ಹೇಗೋ ಒಂದೆರಡು ಸೊಳ್ಳೆಗಳು ಸೇರಿಕೊಂಡೇ ಬಿಡುತ್ತವೆ. ಅದೇನು ಅವನ ಅಮ್ಮನ 'ಚಚ್ಚರ'ವೋ, ಅವನ ಅದೃಷ್ಟವೋ ! ಮಗುವಾಗಿ ಅವನೇನೋ ಮೈಮರೆತು ನಿದ್ರಿಸು-ತ್ತಾನೆ. ಆದರೂ ಸೊಳ್ಳೆಯು ಚುಚ್ಚಿದಾಗ ಕೊರಡಿನಂತೆ ಬಿದ್ದಿರ-ಲಾಗುತ್ತದೆಯೆ ? ಹೊರಳುತ್ತಾನೆ. ಹಾಗೆ ಮಾಡುವಾಗ, ಮದ-ಹತ್ತಿದ ಸೊಳ್ಳೆಗಳೂ ಒಂದೊಂದು 'ಚಟ್' ಆಗಿ, ಬೆಳಗ್ಗೆ ಮಗ್ಗುಲ ಹಾಸಿಕೆಯ ಮೇಲೆ ರಕ್ತದ ಬಟ್ಟುಗಳು ಕಾಣುತ್ತವೆ. ಪರದೆಯ ಒಳಗೆ ಅಲ್ಲೊಂದು ಇಲ್ಲೊಂದು ಸೊಳ್ಳೆಯು ಹೊಟ್ಟೆಯ ತುಂಬ ರಕ್ತವನ್ನು ಕುಡಿದು ಕುಳಿತು, ಹೊರಗೆ ಹೋಗಲು ಕಾದಿರುತ್ತವೆ. ಸೊಳ್ಳೆಯ ಈ ಹೆಗರಣವನ್ನು ಕಂಡ ನನಗೆ 'ಈ ಸಾಂಟಾಕ್ರೂಸು ಸೊಳ್ಳೆಯ ತವರೂರು, ಇಲ್ಲಿ ನಾವು ಹೊರನಾಡಿನವರು' ಎನ್ನಿಸು-ತ್ತದೆ. ನೀವೇನಾದರೂ 'ಇದೆಲ್ಲ ಉತ್ಪ್ರೇಕ್ಷೆ' ಎನ್ನುತ್ತೀರೇನು ? ಹಾಗಾದರೆ ಇಲ್ಲಿಗೆ ಒಂದು ದಿನ ಬನ್ನಿ. ನಿಮಗೂ ಇಲ್ಲಿ ಸುಸ್ವಾಗತವಿದೆ– 'ನಿಮ್ಮ ಬಿಸಿರಕ್ತವ ನೀಡಲು'. ಆಗ ತಿಳಿಯು-ತ್ತದೆ ನನ್ನ ಸೋಜಿಗದ ನೀತಿ ಈ ಸೊಳ್ಳೆಯ ಸಂಕಟದಲ್ಲಿ ಒಂದೇ ಒಂದು ಸಮಾಧಾನದ ವಿಷಯವೆಂದರೆ, ಡಾಕ್ಟರು "ಇಲ್ಲಿಯ ಸೊಳ್ಳೆಗಳು ಮಲೇರಿಯದುವಲ್ಲ" ಎಂದು ಹೇಳಿದ್ದುದು.

ಇರಲಿ. ಆ ದಿನ ಕೆಲಸದಿಂದ, ದಿನಕ್ಕಿಂತ ಬಹಳ ದಣಿದು ಹೊತ್ತಾಗಿ ಮನೆ ಸೇರಿದೆ. ಮುಂಬಯಿನ ಕೆಲಸವೇ ದಣಿವಿನ ಕೆಲಸ– ನನಗೆ. ಬೆಳಕು ಹರಿಯುವುದಕ್ಕೆ ಮುಂಚಿತವಾಗಿಯೇ ಐದು ಗಂಟೆಗೆ ಎದ್ದು ನಿತ್ಯಕರ್ಮಗಳನ್ನು– ದೀಪದ ಬೆಳಕಿನಲ್ಲಿ ಕ್ಷೌರವನ್ನೂ ಕೂಡಿ—ಮುಗಿಸಿ, ಕಾಫಿಯನ್ನು ಬಸಿದುಕೊಂಡು, ಬಟ್ಟೆ ಬಿಗಿದುಕೊಂಡು, ಆರುವರೆ ಗಂಟೆಯ ರೈಲಿಗೆ ಓಡುವುದು. ರೈಲು, ಬಸ್ಸು, ದೋಣಿಗಳಲ್ಲಿ ಮೂವತ್ತು ಮೈಲಿಯ ದೂರದ ದ್ವೀಪಾಂತರವನ್ನು– ಮಡ್ಡು ದ್ವೀಪ—ಸೇರುವುದು. ಉರಿಯುವ ಬಿಸಿಲಿನಲ್ಲಿ ಕಟ್ಟಡಗಳ ಮುಂದೆ ಸುಳಿದಾಡಿ, ಕೂಗಾಡಿ, ಹಾರಾಡಿ ಶ್ರಮಿಸುವುದು. ಬೆವರು ಸುರಿಸುವುದು. ಮಧ್ಯಾಹ್ನದ ಹೊತ್ತಿಗೆ ಅಲ್ಲೇ ಒಂದು ತುತ್ತು ಎಂತಹದೋ ಅನ್ನ. ಮತ್ತೆ ಸೂರ್ಯನು ಇಳಿಯುವ ವರೆಗೂ ದುಡಿತ. ಅನಂತರ ಅದೇ ದೋಣಿ, ಬಸ್ಸು ರೈಲುಗಳ ಮೂಲಕ 'ಉಸ್ಸಪ್ಪ' ಎನ್ನುತ್ತಾ ಎಂಟೂವರೆ ಗಂಟೆಗೆ ಮನೆ ಸೇರುವುದು. ಹುಂ. ಎಲ್ಲವೂ ಹೊಟ್ಟೆಯ ಪಾಡು. ಏನು ಮಾಡುವುದು? ಹೋಗಲಿ ಆ ದಿನ ಇನ್ನೂ ಹೊತ್ತಾಗಿ ಬಂದಾಗ—ಸುಮಾರು ಒಂಬತ್ತೂವರೆ, ಹತ್ತರ ಸಮಯ. ಈ ಕಾಲ ವಿಳಂಬ-ದಿಂದ ಆತಂಕಪಟ್ಟುಕೊಂಡು ಸನೆಯುತ್ತಿದ್ದ ಸೊಳ್ಳೆಗಳು, ಎಂದಿ-ಗಿಂತ ವಿಶೇಷ ಪ್ರೀತಿಯನ್ನು ತೋರುತ್ತ 'ನಾನು ಮುಂದೆ, ತಾನು ಮುಂದೆ' ಎನ್ನುತ್ತ ನನ್ನನ್ನು ಸುತ್ತುಗಟ್ಟಿದುವು. 'ಸ್ವಲ್ಪ ತಾಳಿಕೊಳ್ಳಿ' ಎಂದು ಅವಕ್ಕೆ ಸಮಾಧಾನ ಹೇಳುತ್ತ ಬೇಗ ಬಟ್ಟೆ ಬದಲಾಯಿಸಿ, ಕೈಕಾಲು ತೊಳೆದು ಊಟ ಮುಗಿಸುವ ಹೊತ್ತಿಗೆ ಕಣ್ಣು ಎಳೆದುಕೊಂಡು ಹೋಗುತ್ತಿದ್ದಿತು. ಅಭ್ಯಾಸದಂತೆ ಪತ್ರಿಕೆ-ಯನ್ನು ಹಿಡಿದುಕೊಂಡೆನೇ ಹೊರತು ಓದಲಾಗಲಿಲ್ಲ. ಸೊಳ್ಳೆಯ ಸಹಾಯವೊಂದಿಲ್ಲದಿದ್ದರೆ ಕುರ್ಚಿಯಲ್ಲೇ ಬಿದ್ದುಕೊಂಡುಬಿಡು-ತ್ತಿದ್ದೆನೋ ಏನೋ ! ಅಂತೂ ನಡೆದಂತೆ, ಪತ್ರಿಕೆಯನ್ನು ಬಿಸುಟು,

‘ಬಗನ’ ಬಾಲಾಮೃತ

ಮಕ್ಕಳ ಸದೃಢತೆಗಾಗಿ 'ಬಗನ' ಬಾಲಾಮೃತ-ವನ್ನು ಉಪ-ಯೋಗಿಸಿರಿ.

ಮುಖ್ಯವಾಗಿ ಮಕ್ಕಳ ಯಕೃತು ಮತ್ತು ಹೊಟ್ಟೆ ಎಂದರೆ ಅವರಿಗೆ

ರೋಗದ ಭಯವಿಲ್ಲ.

ಬಗನ ಬಾಲಾಮೃತದಲ್ಲಿ ‘ಗ್ರಾಯಿಪ್ ಹೀಲರಿನ’ ಅಂಶವೂ ಇರುವದರಿಂದ, ಇದು ಮಕ್ಕಳ ಉತ್ತಮ ‘ಟೊನಿಕ್ಕು’ ಇರುವದು.

THE NATIONAL PHARMACIES & PHARMACEUTICALS Ltd. DHARWAR.

ಹಾಸಿಗೆ ಹಾಸಿದೆ, ಪರದೆಯನ್ನೂ ಕಟ್ಟಿದೆ, ಒಳಗೂ ಸೇರಿಕೊಂಡೆ. ದೀಪವು ಇನ್ನೂ ಉರಿಯುತ್ತಿದ್ದಿತು. ಈ ವರೆಗಾಗಲೇ ತಂದೆಯವರು ಮಲಗಿ ದೀರ್ಘಶ್ವಾಸವನ್ನು ಎಳೆಯುತ್ತಿದ್ದರು. ನನ್ನವಳು ಇನ್ನೂ ಒಳಗೆ ಶಬ್ದಮಾಡುತ್ತಿದ್ದುದರಿಂದ, ಅವಳೇ ಉರಿಯುವ ದೀಪವನ್ನು ಬಂದು ಆರಿಸಿಕೊಳ್ಳಲಿ—ಎಂದುಕೊಂಡು, ಹೊದ್ದಿಕೆಯನ್ನು ಎಳೆದುಕೊಂಡು, ಹಾಸಿಗೆಯಲ್ಲಿ ಕಾಲನ್ನು ಚಾಚಿದೆ. ರುಂಡವೂ ಅರೆ ವಾರೆಯಾಯಿತು. ಇನ್ನೇನು ಬಿದ್ದುಕೊಳ್ಳಬೇಕು ಆ ಕ್ಷಣದಲ್ಲಿ– ನೋಡಿ ಎಂತಹ ಕ್ಷಣ !– ಅದೇ ಕ್ಷಣದಲ್ಲಿ 'ಕುಂಯ್' ಎನ್ನುತ್ತ ಬಾಣವೊಂದು ನನ್ನ ಕಿವಿಯ ಬಳಿ ಹಾದುಹೋದಂತಾಯಿತು. ನಾನು ಚಂಗನೆ ನೆಗೆದು, ನೆಟ್ಟಗೆ ಕುಳಿತೆ; ಹಾಗೆಯೇ ಸುತ್ತ ತಿರಿಗಿ ನೋಡಿದೆ. ಹುಂ. ಅಗೋ ಅಲ್ಲೇ ಆ ಪರದೆಯ ಮೇಲಿನ ಭಾಗದ ಅಂಚಿನಲ್ಲೇ, ಕುಳಿತಿದ್ದಿತು, ನನ್ನ ಪರಮಶತ್ರು, ಸೊಳ್ಳೆಯೊಂದು ! ಎಲ, ಎಲಾ ಬಂದಿತಲ್ಲ ಹಿಂಸೆ !

ಇದನ್ನು ಕಂಡು, ಜ್ವರದ ಸಂದು ಆದ ಮಗುವಿನ ಮೊಗದ ಮೇಲೆ ನೀರನ್ನು ಎರಚಿದಂತೆ ಆಯಿತು ನನಗೆ. ಕೋಪದಿಂದ ಹೊದಿಕೆಯನ್ನು ಒದ್ದು, ಎರಡು ಕೈಯನ್ನೂ ಹತ್ತಿರ ತಂದುಕೊಂಡು, ಅಲ್ಲಿ ಏನೂ ಕಾಣದಂತೆ ಕುಳಿತಿದ್ದ ಸೊಳ್ಳೆಯ ಕಡೆಗೆ ನೀಡಿ 'ಸಿಕ್ಕಿತು' ಎಂದುಕೊಂಡು, ಸದ್ದಿಲ್ಲದಂತೆ ಕೈತಿಕ್ಕಿದೆ, ಪಾಪ ಮಲಗಿದ್ದ ತಂದೆಯವರಿಗೆ ನಿದ್ರಾಭಂಗವು ಆಗಬಾರದೆಂದುಕೊಂಡು. ಅಂಗೈಗೆ ಸಿಕ್ಕಿದ ಸೊಳ್ಳೆಯು ತಪ್ಪಿಸಿಕೊಳ್ಳದಿರಲೆಂದು ಚೆನ್ನಾಗಿ ತಿಕ್ಕಿದೆ. ಇದೆಲ್ಲ ಸೊಳ್ಳೆಯೊಡನೆ ಹೋರಾಡಿದವರಿಗೆ ಗೊತ್ತಾಗುವ ಚಾತುರ್ಯ. ಸರಿ, ತಿಕ್ಕಿ ಸುಮ್ಮನೆ ಮಲಗಲಾಗುತ್ತದೆಯೆ ? ಅಂಗೈಯಲ್ಲಿ ಸೊಳ್ಳೆಯ ಹೆಣವು ಕಾಣದಿದ್ದರೆ ಮನಸ್ಸಿಗೆ ಭರವಸೆಯು ಹೇಗೆ ಬಂದೀತು ? ಹುಂ, ನೋಡಬೇಕು. ಅಂಗೈ ಬಿಚ್ಚಿದೆ. ನೋಡಿದೆ. ಎಲ್ಲೀದಿದೆ ? ಬರಿಯ ಕೈ ! ಸೊಳ್ಳೆಯು ತಪ್ಪಿಸಿಕೊಂಡಿದ್ದಿತು. ಮತ್ತೊಂದು ಬಾರಿ ಪರದೆಯೊಳಗೆ 'ಸರ್ಚ್' ಮಾಡಿದೆ. ಓಹೋ, ಇಲ್ಲಿ ಕುಳಿತಿದೆ, ಈ ಹಾಳಾದ್ದು– ಪರದೆಯ ಕಾಲಿನ ಕಡೆಯ ಮೂಲೆಯಲ್ಲಿ. ಸರಿ. ಎದ್ದು ಡಗ್ಗಾಲು ಮಂಡಿಯೂರಿ, ಅಂಗೈಗಳನ್ನು ಹಿಂದಿನಂತೆಯೇ ಸರಿಮಾಡಿಕೊಂಡು, ಈ ಮೂಲೆಯ ಕಡೆಗೆ ವಾಲಿಕೊಂಡೆ. ಬೇಟೆಗಾರನ ಎಚ್ಚರಿಕೆಯಿಂದ ಸೊಳ್ಳೆಯನ್ನು ಸಮೀಪಿಸಿ, ಆಯ ನೋಡಿ 'ಸಿಕ್ಕೇ ಬಿಟ್ಟಿತು' ಎಂಬ ಭರವಸೆಯಿಂದ ಕೈಬಡಿದೆ. ಹುಂ. ನನಗೆ ತಿಳಿಯದಂತೆಯೇ ಕೈಬಡಿದು ಬಿಟ್ಟೆ. ಶಬ್ದವಾಯಿತು. ಮಲಗಿದ್ದ ತಂದೆಯವರ ಕಡೆಗೆ ನೋಡಿದೆ. ಅವರ ದೀರ್ಘಶ್ವಾಸವು ನಿಂತಿತು. ಅವರು ಮಗ್ಗುಲಾದರು. ಆದರೂ ಎಚ್ಚರವಿಲ್ಲವೆಂದು ಸಂತೋಷಿಸಿದೆ. ಹೋಗಲಿ, ಇಷ್ಟಾಯಿತಲ್ಲ, ಸೊಳ್ಳೆಯಾದರೂ ಸತ್ತಿತೋ ? ಹು, ಸತ್ತಿರಬೇಕು– ಮುಕ್ಕಾಲು ಪಾಲು. ಇದಕ್ಕೆ ಪ್ರಮಾಣವಾಗಿ ಹೆಣವು ಕೆಳಗೆ ಬಿದ್ದಿರಬೇಕಲ್ಲ. ನೋಡಿದೆ– ಆ ಸ್ಥಳದಲ್ಲಿ. ಹೆಣವು ಕಾಣಲಿಲ್ಲ. ಎಲಾ, ಮತ್ತೆ ತಪ್ಪಿಸಿಕೊಂಡಿತಲ್ಲ ! ಎಂದು ಅಲ್ಲಲ್ಲಿ ಪರೀಕ್ಷಿಸಿದೆ. ಓ, ಅಗೋ, ಈಗ ಇಲ್ಲಿ, ಪರದೆಯ ಮೇಲು ಬಟ್ಟೆಯಿಂದ ಜೋತಾಡುತ್ತ ಸರ್ಕಸ್ಸು ಮಾಡುತ್ತಿದೆ ! ನನಗೆ ಕೋಪವು ಕೊಂಚಕೊಂಚವಾಗಿ ಏರುತ್ತಿದ್ದಿತು.

ಸೊಳ್ಳೆಯು ಈ ಸ್ಥಳದಲ್ಲಿ ಕುಳಿತರೆ, ಅಂಗೈಯಿಗೆ ಬಹಳ ಮಟ್ಟಿಗೆ ಸಿಕ್ಕುವುದಿಲ್ಲ. ಹೊಡೆಯಲು ಹೋದರೆ ಬಟ್ಟೆಯೂ ಹಾರಿ, ಸೊಳ್ಳೆಯು ನೂರರಲ್ಲಿ ತೊಂಬತ್ತು ಸಲ ತಪ್ಪಿಸಿಕೊಳ್ಳುತ್ತದೆ. ಇದಕ್ಕಾಗಿ ನಾನು ಬೇರೆಯ ಅಸ್ತ್ರವನ್ನು—ವಸ್ತ್ರಾಸ್ತ್ರ— ಉಪಯೋಗಿಸಲು ನಿರ್ಧರಿಸಿ, ದಿಂಬಿನ ಕಡೆಯಿಂದ ಟವಲನ್ನು ಮೆಲ್ಲಗೆ ತೆಗೆದುಕೊಂಡು, ಎರಡಾಗಿ ಮಡಿಸಿ, ಮಡಿಸಿದ ಕಡೆಯನ್ನು ಹಿಡಿದು, ಪಚ್ಚನ್ನು ಹೊರಬಿಟ್ಟು, ಕೈಯನ್ನು ಆದಷ್ಟು ಸೊಳ್ಳೆಯ ಹತ್ತಿರಕ್ಕೆ ತೆಗೆದುಕೊಂಡು ಹೋಗಿ, ಬರಿಯ ಮುಂಗೈ ಚಲನೆಯಿಂದಲೇ ಟವಲನ್ನು ಸೊಳ್ಳೆಯ ಕಡೆಗೆ ಬಡಿದೆ. ಈ ಕ್ರಮ ಬಹಳ ವೇಳೆ 'ಎಲೆಕ್ಟ್ರಿಕ್ ಚೇರಿ'ನಂತೆ ತೀಕ್ಷ್ಣವಾಗಿ ಕೆಲಸ ಮಾಡಿ ಬಿಡುತ್ತದೆ. ಈಗಲೂ ಹಾಗೆಯೇ ಆಯಿತೆಂದು ನಂಬಿ 'ಛೆ, ಬಡಮುಂಡೇದೆ, ಈಗ ಆಯಿತು ನಿನ್ನ ಗತಿ' ಎಂದೆ. ಮತ್ತೆ ನೋಡಿದೆ – ಪ್ರಮಾಣಕ್ಕಾಗಿ. ಬಿದ್ದಿದ್ದ ಹೊದಿಕೆಯ ಪದರವನ್ನು ಮೆತ್ತಗೆ ಬಿಡಿಸಿ ಅಲ್ಲಿ, ನನ್ನ ಮೈಮೇಲಿನ ಬಟ್ಟೆಯ ಮೇಲೆ, ಎಲ್ಲಿ ನೋಡಿದರೂ ಕಾಣಲಿಲ್ಲ. ಈ ಕ್ಷಣದಲ್ಲಿ ಒಳಗಿನ ನನ್ನ ಚಲನೆಯಿಂದಲೊ ಏನೋ, ಸೊಳ್ಳೆಯು ನನ್ನನ್ನು ಅಣಕಿಸುವಂತೆ, ಮೊಟ್ಟಮೊದಲು ಕಿವಿಯ ಬಳಿ ಹಾದುಹೋದಂತೆ ಈಗಲೂ ಹೋಯಿತು. ನನ್ನ ಮೈ ಉರಿಯಿತು. ಕೋಪಾವಿಷ್ಟನಾಗಿ, ಅದು ಹೋದ ದಿಕ್ಕನ್ನೇ ನೋಡಿ, ಆ ಕಡೆ ಸರಿದು ಟವಲನ್ನು ಅಗಲವಾಗಿ ಹಿಡಿದು, ಅದನ್ನು ಹಿಡಿಯ ಹೋದೆ. ಆದರೆ— ಅದು ಈವರೆಗಾಗಲೇ ನನ್ನ ಕಾರ್ಯಕ್ರಮದ ಇಂಗಿತವನ್ನರಿತು, ಕೈ ಹತ್ತಿರಕ್ಕೆ ಹೋಗುವುದಕ್ಕೆ ಮುಂಚೆಯೇ ಹಾರಿತು. ನಾನು 'ಹೀಗೆಲ್ಲ ಅಲ್ಲ, ಆತುರದಿಂದ ಪ್ರಯೋಜನವಿಲ್ಲ. ಯುಕ್ತಿಯಿಂದಲೇ ಹಿಡಿಯಬೇಕು !' ಎಂದುಕೊಂಡು, ಮತ್ತೆ ಅಂಗೈ ಅಸ್ತ್ರವನ್ನೇ ಬತ್ತಳಿಕೆಯಿಂದ ತೆಗೆದೆ.

ಈಗ ನನ್ನ ಹಗೆಯು ನನ್ನನ್ನು ಸಾಮೀಪ್ಯಕ್ಕೆ ಹೋಗಗೊಡದೆ ಹಾರಾಡುತ್ತಿದ್ದಿತು. ನಾನು ಎಷ್ಟೆಷ್ಟೋ ಹೊಂಚು ಹಾಕಿ, ನಯದಿಂದ, ಚಾತುರ್ಯದಿಂದ ಪೂಸಿಮಾಡಿ ಸಿಕ್ಕಿಸಿಕೊಳ್ಳಬೇಕೆಂದರೂ, ಅದು ಕೊಳ್ಳಿಸಿಕೊಳ್ಳಲು ಸಿದ್ಧವಾಗದೆ ಹಾರಿಹಾರಿ, ನನ್ನ ಪ್ರೇಮಾಲಿಂಗನದ ಕೈಗಳಿಂದ ದೂರವಾಗಿಯೇ ಇರುತ್ತಿದ್ದಿತು. ಈ ವರೆಗೆ ನಾನು ಒಂದು ಮಂಡಿಯನ್ನೂರಿ, ಒಂದು ಕಾಲನ್ನು ಚೌಕಮಾಡಿ, ಕೈಗಳನ್ನು ನೀಡಿಕೊಂಡು ಪ್ರೇಮದಾನವನ್ನು ಬೇಡುವ ಪ್ರಣಯಿಯಂತೆ ನಟಿಸುತ್ತಿದ್ದೆ. ಸೂಜಿಕಲ್ಲಿನ ಕಡೆಗೆ ತಿರುಗಿ ಸರಿಯುವ ಸೂಜಿಯಂತೆ, ಸೊಳ್ಳೆಯು ಹೋದಹೋದ ಕಡೆಗೆ ಗಿರಗಿರನೆ ತಿರುಗುತ್ತ ಸರಿಯುತ್ತಿದ್ದೆ. ಒಂದು ಬಾರಿ 'ಬುದ್ಧಿಯನ್ನೆಲ್ಲಾ ಉಪಯೋಗಿಸಿ, ಮಹಾಚಾತುರ್ಯದಿಂದ' ಹಿಂಬಾಲಿಸಿ, ಮೋಸಗೊಳಿಸಿ, ಕೈ ಚಾಚಿದೆ. ಸೊಳ್ಳೆಯು ಸಿಕ್ಕಿಬಿದ್ದಿತು ! ಹು. ಎರಡು ಅಂಗೈಯಿಗಳ ಮಧ್ಯೆ ಒದ್ದಾಡುವುದು ನನಗೆ ಗೊತ್ತಾಗುತ್ತಿದ್ದಿತು. ಹಾ,

ಕಡೆಗೆ ಸಿಕ್ಕಿತಲ್ಲ! 'ಏ ಸೊಳ್ಳೆ! ಹೇಳು ಈಗ ಹಿಸುಕಿ ಬಿಡುತ್ತೇನೆ. ನಿನ್ನ ಆಟವು ಈಗ ಆಗಿ ಹೋಯಿತು. ಇದಕ್ಕೆ ಏನು ಹೇಳುವೆ?' ಸೊಳ್ಳೆಯನ್ನು ನಾನು ಒಡನೆಯೇ ಹಿಸುಕದೆ, ಮಕ್ಕಳು ಪೆಪ್ಪರ-ಮೆಂಟನ್ನು ಅಗಿದು ನುಂಗದೆ ನಿಧಾನವಾಗಿ ಚೀಪುವಂತೆ, ಇಷ್ಟು ಕಷ್ಟಪಟ್ಟು ಸಂಪಾದಿಸಿದ ನನ್ನ ವಿಜಯವನ್ನು ನನ್ನ ತೃಪ್ತಿಗಾಗಿ ಸಾವಧಾನವಾಗಿ ಅನುಭವಿಸುತ್ತಿದ್ದೆ. ಮನುಷ್ಯರು ಸಾಮಾನ್ಯವಾಗಿ ನಾಗರಿಕರಾಗಿರುವುದು ಹೊರಹೊದಿಕೆಯಲ್ಲಿ ಮಾತ್ರ. ಕೊಂಚ ತೆರೆದು ನೋಡಿದರೆ ಸಾಕು; ಇನ್ನೂ ಪಶುತನವು ಕಂಡೇ ಕಾಣುತ್ತದೆ. ನಾನೂ ಆಗ ಹಾಗೇ, ಆ ಸೊಳ್ಳೆಯ ಹಿಂಸೆಯಲ್ಲಿ ಮನಸ್ಸನ್ನಿಟ್ಟಿದ್ದೆ. ಮತ್ತೆ ಈಗ ನೋಡಿ, ಯುದ್ಧದಲ್ಲಿ ಸೋತ ಜರ್ಮನಿ, ಜಪಾನು ನಾಡುಗಳ ಮುಖಂಡರು ಸೆರೆಯಾಗಿದ್ದಾರೆ. ಅವರಿಗೆ ಶಿಕ್ಷೆಯೂ ಖಂಡಿತನೆ. ಆದರೆ ಅವರ ವಿಚಾರಣೆಯಾಗಬೇಕು, ಗೆದ್ದವರು ಅವರ ಮೇಲೆ ದರ್ಪದ ನಡೆವಳಿಕೆ ನಡೆಸಿ, ತೃಪ್ತಿ ಪಡೆಯಬೇಕು. ಇಲ್ಲದಿದ್ದರೆ ಜಯವನ್ನು ಚಪ್ಪರಿಸಿದಂತಾಗುವುದಿಲ್ಲ. ನನ್ನ ಗೆಲುವಿನಲ್ಲಿ ನನ್ನ ಸ್ಥಿತಿಯೂ ಹಾಗೇ. ಅದಕ್ಕಾಗಿಯೇ ಸೊಳ್ಳೆಯನ್ನು ಸಂಬೋಧಿಸಿ, ಅದನ್ನು ಅಣಕಿಸಿ, ಬೆದರಿಸುತ್ತಿದ್ದುದು. ಸರಿ, ಇದೆಲ್ಲ ಮುಗಿದು ಇನ್ನೇನು ಕೈ ಅಮುಕಬೇಕು; ಅಷ್ಟರಲ್ಲಿ ಬೆರಳ ಸಂದಿಯಲ್ಲಿ 'ಮುಲು ಮುಲು' ಆಯಿತು. ನಾನು ಎಚ್ಚರಗೊಳ್ಳುವುದರಲ್ಲೇ ಹಾರಿಹೋಯಿತು- ಆ ನನ್ನ ಬಂದಿ! ಛೇ, ಛೇ ಏನು ಕೆಲಸವಾಯಿತು! ಇಷ್ಟೇ ಅಲ್ಲ, ತಪ್ಪಿಸಿಕೊಂಡ ಸೊಳ್ಳೆಯು ನನ್ನನ್ನು ಅಣಕಿಸುವುದಕ್ಕೋ ತಿರಸ್ಕರಿಸುವುದಕ್ಕೋ ಎನ್ನುವಂತೆ, ನನ್ನ ಮೂಗಿನ ಮೇಲೆಯೇ ಬಂದು ಕುಳಿತಿತು. ಹಾ, ನನಗೆ ಎಷ್ಟು ಸಿಟ್ಟು ಬಂದಿತು! ಒಂದು ಬಾರಿ ಕೈಯನ್ನು ಜೋರಾಗಿ ಮೂಗಿನ ಮೇಲೆ ಅಪ್ಪಳಿಸಿದೆ. ಮೂಗಿಗೆ ಒಳ್ಳೆಯ ಪೆಟ್ಟು. ಬಿದ್ದುದು ಬಿದ್ದ ಮೇಲೆ ತಿಳಿಯಿತು. ನನಗೆ ರೇಗಿತು. ಇದಕ್ಕಿಂತಲೂ ನನ್ನನ್ನು ರೇಗಿಸಿದುದು ಸೊಳ್ಳೆಯು ನುಣುಚಿಕೊಂಡುದು— ಮತ್ತೆ, ನನ್ನ ಹಣೆಯ ಮೇಲೇ ಕುಳಿತು 'ಮಜ' ಮಾಡುತ್ತಿದ್ದುದು. ಹಣೆ ಚಚ್ಚಿಕೊಂಡೆ, ಕೆನ್ನೆಗೆ ಇಳಿಯಿತು. ಕೆನ್ನೆಗೆ ಹೊಡೆದುಕೊಂಡೆ, ಬಾಯಿಬಡಿದುಕೊಂಡೆ, ಎದೆ ಗುದ್ದಿಕೊಂಡೆ, ತೊಡೆ ತಟ್ಟಿಕೊಂಡೆ. ಎಲ್ಲ ಕಡೆಯಿಂದಲೂ ಜಾರಿತು, ಹಾರಿತು, ನಲಿಯಿತು, ನಕ್ಕಿತೋ ಏನೋ— ಕಿಸಿಕಿಸಿ ಎಂದು.

ಇಷ್ಟನ್ನು ಅನುಭವಿಸಿ, ಇನ್ನೂ ಜೀವಸಹಿತವಾಗಿ— ಇನ್ನೂ ಎರಡು ಜೀವಗೂಡಿ ಎದುರಿಗೆ ಇರುವ ಈ ಹಗೆಯನ್ನು ನೋಡಿದರೆ, ಯಾರಿಗೆ ತಾನೆ ಮೈಮರೆಯುವ ಕೋಪ ಬಾರದೆ ಇದ್ದೀತು? ತಾಳ್ಮೆಯು ಮಿತಿಮೀರಿದ ನಾನೂ ರೋಷಾವೇಶದಿಂದ ಹುಚ್ಚನಂತೆ ನನ್ನ ನಾಗರಿಕತೆ, ನಯ, ನಾಜೂಕು, ಸೊಳ್ಳೆ ಹಿಡಿಯುವ ಚಾತುರ್ಯ-ಸೂತ್ರ, ತಂದೆಯವರ ನಿದ್ರೆ ಎಲ್ಲವನ್ನೂ ಮೂಲೆಗಿಟ್ಟು, ಮನುಜರ ಮೇಲೆ ಬೀಸುವ ಯಮಪಾಶದಂತೆ ನನ್ನ ಟವಲನ್ನು ಸೊಳ್ಳೆಯ ಕಡೆಗೆ ಬೀಸಿದೆ. ಫಲವಾಗದೆ ಪಾಶವನ್ನು ಬಿಸುಟು, ಜೋರಾಗಿ ಕೈ ಚಪ್ಪಾಳೆ ತಟ್ಟುತ್ತ ಹಲವೆಡೆಯಲ್ಲೆಲ್ಲ ಕುಪ್ಪಳಿಸಿದೆ, ಹಾರಾಡಿದೆ.

ಹೀಗೆ ಎಷ್ಟು ಬಾರಿ ಮಾಡಿದೆನೋ ಏನೋ; ತಂದೆಯವರು ಎಚ್ಚತ್ತು "ಇದೇನಯ್ಯಾ ನಿನ್ನ ಯುದ್ಧದ ಆರ್ಭಟ!" ಅಂದಾಗಲೇ ನನಗೆ ಪ್ರಜ್ಞೆ ಬಂದಿತು ಕೊಂಚ ನಾಚಿಕೆಯೂ ಆಯಿತೆಂದು ಒಪ್ಪಿಕೊಳ್ಳುತ್ತೇನೆ. ಇದಕ್ಕಿಂತ ಹೆಚ್ಚಾಗಿ ಮೊದಲೇ ದಣಿದಿದ್ದ ದೇಹ, ಈಗ ಡಗ್ಗಾಲು ಮಂಡಿಯಿಟ್ಟು ತಿರುತಿರುಗಿ ಮಂಡಿಕಾಲುಗಳೂ, ಇಷ್ಟು ಹೊತ್ತು ನೀಡಿದ್ದ ಕೈಗಳೂ ಇನ್ನಷ್ಟು ನೋಯುತ್ತಿದ್ದುವು. ಮನಸ್ಸಂತೂ ರೋಸಿ ಹೋಗಿ ಆಯಾಸಗೊಂಡಿದ್ದಿತು. ಉಸಿರೂ ಬೇಗ ಬೇಗನೆಯೇ ಬಾಯುತ್ತಿದ್ದಿತು. ಆದರೆ ಆ ಸೊಳ್ಳೆ ಮಾತ್ರ ಇನ್ನೂ ಪರದೆಯ ಮೇಲೇ, ಮೊದಲು ಎಲ್ಲಿ ಕಂಡಿತೋ ಹೆಚ್ಚು ಕಡಿಮೆ ಅಲ್ಲೇ ಕುಳಿತಿದ್ದಿತು. ಹ! ಅಲ್ಲೇ ಕುಳಿತು ತನ್ನ ಬದುಕಿನಿಂದಲೇ ನನ್ನನ್ನು ವ್ಯಥೆಗೊಳಿಸುತ್ತಿತ್ತು. ಅದರ ಎದೆಯೂ ಢಗಗುಟ್ಟುತ್ತಿದ್ದಿತೋ ಇಲ್ಲವೋ ಹೇಳಲಾರೆ. ಢಗಗುಟ್ಟಿದುದರಿಂದ ನನಗಾದ ಲಾಭವೇನು — ಇನ್ನೂ ಅದು ಬದುಕಿರುವಾಗ? ಇನ್ನು ಈ ಬೇಟೆಯನ್ನು ಮುಂದುವರಿಸಲು ನನಗೆ ತ್ರಾಣ-ಇಷ್ಟಗಳು ಇರದೆ, ಸುಮ್ಮನೆ ಒಳಗೊಳಗೆ ಉರಿಯುರಿಯುತ್ತ ಬಿದ್ದುಕೊಂಡು "ನೀನು ಯಾವ ಜನ್ಮಾಂತರದ ಸಾಲಗಾರನೋ ಏನೋ, ಹೋಗಲಿ. ಹೊಟ್ಟೆಯ ತುಂಬ ನನ್ನ ರಕ್ತ ಕುಡಿದುಕೋ" ಎಂದು ಕಣ್ಣನ್ನು ಮುಚ್ಚಿಕೊಂಡೆ ಆಗ ನನಗೆ ಗೋವಿನ ಕತೆಯು, ಹುಲಿಯ ಮುಂದೆ ಬಡ ಗೋವು ನಿಂತು.... 'ಗುಂಡಿಗೆಯ ಬಿಸಿರಕ್ತವಿದಕೋ ಚಂಡ-ವ್ಯಾಘ್ರನೆ ನೀನಿದೆಲ್ಲವ ಉಂಡು ಸಂತಸದಿಂದಿರು' ಎಂದು ಹೇಳಿದ ಮಾತು ನೆನಪಿಗೆ ಬಂದಿತು. ನಾನು "....ಚಂಡಸೊಳ್ಳೆಯೆ ನೀನಿದೆಲ್ಲವ...." ಎಂದು ಜೋಡಿಸಿ ಹೇಳಿಕೊಂಡೆ.

ಆಗಲೇ ನನ್ನ ಸಾಲಗಾರನು ಮತ್ತೆ 'ಸುಂಯ್' ಎನ್ನುತ್ತ ಕಿವಿಯ ಬಳಿಯಲ್ಲಿ ಹಾರಿಹೋದನು.

⊙ ಮಕ್ಕಳ ಕತೆಗಳು ⊙

(ಜಾನಪದ ದೃಷ್ಟಿಯಲ್ಲಿ)

ಶ್ರೀ. ಮಿರ್ಜಿ ಅಣ್ಣಾರಾಯರು, ಧಾರವಾಡ

卐

ಮಕ್ಕಳ ಮನಸ್ಸು ಬುದ್ಧಿಗಳನ್ನೂ ಲೋಕಪರಿಚಯವನ್ನೂ, ಬೆಳೆಯಿಸುವುದಕ್ಕೆ ಕತೆಗಳೇ ಪ್ರಮುಖ-ಸಾಧನವಾಗಿವೆ. ನೂರು ಮಾತುಗಳನ್ನು ಹೇಳಿಯೂ ತಿಳಿಸಲಿಕ್ಕಾಗದ ವಿಷಯವನ್ನು, ಒಂದು ಕತೆಯ ಮೂಲಕ, ಸಹಜವಾಗಿ ತಿಳಿಸಲಿಕ್ಕಾಗುವುದು. ಎಂತಲೇ ನಮ್ಮ ನಾಡಿನಲ್ಲಿ ಮಕ್ಕಳ ಕತೆಗಳು ಎಣಿಕೆಯಿಲ್ಲದಷ್ಟು ಬಳಕೆಯಲ್ಲಿವೆ.

⊙

ಮಕ್ಕಳು !—ಎಂದೊಡನೆ, ನಮ್ಮ ಕಣ್ಣೆದುರಿಗೆ ಮುದ್ದುಮುಖದ ಚಿಕ್ಕ ಮಾನವಾಕೃತಿಗಳ ಸಮೂಹವೇ ನಿಲ್ಲುವುದು. ಅಲ್ಲಿ ಏನು ಉತ್ಸಾಹ ! ಏನು ಚೆಲ್ಲಾಟ ! ಏನು ನಗೆ ! ಎಂಥ ಲವಲವಿಕೆ ! ಅದೆಂಥ ಆತುರ ! ಜಗತ್ತಿನ ರಹಸ್ಯವನ್ನೇ ತಿಳಿದುಕೊಳ್ಳಬೇಕೆಂಬ ಹವಣಿಕೆ !

ಇದು ಸಹಜ. ಬೆಳೆಯುತ್ತಿರುವ ಮನಸ್ಸಿನ ಲಕ್ಷಣವೇ ಅದು. ವಿವಿಧಮುಖಗಳಿಂದ ಜ್ಞಾನವನ್ನು ಸಂಪಾದಿಸುವುದು ಅದರ ಸ್ವಭಾವ. ಆ ಸ್ವಾಭಾವಿಕವಾದ ವಿಕಾಸಕ್ಕೆ ಬೇಕಾಗುವ ಸಾಧನೆ-ಗಳನ್ನು ಕಲ್ಪಿಸಿಕೊಡುವುದು ನಾಡಿನ ಕರ್ತವ್ಯವಾಗಿದೆ. ಸಂಸ್ಕೃತಿ-ಸಂಪನ್ನವಾದ ಯಾವುದೇ ನಾಡಿನ ಜನಾಂಗವು, ತನ್ನ ಮಕ್ಕಳ ಬೆಳವಣಿಗೆಯ ದೃಷ್ಟಿಯಿಂದ ಎಲ್ಲ ಅನುಕೂಲತೆಗಳನ್ನು ಕಲ್ಪಿಸಿಕೊಂಡಿರುತ್ತದೆ.

ಈಗ ನಮ್ಮ ಜನಜೀವನದತ್ತ ಸ್ವಲ್ಪ ಹೊರಳಿ ನೋಡೋಣ. ತೊಟ್ಟಿಲಲ್ಲಿ ಮಗುವು ಚಪ್ಪರದೊಳಗಿನ ಗುಬ್ಬಿಗಳನ್ನು ಕಂಡು ಆಡುತ್ತಿರುತ್ತದೆ. ಪಡಸಾಲೆಯೊಳಗೆ ಕೈಯಲ್ಲಿ ಗಿಲಗಿಲಕಿಯನ್ನು ಹಿಡಿದು ಬಾರಿಸುವ ಕೂಸು ; ಅಂಗಳದಲ್ಲಿ ಕಟ್ಟಿಗೆಯ ಎತ್ತನ್ನು ಎಳೆದು, ಬೆಂಡಿನ ಬಂಡಿಗೆ ಹೂಡುವ ಹುಡುಗ; ಗೊಂಬೆಗೆ ಸೀರೆ ಉಡಿಸಿ, ಒಡವೆ ತೊಡಿಸಿ ಮದುವೆ ಮಾಡಿ, ಬೀಗರನ್ನು ಉಣಿಸುವ ಆಟವನ್ನು ಆಡುವ ಹುಡುಗಿಯರು ! ಇನ್ನೊಂದೆಡೆಗೆ ಕಾಗದದ ನಾವೆಗಳನ್ನು ಮಾಡಿ ನೀರಿನಲ್ಲಿ ತೇಲಿ ಬಿಡುವ ಮಕ್ಕಳು ! ಕಡ್ಡಿಯ ಪೆಟ್ಟಿಗೆಗಳಿಂದ ಉಗಿಬಂಡಿಯನ್ನು ಮಾಡುವ, ಕಾಗದದ ವಿಮಾನಾಕೃತಿಯ ಆಕಾಶಬುಟ್ಟಿಗಳನ್ನು ಹಾರಿಸುವ ದೃಶ್ಯಗಳು ! ಒಂದೋ ಎರಡೋ ! ಲೆಕ್ಕವಿಲ್ಲದ ಆಟನೋಟಗಳು ! ಇವೆಲ್ಲ, ಮಕ್ಕಳು ಲೋಕದ ಜ್ಞಾನವನ್ನು ಸಂಪಾದಿಸುವ ಸಾಧನೆಗಳು. ಆಡಾಡುತ್ತ ಕಲಿಯುವ ಜೀವನಪಾಠಗಳು.

ಹಗಲೆಲ್ಲ ಆಡಿ ಸಾಯಂಕಾಲಕ್ಕೆ ಒಂದೆಡೆಗೆ ಸೇರಿದ ಮನೆಯ ಮಕ್ಕಳ ಜೊತೆಗೆ ಓಣಿಯ ಮಕ್ಕಳನ್ನು ಸೇರಿಸಿಕೊಂಡು, ಕತೆ ಹೇಳುತ್ತ ಕೂಡುವ ಅಜ್ಜಿಯಂದಿರೂ, ಅಜ್ಜಂದಿರೂ ಇಂದಿನ ನಮ್ಮ ಹಳ್ಳಿ-ಪಳ್ಳಿಗಳಲ್ಲಿ ಎಷ್ಟಿಲ್ಲ ? ಅಲ್ಲಿ ಮಕ್ಕಳು ಕುತೂಹಲದಿಂದ ಕೇಳುವ ಪ್ರಶ್ನೆಗಳೇನು ? ಅವಕ್ಕೆ ಹಿರಿಯರು ಹೇಳುವ ಸಮಾಧಾನ ಎಂಥದು ? ಮಕ್ಕಳ ನಗೆ ಉತ್ಸಾಹ ಬೆರೆತ ಆ ಪ್ರಸಂಗವೊಂದು ಒಳ್ಳೆಯ ಸಭೆಯಾಗಿರುತ್ತದೆ. ಅದಕ್ಕೆ ಅಜ್ಜಿಯೇ ಅಧ್ಯಕ್ಷಳು. ಅವಳು ಹೇಳುವ ಕತೆಗಳೇ ಉಪನ್ಯಾಸಗಳು !

ಈ ಕತೆಗಳು ಮಕ್ಕಳ ಮನೋವೃತ್ತಿಗೆ ಅನುಸರಿಸಿಯೇ ಇರುತ್ತವೆ. ಮುದುಕಿ ಮಗುವಿನ ಮನೋವಿಜ್ಞಾನವನ್ನು ಚೆನ್ನಾಗಿ ಬಲ್ಲಳು. ಒಂದು ಹುಡುಗನ ಮುಖ ಸ್ವಲ್ಪ ಬಾಡಿದರೆ ಸಾಕು. ಅದರ ಕಾರಣವನ್ನು ಕೂಡಲೆ ಕಂಡು ಹಿಡಿದು, ಅವನ ಹೆಸರನ್ನು ಕತೆಯೊಳಗೆ ಬರುವ ಒಂದು ಹೊಸ ಪಾತ್ರಕ್ಕೆ ಇಟ್ಟು, ಹೇಳಿ ನಗಿಸುತ್ತಾಳೆ, ಸಂತಸಗೊಳಿಸುತ್ತಾಳೆ. ಈ ಕಥನಪ್ರಸಂಗಗಳು ದಿನಾಲು ಮನೆ-ಮನೆಗಳಲ್ಲಿ ನಡೆಯುತ್ತವೆ. ಅಲ್ಲದೆ, ವರ್ಷದಲ್ಲಿ ಹಲವು ಸಲ ಹಳ್ಳಿಯ ಜನವೆಲ್ಲ ಸೇರಿ, ಊರ ಬಯಲಿನಲ್ಲಿಯೋ ಗುಡಿಗುಂಡಾರಗಳ ಎದುರಿಗೋ ಗೊಂದಲಿಗರಿಂದ ಕತೆಗಳನ್ನು ಹೇಳಿಸುತ್ತಾರೆ. ಅವು ಕಲ್ಪಿತ ರಾಜ-ಮಹಾರಾಜರ ಕತೆಗಳಿರುತ್ತವೆ. ಈ ಕಥನಪದ್ಧತಿಯಲ್ಲಿ ಹಾಡು-ಬಾಜನೆಗಳೂ ಸೇರಿರುತ್ತವೆ. ಇವನ್ನು ಕೇಳಲಿಕ್ಕೆ ಹಳ್ಳಿಯ ಹಿರಿಕಿರಿಯರೆಲ್ಲ ಒತ್ತಟ್ಟಿಗೆ ಸೇರಿ, ಇಡೀ ರಾತ್ರಿ ಕತೆಗಳನ್ನು ಕುತೂಹಲದಿಂದ ಕೇಳುತ್ತ ಕೂಡುತ್ತಾರೆ. ಹೀಗೆ ಕತೆಗಳು ನಮ್ಮ ನಾಡಿನ ಜೀವನವಿಕಾಸಕ್ಕೆ ಒಂದು ಪ್ರಮುಖ ಸಾಧನವಾಗಿವೆ.

ಮಕ್ಕಳ ಮನಸ್ಸಂತೂ ವಿಕಾಸ ಹೊಂದುತ್ತಿರುತ್ತದೆ. ಆ ವಿಕಾಸ ಹೊಂದುವ ಮನಸ್ಸು, ಇಂಥ ಕತೆಗಳಿಂದ ಅರಳುತ್ತದೆ. ಅಲ್ಲದೆ ಕತೆಗಳಿಂದ ಚಿಕ್ಕ ಮಕ್ಕಳಲ್ಲಿ ಆದರ್ಶ, ಸುಗುಣ, ಧ್ಯೇಯ-ನಿಷ್ಠತೆಗಳು ನೆಲೆಗೊಳ್ಳುತ್ತವೆ. ಈ ಮಾತಿಗೆ ನಮ್ಮ ಪುರಾತನ ಸಾಹಿತ್ಯದಲ್ಲಿ ಅನೇಕ ಪ್ರಮಾಣಗಳು ದೊರೆಯುವುವು. ಮಾದರಿಗಾಗಿ ಇಲ್ಲಿ ಒಂದನ್ನು ಉದಾಹರಿಸಬಹುದು. ಅಭಿಮನ್ಯುವನ್ನು ಸುಭದ್ರೆಯು ಬಸುರಿದ್ದಾಗ, ಅವಳಿಗೆ ಶ್ರೀಕೃಷ್ಣನು ಒಂದು ಕತೆಯನ್ನು ಹೇಳುತ್ತಿದ್ದನಂತೆ. ಬಸುರಿಗೆ ಹೇಳಿದ ಕತೆಗಳಿಂದ ಆಗುವ ಸಂಸ್ಕಾರವು ಮಗುವಿಗೂ ಆಗುತ್ತದೆಂದು ಕೃಷ್ಣನ ನಂಬುಗೆ. ಅದರಿಂದ ಅವನು ಅರ್ಜುನನ ವೀರಜೀವನವನ್ನೇ ಕತೆ ಮಾಡಿ ಹೇಳುತ್ತಿದ್ದ. ಅದರಲ್ಲಿ ಅರ್ಜುನನು ಚಕ್ರವ್ಯೂಹವನ್ನು ಭೇದಿಸುವ ಕ್ರಮವೂ ವಿವರಿಸಲ್ಪಟ್ಟಿತ್ತು. ಕತೆ ಕೇಳುತ್ತ ಕೇಳುತ್ತ ಸುಭದ್ರೆಯು ನಿದ್ರೆಹೋದಳು. ಆಗ ಗರ್ಭದೊಳಗಿದ್ದ

ಅಭಿಮನ್ಯುವು ಕತೆಗೆ ಹೂಗೊಡುತ್ತಿದ್ದನಂತೆ. ಹೀಗೆ ಗರ್ಭದಲ್ಲಿದ್ದು ಕೇಳಿದ ಚಕ್ರವ್ಯೂಹದ ಸಮರಜ್ಞಾನವನ್ನು ಅವಲಂಬಿಸಿಯೇ, ಮುಂದೆ ಭಾರತಯುದ್ಧದಲ್ಲಿ ಅಭಿಮನ್ಯುವು ಧೈರ್ಯದಿಂದ ಚಕ್ರವ್ಯೂಹವನ್ನು ಭೇದಿಸಲು ಮುಂದಾಗುತ್ತಾನೆ. ಈ ಕತೆಯಿಂದ ನಾವು ಎರಡು ಸಂಗತಿಗಳನ್ನು ಮುಖ್ಯವಾಗಿ ತಿಳಿದುಕೊಳ್ಳುತ್ತೇವೆ. ಮಕ್ಕಳು ಗರ್ಭದಲ್ಲಿರುವಾಗಿನಿಂದಲೂ ಕತೆಯನ್ನು ಕೇಳಲಿಕ್ಕೆ ಹಂಬಲಿಸುತ್ತವೆ— ಹಾಗೂ ಮಕ್ಕಳಲ್ಲಿ ಕತೆ ಕೇಳುವ ಸ್ವಭಾವವು ಅಷ್ಟು ಸ್ವಾಭಾವಿಕವಾಗಿರುತ್ತದೆ. ಮತ್ತು ಕತೆಗಳು ಮಕ್ಕಳ ಜ್ಞಾನವನ್ನು ಬೆಳೆಸುತ್ತವೆ, ಶೀಲವನ್ನು ನಿರ್ಮಿಸುತ್ತವೆ. ಇಲ್ಲಿ ಛತ್ರಪತಿ ಶಿವಾಜಿಯ ತಾಯಿಯಾದ ಜೀಜಾಬಾಯಿಯು, ಮಗನಿಗೆ ಚಿಕ್ಕಂದಿನಲ್ಲಿ ಭಾರತ ರಾಮಾಯಣದ ಕತೆಗಳನ್ನು ಹೇಳುತ್ತಿದ್ದಳೆಂಬ ಸಂಗತಿಯನ್ನು ನಾವು ಗಮನಿಸಬೇಕು. ಆ ಧೀರೋದಾತ್ತ ಕತೆಗಳನ್ನು ಕೇಳಿಯೇ ಶಿವಾಜಿಯು ಮಹಾಪುರುಷನಾದನು. ಅವನ ಮುಂದಿನ ಭವ್ಯಜೀವನವು, ಅವನು ಚಿಕ್ಕಂದಿನಲ್ಲಿ ಕೇಳಿದ ಕತೆಗಳಿಂದಲೇ ಭದ್ರವಾಯಿತು.

ಇನ್ನು ಮಕ್ಕಳ ಕತೆಗಳ ಲಕ್ಷಣ ವಿಷಯ :— ಚಿಕ್ಕ ಮಕ್ಕಳ ಮನಸ್ಸು ಬಹು ಮೃದುವಾಗಿರುತ್ತದೆ. ಅಲ್ಲದೆ, ಅವರು ಕತೆಗಳಲ್ಲಿಯ ಪಾತ್ರಗಳ ಕೂಡ ಬಹಳ ಬೇಗ ಸಮರಸರಾಗಿ ಬಿಡುತ್ತಾರೆ. ಕತೆ ಕೇಳುವಾಗ ಅವರು, ಸುತ್ತಲಿನ ಪ್ರಪಂಚವನ್ನೇ ಮರೆತು ಬಿಡುತ್ತಾರೆ, ಕಲ್ಪಿತ ಕಥಾಲೋಕದಲ್ಲಿಯೇ ವಿಹರಿಸುತ್ತಾರೆ. ಆದರಿಂದ ಮಕ್ಕಳ ಕತೆಗಳಲ್ಲಿ ಕಲ್ಪಕತೆಗೆ ಹೆಚ್ಚು ಅವಕಾಶವಿರಬೇಕಾಗುತ್ತದೆ. ವಾಸ್ತವಿಕಾಂಶಗಳಿಂದ ಕೂಡಿದ ಕತೆಗಳು ಚಿಕ್ಕಮಕ್ಕಳ ಮನಸ್ಸನ್ನು ಅಷ್ಟು ಆಕರ್ಷಿಸುವುದಿಲ್ಲ. ನಮ್ಮ ಹಳ್ಳಿಗಳಲ್ಲಿ ಪ್ರಚಲಿತವಿರುವ ಒಂದು ಕತೆಯನ್ನು ಸಂಗ್ರಹಿಸಿ ಇಲ್ಲಿ ಹೇಳಬಹುದು.

ಒಂದೂರಿನಲ್ಲಿ ಒಬ್ಬ ರಾಜನಿದ್ದ. ಅವನಿಗೆ ಒಬ್ಬಳೇ ಮಗಳು. ಬಹು ಪ್ರೀತಿಯವಳು. ಅವಳು ದಿನಾಲು ಹಾಲುಅನ್ನವನ್ನು ಉಂಡು, ಹಿತ್ತಲಲ್ಲಿ ಕೈ ತೊಳೆಯುತ್ತಿದ್ದಳು. ಮುಂದೆ ಅಲ್ಲಿ ಹಾಲೂಅನ್ನದ ಗಿಡ ಹುಟ್ಟಿ, ಬೆಳೆಯಿತು. ಅದು ದಿನಾಲು ಅನ್ನವನ್ನು ಕೊಡಹತ್ತಿತು. ಇದನ್ನು ಕಂಡು ಎಲ್ಲರಿಗೂ ಸೋಜಿಗವಾಯಿತು. ರಾಜಕುವರಿಯಂತೂ ದಿನಾಲು ಆ ಗಿಡದ ಟೊಂಗೆಯಲ್ಲಿ ಕುಳಿತೇ ಹಾಲುಅನ್ನ ಉಣ್ಣಹತ್ತಿದಳು. ಇದನ್ನು ಒಂದು ರಾಕ್ಷಸ ಬಹುದಿನಗಳಿಂದ ನೋಡುತ್ತಿದ್ದಿತು. ಅದಕ್ಕೆ ಹಾಲುಅನ್ನವನ್ನು ಉಂಡ, ಎಳೆಯ ಹುಡುಗಿಯನ್ನು ತಿನ್ನಲು ಬಹಳ ಆಶೆಯಾಯಿತು. ಆದರಿಂದ ಒಂದು ದಿನ ಬಂದು, ಯಾರೂ ಇಲ್ಲದಾಗ ಆ ರಾಜಕುವರಿಯನ್ನೂ ಆ ಗಿಡವನ್ನೂ ಎತ್ತಿಕೊಂಡು, ಅಡವಿಯಲ್ಲಿರುವ ತನ್ನ ಗುಹೆಗೆ ಹೋಗಿಬಿಟ್ಟಿತು. ಊರಲ್ಲಿ ಎಲ್ಲಿ ನೋಡಿದರೂ ಹಾಹಾಕಾರ! ರಾಜ-ರಾಣಿಯರು ಅಳಹತ್ತಿದರು ! ಎಲ್ಲ ಕಡೆಗೂ ಹುಡುಕಿಸಿದರು. ಆದರೂ ಸಿಕ್ಕಲಿಲ್ಲ. ರಾಜನ ಮಗಳು ಬಹು ಜಾಣೆ. ಅವಳು ರಾಕ್ಷಸನಿಗೆ ಹೇಳಿದಳು :— " ನನ್ನನ್ನು ನೀನು ಈಗಲೇ ತಿಂದರೆ ಒಂದು ತುತ್ತು ಕೂಡ ಆಗುವುದಿಲ್ಲ. ನಿನ್ನ ಹೊಟ್ಟೆಯೂ ತುಂಬುವುದಿಲ್ಲ. ಅದಕ್ಕಾಗಿ ಈಗ ತಿನ್ನಬೇಡ. ನಾನು ಬೆಳೆದು ದೊಡ್ಡವಳಾದ ಮೇಲೆ ತಿನ್ನುವೆಯಂತೆ." ರಾಜಕುವರಿಯ ಈ ಮಾತು ರಾಕ್ಷಸನಿಗೆ ಸರಿಯೆನಿಸಿತು. ಸದ್ಯ ರಾಜನ ಮಗಳು ಬದುಕಿದಳು. ರಾಕ್ಷಸ ದಿನಾಲು ಬೇಟೆಗೆ ಹೋಗುತ್ತಿದ್ದಿತು. ಹೋಗುವಾಗ ಗುಹೆಯ ಬಾಗಿಲ ಹಾಕುವುದು. ಆದರಿಂದ ರಾಜನ ಮಗಳು ಹಾಲೂಅನ್ನ ಉಣ್ಣುತ್ತ ಆ ರಾಕ್ಷಸನ ಗುಹೆಯಲ್ಲಿಯೇ ಬೆಳೆಯ ಬೇಕಾಯಿತು. ಇನ್ನೊಂದು ದಿನ ರಾಕ್ಷಸವು ಒಂದು ಹುಡುಗನನ್ನು ಹಿಡಿದು ತಂದಿತು. ಆ ಹುಡಗ ಬಹಳ ಸುಂದರ. ಅವನನ್ನೂ ರಾಜನ ಮಗಳು ಉಳಿಸಿದಳು. ಅಂದು ತನ್ನ ಪಾಲಿನ ಹಾಲೂಅನ್ನವನ್ನು ಹುಡುಗನಿಗೆ ಹಾಕಿದಳು. ಅಂದಿನಿಂದ ಅವಳ ಜೊತೆಗೆ ಆಡಲಿಕ್ಕೆ ಒಬ್ಬ ಹುಡುಗ ದೊರಕಿದಂತಾಯಿತು. ಅಲ್ಲದೆ ಇಬ್ಬರೂ ಕೂಡಿ ಅಲ್ಲಿಂದ ಹೇಗೆ ಪಾರಾಗಬೇಕೆಂದು ಯೋಚಿಸಹತ್ತಿದರು.

ರಾಕ್ಷಸವು ದಿನಾಲು ಒಂದು ಕೋಲಿನ ಮೇಲೆ ಕುಳಿತು ಹೊರಗೆ ಸಂಚಾರಕ್ಕೆ ಹೊರಡುತ್ತಿದ್ದಿತು. ಆ ಕೋಲಿನ ಮೇಲೆ ಕುಳಿತು, ಎಲ್ಲಿ ನಡೆಯೆಂದು ಹೇಳುತ್ತೇವೆಯೋ ಅಲ್ಲಿಗೆ ಕೊಂಡೊಯ್ಯುವಂತೆ ಇದ್ದಿತದು. ಒಂದು ದಿನ ರಾಕ್ಷಸವು ಆ ಕೋಲನ್ನು ಮನೆಯಲ್ಲಿಟ್ಟು, ಬಾಗಿಲನ್ನು ಹಾಕಲಿಕ್ಕೆ ಮರೆತು, ಸಮೀಪದ ಕಾಡಿನಲ್ಲಿ ಉರುವಲವನ್ನು ತರಲಿಕ್ಕೆ ಹೋಯಿತು. ತಾವು ರಾಕ್ಷಸನ ಕೈಯಿಂದ ಪಾರಾಗಲಿಕ್ಕೆ, ಇದೇ ತಕ್ಕ ಸಮಯವೆಂದು ಯೋಚಿಸಿ, ಆ ಹುಡುಗನು ರಾಜಕುವರಿಯನ್ನು ಕಟ್ಟಿಗೆಯ ಮೇಲೆ ತನ್ನ ಮುಂದೆ ಕೂಡಿಸಿಕೊಂಡು, ಅವಳ ಊರಿಗೆ ನಡೆ—ಎಂದನು. ಕೂಡಲೆ ಅವರನ್ನು ಹೊತ್ತುಕೊಂಡು ಕಟ್ಟಿಗೆಯು ಆಕಾಶಕ್ಕೆ ಹಾರಿತು. ಇದನ್ನು ದೂರದಿಂದ ಕಂಡ ರಾಕ್ಷಸವು ಓಡಿ ಬಂದಿತು. ಅವರ ಬೆನ್ನು ಹತ್ತಿತು. ಆದರೂ ಅವರು ಅದಕ್ಕೆ ಸಿಕ್ಕಲಿಲ್ಲ. ಪಾರಾಗಿ ಬಂದರು. ಮುಂದೆ ರಾಜನು ತನ್ನ ಮಗಳನ್ನು ಆ ಹುಡುಗನಿಗೆ ಮದುವೆಮಾಡಿ ಕೊಟ್ಟನು. ಆ ರಾಜನಿಗೆ ಗಂಡು ಮಕ್ಕಳು ಇಲ್ಲದುದರಿಂದ, ಅವನೇ ರಾಜನಾದನು. ಗಂಡಹೆಂಡಿರಿಬ್ಬರೂ ಸುಖದಿಂದ ರಾಜ್ಯವಾಳತೊಡಗಿದರು.

ಈ ಕತೆಯೊಳಗಿನ ಕಲ್ಪಕತೆಯು ಮಕ್ಕಳ ಮನಸ್ಸನ್ನು ಸೆರೆ ಹಿಡಿದು ಬಿಡುವುದು.

ಚಿಕ್ಕಮಕ್ಕಳಲ್ಲಿ ಹಿರಿಯರಷ್ಟು ವಿಚಾರಶೀಲತೆಯು ಬೆಳೆದಿರುವುದಿಲ್ಲ. ಅವರು ಹೆಚ್ಚು ಭಾವಿಕರಾಗಿರುತ್ತಾರೆ. ಆದರಿಂದ ಅವರಿಗೆ ಹೇಳುವ ಕತೆಗಳು ಹೆಚ್ಚು ಭಾವಪೂರ್ಣವಾಗಿರಬೇಕು. ಅಲ್ಲದೆ ಆ ಭಾವನೆಯ ಏರಿಳಿತಗಳೂ, ತಿರುವು-ಮುರುವುಗಳೂ ಕತೆಗಳಲ್ಲಿ ವಿಶೇಷವಿರಬೇಕು. ತಂದೆ-ತಾಯಂದಿರನ್ನು ಕಳೆದುಕೊಂಡು ಬೀದಿಯ ಭಿಕಾರಿಯಾಗಿ ತಿರುಗುವ ರಾಜಕುಮಾರ ಚಂದ್ರಹಾಸನ ಸ್ಥಿತಿಯನ್ನು ನೆನೆದು ಮಕ್ಕಳು ಮರುಗುವರು. ಅದೇ ಮುಂದಿನ ಕ್ಷಣದಲ್ಲಿ, ಆ ಹುಡುಗನು ಮತ್ತೆ ರಾಜನಾಗುವನೆಂದು ಕೇಳಿ, ಹರ್ಷಗೊಳ್ಳುವರು. ಚಂದ್ರಹಾಸನು ಕೊಲೆಗಡುಕರ ಕೈಯಲ್ಲಿ ಇದ್ದಾಗ, ಮಕ್ಕಳು

ಕಣ್ಣೀರು ಕರೆಯುವರು. ಬೇಡರ ರಾಜನಾದ ಪುಳಿಂದ ಬಂದು ಬಾಲಕನನ್ನು ಕರೆದೊಯ್ದಾಗ, ಮತ್ತೆ ಹಿರಿಹಿರಿ ಹಿಗ್ಗುವರು. ಇಂಥ ಭಾವನೆಯ ಏರಿಳಿತಗಳೂ ತಿರುವು-ಮುರುವುಗಳೂ ಮಕ್ಕಳ ಕತೆಗಳಲ್ಲಿ ಅವಶ್ಯವಾಗಿ ಇರಬೇಕಾದುವುಗಳು.

ಮಕ್ಕಳ ಕತೆಯ ಇನ್ನೊಂದು ಮುಖ್ಯ ಲಕ್ಷಣವೆಂದರೆ, ಅವು ಹಾಸ್ಯಪೂರ್ಣವಾಗಿರಬೇಕು. ಮಕ್ಕಳ ಸ್ವಭಾವವು ಯಾವಾಗಲೂ ನಕ್ಕು ನಲಿಯುತ್ತ ಇರುವಂತಹದು. ಅವರಿಗೆ ಚಿಂತೆ ಶೋಕಗಳು ಸಹನೆಯಾಗುವದಿಲ್ಲ. ಚಿಂತೆಭಯಗಳನ್ನು ಹುಟ್ಟಿಸುವ ಕತೆಗಳು ಅವರಿಗೆ ಸೇರುವುದಿಲ್ಲ. ಕಥಾವಸ್ತುವು ಏನೂ ಇರದೆ, ಕೇವಲ ಮಾತಿನ ಮಂಟಪವಾಗಿದ್ದು, ನಗೆಯನ್ನು ಹುಟ್ಟಿಸುವಂಥ ಕತೆಗಳಿದ್ದರೂ ಸಾಕು ಅವುಗಳಿಂದಲೇ ಹುಡುಗರು ಹರ್ಷಗೊಳ್ಳುವರು. ಈ ಮಾದರಿಯ ಕತೆಗಳೂ ಹಲವು ಸಿಕ್ಕುತ್ತವೆ. ಅವುಗಳಲ್ಲಿ ಒಂದನ್ನು ಇಲ್ಲಿ ಎತ್ತಿ ಹೇಳಬಹುದು :

ಒಂದು ಹಳ್ಳದಲ್ಲಿ ಮೂರು ಎಮ್ಮೆಗಳು ಇದ್ದುವು. ಅವುಗಳಲ್ಲಿ ಒಂದು ಹಾಲು ಕೊಡುತ್ತಿರಲಿಲ್ಲ. ಇನ್ನೆರಡು ಈಯ್ದಿರಲಿಲ್ಲ. ಆ ಎಮ್ಮೆಗಳನ್ನು ಮೂರು ರೂಪಾಯಿಗಳಿಗೆ ಮಾರಿದರು. ಒಂದು ರೂಪಾಯಿ ಖೋಟ್ಟಿ ಇತ್ತು. ಇನ್ನೆರಡು ಚಾರಿಸುತ್ತಿರಲಿಲ್ಲ. ಆ ಖೋಟ್ಟಿ ರೂಪಾಯಿಯನ್ನು ಕೊಟ್ಟು, ಮೂರು ಗಡಿಗೆ ಕೊಂಡರು. ಒಂದು ಒಡಕು ಇತ್ತು, ಇನ್ನೆರಡು ಸೋರುತ್ತಿದ್ದುವು. ಅವುಗಳಲ್ಲಿ ಅನ್ನ ಮಾಡಿದರು, ಒಂದರಲ್ಲಿಯ ಅನ್ನ ಹಸಿಯಿದ್ದಿತು. ಎರಡ-ರಲ್ಲಿಯ ಅನ್ನ ಬೆಂದಿರಲಿಲ್ಲ. ಆ ಅನ್ನವನ್ನು ಉಣ್ಣಲು ಮೂವರು ಕುಳಿತರು. ಒಬ್ಬ ಒಚ್ಚನಿದ್ದ; ಇಬ್ಬರಿಗೆ ಹಲ್ಲುಗಳಿರಲಿಲ್ಲ. ಹೀಗೆಯೇ ಕತೆಯು ಬೆಳೆಯುತ್ತ ಹೋಗುವುದು.

ಮಕ್ಕಳು ವಿಚಾರಶೀಲರಲ್ಲ ಎಂಬ ಮಾತನ್ನು ಮೇಲೆ ಹೇಳಿತು. ಆದರೂ ಅವರು ಕತೆಯು ಯಾವ ಅಂಶವಾದರೂ ಅಪೂರ್ಣವಾಗಿ ಉಳಿದರೆ ಸಹಿಸುವುದಿಲ್ಲ. ಅದನ್ನು ಪೂರ್ಣಗೊಳಿಸಲು ಕತೆ ಹೇಳುವವರಿಗೆ ಬೆಂಬಾಲುಬೀಳುತ್ತಾರೆ. ಅಲ್ಲದೆ ತಮಗೆ ಬಂದ ಸಂಶಯಗಳನ್ನು ಎತ್ತಿ, ಹಲವು ಪ್ರಶ್ನೆಗಳನ್ನು ಕೇಳುತ್ತಾರೆ. ಕತೆಯು ಕಲ್ಪಿತವಿರಲಿ, ಅವಾಸ್ತವವಿರಲಿ, ಏನಿದ್ದರೂ ಅದರೊಳ-ಗಿನ ಪ್ರತಿಯೊಂದು ಘಟನೆಗೆ ಕಾರಣವಿರಬೇಕು— ಇದನ್ನು ಮಾತ್ರ ಮಕ್ಕಳು ಬಹು ಜಾಗೃತ ಮನಸ್ಸಿನಿಂದ ನಿರೀಕ್ಷಿಸುತ್ತಾರೆ. ಮಕ್ಕಳ ಕತೆಯ ಈ ಲಕ್ಷಣವನ್ನು ಕುರಿತು ನಾಡಿನಲ್ಲಿ ಒಂದು ಕತೆಯು ಜನ-ಜನಿತವಾಗಿದೆ. ಮೇಲಿಂದಮೇಲೆ ಕತೆ ಕೇಳ ಬಯಸುವ ಹುಡುಗರಿಗೆ ಒಂದು ಕತೆಯನ್ನು ಹೇಳಲಾರಂಭಿಸಿದರೆಂದರೆ ಸಾಕು. ಮಕ್ಕಳು ನಕ್ಕು ಬಿಡುವರು. ಆ ಕತೆಯ ಕೆಲವು ಅಂಶವನ್ನು ಇಲ್ಲಿ ಹೇಳುವೆ.

ಕತೆಗೆ ಕತೆ ಕಾರಣ, ಮದುಕಿಯ ಹೂರಣ.
ಬಿಂದಿಯೋ, ತಿಪ್ಪೆಗೆ ಚೆಲ್ಲಿದೆಯೊ ?
ತಿಪ್ಪೆಗೆ ಚೆಲ್ಲಿದೆ.
ತಿಪ್ಪೆ ಏನು ಕೊಟ್ಟಿತು ?
ಗೊಬ್ಬರ ಕೊಟ್ಟಿತು.
ಗೊಬ್ಬರ ಏನು ಮಾಡಿದೆ ?
ಹೊಲಕ್ಕೆ ಹಾಕಿದೆ.
ಹೊಲ ಏನು ಕೊಟ್ಟಿತು ?
ಹುಲ್ಲು ಕೊಟ್ಟಿತು.
ಹುಲ್ಲೇನು ಮಾಡಿದೆ ?
ಆಜ್ಜಿಯ ಆಕಳಿಗೆ ಹಾಕಿದೆ.
ಆಕಳೇನು ಕೊಟ್ಟಿತು ?
ಬೆಣ್ಣೆ ರೊಟ್ಟಿ ಕೊಟ್ಟಿತು.
ಬೆಣ್ಣೆ ರೊಟ್ಟಿ ಏನು ಮಾಡಿದೆ ?
ಹಕ್ಕಿಗೆ ಕೊಟ್ಟೆ.
ಹಕ್ಕಿ ಏನು ಕೊಟ್ಟಿತು ?
ಕವಡೀ ಕೊಟ್ಟಿತು.
ಕವಡೀ ಏನು ಮಾಡಿದೆ ?
ಅಜ್ಜನಿಗೆ ಕೊಟ್ಟೆ.
ಅಜ್ಜ ಏನು ಕೊಟ್ಟ ?
ಮೂರು ಗಜ್ಜು ಕೊಟ್ಟ !

ಎಂದು ಕತೆ ಹೇಳುವ ಆಜ್ಜಿಯು, ಮಮತೆಯಿಂದ ಮಕ್ಕಳಿಗೆ ಗುದ್ದುವುದೂ ಉಂಟು. ಆಗ ಮಕ್ಕಳ ಸಮೂಹವೆಲ್ಲ ನಗೆಗಡಲಿ-ನಲ್ಲಿ ತೇಲುವುದು. ಇಂಥ ಕತೆಗಳು ಹಳ್ಳಿಗಳಲ್ಲಿ ಹಲವು ಪ್ರಚಾರದಲ್ಲಿವೆ.

ಹೀಗೆ ನಾಡಿನ ವಿವಿಧ ಹಳ್ಳಿಗಳಲ್ಲಿ, ಹಿರಿಯರ ಬಾಯಲ್ಲಿ, ರೂಢ-ವಾಗಿರುವ ಅಸಂಖ್ಯ ಮಕ್ಕಳ ಕತೆಗಳು ಮೊದಲಿನಿಂದಲೂ ಬೆಳೆದು ಬಂದಿವೆ. ಅವುಗಳಲ್ಲಿ ಸಾಕಷ್ಟು ವೈವಿಧ್ಯ ಇದೆ. ಇಂಥ ಕತೆ-ಗಳನ್ನು ಸಂಗ್ರಹಿಸಿ ಪ್ರಕಟಿಸಿದರೆ, ನಮ್ಮ ನಾಡಿನ ಒಂದು ಅಮೌಲ್ಯ ಸಂಪತ್ತನ್ನು ಸಂರಕ್ಷಿಸಿದಂತಾಗುವುದು. ಇದರಿಂದ ನಮ್ಮ ಸಂಸ್ಕೃತಿ-ಸಾಹಿತ್ಯಗಳ ಅಭ್ಯಾಸಕ್ಕೆ ಅನುಕೂಲವಾಗುತ್ತದೆ.

ಈಗಾಗಲೇ ಜಾನಪದ ಗೀತಗಳ ಸಂಗ್ರಹಗಳು ಹಲವು ಪ್ರಕಟವಾಗಿವೆ. ಆದರೆ ಇಂಥ ಜಾನಪದ ಮಕ್ಕಳ ಕತೆಗಳ ಸಂಗ್ರಹ ಕನ್ನಡದಲ್ಲಿ ಇದ್ದಂತಿಲ್ಲ. ಇಂಥ ಸಂಗ್ರಹಮಾಡುವುದು ಅತ್ಯವಶ್ಯವಾಗಿದೆ.

ಭಾರತ ಭೂಮಾತೆ!

'ಆನಂದಕಂದ'

॥ ಪಲ್ಲವಿ ॥

ಜಯ ಜಯ ಭಾರತ ಭೂಮಾತೇ— ಜಯ-
ಜಯ ತುಹಿಮಾಕುಲ ವಿಖ್ಯಾತೇ !
ಜಯ ಸತ್ಯಸಾರ ಸಂಭೂತೇ!
ಜಯ ಜಯ ಭಾರತ ಭೂಮಾತೇ !

೧

ವರುಣದೇವ ವರವಾಗಿ ನೀಡಿರುವ
ಶರನಿಧಿಗಳು ಘೂರ್ಣಿಸುತ....
ಮೊರೆಯುತಿಹವು ಹಗಲಿರುಳನು ಗಣಿಸದೆ
ನಿನ್ನ ಯಶದ ಸಂಗೀತ !
ಮೂಡಣ ಪಡುವಣ ತೆಂಕಣ ಗಡಿಯೊಳು
ಎಲ್ಲೆಲ್ಲಿಯು ಜಲದೂತ....
ಹೂಡಿ ಇರುವ ಕಾಪಿನ ಕಡುಗೋಂಟೆಯು,
ನಿನ್ನ ರಾಜ್ಯ ನಿರ್ಭೀತ !
ಹೆಣೆದಿವೆ ಅಲೆಗಳ ಮಾಲೆ.... ರ-
ಕ್ಷಣೆಯನು ಪಡೆದಿವೆ ವೇಲೆ.... ಓ !
ಜನನಿ ನಿನಗಿರದು ಸೋಲೇ !
ಜಯ ಜಯ ಭಾರತಭೂಮಾತೇ— ಜಯ-
ಜಯ ಮಹಿಮಾಕುಲ ವಿಖ್ಯಾತೇ !

೨

ಮೊದಲು ನಿನ್ನಂಗಳದಲಿ ಹರಡಿದನು
ರವಿಯು ಕಿರಣಜಾಲ....
ಮೊದಲ ಬೆಳಕು ಕಂಡವಳು ನೀನೆ, ತೋ-
ರಿದೆಯೆ ಧರಣಿಗೆಲ್ಲ !
ನಿನ್ನ ಸಂತಾನ ಮುನಿ-ಮನುವಿತಾನ
ಹಾಡಿ ಸಮಗಾನಾ ;
ಬನ್ನಗಳನು ನೀಗಿಸಿತು ಬಾಳಿನೊಳೆ
ಮಾಡಿ ಅಮೃತಪಾನಾ
ಜಗವು ಜಡತೆಯಲ್ಲಿರಲು....ನಿನ-
ಗೊಗೆಯಿತೆಂದು ಮುಂಬಗಲು....ಇದು
ನಿನ್ನ ಪುಣ್ಯದೊಂದರಳು !
ಜಯ ಜಯ ಭಾರತ ಭೂಮಾತೇ—ಜಯ
ಜಯ ಮಹಿಮಾಕುಲ ವಿಖ್ಯಾತೇ !

೩

ಗಿರಿಯ ರಾಜ ಪರಿವಾರ ಸಹಿತ ನಿಂ-
ತಿರುವ ಬಡಗಲಲ್ಲಿ....
ಹೊರೆಯುತಿರುವ ದಿಗ್ನಾಗನಾಗಿ ನಿಡು-
ನೋಟಗಳನು ಚೆಲ್ಲಿ—
ಹರಿಸುತಿಹನು ನಿರ್ಝರಿಣಿಗಳನು ನೂ-
ರಾರು ರೂಪಗಳಲಿ....
ಸಿರಿಯಿಂದಲಿ ನಿನ್ನರಮನೆ ತುಂಬುವ
ಹೃದಯಾಕೂತಿಯಲಿ.
ಸುರಗಂಗೆಯನಿಳುಹಿರುವ.... ಸುಧೆ-
ಯೊರತೆಯನ್ನು ಬಲಿಸಿರುವ.... ಬಲ-
ದರಿಮೆಯನ್ನು ಬೆಳಸಿರುವ—
ಜಯ ಜಯ ಭಾರತ ಭೂಮಾತೇ— ಜಯ-
ಜಯ ಮಹಿಮಾಕುಲ ವಿಖ್ಯಾತೇ !

೪

ಧರ್ಮಾದ್ವೈತದ ಮರ್ಮವರಿದು ಕ್ಕೈ-
ಗೊಡುತ ಜಗದ ವಂದೆ....
ಕರ್ಮದಾ ಸುರುಚಿರ ಸೋಪಾನದಲಿ ತಿಳಿದು
ಮರ್ಮಶಿಯನೆಲ್ಲ ಕೊಂಡೆ !
ನೂರು ನೂರು ತೆರೆಯೊಳಿನಲ್ಲಿ ಮರೆ-
ಗೊಂಡ ಸತ್ಯಮುಖವ....
ಎರಿ ಮೇಲೆ ತೆರೆ ಹಾರಿಸುತೆ ಜಗಕೆ-
ತೋರಿದೆ ನಿಜಸುಖವ !
ಕವಿರಾಜರ ನೀ ಕರೆದೆ....ನವ-
ನವ ಕಾವ್ಯದ ಮಳೆಗರೆದೆ—ಭುವಿ-
ಗೆಲ್ಲ ಜೀವಕಳೆಯೆರೆದೆ !
ಜಯ ಜಯ ಭಾರತ ಭೂಮಾತೇ— ಜಯ
ಜಯ ಮಹಿಮಾಕುಲವಿಖ್ಯಾತೇ !

ದುರ್ಭಾಗ್ಯನ ಭಾಗ್ಯ

(ಒಂದು ಕಥೆ)

ಶ್ರೀ. ಆರ್. ಬಿ. ಕುಲಕರ್ಣಿ, ಬಿ. ಎ. ಹುಬ್ಬಳ್ಳಿ.

卐

ಕಾಯಿದೆಗಳ ಕುರುಡುತನ, ಎಂತಹ ನಿರಪರಾಧಿಗಳನ್ನೂ ಅಪರಾಧಿಗಳನ್ನಾಗಿ ಮಾಡುತ್ತದೆ. ಆದರೆ ಅವ್ಯಕ್ತಸತ್ಯ, ಆ ಅಪರಾಧಿಗಳ ನಿರಪರಾಧಿತ್ವವನ್ನು ಅರಿತಿದ್ದರೂ, ಪರಿಸ್ಥಿತಿಯ ಜಾಲದಲ್ಲಿ ಸಿಕ್ಕಿಕೊಂಡು, ವಾಸ್ತವವನ್ನು ಹೊರಕ್ಕೆ ಹಾಕದೆ ಇರುತ್ತದೆ. ಇದೊಂದು ವಿಚಿತ್ರವೆ!

卐

ವಿಜಯಕುಮಾರನ ಬುದ್ಧಿ ಸ್ತಿಮಿತದಲ್ಲಿರಲಿಲ್ಲ. ಅವನು ವರಾಂಡದಲ್ಲಿ— ಉತ್ತೇಜಿತನಾಗಿ— ಶತಪಥ ಹಾಕುತ್ತಿದ್ದನು. ನಡುನಡುವೆ ಅವನು "ಅನ್ಯಾಯ, ಶುದ್ಧ ಅನ್ಯಾಯ!" ಎಂದು ಗೊಣಗುತ್ತಿದ್ದನು.

ಗೇಟಿನೊಳಗೆ ಕಾರು ಬಂದುದಾಗಲಿ, ಮಂತ್ರಿ ಗೋವಿಂದರಾಯರು ಕಾರಿನಿಂದಿಳಿದು ಸಮೀಪಕ್ಕೆ ಬಂದು ನಿಂತುದಾಗಲಿ, ವಿಜಯನ ಲಕ್ಷ್ಯಕ್ಕೆ ಬರಲಿಲ್ಲ. ಅವನು ತನ್ನ ವಿಚಾರದ ಗುಂಗಿನಲ್ಲಿಯೇ ತಿರುಗುತ್ತಿದ್ದನು. "ವಿಜಯಾ, ಯಾಕೆ ಇಷ್ಟೊಂದು ವ್ಯಾಕುಲನಾಗಿರುವೆ? ನಡೆ ಒಳಗೆ ಹೋಗುವಾ!" ಎಂದು ವಾತ್ಸಲ್ಯದಿಂದ ಅವನ ಭುಜದ ಮೇಲೆ ಕೈ ಇಟ್ಟಾಗ, ವಿಜಯ ವಿಕ್ಷಿಪ್ತನಂತೆ ಹೊರಳಿ ನೋಡಿದನು.

ವಿಜಯನಿಗೆ ಗೋವಿಂದರಾಯರು ತೀರ ಆತ್ಮೀಯರಾಗಿದ್ದರು. ಅವನಿಗೆ ಉಚ್ಚಶಿಕ್ಷಣ ದೊರೆತದ್ದು ಅವರ ಸಹಾಯದಿಂದಲೇ. ಇಂದು ಅವರ ವಾತ್ಸಲ್ಯಪೂರ್ಣ ಸ್ಪರ್ಶದಿಂದ ಅವನ ಕಣ್ಣಲ್ಲಿ ಕಂಬನಿಗಳು ಮೂಡಿದುವು.

"ಯಾಕೆ ವಿಜಯಾ, ಮುಖ ಇಷ್ಟೊಂದು ಇಳಿದು ಹೋಗಿದೆಯಲ್ಲ?" ಎಂದು ಗೋವಿಂದರಾಯರು ಅವನನ್ನು ಸಾಂತ್ವನಗೊಳಿಸಲು ಮಾತು ಪ್ರಾರಂಭಿಸಿದರು.

"ಆಯ್. ಎ. ಎಸ್. ಹುದ್ದೆಗೆ ಆರಿಸಿದವರ ಹೆಸರುಗಳು ಇಂದು ಪ್ರಸಿದ್ಧವಾಗಿವೆ...." ವಿಜಯ ಇನ್ನೂ ಏನನ್ನೋ ಹೇಳಲಿದ್ದನು.

ಗೋವಿಂದರಾಯರು ಅವನ ಮಾತಿಗೆ ಅವಕಾಶ ಕೊಡದೆ "ಹೌದು ನಿನ್ನನ್ನು ಆರಿಸಿಲ್ಲ— ಎಂದು ಈ ರೀತಿ ಮನಸ್ಸಿಗೆ ತಾಪ ಮಾಡಿಕೊಂಡಿದ್ದೀಯಾ? ನಿನ್ನನ್ನು ಆರಿಸದೆ ಬಿಡಲು ಅವರು ಕೊಟ್ಟ ಕಾರಣವು ಅಸಮಂಜಸವೆಂದು ಹೇಳಲಾಗದು!" ಎಂದರು.

"ನಾನು ಸಾಕಷ್ಟು ಗುಣಗಳನ್ನು ಸಂಪಾದಿಸಿಲ್ಲವೆಂದು ನಿಮ್ಮ ಅಭಿಪ್ರಾಯವೇ?"

"ಛೀ! ಹಾಗೆಂದು ಯಾರು ಹೇಳಿದರು? ನೀನು ಮೇಲ್ಪಂಕ್ತಿಯಲ್ಲಿ ಪಾಸಾಗಿರುವಿ. ಆದರೂ ಒಂದು ತೊಡಕು. ಆ ತೊಡಕಿನ ಸ್ವರೂಪ ತಿಳಿದುಕೊಳ್ಳಲು ಹಟ ಹಿಡಿಯಬೇಡ. ನಿನ್ನ ವಿಷಯದಲ್ಲಿ ಅನ್ಯಾಯವಾಗಿಲ್ಲ. ನಾನು ನಿನ್ನ ತಂದೆಯ ಸಮಾನನೆಂದು ನನ್ನ ಮಾತಿನಲ್ಲಿ ವಿಶ್ವಾಸವಿಡು!"

'ತಂದೆ' ಎಂಬ ಶಬ್ದ ಕಿವಿಗೆ ಬಿದ್ದೊಡನೆ, ವಿಜಯನಿಗೆ ಒಂದು ಆಘಾತವಾದಂತಾಗಿ ಮೈ ಜುಮ್ಮೆಂದಿತು. ತಂದೆಯನ್ನು ಅವನು ನೋಡಿರಲಿಲ್ಲ. ಇನ್ನೂ ಆರು ತಿಂಗಳ ಹಸುಳೆ ಇದ್ದಾಗ, ತಂದೆ

ರೋಹಿಣಿ
TRADE MARK

ಗತಿಸಿ ಹೋದುದನ್ನು ಕೇಳಿದ್ದನು. ಜನರು ತನ್ನ ತಂದೆಯ ಬಗ್ಗೆ ಆಡಿಕೊಳ್ಳುವ ಮಾತು, ಶಾಲೆಯಲ್ಲಿ ತನ್ನನ್ನು 'ಕಳ್ಳನ ಮಗ'-ನೆಂದು ಸಹಪಾಠಿಗಳು ಮೂದಲಿಸಿ ಮಾತನಾಡುತ್ತಿದ್ದುದು, ಇನ್ನೂ ಅನೇಕ ಸಂದರ್ಭಗಳಲ್ಲಿ ತನಗೆ ಅನರಿವರು 'ಕಳ್ಳನ ಮಗ' ಎಂದು ಅಪಮಾನಕರ ಶಬ್ದಗಳನ್ನಾಡಿದ್ದು—ಇವೆಲ್ಲ ನೆನಪಿಗೆ ಬಂದು ಮುಖ ಕಪ್ಪಿಟ್ಟಿತು. 'ತಂದೆ' ಎಂಬ ಶಬ್ದ ಕೇಳಿ ಒಂದು ನಿಶ್ವಾಸ-ದೊಡನೆ "ಅಯ್ಯೋ ನನಗೂ ಒಬ್ಬ ತಂದೆ!" ಎಂಬ ಉದ್ಗಾರ ಅವನ ಮುಖದಿಂದ ಹೊರಹೊಮ್ಮಿತು. "ವಿಜಯ, ಯಾಕೆ ನಿನಗೆ 'ತಂದೆ' ಎಂದರೆ ತಿರಸ್ಕಾರ ಭಾವನೆಯೆ? ಜಗತ್ತು ನಿನ್ನ ತಂದೆಯನ್ನು ನಾನು ತಿಳಿದುಕೊಂಡಂತೆ ತಿಳಿದುಕೊಂಡಿಲ್ಲ. ಅದೇ ನಿನ್ನ ಭವಿತವ್ಯದಲ್ಲಿ ದೊಡ್ಡ ಕೊಡಲು. ಆಯ್. ಎ. ಎಸ್.-ನಂಥ ಹೊಣೆಗಾರ ಹುದ್ದೆಗೆ ಆರಿಸುವಾಗ, ಉಮೇದುವಾರನ ಶಿಕ್ಷಣದ ಅರ್ಹತೆಯೊಂದಿಗೆ, ಅವನ ಕುಟುಂಬದ ಚಾರಿತ್ರ್ಯವನ್ನು ಲಕ್ಷ್ಯಿಸಬೇಕಾಗುವುದು. ಅಪರಾಧಿಯ ಮಗನೆಂದು, ನಿಯಮದಂತೆ ನಿನ್ನನ್ನು ಅನರ್ಹನೆಂದು ನಿರ್ಣಯಿಸಲಾಗಿದೆ. ಇದೊಂದು ವಿಧಿ-ವಿಲಾಸ!" ಎಂದು ಗೋವಿಂದರಾಯರು ನಿಟ್ಟುಸಿರು ಬಿಟ್ಟರು.

"ತಂದೆ ಅಪರಾಧಿಯೆಂದು ಮಗನಿಗೆ ಶಿಕ್ಷೆಯೇ? ಇದು ಅನ್ಯಾ-ಯದ ಪರಮಾವಧಿ!"

"ನಿನ್ನ ತಂದೆ ಅಪರಾಧಿ ಎಂದು ತೀರ್ಪು ಕೊಟ್ಟ ನ್ಯಾಯಾ-ಧೀಶನಿಗೆ, ಕಾನೂನಿನ ವಿಧಿಯಂತೆ ಹಾಗೆ ತೀರ್ಪು ಕೊಡದೆ ಗತ್ಯಂತರವಿರಲಿಲ್ಲ. ಆ ತೀರ್ಪಿನ ಪರಿಣಾಮವನ್ನು ಕೃಷ್ಣಪ್ಪನ ಮಕ್ಕಳೂ ಅನುಭವಿಸಬೇಕಾಗುವುದೆಂಬುದು ನ್ಯಾಯಾಧೀಶನಿಗೆ ಹೊಳೆದಿದ್ದರೆ, ನ್ಯಾಯಾಧೀಶನು ತಾನೇ ಅಪರಾಧಿ ಎಂದು ಹೇಳಿ, ಶಿಕ್ಷೆ ಅನುಭವಿಸಲು ತಾನೇ ಮುಂದೆ ಬರಬಹುದಿತ್ತು. ನ್ಯಾಯಾ-ಲಯದ ತೀರ್ಪು ಸದಯಾಂತಃಕರಣ ಜೀವನದ ಕೊಲೆ. ನಿನ್ನ ತಂದೆ ಪರರ ಮಾನರಕ್ಷಣೆಗೆ ತನ್ನ ಮಾನವನ್ನು ಬಲಿ-ದಾನ ಮಾಡಿದ ಪುಣ್ಯಾತ್ಮ!"

"ನನ್ನ ತಂದೆ ನಿರಪರಾಧಿ ಎಂದು ಹೇಳುವಿರಾ? ನಿಮಗೆ ಅವನ ಪರಿಚಯವಿದ್ದಿತೆ?" ಎಂದು ವಿಜಯ ಉತ್ಕಂಠತೆಯಿಂದ ಕೇಳಿದನು.

"ನಿನ್ನ ತಂದೆ ನಿರಪರಾಧಿ ಎಂದು ಸಾವಿರ ಸಲ ಹೇಳುವೆ. ನಾನು ನಿನ್ನ ತಂದೆಯ ವಿಷಯ ಎಲ್ಲ ತಿಳಿದುಕೊಂಡಿದ್ದೇನೆ. ಅವನು ಒರ್ವ ಅಸಾಮಾನ್ಯ ತ್ಯಾಗಿ. ಅದರೂ ನಿನ್ನ ತಂದೆ ನಿರಪರಾಧಿ ಎಂದು ಗೊತ್ತಿದ್ದರೂ, ನಾನು ಬಾಯಿ ಮುಚ್ಚಿ, ಅಸಹಾಯನಂತೆ ಅವನ ಹೆಸರಿಗೆ ಹತ್ತಿದ ಕಲಂಕ ದೂರಮಾಡದೆ ಇರುವಂತಹ ಸಂದರ್ಭವಿತ್ತು. ಇಂದಿಗೂ ಅದೇ ಪರಿಸ್ಥಿತಿ ಇದೆ. ಆದರೂ, ಅವನು ನಿರ್ದೋಷಿ ಎಂದು ಗೊತ್ತಿದ್ದ ನಾನು, ಕನಿಷ್ಠಪಕ್ಷಕ್ಕೆ ಅವನ ಮಗನಿಗಾದರೂ ಅವನ ಬಲಿದಾನದ ಕತೆ ತಿಳಿಸದೆ ಹೋದರೆ, ನಾನು ಅವನಿಗೆ ಹೆಚ್ಚಿನ ದ್ರೋಹ ಬಗೆದಂತಾ-ದೀತು. ಈ ಕತೆಯು ಜಗತ್ತಿಗೆ ಗೊತ್ತಾದರೆ, ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳ ಜೀವನದ ಮೇಲೆ ಪರಿಣಾಮವಾಗುವು-ದೆಂದು, ಇಂದಿನವರೆಗೆ ಯಾರಿಗೂ ಉಸುರದೆ ಇದ್ದೆ. ಇಂದು ನಾನು ನಿನಗೆ ಎಲ್ಲವನ್ನೂ ತಿಳಿಸಿ, ಹೃದಯದ ಭಾರವನ್ನು ಕಡಿಮೆ ಮಾಡಿಕೊಳ್ಳುವೆ. ಜಗತ್ತಿನಲ್ಲಿ ಯಾವುದು ಸ್ಥಿರ? ನಾಳೆ ನಾನು ಸತ್ತು ಹೋದರೆ, ಕೃಷ್ಣಪ್ಪನ ಕಲಂಕ ಚಿರಕಾಲ ಉಳಿಸಿದ ದೋಷ ನನ್ನ ಮೇಲೆ ಬರುವುದು. ಏಳು, ಊಟಮಾಡುವಾ! ನಿನಗೆ ಎಲ್ಲವನ್ನೂ ತಿಳಿಸುವೆ" ಎಂದು ಹೇಳಿ, ಗೋವಿಂದರಾಯರು ವಿಜಯನೊಂದಿಗೆ ಊಟಕ್ಕೆ ಹೋದರು.

ಊಟ ಮುಗಿಸಿ ಗೋವಿಂದರಾಯರು ತಮ್ಮ ಕೋಣೆಯಲ್ಲಿ ವಿಜಯನೊಂದಿಗೆ ಬಂದು, ಕಪಾಟಿನಲ್ಲಿಯ ಒಂದು ಹಳೆಯ ದಿನಚರಿಯನ್ನು ತೆಗೆದು "ಇದರಲ್ಲಿಯ ಈ ಪುಟಗಳನ್ನು ಓದು." ಎಂದು ಕೆಲವು ಪುಟಗಳನ್ನು ಗುರುತು ಹಾಕಿ ಅವನ ಕೈಗೆ ಕೊಟ್ಟು, ಅಲ್ಲಿಯೇ ಒಂದು ಆರಾಮಕುರ್ಚಿಯ ಮೇಲೆ ತಾವು ಕುಳಿತರು.

ವಿಜಯನು ಓದಲು ಪ್ರಾರಂಭಿಸಿದನು :

"ಅಕ್ಟೋಬರ ೧, ೧೯೩೦.
ಆಶ್ವಿನ ಶುದ್ಧ ಅಷ್ಟಮಿ.

ಈ ಊರಿಗೆ ಬಂದು ಮೂರು ದಿನಗಳಾದನಂತರ ಇಂದು ಶಾರದೆಯ ಪ್ರಥಮ ದರ್ಶನವಾಯಿತು. ಅವಳ ಮನೆಯ ಪಕ್ಕ-

ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ವನ್ನೇ ನಾನು ಬಾಡಿಗೆಗೆ ಹಿಡಿದದ್ದೆಂದು ಇಂದು ಊಟಕ್ಕೆ ಹೋದಾಗ ಗೊತ್ತಾಯಿತು. ಅವಳ ಪತಿ ಅನಂತರಾಯ, ನೂರು ದಿವಸ ನನ್ನೊಡನೆ ಹರಟೆ ಕೊಚ್ಚಿದರೂ ಊಟಕ್ಕೆ ಕರೆಯದವನು, ಇಂದೇ ಏಕೆ ಕರೆದನು ? ಶಾರದೆ ನನ್ನನ್ನು ನೋಡಿ ಆಮಂತ್ರಣ ಕೊಡಲು ಗಂಡನಿಗೆ ಸೂಚಿಸಿರಬಹುದೆ? ಹಾಗೆ ಭಾವಿಸಲು ಕಾರಣವಿಲ್ಲ. ಊಟಕ್ಕೆ ಕುಳಿತಾಗ ಅವಳು, ತಪ್ಪಿ ಕೂಡ ನನ್ನ ಮುಖ ನೋಡಲಿಲ್ಲ. ಗುರುತು ಇಲ್ಲದವಳಂತೆ ವರ್ತಿಸಿದಳು. ನಾನು ವಿದ್ಯಾರ್ಥಿ ಇದ್ದಾಗ, ಅವಳ ತಂದೆಯ ಮನೆಯಲ್ಲಿದ್ದೆ. ಆಗ ನನ್ನೊಡನೆ ಎಷ್ಟು, ಅವಳ ಸಲುಗೆ? ಎಲ್ಲವನ್ನೂ ಮರೆತುಬಿಟ್ಟಿರಬಹುದೆ? ನಾನೆಂಥ ಮರುಳನು ! ಅವಳು ನನ್ನನ್ನು ಮರೆಯಬಹುದೆ? ಅವಳು ನನ್ನನ್ನು ಮರೆಯುವುದು ಅಶಕ್ಯ ! ಅಂದು ಪರೀಕ್ಷೆಗೆ ಫೀ ಕಟ್ಟಲು ಹಣವಿಲ್ಲದೆ ಖಿನ್ನನಾಗಿ ಕುಳಿತ ನನ್ನನ್ನು ಕಂಡು, ತಾನೂ ಕಣ್ಣೀರು ಕರೆದು, ಈ ಉಂಗುರ ನನಗೆ ಕೊಟ್ಟವಳು; ನನ್ನ ಕೈಯಲ್ಲಿ ಉಂಗುರ-ವಿರುವವರೆಗೂ ಮರೆಯುವುದು ಅಶಕ್ಯ. ಮಾರನೆಯ ದಿನ ಹಣ ಸಿಕ್ಕಲು 'ನಿನ್ನ ಉಂಗುರ ನೀನು ಸ್ವೀಕರಿಸು' ಎಂದು ಎಷ್ಟು ಬಲವಂತಪಡಿಸಿದರೂ 'ನಿಮ್ಮ ಕೈಗೆ ಸೇರಿದಾಗ ಅದು ನಿಮ್ಮ-ದಾಯಿತು. ಅದು ನನ್ನ ಕೈಗೆ ಸೇರುವುದು ನಿಮ್ಮದೆಲ್ಲವೂ ನನ್ನ-ದಾದಾಗ' ಎಂದು ನಗುತ್ತ ಓಡಿ ಹೋದ ಶಾರದೆ, ಇಂದು ಕಣ್ಣೆತ್ತಿ ಸಹ ನೋಡಲಿಲ್ಲವಲ್ಲ ! ಅವಳು ಶ್ರೀಮಂತನ ಮಡದಿಯಾಗಿರು-ವಳು. ಸಂಸಾರ ಸುಖವಾಗಿಯೇ ಸಾಗಿರಬೇಕು. ನನ್ನ ಪರಿ-ಚಯದಿಂದ ಅವಳಿಗೇನು ಲಾಭ! ಅವಳು ನನ್ನನ್ನು ನೋಡ-ಬೇಕು, ಮಾತಾಡಿಸಬೇಕು—ಈ ಹುಚ್ಚು ಹಂಬಲವಾದರೂ ನನಗೆ ಯಾಕಿರಬೇಕು ? ಈ ಉಂಗುರ ಅವಳ ನೆನಪನ್ನು ಮಾಡಿ-ಕೊಡುತ್ತಲ್ಲವೆ ? ಇದು ಅವಳು ನನ್ನಲ್ಲಿ ಅಂದು ಇರಿಸಿದ್ದು ಉಪಕಾರವಾದರೂ, ಅವಳ ಮನಸ್ಸಿನಲ್ಲಿ ಪ್ರೇಮಸಂಕೇತ-ವಾಗಿಯೇ ಇರಲೆಂಬ ಹಟ ಇತ್ತು. ಇಂದು ಅವಳ ಪ್ರೇಮ ಅನಂತರಾಯನಲ್ಲಿ. ಹೌದು ಅನಂತರಾಯನಲ್ಲಿ! ಹಾಗಿದ್ದರೆ, ಈ ಉಂಗುರ ಅವಳಲ್ಲಿರುವುದೇ ಒಳಿತಲ್ಲವೆ ? "

"ಅಕ್ಟೋಬರ್ ೩, ೧೯೩೦.
ಅಶ್ವಿನ ಶುದ್ಧ ನವಮಿ,

ಗೋಪುವಿನ ಹುಟ್ಟಿದ ದಿನದ ನಿಮಿತ್ತ, ಇಂದೂ ಅನಂತರಾಯ ಆಮಂತ್ರಣ ಕೊಡಲು ಬಂದನು. ಆಮಂತ್ರಣ ಸ್ವೀಕರಿಸಲು ಮನಸ್ಸು ಒಪ್ಪಲಿಲ್ಲ. ಆದರೆ 'ಗೋಪುವಿನ ಹುಟ್ಟಿದ ದಿನದ ಕಾಣಿಕೆ' ಎಂದು ಉಂಗುರ ಶಾರದೆಗೆ ಮರಳಿ ಕೊಡಬಹುದಲ್ಲ !— ಎಂದು ಸ್ವೀಕರಿಸಿದೆ. ಇಂದೂ ಅವಳು ನಿನ್ನಿನಂತೆಯೇ ನಡೆದು ಕೊಂಡಳು. ಆದರೆ ಊಟಮಾಡಿದ ಅನಂತರ, ಗೋಪುವಿನ ಕೈಗೆ ಉಂಗುರ ಕಾಣಿಕೆ ಎಂದು ಕೊಟ್ಟಾಗ, ಅವಳು ನನ್ನನ್ನು ನೋಡಿದ ದೃಷ್ಟಿ....ಅಬ್ಬಾ. ಎದೆಯನ್ನು ಕೊರೆಯುವ ದೃಷ್ಟಿ. ಅನಂತರಾಯ ಉಂಗುರ ಪರೀಕ್ಷಿಸುವವರಂತೆ ನೋಡಿ, "ಎಸ್. ಎಲ್. ಪಿ. ಈ ಅಕ್ಷರಗಳೇಕೆ ಇದರ ಮೇಲೆ? ಇದು ನಿಮ್ಮ ಹೆಸರಿನ ಸಂಕ್ಷಿಪ್ತ ಅಕ್ಷರಗಳಲ್ಲ ! " ಎಂದು ನುಡಿದಾಗ, ಅವಳು ಆ ದೃಷ್ಟಿಬಾಣ ಬೀರಿದ್ದೇಕೆ? 'ಎಸ್. ಎಲ್. ಪಿ.' ಎಂದರೆ 'ಶಾರದಾ ಲಕ್ಷ್ಮೀಕಾಂತ ಪ್ರೆ' ಎಂದು, ತನ್ನ ಹೆಸರನ್ನು ಹೇಳಿಬಿಡುವನೆಂದು ಹಾಗೆ ನೋಡಿದಳೋ ಅಥವಾ ನಾನು ಅಂದು ಅವಳಿಗೆ ಚೇಷ್ಟೆಯಿಂದ 'ಉಂಗುರದ ಮೇಲೆ ಶಾರದಾಜ ಲವ್ ಗಿಫ್ಟ್' ಎಂಬುದರ ಸಂಕೇತ ಕೆತ್ತಿಸಿಬಿಟ್ಟಿರುವೆಯಾ ?' ಎಂದು ನುಡಿದ ಮಾತನ್ನು ಹೇಳುವೆನೆಂದು ಹಾಗೆ ನೋಡಿದಳೋ ತಿಳಿ-ಯದು ಅನಂತರಾಯ ಪುನಃ ಅದೇ ಪ್ರಶ್ನೆ ಕೇಳಿದನು. "ಎಸ್. ಎಲ್. ಪಿ. ಇದು ನನ್ನ ಆರಾಧ್ಯದೇವತೆಯ ಹೆಸರು. 'ಶ್ರೀ. ಲಕ್ಷ್ಮೀಪ್ರಸನ್ನ' ಇದರ ಸಂಕ್ಷಿಪ್ತರೂಪ" ಎಂದು ಹೇಳಿದಾಗ, ಅನಂತರಾಯ ಹೊಟ್ಟೆ ತುಂಬಾ ನಕ್ಕು "ನಾಳೆ, ನಿಮಗೆ ಕನ್ಯಾ ಕೊಡಲಿರುವ ಮಾಧವರಾಯರಿಗೆ "ಎಸ್. ಎಲ್. ಪಿ." ಅಕ್ಷರದ ಉಂಗುರ ಕೊಡಲು ತಿಳಿಸಬೇಕಾಯಿತು " ಎಂದು ನಗೆಯಾಡಿ-ದನು. ಒಳ್ಳೇ ಗೃಹಸ್ಥ ! ನನ್ನ ಲಗ್ನದ ಸಂಧಾನಕ್ಕಾಗಿ ಈ ಔತಣವೆ ? ಉಂಗುರ ಮರಳಿ ಯಾರಲ್ಲಿ ಸೇರುವುದು ಯೋಗ್ಯವೋ ಅವರಿಗೆ ಸೇರಿತು. ಇನ್ನು ಶಾರದೆಯನ್ನು ಮರೆಯಲು ಪ್ರಯ-ತ್ನಿಸುವೆ. ಅವಳ ದೃಷ್ಟಿ ಮನಸ್ಸನ್ನು ಅಲುಕಿಸಿತು. ಮುಂದೆ ಅವಳ ದೃಷ್ಟಿಗೆ ಬೀಳದಂತಿರುವುದು ಸಾಧ್ಯವೆ ? "

"ಅಕ್ಟೋಬರ್ ೪ ೧೯೩೦
ಅಶ್ವಿನ ಶುದ್ಧ ದಶಮಿ

ಅನಂತರಾಯನ ಔತಣದ ಕಾಟ ಹೆಚ್ಚಾಯಿತು. ವಿಜಯ ದಶಮಿ ಬರಲೇಬೇಕೆಂದು ಆಗ್ರಹ ಬೇರೆ. 'ಮಾಧ್ಯಾಹ್ನ ಸಿರಸ್ತೇ-ದಾರರಲ್ಲಿ ಆಮಂತ್ರಣ ಸ್ವೀಕರಿಸಲಾಗಿದೆ' ಎಂದರೆ, 'ರಾತ್ರಿ ಊಟಕ್ಕಾದರೂ ಬರಲೇಬೇಕು' ಎಂದು ಹಟ. ಮಾಧವ-ರಾಯರೂ ರಾತ್ರಿಯ ಊಟಕ್ಕೆ ಬರಲಿರುವರೆಂದು ಸೂಚಿಸಿದನು. ಅಂತೂ ಅನಂತರಾಯನಿಗೆ, ನಾನಿನ್ನೂ ಅವಿವಾಹಿತನಾಗಿದ್ದುದರ ಸಹನೆ ಇಲ್ಲ.

ಶಾರದೆ ಇಂದು ನನ್ನ ಸ್ಥೈರ್ಯವನ್ನೇ ಕದಡಿದಳು. 'ನನ್ನಿಂದ ಬಂದುದೆಂದು ಉಂಗುರವನ್ನೂ ಮರಳಿ ಕೊಟ್ಟಿರಾ ?' ಎಂದು ಕಂಬನಿಗರೆದು, ಬಂಗಾರ ಕೊಡುವ ನೆಪದಲ್ಲಿ ಅದೇ ಉಂಗುರ-ವನ್ನು ಇಟ್ಟು ಹೋದಳು. ಈ ಉಂಗುರದ ದರ್ಶನದಿಂದ ಅಂದು ಸುಖಸ್ವಪ್ನ ಕಂಡ ನನಗೆ, ಇಂದು ಭಯವೆನಿಸಿತು. ಈ ಉಂಗುರ ಅವಳ ಪ್ರೇಮಸಂಕೇತವಾಗಿ ಮರಳಿ ಬಂದಿತು. "ಶಾರದೆಯ ಮನಸ್ಸು ಈ ಮಟ್ಟಕ್ಕಿಳಿದು ನನ್ನನ್ನು ಭ್ರಾಂತಿಗೊಳಿಸುತ್ತಿದೆ. ಯಾರು ಬಲ್ಲರು ? ನಾನು ವಿಷಯವಿಹ್ವಲನಾಗದಂಥ ಯೋಗಿ ಯಾಗಿರುವುದೂ ಅಸ್ಪಷ್ಟವಲ್ಲದೆ. ಶಾರದೆಯ ಸಂಸಾರದ ಕಳೆ ಕೆಡಿಸ-ಬಾರದೆಂದಿದ್ದರೆ, ನಾನು ದೂರ ದೂರ ಹೋಗಬೇಕು ! ಸರಕಾರಿ ನೌಕರಿಯಲ್ಲಿದ್ದ ನನಗೆ ಅದು ಈಗಲೇ ಶಕ್ಯವಾದೀತೆ? ಮನೆ-ಬಿಟ್ಟು ಬೇರೆಡೆಗೆ ಮನೆಮಾಡಬೇಕೆ ? ಅದಕ್ಕೂ ಕಾಲ ಕಾಯ-

ಬೇಕು. ಅನಂತರಾಯನಿಗೆ ಏನು ಕಾರಣ ಹೇಳಬೇಕು? ಉಂಗುರವನ್ನು ಇಟ್ಟುಕೊಂಡದ್ದು ಅನಂತರಾಯನು ನೋಡಿದರೆ? ಉಂಗುರವನ್ನು ಧರಿಸದೆ ಹಾಗೆಯೇ ಇಟ್ಟುಕೊಳ್ಳುವುದು ಯಾತಕ್ಕೋಸ್ಕರ? ನಾನು ಕಳ್ಳನಂತೆ ಈ ಉಂಗುರ ಇಟ್ಟು-ಕೊಂಡರೆ, ಶಾರದೆಯು ತುಚ್ಛಭಾವನೆಗೆ ಪುಟಕೊಟ್ಟಂತಾಗ-ಲಿಕ್ಕಿಲ್ಲವೆ? ಅದರ ಪರಿಣಾಮ ಎಲ್ಲಿಗೆ ಹೋಗಬಹುದು? ಈ ಉಂಗುರ ನನ್ನನ್ನು ದಹಿಸುವುದು. ಇದನ್ನು ಬಿಸಾಟಬಿಟ್ಟು ಶಾರದೆಗೆ ತಿಳಿಸಿಬಿಡಬೇಕು. ಅವಳಿಗೆ ತಾನು ಇಲ್ಲಿ ಇಟ್ಟುಹೋದ ಅವಳ ಪ್ರೇಮಸಂಕೇತಕ್ಕೆ, ಇಲ್ಲಿ ಇನ್ನು ಮೇಲೆ ಎಡೆಯಿಲ್ಲವೆಂದು ಗೊತ್ತಾದರೆ ಸಾಕು; ನಾನು ಜೀವಿಸಬಲ್ಲೆ. ಇದನ್ನು ತ್ಯಜಿಸಲೇ ಬೇಕು. ಹ್ಯಾಗೆ? ಅದರ ಪ್ರಭಾವದಿಂದ ಪಾರಾಗಲಿ?" ಎಂದೂ ಅದೆಷ್ಟು ವಿಚಾರಮಾಡಿದೆ. ದೇವರೇ ಕೃಷ್ಣಪ್ಪನನ್ನು ನನ್ನ ಸಮಸ್ಯೆ ಬಿಡಿಸಲು ಕಳಿಸಿದಂತೆ, ಅವನು ತನ್ನ ಬಡತನದ ಗೋಳನ್ನು ತೋಡಿಕೊಂಡು ೧೦ ರೂ. ಕೈಗಡ ಕೇಳಿದನು. ಕಿಸೆಯಲ್ಲಿ ಪುಡಿ ಚಿಲ್ಲರೆ. ನಾಳಿನ ದಿನ ಬ್ಯಾಂಕಿಗೆ ಸೂಟಿ ಇಲ್ಲವೆಂದೆನ್ನುವುದು ಸರಿದೋರಲಿಲ್ಲ. ಶಾರದೆಯ ಉಂಗುರ ಕೃಷ್ಣಪ್ಪನಿಗೆ ಕೊಟ್ಟರೆ, ಅವನಿಗೆ ಉಪಕಾರ ಮಾಡಿದಂತಾಯಿತು; ನನ್ನ ಕೈಬಿಟ್ಟು ಅದು ಹೋದರೆ, ನನಗೆ ಚಿತ್ತಸ್ವಾಸ್ಥ್ಯವಾದರೂ ದೊರೆತೀತು— ಎಂದು ಕೃಷ್ಣಪ್ಪನಿಗೆ ಹುಟ್ಟಿದ ಮಗುವಿನ ನವಿಣೆನಪಿಗೆ ಕಾಣಿಕೆ ಎಂದು ಕೊಟ್ಟುಬಿಟ್ಟೆ. ಎಷ್ಟು ಸಂತೋಷವಾಯಿತು ಅವನಿಗೆ! ಅವನ ಆಗಿನ ಅರಳಿದ ಮುಖ ನೋಡಿ ನನಗೂ ಹೆಚ್ಚಿನ ಆನಂದವಾ-ಯಿತು. ಮಂತ್ರದ ಉಂಗುರದಂತೆ ನನ್ನ ಚಿತ್ತವನ್ನು ಕದಡು-ತ್ತಿದ್ದ ಉಂಗುರ ಕೈಬಿಟ್ಟು ಹೋದೊಡನೆ, ಮನಸ್ಸಿಗೆ ಒಂದು ಬಗೆಯ ಶಾಂತಿ ಬಂದಿತು. ಅನಂತರಾಯ ರಾತ್ರಿಯ ಊಟಕ್ಕೆ ಕರೆದೊಯ್ದು ಮತ್ತೆ ನನ್ನನ್ನು ಗೊಂದಲದಲ್ಲಿ ನೂಕಿದನು. ಮಾಧವರಾಯರ ಮಗಳ ಗುಣ, ವಿದ್ಯಾ-ಬುದ್ಧಿ, ರೂಪುಗಳನ್ನು ಊಟಮುಗಿಯುವ ವರೆಗೂ ನಡಿಸಿಯೇ ಇದ್ದ ಪ್ರಾಣಿ. ಇಷ್ಟಕ್ಕೆ ಬಿಡದೆ ಮಾಧವರಾಯರಿಗೆ "ಎಸ್. ಎಲ್. ಪಿ" ಅಂಕಿತವುಳ್ಳ ಉಂಗುರ ಮಾಡಿಸಬೇಕಾಗುವುದೆಂದು ನಗೆಯಾಡಿ, ಉಂಗುರ ತೋರಿಸಲು ಎದ್ದರು ಉಂಗುರ ಗೋಪೂ ಒಯ್ದಿರುವನೆಂದು, ತಡವರಿಸಿ ಶಾರದೆ ಹೇಳಿದಳು 'ನಾಟಕಕ್ಕೆ ನೆರೆಮನೆಯವರೊಡನೆ ಉಂಗುರ ಕೊಟ್ಟು ಸಣ್ಣ ಹುಡುಗನನ್ನೇಕೆ ಕಳಿಸಿದೆ?' ಎಂದು ಗದ್ದರಿಸಿ, "ನಾಳೆ ಬೆಳಗ್ಗೆ ಉಂಗುರಾ ಕೊಟ್ಟುಬಿಡು. ಗೋಪೂ ಬರಲಿ! ಅವನಿಗೆ ಇನ್ನೊಮ್ಮೆ ಉಂಗುರಾ ಅಂದಿರಬಾರದು ಹೀಗೆ ಮಾಡುವೆ" ಎಂದು ಹೇಳಿದನು. ಉಂಗುರ, ನಾಳೆ ಶಾರದೆ ಕೊಡದೆ ಹೋದರೆ, ಪಾಪ! ಗೋಪೂನ ಫಜೀತಿ ಶಾರದೆ ಉಂಗುರ ಕೊಡಲು ನನ್ನನ್ನೇ ಕೇಳಿದರೆ ನನ್ನ ಫಜೀತಿ. ಉಂಗುರ ನಾಳೆ ಸಕಾಲದಲ್ಲಿ ಶಾರದೆಯ ಕೈ ಸೇರುವಂತಾದರೆ, ಎಲ್ಲ ಸುಸೂತ್ರವಾಗ ಬಹುದು. ಕೃಷ್ಣಪ್ಪನನ್ನು ಬೆಳಗ್ಗೆ ಕಂಡು, ಉಂಗುರ ಮರಳಿ ತಾರದೆ ಗತ್ಯಂತರವಿಲ್ಲ."

"ಅಕ್ಟೋಬರ್ ೪ ೧೯೩೦
ಅಶ್ವಿನ ಶುದ್ಧ ಏಕಾದಶಿ

"ಉಂಗುರ ಮಾರಿದ್ದೇ ನನ್ನ ಅಪರಾಧ. ಯಾರಿಗೂ ತೊಂದರೆ ತಟ್ಟದಂತೆ ಮಾಡುವೆ. ನೀವು ಚಿಂತಿಸಬೇಡಿರಿ." ಎಂದು ಕೃಷ್ಣಪ್ಪ ನನಗೆ ಹೇಳಿಕಳುಹಿದನು. ಉಂಗುರ ನಾನು ಕೊಟ್ಟೆನೆಂದು ಹೇಳಿ-ದರೆ, ಆಗಬಹುದಾದ ಸಂಗತಿ ತಿಳಿಸಿ, ಕೃಷ್ಣಪ್ಪನಿಗೆ 'ಶಾರದೆಯ

ಬಾಯೋಟೋನಾ
ಇದರ ಸೇವನೆಯಿಂದ

ಮಕ್ಕಳು ಮೊದಲ್ಗೊಂಡು ಮುದುಕರ ವರೆಗೆ ಸ್ತ್ರೀಪುರುಷರು ಇದನ್ನು ಸೇವಿಸ ಬಹುದು. ಮಿದುಳಿಗೂ ಜೀವಾಣುಗಳಿಗೂ ಬಲವನ್ನೂ ಆರೋಗ್ಯವನ್ನೂ ಕೊಡುವ ಉತ್ತಮ ಉಪಾಯವೆಂದರೆ 'ಬಾಯೋ-ಟೋನಾ' ಸೇವಿಸುವದೇ ಆಗಿದೆ. ೪೦ ದಿವಸ ಸಾಕಾಗುವ ಬಾಟ್ಲಿಯ ಬೆಲೆ ರೂ. ೨. ೮, ಪೋಸ್ಟ್ ಬೇರೆ. ಸೂಚಿಪತ್ರ ಪಡೆಯಬಹುದು.

ROY & CO. BOMBAY 2.

ಚಿತ್ರಕಲಾ ಪ್ರವೇಶ

೩ನೆಯ ಆವೃತ್ತಿ

ಅಚ್ಚಾಗಿ ಸಿದ್ಧವಾಗಿದೆ.

ಬೇಕಾಗಿರುವವರು

ಬೇಗನೆ ಬೇಡಿಕೆ ಕಳುಹಿರಿ!

ಬರೆದವರು :

ಶ್ರೀ. ಜಿ. ಎಸ್. ಹುದ್ದಾರ

ಮರ್ಯಾದೆ ರಕ್ಷಿಸು' ಎಂದು ನಾನೇಕೆ ಹೇಳಿದೆ? ಇಷ್ಟು ಹೇಳದಿದ್ದರೆ ಕೃಷ್ಣಪ್ಪ ನನ್ನ ಹೆಸರನ್ನು ಹೇಳುತ್ತಿದ್ದನೆಂದು ನನಗೆ ಭಯ. ನನ್ನ ಮರ್ಯಾದೆ ರಕ್ಷಿಸಲು ಕೇಳಿಕೊಳ್ಳುವ ಪ್ರಸಂಗ ಬಂದುದನ್ನು, ಹಾಗೆಯೇ ಮರ್ಯಾದೆ ರಕ್ಷಿಸೆಂದು ಹೇಳಿ ದೊಡ್ಡ ಮರ್ಯಾದೆವಂತನಾಗುವ ಹುಚ್ಚು ಹಂಬಲ. ಪಾಪ. ಕೃಷ್ಣಪ್ಪ. ತಾನೇ ಉಂಗುರ ಕದ್ದ ಕಳ್ಳನೆಂದು ಹೇಳಿಬಿಟ್ಟು ಬಂಧಿಸಲ್ಪಟ್ಟನಲ್ಲ! ಕಚೇರಿಯಲ್ಲಿ ಪೋಲೀಸರು ಅವನನ್ನು ತಂದು ನಿಲ್ಲಿಸಿದಾಗ "ಅಯ್ಯೋ. ನನ್ನ ಮರ್ಯಾದೆ ರಕ್ಷಿಸಲು ತನ್ನ ಮರ್ಯಾದೆಯ ಬಲಿದಾನಮಾಡಿದನಲ್ಲ ಕೃಷ್ಣಪ್ಪ!" ಎಂದು ಮನಸ್ಸು ಕಳವಳಗೊಂಡಿತು. ಅವನು ಕಳವು ಮಾಡಿದೆನೆಂದು ತಾನೇಕೆ ಒಪ್ಪಿಕೊಳ್ಳಬೇಕಿತ್ತು? ಬಹಳವಾದರೆ ಗೊಪ್ಪು ಕಳೆದಿರುವನೆಂದು, ಅನಂತರಾಯ ಅವನಿಗೆ ನಾಲ್ಕು ಏಟುಹಾಕಿ ಬಿಡುತ್ತಿದ್ದರು! ಅಷ್ಟು ನೋವು ಬಾಲಕನಿಗಾಗಬಾರದೆಂದು ಇಂಥ ದೊಡ್ಡ ತ್ಯಾಗ ಮಾಡುವನೆಂದು ನಾನೆಣಿಸಿರಲಿಲ್ಲ. ಬಡವನಾದರೂ ಕೃಷ್ಣಪ್ಪನ ಮನಸ್ಸು ಬಹಳ ದೊಡ್ಡದು."

"ಅಕ್ಟೋಬರ್ ೧೬, ೧೯೩೦.
ಆಶ್ವಿನ ವದ್ಯ ನವಮಿ.

ಕೃಷ್ಣಪ್ಪ ತಾನು ಅಪರಾಧಿ ಎಂದೇ ಜವಾಬು ಕೊಟ್ಟನು. ಪೋಲೀಸರ ಸಾಕ್ಷಿಗಳೆಲ್ಲ ಅವನು ಅಪರಾಧಿ ಎಂದು ಸಿದ್ಧಪಡಿಸಿವೆ. ಕಾನೂನಿನಂತೆ ಕೃಷ್ಣಪ್ಪನಿಗೆ ಶಿಕ್ಷೆ ವಿಧಿಸಲೇ ಬೇಕಾಗುವುದು. ನಿರಪರಾಧಿ ಎಂದು ಗೊತ್ತಿದ್ದರೂ, ಶಿಕ್ಷೆ ವಿಧಿಸಬೇಕೇ? ಸಾಕ್ಷಿಪುರಾವೆಗಳಿಂದ ಕಂಡು ಬಂದ ವಿವರಗಳನ್ನು ಬಿಟ್ಟು, ವೈಯಕ್ತಿಕ ನನ್ನ ಸ್ವಂತ ತಿಳಿವಳಿಕೆಯ ಮೇಲೆ ನಿರ್ದೋಷಿ ಎಂದು ತೀರ್ಪು ಕೊಡುವುದು ಕರ್ತವ್ಯಚ್ಯುತಿ. ಏನಿದು ನ್ಯಾಯನಿರ್ಣಯದ ಫಾರ್ಸು! ಕುರುಡುನ್ಯಾಯದ ಬೆನ್ನು ಹತ್ತಿ ನಿರಪರಾಧಿಗಳಿಗೆ ಶಿಕ್ಷೆ ವಿಧಿಸಲು ಬಲವಂತ ಮಾಡುವುದೆಂಥ ನ್ಯಾಯ? ಇಂದು ಕೃಷ್ಣಪ್ಪನಿಗೆ ಶಿಕ್ಷೆ ವಿಧಿಸಿದರೆ, ಅವನ ಆತ್ಮಕ್ಕೆ ದುಃಖವಾಗದೆ? ಈ ನ್ಯಾಯಾಸನದ ಮೇಲೆ ಕುಳಿತ. ಅದೆಷ್ಟು ನಿರಪರಾಧಿಗಳಿಗೆ ತಿಳಿಯದೆ ಶಿಕ್ಷೆ ವಿಧಿಸುವ ಘೋರ ಪಾಪ ನನ್ನಿಂದ ಘಟಿಸಬಹುದು? ಈ ಅಧಿಕಾರ ಇದಕ್ಕಾಗಿಯೇ ಸಿಕ್ಕಿರುವುದೆ? ಕಾನೂನಿನ ನಿಯಮದಂತೆ ಶಿಕ್ಷೆ ವಿಧಿಸದೆ ಬೇರೆ ವಿಧಿ ಇಲ್ಲ. ಇದು ನನ್ನಿಂದಾಗದು. ಇಂಥ ಅನ್ಯಾಯದ ನ್ಯಾಯನಿರ್ಣಯ ಕೊಡುವ ಅಧಿಕಾರವೇ ಬೇಡ. ರಾಜಿನಾಮೆ ಸಲ್ಲಿಸಿ ಬಿಡುವುದೇ ನಿರ್ಧಾರ! ಕೃಷ್ಣಪ್ಪನಿಗೆ ಬೇರೊಬ್ಬ ನ್ಯಾಯಾಧೀಶ ಶಿಕ್ಷೆ ವಿಧಿಸಬಹುದು. ನನ್ನ ರಾಜೀನಾಮೆಯ ಫಲವೇನು? ಒಬ್ಬ ಕೃಷ್ಣಪ್ಪನಿಗಾಗಿ ನಾನು ಇಷ್ಟು ಸಂಕಟದಲ್ಲಿ ಸಿಕ್ಕಿರುವೆ. ನಿರಪರಾಧಿಗಳಿಗೆ ಶಿಕ್ಷೆ ವಿಧಿಸುವ ಸ್ಥಾನದಲ್ಲಿರುವುದು ಮನಸ್ಸಿಗೆ ಒಪ್ಪಿತವಾಗದಿದ್ದರೂ ಇರಬೇಕೆ? ರಾಜೀನಾಮೆ ನನ್ನ ನಿರ್ಧಾರ. ದೇವರ ಮನಸ್ಸಿಗೆ ಬರುವಂಥ ಕೆಲಸ ಮಾಡಬೇಕು"

"ನವಂಬರ್ ೧ ೧೯೩೦.
ಕಾರ್ತಿಕ ಶುದ್ಧ ಅಷ್ಟಮಿ.

ಅಸಹಕಾರ ಚಳವಳಿಯಲ್ಲಿ ರಾಜಿನಾಮೆಕೊಟ್ಟು ಸೇರಿದ ದೇಶಭಕ್ತನೆಂದು, ಜನರು ಗೌರವಿಸಹತ್ತಿರುವರಲ್ಲ! ಸತ್ಯವನ್ನು ಬಿಚ್ಚಿ ಹೇಳಲು ಮನಸ್ಸಿದ್ದರೂ, ಬಾಯಿಮುಚ್ಚಿ ಕೂಡಬೇಕಾಗಿದೆ. ನನ್ನ ರಾಜೀನಾಮೆಯ ಕಾರಣ ನನಗೆ ಮತ್ತು ದೇವರಿಗೆ– ಬಹಳಾದರೆ ಕೃಷ್ಣಪ್ಪನಿಗೆ ಗೊತ್ತು. ನಾನು ಜನರನ್ನು ಠಕ್ಕನಂತೆ ವಂಚಿಸುತ್ತ, ಸತ್ಯವಾದುದನ್ನು ಹೇಳದೆ ಇರುವುದು ಅನಿವಾರ್ಯ. 'ನ್ಯಾಯಾಲಯಗಳು ಅನ್ಯಾಯದ ತವರುಮನೆ' ಎಂದು ಭಾಷಣಮಾಡುತ್ತ ಸಾಗಿದ್ದು ಸರಕಾರಕ್ಕೆ ವರದಿಯಾಗಿದೆ—ಎಂದು ನನ್ನ ಮಿತ್ರರೊಬ್ಬರು ಹೇಳಿದರು. ಪೋಲೀಸರು ಬಂಧಿಸಬಹುದೆಂದೂ ಸುದ್ದಿ ಹರಡಿದೆ.

"ದಿನಚರಿಯ ಮುಂದಿನ ಪುಟಗಳಲ್ಲಿ ಏನೂ ಬರೆದಿಲ್ಲವಲ್ಲ?" ಎಂದು ವಿಜಯ ಗೋವಿಂದರಾಯರ ಮುಖ ನೋಡಿದ.

"ಹೌದು! ನಾನು ಜೇಲಿಗೆ ಹೋದನಂತರ ದಿನಚರಿ ಬರೆಯಲಾಗಲಿಲ್ಲ. ನಿನ್ನ ತಂದೆ ನಿರ್ದೋಷಿ. ಅವನಿಗೆ ಶಿಕ್ಷೆ ವಿಧಿಸಿದ್ದು ಅನ್ಯಾಯ. ಇದು ಈಗಲಾದರೂ ಮನವರಿಕೆಯಾಯಿತಷ್ಟೇ?"

"ಬಡತನದ ಗೋಳನ್ನು ತಾಳದೆ, ಕಳವು ಮಾಡಿದ್ದರೂ ಕ್ಷಮ್ಯವಿತ್ತು. ಅಪರಾಧ ಮಾಡದೆ ಅಪರಾಧವನ್ನು ಒಪ್ಪಿಕೊಂಡು, ಕಳ್ಳನಲ್ಲದಿದ್ದರೂ ಸುಳ್ಳು ಹೇಳಿದ ದೋಷಿ ಅವನು. ಅವನ ಬಗ್ಗೆ ಗೌರವಭಾವನೆ ನೀವು ಇಟ್ಟುಕೊಂಡದ್ದು ನಿಮ್ಮ ಮನಸ್ಸಿನ ಔದಾರ್ಯ" ಎಂದು ವಿಜಯ ವಿಷಣ್ಣವದನನಾಗಿ ನುಡಿದ.

"ವಿಜಯ! ನೀವಿನ್ನೂ ಕೃಷ್ಣಪ್ಪನ ಕತೆ ಪೂರ್ತಿ ತಿಳಿದುಕೊಂಡಿಲ್ಲ. ಹಾಗೆ ಎನಿಸುವುದು ಸ್ವಾಭಾವಿಕ. ಜೇಲಿನಲ್ಲಿ ನಾನು ಕೃಷ್ಣಪ್ಪನ ಮುಖದಿಂದ, ಅವನು ಅಪರಾಧಿ ಎಂದು ಒಪ್ಪಿಕೊಂಡ ಕಾರಣ ಕೇಳುವ ವರೆಗೂ ಅವನ ಯೋಗ್ಯತೆ ಅರಿಯದೆ ಹೋಗಿದ್ದೆ. ಈ ಕಾಗದದಲ್ಲಿ ಕೃಷ್ಣಪ್ಪನು ಅಂದು ಜೇಲಿನಲ್ಲಿ ನನ್ನೊಡನೆ ಮಾತಾಡಿದ್ದನ್ನೆಲ್ಲ ಬರೆದಿಟ್ಟಿರುವೆ. ಇದನ್ನು ಪೂರ್ತಿಯಾಗಿ ಓದು. ಆಮೇಲೆ ಮಾತಾಡು" ಎಂದು ಒಂದು ಹಳೆಯ ಕಾಗದದ ಪುಸ್ತಿಕೆಯನ್ನು, ವಿಜಯನ ಕೈಗೆ ಗೋವಿಂದರಾಯರು ಕೊಟ್ಟರು. ವಿಜಯ ಓದಹತ್ತಿದನು.

ಕೃಷ್ಣಪ್ಪನ ಬಲಿದಾನ

ಜೇಲಿನಲ್ಲಿ ಕೃಷ್ಣಪ್ಪನೇ ನನ್ನನ್ನು ಮೊದಲು ಮಾತಾಡಿಸಿದನು. "ನಾಯಕ ಅನಂತರಾಯರ ಮಗನ ಉಂಗುರ ಕದ್ದ ಕೃಷ್ಣಪ್ಪನ ಕುಟುಂಬದವರ ಸಮಾಚಾರವೇನಾದರೂ ಗೊತ್ತಿರುವುದೇ? ನೀವು ಅದೇ ಊರಿನಿಂದ ಬಂದವರೆಂದು ತಿಳಿದು ಬಂತು. ಹೀಗೆ ಕೇಳಿದ್ದಕ್ಕೆ ಕ್ಷಮಿಸಬೇಕು!" ಎಂದು ಅವನು ಕೇಳಿದನು. ಕೃಷ್ಣಪ್ಪ ಮಾತಾಡುವಾಗ, ಅವನು ಇಲ್ಲಿಯೂ ತಾನು ಅಪರಾಧಿ ಎಂದೇ ನನ್ನ ಮುಂದೆ ಹೇಳಿಕೊಂಡು, ನನ್ನ ನ್ಯಾಯನಿರ್ಣಯವನ್ನು ಮೂದಲಿಸಿರಬಹುದೇ ಎಂದೆನಿಸಿತು. "ಕುಟುಂಬದವರು ಸುಖವಾಗಿದ್ದಾರೆ. ಬಾಣಂತಿಗೆ ಏನೋ ಕಾಯಿಲೆ! ಡಾಕ್ಟರರ ಉಪಚಾರದ ವ್ಯವಸ್ಥೆ ಮಾಡಿದೆ. ವೆಚ್ಚಕ್ಕೂ ಹಣವಿದೆ. ಚಿಂತೆ ಬೇಡ" ಎಂದು ಅವನ

ಚಿಂತೆಯನ್ನು ದೂರಮಾಡಲು, ಎಲ್ಲವನ್ನೂ ತಿಳಿಸಿದೆ. ಕೊನೆಗೆ "ಕೃಷ್ಣಪ್ಪಾ, ನಿರಪರಾಧಿಯಾಗಿದ್ದ ನೀನು ಅಪರಾಧವನ್ನೇಕೆ ಒಪ್ಪಿಕೊಂಡೆ? ಇದು ನನಗೆ ಒಡೆಯದ ಒಗಟವಾಗಿದೆ" ಎಂದು ಕೇಳಿಯೇ ಬಿಟ್ಟೆ. ಅವನು ಅತ್ತಿತ್ತ ನೋಡಿ ಇಬ್ಬರೇ ಇರುವೆವೆಂಬುದನ್ನು ಖಾತ್ರಿ ಮಾಡಿಕೊಂಡು ತನ್ನ ಕಥೆ ಹೇಳಹತ್ತಿದನು:

"ನಾನು ಅಂದಿನ ದಿನ, 'ಅಪರಾಧಿ ನಾನು' ಎಂದು ಹೇಳುವುದೇ ಸರಿಯಾದುದೆಂದು ವಿಚಾರಮಾಡಿ, ಒಂದು ನಿರ್ಧಾರಕ್ಕೆ ಬಂದೆ. ಅಂದು ನನ್ನ ಸತ್ತ್ವಪರೀಕ್ಷೆಯ ಕಾಲವಾಗಿತ್ತು. ನನ್ನ ಬಡತನದ ಕತೆ ಕೇಳಿ ದಯೆ ಹುಟ್ಟಿ, ಚಿನ್ನದ ಉಂಗುರವನ್ನೇ ಕೊಟ್ಟ ನಿಮ್ಮ ಉಪಕಾರ ಸ್ಮರಿಸದೆ ನಾನು ಕೃತಘ್ನನಾಗಬೇಕಿತ್ತೇ? ನಾನು ಬಡವ. ಧನವಿಲ್ಲದ ದರಿದ್ರ. ಆದರೂ ಕೃತಜ್ಞತೆಯಲ್ಲಿಯಾದರೂ ಸಂಪನ್ನನಾಗಿರದಿದ್ದರೆ ದೇವರು ಮೆಚ್ಚುವನೆ? ಈ ಭಾವನೆಯೇ ಅಂದು ನನ್ನ ನಿರ್ಧಾರಕ್ಕೆ ಹಚ್ಚಿತು. ನನ್ನ ನಿರ್ಧಾರ ಸರಿಯೇ ತಪ್ಪೇ—ಇದನ್ನು ನಿರ್ಣಯಿಸಲು, ವಿಜಯದಶಮಿಯ ದಿನ ನನ್ನ ಮನಸ್ಸಿನಲ್ಲಿ ನಡೆದ ಕೋಲಾಹಲ, ಅಂದು ನಾನು ಅನುಭವಿಸಿದ ಸುಖ-ದುಃಖ ಎಲ್ಲ ತಿಳಿಯಬೇಕಾಗುವುದು. ನೀವು ನನ್ನ ಕಷ್ಟಕಾಲದಲ್ಲಿ ನನಗೆ ಸಹಾಯ ಮಾಡಿದಿರಿ. ನಿಮ್ಮ ಮುಂದೆ ಹೇಳದೆ ಇನ್ನಾರ ಮುಂದೆ ಅದೆಲ್ಲವನ್ನೂ ತಿಳಿಸಲಿ? ಈ ಮೊದಲೇ ನಿಮಗೆ ತಿಳಿಸಬೇಕಾಗಿತ್ತು—ಎಂದು ಒಮ್ಮೆ ಎನಿಸುವುದು. ಆದರೆ ಒಮ್ಮೆ ಅಪರಾಧಿ ಎಂದು ಒಪ್ಪಿದ ನಾನು, ಮುಂದೆ ತಿರುಗಿ ಹೇಳುವ ಪ್ರಶ್ನೆಯೇ ಇರಲಿಲ್ಲ. ನೀವು ನ್ಯಾಯಾಲಯದಲ್ಲಿ ಕೇಳಿದಾಗಲೂ 'ಅಪರಾಧಿ' ಎಂದೇ ಹೇಳಿದೆ. ಜಗತ್ತು ನಾನು ಅಪರಾಧಿ ಎಂದು ನಂಬಿದೆ. ನಾನು ಇನ್ನು ಮೇಲೆ ನಿರಪರಾಧಿ ಎಂದು ಯಾರ ಮುಂದೆಯೂ ಹೇಳಬೇಕಾದ ಅಗತ್ಯ ಉಳಿದಿಲ್ಲ. ನಿಮಗೆ ನಾನು ವಚನ ಕೊಟ್ಟಂತೆ, ಯಾರಿಗೂ ತೊಂದರೆ ಬಾರದಂತೆ ಮಾಡಬೇಕಿತ್ತು. ದೇವರು ಅದರಲ್ಲಿ ಯಶ ಕೊಟ್ಟನು. ಇದೇ ನನಗೆ ಸಂತೋಷ!"

ನಾನು ನಡುವೆಯೇ ತಡೆದು "ನಾನೇನು ಅಂಥ ಮಹದುಪಕಾರ ಮಾಡಿದೆನೆಂದು ಈ ಬಲಿದಾನದ ನಿರ್ಣಯಕ್ಕೆ ಬಂದೆ? ನನಗೆ ನಿನ್ನ ಉತ್ತರದಿಂದ ಸಮಾಧಾನವಾಗಲಿಲ್ಲ" ಎಂದು ಹೇಳಿದೆ.

"ನಾನು ಎಲ್ಲವನ್ನೂ ತಿಳಿಸಿದನಂತರವೂ ಸಮಾಧಾನವಾಗದಿದ್ದರೆ ನಾನು ನಿರುಪಾಯನು. ಅಂದು ಕೈಯಲ್ಲಿ ಬಿಡಿಕಾಸೂ ಇರಲಿಲ್ಲ. ಮನೆಯಲ್ಲಿ ಬಾಣಂತಿ. ಮನೆಯ ಬಾಡಿಗೆ ಮೂರು ತಿಂಗಳು ಕೊಟ್ಟಿಲ್ಲವೆಂದು, ಮನೆಯೊಡೆಯನ ಆಳು ಅಪಮಾನಕರವಾದ ಬಿರುನುಡಿಗಳನ್ನಾಡಿ ಹೋಗಿದ್ದನು. ಅಂಗಡಿಯವನು ಹಿಂದಿನ ಬಾಕಿ ತೀರಿಸದೆ ಉದ್ರಿ ಕೊಡುವುದಿಲ್ಲವೆಂದು ಹೇಳಿದನು. ಮಾರನೆಯ ದಿನ ಊಟಕ್ಕೆ ಕಾಳಿನ ಅಭಾವ. ಇಂಥ ಸ್ಥಿತಿಯಲ್ಲಿ, ನಾಯಕ ಅನಂತರಾಯರ ಮನೆಯಲ್ಲಿ ಲೆಕ್ಕ ಬರೆಯುತ್ತ ಕುಳಿತಿದ್ದೆ; ಹೋದ ತಿಂಗಳ ಸಂಬಳದ ಹಣ ಕೈಗೆ ಬಂದರೆ ಒಳಿತು— ಎಂದು, ನಾಯಕರಿಗೆ 'ಸಂಬಳದ ರೂಪಾಯಿ ಕೊಟ್ಟರೆ ಉಪಕಾರವಾಗುವುದು' ಎಂದು ತಿಳಿಸಿದೆ.

"ನೀನೇ ಲೆಕ್ಕಾ ಬರೆದಿರುವಿ! ಒಂದು ದುಡ್ಡೂ ಜಮೆ ಬಂದಿಲ್ಲ. ಹೀಗಿರುವಾಗ, ಸಂಬಳ ಎಲ್ಲಿಂದ ಕೊಡುವುದು?" ಎಂದು ನುಡಿದವರೇ ನಾಯಕರು ಒಳಗೆ ಹೋದರು.

'ಲಕ್ಷಾಂತರ ರೂಪಾಯಿ ವ್ಯವಹಾರಮಾಡುವ ನಾಯಕರಿಗೆ, ಸಂಬಳ ಕೇಳಿದಾಗ ಕೊಡುವ ಬುದ್ಧಿ ಇರಬಾರದೇ?' ಎಂದು ವಿಚಾರಿಸುತ್ತ, ನಾಯಕರು ಹೊರಗೆ ಬರುವ ದಾರಿಕಾಯುತ್ತ ಕುಳಿತಿದ್ದೆ. ನಾಯಕರು ಹೊರಗೆ ಬಂದರು. ನಾನು ಇನ್ನೂ ಕುಳಿತದ್ದು ನೋಡಿ "ಯಾಕೆ ಕೃಷ್ಣಪ್ಪ, ಇನ್ನೂ ಕುಳಿತಿರುವಿ? ಲೆಕ್ಕಪತ್ರದ ಕೆಲಸ ಮುಗಿದಿದ್ದರೆ, ಹಬ್ಬದ ಊಟ... ಬೇಗನೆ ಮನೆಗೆ ಹೋಗಬಹುದು!"

"ಎಲ್ಲಾ ಕೆಲಸ ಮುಗಿದಿದೆ. ಆದರೆ...."

"ನಿನ್ನ ಈ ಆದರೆ ಶಬ್ದ ನಮ್ಮ ಪ್ರಾಣಾ ತಕ್ಕೊಳ್ಳುವುದು!" ಎಂದು ನಾಯಕರು ದಿಂಬಿಗೆ ಆತು ಕುಳಿತು, ಎಲೆ ಅಡಿಕೆ ಹಾಕಹತ್ತಿದರು.

"ಬಡವ.... ಬಹಳ ಅಡಚಣೆ...."

ನಾಯಕರು ನನಗೆ ಮುಂದೆ ಮಾತನಾಡಗೊಡದೆ "ಬಡವರಾದರೇನು? ಶ್ರೀಮಂತರಾದರೇನು? ಅಡಚಣಿ ಎಲ್ಲರಿಗೂ ಉಂಟು. ಆನೆಯ ಭಾರ ಆನೆಗೆ; ಆಡಿನ ಭಾರ ಆಡಿಗೆ. ನಿನ್ನ ಹಾಗೆ ನಮಗೂ ಅಡಚಣಿ. ಹೋದ ತಿಂಗಳು ಪಕ್ಷಮಾಸ. ಈ ತಿಂಗಳು ನವರಾತ್ರಿ, ಮುಂದಿನ ತಿಂಗಳು ದೀಪಾವಳಿ. ಸಂಸಾರ ಸಾಗಿಸಿಕೊಂಡು ಹೋಗುವುದು ಎಲ್ಲರಿಗೂ ಕಷ್ಟ!" ಎಂದರು.

ಆನಂದ ಗ್ರಂಥಮಾಲಾ, ಹುಬ್ಬಳ್ಳಿ.

ಜವೇತ್: ಗಾಯ. ದ. ಮೊಪಾಸಾನ ರಸಮಯ ಶೃಂಗಾರರಸಪ್ರಧಾನ ಕಾದಂಬರಿ— ಇದೇ ಜುಲೈ ಕೊನೆಯಲ್ಲಿ ಪ್ರಕಟವಾಗಲಿದೆ.

ಸಾದಾ ಪ್ರತಿ ೧-೧೨-೦ ಉತ್ತಮ ಪ್ರತಿ ೨-೮-೦

ಕಾಂತಂ ಮತ್ತು ಶರದ್ರಾತ್ರಿಗಳು: ಹಾಸ್ಯಮಯ ಶೃಂಗಾರ ಜೀವನಚಿತ್ರಗಳು. ಈಗಾಗಲೇ ಪ್ರಕಟವಾಗಿ ಜನಪ್ರಿಯವಾಗಿದೆ.

ಸಾದಾ ಪ್ರತಿ ೧-೪-೦ ಉತ್ತಮ ಪ್ರತಿ ೨-೦-೦

ವಾರ್ಷಿಕ ಚಂದಾ ನಾಲ್ಕು ಪುಸ್ತಕಗಳಿಗೆ ಸಾಮಾನ್ಯ ರೂ ೫-೦-೦
ವಿಶೇಷ ರೂ ೬-೦-೦.

ಏಜಂಟರಿಗೆ ಮಾರಾಟಗಾರರಿಗೆ ಹೆಚ್ಚು ಕಮೀಶನ್.

ಪಿ. ವೆಂಕೋಬಾಚಾರ್ಯ— ಸಂಪಾದಕ,
ಗವಳಿಗಲ್ಲಿ— **ಹುಬ್ಬಳ್ಳಿ.**

" ಅದೆಲ್ಲಾ ಸರಿ. ಆದರೆ ನಾಳಿನ ದಿನ ಸಂತೆ.... "

"ಹೌದಲ್ಲ. ನಿನ್ನ ಸಂತೆಯ ಚಿಂತೆ ನಿನಗೆ. ಒಳ್ಳೇದು, ಅಬ್ದುಲ್-ಸಾಬ ಟಾಂಗೇವಾಲಾನಿಂದ ಬರತಕ್ಕ ಬಾಕಿ ೩|| ರೂ. ವಸೂಲ-ಮಾಡಿಕೊಂಡು, ಇದೊಂದುವಾರ ಸಂತೆ ಸಾಗುಮಾಡಿಕೋ ! " ಎಂದು ಹೇಳಿದರು.

" ಅದು ಕೊಡಲಾರದ ಗಿರಾಕಿ. ನನ್ನ ಸಂತೆಗೆ ಅವನಿಂದ ದುಡ್ಡು ಒದಗೀತೆಂಬ ಭರವಸೆ ಇಲ್ಲ. "

ನಾಯಕರು ಸಿಟ್ಟಿನಿಂದ "ಹಾಗಾದರೆ ನನ್ನ ಹೆಂಡತಿಮಕ್ಕಳ, ಆಭರಣ ಮಾರಿ, ಹಣ ತಂದು ನಿನಗೆ ಸಂಬಳ ಕೊಡು ಎನ್ನು-ವಿಯಾ? ಕುಳಗಳಿಂದ ಬಾಕಿ ವಸೂಲ ಮಾಡಲಿಕ್ಕೆ ಬೇಡ, ನನ್ನ ಕೈಯಿಂದ ಹಣ ಬಿಚ್ಚಬೇಕೆಂದು ನಿನ್ನ ಹಟ ಕಾಣತದೆ. ನಿನ್ನಂತೆ ನಾನು ಬರತಕ್ಕ ಹಣ ವಸೂಲು ಮಾಡಿದರೆ, ಮನೆಯಲ್ಲಿ ಇಡಲು ಸ್ಥಳ ಸಿಕ್ಕತಿತ್ತೋ ? ಇಲ್ಲ. ಅನಾಯಾಸ ಹಣ ಕೈಗೆ ಬರಬೇಕು ನಿನಗೆ ! ಹೀಗೆ ಮಾಡಿ ಯಾರನ್ನಾದರೂ ದಿವಾಳೀ ತೆಗೆಸುವವ ನೀನು. ಹೋಗು, ಮ್ಯಾಜಿಸ್ಟ್ರೇಟ್ ಗೋವಿಂದರಾಯರಿಂದ ೧೦ರೂ. ಕೈಗಡ ಕೇಳು. ಅವರು ಇಲ್ಲ ಎನ್ನುವವರಲ್ಲ. " ಎಂದು ಹೇಳಿದರು.

" ಅವರ ಪರಿಚಯ ಅಷ್ಟಕ್ಕಷ್ಟೆ. ಹ್ಯಾಗೆ ಸಾಲ ಕೇಳುವುದು ? ಮನೆಗೆ ಬರಿಗೈಯಿಂದ ಹೋಗುವಂತಿಲ್ಲ. ಇಲ್ಲವಾದರೆ ನಿಮಗೆ ತೊಂದರೆ ಕೊಡುತ್ತಿರಲಿಲ್ಲ. "

" ಹೀಗೆ ಹೇಳಿದರೆ ಏನು ಪ್ರಯೋಜನ ಕೃಷ್ಣಪ್ಪಾ ? ನೀನೂ ಸಂಸಾರ ಮಾಡಹತ್ತಿ ೧೦-೧೨ ವರ್ಷ ಆಗಿರಬಹುದು. ನಾಲ್ಕು ಮಕ್ಕಳ ತಂದೆಯಾಗಿರುವೆ. ನಾಳೆಗೆ ಬೇಕು— ಎಂದು, ಇದ್ದುದ-ರಲ್ಲಿ ಮಿತವ್ಯಯದಿಂದ ದುಡ್ಡು ಕಾಯ್ದುಕೊಂಡು ಸಂಸಾರಮಾಡ-ಬೇಕು. ಇದನ್ನು ನಾನು ಹೇಳಿಕೊಡಬೇಕೆ ? "

" ಸಣ್ಣ ಸಂಬಳ. ದೊಡ್ಡ ಸಂಸಾರ ! ಸಾಗುವುದೇ ಕಷ್ಟ. ಇಂದು ಅರ್ಧ ಸಂಬಳವನ್ನಾದರೂ ಕೊಟ್ಟರೆ, ನಿಮ್ಮ ಹೆಸರು ಹೇಳಿ ಊಟಮಾಡುವಂತಾಗುವುದು. "

"ದೇಶಾವರೀ ಬ್ರಾಹ್ಮಣರಂತೆ ಮಾತಾಡುವುದನ್ನು ಬಿಡು ! ಹಣ ಬೇಕಿದ್ದರೆ, ಗೋವಿಂದರಾಯರಿಂದ ಸಾಲ ಎಂದು ಕೇಳಲು ಸಂಕೋಚವೆನಿಸಿದರೆ, ನಮ್ಮ ಮನೆಯಲ್ಲಿದ್ದಾರೆ. ಎರಡು ತಿಂಗಳ ಆಗಾವು ಬಾಡಿಗೆ ಕೊಡಿರಿ— ಎಂದು ಕೇಳು. ನನ್ನಿಂದಲೇ ವಸೂಲ್ ಮಾಡಬೇಕೆಂದು ಹಟವಿದ್ದರೆ ಒಂದು ವಾರ ತಡೆ ! "

" ಎಲ್ಲಾ ತಡೆಯಬಹುದು. ನಾಳೆ ಮಧ್ಯಾಹ್ನಕ್ಕೆ ಒಲೆ ನಡೆಯುವುದು ತಡೆಯುವುದು ಶಕ್ಯವಿಲ್ಲದ ಮಾತು ! ಕನಿಷ್ಠ ಐದು ರೂಪಾಯಿಗಳನ್ನಾದರೂ ಕೊಡಿರಿ " ಎಂದು ಅತಿ ದೈನ್ಯದಿಂದ ಕೇಳಿದರೂ ನಾಯಕರು ಕೈಬಿಚ್ಚಲಿಲ್ಲ. ಅತ್ತಿತ್ತ ಉದ್ದರಿಗಾಗಿ ಅಲೆದಾಡಿ, ಬನ್ನಿ ಕೊಡುವ ನೆಪಮಾಡಿ ನಿಮ್ಮನ್ನು ಕಂಡೆ. ನೀವು ನನ್ನಲ್ಲಿ ದಯೆದೋರಿ, ಚಿನ್ನದ ಉಂಗುರವನ್ನೇ ಕಾಣಿಕೆ ಕೊಟ್ಟಿರಿ. ನನ್ನನ್ನು ದುಡಿಸಿಕೊಳ್ಳುವ ಯಜಮಾನನು ನಿರಾಶೆಗೊಳಿಸಿದಾಗ, ನೀವು ಏನೂ ಸಂಬಂಧವಿಲ್ಲದವರು ಸಹಾನುಭೂತಿ ತೋರಿಸಿದ ಉಪಕಾರ ನಾನು ಮರೆಯುವುದು ಕೃತಘ್ನತನವಲ್ಲವೆ ? "

ಒಳ್ಳೇ ಉತ್ಸಾಹದಿಂದ ಮನೆಗೆ ಬಂದೆ. ಮನೆಯಲ್ಲಿ ಅಗ್ಗಿಷ್ಟಿಕೆ ಹೊಗೆಯನ್ನು ತುಂಬಿತ್ತು. ಚಿಮಣಿ, ಬೆಳಕಿನ ಬದಲು ಕಾಡಿಗೆ-ಯನ್ನೇ ಹರಡುತ್ತಿರುವಂತೆ ಕಾಣುತ್ತಿತ್ತು. ಮನೆಗೆ ಬರುವ ಮೊದಲು ನನ್ನ ಹೃದಯಾಂತರಾಳದಲ್ಲಿ ಉತ್ಸಾಹದ ಅಗ್ಗಿಷ್ಟಿಗೆ ಹೊತ್ತಿತ್ತು. ಚಿಂತೆಯ ಕಗ್ಗತ್ತಲೆ ಕಳೆಯುವ ಆಸೆಯ ದೀಪ ಬೆಳಗಿತ್ತು. ಮನೆಗೆ ಮುಟ್ಟಿದ ಮೇಲೆ, ಮನೆಯಲ್ಲಿ ವ್ಯಾಪಿಸಿದ ಹೊಗೆ ಮನವನ್ನೂ ಮುಸುಕಹತ್ತಿತು.

" ಅಪ್ಪಾ ಬಂದಾ. ಅಪ್ಪಾ ಬಂದಾ " ಎಂದು ಓಡಿ ಬಂದ ಎರಡೂ ಮಕ್ಕಳ ಒಂದೊಂದು ಕೈ ಹಿಡಿದುಕೊಂಡು, ಪಡಸಾಲೆಗೆ ಬಂದುನಿಂತು " ಏನಿದು ಎಷ್ಟು ಹೊಗೆ ? " ಎಂದೆ.

" ಹಸೀಕಟ್ಟಿಗೆ. ಎಷ್ಟು ಊದಿದರೂ ಉರಿ ಏಳುವುದೇ ಇಲ್ಲ. ತಾಸಾದರೂ ನೀರು ಕಾಯಲಿಲ್ಲ " ಎಂದು ಸುಶೀಲೆ—ನನ್ನ ಹಿರಿಯ ಮಗಳು ಸುಶೀಲೆ— ತನಗಾಗುತ್ತಿರುವ ತೊಂದರೆ ತೋಡಿ-ಕೊಂಡಳು.

" ದಾನಾ ಕೊಟ್ಟ ಎತ್ತಿನ ಹಲ್ಲು ನೋಡಿದರಂತೆ ! ಉದ್ದರೀ ಕೊಟ್ಟದ್ದೇ ಉಪಕಾರವೆನಿಸಿರುವಾಗ, ಹಸಿ—ಒಣ ಎಂದು ವಿಚಾರಿ-ಸಿದರೆ ಹ್ಯಾಗೆ ನಡೆದೀತು ? " ಎಂದು ಸಮಾಧಾನ ಹೇಳಿದೆ.

" ಇಂದು ಸಂಬಳ ಬಿಟ್ಟು ಬರಬ್ಯಾಡಿರಿ ಎಂದು ಎಷ್ಟೊಂದು ಹೇಳಿದ್ದೆ. ತಂದಿರೋ ಇಲ್ಲೋ ? " ಎಂದು ಬಾಣಂತಿ ಕೇಳಿದಳು.

" ನಮ್ಮ ನಾಯಕರ ಕೈ ಹಿಡಿದ ಲಕ್ಷ್ಮಿ ಬಿಟ್ಟು ಬರಲು ಒಪ್ಪಳು. ಆದರೂ ಹುಟ್ಟಿದ ಮಗುವಿನ ಕಾಲಗುಣ ಒಳ್ಳೇದು. ದೇವರು ಅವನಿಗೆ ಚಿನ್ನದ ಉಂಗುರ ದಯಪಾಲಿಸಿರುವನು! "

" ದೇವರು ಹ್ಯಾಗೆ ಕೊಡುವನು ? ಕೊಟ್ಟ ಪುಣ್ಯಾತ್ಮರ ಹೆಸರು ಹೇಳಬಾರದೇ ? " ಎಂದು ಅವಳ ಪ್ರಶ್ನೆ.

" ದೇವರು ಶಂಖ—ಚಕ್ರ—ಗದಾ—ಪದ್ಮಧಾರಿಯಾಗಿ ತಾನೇ ಮೈದೋರಿ ಕೊಟ್ಟನೆಂದು ನಾನೆಲ್ಲಿ ಹೇಳಿದೆ ? ಒಂದು ವ್ಯಕ್ತಿಯ ಅಂತಃಕರಣದಲ್ಲಿ ಪ್ರೇರಣೆ ಮಾಡಿ ಕೊಡಿಸಿದನು. ಇಂದು ಇಳಿ ಹೊತ್ತಿನಲ್ಲಿ ಮನೆ ಬಿಟ್ಟು ಹೊರಡುವಾಗ, ನಿರಾಶೆಯಿಂದ ನಾನು ಹತಬಲನಾಗಿದ್ದೆ. ' ದೇವರು ಇದ್ದುದೇ ಸತ್ಯವಾಗಿದ್ದರೆ, ಅವನ ಕಿವಿಗಳು ನಾಯಕರ ಕಿವಿಯಂತೆ ಕಿವುಡೇ ? ಕಣ್ಣುಗಳು ಕುರುಡೇ ? ಅವನಿಗೆ ನನ್ನ ಸ್ಥಿತಿ ನೋಡಿ ಕರುಣೆ ಹುಟ್ಟಬಾರದೇ ? ' ಎಂದು ವಿಚಾರ ಮಾಡುತ್ತ ಸಾಗಿದ್ದೆ. ನನ್ನ ಮೊರೆ ದೇವರು ಕೇಳಿರಬೇಕು. ಚಿಂತೆಯೋ ಸಾಲ ಕೇಳಿದರೆ, ಚಿನ್ನದ ಉಂಗುರದ ಉಡುಗೊರೆ ಕೊಟ್ಟ ಆ ಪುಣ್ಯಾತ್ಮ. ಎಂದ ಮೇಲೆ, ದೇವರೇ ಕೊಟ್ಟನೆಂದು ಯಾಕೆ ಹೇಳಬಾರದು ? "

" ದೇವರ ಕೀರ್ತನೆಗೆ ರಾತ್ರಿಯ ಸಮಯ ಬೇಕಾದಷ್ಟಿದೆ. ಮನೆಯಲ್ಲಿ ಏನಿದೆ ಏನಿಲ್ಲ ನಿಮಗೆ ಗೊತ್ತೇ ಇದೆ. ಅಂಗಡಿ ಇನ್ನೂ ತೆರೆದಿರುವಾಗಲೇ ಆ ಉಂಗುರ ಮಾರಿ ಹಣ ತರಬಾರದೆ ? " ಎಂದು ಅವಳು ಸೂಚಿಸಿದಳು.

"ಆಗಲಿ. ಈಗಲೇ ಹೊರಟೆ! ಬೇಗ್ಗೆ ಸಾಮಾನು ತರಲು ಅನುಕೂಲವಾಗುವುದು" ಎಂದು ಬಾಗಿಲ ದಾಟುವುದರಲ್ಲಿದ್ದೆ.

"ಕೂಸಿಗೆಂದು ಕೊಟ್ಟರೆಂದು ಹೇಳಿದಿರಿ; ಎಲ್ಲಾ ಮಾರಬೇಡಿರಿ! ಒಂದು ತುಂಡು ಉಳಿಸಿಕೊಂಡು ಬನ್ನಿರಿ. ಕೂಸಿಗೆ ಎರಡು ಮುರುವು ಮಾಡಿಸೀರಂತೆ!" ಎಂದು ಸೂಚನೆ ಬಂದಿತು. ನಾನೂ ಅದನ್ನು ಒಪ್ಪಿಕೊಂಡೆ.

ಮಾರವಾಡಿ ಫುಲ್‌ಚಂದನಲ್ಲಿ ಉಂಗುರ ಕಡಿಸಿ, ಒಂದು ಚಿಕ್ಕ ತುಂಡು ಉಳಿಸಿಕೊಂಡು, ಉಳಿದ ದೊಡ್ಡ ತುಂಡು ತೂಕಕ್ಕೆ ಹಚ್ಚಲಾಗಿತ್ತು. ನಾಯಕರ ಪುರೋಹಿತ ರಾಮಾಚಾರಿ, ಶೇಡಜಿಗೆ ದಸರೆಯ ಬಂಗಾರ ಕೊಟ್ಟು, ದಕ್ಷಿಣೆ ಎತ್ತಲು ಬಂದು ಬಿಟ್ಟನು.

"ಏನು ಕೃಷ್ಣಪ್ಪಾ, ನೀನೂ ನನ್ನಂತೆ ದಕ್ಷಿಣೆಗೆ ಕೈಯೊಡ್ಡುವ ಸ್ಥಿತಿ ಬಂದಿತೆ?" ಎಂದನು.

ಶೇಡಜಿಯು ಮುಗುಳುನಗೆ ನಕ್ಕು "ಚಿನ್ನದ ಉಂಗುರ ಮಾರಲು ಬಂದಿರುವರು!" ಎಂದು ಹೇಳಿದನು.

"ಅಂತೂ ಕೃಷ್ಣಪ್ಪ, ನಾಯಕರ ಕಾರಕೂನನಲ್ಲವೆ? ಕಾದಿಟ್ಟುಕೊಂಡು ಸಂಸಾರಮಾಡಲು ಕಲಿತಿರುವಿ ಬಿಡು! ಯುದ್ಧದ ನಾಲ್ಕು ವರ್ಷಗಳಲ್ಲಿ ಕೈ ಬರಿದಾಗಿ, ನಾನು ಗತಿಗೆಟ್ಟು ಹೋದೆ. ನೀನು ಇನ್ನೂ ಒಂದು ಉಂಗುರ ಕಾದಿಟ್ಟುಕೊಂಡಿರುವುದು ಸಂತೋಷ!" ಎಂದು ರಾಮಾಚಾರ್ಯರು, ದಕ್ಷಿಣೆ ಸ್ವೀಕರಿಸಿ ಹೊರಟು ಹೋದರು. ಮೂವತ್ತುನಾಲ್ಕು ರೂ. ಚಿಲ್ಲರೆ ಕೈಗೆ ಬರಲು, ನಾನೂ ಮನೆಗೆ ಹೊರಟೆ.

ಅಂದು ರಾತ್ರಿಯುದ್ದಕ್ಕೂ, ಕೈಗೆ ಬಂದ ಹಣದಿಂದ ಏನೇನು ಕೊಳ್ಳಬಹುದು?— ಎಂದು ಎಣಿಕೆಹಾಕುವುದರಲ್ಲಿ ತಲ್ಲೀನನಾಗಿದ್ದೆ. 'ಮಕ್ಕಳು ಬರಿ ಚಾಪೆಯ ಮೇಲೆ ಮಲಗಿವೆ. ಚಳಿಯಲ್ಲಿ ನಡುಗುವುವು. ಒಂದೆರಡಾದರೂ ಕಂಬಳಿ ಕೊಳ್ಳಬೇಕು' ಎಂದೆನಿಸಿತು. ತಾರೆ ತನ್ನನ್ನು 'ಪುಸ್ತಕವಿಲ್ಲದೆ ಶಾಲೆಗೆ ಬರಬೇಡ' ಎಂದು ಮಾಸ್ತರರು ಗದರಿಸಿದರೆಂದು ಹೇಳಿದ್ದು ನೆನಪಾಯಿತು. ಮಕ್ಕಳಿಗೆ ಪಾಟಿ ಪುಸ್ತಕ ಕೊಂಡುಕೊಡಬೇಕು. ದೀಪಾವಳಿಯ ಹಬ್ಬಕ್ಕೆ ಒಂದೊಂದು ಅಂಗಿಯನ್ನಾದರೂ ಹೊಲಿಸಬೇಕು. ತೀರ ಹರಕು ಬಟ್ಟೆ ಧರಿಸಿವೆ. ಮಾಘಮಾಸದಲ್ಲಿ ಬೀಗನ ಲಗ್ನ. ಇವಳು ಹರಕು ಮಡಿಸೀರೆ ಧರಿಸಿ ಹೋದರೆ ಚೆಂದ ಕಾಣದು; ಸೀರೆ ಕೊಂಡು ಎರಡು ವರ್ಷ ಮೀರಿ ಹೋಗಿದೆ; ಒಂದು ಜತೆ ಛಾಂಡು ಕೊಳ್ಳುವಾ. ಮನೆಯ ಬಾಡಿಗೆ ವಸೂಲಿಯ ಆಳು ನಿಂದಿಸಿ ನುಡಿದನಲ್ಲ; ನಾಳೆ ಅವನ ಬಾಡಿಗೆ ಆರುರೂಪಾಯಿ ಕೊಟ್ಟುಬಿಡಬೇಕು. ಕಿರಾಣಿ ಅಂಗಡಿಯ ಉದ್ದರಿ ತೀರಿಸಿದರೆ, ಮುಂದೆ ಪತ್ತು ಉಳಿಯುವುದು. ಉದ್ದರಿ ತೀರಿಸಲು ಬಾಕಿ ಎಷ್ಟು? ಹಾಲು, ಮೊಸರು, ಕಟ್ಟಿಗೆ, ಕಿರಾಣಿ ಅಂಗಡಿ ಎಲ್ಲಾ ಸೇರಿ ೩೦ ರೂ ಸಮೀಪಿಸಿತು! 'ಥೂ. ಇಷ್ಟೆಲ್ಲ ಸಾಲ ತೀರಿಸುವುದಿರಲು, ಶೇಖಮಹಮ್ಮದನಂತೆ ಗಾಳಿಗೋಪುರ ಕಟ್ಟುತ್ತಿದ್ದೇನಲ್ಲ!' ಎಂದು ನನಗೇ ನಾಚಿಕೆ

ಎಣಿಸಿತು. ರಾತ್ರಿಯ ಎರಡು ಹೊಡೆದದ್ದು ಕೇಳಿಸಿತು. ನಿದ್ರೆ ಹತ್ತಿರಲಿಲ್ಲ.

ಇನ್ನೂ ಅರುಣೋದಯ. ಸುಶೀಲೆ ಬಂದು "ಅಪ್ಪಾ ಏಳು, ಯಾರೋ ನಿನ್ನನ್ನು ಕಾಣಲು ಬಂದಿರುವರು!" ಎಂದು ಮುಸುಕು ಜಗ್ಗಿದಳು.

"ಬಂದವರಿಗೆ ಅವರ ಬಾಕಿ ಎಷ್ಟು ಕೇಳು! ಕಿಸೆಯಲ್ಲಿ ರೂಪಾಯಿ ಅವೆ, ಕೊಟ್ಟು ಕಳಿಸು, ಋಣ ತೀರಲಿ" ಎಂದು ಏಳ-ಲಾರದವ ಮಲಗಿದಲ್ಲಿಯೇ ಹೇಳಿದೆ.

"ಅವರು ಉದ್ದರಿ ವಸೂಲಿಗೆ ಬಂದವರಲ್ಲ; ನಿನ್ನನ್ನು ಈಗಲೇ ಕರೆದುಕೊಂಡು ಹೋಗಲು ಬಂದಿರುವರಂತೆ. ಈಗಲೇ ಬರ-ಬೇಕೆಂದು ಹೇಳುತ್ತಾರೆ!"

"ಉದ್ದರಿ ವಸೂಲಿಗೆ ಬಂದಿರದಿದ್ದರೆ, ಏನು ವಾರೆಂಟು ತಂದಿರುವನೇ—ಈಗಲೇ ಬರಬೇಕೆಂದು ಹೇಳಲು?" ಎಂದು ನುಡಿದೆ.

"ಬೆಳಗ್ಗೆ ಎದ್ದು ಒಳ್ಳೆಯ ಮಾತಾಡಬಾರದೆ? ಯಾರೋ ಅಪರಿಚಿತರು ಬಾಗಿಲಲ್ಲಿ ಕಾದು ನಿಂತಿರುವರು. ಎದ್ದು ಭೆಟ್ಟಿ-ಯಾಗಬಾರದೆ?" ಎಂದು ಅವಳು ಎಚ್ಚರಿಸಿದಳು.

ಎದ್ದು ಬಂದು ನೋಡಿದೆ. ನೀವು ಬಾಗಿಲಲ್ಲಿ ನಿಂತಿರುವುದು ಕಂಡಿತು. ಗಾಬರಿಯಾದೆ. ನೀವು ಬಂದ ಉದ್ದೇಶ ನೀವೇ ತಿಳಿಸಿದಿರಿ. 'ಉಂಗುರ ಮಾರಿ ಬಿಟ್ಟೆ. ಅದು ಇದ್ದ ಸ್ಥಿತಿಯಲ್ಲಿ ಉಳಿದಿಲ್ಲ. ಏನು ಕೊಟ್ಟರೂ ನಿನ್ನೆಯಿದ್ದ ಸ್ಥಿತಿಯಲ್ಲಿ ಉಂಗುರ ದೊರೆಯದು' ಎಂದು ತಿಳಿಸಿದೆ. ಉಂಗುರದಿಂದ ಉಂಟಾದ ಸಮ-ಸ್ಯೆಯ ಸ್ವರೂಪ ಸಂಕ್ಷಿಪ್ತವಾಗಿ ನೀವು ಹೇಳಿದ್ದು ತಿಳಿಯಿತು. 'ಯಾರಗೌರವಕ್ಕೂ ಧಕ್ಕೆ ತಗಲದಂತೆ ಮಾಡುವೆ' ಎಂದು ಹೇಳಿ ನಿಮ್ಮನ್ನು ಕಳಿಸಿದೆ.

ನೀವು ಹೋದ ಮೇಲೆ ನನ್ನ ಮನಸಲ್ಲಿ 'ಮುಂದೇನು?' ಎಂದು ವಿಚಾರ ಮಾಡಿದೆ. ಒಂದು ಸೂಜಿ ಕಳೆದರೂ ಪಾತಾಳ-ಗರಡಿ ಹಾಕಿ ಶೋಧಿಸುವ ಸ್ವಭಾವ ಅನಂತರಾಯರದು. ಉಂಗುರ ಇಂದು ಅವರು ಕೇಳಿದಾಗ ದೊರೆಯದಿದ್ದರೆ, ಅಷ್ಟಕ್ಕೆ ಸುಮ್ಮ-ನಾಗಲಾರರು. ಅದರ ಶೋಧಕ್ಕಾಗಿ ಭೂಮಿ ಆಕಾಶ ಒಂದು ಮಾಡುವರು. ಶಾರದಾದೇವಿ ಈಗ, ಗೋಪೂ ಒಯ್ದಿರುವನೆಂದು ಸುಳ್ಳು ಹೇಳಿ ಬಿಟ್ಟಿರುವಳು. ಅವಳು ಅದಕ್ಕೇ ಅಂಟಿಕೊಳ್ಳದೆ ವಿಧಿ ಇಲ್ಲ. ಗೋಪೂ! ಪಾಪಸ್ಥಿ ಪರದೇಶಿ ಹುಡುಗ! ವ್ಯರ್ಥ ಪ್ರೈಮರಿ ಹೊಡೆತ ತಿನ್ನಬೇಕಾಗುವುದು. ಅವನು ತಾನು ಉಂಗುರ ನೋಡಿಲ್ಲೆಂದು ಅಳಹತ್ತುವನು. ನಿನ್ನೆ ಅವನು ಯಾರೊಡನೆ ನಾಟಕ ನೋಡಲು ಹೋಗಿದ್ದನೋ ಅವರ ಸಾಕ್ಷಿ! ಉಂಗುರ ಅವನ ಬಳಿಯಲ್ಲಿರಲಿಲ್ಲವೆಂದು ಹೇಳುವರು. ಶಾರದಾದೇವಿಯ ಮೇಲೆ ರಾಯರ ಸಂಶಯ ಬರುವುದು. ಹಿಂದೆ ಗೋಪೂನ ತಾಯಿ ಜಾನಕಿಬಾಯಿ, ಒಂದು ಬೆಳ್ಳಿಯ ಬಟ್ಟಲ ಕಳೆದ ತಪ್ಪಿಗೆ, ನಾಯ-ಕರ ಕಾಟಕ್ಕೆ ಬೇಸತ್ತು ಆತ್ಮಹತ್ಯ ಮಾಡಿಕೊಂಡಂತೆ ಮತ್ತೊಂದು ದುರಂತ ಸಂಭವಿಸಿದರೆ? ರಾಮಾಚಾರಿ ನಾನು ಉಂಗುರ ಮಾರಿದ್ದು ನೋಡಿರುವನು. ನಾಯಕರಿಗೆ ಹೇಳದೆ ಇರಲಾರ. ಆಗ ಪೋಲೀ-ಸರ ಕಡೆಗೆ ಪ್ರಕರಣ ಹೋಗುವುದು. ಅದು ಹ್ಯಾಗೆ ನನಗೆ ಸಿಕ್ಕಿತು ಎಂಬುದನ್ನು ನಾನು ಆಗ ಹೇಳಲೇ ಬೇಕಾಗುವುದು. ನನಗೆ ಗೋವಿಂದರಾಯರು ಕೊಟ್ಟಿದ್ದರೆಂದು ಹೇಳಿದರೆ, ಯಾರು ನಂಬು-ವರು? ಹೀಗೆ ಹೇಳುವುದರಿಂದ ನಾನು ಗೋವಿಂದರಾಯನಿಗೆ ಕೃತಘ್ನನಾಗುವೆ. ಇಷ್ಟೇ ಅಲ್ಲ, ಗೋವಿಂದರಾಯ ಹಾಗೂ ಶಾರ-ದಾದೇವಿ ಇವರಿಬ್ಬರ ಗೌರವಕ್ಕೆ ಧಕ್ಕೆ ಬರುವುದು. ಶಾರದಾ-ದೇವಿಯ ಸಂಸಾರ ಹಾಳುಮಾಡಿದಂತಾಗಬಹುದು. ಅವರಿಬ್ಬರಿಗೂ ಧಕ್ಕೆ ತಟ್ಟಿದರೂ ನಾನೂ ಸುರಕ್ಷಿತ ಉಳಿಯಲಾರೆ. ಈಗ ಸುಮ್ಮನೆ ಕುಳಿತರೆ, ಮೂವರಿಗೂ ಅಪಾಯ ಖಂಡಿತ. ಈಗಲೇ ಸತ್ಯಹೇಳಿ-ದರೆ ನಾನು ಬದುಕಬಹುದು; ಆದರೆ ನನಗೆ ಉಪಕಾರಮಾಡಿದ ಗೋವಿಂದರಾಯನಿಗೆ ದ್ರೋಹ ಬಗೆದಂತಾಗುವುದು. ಉಂಗುರ ನಾನು ಗೋಪೂನಿಂದ ತಕ್ಕೊಂಡೆನೆಂದು, ಗೋಪೂನನ್ನು ಕೇಳುವ ಮೊದಲೇ ಹೇಳಿಬಿಟ್ಟರೆ, ಹಣ ಮರಳಿಕೊಟ್ಟು ಕ್ಷಮೆಕೇಳಿದರೆ, ಏನೋ ನಾಯಕರು ಕ್ಷಮಿಸಿಬಿಟ್ಟರೂ ಬಿಡುವ ಸಂಭವವಿದೆ. ಕ್ಷಮಿಸದಿದ್ದರೆ ನಾಳೆಗೆ ಬರುವ ಆರೋಪದ ಫಲವನ್ನು ಇಂದೇ ಅನುಭವಿಸಬೇಕಾಗುವುದು. ನನ್ನಂಥ ಬಡವರಿಗೆ ಉಪಕಾರ-ಮಾಡುವ ಗೋವಿಂದರಾಯನಿಗೆ ದ್ರೋಹ ಬಗೆಯಲಾರೆ. ನನ್ನ ಮೇಲೆ ಉಂಗುರದ ಹೊಣೆಯಿದೆ. ಅದನ್ನು ಮುರಿಸಿ ಮಾರಿರದಿ-ದ್ದರೆ, ಈ ಪಿಕಲಾಟ ಬರುತ್ತಿರಲಿಲ್ಲ. ದೇವರು ನನ್ನ ಸತ್ತ್ವಪರೀಕ್ಷೆಗೆ ಈ ಜಾಲ ಒಡ್ಡಿರುವನು. ದೇವರು ಮೆಚ್ಚುವಂತೆ ವರ್ತಿಸ-ಬೇಕು.—ಎಂದು ಒಂದು ನಿರ್ಧಾರಕ್ಕೆ ಬಂದೆ.

ಅವಸರದಿಂದ ಪ್ರಾತರ್ವಿಧಿ ತೀರಿಸಿಕೊಂಡು, ನಾಯಕರ ಮನೆಗೆ ಹೊರಟುನಿಂತೆ. "ಅಪ್ಪಾ, ಇಂದ ನಮಗ ಅಂಗೀ ಹೊಲಿಸುವೆಯಾ? ನನಗೆ ಪುಸ್ತಕ ತರುವೆಯಾ?" ಎಂದು ಮಕ್ಕಳು ಒಂದೊಂದೇ ಕೇಳಹತ್ತಿದುವು. ಅವಳು ಹೊರಸಿನ ಮೇಲೆ ಕುಳಿತುಕೊಂಡಿದ್ದಳು: "ಕೂಸಿಗೆ ಮುರುವು ಮಾಡಿಸಲು ಪತ್ತಾರ ರಾಮಚಂದ್ರನಿಗೆ ಹಾಕಿಬರ್ರಿ! ನಾಡಿದ್ದು ತಾರೆಯ ಹುಟ್ಟಿದ ದಿನ. ಅರಿವೀತೊಂಡು ಪುಕಾರ ಹೊಲಿಸಲು ಕೊಟ್ಟು ಬರ್ರಿ. ಮನೆಗೆ ಬೇಕಾಗುವ ಸಾಮಾನಿನ ಯಾದೀಮಾಡಿಕೊಂಡು ಹೋಗಿರಿ. ಬೇಲಾ ಬಿಟ್ಟೀ ನಡೆದಿರಲ್ಲಾ! ನಾ ಹೇಳಿದ್ದು ಕೇಳಿಸ-ದವರಂತೆ—ಹೀಗ್ಯಾಕೆ—ಅವಸರದಿಂದ ಎಲ್ಲಿಗೆ ಹೊರಟಿರುವಿರಿ?" ಎಂದು ಕೇಳುತ್ತಿರಲು, ಅಲ್ಲಿ ನಿಲ್ಲುವುದಾಗಲಿಲ್ಲ. ಮನೆ ಬಿಟ್ಟು ಹೊರಟೇ ಬಿಟ್ಟೆ.

ನಾಯಕರ ಮನೆ ಮುಟ್ಟಿದಾಗ, ಶಾರದಾದೇವಿ ಹೊಸ್ತಿಲ ಸಾರಿಸಿ ರಂಗವಲ್ಲಿ ಹಾಕುತ್ತಿದ್ದಳು. ನನ್ನನ್ನು ನೋಡಿ "ಇಷ್ಟು ಬೇಗ ಬಂದಿರಿ?" ಎಂದು ಕೇಳಿದಳು "ಕೆಲಸವಿತ್ತು" ಎಂದು ಹೇಳಿ, ಲೆಕ್ಕದ ಪುಸ್ತಕ ಬಿಚ್ಚಿ ಕುಳಿತೆ. ನಾಯಕರು ಒಳಗೆ ಉಪಃ

ಪಾನಕ್ಕೆ ಕುಳಿತರು. ನನ್ನ ತಲೆಯಲ್ಲಿ ವಿಚಾರ ಚಕ್ರ ಬೇಡ-ವೆಂದರೂ ತಿರುಗುತ್ತಿತ್ತು. "ಧೈರ್ಯ ಮಾಡಬೇಕು; ಎರಡನೆಯ-ವರ ಮಾನರಕ್ಷಣೆಗಿಂತಲೂ ನನ್ನ ಮರ್ಯಾದೆ ಉಳಿಯುವ ಸಂಭವ ತೋರುವ ಒಂದೇ ದಾರಿ....ಉಂಗುರ ನಾನು ತಕ್ಕೊಂಡೆನೆಂದು ಹೇಳಿ ಕ್ಷಮೆ ಕೋರಬೇಕು. ಕ್ಷಮಿಸದಿದ್ದರೆ ಸೆ...ರೆ...ಮ...ನೆ! ಈ ವಿಚಾರ ಬರಲು ಹೆಂಡತಿ, ಮಕ್ಕಳು, ಅವರ ದಾರುಣವಾದ ಪರಿಸ್ಥಿತಿ ಚಿತ್ರ ಕಣ್ಮುಂದೆ ನಿಂತಿತು. ಇವರ ಗತಿ ಏನು? ನನ್ನ ಮನಸ್ಸು ಅಧೀರವಾಯಿತು. ನಾನೆಷ್ಟು ದುರ್ದೈವಿ? ಕೈಗೆ ಬಂದ ಹಣದಲ್ಲಿ ಬಿಡಿ ಕಾಸನ್ನೂ ಬಳಸುವ ಮೊದಲೇ ಈ ಪರಿಸ್ಥಿತಿ! ದೇವರು ರಕ್ಷಿಸಬೇಕು. ನಾಳೆ ನಾನು ರೋಗ ಬಂದು ಕಣ್ಣು ಮುಚ್ಚಿದರೆ? ದೇವರೇ ಕಾಪಾಡುವನಷ್ಟೇ? ಈಗಲೂ ಅವನ ಮೇಲೆ ಭಾರ ಹಾಕಿ ಕ್ಷಮೆ ಕೇಳಬೇಕು. ನಾಯಕರು ಒಂದು ವೇಳೆ ಕ್ಷಮಿಸಿದರೆ! ಗೋವಿಂದರಾಯ, ಶಾರದಾದೇವಿ, ಗೋಪು ಮೂವರ ತೊಂದರೆ ತಪ್ಪುವುದು. ನನಗೂ ಕರ್ತವ್ಯಮಾಡಿದ ಶಾಂತಿ ಲಭಿಸುವುದು!" ಎಂದು ವಿಚಾರಪ್ರವಾಹ ಸಾಗಿತ್ತು. ಕಣ್ಣೀರು ಧಾರೆಯಾಗಿ ಹೊರಗೆ ಬರಲು ಹವಣಿಸುತ್ತಿದ್ದುವು. ಇತರರಿಗೆ ಮುಖ ಕಾಣದಿರಲೆಂದು ಲೆಕ್ಕದ ಪುಸ್ತಕ ಮುಖದೆದುರು ಹಿಡಿದು ಕುಳಿತೆ.

" ಪಾಪ! ಕೃಷ್ಣಪ್ಪ ಬಂದು ಬಹಳ ಹೊತ್ತಾಯಿತು. ನಿನ್ನೆ ನೀವು ಹಣ ಕೊಡಲಿಲ್ಲ ಕಾಣುತ್ತದೆ ಮನಸ್ಸಿಗೆ ಬಹಳ ತ್ರಾಸ ಮಾಡಿಕೊಂಡಿರಬೇಕು. ಮುಖ ತೀರ ಬಾಡಿ ಹೋಗಿದೆ " ಎಂದು ಶಾರದಾದೇವಿ ನುಡಿದದ್ದು ಕೇಳಿ ನಾಯಕರು " ನಾಲ್ಕು ದಿನ ತಡೆಯಲು ಹೇಳಿದೆ. ತಪ್ಪೇನು? ಕೇಳಿದಾಗ ಹಣ ಕೈಯಲ್ಲಿ ಹಿಡಿದು ದೇವರಿಗೂ ನಿಲ್ಲುವುದಾಗದು. ಗೋಪೂ ಇನ್ನೂ ಎದ್ದಿಲ್ಲ ಕಾಣುತ್ತದೆ? ಎಬ್ಬಿಸಬಾರದೆ? ಉಂಗುರಾ ತೆಗೆದು ಇಡಬೇಕಾಗಿದೆ!" ಎಂದರು ನಾಯಕರು.

" ಉಂಗುರ ಅವನ ಹತ್ತಿರ ಇಲ್ಲ! "

" ಅವನ ಹತ್ತಿರವೂ ಇಲ್ಲ. ನಿನ್ನ ಹತ್ತಿರವೂ ಇಲ್ಲ! ಹೋಯಿತೆಲ್ಲಿ ಅದು? "

" ಅವನು ಎಲ್ಲಿ ಇಟ್ಟಾನೆ ಎಂಬುದನ್ನು, ರಮಿಸಿ ಕೇಳಿ ತಂದು ಕೊಡುತ್ತೇನೆ. "

" ಹೀಗೆ ರಮಿಸಿದರೆ, ಮುಂದೆ ಅವನು ಕೈಗೆ ಹತ್ತಲಿಕ್ಕಿಲ್ಲ. ನಾನು ಮಾತಾಡಿಸುವೆ; ಚೆನ್ನಾಗಿ ಮಾತಾಡಿಸುವೆ! ಗೇಣು ತಾನು, ಹಟ ಮಾಡಿ ಉಂಗುರ ಒಯ್ಯುತ್ತಾನೆ." ಎಂದವರೇ ನಾಯಕರು ಉಲುಪೆಯ ಬಡಿಗೆ— ಮೂಲೆಯಲ್ಲಿದ್ದದಕ್ಕೆ- ಕೈ ಹಾಕಿ, ಗೋಪೂ ಮಲಗಿದ ಕೋಣೆಗೆ ಹೋಗಲು ಹೊರಟರು.

ಅವರು ಗೋಪೂನನ್ನು ಹಿಂಸಿಸುವುದು ಖಂಡಿತ. ಅವರ ಆ ಭಾವಭಂಗಿ ನೋಡಿ, ಅವರನ್ನು ತಡೆಯಲು " ನಾ-ಯ-ಕ-ರೆ " ಎಂದು ಕರೆದೆ. ನನ್ನ ಧ್ವನಿಯು ಗುರುತು ಸಿಗದಷ್ಟು ಹತ್ತುದಷ್ಟು ಅದು ನಡುಗುತ್ತಿತ್ತು.

" ಇನ್ನೂ ವ್ಯವಹಾರ ಪ್ರಾರಂಭವಾಗಿಲ್ಲ. ಏನಾದರೂ ವಸೂಲು ಬಂದರೆ ಒಯ್ಯುವೆಯಂತೆ ನಾಲ್ಕುರೂಪಾಯಿ!" ಎಂದು ನಾಯಕರು ಮುಂದೆ ನಡೆದರು. "ಅ ದ... ಕಲ್ಲರೀ ನಿಮ್ಮ ಉಂಗುರ..." ಮುಂದೆ ಮಾತು ಹೊರಡಲಿಲ್ಲ.



"ಆ ಏನೆಂದಿ ?" ಎಂದು ಚೇಳಿಗೆ ಹಾವಿನಂತೆ ನಾಯಕರು ನನ್ನೆಡೆಗೆ ಜಿಗಿದರು.

"ಏನು ? ಏನು ಮಾಡಿರುವಿ ಹೇಳು!" ಎಂದು ಕೇಳಿದರು.

"ಉಂಗುರ ನನ್ನ ಕೈಗೆ ಸಿಕ್ಕಿತ್ತು. ಗರಜು ಇತ್ತು, ಮಾರಿದೆ!"

"ಬದ್‌ಮಾಷ್; ಸಿಕ್ಕಿತಂತೆ—ಮಾರಿದನಂತೆ! ಸಿಕ್ಕಿದ್ದರೆ ನನಗೆ ತಂದು ಕೊಡುವೆ. ಹೇಳದೆ ಕೇಳದೆ ಮಾರುವ ಅವಸರವೇನಿತ್ತು ? ಎಳೆಯ ಮಗುವಿನ ಕೈಯಲ್ಲಿದ್ದ ಉಂಗುರ ಕಳವು ಮಾಡಿ, ಸಿಕ್ಕಿತೆಂದು ಹೇಳುವಿಯಾ ?"

"ಬಡತನ ಕೆಟ್ಟ..ದ್ದು. ಅದು ಸಜ್ಜನರನ್ನೂ ಕಳ್ಳರನ್ನಾಗಿ ಮಾಡುವುದು" ಎಂದು ಕಣ್ಣೀರು ಒರಸಿಕೊಂಡೆ.

"ಬಡತನವೆಂದು ಕಳವು ಮಾಡಬೇಕೆ ? ಅದೂ ಮಗುವಿನ ಕೈಯಲ್ಲಿದ್ದುದನ್ನು? ನನ್ನ ಉಪ್ಪು ಉಂಡ ಉಪಕಾರ ತೀರಿಸಿದೆ. ನಿನ್ನ ನೀಚಕೃತಿ ತಿಳಿಯದೆ, ವ್ಯರ್ಥ ಗೋಪೂನ ಚರ್ಮ ಸುಲಿಯುತ್ತಿದ್ದೆ"

"ಅಂತೆಯೇ ತಪ್ಪು ಒಪ್ಪಿಕೊಂಡಿರುವೆ—ಕ್ಷಮಾ"

"ನಿನ್ನಂಥ ಕಳ್ಳ, ವಿಶ್ವಾಸಘಾತುಕ, ಸ್ವಾಮಿದ್ರೋಹಿಗೆ ಕ್ಷಮೆ?" ಎಂದು ನಾಯಕರು ಹಲ್ಲು ಕಡಿದರು.

"ನಿಮ್ಮ ಗೋಪು ತಪ್ಪು ಮಾಡಿದರೆ ಕ್ಷಮಿಸುತ್ತಿರಲಿಲ್ಲವೆ ! ಏನೋ ಉಂಗುರ ಕೈಗೆ ಬಂದಿತು. ದುರ್ದೈವ ! ಮಾರಿಕೊಂಡೆ. ಹಣ ಕೊಡುವೆ. ಒಂದು ಕಾಸೂ ವೆಚ್ಚ ಮಾಡಿಲ್ಲ !"

"ಗೋಪೂ ತಪ್ಪು ಮಾಡಿದರೆ ಕ್ಷಮಿಸುವೆನೆಂದು, ಅವನ ಹತ್ತಿರ ಇದ್ದ ಉಂಗುರ ಕದಿಯುವ ಯುಕ್ತಿ ಹೂಡಿದೆಯಾ ? ಪಾಪಕ್ಕೆ ಪ್ರಾಯಶ್ಚಿತ್ತ ಆಗಲೇ ಬೇಕು. ಹೀಗೆ ಕಪಟ ಕಣ್ಣೀರು ಸುರಿಸುವುದನ್ನು ನೋಡಿ ಮನಸ್ಸು ಕರಗುವಷ್ಟು ಅಳ್ಳೆದೆಯವನು ನಾನಾಗಿದ್ದರೆ, ಅತ್ತು ಕರೆದು ನಿನ್ನಂಥವರು ನನ್ನ ಸಾವುಕಾರಿಕೆ ಸಂಪುಷ್ಟ-ಕ್ಷೀಣಿಸಿಬಿಟ್ಟಾರು. ಮೊದಲು ಹಣ ಎಲ್ಲಿದೆ ಹೇಳು !" ಎಂದು ನಾಯಕರು ಕೈ ಚಾಚಿದರು.

ಕಿಸೆಯಲ್ಲಿ ಕೈಹಾಕಿ ಹಣ ತೆಗೆಯುತ್ತಿರಲು "ಎಲ್ಲಿ ಮಾರಿದೆ ಉಂಗುರವನ್ನು ?" ಎಂದು ನಾಯಕರು ಗರ್ಜಿಸಿದರು.

"ಪ್ರಭುಚಂದ ಮಾರವಾಡಿಯಲ್ಲಿ" ಎಂದು ಹೇಳಿ, ಹಣ ಅವರ ಮುಂದಿಟ್ಟೆ. "ಹೋ. ಒಳ್ಳೇ ಗಿರಾಕಿ. ಕಳವಿನ ಒಡವೆ ಕೊಳ್ಳುವನೆಂದೇ ಮಾರವಾಡಿ ಅತಿ ಬಡ್ಡಿ ದರದಿಂದ ಸಾಲ ಕೊಡುವನು. ನನ್ನ ಸಾವ್ಕಾರಿಕೆಗೆ ಕಂಟಕನಾಗಿದ್ದ ಮಾರವಾಡಿ ಇನ್ನು ಬದುಕಲಿ !" ಎಂದು ಅವಸರಗಟ್ಟಿ ನಾಯಕರು ಏನೋ ಬರೆಯಹತ್ತಿದರು. "ಈ ಕಳ್ಳ, ಕಳವಿನ ಒಡವೆ ಕೊಂಡ ಆ ಮಾರವಾಡಿ ಇಬ್ಬರ ಬಣ್ಣವೂ ಬಯಲಿಗೆ ಬೀಳಲಿ! ಸಿದ್ದ್ಯಾ, ಫೌಜದಾರ ಕಚೇರಿಗೆ ಹೋಗಿ ಈ ಕಾಗದ ಕೊಟ್ಟು ಬಾ" ಎಂದು ಎದ್ದರು.

"ಫೌಜದಾರರ ಕಡೆಗೆ ಯಾಕರಿ ? ಇದೊಂದು ಸಾರಿ ನನ್ನ ತಪ್ಪು ಕ್ಷಮಿಸಿರಿ" ಎಂದು ನಾನು ನಾಯಕರ ಕಾಲಿಗೆ ಬಿದ್ದೆ.

"ಕ್ಷಮಾಗುಣ ನನ್ನ ಸ್ವಭಾವವಲ್ಲ. ಕಾಲು ಹಿಡಿಯಲು ನಾನೇನೂ ದೇವರಲ್ಲ. ಮಾಡಿದ್ದು ಉಣ್ಣಬೇಕು. ಬಿಟ್ಟದ್ದಲ್ಲ" ಎಂದು ನನ್ನನ್ನು ದೂಡಿ, ಸಿದ್ದನ ಕೈಗೆ ಚೀಟಿ ಕೊಟ್ಟು ಕಳಿಸಿದರು. ಮನಸ್ಸು ಅಧೀರವಾಗಿ ನಡುಗು ಹುಟ್ಟಿತು.

ಶಾರದಾದೇವಿ ಅಡುಗೆಮನೆ ಬಾಗಿಲಲ್ಲಿ, ಕಣ್ಣೀರು ತುಂಬಿ ನನ್ನನ್ನು ನೋಡುತ್ತ ನಿಂತಿದ್ದಳು. "ನನ್ನ ಮರ್ಯಾದೆ ಕಾಪಾಡು" ಎಂದು, ಅವಳ ಕಣ್ಣುಗಳು ದರಿದ್ರನಾದ ನನ್ನಲ್ಲಿ ಯಾಚಿಸುತ್ತಿರುವಂತೆ, ಅವಳ ದೃಷ್ಟಿ ಕನಿಕರ ಪಡುವಂತಹದಾಗಿತ್ತು. ಸತ್ಯ ಹೇಳಿದರೆ ಇವಳ ಗತಿ ? ನಾಯಿಗಿಂತಲೂ ಇವಳ ಬಾಳು ಹಾಳು. ಭಾವನಾವಶಳಾಗಿ ಏನೋ ಮಾಡಿ, ಹೇಳುವ ಧೈರ್ಯವಿಲ್ಲದೆ ಬಳಲುತ್ತಿರುವಳು. ನನ್ನ ಮಗಳು ಸುಶೀಲೆಯು ಇಂಥ ಪರಿಸ್ಥಿತಿಯಲ್ಲಿದ್ದರೆ ? ಕ್ಷಮಾಯಾಚನೆಗೆ ಅಲ್ಪರಿವ ನಾನು, ಅವಳ ತಪ್ಪನ್ನು ಕ್ಷಮಿಸಬೇಡವೆ ? ಅಧೀರವಾದ ಮನಸ್ಸಿಗೆ ಧೀರತೆ ತಂದುಕೊಂಡೆ. ಪೋಲೀಸರು ಬಂದರು; ಪಂಚನಾಮೆ ನಡೆಯಿತು. ಚಿನ್ನದ ಚಿಕ್ಕ ತುಂಡು ಅದರಲ್ಲಿ ಸೇರಿತು. ನಾನು ಕಳ್ಳನಾದೆ. ಕಳವು ಮಾಡಿದ್ದೆ ಎಂದು ಹೇಳಿ ಬಿಟ್ಟೆ. ಮುಂದಿನ ಕತೆ ನಿಮ್ಮ ಎದುರಿನಲ್ಲಿ ನಡೆದದ್ದು. ನನ್ನ ಸ್ಥಾನದಲ್ಲಿ ನೀವು ಇದ್ದರೂ ಇದೇ ನಿರ್ಣಯಕ್ಕೆ ಬರುತ್ತಿದ್ದಿರಿ !"

ವಿಜಯ, ಪುಸ್ತಿಕೆ ಮುಚ್ಚಿ ಕರವಸ್ತ್ರದಿಂದ ಕಣ್ಣು ಒರಸಿಕೊಂಡನು.

"ವಿಜಯ, ಏಕೆ ಈ ಕಣ್ಣೀರು ? ನಿನ್ನ ತಂದೆ ಮಹಾತ್ಮನು. ಜಗತ್ತು ಅರಿಯದು. ನನ್ನ ಮರ್ಯಾದೆ ಉಳಿಸಿಕೊಳ್ಳಲು, ಅವನ ಹೆಸರಿಗೆ ಹತ್ತಿದ ಕಲಂಕ ತೊಳೆಯಲು ಹಿಂಜರಿದ ನಾನು ಕ್ಷುದ್ರನು. ನನ್ನನ್ನು ತ್ಯಾಗವೀರನೆಂದು ಜನತೆ ಮಂತ್ರಿಪದಕ್ಕೇರಿಸಿದರೂ ನನಗೆ ಸಮಾಧಾನವಿಲ್ಲ. ಕೃಷ್ಣಪ್ಪನಿಗೆ ಅಲ್ಲದೆ ಅವನ ಮಗನಿಗೆ ದ್ರೋಹ ಬಗೆದ ಪಾಪ ಒಳಗೆ ಕೊರೆಯುತ್ತಿದೆ" ಎಂದು ಗೋವಿಂದರಾಯರು ವಿಜಯನನ್ನಪ್ಪಿದರು.

"ನನಗೆ ಅಧಿಕಾರಸ್ಥಳ ಸಿಕ್ಕಲಿಲ್ಲೆಂದು ದುಃಖವಿಲ್ಲ. ನನ್ನ ತಂದೆಯ ಆತ್ಮದರ್ಶನ ಮಾಡಿಸಿದಿರಿ. ಇಷ್ಟೇ ಸಾಕು. ಆದರೆ ನನ್ನ ತಂದೆ ಎಂಥ ದುರ್ಭಾಗ್ಯ ? ನನಗೆ ಮುರುವು ಮಾಡಿಸಿ ಇಟ್ಟು ಸಂತೋಷ ಪಡಬೇಕೆಂಬ ಚಿಕ್ಕ ಆಶೆಯನ್ನು ಪೂರ್ತಿಗೊಳಿಸಲು ಎಂಥ ಬಲಿದಾನ ! ಅವನ ದುರ್ಭಾಗ್ಯ ನನ್ನ ಭಾಗ್ಯವಾಗಬೇಕೆ ?" ಎಂದು ವಿಜಯ ಅತ್ತುಬಿಟ್ಟನು.

ಹೊಸಬಾಳಿನ ಕೈದೀವಿಗೆ—ವಿಜ್ಞಾನ

(ವಿಚಾರ ಪ್ರಚೋದಕ ಪ್ರಬಂಧ)

ಪ್ರೊ. ನಾರಾಯಣ ಜಿ. ಕಟ್ಟಿ, ಬಿ.ಎಸ್‌ಸಿ. (ಆನರ್ಸ್), ಬಿ.ಎಸ್‌ಸಿ. (ಟೆಕ್) ಕೊಲ್ಹಾಪುರ

★

ಯೋಗ್ಯಮಾರ್ಗದಿಂದ ಜ್ಞಾನವನ್ನು ಸಂಶೋಧಿಸುವುದೇ ವಿಜ್ಞಾನದ ಮೂಲಸ್ವರೂಪ. ಜನರು ಸ್ವಾರ್ಥಮೋಹಗಳಿಂದ ವಿಜ್ಞಾನದ ದುರುಪಯೋಗ ಮಾಡಿಕೊಂಡರೆ, ಅದು ವಿಜ್ಞಾನದ ತಪ್ಪಲ್ಲ; ಜನರ ತಪ್ಪು. ವಿಜ್ಞಾನವೆಂಬುದು ವಿಶ್ವಸತ್ಯದ ಕಂಡುಹಿಡಿದ ಭಾಗದ ತಿಳಿವಳಿಕೆ!

★

ನಮ್ಮಲ್ಲಿ ಅನೇಕರು ಎಷ್ಟೋ ವರ್ಷಗಳವರೆಗೆ ವಿಜ್ಞಾನದ ಅಭ್ಯಾಸವನ್ನು ಮಾಡಿದರೂ, ಸಂಶೋಧನೆಯಿಂದ ನವೀನ ಜ್ಞಾನವನ್ನು ಸಂಪಾದಿಸಿದರೂ, ವಿಜ್ಞಾನದ ಮಾರ್ಗದ ನಿಜವಾದ ಅರ್ಥವನ್ನು ಅರಿಯದೆ ಹೋಗುತ್ತಾರೆ. ಇನ್ನು ಕೆಲವರು, ಪ್ರಯೋಗಶಾಲೆಯಲ್ಲಿ ವಿಜ್ಞಾನದ ರೀತಿಯನ್ನು ಅವಲಂಬಿಸಿದರೂ, ದಿನದ ಬಾಳಿನಲ್ಲಿ ತೀರಾ ಅಶಾಸ್ತ್ರೀಯವಾಗಿ ವರ್ತಿಸುವುದನ್ನು ನೋಡುತ್ತೇವೆ. ಪ್ರಯೋಗಶಾಲೆಯ ಹೊರಗೆ ನಮ್ಮ ವಿಚಾರಗಳೂ, ಮತಪಂಥಗಳೂ ಕೌಶಲ್ಯದಿಂದ ಮರೆಮಾಚಿದ ಅಭಿಲಾಷಾ-ಪೂರ್ತಿ (Wish fulfilments)ಗಿಂತ ಬೇರೆಯಾಗಿರುವುದಿಲ್ಲ. ಪರಲೋಕದಲ್ಲಿ ಸುಖದ ಆಮಿಷವನ್ನು ತೋರುವ ಧರ್ಮ, ಉಳಿದವರಿಗಿಂತ ನಾವು ಶ್ರೇಷ್ಠರೆಂದು ನಂಬುವ ರಾಜಕೀಯ ತತ್ತ್ವಜ್ಞಾನ, ದರಿದ್ರರಿಂದ ನಮ್ಮ ಸಂಪತ್ತಿಯನ್ನು ಸಂರಕ್ಷಿಸುವ ನ್ಯಾಯಪದ್ಧತಿ, ನಮ್ಮ ಸ್ವಾರ್ಥಮೂಲ ವರ್ತನೆಯನ್ನು ಎತ್ತಿಹಿಡಿಯುವ ನೀತಿಶಾಸ್ತ್ರ ಇವಕ್ಕೇ ಗಂಟುಬೀಳುತ್ತೇವೆ.

ವಿಜ್ಞಾನವನ್ನು, ಹುಚ್ಚರಂತೆ ಹೌಹಾರಿ ‘ ಇದೇನೋ ಅದ್ಭುತವಾಗಿದೆ ’ ಎನ್ನುವ ರೀತಿಯಲ್ಲಿ ನೋಡುವವರೇ ಬಹಳ ಜನ. ಗೂಢರಮ್ಯತೆಗೆ ತಲೆಬಾಗುವ ಅಥವಾ ತಲೆದೂಗುವವರನ್ನು ಮೆಚ್ಚಿಸುವ ಚಿಲ್ಲರೆ ಚಮತ್ಕಾರ ಮತ್ತು ಬಂಗಾಲೀ ಜಾದೂಗಳಂತೆಯೇ ಅದ್ಭುತ ಸೃಷ್ಟಿ ವಿಜ್ಞಾನದ್ದು—ಎಂದು ತಿಳಿಯುವವರ ಸಂಖ್ಯೆ ಕಡಿಮೆಯಿಲ್ಲ. ಘಟಸ್ಫೋಟದ ಪತ್ರಿಕಾವಾರ್ತೆ, ಅನೈತಿಕ ಸಂಬಂಧ ಅಥವಾ ಗೂಢಕೊಲೆಗಳಲ್ಲಿ ಕುತೂಹಲ ತೋರುವಂತೆ, ವಿಜ್ಞಾನದ ಪ್ರಗತಿಯಲ್ಲಿಯೂ ಅದೇ ಪರಿಯ ಆಸ್ಥೆ ವಹಿಸುತ್ತೇವೆ. ಜನಸಾಮಾನ್ಯರು ಮೆಚ್ಚುವ ಯಾವ ಪತ್ರಿಕೆಯನ್ನು ಪರಿಶೀಲಿಸಿದರೂ, ಇದರ ಸತ್ಯತೆಗೆ ಪುಷ್ಟಿ ದೊರೆಯುತ್ತದೆ. ಅಮರತ್ವವನ್ನು ಸಿದ್ಧಿಸುವ ಅಮೃತ, ಮುಟ್ಟಿದ್ದನ್ನು ಹೊನ್ನು ಮಾಡುವ ಸ್ಪರ್ಶಶಿಲೆ ಇವುಗಳ ಬೆನ್ನುಹತ್ತುವ ಯುಗದಲ್ಲಿಯೇ ನಾವಿನ್ನೂ ಬಾಳುತ್ತಿದ್ದೇವೆ.

ತಿಳಿಗೇಡಿ ಜನರಷ್ಟೇ ಅಲ್ಲ, ಬಲ್ಲವರು ಕೂಡ ಔದ್ಯೋಗಿಕ ನಿರ್ಮಿತಿ, ಪ್ರವಾಸಸಾಧನ, ಶಿಕ್ಷಣ ಮತ್ತು ನಮ್ಮ ದೈನಂದಿನ ಜೀವನಗಳಲ್ಲಿ ಪ್ರಚಂಡ ಕ್ರಾಂತಿಯನ್ನು ಮಾಡಿದ ವಿವಿಧ ಶೋಧಗಳೆಂದರೇ ವಿಜ್ಞಾನವೆಂದು ನಂಬುತ್ತಾರೆ. ಅನೇಕ ಅನನುಕೂಲತೆ, ಸಂಕಟಗಳನ್ನೆದುರಿಸುತ್ತ ವಿಜ್ಞಾನಿಯು ವರ್ಷಾನುವರ್ಷ ಪ್ರಯೋಗಶಾಲೆಯಲ್ಲಿ ಹೇಗೆ ದುಡಿಯುತ್ತಾನೆಂಬುದರ ಅರಿವೇ ಅವರಿಗಿರುವುದಿಲ್ಲ.

ಬಾಳು-ಬದುಕುಗಳನ್ನು ಕ್ರೂರವಾಗಿ ಹಾಳುಗೆಡಹುವ ಭೀಕರ ಶಸ್ತ್ರಾಸ್ತ್ರಗಳನ್ನು ಒದಗಿಸುವ ಸಾಧನವೆಂದು, ವಿಜ್ಞಾನವನ್ನು ನಿಂದಿಸುವವರ ಇನ್ನೊಂದು ತಂಡವಿದೆ. ಅಣುಬಾಂಬಿನ ಪ್ರಯೋಗದ ನಂತರ, ಈ ರೀತಿಯಾಗಿ ದೂಷಿಸುವವರಿಗೆ ಇನ್ನಷ್ಟು ಬಲ ಬಂದಿದೆ. ಮಾನವತೆಯ ವಿರುದ್ಧ ಘಟಿಸಿದ ಈ ಪಾತಕದಿಂದ ವಿಜ್ಞಾನಿಯು ಪೂರಾ ನಿರ್ದೋಷಿಯೆಂದು ಮುಕ್ತನಾದಾನೆಂದು ನಾನೂ ನಂಬುವುದಿಲ್ಲ. ವಿಜ್ಞಾನದ ಫಲಗಳು ಯಾವಾಗಲೂ ಸವಿಯಾಗಿರುವುದಿಲ್ಲವೆನ್ನುವುದು ನಿಜ; ಆದರೆ ಹಳೆಯ ಸಂಪ್ರದಾಯಗಳು, ಅಂಧಶ್ರದ್ಧೆ, ಜೀರ್ಣಮತಗಳು, ರಾಷ್ಟ್ರ-ರಾಜ್ಯಗಳ ಕಲ್ಪನೆಗಳು ಇವುಗಳಿಗೆ ಕಟ್ಟುಬಿದ್ದು ನಾವು, ವಿಜ್ಞಾನದ ಪ್ರಗತಿಯ ಮೂಲಕ ಭರದಿಂದ ಬದಲಿಸುವ ಜಗತ್ತಿನಲ್ಲಿ ಬಾಳಲು ಅಯೋಗ್ಯರಾಗಿದ್ದೇವೆ ಎನ್ನುವುದೂ ನಿಜವಲ್ಲವೆ? ನಮ್ಮ ಬದುಕಿನ ರೀತಿ ವಿಜ್ಞಾನಶೋಧನಗಳಿಂದ ಮಾರ್ಪಟ್ಟಿದ್ದರೂ, ಬಾಳಿನ ನೆಲೆ ಮಾರ್ಪಟ್ಟಿಲ್ಲ. ನಮ್ಮ ವಿಚಾರಗಳು, ನಮ್ಮ ಜೀವನದೃಷ್ಟಿ ಇವು, ಆಮೂಲಾಗ್ರ ಬದಲಿಸುವ ಕಾಲ ಬಂದಿದೆ. ಜಾಗತಿಕ ಯುದ್ಧಗಳಿಂದ ಉಂಟಾದ ವಿನಾಶದಿಂದ ಎದೆಗುಂದಿ, ಹೌಹಾರಿ, ಹೊಸ ಮತ-ಪ್ರಣಾಲಿ, ಜೀವನರೀತಿಗಳನ್ನು ಹುಡುಕುತ್ತಿದ್ದೇವೆ. ಹೋದ-ಶತಮಾನದ ಕೊನೆಯ ಭಾಗದಲ್ಲಿ, “ ಪೂರ್ಣ ಸುರಕ್ಷಿತತೆ ಮತ್ತು ಶಾಂತಿಮಯ ಪ್ರಗತಿ ಮುಂದಿದೆ; ಮುಂದಿನ ದಾರಿ ಸ್ಪಷ್ಟವಾಗಿ ತೋರುತ್ತಿದೆ” ಎಂದು ಆತ್ಮವಿಶ್ವಾಸದಿಂದ ಹೇಳುವ ಮಟ್ಟಕ್ಕೆ

ತಲುಪಿದ್ದೇವೆ—ಎಂಬ ಭ್ರಮೆಯುಂಟಾಗಿತ್ತು. ಆದರೆ ಇಪ್ಪತ್ತನೆಯ ಶತಕವು ಕ್ರಾಂತಿಯ ಯುಗವಾಗಿ ಪರಿಣಮಿಸಿತು. ಕಳೆದ ಜಾಗತಿಕ ಯುದ್ಧಗಳು, ನಾಗರಿಕತೆಯ ತಳಹದಿಯನ್ನೇ ನಡುಗಿಸಿದುವು. ಪ್ರಗತಿಯು ಆಗಲೇಬೇಕೆಂಬ ನಿಯಮವಿಲ್ಲ, ಅದರೂ ಶಾಂತತೆಯಿಂದ ಆಗಲಿಕ್ಕಿಲ್ಲ—ಎನ್ನಬೇಕಾಗಿದೆ. ಸುರಕ್ಷಿತತೆಯು ಕನಸಿನ ಗಂಟಾಗಿದೆ. ಪ್ರಾಚೀನಮತಗಳು ಒಮ್ಮೆ ಸತ್ಯವೆಂದು ತೋರಿದ್ದುವು. ಇಂದು ಅವು ನಾಮಶೇಷವಾಗಿವೆ. ಅವುಗಳೊಂದಿಗೆ ನೀತಿಮತ್ತೆಯೂ ಅಳಿದು ಹೋಯಿತು. ಒಮ್ಮೆಲೇ ಜೀವನವು, ಸತ್ವವನ್ನು ಕಳೆದುಕೊಂಡು ಶೂನ್ಯವಾದಂತೆ ತೋರುತ್ತಿದೆ. ಸಂಸ್ಕೃತಿ, ಆತ್ಮಶ್ರದ್ಧೆ ಇತ್ಯಾದಿ ಶಬ್ದಗಳಿಗೆ ಅರ್ಥವೇ ಉಳಿದಿಲ್ಲ. ಈ ಭೀಕರ ಪರಿಸ್ಥಿತಿಯಿಂದ ದಿಗಿಲೆದ್ದು, ವಿಚಾರವಂತರು ಜೀವನಕ್ಕೊಂದು ಹೊಸ ನೆಲೆ, ತತ್ತರಿಸಿ ಬೀಳುತ್ತಿರುವ ನಾಗರಿಕತೆಯ ಮುಂದಿರಕ್ಕೊಂದು ಹೊಸ ಆಧಾರ, ಜ್ಞಾನ–ಶ್ರದ್ಧೆ, ಭಾವನೆ–ವಿವೇಕ, ಶಿವ–ಶಕ್ತಿ, ಸೌಂದರ್ಯ–ಉಪಯುಕ್ತತೆಗಳ ಸಮನ್ವಯಕ್ಕೊಂದು ಮಧ್ಯಬಿಂದುವನ್ನು ಹುಡುಕುತ್ತಿದ್ದಾರೆ.

ನಮ್ಮ ಭವಿತವ್ಯವನ್ನು ಸಾಕಾರಗೊಳಿಸುವಲ್ಲಿ ವಿಜ್ಞಾನಕ್ಕೆ ಇಂದು ಉಚ್ಚಸ್ಥಾನ ದೊರೆತಿದ್ದರೂ, ಅದರ ಉದಯವಾಗಿ, ಕೇವಲ ಮುನ್ನೂರು ವರುಷವಾಗಿವೆ. ಆಧುನಿಕ ವಿಜ್ಞಾನದ ಜನಕನು ಗ್ಯಾಲಿಲಿಯೋ ಎಂದು ಹೇಳಬಹುದು. ಮುನ್ನೂರು ವರ್ಷಗಳ ಕಾಲಖಂಡದಲ್ಲಿ ವಿಜ್ಞಾನವು ಬಹು ವೇಗದಿಂದ ಬೆಳೆಯಿತು. ಕಳೆದ ಐವತ್ತು ವರ್ಷಗಳಲ್ಲಿ ಅದರ ಗತಿ ಇನ್ನೂ ಹೆಚ್ಚಿತು. ಜ್ಞಾನದ ವಿವಿಧ ಅಂಗಗಳಲ್ಲಿ ಸಂಶೋಧನೆ ನಡೆಯಿತು ಮತ್ತು ಅದಕ್ಕೆ ಫಲ ದೊರೆಯಿತು. ಇಂದು ಗೂಢವೆನಿಸುವ, ಯೋಚನೆಗೆ ಮೀರಿದುವೆಂದು ತಿಳಿಯಲ್ಪಟ್ಟ ಮಹಾಸಮಸ್ಯೆಗಳನ್ನು, ವಿಜ್ಞಾನವು ಸಂಪೂರ್ಣವಾಗಿ ಬಿಡಿಸಿಲ್ಲವಾದರೂ, ಒಂದು ದಿನ ಅವುಗಳನ್ನು ನಿಶ್ಚಿತವಾಗಿ ಬಿಡಿಸೀತೆಂದು ಧೈರ್ಯದಿಂದ ಹೇಳುವಷ್ಟು ಪ್ರಗತಿಯಾಗಿದೆ.

ತತ್ತ್ವಜ್ಞಾನ, ರಾಜಕಾರಣ, ಕಲೆ ಮುಂತಾದ ಕ್ಷೇತ್ರಗಳಲ್ಲಿ ಬಹಳ ಮುಂದುವರಿದ ಗ್ರೀಕರು, ಪ್ರಾಯೋಗಿಕ ವಿಜ್ಞಾನದ ಬಗ್ಗೆ ಬಹಳ ಕಡಿಮೆ ಆಸ್ಥೆವಹಿಸಿದುದು ಆಶ್ಚರ್ಯದ ಮಾತಾಗಿದೆ. ಯಾವುದೇ ತೆರದ ಶಾರೀರಿಕ ಶ್ರಮವು ಕ್ಷುದ್ರವೆಂಬ ತಪ್ಪು ಕಲ್ಪನೆಯೇ ಈ ಅನಾಸ್ಥೆಗೆ ಕಾರಣವಾಯಿತು. ಅಗಮ್ಯ ತಾರ್ಕಿಕ ವಿಚಾರಗಳಲ್ಲಿ ಮಗ್ನರಾದ ಪಂಡಿತರಿಗೆ, ಒಳ್ಳೇ ಮಾನ-ಮರ್ಯಾದೆ ಇದ್ದಿತಾದರೂ, ಪ್ರತ್ಯಕ್ಷ ಪ್ರಯೋಗಗಳಿಗೆ ಮಾತ್ರ 'ಬುದ್ಧಿಚಾತುರ್ಯದ ಕೃತಿಗಳು ಇವಲ್ಲ' ಎಂದು ಅನಾದರದ ಸಂಭಾವನೆಯಾಗುತ್ತಿತ್ತು. ಹದಿನೇಳನೆಯ ಶತಮಾನದವರೆಗೂ ಈ ತಪ್ಪು ತಿಳಿವಳಿಕೆ ಹಾಗೆಯೇ ಉಳಿಯಿತು. ಅಲ್ಲದೆ ಅರಿಸ್ಟಾಟಲ್ ಮತ್ತು ಕ್ರೈಸ್ತ ಧರ್ಮಪೀಠದ ಪ್ರಭಾವವು ಪ್ರಬಲವಾದ್ದರಿಂದ, ಆ ಸಂಪ್ರದಾಯಗಳನ್ನು ತಿದ್ದುವ ಅಥವಾ ಬದಲಿಸುವ ಪ್ರಯತ್ನವನ್ನು ಮಾಡುವುದೆಂದರೆ, ಸಾವಿಗೆ ಔತಣವಿತ್ತಂತಾಗಿತ್ತು. ಅರಿಸ್ಟಾಟಲನ ಮತ್ತು ಕ್ರೈಸ್ತ ಧರ್ಮದ ಸಿದ್ಧಾಂತಗಳನ್ನು, ಪ್ರತ್ಯಕ್ಷ ಪ್ರಯೋಗಗಳಿಂದ ಪರೀಕ್ಷಿಸಲು ತರುಣ ಗ್ಯಾಲಿಲಿಯೋ ಮುಂದಾಗಲು, ಅವನ ಜೊತೆಗಾರ ಪ್ರಾಧ್ಯಾಪಕರು ಸಹಾಯಮಾಡುವ ಬದಲು ಬಲವಾಗಿ ವಿರೋಧಿಸಿದರು. ಪೃಥ್ವಿಯು ಸೂರ್ಯನ ಸುತ್ತಲೂ ತಿರುಗುವುದೆಂದು ಸಿದ್ಧಮಾಡಿದ ಗ್ಯಾಲಿಲಿಯೋನ ಗತಿ ಏನಾಯಿತೆಂಬುದನ್ನು ನಾವೆಲ್ಲರೂ ಬಲ್ಲೆವು. ಇಂದು ಪೃಥ್ವಿಯ ಗತಿಯ ವಿಷಯವಾಗಿ ನಾವೆಲ್ಲ ಶಾಲೆಯಲ್ಲಿ ಓದುತ್ತೇವೆ. (ಧಾರ್ಮಿಕ ಕ್ರಿಶ್ಚನ್‌ರು ಮಾತ್ರ ರವಿವಾರಕ್ಕೊಮ್ಮೆ ಸೂರ್ಯನು ಪೃಥ್ವಿಯ ಸುತ್ತಲೂ ತಿರುಗುವನೆಂದು ನಂಬುತ್ತಾರೆ.) Inductive ತರ್ಕವನ್ನು, ನ್ಯೂಟನ್ನನು ಸೃಷ್ಟಿಯಲ್ಲಿಯ ಘಟನೆಗಳನ್ನು ವಿವರಿಸಲಿಕ್ಕೆ ಮೊದಲನೆಯಸಲ ಉಪಯೋಗಿಸಿದನು. ಅಲ್ಲಿಯವರೆಗೆ ಮಹತ್ತ್ವದ ವಿಚಾರಕ್ಕಾಗಿ 'ಅನುಮಾನ' ತರ್ಕಪದ್ಧತಿಯನ್ನೇ (Deductive Logic) ಉಪಯೋಗಿಸಲಾಗುತ್ತಿತ್ತು. ಗ್ರೀಕರು ಅನುಮಾನಪದ್ಧತಿಯಲ್ಲಿ ನಿಷ್ಣಾತರಾಗಿದ್ದರು. ಭೂಮಿತಿ ಶಾಸ್ತ್ರವು ಅನುಮಾನಪದ್ಧತಿಯ ಉತ್ತಮ ಉದಾಹರಣೆಯಾಗಿದೆ. ಈ ತರ್ಕಪದ್ಧತಿಯು, ಕೆಲವು ಸಂಗತಿಗಳನ್ನು ಸ್ವಯಂಸಿದ್ಧ ಗೃಹೀತಕೃತ್ಯಗಳೆಂದು ಒಪ್ಪಿ, ಅವುಗಳ ಆಧಾರದಿಂದ ಹೊಸಸಿದ್ಧಾಂತಗಳನ್ನು ಸ್ಥಾಪಿಸುತ್ತದೆ. ಯುಕ್ಲಿಡ್‌ನ ಭೂಮಿತಿಯು ಈದೇತಂತ್ರದಿಂದ ಹುಟ್ಟಿದ ಗಣಿತವಾಗಿದೆ. ಪಾಯಥಾಗೋರಸನ ಸಿದ್ಧಾಂತವು ತರ್ಕದ ಒರೆಗೆ ನಿಲ್ಲುತ್ತಿದ್ದರೂ, ಪ್ರತ್ಯಕ್ಷ ಪ್ರಯೋಗಗಳಿಂದ ಅದನ್ನು ಪರೀಕ್ಷಿಸುವ ಗೋಜಿಗೆ ಯಾರೂ ಹೋಗಿರಲಿಲ್ಲ. ಈ ಸಿದ್ಧಾಂತವು ಪೂರಾ ಸತ್ಯವಾಗಿಲ್ಲವೆಂದೂ, ಗುರುತ್ವಾಕರ್ಷಣದ ಸಿದ್ಧಾಂತದ ಮೇರೆಗೆ ಅದರಲ್ಲಿ ಸ್ವಲ್ಪ ಸುಧಾರಣೆ ಮಾಡಬೇಕಾಗಿದೆಯೆಂದೂ ಇತ್ತೀಚೆಗೆ ಕಂಡುಬಂದಿದೆ. 'ಪ್ರಿನ್ಸಿಪಿಯಾ' ದಲ್ಲಿ ನ್ಯೂಟನ್ನನು ಆಕಾಶದಲ್ಲಿಯ ಗ್ರಹಗಳ ಗತಿಯ ನಿಯಮಗಳನ್ನು ಸ್ಥಾಪಿಸುವಾಗ, ಮತ್ತು ಗುರುತ್ವಾಕರ್ಷಣದ ಸಿದ್ಧಾಂತವನ್ನು ಸ್ಥಾಪಿಸುವಾಗ, ಅನುಮಾನ ಪದ್ಧತಿಯನ್ನೇ ಅವಲಂಬಿಸಿದ್ದರೂ, ಸ್ವಯಂಸಿದ್ಧ ನಿಯಮವೆಂದು ಗುರುತ್ವಾಕರ್ಷಣವನ್ನು ಆಧಾರವಾಗಿಟ್ಟುಕೊಂಡಿಲ್ಲ. ಮೇಲಿಂದ ಕೆಳಗೆ ಬೀಳುವ ವಸ್ತುಗಳ ಪ್ರಯೋಗಗಳಿಂದ ಸಿದ್ಧವಾದ ಸಾಮಾನ್ಯ ಸಿದ್ಧಾಂತವೆಂದೇ ಗುರುತ್ವಾಕರ್ಷಣವನ್ನು ನ್ಯೂಟನ್ ಉಪಯೋಗಿಸಿದ್ದಾನೆ. ಜ್ಞಾನವನ್ನು ಸಂಪಾದಿಸಲು ಇದೊಂದು ಹೊಸ ಪದ್ಧತಿ, ಹೊಸದಾರಿಯೆಂದು ಕಂಡುಬಂದಿತು. ಈ ಮಾರ್ಗದ ವಿಶಿಷ್ಟ ಲಕ್ಷಣಗಳೇನು? ವಿಜ್ಞಾನಿಯು ಪ್ರಯೋಗಶಾಲೆಯಲ್ಲಿಯ ಪ್ರಯೋಗಗಳ ಆಧಾರದಿಂದ ಹೊಸ ಶಾಸ್ತ್ರಗಳನ್ನು ಹೇಗೆ ರಚಿಸುತ್ತಾನೆ?

ಶಾಸ್ತ್ರಜ್ಞನು ಯಾವ ಸಂಗತಿಯನ್ನೂ ಸ್ವಯಂಸಿದ್ಧ ಸತ್ಯವೆಂದು ನಂಬುವುದಿಲ್ಲ. ಸೃಷ್ಟಿಯಲ್ಲಿ ಆಗುವ ಘಟನೆಗಳನ್ನು ನಿರೀಕ್ಷಿಸುತ್ತಾನೆ. ಅವುಗಳ ಕಾರಣಗಳನ್ನು ಪೃಥಕ್ಕರಿಸುತ್ತಾನೆ. (Analyses) ಮತ್ತು ಅನಂತರ ತಾನು ಸ್ವತಃ ವಿಶಿಷ್ಟ ರೀತಿಯಲ್ಲಿ (under definite conditions) ಬೇರೆ ಬೇರೆ ಪ್ರಯೋಗಗಳನ್ನು ಮಾಡುತ್ತಾನೆ. ಪ್ರಯೋಗಗಳಿಂದ ದೊರೆತ ಎಲ್ಲ ಮಾಹಿತಿಯಿಂದ ತನಗೆ ಮಹತ್ತ್ವದುವೆನಿಸಿದ ಫಲಿತಾಂಶಗಳನ್ನಷ್ಟೇ ಆಯ್ದು, ಅವುಗಳನ್ನು

ಸ್ಪಷ್ಟೀಕರಿಸಲು ಹೊಸ ಸಿದ್ಧಾಂತ (hypothesis) ನಿರ್ಮಿಸುತ್ತಾನೆ. ಈ ಸಿದ್ಧಾಂತವನ್ನು ಮತ್ತೆ ಅನೇಕ ಪ್ರಯೋಗಗಳಿಂದ ಪುಷ್ಟೀಕರಿಸುತ್ತಾನೆ. ಈ ಸಿದ್ಧಾಂತವನ್ನು ನಿರ್ಮಿಸುವಾಗ, Inductive ತರ್ಕಪದ್ಧತಿಯನ್ನು ಅವಲಂಬಿಸುತ್ತಾನೆ. ಈ ಸಿದ್ಧಾಂತದ ಫಲವಾಗಿ ಬರಬಹುದಾದ ಅನೇಕ ಘಟನೆಗಳನ್ನು ಕಲ್ಪಿಸಿ, ಅವುಗಳನ್ನು ಪ್ರಯೋಗಶಾಲೆಯಲ್ಲಿ ಪರೀಕ್ಷಿಸುತ್ತಾನೆ. Hypothesis ನಿಂದ ಹುಟ್ಟಿದ Deductions ಪ್ರಯೋಗದಲ್ಲಿ ಅಯಶಸ್ವಿಯಾದರೆ, ಮೂಲಸಿದ್ಧಾಂತಕ್ಕೆ ಅರ್ಥವೇ ಉಳಿಯುವುದಿಲ್ಲ. ಹೊಸ ಸಿದ್ಧಾಂತವನ್ನು ಕಲ್ಪಿಸಬೇಕಾಗುತ್ತದೆ.

ಅನೇಕ ವಿಶಿಷ್ಟ ಸಂಗತಿ (fact) ಗಳ ಅಂತಃಸಂಬಂಧವನ್ನು ತೋರುವ ಸಾಮಾನ್ಯ ನಿಯಮ (Laws) ಗಳನ್ನು ಹುಡುಕುವುದೇ ಶಾಸ್ತ್ರದ ಕಾರ್ಯ. ಆದರೆ ಮೆಲ್ಲಗೆ ಶಾಸ್ತ್ರದ ಶುದ್ಧ 'ಜ್ಞಾನ' ಸ್ವರೂಪವು ಮಾಯವಾಗುತ್ತಿದ್ದು, ಸೃಷ್ಟಿಯಲ್ಲಿಯ ಬೇರೆ ಬೇರೆ ಶಕ್ತಿಗಳನ್ನು ಉಪಯೋಗಿಸಿ ವೇಳೆ-ಶ್ರಮಗಳನ್ನು ಉಳಿಸುವ ಸಾಧನವೆಂಬ ಸ್ವರೂಪವು ಮುಂದೆ ಬರುತ್ತದೆ.

ನೋಡಲು ವಿಜ್ಞಾನದ ದಾರಿ ಬೇರೆ ಸಾಮಾನ್ಯವಾಗಿ ತೋರುತ್ತದೆ. ಮಹತ್ತ್ವದ ಸಂಗತಿಗಳನ್ನು (Significant facts) ನಿರೀಕ್ಷಿಸುವುದು, ಸಾಮಾನ್ಯ ನಿಯಮದ ಸೂತ್ರದಲ್ಲಿ ಅವನ್ನು ಪೋಣಿಸುವುದು, ಆ ನಿಯಮದ ಸತ್ಯಾಸತ್ಯತೆಯನ್ನು ಪ್ರಯೋಗಗಳ ಮೂಲಕ ಪರೀಕ್ಷಿಸುವುದು—ಇದೇ ವಿಜ್ಞಾನದ ಮಾರ್ಗ. ಈ ಸಾಮಾನ್ಯ ನಿಯಮಗಳ ಆಧಾರದಿಂದ ಸೃಷ್ಟಿಯ ಘಟನೆಗಳನ್ನು ಅರ್ಥ ಮಾಡಿಕೊಳ್ಳುವ ಬೇರೆ ಬೇರೆ ಶಾಸ್ತ್ರಗಳನ್ನು ನಿರ್ಮಿಸುತ್ತಾನೆ ವಿಜ್ಞಾನಿ. ಸಾಮಾನ್ಯ ನಿಯಮಗಳನ್ನು ಇನ್ನಿಷ್ಟು ವ್ಯಾಪಕವಾದ ಸೂತ್ರದಿಂದ ಬಂಧಿಸುವಾಗ, ಆ ನಿಯಮಗಳನ್ನು ಪರಿವರ್ತಿಸಬೇಕಾಗುವುದು ಅಷ್ಟರಿಂದಲೇ ಆ ನಿಯಮಗಳೇ ಸುಳ್ಳೆಂದು ಹೇಳಲಾಗದು. ಐನ್‌ಸ್ಟಾಯಿನ್‌ನ ಸಾಪೇಕ್ಷತಾವಾದಕ್ಕೆ, ನ್ಯೂಟನ್ನನ ಗುರುತ್ವಾಕರ್ಷಣ ಸಿದ್ಧಾಂತ, ವಿದ್ಯುತ್-ಆಕರ್ಷಣ ತತ್ತ್ವಗಳು (Theory of Electro Magnatism), ವರ್ಣ ಪೃಥಕ್ಕರಣ (Spectroscopy) ಮತ್ತು ಖಗೋಲಶಾಸ್ತ್ರದ ಸೂಕ್ಷ್ಮ ನಿರೀಕ್ಷಣೆ ಇವೆಲ್ಲ ಆಧಾರವಾಗಿವೆ. ಖಗೋಲ ಶಾಸ್ತ್ರಕ್ಕೆ ಅತ್ಯಂತ ಪ್ರಭಾವಶಾಲಿಯಾದ ದೂರದರ್ಶಕ ಮತ್ತು ಬಿಂಬಗ್ರಹಣ (Photography)ದ ತಂತ್ರದ ಪೂರ್ಣತೆ ಇವುಗಳ ಸಹಾಯವಿಲ್ಲದಿದ್ದರೆ ಅದು ಇಷ್ಟು ಬೆಳೆಯುತ್ತಿರಲಿಲ್ಲ

ವಿಜ್ಞಾನವು ಇದು 'ನೂರಕ್ಕೆ ನೂರರಷ್ಟು ಸರಿಯಾಗಿದೆ' ಎಂದು ಎಲ್ಲಿಯೂ ಹೇಳುವುದಿಲ್ಲ. Approximately true ಎಂದು ಹೇಳುತ್ತದೆ. ಅತ್ಯಂತ ದಕ್ಷತೆಯಿಂದ ನಿಶ್ಚಯಿಸಿದ ಅಂಕೆ-ಅಳತೆಗಳನ್ನು ಕೂಡ, ಅವುಗಳು ಇಷ್ಟಿಷ್ಟು ತಪ್ಪಾಗುವ ಸಂಭವವಿದೆಯೆಂದು ಬಾಲ ಜೋಡಿಸಿ ಹೇಳುತ್ತೇವೆ. ಈ ತಪ್ಪಿನ ಪ್ರಮಾಣವನ್ನು ಮಾತ್ರ ಸರಿಯಾಗಿ ಹೇಳಲಾಗುವುದು. ಅರ್ಥಾತ್ ಎಲ್ಲಿ ಸತ್ಯಾಸತ್ಯತೆಯನ್ನು ನಿರ್ಣಯಿಸಲು ಸಾಧನವೇ ಇಲ್ಲವೋ, ಅಲ್ಲಿ ತನ್ನ ಮತವು ಇಷ್ಟು ಪ್ರಮಾಣದಲ್ಲಿ ತಪ್ಪಿರುವ ಸಂಭವವಿದೆಯೆಂದು ಯಾರೂ ಹೇಳಲಾರರು. ವೈಯಕ್ತಿಕ ಮತದಲ್ಲಿ ಎಷ್ಟು ನಿಶ್ಚಿತತೆಯೋ, ಅಷ್ಟೇ ವಾಸ್ತವಿಕ(Objective) ವಿಚಾರದಲ್ಲಿ ಅನಿಶ್ಚಿತತೆಯಿರುವುದು. ಎಲ್ಲ ಶಾಸ್ತ್ರೀಯ ನಿಯಮಗಳಿಗೆ ತರ್ಕವೇ ಆಧಾರವಾಗಿರುವುದರಿಂದ, ಆ ನಿಯಮಗಳಿಗೆ ಅವ್ಯಾಪ್ತಿಯ ಸಂಶಯ ಯಾವಾಗಲೂ ಅಂಟಿರುತ್ತದೆ.

ವಿಜ್ಞಾನದ ಮುನ್ನಡೆಯ ದಾರಿಯನ್ನು ಈ ವರೆಗೆ ನೋಡಿದೆವು. ಜ್ಞಾನದ ಇತರ ಮಾರ್ಗಗಳಿಗಿಂತ ಈ ಪದ್ಧತಿಯು ಹೇಗೆ ಕ್ರಾಂತಿಕಾರಕವಾಗಿದೆಯೆಂಬುದನ್ನು ನೋಡುವ; ಮತ್ತು ಇದೇ ಪದ್ಧತಿಯನ್ನು ಉಳಿದ ಜ್ಞಾನಕ್ಷೇತ್ರಗಳಿಗೂ ಅನ್ವಯಿಸಿದರೆ, ಅದರ ಫಲಿತಾಂಶವು ಏನಾದೀತೆಂಬುದನ್ನು ನೋಡುವ.

ಒಂದನೆಯದಾಗಿ, ವಿಜ್ಞಾನದಲ್ಲಿ ಸ್ವಯಂಸಿದ್ಧವೆಂದು ಹೇಳುವ, ನಿರಾಧಾರವಾದ ಸಿದ್ಧಾಂತಗಳಿಲ್ಲ. ಪ್ರಯೋಗಗಳಿಂದ ಸಿದ್ಧವಾದ ನಿಯಮಗಳನ್ನಷ್ಟೇ ವಿಜ್ಞಾನವು ಸ್ವೀಕರಿಸುತ್ತದೆ

೧೦೦೦ ರೂಪಾಯಿ ಬಹುಮಾನ

೩೦ ವರ್ಷಗಳಿಂದ ಅನುಭವಸಿದ್ಧವಾದ— ಮಿರಜಿಯ ವೈದ್ಯ ವಿ. ಎಸ್ ಕಾಪಸೇಯವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರ ಪಾಕ

[ರಜಿಸ್ಟರ್ಡ್]

ಮೂತ್ರದಲ್ಲಿ ಸ್ವಪ್ನದಲ್ಲಿ ವೀರ್ಯಸ್ಖಲನ, ಸ್ವರತಿಯಿಂದುಂಟಾದ ಅಶಕ್ತತೆ, ವೀರ್ಯದ ಬೇರೆ ಬೇರೆ ದೋಷಗಳು, ಪಿತ್ತಾಂಶ, ಉಷ್ಣ, ಸೊಂಟನೋವು, ಉಪದಂಶ-ಮೇಹರೋಗಗಳಿಂದುಂಟಾಗುವ ಕ್ಷೀಣತೆ— ಇವೆಲ್ಲ ನಷ್ಟವಾಗಿ, ಚೆನ್ನಾಗಿ ಮಲಶುದ್ಧಿಯಾಗುವುದು. ಹಸಿವೆ, ಸ್ಮರಣಶಕ್ತಿ, ದೇಹದ ತೂಕ ಹೆಚ್ಚುವುದು. ಹೊಸ ತಾರುಣ್ಯ ಬಂದಂತಾಗಿ ವೀರ್ಯದಲ್ಲಿ ಗರ್ಭಧಾರಕಶಕ್ತಿ ಬಲಗೊಳ್ಳುವುದು. ಈ ಔಷಧಿಯು ೫೩ ವನಸ್ಪತಿಗಳ ಯೋಗದಿಂದ ಸಿದ್ಧವಾಗಿದೆ. ಸಾಲಾಮಿಶ್ರಿ, ಸಫೇದಮಿಶ್ರಿ, ಪಂಜಾಬ ಮಿಶ್ರಿ-ವಚಕಂದ ಮೊದಲಾದ ಪದಾರ್ಥಗಳಲ್ಲಿ ವೀರ್ಯವರ್ಧಕ ಗುಣವಿಲ್ಲವೆಂದು ಸಿದ್ಧಮಾಡುವವರಿಗೆ ೧೦೦೦ ರೂಪಾಯಿ ಬಹುಮಾನ.

೨೧ ದಿನಗಳಿಗೆ ಸಾಲಬಹುದಾದ ೮೪ ತೊಲೆಯ ಒಂದು ಡಬ್ಬಿಗೆ ೫-೮-೦; ಅಂಚೆಯ ವೆಚ್ಚ ೧-೬-೦. ಶೀಘ್ರಗುಣಕಾರಿಯಾದ ಸ್ಪೇಶಲ್ ಡಬ್ಬಿಗೆ ೧೦-೮-೦. (ಇದರಿಂದ ೭ ದಿನಗಳಲ್ಲಿಯೇ ಗುಣವು.) ಅಂಚೆಯ ವೆಚ್ಚ ೧-೬-೦. ೩ ಡಬ್ಬಿಗೆ ೧೫-೦-೦ ಅಂಚೆಯವೆಚ್ಚ ೨-೧೩-೦. ಒಮ್ಮೆಲೇ ೩ ಡಬ್ಬಿಗಳನ್ನು ಬೇಡುವವರು ೫ ರೂ ಮುಂಗಡ ಕಳಿಸಬೇಕು.

ಮಾಲಕ: **ವ್ಹಿ. ಎಸ್. ಕಾಪಸೇ** ಮು. ಪೋ. ಮಿರಜ

"ಈಶ್ವರನ ಅಸ್ತಿತ್ವವನ್ನು ಸಿದ್ಧಮಾಡುವುದು ಸಾಧ್ಯವಿಲ್ಲ; ಹಾಗೆ ಮಾಡುವ ಆವಶ್ಯಕತೆಯೂ ಇಲ್ಲ." ಇಂತಹ ಜೊಡೆಗೆಟ್ಟ ಮಾತನ್ನು ವಿಜ್ಞಾನವು ಎಂದೂ ಹೇಳದು. 'ಹಾಗಿದ್ದಲ್ಲಿ, ಇಂತಹ ಈಶ್ವರನಿಗೆ ನಮ್ಮ ಜಗತ್ತಿನಲ್ಲಿ ಸ್ಥಾನವಿಲ್ಲ,' ಎಂದು ಹೇಳಬೇಕಾಗುತ್ತದೆ.

ಎರಡನೆಯದಾಗಿ, ಕಣ್ಣು, ಕಿವಿ, ಮೂಗು, ನಾಲಗೆ, ತ್ವಚೆ ಇವೇ ಐದು ಇಂದ್ರಿಯಗಳಿಂದ ಅರಿಯಬಹುದಾದ ಸಂಗತಿಗಳೇ ಎಲ್ಲ ಜ್ಞಾನದ ಆಧಾರವೆಂದು ಹೇಳುತ್ತೇವೆ. ಬರಿಗಣ್ಣಿಗೆ ಕಾಣದಿದ್ದ ವಸ್ತುಗಳನ್ನು ದುರ್ಬೀನಿನಿಂದ ನೋಡುತ್ತೇವೆ. ಆಕಾಶದ ಅಂತ್ಯದಲ್ಲಿಯ ನಕ್ಷತ್ರಗಳನ್ನು ನೋಡಲಿಕ್ಕೆ, "ಹೇ ದೈವೀಪ್ರಕಾಶವೇ ಇಳಿದು ಬಾ" ಎಂದು ಪ್ರಾರ್ಥಿಸುವುದಿಲ್ಲ. "ದಿವ್ಯಂ ದದಾಮಿ ತೇ, ಚಕ್ಷುಃ" ಎಂದು ಯಾವ ವಿಜ್ಞಾನಿಯೂ ತನ್ನ ಶಿಷ್ಯನಿಗೆ ಹೇಳಿದ್ದನ್ನು ಕೇಳಿಲ್ಲ. 'ಕ್ಷ' ಕಿರಣಗಳ ಸಂಶೋಧನೆಗಾಗಿ ಆತ್ಮಪ್ರತೀತಿ, ಪರಾಪ್ರಜ್ಞೆ ಅಥವಾ ಹೃದಯಸ್ಥ ಶೀಲಕಮಲದ ನೆರವು ಬೇಕಿಲ್ಲ. ನರಗಳು ಜ್ಞಾನವನ್ನು ಮಿದುಳಿಗೆ ಒಯ್ದು ಮುಟ್ಟಿಸಿದರೆ ಸಾಕು. ವೈಶ್ವಕಿರಣ (Cosmic Rays) ಗಳ ಅಭ್ಯಾಸಕ್ಕೆ, ನಿರ್ವಿಕಲ್ಪ ಸಮಾಧಿಯನ್ನು ಹಚ್ಚುವ ಅಥವಾ ಕುಂಡಲಿನಿಯನ್ನು ಜಾಗೃತಗೊಳಿಸಿ ಬ್ರಹ್ಮರಂಧ್ರಕ್ಕೆ ಮುಟ್ಟಿಸುವ ಆವಶ್ಯಕತೆಯಿಲ್ಲ.

ಮೂರನೆಯದಾಗಿ, ವಿಜ್ಞಾನದಲ್ಲಿ, ವಿವೇಕ (Reason) ಕ್ಕೆ ಹಿರಿಯ ಸ್ಥಾನವಿರುತ್ತದೆ. ಬೇರೆ ಬೇರೆ ಸಿದ್ಧಾಂತವನ್ನು ಸ್ಥಾಪಿಸುವ ಮತ್ತು ಅವುಗಳನ್ನು ವಿವರಿಸುವ ಕೆಲಸವನ್ನು ವಿವೇಕವೇ ಮಾಡುತ್ತದೆ. ಕಲ್ಪನಾತೀತ ಶಕ್ತಿಯು ಅವತರಿಸಿ, ಪರಾ ಸತ್ಯವನ್ನು ಪ್ರಕಟಿಸಲಿಕ್ಕೆಂದು, ಕೋಟಿ ರಾಮನಾಮ ಜಪ ಮಾಡಬೇಕಿಲ್ಲ; ಅಥವಾ ನಿರ್ಜನ ಅಡವಿಯನ್ನು ಸೇರಿ ಧ್ಯಾನ ಮಾಡಬೇಕಾಗಿಲ್ಲ. **ನಮಗಿರುವ ವಿವೇಕಶಕ್ತಿಯು ತೋರುವ ಸತ್ಯಕ್ಕಿಂತ ಬೇರೆ ಸತ್ಯವಿಲ್ಲ.**

ವಿಜ್ಞಾನದ ಭಾಷೆ ನಿಸ್ಸಂದಿಗ್ಧವಾದುದು. ಅಲ್ಲಿ ಪ್ರತಿಯೊಂದು ಶಬ್ದಕ್ಕೆ ನಿಶ್ಚಿತಅರ್ಥವಿರುತ್ತದೆ. ನಿಶ್ಚಿತ ಮತ್ತು ಸ್ಪಷ್ಟ ಭಾಷೆಗೆ ವಿಜ್ಞಾನದಲ್ಲಿ ಎಷ್ಟು ಎಷ್ಟು ಮಹತ್ತ್ವವಿದೆಯೋ, ಅಷ್ಟು ಮತ್ತೆಲ್ಲಿಯೂ ಇಲ್ಲ. ಸೂಕ್ಷ್ಮಪರಿಮಾಣಕ್ಕೂ ಅಷ್ಟೇ ಮಹತ್ತ್ವವಿದೆ. 'ತೆಕ್ಕೆ ಹೆಚ್ಚು, ತೆಕ್ಕೆ ಕಡಿಮೆ' ಎಂದರೆ ನಡೆಯದು. ಕೆವ್ಹೆಂಡಿಶನ ಪ್ರಯೋಗದಲ್ಲಿ ಒಂದು ಸಣ್ಣ ಗುಳ್ಳೆ ಉಳಿಯಿತು. ಆಕಾರದಲ್ಲಿ ೦.೧ ಸಿಸಿ. ಅದನ್ನು ದುರ್ಲಕ್ಷಿಸಲಿಲ್ಲ. ಅದು ಹೇಗೆ ಬಂದಿತೆಂಬ ಸಮಸ್ಯೆಯನ್ನು ಕೆವ್ಹೆಂಡಿಶನು ಬಿಡಿಸಲಾರದೆ ಹೋದ. ಮುಂದೆ ಆ ಸಣ್ಣ ಗುಳ್ಳೆಯೇ ವಿರಲವಾಯು (Rare Gasu) ಗಳ ಶೋಧಕ್ಕೆ ಕಾರಣವಾಯಿತು. ಅದರಂತೆಯೇ ಥಾಮ್ ಸನ್ ನ ಪ್ಯಾರಾಬೋಲಾ ಪ್ರಯೋಗದಲ್ಲಿ, ಫೋಟೋದಲ್ಲಿ, ಒಂದು ಮಸಕಾದ ಗೆರೆ ಮೂಡಿತು. ಆ ಗೆರೆಯ ಉಗಮವನ್ನು ಹುಡುಕುವಾಗ, ಸಮಸ್ಥಾನಿ ಧಾತು (Isotopes) ಗಳ ಅತ್ಯಂತ ಮಹತ್ತ್ವದ ಶೋಧವಾಯಿತು. ಈ ಸೂಕ್ಷ್ಮತೆ ಮತ್ತು ನಿಶ್ಚಿತತೆ ಉಳಿದ ಕಡೆಗೆ ದೊರೆಯುವುದಿಲ್ಲ. ಬೈಬಲ್ಲಿನ ಇಲ್ಲವೆ ಮಹಾಭಾರತದ ಆಧಾರದಿಂದ ಇತಿಹಾಸವನ್ನು ಬರೆಯುವ ಪ್ರಯತ್ನ ಮಾಡಿ ನೋಡಿ; ಅಸಂಬದ್ಧ ಘಟನೆಗಳ ಮಾಲಿಕೆಯ ಹೊರತು ಬೇರೆಯೇನೂ ಸಿಗಲಿಕ್ಕಿಲ್ಲ. ಧರ್ಮಶಾಸ್ತ್ರ ಇಲ್ಲವೆ ರಾಜನೀತಿ ಶಾಸ್ತ್ರಗಳಲ್ಲಿಯ ಶಬ್ದಗಳಿಗೆ, ಹಚ್ಚಿದಷ್ಟು ಅರ್ಥ ಹೊರಡುತ್ತವೆ. ಒಂದೊಂದು ಶಬ್ದದ ಅರ್ಥದ ಬಗ್ಗೆಯೇ 'ಮೊಚ್ಚುಮೂರುಪಾಲು' ಹೊಡೆದಾಟವಾಗುತ್ತದೆ. ಆತ್ಮಾ, ಪರಮಾತ್ಮಾ 'ಪಾಪ, ಬ್ರಹ್ಮ, ಕ್ರಾಂತಿ, ಸುಧಾರಣೆ, ರಾಷ್ಟ್ರ' ಮುಂತಾದ ಶಬ್ದಗಳನ್ನು ನಿರರ್ಗಲವಾಗಿ ಉಪಯೋಗಿಸಿದರೂ ಅವುಗಳಿಗೆ ನಿಶ್ಚಿತ ಅರ್ಥವನ್ನು ಹೇಳುವುದು ಅಸಾಧ್ಯ.

ಮತಾಭಿನಿವೇಶದ ಲೇಶವಿಲ್ಲದೆ, ವಿಜ್ಞಾನಿಯು ಹೇಗೆ 'ಸತ್ಯ'ದ ದಾರಿಯಲ್ಲಿ ಮುಂದುವರೆಯುತ್ತಿದ್ದಾನೆಂಬುದನ್ನು ನೋಡಿದೆವು. ಯಾವ ಸಿದ್ಧಾಂತವನ್ನು 'ಇದು ತ್ರಿಕಾಲಾಬಾಧಿತ ಸತ್ಯ, ಇದಕ್ಕೆ ವಿರೋಧವಾದುದೆಲ್ಲ ಸುಳ್ಳೆಂಬ ಅಹಂಕಾರ ಅವನಿಗಿಲ್ಲ. ನ್ಯೂಟನ್ನನ ಗುರುತ್ವಾಕರ್ಷಣದ ಸಿದ್ಧಾಂತವನ್ನು ಐನ್‌ಸ್ಟಾಯಿನ್ ತಿದ್ದಿ, ವಿಸ್ತಾರಗೊಳಿಸಿ ಸಾಪೇಕ್ಷತಾವಾದವನ್ನು ಮುಂದಿಟ್ಟಿರುವ; ಆದರೆ ಸಾಪೇಕ್ಷತೆಯೂ ಅಂತಿಮಸತ್ಯವೆಂದು ಹಟತೊಟ್ಟಿಲ್ಲ. ನ್ಯೂಟನ್ನನಿಗಿಂತ ಐನ್‌ಸ್ಟಾಯಿನ್ ಮುಂದೆ ಹೋಗಿದ್ದರೂ, ಇನ್ನಾರಾದರೂ ಅದಕ್ಕೂ ಮುಂದೆ ಹೋಗುವ ಸಂಭವವಿದ್ದೇ ಇರುತ್ತದೆ. ಧಾರ್ಮಿಕಗ್ರಂಥಗಳಲ್ಲಿ ಇಂಥ ಸಹಿಷ್ಣುತೆ, ತಪ್ಪನ್ನು ಒಪ್ಪುವ ಔದಾರ್ಯ ಕಂಡುಬರುವುದಿಲ್ಲ "ನಮ್ಮಯ ಪಂಥವೆ ಅಲ್ಲಿಗೆ ಪಥವು, ನಂಬದ ಜನರಿಗೆ ನರಕವೆ ಗತಿಯು" ಎಂಬ ಹಟವೇ ಎಲ್ಲೆಲ್ಲಿಯೂ ಕಂಡುಬರುತ್ತದೆ. ಧರ್ಮದ ಇತಿಹಾಸವು ಅಸಹಿಷ್ಣುತೆ, ಪರಹಿಂಸೆ ಮತ್ತು ಪ್ರತಿಗಾಮಿತ್ವದ ಬತ್ತಲೆ ಕುಣಿತದಿಂದ ತುಂಬಿದೆ.



ವ್ಯಕ್ತಿಗಾಗಲಿ, ರಾಷ್ಟ್ರಕ್ಕಾಗಲಿ ವಿಜ್ಞಾನದಲ್ಲಿ ಅಗ್ರಪೂಜೆ ದೊರೆಯದು. $Hcl + Naoh = H_2O + Nacl$ ಈ ಸಮೀಕರಣವು ಭಾರತದಲ್ಲಿ ನಿಜ, ಚೀನದಲ್ಲಿ ಸುಳ್ಳು—ಎಂದೂ ಯಾರೂ ಅನ್ನರು. ಯಾರು ಮಾಡಿದರೂ ಪ್ರಯೋಗದ ಫಲಿತವು ಒಂದೇ; ಪ್ರಯೋಗದ ರೀತಿ ಸರಿಯಾಗಿದ್ದರಾಯಿತು. ಈ ವ್ಯಕ್ತಿನಿರಪೇಕ್ಷತೆ (Objectivity) ವಿಜ್ಞಾನದಲ್ಲಿ ಮಾತ್ರ ಕಂಡುಬರುತ್ತದೆ. ಅನುಭಾವಿಕ (Experiential) ಎಂದು ಹೇಳಲಾಗುವ ಯೋಗ, ಗೂಢವಿದ್ಯೆ ಮುಂತಾದ ಶಾಸ್ತ್ರಗಳಲ್ಲಿ, ಅನುಭವಗಳು ಆ ವ್ಯಕ್ತಿಯ ಮಟ್ಟಿಗೆ ಮಾತ್ರ ಸತ್ಯ. ಒಬ್ಬರಿಗೆ ಕಂಡ ದರ್ಶನ ಇನ್ನೊಬ್ಬರಿಗೆ ಸಾಧ್ಯವಾಗುವುದಿಲ್ಲ. ಇಲ್ಲಿ ಸತ್ಯಾಸತ್ಯತೆಗೆ ಪ್ರಮಾಣವೇ ಇಲ್ಲ. ನಂಬಿಗೆಯ ಊರುಗೋಲಿನಿಂದ ಈ ಕುರುಡುದಾರಿಯಲ್ಲಿ ಬೇಕಾದವರು ಹೋಗಬೇಕು; ಬೇಡವಾದವರು ಬಿಡಬೇಕು. ಎಂತಲೇ ಧರ್ಮಪಂಥಗಳಲ್ಲಿ ಮತ್ತು ರಾಜಕೀಯವಾದಗಳಲ್ಲಿ ವ್ಯಕ್ತಿಗೆ ಇಲ್ಲದ ಹಿರಿಮೆ; ಶಬ್ದವು ಮಂತ್ರವಾಗುತ್ತದೆ. ಸತ್ಯಕ್ಕೆ ಆಧಾರ ಬುದ್ಧನ ಮಾತು ಅಥವಾ ವೇದದ ಮಂತ್ರ. ಶಬ್ದಪ್ರಾಮಾಣ್ಯವನ್ನು ಒಪ್ಪಿದ ಮೇಲೆ, ಬುದ್ಧಿಗೆ ಕಣ್ಣುಕಟ್ಟಿದಂತೆಯೇ. ವಿವೇಕ, ಬುದ್ಧಿ, ಪ್ರಯೋಗ ಇವುಗಳಿಗೆ ನೆಲೆಯೇ ಇಲ್ಲ. ವಿಶ್ವಾಸಕ್ಕೆ ಗಂಟುಬಿದ್ದರೆ, ಬುದ್ಧಿ ಕಾಲುಮುರಿದುಕೊಂಡು ಬೀಳುತ್ತದೆ. ಮನಸ್ಸು ಕತ್ತಲೆಯ ಗೂಡನ್ನು ಸೇರುತ್ತದೆ, ಸತ್ಯದ ಶೋಧ ನಿಂತುಹೋಗುತ್ತದೆ. ಮನುಷ್ಯಪ್ರಯತ್ನ, ಸಂಘರ್ಷ, ಶೋಧ ಇವು ಹಿಂದೆಬಿದ್ದು, ದೈವವಾದವು ಮೇಲಾಗುತ್ತದೆ. ಗುರುವು "ನಾನು ಹೇಳಿದ್ದೇ ಸತ್ಯ; ಯತ್ ಜ್ಞಾತ್ವಾನೇಹ ಭೂಯೋನ್ಯತ್ ಜ್ಞಾತವ್ಯಮವಶಿಷ್ಯತೇ" ಎಂದು ಸಾರುತ್ತಾನೆ. ಇಂಥ ವಿಚಾರಗಳ ಬೆನ್ನುಹಿಂದೆಯೇ ಅರ್ಥಹೀನ ಕರ್ಮಕಾಂಡವು ಬಂದು, ಗಾಣದೆತ್ತಿನಂತೆ ಸುತ್ತುತ್ತೇವೆ; ಪ್ರಗತಿ ದೂರದ ಕನಸಾಗುತ್ತದೆ. ಮಂತ್ರ-ತಂತ್ರಗಳ ಜಾಳಿಗೆಯಲ್ಲಿ ಸಿಕ್ಕು ಧಡಪಡಿಸಿದಷ್ಟೂ ಹೆಚ್ಚು ಸಿಕ್ಕಿಬೀಳುತ್ತೇವೆ.

ಹೆಜ್ಜೆಹೆಜ್ಜೆಗೆ—ಧಾರ್ಮಿಕ ಮತ್ತು ರಾಜಕೀಯ ವಿಚಾರಪದ್ಧತಿಯನ್ನು ವೈಜ್ಞಾನಿಕಪದ್ಧತಿಯೊಡನೆ ಹೋಲಿಸಿದುದಕ್ಕೆ ಕಾರಣವುಂಟು. ಮೊದಲೇ ಹೇಳಿದಂತೆ, ರಾಜಕೀಯ ಮತ್ತು ಆರ್ಥಿಕ ಉತ್ಪಾತಗಳಿಂದುಂಟಾದ ನಿರಾಶೆಯಿಂದ, ವಿಚಾರವಂತರು ಕೂಡ ಅಗತಿಕರಾಗಿ ಯಾವುದಾದರೊಂದು ರಾಜಕೀಯ ವಾದಕ್ಕೆ ಇಲ್ಲವೆ ಧರ್ಮಪಂಥಕ್ಕೆ ಶರಣುಹೋಗುತ್ತಾರೆ. ಭಾರತದಲ್ಲಿಯೂ ಇತ್ತೀಚೆಗೆ ಇಂಥ ಹೊಸ ಹೊಸ, ಮಾಯಾವಿ—ಬುದ್ಧಿವಾದಕ್ಕೆ ವಿರುದ್ಧವಾದ—ಮತಪಂಥಗಳು, ಆಕರ್ಷಕ ಹೆಸರುಗಳನ್ನು ಧರಿಸಿ ಬೆಳೆಯುತ್ತಿವೆ. ಪುರಾಣಪ್ರಿಯ, ಸಂಪ್ರದಾಯಶರಣ ಸ್ವಾಮಿಗಳೂ ಅವರ ಪೀಠಗಳೂ, ವೈಜ್ಞಾನಿಕ ಪ್ರಗತಿಯನ್ನು ವಿರೋಧಿಸುತ್ತಲೇ ಇದ್ದಾರೆ. ಐರೋಪ್ಯ ದೇಶಗಳಲ್ಲಿ ಕೂಡ ಟಿ. ಎಸ್. ಇಲಿಯೆಟ್‌ರಂಥವರು ಸಂಸ್ಕೃತಿಯಲ್ಲಿ ವಿಶ್ವಾಸ ಕಳೆದುಕೊಂಡು, ಧರ್ಮವನ್ನು ಮೊರೆಹೊಕ್ಕಿದ್ದಾರೆ. ಆಲ್ಡಸ್ ಹಕ್ಸಲೆ, Ape and Essence ಎಂಬ ಕಾದಂಬರಿಯಲ್ಲಿ, "ಎದುರು ಬದರು ನಿಂತ ಎರಡು ಶತ್ರು ಸೈನ್ಯ (ಅಮೇರಿಕೆ–ರಶಿಯ)ಗಳಲ್ಲಿ ಆಳಾಗಿ ತಂದ ಆಯಿನ್‌ಸ್ಟಾಯಿನರನ್ನು, ಪರಮಾಣುಯುದ್ಧವನ್ನು ಪ್ರಾರಂಭಿಸಲು ಬಲಾತ್ಕರಿಸಲಾಗುತ್ತದೆ. ಆ ಯುದ್ಧದಲ್ಲಿ ಆಯಿನ್‌ಸ್ಟಾಯಿನರೊಂದಿಗೆ, ಇಪ್ಪತ್ತನೆಯ ಶತಕದ ವಿಜ್ಞಾನ ಮತ್ತು ಸಂಸ್ಕೃತಿಗಳ ಅಂತವಾಗುತ್ತದೆ" ಎಂಬ ಸನ್ನಿವೇಶವನ್ನು ವರ್ಣಿಸಿದ್ದಾರೆ. ಕೊನೆಗೆ "ವಿಜ್ಞಾನವು ಆತ್ಮಹತ್ಯೆಮಾಡಿಕೊಂಡಿತು," ಎಂದು ನಿರಾಶೆಯಿಂದ ನುಡಿಯುತ್ತಾರೆ. ಹೀಗೆ ವಿಜ್ಞಾನವನ್ನು ಗೊತ್ತಿಗೆ ಹಚ್ಚಿ, ಹಕ್ಸಲೆ Perennial Philosophy ಎಂದು ವೇದಾಂತದ ಜೊತ್ತಿಗೆ ಬಿದ್ದುತ್ತಾರೆ. ಭೀತಿಯಿಂದಲೋ, ತಮ್ಮ ಮೆಚ್ಚಿನ ನಂಬುಗೆಗೆ ಅಂಟುವ ಹಟದಿಂದಲೋ, ಜೇಮ್ಸ್‌ಜೀನ್ಸ್, ಆರ್ಥರ್ ಎಡಿಂಗಟನ್ನರು, ವಿಶ್ವಕ್ಕೊಬ್ಬ ಕರ್ತೃ ಇರಲೇಬೇಕೆಂದು ವಾದಿಸುತ್ತಿದ್ದಾರೆ.

'ಅರ್ಚನ, ತಂತ್ರ, ಪಾಪಿಗಳಿಗೆ ಶಾಸನ' ಇವನ್ನೊಳಗೊಂಡ ಧರ್ಮವು, ವಿಜ್ಞಾನಕ್ಕೆ ಎಂದಿಗೂ ವೈರಿಯಾಗಿದೆ. ಅವೆರಡರ ಸಮನ್ವಯ ಸಾಧ್ಯವಿಲ್ಲ. ವಿಜ್ಞಾನವೂ, ಅನುಭವವೂ ತಮ್ಮ ತಮ್ಮ ದಾರಿಯಿಂದ ಕೊನೆಗೆ ಒಂದೇ ಸತ್ಯಕ್ಕೆ ಮುಟ್ಟುತ್ತವೆಯೆಂಬ ಹೊಸ ಘೋಷಣೆ, ಇತ್ತೀಚೆಗೆ ಕೇಳಿಬರುತ್ತಿದೆ. ಅದರಲ್ಲಿ ನನ-

ZANDU

PROTOCASEN

Whole Casein Hydrolysate

PALATABLE AND POWERFUL NUTRITIVE TONIC FOR ORAL ADMINISTRATION IN ALL RUNDOWN CONDITIONS OF HEALTH

Biological Laboratory

The Zandu Pharmaceutical Works, Ltd.
BOMBAY 14.

Sole Agents:—

M's. Pranlal and Sons
Chemists, Druggists
Station Road. HUBLI

(H. O. Bangalore City)

ಗಂತೂ ಅರ್ಥ ತೋರುವುದಿಲ್ಲ. ವಿಶ್ವದ ರಚನೆಯ ಬಗ್ಗೆ ೧೮-೧೯ನೆಯ ಶತಕಗಳಲ್ಲಿ, ವಿಜ್ಞಾನವು ಯಾಂತ್ರಿಕಸ್ವರೂಪದ ಕಲ್ಪನೆಯನ್ನು ತಾಳಿತ್ತು. ಅದು ಬದಲಾಗಿ, ಈಗ ಕೆಲವೊಂದು ವಿಷಯಗಳಲ್ಲಿ ಅಮೂರ್ತವಾದವು (Iudeterminism) ನೆಲೆಗೊಂಡಿದೆ. ಆದರೆ ಅಮೂರ್ತವಾದಕ್ಕೂ, ಪುರಾಣಿಕರ ಉಚ್ಛೃಂಖಲ ಕಲ್ಪನೆಯ ವಿಶ್ವರಚನೆಗೂ ಯಾವ ಸಂಬಂಧವೂ ಇಲ್ಲ. ಬಯಕೆಯ ಬಸಿರಿನಲ್ಲಿ ಮೂಡಿದ ಕಲ್ಪನಾವಿಲಾಸಕ್ಕೆ ಸತ್ಯದ ಮುದ್ರೆಯನ್ನೊತ್ತುವ ಕಾರ್ಯವನ್ನು ತತ್ತ್ವಜ್ಞಾನವು ಎಂದಿನಿಂದಲೂ ಮಾಡುತ್ತ ಬಂದಿದೆ. ನಮಗೆ ಪ್ರಿಯವಾದ ವಿಚಾರಗಳನ್ನೇ ಬಹುಶಃ ನಂಬುತ್ತೇವೆ. ಅದೇ ನಮ್ಮ ಧರ್ಮವಾಗುತ್ತದೆ. 'ದೇವರ ಚೊಚ್ಚಲುಮಕ್ಕಳು ನಾವು; ನಮ್ಮ ಪೃಥ್ವಿಯು ಇಡೀ ವಿಶ್ವದ ಕೇಂದ್ರ; ನಮ್ಮ ಭವಿತವ್ಯದ ಕಾಲದರ್ಶಕವಾಗಿ ಗ್ರಹತಾರೆಗಳು ಆಕಾಶದಲ್ಲಿ ಧಾವಿಸುತ್ತವೆ' ಇತ್ಯಾದಿ ನಿರಾಧಾರ ಕಲ್ಪನೆಗಳನ್ನು— ಅವು ನಮ್ಮ ಒಣಹೆಮ್ಮೆಗೆ ಪೋಷಕವಾಗಿವೆಯೆಂಬ ಒಂದೇ ಕಾರಣದಿಂದ— ನಂಬುತ್ತೇವೆ. ನಮಗೆ ಅನುಕೂಲವಾಗುವಂತೆ, ಸೃಷ್ಟಿಗೆ ಅಗಮ್ಯಹೇತುವಿದೆ, ಅದರೊಡೆಯನು ಕೇವಲ ಲೀಲೆಗೆಂದು ಅದನ್ನು ಹುಟ್ಟಿಸಿ, ಬೆಳೆಸಿ, ಹಾಳುಗೈಯುತ್ತಾನೆ.

ನಮ್ಮ ಯುಗದ ಯಕ್ಷಪ್ರಶ್ನೆಗಳಿಗೆ ವಿಜ್ಞಾನದ ಉತ್ತರವೇನು? ಈ ಪ್ರಶ್ನೆಗೆ ನಾವೇನು ಉತ್ತರ ಕೊಡಬಲ್ಲೆವು? ಅನೇಕ ರಾಜಕೀಯವಾದಗಳು ಬಿಡಿಸಲಾರದ ಒಗಟುಗಳಿಗೆ, ವಿಜ್ಞಾನವು ಉತ್ತರಹೇಳಬಹುದೆ?

'ಏಷ ಪಂಥಾಃ, ಏತತ್ಕರ್ಮ' ಎಂದು ವಿಜ್ಞಾನವು ಎಲ್ಲಿಯೂ ಹೇಳಲಾರದು. ಸೃಷ್ಟಿಕ್ರಮವನ್ನು ಹೆಚ್ಚೆಚ್ಚು ಆಳವಾಗಿ, ಸೂಕ್ಷ್ಮವಾಗಿ ಅಭ್ಯಸಿಸುತ್ತ ಸತ್ಯಕ್ಕೆ ಶಕ್ಯವಿದ್ದಷ್ಟು ಸಮೀಪ ಹೋಗುವುದು ವಿಜ್ಞಾನದ ರೀತಿ. ಸತ್ಯದ ಶೋಧ ಮುಗಿಯುವ ಮಾತು. 'ಇಲ್ಲಿಗೆ ಜ್ಞಾನದ ಸೀಮೆಗೆ ಬಂದೆವು, ಮುಂದೆ ಏನೂ ಇಲ್ಲ' ಎಂದು ಎಂದಿಗೂ ಆಗದು. 'ನಿನ್ನೆ ತಿಳಿದುದಕ್ಕಿಂತ, ಇಂದಿನ ಪ್ರಯೋಗದಿಂದ ಹೆಚ್ಚು ತಿಳಿವು ಬಂದಿದೆ.' ಎಂದು ಮಾತ್ರ ವಿಜ್ಞಾನವು ವಿನಯದಿಂದ ಹೇಳುತ್ತಿದೆ. 'ವಿಶ್ವದ ರಚನೆಯ ಬಗ್ಗೆ ನನಗೆ ತಿಳಿದುದು ಅಲ್ಪ; ಆದರೆ ನೀನು ಎನ್ನುವುದು ಸುಳ್ಳು, ಎಂದು ತಿಳಿಯುವಷ್ಟು ಮಾತ್ರ ತಿಳಿದಿದೆ!' ಎಂದು ಧರ್ಮಕ್ಕೆ ಹೇಳುತ್ತದೆ. ಮಾನವ ಜನಾಂಗದಲ್ಲಿ ಯೋಗ್ಯವಾದ ಸಂಬಂಧವೇರ್ಪಡಲು ಒಂದು ನೀತಿಶಾಸ್ತ್ರ, ನ್ಯಾಯಪದ್ಧತಿ ಬೇಕೆಂಬುದನ್ನು ಹೇಳದಿದ್ದರೂ, 'ಇಂದಿನ ಸಮಾಜವ್ಯವಸ್ಥೆ, ರಾಜಕೀಯ ಸಂಬಂಧ, ಅರ್ಥವಿತರಣೆ ಸರಿಯಾಗಿಲ್ಲ; ಅವುಗಳನ್ನು ತಳ್ಳಿ ಹೊಸ ಹಾದಿ ಹಿಡಿಯುವ ಹೊತ್ತು ಬಂದಿದೆ' ಎಂದು ಹೇಳುತ್ತದೆ. 'ವರ್ಣಶ್ರೇಷ್ಠತೆ ಶುದ್ಧ ಸುಳ್ಳು; ಸ್ತ್ರೀಪುರುಷರಲ್ಲಿ ಸಮತೆ ಬೇಕು; ಎಲ್ಲ ದೇವ-ದೇವತೆಗಳೂ ನಮ್ಮ ಕಲ್ಪನೆಯ ಶಿಶುಗಳು!' ಎಂದು ಎದೆ ತಟ್ಟಿ ಹೇಳುತ್ತದೆ. ವಿಶ್ವದ ಬಗ್ಗೆ, ಅಣುವಿನ ಬಗ್ಗೆ, ಜೀವದ ಬಗ್ಗೆ ನಮಗೆ ನಿನ್ನೆಗಿಂತ ಇಂದು ಹೆಚ್ಚು ಜ್ಞಾನವಾಗಿದೆ— ಎಂದು ಹೇಳುತ್ತದೆ.

ವಿಜ್ಞಾನದ ಶೋಧಗಳೂ, ಪ್ರತಿಕೃತಿಗಳೂ (Inventions) ಅದ್ಭುತವಾಗಿವೆಯೆಂಬುದರಲ್ಲಿ ಸಂದೇಹವಿಲ್ಲ. ವಿಜ್ಞಾನದ ಪದ್ಧತಿ ಅವಕ್ಕೂ ಮಹತ್ತ್ವದ್ದು. ಸೃಷ್ಟಿಯನ್ನು ಅರಿಯಲು, ಸೃಷ್ಟಿಯ ಶಕ್ತಿಗಳನ್ನು ಅರಿತು ಜನಹಿತಕ್ಕಾಗಿ ಉಪಯೋಗಿಸಲು, ವಿಶ್ವದ ಬಗ್ಗೆ, 'ಜೀವ'ದ ಬಗ್ಗೆ ಭೌತಿಕಸತ್ಯವನ್ನು ಶೋಧಿಸಲು ಇದೊಂದೇ ದಾರಿ. ವೈಜ್ಞಾನಿಕ ಸತ್ಯಕ್ಕಿಂತ ಬೇರೆ ಸತ್ಯವಿಲ್ಲ. ಇದ್ದರೂ ಅದನ್ನರಿಯಲು ದಾರಿಯಿಲ್ಲ. ಅಂಥ ಸತ್ಯದ ಉಪಯೋಗವೇನು?

ಹೊಸಯುಗದಲ್ಲಿ ಬಾಳುತ್ತಿದ್ದೇವೆ; ಮನಸ್ಸು ಇನ್ನೂ ಹಳೆಯದಾಗಿಯೇ ಉಳಿದಿದೆ. ಹೊಸಯುಗವನ್ನು ನಾವು ಅರ್ಥ ಮಾಡಿಕೊಂಡಿಲ್ಲ. ಬಾಳು ಅತಂತ್ರವಾಗಿದೆ. ಹಳೆಯ ಮನಸ್ಸು ಚೆಲ್ಲಿ ಹೊಸದನ್ನು ಪಡೆಯದಿದ್ದರೆ, ಹಾಳಾಗಿ ಹೋಗುವುದು ಖಂಡಿತ. ಹೊಸ ಮನಸ್ಸು, ವೈಜ್ಞಾನಿಕ ಮನಸ್ಸು, ಪ್ರಯೋಗಶೀಲವಾದ ಮನ, ಕಂಡ ಸತ್ಯವು ಎಷ್ಟೇ ಅನಿಷ್ಟವಾಗಿದ್ದರೂ ಅದನ್ನು ಸ್ವೀಕರಿಸುವ ಮನ, ಗೂಢತೆ – ಅನುಭಾವಗಳ ಬೆನ್ನು ಹತ್ತಿ, ವಾಸ್ತವಿಕತೆಯನ್ನು ಮರೆಯದ ಮನ, ಹೊಸ ಜಗತ್ತಿನಲ್ಲಿ ಬಾಳಲು ಸಹಾಯವಾಗುವಂತೆ, ರಾಜಕೀಯ ಸಾಮಾಜಿಕ ಮತ್ತು ನೈತಿಕ ನಿಯಮಗಳನ್ನು ಧೈರ್ಯದಿಂದ ಬದಲಿಸುವ ಮನ— ಇಂದು ಬೇಕಾಗಿದೆ. ಪ್ರಸಿದ್ಧ ತತ್ತ್ವಜ್ಞರಾದ ಬರ್ಟ್ರಾಂಡ ರಸೆಲ್ಲರ ಮಾತಿನಲ್ಲಿ ಹೇಳುವುದಾದರೆ—

"ನಮ್ಮೆದುರಿಗಿರುವ ಆಪತ್ತುಗಳಿಂದ ಪಾರಾಗಲು, ಹಿನ್ನಡೆಯಿಂದ ಯಾವ ಪ್ರಯೋಜನವೂ ಇಲ್ಲ. ಶೈಶವದ ಕಲ್ಪನಾವಿಲಾಸಗಳಲ್ಲಿ ತಿರುತಿರುಗಿ ಮುಳುಗಿದರೂ, ವಿಜ್ಞಾನದ ಸಹಾಯದಿಂದ ದೊರೆತ ಹೊಸ ಶಕ್ತಿಯನ್ನು ಯೋಗ್ಯ ದಾರಿಯಿಂದ ಉಪಯೋಗಿಸುವ ರೀತಿ ಹೊಳೆಯಲಾರದು. ವಿಜ್ಞಾನದ ಮೂಲಸ್ವರೂಪದ ಬಗ್ಗೆ ಬರಬಹುದಾದ ತಾತ್ತ್ವಿಕ ಸಂದೇಹವೂ, ಜಗತ್ತಿನ ವ್ಯವಹಾರದಲ್ಲಿ ಅದರ ಮುನ್ನಡೆಯನ್ನು ತಡೆಯಲಾರದು. ಮಾನವನಿಗೆ ಸತ್ಯನಿಷ್ಠವಾದ, ಬಲಶಾಲಿಯಾದ ಶ್ರದ್ಧೆಯ ಆವಶ್ಯಕತೆಯಿದೆ. ಭೀರು ಮತ್ತು ದುರ್ಬಲ ಶ್ರದ್ಧೆ ಬೇಕಿಲ್ಲ. ಯೋಗ್ಯ ಮಾರ್ಗದಿಂದ ಜ್ಞಾನವನ್ನು ಶೋಧಿಸುವುದೇ ವಿಜ್ಞಾನದ ಮೂಲಸ್ವರೂಪ. ಕೆಟ್ಟ ಜನರು ಆ ಜ್ಞಾನದ ಉಪಯೋಗವನ್ನು ಕೆಟ್ಟ ರೀತಿಯಲ್ಲಿ ಮಾಡಿದರೂ ಜ್ಞಾನವೇ ಕೆಡುಕೆಂದು ಎನ್ನಲಾಗದು. ಜ್ಞಾನದಲ್ಲಿ ಅವಿಶ್ವಾಸ ತಾಳುವುದೆಂದರೆ, ಮಾನವನ ಎಲ್ಲಕ್ಕೂ ಹೆಚ್ಚಿನ ಕರ್ತೃತ್ವದಲ್ಲಿ ಅವಿಶ್ವಾಸ ತಾಳಿದಂತೆ. ಸದಸದ್ವಿವೇಕದಲ್ಲಿಯೇ ನಂಬುವವನ ಶ್ರದ್ಧೆ ಮತ್ತು ಅಖಂಡ ಆಶಾವಾದಗಳು, ಅಪಕ್ವಬುದ್ಧಿಯ, ಬಾಲಿಶ ಸುಖದ ಬೆನ್ನು ಹತ್ತಿದವರ ಶ್ರದ್ಧೆ-ಆಶಾವಾದಗಳಿಗಿಂತ ಶ್ರೇಷ್ಠವಾದುವು — ಎಂದು ನಿಃಸಂದೇಹವಾಗಿ ಸಾರಿ ಹೇಳುತ್ತೇನೆ."

ಹಳ್ಳಿಯ ಹುಡುಗಿಗೆ:

ಶ್ರೀ. ಜೋಶಿ ಶ್ರೀಕಾಂತ, ಶಮನೇವಾಡಿ

೧

ಹಾದಿಯ ಮ್ಯಾಲಿನ ಹೊಲದಾಗ
ನಿಂತು ನಾನು ನೋಡಿದಾಗ,
ತಲಿ ಮ್ಯಾಲಿ ಬುತ್ತಿ ರೊಟ್ಟಿ,
ಉಟ್ಟಿದಾಳ ಹರಕ ದಟ್ಟಿ;
ಮಾಡತಾಳ ಯಾನ ಮುರಕಾ —
ಹರಕ ಅರಿವಿ ಪರವಿ ಇಲ್ಲದಕಿ ಝೋಕಾ!
ಹಣೀ ಮ್ಯಾಲಿ ಹಚ್ಚೀಬಟ್ಟು
ಇಟ್ಟೀದಾಳ ಕುಂಕುಮ ಬಟ್ಟು;
ಹಾಕಿದಕಿ ಕಾಡಗಿಗಣ್ಣ
ನಾಚಸ್ತಾವ ನವಿಲಗಣ್ಣ!
ತಿರಗಸ್ತಾಳ ಯಾನ ಝೋಕಾ — ನಾ
ಇದ್ದ್ಯಾನಲ್ಲ — ನಿನ್ನ ತೂಕಾ ತೂಕಾ!

೨

ಹಳ್ಳೀ ಊರ ಹೆಣ್ಣು ಎಂಥಾ
ಹಣ್ಣಕಿಂತಾ ಸವಿ ಅಂತಾ
ಹೇಳು ಮಾತ—ಗಾಳಿಗೂಡ
ತೂರ ಬ್ಯಾಡ, ಜರಾ ನೋಡ,
ತೊಟ್ಟ ಅತ್ತಿ ಹೂವ ಕುಬಸ-
ದಲ್ಲಿ ನಟ್ಟತೆನ್ನ ಮನಸ.
ಮುದ್ದಿನ ಬಿಸಿಲ ಮಟಮಟ
ಜೋಳದ ಬೆಳೀ ನಡಮಟ!
ಯಾರೂ ಇಲ್ಲ ಸುತ್ತಮುತ್ತ,
ಯಾರದ ಅಂಜಕಿ ಹೇಳ ಮತ್ತ?
ಯಾರ ಮುಂದ ಹೇಳದಂಥ
ಮಾತ ಕೇಳ ಜರಾ ನಿಂತ!

೩

ಮಾರಿಕಟ್ಟು ರುಮಾಲ ಸುತ್ತಿ-
ದಾಗ ನೋಡ ಕಣ್ಣ ಎತ್ತಿ!
ಕುಡಿ ಮೀಸಿ ಕೈಯಾಗ ಚಂಚಿ,
ನೋಡಿದಾಗ ಏನ ಅಂತಿ?
ಮಾರೀತಿರುವಿ ನಕ್ಕ ನಗಿ
ಮುತ್ತ ಸುರಿಸಿದೇನ ಬಗಿ?
ಹೇಳ ಚೆನ್ನೀ ನನಗಾಗಿ
ಕೇಳತೇನಿ ತಲಿದೂಗಿ.
ನಿನ್ನ ಗಂಡ ಬೆಂಕಿ ಕೆಂಡ
ಆಗಿರಬೇಕ ಮನಗಂಡ
ಬುತ್ತೀ ಹಾದಿ ಕಂಡ ಬೇಸತ್ತ....
ನೀನಿಂತ ಆತ ತಾಸೊತ್ತ!

* * *

ಮುದ್ದಿನ ಬಿಸಿಲ ಮಟ ಮಟ
ಜೋಳದ ಬೆಳಿ ನಡಮಟ
ಹಾದಿ ಮ್ಯಾಲಿನ ಹೊಲದಾಗ
ನಿಂತು ನಾನು ನೋಡಿದಾಗ
ತಲಿ ಮ್ಯಾಲಿ ಬುತ್ತಿರೊಟ್ಟಿ
ಉಟ್ಟಿದಾಳ ಹರಕ ದಟ್ಟಿ
ಮಾಡತಾಳ ಯಾನ ಮುರಕಾ
ಹರಕ ಅರಿವೀ ಪರವಿ ಇಲ್ಲದಕಿ ಝೋಕಾ!

ಕೂಸಿನ ಲೀಲೆ

ಶ್ರೀ. ಭುಜೇಂದ್ರ ಮಹಿಷವಾಡಿಗಿ

ನೋಡೀ ತಾಯಿಯ ತೊಡಿಯ ಮ್ಯಾಲಿ
ಆಡುತಲಿರುವ ಕೂಸಿನ ಲೀಲೆ!

೧

ಬೆಳ್ಳನ ಬಿಳಿಯ ಸಿಂಪಿಯ ಒಳಗ—
ಬೆಳ್ಳಿಯ ಮುತ್ತು ಹೊರಳುವ ಹಾಂಗ
ಮುಂಜಾನ್ಯೊತ್ತು ಹೂವಿನ ಒಳಗ
ಮಂಜಿನ ಹನಿಯು ಉರುಳುವ ಹಾಂಗ—
ನೋಡೀ ತಾಯಿಯ ತೊಡಿಯ ಮ್ಯಾಲಿ
ಆಡುತಲಿರುವ ಕೂಸಿನ ಲೀಲೆ!

೨

ನೀಲಿಯ ಮುಗಿಲ ನೀರಿನ ಮ್ಯಾಲೆ
ತೇಲುತಲಿರುವ ಚಂದಿರನಾಂಗ—
ಕಣ್ಣಿನ ನಡುವ ಕುಣಿಯುತಲಿರುವ
ಸಣ್ಣನ ಗೊಂಬಿ ಸರಿಯುವ ಹಾಂಗ—
ನೋಡೀ ತಾಯಿಯ ತೊಡಿಯ ಮ್ಯಾಲೆ
ಆಡುತಲಿರುವ ಕೂಸಿನ ಲೀಲೆ!

೩

ಊರಿನ ಹಿರಿಯ ಗುಡಿಯಽ ಒಳಗ
ಭೇರಿಯ ನಾದ ಸುತ್ತಿದ ಹಾಂಗ—
ಮೌನ ಕೃಷ್ಣೆಯ ಉಡಿಯ ಒಳಗ
ಮೀನಿನ ಕ್ರೀಡೆ ನೋಡಿದ ಹಾಂಗ—
ನೋಡೀ ತಾಯಿಯ ತೊಡಿಯ ಮ್ಯಾಲೆ
ಆಡುತಲಿರುವ ಕೂಸಿನ ಲೀಲೆ!

೪

ಮೌನ ಮುನಿಗಳ ಮನಸಿನ ಒಳಗ
'ಓಂ' ನುಡಿಯು ಆಡುತಲಿದ್ಧಾಂಗ—
ತಪಸಿಯ ಮೂಗಿನ ತುದಿಯ ಮ್ಯಾಲೆ
ರವಿ ಬಂದಾಡುದ ನೋಡಿದ್ಹಾಂಗ—
ನೋಡೀ ತಾಯಿಯ ತೊಡಿಯ ಮ್ಯಾಲೆ
ಆಡುತ್ತಿರುವ ಕೂಸಿನ ಲೀಲೆ!!

ರಾಯಭಾರ

(Diplomacy)

ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ

★

ಭಾರತವು ಸ್ವತಂತ್ರವಾದ ಮೇಲೆ, ವಿದೇಶರಾಯಭಾರದ ಸಂಬಂಧ ಭಾರತೀಯರಿಗೆ ಪ್ರತ್ಯಕ್ಷವಾಗಿ ಬರುತ್ತಲಿದೆ. ಈ ರಾಯಭಾರದ ಉದ್ದೇಶ, ಕಾರ್ಯಪ್ರಣಾಲಿ ಏನೆಂಬುದು ನಮ್ಮ ಜನರೆಲ್ಲರಿಗೂ ಗೊತ್ತಾಗಬೇಕಲ್ಲವೆ ?

★

ಯಾವುದೇ ಸ್ವತಂತ್ರರಾಷ್ಟ್ರದಲ್ಲಿ ಇತರ ದೇಶಗಳೊಡನೆ ನಡೆಯುವ ವ್ಯವಹಾರದ ನಿರ್ವಹಣೆಗಾಗಿ 'ಪರರಾಷ್ಟ್ರಖಾತೆ' ಎಂದು ಒಂದು ಏರ್ಪಾಡು ಇರುತ್ತದೆ. ಈ ಖಾತೆಯ ಮಂತ್ರಿ ಹಾಗು ಕಾರ್ಯದರ್ಶಿಗಳನ್ನು ನಿಯಮನಗೊಳಿಸುವ ಪದ್ಧತಿಯು ತೀರ ಭಿನ್ನವಾದ ಕೆಲವೊಂದು ತತ್ತ್ವಗಳ ಮೇಲೆ ನಡೆಯುತ್ತದೆ. ರಾಷ್ಟ್ರದ ಸತ್ತಾಧಾರಿಯು ರಾಜನೊ ಡಿಕ್ಟೇಟರನೊ ಇದ್ದರೆ, ಈ ಖಾತೆಯ ಮಂತ್ರಿವರ್ಗವು, ಅವನು ಪ್ರಸನ್ನನಾಗಿರುವ ವರೆಗೆ ಅಧಿಕಾರದಲ್ಲುಳಿಯುವುದು. ಆದರೆ ಸುಧಾರಿಸಿದ ಪ್ರಜಾಪ್ರಭುತ್ವದ ರಾಷ್ಟ್ರಗಳಲ್ಲಿ, ಮಿಕ್ಕ ಎಲ್ಲ ಖಾತೆಗಳು ಮಂತ್ರಿಮಂಡಲದ ಅಧಿಕಾರಕ್ಕೆ ಒಳಪಡುತ್ತಿದ್ದರೂ, ಪರರಾಷ್ಟ್ರ ಖಾತೆಯ ಅಧಿಕಾರಗಳು ಮಾತ್ರ ಎಷ್ಟೋ ಪಾಲು ಸ್ವಾಯತ್ತವಾಗಿವೆ. ಇಂಗ್ಲಂಡ್ ದೇಶವು ಇದಕ್ಕೊಂದು ಮಾದರಿಯ ಉದಾಹರಣೆಯಾಗಿದೆ. ಆದರೆ ಅಮೇರಿಕೆಯ ಅಧ್ಯಕ್ಷನಿಗೆ ಮಾತ್ರ, ಪರರಾಷ್ಟ್ರಮಂತ್ರಿಗಿಂತ ವಿದೇಶಾಂಗ ನೀತಿಯಲ್ಲಿ ವಿಶೇಷ-ಅಧಿಕಾರಗಳಿವೆ.

ಎಷ್ಟೋ ಈ ಖಾತೆ ಇಂಗ್ಲಂಡಿನಲ್ಲಿ ಸ್ವಾಯತ್ತವಾಗಿದೆ ಎಂದರೂ, ತಾನು ನಡೆಯಿಸುವ ಕಾರ್ಯದ ವರದಿಯನ್ನು ಪಾರ್ಲಮೆಂಟಿಗೆ ಒಪ್ಪಿಸಿ, ಅದರ ಮನ್ನಣೆಯನ್ನು ಪಡೆಯುವ ಹೊಣೆ ಅದರ ಮೇಲಿದೆ.

ಪರರಾಷ್ಟ್ರದೊಡನೆ ಸೌಹಾರ್ದ ಕಾಯ್ದುಕೊಳ್ಳುವುದು, ಮಧ್ಯಸ್ಥಿಕೆ ನಡೆಯಿಸುವುದು ಮತ್ತು ಕೊಡುಕೊಳ್ಳುವ ವ್ಯವಹಾರ ಜರುಗಿಸುವುದು— ಇವು ಈ ಖಾತೆಯ ಮುಖ್ಯ ಕಾರ್ಯಗಳಾದುದರಿಂದ, ಇದಕ್ಕೆ ಶಾಸನದ ನಿಯಮನ ಕಡಮೆ. ತನ್ನ ಉತ್ತರದಾಯಿತ್ವದ ಮೇಲೆಯೇ ಅದು ತನ್ನ ಕಾರ್ಯಗಳನ್ನು ನಿರ್ವಹಿಸುತ್ತದೆ. ರಾಜದೌತ್ಯ (Diplomacy) ಎಂಬ ಚಾತುರ್ಯದಿಂದಲೂ ಕೌಶಲ್ಯದಿಂದಲೂ ನಡೆಯಬೇಕಾದ ವಿಷಯ. ಚಾಣಕ್ಯನೀತಿ-ಶುಕ್ರನೀತಿಗಳಲ್ಲಿ ಅನೇಕ ಮಂತ್ರಿಗಳ ಸಹಾಯದಿಂದ ರಾಜ್ಯದಾಡಳಿತವನ್ನು ನಡೆಯಿಸಬೇಕೆಂದು ಹೇಳಿದ್ದನ್ನು ನೋಡಿದರೆ, ಭಾರತದಲ್ಲಿಯೂ ಪ್ರಾಚೀನಕಾಲದಲ್ಲಿ ಈ ಏರ್ಪಾಡು ಇತ್ತೆಂಬುದು ಮನವರಿಕೆಯಾಗುವುದು. ಮಂತ್ರಿ (Foreign Minister), ದೂತಮಂತ್ರಿ (Ambassador) ಆಗ ಕೂಡ ಇದ್ದರು. ಈಗ ಪುನಃ ಭಾರತವು ಸ್ವತಂತ್ರವಾಗಿದ್ದು, ಮಂತ್ರಿ-ದೂತಮಂತ್ರಿಗಳ ಸ್ಥಾನಗಳಿಗೆ ತುಂಬ ಮಹತ್ತ್ವ ಬಂದಿದೆ.

ಈ ವಿಷಯ, ಒಂದು ಶಾಸ್ತ್ರದ ರೀತಿಯಲ್ಲಿ ಪರಿಪೂರ್ಣವಾಗಿರದಿದ್ದರೂ, ಪ್ರತಿಯೊಂದು ದೇಶದ ವಿದೇಶಾಂಗನೀತಿ ಆ ಆ ದೇಶಕ್ಕೆ ತಕ್ಕಂತೆ ಒಂದು ವಿಶಿಷ್ಟ ಸಂಪ್ರದಾಯವುಳ್ಳದ್ದಾಗಿದೆ. ಇಂಗ್ಲಂಡಿನಲ್ಲಿ ಉಚ್ಚ ವರ್ಗದ ಜನರನ್ನೆ ಸಾಮಾನ್ಯವಾಗಿ ಈ ಖಾತೆಯಲ್ಲಿ ಸೇರಿಸಿಕೊಳ್ಳಲಾಗುತ್ತದೆ. ಫ್ರಾನ್ಸಿನಲ್ಲಿ ಇದು ಧನಿಕರ ವರ್ಚಸ್ಸಿಕ್ಕೊಳಗಾಗಿದೆ. ಅಮೇರಿಕೆಯ ಪರರಾಷ್ಟ್ರ ಖಾತೆಯಲ್ಲಿ ಕಾಯದೇ ಪಂಡಿತರ ಹಾಗು ಪತ್ರಿಕಾಕರ್ತರ ಸಂಖ್ಯಾಧಿಕ್ಯವೇ ಹೆಚ್ಚಾಗಿ ಕಾಣುತ್ತದೆ. ಈ ಖಾತೆಯ ಅಧಿಕಾರಿಗಳಿಗೆ ಒಂದು ವಿಶಿಷ್ಟ ರೀತಿಯ ಶಿಕ್ಷಣ, ಶಿಷ್ಟಾಚಾರ-ಸಂಪ್ರದಾಯಗಳು, ದೃಷ್ಟಿಕೋನ ಅವಶ್ಯವಾಗಿರುವವು. ಎಲ್ಲಕ್ಕೂ ಹೆಚ್ಚಾಗಿ ಪ್ರಭಾವಶಾಲಿಯಾದ ವ್ಯಕ್ತಿತ್ವ ಅಗತ್ಯ! ಸಾಮಾನ್ಯವಾಗಿ ಧನಿಕ ವರ್ಗವೇ ಈ ಖಾತೆಯಲ್ಲಿ ಸೇರುವುದು ಹೆಚ್ಚು. ಧನಿಕರ ಜಾತಿ ಅಂತರ ರಾಷ್ಟ್ರೀಯ ಜಾತಿ! ಇದು ಬೇಕಾದಲ್ಲಿ ಹೊಂದಿಕೊಳ್ಳುತ್ತದೆ; ಸಂಬಂಧಗಳನ್ನು ಕಟ್ಟಿಕೊಳ್ಳುತ್ತದೆ. ಎಂತಲೇ ಅನೇಕ ದೇಶಗಳಲ್ಲಿ ವಿದೇಶಾಂಗನೀತಿ ಇಂಥ ವಿಶಿಷ್ಟ ವರ್ಗದವರಿಗೇ ವಿಶ್ವಾಸಲಾಗಿದೆ.

ಹಿಂದುಸ್ತಾನದ ಪರರಾಷ್ಟ್ರಖಾತೆಯನ್ನು ಸದ್ಯ ಬ್ರಿಟಿಶ್ ಮಾದರಿಯ ಮೇರೆಗೆ ರಚಿಸಲಾಗಿದೆ ಎನ್ನಬಹುದು.

ಬ್ರಿಟಿಶರ ಪರರಾಷ್ಟ್ರ ಖಾತೆ (Foreign Office) ೧೭೮೨ರಲ್ಲಿ ಪ್ರಾರಂಭವಾಯಿತು. ಈ ಖಾತೆಗೆ ೧೯೧೮ರಲ್ಲಿ Department of overseas Trade (ಸಮುದ್ರದಾಚೆಯ ವ್ಯಾಪಾರದ ಖಾತೆ) ಮತ್ತು Commercial Intelligence (ವ್ಯಾಪಾರೀ ಮಾಹಿತಿಯ ಖಾತೆ) ಇವೆರಡನ್ನೂ ಜೋಡಿಸಲಾಯಿತು.

ರಾಜದೌತ್ಯ (Ambassadorial system) ಪರರಾಷ್ಟ್ರಖಾತೆಯ ಮಹತ್ವದ ಶಾಖೆ. 'ಸ್ವದೇಶಕ್ಕಾಗಿ ಪರರಾಷ್ಟ್ರದಲ್ಲಿ ಅಸತ್ಯವನ್ನು ನುಡಿಯುವವನು' ಎಂದು ಸರ್ ಹೆನ್ರಿ ವಾಟನ್‌ರು ರಾಯಭಾರಿಯ ಲಕ್ಷಣವನ್ನು ಹೇಳಿದ್ದಾರೆ. Practice of Diplomacy ಎಂಬ ಪುಸ್ತಕದಲ್ಲಿ 'ರಾಯಭಾರಿಗೆ ಸಭ್ಯತೆ ಮತ್ತು ಗುಪ್ತಚಾರರಿಗೆ ಹಣಕೊಟ್ಟು ಒಲಿಸಿಕೊಳ್ಳುವ ಗುಣ ಮುಖ್ಯ' ಎಂದು ಹೇಳಿದೆ. ಆದರೆ ಇದು ಎಲ್ಲರಿಗೂ ಒಪ್ಪಿಗೆಯಾಗತಕ್ಕ ಮಾತಲ್ಲ. ತಮ್ಮ ರಾಷ್ಟ್ರದ ಜೊತೆಗೆ ಆದ ಒಪ್ಪಂದ, ಕರಾರುಗಳು ಸರಿಯಾಗಿ ಪಾಲಿಸಲ್ಪಡುತ್ತವೆಯೊ ಇಲ್ಲವೊ ಎಂಬುದನ್ನು ನೋಡುವುದೇ ಈ ಖಾತೆಯ ಮುಖ್ಯ ಕೆಲಸವಾಗಿದೆ. ಇಷ್ಟೇ ಅಲ್ಲದೆ, ಪರದೇಶದವ-

ರೊಡನೆ ತನ್ನ ರಾಷ್ಟ್ರದವರ ಸೌಹಾರ್ದ-ಸಂಬಂಧಗಳು ನೆಲೆಗೊಳ್ಳುವಂತೆ ಯಾವಾಗಲೂ ಪ್ರಯತ್ನಿಸುವುದೇ ಇದರ ಕರ್ತವ್ಯ. ಊಟ, ಸಮಾರಂಭಗಳು, ಪ್ರದರ್ಶನಗಳು, ಕಲಾತ್ಮಕ ಚಟುವಟಿಕೆಗಳು— ಇಂಥ ಹಲಕೆಲವು ಉಪಾಯಗಳಿಂದ ಸಖ್ಯವನ್ನು ಬೆಳೆಯಿಸಬೇಕಾಗುತ್ತದೆ.

ಪರರಾಷ್ಟ್ರದಲ್ಲಿ ಹೋದ ರಾಯಭಾರಿಯು, ಆ ದೇಶದೊಡನೆ ಫ್ರೆಂಚ್ ಇಲ್ಲವೆ ತನ್ನ ದೇಶಭಾಷೆಯಲ್ಲಿ ಪತ್ರವ್ಯವಹಾರ ನಡೆಯಿಸುತ್ತಾನೆ. ಅವರ ಭಾಷೆಯಲ್ಲಿಯೇ ಅದಕ್ಕೆ ಉತ್ತರಕೊಡಲಾಗುತ್ತದೆ. ಪತ್ರಗಳೆಲ್ಲ ತೃತೀಯ ಪುರುಷದಲ್ಲಿರುತ್ತವೆ. ಅದಕ್ಕೆ ಬರೆದವನ ಅಂಕಿತ ಇರುವುದಿಲ್ಲ. ಇಂಥ ಪತ್ರಗಳಿಗೆ Note (ಖಲೀತೆ) ಎನ್ನುತ್ತಾರೆ. ಪ್ರತಿಯೊಂದು ರಾಜಧಾನಿಯಲ್ಲಿ ಕೆಲವು ಅಂತರರಾಷ್ಟ್ರೀಯ ಹಾಗು ಕೆಲವು ತದ್ದೇಶೀಯ ಪದ್ಧತಿಗಳಿರುತ್ತವೆ. ಅವನ್ನು ರಾಯಭಾರಿಯು ಪಾಲಿಸಲೇಬೇಕಾಗುತ್ತದೆ. ರಾಯಭಾರಿಯು ಅಪ್ರಿಯನಾದರೆ, ಅವನನ್ನು ಮರಳಿ ಕರೆಯಿಸಿಕೊಳ್ಳಲೇ ಬೇಕಾಗುತ್ತದೆ. ರಾಯಭಾರಿಗೆ ಕೆಲವೊಂದು ಮರ್ಯಾದೆಯ ಹಕ್ಕುಗಳಿವೆ. ಅವನು ಆ ದೇಶದ ಕರ ಕೊಡಬೇಕಾಗಿಲ್ಲ. ಮತ್ತು ಆ ದೇಶದ ಕಾನೂನುಗಳಿಗೆ ಬದ್ಧನಾಗಿರಬೇಕಾಗಿಲ್ಲ. ಅವನ ನಿವಾಸವು ಇವುಗಳಿಂದ ಸ್ವತಂತ್ರವಾಗಿದೆ. ಅವನು ಕಳುಹುವ ನಿವೇದನಗಳು, ಸಾಂಕೇತಿಕ ತಂತಿಸಂದೇಶಗಳು ಕೂಡ ಯಾವ ನಿರ್ಬಂಧಗಳಿಗೂ ಒಳಗಾಗಿರುವುದಿಲ್ಲ.

ರಾಯಭಾರಿಗೆ ಕೆಲವು ಸಲಹೆಗಾರರನ್ನು ಕೊಡಲಾಗುತ್ತದೆ. ಸೈನ್ಯ, ನೌಕಾದಲ, ವಿಮಾನದಲ, ಉದ್ಯೋಗ, ವ್ಯಾಪಾರ, ಮಾರಾಟ, ಖರೀದಿ, ಮುಂತಾದ ವಿಷಯಗಳಲ್ಲಿ ಈ ತಜ್ಞರು ರಾಯಭಾರಿಗೆ ಸೂಕ್ತ ಸಲಹೆಗಳನ್ನು ಕೊಡುತ್ತಾರೆ. ಸ್ವದೇಶಕ್ಕೆ ಹಿತಕರ ಹಾಗು ಅಗತ್ಯವೆನಿಸುವ ಅನೇಕ ಮಹತ್ವದ ಸಂಗತಿಗಳನ್ನು ಗುಪ್ತವಾಗಿ ಸಂಗ್ರಹಿಸಿ, ಸ್ವದೇಶಕ್ಕೆ ಕಳುಹಲಾಗುತ್ತದೆ. ಸ್ವೀಡನ್, ಫಿನ್‌ಲಂಡ್ ದೇಶಗಳು Social Attaches— ಸಾಮಾಜಿಕ ಸಲಹೆಗಾರರನ್ನು ಕೂಡ ನೇಮಿಸಿದೆ. ಯಾವ ದೇಶದಲ್ಲಿಯಾದರೂ ಸಾಮಾಜಿಕ, ಶೈಕ್ಷಣಿಕ ಹಾಗು ಆರೋಗ್ಯ ವಿಷಯಗಳಲ್ಲಿ ಹೊಸ ಪ್ರಯೋಗಗಳು ನಡೆದಿದ್ದರೆ, ಅಂಥವುಗಳನ್ನು ಅಭ್ಯಸಿಸಿ, ತಮ್ಮ ದೇಶಕ್ಕೆ ಉಪಯುಕ್ತವಾಗುವಂತಿದ್ದರೆ ಅವನ್ನೂ ಅರುಹಲಾಗುತ್ತದೆ.

Deplomatic ಮತ್ತು Consulor ಎಂಬೆರಡು ವಿಭಾಗಗಳು ಈ ರಾಯಭಾರಿ ಪದ್ಧತಿ (Ambassadorial System) ಯಲ್ಲಿವೆ. ಒಂದು— ಕೇವಲ ರಾಜಕೀಯ ವ್ಯವಹಾರಕ್ಕೆ ಸಂಬಂಧಿಸಿದೆ. ಇನ್ನೊಂದು ಅಂದರೆ Consulor ವಿಭಾಗ, ವ್ಯಾಪಾರಕ್ಕೆ ಸಂಬಂಧಿಸಿದ ವಿಷಯಗಳನ್ನಲ್ಲದೆ ವಿವಾಹ, ಪರದೇಶದಲ್ಲಿರುವ ತಮ್ಮ ದೇಶದವರಿಗೆ ಸಹಾಯ, ಮಿಕ್ಕ ಅಗತ್ಯವೆನಿಸುವ ಎಲ್ಲ ಕೆಲಸಗಳನ್ನು ನೋಡಿಕೊಳ್ಳಬೇಕಾಗುತ್ತದೆ. ರಾಜಕೀಯ ವಿಭಾಗ ಬಹಳ ಮಹತ್ವದ್ದು. ಅದರಲ್ಲಿ Treaties (ತಹನಾಮೆ) Convention (ಕರಾರುನಾಮೆ) Declaration (ಜಾಹೀರನಾಮೆ) Agreement (ಕಬೂಲೀನಾಮೆ) Arrangement (ನಿರ್ಣಯಪತ್ರ) Protocol (ನಿಯಮ ಪತ್ರ) ಇಷ್ಟು ಪ್ರಭೇದಗಳಿವೆ. ಇವೆಲ್ಲಕ್ಕೂ ಅಂತರರಾಷ್ಟ್ರೀಯ ಇತಿಹಾಸವಿದೆ. ಇವುಗಳಲ್ಲಿ Treaty (ತಹನಾಮೆ) ಎಂಬುದು ಬಹು ಮಹತ್ವದ ಕರಾರುಪತ್ರ. ಇದಕ್ಕೆ ಅಧ್ಯಕ್ಷ ಅಥವಾ ರಾಜನ ಸಮ್ಮತಿ ಮತ್ತು ಅವನ ಅಂಕಿತ ಅವಶ್ಯ. ಈ ಸಮಯಕ್ಕೆ ಎರಡೂ ದೇಶದ ರಾಜಕೀಯ ಪ್ರತಿನಿಧಿಗಳು ಸೇರಿ, ಅದನ್ನು ಉದ್ಘೋಷಿಸುತ್ತಾರೆ. ಇದೆಲ್ಲ ಪ್ರಕಟವಾಗಿಯೇ ನಡೆಯುತ್ತದೆ. ಮಿಕ್ಕ ಕರಾರುಪತ್ರಗಳು ಕಡಿಮೆ ಮಹತ್ವದುವು.

ದೇಶದೇಶಗಳಲ್ಲಿ ಗುಪ್ತ ಕರಾರುಗಳು ಯುದ್ಧಕಾಲದಲ್ಲಿಯೂ ನಡೆಯುತ್ತವೆ; ಶಾಂತತೆಯ ಕಾಲದಲ್ಲಿಯೂ ನಡೆಯುತ್ತವೆ.

ಪರರಾಷ್ಟ್ರದ ರಾಜಕಾರಣದಲ್ಲಿ ಸಂಪತ್ತು, ಸೈನ್ಯ ಇವೆರಡಕ್ಕೆ ಇರುವ ಮಹತ್ವ ಮಿಕ್ಕ ಯಾವುದಕ್ಕೂ ಇಲ್ಲ. ಒಂದು ದೇಶ ಸಂಸ್ಕೃತಿಸಂಪನ್ನವಾಗಿರಬಹುದು, ರಾಜ್ಯವ್ಯವಸ್ಥೆ ಅತಿ ಚೆನ್ನಾಗಿರಬಹುದು. ಆದರೆ ಅದಕ್ಕೆ ಮಹತ್ವವಿಲ್ಲ. ಅದರ ಸಂಪದ್ಬಲ, ಸೈನ್ಯಬಲ ಇವಕ್ಕೇ ಬೆಲೆ! ಈ Armaments (ಸೈನ್ಯ ಹಾಗು ಶಸ್ತ್ರಾಸ್ತ್ರಬಲ) ರಾಜಕಾರಣದಲ್ಲಿ ಹೇಳತೀರದಷ್ಟು ತೊಡಕನ್ನುಂಟುಮಾಡಿದೆ. ಸಂರಕ್ಷಣಕ್ಕೆಂದು ಇರುವ ಸೈನ್ಯ ಸಂಹಾರಕ್ಕೆ ಉಪಯೋಗಿಸಲಾಗುತ್ತದೆ. Atom Bomb ನ ಅವತಾರವಾದಾಗಿನಿಂದಂತೂ ಅದರ ಹೆದರಿಕೆಗಾಗಿ ಆಗುವ ವೆಚ್ಚಕ್ಕೆ ಮಿತಿಯೇ ಇಲ್ಲ.

ಈ ಕಾಲದಲ್ಲಿ ವಿದೇಶಾಂಗನೀತಿ ತುಂಬ ತೊಡಕಿನದಾಗಿದೆ. ಯಾವ ದೇಶವೂ ಇಂದು ತನ್ನಷ್ಟಕ್ಕೆ ತಾನು ಬದುಕಿಬಾಳುವುದು ಅಶಕ್ಯವಾಗಿದೆ. ಎಂತಲೇ ಯಾವ ದೇಶ ಇಂದು ಸುಖಸಮಾಧಾನದಲ್ಲಿದೆಯೋ ಆ ದೇಶದ ವಿದೇಶಾಂಗನೀತಿ ಯಶಸ್ವಿಯಾಗಿದೆ ಎಂದು ಹೇಳಬೇಕು.

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್‌ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

⊙ ಮಹಾಸತಿ ⊙

(ಸಣ್ಣ ಕತೆ) *

ಶ್ರೀ. ವೆಂ. ಮು. ಜೋಶಿ, ಧಾರವಾಡ

卐

ಮಹಾಸತಿಯೆಂದು ಯಾರಿಗೆ ಹೇಳಬೇಕು ? ಗಂಡನೇನು ಮಾಡಿದರೂ ಉದಾಸೀನಭಾವದಿಂದ ಅವನನ್ನು ಅನುಸರಿಸುವ ಹೆಂಡತಿಗೋ ? ಅವನನ್ನು ಕರ್ತವ್ಯ ಪಥದಲ್ಲಿ ನಡೆಸುವ ಕರ್ತವ್ಯಕ್ಕಾಗಿ, ಎಂತಹ ಸಂಕಟದಲ್ಲಿಯೂ ಬೀಳಲು ಸಿದ್ಧಳಾದ ಮಡದಿಗೋ ?

卐

ಅದೊಂದು ಹಳೆಯ ಕೋಟೆಯಲ್ಲಿಯ ಮಹಾಸತಿಯ ಕಲ್ಲು !

ಬರೀ ಅಂಥ ಕಲ್ಲುಗಳನ್ನು ನೋಡುವುದರಲ್ಲಿ ಏನಿದೆ? ಆದರೆ ಮುಂಬಯಿಯಂಥ ಪಟ್ಟಣಗಳಲ್ಲಿ ವಾಸಿಸಿದ ಮನುಷ್ಯ ಕಾಡು ಕೊಂಕಣಪಟ್ಟಿಯಲ್ಲಿ ಬಂದಾಗ, ಇಂಥ ಕೋಟೆ-ಕೊತ್ತಳಗಳೇ ನೋಡುವಂಥ ವಸ್ತುಗಳಲ್ಲವೇ ?

ಆ ಊರ ಒಬ್ಬ ಹುಡುಗನನ್ನು ಕರೆದುಕೊಂಡು, ನಾನು ಆ ಕೋಟೆಯನ್ನು ನೋಡಲು ಹೋದೆ.

ಕೋಟೆ ಚಿಕ್ಕದೇ ಆಗಿತ್ತು. ಕೋಟೆಯು ತುಂಬ ಹಳೆಯದು ಎಂಬುದನ್ನು, ಅದರ ಹಾಳುಬೀಳುಸ್ಥಿತಿಯಿಂದ ತಿಳಿಯಬಹುದಿತ್ತು. ಅದರ ಕೆಲ ಬುರುಜುಗಳು ಕುಸಿದು ಕೆಳಗೆ ಬಿದ್ದಿದ್ದುವು. ಪ್ರವೇಶದ್ವಾರವೆಲ್ಲ ಹುಲ್ಲುಬಳ್ಳಿಗಳಿಂದ ಮುಚ್ಚಿಹೋಗಿತ್ತು. ಅಂಥದರೊಳಗಿಂದ ಹಾಯ್ದು ಹೋಗುವಾಗ, ಹೆಜ್ಜೆಹೆಜ್ಜೆಗೆ ಹಾವಿನ ಅಂಜಿಕೆಯಾಗುತ್ತಿತ್ತು. ನನ್ನ ಜತೆಗಿದ್ದ ಹುಡುಗ ಕೋಟೆಯ ಒಳಭಾಗವನ್ನೆಲ್ಲ ತೋರಿಸಿದ. ನಾಲ್ಕು ಬದಿಗೂ ಗೋಡೆಗಳಿಗೆ ಅಲ್ಲಲ್ಲಿ ದೊಡ್ಡ ದೊಡ್ಡ ಕಿಂಡಿಗಳು ಬಿದ್ದಿದ್ದುವು. ಆ ಗತ ಕಿಲ್ಲೇದಾರನ ರಂಗಮಹಲಿನ ತುಂಬ ಗಿಡಗಂಟೆಗಳು ತುಂಬಿಹೋಗಿದ್ದುವು. ಅಲ್ಲಿಯ ಕತ್ತಲೆಯಂತೂ ಹೇಳತೀರದು. ನಮ್ಮ ಹೆಜ್ಜೆಯ ಸಪ್ಪಳವಾದೊಡನೇ, ಅಲ್ಲಿಯ ಗೂಗೆ ಘೂತ್ಕರಿಸಿ, ನಮ್ಮ ಸ್ವಾಗತವಾಯಿತು. ಒಂದು ಕಾಲಕ್ಕೆ ಅದು ರಂಗಮಹಲು; ಈಗ ಅಲ್ಲಿ ಗೂಗೆಗಳ ವಾಸ್ತವ್ಯ. ಕಾಲನ ಕ್ರೂರಮಹಿಮೆಯ ಕಲ್ಪನೆ ನನಗಾಗ ಆಯಿತು.

ಅನಂತರ ನಾವು, ಆ ಮಹಾಸತಿಯ ಶಿಲೆಯತ್ತ ಹೊರಳಿದೆವು. ಒಂದು ಬುರುಜಿನ ಹತ್ತಿರವೇ ಅದನ್ನು ನಿಲ್ಲಿಸಲಾಗಿತ್ತು. ಆ ಶಿಲೆಯ ಮೇಲೆ ಕೆಲ ಬಾಡಿದ ಹೂಗಳು ಬಿದ್ದಿದ್ದುವು. ಆ ಮಹಾಸತಿಯ ವಂಶಜರು ಇಂದೂ ಇರುತ್ತಾರೆ; ಅವರೇ ದಿನಂಪ್ರತಿ ಇಲ್ಲಿಗೆ ಬಂದು ಪೂಜೆಮಾಡಿ ಹೋಗುತ್ತಾರೆ— ಇದಿಷ್ಟು ಸಂಗತಿ ನನ್ನ ಜತೆಯಲ್ಲಿಯ ಹುಡುಗನಿಂದ ತಿಳಿಯಿತು. ಅದೇನೇ ಇದ್ದರೂ ಆ ಮಹಾಸತಿ ಮಾತನಾಡಲಾರಳು.

ಕೋಟೆಯನ್ನೇರುವಾಗಲೇ ಸಹಜವಾಗಿಯೇ ಕೈಗೆ ಹತ್ತಿದ ಕೆಲ ಹೂಗಳನ್ನು ಕೊಯ್ದಿರಿಸಿಕೊಂಡಿದ್ದೆ. ಅದರಲ್ಲಿಯ ನಾಲ್ಕು ಹೂಗಳನ್ನು ಆ ಸತಿಯ ಮೇಲೆ ಏರಿಸಿದೆ. ಹತ್ತಿರವೇ ಇದ್ದ ಆ ಬುರುಜನ್ನು ಏರಿ, ಸುತ್ತಲಿನ ದೃಶ್ಯವನ್ನು ಕಂಡು, ಬಳಿಕ ನದಿಯತ್ತ ಹೊರಡಬೇಕೆಂದು ಎಣಿಕೆ ಹಾಕಿದೆ. ಆ ಬುರುಜು ಎತ್ತರವಾಗಿತ್ತು. ಅದರ ತುದಿ ಜಾರುಗುಂಡಿಯಂತಿತ್ತು. ನೋಡುವವನ ಕಣ್ಣು ತಪ್ಪಿ ಕಾಲು ಜಾರಿಬಿಟ್ಟರೆ, ಅವನ ಎಲುಬಿನ ಪುಡಿಯೂ ಸಿಗಲಾರದು. ಆ ಬುರುಜಿನ ಕೆಳಗೆ ಅಜಸ್ರ ಕಲ್ಲು ಬಂಡೆಯ ಕಂದಕ. ಆ ಕಂದಕವನ್ನು ನೋಡಿ ನನ್ನ ಮೈಮೇಲೆ ಮುಳ್ಳೆದ್ದಿತು. ಹೆದರಿ ಹಿಂದಕ್ಕೆ ಸರಿದೆ. ಒಬ್ಬ ಮನುಷ್ಯ ಆ ಸತಿಯ ಪೂಜೆ ನಡೆಸಿದ್ದ. ನಾನು ಸಾವಕಾಶವಾಗಿ ಅವನ ಹತ್ತಿರ ನಡೆದೆ. ಪರಕೀಯನನ್ನು ನೋಡಿ ಅವನಿಗೂ ಆನಂದವಾಗಿರಬೇಕು. ಅವನೇ ಮಾತಿಗೆ ಮೊದಲು ಮಾಡಿದ.

" ಈ ಮಹಾಸತಿಯನ್ನು ನೋಡಲಿಕ್ಕೆ ಬಂದೀರೇನು ? "

" ಹೌದು "

" ಬಹಳ ಹಳೆಯದು ಇದು. ೩-೪ ನೂರು ವರ್ಷ ಆತು ನೋಡಿರಿ. ನನ್ನ ಅಮ್ಮನ ಕಕ್ಕನ.... " ತನ್ನ ವಂಶವೃಕ್ಷದ ಯಾವುದೋ ಮುರುಕುಟೊಂಗೆಯತ್ತ ಅವನು ನನ್ನನ್ನು ಎಳೆಯುತ್ತಿದ್ದ.

" ಓಹೋ ? ನೀವು ಈ ಮಹಾಸತಿಯ ವಂಶಜರು ಹಾಗಾದರೆ ! "

" ಹೌದು. ದಿನಂಪ್ರತಿ ನಾವೇ ಇವಳ ಪೂಜೆ ಮಾಡಬೇಕಾಗುತ್ತದೆ. ಒಳ್ಳೇ ಜಾಗ್ರತವಿದ್ದಾಳೆ ಈ ದೇವಿ. ನಾವು ಪೂಜೆ ತಪ್ಪಿಸಿದರೆ, ನಮ್ಮಲ್ಲಿ ಹುಡುಗರೇ ಬದುಕಲಾರರು. "

ಉಕ್ಕಿ ಬರುವ ನಗುವನ್ನು ತಡೆದು ನಾನು ಪುನಃ ಪ್ರಶ್ನಿಸಿದೆ.

" ಈ ಹೆಣ್ಣುಮಗಳು ಏನಿದ್ದಳು ? "

" ಇಲ್ಲಿಯ ಕಿಲ್ಲೇದಾರನ ಹೆಂಡತಿ. "

" ಹೌದೇನು ? "

" ಅವಳು ಕಿಲ್ಲೇದಾರನ ಬಿಟ್ಟ ಹೆಂಡತಿ ಇದ್ದರೂ, ಆ ಕಿಲ್ಲೇದಾರ ಸತ್ತಾಗ ಅವನ ಕೂಡ ಸತಿ ಹೋದಳು. ಸ್ವರ್ಗದೊಳಗ.... "

" ಬಿಟ್ಟ ಹೆಂಡತಿ ಸತಿ ಹೋದಳೇ ? ಹಾಗಾದರೆ ಅವನ ಪ್ರೀತಿಯ ಹೆಂಡತಿ ? " ನನ್ನ ಜಿಜ್ಞಾಸೆಯನ್ನು ನಾನು ತಡೆಯದಾದೆ. ಸಹವಾಸವಿಲ್ಲದ ತ್ಯಾಜ್ಯಪತ್ನಿ ಗಂಡನ ಜತೆಯಲ್ಲಿ ಅಗ್ನಿಪ್ರವೇಶ ಮಾಡಿದ್ದಾದರೆ, ಹಗಲಿರುಳೂ ಆ ಗಂಡನ ಸಹವಾಸ-

---

* ಮಹಾರಾಷ್ಟ್ರದ ಸುಪ್ರಸಿದ್ಧ ಕತೆಗಾರ ಶ್ರೀ. ವಿ. ಸ. ಖಾಂಡೇಕರ ಅವರ ' ಸತಿ ' ಎಂಬ ಕತೆಯ ಅನುವಾದ. —ಲೇ.

ದಲ್ಲಿದ್ದ ಅವನ ಮೋಹದ ಮಡದಿಗೆ ಗಂಡನ ವಿರಹದ ಒಂದು ಕ್ಷಣವಾದರೂ ಸಹಿಸುವುದಾಗಿದ್ದೀತೇ ? ಆ ಕ್ಷಣ ಅವಳು ಆ ಅಜಸ್ರ ಕಂದಕದಲ್ಲಿ ಹಾರಿ ಸತ್ತುಹೋಗಿರಬೇಕು— ಎಂದು ಯೋಚಿಸುತ್ತಲೇ ಪುನಃ ಕೇಳಿದೆ :

" ಆ ಕಿಲ್ಲೇದಾರಗ ಇಬ್ಬರು ಹೆಂಡಂದಿರು ಇದ್ದರೇನು ? "

" ಹೌದು ಇಬ್ಬರಿದ್ದರು, ಇಬ್ಬರೂ ಒಂದೇ ದಿನ ಈ ಲೋಕ ಬಿಟ್ಟರು. ತನ್ನ ತರ್ಕ ನಿಜವಾದಾಗಿನ ಆನಂದ ವಿಲಕ್ಷಣವಾಗಿರುತ್ತದೆ. ನಾನು ಅವನನ್ನು ಸಂತೋಷಗೊಳಿಸುವುದಕ್ಕಾಗಿ ಹೇಳಿದೆ : "ಸ್ವರ್ಗದಲ್ಲಿ ಈ ಇಬ್ಬರು ಹೆಂಡಿರ ಸ್ವಾಗತವೂ ಸಂಭ್ರಮದಿಂದಾಗಿರಬೇಕು ! "

ಅವನು ಉಪಹಾಸದಿಂದ ಉದ್ಗರಿಸಿದ :

" ಇಬ್ಬರಿಗೂ ಸ್ವರ್ಗ ಸಿಕ್ಕುವುದು ಹೇಗೆ ? "

" ಯಾಕೆ ? "

" ಆ ಪ್ರೀತಿಯ ಹೆಂಡತಿ ಹೋಗಿದ್ದಾಳು, ರೌರವ ನರಕಕ್ಕೆ ? "

" ಅವನ ಮೋಹದ ಮಡದಿಯೇ ? "

" ಹೌದು ! "

ಆಶ್ಚರ್ಯದ ಅದ್ಭುತ ತೆರೆಯೊಂದು ನನ್ನ ಮನವನ್ನು ನುಚ್ಚುನೂರು ಮಾಡಿತು. ಅವನು ಮತ್ತೆ ಮುಂದಿನ ಕತೆ ಹೇಳತೊಡಗಿದ :

" ಆಗಿನ ಕಾಲಕ್ಕೆ ಈ ಕೋಟೆಯೆಂದರೆ ಇಡೀ ಕೊಂಕಣ ಕರಾವಳಿಗೇ ಮೂಗಿನಂತಿತ್ತು. ಗೋಮಾಂತಕ (ಗೋವೆ) ವನ್ನು ಗೆದ್ದ ಮದಾಂಧರಾದ ಫರಂಗಿಯವರು, ಈ ಕೋಟೆಯನ್ನು ಗೆಲ್ಲಲು ಬರುವವರಿದ್ದರು. ಈ ನದಿಯ ಆ ಬದಿಗೆ ಅವರು ಬೀಡು ಬಿಟ್ಟಿದ್ದರು. ಕೋಟೆಯಲ್ಲಿ ಆಗ ಕೇವಲ ಕೆಲವೇ ಸೈನ್ಯವಿತ್ತು. ಬಾದಶಹನತ್ತ ಸಹಾಯದ ಬಗ್ಗೆ ಪತ್ರವನ್ನು ಕಿಲ್ಲೇದಾರ ಆಗಲೇ ಬರೆದು ಬಿಟ್ಟಿದ್ದ. ಆದರೆ ಪತ್ರ ಮುಟ್ಟಿ ಸಹಾಯಕ್ಕೆ ಸೈನ್ಯ ಬರುವವರೆಗೆ— ? ಇತ್ತ ಫರಂಗಿಯವರಿಗೂ ನಿಸರ್ಗದ ತಡೆ ನಡುವೆ ನಿಂತಿತ್ತು. ಆಗ ಪೂರ್ಣ ಮಳೆಗಾಲ. ಈ ಹೊಳೆ ತುಂಬಿ ಹರಿಯುತ್ತಿತ್ತು. ಫರಂಗಿಯವರ ಹತ್ತಿರ ಸಾಕಷ್ಟು ನಾವೆಗಳಿರಲಿಲ್ಲ. ನದಿಯ ಬದಿಯಲ್ಲಿಯೇ ಬಹುದಿನಗಳ ವರೆಗೆ ಕಡೆಯುವುದೂ ಅಸಾಧ್ಯವಾಗಿತ್ತು ಅವರಿಗೆ. ಹೊಳೆ ತುಂಬಿ ಹರಿಯುತ್ತಿದ್ದರೂ, ಮುಂದೆ ೪-೬ ಮೈಲುಗಳ ಅಂತರದಲ್ಲಿ ಕಿರಿಯಾಳವಾಗಿ ಹರಿಯುತ್ತಿತ್ತು. ಆದರೆ ಆ ಸ್ಥಳ ಭಯಾನಕವಾದ ದಟ್ಟ ಕಾಡಿನಿಂದ ತುಂಬಿ ಹೋಗಿ ರಹಸ್ಯಮಯವಾಗಿ ಉಳಿದಿತ್ತು. ಆ ಹಾದಿ ಫರಂಗಿಯವರಿಗೆ ಗೊತ್ತಾಗಿ ಹೋಗಿದ್ದರೆ, ಎರಡು ನಿಮಿಷದಲ್ಲಿಯೆ ಕೋಟೆಯನ್ನು ಗೆಲ್ಲಬಹುದಿತ್ತು. ಆ ಹಾದಿಯ ಗುಟ್ಟು ಕೇವಲ ಈ ಕಿಲ್ಲೇದಾರನಿಗಷ್ಟೇ ಗೊತ್ತಿತ್ತು. ಉಳಿದವರಿಗೆ ಅದರ ಅರಿವಿರಲಿಲ್ಲ. "

ಬದಿಯ ಹುಲ್ಲಿನಲ್ಲಿ ಏನೋ ಸರ-ಸರ ಸಪ್ಪಳವಾಯಿತು. ನಾನು ಮತ್ತು ಆ ಹುಡುಗ ಬೆಚ್ಚಿ ಬಿದ್ದೆವು. ಆದರೆ ಆ ಮನುಷ್ಯ ಶಾಂತಚಿತ್ತನಾಗಿಯೇ ಹೇಳಿದ: " ಹೆದರಬ್ಯಾಡ್ರಿ ಅದೊಂದು ಬಳೆಗಡಕ ಹಾಂವು. ಇದ್ದಾಗ ಈ ಹೆಂಡತಿಗೆ ತ್ರಾಸು ಕೊಟ್ಟ. ಈಗ ಆ ಕಿಲ್ಲೇದಾರ ಹಾಂವು ಆಗ್ಯಾನ. ಎಷ್ಟೋ ಸಾರೆ ಅದು ಈ ಶಿಲೆಯ ಮೇಲೆ ಬಿದ್ದಿರತದ " ಹಾಂವು ಸರಸರನೇ ಹುಲ್ಲಿನ ಪೊದೆಯೊಳಗೆ ಸೇರಿತು. ನಾನು ಮತ್ತೆ ಕೇಳಿದೆ:

" ಮುಂದೇನಾಯಿತು ? "

" ಮುಂದೆ, ಅಂಥ ಸ್ಥಿತಿಯಲ್ಲಿಯೇ ಕೋಟೆಯಲ್ಲಿ ಕೀರ್ತನೆ ನಡೆದಿತ್ತು. ಕತೆ ರಾಮಾಯಣದ್ದು. ಹರಿದಾಸರು ಕೀರ್ತನೆಯಲ್ಲಿ, ಸೀತಾದೇವಿ ಹನುಮಂತನಿಗೆ ವರ ಕೊಟ್ಟ ಕತೆ ಹೇಳಿದರು. ಮುಂದೆ ನಿನ್ನ ಜಾತಿಯವರೇ ಭೂಮಿಯ ಮೇಲೆ ರಾಜ್ಯವಾಳಿರೆಂದು, ಸೀತಾದೇವಿ ಹನುಮಂತನಿಗೆ ವರ ಕೊಟ್ಟಳಂತೆ. ಫಿರಂಗಿಯವರ ಸೈನ್ಯ ಕಂಡು, ಕಿಲ್ಲೇದಾರ ಮೊದಲೇ ಪೇಚಿನಲ್ಲಿ ಬಿದ್ದಿದ್ದನು. ಸೀತಾದೇವಿಯ ವರದ ಕತೆಯನ್ನು ಕೇಳಿ, ಅವಳ ವರ ಇಂದು ಸತ್ಯವಾಗುತ್ತದೆ— ಎಂದು, ಅವನ ಮನಸ್ಸಿನಲ್ಲಿ ದೃಢವಾಗಿ ಮೂಡಿತು. ನಡುರಾತ್ರಿಯಲ್ಲಿ ಯಾರಿಗೂ ತಿಳಿಯದಂತೆ ತಾನೇ ಆ ಫಿರಂಗಿಯವರ ಬಳಿಗೆ ಹೋಗಿ, ಆ ಗುಟ್ಟಿನ ಹಾದಿಯನ್ನೂ ತೋರಿಸಿ, ಅವರಿಗೆ ಮಾಂಡಲೀಕನಾಗಿಯಾದರೂ ಕೋಟೆಯ ಯಜಮಾನ್ಯ ಕಾಯ್ದುಕೊಳ್ಳಬೇಕು—ಎಂದು ಅವನು ನಿರ್ಧರಿಸಿದ.

ಮಲೇರಿಯಾ
ಇನ್ಫ್ಲುಯೆಂಜಾ
ಮತ್ತು
ಯಾವತ್ತೂ ಜ್ವರಗಳು
ಒಡನೆ ವಾಸಿ ಹೊಂದುತ್ತವೆ.
ಶ್ರೀಮಂತರ—ಬಡಬಗ್ಗರ—ಕೂಲಿಕಾರರ ಎಲ್ಲರ ಸಲುವಾಗಿ
ಜ್ವರಗಳ ಮೇಲೆ ರಾಮಬಾಣ ಔಷಧ.
ಮಾಧವನ್ ಸನ್ಸ್ ಮತ್ತು ಕಂ. ಕೆಮಿಸ್ಟ್ಸ್,
ಮುಂಬಯಿ—೨.

ಶಾಂತಿಸೇವಾ ಸದನದ ಸುಂದರ ಪ್ರಕಟನೆ

ವಿಜಯಶ್ರೀ

ಮಿರ್ಜಿ ಅಣ್ಣಾರಾಯರ

ಉತ್ಕೃಷ್ಟ ಸಣ್ಣ ಕತೆಗಳ ಸಂಗ್ರಹ.
ಬೆಲೆ: **ಒಂದು ರೂಪಾಯಿ.**
ಇದೀಗ ಪ್ರಕಟವಾಗಿದೆ.
ದೊರೆಯುವ ಸ್ಥಳ :

ಶ್ರೀ. ಮಿರ್ಜಿ ಅಣ್ಣಾರಾಯರು,
ಪ್ರೊ. **ಉಗಾರ ಬುದ್ರುಕ**
ಬೆಳಗಾಂವ

ತನ್ನ ಮೋಹದ ಮಡದಿಯ ಹೊರತು ಇತರರಿಗೆ ತನ್ನ ಈ ಮನಸ್ಸಿನ ಈ ನಿರ್ಧಾರದ ಲವಲೇಶವೂ ತಿಳಿಯದ ಹಾಗೆ ಗುಟ್ಟಾಗಿರಿಸಿದ. ಅವನ ಪ್ರೀತಿಯ ಹೆಂಡತಿ ಈ ಮಾತಿಗೆ ಸುತರಾಂ ಒಪ್ಪಲಿಲ್ಲ. ಅವಳು ಗಂಡನನ್ನು ಪರಿಪರಿಯಾಗಿ ಬೇಡಿದಳು, ಕಾಡಿದಳು, ಕೊನೆಗೆ ಕಾಲಿಗೆ ಬಿದ್ದಳು; ಆದರೆ ಕಿಲ್ಲೇದಾರ ಹೆಣ್ಣುಬುದ್ಧಿ-ಯವನಿರಲಿಲ್ಲ.''

ಸೂರ್ಯ ಪಡುವಣ ಕಡಲಿನತ್ತ ನಡೆದಿದ್ದ. ಆ ಇಳಿಯುವ ಬಿಸಿಲಿನಲ್ಲಿ ಮುಂದಿನ ಕತೆ ಕೇಳತೊಡಗಿದೆ.

" ನಿರ್ಧರಿಸಿದಂತೆ, ಅಂದು ಮಧ್ಯರಾತ್ರಿ ಕಿಲ್ಲೇದಾರ ತನ್ನ ಮೋಹದ ಮಡದಿಯ ರಂಗಮಹಲ ಬಿಟ್ಟು ಹೊರಡುವುದರಲ್ಲಿದ್ದ. ಅವನ ಪ್ರೀತಿಯ ಹೆಂಡತಿ ಅವನನ್ನು ಹತ್ತಿರ ಕರೆದು " ಹೋಗುವ ಮುಂಚೆ ಹಾಲು ಕುಡಿದು ಹೋಗಬೇಕು " ಎಂದಳಂತೆ. ಕಿಲ್ಲೇ-ದಾರನಿಗೆ ಆಗ ಏನೂ ಬೇಕಿರಲಿಲ್ಲ. ಆದರೆ ಮೋಹದ ಮಡದಿ ತಂದಿತ್ತ ಹಾಲನ್ನು ಒಂದೇ ಗುಟುಕಿಗೆ ಕುಡಿದುಬಿಟ್ಟ. ಎರಡನೆಯ ದಿನ ಮುಂಜಾನೆ ಆ ಮಹಲಿನಿಂದ ಕಿಲ್ಲೇದಾರನ ಹೆಣವನ್ನೇ ಹೊರಗೆ ತರಬೇಕಾಯಿತು "

ಪ್ರೀತಿಯ ಹೆಂಡತಿ ಗಂಡನಿಗೆ ವಿಷವುಣಿಸಿ ಕೊಲ್ಲಬೇಕೆಂದರೆ ? ಅದೆಂಥ ವಿಚಿತ್ರಘಟನೆ! ಗಂಡ ಶತ್ರುಗಳಿಗೆ—" ಅವನು ಮತ್ತೆ ಹೇಳತೊಡಗಿದ :

" ಅವಳು ಗಂಡನಿಗೆ ವಿಷವನ್ನೇನೋ ಉಣಿಸಿದಳು. ಆದರೆ ಗಂಡ ಸಂಕಟದಿಂದ ಚಡಪಡಿಸುವುದನ್ನು ಕಂಡು ಹೌಹಾರಿದಳು. ಊರ ಜನವೆಲ್ಲ ಕೂಡಿದರು. ಉಪಚಾರಗಳ ಮೇಲೆ ಉಪಚಾರ ನಡೆದುವು. ಆದರೆ ವಿಷ ಬಹಳೇ ಜಾಜ್ವಲ್ಯವಾಗಿತ್ತು. ಕಿಲ್ಲೇ-ದಾರ ಉಳಿಯಲಿಲ್ಲ ಪ್ರೀತಿಯ ಹೆಂಡತಿ ತಾನೇ ವಿಷ ಕುಡಿಸಿದೆ-ನೆಂದು ಒಪ್ಪಿಕೊಂಡಳು. ಕೂಡಿದ ಜನ ಎಷ್ಟು ಒತ್ತಾಯ ಪಡಿಸಿ-ದರೂ, ವಿಷ ಕುಡಿಸುವುದಕ್ಕೆ ಕಾರಣ ಮಾತ್ರ ಹೇಳಲಿಲ್ಲ.

ಮರುದಿನವೇ ಕಿಲ್ಲೇದಾರನ ದಹನ ವಿಧಿಯ ಸಿದ್ಧತೆ ನಡೆಯಿತು. ಅವನ ಪ್ರೀತಿಯ ಹೆಂಡತಿ ತಾನು ಸತಿ ಹೋಗುವುದಾಗಿ ಹಟ ಹಿಡಿದಳು. ಆದರೆ ಸ್ವಂತ ಗಂಡನಿಗೆ ವಿಷ ಉಣಿಸಿದವಳಿಗೆ ಈ ಪವಿತ್ರ ಸತೀಸಹಗಮನಕ್ಕೆ ಸಮ್ಮತಿಯನ್ನು ಕೊಡುವವರಾರು ? ಬಿಟ್ಟ ಹೆಂಡತಿ ಸ್ವಸಂತೋಷದಿಂದ ಸತಿ ಹೋಗಲು ಮುಂದೆ ಬಂದಳು. ತನ್ನ ಸವತಿಯತ್ತ ತಿರಸ್ಕೃತ ದೃಷ್ಟಿ ಬೀರಿ, ಅವಳು ಗಂಡನ ಜತೆಯಲ್ಲಿ ಅಗ್ನಿಪ್ರವೇಶ ಮಾಡಿದಳು. ಮುಂದೆ ಎಷ್ಟೋ ದಿನ ಈ ಸತಿಯ ಉತ್ಸವ ನಡೆಯಿತು. "

ನನ್ನ ಮನಸ್ಸು ಆ ಕಿಲ್ಲೇದಾರನ ಪ್ರೀತಿಯ ಹೆಂಡತಿಯ ಬಗ್ಗೆ ವಿಚಾರ ನಡೆಸಿತ್ತು. ' ಆ ಮಿಂಚಿನ ಮಹಿಳೆಯ ಕೊನೆ ಏನಾಯಿತು? ' ಎಂದು ನನ್ನ ಮನಸ್ಸಿನ ಉತ್ಸುಕತೆ ಅವನಿಗೆ ತಿಳಿಯಿತೋ ಏನೋ? ಅವನು ಮತ್ತೆ ಹೇಳಹತ್ತಿದ. " ಗಂಡನ ಕೊಲೆ ಮಾಡುವವಳು ಕ್ರೂರ ಪಿಶಾಚಿ ಸಮಾನ—ಎಂದು ನ್ಯಾಯಾಲಯ ನಿರ್ಧರಿಸಿತು. ಅವಳನ್ನು ಆ ಬುರುಜಿನ ಮೇಲಿಂದ ಕೆಳಗಿನ ಕಲ್ಲುಬಂಡೆಯ ಕಂದಕದಲ್ಲಿ ನೂಗಿಸುವುದು — ಎಂದು ನ್ಯಾಯಾಲಯದ ತೀರ್ಮಾನವಾಯಿತು. ಆಯಾಸವಿಲ್ಲದವಳಂತೆ ಅವಳು ಬುರುಜನ್ನು ಹತ್ತಿದಳಂತೆ. ತಾನಾಗಿಯೇ ಕಂದಕದಲ್ಲಿ ಜಿಗಿಯು-ತ್ತೇನೆ ಎಂದು ತೀರ್ಮಾನಮಾಡಿದಳಂತೆ. ' ಮಗು ಮಾತೆಯ ಮಡಿಲನ್ನು ಸೇರುವಂತೆ, ಅವಳು ಆ ಬುರುಜನ್ನು ಏರಿದಳು ' ಎಂದು ಎಷ್ಟೋ ಹಳಬರು ಹೇಳುತ್ತಾರೆ. ಬುರುಜನ್ನು ಏರಿ ಕೆಳಗಿನ ಆಜಸ್ರ ಕಂದಕವನ್ನು ನೋಡಿ, ಕೆಲ ಹೆಜ್ಜೆ ಹಿಂದಕ್ಕೆ ಸರಿದಳು. ' ಪಾಪಿಗಳು ಅಂಜುವುದು ಸ್ವಾಭಾವಿಕ; ಜಿಗಿಯುವುದಕ್ಕೆ ಧೈರ್ಯ ಬೇಕಲ್ಲ! ' ಎಂದು ಕೂಡಿದ ಜನ ಆಡಿದರು. ಆದರೆ ಅವಳು ಹಿಂದಕ್ಕೆ ಸರಿದದ್ದು ಕೆಲ ಶಬ್ದಗಳನ್ನಾಡುವುದಕ್ಕೆ. ತಾನು ಗಂಡನಿಗೆ ವಿಷವನ್ನೇಕೆ ಉಣಿಸಿದೆ ಎಂಬುದನ್ನು, ಉಬ್ಬಿದ ಕಂಠದಿಂದ ತೊದಲುತ್ತ ಎರಡು ಮಾತಿನಲ್ಲಿ ಹೇಳಿದಳು. ಅದನ್ನು ಕೇಳಿ ಅಚ್ಚರಿಗೊಂಡ ಜನ, ' ವಿಧಿಸಿದ ಶಿಕ್ಷೆ ಅನ್ಯಾಯದ್ದಾಗಿದೆ ' ಎಂದು ಇನ್ನೂ ವಿಚಾರಿಸುತ್ತಿರುವಾಗಲೇ ಅವಳು ಕಂದಕದಲ್ಲಿ ಧುಮುಕಿದಳು. ಕೆಳಗಿನ ಕಲ್ಲುಬಂಡೆ ಅವಳ ನೆತ್ತರದಿಂದ ರಕ್ತವರ್ಣವಾಗಿ ರಾರಾಜಿಸತೊಡಗಿತು. ಅಲ್ಲಿಯ ರಕ್ತದ ಕಲೆಗಳು ಎಷ್ಟೋ ದಿನ ಅಚ್ಚಳಿಯದೆ ಹಾಗೇ ಉಳಿದಿದ್ದು-ವೆಂದು ಹಳೆಯ ಜನರು ಹೇಳುತ್ತಾರೆ.''

ಆ ಮನುಷ್ಯನ ದೃಷ್ಟಿ ಸಹಜವಾಗಿ ನನ್ನ ಕೈಯಲ್ಲಿಯ ಹೂವು-ಗಳತ್ತ ಹೊರಳಿತು. ಮತ್ತೆ ಹೇಳಿದ.

'' ಈ ಮಹಾಸತಿಗೆ ಏರಿಸಿರಿ ಆ ಹೂವುಗಳನ್ನು, ಒಳ್ಳೆ ಜಾಗೃತ-ವಿದ್ದಾಳೆ ಈ ದೇವಿ! "

ನಾನು ಒಂದೆರಡು ಹೂವುಗಳನ್ನು ಆ ಮಹಾಸತಿಯ ಕಲ್ಲ ಮೇಲೆ ಚೆಲ್ಲಿದೆ.

'' ಮತ್ತ ಈ ಉಳಿದ ಹೂವುಗಳನ್ನೇನು ಮಾಡ್ತೀರಿ.''

'' ಆ ಬುರುಜಿನ ಕೆಳಗಿನ ಕಂದಕದಲ್ಲಿಯ ಕಲ್ಲುಬಂಡೆಯ ಮೇಲೆ ಈ ಹೂವುಗಳನ್ನು ಏರಿಸುವೆ. ನಿಜವಾದ ಮಹಾಸತಿ ಅಲ್ಲಿದ್ದಾಳೆ! " ಎಂದು ಭಾವವಶನಾಗಿ ಹೇಳಿದೆ.

ಅರುಳು ಮರುಳು

(ಸಾಮಾಜಿಕ ಕಾದಂಬರಿ)

ಬರೆದವರು: ಶ್ರೀಮಾನ್ ಅ. ನ. ಕೃಷ್ಣರಾಯರು;
ಪ್ರಕಾಶಕರು: ಆನಂದ ಬ್ರದರ್ಸ್, ಬೆಂಗಳೂರು.

ಸಾಹಿತ್ಯನಿರ್ಮಾಣಕ್ಕಾಗಿಯೆ ತಮ್ಮ ಜೀವನವನ್ನು ಮುಡಿಪಾಗಿಟ್ಟಂತೆ ಮಾಡಿರುವ ಶ್ರೀ. ಅ. ನ. ಕೃಷ್ಣರಾಯರು, ಕನ್ನಡದಲ್ಲಿ ಕೊರತೆಯಿರುವ ಸ್ವತಂತ್ರ ಕಾದಂಬರಿಯ ಕ್ಷೇತ್ರವನ್ನು ಆಗಾಗ ತಮ್ಮ ಕೃತಿಗಳಿಂದ ತುಂಬುತ್ತಲಿರುವುದು ಸಮಾಧಾನದ ಸಂಗತಿ. ಇವರು ಬರೆದ ಕಾದಂಬರಿಗಳೆಲ್ಲ ಸಾಮಾಜಿಕ ಕಥಾವಸ್ತುಗಳಿಂದಲೇ ಕೂಡಿವೆ. ಒಂದೊಂದು ಕಾದಂಬರಿಯಲ್ಲಿಯೂ ಒಂದೊಂದು ಸಾಮಾಜಿಕ ಸಮಸ್ಯೆಯನ್ನು ಎತ್ತಿ ತೋರಿಸಿರುವುದಾಗಿ, ಅವರು ತಮ್ಮ ಮುನ್ನುಡಿಗಳಲ್ಲಿ ಬರೆದಿರುವರು. ಪದ್ಧತಿಯಂತೆ ಇದಕ್ಕೂ ಒಂದು ಆರೇಳು ಪುಟದ ಮುನ್ನುಡಿಯನ್ನು ಬರೆದು, ಅದರಲ್ಲಿ ನಮ್ಮ ನಾಡಿನಲ್ಲಿಯ ಹಳೆ-ಹೊಸ ಮತಧರ್ಮಸಂಸ್ಥೆಗಳಲ್ಲಿ ತಮಗೆ ದೋಷವೆಂದು ಕಂಡ ಸಂಗತಿಗಳನ್ನು ಕಟು ಮಾತುಗಳಿಂದ ಟೀಕಿಸಿದ್ದಾರೆ. ಅಂತಹ ದೋಷಪೂರಿತವಾದ ಧರ್ಮಸಂಸ್ಥೆಯ ಚರಿತ್ರೆಯೊಂದನ್ನೆ ಈ ಕಾದಂಬರಿಯನ್ನಾಗಿ ಬರೆದಿರುವೆನೆಂಬುದನ್ನು ಸೂಚಿಸಿದ್ದಾರೆ.

ಮುನ್ನುಡಿಯಲ್ಲಿ ಮೊದಲನೆಯ ಮಾತಾಗಿ 'ಧರ್ಮವೆಂದರೆ ಏನು?' ಎಂಬ ಪ್ರಶ್ನೆಯನ್ನೆತ್ತಿ, ಅದಕ್ಕೆ ಉತ್ತರ ಕೊಡುತ್ತ ಚರ್ಚಿಸಿದ ಮಾತುಗಳಲ್ಲಿ, ದೇವಧರ್ಮ ಅಥವಾ ವೇದಾಂತವೊಂದನ್ನೇ ಲೇಖಕರು ಕಣ್ಣೆದುರಿಗೆ ಇಟ್ಟುಕೊಂಡಿರುವಂತಿದೆ. ಭಾರತೀಯರ ಜೀವನಸಿದ್ಧಿಯಾದ ಚತುರ್ವಿಧ ಪುರುಷಾರ್ಥಗಳಲ್ಲಿ ಮೊದಲನೆಯದಾಗಿ ಇರುವ 'ಧರ್ಮ' ಎಂಬ ಮಾತು ಇಷ್ಟು ಸಂಕುಚಿತಾರ್ಥದಿಂದ ಕೂಡಿದುದಲ್ಲ; ಧರ್ಮ ಶಬ್ದದ ನಮ್ಮ ಪರಂಪರೆಯ ಅರ್ಥ 'ಧಾರಣಾತ್ ಧರ್ಮಮಿತ್ಯಾಹುಃ' ಎಂದಿದೆ. ಎಂದರೆ, ಯಾವುದು ಜಗತ್ತನ್ನು ಧಾರಣ ಮಾಡಬಲ್ಲುದೋ ಅರ್ಥಾತ್ ಸುಯಂತ್ರಿತವಾಗಿ ನಡೆಯಿಸಬಲ್ಲದೋ ಅದು ಧರ್ಮವೆನಿಸುವುದು. ಇದನ್ನು ಸಾಧಿಸುವುದಕ್ಕಾಗಿ ದೇವಧರ್ಮ, ವೇದಾಂತ, ಅಧ್ಯಾತ್ಮ ಇವೆಲ್ಲ ಸಾಧನೆಗಳನ್ನು ನಮ್ಮ ಸಂಸ್ಕೃತಿ ಒಪ್ಪಿಕೊಂಡಿದೆ. ಹೀಗಿರುವಾಗ ಧರ್ಮಸಾಧನಾಂಗಗಳನ್ನು 'ಧರ್ಮ' ಎಂಬ ವ್ಯಾಪಕಾರ್ಥದ ಶಬ್ದಗಳಲ್ಲಿ ಬಳಸುವುದು ಸರಿಯೇ?—ಎಂಬುದನ್ನು ಲೇಖಕರು ಸ್ವಲ್ಪ ವಿಚಾರ ಮಾಡಬೇಕಾಗಿತ್ತು.

ಹೋಗಲಿ, ಲೇಖಕರು ಭಾವಿಸಿದ ಧರ್ಮದ ಅರ್ಥವನ್ನೇ ಸದ್ಯ ಒಪ್ಪಿಕೊಂಡು ಮುಂದುವರಿಯೋಣ. ವೇದಾಂತ ಅಥವಾ ಅಧ್ಯಾತ್ಮ ಧರ್ಮವು ವೈಯಕ್ತಿಕ ವಿಕಾಸಸಾಧನೆ ಮಾತ್ರ ಆಗಬಲ್ಲುದೇ ಹೊರತು, ಸಮಾಜಕ್ಕೆಲ್ಲ ಒಂದೇ ಪ್ರಮಾಣದ ವಿಕಾಸಸಾಧನೆಯಾಗದು. ಹಾಗೆ ಸಮಾಜಕ್ಕೆಲ್ಲ ಅಧ್ಯಾತ್ಮ ಧರ್ಮವನ್ನು ಅನ್ವಯಿಸಬೇಕೆಂದು ಹೊರಟ ಚಟುವಟಿಕೆಗಳು — ಭಾರತದಲ್ಲಷ್ಟೇ ಅಲ್ಲ — ಯಾವ ದೇಶದಲ್ಲಿ ನಿರ್ದೋಷವಾಗಿ ಕಾರ್ಯ ಮಾಡಲು ಸಮರ್ಥವಾಗಿವೆ? ಕ್ರಿಸ್ತನ ಅಧ್ಯಾತ್ಮವನ್ನು, ಕ್ರೈಸ್ತ ಧರ್ಮಪೀಠಗಳು ಸಮಾಜದಲ್ಲಿ ಸಂಪೂರ್ಣವಾಗಿ ಹೊಂದಿಸಿವೆಯೇನು? ಅದರಂತೆಯೆ ಪೈಗಂಬರರ ಅಧ್ಯಾತ್ಮ ಧರ್ಮವನ್ನು ಇಸ್ಲಾಂ ಧರ್ಮಸಂಸ್ಥೆಗಳು ತಮ್ಮ ಸಮಾಜದಲ್ಲಿ ಹೊಂದಿಸಿ ತೋರಿಸಿವೆಯೇನು? ಯಾವ ದೇಶದಲ್ಲಿ ಈ ಮಾತು ಸಾಧ್ಯವಾಗಿದೆ? ಹೀಗಿರುವಾಗ ಭಾರತೀಯ ಧರ್ಮಸಂಸ್ಥೆಗಳನ್ನೇ ಬೈಯುವುದರಲ್ಲಿ ಅರ್ಥವೇನಿದೆ?

ಕಲೆಗಳಂತೆಯೇ ಅಧ್ಯಾತ್ಮ ಅಥವಾ ದೇವಧರ್ಮದಲ್ಲಿಯೂ ವರ್ಗನಿಷ್ಠ ಮತ್ತು ಸಮಾಜನಿಷ್ಠ ಎಂದು ಎರಡು ಪ್ರಕಾರದುವಿರುವುವು. ಅದರಲ್ಲಿಯೂ ಈ ಅಧ್ಯಾತ್ಮಧರ್ಮವು ತೀಕ್ಷ್ಣತಮವಾಗುತ್ತ ಹೋಗಿ ವ್ಯಕ್ತಿನಿಷ್ಠವಾಗುವುದೇ ಹೆಚ್ಚು. ಆದುದರಿಂದಲೇ ಅಧ್ಯಾತ್ಮಿಕ ಕ್ಷೇತ್ರದಲ್ಲಿ ಕೆಲವೊಂದು ವ್ಯಕ್ತಿಗಳ ಹೆಸರುಗಳೆ ವಿರಾಜಿಸುತ್ತಿರುವುವು ಹೊರತು, ಸಂಪೂರ್ಣ ಸಮಾಜಗಳ ಹೆಸರು ಎಲ್ಲಿಯೂ ಎಂದೂ ಕಂಡಿಲ್ಲ; ಕೇಳುವುದಿಲ್ಲ. ಇಂತಹ ವರ್ಗನಿಷ್ಠ—ವ್ಯಕ್ತಿನಿಷ್ಠ ಅಧ್ಯಾತ್ಮಧರ್ಮವನ್ನು ಸಮಾಜದಲ್ಲೆಲ್ಲ ಹರಡುವೆನೆಂದು ಹೊರಡುವುದು ವ್ಯರ್ಥಪ್ರಯತ್ನವೇ ಸರಿ. ಆದುದರಿಂದಲೇ ಭಾರತೀಯ ಧರ್ಮಸಂಸ್ಥೆಗಳಲ್ಲಿ ಅಧ್ಯಾತ್ಮಧರ್ಮದ ಸೂಕ್ಷ್ಮ ಮತಭಿನ್ನತೆಗಳು ಬೇಕಾದಷ್ಟು ಇದ್ದರೂ, ಅವೆಲ್ಲವೂ ಹೇಳುತ್ತಿರುವ ಸಮಾಜಧರ್ಮಗಳು ಒಂದೇ ಬಗೆಯವಾಗಿದ್ದುವು. ಎಲ್ಲವೂ ಸಮಾಜಕ್ಕೆ ದೈವಭಕ್ತಿ, ಸತ್ಯ, ಅಹಿಂಸೆ, ಬಂಧುಭಾವ, ಭೂತದಯೆ ಮೊದಲಾದ ಸದ್ಗುಣಗಳನ್ನು ಬೋಧಿಸಿದುವು. ಅದರಂತೆ ಸಮಾಜ ನಡೆದುಕೊಳ್ಳುತ್ತಿದ್ದಾಗ, ಧರ್ಮಾಧಿಕಾರಿಗೂ ಒಂದು ಬಗೆಯಲ್ಲಿ ಸಮಾಜದ ಹೆದರಿಕೆಯೆನಿಸಿ, ತನ್ನ ವರ್ತನೆಯನ್ನು ಕಾಯ್ದುಕೊಳ್ಳುತ್ತಲಿದ್ದ. ಧರ್ಮಾಧಿಕಾರಿಗಳೂ ಮನುಷ್ಯವ್ಯಕ್ತಿಗಳಾಗಿರುತ್ತಲಿದ್ದರು. ಮಾನವಸಹಜ ದೋಷಗಳು ಅವರಲ್ಲಿಯೂ ಇರುತ್ತಿರಬಹುದು. ಆದರೆ ಧರ್ಮಸಂಸ್ಥೆಗಳ ಸಂಸ್ಥಾಪನೆಯ ಉದ್ದೇಶವೇನೂ ಕೆಡುಕಲ್ಲ. ಈ ಮಾತನ್ನು — ಧರ್ಮಸಂಸ್ಥೆಗಳನ್ನು ಕಟುವಾಗಿ ಟೀಕಿಸಲು ಹೊರಟ — ಈ ಕಾದಂಬರಿಯೇ, ಲೇಖಕರಿಗೆ ಗೊತ್ತಿದ್ದೋ ಇಲ್ಲದೆಯೋ ಸಿದ್ಧಮಾಡಿ

ತೋರಿಸಿದೆ. 'ಲೇಖಕರಿಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ' ಎಂದು ಹೇಳುವುದಕ್ಕೆ ಕಾರಣವೆಂದರೆ, ಕಾದಂಬರೀ ಲೇಖನದ ಉದ್ದೇಶವೆಂದು ಮುನ್ನುಡಿಯಲ್ಲಿ ಸಾಧಿಸಿದ ತರ್ಕವೇ ಬೇರೆ; ಕಾದಂಬರಿಯ ಪರಿಣಾಮ ಫಲವೇ ಬೇರೆ—ಹೀಗಾಗಿದೆ. ವದತೋ ವ್ಯಾಘಾತದೋಷ. ಒಂದು ಗಿಡವನ್ನು ಕಡಿದುಹಾಕಬೇಕೆಂದು ಬಾಯಿಮಾತು; ಕೃತಿಯೇನೋ ಆ ಗಿಡಕ್ಕೆ ನೀರೆರೆದು ಬೆಳೆಸುವಂತಹದು. ಮುನ್ನುಡಿಯನ್ನು ಬರೆಯದೆ ಕಾದಂಬರಿಯನ್ನು ಬರೆದುಬಿಟ್ಟಿದ್ದರೆ, ನಮ್ಮ ಈ ವಿಮರ್ಶೆಯಲ್ಲಿ, ಈ ಮೊದಲಿನ ಮಾತುಗಳನ್ನೆಲ್ಲ ಹೇಳಬೇಕಾದ ಸಂದರ್ಭವೆ ಇರುತ್ತಿರಲಿಲ್ಲವೆಂದು ಹೇಳಬಹುದು.

ಆಧುನಿಕಕಾಲದ ನವೀನರೀತಿಯ ಆಧ್ಯಾತ್ಮಧರ್ಮಸಂಸ್ಥೆಯ ಚಿತ್ರವೊಂದನ್ನು ಈ ಕಾದಂಬರಿಯಲ್ಲಿ ಬಿಡಿಸಲಾಗಿದೆ. ಕಥೆ ನಡೆದಿರಬಹುದಾದ ಕಾಲಖಂಡವನ್ನು ಸೂಚಿಸುವಂತಹ ಸಾಮಾಜಿಕ ರಾಜಕೀಯ ಘಟನೆಗಳ ನಿಶ್ಚಿತಸೂಚನೆಗಳಾವುವೂ ಕತೆಯ ಹಿನ್ನೆಲೆಗೆ ಹೊಂದಿಕೆಯಾಗಿ ಬಂದಿಲ್ಲ. ಕತೆಗೆ ಕ್ಷೇತ್ರಗಳಾದುವು ಮುಖ್ಯವಾಗಿ ಬೆಂಗಳೂರು, ಮುಂಬಯಿ ನಗರಗಳು. ರಾಮಗಿರಿಯೊಂದು— ಮೈಸೂರು ರಾಜ್ಯದೊಳಗಿನ— ಗ್ರಾಮಪ್ರದೇಶ.

ಸ್ವಲ್ಪದರಲ್ಲಿಯೆ ಈ ಕಾದಂಬರಿಯಲ್ಲಿ ಗ್ರಥಿತವಾದ ಕತೆಯನ್ನು ಹೇಳಬೇಕೆಂದರೆ :

ಬೆಂಗಳೂರಲ್ಲಿ ವಾಸುದೇವರಾಯನೆಂಬವನೊಬ್ಬ ಇನ್ಸ್ಯುರನ್ಸ್ ಕಂಪನಿಯ ಏಜಂಟು. ಮದುವೆಯಾಗಿದ್ದ ಹೆಂಡತಿ ತೊನ್ನುರೋಗಿಯೆಂದು ತಿಳಿದು, ಅವಳನ್ನು ತ್ಯಜಿಸಿದವ. ರಾಮಸ್ವಾಮಿ, ಶಂಕರ ವಾಸುದೇವನ ಸ್ನೇಹಿತರು. ವಾಸುದೇವ ಸ್ವೇಚ್ಛಾಚಾರಿ; ಎಂತಲೆ ವೆಚ್ಚದಲ್ಲಿ ಧಾರಾಳಿ. ಅವನ ದುಂದುಗಾರಿಕೆ ಅವನ ಉದ್ಯೋಗದಲ್ಲಿ ವ್ಯತ್ಯಯ ತರುವುದಲ್ಲದೆ, ವಿಪರೀತ ಸಾಲಗುಳಿಯನ್ನಾಗಿಯೂ ಮಾಡುವುದು. ಅದೇ ಊರಲ್ಲಿ ಇನ್ನೊಂದು ದಾಂಪತ್ಯ, ಚೆನ್ನಕೇಶವ–ಪ್ರಮಿಳೆಯರದು. ಜವಳಿಅಂಗಡಿಯೊಂದರಲ್ಲಿ ಗುಮಾಸ್ತೆಯಾಗಿರುವ ಚೆನ್ನಕೇಶವಯ್ಯ, ೧೨೦ ರೂಪಾಯಿ ಸಂಬಳದ ಮಧ್ಯಮವರ್ಗದ ಸಂಸಾರಿ. ಹೆಂಡತಿ ಪ್ರಮಿಳೆಗೆ ಒಳ್ಳೆಯರೀತಿಯಲ್ಲಿ ಬದುಕಬೇಕೆಂದು ಆಸೆ. ಮೊದ-ಮೊದಲು ಆವಳು ಗಂಡನಿಗೆ ತೀರ ಅನುಕೂಲೆಯಾಗಿರುವಂತೆಯೆ ಲೇಖಕರ ಹೇಳಿಕೆಯಿದೆ. ಹೆಂಡತಿಯ ಹೇಳಿಕೆಯಂತೆ ಸಾಲಮಾಡಿ ಗಂಡ ಮನೆಕಟ್ಟಿಸಿದ. ಗಂಡನ ಸಾಲದ ಹೊರೆ ಇಳಿಸಲು ಸಹಾಯ ಮಾಡಬೇಕೆಂದು ಪ್ರಮಿಳೆ ಊರಲ್ಲಿ ಸಂಗೀತಪಾಠ ಹಿಡಿಯುವಳು. ಇದೇ ಕಾಲದಲ್ಲಿ ವಾಸುದೇವರಾಯನ ಕಣ್ಣಿಗೆಬಿದ್ದು, ತನ್ನ ಚೆಲುವಿಕೆಯಿಂದ ಅವನನ್ನು ಆಕರ್ಷಿಸುವಳು. ವಾಸುದೇವ ಅವಳನ್ನು ತನ್ನ ಬಲೆಯಲ್ಲಿ ಸೇರಿಸಿಕೊಳ್ಳಬೇಕೆಂದು, ಪ್ರಮಿಳೆಯನ್ನು ಉಪಾಯದಿಂದ ಇನ್ಸ್ಯುರನ್ಸ್ ಕಂಪನಿಯ ಎಜಂಟನ್ನಾಗಿ ಮಾಡಿಕೊಂಡು, ಅವಳಿಗೆ ಕೈತುಂಬ ಹಣ ದೊರೆಯುವಂತೆ ಮಾಡುವನು. ಒಂದು ದಿನ, ಇದ್ದು ದಿದ್ದ ಹಾಗೆಯೆ ಅವಳ ಮನೆಗೆ ಬಂದು, ಮಾತು-ಮಾತಾಡುತ್ತಿರುವಾಗಲೆ ಅವಳನ್ನು ಅಪ್ಪಿಕೊಂಡು ಬಿಡುವನು. ಅವಳು ಅಂದೆಯೆ ಅಸಮ್ಮತಿಯನ್ನೇನೂ ಸೂಚಿಸದೆ ಅವನ ಬಯಕೆಗೆ ಅಧೀನಳಾಗುವಳು.

ಗಂಡನಿಗೆ ಅನುಕೂಲಳಾಗಿರುವಂತೆಯೆ ನಟಿಸುತ್ತ, ಪ್ರಮಿಳೆಯ ಸಂಸಾರ ಕೆಲವು ದಿನ ಸಾಗುವುದು. ಒಂದು ದಿನ ಪ್ರಮಿಳೆಯ ಮನೆಯಲ್ಲಿಯೆ, ಗಂಡ ಚೆನ್ನಕೇಶವಯ್ಯನಿಗೆ ವಾಸುದೇವ–ಪ್ರಮಿಳೆಯರ ಕಾಮವ್ಯವಹಾರವು ಪ್ರತ್ಯಕ್ಷವಾಗಿ ಕಣ್ಣಿಗೆ ಬೀಳುವುದು. ಅವನು ದುಃಖದಿಂದ ನಿರಾಶನಾಗಿ ಅಂದೆಯೆ ಮನೆಬಿಟ್ಟವನು, ಎಲ್ಲಿ ಹೋದನೆಂಬುದು ಗೊತ್ತಾಗುವುದಿಲ್ಲ. ಗಂಡನ ಅಗಲಿಕೆಯ ಚಿಂತೆ (!) ಯಲ್ಲಿ ತಿಂಗಳೊಪ್ಪತ್ತು ಕಳೆದ ಮೇಲೆ, ಪ್ರಮಿಳೆ–ವಾಸುದೇವರಾಯರ ಕಾಮಸಂಬಂಧ (ಇದನ್ನು ಲೇಖಕರು ಪವಿತ್ರಪ್ರೇಮಸಂಬಂಧವೆಂದು ಆಗಾಗ ಅವರಿಬ್ಬರ ಬಾಯಿಂದಲೂ ಆಡಿಸುತ್ತಾರೆ.) ಅಡೆ-ತಡೆಯಿಲ್ಲದೆ ನಡೆಯುವುದು. ಮುಂದೆ ವಾಸೂನ ದುಂದುವೆಚ್ಚದ ಮೂಲಕ ಅವನ ಕೆಲಸ ಹೋಗುವುದಲ್ಲದೆ, ಅವನ ಆಸ್ತಿಯೆಲ್ಲ ಸಾಲಗಾರರ ವಶವಾಗಿ, ಅವನು ದಿವಾಳಿಖೋರನಾಗುವನು ಈ ಸಂದರ್ಭದಿಂದಲೆ ಕಾದಂಬರಿಯು ಪ್ರಾರಂಭವಾಗಿದೆ.

ದಿವಾಳಿಗೆ ಎದ್ದ ವಾಸುದೇವ ಬೆಂಗಳೂರಲ್ಲಿರಲಾರದೆ, ಪ್ರಮಿಳೆಯನ್ನು ಕರೆದುಕೊಂಡು, ದಕ್ಷಿಣೋತ್ತರ ತೀರ್ಥಯಾತ್ರೆಗಳನ್ನು ಮಾಡುತ್ತ ಮುಂಬಯಿಗೆ ಬರುವನು. ಈ ತೀರ್ಥಯಾತ್ರೆಯ ಅನುಭವದಿಂದ ಪ್ರಚೋದಿತನಾಗಿ ಅವನು, ಧರ್ಮದ ಹೆಸರಿನಿಂದ ಹಣಗಳಿಸಬೇಕೆಂದು ನಾಟಕವೊಂದನ್ನು ಹೂಡುವನು. ಈ ನಾಟಕದಲ್ಲಿ ಪ್ರಮಿಳೆ ಯೋಗಿನಿ-ಮಾತೆಯಾಗುವಳು. ಬೆಂಗಳೂರುಸ್ನೇಹಿತರಾದ ರಾಮಸ್ವಾಮಿ-ಶಂಕರರು ಮುಂಬಯಿಗೆ ಬಂದು, ಈ ನಾಟಕದಲ್ಲಿ ಭಾಗಿಗಳಾಗುವರು. ವಾಸುದೇವನ ಈ ನಾಟಕಕ್ಕೆ ಮುಂಬಯಿಯಲ್ಲಿರುವ ಗುಜರಾತೀ, ಪಾರಶೀ ಶ್ರೀಮಂತರನೇಕರು ಮೋಹಗೊಂಡು, ದುಡ್ಡಿನ ಮಳೆಯನ್ನೆ ಸುರಿಸುವರು. ಶಂಕರ ಮೊದಲಿನಿಂದಲೂ ವೇದೋಪನಿಷತ್ತುಗಳ ಅಭ್ಯಾಸಿ. ಅವನು ಈ ನಾಟಕದಲ್ಲಿ ಸ್ವಾಮಿಜಿಯ ಪಾತ್ರವಹಿಸಿ, ತನ್ನ ವೇದೋಪನಿಷತ್ತುಗಳ ಜ್ಞಾನದಿಂದ ಅನೇಕ ವಿದೇಶೀಯರ ಮನವನ್ನೂ ಆಕರ್ಷಿಸಿಕೊಳ್ಳುವನು. ಈ ನಾಟಕದಿಂದ ಗಳಿಸಿದ ಸಂಪತ್ತಿನಿಂದ ರಾಮಗಿರಿಯಲ್ಲಿ 'ಋಷಿಧಾಮ' ಎಂಬ ಆಧುನಿಕ ಧರ್ಮಸಂಸ್ಥೆ ಸ್ಥಾಪಿತವಾಗುವುದು. ಈ ಧರ್ಮದ ನಾಟಕದಲ್ಲಿಯೇ ಶಂಕರನಿಗೂ ಪ್ರಮಿಳೆಗೂ ನಿಜವಾದ ಧರ್ಮದ ಹಸಿವು ಉಂಟಾಗಿ, ಈ ನಾಟಕದಿಂದ ಸಿಡಿದು ಹೋಗಿಬಿಡುವರು. ಪಶ್ಚಾತ್ತಾಪದಗ್ಧಳಾದ ಪ್ರಮಿಳೆ ಗಂಗಾನದಿಯಲ್ಲಿ ಬಿದ್ದು ಪ್ರಾಣ ಬಿಡುವಳು. ಇವರಿಬ್ಬರ ಅಗಲಿಕೆಯ ಆಘಾತದಿಂದ ವಾಸುವಿಗೆ ಪಶ್ಚಾತ್ತಾಪವುಂಟಾಗಿ, ಅದರ ಕಾವಿನಲ್ಲಿ ಅವನ ಹೃದಯವೂ ಹಣ್ಣಾಗುವುದರ ಮಾತಿನೊಂದಿಗೆ ಕಾದಂಬರಿ ಕೊನೆಗೊಳ್ಳುವುದು.

ಈ ಕಾದಂಬರಿಯಲ್ಲಿಯ ಮುಖ್ಯ ಗುಣವೊಂದೆಂದರೆ, ಸಾಮಾನ್ಯ

ವಾಚಕರಲ್ಲಿ ಕೊನೆಯವರೆಗೂ ಆತುರ-ಕುತೂಹಲಗಳನ್ನು ಕೆರಳಿಸಿ ನಿಲ್ಲಿಸುವಂತಹದು. ಅ. ನ. ಕೃ. ಅವರ ಭಾಷೆಯ ರೀತಿಯಂತೂ ಕನ್ನಡಿಗರಿಗೆ ಹೊಸದೇನೂ ಅಲ್ಲ. ಕತೆಯು ಯಾವ ಸಿಕ್ಕು-ತೊಡಕುಗಳು ಇಲ್ಲದೆ ಸರಳವಾಗಿ ಮುಂದುವರಿಯುವುದು. ವಾಸುದೇವನ ನಾಟಕಕ್ಕೆ ಮುಗ್ಧರಾಗಿ ಅವನ ಜಾಲದಲ್ಲಿ ಬೀಳುವ ರತನ್‌ಲಾಲ್, ಬೊಂಬಾಯಿವಾಲಾ, ಅವನ ಶ್ರೀಮಂತ ಗೆಳೆಯರು, ಸ್ಕಿನ್ನರ್ ಮತ್ತು ಅವನ ವಿದೇಶಿಯ ಸಹಕಾರಿ ಮಿತ್ರರು— ಇವರೆಲ್ಲರ, ವಿಷಯವನ್ನು ಓದುವಾಗ, ಅರೇಬಿಯನ್ ನಾಯಿಟ್ಸ್ ಕತೆಗಳನ್ನು ಓದುವಾಗಿನಂತಹ ಅದ್ಭುತಭಾವ, ವಾಚಕರನ್ನು ಸೆರೆಹಿಡಿಯದೆ ಬಿಡದು. ಕಾದಂಬರಿ ಮುಗಿಮುಗಿಯುವ ವರೆಗೂ ಯೋಗಿನೀ ಅಮ್ಮ (ಪ್ರಮೀಳಾ)-ವಾಸುದೇವರಲ್ಲಿಯ ಪವಿತ್ರಪ್ರೇಮಸಂಬಂಧಕ್ಕೆ (!) ಚ್ಯುತಿಯು ಇರುವುದಿಲ್ಲ. ಆದರೂ ಇದು ಸುತ್ತುಮುತ್ತಿನ ಯಾರಿಗೂ ಗೊತ್ತಾಗದಿರುವಂತೆ ಮಾಡಲು ಲೇಖಕರು ತುಂಬ ಎಚ್ಚರು ತೆಗೆದುಕೊಂಡಿದ್ದಾರೆ. ಹಗಲಿರುಳೂ ಕೂಡಿ ಇರುವುದರ ಇವರ ರಹಸ್ಯ-ಸಂಬಂಧವನ್ನು, ಶಂಕರನಂತಹ ಶ್ರದ್ಧಾವಂತನೂ ಶಂಕೆಯಿಂದ ನೋಡದಿರುವುದು ಆಶ್ಚರ್ಯ. ಈ ವಿಷಯವೆಲ್ಲ ಗೊತ್ತಿದ್ದೂ, ರಾಮಸ್ವಾಮಿ, ನಿಸ್ವಾರ್ಥಭಾವದಿಂದ ವಾಸುದೇವನ ಸ್ವಾರ್ಥ-ಸಾಧನೆಗೆ ಸಂಪೂರ್ಣ ಸಹಕಾರಿಯಾಗಿ ನಿಂತುದು, ಆತನ ಅತಿಮಾನುಷ ಅಥವಾ ಮನುಷ್ಯೇತರ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ.

ಬೊಂಬಾಯಿವಾಲಾ, ಸ್ಕಿನ್ನರ್, ಎಮಿಲಿ, ಶಂಕರ ಇವರೆಲ್ಲ ಬುದ್ಧಿವಂತರಲ್ಲವೆಂದೇನೂ ಅಲ್ಲ. ಅಲ್ಲಲ್ಲಿ, ತಮ್ಮ ಬುದ್ಧಿಮತ್ತೆ-ವ್ಯವಹಾರಜ್ಞಾನದ ಮಾತುಗಳಿಂದ ವಾಚಕರನ್ನು ಮುಗ್ಧಗೊಳಿಸುತ್ತಾರೆ. ಆದರೆ ವಾಸುದೇವ ಅವರನ್ನೂ ಮುಗ್ಧಗೊಳಿಸಿ ತನ್ನ ಜಾಲಕ್ಕೆ ಕೆಡಹಿಕೊಂಡುದು, ಕಾದಂಬರಿಯಲ್ಲಿ ಒಂದು ಪವಾಡವಾಗಿಯೆ ಕಾಣುತ್ತದೆ. ಎಂದರೆ ಕಾದಂಬರಿಕಾರರಿಗೆ ಹಾಗಾಗಬೇಕೆಂದು ಅಪೇಕ್ಷೆಯದೆ. ತಮ್ಮ ಅಪೇಕ್ಷೆಗನುಸಾರವಾಗಿ ಅವರನ್ನೆಲ್ಲ ನಡೆದಾಡಿಸಿದ್ದಾರೆ ಇಷ್ಟೆ.

ಶಂಕರನ ಪಾತ್ರ ಚೆನ್ನಾಗಿ ಚಿತ್ರಿತವಾಗಿದೆಯೆಂದು ಹೇಳಬಹುದು ; ಆದರೆ ಆತನ ಪೂರ್ವಚರಿತ್ರೆಯ ಮೇಲೆ ಸಂಪೂರ್ಣ ಪರದೆಯಿರುವುದರಿಂದ, ಮುಂದಿನ ಆತನ ವ್ಯಕ್ತಿತ್ವ ನಿಸ್ಸತ್ವವಾಗಿ ಕಾಣುವುದು. ಕಾದಂಬರಿಯಲ್ಲಿ ಸಣ್ಣಕತೆಯೊಂದರಂತೆ ಹೊಂದಿಕೊಂಡುಬಂದಿದ್ದ ಎಮಿಲಿಯ ಪೂರ್ವಪರಿಚಯ ನಿಜವಾಗಿಯೂ ರಸವತ್ತಾಗಿದೆ. ಆ ಪೂರ್ವಚರಿತ್ರೆಯ ಮೂಲಕ ಆವಳು, ವಾಚಕರ ಮನಸ್ಸಿನಲ್ಲಿ ಮನೆಮಾಡಿ ನಿಲ್ಲಬಲ್ಲಳು. ವಾಸುದೇವರಾಯ-ಪ್ರಮೀಳಾ ಇವೆರಡೂ ಪಾತ್ರಗಳು ಆಭಾಸ-ಪಾತ್ರಗಳಾದುದರಿಂದ, ಮೂಳೆಯಿಲ್ಲದುವುಗಳಾಗಿ ಕಾಣುವುವು. ಆದರೆ ವಾಸುದೇವನ ಅಲ್ಲಲ್ಲಿಯ ಕೆಲವೊಂದು ಮಾತುಗಳನ್ನು ಕೇಳಿದಾಗ, ಒಳ್ಳೆಯ ಪಾತ್ರವಾಗುವ ಗುಣವು ಅವನಲ್ಲಿದೆಯೆಂದು ತೋರುವುದು.

ಇನ್ನೊಂದು ಮಾತು: ವಾಸ್ತವಸಾಹಿತ್ಯದಲ್ಲಿಯೂ ಗಂಡು-ಹೆಣ್ಣಿನ ಕಾಮಸಂಬಂಧವನ್ನು ಎಲ್ಲಿಯ ವರೆಗೆ ಚಿತ್ರಿಸಿ ತೋರಿಸಬೇಕೆಂಬುದಕ್ಕೆ ಒಂದು ಮೆರೆಯನ್ನಿರಿಸಿಕೊಳ್ಳುವುದು ಒಳ್ಳೆಯದೆಂದು ತೋರುವುದು. ವಾಚಕರ ಮನಸ್ಸನ್ನು ಕೆರಳಿಸಿ ವಿಕಾರಕ್ಕೆ ಗುರಿಮಾಡುವಂತಹ ವರ್ಣನೆಗಳು ಎಷ್ಟೇ ಸಹಜವಾಗಿದ್ದರೂ ಆಕರ್ಷಕವಾಗಿದ್ದರೂ, ಆದರಿಂದ ಸತ್‌ಪ್ರಯೋಜನವೇನೂ ಉಂಟಾಗಲಾರದು. ಜನಸಾಮಾನ್ಯರಲ್ಲಿ ಬಹುಜನರು, ಇಂತಹ ಕೆರಳಿಕೆಯ ಸಂದರ್ಭಗಳನ್ನು ಬಯಸುವುದು ಪ್ರಾಕೃತಿಕಗುಣವಾದುದರಿಂದ, ಈ ಬಗೆಯ ವರ್ಣನೆಗಳುಳ್ಳ ಕಾದಂಬರಿಗಳ ಮಾರಾಟ, ಅಂತಹದರಲ್ಲಿ ಹೆಚ್ಚಾಗಬಹುದಿಷ್ಟೆ. ಶ್ರೀ. ಅ. ನ. ಕೃ. ಅಂತಹ ಜೀವನದ ಆದರ್ಶವಾದಿಗಳಿಗೆ ಇದನ್ನು ಬೇರೆಯಾಗಿ ಹೇಳಬೇಕಾಗಿಲ್ಲ. ಇವರು ಸಾಹಿತ್ಯಪ್ರಪಂಚದಲ್ಲಿ ಎರಡು ಪಟ್ಟ-ಗಳಿಂದಲೂ ದುಡಿಯುತ್ತ ಬಂದಿದ್ದಾರೆ. ಅಭ್ಯಾಸ-ಅನುಭವಗಳಿಂದ ಬಹುಶ್ರುತತ್ವವನ್ನು ಪಡೆದಿದ್ದಾರೆ. ಹದವಾದ ಭಾಷಾಶೈಲಿಯನ್ನು ಅರಳಿಸಿಕೊಂಡಿದ್ದಾರೆ. ಇಂತಹರಿಂದ ಬರಬೇಕಾದ ಕೃತಿಗಳು ಸರ್ವಾಂಗಸುಂದರವಾಗಿ ಬರಬೇಕೆಂಬುದೇ ನಮ್ಮ ಹಾರಯಿಕೆ.

—ಬಿ. ಪಿ. ಎಸ್. ರಾವ್.

ಕುಟಜಾರಿಷ್ಟ
ಆಮಾಂಶ-ಸಂಗ್ರಹಣಿಗಳಿಗೆ.
●
ಕಾಸಶ್ವಾಸಾರಿ
ದಮ್ಮು-ಕೆಮ್ಮುಗಳಿಗೆ.
ಎಲ್ಲ ಬಗೆಯ ಆಯುರ್ವೇದ ಔಷಧಗಳಿಗಾಗಿ
ಬರೆಯಿರಿ :
卐
ದಿ ನೂತನ
ಆಯುರ್ವೇದ ಕಾರ್ಯಾಲಯ ಲಿ.
ವಿಜಾಪುರ.

ಸಾದರ ಸ್ವೀಕಾರ

★

೬೫. ಓಂ ಅಶಾಂತಿಃ (ಕವನ ಸಂಕಲನ). 'ರಸಿಕರಂಗ' ವಿರಚಿತ. ಪ್ರಕಾಶಕರು ಪ್ರೊ. ರಂ. ಶ್ರೀ. ಮುಗಳಿ, ವಿಲಿಂಗ್ಡನ್ ಕಾಲೇಜು, ವಿಶ್ರಾಮಬಾಗ ಸಾಂಗಲಿ. ಕ್ರಾ. ಅ. ೮೬ ಪುಟಗಳು, ಬೆಲೆ ಸಾದಾಪ್ರತಿಗೆ ೧-೦-೦, ಒಳ್ಳೆಯ ಪ್ರತಿಗೆ ೧-೮-೦.

೬೬. ಹಾಸ್ಯಪ್ರಬಂಧಗಳು ಅರ್ಥಾತ್ ರಾಯರ ಲಲಿತ ಸಾಹಿತ್ಯ (ಸಂಕಲನ ಗ್ರಂಥ) ಲೇಖಕರು ದಿವಂಗತ ಕೌಜಲಗಿ ಹಣಮಂತರಾಯರು. ಸಂಪಾದಕರು ಶ್ರೀಮಾನ್ ಬುರ್ಲಿ ಬಿಂದುಮಾಧವ, ಮಿಂಚಿನಬಳ್ಳಿ ಕಾರ್ಯಾಲಯ, ಧಾರವಾಡ. ಕ್ರಾ. ಅ. ೧೫೬ ಪುಟಗಳು, ಬೆಲೆ ೨-೮-೦.

೬೭. ಕನ್ಯಾಸೆರೆ (ಸಾಮಾಜಿಕ ನಾಟಕ) ಲೇಖಕರು ಶ್ರೀ. ಜಿ. ಸದಾಶಿವಯ್ಯ, ಬೆಂಗಳೂರು. ಪ್ರಕಾಶಕರು ಆನಂದ ಬ್ರದರ್ಸ್, ಬೆಂಗಳೂರು ೨. ಕ್ರಾ. ಅ. ೬೫ ಪುಟಗಳು. ಬೆಲೆ ೧-೦-೦.

೬೮. ಅರ್ಧನಾರೀಶ್ವರ (ಸಾಮಾಜಿಕ ಕಥೆ) ಲೇ. ಶ್ರೀ. ಜಿ. ಸದಾಶಿವಯ್ಯ. ಪ್ರಕಾಶಕರು ಆನಂದ ಬ್ರದರ್ಸ್, ಬೆಂಗಳೂರು ೨. ಕ್ರಾ. ಅ. ೭೦ ಪುಟಗಳು ಬೆಲೆ ೧-೦-೦.

೬೯. ನಮ್ಮ ನಡುವಿನ ಗೋಡೆ (ಕಥಾ ಸಂಕಲನ) ಬರೆದವರು ಶ್ರೀಯುತರುಗಳಾದ ಶಿವೇಶ್ವರ, ಚೆನ್ನವೀರ, ನಿರಂಜನ. ಪ್ರಕಾಶಕರು ಪುರೋಗಾಮಿ ಪ್ರಕಾಶನ, ಬೆಂಗಳೂರು. ಕ್ರಾ. ಅ. ೮೮ ಪುಟಗಳು. ಬೆಲೆ ೧-೨-೦.

೭೦. **ಚಂದ (ಮಕ್ಕಳ ಮಾಸಪತ್ರಿಕೆ)** ಪ್ರಕಾಶಕರು ಶಿಶು ಸಾಹಿತ್ಯ ಸಂಘ, 'ವನಿತಾ ಸದನ' ಜಯನಗರ, ಮೈಸೂರು. ಕ್ರಾ. ಅ. ೪೮ ಪುಟಗಳು. ವಾ. ಚಂದಾ ೫ ರೂಪಾಯಿ. ಬಿಡಿ ಸಂಚಿಕೆಗೆ ೬ ಆಣೆ.

ಮಕ್ಕಳ ಶಿಕ್ಷಣ, ಮನೋರಂಜನೆ, ಆಟ-ಪಾಟ ಮೊದಲಾದುವು ಗಳನ್ನು ಆದರ್ಶವಾಗಿಟ್ಟುಕೊಂಡು, ಅಭ್ಯಾಸಪೂರ್ಣವಾದ ಉಪಯುಕ್ತ ಶಿಶುಸಾಹಿತ್ಯವನ್ನು ಪ್ರಕಟಿಸುವ ಪತ್ರಿಕೆಯಿದು. ಪುಟ-ಪುಟಗಳಲ್ಲಿಯೂ ಸುಂದರವಾದ ಸಂದರ್ಭಚಿತ್ರಗಳಿರುವುವು. ಮಕ್ಕಳಿರುವ ಪ್ರತಿಯೊಂದು ಕುಟುಂಬದಲ್ಲಿಯೂ ಶಾಲೆಯಲ್ಲಿಯೂ ಅವಶ್ಯವಾಗಿ ಇರಬೇಕಾದ ಪತ್ರಿಕೆಯಿದು.

೭೧. **ಲಘುಕಥಾ ಕಶ್ಯಾ ಲಿಹಾವ್ಯಾ?** (ಮರಾಠಿ ಪುಸ್ತಕ) ಬರೆದವರು ಶ್ರೀಮಾನ್ ಬಾ. ಕೃ. ಗಲಗಲಿಯವರು. ಪ್ರಕಾಶಕರು ಕಿರ್ಲೋಸ್ಕರ್ ಪ್ರೆಸ್, ಕಿರ್ಲೋಸ್ಕರ್‌ವಾಡಿ. ತಿದ್ದಿ ಬೆಳೆಯಿಸಿದ ಮೂರನೆಯ ಆವೃತ್ತಿಯಿದು. ಕ್ರಾ. ಅ. ೯೮ ಪುಟಗಳು. ಬೆಲೆ ೨-೦-೦.

೭೨. **ಮುಂಬಯಿಯ ಮೊಗವೀರ ವ್ಯವಸ್ಥಾಪಕ ಮಂಡಳಿಯ** ೪೮ನೆಯ ವಾರ್ಷಿಕ ವರದಿ. ಪ್ರಕಾಶಕರು ಮೊಗವೀರ ವ್ಯವಸ್ಥಾಪಕ ಮಂಡಲಿ, ೮ ಸಾನಾಭಾಯಿ ಲೇನ್, ಕೋಟೆ, ಮುಂಬಯಿ. ಡೆ. ಅ. ೫೬ ಪುಟಗಳು.

ಮುಂಬಯಿಯಲ್ಲಿ ಕನ್ನಡಿಗರು ನಡೆಯಿಸಿಕೊಂಡು ಬಂದಿರುವ ಒಂದು ಆದರ್ಶ ಸಂಸ್ಥೆಯಿದು. ವರ್ಷ-ವರುಷಕ್ಕೂ ಅಭಿವೃದ್ಧಿಯ ಮಾರ್ಗದಲ್ಲಿ ಹೆಜ್ಜೆಯನಿಡುತ್ತ ನಡೆದುದು ಸಂತೋಷದ ಸಂಗತಿ. ಸಂಸ್ಥೆಯ ಸಂಚಾಲಕರಿಗೆ ನಮ್ಮ ಆದರದ ಅಭಿನಂದನೆಗಳು.



BOMBAY OFFICE: Princess Street

ಏಜಂಟರು ಬೇಕು

ಜಯಂತಿಯನ್ನು ಮಾರಾಟ ಮಾಡಲಿಕ್ಕೆ ಕರ್ನಾಟಕದ ಬೇರೆ ಬೇರೆ ನಗರಗಳಲ್ಲಿ, ಪ್ರಾಮಾಣಿಕ ಏಜಂಟರು ಬೇಕು. ಯೋಗ್ಯ ಕಮಿಶನ್ ಕೊಡಲಾಗುವುದು. ಕರಾರುಗಳಿಗಾಗಿ ಪತ್ರವ್ಯವಹಾರ ಮಾಡಿ ತಿಳಿದುಕೊಳ್ಳಬೇಕು. ಮನೆ ಮನೆಗೂ ಇರಬೇಕಾದ ಈ ಪತ್ರಿಕೆಯನ್ನು ಮನೆಮನೆಗೂ ತಲ್ಪಿಸುವ ಅಗತ್ಯವಿದೆ.

ವ್ಯ. ಜ.

೫೫ ವರ್ಷಗಳಿಂದ ಅನುಭವಪಟ್ಟ
ಕರ್ಕಿ ಮತ್ತು ಕಂಪನಿಯು
ಜ್ವರಗಡ್ಡೆಯ ಗುಳಿಗೆಗಳು
ಬಾಟ್ಲಿಗೆ ೧-೮-೦
ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.
ವಿಳಾಸ:—
ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ
ಗಿರಗಾಂವ, ಮುಂಬಯಿ. ೪

೭೩. **ರಾಧಾಕೃಷ್ಣ** (ನವೀನ ತ್ರೈಮಾಸಿಕ) ಸಂಪಾದಕರು **ಶ್ರೀ. ಆರ್. ಎ. ಜಹಾಗಿರದಾರ** (ಥಡಲ್), ಗೌಡರಗಲ್ಲಿ, ವಿಜಾಪೂರ, ಕ್ರಾ. ೮. ೫೬ ಪುಟಗಳು. ವಾರ್ಷಿಕ ಚಂದಾ ೨ ರೂ. **ಬಿಡಿ ಸಂಚಿಕೆಗೆ ೮ ಆಣೆ.**

ಈ ಪತ್ರಿಕೆಯು ಯಶಸ್ವಿಯಾಗಿ ನಡೆಯಬೇಕಾದರೆ, ಅಂತರಂಗ-ಬಹಿರಂಗಗಳೆರಡರಲ್ಲೂ ತುಂಬ ಸುಧಾರಣೆಗಳು ಆಗಬೇಕು. ಸಂಪಾದಕರ ಉತ್ಸಾಹವೂ ಕಾರ್ಯದ ಅನಭಿಜ್ಞತೆಯೂ ಈ ಸಂಚಿಕೆಯ ಪುಟಪುಟಗಳಲ್ಲೂ ಮೂಡಿನಿಂತಿವೆ.

೭೪. **ಪ್ರೇಮದರ್ಶನ** (ಅನುವಾದಿತ ಕಥಾಸಂಕಲನ) ಸಂಕಲನಕಾರರು ಶ್ರೀ. ಕೃಷ್ಣ. ಪ್ರಕಾಶಕರು ಸುದರ್ಶನ ಪ್ರಕಟನಾಲಯ, ಹುಳಿಯಾರು — ಬೆಂಗಳೂರು. ಕ್ರಾ. ೮. ೧೧೪ ಪುಟಗಳು, ಬೆಲೆ ೧-೮-೦.

೭೫. **ಮುಂಬಯಿ ಸಾಫಲ್ಯ ಸೇವಾಸಂಘದ** ದಶಮ ವಾರ್ಷಿಕ ವರದಿ. ಪ್ರಕಾಶಕರು ಸಾಫಲ್ಯಸೇವಾ ಸಂಘ, ಫೋರ್ಟ್ ಚೇಂಬರ್ ಬಿ. ೨ ನೆಯ ಮಾಳಿಗೆ, ೬-೧೦ ಡೀನ್ ಲೇನ್, ಫೋರ್ಟ್—ಮುಂಬಯಿ. ಡೆ. ೮. ೨೪ ಪುಟಗಳು.

ಮುಂಬಯಿಯಲ್ಲಿಯ ಇನ್ನೊಂದು ಕನ್ನಡಿಗರ ಸಂಸ್ಥೆಯಿದು. ದಕ್ಷಿಣಕನ್ನಡ ಜಿಲ್ಲೆಯ ಗಾಣಿಗರು ಅಥವಾ ಸಫಲಿಗ ಸಮಾಜದವರು, ತಮ್ಮ ಸಮಾಜದ ಅಭ್ಯುದಯಕ್ಕಾಗಿ ಇದನ್ನು ನಡೆಯಿಸುತ್ತಿದ್ದಾರೆ. ಸಂಸ್ಥೆಯ ಸಂಚಾಲಕರಿಗೆ ನಮ್ಮ ಧನ್ಯವಾದಗಳು.

೭೬. **ಅಲಂಕಾರ** (ಏಕಾಂಕ ನಾಟಕಸಂಗ್ರಹ) ಬರೆದವರು ಶ್ರೀ. ವಸಂತ ಕವಲಿಯವರು. ಪ್ರಕಾಶಕರು ಕಾವ್ಯಾನುಭವ ಮಂಟಪ, ಧಾರವಾಡ. ಕ್ರಾ. ೮. ೧೧೪ ಪುಟಗಳು. ಬೆಲೆ ೧-೮-೦.

೭೭. **ತರಂಗ** (ಕನ್ನಡ ಚಲನಚಿತ್ರ ಮಾಸಪತ್ರಿಕೆ). ಸಂಪಾದಕರು ಶ್ರೀ ಎಂ. ಜೀವನ. ಉಪಸಂಪಾದಕರು ಶ್ರೀ. ಕೆ. ಎಲ್. ಅಣ್ಣೀಗೇರಿ. ಪ್ರಕಾಶಕರು ತರಂಗ ಪ್ರಕಾಶನಾಲಯ, ಗದಗ. ಡೆ. ೮. ೬೨ ಪುಟಗಳು. ಬೆಲೆ ೨-೪-೦.

ಕರ್ನಾಟಕದಲ್ಲಿ ಚಲಚ್ಚಿತ್ರ ನಿರ್ಮಿತಿಯ ಪ್ರಮಾಣ ಹೆಚ್ಚಿಲ್ಲದೆ ಹೋದರೂ, ಚಲಚ್ಚಿತ್ರಕ್ಕೆ ಸಂಬಂಧಿಸಿದ ಪತ್ರಿಕೆಗಳು ದಿನಕ್ಕೊಂದು ಹೊಸಹೊಸತಾಗಿ ಹೊರಡುತ್ತಲಿವೆ ಇಂದು ಮೈಸೂರಿ ಮುಂದಿನ ತಿಂಗಳು ಬಿಡುಗಡೆಯಾಗುವ ಚಲನಚಿತ್ರ ಪತ್ರಿಕೆಗಳಿಗೂ ಕೊರತೆಯಿಲ್ಲ. ಒಂದು ಮಾತು : ಕನ್ನಡದಲ್ಲಿ ಹೊರಡುತ್ತಿರುವ ಇಂತಹ ಪತ್ರಿಕೆಗಳೆಲ್ಲ— ಒಂದೆರಡನ್ನು ಬಿಟ್ಟರೆ—ಒಂದೆ ಒಂದು ಪಡಿಯಚ್ಚಿನ ಪ್ರತಿಗಳಾಗಿ ಹೊರಡುತ್ತಲಿವೆ. ಇಂತಹ ಪತ್ರಿಕೆಗಳನ್ನು ಹೊರಡಿಸಲಿಕ್ಕೂ, ಸಂಪಾದಕನಲ್ಲಿ ಬುದ್ಧಿ-ಜ್ಞಾನಗಳ ಬಂಡವಾಳ, ಪ್ರಕಾಶಕನಲ್ಲಿ ಹಣದ ಬಂಡವಾಳ—ಇಲ್ಲದೆ ಹೋದರೆ, ಪತ್ರಿಕೆಗಳು ದೇಶಕ್ಕೆ ಪ್ರಯೋಜನಕಾರಿಯಾಗಿ ಎನಿಸವು; ಸಂಚಾಲಕರಿಗೆ ಲಾಭಕಾರಿಯೂ ಎನಿಸವು. ಚಲಚ್ಚಿತ್ರಗಳ ನಿರ್ಮಿತಿ ಹೆಚ್ಚಿದ್ದ ಪ್ರಾಂತಗಳಲ್ಲಿ, ಜಾಹೀರಾತು-ಪ್ರಕಟನೆಗಳ ಬಲದಿಂದಲಾದರೂ ಚಲಚ್ಚಿತ್ರ ಪತ್ರಿಕೆಗಳು ಬದುಕಬಹುದು. ನಮ್ಮ ಪತ್ರಿಕೆಗಳು, ಹೊರಟ ತಪ್ಪಿಗೆ, ಇನ್ನೊಂದು ಭಾಷೆಯ ಚಲಚ್ಚಿತ್ರಗಳನ್ನು ಸುಲಭವಾಗಿ, ಪುಕ್ಕಟೆಯಾಗಿ, ನಮ್ಮ ನಾಡಿನಲ್ಲಿ ಪ್ರಚಾರಮಾಡಬಹುದು ಇಷ್ಟೇ.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ.ವಿ. ಪಂಡಿತರ
ಮನೋಹರ { ನೀಲಿ } ಹೇರ್ ಆಯಿಲ್
ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.
ಗರ್ಭಾಶಯಕ್ಕೆ { ಜೀವಿನಿ } ಟಾನಿಕ್.
ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯಬಂಜೆತನಕ್ಕೆ ಸಿದ್ಧಯೋಗ.
ಅಜೀರ್ಣ ವಿಕಾರಗಳಿಗೆ { ಪಂಚವಟಿ } ರಾಮಬಾಣ.
ಸದ್ವೈದ್ಯ ಶಾಲಾ, ನಂಜನಗೂಡು.
‘ ನಂಜನಗೂಡು ಟೂತ್ ಪೌಡರು ’ ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ
ಕಾರ್ಖಾನೆ.

ನಿಮ್ಮ ಮನೆ, ಹೊಲ ಅಥವಾ ಕಾರಖಾನೆಯಲ್ಲಿ ನೀರಿನ
ಸಮಸ್ಯೆ ಪರಿಹಾರವಾಗಬೇಕಾಗಿದ್ದರೆ
ಕಿರ್ಲೋಸ್ಕರ್
'ಸೆಂಟ್ರಿಫ್ಯೂಗಲ್ ಪಂಪ'ನ್ನೇ
ಉಪಯೋಗಿಸಿರಿ.

ಕಿರ್ಲೋಸ್ಕರ



ಸೆಂಟ್ರಿಫ್ಯೂಗಲ್
ಪಂಪುಗಳು

ಯು. ಸಿ. ಟೈಪ್ ಪಂಪ್
ಒಕ್ಕಲತನ ಮತ್ತು ಕಾರಖಾನೆಯ ಉದ್ಯೋಗಗಳಿಗೆ ಅತ್ಯಂತ ಉಪಯುಕ್ತವಾದುದು. ತಾಳಿಕೆ, ಭದ್ರವಾದ ರಚನೆ ಮತ್ತು ಆಕೃತಿ ಇವುಗಳ ಮೂಲಕ ದಿನದಿನಕ್ಕೂ ಬೆಳೆಯುತ್ತಿರುವ ಲೋಕಪ್ರಿಯತೆಯನ್ನು ಪಡೆಯುತ್ತಲಿದೆ ಈ ಪಂಪು

ಬಿ. ಎಸ್. ಎ. ಪಂಪು
ಅತ್ಯಂತ ಆಧುನಿಕ ಹಾಗು ಯಾಂತ್ರಿಕ ರಚನೆಯ ಮೇರೆಗೆ ತಯಾರಿಸಲ್ಪಟ್ಟಿರುವುದು. ಗಿರಾಕಿಗೆ ಕಳಿಸುವ ಮುನ್ನ ಪ್ರತಿಯೊಂದು ಪಂಪನ್ನು ಸೂಕ್ಷ್ಮವಾಗಿ ಪರೀಕ್ಷಿಸಲಾಗುತ್ತದೆ. ಈ ಪಂಪುಗಳು ಉದ್ಯೋಗಿಕ ಹಾಗು ಒಕ್ಕಲತನ ಕ್ಷೇತ್ರಗಳಲ್ಲಿ ವ್ಯಾಪಕವಾಗಿ ಉಪಯೋಗಿಸಲ್ಪಡುತ್ತವೆ.



ಕಿರ್ಲೋಸ್ಕರ ಬಂಧುಗಳು ಲಿ. ಕಿರ್ಲೋಸ್ಕರವಾಡಿ

Printed by V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar – 3-07-51.

JAYANTI

❋

OCTOBER
1951



ಅಕ್ಟೋಬರ್
೧೯೫೧



ಧಾರವಾಡದ ವರ್ತಕರು, ಮೈಸೂರು ಮಹಾರಾಜರವರಿಗೆ ಸಲ್ಲಿಸಿದ ಕನ್ನಡದ ಅಭಿಮಾನ-ಪ್ರೀತಿಗಳ ಪ್ರತೀಕ

ಬೆಲೆ
೮ ಆಣೆ

ಲೇಖಕ ವರ್ಗ

ಪ್ರಿನ್ಸಿಪಾಲ್ ಜಿ. ಬಿ. ಜಠಾರರು, ಶ್ರೀ. ಎ. ಎಸ್. ರಾಮಕೃಷ್ಣರು, ಶ್ರೀಮತಿ ಇಂದಿರಾ ಎಲ್. ರಾವ್, ಶ್ರೀಮತಿ ಎಸ್. ಕೆ. ರಮಾದೇವಿ, ಶ್ರೀ. ಪಿ. ಬಿ ಜೋರಾಪುರ.

ಸಂಪುಟ ೧೮ | ೧ನೆಯ ಅಕ್ಟೋಬರ್ ೧೯೫೧ | ಸಂಚಿಕೆ ೫

ಈ ಸಂಚಿಕೆಯಲ್ಲಿ:

ಉತ್ತರ ಕರ್ನಾಟಕದಲ್ಲಿ ಮೈಸೂರು ಮಹಾರಾಜರು
(ಸಂಪಾದಕೀಯ)
ಸಂಪಾದಕರು ೧೬೧
ನಾಡನಡೆ (ಪ್ರಾಸಂಗಿಕ ಟಿಪ್ಪಣಿಗಳು)
'ಕಾಲಭೈರವ' ೧೬೩
ಮೂವರು ಅವಿವಾಹಿತರು (ಒಂದು ಕಥೆ)
ಶ್ರೀ. ಎ. ಎಸ್. ರಾಮಕೃಷ್ಣ, ಮಣಿಪಾಳ-ಉಡುಪಿ ೧೬೫
ಸಂಗೀತ ಎಂದರೇನು? (ಪರಿಚಯಾತ್ಮಕ)
ಪ್ರಿನ್ಸಿಪಾಲ್ ಜಿ. ಬಿ. ಜಠಾರ, ಕೆ. ಇ. ಬೋ. ಕಾಲೇಜ್
ಧಾರವಾಡ ೧೭೧
ರುದ್ರಾವತಾರ (ಕವನ)
ಶ್ರೀ. ರಾಮಚಂದ್ರ ಕೊಟ್ಟಲಗಿ, ಘಟಪ್ರಭಾ ೧೭೫
ಅನುತಾಪ ಮತ್ತು ವೇದನೆ (ಒಂದು ವಿಚಾರಪ್ರಬಂಧ)
ಶ್ರೀಮತಿ ಎಸ್. ಕೆ. ರಮಾದೇವಿ ಬಿ. ಎ. ಮೈಸೂರು ೧೮೬
ಸತಿ (ಅನುವಾದಿತ ಕಥೆ)
ಶ್ರೀಮತಿ ಇಂದಿರಾ ಎಲ್. ಎನ್. ರಾವ್ ಬಿ. ಎ.
ಜಬಲ್‌ಪುರ್ ೧೮೯
ಒಮ್ಮೆ ಬಂದು ನೋಡು! (ಕವನ)
ಶ್ರೀ ಡಿ. ಎಸ್. ಕರ್ಕಿ ಎಂ. ಎ., ಪಿಎಚ್. ಡಿ. ಬೆಳಗಾಂವಿ ೧೯೫
ಒಂದು ಪುಟ್ಟಹಕ್ಕಿಗೆ (ಕವನ)
ಶ್ರೀ. ಚೆನ್ನವೀರ ಕಣವಿ ಬಿ. ಎ. ಧಾರವಾಡ ೧೯೫
ಅಂತರರಾಷ್ಟ್ರೀಯ ಹಣಕಾಸಿನ ನಿಧಿ (ರಾಜಕೀಯ)
ಶ್ರೀ. ಪಾ. ಭೀ. ಜೋರಾಪುರ ಬಿ. ಎ. ಜಬಲಪುರ ೧೯೬
ಪುಸ್ತಕ ವಿಮರ್ಶೆ (ಎರಡನೆಯ ಸಂಬಂಧ)
ಮುಂಬಯಿಯ ಸಾ. ಚರ್ಚಾಕೂಟದ ಸದಸ್ಯರು ೧೯೯
ಸಾದರ ಸ್ವೀಕಾರ ೨೦೩

ಚಂದಾದಾರರಿಗೆ ಸೂಚನೆ

ಹೊಸತಾಗಿ ಚಂದಾದಾರರಾಗುವವರೂ ಹಳೆಯ ಚಂದಾದಾರರೂ ತಮ್ಮ ವರ್ಗಣಿಯ ಹಣವನ್ನು ಮನಿಯಾರ್ಡರ್ ಮೂಲಕ ಕಳುಹುವುದು ಹೆಚ್ಚು ಅನುಕೂಲ. ವ್ಹಿ. ಪಿ. ಮೂಲಕ ಅಪೇಕ್ಷಿಸಿದರೆ ರಜಿಸ್ಟರ್ ವೆಚ್ಚ, ವಿ. ಪಿ. ವೆಚ್ಚ, ಮನಿಯಾರ್ಡರ್ ವೆಚ್ಚ-ಇವೆಲ್ಲ ಸೇರಿ, ಒಂಬತ್ತು ಆಣೆ ಅಂಚೆಯ ವೆಚ್ಚವನ್ನು ವ್ಯರ್ಥವಾಗಿ ವಹಿಸಬೇಕಾಗುತ್ತದೆ. ಆದುದರಿಂದ ಎಲ್ಲರೂ ಚಂದಾಹಣವನ್ನು ಮನಿಯಾರ್ಡರಿನ ಮೂಲಕ ಕಳುಹಿ, ಹೆಚ್ಚಿನ ವೆಚ್ಚವನ್ನು ಉಳಿಸಿಕೊಳ್ಳಬೇಕು.

ವ್ಯ. ಜ. ಧಾರವಾಡ

'ಜಾಹೀರಾತಿಗಾಗಿ ಕಾದಿಟ್ಟ ಸ್ಥಳ'

ಜಯಂತಿ

ಸಂ. ೧೪. ಸಂ. ೫.

ಕುಟುಂಬದಲ್ಲಿಯ
ಪ್ರತಿಯೊಬ್ಬರೂ ಓದಿ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಪತ್ರಿಕೆ.

★

ಸಂಪಾದಕರು :
ಶ್ರೀ ಬೆಟಗೇರಿ ಕೃಷ್ಣಶರ್ಮ

●

ವ್ಯ. ಸಂಪಾದಕರು :
ಶ್ರೀ. ಎಲ್. ಜಿ. ಬೇಂದ್ರೆ.

●

ಪ್ರಕಾಶಕರು :
ಶ್ರೀ. ಎಮ್. ವಿ. ಮೊಳ್ಳಿಗಟ್ಟಿ.

●

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

●

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ.

●

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ
ವ್ಯವಸ್ಥಾಪಕರಿಗೆ ಬರೆಯಬೇಕು.

★

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

★

ಸಂಪಾದಕೀಯ

ಉತ್ತರಕರ್ನಾಟಕದಲ್ಲಿ ಮೈಸೂರಿನ ಮಹಾರಾಜರು.

ಕಳೆದ ಸಪ್ಟಂಬರ್ ದಿನಾಂಕ ೯ರಿಂದ ೧೩ರ ವರೆಗಿನ ಐದು ದಿನಗಳಲ್ಲಿ, ಮೈಸೂರಿನ ಸದ್ಯದ ರಾಜಪ್ರಮುಖ ಶ್ರೀಜಯಚಾಮರಾಜ ಒಡೆಯರವರು, ಉತ್ತರಕರ್ನಾಟಕದ ಮೂರು ಜಿಲ್ಲೆಗಳಲ್ಲಿಯ ಪ್ರಮುಖ ನಗರಗಳಿಗೆ ಸಂದರ್ಶನವಿತ್ತು ತೆರಳಿದರು. ಮುಖ್ಯವಾಗಿ ಅವರು ಕರ್ನಾಟಕ ವಿಶ್ವವಿದ್ಯಾಲಯದ ಘಟಿಕೋತ್ಸವದ ಮುಖ್ಯ-ಅತಿಥಿಗಳಾಗಿ ಬಂದಿದ್ದರೂ, ಅದೇ ಸಂದರ್ಭವನ್ನು ಉಪಯೋಗಿಸಿಕೊಂಡು, ಉತ್ತರಕರ್ನಾಟಕವನ್ನೆಲ್ಲ ಸಂಚರಿಸಿ, ಇಲ್ಲಿಯ ಸಭಾ-ಸಂಸ್ಥೆಗಳನ್ನೂ ವಿದ್ಯಾಕೇಂದ್ರಗಳನ್ನೂ ಕಣ್ಣಾರೆ ಕಂಡು ಹೋದುದು ಸಂತೋಷಪಡಬೇಕಾದ ಸಂಗತಿಯು !

ಮೈಸೂರಿನ ಅರಸರು ಹದಿನಾರಾಣೆ ಕನ್ನಡಿಗರು. ಕನ್ನಡ ಸಂಸ್ಕೃತಿಯ ಸಂಪೂರ್ಣಾಭಿಮಾನಿಗಳು. ರಾಜಕೀಯ ದೃಷ್ಟಿಯಿಂದ ತಬ್ಬಲಿಯಾಗಿದ್ದ ಕನ್ನಡನುಡಿಯನ್ನು ಇದೊಂದು ರಾಜಮನೆತನದವರೇ ಮನ್ನಣೆಯಿಂದ ಪೋಷಿಸುತ್ತ ಬಂದವರು. ಮಹಾತ್ಮಾ ಗಾಂಧಿಯವರಿಂದಲೂ ತಮ್ಮ ಆಡಳಿತವನ್ನು 'ರಾಮರಾಜ್ಯ' ಎಂದು ಪ್ರಶಂಸಿಸಿರುವ ಪ್ರಗತಿಪ್ರಿಯರು ಕನ್ನಡಿಗರ ಅಭಿಮಾನಧನರಾದ ಇಂತಹ ಮೈಸೂರಿನ ಮಹಾರಾಜರ ವಿಷಯದಲ್ಲಿ, ಉತ್ತರಕರ್ನಾಟಕದ ಜನರ ಹೃದಯದಲ್ಲಿ ಪ್ರೀತಿಯೂ ಅಭಿಮಾನ-ಭಕ್ತಿಗಳೂ ಬೆಳೆದುಕೊಂಡು ಬಂದಿರುವುದು ಅದೇನು ಅಸ್ವಾಭಾವಿಕವಲ್ಲ. ನೊನ್ನೆಯ—ಶ್ರೀಮನ್ ಮಹಾರಾಜರವರ ಸಂಚಾರಕಾಲದಲ್ಲಿ, ಉತ್ತರ ಕರ್ನಾಟಕದ ಜನತೆ ಅವರಿಗೆ ಸಲ್ಲಿಸಿದ ಅಭೂತಪೂರ್ವವಾದ ಸ್ವಾಗತವೂ, ಪ್ರೀತಿ-ವಿಶ್ವಾಸದ ಕಾಣಿಕೆಗಳೂ, ಉತ್ತರಕರ್ನಾಟಕದ ಜನತೆ ಮಹಾರಾಜರವರ ವಿಷಯದಲ್ಲಿ ಇರಿಸಿಕೊಂಡಿರುವ ಅಭಿಮಾನ-ಆತ್ಮೀಯತೆಗಳಿಗೆ ಪ್ರತ್ಯಕ್ಷ-ಸಾಕ್ಷ್ಯಗಳಾಗಿ ಪರಿಣಮಿಸಿದುವು.

ಶ್ರೀಜಯಚಾಮರಾಜರು ಬಂದುದು ಒಂಟಿಗರಾಗಿ ಅಲ್ಲ. ಪರಿಮಿತ ಪರಿವಾರದೊಂದಿಗೆ ಬಂದಿದ್ದರು. ಪರಿವಾರದಲ್ಲಿ ಸದ್ಯದ ಮೈಸೂರು ಸರಕಾರದ ಹಣಕಾಸಿನ ಮಂತ್ರಿಗಳಾದ ಶ್ರೀಮಾನ್ ಎಚ್. ಸಿ. ದಾಸಪ್ಪನವರು ಇದ್ದರಲ್ಲದೆ, ಸರಕಾರದ ವಿವಿಧ ಶಾಖೆಗಳ ಪ್ರಮುಖ ಅಧಿಕಾರಿಗಳು ಕೆಲವು ಜನರಿದ್ದರು. ಕರ್ನಾಟಕ ಏಕೀರಣದ ಪ್ರಶ್ನೆಯನ್ನು ಮೈಸೂರಿನ ಕೆಲವು ಜನ ರಾಜಕೀಯ ಪ್ರಮುಖರು ತಿರಸ್ಕಾರ—ಔದಾಸೀನ್ಯಗಳಿಂದ ಕಾಣುತ್ತಲಿದ್ದರೂ, ಉತ್ತರ ಕರ್ನಾಟಕದ ಜನತೆ ಮೈಸೂರು ಸಹಿತವಾದ ಕರ್ನಾಟಕದ ಏಕೀಕರಣಕ್ಕಾಗಿ ಎಷ್ಟೊಂದು ಉತ್ಕಟ ಭಾವನೆಯನ್ನು ಇರಿಸಿಕೊಂಡಿದೆಯೆಂಬುದರ ಪ್ರತ್ಯಕ್ಷ ಸಾಕ್ಷ್ಯ, ಮಹಾರಾಜರಿಗೂ ಅವರ ಪರಿವಾರಕ್ಕೂ ಈ ಸಂಚಾರದಲ್ಲಿ ಕಣ್ಣಾರೆ ನೋಡಲಿಕ್ಕೆ ದೊರೆತುದು, ಕರ್ನಾಟಕ ಏಕೀಕರಣದ ದೃಷ್ಟಿಯಿಂದ ಮಹತ್ತ್ವದ ಸಂಗತಿಯೇ ಆಗಿದೆ.

ಕರ್ನಾಟಕದ ಸಾಹಿತ್ಯ ಪುಣ್ಯಕ್ಷೇತ್ರವಾದ ಪುಲಿಗೆರೆ—ಎಂದರೆ ಲಕ್ಷ್ಮೇಶ್ವರದಿಂದ ಪ್ರಾರಂಭವಾದ ಮಹಾರಾಜರ ಸಂಚಾರವು ಧಾರವಾಡ, ಬೆಳಗಾಂವಿ, ಹುಬ್ಬಳ್ಳಿ, ಬಾಗಲಕೋಟೆ, ಬಾದಾಮಿ, ಬಸವನಬಾಗೇವಾಡಿ, ವಿಜಾಪುರ ಇವುಗಳ ಸಂದರ್ಶನದೊಂದಿಗೆ ಕೊನೆಗೊಂಡಿತು. ಹೋದಲ್ಲೆಲ್ಲ ನಿರ್ವ್ಯಾಜ ಆತ್ಮೀಯಭಾವದ ಸ್ವಾಗತವು ಮಹಾರಾಜರಿಗೆ ದೊರೆತುದು, ಅವರ ಕನ್ನಡದ ಪ್ರೀತಿಯನ್ನು ಇನ್ನೂ ಹೆಚ್ಚಿಸಿರಲು ಸಾಕು. ಲಕ್ಷ್ಮೇಶ್ವರದಲ್ಲಿ ಕನ್ನಡ ಕವಿರಾಜನಾದ ಆದಿಕವಿ ಪಂಪನ ಪ್ರಶಸ್ತಿಗ್ರಂಥವು, ಮಹಾರಾಜರವರ ಹಸ್ತದಿಂದ ಪ್ರಕಾಶನಗೊಂಡಿತು. ಆ ಪ್ರಕಾಶನ ಸಮಾರಂಭದಲ್ಲಿ ಮಹಾರಾಜರವರು ಆಡಿದ ಮಾತುಗಳು, ಅವರ ಕನ್ನಡ ಸಾಹಿತ್ಯದ ಗಾಢವಾದ ಪ್ರೀತಿಯನ್ನೂ ಮರ್ಮಜ್ಞತೆಯನ್ನೂ ಪ್ರಕಟಿಸುವಂತಹವಾಗಿವೆ.

ಧಾರವಾಡದಲ್ಲಂತೂ ಸಪ್ಟಂಬರ್ ೯ ನೆಯ ತಾರೀಖು ಎಂದರೆ ಅನ್ಯಾದೃಶವಾದ ಸಾರ್ವಜನಿಕ ಸಂಭ್ರಮದ ದಿನ. ಎಲ್ಲೆಲ್ಲಿಯೂ ಉತ್ಸವ-ಉತ್ಸಾಹಗಳ ವಾತಾವರಣ. ಮಹಾರಾಜರ ಸಂದರ್ಶನದ ಅಪೂರ್ವಸಂದರ್ಭವನ್ನು ಕಳೆದುಕೊಳ್ಳಬಾರದೆಂದು ನಗರದ ನರ-ನಾರಿಯರೆಲ್ಲ-

ರಲ್ಲಿಯೂ ಜಾಗೃತವಾದ ಕುತೂಹಲ. ಎಂತಲೇ ಅಂದು ಧಾರವಾಡದ ಮುಖ್ಯ ಬೀದಿಗಳೆಲ್ಲ ಜನಜಂಗುಳಿಯಿಂದ ತುಂಬಿ ತುಳುಕುತ್ತಿದ್ದುವು. ಧಾರವಾಡದ ನಗರಸಭೆ, ಜಿಲ್ಲಾ ಬೋರ್ಡ್, ಕರ್ನಾಟಕ ವಿ. ವ. ಸಂಘ, ರೋಟರಿ ಕ್ಲಬ್ಬು, ಕರ್ನಾಟಕ ಸಂಶೋಧನ ಸಂಸ್ಥೆ, ವರ್ತಕರ ಸಂಘಗಳ ಸಂಯುಕ್ತ ಸಭೆ ಇವೆಲ್ಲ, ಮಹಾರಾಜರನ್ನೂ ಅವರ ಪರಿವಾರವನ್ನೂ ವಿಶ್ವಾಸದಿಂದ ಬರಮಾಡಿಕೊಂಡು, ಅವರಿಗೆ ತಂತಮ್ಮ ಆತ್ಮೀಯತೆಯ ಪ್ರೀತಿಯ ಮುಡಿಪನ್ನು ಸಲ್ಲಿಸಿದುವು. ಎಲ್ಲಿಯೂ ಮಾತನಾಡಲಾರರೆಂದು ಹಬ್ಬಿದ್ದ ಸುದ್ದಿಯನ್ನು ಸುಳ್ಳುಮಾಡಿ ಮಹಾರಾಜರು, ಎಲ್ಲ ಕಡೆಗೂ ಮಾತನಾಡಿ, ಜನರ ವಿಷಯದಲ್ಲಿದ್ದ ಪ್ರೀತಿಯನ್ನು ಹೊರಕ್ಕೆ ಹಾಕಿದರು. ಧಾರವಾಡದಂತೆಯೆ ಎಲ್ಲ ಕಡೆಗೂ ಸಂಭ್ರಮದ ಸಮಾರಂಭ ನಡೆಯಿತು. ಹುಬ್ಬಳ್ಳಿಯಲ್ಲಿ ಏರ್ಪಟ್ಟ ಮೆರವಣಿಗೆಯ ಸಮಾರಂಭವಂತೂ ರಾಜಧಾನಿಯೊಂದರಲ್ಲಿಯ ಮಹಾರಾಜರ ವಿಜಯೋತ್ಸವದ ಸಮಾರಂಭವನ್ನು ಅನುಭವಕ್ಕೆ ತಂದುಕೊಡುತ್ತಲಿದ್ದಿತು.

ಕುಮಾರವ್ಯಾಸನ ಉಪಾಸ್ಯದೈವತವಾದ ಗದುಗಿನ ವೀರನಾರಾಯಣಸ್ವಾಮಿಯ ಸಂದರ್ಶನವನ್ನೂ, ಸಂಸ್ಕೃತಿನಿಷ್ಠರಾದ ಮಹಾರಾಜರು ಪಡೆದರು. ಆ ಕಾಲದಲ್ಲಿ ಕವಿಯ ಕೃತಿಸ್ಥಾನದಲ್ಲಿಯೇ ನಿಂತುಕೊಂಡು ಹೇಳಿದ ಗದುಗಿನ ಭಾರತದ ಮಂಗಲಾಚರಣ ಪದ್ಯಗಳು, ಈ ವಿಜ್ಞಾನಯುಗದ ನಾಗರಿಕರ ಹೃದಯವನ್ನೂ ಜುಮ್ಮೆನಿಸಿ, ಕನ್ನಡ ಸಂಸ್ಕೃತಿಯ ಮಹತಿಯನ್ನು ಅನುಭವಕ್ಕೆ ತಂದುಕೊಟ್ಟುವು.

ಮಹಾತ್ಮರಾದ ಬಸವಣ್ಣನವರ ಜನ್ಮಸ್ಥಳವನ್ನು ಸಂದರ್ಶಿಸುವ ತಮ್ಮ ಅಪೇಕ್ಷೆಯನ್ನೂ ಮಹಾರಾಜರೂ ಪೂರಯಿಸಿಕೊಂಡರು. ವಿಜಾಪುರದ ವಿಜಯ ಕಾಲೇಜಿನ ಸಮಾರಂಭ ಸಭೆಯಲ್ಲಿ ತಮ್ಮ ಭಾಷಣದಲ್ಲಿ ಅವರು ಕೊನೆಗೆ ಹೇಳಿದ 'ಉತ್ತರ ಕರ್ನಾಟಕದಲ್ಲಿ ನಮ್ಮ ಐದು ದಿನಗಳ ಪ್ರವಾಸ, ಇಂದು ವಿಜಾಪುರದ ಸಮಾರಂಭಗಳೊಡನೆ ಮುಕ್ತಾಯವಾಗುವುದು. ನಾವೆಲ್ಲ ಈ ಪ್ರಾಂತದ ಜನರ ಪ್ರೀತಿ-ವಿಶ್ವಾಸಗಳ ಸವಿನೆನಪಿನೊಂದಿಗೆ ಮೈಸೂರಿಗೆ ಹಿಂದಿರುಗುತ್ತೇವೆ. ಮೈಸೂರು ದೇಶಕ್ಕೂ ನಿಮ್ಮ ಪ್ರಾಂತ್ಯಕ್ಕೂ ಇರುವ ಬಾಂಧವ್ಯವು ಸರ್ವತೋಮುಖವಾಗಿ ಬೆಳೆಯಲೆಂದು ಹಾರಯಿಸುತ್ತೇನೆ!' ಎಂಬ ಮಾತುಗಳಲ್ಲಿ, ಮಹಾರಾಜರು ತಮ್ಮ ಹೃದಯವನ್ನೇ ಹೊರಕ್ಕೆ ಹಾಕಿದ್ದಾರೆಂದು ಹೇಳಬಹುದು.

ಮಹಾರಾಜರೊಂದಿಗೆ ಸಂಬಂಧ ಬಂದ ಪ್ರತಿಯೊಂದು ಉತ್ತರ ಕರ್ನಾಟಕದ ಸಂಘ-ಸಂಸ್ಥೆಗಳೂ, ಮೈಸೂರುಸಹಿತವಾದ ಕರ್ನಾಟಕ ಏಕೀಕರಣ ಮತ್ತು ಮೈಸೂರು ಮಹಾರಾಜರ ಪ್ರಮುಖನೇತೃತ್ವದ ವಿಚಾರದಲ್ಲಿರುವ ತಮ್ಮ ಉತ್ಕಟವಾದ ಅಪೇಕ್ಷೆಯನ್ನು ಅವರೆದುರು ಮಂಡಿಸಿದುವು. ಎಲ್ಲ ಕಡೆಗೂ ಅವರು ಕೊಟ್ಟ ಉತ್ತರ ಒಂದೆ ಬಗೆಯದು. ಕರ್ನಾಟಕ ಏಕೀಕರಣದ ವಿಚಾರದಲ್ಲಿ ತಮ್ಮ ಅಸಮ್ಮತಿಯನ್ನು ತೋರಿಸದೆ, ಘಟನಾತ್ಮಕ ತೊಡಕನ್ನೆ ಮುಂದೆಮಾಡಿ ಮಾತನಾಡಿದ್ದಾರೆ. ಆಶಾವಾದಿಗಳು ಅವರ ಈ ಮಾತುಗಳನ್ನು ತಮ್ಮ ಸಮಾಧಾನಕ್ಕಾಗಿಯೆ ಬಳಸಿಕೊಳ್ಳುತ್ತಲಿದ್ದಾರೆ. ಮಹಾರಾಜರ ನಿಜವಾದ ಮನೋಗತವೇನೆಂಬುದು ತಿಳಿಯಲಿಕ್ಕೆ ಇನ್ನು ಬಹಳ ಅವಕಾಶವೇನೂ ಇದ್ದಂತಿಲ್ಲ. ಆಂಧ್ರಪ್ರಾಂತ ನಿರ್ಮಾಣದೊಂದಿಗೆ ಕರ್ನಾಟಕ ಪ್ರಾಂತನಿರ್ಮಾಣದ ವಿಚಾರವೂ ನಡೆಯಲೇ ಬೇಕು.

ಮೈಸೂರು ಮಹಾರಾಜರ ಈ ಸಂಚಾರಸಂದರ್ಭದಿಂದ, ನಮ್ಮ ನಾಡಿನ ಜನರ ಆಂತರಿಕ ಆಶೆ-ಅಭಿಪ್ರಾಯಗಳ ವಾಸ್ತವಸ್ಥಿತಿಯೇನಿದೆಯೆಂಬುದು, ಎಲ್ಲರ ಪ್ರತ್ಯಕ್ಷ ನಿದರ್ಶನಕ್ಕೆ ಬಂದಂತಾಯಿತು. ನಮ್ಮಲ್ಲಿಯ ಜನಸಾಮಾನ್ಯರ ಹೃದಯದಲ್ಲಿ ಇನ್ನೂ ಪ್ರಜಾಪ್ರಭುತ್ವಕ್ಕಿಂತ ರಾಜಪ್ರಭುತ್ವದ ವಿಷಯದಲ್ಲಿಯೇ ಹೆಚ್ಚಿನ ಪ್ರೀತಿ-ವಿಶ್ವಾಸಗಳಿವೆಯೆಂಬುದು ಲೋಕವಿಶ್ರುತವಾಯಿತು. ನಮ್ಮ ಜನತೆಯ ಪರಂಪರಾಪ್ರಿಯತೆಯೂ ಇದಕ್ಕೆ ಕಾರಣವಾಗಿರಬಹುದು; ಆದರೆ ಸಧ್ಯದ ಸೋಗಿನ ಪ್ರಜಾಪ್ರಭುತ್ವದ ಅನಿಷ್ಟ ಆಡಳಿತದ ದುರನುಭವ, ಅದಕ್ಕಿಂತ ಹೆಚ್ಚಿಗೆ ಕಾರಣವಾಗಿರಬಹುದೆಂದು ಹೇಳಲು ಬರುವಂತಿದೆ. ಬ್ರಿಟಿಷರ ಅಂಕುಶದಲ್ಲಿದ್ದರೂ ಪ್ರಜಾನಿಷ್ಠರಾದ ಮೈಸೂರಿನ ಮಹಾರಾಜರು, ತಮ್ಮ ರಾಜ್ಯವನ್ನು ರಾಮರಾಜ್ಯವನ್ನಾಗಿಸಿದ್ದರು. ಇಂದು ಭಾರತದ ಎಲ್ಲ ಆಡಳಿತಗಳು ಪ್ರಜಾಪ್ರಭುತ್ವವನ್ನು ಅವಲಂಬಿಸಿವೆಯೆಂದು ಘೋಷಿಸುತ್ತಿದ್ದರೂ, ಸ್ವಾರ್ಥಸಾಧಕಜನರ ಕೈಯಲ್ಲಿ ಸಿಕ್ಕು ಪುಂಡುಪಾಳೆಯಗಾರಿಕೆ ನಡೆಯುಸಿರುವುವು. ಆಳಬೇಕೆನ್ನುವ ಮಹತ್ವಾಕಾಂಕ್ಷಿ ಮುಂದಾಳುಗಳಿಗೆ ಇಂದು ಪ್ರಜಾಪ್ರಭುತ್ವ ಬೇಕಾಗಿರಬಹುದು; ಆದರೆ ಸುಖ-ಶಾಂತಿಮಯ ಜೀವನವನ್ನು ಬಯಸುವ ಬಹು ಜನರು, ಒಳ್ಳೆಯ ರೀತಿಯಿಂದ ಆಳುವ ರಾಜನ ಆಧಿಪತ್ಯವನ್ನೇ ಒಪ್ಪಿಕೊಳ್ಳಲು ಸಿದ್ಧರಿರುವರು. ಅಹುದೋ ಅಲ್ಲವೋ ನೋಡಿ ಬೇಕಾದರೆ! ಮೈಸೂರು ಮಹಾರಾಜರೇನು ಮಹಾತ್ಮರಲ್ಲ, ಉತ್ತರ ಕರ್ನಾಟಕಸ್ಥರಿಗೆ ರಾಜಕೀಯ ಪ್ರಧಾನಾಧಿಕಾರಿಗಳೂ ಅಲ್ಲ; ಸ್ವಾತಂತ್ರ್ಯಕ್ಕಾಗಿ ಸೆರೆಮನೆಗೆ ಹೋಗಿಬಂದ ದೇಶಭಕ್ತರೂ ಅಲ್ಲ. ಸ್ವಾಮಿಗಳಲ್ಲ; ಆಚಾರ್ಯ-ಮಠಾಧೀಶರಲ್ಲ. ಹೀಗಿರುವಾಗ, ಉತ್ತರ ಕರ್ನಾಟಕದ ಜನಸಾಮಾನ್ಯರು ಮೈಸೂರಿನ ಮಹಾರಾಜರ ಬಗ್ಗೆ ತಮ್ಮ ಆದರ-ವಿಶ್ವಾಸಗಳನ್ನು ಏಕೆ ಸಲ್ಲಿಸಬೇಕು? ಅವರ ಅಧಿನೇತೃತ್ವವನ್ನು ಸ್ಪಷ್ಟಮಾತುಗಳಿಂದ ಏಕೆ ಅಪೇಕ್ಷಿಸಬೇಕು? ಈ ಜನಸಾಮಾನ್ಯರ ಒಳಮನಸ್ಸನ್ನು ಬೆಳಕಿಗೆ ತಂದು ತೋರಿಸಿರುವ ಮಹಾರಾಜರ ಸಂಚಾರಸಂದರ್ಭದಿಂದ, ನಮ್ಮ ಪ್ರಜಾಪ್ರಭುತ್ವದ ಪಾಳೆಯಗಾರರು ಪಾಠವನ್ನೇನಾದರೂ ಕಲಿಯುವರೆ? ಬರಲಿರುವ ಮಹಾಚುನಾವಣೆಗಾಗಿ, ಹುರಿಯಾಳುಗಳೆಂದು ಪ್ರಸಿದ್ಧವಾಗುತ್ತಲಿರುವ ಹೆಸರುಗಳ ಪಟ್ಟಿಯನ್ನು ನೋಡಿದರೆ, ನಮ್ಮ ಜನಸಾಮಾನ್ಯರು ಪ್ರಜಾಪ್ರಭುತ್ವಕ್ಕಿಂತ ರಾಜಪ್ರಭುತ್ವವನ್ನು ಅಪೇಕ್ಷಿಸುವುದು ಅರ್ಥಪೂರ್ಣವಾಗಿದೆಯೆಂದರೆ, ಅದೇನೂ ಅಸಮಂಜಸವೆನಿಸದು.

—ಸಂಪಾದಕ

⊙ ನಾಡನಡೆ ⊙

ಧಾರವಾಡ ಬಾನುಲಿಕಟ್ಟೆ

೧೯೫೦ನೆಯ ಜನವರಿ ೮ನೆಯ ತಾರೀಖಿನಿಂದ ಪ್ರಾರಂಭವಾದ ಧಾರವಾಡದ ಬಾನುಲಿಕಟ್ಟೆಯು, ಇದುವರೆಗೂ ಅವ್ಯಾಹತವಾಗಿ ತನ್ನದೊಂದು ಧೋರಣದಿಂದ ಕಾರ್ಯವನ್ನು ನಿರ್ವಹಿಸಿಕೊಂಡು ಮುಂದುವರಿದಿದೆ. ಕೇಂದ್ರಸರಕಾರದ ಹಣಕಾಸಿನ ಮುಗ್ಗಟ್ಟಿನ ಮೂಲಕ, ಧಾರವಾಡದ ಬಾನುಲಿಕಟ್ಟೆಗೆ ಉಚ್ಚಾಟನೆ ಬರುವುದೆಂಬ ದುಷ್ಟವಾರ್ತೆ, ಕೆಲವು ದಿನ ವಾತಾವರಣದಲ್ಲಿ ಕಹಿಯನ್ನು ಹರಡಿತ್ತಾದರೂ, ವಸ್ತುಸ್ಥಿತಿಯೇನೂ ಹಾಗಾಗದಿರುವುದು ಸಮಾಧಾನದ ಸಂಗತಿಯೇ ಸರಿ. ಆದರೆ, ಮೊದಲನೆಯ ವರ್ಷದಷ್ಟು ಈ ವರ್ಷ, ಕೇಂದ್ರಸರಕಾರವು ಈ ಬಾನುಲಿಕಟ್ಟೆಗೆ ಹಣವನ್ನು ಕೊಡಲಿಲ್ಲವಾದುದರಿಂದ, ಬಡವನ ಸಂಸಾರದಂತೆ, ಕಿಟಮಿಟಿಯಲ್ಲಿಯೆ ಇದೂ ತನ್ನ ಸಂಸಾರವನ್ನು ಮುಂದುವರಿಸಿದೆ. ಇದೇನೂ ಪ್ರಗತಿಯ ಲಕ್ಷಣವಲ್ಲ.

* * *

ಧಾರವಾಡದ ಬಾನುಲಿಕಟ್ಟೆಯ ಅಧಿಕಾರಿವರ್ಗ ಸಾಕಷ್ಟು ಕಾರ್ಯಕ್ಷಮವಿದೆಯೆಂದೇ ಹೇಳಬೇಕು. ಪ್ರಾಮಾಣಿಕತನದಿಂದ, ಹಗಲೆನ್ನದೆ ಇರುಳೆನ್ನದೆ, ಶಕ್ತಿಮೀರಿ ದುಡಿಯುವ ನಾಯಕಾಧಿಕಾರಿಯಿದ್ದಾನೆ. ತಂತಮ್ಮ ವಿಭಾಗಗಳಲ್ಲಿ ತಜ್ಞರಾದ ಕಾರ್ಯಕ್ರಮಸಹಾಯಕರೂ (ಪಿ. ಎ) ಹೆಚ್ಚು ಜನರಿದ್ದಾರೆ. ಶ್ರೀ. ಗುರುರಾವ ದೇಶಪಾಂಡೆಯವರಂತಹ ಸುಸಂಸ್ಕೃತ ಸಂಗೀತ ವಿದ್ವಾಂಸರು, ಈ ಬಾನುಲಿಕಟ್ಟೆಯ ಸಂಗೀತಶಾಖೆಗೆ ಮುಖ್ಯಕಲಾವಿದರಾಗಿ ದೊರೆತುದು, ಈ ಕಟ್ಟೆಯದೊಂದು ಸೌಭಾಗ್ಯ. ದಕ್ಷಿಣೋತ್ತರ ಸಂಗೀತ ಮಾರ್ಗಗಳೆರಡೂ ಅವರಿಗೆ ಕರತಲಾಮಲಕವಾಗಿವೆಯಲ್ಲದೆ, ಸಂಗೀತದ ವೈಚಾರಿಕ ಭಾಗವನ್ನೂ ಸೂಕ್ಷ್ಮರೀತಿಯಿಂದ ಅಭ್ಯಾಸಮಾಡಿದವರು. ಪ್ರಾಚೀನ ಕಾವ್ಯಗಳನ್ನು ಓದುವ ಪದ್ಧತಿಯಾದ ಗಮಕ ಸಂಗೀತವನ್ನೂ ಅವರು ಸ್ವಾಧೀನ ಪಡಿಸಿಕೊಂಡಿರುವರಲ್ಲದೆ, ಕನ್ನಡ ಸಾಹಿತ್ಯದ ಪರಿಚಯವನ್ನೂ ಸಾಕಷ್ಟು ಮಾಡಿಕೊಂಡಿದ್ದಾರೆ. ಇದು ಬರಿ ಬಣ್ಣನೆಯ ಬಾಯಿಮಾತಲ್ಲ. ಧಾರವಾಡದ ಬಾನುಲಿಕಟ್ಟೆಯು ಇದುವರೆಗೆ ಬಿತ್ತರಿಸಿದ ಅವರ ಕಲೆಯ ಹಲವು ಮುಖಗಳ ಕಾರ್ಯಕ್ರಮವು ಪ್ರತ್ಯಕ್ಷ ನಿದರ್ಶನವಾಗಿದೆ.

* * *

ಬಾನುಲಿಯ ಕಾರ್ಯಕ್ರಮದಲ್ಲಿ ಸಂಗೀತ, ನಾಟಕ, ಉಪನ್ಯಾಸ ಇವು ಮೂರು ಪ್ರಮುಖ ವಿಭಾಗಗಳು. 'ಗಿಳಿವಿಂಡು' 'ಗೃಹಲಕ್ಷ್ಮಿ' ಇವೂ ಶಾಶ್ವತ ವಿಭಾಗಗಳಾದರೂ ಅವು ಕಾಯ್ದಿಟ್ಟ ಜನರಿಗಾಗಿ ಇರುವುದರಿಂದ, ಅವುಗಳ ಕಡೆಗೆ ಎಲ್ಲರ ಲಕ್ಷ್ಯವೂ ಅಷ್ಟೊಂದು ಹತ್ತದೆ ಇರುವುವು. ಎಂತಲೇ ಅವು ಗೌಣವಿಭಾಗಗಳೆಂದು ಹೇಳಬಹುದು. ಒಂದು ರೀತಿಯಿಂದ ಅವು ಕಲೆಯ ಪಾಠದ ವರ್ಗಗಳಿದ್ದಂತಿವೆ.

ಅತಿಮುಖ್ಯ ಶಾಖೆಯಾದ ಸಂಗೀತಶಾಖೆ ಇದುವರೆಗೆ ಮಾಡಿದ ಕೆಲಸವನ್ನು ನೋಡಿದರೆ, ತುಂಬ ಯಶಸ್ವಿಯಾಗಿಯೇ ತನ್ನ ಕಾರ್ಯವನ್ನು ನಿರ್ವಹಿಸಿದೆಯೆಂದು ಹೇಳಬಹುದು. ಸಂಗೀತದ ದೃಷ್ಟಿಯಿಂದ ಸೀಮಾಪ್ರದೇಶವೆನಿಸುವ ಉತ್ತರ ಕರ್ನಾಟಕದ ಬಾನುಲಿಕಟ್ಟೆಯಲ್ಲಿ ಉತ್ತರ, ದಕ್ಷಿಣ— ಎರಡೂ ಪದ್ಧತಿಯ ಸಂಗೀತ ಕಾರ್ಯಕ್ರಮಗಳಿಗೂ ಔಚಿತ್ಯವರಿತು ಅವಕಾಶವನ್ನು ಒದಗಿಸಿಕೊಟ್ಟಿರುವುದು ಸಂತೋಷದ ಸಂಗತಿಯಾಗಿದೆ. ಒಳನಾಡಿನ ಹಳೆಯ ಹೊಸ ಸಂಗೀತಗಾರರಿಗೆಲ್ಲ ಕ್ರಮವರಿತು ನಿತ್ಯಾವಕಾಶವನ್ನು ನಿರ್ಮಿಸಿಕೊಟ್ಟಿದೆಯಲ್ಲದೆ, ನೈಮಿತ್ತಿಕವಾಗಿ ಹೊರನಾಡಿನ ಹೆಸರುವೆತ್ತ ಕಲಾವಿದರನ್ನೂ ಕರೆಯಿಸಿ, ಅವರ ತಜ್ಞತೆಯ ಪರಿಚಯ ಜನರಿಗಾಗುವಂತೆ, ಕಾರ್ಯಕ್ರಮಗಳನ್ನು ಏರ್ಪಡಿಸಿದೆ. ಕನ್ನಡ ಸಂಸ್ಕೃತಿಯನ್ನು ಪರಿಪೋಷಿಸುವಂತಹ ನಾಡಿನ ಹಬ್ಬ-ಹರಿದಿನದ ಹಾಡುಗಳು, ಮದುವೆ-ಮುಂಗಲದ ಪದಗಳು, ಜೋಗಿ-ಗೊಂದಲಿಗರ ಹಾಡುಗಳು, ಹಳ್ಳಿಗರ ಲಾವಣಿ-ಸಾಂಗತ್ಯಗಳು— ಇವೆಲ್ಲವುಗಳಿಗೂ ಸಮಯವರಿತು



ಮುಂಬಯಿ ಆಫೀಸ:— ದೇವಕರ್ಣ ಮ್ಯಾನ್ಶನ್, ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ

ಶಾಂತಿಸೇವಾ ಸದನದ ಸುಂದರ ಪ್ರಕಟನೆ

ವಿಜಯಶ್ರೀ

ಮಿರ್ಜಿ ಅಣ್ಣಾರಾಯರ

ಉತ್ಕೃಷ್ಟ ಸಣ್ಣಕತೆಗಳ ಸಂಗ್ರಹ.

ಬೆಲೆ: **ಒಂದು ರೂಪಾಯಿ.**

ಇದೀಗ ಪ್ರಕಟವಾಗಿದೆ.

ದೊರೆಯುಸ್ಥಳ:

ಶ್ರೀ. ಮಿರ್ಜಿ ಅಣ್ಣಾರಾಯರು,

ಪೋ. ಉಗಾರ ಬುದ್ರುಕ

ಬೆಳಗಾಂವ

ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಇದೆಲ್ಲ ಸಂಗೀತಶಾಖೆಯ ಕಾರ್ಯಕ್ರಮಾಧಿಕಾರಿಗಳ ಸರ್ವತೋಮುಖವಾದ ದೃಷ್ಟಿಯನ್ನೂ ಕಾರ್ಯಕ್ಷಮತೆಯನ್ನೂ ಎತ್ತಿತೋರಿಸುವಂತಹದು. ಇದಕ್ಕಾಗಿ ಕನ್ನಡ ರಸಿಕರ ಪ್ರಶಂಸೆಗೆ ಪಾತ್ರರಾಗಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ.

*   *   *   *

ಇನ್ನೊಂದು ಮುಖ್ಯಶಾಖೆ ಬಾನುಲಿನಾಟಕಗಳದು. ಈ ಶಾಖೆಯ ಕಾರ್ಯಕ್ರಮಸಹಾಯಕರೂ ತಮ್ಮ ವಿಷಯದಲ್ಲಿ ಪ್ರಾವೀಣ್ಯವನ್ನು ಪಡೆದವರು. ಎಂತಲೇ ಈ ಶಾಖೆ ತುಂಬ ಲೋಕಪ್ರಿಯವಾಗಿದೆ. ಆದರೆ, ಯಾವ ಕಾರಣವೋ ಏನೋ, ಇತ್ತೀಚೆಗೆ ಬಿತ್ತರಣೆಗೊಳ್ಳುತ್ತಿರುವ ನಾಟಕಗಳಲ್ಲಿ ಹುರುಳಿರುವುವು ತೀರ ಕಡಿಮೆಯಾಗಿರುವುದು ವಿಷಾದದ ಸಂಗತಿ. ಹೊಸ ಹೊಸ ನಾಟಕಲೇಖಕರಿಗೆ ಪ್ರೋತ್ಸಾಹಕೊಡಬೇಕೆಂಬ ಒಳ್ಳೆಯ ಉದ್ದೇಶವನ್ನೇ ಅವರು ಇಟ್ಟುಕೊಂಡಿದ್ದರೆ, ನಮ್ಮ ಆಕ್ಷೇಪಣೆಯಿಲ್ಲ. ಹೊಸ ಲೇಖಕರಿಂದ ಬಂದ ನಾಟಕಗಳನ್ನೆಲ್ಲ ಬಿತ್ತರಿಸುವ ಧೋರಣವನ್ನು ಇರಿಸಿಕೊಳ್ಳದೆ, ಬಂದಿರುವ ನಾಟಕಗಳಲ್ಲಿ ಉತ್ತಮವಾದುದನ್ನೇ ಆಯ್ದು ಪ್ರದರ್ಶಿಸುವುದು ಒಳ್ಳೆಯದು.

*   *   *   *

ಇನ್ನೊಂದು ಮುಖ್ಯವಿಭಾಗ ಭಾಷಣಗಳದು. ಇದುವರೆಗೆ ಆಗಿರುವ ಭಾಷಣಗಳನ್ನು ನೋಡಿದರೆ, ಜನರೆಲ್ಲರ ಮನಸ್ಸನ್ನು ಆಕರ್ಷಿಸುವಂತಹ ವಿಷಯಗಳ ಆಯ್ಕೆ ಕಡಿಮೆಯೆಂದೇ ಹೇಳಬೇಕಾಗುವುದು. ಕೆಲವೊಂದು ಭಾಷಣಗಳಂತೂ, ಆ ವಿಷಯದಲ್ಲಿ ತಜ್ಞತೆಯಿಲ್ಲದವರಿಗೆ ಒಪ್ಪಿಸಿಕೊಟ್ಟಂತಾಗಿತ್ತು. ಆದುದರಿಂದಲೇ ಭಾಷಣಗಳ ಸಮಯದಲ್ಲಿ, ಧಾರವಾಡದ ಕಾರ್ಯಕ್ರಮವನ್ನು ಬಿಟ್ಟು ಬೇರೆ ಬಾನುಲಿಕಟ್ಟೆಗಳ ಕಾರ್ಯಕ್ರಮಗಳನ್ನು ಕೂಗುವ ಬಾನುಲಿಯಂತ್ರಗಳೇ ಹೆಚ್ಚಾಗಿರುವುವು. ಈ ರೂಢಿಯ ಮೂಲಕ, ತಜ್ಞವಿದ್ವಾಂಸರಿಂದ ನಡೆಯಲಿರುವ ಒಳ್ಳೆಯ ಕೆಲವು ಭಾಷಣಗಳೂ ತಪ್ಪಿಹೋಗುತ್ತಲಿವೆ. ಈ ವಿಭಾಗವು ಇನ್ನಿಷ್ಟು ಜನಾಕರ್ಷಕವಾಗುವಂತೆ ಹೆಚ್ಚಿನ ಎಚ್ಚರು ತೆಗೆದುಕೊಳ್ಳದೆ ಹೋದರೆ, ಈ ವಿಭಾಗದ ಮೇಲೆ ಆಗುವ ಧನವ್ಯಯವು ವ್ಯರ್ಥವ್ಯಯವೆಂದೇ ಹೇಳಬೇಕಾಗುವುದು.

(ಉತ್ತರ ಕರ್ನಾಟಕಕ್ಕೆ ಬಂದಿರುವ ಬಾನುಲಿಕಟ್ಟೆ ಹೊಸತಾಗಿಯೆ ಬಂದುದು. ಅಧಿಕಾರಿಗಳೂ ಹೊಸಬರು. ಕಲಾವಿದರೂ ವಿದ್ವಾಂಸರೂ ಬಾನುಲಿಗೆ ಹೊಸಬರು. ಆದುದರಿಂದ, ಇದುವರೆಗೂ ಧಾರವಾಡದ ಬಾನುಲಿಕಟ್ಟೆಯ ಕಾರ್ಯಕಲಾಪದ ಕಡೆಗೆ ಕುತೂಹಲದ ಸಹಾನುಭೂತಿ-ದೃಷ್ಟಿಯಿಂದಲೇ ಜಯಂತಿ ನೋಡುತ್ತಿದ್ದಿತಲ್ಲದೆ, ವಿಮರ್ಶಾತ್ಮಕ ದೃಷ್ಟಿಯಿಂದ ನೋಡುತ್ತಿರಲಿಲ್ಲ. ಈಗ ಬಾನುಲಿಕಟ್ಟೆಗೆ ಕನ್ನಡಿಗರ ಪರಿಚಯ ಸಾಕಷ್ಟು ಆಯಿತು ; ಕನ್ನಡಿಗರಿಗೆ ಬಾನುಲಿಕಟ್ಟೆಯ ಪರಿಚಯ ಸಾಕಷ್ಟು ಆದಂತಾಯಿತು. ಇನ್ನುಮೇಲೆ ಜಯಂತಿ, ಪ್ರತಿತಿಂಗಳೂ ಬಾನುಲಿಯ ಕಾರ್ಯಕ್ರಮಗಳನ್ನು ವಿಮರ್ಶಿಸಿ ಬರೆಯಬೇಕೆಂದು ಸಂಕಲ್ಪಮಾಡಿದೆ. ಈ ಸಂಕಲ್ಪಕ್ಕೆ ಬಾನುಲಿಯಂತ್ರವನ್ನಿಟ್ಟ ಜಯಂತಿಯ ವಾಚಕವರ್ಗವೂ ಸರಿಯಾದ ನೆರವನ್ನು ಕೊಡುತ್ತ ಬಂದರೆ, ಈ ವಿಮರ್ಶಾವಿಭಾಗ ಹೆಚ್ಚು ಪರಿಪೂರ್ಣವಾದೀತು. ವಿಮರ್ಶೆಗಳು ಕೃತಿಯ ವಿಧಾಯಕ ವಿಮರ್ಶೆಗಳಾಗಿರಬೇಕಲ್ಲದೆ, ವೈಯಕ್ತಿಕ— ಸ್ವಾರ್ಥಸಾಧಕ— ವಿಘಾತಕ ವಿಮರ್ಶೆಗಳಾಗಿರಕೂಡದು.

ಸಂ. ಜಂ.)

ಮೂವರು ಅವಿವಾಹಿತರು

(ಸಣ್ಣ ಕತೆ)

ಪ್ರೊ. ಎ. ಎಸ್. ರಾಮಕೃಷ್ಣ, ಮಣಿಪಾಳ— ಉಡುಪಿ.

★

ವ್ಯಕ್ತಿಯ ದುರಭಿಮಾನ ರಾಜ್ಯ-ಸಾಮ್ರಾಜ್ಯಗಳನ್ನೇ ಹಾಳುಮಾಡುತ್ತಿದೆಯೆಂದಮೇಲೆ, ಅದು ನರಸಿಂಹಮೂರ್ತಿಯಂತಹ ಒಂದು ವ್ಯಕ್ತಿಯ ಬಾಳನ್ನು ಹಾಳು ಮಾಡಿದುದರಲ್ಲಿ ಆಶ್ಚರ್ಯವೇನು? ಅವನೊಂದಿಗೆ ಗೀತೆಯ ಬಾಳೂ ಹಾಳು!

★

ರತ್ನಾಕರ ರಾಯನು ಆರಾಮಕುರ್ಚಿಯಲ್ಲಿ ಕುಳಿತು, ಸಂಜೆಯ ವರ್ತಮಾನಪತ್ರಿಕೆಯನ್ನು ಮಗುಚುತ್ತಿದ್ದ. ಪತ್ರಿಕಾ ಕಚೇರಿಯಿಂದ ಆಗ ತಾನೆ ಹಿಂದಿರುಗಿದ್ದ ನರಸಿಂಹಮೂರ್ತಿ, ಬಟ್ಟೆಗಳನ್ನು ಕಳಚಿಡುತ್ತಿದ್ದ.

“ ಹೇಗಿದೆ ಸ್ವಾಮಿ ಸ್ಟಾರ್ಟ್? ”—ಎಂದು ಕೇಳಿದ ರತ್ನಾಕರ.

“ ಇರುವುದೇನು! ಎಲ್ಲ ಹೊಸದು....ಹೊಸ ಊರು, ಹೊಸ ಉದ್ಯೋಗ, ಹೊಸ ವಾತಾವರಣ! ಒಟ್ಟು ಎಲ್ಲಾ ಹೊಸತೆಂದೇ ಹೇಳಬಹುದು ಸ್ವಾಮಿ! ” ನರಸಿಂಹಮೂರ್ತಿ ನಗುತ್ತ ಉತ್ತರಿಸಿದ.

“ ಅಲ್ಲಾ— ಹೇಗೆನಿಸುತ್ತಿದೆ ಎಂದು ಕೇಳುತ್ತಿದ್ದೇನೆ. ”

“ ಎಲ್ಲ ಮುಂದೆ ನೋಡಬೇಕು; ಈಗ ಬರೇ ಹೊಸತು ಎಂದು ಮಾತ್ರ ಹೇಳಬಲ್ಲೆ. ”

“ ಆಗಲಿ—ನನ್ನಂತೆಯೆ ಬೇಗನೆ ಹಳಬರಾಗಿಬಿಡುತ್ತೀರಿ. ಈಶಕೃಪೆಯಿಂದ, ಸದ್ಯ ಮನಸ್ಸು ಹೊಸತಾಗಿಯೇ ಉಳಿದರೆ ಸಾಕು ಕೊನೆಯ ತನಕ! ”

“ ಅದೇ ಮುಖ್ಯ ನೋಡಿ,— ಹಾಗಾಗುವಂತೆ, ನೀವು ಹೇಳಿದಿರಲ್ಲ— ಈಶಕೃಪೆ- ಅದಿರಬೇಕು! ”

ಇಬ್ಬರೂ ಒಂದೇ ವಯಸ್ಸಿನವರು. ರತ್ನಾಕರನು ವಿದೇಶೀಯ ವ್ಯಾಪಾರಿ ಸಂಸ್ಥೆಯೊಂದರಲ್ಲಿ ಒಳ್ಳೆಯ ಹುದ್ದೆಯಲ್ಲಿದ್ದನು. ಅವನು ಮುಂಬಯಿಗೆ ಬಂದು ನಾಲ್ಕೈದು ವರ್ಷಗಳಾಗಿವೆ. ಮೊದಲಿನಿಂದಲೂ ಮಾತುಂಗದ ಈ ಹೋಟಲಿನಲ್ಲಿಯೇ ಉಳಕೊಂಡಿದ್ದಾನೆ. ಮುಂಬಯಿಯ ಜೀವನ ಅವನಿಗೆ ಒಂದು ರೀತಿಯಲ್ಲಿ ಒಗ್ಗಿಹೋಗಿದೆ. ಅವನೆಂದಂತೆ ಮುಂಬಯಿಗೆ ಅವನು ಹಳಬನಾಗಿಬಿಟ್ಟಿದ್ದಾನೆ.

ಆದರೆ ನರಸಿಂಹಮೂರ್ತಿಗೆ ಹಾಗಲ್ಲ. ಅತ ಮುಂಬಯಿ ನೋಡಿದ್ದು ಅದೇ ಮೊದಲು. ಅತ್ತ ಬಂದು ಇನ್ನೂ ವಾರವಾಗಿಲ್ಲ. ಆ ದಿನ ತಾನೇ ಹೊಸತೊಂದು ಉದ್ಯೋಗರಂಗದಲ್ಲಿ ಕಾಲಿರಿಸಿದ್ದ. ಚಿಕ್ಕಂದಿನಿಂದಲೂ ವೃತ್ತಪತ್ರಿಕಾ ಕಚೇರಿಯಲ್ಲಿ ಕೆಲಸಮಾಡಬೇಕೆಂದು ಅವನ ಹಂಬಲ. ಹೈಸ್ಕೂಲು ವಿದ್ಯಾರ್ಥಿಯಾಗಿದ್ದಾಗಲೇ ಪತ್ರಿಕೋದ್ಯೋಗದ ಕನಸು ಕಾಣುತ್ತಿದ್ದವನವನು. ಅಂದಿನ ಕನಸು ಇಂದು ನನಸಾಗಿದೆ. ಅವನೆಂದಂತೆ ಜೀವನದಲ್ಲಿ ಒಂದು ಅಧ್ಯಾಯವನ್ನೆ ಪ್ರಾರಂಭಿಸಿದ್ದಾನೆ.

ನರಸಿಂಹಮೂರ್ತಿ ಒಂದು ಕುರ್ಚಿಯನ್ನೆಳೆದುಕೊಳ್ಳುತ್ತ “ ಅದೇನೋ ಸ್ವಾಮಿ— ಇತರ ವಿಚಾರಗಳು ಹೇಗೆಯೇ ಇರಲಿ— ನಿಮ್ಮೂರಿನ ಗಲಭೆ ಗಡಿಬಿಡಿಗಳಿಗೆ ನನ್ನ ತಲೆ ಚಿಟ್ಟುಹಿಡಿದು ಹೋಗಿದೆ ”- ಎಂದು ಕುಳಿತುಕೊಂಡನು.

“ ಹೋ! ಮುಂಬಯಿ ನನ್ನೂರೆಂದು ಬಿಟ್ಟಿರಾ? ಬೇಗನೆ ನಿಮ್ಮೂರೂ ಆಗಿಬಿಡುತ್ತದೆ, ನೋಡುತ್ತಿರಿ. ಇಲ್ಲಿನ ಗಡಿಬಿಡಿ-ಉನ್ಮಾದಗಳಿಗೆ ನಿಮ್ಮ ಅಳಿಲಸೇವೆಯೂ ಸಲ್ಲುತ್ತದೆ! ”

ನರಸಿಂಹಮೂರ್ತಿ ನಕ್ಕನು “ ನಾನು ಬಿಟ್ಟು ಬಂದ ಮದರಾಸು ಕೂಡ ದೊಡ್ಡ ನಗರವಾದರೂ, ಅಲ್ಲಿ ನಾನಿದ್ದ ವಾತಾವರಣ ತುಂಬ ಪ್ರಶಾಂತವಾಗಿತ್ತು. ಮುಂಬಯಿಯ ವಿರಾಟ್ಸ್ವರೂಪದಿಂದ ಮನಸ್ಸೆಲ್ಲ ಅಲ್ಲೋಲಕಲ್ಲೋಲವಾಗಿದೆ. ”

“ ಹಾಗಾಗುವುದು ಸಹಜವೆ! ಮೊದಮೊದಲು ನನಗೂ ಹಾಗೆಯೇ ಎನಿಸಿತು. ಮುಂಬಯಿಯಲ್ಲಿ ಪ್ರತಿಯೊಂದೂ ವಿರಾಡ್ರೂಪವನ್ನು ತಾಳಿರುವುದೇನೋ ನಿಜವೆ. ಇಲ್ಲಿ ಚಿಕ್ಕದಾಗಿ ಉಳಿಯುವವುಗಳೆಂದರೆ ನಾವು-ವ್ಯಕ್ತಿಗಳು-ಮಾತ್ರ! ”

“ ಸರಿಯಾದ ಮಾತು ಹೇಳಿದಿರಿ. ಮಹಾಸಾಗರದ ಹನಿಗಳಂತಾಗಿಬಿಡುತ್ತೇವೆ ಈ ನಗರಗಳಲ್ಲಿ! ”

* * *

ಊಟ ಮುಗಿಸಿ ಬಂದು ರತ್ನಾಕರ ಒಂದು ಪತ್ರ ಬರೆಯುವುದರಲ್ಲಿ ತೊಡಗಿದ. ನರಸಿಂಹಮೂರ್ತಿಯ ದೇಹ-ಮನಸ್ಸುಗಳೆರಡೂ ಸೋತಿದ್ದುವಾದುದರಿಂದ, ಅವನು ಹಾಸಿಗೆ ಬಿಡಿಸಿ ಚಾಚಿ-

ಕೊಂಡಿದ್ದನು. ಆದರೆ ಅವನಿಗೆ ನಿದ್ರೆ ಬರುವ ಲಕ್ಷಣ ಕಾಣಲಿಲ್ಲ. ಕಣ್ಣು ಕೆರಳಿಸುವಂತೆ ದೀಪ ಉರಿಯುತ್ತಿತ್ತು. ಅವನ ಅವಿಚಲಿತ ದೃಷ್ಟಿ ಎತ್ತಲೋ ಕೇಂದ್ರೀಕೃತವಾಗಿತ್ತು. ಇದ್ದಕ್ಕಿದ್ದಂತೆ ಅವನ ಮನಸ್ಸಿನಲ್ಲಿ ಒಂದು ವಿಪ್ಲವವೇ ತಲೆದೋರಿತು.

ಜೀವನದಲ್ಲಿ ಹೊಸ ಘಟ್ಟವೊಂದು ಪ್ರಾರಂಭವಾದಾಗ, ಹಳೆಯ ನೆನಪುಗಳೆಲ್ಲ ಚಿಗಿತುಬಿಡುವುದುಂಟು. ಆಗ ಗತಕಾಲದ ಸಿಹಿ-ಕಹಿ ಅನುಭವಗಳೆಲ್ಲ ಚಿತ್ತಭಿತ್ತಿಯಲ್ಲಿ ಸುಳಿದಾಡತೊಡಗುತ್ತವೆ. ನರಸಿಂಹಮೂರ್ತಿಗೂ ಹಾಗೆಯೇ ಆಯಿತು. ಅವನ ಬಾಲ್ಯದ ಚಿತ್ರಗಳು ಕೂಡ ಮನಸ್ಸಿನ ಮುಂದೆ ಬಂದುಹೋದುವು :

ತಾಯಿಯನ್ನು ಕಂಡ ನೆನಪಿಲ್ಲ ಅವನಿಗೆ. ತಂದೆಯ ಕುರಿತು ಅರಿವೂ ಮಸಕುಮಸಕಾಗಿತ್ತು. ಏಕೆಂದರೆ ಎರಡನೆಯ ವಯಸ್ಸಿನಲ್ಲಿಯೇ ಅವನು ತಬ್ಬಲಿಯಾಗಿದ್ದ. ಚಿಕ್ಕಪ್ಪ ಅವನನ್ನು ಬೆಳೆಸಿದ್ದರು. ವಿದ್ಯಾಭ್ಯಾಸಕೊಡಿಸಿದ್ದರು. ಮೂರ್ತಿಯ ಹೈಸ್ಕೂಲು ಮುಗಿಯುತ್ತದೆನ್ನುವಾಗ ಅವರೂ ತೀರಿಕೊಂಡರು. ಅವನ ವ್ಯಾಸಂಗವೂ ಅಲ್ಲಿಗೇ ಕೊನೆಗೊಳ್ಳುವುದರಲ್ಲಿತ್ತು; ಆದರೆ ಹುಡುಗ ಸುಟಿಯಾಗಿದ್ದ. ಗುಣಶಾಲಿಯೆನಿಸಿಕೊಂಡಿದ್ದ. ಆದುದರಿಂದ ಹಿತಚಿಂತಕರು ಕೆಲವರು ಅವನನ್ನು ನಾನಾ ರೀತಿಯಲ್ಲಿ ಪ್ರೋತ್ಸಾಹಿಸಿದರು. ಸಹಾಯ ನೀಡಿದರು. ಅನಂತರ ಮದರಾಸಿಗೆ ಹೋಗಿ, ಅಲ್ಲಿ ನೆಲಸಿದ್ದ ಊರಿನ ಡಾಕ್ಟರರೊಬ್ಬರ ಆಶ್ರಯ ಪಡೆದು, ಅಲ್ಲದೆ ನಾಲ್ಕಾರು ಟ್ಯೂಶನ್‌ಗಳನ್ನು ಗೊತ್ತುಮಾಡಿಕೊಂಡು—ಹಾಗೂ ಹೀಗೂ— ಕಾಲೇಜು ವಿದ್ಯಾಭ್ಯಾಸವು ನಡೆಯಿತು. ವ್ಯಾಸಂಗ ಮಾಡುತ್ತಿದ್ದ ಕಾಲದ ನೆನಪುಗಳು ಕೊನೆಯತನಕ ಸವಿಯಾಗಿ ನಿಲ್ಲುತ್ತವೆ. ಪ್ರತಿಭಾಶಾಲಿಯಾಗಿದ್ದು, ವಿದ್ಯಾರ್ಥಿ ಜೀವನದ ಪ್ರತಿಯೊಂದು ರಂಗದಲ್ಲಿಯೂ ಸಾಕಷ್ಟು ಆಸಕ್ತಿ ವಹಿಸುವ ವಿದ್ಯಾರ್ಥಿಗಂತೂ, ಆ ಕಾಲದ ಒಂದೊಂದು ನಿಮಿಷವೂ ರಸನಿಮಿಷವೆನಿಸುತ್ತದೆ. ಮೂರ್ತಿಗೂ ಹಾಗೆ ಎನಿಸಿತು.

ಬಿ ಎ (ಆನರ್ಸ್) ಮುಗಿಸಿದ ಮೂರ್ತಿ, ತನ್ನೂರನ್ನು ನೋಡಿ ಬರೋಣವೆಂದು ಹೋಗಿದ್ದ. ಮುಂದಿನ ಮಾರ್ಗದ ಕುರಿತು ಆಗ ಅವನು ಇನ್ನೂ ನಿಶ್ಚಯಕ್ಕೆ ಬಂದಿರಲಿಲ್ಲ. ಹೀಗಿರುವಾಗ, ನಾಲ್ಕು ದಿನಗಳಿಗೆಂದು ಊರಿಗೆ ಬಂದವನು ಎರಡು ವರ್ಷಗಳ ಕಾಲ ಅಲ್ಲಿ ಉಳಿಯಬೇಕಾಗುವಂಥ ಪ್ರಸಂಗ ಉಂಟಾಯಿತು. ತನ್ನ ಎಳೆಯತನದ ಹಿತಚಿಂತಕರ ಮಾತಿಗೆ ಕಟ್ಟುಬಿದ್ದು, ಅವನು ಜೀವನದ ಗುರಿಯನ್ನು ತಾತ್ಕಾಲಿಕವಾಗಿ ಬದಲಿಸಬೇಕಾಯಿತು. ತನ್ನೂರಿನ ಹೈಸ್ಕೂಲಿನಲ್ಲಿ ಶಿಕ್ಷಕನಾಗಿ ಸೇರಿ ಅವನು ಕೆಲಸ ಮಾಡಿದನು. ಪತ್ರಿಕೋದ್ಯೋಗಿಯಾಗಬೇಕೆಂದಿದ್ದ ತನ್ನ ಆಸೆಯನ್ನು ಬದಿಗೊತ್ತಿದನು. ಹಲವರ ಔದಾರ್ಯದಿಂದ ತಾನೆ ಅವನು ಪದವೀಧರನಾದುದು ? ಎಂದಮೇಲೆ, ತನ್ನದೂ ಒಂದು ಋಣವಿದೆ, ಅದನ್ನು ಸಲ್ಲಿಸುವುದು ತನ್ನ ಕರ್ತವ್ಯವೆಂದುಕೊಂಡು, ಮೂರ್ತಿ ಶಿಕ್ಷಕವೃತ್ತಿಯನ್ನು ಕೈಗೊಂಡನು. ತನ್ನ ಕರ್ತವ್ಯನಿಷ್ಠೆಯಿಂದಾಗಿ ಗೌರವವನ್ನೂ ಸಂಪಾದಿಸಿದನು. ಎಲ್ಲರ ಪ್ರೀತ್ಯಾದರಗಳಿಗೆ ಪಾತ್ರನಾದನು. ಎಂದೆಂದಿಗೂ ಶಿಕ್ಷಕನಾಗಿಯೇ ಉಳಿಯುತ್ತೇನೆಂದು ಅವನು ನಿಶ್ಚಯಿಸುವುದರಲ್ಲಿದ್ದನು. ಆದರೆ ಅದು ಹಾಗಾಗಲಿಲ್ಲ. ಎಣಿಸಿದ್ದೊಂದಾದರೆ ಆದುದೊಂದೆಂಬಂತೆ, ಅವನು ಎರಡನೆಯ ವರ್ಷ ಮುಗಿದಾಗ, ಶಿಕ್ಷಕವೃತ್ತಿಗೆ ಬೆನ್ನು ಹಾಕಿ ಮದರಾಸಿಗೆ ಹಿಂದಿರುಗಿ, ಅಲ್ಲಿಂದ ಮುಂಬಯಿಗೆ ಬಂದಿದ್ದನು. ಪತ್ರಿಕೋದ್ಯೋಗವು ಕೊನೆಗೂ ಅವನನ್ನು ಸೆಳೆದುಕೊಂಡಿತು. ಅವನು ಶಿಕ್ಷಕನಾಗಿದ್ದುದು ಎರಡೇ ವರ್ಷಗಳ ಕಾಲ. ಆದರೂ ಆ ಅವಧಿಯಲ್ಲಿ ಅವನ ಬದುಕು ಎಷ್ಟೊಂದು ವಿಸ್ತರಿಸಿತು ! ಎಷ್ಟೆಲ್ಲ ಅನುಭವಗಳು ದೊರೆತುವು ! ಕಾಲೇಜಿನಿಂದ ಹೊರಬಿದ್ದ ಅಂದಿನ ವಿದ್ಯಾರ್ಥಿಯೆಲ್ಲಿ, ಶಿಕ್ಷಕನಾಗಿದ್ದು ಜಗತ್ತಿಗಿಳಿದಿರುವ ಈ ತರುಣನೆಲ್ಲಿ ! ಸಿಹಿ ಕಹಿ ಅನುಭವಗಳಿಂದ ಬಾಳಿಗೊಂದು ಪರಿಪಕ್ವತೆಯೇನೋ ದೊರೆಯಿತು. ಆದರೆ ಆ ಅನುಭವಗಳನ್ನೆಲ್ಲ ಮತ್ತೆ ಇಂದು ನೆನೆಯುವಾಗ, ಮೂರ್ತಿಗೆ ಉದ್ವೇಗ ಉಕ್ಕಿ ಬಂತು. ಕಣ್ಣು ಹೊರಳಿಸಿ ನೋಡಿದರೆ, ರತ್ನಾಕರ ಬರೆಯುತ್ತಲೇ ಇದ್ದನು.

ಗೆಳೆಯನನ್ನು ಕಂಡು ಮೂರ್ತಿಯ ಮನಸ್ಸಿನಲ್ಲಿ ಸ್ವಲ್ಪ ಶಾಂತಿಯುಂಟಾಯಿತು. ಯಾರ ಪರಿಚಯವೂ ಇಲ್ಲದೆ ಮುಂಬಯಿಗೆ ಬಂದರೂ, ಒಳ್ಳೆಯ ಗೆಳೆಯರೊಬ್ಬರು ದೊರೆಕಿದರಲ್ಲ— ಎಂದು ಅವನಿಗೆ ಸಮಾಧಾನ. ರತ್ನಾಕರನೂ ಕನ್ನಡ ಜಿಲ್ಲೆಯವನು. ಒಂದೇ ಕೋಣೆಯಲ್ಲಿ ವಾಸಿಸುವುದೆಂದು ನಿಶ್ಚಯಿಸಿದ್ದರು. ಪರಸ್ಪರ ಸ್ವಭಾವವು ಒಗ್ಗಿದಂತಾಗಿ, ನಾಲ್ಕಾರು ದಿನಗಳಲ್ಲೇ ಅವರಲ್ಲಿ ಸ್ನೇಹದ ಮೊಳಕೆ ಮೂಡಿತ್ತು. ಅದು ಬೆಳೆದು ಬರುವ ಲಕ್ಷಣವೂ ಕಾಣಿಸುತ್ತಿತ್ತು.

"ಏನು ಸ್ವಾಮಿ, ಮಲಗಿಕೊಂಡು ಯಾಕೋ ಬಹಳ ಯೋಚಿಸುತ್ತಿರುವ ಹಾಗಿದೆ ?— ಲೈಟ್ ಆರಿಸದೆ ಇದ್ದುದರಿಂದ ನಿದ್ರೆಗೆ ತೊಂದರೆಯಾಯಿತೇನೋ !" ಎಂದ ರತ್ನಾಕರ. ಅವನ ಪತ್ರಲೇಖನಕಾರ್ಯ ಮುಗಿದಿತ್ತು.

"ಹಾಗೇನೂ ಇಲ್ಲ; ಸುಮ್ಮನೆ ಏನೇನೋ ಯೋಚಿಸುತ್ತಾ ಇದ್ದೆ. ನೀವೇನೋ ಭಾರೀ ಪತ್ರಲೇಖನ ಕಾರ್ಯದಲ್ಲಿ ತೊಡಗಿದ್ದಂತಿತ್ತು— ಮುಗಿಯಿತೇನು ?"

"ಮುಗಿದೇ ಹೋಯಿತು. ನೀ[illegible]ವಂತೆ ಭಾರೀ ಪತ್ರವೇ ! ನನ್ನ ತಮ್ಮನಿಗೆ ಬರೆಯುತ್ತಿದ್ದೆ. [illegible] ವಾರವೆಲ್ಲ ಏನು ಬರೆಯುವುದೆಂದು ಯೋಚಿಸಿ, ಈಪ್ರೊತ್ತು ಬರೆದು ಮುಗಿಸಿದೆ."

"ಗಹನವಾದ ವಿಚಾರವಿರಬೇಕೆನ್ನಿ."

"ಹಾಗೆಯೇ ಹೇಳಬಹುದು; ಮದುವೆಯೆಂಬುದು ಗಹನವಾದ ವಿಚಾರವೆಂದು ಒಪ್ಪಬಹುದಾದರೆ !"

"ಅಲ್ಲವೆ ಮತ್ತೆ ?"

"ನನಗಂತೂ ಅದೊಂದು ಸಮಸ್ಯೆಯಾಗಿ ಬಿಟ್ಟಿತ್ತು. ಈ ಕಾಗದ ಬರೆದು ಹೊರೆ ಇಳಿಸಿಕೊಳ್ಳುತ್ತಿದ್ದೇನೆ. ಇಷ್ಟರಲ್ಲೇ ನನ್ನ ತಮ್ಮನ ಲಗ್ನಕ್ಕೆ ನಿಮ್ಮನ್ನು ಆಹ್ವಾನಿಸುತ್ತೇನೆ."

"ತಮ್ಮನ ಲಗ್ನಕ್ಕೆ ?"—ನರಸಿಂಹಮೂರ್ತಿ ಬೆರಗಾಗಿ ಕೇಳಿದ.

"ಹುಂ...... ನನ್ನ ತಮ್ಮನ ಲಗ್ನಕ್ಕೆ !"

"ಎಂದರೆ ನೀವಿನ್ನೂ ಅವಿವಾಹಿತರೆಂದು ಹೇಳಿದಿರಲ್ಲ!"

"ಅದೂ ನಿಜ!"

"ನನಗೆ ನೀವೆನ್ನುವುದು ಅರ್ಥವಾಗುತ್ತಿಲ್ಲವಲ್ಲ!"

"ಹಾಗಿದ್ದರೆ ಹೇಳುತ್ತೇನೆ ಕೇಳಿ— ನನ್ನ ತಮ್ಮ ಈ ವರ್ಷ ತಾನೆ L.I.M. ಮುಗಿಸಿ ಬಂದಿದ್ದಾನೆ. ಆಗಲೆ ಪ್ರ್ಯಾಕ್ಟೀಸು ಪ್ರಾರಂಭಿಸಿದ್ದಾನೆ. ಅವನಿಗೆ ಲಗ್ನವಾಗುವ ಇಚ್ಛೆಯಿದೆ. ಒಳ್ಳೆಯ ಸಂಬಂಧವೂ ದೊರಕಿದೆಯಂತೆ. ನಮ್ಮಜ್ಜ ಹಾಗೆಂದು ಬರೆದಿದ್ದಾರೆ. ಈಗ ಆತಂಕವಾಗಿರುವುದು ನನ್ನಿಂದ—ಎಂದು ಅವರ ತಿಳಿವಳಿಕೆ. ನನ್ನ ಲಗ್ನ ಮೊದಲಾಗಿ ಆಗಬೇಕೆಂದು ಅವರ ಬಲವಂತ... ...."

"ನ್ಯಾಯವಲ್ಲವೆ?"

"ನ್ಯಾಯದ ವಿಚಾರವೇನು ಬಂತು? Convention ಅನ್ನಿ. ಬರಿಯ ರೂಢಿ ಮಾತ್ರ. ಅಣ್ಣನಾದರೇನು— ತಮ್ಮನಾದರೇನು? ಯಾರಿಗೆ ಮನಸ್ಸುಂಟಾಗಿ ಅನುಕೂಲವಾದ ಸಂದರ್ಭ ಸನ್ನಿವೇಶಗಳು ದೊರಕುವುವೋ ಅವರು ಮೊದಲು ಲಗ್ನವಾಗಬೇಕು. ಅದನ್ನುಳಿದು 'ಅಣ್ಣನಿಗಾಗದೆ ತಮ್ಮನಿಗಾಗದು' ಎಂದೆಲ್ಲ ಪೇಚಾಡುವುದು ಭ್ರಮೆಯಲ್ಲವೆ? ಅದರಲ್ಲಿಯೂ ನಮಗಿಬ್ಬರಿಗೂ ವ್ಯತ್ಯಾಸವಿರುವುದು ಕೇವಲ ಒಂದು ವರ್ಷಕ್ಕೆ ಮಾತ್ರ. ನಾವೂ ನಿಮ್ಮಂತೆ ತಬ್ಬಲಿಗಳು. ನಮ್ಮ ತಾತ ನಮ್ಮನ್ನು ಸಾಕಿ ಬೆಳೆಸಿದರು. ಪಾಪ ಹಣ್ಣು ಮುದುಕ— ಮನೆ ತುಂಬಿದ್ದನ್ನು ಕಂಡು ನಾಲ್ಕು ದಿನ ಬಾಳುತ್ತೇನೆಂದು ಅವರ ಹಂಬಲ. ಆದ್ದರಿಂದ ತಮ್ಮನಿಗೂ ತಾತನಿಗೂ ಬರೆದಿದ್ದೇನೆ. ಹಾಗಲ್ಲದೆ ನನಗಾಗಿ ತಡೆಯುವುದಾದರೆ, ಕೊನೆತನಕ ತಡೆಯಬೇಕಾದೀತು."

"ಕ್ಷಮಿಸಿ; ಅದೇನು ಹಾಗೆ?"

ರತ್ನಾಕರನು ಒಂದು ಕ್ಷಣ ಮೂರ್ತಿಯನ್ನೆ ದಿಟ್ಟಿಸಿದನು.

ತಾನು ಹಾಗೆ ಪ್ರಶ್ನಿಸಿದ್ದು ಉಚಿತವಲ್ಲವೊ—ಎನ್ನಿಸಿತು ಮೂರ್ತಿಗೆ.

"ಅದೇನು ಹಾಗೆ ಎಂದಿರಾ? ದೈವವೇ ಹಾಗೆ ಬಗೆದಿದೆ" ಎಂದನು ರತ್ನಾಕರ. "ನಾನು ಮದುವೆಯಾಗುವುದು ಮೊದಮೊದಲು ನನಗೇ ಬೇಡವಿತ್ತು. ಅನಂತರ ನನ್ನ ಮನಸ್ಸು ಆ ಕಡೆ ತಿರುಗಿದಾಗ, ವಿಧಿ ಬೇರೊಂದು ಬಗೆಯಿತು. ಈಗ ಮಾತ್ರ ನನಗೆ ವೈವಾಹಿಕ ಜೀವನದ ಯೋಚನೆ ಕೂಡ ಇಲ್ಲ." ಮಾತನಾಡುತ್ತಿದ್ದಂತೆ ಅವನ ಮುಖದ ಸಹಜವಾದ ಪ್ರಸನ್ನತೆ ಮಾಯವಾಗಿ, ಖಿನ್ನತೆ ತಲೆದೋರಿತು. ಧ್ವನಿ ಭಾರವಾಗಿತ್ತು.

ಮಲಗಿದ್ದ ನರಸಿಂಹಮೂರ್ತಿ ಎದ್ದು ಕುಳಿತನು. ಅವನ ಕುತೂಹಲ ಕೆರಳಿತ್ತು. ಆದರೂ ಆತನು ಮಾತನಾಡಲಿಲ್ಲ.

ಕಳೆದ ಮೇ ತಿಂಗಳಲ್ಲಿ ರತ್ನಾಕರನಿಗೆ ಲಗ್ನವಾಗುವುದಿತ್ತು. ಆ ತನಕ ಲಗ್ನದ ಸುದ್ದಿ ಬಂದಾಗಲೆಲ್ಲ 'ಊಹುಂ' ಎನ್ನುತ್ತಿದ್ದವನು, ಆಗ ಹೇಗೋ ಒಪ್ಪಿಕೊಂಡಿದ್ದನು. ಎಲ್ಲವೂ ನಿಶ್ಚಯವಾಗಿದ್ದುವು. ಬಿಡಾರಕ್ಕೆ ಮನೆಯನ್ನು ಕೂಡ ಗೊತ್ತುಮಾಡಿಯಾಗಿತ್ತು. ಅಷ್ಟರ... ತಿಳಿಯಬಾರದೇಕೆ?— ಹೀಗೆಂದುಕೊಂಡು ದಿವಸವನ್ನು ಮುಂದಕ್ಕೆ... ತನ್ನ ತಂಗಿಯೆಂಬಂತೆಯೆ ಭಾವಿಸಿ ನೋಡಲಿಲ್ಲ. ಒಂದು ತಿಂಗಳ... ವಿದ್ಯಾರ್ಥಿ–ವಿದ್ಯಾರ್ಥಿನಿಯರಲ್ಲಿ ಅವನಿಗೆ ಬೇಕಾದುದೇ ತಪ್ಪಿತು. ಲ... ಆದರೆ ಗೀತೆಯಲ್ಲಿ ಹೆಚ್ಚಿನ ಅಭಿಹೋದುದನ್ನು ರತ್ನಾಕರನು ...ವಲ್ಲ. ಪಕ್ಷಪಾತವೆನ್ನುವುದಾದರೂ,

"ಹಾಗಾದುದು ತುಂಬ ವ್ಯಸ... ...ಯ ಪ್ರತಿಭೆಯೊಂದೇ ವಿನಾ

"ವ್ಯಸನಕರ?" ರತ್ನಾಕರನೇ ...ಗಲೆಲ್ಲ ನರಸಿಂಹಮೂರ್ತಿ, ಯೋಚನಾಮಗ್ನನಾದನು. ...ಅನುಕೂಲಿಸಿ

ಮೂರ್ತಿಗೆ ಗೆಳೆಯನ ವಿವಾಹ ನಿಂತುಹೋದುದರ ಕ... ...ವನ್ನು ತಿಳಿಯುವ ಕುತೂಹಲವಾ...ರೂ, ಆ ಕಹಿನೆನಪನ್ನು ಮತ್ತೆ ಕೆಣಕುವುದು ಸಮವಲ್ಲವೆನಿಸಿ ಸುಮ್ಮನಾದನು. ಅವಕಾಶ ದೊರೆತಾಗ, ಎಂದಾದರೊಮ್ಮೆ ತಿಳಿದುಕೊಳ್ಳೋಣವೆಂದುಕೊಂಡನು.

ಹೋಟಲ ಹುಡುಗ ಎರಡು ಬೋಟಗಳಲ್ಲಿ ಹಾಲು ತಂದಿರಿಸಿದನು. ಅವನನ್ನು ಕಂಡೊಡನೆ ರತ್ನಾಕರನನ್ನು ಕವಿದಿದ್ದ ಚಿಂತೆಯ ಕಾರ್ಮೋಡ ಸರಿಯಿತು. ಅವನ ಪ್ರಸನ್ನತೆ ಮತ್ತೆ ಮೂಡಿತು.

"ಏನೋ ರಘುರಾಮ, ಯಾವಾಗಲೋ ನಿನ್ನ ಲಗ್ನದ ಇನ್ವಿಟೇಶನ್ ಕೊಡುವುದು?"—ಎಂದು ಪರಿಹಾಸಕ್ಕೆ ತೊಡಗಿದನು

ಕೊಂಡಿದ್ದನು. ಆದರೆ ಅವನಿಗೆ ನಿದ್ರೆ ಬರುವ ಲ- ಹುಡುಗನು ಹಿಗ್ಗಿ
ಕಣ್ಣು ... ಗೆರೈಸುವಂತೆ ದೀಪ ಉರಿಯುತ್ತಿತ್ತು.
ಲಿತ ದೃಷ್ಟಿ ಎತ್ತಲೋ ಕೇಂದ್ರೀಕೃತವಾಗಿತ್ತು. ಈಗ !"
ಅವನ ಮನಸ್ಸಿನಲ್ಲಿ ಒಂದು ವಿಪ್ಲವವೇ ತಲೆಹದಿನೇಳಾಗುತ್ತದೆ."

ಜೀವನದಲ್ಲಿ ಹೊಸ ಘಟ್ಟವೊಂದು ಪ್ರಾರಂಭ! ಇಷ್ಟು ತಡವಾಗಿ ಲಗ್ನ
ನೆನಪುಗಳೆಲ್ಲ ಚಿಗಿತುಬಿಡುವುದುಂಟು.
ಕಹಿ ಅನುಭವಗಳೆಲ್ಲ ಚಿತ್ತಭಿತ್ತಿ... ನಿಗೂ ವಯಸ್ಸಾಯಿತು. ಅಡಿಗೆ
ನರಸಿಂಹ ಮೂರ್ತಿಗೂ ಹೆಚ್ಚಿರುವುದಿಲ್ಲವಂತೆ. ಆದ್ದರಿಂದ ಈ ವರ್ಷವೇ...."
ಚಿತ್ರಗಳು ಕ್ಷೀಣ... ಈ ವರ್ಷವೇ ಲಗ್ನವಾಗಿಬಿಡಬೇಕು. ನಾವು ಕೂಡ ಹೆಂಡಂದಿರನ್ನು ತಾಯಿಯ ಜೊತೆಗೆ ಬಿಟ್ಟುಬಿಟ್ಟಿದ್ದೇವೆ– ಅಲ್ಲವೇ ಮೂರ್ತಿಗಳೆ?.... ಆದರೆ ರಘುರಾಮ್, ದಶಂಬರದೊಳಗೆ ನೀನು ಸ್ವಲ್ಪ ಎತ್ತರ ಬೆಳೆಯಬೇಕು ನೋಡು !"

"ಹೌದು ಸರ್— ಅದಕ್ಕೆಂತಲೆ ಔಷಧಿ ತೆಗೆದುಕೊಳ್ಳುತ್ತಿದ್ದೇನೆ."

"ಭೇಷ್ ಬಿಡು— ನಮ್ಮೂರ ತಾಳೆ ಮರದ ಹಾಗೆ ಬೆಳೆಯುತ್ತೀಯ ಹಾಗಾದರೆ !"

ಎಲ್ಲರೂ ನಗೆಯಾಡಿದರು. ಹುಡುಗನೂ ನಕ್ಕು ಹಿಗ್ಗಿ ಹೊರಟು ಹೋದನು. ಮತ್ತೆ ಮೌನ ಆವರಿಸಿತು. ಇಬ್ಬರೂ ಹಾಲುಕುಡಿದರು. "ಮಲಗೋಣವೇ?"—ಎಂದು ಕೇಳಿದ ರತ್ನಾಕರ. "ಸರಿ"— ಎಂದ ಮೂರ್ತಿ. ದೀಪ ಆರಿಸಿ ಇಬ್ಬರೂ ಮಲಗಿಕೊಂಡರು.

ಎರಡು ನಿಮಿಷಗಳು ಕಳೆದಿರಬಹುದು. ರತ್ನಾಕರ ನಿಧಾನವಾಗಿ ಕೇಳಿದ: "ಏನು ಸ್ವಾಮಿ, ಮೂರ್ತಿಗಳೆ, ನಿಮ್ಮ ಮುಂದೆ ಈ ಮದುವೆಯ ಸಮಸ್ಯೆ ಬಂದಿದ್ದಿಲ್ಲವೆ?"

"ಅಂ.... ಎದುರಾಗಿದ್ದೇ ಇಲ್ಲವೆಂದು ಹೇಳಲಾರೆ! ಆ ಜೋಟುದ್ದದ ಹುಡುಗನೇ ಲಗ್ನದ ಸಮಸ್ಯೆಯನ್ನೆದುರಿಸಬೇಕಾಗಿರುವಾಗ, ಇಪ್ಪತ್ತಮೂರನೆವರ್ಷದ ಆಳಿಗೆ ಆ ಸಮಸ್ಯೆ ಎದುರಾಗದಿರುವುದುಂಟೆ? ಆದರೆ ಈಗಲೇನೋ ಅದು ದೂರವಾಗಿಬಿಟ್ಟಿದೆ. ಒಮ್ಮೆ ಎದುರಾಯಿತು. ನನ್ನನ್ನು ಭ್ರಾಂತನನ್ನಾಗಿ ಮಾಡಿತು. ಆದರೆ ದೈವವೇ ಅದನ್ನು ಬಗೆಹರಿಸಿತು!"

"ನನಗೇನೋ ಮದುವೆಯ ಸಮಸ್ಯೆ ಮಿಂಚಿನಂತೆ ಎದುರಾಯಿತು. ಬಲು ಬೇಗನೆ ಮಿಂಚಿನಂತೆಯೆ ಹರಿದು ಹೋಯಿತು."

"ನನಗೆ ಹಾಗಲ್ಲ, ಅಸ್ಪಷ್ಟಸ್ಪಷ್ಟವಾಗಿ ಎದುರಾಯಿತು."

"ಇದಿರಲಿ—ಈಗ ಸ್ಪಷ್ಟವಾಗಿ ಹೇಳಿ ನೋಡೋಣ! ಗೌಪ್ಯವಾಗಿಡಬೇಕಾದುದೇನೂ ಇಲ್ಲದಿದ್ದರೆ, ನನಗೂ ಸ್ವಲ್ಪ ಹೇಳಿ ನಿಮ್ಮ ವಿಚಾರವನ್ನ; ಕೇಳಿ ನನ್ನ ಮನಸ್ಸು ಹಗುರಾದರೂ ಆಗಬಹುದು. ಆದರೆ ಹೀಗೆ ಬಯಸುವುದೂ ಒಂದು ಸ್ವಾರ್ಥವೇ ಸರಿ. ಕ್ಷಮಿಸಿ!"

"ಸ್ವಾರ್ಥ ನಿಮಗೆ ಮಾತ್ರವಲ್ಲ. ನನ್ನಲ್ಲೂ ಬೇಕಾದಷ್ಟಿದೆ. ನಿಮ್ಮ ವಿಚಾರ ಸ್ವಲ್ಪ ಹೇಳಿದೊಡನೆ, ನನ್ನ ಅನುಭವಗಳೆಲ್ಲ ಮನಸ್ಸಿನಲ್ಲೆದ್ದು ನಿಂತಿವೆ. ನನಗೂ ಎದೆ ಹಗುರ ಮಾಡಿಕೊಳ್ಳದೆ ಗತ್ಯಂತರವಿಲ್ಲ. ಆದರೆ ಇಂಥವೆಲ್ಲ ತೀರ ಆತ್ಮೀಯವಾದ ವಿಷಯಗಳು. ನಮ್ಮ ಸ್ವಂತದಲ್ಲಿ ಸ್ವಂತ; ಮಾತ್ರವಲ್ಲದೆ ನನಗೆ ಅವುಗಳು ಮಹತ್ತಾಗಿ ಕಂಡುಬರಬಹುದಾದರೂ ಇತರರಿಗೆ ಅಲ್ಪವಾದುವೆನ್ನಿಸಬಹುದು. ಆದರಲ್ಲಿಯೂ ನಮ್ಮಿಬ್ಬರಿಗೆ ಪರಿಚಯವಾಗಿ ಇನ್ನೂ ವಾರ ಕೂಡಾ ಆಗಿಲ್ಲ. ನಮ್ಮಿಬ್ಬರಲ್ಲಿ ಹೊಂದಿಕೆಯಾಗಿರುವುದಾದರೂ, ಒಬ್ಬರನ್ನೊಬ್ಬರು ಅರಿತೆವೆಂದು ಹೇಳುವಂತಿದೆಯೇ? ಆದ್ದರಿಂದ ಸಂಕೋಚಗೊಂಡೇ ಹೇಳುತ್ತೇನೆ; ನನ್ನ ಅನುಭವಗಳು ಸಪ್ಪೆಯಾಗಿ ಕಾಣಿಸಬಹುದು. ಬೇಸರ ಬರಿಸಿದರೂ ಬರಿಸಬಹುದು."

"ಜೀವನದ ಯಾವ ಅನುಭವಗಳೂ ನನಗೆ ಬೇಸರಬರಿಸವು ಮೂರ್ತಿಗಳೆ!"

"ಹಾಗಿದ್ದರೆ ಕೇಳಿ"—ಎಂದು ಮೂರ್ತಿ, ತನ್ನ ಅನುಭವಗಳಲ್ಲಿ ಗೆಳೆಯನಿಗೆ ಹೇಳಬಹುದಾದುದನ್ನೆಲ್ಲ ನಿರೂಪಿಸತೊಡಗಿದನು. ದೀಪವನ್ನು ಮೊದಲೇ ಆರಿಸಿಕೊಂಡಿದ್ದರು. ನಿದ್ದೆ ಬರುವ ಲಕ್ಷಣ ಇಬ್ಬರಿಗೂ ಇರಲಿಲ್ಲ. ಮೂರ್ತಿ ಹೇಳುತ್ತಿದ್ದನು. ರತ್ನಾಕರ ಬರಿದೆ ಹೂಗುಟ್ಟುತ್ತ ಕೇಳುತ್ತಿದ್ದನು. ಇಬ್ಬರೂ ಕಲ್ಪನೆಯ ಜಗತ್ತಿನಲ್ಲೆಂಬಂತೆ ಇದ್ದರು.

* * * *

ಮದ್ರಾಸಿನಲ್ಲಿ ಕಾಲೇಜುವ್ಯಾಸಂಗವನ್ನು ಮುಗಿಸಿ ಊರಿಗೆ ಬಂದ ನರಸಿಂಹಮೂರ್ತಿ, ಊರಿನ ಹೈಸ್ಕೂಲಿನಲ್ಲಿ ಶಿಕ್ಷಕನಾಗಿ ಸೇರಿದ್ದನು. ಆತ್ಮೀಯರು ಗೆಳೆಯರು, ಹಿತಚಿಂತಕರು— ಊರಲ್ಲಿ ಹಲವರಿದ್ದರು. ಆದರೆ ಸಮೀಪದ ಬಂಧುಗಳಾರೂ ಇರಲಿಲ್ಲ. ಚಿಕ್ಕತಂದೆ ತೀರಿಕೊಂಡಾಗ, ಅವರ ಹೆಂಡತಿ ಮಕ್ಕಳೊಡನೆ ತವರಿಗೆ ಹೊರಟುಹೋಗಿದ್ದರು. ಮೂರ್ತಿಯನ್ನು ಅನರಿವರು ತಮ್ಮ ತಮ್ಮ ಮನೆಯಲ್ಲಿ ಉಳಕೊಳ್ಳುವಂತೆ ಕೇಳಿಕೊಂಡರಾದರೂ, ಮೂರ್ತಿಗೆ ಹೈಸ್ಕೂಲಿನ ವಿದ್ಯಾರ್ಥಿಭವನದಲ್ಲಿರುವುದೇ ವಾಸಿಯೆನ್ನಿಸಿತು. ಆದ್ದರಿಂದ ವಿದ್ಯಾರ್ಥಿಗಳ ನಡುವೆಯೇ ಉಳಿದನು. ತನ್ನ ಸಮಯವನ್ನೆಲ್ಲ ಅವರಿಗಾಗಿ ವಿನಿಯೋಗಿಸಲು ಸಾಧ್ಯವಾಯಿತು. ತಾನೂ ಒಬ್ಬ ವಿದ್ಯಾರ್ಥಿಯೆಂಬಂತೆ, ಅವರೊಡನೆ ಕಲೆತು ಕೆಲಸ ಮಾಡಿದನು. ತನ್ನವರೆಂಬವರು ಬೇರೆ ಯಾರೂ ಇರಲಿಲ್ಲ. ವಿದ್ಯಾರ್ಥಿಗಳೇ ಬಂಧುಗಳಾದರು. ಕಲಿಯುವುದರಲ್ಲಿ ಹಿಂದಾಗಿರುವ ವಿದ್ಯಾರ್ಥಿಗಳನ್ನು ತನ್ನ ಕೋಣೆಯಲ್ಲಿ ಕೂಡಿಸಿಕೊಂಡು, ತರಗತಿಯಲ್ಲಿ ಅರ್ಥವಾಗದುದನ್ನು ವಿವರಿಸಿ ಹೇಳುವ. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಹೆಚ್ಚಿನ ವ್ಯಾಸಂಗಕ್ಕೆ ಅನುಕೂಲವಾಗುವಂತೆ ಸಲಹೆಗಳನ್ನು ನೀಡುವ. ಒಮ್ಮೊಮ್ಮೆ ಎಲ್ಲರನ್ನೂ ಗುಂಪು ಕೂಡಿಸಿಕೊಂಡು, ಉತ್ತಮ ಸಾಹಿತ್ಯದಿಂದ ಆಯ್ದ ಭಾಗಗಳನ್ನು ತಾನು ಓದಿ ಹೇಳುವುದು, ಅಥವಾ ಚೆನ್ನಾಗಿ ಓದಬಲ್ಲ ಹುಡುಗರಿಂದ ಓದಿಸುವುದು; ಅಂತೆಯೇ ಒಳ್ಳೆಯ ಹಾಡುಗಳ ಪರಿಚಯ ಮಾಡಿಕೊಡುವುದು, ಅಥವಾ ಸೊಗಸಾಗಿ ಹಾಡಬಲ್ಲವರಿಂದ ಹಾಡಿಸುವುದು— ಹೀಗೆ ಮಕ್ಕಳಲ್ಲಿ ಉತ್ತಮ ಸಾಹಿತ್ಯಾಭಿರುಚಿಯನ್ನು

ಬೆಳೆಸಲು ಯತ್ನಿಸುವ. ಹೀಗೆ, ಶಾಲೆಯಲ್ಲಿ ವಿರಾಮಕಾಲದಲ್ಲಿ ಮತ್ತು ಮಕ್ಕಳು ಹಾಸ್ಟೆಲಿನಲ್ಲಿರುವಾಗ ಅಲ್ಪವಿಚಾರಗಳ ಕಡೆಗೆ ಅಲೆಯಬಹುದಾಗಿದ್ದ ಅವರ ಮನಸ್ಸನ್ನು ಉತ್ತಮ ಧ್ಯೇಯಾದರ್ಶಗಳ ಕಡೆಗೆ ಸೆಳೆದು, ಅವರಲ್ಲಿ ಭವ್ಯ ಭವಿತವ್ಯದ ಕಲ್ಪನೆಯನ್ನುಂಟುಮಾಡುವುದರಲ್ಲಿ ನರಸಿಂಹಮೂರ್ತಿಯು ಬಹುಮಟ್ಟಿಗೆ ಯಶಸ್ವಿಯಾದನು. ಅವನು ತನ್ನ ಕರ್ತವ್ಯವನ್ನು ಒಂದು ತಪಃಸಾಧನೆಯೆಂಬಂತೆ ನಡೆಸತೊಡಗಿದನು.

ತರಗತಿಗತಿಗಳಲ್ಲಾದರೂ ಹಾಗೆಯೇ. ಮೂರ್ತಿ ಪ್ರವೇಶಿಸಿದನೆಂದರೆ, ವಿದ್ಯಾರ್ಥಿಗಳ ಮೇಲೆ ಸದ್ವರ್ತನೆಯ ಪನ್ನೀರನ್ನು ಚಿಮುಕಿಸಿದಂತಾಗುತ್ತಿತ್ತು. ವಿದ್ಯಾರ್ಥಿಗಳು ಕಲಿತ ಪಾಠಗಳನ್ನು ಗಮನಿಸುವ ರೀತಿಯಿಂದಲೇ, ಈ ಶಿಕ್ಷಕನ ಯೋಗ್ಯತೆಯನ್ನು ನಿರ್ಣಯಿಸಬಹುದಾಗಿತ್ತು.

ವಿದ್ಯಾರ್ಥಿಗಳಿಗೆ ಮೂರ್ತಿ ಎಷ್ಟೋ ಚಟುವಟಿಕೆಗಳನ್ನು ತೋರಿಸಿಕೊಟ್ಟನು ಮಾತ್ರವಲ್ಲದೆ, ತಾನೂ ಅವರಿಂದ ಕಲಿತನು. ಕುಶಲಕಲೆಗಳಲ್ಲಿ ಆಸಕ್ತಿ ತೋರಿಸುತ್ತಿದ್ದವರನ್ನು ಪ್ರೋತ್ಸಾಹಿಸಿ ಹುರಿದುಂಬಿಸಿದನು. ಅವರೊಡನೆ ಸೇರಿ ತಾನೂ ಅವುಗಳನ್ನು ಅಭ್ಯಾಸಮಾಡತೊಡಗಿದನು.

ಚಿತ್ರಕಲೆಯಲ್ಲಿ ನೈಪುಣ್ಯವಿದ್ದ ವಿದ್ಯಾರ್ಥಿಯೊಬ್ಬನಿಗೆ, ಕಲಾವಿದನಿಗೆ ಬೇಕಾಗುವ ಸಲಕರಣೆಗಳನ್ನೆಲ್ಲ ಕೊಂಡುಕೊಟ್ಟನು. ಐದನೆಯ ಈಯತ್ತೆಯಲ್ಲಿ ಓದುತ್ತಿದ್ದ ಗೀತಾದೇವಿಗೆ, ಪ್ರತಿಯೊಂದರಲ್ಲಿಯೂ ತೀವ್ರಾಸಕ್ತಿ. ಸಾಹಿತ್ಯಾಭಿರುಚಿ ಅವಳಲ್ಲಿ ಬೆಳೆದು ಬಂದುದು ನರಸಿಂಹಮೂರ್ತಿಯಿಂದಾದರೂ, ಸಂಗೀತ ಮತ್ತು ಭಾಷಣಕಲೆಗಳಲ್ಲಿ ಅವಳು ಆಗಲೇ ಪರಿಣತಳೆನಿಸಿಕೊಂಡಿದ್ದಳು. ನಟನಾಚಾತುರ್ಯ ಆಕೆಯಲ್ಲಿ ಚಿಕ್ಕಂದಿನಿಂದಲೂ ಇತ್ತು. ಆಕೆ ಗಳಿಸುತ್ತಿದ್ದ ಗುಣಗಳ ದೃಷ್ಟಿಯಿಂದಾದರೆ, ಶಾಲೆಗೇ ಮೊದಲನೆಯವಳೆನಿಸಿ ಕೊಂಡಿದ್ದಳು. ವಯಸ್ಸಿನಲ್ಲಿ ಕಿರಿಯಳಾದರೂ ನಡೆನುಡಿಯಲ್ಲಿ ಗಂಭೀರೆ. ಸಹವಿದ್ಯಾರ್ಥಿ-ವಿದ್ಯಾರ್ಥಿನಿಯರು ಅವಳನ್ನು ಗೌರವಿಸುತ್ತಿದ್ದರು. ಎಲ್ಲ ಶಿಕ್ಷಕರಿಗೂ ಆಕೆಯಲ್ಲಿ ಅಭಿಮಾನ. ನರಸಿಂಹಮೂರ್ತಿಯಂತೂ ಅವಳ ಜ್ಞಾನದಾಹಕ್ಕೆ ಬೆರಗಾಗಿದ್ದನು. ರಾಜಕೀಯದ ಕುರಿತು ಪ್ರಸ್ತಾಪಿಸಿದರೂ ಕೂಡ ಅವಳು ಗುರುವಿಗೆ ಸರಿಸಾಟಿಯಾಗಿ ನಿಲ್ಲುವಳು. ಒಮ್ಮೆ ಅವನು ಶಿಷ್ಯೆಯ ಕುಶಾಗ್ರತೆಯನ್ನು ಮೆಚ್ಚಿ "ಸರೋಜಿನಿ ನಾಯ್ಡು ಆಗುತ್ತೀ ನೀನು!" ಎಂದುಬಿಟ್ಟನು. ಗೀತೆ ಆ ದಿನ ನಿಜಕ್ಕೂ ಉಬ್ಬಿ ಹೋದಳು. ಅಂದಿನಿಂದಲೂ ಆಕೆಯ ಧ್ಯೇಯಗಳು ಗಗನಕ್ಕೇರಿದುವು. ಅಂದಿನಿಂದ ಅವಳು ನರಸಿಂಹಮೂರ್ತಿಯ ಗುರುತ್ವಕ್ಕೆ ಎಲ್ಲಿಲ್ಲದ ಗೌರವವನ್ನು ತೋರಿಸತೊಡಗಿದಳು

ನರಸಿಂಹ ಮೂರ್ತಿಗೆ ಒಮ್ಮೊಮ್ಮೆ ಎನಿಸುವುದು— "ನನಗೂ ಅಂಥ ತಂಗಿಯೊಬ್ಬಳಿದ್ದರೆ" ಎಂದು; ಆದರೆ ನಮ್ಮ ಒಡಹುಟ್ಟಿದವಳು ಮಾತ್ರವೇ ತಂಗಿಯಾಗಬೇಕೇ? ಯಾರು ತಂಗಿಯೋ ಯಾರು ತಮ್ಮನೋ! ಜಗತ್ತೆಲ್ಲ ಸೋದರ-ಸೋದರಿಯರಿಂದ ತುಂಬಿದೆಯೆಂದು ತಿಳಿಯಬಾರದೇಕೆ?— ಹೀಗೆಂದುಕೊಂಡು ಮೂರ್ತಿ, ಗೀತೆಯನ್ನು ತನ್ನ ತಂಗಿಯೆಂಬಂತೆಯೆ ಭಾವಿಸಿ ನೋಡತೊಡಗಿದನು. ಉಳಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರಲ್ಲಿ ಅವನಿಗೆ ಮಮತೆ ಕಡಿಮೆಯೆಂದಲ್ಲ. ಆದರೆ ಗೀತೆಯಲ್ಲಿ ಹೆಚ್ಚಿನ ಅಭಿಮಾನ. ಅದೇನೂ ಪಕ್ಷಪಾತವಲ್ಲ. ಪಕ್ಷಪಾತವೆನ್ನುವುದಾದರೂ, ಅದಕ್ಕೆ ಕಾರಣ, ಈ ಹುಡುಗಿಯ ಪ್ರತಿಭೆಯೊಂದೇ ವಿನಾ ಬೇರೇನೂ ಇರಲಿಲ್ಲ. ಸಂದರ್ಭ ದೊರೆತಾಗಲೆಲ್ಲ ನರಸಿಂಹಮೂರ್ತಿ, ಗೀತೆಯ ಕಲಾಭಿಜ್ಞತೆಯು ಬೆಳಕಿಗೆ ಬರುವಂತೆ ಅನುಕೂಲಿಸಿಕೊಡತೊಡಗಿದನು. ಜಿಲ್ಲೆಯ ಎಲ್ಲಾ ಹೈಸ್ಕೂಲು ವಿದ್ಯಾರ್ಥಿಗಳ ಭಾಷಣಸ್ಪರ್ಧೆ ನಡೆದಾಗ, ಗೀತೆಗೆ ಪ್ರಥಮ ಬಹುಮಾನ ಬಂದಿತು. ಆ ಯಶಸ್ಸು ದೊರೆತುದು ಮೂರ್ತಿಯ ಪ್ರೋತ್ಸಾಹದಿಂದಲೇ. ಸಂಗೀತದಲ್ಲಿಯೂ ಹಾಗೆಯೆ ಶಾಲೆಯಲ್ಲಿ ಮಾತ್ರವಲ್ಲದೆ ಇತರ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಆಕೆ ಭಾಗವಹಿಸುವಂತೆ ಮೂರ್ತಿ ಅನುವು ಮಾಡಿಕೊಡುತ್ತಿದ್ದನು. ಒಮ್ಮೆ ಅವಳಿಗೆ ಆಕಾಶವಾಣಿಯಲ್ಲಿ ಹಾಡುವ ಸಂದರ್ಭ ದೊರೆತುದೂ ಮೂರ್ತಿಯಿಂದಲೇ. ಮೈಸೂರಿಗೆ ಹೋದಾಗ ಅವಳಿಗೆ ವೀಣೆಯ ಚಟ

೧೦೦೦ ರೂಪಾಯಿ ಬಹುಮಾನ

೩೦ ವರ್ಷಗಳಿಂದ ಅನುಭವಸಿದ್ಧವಾದ— ಮಿರಜಿಯ ವೈದ್ಯ ವಿ. ಎಸ್ ಕಾಪಸೇಯವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರ ಪಾಕ

[ರಜಿಸ್ಟರ್ಡ್]

ಮೂತ್ರದಲ್ಲಿ ಸ್ವಪ್ನದಲ್ಲಿ ವೀರ್ಯಸ್ಖಲನ, ಸ್ವರತಿಯಿಂದುಂಟಾದ ಅಶಕ್ತತೆ, ವೀರ್ಯದ ಬೇರೆ ಬೇರೆ ದೋಷಗಳು, ಪಿತ್ತಾಂಶ, ಉಷ್ಣ, ಸೊಂಟನೋವು, ಉಪದಂಶಮೇಹರೋಗಗಳಿಂದುಂಟಾಗುವ ಕ್ಷೀಣತೆ— ಇವೆಲ್ಲ ನಷ್ಟವಾಗಿ, ಚೆನ್ನಾಗಿ ಮಲಶುದ್ಧಿಯಾಗುವುದು. ಹಸಿವೆ, ಸ್ಮರಣಶಕ್ತಿ, ದೇಹದ ತೂಕ ಹೆಚ್ಚುವುದು. ಹೊಸ ತಾರುಣ್ಯ ಬಂದಂತಾಗಿ ವೀರ್ಯದಲ್ಲಿ ಗರ್ಭಧಾರಣಶಕ್ತಿ ಬಲಗೊಳ್ಳುವುದು. ಈ ಔಷಧಿಯು ೫೩ ವನಸ್ಪತಿಗಳ ಯೋಗದಿಂದ ಸಿದ್ಧವಾಗಿದೆ. ಸಾಲಾಮಿಶ್ರಿ, ಸಫೇದಮಿಶ್ರಿ, ಪಂಜಾಬ ಮಿಶ್ರಿವಚಕಂದ ಮೊದಲಾದ ಪದಾರ್ಥಗಳಲ್ಲಿ ವೀರ್ಯವರ್ಧಕ ಗುಣವಿಲ್ಲವೆಂದು ಸಿದ್ಧಮಾಡುವವರಿಗೆ ೧೦೦೦ ರೂಪಾಯಿ ಬಹುಮಾನ.

೨೧ ದಿನಗಳಿಗೆ ಸಾಲಬಹುದಾದ ೮೪ ತೊಲೆಯ ಒಂದು ಡಬ್ಬಿಗೆ ೫-೮-೦; ಅಂಚೆಯ ವೆಚ್ಚ ೧-೬-೦. ಶೀಘ್ರಗುಣಕಾರಿಯಾದ ಸ್ಪೇಶಲ್ ಡಬ್ಬಿಗೆ ೧೦-೮-೦. (ಇದರಿಂದ ೭ ದಿನಗಳಲ್ಲಿಯೇ ಗುಣವು.) ಅಂಚೆಯ ವೆಚ್ಚ ೧-೬-೦. ೩ ಡಬ್ಬಿಗೆ ೧೫-೦-೦ ಅಂಚೆಯವೆಚ್ಚ ೨-೧೩-೦. ಒಮ್ಮೆಲೇ; ೩ ಡಬ್ಬಿಗಳನ್ನು ಬೇಡುವವರು ೫ ರೂ ಮುಂಗಡ ಕಳಿಸಬೇಕು.

ಮಾಲಕ: **ವ್ಹಿ. ಎಸ್. ಕಾಪಸೇ** ಮು. ಪೋ. ಮಿರಜ

ಹಿಡಿಯಿತು. ಅದನ್ನು ಕೊಂಡುಕೊಡುವ ಸಾಮರ್ಥ್ಯ ಅವಳ ತಂದೆಗೆಲ್ಲಿಂದ ಬರಬೇಕು? ಅದ್ದರಿಂದ ನರಸಿಂಹಮೂರ್ತಿ ತನಗಾಗಿ ಎಂದು ವೀಣೆಯನ್ನು ಕೊಂಡುಕೊಂಡು, ಗೀತೆಗೆ ಕೊಡಿಸಿದ್ದನು.

ಬಾಲ್ಯದಲ್ಲಿ ಇತರರಿಂದ ತೆಗೆದುಕೊಂಡು ಸಂತೋಷಪಡುವುದು ಸಹಜ; ಆದರೆ ಬೆಳೆದಂತೆಲ್ಲ ತ್ಯಾಗದಿಂದಲೇ ಸುಖವು ದೊರೆಕೀತು. ಹೀಗೆ, ಸ್ವಂತಕ್ಕಾಗಿ ಯಾವ ವೈಭವವನ್ನೂ ಅಪೇಕ್ಷಿಸದೆ, ತನ್ನ ವಿದ್ಯಾರ್ಥಿಗಳಿಗಾಗಿ ಶ್ರಮಿಸುವುದರಲ್ಲಿಯೂ ತ್ಯಾಗಿಯಾಗುವುದರಲ್ಲಿಯೂ ನರಸಿಂಹಮೂರ್ತಿ ಒಂದು ಅಪೂರ್ವಸುಖವನ್ನನುಭವಿಸಿದನು. ಈ ರೀತಿ ಪ್ರೀತ್ಯಾದರಗಳನ್ನು ಒದಗಿಸಿದ ವೃತ್ತಿ ಬೇಸರವನ್ನು ತರುವುದುಂಟೆ? ಅದ್ದರಿಂದಲೇ ಶಿಕ್ಷಕನಾಗಿ ದುಡಿಯುವುದು ಮೂರ್ತಿಗೆ ಎಷ್ಟು ಹಿತವೆನಿಸಿತೆಂದರೆ— ಕೇವಲ ಒಂದು ವರ್ಷ ಮಾತ್ರವೇ ನಿಲ್ಲುವೆನೆಂದು ಶಿಕ್ಷಕವೃತ್ತಿಗೆ ಇಳಿದವನಿಗೆ, ಕೊನೆಯ ತನಕ ಉಪಾಧ್ಯಾಯನಾಗಿಯೇ ಉಳಿಯಬಾರದೆ— ಎನ್ನಿಸಿತು. ವರ್ಷ ಮುಗಿದೊಡನೆ ಶಾಲೆಯನ್ನು ಬಿಡುವ ಬದಲು, ಅವನು ಮರುವರ್ಷವೂ ಶಿಕ್ಷಕನಾಗಿಯೇ ನಿಂತನು. ಮದರಾಸಿನ ಗೆಳೆಯರು ಅಲ್ಲಿ ಒಳ್ಳೆಯ ಉದ್ಯೋಗಗಳು ದೊರಕುವ ಸಂದರ್ಭಗಳನ್ನು ಸೂಚಿಸಿ ಆಗಾಗ ಪತ್ರ ಬರೆಯುತ್ತಿದ್ದರು. ಆದರೂ ಮುದ್ದಾದ ತನ್ನೂರಿನಲ್ಲಿ ಉಪಾಧ್ಯಾಯನಾಗಿರುವುದೇ ಲೇಸೆನ್ನಿಸಿತವನಿಗೆ.

ನರಸಿಂಹಮೂರ್ತಿ ಶಾಲೆಯನ್ನು ಬಿಟ್ಟು ಹೋಗದಿದ್ದುದು ಎಲ್ಲರಿಗೂ ಸಂತೋಷ. ವಿದ್ಯಾರ್ಥಿಗಳಿಗಂತೂ ಆ ವಿಚಾರ ತೀರ ಹರ್ಷದಾಯಕವಾಯಿತು. ಹಾಗಾಗಲೆಂದು ಒಬ್ಬಿಬ್ಬರು ಗಣೇಶನಿಗೆ ಪಂಚಕಜ್ಜಾಯದ ಆಶೆಯನ್ನು ಸಹ ತೋರಿಸಿದ್ದರಂತೆ. ಗೀತೆಯಂತೂ ತನ್ನ ಶಾರದೆಯನ್ನು ಪದೇ ಪದೇ ಬೇಡಿಕೊಂಡಿದ್ದಳು. ಆದರೆ ನರಸಿಂಹಮೂರ್ತಿಯ ಕುರಿತು ಆ ಸಂದರ್ಭದಲ್ಲಿ ನಂಜು ಕಾರಿದವರೆಂದರೆ ಡ್ರಿಲ್ ಮಾಸ್ಟರ್ ವೆಂಕೋಬರಾಯರು ಮಾತ್ರ. ನರಸಿಂಹಮೂರ್ತಿಗೆ ಅವರಲ್ಲಿ ಎಲ್ಲರಲ್ಲಿರುವಂತೆಯೇ ವಿಶ್ವಾಸವಿತ್ತು; ಆದರೆ ವೆಂಕೋಬರಾಯರಿಗೆ ಮೂರ್ತಿ ತನಗೊಂದು ಮುಳ್ಳಾಗಿರುವಂತೆ ಎನಿಸುತ್ತಿತ್ತು. ಕ್ರೀಡಾರಂಗದ ಹಲವೊಂದು ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳನ್ನು ತರಬೇತುಮಾಡಿ ತಾನು ಮೀಸೆ ತಿರುವಿದರೂ, ಹುಡುಗರಿಗೆ ಮೂರ್ತಿಯನ್ನು ಕಂಡರೆ ಎಲ್ಲಿಲ್ಲದ ಆದರ. ತಾನು ಕಣ್ಣು ಕೆರಳಿಸಿಕೊಂಡಿದ್ದರೂ ಗೇಲಿ ಮಾಡಿಬಿಡುತ್ತಾರಲ್ಲ— ಎಂದು ಅವರ ದುಮ್ಮಾನ. ಅವರು ಪತ್ರಿಕೆಗಳಿಗೆ ಆಗಾಗ ಬರೆಯುತ್ತಿದ್ದರು. ಮಕ್ಕಳಿಗಾಗಿ ಪ್ರಹಸನಗಳನ್ನು ರಚಿಸಿಕೊಡುತ್ತಿದ್ದರು. ಅವುಗಳನ್ನಾಡಿಸುತ್ತಿದ್ದರು. ಆದರೂ ತನ್ನ ಮಾತಿಗೆ ಬೆಲೆಯಿಲ್ಲ ಪ್ರತಿಯೊಂದಕ್ಕೂ "ಮೂರ್ತಿಮಾಸ್ತರನ್ನು" ಕೇಳಬೇಕು. ಇದೆಲ್ಲ ಮೂರ್ತಿಯ ಕುಹಕ; ತನ್ನನ್ನು ಗೇಲಿಮಾಡುವಂತೆ ಹುಡುಗರಿಗೆ ಹಿಂದಿನಿಂದ ಪಿಟೀಲು ಬಾರಿಸುತ್ತಾನೆ. ಎಲ್ಲರಿಗೆ ಮಾತ್ರ ಸುಭಗನಂತಿದ್ದಾನೆ— ಎಂದು ಅವರ ಎಣಿಕೆ. ಮೂರ್ತಿಗೆ ಇದೊಂದೂ ತಿಳಿಯದು. ಡ್ರಿಲ್ ಮಾಸ್ಟರರು, ಗೀತೆ ಶಾಲೆಯಲ್ಲಿರುವುದರಿಂದಾಗಿ ತಾನು ಶಾಲೆಬಿಟ್ಟು ಹೋಗಲಿಲ್ಲವೆಂದು ಯಾರೊಡನೆಯೋ ಹೇಳಿದರೆಂಬುದಾಗಿ ಕೇಳಿ, ಮೂರ್ತಿಗೆ ತುಂಬ ವ್ಯಸನವಾಯಿತು. 'ಏನೋ ಹುಳಿ ಮನಸ್ಸು— ಆಡಿಕೊಳ್ಳಲಿ— ತನಗೇನು?'— ಎಂದು ಸುಮ್ಮನಿದ್ದುಬಿಟ್ಟನು.

ಎರಡನೆಯ ವರ್ಷವೂ ಮೂರ್ತಿಯ ಚಟುವಟಿಕೆಗಳು ಸೊಗಸಾಗಿಯೇ ಸಾಗಿದುವು. ವಿದ್ಯಾರ್ಥಿನಿಲಯವು ವಿದ್ಯಾಮಂದಿರಕ್ಕಿಂತ ಹೆಚ್ಚೆನಿಸಿಕೊಂಡಿತು. ಅವನ ಉತ್ಸಾಹದಿಂದಾಗಿ ಆಗಾಗ ಸಾಹಿತ್ಯೋಪನ್ಯಾಸಗಳೂ, ಸಂಗೀತಸಭೆಗಳೂ, ಇನ್ನಿತರ ಸಾಂಸ್ಕೃತಿಕ ಸಮಾರಂಭಗಳೂ ಜರುಗತೊಡಗಿದುವು. ಈ ಚಟುವಟಿಕೆಗಳಲ್ಲೆಲ್ಲ ಗೀತೆಯ ಪಾತ್ರ ಚಿಕ್ಕದೇನೂ ಆಗಿರಲಿಲ್ಲ. ಬರುಬರುತ್ತ ಈ ಶಿಷ್ಯೆ, ಗುರುವಿನ ಸ್ಫೂರ್ತಿಯಾಗತೊಡಗಿದಳು. ಆ ಸತ್ಯ ಮೊದಮೊದಲು ಇಬ್ಬರಿಗೂ ಹೊಳೆದಿದ್ದಿರಲಾರದೇನೊ! ಮುಖ್ಯವಾಗಿ ಅವರಿಬ್ಬರೂ ಗುರು-ಶಿಷ್ಯರು. ಆದರೆ ಅವರು ಗಂಡು-ಹೆಣ್ಣು ಕೂಡ ಆಗಿದ್ದರಲ್ಲವೆ? ಮೊದಲು ಅವರಿಬ್ಬರಲ್ಲಿ ಬೆಳೆದುಬಂದುದು ಕೇವಲ ಅಭಿಮಾನ. ಪರಸ್ಪರರಲ್ಲಿ ನಿಷ್ಕಲ್ಮಷವಾದ ಆದರ. ಇನ್ನೂ ಹೇಳಬಹುದಾದರೆ, ಇಬ್ಬರಲ್ಲಿಯೂ ಇದ್ದ ಉತ್ತಮ ಗುಣಾಂಶಗಳಿಗಾಗಿ ಪರಸ್ಪರ ಗೌರವ. ಗೀತೆಯ ಕುರಿತಾಗಿ ಹೇಳುವುದಾದರೆ ಅಷ್ಟೇ ಹೇಳಬೇಕು. ಆದರೆ ನರಸಿಂಹಮೂರ್ತಿಯ ಮಾತಾದರೆ ಅಷ್ಟು ಹೇಳಿಬಿಡುವಂತಿಲ್ಲ. ಅವನು ಚೆಲುವಿನ ಆರಾಧಕನಾದರೂ, ಬರಿಯ ಹೊರರೂಪಕ್ಕೆ ಮರುಳಾಗುವವನಲ್ಲವೆಂಬುದೇನೋ ನಿಜ. ಶಿಷ್ಯೆಯ ಗುಣವಿಶೇಷಗಳಲ್ಲಿ, ಆಕೆಯಲ್ಲಿ ಮೊಳೆತಿದ್ದ ನಾನಾಮುಖ ಸಾಮರ್ಥ್ಯಗಳಲ್ಲಿ, ಅವನು ಪೂಜ್ಯಭಾವನೆಯನ್ನು ತಳೆಯತೊಡಗಿದನು. ಅದಷ್ಟೇ ಅಲ್ಲದೆ, ಅವಳಲ್ಲಿ ಪ್ರವರ್ಧಿಸುತ್ತಿದ್ದ ಸ್ತ್ರೀತ್ವವು ಅವನಿಗೆ ಅವಳಲ್ಲಿದ್ದ ಆದರವನ್ನು ಇಮ್ಮಡಿಸಿತು. ಅವನ ಭಾವನೆಗಳನ್ನು ಹಿಗ್ಗಿಸಿತು. ಅಭಿಮಾನವು ಒಲವಿನ ಸ್ಥಿತಿಗೆ ತಿರುಗಿದುದು ಅವನಿಗೆ ಅಸ್ಪಷ್ಟಸ್ಪಷ್ಟವಾಗಿ ಅನುಭವಗೋಚರವಾಗತೊಡಗಿತು. ಒಲವಿನ ಭೂತಗನ್ನಡಿಯ ಮೂಲಕ ನೋಡುವಾಗ, ಅವಳ ರೂಪಗುಣಗಳಲ್ಲಿ ಎಲ್ಲಿಲ್ಲದ ಮಹತ್ತ್ವ ಕಾಣತೊಡಗಿತು.

ಆದರೆ ಹುಡುಗಿಯಲ್ಲಿ ಇಂಥ ಬದಲಾವಣೆ ಅಷ್ಟು ಬೇಗನೆ ಉಂಟಾಗಲಿಲ್ಲ. ಹಾಗೇನಾದರೂ ಆಗಿದ್ದರೆ, ಈ ಕತೆ ಬೇರೆಯಾಗುತ್ತಿತ್ತೋ ಏನೋ! ಗೀತೆ ತನ್ನ "ಮೂರ್ತಿ ಮಾಸ್ತರನ್ನು" ಅಭಿಮಾನದಿಂದ ಕಂಡಳು, ಗೌರವಿಸಿದಳು; ತನ್ನ ತಂದೆಯವರಿಂದ ಹೇಳಿಸಿ ಆಗಾಗ ಮನೆಗೆ ಕರೆಸಿಕೊಂಡಳು. ಹಾಡಬೇಕೆಂದಾಗ ಹಾಡಿ, ಪಿಟೀಲು ನುಡಿಸಬೇಕೆಂದಾಗ ನುಡಿಸಿ, ತಂದೆಯಂತೆಯೇ ಗುರುವನ್ನು ಸಂತೋಷಪಡಿಸಿದಳು. ಆದರೆ ಗುರುವಿನಲ್ಲಿ ಪರತ್ವವನ್ನು ಕಲ್ಪಿಸಿಕೊಳ್ಳುವ ತರದ ಒಲವು ಅವಳಲ್ಲಿ ಮೂಡಿದ್ದಿಲ್ಲವೆನ್ನಬೇಕು. ಕೌಮಾರ್ಯಕ್ಕೆ ಸಹಜವಾದ ನಲ್ಮೆಯ ಅಂಕುರ ಅವಳಲ್ಲಿ ಮೂಡಿದ್ದಿರಬಹುದಾದರೂ, ಆ ನಲ್ಮೆಗೆ ಇನ್ನೂ ಗೊತ್ತುಗುರಿ ಇರಲಿಲ್ಲ. ಅದಕ್ಕಿಂತಲೂ ಗುರುವು ಅವಳ ಮನಸ್ಸಿನಲ್ಲಿ

ತುಂಬಿಸಿದ್ದ ಆದರ್ಶಗಳೇ ಪ್ರಬಲವಾಗಿದ್ದುವು. ಹೈಸ್ಕೂಲು ಮುಗಿಸಿ, ಮಂಗಳೂರಿಗೆ ಹೋಗಿ ಕಾಲೇಜು ಸೇರಬೇಕು— ಡಿಗ್ರಿ ಪಡೆಯಬೇಕು, ತಾನು ಗಳಿಸಿದ ವಿದ್ವತ್ತಿನಿಂದ ದೇಶಸೇವಾಕಾರ್ಯಗಳನ್ನು ಕೈಕೊಳ್ಳಬೇಕು, ಮೂರ್ತಿ ಮಾಸ್ಟ್ರು ಹೇಳಿದ ಹಾಗೆ ಸರೋಜಿನೀ ನಾಯ್ಡು-ವಿಜಯಲಕ್ಷ್ಮಿಯರಂತಾಗಬೇಕು— ಹೀಗೆ ಒಂದಲ್ಲ ಎರಡಲ್ಲ, ಹಲವಾರು ಬಾಲ್ಯಸಹಜ ಕನಸುಗಳು. ಪ್ರೌಢವಿದ್ಯಾಭ್ಯಾಸ ನಡೆಸಲು ಉಪಪತ್ತಿಯಾದರೂ ಎಲ್ಲಿದೆ ಎಂದು ಅವಳು ಯೋಚಿಸಿದ್ದಿಲ್ಲ. ದೇಶಸೇವಾಕಾರ್ಯವೆಂದರೆ ಯಾವ ಬಗೆಯದು— ಎಂಬುದರ ಅರಿವಿರಲಿಲ್ಲ. ಭವ್ಯವಾದುವುಗಳ— ಮಹತ್ತಾದವುಗಳ ಕಲ್ಪನೆಮಾತ್ರವಿತ್ತು.

ಆ ಕಲ್ಪನಾಸಾಮ್ರಾಜ್ಯದ ಮುಂದೆ ವಿವಾಹವೆಂಬುದು ತೀರ ಅಲ್ಪವಾದುದೆಂಬಂತೆ ಆಕೆಯ ಗ್ರಹಿಕೆ. ಮಾತ್ರವಲ್ಲದೆ, ತನ್ನ ಧ್ಯೇಯಸಾಧನೆಗೆ ವಿವಾಹವು ಒಂದು ತಡೆಯೆಂದೇ ಅವಳ ಭಾವನೆ. ಈ ರೀತಿಯ ಮನೋಧರ್ಮ ಅವಳಲ್ಲುಂಟಾದುದಕ್ಕೆ ನರಸಿಂಹಮೂರ್ತಿಯ ಬೋಧನೆಯೇ ಕಾರಣವಾಗಿತ್ತೆನ್ನಬಹುದು. ಇನ್ನೊಂದು ಅಂಶವಿದೆ. ಮೂರ್ತಿಯ ಎದೆಯಲ್ಲಿ ಒಲವು ಉದಿಸಿದ್ದರೂ, ಅವನ ನಡೆನುಡಿಗಳು ಗಂಭೀರವಾಗಿಯೇ ಇದ್ದುವು. ಸಾಮಾನ್ಯವಾಗಿ ನಲ್ಮೆಯೊಡನೆ ಮೂಡಿ ಬರುವ ಲಘುತ್ವಕ್ಕೆ, ಹುಡುಗಾಟಿಕೆಗೆ— ಅವನ ಸ್ವಭಾವದಲ್ಲಿ ಎಡೆಯಿರಲಿಲ್ಲ. ಹಾಗೇನಾದರೂ ಇದ್ದಿದ್ದರೆ, ಪರಸ್ಪರರಲ್ಲಿ ಆಕರ್ಷಣ ಬೇರೆ ರೂಪವನ್ನು ತಾಳುತ್ತಿತ್ತೋ ಏನೋ !

ಗೀತೆಯ ತಂದೆ ವಿಶ್ವೇಶ್ವರಯ್ಯನವರು, ಮಾಧ್ಯಮಿಕಶಾಲೆಯ ಉಪಾಧ್ಯಾಯರಾಗಿದ್ದರು; ಗೀತೆ ಚಿಕ್ಕವಳಾಗಿರುವಾಗಲೇ ಅವರ ಹೆಂಡತಿ ಗತಿಸಿದ್ದರು. ಅವರು ಮತ್ತೆ ಲಗ್ನವಾಗಲಿಲ್ಲ. ದೂರದ ನಿರ್ಗತಿಕ ಬಂಧು ಒಬ್ಬಾಕೆಯನ್ನು ಅಡುಗೆಗೆ ಇರಿಸಿಕೊಂಡರು. ಆ ಮುದುಕಿ ಹುಡುಗಿಯನ್ನು ಮುದ್ದಿನಿಂದ ಸಾಕಿದರು. ಗೀತೆಯನ್ನು S. S. L. C. ಯ ತನಕ ಓದಿಸಿ, ಅನಂತರ ಯಾರಾದರೊಬ್ಬ ಪುಣ್ಯಾತ್ಮನ ಕೈಗೆ ಹಾಕಬೇಕು ''—ಎಂದು ವಿಶ್ವೇಶ್ವರಯ್ಯನವರ ಆಕಾಂಕ್ಷೆ. ಮಗಳೊಡನೆ ಮದುವೆಯ ಪ್ರಸ್ತಾಪವನ್ನು ಅವರು ಎಂದೂ ಮಾಡಿದವರಲ್ಲ. ಹಾಗೆ ಪ್ರಸ್ತಾಪಿಸುವ ಅವಸರವೂ ಇರಲಿಲ್ಲ. ಮಗಳೇನಾದರೂ ಕಾಲೇಜು ಕಲಿಯುವ ಆಶೆಯನ್ನು ವ್ಯಕ್ತಪಡಿಸಿದರೆ, ಅವರು ಆ ಹುಡುಗಾಟಿಕೆಗೆ ನಕ್ಕು ಸುಮ್ಮನಾಗಿ ಬಿಡುವರು.

ಮಗಳ ಬೇಡಿಕೆಯಂತೆ ಅವರು ಮೂರ್ತಿಯನ್ನು ಮೊದಲೊಮ್ಮೆ ಮನೆಗೆ ಬರಮಾಡಿಕೊಂಡಿದ್ದರು. ಆದರೆ ಪರಿಚಯವು ಬೆಳೆಯುತ್ತ ಹೋಗಿ, ಇಬ್ಬರಲ್ಲಿಯೂ ಸ್ನೇಹ ನೆಲೆಯಾಯಿತು. ಮೂರ್ತಿಯಲ್ಲಿ ಅವರಿಗೆ ತುಂಬ ಆದರ ಗೌರವಗಳಿದ್ದುವು. ಮಗಳ ಅಭ್ಯುದಯದಲ್ಲಿ ಇಷ್ಟೊಂದು ಆಸಕ್ತಿ ತೋರಿಸುತ್ತಿರುವ ಇವರೇ ಏಕೆ ಅವಳ ಕೈಹಿಡಿಯಬಾರದು ?— ಎಂದು ಅವರಿಗೆ ಎನಿಸತೊಡಗಿತು. ಅಂತೆಯೇ ಒಂದು ದಿನ ಸೂಕ್ಷ್ಮವಾಗಿ ಮೂರ್ತಿಯೊಡನೆ ಆ ಕುರಿತು ಪ್ರಸ್ತಾಪಿಸಿಯೂ ಪ್ರಸ್ತಾಪಿಸಿದರು. ಆ ಪ್ರಸ್ತಾಪ ಮೂರ್ತಿಗೆ ಅನಿರೀಕ್ಷಿತವಾಗಿರಲಿಲ್ಲ. ಆದರೂ ಅವನು ಸಂಕೋಚನಾಚಿಕೆಗಳಿಂದ ಏನು ಹೇಳಲೂ ತೋಚದೆ, ಸುಮ್ಮನೆ ನಕ್ಕು ಮುಗಿಸಿದ್ದನು. 'ಯಾವುದಕ್ಕೂ ಪರೀಕ್ಷೆ ಮುಗಿಯಲಿ !' ಎಂದು ವಿಶ್ವೇಶ್ವರಯ್ಯನವರು ಸುಮ್ಮನಾದರು.

ಅಂದಿನಿಂದ ಮೂರ್ತಿಯ ನಡೆವಳಿಕೆಯಲ್ಲಿ ಸ್ವಲ್ಪ ಬದಲಾವಣೆಯುಂಟಾಯಿತೆನ್ನಬಹುದು. ಶಿಷ್ಯೆಯೊಡನೆ ಸರಳವಾಗಿ ವರ್ತಿಸುತ್ತಿದ್ದವನ ಸ್ವಭಾವದಲ್ಲಿ, ಬರುಬರುತ್ತ ಸಂಕೋಚಕ್ಕೆ ಎಡೆಯುಂಟಾಯಿತು. ಮೊದಲಿನಂತೆ ನೇರವಾಗಿ ಅವಳನ್ನು ನೋಡಲಾರ. ಅಷ್ಟೇ ಸಲುಗೆಯಿಂದಿರಲಾರ. ಶಿಷ್ಯೆಯಲ್ಲಿ ವಧುತ್ವವನ್ನು ಕಲ್ಪಿಸಿಕೊಂಡ ಅವನಿಗೆ ಹೀಗಾದುದು ಸಹಜವೆ.

ಆದರೆ ಈ ಬದಲಾವಣೆಯ ಹಿನ್ನೆಲೆ ಗೀತೆಗೆ ತಿಳಿಯದು. ಆದ್ದರಿಂದ ಅದು ಅವಳಿಗೆ ವಿಚಿತ್ರವೆನಿಸದಿರಲಿಲ್ಲ. ಗೀತೆ ಗಂಡುಬೀರಿಯಲ್ಲದಿದ್ದರೂ, ಅವಳ ನಡೆನುಡಿಯಲ್ಲಿ ಕೊಂಚ ಗಡುಸುತನವಿತ್ತೆಂದೇ ಹೇಳಬೇಕು. ಮೊದಲು ಆ ದಿಟ್ಟತನದ ಗಾಂಭೀರ್ಯವೇ ಮೂರ್ತಿಗೆ ಸೊಗಸಾಗಿ ಕಾಣಿಸಿತಾದರೂ, ಇತ್ತೀಚೆಗೆ ಅವನು ಸ್ತ್ರೀಯರಲ್ಲಿರಬೇಕಾದ ಮಾರ್ದವದ ಕುರಿತು—ಅವಕಾಶ ದೊರೆತಾಗಲೆಲ್ಲ—ಗೀತೆಗೆ ನಾಲ್ಕುಮಾತುಗಳನ್ನು ಹೇಳುವನು. ಗೀತೆಗೆ ಅದು ಸರಿಯೆಂದು ತೋಚಿದಾದರೂ, ನೈಜ ಸ್ವಭಾವವನ್ನು

ZANDU

PROTOCASEN

Whole Casein Hydrolysate

PALATABLE AND POWERFUL NUTRITIVE TONIC FOR ORAL ADMINISTRATION IN ALL RUNDOWN CONDITIONS OF HEALTH

Biological Laboratory

The Zandu Pharmaceutical Works, Ltd.
BOMBAY 14.

Sole Agents:—

M's. Pranlal and Sons
Chemists, Druggists
Station Road. HUBLI

(H. O. Bangalore City)

ಹಠಾತ್ತಾಗಿ ಬದಲಿಸುವುದು ಸಾಧ್ಯವೆ? ಆದ್ದರಿಂದ ಇತರರೊಡನೆ ಅವಳು ವರ್ತಿಸುವ ರೀತಿಯಿಂದ, ಮೂರ್ತಿಗೆ ಆಗಾಗ ಅಸಮಾಧಾನವುಂಟಾಗುತ್ತಿತ್ತು.

ನರಸಿಂಹಮೂರ್ತಿಯನ್ನು ಸದಾ ವಕ್ರ ದೃಷ್ಟಿಯಿಂದಲೇ ನೋಡುತ್ತಿದ್ದ ಡ್ರಿಲ್ ಮಾಸ್ಟರ್ ವೆಂಕೋಬರಾಯರಿಗೆ, ಅವನಲ್ಲಿ ಇತ್ತೀಚೆಗೆ ಉಂಟಾದ ಪರಿವರ್ತನೆ ಗೋಚರಿಸದಿರಲಿಲ್ಲ. ಅವರು ಆ ಕುರಿತಾಗಿ ಇಲ್ಲದ ಕಲ್ಪನೆಗಳನ್ನು ಸೃಜಿಸತೊಡಗಿದ್ದರು. ತುಂಟ ವಿದ್ಯಾರ್ಥಿಗಳು ಕೆಲವರಲ್ಲಿ ಆ ಮಾತು ಈ ಮಾತಿನ ನಡುವೆ ಮೂರ್ತಿ-ಗೀತೆಯ ಕುರಿತಾಗಿ ಏನೇನೋ ಉಸುರಿದ್ದರು. ಇದು ಗೀತೆಯ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡಿರಲಿಲ್ಲ; ಆದರೆ ಮೂರ್ತಿಗೆ ಅದರಿಂದ ಹಿತವೆನಿಸಲಿಲ್ಲ; ಬೇಸರವೆನಿಸಿತು. ಎಷ್ಟು ಬೇಡವೆನಿಸಿದರೂ ವೆಂಕೋಬರಾಯರಲ್ಲಿ ಒಂದು ಬಗೆಯ ಜುಗುಪ್ಸೆ ಮೂಡಿತು. ಹೀಗಿರುವಾಗ ಆ ಜುಗುಪ್ಸೆ ವ್ಯಕ್ತವಾಗುವ ಸಂದರ್ಭವೊಂದು ಒದಗಿತು.

ಜನವರಿ ತಿಂಗಳಲ್ಲಿ ಶಾಲೆಯ ವಾರ್ಷಿಕೋತ್ಸವ ಜರುಗುವುದಿತ್ತು. ವಿದ್ಯಾರ್ಥಿಗಳ ಹಾಗೂ ಅಧ್ಯಾಪಕರ ಕಲಾಭಿಜ್ಞತೆಯನ್ನು ಪ್ರದರ್ಶಿಸಲು ಅದೊಂದು ಸುಸಂದರ್ಭ. ಮಾತ್ರವಲ್ಲದೆ, ಊರವರ ಮನಸ್ಸನ್ನರಳಿಸಲು ಒಂದು ಸದವಕಾಶ. ತಮ್ಮ ವಿದ್ಯಾಮಂದಿರದ ಕುರಿತಾಗಿ ಜನರಲ್ಲಿ ಅಭಿಮಾನ ಬೆಳೆಯಲಿಕ್ಕೂ, ಹೆತ್ತವರು ಹಿಗ್ಗಿ ತಮ್ಮ ಮಕ್ಕಳ ಶಿಕ್ಷಣದ ಕುರಿತಾಗಿ ಹೆಚ್ಚಿನ ಗಮನಕೊಡುವಂತಾಗುವುದಕ್ಕೂ ಈ ಉತ್ಸವಗಳು ಬಹುಮಟ್ಟಿಗೆ ಸಹಾಯಕವಾಗುತ್ತವೆ. ಆದ್ದರಿಂದ ವಾರ್ಷಿಕೋತ್ಸವಕ್ಕಾಗಿ ಭರದಿಂದ ಸಿದ್ಧತೆ ನಡೆದಿತ್ತು. ಹಲವಾರು ಕಾರ್ಯಕ್ರಮಗಳಿದ್ದುವು. ಒಂದು ದೀರ್ಘನಾಟಕ; ಎರಡು ಚಿಕ್ಕ ಪ್ರಹಸನಗಳು— ವಿದ್ಯಾರ್ಥಿನಿಯರು ಅಭಿನಯಿಸಲಿದ್ದುದೊಂದು— ಇನ್ನೊಂದು ಕೆಳತರಗತಿಯ ಚಿಕ್ಕ ಮಕ್ಕಳು ಅಭಿನಯಿಸಲು ತಕ್ಕುದಾದುದು. ವಿದ್ಯಾರ್ಥಿನಿಯರ ನಾಟಕದಲ್ಲಿ ಮುಖ್ಯಪಾತ್ರವಂತೂ ಗೀತೆಗೆ ಕಟ್ಟಿಟ್ಟದ್ದು. ಹಿಂದಿನ ವರ್ಷಗಳಲ್ಲಿಯೂ ಯಾವ ಪಾತ್ರಕೊಟ್ಟರೂ ಆಕೆ ಸಮರ್ಥರೀತಿಯಿಂದ ಅಭಿನಯಿಸಿದ್ದಳು.

ಕಾರ್ಯಕ್ರಮಗಳನ್ನು ನಿರ್ಧರಿಸಲು ಶಿಕ್ಷಕರೂ ವಿದ್ಯಾರ್ಥಿಗಳಲ್ಲಿ ಪ್ರಮುಖರೂ ಕೂಡಿ ಸಮಾಲೋಚನೆ ನಡೆಸಿದರು. ವಿದ್ಯಾರ್ಥಿನಿಯರ ನಾಟಕದ ಪ್ರಸ್ತಾಪ ಬಂದಾಗ 'ಕಿಸಾಗೋತಮಿ' ಆಡಬೇಕೆಂದು ನರಸಿಂಹಮೂರ್ತಿ ಅಭಿಪ್ರಾಯಪಟ್ಟನು. ಕೂಡಲೆ ಡ್ರಿಲ್ ಮಾಸ್ಟರ್ ವೆಂಕೋಬರಾಯರು ಬೇರೊಂದು ಹೇಳಿದರು. ಅವರು ತಾವೇ ಒಂದು ಪ್ರಹಸನವನ್ನು ರಚಿಸಿದ್ದರು. ಪ್ರತಿವರ್ಷವೂ ಹಾಗೆಯೇ. ತಾನು ಬರೆದುದೇ ತಕ್ಕುದೆಂದು ಅವರ ಹೇಳಿಕೆ. 'ಇಬ್ಸನ್, ಷಾ, ಕೈಲಾಸಂರವರಿಗಿಂತ ತಾನೇನೂ ಬಹಳ ಕೀಳಲ್ಲ" ಎಂಬುದು ಅವರ ನಂಬಿಕೆ. ಆದ್ದರಿಂದ ತಾವು ಬರೆದ ಪ್ರಹಸನವನ್ನು ತಮ್ಮ ಶಾಲೆಯವರೇ ಆಡದಿದ್ದರೆ! ವಿಷಯವನ್ನಾರಿಸುವಾಗ ಅಭಿಪ್ರಾಯಭೇದ ತಲೆದೋರಿದ್ದರಿಂದ, ಆ ಕುರಿತು ನಿರ್ಧಾರವನ್ನು ಮುಂದೆ ತಳ್ಳಲಾಯಿತು.

ಡ್ರಿಲ್ ಮಾಸ್ಟರರ ಕೃತಿ ನರಸಿಂಹಮೂರ್ತಿಗೆ ಏನೇನೂ ಹಿಡಿಸಲಿಲ್ಲ. ಆದರೆ ಶಿಕ್ಷಕರಲ್ಲಿಯೂ ವಿದ್ಯಾರ್ಥಿಗಳಲ್ಲಿಯೂ ಕೆಲವರು ಅದು ಚೆನ್ನಾಗಿದೆಯೆಂದು ಸಮರ್ಥಿಸಿದರು. ಬಲಿತ ಹುಡುಗರಿಗೆ ನರಸಿಂಹಮೂರ್ತಿಯನ್ನೆದುರಿಸುವುದರಲ್ಲಿ ಯಾಕೋ ಒಂದು ಬಗೆಯ ಸಂತೋಷ. ವೆಂಕೋಬರಾಯರೇ ಅದಕ್ಕೆ ಬಹುಮಟ್ಟಿಗೆ ಕಾರಣರಾಗಿದ್ದಿರಬಹುದು. ಅಲ್ಲದೆ ಲಘುಪ್ರವೃತ್ತಿಯ ದಪ್ಪತಲೆಯ ವಿದ್ಯಾರ್ಥಿಗಳನ್ನು, ತರಗತಿಯಲ್ಲಿ ಮೂರ್ತಿ ಒಮ್ಮೊಮ್ಮೆ ಭರ್ತ್ಸನೆ ಮಾಡಿದ್ದೂ ಉಂಟು. ಈಗ ಮೂರ್ತಿಯನ್ನೆದುರಿಸುವ ಸಂದರ್ಭ ದೊರೆತಾಗ, ಅವರಿಗೆ ಸಂತೋಷವಾಗದಿರುತ್ತದೆಯೆ?

ಮಾರನೆಯ ದಿನ ಎಲ್ಲರೂ ಕೂಡಿದಾಗ, ವೆಂಕೋಬರಾಯರ ನಾಟಕವನ್ನೇ ಆಡತಕ್ಕುದೆಂದು ಹೆಡ್ಮಾಸ್ತರರು ಅಭಿಪ್ರಾಯಪಟ್ಟರು. ಅಲ್ಲದೆ, "ಬರೆದವರೇ ನಿರ್ದೇಶನಕ್ಕಿರುವುದು ಹೆಚ್ಚಿನ ಸೌಲಭ್ಯ; ಕಿಸಾಗೋತಮಿಯಂಥ ಗೀತನಾಟಕಗಳನ್ನು ಅಭಿನಯಿಸುವುದು ಸುಲಭವಲ್ಲ!"—ಎಂದರು.

'ಕಿಸಾಗೋತಮಿಯನ್ನಾಡುವುದಾದರೆ, ನಿರ್ದೇಶಿಸುವ ಭಾರ ತನಗಿರಲಿ!' ಎಂದನು ನರಸಿಂಹಮೂರ್ತಿ.

"ಏನೋ, ನಮ್ಮವರೇ ಒಬ್ಬರು ಬರೆದಿದ್ದಾರೆ. ಅದನ್ನೇ ಆಡಲಂತೆ!" ಎಂದು ಉತ್ತರ ಬಂತು.

ಮೂರ್ತಿ ಸುಮ್ಮನಾದನು. ಅವನ ಅಭಿಪ್ರಾಯಕ್ಕೆ ಆ ಬಗೆಯ ಸೋಲೊದಗಿದುದು ಅದೇ ಮೊದಲು. ಜಗತ್ತೇ ತನ್ನನ್ನು ಪರಿಹಾಸ ಮಾಡುತ್ತಿರುವುದೋ ಎನ್ನಿಸಿತು ಅವನಿಗೆ.

ಪಾತ್ರಗಳ ವಿಚಾರ ಬಂದಿತು "ಮುಖ್ಯಪಾತ್ರವಂತೂ ಗೀತಾದೇವಿಗೆ" ಎಂದರು ವೆಂಕೋಬರಾಯರು. ಅವರು ಸುಮ್ಮನೆ ಹಾಗೆನ್ನಲಿಲ್ಲ. ಮೂರ್ತಿಯ ಕಡೆಗೆ ಒಂದು ತುಂಟ ದೃಷ್ಟಿಯನ್ನು ಬೀರಿಯೇ ಹೇಳಿದರು. ಅದನ್ನು ಮೂರ್ತಿ ಗಮನಿಸದಿರಲಿಲ್ಲ.

ಮೂರ್ತಿ ಥಟ್ಟನೆ ಹೇಳಿದನು: "ಅದಾಗದು!"

"ಯಾವುದು ಆಗದು?" ಎಂದು ಮೆತ್ತಗೆ ಕೇಳಿದರು ವೆಂಕೋಬರಾಯರು.

"ಗೀತಾದೇವಿ ಪಾತ್ರ ವಹಿಸುವುದು!"

"ಆದರೆ ಒಪ್ಪುವುದು ಬಿಡುವುದು ಹುಡುಗಿಗೆ ಸೇರಿದ್ದು, ಮಿಸ್ಟರ್ ಮೂರ್ತಿ, ಅಥವಾ ಅವಳ ಹೆತ್ತವರಿಗೆ ಸೇರಿದ್ದು!" ಉತ್ತರ ಬಿಗುವಾಗಿ ಬಂದಿತು.

"ಅವಳು ಪಾತ್ರವಹಿಸದಂತೆ ನೋಡಿಕೊಳ್ಳುವ ಭಾರ ನನಗಿರಲಿ!" ಮೂರ್ತಿ ಉದ್ವೇಗಗೊಂಡು ಹೇಳಿದನು.

"ಅದು ಹೇಗೆಂದು ನೋಡೋಣ!" ಎಂದು ವೆಂಕೋಬರಾಯರು ಗೀತೆಯ ಕಡೆಗೆ ನೋಡಿದರು. ಗೀತೆಯು ತಲೆ ತಗ್ಗಿಸಿದ್ದಳು.

ಮೂರ್ತಿಯ ಮನಸ್ಸು ಈ ರೀತಿ ಹುಳಿಯಾದುದು ಗೀತೆಗೆ ತೀರ ವಿಚಿತ್ರವೆನಿಸಿತು. ಅದರಲ್ಲೂ ತನ್ನ ಕುರಿತಾಗಿ ಇಷ್ಟೆಲ್ಲ ಮಾತುಗಳು ನಡೆದುದು ಅವಳಿಗೆ ಹೇಗೆ ಹೇಗೋ ಎನ್ನಿಸಿತು. ಅಷ್ಟರಲ್ಲಿ ಮೂರ್ತಿ ಥಟ್ಟನೆ ಎದ್ದು ಹೊರಟುಹೋದನು.

ಮೂರ್ತಿಯ ಅಂದಿನ ವರ್ತನೆ ಅವನ ಸಹಜಸ್ವಭಾವಕ್ಕೆ ತೀರ ವ್ಯತಿರಿಕ್ತವಾಗಿತ್ತು. ಅವನ ಅಭಿಮಾನಿಗಳಿಗೆ ಕೂಡ ಅದರಿಂದ ಜುಗುಪ್ಸೆಯುಂಟಾಯಿತು.

ರಾತ್ರಿಯೆಲ್ಲ ಮೂರ್ತಿಯ ಮನಸ್ಸಿಗೆ ಸಮಾಧಾನವಿಲ್ಲ. ಮೊತ್ತಮೊದಲ ಬಾರಿಗೆ ಅವನಲ್ಲಿ ದ್ವೇಷಾಸೂಯೆಗಳು ಮೂಡಿದ್ದುವು. ಪಾತ್ರವಹಿಸುವುದರ ಕುರಿತು ಹುಡುಗಿಯ ಅಭಿಪ್ರಾಯವೇನೆಂದು ಅವನು ತಿಳಿದಿರಲಿಲ್ಲ. ಶಾಲೆಯಿಂದ ಹಿಂದಿರುಗಿ ಬರುವಾಗ ಗೀತೆಯ ತಂದೆಯನ್ನು ಕಂಡು, ಗೀತೆಯು ಆ ನಾಟಕದಲ್ಲಿ ಅಭಿನಯಿಸುವುದು ಚೆನ್ನಲ್ಲವೆಂದು ಸೂಚಿಸಬಂದಿದ್ದನು. ಅವರಿಗೆ ಅಂಥ ವಿಚಾರಗಳಲ್ಲೊಂದರಲ್ಲೂ ಆಸಕ್ತಿ ಇರಲಿಲ್ಲ. "ಏನೋ ಅಪ್ಪಾ, ನೀವೇ ಮಾಸ್ತರರು ಮಕ್ಕಳು ನಿರ್ಧರಿಸಿಕೊಳ್ಳಿ!" ಎಂದು ಅವರು ನಕ್ಕುಬಿಟ್ಟಿದ್ದರು. ಈ ರೀತಿ ತನ್ನ ಅಭಿಪ್ರಾಯಕ್ಕೆ ಮನ್ನಣೆ ದೊರೆಯುವಂತೆ ಹುಡುಗಿಯನ್ನು ಒತ್ತಾಯಿಸುವುದು ಉಚಿತವೆ, ಹಾಗೆ ಮಾಡಲು ತನಗಿರುವ ಹಕ್ಕಾದರೂ ಎಂಥದು— ಎಂದು ಮೂರ್ತಿ ವಿವೇಚಿಸಹೋಗಲಿಲ್ಲ.

ವೆಂಕೋಬರಾಯರ ನಾಟಕವು ಕೀಳು ಅಭಿರುಚಿಯನ್ನು ತೋರಿಸುವಂತಹದಿತ್ತೆಂಬುದು ನಿಜ. ಅದರಲ್ಲಿಯೂ ಮುಖ್ಯಪಾತ್ರದ ಉಡುಗೆ-ತೊಡುಗೆಗಳು ಶುದ್ಧ ಆಭಾಸಮಯ. ಅಂಥ ಭೂಮಿಕೆ ತನ್ನ ಗೀತೆಗೆ ಕೂಡದು. 'ತನ್ನ' ಎಂದೆನೇ? ಹೌದು. ಗೀತೆ ತನ್ನವಳೆಂದು ಅವನ ಮನಸ್ಸಿನಲ್ಲಿ ಸ್ಥಾಪನೆಯಾಗಿ ಹೋದುದೇ ಎಲ್ಲ ಸಮಸ್ಯೆಗಳಿಗೂ ಮೂಲವಾಯಿತು. ಕಿಸಾಗೋತಮಿಯನ್ನಾಡಿ, ಮುಖ್ಯ ಭೂಮಿಕೆಯನ್ನು ಗೀತೆಗೆ ಕೊಟ್ಟಿದ್ದಾದರೆ, ಆಕೆಯ ಯೋಗ್ಯತೆ ಮಿಂಚುತ್ತಿತ್ತು— ಎಂದು ಅವನ ಮನಸ್ಸಿನಲ್ಲಿತ್ತು. ಅದೇನೇ ಇರಲಿ, ಈಗ ಗೀತೆ ತನ್ನ ಇಚ್ಛೆಗೆ ವ್ಯತಿರಿಕ್ತವಾಗಿ ನಡೆಯಲಾರಳೆಂದು ಅವನಿಗನ್ನಿಸುವುದು. ನಡೆಯಲಾಗದು ಎನ್ನುವಂಥ ಛಲವೂ ಅವನಲ್ಲಿ ಮೂಡಿತು.

ಮಾರನೆಯ ದಿನ ವೆಂಕೋಬರಾಯರ ಪ್ರಹಸನವೇ ಅಭಿನಯಿಸಲ್ಪಡುವುದೂ, ಗೀತೆ ಮುಖ್ಯಭೂಮಿಕೆಯನ್ನು ವಹಿಸುವುದೂ ಎಲ್ಲರಿಗೂ ತಿಳಿದುಹೋಗಿತ್ತು. ಸಾಯಂಕಾಲ ರಿಹರ್ಸಲ್ ಬೇರೆ ಇರಿಸಿಕೊಂಡಿದ್ದರು. ಈ ನಡುವೆ 'ಮೂರ್ತಿ ಮಾಸ್ತರರಿಗೆ' ಅಸಮಾಧಾನವುಂಟಾಗಿದ್ದುದು ವಿದ್ಯಾರ್ಥಿಗಳಿಗೆ ತಿಳಿದು, ಅವರು ಮೂರ್ತಿಯ ಬಿಗುಮುಖವನ್ನು ನೋಡಿ ನೋಡಿ ಗುಜು ಗುಜು ಎಂದುಕೊಳ್ಳುತ್ತಿದ್ದರು. ವಿಶ್ವೇಶ್ವರಯ್ಯ ಮಗಳೊಡನೆ ನಾಟಕದ ಪ್ರಸ್ತಾಪವನ್ನೇ ಎತ್ತಿರಲಿಲ್ಲ. ಅದರಲ್ಲೆಲ್ಲ ಅವರಿಗೆ ಆಸಕ್ತಿಯಿಲ್ಲವೆಂದು ಮೊದಲೇ ಹೇಳಿದೆ. ಗೀತೆಯೂ ತಂದೆಗೆ ಏನನ್ನೂ ತಿಳಿಸಲಿಲ್ಲ. ತನ್ನೊಳಗೇ ಅಂದು ನಿರ್ಧಾರಕ್ಕೆ ಬಂದಿದ್ದಳು. ಆದರೆ ಅವಳ ಮನಸ್ಸು ಬಹುವಾಗಿ ಕದಡಿಹೋಗಿತ್ತು.

ಮಧ್ಯಾಹ್ನದ ಬಿಡುವಿನಲ್ಲಿ ಮೂರ್ತಿ, ಉಪಾಧ್ಯಾಯರ ಕೋಣೆಯಲ್ಲಿ ಕುಳಿತು, ಪತ್ರಿಕೆಯೊಂದನ್ನು ಮಗುಚುತ್ತಿದ್ದನು. ಅವನು ತಲೆಯೆತ್ತಿದಾಗ ಗೀತೆ ಬಾಗಿಲಲ್ಲಿ ನಿಂತಿದ್ದಳು. "ಸರ್, ಒಂದು ನಿಮಿಷ" ಎಂದು ಮೆಲುದನಿಯಲ್ಲಿ ಹೇಳಿದಳು.

ಮೂರ್ತಿ ಅವಳಿದ್ದಲ್ಲಿಗೆ ಹೋಗಿ ಏನು ಎಂಬಂತೆ ಸಂಜ್ಞೆಮಾಡಿ ಕೇಳಿದನು. ಗೀತೆ ಸಂಕೋಚಪಡುತ್ತ ಒಂದು ನಿಮಿಷ ಸುಮ್ಮನೆ ಕೆಳಗೆ ದೃಷ್ಟಿ ಚೆಲ್ಲಿ, ಅನಂತರ ನಮ್ರತೆಯಿಂದ "ನಾನು act ಮಾಡಲೇನು ಸರ್?" ಎಂದು ಕೇಳಿದಳು. ಕುತೂಹಲದಿಂದ ಮೂರ್ತಿಯನ್ನೇ ನೋಡಿದಳು. ಅವಳು ಮುಖವರಳಿಸಿ ಕೇಳಿದ ಬಗೆಯಲ್ಲಿ "ನಾನು ಆಟವಾಡುವುದಕ್ಕೆ ಹೋಗಲೇ?" ಎಂದು ಮಗು ತಾಯಿಯನ್ನು ಕೇಳುವ ಭಾವವಿತ್ತು.

ಈ ಪ್ರಶ್ನೆಯಿಂದ ಮೂರ್ತಿ ಪಾತಾಳಕ್ಕಿಳಿದನಾದರೂ, ಅವನು ಯಾವ ಭಾವಪ್ರದರ್ಶನವನ್ನೂ ಮಾಡಲಿಲ್ಲ. ಗೀತೆ ಅಂಥ ಸನ್ನಿವೇಶದಲ್ಲಿ ಬಂದಿದ್ದಳು. ಅವನು ಒಂದು ನಿಮಿಷ ಯೋಚಿಸಿ "ತಂದೆಯವರನ್ನು ಕೇಳಿದ್ದೀಯಾ?" ಎಂದು ಪ್ರಶ್ನಿಸಿದನು.

"ಅಪ್ಪನನ್ನ? .... ಅವರನ್ನು ಕೇಳಿದರೆ ಆಗಬಹುದು ಎನ್ನುತ್ತಾರೆ, ಅಥವಾ ಏನೂ ಹೇಳುವುದಿಲ್ಲ." ಎಂದಳು ಗೀತೆ.

ಮಲೇರಿಯಾ
ಇನ್‌ಫ್ಲುಯೆಂಜಾ
ಮತ್ತು
ಯಾವತ್ತೂ ಜ್ವರಗಳು
ಒಡನೆ ವಾಸಿ ಹೊಂದುತ್ತವೆ.
ಶ್ರೀಮಂತರ-ಬಡಬಗ್ಗರ-ಕೂಲಿಕಾರರ ಎಲ್ಲರ ಸಲುವಾಗಿ ಜ್ವರಗಳ ಮೇಲೆ ರಾಮಬಾಣ ಔಷಧ.
ಮಾಡನ್ ಸನ್ಸ್ ಮತ್ತು ಕಂ. ಕೆಮಿಸ್ಟ್,
ಮುಂಬಯಿ—೨.

"ಮತ್ತೆ ನನ್ನನ್ನೇನು ಕೇಳುತ್ತೀಯ? ನಿನಗೆ ತೋಚಿದಂತೆ ಮಾಡು!" ಎಂದು ಮೂರ್ತಿ ಥಟ್ಟನೆ ನುಡಿದನು.

ಆ ಮಾತಿನಲ್ಲಿದ್ದ ಕಟುತ್ವಕ್ಕೆ ಗೀತೆ ಧರೆಗಿಳಿದು ಹೋದಳು. ನಿಜವಾಗಿಯೂ ಆಕೆಗೆ ತಾನು ಅಭಿನಯಿಸದಿರಬಾರದೆಂದು ಅನಿಸಿತ್ತು; ಆದರೆ 'ಮೂರ್ತಿ ಮಾಸ್ಟರರ' ಮನಸ್ಸನ್ನು ನೋಯಿಸುವುದು ಅವಳಿಂದಾಗದು. ಆದ್ದರಿಂದ ಅವರನ್ನು ಕೇಳಿ ಅವರೆಂದಂತೆ ನಡೆಯುವುದು—ಎಂದು ನಿರ್ಧರಿಸಿ, ಅವಳು ಬಂದಿದ್ದಳು. ಆದರೆ "ನಾನು act ಮಾಡಲೇ?"— ಎಂದು ಅವಳು ಕೇಳಿದ ಪ್ರಶ್ನೆಯನ್ನು ಮೂರ್ತಿ ತಪ್ಪು ತಿಳಿದುಕೊಂಡನು. ಅಚಾತುರ್ಯದಿಂದ ವರ್ತಿಸಿದನು ಗೀತೆ ಮನನೊಂದು ತರಗತಿಗೆ ಹೊರಟುಹೋದಳು.

ಸಾಯಂಕಾಲ ಪ್ರಹಸನದ ಪ್ರಯೋಗಕ್ಕೆ ಸಿದ್ಧತೆ ನಡೆಯಿತು. ಪ್ರಹಸನಕರ್ತರು ಹಾಗೂ ನಿರ್ದೇಶಕರಾದ ವೆಂಕೋಬರಾಯರ ಗಡಿಬಿಡಿ ಹೇಳತೀರದು. ಏಕೆಂದರೆ ಮೊದಲೇ ತಿಳಿಸಿದ್ದರೂ ಗೀತೆಯ ಪತ್ತೆಯೇ ಇಲ್ಲ. ವಿಚಾರಿಸಿದಾಗ ಆಕೆ ಮನೆಗೆ ಹೊರಟಿದ್ದುದು ತಿಳಿಯಿತು. ಮೂರ್ತಿ ಎದುರಾದಾಗ ಬೇಕುಬೇಕೆಂದೇ "ಗೀತೆ ಎಲ್ಲಿ?"—ಎಂದು ಕೇಳಿದರು. ಮೂರ್ತಿ ಅವರನ್ನು ದುರುಗುಟ್ಟಿ ನೋಡಿದಾಗ 'ಕ್ಷಮಿಸಿ ಕ್ಷಮಿಸಿ" ಎನ್ನುತ್ತ ಸರಿದು ಹೋದರು. "ಎಲ್ಲವೂ ಮೂರ್ತಿಯದೇ ಕಿತಾಪತಿ"— ಎಂದು ಹೇಳಿಕೊಂಡರು. ಕೊನೆಗೆ ಮುಖ್ಯೋಪಾಧ್ಯಾಯರೊಡನೆ ವಿಷಯವನ್ನು ತಿಳಿಸಿದರು. ಅವರು ಜವಾನನ್ನು ಅಟ್ಟಿದರು; ಅರ್ಧದಾರಿ ಹೋಗಿದ್ದ ಹುಡುಗಿಯನ್ನು ಕರೆಸಿಕೊಂಡರು. "ಇದೇನು ಗೀತಾದೇವಿ, ಹೀಗೆ ಮಾಡಿಬಿಟ್ಟೆ?"—ಎಂದು ಪ್ರಶ್ನಿಸಿದರು.

"ಈ ಸಲ ಬೇಡ ಸರ್," ಗೀತೆ ಕರುಣಾಜನಕವಾಗಿ ಹೇಳಿದಳು.

"ನೀನೂ ಹಾಗನ್ನುವುದೇ ಗೀತಾ?"— ಎಂದು ಮುಖ್ಯೋಪಾಧ್ಯಾಯರು ನಾನಾ ಬಗೆಯಲ್ಲಿ ಹೇಳಿ, ಗೀತೆಯನ್ನು ಒಪ್ಪಿಸಲು ಯತ್ನಿಸಿದರು. ಗೀತೆಗೆ ಆಗ ಎರಡೆನ್ನಲಾಗಲಿಲ್ಲ. ಅಸಮ್ಮತಿ ಸೂಚಿಸಲು ಆಕೆ ಹೇಳಬಹುದಾದ ಸಮರ್ಪಕವಾದ ಕಾರಣವೂ ಅವಳಿಗೆ ಹೊಳೆಯಲಿಲ್ಲ. ಆ ಕುರಿತು ಮೂರ್ತಿಯಿಂದ ಅವಳಿಗೆ ಸಲಹೆ ದೊರೆಯಬಹುದಾಗಿತ್ತು. ಆದರೆ ಅದೂ ದೊರೆತಿರಲಿಲ್ಲ. ಆದ್ದರಿಂದ ಹುಡುಗಿ ಅಭಿನಯಿಸಲು ಒಪ್ಪಿದಳು. ಮನಸ್ಸಿಲ್ಲದ ಮನಸ್ಸಿನಿಂದ ರಿಹರ್ಸಲ್ ನಡೆಯಿತು.

ನರಸಿಂಹಮೂರ್ತಿ ಆ ದಿನ ಮನೆಗೆ ಹೋದವನು ತಿನ್ನಲಿಲ್ಲ, ಉಣ್ಣಲಿಲ್ಲ— ನಿದ್ರಿಸಲೂ ಇಲ್ಲ. ಯೋಚನಾಪರನಾಗಿ ಕುಳಿತನು. ಜಗತ್ತೇ ತನಗೆ ವ್ಯತಿರಿಕ್ತವಾಗಿ ನಿಂತಂತೆ ಎನ್ನಿಸಿತು ಅವನಿಗೆ. ಜುಗುಪ್ಸೆ ಮೂಡಿತ್ತು. ಅಂದಿನಿಂದ ಅವನಿಗೆ ಶಾಲೆಯ ಕೆಲಸದಲ್ಲಿ ಆಸಕ್ತಿ ಕಡಿಮೆಯಾಗತೊಡಗಿತು. ಪತ್ರಿಕೋದ್ಯಮದಲ್ಲಿ ಕಾಲಿರಿಸಬೇಕೆಂದಿದ್ದ ಅವನ ಹಿಂದಿನ ಕಲ್ಪನೆಗಳೆಲ್ಲ ಅರಳಿದುವು.

ವಾರ್ಷಿಕೋತ್ಸವದಲ್ಲಿ ತಾನು ಭಾಗವಹಿಸಬೇಕೋ ಬೇಡವೋ ಎಂದು ಸಹ ಅವನು ಯೋಚಿಸಿದನು. ಒಮ್ಮೆ ಬೇಡವೆನ್ನಿಸಿತು. ಆದರೆ ತನ್ನ ಅಸಮಾಧಾನವನ್ನು ಸಾರ್ವಜನಿಕರಿಗೆ ತಿಳಿಯಗೊಡುವುದು ಉಚಿತವಲ್ಲವೆಂದುಕೊಂಡನು. ಉತ್ಸವದಲ್ಲಿ ಅವನು ಓಡಾಡಿದನಾದರೂ, ಹೆಚ್ಚಿನ ಉತ್ಸಾಹವನ್ನೇನೂ ತೋರಿಸಲಿಲ್ಲ.

ವಿದ್ಯಾರ್ಥಿನಿಯರ ಪ್ರಹಸನ ಪ್ರಾರಂಭವಾಗುವುದರಲ್ಲಿತ್ತು. ಮೂರ್ತಿ ಏತಕ್ಕಾಗಿಯೋ ಪಾತ್ರಸಿದ್ಧತೆ ನಡೆಯುತ್ತಿದ್ದಲ್ಲಿಗೆ ಬಂದನು. ಗೀತೆ ನಗುನಗುತ್ತಾ ಬಣ್ಣ ಬಳಿಸಿಕೊಳ್ಳುತ್ತಿದ್ದಳು. 'ಡೈರೆಕ್ಟರ್' ವೆಂಕೋಬರಾಯರು ನಿಂತು ಸಲಹೆಕೊಡುತ್ತಿದ್ದರು. ಅವರ ಸೂಟುಬೂಟಿನ ಠೀವಿ, ಸಂಭ್ರಮ ನೋಡಬೇಕಿತ್ತು! ಮೂರ್ತಿಗೆ ಅಲ್ಲಿ ನಿಲ್ಲಲಾಗಲಿಲ್ಲ. ಅವನು ಈಚೆಗೆ ಹೊರಟು ಬಂದನು.

ನಾಟಕ ಪ್ರಾರಂಭವಾಯಿತು. ರಂಗಕ್ಕೆ ಬಂದ ಗೀತೆಯ ಕಣ್ಣುಗಳು ಪದೇ ಪದೇ ಮೂರ್ತಿಯನ್ನರಸಿದುವು. ಮಿತ್ರರೊಡನೆ ಸೇರಿಕೊಂಡು ಮಾತು-ಕತೆಯಲ್ಲಿದ್ದ ಮೂರ್ತಿ, ಒಮ್ಮೆಯೂ ಸ್ಟೇಜಿನ ಕಡೆಗೆ ನೋಡಲಿಲ್ಲ.

ಅಂದು ರಾತ್ರಿ ಮೂರ್ತಿ ತನ್ನ ಕೋಣೆಯನ್ನು ತಲುಪಿದಾಗ, ಸ್ತ್ರೀವರ್ಗದ ಮೇಲೆಯೇ ಅವನಿಗೆ ದ್ವೇಷ ಮೂಡಿತ್ತು. ತನ್ನ ಅಭಿಮಾನಕ್ಕೆ, ತನ್ನ ತ್ಯಾಗಕ್ಕೆ ಬೆಲೆಯಿಲ್ಲದೆ ಹೋಯಿತೆ!— ಎಂದು ಅವನು ಕರುಬಿದನು. ಮನಸ್ಸಿನ ನೋವು ತಡೆಯಲಾರದಾದಾಗ ಅವನು ಸ್ವಾಮಿ ವಿವೇಕಾನಂದರ ಗ್ರಂಥವೊಂದನ್ನು ಕೈಗೆತ್ತಿಕೊಂಡನು. ವಿವೇಕಾನಂದರ ಉಪನ್ಯಾಸಗಳನ್ನೋದುತ್ತಿದ್ದರೆ ಎಂಥ ಮನಸ್ಸೂ ಭವ್ಯತೆಗೇರುತ್ತದೆ. ಮೂರ್ತಿಗೂ ಹಾಗೆಯೇ ಆಯಿತು. ಮನಸ್ಸಿಗೆ ಒಂದು ಸಮಾಧಾನ ಕೂಡಿ ಬರತೊಡಗಿತು. ತನ್ನ ವ್ಯಾಮೋಹಕ್ಕಾಗಿ ನಾಚಿಕೊಂಡನು. ತನ್ನ ಮನಸ್ಸು ಇಷ್ಟು ಕಿರಿದಾಯಿತು ಹೇಗೆ?—ಎಂದುಕೊಂಡನು. ರತ್ನದಂಥ ಆ ವಿದ್ಯಾರ್ಥಿನಿಯ ಮೇಲೆ ತನ್ನ ಅಭಿಪ್ರಾಯವನ್ನು ಹೇರಲು ಯತ್ನಿಸಿ, ಅವಳ ಮನವನ್ನು ನೋಯಿಸಿದ ತನ್ನ ಸ್ವಾರ್ಥಪರತೆಯನ್ನು ನಿರಾಕರಿಸಿಕೊಂಡನು. ವ್ಯಾಮೋಹದ ಮಂಕಿನಲ್ಲಿ ಮನುಷ್ಯ ಎಷ್ಟು ಅಲ್ಪನಾಗಿಬಿಡುತ್ತಾನೆ! ಗೀತೆಯ ಕುರಿತಾಗಿ ತನ್ನಲ್ಲಿ ಮೂಡಿದ್ದ ಒಲವಿನ ಹಿನ್ನೆಲೆಯಲ್ಲಿ ಇಷ್ಟು ಕರಾಳವಾದ ಸ್ವಾರ್ಥವೆಂಬುದು ಇತ್ತಲ್ಲವೆ—ಎಂದು ಗ್ರಹಿಸಿ, ಅವನು ತೀರ ನಾಚಿಕೆಪಟ್ಟನು. ಸಂದರ್ಭ ದೊರೆತಾಗ ಆಕೆಯ ಕ್ಷಮೆಯನ್ನು ಯಾಚಿಸಿ ಹಿಂದಿನದನ್ನೆಲ್ಲ ಮರೆತುಬಿಡಬೇಕೆಂದು ಕೇಳಬೇಕೆಂದುಕೊಂಡನು. ಮಾತ್ರವಲ್ಲದೆ, ವರ್ಷಾಂತ್ಯವಾದೊಡನೆ ಮದರಾಸಿಗೆ ಹಿಂದಿರುಗಬೇಕು. ತನ್ನ ಹಿಂದಿನ ಧ್ಯೇಯಗಳತ್ತ ಗಮನಕೊಡಬೇಕು. ಈ ಶಾಲೆಯ ಸಂಕುಚಿತ ಮನೋವೃತ್ತಿಯ ವಾತಾವರಣದಿಂದ ದೂರವಾಗುವುದೇ ಲೇಸು— ಎಂದು ನಿರ್ಧರಿಸಿಕೊಂಡನು.

ಇತ್ತ ಗೀತೆ ನಾಟಕದಲ್ಲಿ ಪಾತ್ರವಹಿಸಿ ಸುಖಿಯಾಗಲಿಲ್ಲ. ಬಾಲ್ಯಸಹಜವಾದ ಉತ್ಸಾಹ, ಇತರರ ಪ್ರಶಂಸೆ, ದೊರೆಯಬಹುದಾದ ಯಶಸ್ಸು, ಇವೆಲ್ಲಕ್ಕಿಂತಲೂ ಮುಖ್ಯೋಪಾಧ್ಯಾಯರ ಒತ್ತಾಯಕ್ಕೆ ಕಟ್ಟು ಬಿದ್ದು ಅವಳು ಪಾತ್ರವಹಿಸಲು ಒಪ್ಪಿದ-

ದಾಗಿತ್ತು. ಹೈಸ್ಕೂಲಿನಲ್ಲಿ ತನ್ನದು ಕೊನೆಯ ವರ್ಷ. ಯಾರೊಬ್ಬ ಉಪಾಧ್ಯಾಯರಿಗೇ ಆಗಲಿ ಅವಿಧೇಯತೆ ತೋರಿಸುವುದೇಕೆ— ಎಂಬುದೇ ಅವಳ ಭಾವನೆಯಾಗಿತ್ತು. ಆದರೆ ತನ್ನ 'ಮೂರ್ತಿ ಮಾಸ್ತರರಿಗೇ' ವಿರುದ್ಧವಾಗಿ ನಡೆಯಬೇಕಾಯಿತಲ್ಲ— ಎಂದು ಅವಳು ತಲ್ಲಣಿಸಿದಳು. ಮಾತ್ರವಲ್ಲದೆ, ಮೂರ್ತಿ ಎಣಿಸಿದಂತೆ ನಾಟಕವು ಶುದ್ಧ ಅಭಾಸವಾಗಿತ್ತು. ತನ್ನ ಅಭ್ಯುದಯದಲ್ಲಿ ಅಷ್ಟೊಂದು ಆಸಕ್ತಿಯನ್ನು ತೋರಿಸುತ್ತಿದ್ದ ಗುರುವನ್ನು ತನ್ನ ದಿಟ್ಟತನದಿಂದ ನೋಯಿಸಿದೆನಲ್ಲ—ಎಂದು ನುರುಗಿದಳು. ತನ್ನ ವರ್ತನ ಅನುಚಿತವಾದುದೆಂದುಕೊಂಡಳು. ಯೋಚಿಸಿದಂತೆಯೂ ತನ್ನ ಅಪರಾಧ ದೊಡ್ಡ ದೊಡ್ಡದಾಗಿ ಕಾಣಿಸತೊಡಗಿತು. ಮಾತ್ರವಲ್ಲದೆ, ಆಗ ಅವಳಿಗೆ ಮೂರ್ತಿಯ ಉತ್ತಮಾಂಶಗಳೆಲ್ಲ ಬಹು ದೊಡ್ಡವಾಗಿ ಕಂಡುಬಂದುವು. ಇದ್ದಕ್ಕಿದ್ದಂತೆ ಅವಳಿಗೆ ಮೂರ್ತಿಯ ಮೇಲಿದ್ದ ಅಭಿಮಾನ ಇಮ್ಮಡಿಸಿತು. ತನ್ನ ಪಶ್ಚಾತ್ತಾಪಕ್ಕೆ ಸಂಬಂಧಿಸಿದ್ದ ವ್ಯಕ್ತಿಯ ಕಡೆಗೆ ಅವಳ ಹೃದಯ ನೇರಾಗಿ ಹರಿಯಿತು. ಆಗ ಆಕೆಗೆ ನರಸಿಂಹಮೂರ್ತಿಯಲ್ಲಿ ಒಲವು ಮೂಡಿತ್ತು.

ಮೊದಲು ತಂದೆಯವರೊಡನೆ ಎಲ್ಲ ವಿಚಾರವನ್ನೂ ತಿಳಿಸಿ, ಎದೆ ಹಗುರ ಮಾಡಿಕೊಳ್ಳಬೇಕೆಂದು ಗೀತೆ ನಿಶ್ಚಯಿಸಿದಳು. ಅದೇಕೆ, ಮೂರ್ತಿಯೊಡನೆಯೇ ಕ್ಷಮಾಯಾಚನೆಮಾಡುವೆ— ಎಂದು ಇನ್ನೊಮ್ಮೆ ಬಗೆದಳು. ಆದರೆ ಅದು ಹೇಗೆ ಸಾಧ್ಯವಾಗುತ್ತದೆ? ಶಾಲೆಯಲ್ಲಿ ಆ ಪ್ರಸ್ತಾಪವನ್ನೆತ್ತುವ ಧೈರ್ಯ ಅವಳಿಗೆ ಈಗ ಇರಲಿಲ್ಲ. ಮನೆಗೆ ಬಂದಾಗ ಕೇಳೋಣವೆಂದರೆ ಅಪ್ಪ ಇರುತ್ತಾರೆ. ಅದೂ ಸಾಧ್ಯವಿಲ್ಲ. ಏನೇ ಆಗಲಿ. ಒಮ್ಮೆ ಬರಿದೆ ಮಾತನಾಡಿಸಿದರೂ ಸರಿಯೆ!— ಎಂಬಂತಾಯಿತು ಅವಳಿಗೆ.

ಮಾರನೆಯ ದಿನ ಮಧ್ಯಾಹ್ನದ ಬಿಡುವಿನಲ್ಲಿ ಗೀತೆ ಉಪಾಧ್ಯಾಯರ ಕೋಣೆಯತ್ತ ಬಂದಳು. ಅಲ್ಲಿ ಮೂರ್ತಿಯೊಬ್ಬನೇ ಇದ್ದನು. ಯಾವುದೋ ಒಂದು ತಿಳಿಯದ ಅಂಶವನ್ನು ವಿವರಿಸಿಕೊಳ್ಳುವುದಕ್ಕೆಂಬ ನೆಪದಿಂದ ಅವಳು ಬಂದಿದ್ದಳು. ಮೊದಲಿಗೆ ಸಂಕೋಚವಾದರೂ, ಎರಡು ನಿಮಿಷ ಬಾಗಿಲಲ್ಲೆ ನಿಂತಿದ್ದು, ಅನಂತರ ಒಳಗೆ ಪ್ರವೇಶಿಸಿ, ಮೂರ್ತಿಯಿದ್ದಲ್ಲಿಗೇ ಬಂದಳು. ಮುಖದಲ್ಲಿ ಸಾಧ್ಯವಾದಷ್ಟು ಗೆಲವು ತಂದುಕೊಂಡು "ಇದು ಹೇಗೆ ಸರ್?"— ಎಂದು ತನ್ನ ಸಮಸ್ಯೆಯನ್ನು ಮುಂದಿರಿಸಿದಳು. ಮೂರ್ತಿ ಮುಖವೆತ್ತಿ ಅವಳನ್ನೊಮ್ಮೆ ದಿಟ್ಟಿಸಿ ನೋಡಿದನು. ಅನಂತರ ಗಂಭೀರವಾಗಿ "ಪಾಠದ ಸಮಯದಲ್ಲಿ ಕೇಳಮ್ಮಾ!"— ಎಂದನು. ಸಿಡಿಲು ಬಡಿದಿದ್ದರೂ ಗೀತೆ ಸಹಿಸಿಕೊಳ್ಳುತ್ತಿದ್ದಳೇನೊ. ಆದರೆ ತಾನೆಂದೂ ನಿರೀಕ್ಷಿಸದ ಮೂರ್ತಿಯ ಮಾತುಗಳು ಅವಳೆದೆಯನ್ನು ಹಿಂಡಿದುವು. 'ಕೇಳಮ್ಮಾ' ಎಂಬ ಅವನ ನುಡಿಯಲ್ಲಿದ್ದ ಅಸಹಜವಾದ ಬಿಡಿವಾರತನ, ಅವಳ ನೋವನ್ನು ಮತ್ತಷ್ಟು ತೀಕ್ಷ್ಣವಾಗಿ ಮಾಡಿತು. ಇತರರಾರಾದರೂ ಮನನೋಯಿಸುವ ನುಡಿಗಳನ್ನಾಡಿದರೆ ಅವಳೇನು ಸುಮ್ಮನಿರುವವಳಲ್ಲ; ಆದರೆ ಮೂರ್ತಿ ಹಾಗೆ ಮಾಡಿದಾಗ

ಗೀತೆ ಅಧೀರಳಾದಳು. ಆಕೆಯ ಕಣ್ಣಿಂದ ಎರಡು ಹನಿಗಳುದುರಿ ಕೆನ್ನೆಯಮೇಲಿಳಿದುವು.

" ಯಾಕಮ್ಮಾ ಅಳುತ್ತಿ ? ಕ್ಲಾಸಿಗೆ ಹೋಗು ! "— ಎಂದನು ಮೂರ್ತಿ. ಗೀತೆ ಸರಸರನೆ ಹೊರಟುಹೋದಳು. ತಲೆನೋವೆಂದು ರಜಾ ಕೇಳಿಕೊಂಡು ಆಕೆ ಮನೆ ಸೇರಿದಳು ತಂದೆ ಮನೆಗೆ ಬರುವ ವರೆಗೆ ಆಕೆ ಎಷ್ಟೊಂದು ಅತ್ತಳೋ ದೇವರೇ ಬಲ್ಲ. ಮನೆಯ ಮುದುಕಿಗೆ ಇದೊಂದೂ ಅರ್ಥವಾಗದೆ, ಆಕೆ ತುಂಬ ಗಲಿಬಿಲಿಗೊಂಡರು.

ಸಾಯಂಕಾಲ, ನಡೆದುದೆಲ್ಲವನ್ನೂ ಗೀತೆ ತಂದೆಗೆ ತಿಳಿಸಿದಳು. ಅವರೆಂದರು : "ಮೂರ್ತಿ ಮಾಸ್ತರರು ಕೂಡವೆಂದಮೇಲೆ ನೀನು ಅಭಿನಯಿಸುವುದು ಬೇಡವಿತ್ತು. ಅಲ್ಲದೆ ಹಾಗೆಲ್ಲ ಇದ್ದಿದ್ದಾದರೆ ನನ್ನನ್ನೇ ಕೇಳಬಹುದಿತ್ತು. ಈಗಲಾದರೂ ಅಂಜಿಕೆಯಿಲ್ಲ. ಅಷ್ಟೆಲ್ಲ ಮನಸ್ಸಿಗೆ ಹಚ್ಚಿಕೊಳ್ಳುವುದೇನೇ ಹುಚ್ಚು ಹುಡುಗಿ? "— ಹೀಗೆಂದು ವಿಶ್ವೇಶ್ವರಯ್ಯ ಮಗಳನ್ನು ಸಂತಯಿಸಿದರು.

ಈ ಪ್ರಕರಣದಿಂದ ಅವರ ಮನಸ್ಸು ಮಗಳ ವಿವಾಹದ ಕಡೆಗೆ ಹರಿಯಿತು. ಇನ್ನೆರಡು ತಿಂಗಳಲ್ಲಿ ಪರೀಕ್ಷೆ ಮುಗಿಯುತ್ತದೆ; ಗೀತೆಯೂ ಬೆಳೆದಿದ್ದಾಳೆ— ಎಂದು ಗುಣಾಕಾರ ಹಾಕಿಕೊಂಡರು, ಮನಸ್ಸಿನಲ್ಲಿ. ಗೀತೆಯನ್ನು ಕುರಿತು " ಸಾಯಂಕಾಲ ನಾನು ಹಾಸ್ಟೆಲಿಗೆ ಹೋಗಿ ಅವರನ್ನು ಕಂಡು ಮಾತನಾಡುತ್ತೇನೆ. ಎಲ್ಲವೂ ಸರಿಹೋಗುತ್ತದೆ. "— ಎಂದರು. "ಮೂರ್ತಿ ಮಾಸ್ತರರ ಮನಸ್ಸೆಂದರೆ ಹೂವಿನ ಹಾಗೆ. " ಎಂದೆಲ್ಲ ಪ್ರಶಂಸಿಸಿದರು. ಆಗ ಗೀತೆಗೆ ಕೊಂಚ ಸಮಾಧಾನವಾಗಿರಬೇಕು.

ವಿಶ್ವೇಶ್ವರಯ್ಯನೇನೋ ಹೇಳಿದರು " ಮೂರ್ತಿಮಾಸ್ತರ ಮನಸ್ಸು ಹೂವಿನಂತೆ "– ಎಂದು. ಅದು ಹಾಗಿದ್ದುದೇನೋ ನಿಜ. ಆದರೆ ಈಗ ಅದು ಕಲ್ಲಾಗಿತ್ತೆಂದೇ ಹೇಳಬೇಕು. ಎಷ್ಟೋ ಸಲ ತಾನೇಮುಂದಾಗಿ ಹೋಗಿ ಶಿಷ್ಯೆಗೆ ಸಲಹೆಗಳನ್ನೀಯುವುದು, ಅವಳಿಗೆ ತಿಳಿಯದುದನ್ನು ವಿವರಿಸುವುದು, ತನಗೆ ಅರಿತೋ ಅರಿಯದೆಯೋ ಅವಳ ಸಾನ್ನಿಧ್ಯದಲ್ಲಿ ಸುಖವನ್ನನುಭವಿಸುವುದು—ಹೀಗಿದ್ದ ಮೂರ್ತಿ, ಅಂದು ಮಧ್ಯಾಹ್ನ ಅವಳನ್ನು ಹಿಂದೆ ಕಳುಹಿಸಬೇಕಾದರೆ, ಅವನ ಮನಸ್ಸು ಹೂವಾಗಿದ್ದರೆ ಸಾಧ್ಯವಿತ್ತೆ? ಆತ್ಮಾಸಕ್ತಿಯೇ ತನ್ನ ಮನೋವ್ಯಾಕುಲಕ್ಕೆ ಕಾರಣವಾಯಿತು. ಇನ್ನು ಮುಂದೆ ಯಾರ ಕುರಿತೂ ಅತಿಯಾಗಿ ತಲೆಗೆ ಹಚ್ಚಿಕೊಳ್ಳಬಾರದು. ಮುಖ್ಯವಾಗಿ ಗೀತೆಯನ್ನಂತೂ ಮರೆಯಲಿಕ್ಕೇ ಪ್ರಯತ್ನಿಸಬೇಕು. ಶಾಲೆಯಲ್ಲಿ ತಾನು ಉಳಿದಿರುವ ದಿನಗಳನ್ನು, ಯಾರಗೊಡವೆಯೂ ಇಲ್ಲದೆ ಗಂಭೀರವಾಗಿ ಕಳೆದರೆ ಸಾಕು— ಎಂಬುದು ಅವನ ನಿರ್ಧಾರವಾಗಿತ್ತು. ಗೀತೆ ಪಾಠ ಕೇಳಲು ಬಂದಾಗ, ಆ ಸಲಿಗೆ ಅವನಿಗೆ ಬೇಡವೆನ್ನಿಸಿತು.

ವಿಶ್ವೇಶ್ವರಯ್ಯ ಆ ದಿನ ರಾತ್ರಿ ಹಾಸ್ಟಲಿಗೆ ಹೋದರು. ಅವರು ಆ ರೀತಿ ಆಗಾಗ ಹೋಗಿ ಮೂರ್ತಿಯೊಡನೆ ಮಾತುಕತೆಯಾಡಿ ಬರುತ್ತಿದ್ದದುಂಟು. ಮೂರ್ತಿ ಇಂದು ಅವರನ್ನು ಎಂದಿನಂತೆ ಆದರದಿಂದ ಬರಮಾಡಿಕೊಂಡನಾದರೂ, ಅವನ ಮುಖದಲ್ಲಿ ಪ್ರಸನ್ನತೆಯಿರಲಿಲ್ಲ. ಬದಲಾಗಿ ಅವನು ಗಂಭೀರನಾಗಿದ್ದನು. ವಿಶ್ವೇಶ್ವರಯ್ಯ ನಾಟಕದ ಪ್ರಸ್ತಾಪವನ್ನೆತ್ತಲಿಲ್ಲ. ಆ ಮಾತು ಈ ಮಾತು ಆಡಿ, ಮಗಳ ವ್ಯಾಸಂಗ ಕೊನೆಗೊಳ್ಳುವುದರ ಕುರಿತು ಪ್ರಸ್ತಾಪಿಸಿದರು. ಹಾಗೆಯೇ ಮೂರ್ತಿಯ ಭವಿಷ್ಯದ ಕುರಿತೂ ಮಾತು ಬಂತು. ವಿಶ್ವೇಶ್ವರಯ್ಯ ನಿಧಾನವಾಗಿ ಹೇಳಿದರು—

ಬಾಯೋಟೋನಾ
ಇದರ ಸೇವನೆಯಿಂದ
ಮಕ್ಕಳು ಮೊದಲ್ಗೊಂಡು ಮುದುಕರ ವರೆಗೆ ಸ್ತ್ರೀಪುರುಷರು ಇದನ್ನು ಸೇವಿಸಬಹುದು. ಮಿದುಳಿಗೂ ಜೀವಾಣುಗಳಿಗೂ ಬಲವನ್ನೂ ಆರೋಗ್ಯವನ್ನೂ ಕೊಡುವ ಉತ್ತಮ ಉಪಾಯವೆಂದರೆ ' **ಬಾಯೋಟೋನಾ** ' ಸೇವಿಸುವದೇ ಆಗಿದೆ. ೪೦ ದಿವಸ ಸಾಕಾಗುವ ಬಾಟ್ಲಿಯ ಬೆಲೆ ರೂ. ೨ ಟಿ. ಖರ್ಚುಬೇರೆ. ಸೂಚಿಪತ್ರಪಡೆಯಬಹುದು.

ROY & CO. BOMBAY 2.

ಚಿತ್ರಕಲಾ ಪ್ರವೇಶ

೩ನೆಯ ಆವೃತ್ತಿ

ಅಚ್ಚಾಗಿ ಸಿದ್ಧವಾಗಿದೆ.

ಬೇಕಾಗಿರುವವರು

ಬೇಗನೆ ಬೇಡಿಕೆ ಕಳುಹಿರಿ !

ಬರೆದವರು :

ಶ್ರೀ. ಜಿ. ಎಸ್. ಹುದ್ದಾರ

" ಮಾರ್ಚಿಗೆ ಹೇಗೂ ಪರೀಕ್ಷೆ ಮುಗಿಯುತ್ತದೆ, ವೈಶಾಖಮಾಸದಲ್ಲಿ ಒಂದು ಶುಭಕೆಲಸ ನಡೆಯಲಿ ? "

" ಸಂತೋಷ"–ಏನೂ ಅರಿಯದವನಂತೆ ಮೂರ್ತಿ ಹೇಳಿದನು.

" ನಿಮಗೂ ಒಪ್ಪಿಗೆ ತಾನೆ ? "

" ನನ್ನದೇನು ಒಪ್ಪಿಗೆ ? "

" ವರ ಒಪ್ಪುವುದೇ ಮುಖ್ಯ ತಾನೆ ? "–ಎಂದು ನಕ್ಕರು ವಿಶ್ವೇಶ್ವರಯ್ಯ.

" ಹೋ, ಆ ಅರ್ಥದಲ್ಲಿ ಹೇಳಿದಿರಾ ? ಕ್ಷಮಿಸಿ. ನನಗೆ ಸದ್ಯಕ್ಕಂತೂ ಲಗ್ನದ ಯೋಚನೆಯಿಲ್ಲ. ರಜಾ ಪ್ರಾರಂಭವಾದೊಡನೆ ಮದರಾಸಿಗೆ ಹೋಗೋಣವೆಂದಿದ್ದೇನೆ "

ವಿಶ್ವೇಶ್ವರಯ್ಯ ವಿಸ್ಮಿತರಾದರು. ಮೂರ್ತಿಯ ಹೊಸ ಯೋಜನೆಯ ಕುರುಹು ಕೂಡ ಅವರಿಗೆ ತಿಳಿದಿರಲಿಲ್ಲ. ಅವರು ಕೇಳಿದರು—

" ಯಾವಾಗಿಂದ ಮೂರ್ತಿಗಳಿಗೆ ಈ ಹೊಸ ನಿರ್ಧಾರ ? "

" ಮೊದಲಿಂದಲೇ ಇದ್ದುದೇ ! "— ಮೂರ್ತಿ ಆರಾಮವಾಗಿ ಉತ್ತರಿಸಿದನು.

" ಹಾಗೇನು ! "

ವಿಶ್ವೇಶ್ವರಯ್ಯನವರಿಗೆ ಹಾಗೆನಿಸಲಿಲ್ಲ. ಹಿಂದೆಲ್ಲ ವಿವಾಹದ ಪ್ರಶ್ನೆ ಬಂದಾಗ ನರಸಿಂಹಮೂರ್ತಿ ಆಶಾದಾಯಕವಾಗಿಯೇ ಉತ್ತರಿಸುತ್ತಿದ್ದನು. ಅವರೆಂದರು :

" ಹಾಗಾದರೆ ನನ್ನ ಆಶೆ ನೆರವೇರುವುದಿಲ್ಲವೆನ್ನಿ ?

"ಛೇ, ಹಾಗೇನು ಬಂತು! ಆರೂಪ-ಗುಣಗಳೆಲ್ಲ ಯಾವನಾದರೊಬ್ಬ ಭಾಗ್ಯಶಾಲಿಗೇ ಲಭಿಸಬೇಕು. ಎಂದ ಮೇಲೆ ನಿಮ್ಮ ಆಶೆ ನೆರವೇರದಿರುವ ಮಾತೆಲ್ಲಿ ಬಂತು ವಿಶ್ವೇಶ್ವರಯ್ಯನವರೆ ?"

"ನಿಮಗೇ ಅವು ಸಲ್ಲುವುದಾದರೆ ನಾನು ಭಾಗ್ಯಶಾಲಿಯೆಂದುಕೊಳ್ಳುತ್ತಿದ್ದೆ."

"ಆ ಮಾತು ಬಿಡಿ.... ನಾನು.... ಗರೀಬ...."

ಹುಳಿಗೊಂಡ ಮನಸ್ಸಿನಿಂದ ಬಂದ ಮಾತದು. ವಿಶ್ವೇಶ್ವರಯ್ಯನವರು ತುಂಬ ನೊಂದರು. "ಹಾಗೇಕೆನ್ನುವಿರಿ ಮೂರ್ತಿಗಳೇ?"— ಎನ್ನುತ್ತಾ ಎದ್ದು ನಿಂತರು. " ಯಾರು ಗರೀಬರು ಯಾರು ಶ್ರೀಮಂತರು ಎಂಬುದನ್ನು ಪರಮಾತ್ಮನೇ ನೋಡಬೇಕು. ಆದರೆ ಒಂದು ಮಾತು ಹೇಳುತ್ತೇನೆ— ತಿಳಿಯದ ಹುಡುಗಿ; ಹೇಳುವವರಿಲ್ಲ, ಏನಾದರೂ ವ್ಯತಿರಿಕ್ತವಾಗಿ ನಡೆದುಕೊಂಡಿದ್ದಿದ್ದರೆ ಕ್ಷಮಿಸಿಬಿಡಿ. ನನಗಂತೂ ಯಾವ ವಿಚಾರವೂ ತಿಳಿದಿರಲಿಲ್ಲ!" ಎಂದು ಹೊರಟರು.

"ಕ್ಷಮಿಸಲಿಕ್ಕೇನಿದೆ ಸ್ವಾಮಿ. ಹಾಗೆ ನೋಡಿದರೆ ನಾನೇ ಕ್ಷಮೆ ಕೇಳಬೇಕು ಎಂದುಕೊಂಡಿದ್ದೆ— ನಾಟಕದ ವಿಚಾರಕ್ಕೂ ನೀವು ಪ್ರಸ್ತಾಪಿಸಿದ ವಿಷಯಕ್ಕೆ ನಾನು ಕೊಟ್ಟ ಉತ್ತರಕ್ಕೂ ಸಂಬಂಧವೇ ಇಲ್ಲ, ವಿಶ್ವೇಶ್ವರಯ್ಯನವರೆ !" ಎನ್ನುತ್ತ ಮೂರ್ತಿಯೂ ಅವರನ್ನು ಬೀಳ್ಕೊಳ್ಳಲು ಎದ್ದುನಿಂತನು.

ವಿಶ್ವೇಶ್ವರಯ್ಯನವರು " ಎಲ್ಲವೂ ದೇವರಿಗೆ ಗೊತ್ತು "— ಎಂದುಬಿಟ್ಟು ಹೊರಟು ಹೋದರು.

ಮೂರ್ತಿಯ ಮನಸ್ಸು ಒಂದು ಕ್ಷಣ ಹೊಯ್ದಾಟಕ್ಕೆ ಸಿಲುಕಿತು. ತನ್ನ ಕಾಠಿಣ್ಯಕ್ಕೆ ತಾನೇ ಕೊರಗಿದನು. 'ಒಂದು ಬಗೆಯಲ್ಲಿ ಅವರಿಗೂ ವಂಚನೆ ಮಾಡಿದೆ. ಆತ್ಮವಂಚನೆಯನ್ನೂ ಮಾಡಿಕೊಂಡೆ. ಕೇವಲ ಒಂದು ತಿಂಗಳೊಳಗೆ ಎಷ್ಟೊಂದು ಅಚಾತುರ್ಯವನ್ನು ತೋರಿಸಿದೆ ? ಅವಿವೇಕಿಯಾದೆ!' ಎಂದೆಲ್ಲ ಮತ್ತೆ ಮತ್ತೆ ತನ್ನನ್ನು ನಿಂದಿಸಿಕೊಂಡನು. ಇವೆಲ್ಲಕ್ಕೂ ತನ್ನ ಸ್ವಾರ್ಥವೇ ಮೂಲ. ಆಗಿಹೋದುದನ್ನು ಅಳಿಸಲು ಸಾಧ್ಯವಿಲ್ಲ. ಆದರೆ ಮುಂದಾದರೂ ಸ್ವಾರ್ಥವನ್ನುಳಿದು ಬಾಳದಿದ್ದರೆ ತಾನು ಮನುಷ್ಯನೆ ?— ಎಂದು ಕಟುವಾಗಿ ಟೀಕಿಸಿಕೊಂಡನು. ಇನ್ನು ಗೀತೆ ನನ್ನ ಶಿಷ್ಯೆಯೆಂಬುದನ್ನು ಯಾಕೆ ಮರೆಯಬೇಕು ? ನಾಳೆಯಿಂದ ಪಾಠಕೇಳಲು ಬಂದರೆ ನಿಸ್ಸಂಕೋಚವಾಗಿ ಹೇಳಿಕೊಡುವೆ. ಆಕೆಯದೂ ವ್ಯಾಸಂಗದ ಕೊನೆಯ ವರ್ಷ. ಅವಳು ಉತ್ತಮರೀತಿಯಲ್ಲಿ ಉತ್ತೀರ್ಣಳಾಗಬೇಕು. ಅದಕ್ಕಾಗಿ ನನ್ನಿಂದಾಗುವ ಸಹಕಾರ ನೀಡುವೆ; ಆದರೆ, ಹಿಂದಿನಂತಲ್ಲ— ಬರಿಯ ಕರ್ತವ್ಯಬುದ್ಧಿಯಿಂದ— ಹೀಗೆಲ್ಲ ಯೋಚಿಸಿ ಮೂರ್ತಿ ಸಮಾಧಾನತಂದುಕೊಂಡನು.

ಆದರೆ ಗೀತೆಯ ಮುಖದ ಗೆಲವು ಅಂದಿನಿಂದ ಮಾಯವಾಯಿತು. ಯಾವಾಗಲೂ ಮೌನವಾಗಿರುವಳು. ತರಗತಿಯಲ್ಲಿ ಕೇಳಿದ ಪ್ರಶ್ನೆಗಳಿಗೆ ಮಾತ್ರ ಉತ್ತರ ಕೊಡುವಳು. ಅನಂತರ ಎಂದೂ ಅವಳು ಮೂರ್ತಿಯೊಡನೆ ಏನನ್ನೂ ಆಡಿದ್ದಿಲ್ಲ. ಆಗಲೆ ತನ್ನ ಮದುವೆಯ ಕುರಿತು ತಂದೆ ಯೋಚನೆಹಚ್ಚಿಕೊಂಡದ್ದೂ ಅವಳಿಗೆ ತಿಳಿದುಹೋಗಿತ್ತು. ಅವರಿಚ್ಛೆಯಲ್ಲಿ ಮೂರ್ತಿ ತನ್ನ ಪತಿಯಾಗಬೇಕೆಂದಿದ್ದುದೂ, ಮೂರ್ತಿ ಅದಕ್ಕೆ ಒಪ್ಪದೆಹೋದುದೂ, ಅವಳಿಗೆ ತಿಳಿಯಬಂದಿತ್ತು. ತನ್ನಿಂದಾಗಿ ಮೂರ್ತಿ ದೂರವಾಗಿಬಿಡುತ್ತಾನೆಂಬ ಕೊರಗು ಸದಾ ಅವಳಲ್ಲಿ ಪ್ರಜ್ವಲವಾಗಿ ನಿಂತಿತು. ನಡುವೆ ಕಾಲೇಜು ಓದಬೇಕೆಂಬ ಆಶೆಯೆಲ್ಲ ಬರಿಯ ಕನಸಾಗಿ ಉಳಿಯುವುದರ ವಿಚಾರದಲ್ಲಿ ಅವಳಿಗೆ ಅನುಮಾನಕ್ಕೆ ಎಡೆಯಿರಲಿಲ್ಲ. ತಾನು ಏಕಾಂಗಿ ಬದುಕಬೇಕು ?— ಎಂದು ಆಗಾಗ ಅಂದುಕೊಳ್ಳುವಷ್ಟು ಕುಗ್ಗಿಹೋಗಿದ್ದಳಾಕೆ.

ಮಾರ್ಚ್ ತಿಂಗಳಲ್ಲಿ ಗೀತೆಯ ಪರೀಕ್ಷೆಗಳು ಮುಗಿದುವು. ಅನಂತರ ಅವಳು ಮನೆಯಲ್ಲಿಯೇ ಉಳಿದಳು. ಮೂರ್ತಿಗೆ ರಜಾ ಪ್ರಾರಂಭವಾಗಲು ಇನ್ನೂ ಮೂರುವಾರವಿತ್ತು. ಗೀತೆಯು ಶಾಲೆಗೆ ಬಾರದೆ ಇದ್ದ ಒಂದೊಂದು ದಿನವೂ ಅವನಿಗೆ ಅಸಹನೀಯವೆನಿಸಿತು. ಅವಳನ್ನು ತನ್ನ ಮನಸ್ಸಿನಿಂದ ದೂರಮಾಡಲು ಯತ್ನಿಸಿದಷ್ಟೂ ಅವಳ ನೆನಪು ಹೆಚ್ಚು ಹೆಚ್ಚಾಗಿ ಅವನನ್ನು ಕಾಡತೊಡಗಿತು. ಈ ಊರನ್ನು ಬಿಡದೆ ತನಗೆ ಸಮಾಧಾನ ಶಾಂತಿಗಳು ದೊರೆಯವು— ಎಂದುಕೊಂಡನು.

ರಜಾ ಪ್ರಾರಂಭವಾಯಿತು. ಮೂರ್ತಿ ಮದರಾಸಿಗೆ ಹಿಂದಿರುಗುವ ವಿಚಾರ ಎಲ್ಲರಿಗೂ ತಿಳಿದುಹೋಗಿತ್ತು. ಗೆಳೆಯರನೇಕರು ಯತ್ನಿಸಿದರೂ ಅವನ ನಿರ್ಧಾರವನ್ನು ಸಡಿಲಿಸಲು ಸಮರ್ಥರಾಗಲಿಲ್ಲ. ಅವನು ಹೊರಡುವ ಮುನ್ನ ಸಂತೋಷಕೂಟವೊಂದನ್ನು ಏರ್ಪಡಿಸಿದ್ದರು. ಆಗ ವಿಶ್ವೇಶ್ವರಯ್ಯನವರೂ ಆಹ್ವಾನಿತರಾಗಿ ಬಂದಿದ್ದರು. ಕೂಟ ಮುಗಿದು ಎಲ್ಲರನ್ನೂ ಬೀಳ್ಕೊಂಡು, ಮೂರ್ತಿ ವಿಶ್ವೇಶ್ವರಯ್ಯನವರೊಡನೆ ಅವರ ಮನೆಗೆ ಹೋದನು. ಮೂರ್ತಿಯ ನಿರ್ಧಾರದಿಂದುಂಟಾದ ಬೇಸರು ಅವರಲ್ಲಿ ಬಹಳ ದಿನ ಉಳಿಯಲಿಲ್ಲ. ಅವರು ಜೀವನವೆಂದರೇನೆಂದು ಚೆನ್ನಾಗಿ ಬಲ್ಲರು. ನಿರಾಶೆಗೊಳ್ಳುವವರಲ್ಲ; ಆಘಾತಪಡುವವರಲ್ಲ. ಅನಂತರ ಮೂರ್ತಿಯನ್ನು ಕಂಡಾಗಲೆಲ್ಲ ಮೊದಲಿನಷ್ಟೇ ಆದರದಿಂದ ಮಾತನಾಡಿಸುವರು. ಮೂರ್ತಿ ತಮ್ಮನ್ನಗಲಿ ಹೋಗುತ್ತಾನಾದುದರಿಂದ, ಆ ರಾತ್ರಿ ಭೋಜನಕ್ಕೆ ತಮ್ಮಲ್ಲಿ ಉಳಿಯಬೇಕೆಂದು ಕೇಳಿಕೊಂಡಿದ್ದರು; ಮೂರ್ತಿಯೂ ಒಪ್ಪಿಕೊಂಡಿದ್ದನು.

ಮನೆಗೆ ಮೂರ್ತಿ ಬಂದುದು ತಿಳಿದೂ ಗೀತೆ ಮುಂದೆ ಬರಲಿಲ್ಲ. ತಂದೆ ಮಗಳನ್ನು ಕರೆದರು. "ನೋಡು ಗೀತಾ, ಮೂರ್ತಿ ಮಾಸ್ಟರರು ಬಂದಿದ್ದಾರೆ!" ಆಗಲೂ ಅವಳು ಬರಲಿಲ್ಲ. ತಂದೆ ಸುಮ್ಮನಾದರು. ಅವರು ಒಳಗೆ ಹೋಗಿ ನೋಡಿದ್ದರೆ, ಗೀತೆಯ ಮೇಜಿಗೆ ಕಣ್ಣೀರ ಸ್ನಾನವಾಗುತ್ತಿರುವುದನ್ನು ಕಾಣುತ್ತಿದ್ದರು.

ಊಟಕ್ಕೆ ಕುಳಿತಾಗಲೇ ಮೂರ್ತಿ ಗೀತೆಯನ್ನು ಕಂಡಿದ್ದು. ಅವಳು ತಲೆ ತಗ್ಗಿಸಿ ಮುದುಡಿ ಕುಳಿತಿದ್ದಳು. ಅವಳನ್ನು ಕಂಡಾಗ, ಮೂರ್ತಿಗೆ ಇದ್ದ ಹರ್ಷವೂ ಅಡಗಿ ಹೋದಂತಾಯಿತು. ಮೌನವಾಗಿ ಊಟ ಸಾಗಿತು. ಮಾತನಾಡಿದ್ದಿದ್ದರೆ ವಿಶ್ವೇಶ್ವರಯ್ಯನವರೊಬ್ಬರೇ ಎನ್ನಬೇಕು. ಅವರು ಒಂದೆರಡು ವಿನೋದದ ಮಾತುಗಳನ್ನಾಡಿದರೂ, ಮೂರ್ತಿಯ ಮುಖದಲ್ಲಾಗಲೀ ಮಗಳ ಮುಖದಲ್ಲಾಗಲೀ ನಗುವೆಂಬುದು ಮೂಡಲಿಲ್ಲ.

ಊಟವಾದ ಮೇಲೆ ಗೆಳೆಯರಿಬ್ಬರೂ ಸ್ವಲ್ಪ ಹೊತ್ತು ಮಾತನಾಡುತ್ತ ಕುಳಿತರು. ಮತ್ತೆಲ್ಲಿ ಮದುವೆಯ ಮಾತು ಬರುವುದೋ ಎಂದು ಮೂರ್ತಿ ಶಂಕಿಸಿದರೂ, ವಿಶ್ವೇಶ್ವರಯ್ಯ ಅದನ್ನೆತ್ತಲಿಲ್ಲ. "ಮುಂದೇನು ಮಾಡುವಿರಿ?" ಎಂದು ಮಾತ್ರ ಪ್ರಶ್ನಿಸಿದರು. ಮೂರ್ತಿ ತಾನು ಪತ್ರಿಕೋದ್ಯಮಿಯಾಗಬೇಕೆಂದಿರುವ ಅಭಿಲಾಷೆಯನ್ನು ತಿಳಿಸಿದನು. "ನಮ್ಮನ್ನು ಮರೆಯುವುದಿಲ್ಲ ತಾನೆ?" ಎಂದರು ವಿಶ್ವೇಶ್ವರಯ್ಯನವರು. "ಛೆ, ಸಾಧ್ಯವುಂಟೆ!" ಎಂದನು ಮೂರ್ತಿ.

ಅಷ್ಟರಲ್ಲಿ ಗೀತೆ ಇಬ್ಬರಿಗೂ ಹಾಲು ತಂದಿರಿಸಿದಳು. ಹಿಂದಿರುಗುವುದರಲ್ಲಿದ್ದಳು. ಆಗ ಮೂರ್ತಿ "ಗೀತಾ" ಎಂದು ತನ್ನ ಹಿಂದಿನ ಮಮತೆಯ ಧ್ವನಿಯಲ್ಲಿ ಕರೆದನು. ಗೀತೆ ನಿಂತಳು. 'ಇಗೋ' ಎಂದು ತಾನು ತಂದಿದ್ದ ಗ್ರಂಥವನ್ನು ಅವಳ ಕಡೆ ನೀಡಿದನು. ಅದನ್ನು ಅವಳು ಓದಬೇಕೆಂದು ಹಿಂದೊಮ್ಮೆ ಆಕೆ ಸೂಚಿಸಿದ್ದಳು. ಪುಸ್ತಕವನ್ನು ತೆಗೆದುಕೊಂಡ ಗೀತೆ ಅಲ್ಲಿಯೇ ನಿಂತಳು. ಅವಳ ಮುಖದಲ್ಲಿ ಯಾವ ಭಾವವೂ ಇರಲಿಲ್ಲ. ಗೆಲವು ತುಂಬಿ ತುಳುಕುತ್ತಿದ್ದ ಆ ಮುಖದಲ್ಲಿನ ಭಾವಶೂನ್ಯತೆಯನ್ನು, ಹೆಚ್ಚು ಹೊತ್ತು ಕಾಣಲು ಮೂರ್ತಿಗೆ ಸಾಧ್ಯವಾಗಲಿಲ್ಲ. ಅವನು ಹಾಲನ್ನು ಒಂದೇ ಸಲಕ್ಕೆ ಸುರುವಿಕೊಂಡನು. ಇನ್ನು ಹೋಗಿ ನಾಳಿನ ಪ್ರಯಾಣಕ್ಕೆ ಸಿದ್ಧಮಾಡಬೇಕು—ಎನ್ನುತ್ತಾ ಎದ್ದು ನಿಂತನು.

"ಮತ್ತೆ, ನಿಮ್ಮ ವೀಣೆ ಇಲ್ಲೇ ಇದೆಯಲ್ಲ!" ಎಂದರು ವಿಶ್ವೇಶ್ವರಯ್ಯನವರು.

"ಇರಲಿ, ಚಿಂತೆಯಿಲ್ಲ! ಬೇಕಾದಾಗ ತರಿಸಿಕೊಳ್ಳುತ್ತೇನೆ!"—ಎಂದ ಮೂರ್ತಿ.

"ಅಮರಕೋಶದ ಪ್ರತಿ ಒಂದು ಬೇಕೆಂದು ಹೇಳುತ್ತಿದ್ದಿರಿ, ತರಿಸಿಟ್ಟಿದ್ದೇನೆ. ತಕ್ಕೊಂಡು ಹೋಗುವಿರಂತೆ"—ಎನ್ನುತ್ತಾ ವಿಶ್ವೇಶ್ವರಯ್ಯ ಒಳಗೆ ಹೋದರು. ಗೀತೆ ಅಲ್ಲಿಯೇ ನಿಂತಿದ್ದಳು. ಇಬ್ಬರೂ ಒಬ್ಬರನ್ನೊಬ್ಬರು ದಿಟ್ಟಿಸಿದರು.

"ಗೀತಾ" ಎಂದ ಮೂರ್ತಿ.

ತುಟಿಯೊಡೆದು "ಸರ್" ಎಂದಳು ಗೀತೆ.

ತೀರ ದೈನ್ಯದಿಂದ– "ಕ್ಷಮಿಸು ಗೀತಾ"– ಎಂದನು ಮೂರ್ತಿ.

ಗೀತೆಗೆ ಉಕ್ಕಿಬಂದ ಉದ್ವೇಗವನ್ನು ತಡೆಯಲಾಗಲಿಲ್ಲ. ಅವಳ ಸೆರಗು ಕಣ್ಣಿನ ಕಡೆಗೆ ಹೋಯಿತು.

ಅಷ್ಟರಲ್ಲಿ ವಿಶ್ವೇಶ್ವರಯ್ಯನವರು ಬಂದರು. ಪುಸ್ತಕವನ್ನು ಮೂರ್ತಿಗೆ ಕೊಟ್ಟರು. ಮೂರ್ತಿ ಹೊರಟನು. ವಿಶ್ವೇಶ್ವರಯ್ಯನವರು ಬೀಳ್ಕೊಡಲು ಅವನನ್ನು ಹಿಂಬಾಲಿಸಿದರು. ಮೂರ್ತಿ 'ಹೋಗಿ ಬರುತ್ತೇನಮ್ಮಾ' ಎನ್ನುವಾಗ, ಗೀತೆ ಬಿಕ್ಕಿಬಿಕ್ಕಿ ಅಳುತ್ತಿದ್ದಳು. ತಂದೆ ದಿಗಿಲಾದರು. ಮೂರ್ತಿಗೆ ಭೂಮಿಯೇ ಸೀಳು ಬಿದ್ದು ತನ್ನನ್ನು ನುಂಗಿದರಾಗದೆ ಎನ್ನಿಸಿತು. ಹೇಗೂ ಅವನು ಎಲ್ಲರನ್ನೂ ಬೀಳ್ಕೊಂಡು ಹೊರಬಿದ್ದನು. ಅವನ ಎದೆಯ ಭಾರ ಅಸಹನೀಯವಾಗಿತ್ತು. ಹುಡುಗಿಯ ಹೃದಯ ಅಷ್ಟೊಂದು ಕೋಮಲವಾಗಿರಬಹುದೆಂದು ಅವನು ನಿರೀಕ್ಷಿಸಿರಲಿಲ್ಲ. ಅಡಿಗಡಿಗೆ ತಾನೇನೋ ಕಳೆದುಕೊಳ್ಳುತ್ತಿದ್ದಂತೆ ಅವನಿಗೆ ಭಾಸವಾಯಿತು. ಎಲ್ಲವನ್ನೂ ಮರೆತುಬಿಡಬೇಕು– ಮರೆತುಬಿಡಬೇಕು– ಎಂದು ಮನಸ್ಸಿನಲ್ಲಿ ಎಂದುಕೊಂಡಂತೆಯೂ, ಕಣ್ಣೀರು ತುಂಬಿದ ಆ ಕಣ್ಣುಗಳು ಮತ್ತು ಅವುಗಳ ಕರುಣಾಜನಕವಾದ ನೋಟ ಅವನಲ್ಲಿ ಅಧೀರತೆಯನ್ನುಂಟುಮಾಡತೊಡಗಿತು. ಮಾರನೆಯ ದಿನ ಬಸ್ಸು ಹತ್ತುವವರೆಗಿನ ಒಂದೊಂದು ನಿಮಿಷವೂ, ಒಂದೊಂದು ಯುಗದಂತೆ ಅನ್ನಿಸಿದವು ಮೂರ್ತಿಗೆ.

ಬಸ್ಸು ಮುಂದೆ ಸಾಗಿದಂತೆ, ಊರು ಹಿಂದೆ ಹಿಂದಾಗುತ್ತ ಉಳಿದಂತೆ, ತನ್ನ ಜೀವವನ್ನೇ ಬಿಟ್ಟು ಹೋಗುತ್ತಿರುವೆನೋ ಎಂಬಷ್ಟು ವೇದನೆಯುಂಟಾಯಿತವನಿಗೆ. ಊರಿನಲ್ಲಿ ತನ್ನ ಎರಡು ವರ್ಷದ ಬಾಳು ಬರಿಯ ಒಂದು ನಾಟಕವೋ ಎಂಬಂತಾಯಿತು.

ಪ್ರಯಾಣ ಮುಂದುವರಿದಂತೆಲ್ಲ ಯೋಚನೆಗಳು ಮುಂದಿನ ಕರ್ತವ್ಯಗಳ ಕಡೆಗೆ ಹೊರಳಿದುವು.

* * * *

ನರಸಿಂಹಮೂರ್ತಿ ತನ್ನ ಸಮಾಚಾರವನ್ನು ಹೇಳುತ್ತಲೇ ಇದ್ದನು. ರತ್ನಾಕರನು ಮೌನವಾಗಿ ಕೇಳುತ್ತಲಿದ್ದನು. ಎಲ್ಲಾದರೊಮ್ಮೆ ಹೂಗುಟ್ಟುವ; ನಿಟ್ಟುಸಿರು ಕರೆಯುವ; ಆದರೆ ನಡುವೆ ಬಾಯಿಹಾಕಲಿಲ್ಲ. ನರಸಿಂಹಮೂರ್ತಿಗೆ ತಾನು ಮಾತುಂಗದ ಹೋಟಲಿನಲ್ಲಿರುವುದರ ಜ್ಞಾನವೇ ಇರಲಿಲ್ಲ. ಕಾಲವೆಷ್ಟು ಕಳೆಯಿತೆಂಬುದರ ಅರಿವು ಇಬ್ಬರಿಗೂ ಇರಲಿಲ್ಲ.

"ಈ ಎರಡು ವರ್ಷಗಳ ನಾಟಕ ಹೀಗೆ ವಿಷಾದಾಂತವಾಗುವುದೆಂದು ನಾನು ಕನಸಿನಲ್ಲಿಯೂ ಎಣಿಸಿರಲಿಲ್ಲ. ರತ್ನಾಕರರಾವ್!"— ಎಂದನು ಮೂರ್ತಿ.

"ದೈವವು ನಿಮ್ಮ ಮದುವೆಯ ಸಮಸ್ಯೆಯನ್ನು ಬಗೆಹರಿಸಿದ ರೀತಿ ಕ್ರೂರವಾದುದೆನ್ನುತ್ತೇನೆ. ಮೂರ್ತಿಗಳೆ!"

"ನನಗೆ ಹಾಗೆನ್ನಿಸುವುದಿಲ್ಲ. ದೈವವೇನು ಮಾಡೀತು? ಆ ನಾಟಕ ವಿಷಾದಾಂತವಾದುದಕ್ಕೆ ಹೊಣೆಗಾರಿಕೆಯೆಲ್ಲ ನನ್ನದೇ. ನನ್ನ ಸ್ವಾರ್ಥವೇ ಎಲ್ಲಕ್ಕೂ ಕಾರಣವಾಯಿತು. ನನ್ನ ಜಂಭದಿಂದಲೇ ಅಷ್ಟೊಂದು ಅಚಾತುರ್ಯಗಳು ನಡೆದುವು. ಈಗೆನಿಸುತ್ತದೆ ನನಗೆ— ಆ ಒಂದೆರಡು ತಿಂಗಳಲ್ಲಿ ಸಂಭವಿಸಿದ ಪ್ರಸಂಗಗಳಲ್ಲಿ, ಒಮ್ಮೆಯಾದರೂ ನಾನು ನನ್ನ ಜಂಭವನ್ನು ಅದುಮಿಡಲು ಸಾಧ್ಯವಿದ್ದಿದ್ದರೆ, ಆ ನಾಟಕ ದುಃಖಾಂತವಾಗುತ್ತಿದ್ದಿಲ್ಲ. ಆದರೆ ಕೊನೆತನಕ ನನ್ನ ದುರಭಿಮಾನ ತಗ್ಗಲಿಲ್ಲ. ಯಾವುದೋ ಒಂದು ದುಷ್ಟಶಕ್ತಿ ನನ್ನ ವಿವೇಕವನ್ನು ಮರೆಸಿ, ನನ್ನಲ್ಲಿ ಕಾಠಿಣ್ಯವನ್ನು ತುಂಬಿತು. ಅದರ ಫಲವನ್ನು ಅನುಭವಿಸಿದೆ. ಮದರಾಸು ತಲಪಿದಂದಿನಿಂದ, ನನ್ನ ಮಾನಸಿಕ ಜ್ವರ ಪ್ರಬಲವಾಗಿ, ಮೇ ತಿಂಗಳನ್ನೆಲ್ಲ ಹಾಸಿಗೆಯಲ್ಲಿ ಕಳೆಯಬೇಕಾಯಿತು. ಹೇಗೋ ಬದುಕಿಕೊಂಡೆ. ಪೂರ್ತಿ ಚೇತರಿಸಿಕೊಳ್ಳಲು ಮತ್ತೆರಡು ತಿಂಗಳುಗಳು ಬೇಕಾದುವು. ಮದ್ರಾಸಿನಲ್ಲಿ ಕಳೆದ ಮೂರು ತಿಂಗಳುಗಳು ಕೂಡ ಒಂದು ದುಃಸ್ವಪ್ನದಂತೆನಿಸುತ್ತದೆ. ಆದ್ದರಿಂದಲೇ ಮುಂಬಯಿಗೆ ಹೊರಟು ಬರಬೇಕಾಯಿತು. ಇಲ್ಲಿಗೆ ಬಂದಂದಿನಿಂದ ಯಾಕೋ ಸ್ವಲ್ಪ ಸ್ವಲ್ಪ ಸಮಾಧಾನ ಮೂಡಿದಂತಾಗಿದೆ—" ಮೂರ್ತಿ ಇಷ್ಟು ಹೇಳಿ ಎದ್ದು ಕುಳಿತನು.

"ನನ್ನ ಗಂಟಲೆಲ್ಲ ಆರಿ ಹೋಗಿದೆ; ಒಂದಿಷ್ಟು ನೀರು ಕುಡಿಯದೆ ನಿದ್ರೆ ಬರಲಾರದು!"— ಎಂದನು.

"ಒಂದು ನಿಮಿಷ,— ನೀವು ಮುಂದೆ ಏನಾಯಿತೆಂದು ಹೇಳಲೇ ಇಲ್ಲವಲ್ಲ?"— ಎಂದನು ರತ್ನಾಕರ.

"ಮುಂದೆ?........ ನನ್ನ ವಿಚಾರವಂತು ಹೇಳಿದೆನಲ್ಲ! ಇನ್ನು ಊರಿನ ಸಮಾಚಾರ ಆನಂತರ ನನಗೇನೇನೂ ತಿಳಿಯದು. ನಾನು ಮದರಾಸಿಗೆ ಬಂದ ಒಂದೆರಡು ವಾರದಲ್ಲಿ, ಊರಿನ ಗೆಳೆಯರಿಂದಲೂ ನಾನು ಹೇಳಿದ ವಿಶ್ವೇಶ್ವರಯ್ಯನವರಿಂದಲೂ ಕಾಗದಗಳು ಬಂದಿದ್ದುವು. ಆಗ ನನಗೆ ಕಾಯಿಲೆಯಿಂದ ಕಾಗದ ಬರೆಯುವ ಸ್ಥಿತಿಯಿರಲಿಲ್ಲ. ಚೇತರಿಸಿಕೊಂಡ ಮೇಲೂ ನನಗೆ ಬರೆಯಲು ಮನಸ್ಸಾಗಲಿಲ್ಲ. ಎಲ್ಲವನ್ನೂ ಮರೆಯಬೇಕೆಂಬುದೊಂದೇ ನನ್ನ ಇಚ್ಛೆಯಾಗಿತ್ತು. ಈಗ ನೀವು ಕಾಗದ ಬರೆಯುತ್ತಿರುವುದನ್ನು ಕಂಡು ನನಗೂ ಬರೆಯಬೇಕೆಂದೆನಿಸಿದೆ; ಸಾಧ್ಯವಾದರೆ ನಾಳೆ ಎಲ್ಲರಿಗೂ ಉತ್ತರ ಬರೆಯುತ್ತೇನೆ."



ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್‌ಲ್ಯಾಂಟರ್ನ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್‌
ಗಾಂಧಿಚೌಕ, ಧಾರವಾಡ.

"ಹಾಗೇನು ?...... ನಾಟಕ ವಿಷಾದಾಂತವಾಯಿತೆಂದು ಆ ನಾಟಕ ನಿಮಗೆ ಸಂಬಂಧಿಸಿದ್ದರ ಮಟ್ಟಿಗೆ ಹೇಳಿದಿರಿ. ಮುಂದಿನದನ್ನು ನಾನು ಹೇಳುತ್ತೇನೆ. ಆ ಭಾಗ ನನಗೂ ಸಂಬಂಧಿಸಿದೆ"— ಎಂದು ರತ್ನಾಕರ ಎದ್ದು ಕುಳಿತನು.

"ನಿಮಗೆ ಸಂಬಂಧಿಸಿದ್ದು ?" ಮೂರ್ತಿ ಅಪ್ರತಿಭನಾಗಿ ಕೇಳಿದನು.

"ಹೌದು. ಅದು ನನ್ನ ಕತೆ. ಅದನ್ನೇ ಹೇಳುತ್ತೇನೆ."

ಮೇ ತಿಂಗಳ ಮೊದಲನೆಯ ವಾರದಲ್ಲಿ ರತ್ನಾಕರನು ಮಂಗಳೂರಿಗೆ ಸಮೀಪದ ತನ್ನ ಊರಿಗೆ ಹೋಗಿದ್ದನು. ಅವನ ತಾತ ಅವನಿಗಾಗಿ ಒಂದು ಸಂಬಂಧವನ್ನು ನಿಶ್ಚಯಿಸಿದ್ದರು. ಹುಡುಗಿಯ ರೂಪ, ಗುಣ, ವಿದ್ಯೆಯ ಕುರಿತಾಗಿ ತುಂಬ ಹೊಗಳಿ ಬರೆದಿದ್ದರು. ಒಂದು ಭಾವಚಿತ್ರವನ್ನೂ ಕಳುಹಿಸಿದ್ದರು. ಸಾಲದ್ದಕ್ಕೆ ತನ್ನ ಮನೂ ಕೂಡ ನೆಂಟಸ್ತಿಕೆಯನ್ನು ಅನುಮೋದಿಸಿ ಬರೆದಿದ್ದನು. ಊರಿಗೆ ಬಂದವನು ಹಿರಿಯರೊಡನೆ ಹುಡುಗಿಯನ್ನು ನೋಡಲು ಹೋಗಿದ್ದನು. ಅವರೂರಿಂದ ಅಲ್ಲಿಗೆ ಹದಿನಾಲ್ಕು ಮೈಲುಗಳಿರಬಹುದು. ಹುಡುಗಿಯನ್ನು ಕಂಡು ಅವರಿವರನ್ನು ವಿಚಾರಿಸಿ ಹುಡುಗಿ ಒಪ್ಪಿಗೆಯಾಗಿ, ಲಗ್ನಕ್ಕೆ ದಿನವನ್ನೂ ನಿಶ್ಚಯಿಸಿ ಹಿಂದಿರುಗಿದ್ದರು. ಆದರೆ ಇವರು ಹಿಂದೆ ಬಂದ ಮೂರೇ ದಿನಗಳಲ್ಲಿ ಹುಡುಗಿಯ ತಂದೆಯಿಂದ ಕಾಗದ ಬಂದಿತು. ಅದರಲ್ಲಿ 'ಹುಡುಗಿಗೆ ಮೈ ಚೆನ್ನಾಗಿಲ್ಲ. ಲಗ್ನದ ದಿನವನ್ನು ಮುಂದೂಡಬೇಕಾಗುವುದೋ' ಎಂದು ಶಂಕೆ ಸೂಚಿಸಿದ್ದರು. ಒಡನೆ ರತ್ನಾಕರನ ತಾತ ಹುಡುಗಿಯ ಊರಿಗೆ ಹೋದರು. ಆಗ ಎಲ್ಲ ವಿಚಾರವೂ ತಿಳಿಯಿತು. ಹುಡುಗಿಗೆ ಮತಿಭ್ರಮಣೆಯಾದಂತಾಗಿ, ಮನಬಂದಂತೆ ಮಾತನಾಡುವುದು ಬಡಿದಾಡುವುದು—ಹೀಗೆ ರಂಪವೇ ರಂಪ. ಆದಕ್ಕಾಗಿ ಬಂಧಿಸಿಬಿಟ್ಟಿದ್ದರು. ಬೇಕುಬೇಕಾದ ಚಿಕಿತ್ಸೆಯೇನೋ ನಡೆಯುತ್ತಿತ್ತು. ಒಂದೆರಡು ವಾರಗಳಲ್ಲಿ ಗುಣಹೊಂದಬಹುದು ಎಂದು ತಂದೆ ಆಶೆ ಸೂಚಿಸಿದರು. ಗುಣಹೊಂದಿದ ಮೇಲೆ ಲಗ್ನಕ್ಕೆ ದಿನವನ್ನು ನಿಶ್ಚಯಿಸೋಣ— ಎಂದುಕೊಂಡು ರತ್ನಾಕರನ ತಾತ ಹೊರಟುಬಂದರು. ಆದರೆ ಈ ಸಂಬಂಧ ಆಗದು ಎಂಬುದು ಅವರ ಮನಸ್ಸಿಗೆ ಬಂದುಹೋಗಿತ್ತು. ರತ್ನಾಕರನೊಡನೆ ಹಾಗೆಯೇ ಹೇಳಿದರು. ಆದರೆ ಅವನು ಒಪ್ಪಲಾಗಲಿಲ್ಲ. ಹುಡುಗಿಗೆ ಗುಣವಾಗುವ ತನಕ—ಎಂದರೆ ಕೆಲವು ವಾರಗಳಾದರೂ—ನೋಡಿಕೊಳ್ಳುವುದೇ ನ್ಯಾಯ ಎಂದನು. ಆದರೆ ಅವನು ಆ ತನಕ ಊರಿನಲ್ಲಿ ನಿಲ್ಲುವಂತಿರಲಿಲ್ಲ. ಮುಂಬಯಿಗೆ ಹಿಂದಿರುಗಬೇಕಾಯಿತು. ಮುಂಬಯಿಯಿಂದ ಊರಿನ ಪತ್ರವನ್ನು ನಿರೀಕ್ಷಿಸುತ್ತಲೇ ಇದ್ದನು. ಕೊನೆಗೊಂದು ಪತ್ರ ಬಂದಿತು. ರತ್ನಾಕರನ ವಿವಾಹದ ಏರ್ಪಾಡು ಮುರಿದುಬಿತ್ತು.

"ಏನೆಂದು ಕಾಗದ ಬಂದಿತ್ತು ಸ್ವಾಮಿ ?"— ಎಂದು ಕೇಳಿದ ನರಸಿಂಹಮೂರ್ತಿ.

"ಮನೋವ್ಯಾಧಿಯಿಂದ ಹುಡುಗಿ ನರಳುತ್ತಿದ್ದಾಗಲೇ, ಆಕೆಗೆ ಬೆನ್ನುಫಣಿಯಾಯಿತಂತೆ. ಅದರ ಯಾತನೆ ಕೇಳಬೇಕೆ ? ಒಂದು ಕಡೆ ಅದರ ನರಕ; ಮತ್ತೊಂದೆಡೆ ಚಿತ್ತಭ್ರಾಂತಿ. ಹುಡುಗಿ ಭಾವಿಗೆ ಹಾರಿಕೊಂಡಳಂತೆ. ಅವಳೇ ನಿಮ್ಮ ಗೀತಾದೇವಿ. ನಾನು ಹೋಗಿದ್ದುದು ನಿಮ್ಮೂರಿಗೇ. ಆದ್ದರಿಂದಲೇ ನಿಮ್ಮನ್ನು ಕಂಡಂದಿನಿಂದ, ನೀವು ಆ ಊರವರೆಂದು ತಿಳಿದಂದಿನಿಂದ, ನಿಮ್ಮ ಕೂಡ ಎಲ್ಲವನ್ನೂ ವಿಚಾರಿಸಿಕೊಳ್ಳಬೇಕೆಂದಿದ್ದೆ. ಆದರೆ ನಿಮಗೆ ನಾನೇ ಹೇಳಬೇಕಾಗಿಬಂದಿತು. ನೀವು ಅರ್ಧ ಹೇಳಿ ಮುಗಿಸಿದ ದುರಂತವನ್ನು ನಾನು ಹೇಳಿ ಸಮಾಪ್ತಿಗೊಳಿಸಬೇಕಾಯಿತು. ಇಲ್ಲಿಗೆ ನಮ್ಮಿಬ್ಬರ— ಏಕೆ ಮೂವರ ಕತೆಯೂ ಮುಗಿಯಿತು"— ಉದ್ವೇಗದಿಂದ ಏರುದನಿಯಲ್ಲಿ ಇಷ್ಟು ಹೇಳಿ, ರತ್ನಾಕರನು ದೀಪ ಹೊತ್ತಿಸಿದನು. ತನ್ನ ಸೂಟಕೇಸನ್ನು ತೆರೆದು, ಅದರಿಂದ ಒಂದು ಆಲ್ಬಂ ತೆಗೆದನು. ಅದನ್ನು ತೆರೆದು ನರಸಿಂಹಮೂರ್ತಿಯ ಕೈಯಲ್ಲಿತ್ತು "ನೋಡಿ— ನಿಮ್ಮ ಗೀತಾದೇವಿ"— ಎಂದನು. ಹೂಜೆಯಿಂದ ಒಂದು ಲೋಟಾ ನೀರು ತಂದು ಮೂರ್ತಿಯ ಮುಂದೆ ಹಿಡಿದನು.

ಮೂರ್ತಿ ಶಿಲಾಪ್ರತಿಮೆಯಂತೆ ನಿಂತಿದ್ದನು. ದೀಪದ ಪ್ರಭೆಗೆ ಅವನ ಕಣ್ಣಿಯ ಮೇಲಿಳಿದಿದ್ದ ಅಶ್ರುಧಾರೆಗಳು ಮಿಂಚುತ್ತಿದ್ದುವು. ಅವನು ಆಲ್ಬಂ ಮುಚ್ಚಿ ಲೋಟವನ್ನು ತೆಗೆದುಕೊಂಡು ಗಟಗಟನೆ ನೀರು ಕುಡಿದು, ಹಾಸಿಗೆಯ ಮೇಲೆ ಉರುಳಿಕೊಂಡು ಮುಖವನ್ನು ದಿಂಬಿಗೊತ್ತಿಕೊಂಡನು. ಏನು ಹೇಳಲೂ ತೋಚದೆ ರತ್ನಾಕರನು, ಅವನ ಮಂಚದ ಅಂಚಿನಲ್ಲಿ ಕುಳಿತಿದ್ದನು. ಹೊರಗೆ ಮುಂಬಯಿಯ ಮಳೆ ಒಂದೇಸಮನೆ ಸುರಿಯುತ್ತಿತ್ತು. ಅದರ ಸದ್ದು, ಸೃಷ್ಟಿಯೇ ಶೋಕಗೀತೆಯನ್ನು ಹಾಡುತ್ತಿರುವುದೋ ಎಂಬಂತಿತ್ತು.

ಸಂಗೀತ ಎಂದರೇನು?*

ಪ್ರಿನ್ಸಿಪಾಲ್ ಜಿ. ಬಿ. ಜಠಾರ, ಕೆ. ಇ. ಬೋರ್ಡ್
ಕಾಲೇಜು ಧಾರವಾಡ

卐

'ಆಡುಮುಟ್ಟದ ಗಿಡವಿಲ್ಲ; ಹಾಡುಬಾರದ ಮನುಷ್ಯನಿಲ್ಲ' ಎಂದು ನಮ್ಮ ನಾಡಿನಲ್ಲೊಂದು ಗಾದೆಯಿದೆ. ಹಾಡು ಬಾರದ ಮನುಷ್ಯನಿಲ್ಲವಾದರೂ ಹಾಡಿನ ಶಾಸ್ತ್ರವನ್ನೂ ಚರಿತ್ರೆಯನ್ನೂ ಅರಿತವರು ಅಪೂರ್ವವೆಂದೇ ಹೇಳಬೇಕಾಗುವುದು.

卐

ಸುಖಿನಿ ಸುಖನಿಧಾನಂ ದುಃಖಿತಾನಾಂ ವಿನೋದಃ
ಶ್ರವಣ ಹೃದಯಹಾರೀ ಮನ್ಮಥಸ್ಯಾಗ್ರದೂತಿಃ।
ಅತಿಚತುರಸುಗಮ್ಯೋ ವಲ್ಲಭಃ ಕಾಮಿನೀನಾಂ
ಜಯತಿ ಜಯತಿ ನಾದಃ ಪಂಚಮಶ್ಚೋಪವೇದಃ॥

(ನಾದವು ಸುಖಿಗಳಿಗೆ ಸುಖದ ಖಣಿಯಂತಿರುವುದು. ದುಃಖಿತರಿಗೆ ತಮ್ಮ ದುಃಖವನ್ನು ಮರೆಯಲು ಒಂದು ಸಾಧನೆಯಾಗಿರುವುದು. ಶ್ರೋತೃಗಳ ಮನಸ್ಸನ್ನು ಹರಣಮಾಡಿ ಸೂರೆಗೊಳ್ಳುವುದು. ಮನ್ಮಥನ ಮೊದಲನೆಯ ದೂತನಾಗಿರುವುದು; ಹೆಂಗಳೆಯರಿಗೆ ಅತಿಚತುರ ಹಾಗೂ ಸುಲಭ್ಯನಾದಂತಹ ಪ್ರಿಯಕರನಂತಿರುವುದು. ಅವಿನಾಶವಾದಂತಹ ಜ್ಞಾನಕ್ಕೆ ಅದು ಐದನೆಯ ಹಾದಿಯಾಗಿರುವುದು. ಇಂತಹ ನಾದಕ್ಕೆ ಜಯಜಯಕಾರವು !)

ಪ್ರತಿಯೊಂದು ವ್ಯಕ್ತಿಗೆ ಸಂಗೀತದ ಸಂಬಂಧವು ಬೇರೆ ಬೇರೆ ರೀತಿಯಿಂದ ಬಂದೇ ಬರುವುದು. ಸುಧಾರಿಸಿದ ಜನರಲ್ಲಿ ಸಂಗೀತವು ಹೆಚ್ಚು ಸುಧಾರಿಸಿದ್ದಿರಬಹುದು. ಹಿಂದುಳಿದವರಲ್ಲಿ ರಾಗ ತಾಳ ಮುಂತಾದುವುಗಳ ವ್ಯವಸ್ಥೆಯಿಲ್ಲದೆ, ಹಾಗೆಯೆ ಮೂಲರೂಪದಲ್ಲಿರಬಹುದು; ಆದರೆ ಜಗತ್ತಿನ ಎಲ್ಲ ಭಾಗಗಳಲ್ಲಿಯೂ ಒಂದಿಲ್ಲ ಒಂದು ತರದ ಸಂಗೀತವು ಇದ್ದೇ ಇರುವುದೆಂಬುದು ನಿರ್ವಿವಾದವಾದ ಮಾತು. ಮನುಷ್ಯಜಾತಿಯ ಇತಿಹಾಸವನ್ನು ನೋಡಿದರೆ, ಮನುಷ್ಯನು ಮಾತಿಗಿಂತ ಮೊದಲು ಹಾಡುವುದನ್ನೇ ಪ್ರಾರಂಭಿಸಿರಬೇಕೆಂದು ಊಹಿಸಲು ಆಸ್ಪದವಿದೆ. ಮನುಷ್ಯನು ಮೂಲಸ್ಥಿತಿಯಲ್ಲಿದ್ದಾಗ, ಸೃಷ್ಟಿಯ ಸೌಂದರ್ಯ ನೋಡಿ ಆಶ್ಚರ್ಯಪಟ್ಟಾಗ— ಹೊಟ್ಟೆತುಂಬಿದ ಮೇಲೆ ಆನಂದವಾದಾಗ— ಅವನು ಬೇರೆಬೇರೆ ಧ್ವನಿಗಳನ್ನು ತೆಗೆದು, ಆ ಆ ಭಾವನೆಗಳನ್ನು ವ್ಯಕ್ತಮಾಡಿರಬೇಕು. ಇಂಥ ಕೂಗಾಟವು ಮುಂದೆ ಸಂಸ್ಕಾರಸಿದ್ಧಿಯಿಂದ ಸಂಗೀತವಾಗಿ ಪರಿಣಮಿಸಿತು.

ಅನಿಬದ್ಧ ಹಾಗೂ ನಿಬದ್ಧ ಸಂಗೀತಗಳು—

ಮನುಷ್ಯನು ಬೇರೆ ಬೇರೆ ವಿಕಾರದ ಧ್ವನಿಯಲ್ಲಿ ಏರಿಳಿತಗಳನ್ನು ಮಾರ್ಪಡಿಸಿಕೊಂಡನು. ಅದು ಅವನಿಗೆ ಸೋಜಿಗವೆನಿಸಿತು. ಇಷ್ಟೇ ಅಲ್ಲ, ಅವನ ಮನಸ್ಸಿಗೆ ಹಿಡಿಯಿತು. ಪುನಃ ಪುನಃ ಅವನಿಗೆ ಅದನ್ನು ಕೇಳಬೇಕೆಂಬ ಆಶೆಯಾಯಿತು. ಹೀಗೆ ಮಾಡುತ್ತಾ ಮಾಡುತ್ತಾ ಅವನು ತನ್ನ ಧ್ವನಿಯಲ್ಲಿ ಬೇರೆ ಬೇರೆ ವ್ಯತ್ಯಾಸಗಳನ್ನು ಮಾಡಿಕೊಂಡನು. ಹಾಗೆ ಮಾಡಿಕೊಂಡು ಹಾಡಹತ್ತಿದನು. ಮತ್ತು ಅದನ್ನು ಕೇಳತೊಡಗಿದನು. ಹೀಗೆ ಅವನು ಧ್ವನಿ ವ್ಯತ್ಯಾಸಮಾಡಿಕೊಂಡು ಹಾಡಿದ ಸಂಗೀತವೇ ಮುಂದೆ ಸಂಸ್ಕಾರಗೊಂಡು 'ಆಲಾಪ' ಎಂದು ಹೆಸರನ್ನು ಪಡೆಯಿತು. ಈ ಆಲಾಪಕ್ಕೆ 'ಅನಿಬದ್ಧ' ಸಂಗೀತವೆಂಬ ಹೆಸರು ಬಂದಿತು.

ಮುಂದೆ ಬರುಬರುತ್ತ ಮನುಷ್ಯನು ಮಾತಾಡತೊಡಗಿದನು. ಮತ್ತು ತನ್ನ ಸಂಗೀತಕ್ಕೆ ತಕ್ಕ ಶಬ್ದಗಳನ್ನು ಉಪಯೋಗಿಸತೊಡಗಿದನು. ಇವೇ ಮುಂದೆ ಹಾಡುಗಳಾದುವು. ಇವೆ ಮುಂದೆ ಶಾಸ್ತ್ರದಲ್ಲಿ 'ನಿಬದ್ಧ' ಸಂಗೀತವೆಂದೆನಿಸಿಕೊಂಡುವು.

ದೇವರಲ್ಲಿ ತುಂಬಾ ವಿಶ್ವಾಸವುಳ್ಳ ಹಿಂದೂಜನರು, ಪ್ರತಿಯೊಂದು ವಿದ್ಯೆಯನ್ನು ದೇವರಿಗೆ ಒಯ್ದು ಹಚ್ಚುವರು. ಅದರಂತೆಯೇ ಸಂಗೀತವಿದ್ಯೆಯನ್ನೂ ದೇವರಿಗೆ ಒಯ್ದು ಅರ್ಪಣ ಮಾಡಿದರು. ಪರಮಾತ್ಮನ ಪವಿತ್ರವಾಣಿಯಾದ ಪ್ರಣವ ಧ್ವನಿಯೇ ಸಂಗೀತದ ಮೂಲವೆಂದರು. ಸೂರ್ಯನ ಒಂದು ಶುಭ್ರಕಿರಣವೆ ಏಳು ಬಣ್ಣಗಳನ್ನು ತೋರಿಸಿದಂತೆ, ಪ್ರಣವದ ಓಂಕಾರವೆ ವಾಯುವಿನ ಏರಿಳಿತಗಳಲ್ಲಿ ವಿಕೃತಿಯನ್ನು ಪಡೆದು ಸಪ್ತಸ್ವರಗಳನ್ನು ಹುಟ್ಟಿಸಿತು— ಎಂದು ನಂಬಿದರು. ಎಂತಲೆ

* ಧಾರವಾಡದ ಬಾನುಲಿಕಟ್ಟೆಯವರು ಏರ್ಪಡಿಸಿದ 'ಭಾರತೀಯ ಸಂಗೀತ ಪರಂಪರೆ' ಎಂಬ ಭಾಷಣಮಾಲೆಯಲ್ಲಿಯ ೧ ನೆಯ ಭಾಷಣವಿದು. **ಸಂ. ಜ.**



ಅವರು ಬ್ರಹ್ಮನನ್ನು 'ನಾದಬ್ರಹ್ಮ' ಶಿವನನ್ನು 'ಗಾನಪ್ರಿಯ' ವಿಷ್ಣುವನ್ನು 'ಗಾನಲೋಲ' ಎಂದು ಕರೆದಿದ್ದಾರೆ. ಶ್ರೀಕೃಷ್ಣನು 'ಮದ್ಭಕ್ತಾ ಯತ್ರ ಗಾಯಂತಿ ತತ್ರ ತಿಷ್ಠಾಮಿ ನಾರದ' ಎಂದು ನಾರದನಿಗೆ ಹೇಳಿದ್ದಾನೆ. ಇದರಂತೆಯೆ ಎಲ್ಲ ದೇವತೆಗಳೂ ಸಂಗೀತಪ್ರಿಯರು. ಸರಸ್ವತಿಯೂ ಇದರ ದ್ಯೋತಕವಾಗಿ ಕೈಯಲ್ಲಿ ವೀಣೆಯನ್ನು ಧರಿಸಿದ್ದಾಳೆ. ನಾರದ-ತುಂಬರರಂತೂ ಹುಟ್ಟು ಸಂಗೀತಕಾರರು. ಆದುದರಿಂದಲೇ ಆಧ್ಯಾತ್ಮವಾದಿಗಳಾದ ಭಾರತೀಯರಲ್ಲಿ, ಸಂಗೀತಕ್ಕೆ ಉಚ್ಚತರಗತಿಯ ಸ್ಥಾನವು ಸಿಕ್ಕಿರುವುದು. ಎಂತಲೇ:—

ಅಥನಾದಸ್ಯಚೋತ್ಪತ್ತಿಂ ವಕ್ಷ್ಯೇ ಶಾಸ್ತ್ರವಿವೇಕತಃ |
ಧರ್ಮಾರ್ಥಕಾಮಮೋಕ್ಷಾಣಾಂ ಇದಮೇವೈಕಸಾಧನಂ ||

ಎಂದು ಹೇಳಿದ್ದಾರೆ. ಮತ್ತೆ—

ವೀಣಾವಾದನ ತತ್ತ್ವಜ್ಞಃ ಶ್ರುತಿಜಾತಿ ವಿಶಾರದಃ |
ತಾಲಜ್ಞಶ್ಚಾಪ್ರಯಾಸೇನ ಮೋಕ್ಷಮಾರ್ಗಂ ನಿಯಚ್ಛತಿ ||

ಎಂತಲೂ ಹೇಳಿದ್ದಾರೆ. ಅಪೌರುಷೇಯವೆಂದು ಹೇಳುವ ವೇದಗಳ ಸೂಕ್ತಗಳೆಲ್ಲ ಪರಮಾತ್ಮನ ಹಾಡುಗಳು. ಸೂಕ್ತಗಳನ್ನು ಹಾಡಿತೋರಿಸುವುದಕ್ಕೆ 'ಸಾಮವೇದ' ಎಂಬ ಹೆಸರು ರೂಪುಗೊಂಡಿತು. ಭಾರತೀಯ ಸಂಗೀತದ ಮೂಲತತ್ತ್ವಗಳನ್ನು ಹುಡುಕಬೇಕಾದರೆ, ನಮಗೆ ತೀರ ಪ್ರಾಚೀನವಾಗಿ ಸಿಕ್ಕುವುದು ಸಾಮವೇದದಲ್ಲಿಯೆ. ಸಾಮವೇದದ ಸಂಗೀತದ ಮಹತಿಯನ್ನು ಹೇಳಲಿಕ್ಕೋ ಏನೋ ಶ್ರೀಕೃಷ್ಣನು 'ವೇದಾನಾಂ ಸಾಮವೇದೋಸ್ಮಿ' ಎಂದು ಉದ್ಘೋಷಿಸಿದ್ದಾನೆ. ವೈದಿಕರ ಯಜ್ಞಸಂದರ್ಭಗಳಲ್ಲಿ ಋತ್ವಿಜರು ವೇದದ ಸೂಕ್ತಗಳನ್ನು ಸಂಗೀತವಾಗಿ ಹೇಳುತ್ತಿದ್ದರಂತೆ.

ಇಲ್ಲಿ ಇನ್ನೊಂದು ಮಾತು ಹೇಳುವುದು ಅವಶ್ಯವು 'ಸಂಗೀತ' ಈ ಶಬ್ದದಲ್ಲಿ ಗಾಯನ, ನರ್ತನ, ಹಾಗೂ ವಾದನ ಈ ಮೂರೂ ವಿಷಯಗಳ ಸಮಾವೇಶವಾಗುತ್ತದೆ ಎಂಬುದನ್ನು ನಾವು ಲಕ್ಷ್ಯದಲ್ಲಿಡತಕ್ಕದ್ದು. ಎಂತಲೇ ದೇವಲೋಕದಲ್ಲಿಯೂ ಗಾಯಕರು ಗಂಧರ್ವರು, ನೃತ್ಯಾಂಗನೆಯರು ಅಪ್ಸರೆಯರು, ಮತ್ತು ವಾದಕರು ತುಂಬರರು ಎಂದು ಕರೆಯಲ್ಪಡುತ್ತಾರೆ-ಎನ್ನಬಹುದು.

ಸಂಗೀತಕ್ಕೆ ನಾದವು ಮೂಲಭೂತವಾದದ್ದು. ನಾದದಲ್ಲಿ ಆಹತನಾದ ಮತ್ತು ಅನಾಹತನಾದ ಎಂದು ಎರಡು ವಿಧಗಳಿವೆ. ಅನಾಹತನಾದವೆಂಬುದು ಗುರುಗಳಿಂದ ಉಪದೇಶಿಸಲ್ಪಟ್ಟು, ಮುಕ್ತಿಪಡೆಯುವುದಕ್ಕೋಸ್ಕರ ತಪಸ್ವಿಗಳಿಂದ ಉಪಾಸಿಸಲ್ಪಡುತ್ತದೆ. ಇದರಿಂದ ಲೋಕರಂಜನೆ ಉಂಟಾಗುವುದಿಲ್ಲ. ನಾವು ಲೋಕವ್ಯವಹಾರಕ್ಕಾಗಿ ಉಂಟುಮಾಡುವ ನಾದವೇ ಆಹತನಾದ. ನಾವು ಗಾಯನಮಾಡಿ ಜನರಂಜನಮಾಡುವ ನಾದವೇ ಇದು.

ಗಾಯನವೆಂದರೆ ಬಾಯಿಂದ ಹಾಡುವುದು. ವಾದ್ಯಸಂಗೀತವೆಂದರೆ ಯಾವುದಾದರೊಂದು ವಾದ್ಯವನ್ನು ತೆಗೆದುಕೊಂಡು ಸಂಗೀತವನ್ನು ನುಡಿಸುವುದು. ನಮ್ಮ ದೇಶದಲ್ಲಿ ಪ್ರಸಿದ್ಧವಾದ ವಾದ್ಯಗಳೆಂದರೆ ವೀಣೆ, ಕೊಳಲು, ಮೃದಂಗ, ಸಾರಂಗ, ದಿಲರುಬಾ, ಸಿತಾರ, ತಬಲಾ, ಪಿಟೀಲು ಮುಂತಾದುವುಗಳು (ಪಿಟೀಲು ಪಾಶ್ಚಾತ್ಯ ವಾದ್ಯವೆಂದು ಹೇಳಲಾಗುತ್ತಿದ್ದರೂ ಇದು ಭಾರತೀಯವಾದ್ಯವೆಂದೇ ಸಿದ್ಧಾಂತಪಡಿಸಲು ಆಧಾರಗಳು ದೊರೆತಿವೆಯೆಂದು ನಮ್ಮ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.) ವಾದ್ಯಸಂಗೀತದಲ್ಲಿ ಬರಿಯನಾದೋತ್ಪತ್ತಿಯಾಗುತ್ತದೆಯೆ ವಿನಾ ಗಾಯನದಂತೆ ಸಾಹಿತ್ಯಕ್ಕೆ ಸಾಧನವಿಲ್ಲ.

ಮುಸಲ್ಮಾನರು ಹಿಂದುಸ್ಥಾನಕ್ಕೆ ಬಂದು ನೆಲೆಗೊಂಡಮೇಲೆ, ಬಹುಕಾಲದ ವರೆಗೆ ಅಖಿಲಭಾರತ ಸಂಗೀತಸಂಪ್ರದಾಯ ಒಂದೇ ಬಗೆಯದಾಗಿದ್ದಿತು. ಸಂಗೀತಶಾಸ್ತ್ರವನ್ನು ಕುರಿತು ಬರೆದ ನಮ್ಮ ಪ್ರಾಚೀನ ಗ್ರಂಥಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ, ಈ ಮಾತು ಮನವರಿಕೆಯಾಗುವುದು. ಪ್ರಾದೇಶಿಕ ವೈಶಿಷ್ಟ್ಯಗಳ ಮೂಲಕ ಬೇರೆ ಬೇರೆ ಕಡೆಯ ಸಂಗೀತಗಳಲ್ಲಿ ಭಿನ್ನಭೇದಗಳು ಕಂಡರೂ, ಅವುಗಳನ್ನು 'ದೇಶಿ' ಎಂದು ಗೌಣಭಾವದಿಂದ ನೋಡಿ ಕಡೆಗಣಿಸಿಬಿಟ್ಟಿಲ್ಲ. ಅಲ್ಲಲ್ಲಿಯ ಸಂಗೀತಗಳನ್ನು ಒಪ್ಪಿ ಸ್ವೀಕರಿಸಿ, ಅವುಗಳಿಗೂ ಶಾಸ್ತ್ರದಲ್ಲಿ ಸ್ಥಾನವನ್ನು ಕೊಟ್ಟಿದ್ದಾರೆ. ಆದರೂ ಅವರಿಗೆ ಆದರ್ಶವಾಗಿರುವುದು— 'ಮಾರ್ಗೀಯ ಸಂಗೀತ.' ಯಾಕೆಂದರೆ ಮಾರ್ಗೀಯ ಸಂಗೀತವು ಬ್ರಹ್ಮಾದಿದೇವತೆಗಳಿಂದಲೂ ಭರತಾದಿ ಮಹರ್ಷಿಗಳಿಂದಲೂ ಬಂದದ್ದು—ಎಂತಲೂ, ಅದೇ ಪರಿಶುದ್ಧವೂ ಸರ್ವಸಾಧನೀಯವೂ ಆಗಿರುವುದೆಂದೂ ಸಾರಿರುವರು. ಇಂದು ನಾವು, ಸಂಗೀತ ಒಂದು ಕಲೆ ಎಂತಲೂ ಮನೋರಂಜನೆಯು ಅದರ ಪ್ರಯೋಜನವೆಂದೂ ಭಾವಿಸಿರುವೆವು. ಆದರೆ ನಮ್ಮ ಪ್ರಾಚೀನಮತವು ಸಂಗೀತವೆಂದರೆ ಅದೊಂದು ಮೋಕ್ಷಸಾಧನಮಾರ್ಗವೆಂಬುದಾಗಿ ಇತ್ತು. ಅವರಿಗೆ ಸಂಗೀತವೆಂಬುದು ಕೇವಲ ಮನೋರಂಜನೆಯ ಸಾಧನವಾಗಿರದೆ, ಆಧ್ಯಾತ್ಮಿಕ ಜೀವನದ ಸಾಧನೆಯಾಗಿದ್ದಿತು. ಇಹದಲ್ಲಿ ಆನಂದದಾಯಿಯೂ ಪರದಲ್ಲಿ ಮೋಕ್ಷದಾಯಿಯೂ ಆಗಿರುವ ಈ ಸಂಗೀತಕಲೆಯನ್ನು ಶೋಧಿಸಿ ಶುದ್ಧೀಕರಿಸಿ, ಈ ವಿಷಯಕ್ಕೆ ಲಕ್ಷಣಶಾಸ್ತ್ರವನ್ನು ಭಾರತದಲ್ಲಿ ಅನೇಕರು ಬರೆದಿರುವರು. ಅವರಲ್ಲಿ ಶಾರ್ಙದೇವನೂ ಒಬ್ಬನು. ೧೩ನೆಯ ಶತಮಾನದಲ್ಲಿ ದೇವಗಿರಿಯ ಯಾದವ ಸಿಂಘಣರಾಜನ ಆಶ್ರಯದಲ್ಲಿದ್ದನು. ಶಾರ್ಙದೇವನು 'ಸಂಗೀತ ರತ್ನಾಕರ' ಎಂಬ ಲಾಕ್ಷಣಿಕ ಗ್ರಂಥವನ್ನು ಬರೆದಿದ್ದಾನೆ. ಶಾರ್ಙದೇವನ ಈ ಲಾಕ್ಷಣಿಕ ಗ್ರಂಥವು ಇಂದು ಭರತಖಂಡದಲ್ಲೆಲ್ಲ ಪ್ರಮಾಣಗ್ರಂಥವೆಂದು ಪ್ರಶಸ್ತಿಯನ್ನು ಪಡೆದಿದೆ. ಭಾರತದಲ್ಲಿಯ 'ಹಿಂದುಸ್ಥಾನೀ' ಹಾಗೂ 'ಕರ್ನಾಟಕೀ' ಎರಡೂ ಸಂಗೀತಗಳಿಗೂ ಇದೇ ಗ್ರಂಥವೇ ಒರೆಗಲ್ಲು ಆಗಿರುವುದು.

ನಮ್ಮ ದೇಶದಲ್ಲಿ ಪ್ರಸಿದ್ಧಿಯಲ್ಲಿರುವ ನರ್ತನಪದ್ಧತಿಗಳು ಮೂರು. ಭರತನಾಟ್ಯ, ಕಥಕ್ಕಳಿ, ಮತ್ತು ಮಣಿಪುರಿ. ಕಥಕ್ಕಳಿಯು ನೃತ್ಯನಾಟಕ. ಇದರಲ್ಲಿ ರಾಮಾಯಣ-ಮಹಾಭಾರತಗಳು ಸಂಪೂರ್ಣವಾಗಿ ನರ್ತನರೂಪದಲ್ಲಿ ಪ್ರದರ್ಶಿಸಲ್ಪಡುತ್ತವೆ. ಕಥ-

ಕ್ಕಲಿಯಲ್ಲಿ ನೇತ್ರಾಭಿನಯವೇ ಅತಿ ಮುಖ್ಯ. ಕಥಕ್ಕಲಿಯಲ್ಲಿ ನರ್ತನಕಾರನು ಹೆಜ್ಜೆಯನ್ನು ಪೂರ್ಣವಾಗಿ ನೆಲದ ಮೇಲೆ ಊರದೆ, ಪಾದದ ತುದಿಯಿಂದ ನರ್ತಿಸುತ್ತಾನೆ. ಭರತನಾಟ್ಯದ ಮುದ್ರೆಗಳು ಕಥಕ್ಕಲಿಯ ಮುದ್ರೆಗಳಿಂದ ಪೂರ್ಣ ಭಿನ್ನವಿರುತ್ತವೆ. ಭರತನಾಟ್ಯದಲ್ಲಿ ಪಾದವನ್ನು ಪೂರ್ಣವಾಗಿ ನೆಲದಮೇಲೆ ಊರಲಾಗುವುದು. ಹೆಜ್ಜೆಯ ಕೆಲಸಕ್ಕೆ ತಾಳಕ್ಕೆ ಹೆಚ್ಚಿನ ಪ್ರಾಮುಖ್ಯತೆ. ಕಥಕ್ಕಲಿಯಲ್ಲಿ ಭಾವಪ್ರದರ್ಶನಕ್ಕೆ ಹೆಚ್ಚು ಪ್ರಾಮುಖ್ಯತೆ. ಕಥಕ್ಕಲಿಯನ್ನು ಬಹುಶಃ ಪುರುಷರೂ, ಭರತನಾಟ್ಯವನ್ನು ಬಹುಶಃ ಸ್ತ್ರೀಯರೂ ಅಭಿನಯಿಸುತ್ತಾರೆ.

ಮೇಲೆ ಹೇಳಿದಂತೆ, ಪೂರ್ವದಲ್ಲಿ ಸಮಾಜದಲ್ಲಿಯ ಮೇಲ್ತರಗತಿಯ ಜನರು ಸಂಗೀತವನ್ನು ಉಚ್ಚತರಗತಿಯ ವಿದ್ಯೆ ಎಂದು ನೋಡುತ್ತಿದ್ದರು. ರಾಮಾಯಣದಲ್ಲಿ, ರಾಮ-ಲಕ್ಷ್ಮಣರು ಸಂಗೀತಬಲ್ಲವರಿದ್ದರೆಂದು ವರ್ಣಿಸಲ್ಪಟ್ಟಿರುತ್ತದೆ. ವಾಲ್ಮೀಕಿ ಮುನಿಗಳು ಲವ-ಕುಶರಿಗೆ ಸಂಗೀತವಿದ್ಯೆಯನ್ನು ಕಲಿಸಿ, ಆ ಸಂಗೀತದ ಮುಖಾಂತರವಾಗಿ ಅವರ ಕಡೆಯಿಂದ ರಾಮ-ಲಕ್ಷ್ಮಣರ ಮುಂದೆ ರಾಮಾಯಣವನ್ನು ಓದಿಸಿ ತೋರಿಸಿದರೆಂದು ಉಲ್ಲೇಖವಿದೆ. ಚಿತ್ರರಥ ಗಂಧರ್ವನು ಒಮ್ಮೆ ಆಕಾಶಮಾರ್ಗದಲ್ಲಿ ಗಾಯನಮಾಡುತ್ತ ಹೋಗುವಾಗ, ಅವನಿಗೂ ದುರ್ಯೋಧನ-ದುಃಶ್ಯಾಸನರಿಗೂ ಯುದ್ಧವಾಗಿ, ಅವನು ಅವರನ್ನು ಸೋಲಿಸಿದನೆಂದು ಭಾರತದಲ್ಲಿ ಸಿಕ್ಕುತ್ತದೆ. ಶ್ರೀಕೃಷ್ಣನು ತನ್ನ ವೇಣುವಾದನದಿಂದ ಗೋಪಿಕಾಸ್ತ್ರೀಯರನ್ನೆಲ್ಲ ಮರುಳುಮಾಡಿಬಿಟ್ಟನಂತೆ. ಇದರಂತೆಯೆ ಭಾರತ ಕಾಲದಲ್ಲಿ, ಅರ್ಜುನನು ವಿರಾಟನ ಮಗಳಿಗೆ ನೃತ್ಯವನ್ನು ಕಲಿಸುತ್ತಾನೆ. ಗೋಪಿಕಾಸ್ತ್ರೀಯರೆಲ್ಲರೂ ಹುಣ್ಣಿವೆಯ ಬೆಳುದಿಂಗಳಲ್ಲಿ ರಾಸಕ್ರೀಡೆಯನ್ನಾಡುತ್ತಿದ್ದರಂತೆ. ಇದರಿಂದ ಗಾಯನ, ನೃತ್ಯ, ವಾದನಗಳು ಎಲ್ಲವೂ ಆ ಕಾಲದಲ್ಲಿ ಮೇಲಿನ ಮಟ್ಟದ ಸ್ಥಿತಿಯಲ್ಲಿದ್ದುವೆಂದು ಸಿದ್ಧವಾಗುತ್ತದೆ.

ಬೌದ್ಧರ ಕಾಲದಲ್ಲಿ ಶಿಲ್ಪಕಲೆ ಹಾಗೂ ಚಿತ್ರಕಲೆಗಳು ಬಹಳ ವಿಕಾಸಹೊಂದಿದುವು. ಇದೇ ಸಮಯಕ್ಕೆ ಭರತನು ನಾಟ್ಯಶಾಸ್ತ್ರವನ್ನು ಬರೆದನು. ಭರತನ ಕಾಲದಲ್ಲಿ ‘ರಾಗ’ದ ಉಲ್ಲೇಖವಿಲ್ಲದೆ ಶ್ರುತಿ, ಸ್ವರಗ್ರಾಮ–ಮೂರ್ಛನೆಗಳ ಉಲ್ಲೇಖವಿದೆ; ಆದರೆ ಮುಂದೆ ಮಾತಂಗನು ಬೃಹದ್ದೇಶೀ ಗ್ರಂಥದಲ್ಲಿ ಮಾತ್ರ ‘ರಾಗ’ದ ಉಲ್ಲೇಖವಿದೆ. ಇದರ ಮೇಲಿಂದ ಭರತನ ವೇಳೆಯಲ್ಲಿದ್ದ ‘ಜಾತಿ’ ಸಂಗೀತವು, ಮತಂಗನ ಕಾಲಕ್ಕೆ ‘ರಾಗ’-ಎಂದು ರೂಪಗೊಂಡಿರುವುದು ಎಂದು ಊಹಿಸಿದರೆ ತಪ್ಪಾಗದು. ‘ಬೃಹದ್ದೇಶೀ’ ಇದರ ಅರ್ಥವು ‘ಆಧುನಿಕ’ ಎಂದು ಆಗುವುದು ಎಂಬುದನ್ನು ಮಾತ್ರ ಲಕ್ಷ್ಯದಲ್ಲಿ ತೆಗೆದುಕೊಳ್ಳಬೇಕು.

ಏಳನೆಯ ಎಂಟನೆಯ ಶತಮಾನದಲ್ಲಿ, ಶೈವ ಮತ್ತು ವೈಷ್ಣವ-ಪಂಥದ ಅನೇಕ ಭಕ್ತರು ಭಕ್ತಿರಸದ ಅನೇಕ ಕವನಗಳನ್ನು ರಚಿಸಿದರು. ಅದರಿಂದ ಕಾವ್ಯ ಭಕ್ತಿರಸವು ಉಕ್ಕಿ ಹರಿದು ಹೋಗುವ ಕಾಲವಾಯಿತು. ಹತ್ತು-ಹನ್ನೆರಡನೆಯ ಶತಮಾನಗಳ ನಡುವೆ ‘ನಾರದೀಯ ಶಿಕ್ಷಾ’ ಎಂಬ ಗ್ರಂಥವು ರಚಿಸಲ್ಪಟ್ಟಿತು. ಹನ್ನೆರಡನೆಯ ಶತಮಾನದಲ್ಲಿ ಜಯದೇವ ಕವಿಯು, ಗೀತ-ಗೋವಿಂದ ಎಂಬ ಕಾವ್ಯವನ್ನು ರಚಿಸಿದನು. ಪ್ರತಿಯೊಂದು ಗೀತದ ಮೇಲೆ ರಾಗ-ತಾಳಗಳನ್ನು ಹಾಕಿದ್ದಾನೆ. ಮುಂದೆ ೧೨೧೦–೧೨೪೭ ಈ ಕಾಲದಲ್ಲಿ ಶಾರ್ಙ್ಗದೇವನು ‘ಸಂಗೀತರತ್ನಾಕರ’ ಎಂಬ ಗ್ರಂಥವನ್ನು ಬರೆದನು.

ಮುಂದೆ ಹದಿಮೂರು–ಹದಿನಾಲ್ಕು–ಹದಿನೈದನೆಯ ಶತಮಾನದಲ್ಲಿ ಮುಸಲ್ಮಾನರು ಹಿಂದುಸ್ಥಾನದ ಮೇಲೆ ದಂಡೆತ್ತಿ ಬಂದರು. ಮತ್ತು ಇಲ್ಲಿ ವಾಸಮಾಡಿ ರಾಜ್ಯನಾಳಹತ್ತಿದರು. ಇಲ್ಲಿಂದ ಭಾರತೀಯ ಸಂಗೀತದಲ್ಲಿ ಎರಡು ಭೇದಗಳು ಹಿಂದುಸ್ತಾನೀ ಹಾಗು ಕರ್ನಾಟಕೀ—ಕಾಣಹತ್ತಿದುವು. ಮುಸಲ್ಮಾನ್ ಅರಸರು ಸಂಗೀತಕ್ಕೆ ಆಶ್ರಯ ಕೊಟ್ಟು, ಅದಕ್ಕೆ ಉತ್ತೇಜನಕೊಟ್ಟರು. ಭಾರತೀಯ ಸಂಗೀತಕಾರರು ಅವರ ಆಶ್ರಯದಲ್ಲಿ ನಿಂತರು. ಮುಸಲ್ಮಾನ್ ಅರಸರ ಹಾಗೂ ಭಾರತೀಯ ಸಂಗೀತಕಾರರ ಸಂಬಂಧವು ಬೆಳೆಯುತ್ತ ಹೋಯಿತು. ಸಂಬಂಧವು ಬೆಳೆಯುತ್ತ ಹೋದಂತೆ, ಮುಸಲ್ಮಾನ ಅರಸರ ಪರ್ಶಿಯನ್ ಸಂಗೀತಕಾರರು ಭಾರತೀಯ ಸಂಗೀತಕಾರರು ಇವರ ಸಂಬಂಧವು ಬೆಳೆಯಿತು. ಪರ್ಶಿಯನ್ ಸಂಗೀತದಲ್ಲಿಯ ಕೆಲವು ಗುಣಗಳನ್ನು ಭಾರತೀಯ ಸಂಗೀತಕಾರರು ತಮ್ಮ ಸಂಗೀತಕ್ಕೆ ಅಳವಡಿಸಿಕೊಂಡರು. ಇದರ ಪರಿಣಾಮವಾಗಿ ದಕ್ಷಿಣ ಕಡೆಯ ಸಂಗೀತದಿಂದ ಇದು ಬೇರೆಯಾಗಿ ‘ಉತ್ತರ ಹಿಂದುಸ್ತಾನೀ ಸಂಗೀತ’ ಎನಿಸಿಕೊಂಡಿತು.

ಅಲ್ಲಾಉದ್ದೀನ್ ಖಿಲಜೀ ಇವನ ಸೇನಾಪತಿಯಾದ ಅಮೀರ ಖುಸ್ರುವು, ದಕ್ಷಿಣದಲ್ಲಿಯ ಯಾದವರನ್ನು ಸೋಲಿಸಿ, ಅಲ್ಲಿಯ ಬೊಕ್ಕಸವನ್ನು ಒಡೆದು ಮುತ್ತು-ರತ್ನ ಮುಂತಾದ ಬೆಲೆಯುಳ್ಳ ಅಪಾರವಾದ ನಿಧಿಯನ್ನು ಒಯ್ದನಂತೆ. ಈ ಬೆಲೆಯುಳ್ಳ ಚಿನ್ನ, ರತ್ನ ಮುಂತಾದುವುಗಳ ಜೊತೆಯಲ್ಲಿ, ಅಲ್ಲಿಯ ಸಂಗೀತ ವಿದ್ವಾಂಸನಾದ ಗೋಪಾಲನಾಯಕನನ್ನೂ ದಿಲ್ಲಿಗೆ ಕರೆದೊಯ್ದನಂತೆ.

೫೫ ವರ್ಷಗಳಿಂದ ಅನುಭವಪಟ್ಟ

ಕಶೀರ್ ಮತ್ತು ಕಂಪನಿಯ

ಜ್ವರಗಡ್ಡೆಯ ಗುಳಿಗೆಗಳು

ಬಾಟ್ಲಿಗೆ ೧–೮–೦

ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.

ವಿಳಾಸ:—

ಗಣೇಶ ರಾಮಚಂದ್ರ ಕಶೀರ್ ಮತ್ತು ಕಂಪನಿ

ಗಿರಗಾಂವ, ಮುಂಬಯಿ. ೪

ಮೊಗಲ ಸಮ್ರಾಟನಾದ ಅಕಬರನ ಕಾಲದಲ್ಲಿ ಸಂಗೀತವು ಬಹಳ ಬೆಳವಣಿಗೆಯನ್ನು ಹೊಂದಿತು. ಸ್ವತಃ ಅಕಬರನು ಸಂಗೀತ-ಪ್ರಿಯನಾಗಿದ್ದನು. ಆವನ ದರಬಾರದಲ್ಲಿ 'ತಾನಸೇನ' 'ಹರಿದಾಸಸ್ವಾಮಿ' 'ಮಾನಸಿಂಹ' 'ಬೈಜು ಬಾವರೆ' ಮುಂತಾದ ಸುಪ್ರಸಿದ್ಧ ಸಂಗೀತರತ್ನಗಳಿದ್ದುವು ಆಗ ಹಳೆಯ ರಾಗಗಳು ಸಂಸ್ಕಾರ ಹೊಂದಿ ಹೊಸ ರಾಗಗಳಾದವೆಂದು ಕಾಣು-ತ್ತದೆ. ದರಬಾರದಲ್ಲಿ ಸಂಗೀತಕಚೇರಿಗಳು ಪ್ರಾರಂಭವಾದುವು. ತಾನಸೇನನ ಹೆಸರನ್ನು ಕೇಳದವರು ಯಾರು ? ಧ್ರುಪದ ಪದ್ಧತಿಯ ಸಂಗೀತಕಾರರಲ್ಲಿ ತಾನಸೇನನನ್ನು ಸರಿಗಟ್ಟುವವರು ಯಾರೂ ಆಗಲಿಲ್ಲವೆಂದು ಅವನ ಖ್ಯಾತಿ ಇರುವುದು. ಅವನ ಬಗ್ಗೆ ಅನೇಕ ದಂತಕಥೆಗಳು ಇರುವವು ಅವೆಲ್ಲವುಗಳೂ ಮನೋರಂಜಕಗಳೂ ಉದ್ಬೋಧಕಗಳೂ ಇರುವವು. ಉದಾಹರಣೆಗಾಗಿ ಇಲ್ಲಿ ಒಂದನ್ನು ಹೇಳುವೆನು.

ಒಮ್ಮೆ ತಾನಸೇನನು ಹಾಗೂ ಅಕಬರನು ಕೂಡಿ ಬೆಳಗಿನಲ್ಲಿ ಅಡ್ಡಾಡಲಿಕ್ಕೆ ಹೋಗಿದ್ದರಂತೆ. ಆಗ ಅವರು ಸ್ವಲ್ಪ ದೂರ ಹೋದ ಮೇಲೆ, ಯಾರೋ ಹಾಡುತ್ತಿರುವುದು ಕೇಳಬರಹತ್ತಿತು. ಇನ್ನೂ ಕತ್ತಲೆ ಇತ್ತು. ಆ ಕತ್ತಲೆಯಲ್ಲಿ ಒಮ್ಮಿಂದೊಮ್ಮೆ ದೀಪದ ಬೆಳಕು ಬಿದ್ದ ಹಾಗೆ ಆಗುತ್ತಿತ್ತು; ಮತ್ತೆ ಆ ಬೆಳಕು ಕಾಣದಾಗುತ್ತಿತ್ತು. ಇಬ್ಬರಿಗೂ— ಆ ಬೆಳಕು ಎಲ್ಲಿಯದು, ಸ್ವಲ್ಪ ಕಾಣಿಸಿ ಯಾಕೆ ಮಾಯವಾಗುತ್ತಿತ್ತು— ತಿಳಿಯದಾಯಿತು. ತಾನಸೇನನು ಬುದ್ಧಿ-ವಂತ ಸಂಗೀತಗಾರನು ಆ ಸಂಗೀತಕ್ಕೂ ಆ ಬೆಳಕಿಗೂ ಸಂಬಂಧ-ವಿರಬೇಕೆಂದು ಊಹಿಸಿದನು. ಇಬ್ಬರೂ ಆ ಸಂಗೀತದ ಸ್ಥಾನವನ್ನು ಶೋಧಿಸಿದರು. ಒಬ್ಬ ಹೆಣ್ಣುಮಗಳು ಬೀಸುತ್ತ ಹಾಡುತ್ತಿದ್ದಳು. ಅದರಲ್ಲಿಯ ಕೆಲವು ಸ್ವರಗಳ ಪರಿಣಾಮವಾಗಿ ಬೆಳಕು ಹತ್ತುತ್ತಿತ್ತು. ಆ ಸ್ವರಗಳು ಮುಗಿದು ಮತ್ತೊಂದು ಭಾಗ ಬಂದೊಡನೆ, ಆ ಬೆಳಕು ಮಾಯವಾಗುತ್ತಿತ್ತು. ತಾನಸೇನನು ಆ ಸ್ವರಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಮನೆಗೆ ಹೋದನು ಆ ಸ್ವರಗಳಿಗೆ ಅನುರೂಪವಾಗುವಂತೆ ಉಳಿದ ಸ್ವರಗಳನ್ನು ಶೋಧಿಸಿ ಬೇರೆ ಒಂದು ರಾಗವನ್ನೇ ಹುಡುಕಿ ತೆಗೆದನು. ಆ ರಾಗವೇ ದೀಪಕ-ರಾಗವು. ತಾನಸೇನನು ಅನೇಕ ಹೊಸ ರಾಗಗಳನ್ನು ನಿರ್ಮಿಸಿದ್ದಾ-ನೆಂಬುದನ್ನು ಎಲ್ಲರೂ ಒಪ್ಪುವ ಮಾತಾಗಿದೆ. 'ಮಿಯಾ ಮಲ್ಹಾರ' 'ಮಿಯಾ ಸಾರಂಗ' 'ಮಿಯಾ ಕಿ ತೋಡಿ' ಮುಂತಾದುವುಗಳೆ-ಲ್ಲವೂ ತಾನಸೇನನು ರಚಿಸಿದ ರಾಗಗಳು. 'ಮಿಯಾ' ಎಂದರೆ ತಾನಸೇನ— ಎಂದು ಅರ್ಥ ಇರುವುದು.

'ಸದ್ಯಃ ಫಲಾನಿ ಗೀತಾನಿ' ಎಂಬ ಉಕ್ತಿಯಂತೆ ಸಂಗೀತದ ತಾತ್ಕಾಲಿಕ ಪರಿಣಾಮಗಳನ್ನು ಹೇಳಿದ ಕೆಲವು ದಂತಕಥೆಗಳು ಇವೆ. ಮೇಘರಾಗ ಹಾಡಿದರೆ ಮಳೆ ಬರುತ್ತಿತ್ತಂತೆ, ದೀಪಕರಾಗವನ್ನು ಹಾಡಿದರೆ ದೀಪ ಹತ್ತುತ್ತಿತ್ತಂತೆ— ಎಂದು ಕೆಲವು ಆಖ್ಯಾಯಿಕೆಗಳನ್ನು ಕೇಳುತ್ತೇವೆ. ಸಂಗೀತದ ಕೆಲವು ಪರಿಣಾಮಗಳನ್ನು ಎಲ್ಲರೂ ಕಂಡದ್ದುಂಟು. ಅಳುವ ಮಕ್ಕಳು ಸಂಗೀತ ಕೇಳಿ ಸುಮ್ಮನೆ ಕೇಳುತ್ತಾ ಮಲಗಿದ್ದನ್ನು ಎಲ್ಲರೂ ನೋಡಿರಬಹುದು. ಅತೀವ ಆನಂದವಾದಾಗ ಅಥವಾ ದುಃಖವಾದಾಗ, ಅರಿವು ಇಲ್ಲದೆ ಮನು-ಷ್ಯನು ಹಾಡುವನು. 'Music is the language of the heart' ಎಂಬ ಮಾತು ಸತ್ಯವಾದದ್ದು. ಭಾವನೆಗಳನ್ನು ವ್ಯಕ್ತಪಡಿಸಲಿಕ್ಕೆ ಸಂಗೀತದಂತಹ ಸಾಧನೆಯು ಮತ್ತೊಂದಿಲ್ಲ. ಭರತಖಂಡದಲ್ಲಿ ಮತ್ತು ಎರಡನೆಯ ಕಡೆಯಲ್ಲಿಯೂ ಎಷ್ಟೋ ಭಕ್ತರು, ಸಂಗೀತ-ಮಾರ್ಗದಿಂದಲೆ ಮುಕ್ತಿ ಪಡೆದರಂತೆ. ಉತ್ತರ ಹಿಂದುಸ್ಥಾನ-ದಲ್ಲಿ ಕಬೀರದಾಸ, ಸೂರದಾಸ, ತುಲಸೀದಾಸ, ಮೀರಾಬಾಯಿ ಮುಂತಾದ ಭಕ್ತರೂ; ಮಹಾರಾಷ್ಟ್ರದಲ್ಲಿ ಜ್ಞಾನೇಶ್ವರ, ರಾಮ-ದಾಸ, ಮಹಿಪತಿದಾಸ ಮುಂತಾದವರೂ; ಕರ್ನಾಟಕದಲ್ಲಿ ಪುರಂದರ ದಾಸ, ಕನಕದಾಸ, ಜಗನ್ನಾಥದಾಸ, ಗೋಪಾಲದಾಸ ಮುಂತಾದ ವೈಷ್ಣವದಾಸರೂ ಹಾಗೂ ಅಖಂಡೇಶ್ವರ, ಬಸವಣ್ಣನವರು, ಅಕ್ಕ-ಮಹಾದೇವಿ, ನಿಜಗುಣ ಶಿವಯೋಗಿ, ಸರ್ಪಭೂಷಣರು ಮುಂತಾದ ಶಿವಶರಣರೂ, ಈ ಸಂಗೀತದ ಮುಖಾಂತರವಾಗಿ ತಮ್ಮ ಭಕ್ತಿ-ಯಿಂದ ಮೋಕ್ಷ ಪಡೆದರು. ಜಗತ್ತಿನಲ್ಲಿ ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಸಂಗೀತವಿರುವುದು, ಆದರೆ ಅದರ ಉದ್ದೇಶವು ಮಾತ್ರ ಒಂದೆ. ಭಾವಗಳನ್ನು ಅರಳಿಸಿ ಆನಂದವನ್ನು ಕೊಡುವುದು ಸಂಗೀತದ ಮುಖ್ಯ ಉದ್ದೇಶವೆನ್ನಲು ಅಡ್ಡಿಯಿಲ್ಲ. ನಮ್ಮ ಭರತಖಂಡದಲ್ಲಿ ಹಿಂದುಸ್ಥಾನೀ, ಕರ್ನಾಟಕೀ— ಎಂಬ ಎರಡು ಪದ್ಧತಿಗಳು ಕಾಣುತ್ತವೆ. ಆದರೆ ಪದ್ಧತಿಗಳು ಬೇರೆಯಾಗಿದ್ದರೂ ಮೂಲತತ್ತ್ವಗಳು ಒಂದೇ ಇರುವವು. ಎರಡೂ ಪದ್ಧತಿಗಳಿಗೂ ಸಪ್ತಸ್ವರಗಳು ಹಾಗೂ ಸಪ್ತತಾಲಗಳು ಮುಖ್ಯವಿರುವವು. ಶ್ರುತಿ-ಗ್ರಾಮ-ಗಮಕ-ಮೂರ್ಚ್ಛನಾ ಮುಂತಾದುವುಗಳೂ ಎರಡೂ ಪದ್ಧತಿಗಳಿಗೂ ಸಾಮಾನ್ಯವಿರುವವು. ಹಾಡುವ ರೀತಿ ಭಿನ್ನವಾ-ಗಿರುವುದು. ಎರಡೂ ಪದ್ಧತಿಗಳಲ್ಲಿ ಕೆಲವು ರಾಗಗಳು ಸಾಮಾನ್ಯ ಇರುವವು. ಅವು ಯಾವುವೆಂದರೆ—

(೧) ಕಲ್ಯಾಣೀ (೨) ಹಮೀರ (೩) ಬಿಹಾಗ (೪) ಖಮಾಜ (೫) ಮಾಂಡ (೬) ಕಾಫೀ ಮುಂತಾದುವುಗಳು.

ಕೆಲವು ರಾಗಗಳು ಎರಡೂ ಕಡೆಯೂ ಒಂದೇ ಇದ್ದು, ಹೆಸರು ಮಾತ್ರ ಬೇರೆ ಇರುವವು. ಉದಾಹರಣೆಗೆ, ಹಿಂದುಸ್ಥಾನೀ ಭೂಪವು ಕರ್ನಾಟಕಿಯಲ್ಲಿ ಮೋಹನವೆಂದೂ, ದುರ್ಗಾರಾಗವು ಶುದ್ಧ ಸಾವೇರಿ ಎಂದೂ, ಸೋಹನೀಯು ಹಂಸಾನಂದೀ ಎಂದೂ, ತೋಡಿಯು ಶುಭಗ ಪಂತುವರಾಳಿ ಎಂದೂ ಭೈರವಿಯು ತೋಡೀ ಎಂದೂ, ಮಾಲಕಂಸ ಹಿಂದೋಲವೆಂದೂ, ಕರೆಯಲ್ಪಡುತ್ತವೆ. ಹಾಡುವ ರೀತಿಯು ಬೇರೆಯಾಗಿದ್ದರೂ ಆಲಾಪನೆ, ತಾನಗಳು, ಭಾವಗಳು, ಗಮಕಗಳು, ಕೀರ್ತನೆಗಳು, ತಿಲ್ಲಾಣಗಳು ಇವೆಲ್ಲವೂ ಲಯದ ಎರಡೂ ಪದ್ಧತಿಗಳಲ್ಲಿ ಕಂಡುಬರುತ್ತವೆ.

ರುದ್ರಾವತಾರ

ಶ್ರೀ. ರಾಮಚಂದ್ರ ಕೊಟ್ಟಲಿಗಿ, ಘಟಪ್ರಭಾ

☆

೧

ನಿನ್ನ ಗರ್ಭದಿ ಮೂಡಿ ಬೆಳೆಯುತಿರುವನು ರುದ್ರ,
ವೀರ ಪ್ರಸವಿನಿಯಾಗಲಿರುವೆ ತಾಯೆ !
ಕುನ್ನಿ ಜನಸಂದೋಹ ಪಡುವ ಪಾಡನು ನೋಡಿ
ಬಸಿರ ಬೇಗೆಯನೆಲ್ಲ ಸಹಿಸು ತಾಯೆ !

೨

ಶತಮಾನ ಸಂಕಟವ ಸಹಿಸಿರುವೆ ಮಿಡುಕದಲೆ,
ನವಮಾಸ ತುಂಬಲಿನ್ನೆನಿತು ಕಾಲ ?
ದಶದಿಶೆಯು ನಡುಗೀತು, ಭೂವ್ಯೋಮವದುರೀತು
ಆದೀತು ವಿಷಮತೆಯು ಗಾಳಿಪಾಲ !

೩

ನಾಡ ಮಂಗಳವಳಿದು ಜೀವಕೋಟಿಯ ಹಿಂಡು
ಬದುಕು-ಸಾವಿನ ಉಸಿರನೆಳೆಯುತಿರಲು—
ಮನಮುರಿದು, ಮನೆಯೊಡೆದು, ಮನೆಮುರುಕರುಪಟಳಕೆ
ಬೆಂದೊಡಲ ಕ್ರಂದನವು ಹೊರಚಿಮ್ಮುತಿರಲು—

೪

ದಶಮುಖರು, ಕೀಚಕರು, ಮನೆಮನೆಗೆ ತಳಿಬೆಳೆಸಿ
ಹತ್ತಾವತಾರವನು ಆಹ್ವಾನಿಸಿ,
ಅಬಲೆಯರ, ಅರ್ಭಕರ ನೆತ್ತರೋಕುಳಿಯಾಡಿ
ಪ್ರಳಯಭೈರವನನ್ನೆ ಆಮಂತ್ರಿಸಿ—

೫

ಅನ್ನದೇವರನೊಂದು ಜೊನ್ನಸೆರೆಯಲ್ಲಿಟ್ಟು,
ಕಾಂಚನದ ಧೂಪ ಧೂಮಗಳನಿಕ್ಕಿ,
ಅನ್ನಾನ್ನಗತಿಕನೊಲು ಕೊಳೆಸಿಹರು ಕತ್ತಲಲಿ
ಪ್ರಾಣದಾತನಿಗಿತ್ತು ಜೀವಮುಕ್ತಿ.

೬

ಅನ್ನಪೂರ್ಣೆಯು ಕಂದರೆಂಜಲಿಗೆ ಕೈಯೊಡ್ಡಿ
ಶ್ವಾನ-ಶ್ವಾಪದಕಿಂತ ಕೀಳರಾಗಿ,
ಹಿಡಿಯನ್ನಕೆರವಾಗಿ, ಆಡಿಸಲಿಕೆ ಹೊರತಾಗಿ
ಪಡೆದ ತಾಯಿಗೆ ಹೊರದ ಭಾರವಾಗಿ—

೭

ಸತ್ತು ಬದುಕಿಹರಿಂತು, ಸಾಯಲಾರದೆ ಬಾಳಿ
ಮೃತ್ಯುವಾಗಮನವನು ನಿತ್ಯ ಜಪಿಸಿ,
ಎಂತಾದರೂ ಸರಿಯೆ, ಎಲ್ಲಾದರೂ ಸರಿಯೆ
ಈ ನರಕ ತಪ್ಪಲೆಂದವರು ತಪಿಸಿ—

೮

ಯುಗ-ಯುಗದ ಈ ತಪಕೆ, ಮೂಕಸಂತಾಪಕ್ಕೆ
ಮನುಜಕೋಟಿಯನಿತ್ತ ಬಲಿದಾನಕೆ
ಕೆನ್ನೀರ ಮಜ್ಜನಕೆ, ಅಶ್ರುಜಲ-ತರ್ಪಣಕೆ
ದೈವಬಲ ಒಲಿಯದೇ ವರದಾನಕೆ ?

೯

ಇವರ ತಳಮಳ ಕಿಚ್ಚು, ಬಾನ ಬಯಲನು ರಾಚಿ
ವಿಷ್ಣು-ಚತುರಾನನರ ಮುದುಡಿಸೀತು;
ನಿಃಶ್ವಾಸದುದ್ವೇಗ ಹಿಮಗಿರಿಯನಾವರಿಸಿ
ರುದ್ರನೋಂಪಿಯನಿಂದು ಕದಡಿಸೀತು !

೧೦

ಕಾಲಗರ್ಭದ ಎದೆಯು ಸೀಳುತಿದೆ ಚಿರಿಯುತಿದೆ
ಪ್ರಳಯಾಗ್ನಿ ಕಿಡಿಹೊತ್ತಿ ಬೆಂಕಿಯಾಗಿ
ತಲೆದಂಡ ಕೇಳುತಿಹ, ಮುಕ್ಕಣ್ಣ ಮಹರುದ್ರ
ವಿಶ್ವದಾಪೋಶನವ ಸುಂಕವಾಗಿ.

೧೧

ಶಂಖ ಚಕ್ರಾಂಕಿತನೊ, ಪರಶುಧರ ಹಲಧರನೊ,
ಎಂತೊ ಏನೋ ಬಂದೆ ಬರುವ ರುದ್ರ !
ಸತ್ತವರ-ಸಾಯುವರ ಕೂಗಿನಾಹ್ವಾನಕ್ಕೆ
ಓ ಗೊಡದಲಿರುವನೇ ರಾಮಭದ್ರ ?

ಅನುತಾಪ ಮತ್ತು ವೇದನೆ

(ಒಂದು ವಿಚಾರಪ್ರಬಂಧ)

ಶ್ರೀಮತಿ ಎಸ್. ಕೆ. ರಮಾದೇವಿ ಬಿ. ಎ., ಮೈಸೂರು.

●

ಮಾನವನ ಜೀವನದ ನೊಗ್ಗು ಬಲಿತು ಪರಿಪೂರ್ಣವಾಗಿ ವಿಕಾಸಗೊಳ್ಳಬೇಕಾದರೆ, ಅದು ದುಃಖಾನುಭವದ ಬಿಸಿಲನ್ನು ಉಣ್ಣಬೇಕು; ಅನುತಾಪದ ಅಗ್ನಿರಸವನ್ನು ಕುಡಿದು ಕುಡಿದು ಬಳಿಯಬೇಕು. ಉಂಡುಂಡು ಸ್ವರ್ಗಕ್ಕೈದುವಡೆ ಅದನೇನು ರಂಡೆಯಾಳುವಳೆ ?

●

" ಕಷ್ಟಪಟ್ಟರೆ ಫಲವುಂಟು. " " ಕೈ ಕೆಸರಾದರೆ ಬಾಯಿ ಮೊಸರಾದೀತು " ಎಂಬ ಗಾದೆಯ ಸತ್ಯವನ್ನು ನಮ್ಮ ನಿತ್ಯ ಜೀವನದಲ್ಲಿ ಕಾಣುತ್ತೇವೆ. ಮಂತ್ರವಾದಿಯು ತನ್ನ ಕೋಲನ್ನು ಬಡಿದು, ತಾನು ಬಯಸಿದ ವಸ್ತುಗಳನ್ನು ಪಡೆಯುವಂತೆ, ನಾವಂತೂ ನೆನಸಿದೊಡನೆಯೇ ಸುಖವನ್ನು ಪಡೆಯುವುದೇನೂ ಸಾಧ್ಯವಿಲ್ಲ. ಹಾಗೆ ಎಲ್ಲರಿಗೂ ಕೂತೆಡೆಯೇ ಆಕಾಶವನ್ನು ಮುಟ್ಟುವುದು ಸಾಧ್ಯವಾಗುವುದಾಗಿದ್ದರೆ, ನಾವೆಲ್ಲ ದೇವತೆಗಳೇ ಆಗಿರುತ್ತಿದ್ದೆವು.

ಮನುಷ್ಯನಾಗಿ ಹುಟ್ಟಿದಮೇಲೆ, ಮನುಷ್ಯಜೀವನದ ಕಷ್ಟಸುಖಗಳೆರಡನ್ನೂ ಅರಿತಿರಬೇಕು. ಯಾವುದೊಂದರ ಅನುಭವವಿಲ್ಲದಿದ್ದರೂ ನಾವು ಜೀವನವನ್ನು ಪೂರ್ತಿಯಾಗಿ ಅರ್ಥಮಾಡಿಕೊಳ್ಳಲು ಆಗುವುದಿಲ್ಲ. ಕಷ್ಟವನ್ನು ಕಂಡರಿಯದೆ, ಕೇವಲ ಸುಖದಲ್ಲೇ ಬೆಳೆದ ಮನುಷ್ಯನಾದರೋ, ಕೇವಲ ಭೋಗಿಯಾಗಿ ಬಿಡುತ್ತಾನೆ. ಒಂದು ವೇಳೆ ಆ ಜೀವ ನೋಡಲು ಮುಗ್ಧವಾಗಿರಬಹುದು. ಆದರೆ ಅದರಲ್ಲೇನೂ ಸ್ವಾರಸ್ಯವಿರುವುದಿಲ್ಲ. ಅದು ಪಡೆದಿರುವ ಸುಖವು ಸಹ ಪೂರ್ತಿ ಪಕ್ವವಾದುದಾಗಿರುವುದಿಲ್ಲ. ಬಿಸಿಲುಹಣ್ಣಿನಂತೆ ರಸರಹಿತವಾಗಿರುತ್ತದೆ. ಹಾಗೇನಾದರೂ ಒಂದು ವೇಳೆ ನಾವು ಕಷ್ಟವನ್ನು ಅನುಭವಿಸದೆ ಶಾಶ್ವತವಾದ ಸುಖವನ್ನು ಹೊಂದಿರುವ ಜೀವದ ವಿಷಯಗಳನ್ನು ಕೇಳುವೆವಾದರೆ, ಅದು ಕಟ್ಟುಕಥೆಗಳಲ್ಲೇ ದೊರಕು; ಅಂತಹ ಜೀವಗಳನ್ನು ನಮ್ಮ ನಿತ್ಯಜೀವನದಲ್ಲಂತೂ ನೋಡುವುದಿಲ್ಲ. ಸುಖವನ್ನು ಕಂಡರಿಯದೆ ಕೇವಲ ದುಃಖದಲ್ಲೇ ಬೆಳೆದ ವ್ಯಕ್ತಿಯಾದರೋ ಕೇವಲ ಸಿಡುಕು ಮೋರೆಯುವನಾಗುತ್ತಾನೆ. [ಎಂದರೆ He will become a cynic] ಆದ್ದರಿಂದ ಸುಖ-ದುಃಖಗಳೆರಡೂ ಆವಶ್ಯಕ.

' ನನಗೆ ಕಷ್ಟ ಬೇಡ, ಸುಖಬೇಕು ! ' ಎಂದು ಬಯಸುವುದಾದರೋ ಮಾನವನ ಸಹಜವಾದ ಗುಣ; ಆದರೆ ಜೀವನವಾದರೋ ಸುಖ-ದುಃಖಗಳ ಮಿಶ್ರಣ. ಒಂದು ದಿನದ ಹಗಲು-ರಾತ್ರಿಯಂತೆ—ಒಂದು ನಾಣ್ಯದ ಎರಡು ಮುಖಗಳಂತೆ—ಸುಖ ದುಃಖಗಳಿವೆ. ಸುಖ-ದುಃಖಗಳೆರಡೂ ಹಾಸುಹೊಕ್ಕುಗಳಂತೆ ಒಂದಕ್ಕೊಂದು ನೇಯ್ದುಕೊಂಡಿರುವುದರಿಂದ, ಇವನ್ನು ಬೇರ್ಪಡಿಸುವುದು ಎಂದಿಗೂ ಸಾಧ್ಯವಿಲ್ಲ. ಆದುದರಿಂದ ನಾವು ಸುಖವನ್ನು ಎಷ್ಟು ಸಂತೋಷದಿಂದ ಆಲಿಂಗಿಸಿಕೊಳ್ಳುವೆವೋ, ಅದೇ ರೀತಿ ಕಷ್ಟವನ್ನೂ ಸಂತೋಷದಿಂದ ಆಲಿಂಗಿಸಿಕೊಳ್ಳುವುದನ್ನು ಕಲಿಯಬೇಕು.

' ನಾವೇ ಏಕೆ ಸ್ವತಃ ಕಷ್ಟಗಳನ್ನನುಭವಿಸಬೇಕು ? ಇನ್ನೊಬ್ಬರು ಅನುಭವಿಸಿದ ಕಷ್ಟವನ್ನು ನೋಡಿ ಅರಿಯುವುದಿಲ್ಲವೇ ? ' ಎನ್ನಬಹುದು. ಆದರೆ ಅದು ಹಾಗಲ್ಲ. ಕೇಳಿದ ಕಷ್ಟಕ್ಕಿಂತ ಸ್ವತಃ ಅನುಭವಿಸಿದ ಕಷ್ಟ ಇನ್ನೂ ಆಳವಾಗಿರುತ್ತದೆ. ಸುಪ್ರಸಿದ್ಧ ಇಂಗ್ಲಿಷ್ ನಾಟಕಕಾರ ಷೇಕ್ಸ್‌ಪಿಯರ್‌ನ ಮಾತಿನಲ್ಲಿ ' Heard melodies are sweet but unheard melodies are

sweeter" ಎಂಬುದನ್ನು ಕೇಳಿರಬಹುದು. ಆದಕ್ಕೇ ದೊಡ್ಡವರು ಹೇಳುವುದು : "ನಿಮ್ಮ ತಲೆಗೆ ಕಷ್ಟ ತಗಲಬೇಕೇ ಹೊರತು, ಇನ್ನೊಬ್ಬರು ಹೇಳಿದರೆ ತಿಳಿಯುವುದಿಲ್ಲ" ಎಂದು. ಇದು ಸಹಜವಾದದ್ದೇ. ಕೊಡಲಿಯ ಪೆಟ್ಟಿನಿಂದವನಿಗೇ ಅದರ ರುಚಿ ತಿಳಿಯುತ್ತದೆಯೇ ಹೊರತು, ಎಲ್ಲರಿಗೂ ತಿಳಿಯುತ್ತದೆಯೇ ? ಭೋಗ ಸಾಮ್ರಾಜ್ಯದಲ್ಲಿ ತೇಲಿ ಮುಳುಗುವವನೆದುರಿಗೆ— ಕಷ್ಟದ ರುಚಿಯನ್ನೇ ಕಂಡರಿಯದವನೆದುರಿಗೆ— 'ನನಗೆ ಕಷ್ಟ' ಎಂದರೆ ಅವನು ನಂಬುತ್ತಾನೆಯೇ ? ಕಿವುಡನ ಮುಂದೆ ಕಿನ್ನರಿ ಬಾರಿಸಿದಂತಾಗುತ್ತದೆ. ಆದ್ದರಿಂದ ಜೀವನವನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳಲು ಕಷ್ಟಾನುಭವ ಅವಶ್ಯಕ.

ಎರಡನೆಯದಾದರೋ ಅನುತಾಪ. ಇದೂ ಸಹ ಜೀವನದ ವಿಕಾಸಕ್ಕೆ ತುಂಬಾ ಸಹಾಯಮಾಡುತ್ತದೆ. ತಪ್ಪುಮಾಡುವುದೇನೋ ಮಾನವನ ಸಹಜವಾದ ಗುಣ. ಹುಟ್ಟುತ್ತಲೇ ಮಹಾತ್ಮನಾಗುವುದು ಯಾವ ವ್ಯಕ್ತಿಗೂ ಸಾಧ್ಯವಿಲ್ಲ. ಹಾಗೆ ಸಾಧ್ಯವಾಗಿದ್ದ ಪಕ್ಷದಲ್ಲಿ ನಾವು ಮನುಷ್ಯರಾಗಿ ಹುಟ್ಟಬೇಕಾದ ಪ್ರಮೇಯವೇ ಇರುತ್ತಿರಲಿಲ್ಲ. ಅದರಲ್ಲೂ ಯೌವನಕಾಲವಂತೂ ಮಧ್ಯಾಹ್ನದ ತಾಪಕ್ಕೆ ಸಮನಾದದ್ದು. ಆ ತಾಪದ ವೇಗದಿಂದ 'ಇದು ಸರಿ, ಇದು ತಪ್ಪು' ಎಂಬ ವಿವೇಚನಾಜ್ಞಾನವಿಲ್ಲದೆ ಮುನ್ನುಗ್ಗಿ ತಪ್ಪು ಮಾಡುತ್ತಾನೆ. ಆದರೆ ಆ ತಪ್ಪನ್ನು— ಆ ಪಾಪವನ್ನು— ಅನುತಾಪದಿಂದ ಹೋಗಲಾಡಿಸಿಕೊಳ್ಳಬಹುದು.

ಈ ಅನುತಾಪವಾದರೋ ಅಂತರಿಕವಾದದ್ದಾಗಿರಬೇಕು. ಷೇಕ್ಸ್‌ಪಿಯರ್‌ನ 'ಟೆಂಪೆಸ್ಟ್' ನಾಟಕದಲ್ಲಿ ಫರ್ಡಿನೆಂಡ್‌ನೊಡನೆ ಪ್ರೇಮವನ್ನು ಪ್ರಾಸ್ಪರೋ, ಕಷ್ಟಸಾಧ್ಯವಾದ ಕೆಲಸದಿಂದ ಪರೀಕ್ಷೆ ಮಾಡುತ್ತಾನೆ. ಇದಾದರೋ ಕೇವಲ ಬಾಹ್ಯಕ್ಲೇಶ. ಇದರಿಂದ ನಿಜವಾದ ಪ್ರೇಮಪರೀಕ್ಷೆಯನ್ನು ಮಾಡಿದಂತಾಗುವುದಿಲ್ಲ. ಯಾವ ಆಂತರಿಕವಾದ ಉತ್ತಾಪ ಮತ್ತು ಮರ್ದನಗಳಿಂದ ಇದ್ದಿಲು ವಜ್ರವಾಗುತ್ತದೆಯೋ ಅದೇ ರೀತಿ, ಆಂತರಿಕವಾದ ದುಃಖದ ಉತ್ತಾಪ ಮತ್ತು ಮರ್ದನದಿಂದಲೇ ಮನಸ್ಸು ವಜ್ರವಾಗಲು ಸಾಧ್ಯ.

ಜೀವನದ ಪರಿಪೂರ್ಣ ವಿಕಸನಕ್ಕೆ ಅನುತಾಪದ ಬೆಂಕಿ ಮತ್ತು ಅಪರಾಧದ ಪೆಟ್ಟುಗಳು ಅವಶ್ಯಕ— ಎಂಬುದು ರವೀಂದ್ರರ ಶಾಕುಂತಲ ನಾಟಕ ವಿಮರ್ಶೆಯಲ್ಲಿ ಕಂಡುಬರುತ್ತದೆ. ರವೀಂದ್ರರ ಆಧುನಿಕ ದೃಷ್ಟಿಯ ಪ್ರಕಾರ, ಯಾವ ಜೀವವು ಕಷ್ಟವನ್ನು ಅನುಭವಿಸುತ್ತದೆಯೋ ಅದು ಮುಂದೆ ಬರತಕ್ಕ ಸುಖವನ್ನು ಇಮ್ಮಡಿಯಾಗಿ ಅನುಭವಿಸುತ್ತದೆ. ನೋವಿನ ಹಿಂದೆ ಒಂದು ಆಪ್ಯಾಯಮಾನವಾದ ಸುಖವಿರುತ್ತದೆ. ದುಃಖವನ್ನು ಕಾಣದ ಸುಖವಾದರೋ ಕ್ಷಣಿಕವಾದದ್ದು; ಆದರೆ ಅದು ಯಾವಾಗ ಅನುತಾಪ ಮತ್ತು ತಪಸ್ಸಿನ ಮೂಲಕ ಗಳಿಸಲ್ಪಡುವುದೋ, ಆಗ ಅದು ಶಾಶ್ವತವಾದದ್ದಾಗುತ್ತದೆ.

ಅಪರಂಜಿ ಚಿನ್ನವನ್ನು ಪಡೆಯಬೇಕಾದರೆ, ಅದು ಮೊದಲು ಕಾದ ಕುಲುಮೆಯಲ್ಲಿ ಹುರಿಯಲ್ಪಡುತ್ತದೆ. ಒರಟಾದ ಬಂಡೆಯ ಮೇಲೆ ಹರಿದನಂತರವೇ ನಾವು ಸ್ವಚ್ಛವಾದ ನೀರನ್ನು ಪಡೆಯುವೆವು. ಇದೇ ರೀತಿ ಜೀವನಧಾರೆಯು ವಿಪತ್ತೆಂಬ ಬಂಡೆಯ ಮೇಲೆ ಹರಿದು ಪವಿತ್ರವಾಗುತ್ತದೆ. ಪ್ರಾತಃಕಾಲದ ಸ್ನಿಗ್ಧತೆಯು ಮಧ್ಯಾಹ್ನದ ತಾಪದಿಂದ ದಹಿಸಿದ ಮೇಲೆಯೇ, ಲೋಕಲೋಕಾಂತರವಾದ ಸಂಧ್ಯಾಕಾಲದ ಆರಾಮ ಬರುವುದು. ಬಾಲ್ಯದ ಶಾಂತಿಯು ಮಧ್ಯದಿಂದ ಬಂದು ಜಗತ್ತಿನ ವಿರೋಧ ವಿಪತ್ತುಗಳಲ್ಲಿ ಬೀಳದಿದ್ದರೆ, ವಾರ್ಧಿಕ್ಯದ ಪರಿಪೂರ್ಣವಾದ ಶಾಂತಿಯನ್ನು ಪಡೆಯಲಾಗುವುದಿಲ್ಲ.

ಇದನ್ನು ಶಾಕುಂತಲ ನಾಟಕದಲ್ಲಿ ಬಹಳ ಚೆನ್ನಾಗಿ ನೋಡುತ್ತೇವೆ. ಕಣ್ವಾಶ್ರಮದಲ್ಲಿ ಕಣ್ವರಿಲ್ಲದ ಸಮಯದಲ್ಲಿ, ದುಷ್ಯಂತ ಮತ್ತು ಶಕುಂತಳೆಯರು ದೊಡ್ಡವರ ಅನುಮತಿಯಿಲ್ಲದೆ ಗಾಂಧರ್ವ ರೀತಿಯಲ್ಲಿ ವಿವಾಹ ಮಾಡಿಕೊಳ್ಳುತ್ತಾರೆ. ಆ ಅಪರಾಧಕ್ಕೆ ಪೆಟ್ಟಿನರೂಪವಾಗಿಯೇ ದೂರ್ವಾಸರ ಶಾಪವು ಕಂಡುಬರುತ್ತದೆ. ಆ ಶಾಪದ ಸಲುವಾಗಿ ಅನುಭವಿಸಲ್ಪಟ್ಟ ಕಷ್ಟವೇ ಶಾಶ್ವತವಾದ ಸುಖಕ್ಕೆ ದಾರಿಯಾಗುತ್ತದೆ. ಪಾಪದಿಂದ ಭಂಗುರವಾದುದು ಕಷ್ಟದ ಹೊರೆಯಿಂದ ದೃಢತ್ವವುಳ್ಳುದಾಯಿತು.

ಇಲ್ಲಿ ಕೇವಲ ಅಪರಾಧದ ಪೆಟ್ಟೊಂದೇ ಅಲ್ಲ. ಅನುತಾಪದ ಬೆಂಕಿಯನ್ನು ಸಹ ನೋಡುತ್ತೇವೆ. ದುಷ್ಯಂತ ಶಕುಂತಳೆಯರು ಮೊಟ್ಟಮೊದಲನೆಯ ಸಲ ಕಣ್ವಾಶ್ರಮದಲ್ಲಿ ಒಬ್ಬರನ್ನೊಬ್ಬರು ನೋಡುತ್ತಾರೆ. ತತ್‌ಕ್ಷಣವೇ ಇಬ್ಬರಲ್ಲೂ ಪ್ರೇಮಾಂಕುರವಾಗಿ ಇಬ್ಬರೂ ಗಾಂಧರ್ವ ರೀತಿಯಾಗಿ ವಿವಾಹವಾಗಲು ಒಪ್ಪಿಕೊಳ್ಳು-



ತ್ತಾರೆ. ಮತ್ತು ತಮ್ಮ ಇಷ್ಟಾರ್ಥಸಿದ್ಧಿಯಿಂದ ಸಂತೋಷಗೊಳ್ಳುತ್ತಾರೆ. ಈ ಸುಖವಾದರೋ, ಎಷ್ಟು ಶೀಘ್ರವಾಗಿ ನಿರಾಯಾಸವಾಗಿ ಸಂಪಾದಿಸಲ್ಪಟ್ಟಿತೋ, ಅಷ್ಟೇ ಶೀಘ್ರವಾಗಿ ನಿರಾಯಾಸವಾಗಿ ನಾಶವಾಯಿತು. ಆದರೆ ಯಾವಾಗ ಕಳೆದು ಹೋದ ಮುದ್ರೆಯುಂಗುರವು ದುಷ್ಯಂತನ ಕೈಗೆ ಸಿಗುತ್ತದೆಯೋ ಆಗ, ಅವನಿಗೆ ತಾನು ಶಕುಂತಳೆಗೆ ಮಾಡಿದ ಅಪರಾಧದ ಅರಿವಾಗಿ, ಅದಕ್ಕಾಗಿ ಪಶ್ಚಾತ್ತಾಪ ಪಡುತ್ತಾನೆ.

ಇದಾದರೋ ಅಂತರಿಕವಾಗಿ ಬಂದುದು ಆ ಆಂತರಿಕವಾದ ಅನುತಾಪದ ಬೆಂಕಿಯಿಂದ ಬೆಂದ ನಂತರವೇ ಮಾರೀಚಾಶ್ರಮದಲ್ಲಿ ಒಬ್ಬರನ್ನೊಬ್ಬರು ಪುನಃ ಸೇರುತ್ತಾರೆ. ಇಲ್ಲಿಯ ಸುಖವಾದರೋ ಸ್ಥಿರವಾದುದು. ಇನ್ನೂ ಸರಿಯಾಗಿ ಹೇಳುವುದಾದರೆ, ಕಣ್ವಾಶ್ರಮದಲ್ಲಿ ಕಂಡ ಸುಖವನ್ನು "ಭೂಸ್ವರ್ಗ"ವೆಂದೂ ಮಾರೀಚಾಶ್ರಮದಲ್ಲಿ ಕಂಡ ಸುಖವನ್ನು "ದೈವೀಸ್ವರ್ಗ"ವೆಂದೂ ಹೇಳಬಹುದು. ಈ ರೀತಿಯಾಗಿ ಭೂಸ್ವರ್ಗದಿಂದ ದೈವೀಸ್ವರ್ಗವನ್ನು ಸೇರಲು ವೈತರಣೀ ನದಿಯನ್ನು ದಾಟಬೇಕು. ಈ ರೀತಿಯಾಗಿ ಅನುತಾಪದಿಂದ, ಅವರು ಮಾಡಿದ ಪಾಪವು ನಾಶವಾಗಿ ಮಂಗಳ ಕಾರ್ಯದಲ್ಲಿ ತೊಡಗಿತು.

ಈ ರೀತಿಯಾಗಿ ಈ ಅನುತಾಪ ಮತ್ತು ವೇದನೆಯ ಶಕ್ತಿಯನ್ನು ಕೇವಲ ಶಾಕುಂತಳ ನಾಟಕದಲ್ಲಿ ಮಾತ್ರವಲ್ಲ, ನಮ್ಮ ನಿತ್ಯ ಜೀವನದಲ್ಲೂ ನೋಡುತ್ತೇವೆ. ಇದು ಎಷ್ಟೋ ಜನರ ಜೀವನಧಾರೆಯಲ್ಲೇ ಮಾರ್ಪಾಟನ್ನುಂಟುಮಾಡಿದೆ. ಯಾವ ಮನುಷ್ಯನೂ ಹುಟ್ಟುತ್ತಲೇ ಮಹಾತ್ಮನಾಗುವುದಿಲ್ಲ. ಎಲ್ಲರೂ ತಪ್ಪು ಮಾಡುತ್ತಾರೆ. ಆದರೆ ಆ ತಪ್ಪನ್ನು ಕ್ರಮೇಣ ಅರಿತುಕೊಂಡು ಅದಕ್ಕಾಗಿ ಅನುತಾಪಪಡುತ್ತಾನೆ. ಯಾವಾಗ ಒಂದು ಸಲ ಹಾಗೆ ಅನುತಾಪಪಡುತ್ತಾನೆಯೋ ಆಗ, ಅವನ ದೋಷವೆಲ್ಲಾ ನಾಶವಾಗುತ್ತದೆ.

ಎಷ್ಟೋ ಜನ ಮಹಾತ್ಮರುಗಳ ಜೀವನವು ಉದಾಹರಣೆಗೆ ಸಿಗುತ್ತದೆ. ನಮ್ಮ ಕಣ್ಣೆದುರಿಗೇ ಇದ್ದು ಪ್ರಖ್ಯಾತರಾಗಿ ಅಳಿದ ಮಹಾತ್ಮಾ ಗಾಂಧೀಯವರನ್ನು ತೆಗೆದುಕೊಳ್ಳೋಣ; ಅವರೇ ತಮ್ಮ ಆತ್ಮಕಥೆಯಲ್ಲಿ ತಾವು ಹೇಗೆ ಪಾಪಮಾರ್ಗಗಳಲ್ಲಿ ಕಾಲಿಟ್ಟಿದ್ದರು. ಮತ್ತು ಅದಕ್ಕಾಗಿ ಪಶ್ಚಾತ್ತಾಪಗೊಂಡು ಅದರಿಂದ ಹೇಗೆ ಪಾರಾದರು ಎಂಬುದನ್ನು ತಿಳಿಸಿದ್ದಾರೆ. ಕಳ್ಳತನವನ್ನು ಮಾಡಿದ್ದಾರೆ; ಸುಳ್ಳು ಹೇಳಿದ್ದಾರೆ. ಎಲ್ಲಾ ಮಾಡಿದ್ದಾರೆ, ಆದರೆ ತಾವು ಮಾಡಿದ್ದು ತಪ್ಪೆಂದು ತಿಳಿದ ನಂತರ ಅದನ್ನೆಲ್ಲಾ ಬಿಟ್ಟುಬಿಟ್ಟರು. ಒಂದು ಸಲ ಹಾಗೆ ಅನುತಾಪದ ಬೆಂಕಿಯಿಂದ ಬೆಂದನಂತರ, ಅವರು ಪುನಃ ಎಂದಿಗೂ ತಪ್ಪು ಮಾಡಲಿಲ್ಲ. ಅದಕ್ಕೆ ಬದಲು "ಬುದ್ಧದೇವ" ಮತ್ತು ಏಸುಕ್ರಿಸ್ತರಂತೆ ಒಂದು ಅವತಾರವೆಂದು ಜಗತ್ಪ್ರಖ್ಯಾತರಾದರು.

ಪುರಾಣ ಗ್ರಂಥಗಳಿಂದ ಉದಾಹರಣೆಗಳನ್ನು ಕೊಡಹೋದರೂ ಬೇಕಾದಷ್ಟು ದೃಷ್ಟಾಂತಗಳು ಸಿಗುತ್ತವೆ. ಯಾವ ವಾಲ್ಮೀಕಿ ಮಹರ್ಷಿಗಳು "ಆದಿಕವಿ"ಗಳೆಂದು ಪ್ರಸಿದ್ಧರಾಗಿದ್ದರೋ, ಅವರು ಹಿಂದೆ ಒಬ್ಬ ಸಾಧಾರಣ ಬೇಡನಂತೆ ಕಳ್ಳತನ ದರೋಡೆಗಳಿಂದ ಜೀವನೋಪಾಯವನ್ನು ನಡೆಸುತ್ತಿದ್ದರು. ಸಪ್ತ ಋಷಿಗಳ ಬೋಧನೆಯಿಂದ ಇದ್ದಕ್ಕಿದ್ದಂತೆಯೇ ತಾವು ಮಾಡುತ್ತಿರುವುದು ತಪ್ಪು ಎಂದು ತಿಳಿದು, ಅದಕ್ಕಾಗಿ ಪಶ್ಚಾತ್ತಾಪಪಟ್ಟರು. ಅನಂತರ ಮನಸ್ಸಿನ ಆ ಕುದಿಯೇ ಅವರ ವ್ಯಕ್ತಿತ್ವವನ್ನು ಬದಲಾಯಿಸಲು ಸಹಾಯಮಾಡಿತು. ಸ್ವಾಭಾವಿಕವಾಗಿ ಹರಿದು ಬಂದ ಕಣ್ಣೀರು ಕಳಂಕವನ್ನೆಲ್ಲಾ ಕೊಚ್ಚಿಕೊಂಡು ಹೋಯಿತು.

ಇದೇ ರೀತಿಯಾದ ಮಾರ್ಪಾಟನ್ನು ಪತಿವ್ರತಾ ಶಿರೋಮಣಿ ಎಂದು ಪ್ರಸಿದ್ಧಳಾಗಿರುವ—ಗೌತಮ ಮಹರ್ಷಿಗಳ ಹೆಂಡತಿ—ಅಹಲ್ಯಾದೇವಿಯ ಜೀವಮಾನದಲ್ಲೂ ನೋಡುತ್ತೇವೆ. ಯಾವುದೋ ಒಂದು ವಿಷಗಳಿಗೆಯಲ್ಲಿ ಏನೋ ಒಂದು ವಿಧವಾದ ಕುರುಡು ಮೋಹದಿಂದ ಇಂದ್ರನಲ್ಲಿ ಅನುರಕ್ತಳಾದಳು. ಆದರೆ ತತ್ಕ್ಷಣವೇ ತಾನು ಮಾಡಿದ್ದು ತಪ್ಪೆಂದು ತಿಳಿದು, ನಿದ್ರಾಹಾರಗಳಿಲ್ಲದೆ ಶಿಲೋಪಾದಿಯಲ್ಲಿ ಕಾಲವನ್ನು ಕಳೆದಳು. ಆ ವೇದನೆಯೇ, ಶ್ರೀರಾಮಚಂದ್ರನ ಪಾದಸ್ಪರ್ಶದ ಸೌಭಾಗ್ಯವನ್ನು ಪಡೆದು ಪಾಪದಿಂದ ಮುಕ್ತಿಹೊಂದಲು ಸಹಾಯಮಾಡಿತು.

ಇತಿಹಾಸ ರೀತಿಯಲ್ಲೂ ಅನೇಕ ಉದಾಹರಣೆಗಳನ್ನು ಕೊಡಬಹುದು. ಉದಾಹರಣೆಗೆ ಧರ್ಮಸಾಮ್ರಾಟನೆಂದು ಪ್ರಸಿದ್ಧನಾಗಿರುವ ಅಶೋಕ ಚಕ್ರವರ್ತಿಯೂ, ಕಳಿಂಗಯುದ್ಧವನ್ನು ಮಾಡಿ ಲಕ್ಷಾಂತರ ಜನರನ್ನು ಕೊಂದನು. ಹಾಗೆ ಕೊಂದ ನಂತರವೇ ಅವನಿಗೆ ತಾನು ಮಾಡಿದ ಅಪರಾಧ ತಿಳಿದದ್ದು. ಹಾಗೆ ತಿಳಿದ ಮೇಲೆ ಅವನು ಎಂದಿಗೂ ಯುದ್ಧ ಮಾಡಲಿಲ್ಲ. ಹಿಂಸಾಕಾರ್ಯವನ್ನೇ ಬಿಟ್ಟನು ಮತ್ತು "ಧರ್ಮಪ್ರಭು" ಎನಿಸಿದನು.

ಈ ಉದಾಹರಣೆಗಳಿಂದ "ಮನುಷ್ಯತ್ವ"ದಿಂದ "ದೈವತ್ವ"ಕ್ಕೆ ಏರಲು ಅನುತಾಪ ಮತ್ತು ವೇದನೆಯು ಎಷ್ಟರ ಮಟ್ಟಿಗೆ ಸಹಾಯ ಮಾಡುತ್ತದೆ ಎಂಬುದೂ, ಜೀವನದ ಪರಿಪೂರ್ಣ ವಿಕಾಸಕ್ಕೆ ಇವುಗಳ ಅವಶ್ಯಕತೆಯೂ ತಿಳಿದುಬರುತ್ತದೆ. ಆದ್ದರಿಂದ ಮನುಷ್ಯನು ಯಾವಾಗಲೂ ಕಷ್ಟದಿಂದ ದೂರವಾಗಲು ಯತ್ನಿಸಬಾರದು. ಅದಕ್ಕೆ ಬದಲು ಪ್ರಸಿದ್ಧನಾದ ಇಂಗ್ಲೀಷ್ ಕವಿ ರಾಬರ್ಟ್ ಬ್ರೌನಿಂಗನಂತೆ "Oh ! God give me trouble" ಎಂದು ಪ್ರಾರ್ಥಿಸಬೇಕು. ಏಕೆಂದರೆ ನೋವಿನ ಹಿಂದೆ ಒಂದು ಆಪ್ಯಾಯಮಾನವಾದ ಸುಖವಿರುತ್ತದೆ. In the words of shelly "Our sweetest songs are those that tell us of Saddest things." ಇದರಿಂದ ನಮಗೆ ಜೀವನದಲ್ಲಿ ಅನುತಾಪ ಮತ್ತು ವೇದನೆಯ ಸ್ಥಾನವು ಎಷ್ಟು ಮಹತ್ತರವಾದುದು ಎಂಬುದು ತಿಳಿಯುತ್ತದೆ.

ಸತೀ

(ಒಂದು ಕತೆ) *

ಶ್ರೀಮತಿ ಇಂದಿರಾ ಲಕ್ಷ್ಮೀನರಸಿಂಹರಾವ್ ಬಿ. ಎ.
ಜಬಲ್ಪುರ

★

ಕೆಲವೊಂದು ಕಾಲದ ಮಾನವನ ಆದರ್ಶಗಳು, ಶಿಷ್ಟಸಂಪ್ರದಾಯಗಳಾಗಿ ಸಮಾಜದಲ್ಲಿ ಉಳಿದುಕೊಂಡುಬರುವುವು. ಕಾಲದ ಬದಲಾವಣೆಯಲ್ಲಿ ಈ ಶಿಷ್ಟಸಂಪ್ರದಾಯಗಳೇ ಹೇಗೆ ಬೇಸರಕ್ಕೆ ಗುರಿಯಾಗುವುವೆಂಬುದನ್ನು ನೋಡಿರಿ. ಬದುಕನ್ನು ಬಯಸುತ್ತಿದ್ದ ರಂಪಿಯನ್ನು, ಈ ಶಿಷ್ಟಸಂಪ್ರದಾಯ, ಕೈ ಕಾಲು ಬಿಗಿದುಕಟ್ಟಿ ಸುಟ್ಟು ಬೂದಿಮಾಡಿತು.

★

ಆ ದಿನ ರಮಯೀಪುರದ ಮೇಲೆ ಕೆಂಡದ ಮಳೆಯೇ ಸುರಿಯುತ್ತಿತ್ತು. ಜ್ಯೇಷ್ಠಮಾಸದಲ್ಲಿ ರಮಯೀಪುರದ ಬಿಸಿಲಿನ ಬೇಗೆ ಎಷ್ಟು ಅಸಹನೀಯವೆಂಬುದನ್ನು, ಅಲ್ಲಿಯ ನಿವಾಸಿಗಳೇ ವರ್ಣಿಸಿ ಹೇಳಬಲ್ಲರು. ಅಂದು ಬೇಸಗೆಯ ಬಿಸಿಗಾಳಿಯು 'ಸುರ್ರ್ಽಽ ಸುಯ್ಯ್ಽಽ' ಎಂದು ಸರ್ಪದಂತೆ ಫೂತ್ಕರಿಸುತ್ತಿತ್ತು. ನೆಲವೆಲ್ಲ ಒಲೆಯ ಮೇಲಿನ ಹಂಚಿನಂತೆ ಕಾದು ಸುಡುತ್ತಿತ್ತು. ಉರಿಬಿಸಿಲಿನ ಶಕೆಯಿಂದ, ಮನೆಯೊಳಗೆ ಕುಳಿತಿದ್ದರೂ ಮುಖದಿಂದ ನೀರ ಹರಿಯುತ್ತಿತ್ತು. ಆಕಾಶವನ್ನು ಕಣ್ಣೆತ್ತಿ ನೋಡಲು ಹೋದರೆ ಕಣ್ಣು ಕುಕ್ಕುತ್ತಿತ್ತು. ಇಂತಹ ಬಿಸಿಲಲ್ಲಿ, "ಮರದ ನೆರಳಲ್ಲಿ ಕುಳಿತ ಘಟಸರ್ಪವೊಂದು ತನ್ನ ಹೆಡೆಯ ನೆರಳಲ್ಲಿ ಕುಳಿತ ಕಪ್ಪೆಯನ್ನೂ ನೋಡದೆ ತೆಪ್ಪಗೆ ಕುಳಿತಿತ್ತು." ಎಂದೊರ್ವ ಸಂಸ್ಕೃತ ಕವಿಯು ಹೇಳಿದುದು ಎಷ್ಟೊಂದು ಯಥಾರ್ಥವಾಗಿದೆಯಲ್ಲವೇ ?

ಆದರೆ ಮನುಷ್ಯನಿಗೆ ಅಭ್ಯಾಸವಾಗಿಬಿಟ್ಟರೆ, ಅವನು ಎಲ್ಲವನ್ನೂ ಸಹಿಸಬಲ್ಲನು. ರಮಯೀಪುರದ ಹೆಚ್ಚು ಜನ ನಿವಾಸಿಗಳು ಕೀಳುಜಾತಿಯವರಾಗಿದ್ದರು. ಅದೊಂದು ಚಿಕ್ಕ ಹಳ್ಳಿ. ಅಲ್ಲಿ ಒಟ್ಟು ಇಪ್ಪತ್ತು ಇಪ್ಪತ್ತೈದು ಮನೆಗಳಿದ್ದಿರಬಹುದು. ಮನೆಗಳಲ್ಲ; ಅವುಗಳೆಲ್ಲ ಗುಡಿಸಲುಗಳೆಂದೇ ಹೇಳಬಹುದು. ಅಂದು ಇನ್ನಾವುದಾದರೂ ದಿನವಾಗಿದ್ದರೆ, ಅಂತಹ ಬಿಸಿಲಲ್ಲಿ ಒಂದು ಗುಬ್ಬಚ್ಚಿಯ ಮರಿಯನ್ನೂ ಮನೆಯ ಹೊರಗೆ ನೋಡುವುದು ದುಃಸಾಧ್ಯವಾಗಿತ್ತು. ಆದರೆ ಮೃತ್ಯುವು ಏನನ್ನು ಮಾಡಲಾರದು ? ಎಲ್ಲವನ್ನೂ ಮಾಡುವ ಬಲ ಮೃತ್ಯುವಿಗಿದೆಯಲ್ಲವೇ? ಅಂದು ಕಮ್ಮಾರ ಕಲ್ಲನನ್ನು ಸ್ಮಶಾನಕ್ಕೆ ಸಾಗಿಸಲೇ ಬೇಕಾಗಿತ್ತು. ಆದುದರಿಂದ ಅವನ ಬಂಧು-ಬಳಗದವರು ಮತ್ತು ಸ್ನೇಹಿತರು, ಅಂದು ಮಧ್ಯಾಹ್ನ ಅಂತಹ ಬಿಸಿಲಿದ್ದರೂ, ತಲೆಯ ಮೇಲೆ ಅಂಗವಸ್ತ್ರವನ್ನು ಹೊದ್ದುಕೊಂಡು ಬಂದು, ಕಲ್ಲನ ಮನೆಯ ಅಂಗಳದಲ್ಲಿ ನೆರೆದಿದ್ದರು. ನೆರೆಮನೆಯ ಹೆಂಗುಸರೂ ಅಲ್ಲಿ ಬಂದು ಸೇರಿದ್ದರು. ಹೆಂಗುಸರ ರೋದನ, ರಂಬಾಟ, ಎದೆ ಎದೆ ಬಡಿದುಕೊಳ್ಳುವುದು, ಹಣೆ ಹಣೆ ಹೊಡೆದುಕೊಳ್ಳುವುದು, ಇವುಗಳ ಸಪ್ಪಳವು ಗಾಳಿಯ ಮೂಲಕ ದೂಡಿಕೊಂಡು ಬಂದು, ಮೆಲ್ಲಮೆಲ್ಲಗೆ ಊರಲ್ಲೆಲ್ಲ ಹರಡುತ್ತಿತ್ತು.

ಕಲ್ಲನ ಮೃತ್ಯುವನ್ನು ಕುರಿತು ನೀವು ದುಃಖಿಸಿರಿ, ಇಲ್ಲವಾದರೆ ಬಿಡಿರಿ. ಅದು ನಿಮ್ಮ ಇಷ್ಟ. ಅವನೊಬ್ಬ ೨೭ ವರುಷಗಳ ಹಳ್ಳಿಯ ಗಮಾರ. ಆರು ಅಡಿ ಎತ್ತರವಾಗಿದ್ದ. ಬಣ್ಣ ಕಲ್ಲಿದ್ದಲಿಯಂತೆ ಕಪ್ಪು. —ಹನುಮಂತನ ಬಾಹುಗಳಂತೆ ಬಲಿಷ್ಠವಾದ ಬಾಹುಗಳು. ಹೊಗೆಸೊಪ್ಪು, ಎಲೆ-ಅಡಿಕೆ ಜಗಿದು ಜಗಿದು, ಯಾವಾಗಲೂ ಕೆಂಪಗಿರುವ ಬಾಯಿ, ಕೆಂಪಗಿರುವ ಹಲ್ಲುಗಳು. ಒಟ್ಟಿನಲ್ಲಿ ಒಂದು ಕೀಟದಂತೆ ಅವನ ಜೀವನವಾಗಿತ್ತು. ಬಾಲ್ಯದಲ್ಲಿ ಕಸರತ್ತು, ವ್ಯಾಯಾಮಮಾಡುವ ಹವ್ಯಾಸವೂ ಇತ್ತು, ಅಭ್ಯಾಸವೂ ಇತ್ತು. ಯೌವನದಲ್ಲಿ ಮದ್ಯಕುಡಿಯುವ ಚಟ ಸೇರಿಕೊಂಡಿತು. ಮದ್ಯದ ಜೊತೆಗೆ ಅಂಟಿಕೊಂಡುಬರುವ ಇನ್ನೂ ಹಲವಾರು ಕೆಟ್ಟ ಚಾಳಿಗಳೂ ಅವನಲ್ಲಿದ್ದುವು; ಆದರೆ ಧರ್ಮ ಮತ್ತು ವ್ರತಾಚರಣೆಗಳಿಗೆ ಬಹಳ ಸಹಾಯಮಾಡುತ್ತಿದ್ದನು. ರಾಮಾಯಣ ಮತ್ತು ಸತ್ಯನಾರಾಯಣ ಕಥೆಗಳಿಗಾಗಿ, ಧಾರಾಳವಾಗಿ ವೆಚ್ಚಮಾಡುತ್ತಿದ್ದನು. ಪಂಡಿತ ರಾಮಸ್ವರೂಪರು, ಕಲ್ಲನ ಪ್ರಶಂಸೆಮಾಡುವುದರಲ್ಲಿ ಎಂದಿಗೂ ದಣಿಯುತ್ತಿರಲಿಲ್ಲ. ಕಲ್ಲನು ತನ್ನ ಕಮ್ಮಾರಕೆಲಸದಲ್ಲಿಯೂ ಕುಶಲನಾಗಿದ್ದ. ಆದುದರಿಂದ ಅವನ ಆರ್ಥಿಕಪರಿಸ್ಥಿತಿಯೂ, ಅಷ್ಟೊಂದು ಹೀನವಾಗಿರಲಿಲ್ಲ. ಕೊರಳಲ್ಲಿ ಒಂದು ತಾಯಿತ, ಮೈಮೇಲೆ ಮೊಣಕಾಲುಮುಚ್ಚುವವರೆಗೂ ಒಂದು ಪಂಚೆ. ಸಾರಾಂಶದಲ್ಲಿ, ಅವನನ್ನು ಒಂದು ಸಲ ಕಂಡರೆ, ಅವನೊಬ್ಬ, ಸಾಮ್ಯವಾದದ— ಕುಡುಗೋಲನ್ನು ಹಿಡಿಯಲು ಯೋಗ್ಯನಾದ— ವ್ಯಕ್ತಿಯಂತೆ ತೋರುತ್ತಿದ್ದ. ಇಂತಹನು ಸತ್ತನು ಹೇಗೆ? ಇಂತಹ ಬಲಿಷ್ಠನನ್ನೂ ಇಷ್ಟು ಬೇಗ ಮೃತ್ಯುವು ಸೆಳೆದೊಯ್ಯಬೇಕೆ? ಅದು ಹೇಗೆ ಅವನು ಮರಣಹೊಂದಿದ? ಮೊದಲಿನ ರಾತ್ರಿ ಕಲ್ಲನು ಮದ್ಯವನ್ನು ಮನಸೋಕ್ತವಾಗಿ ಕುಡಿದು, ಅಮಲು ಏರಿದಾಗ, ಯಾವುದೋ ಒಂದು ಜಗಳದಲ್ಲಿ ಸೇರಿಕೊಂಡ. ಅವನ ಎದುರಾಳಿಯೂ, ಯಥೇಷ್ಟವಾಗಿ ಕುಡಿದು ಮತ್ತನಾಗಿದ್ದ. ಮದ್ಯದಿಂದ ಮತ್ತರಾದ ಇಬ್ಬರಲ್ಲಿ ಕದನಕ್ಕಾರಂಭವಾಯಿತು. ಬಾಯಿ ಬಾಯಿ ವಾದನ

* ಪ್ರೊ. ವೃಂದಾವನವಿಹಾರೀ ಅಗ್ನಿಹೋತ್ರೀ ಎಂ. ಎ. ಜಬಲ್ಪುರ, ಅವರ "ಸತೀ" ಎಂಬ ಹಿಂದೀ ಕತೆಯ ಆಧಾರದ ಮೇಲಿಂದ ಬರೆದುದು.

ಮುಗಿದು, ಕೈಗೆ ಕೈ ಕದನಕ್ಕಾರಂಭವಾಯಿತು. ಕಲ್ಲನ ಪ್ರತಿಸ್ಪರ್ಧಿ, ಕಲ್ಲನಷ್ಟೇ ಬಲಿಷ್ಠನಾಗಿರಲಿಲ್ಲ. ಆದರೆ ಆತನು ಕಲ್ಲನಿಗಿಂತ ಬಹಳ ಚುರುಕನಾಗಿದ್ದ. ಕದನದಲ್ಲಿ ಮತ್ತನಾದ ಪ್ರತಿಸ್ಪರ್ಧಿಯು, ಕಲ್ಲನು ಅಷ್ಟೊಂದು ಜಾಗರೂಕನಿಲ್ಲದಾಗ, ಅವನ ಕುತ್ತಿಗೆಯನ್ನು ತನ್ನ ಎರಡು ಕೈಗಳಿಂದಲೂ ಬಲವಾಗಿ ಒತ್ತಿಬಿಟ್ಟ. ಅಗ ಮುಚ್ಚಿದ ಕಣ್ಣುಗಳನ್ನು ಕಲ್ಲ ಮತ್ತೆ ತೆರೆಯಲೇ ಇಲ್ಲ. ಖೂನಿಯ ಶೋಧ ಇದುವರೆಗೂ ಆಗಿಲ್ಲ.

ಕಲ್ಲನ ಮಾತು ಇಲ್ಲಿಗೆ ಸಾಕು. ನಮ್ಮ ಕತೆಯ ನಾಯಕ ಕಲ್ಲನಲ್ಲ, ಆದರೆ ಅವನ ಮೂರನೆಯ ಪತ್ನಿ ರಂಪೀ (ರಾಮಪ್ಯಾರಿ) ಈ ಕತೆಯ ನಾಯಕಿ. ಈ ಮೊದಲು ಕಲ್ಲನಿಗೆ ಎರಡು ಸಲ ಮದುವೆಯಾಗಿತ್ತು. ಆಗಿತ್ತು ಅಷ್ಟೆ! ಆದರೆ ಅವನ ಆ ಇಬ್ಬರೂ ಹೆಂಡತಿಯರು, ಮದುವೆಯಾದ ಎರಡು ವರ್ಷಗಳಲ್ಲಿಯೇ ಕಣ್ಣು ಮುಚ್ಚಿಬಿಟ್ಟಿದ್ದರು. ಕಲ್ಲನ ತಂದೆ ಮೊಮ್ಮಗನ ಮುಖವನ್ನು ನೋಡಲಿಲ್ಲ. ಆದ್ದರಿಂದ ರಂಪಿ, ಕಲ್ಲನ ಧರ್ಮಪತ್ನಿಯಾಗಿ, ಕಲ್ಲನ ಮನೆಗೆ ಬಂದಳು. ನಮ್ಮ ದೇಶದ ಅನೇಕ ಗೌರವಗಳಲ್ಲಿ, ನಮ್ಮ ವಿವಾಹಪದ್ಧತಿಯೂ ಒಂದಾಗಿದೆ. ಕಲ್ಲ ಮತ್ತು ರಂಪೀ ಇವರಿಬ್ಬರೂ ವಿವಾಹದ ಪವಿತ್ರಬಂಧನದಲ್ಲಿ ಬಂಧಿತರಾಗಿ ಇಂದಿಗೆ ಸುಮಾರು ಒಂದೂವರೆ ವರುಷ ಮಾತ್ರ ಆಗಿತ್ತು. ಈ ವಿವಾಹವೇನೂ ಒಂದು ಸಾಮಾಜಿಕ ಕಾಂಟ್ರ್ಯಾಕ್ಟ್ ಆಗಿರಲಿಲ್ಲ. ಆದಕ್ಕಾಗಿ ಸಮಾಜಕ್ಕೆ ಇವರ ಸುಖ-ದುಃಖದ ಚಿಂತೆ ಇರಲಿಲ್ಲ. ವಿವಾಹಬಂಧನದಲ್ಲಿದ್ದುಕೊಂಡು, ಸೀತೆ ಸಾವಿತ್ರಿಯರ ಗೌರವವನ್ನು ಅಕ್ಷಯವಾಗಿ ಉಳಿಸುವ ಕರ್ತವ್ಯ ರಂಪಿಯದಾಗಿತ್ತು. ಅವಳ ಮೊದಲಿನ ಇಬ್ಬರು ಸವತಿಯರು ಜೀವಿಸಿದ ರೀತಿಯಲ್ಲಿಯೇ, ರಂಪಿಯೂ ತನ್ನ ಜೀವನವನ್ನು ಸಾಗಿಸಬೇಕು.

ರಂಪಿಯು ೧೪–೧೫ ವರುಷಗಳ ಒರ್ವ ಕುಮಾರಿಯಾಗಿದ್ದಳು. ಅವಳಿಗೆ ನಾದುಗಪ್ಪು ಬಣ್ಣ, ಸರಳವಾದ ಮೂಗು, ದುಂಡಾದ ಮುಖ, ಬೆಳ್ಳನೆಯ ಹಲ್ಲುಗಳು, ಮತ್ತು ಹಾಲು- ಕಪ್ಪು ಕಲಸಿದಂತೆ ಕಣ್ಣುಗಳು. ತಂದೆ ತಾಯಿಗಳಿಗೆ ಇವಳೊಬ್ಬಳೇ ಮಗಳು. ತನರು ಮನೆಯಲ್ಲಿರುವವರಿಗೂ, ಗೆಳತಿಯರೆಲ್ಲರಿಗೂ ಅಚ್ಚುಮೆಚ್ಚಿನವಳಾಗಿದ್ದಳು. ಎಲ್ಲರಿಗೂ ಪಟ್ಟರಾಣಿಯಂತಿದ್ದಳು. ರಂಪಿಯು ಸೋಮಾರಿಯಾದ ಪಟ್ಟದ ರಾಣಿಯಾಗಿರಲಿಲ್ಲ. ಚುರುಕಾಗಿದ್ದಳು. ಬಾವಿಯ ನೀರನ್ನು ತಲೆಯ ಮೇಲೆ ಹೊತ್ತುಕೊಂಡು ಬಂದು ನೀರು ತುಂಬುತ್ತಿದ್ದಳು. ಅಮ್ಮನ ಜೊತೆಗೆ, ಕಾಲುಚಾಚಿಕೊಂಡು ಕುಳಿತು ಬೀಸುತ್ತಿದ್ದಳು. ಬೇಣಿಗಳನ್ನು ತಟ್ಟುತ್ತಿದ್ದಳು. ಹತ್ತು ಎಮ್ಮೆ, ಮತ್ತು ಹಸುಗಳ ಹಾಲನ್ನು ಒಂದೇ ಸಲಕ್ಕೆ ದಣಿಯದೆ ಕರೆಯುತ್ತಿದ್ದಳು. ಓದುವುದು ಬರೆಯುವುದು ಆ ಕಾಲದಲ್ಲಿ ಇರಲಿಲ್ಲ. ಆದ್ದರಿಂದ ರಂಪಿ ಪರೀಕ್ಷೆಯಲ್ಲಿ, ಯಾವ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದಳೆಂಬುದನ್ನು ಹೇಳಲಿಕ್ಕಾಗದು. ಆದರೆ ಮುಖದ ಮೇಲೆ ಸ್ವಾಭಾವಿಕ ಪ್ರತಿಭೆಯು ಲಾಸ್ಯವಾಡುತ್ತಿತ್ತು.

ನೋಡಿದ ತಕ್ಷಣ, ಒಂದು ಒಳ್ಳೇ ಚುರುಕುಹುಡುಗಿಯೆಂಬ ಅಭಿಪ್ರಾಯವು ಮನದಲ್ಲಿ ಅಚ್ಚೊತ್ತಿ ನಿಲ್ಲುತ್ತಿತ್ತು.

ಅವಳ ಅತ್ತೆಯ ಮನೆಯೂ ತುಂಬಿದ ಮನೆಯಾಗಿತ್ತು. ಅತ್ತೆ ಇದ್ದಳು, ಮಾವನಿದ್ದ, ಮೂವರು ಭಾವಂದಿರು, ನಾಲ್ವರು ಮೈದುನರು, ಮೂವರು ಓರಗಿತ್ತಿಯರು, ಮೂವರು ನಾದಿನಿಯರು, ಒಬ್ಬ ಮದುವೆಯಾಗದ ನಾದಿನಿ, ಅಲ್ಲದೆ ಸಣ್ಣ ಮಕ್ಕಳೆಷ್ಟೋ ಇದ್ದರು. ಅದೊಂದು ಏಕತ್ರ ಕುಟುಂಬವಿತ್ತು. ಆಸ್ತಿಯೂ ಏಕತ್ರ ಆಸ್ತಿಯಾಗಿತ್ತು. ಆಗ ೧೮೩೫ ನೆಯ ಇಸವಿ. ಆದ್ದರಿಂದ ಕುಟ್ಟತಗ್ಗುಗಳ ಕಷ್ಟವೂ ಇರಲಿಲ್ಲ. ಪ್ರತಿಯೊಬ್ಬರೂ, ತಿಂದುಂಡು ಸುಖವಾಗಿದ್ದರು. ರಂಪಿಯ ಅತ್ತೆಯಾಗಲಿ, ಮಾವನಾಗಲಿ ರಂಪಿಯನ್ನು ಒಂದು ದಿನವೂ ಬೈಯುತ್ತಿರಲಿಲ್ಲ. ಅವಳಿಗೆ ವಕ್ರವಾಗಿ ಆಡುತ್ತಿರಲಿಲ್ಲ. ಅವಳನ್ನು ವಕ್ರವಾಗಿ ನೋಡುತ್ತಿರಲಿಲ್ಲ. 'ಕಲ್ಲನ ಮೂರನೆಯ ಹೆಂಡತಿ, ಮುದ್ದುಸೊಸೆ' ಎಂದು ಅವಳನ್ನು ಪ್ರೀತಿಸುತ್ತಿದ್ದರು. ಆದರೇನು? ಮನುಷ್ಯನು ಮನುಷ್ಯನೇ ಅಲ್ಲವೆ? ಸಿಟ್ಟೆಂಬುದು ಬಾರದೇ ಇದ್ದೀತೆ? ಸಿಟ್ಟು ಬಂದಾಗ ಒಂದೊಂದು ಸಲ ಅತ್ತೆ ರಂಪಿಗೆ ಒಂದೆರಡು ಕೆನ್ನೆಗೆ ಕೊಡುತ್ತಿದ್ದಳು. ಒಂದೊಂದು ಸಲ ನಾದಿನಿಯೂ ರಂಪಿಯನ್ನು ಪೀಡಿಸುತ್ತಿದ್ದಳು. ಇದೆಲ್ಲವನ್ನೂ ರಂಪಿಯು ಮನಸ್ಸಿಗೆ ತಂದುಕೊಳ್ಳುತ್ತಿರಲಿಲ್ಲ. ತುಂಬಿದ ಮನೆಯಲ್ಲಿ ತಿಂದುಂಡು, ಸುಖವಾಗಿ ಬೆಳೆಯುತ್ತಿದ್ದಳು.

ನಿಜವಾಗಿಯೂ ರಂಪಿಗೆ ಅತ್ತೆಯ ಮನೆಯಲ್ಲಿ ಕಷ್ಟವೆಂಬುದಿರಲಿಲ್ಲ. ಹೊಟ್ಟೆತುಂಬ ಉಣ್ಣುತ್ತಿದ್ದಳು. ಮೈಮುರಿದು ದುಡಿಯುತ್ತಿದ್ದಳು. ಚಿಕ್ಕಮಕ್ಕಳಿಗೆಲ್ಲ ಎಣ್ಣೆ ಹಚ್ಚಿ, ಎರೆಯುತ್ತಿದ್ದಳು. ತೊಟ್ಟಿಲು ತೂಗುತ್ತಿದ್ದಳು. ಮಕ್ಕಳನ್ನು ಆಡಿಸುತ್ತಿದ್ದಳು. ನಾದಿನಿಯೊಡನೆ ಜಗಳಕಾಯ್ದು ಅವಳಿಂದ ಹೊಡೆಯಿಸಿಕೊಳ್ಳುತ್ತಿದ್ದಳು. ಯಾರೂ ನೋಡದಿದ್ದಾಗ ತಾನೂ ಅವಳನ್ನು ಹೊಡೆಯುತ್ತಿದ್ದಳು ಹೀಗೆ ಅತ್ತೆಯ ಮನೆಯೊಂದು ಆಟದ ಬಯಲೆಂದೇ ತಿಳಿದು ಆಟವಾಡುತ್ತಲೇ ಬೆಳೆಯುತ್ತಿದ್ದಳು ರಂಪಿ.

ರಂಪಿಗೆ ಯಾವ ಕಷ್ಟವಿಲ್ಲವೆಂದರೂ ಒಂದೇ ಒಂದು ಕಷ್ಟ ಆಕೆಯನ್ನು ಕೊರೆಯುತ್ತಿತ್ತು. ತಿಂದುಂಡು ಬೆಳೆಯುತ್ತಿರುವ ಆ ಚಿಕ್ಕ ಹುಡುಗಿಗೆ ವಿವಾಹ, ಪತಿಯೆಂದರೇನೆಂದು ಅರ್ಥವಾಗುತ್ತಿರಲಿಲ್ಲ. ರಂಪಿಯ ವಿವಾಹವಾಗಿದ್ದರೂ, ವಿವಾಹವೆಂದರೆ ಅದೊಂದು ಸುಖದಾಯಕ ಜೀವನದ ಸಾಧನವೆಂದು ತಿಳಿಯುವಷ್ಟು, ಒಂದು ಸುಪ್ರಸಂಗವನ್ನೂ ಅವಳು ಕಂಡಿರಲಿಲ್ಲ. ವಿವಾಹವೆಂದರೆ ಅಸಹ್ಯವಾದುದು, ಕ್ಲೇಶಪೂರ್ಣವಾದುದು, ಭಯಾನಕವಾದುದು— ಎಂದು ಮಾತ್ರ ರಂಪಿಯು ತಿಳಿದಿದ್ದಳು. ಕುಡುಕ ಕಲ್ಲನಿಂದ ರಂಪಿಗೆ 'ವಿವಾಹವೆಂದರೆ ಇಷ್ಟೇ' ಎಂದು ಮನವರಿಕೆಯಾಗಿತ್ತು. ವಿವಾಹದ ಅರ್ಥ ಇಷ್ಟೇ ಎಂದು ರಂಪಿ ಭಾವಿಸಿಕೊಂಡಿದ್ದಳು. ಆದರೇನು? ರಂಪಿಯು ಒಳ್ಳೇ ಗುಣಶೀಲ

ಹುಡುಗಿಯಾಗಿದ್ದಳು. ಸ್ತ್ರೀಸಹಜವಾದ ಬುದ್ಧಿಯು ಅವಳಿಗೆ ಹೀಗೆ ಹೇಳುತ್ತಿತ್ತು: ಇದಕ್ಕೆ ಯಾವ ಔಷಧಿಯೂ ಇಲ್ಲ. ತಲೆಯ ಮೇಲೆ ಬಿದ್ದುದನ್ನು ಸಹಿಸಲೇಬೇಕು. ಪಾಲಿಗೆ ಬಂದುದನ್ನು ಪಂಚಾಮೃತವೆನ್ನಬೇಕು. ಮತ್ತು ಸಾಧ್ಯವಾದಷ್ಟು ಬೇಗ ಬೇಗ ಎಲ್ಲವನ್ನೂ ಮರೆಯಬೇಕು.

ಇಂದು ಅವಳಿಗೆ " ಅವನು " ಸತ್ತನೆಂದು ತಿಳಿಯಿತು. ಅವಳ ಕಾಲ ಕೆಳಗಿನ ನೆಲ ಸರಿಯಿತು. ಕಣ್ಣಿಗೆ ಕತ್ತಲೆ ಕಟ್ಟಿಕೊಂಡಿತು. ನಾಲಗೆ ಮೇಲೆ ಅಂಟಿಕೊಂಡಿತು. ತನ್ನ ದೊಡ್ಡ ದೊಡ್ಡ ಕಣ್ಣುಗಳನ್ನು ಅಗಲವಾಗಿ ತೆರೆದು ನೋಡುತ್ತಲೇ ನಿಂತುಬಿಟ್ಟಳು. ಮಾತು ನಿಂತುಹೋಯಿತು. ಅತ್ತೆಯ ಮನೆಯಲ್ಲಿ ಬಂದಂದಿನಿಂದ ರಂಪಿಗೆ ನಾಲ್ಕಾರು ಪ್ರೀತಿಯ ಗೆಳತಿಯರಿದ್ದರು, ಜೊತೆಗಾತಿಯರಿದ್ದರು. ಅವರೂ ಆಗ ಅಲ್ಲಿಗೆ ಬಂದಿದ್ದರು. ರಂಪಿಯ ಈ ರೀತಿಯು ಅವರಿಗೆ ಅರ್ಥವಾಯಿತು. ಅವರೆಲ್ಲರೂ ಸೇರಿ ತಮ್ಮ ಸ್ನೇಹಿತೆಯನ್ನು ಸೆಳೆದುಕೊಂಡು, ಗಟ್ಟಿಯಾಗಿ ಹಿಡಿದುಕೊಂಡು ನಿಂತರು. ರಂಪಿಯು ದೇಹದಲ್ಲಿ ಜೀವವಿಲ್ಲದಂತೆ, ತನ್ನ ಸ್ನೇಹಿತೆಯರ ಆಲಿಂಗನದಲ್ಲಿ ನಿಶ್ಪ್ರಾಣವಾಗಿ ಬಿದ್ದುಕೊಂಡಿದ್ದಳು.

ರಂಪಿಗೆ ನಿಧಾನವಾಗಿ ಸ್ಮೃತಿಯು ಬರುತ್ತಲಿತ್ತು. ಆಕೆಗೆ ಏನಾದರೂ ನಾಲ್ಕು ಸಮಾಧಾನದ ಮಾತು ಹೇಳುವಷ್ಟು, ಆ ಸ್ನೇಹಿತೆಯರಿಗೆ ಧೈರ್ಯವಿರಲಿಲ್ಲ. ಇಂತಹ ಪ್ರಸಂಗದಲ್ಲಿ ಶಾಬ್ದಿಕವಾದ ಸಾಂತ್ವನದಿಂದೇನು ಪ್ರಯೋಜನ? ಅವಳೊಬ್ಬ ಹದಿನೈದು ವರುಷದ ಹುಡುಗಿಯಾಗಿದ್ದರೂ ಆಕೆಗೆ ಗೊತ್ತಿತ್ತು: ಇನ್ನೊಂದು ಕೆಲವು ಗಂಟೆಗಳಲ್ಲಿ, ನಿಗಿನಿಗಿಯಾಗಿ ಉರಿಯುತ್ತಿರುವ, ಕೆಂಡದ ಮೇಲೆ ಜೀವಂತವಾಗಿ ಬಿದ್ದುಕೊಂಡು, ಹೊಗೆ ಮತ್ತು ಉರಿಯಲ್ಲಿ ಬೆಂದು ಬೆಂದು, ತನ್ನ ಪ್ರಾಣವನ್ನು ಕೊಡಬೇಕಾಗಿದೆಯೆಂದು. ಇಂಥವಳಿಗೆ ಯಾರು ಸಮಾಧಾನ ಹೇಳಬೇಕು? ಯಾವ ಬಾಯಿಂದ ಸಮಾಧಾನ ಹೇಳಬೇಕು?

ನಮ್ಮ ಪೂರ್ವಜರಾದ ಮನು, ಯಾಜ್ಞವಲ್ಕ್ಯ, ಪರಾಶರ, ನಾರದಾದಿ ಪ್ರಕಾಂಡ ಪಂಡಿತರು ಮತ್ತು ಶುದ್ಧಾಚರಣೆಯುಳ್ಳ ವಿಶ್ವಾಮಿತ್ರ ಚ್ಯವನಾದಿ ಮಹರ್ಷಿಗಳು, ಸಮಾಜದ ನಿಯಮಗಳನ್ನು ಮಾಡಿದರು. ಅವುಗಳಲ್ಲಿ ಒಂದೊಂದರಲ್ಲಿಯೂ ತಥ್ಯವಿತ್ತು, ಅರ್ಥವಿತ್ತು. ಲೋಕಸಾಧನೆಗಾಗಿ ಕೆಲವು ವ್ಯಕ್ತಿಗಳು ಬಲಿದಾನಮಾಡಿದರೆ, ಅದು ಅವರಿಗೆ ಗೌರವಾಸ್ಪದವು. ಸತೀಹೋಗುವ ಪದ್ಧತಿಯಲ್ಲಿಯೂ ಒಂದು ಮಹಾಗುಣವಿದೆಯೆಂಬುದು ಇಂದಿನ ಕೋಟು ಪ್ಯಾಂಟು ಧರಿಸುವ ಆಧುನಿಕರಿಗೆ ಅದು ಹೇಗೆ ಗೊತ್ತಾಗಬೇಕು? ಸ್ತ್ರೀಯು ತನ್ನ ಜೀವನಕ್ಕಾಗಿ ಯಾವಾಗಲೂ ಪತಿಯನ್ನೇ ಅವಲಂಬಿಸಿರುವಳು; ಮತ್ತು ಮುಂದೆಯೂ ಅವಲಂಬಿಸುವಳೆಂದು ಇಂದಿನ ಆಧುನಿಕರಿಗೆಲ್ಲಿ ಗೊತ್ತಿದೆ? ಇಂತಹ ಉದಾಹರಣೆಗಳು ಜೀವನದ ಇತಿಹಾಸದಲ್ಲಿ ಅಸಂಖ್ಯಾತಗಳಾಗಿಲ್ಲವೇ? ಸೀತೆ-ಸಾವಿತ್ರಿಯರು ಪತಿಯನ್ನೇ ಅವಲಂಬಿಸಲಿಲ್ಲವೇ? ಇಂದಿಗೂ ಇಂತಹ ಕೋಟ್ಯನುಕೋಟಿ ಉದಾಹರಣೆಗಳನ್ನು ನೋಡಬಹುದಲ್ಲವೇ?

ಒಂದುವೇಳೆ ಸ್ತ್ರೀಯು ಸತಿಹೋಗದೆ ಇದ್ದರೆ, ಪತಿಯು ಗತಿಸಿದ ಮೇಲೆ ಸತಿಯ ಜೀವನದ ಭಾರವು, ತಂದೆ ಇಲ್ಲವೆ ಅತ್ತೆಯ ಮನೆಯವರ ಮೇಲೆ ಬೀಳುವುದು. ಇದು ಅವರಿಗೆ ಅನ್ಯಾಯ ಮಾಡಿದಂತಲ್ಲವೇ? ಮದುವೆಯಾದ ಮೇಲೆ, ಸತಿಯ ಭಾರ ಪತಿಯ ಮೇಲೆಯೇ ಅಲ್ಲವೇ? ಎಂದಮೇಲೆ ಈ ಅನ್ಯಾಯದ ಭಾರವನ್ನು ಪ್ರಸನ್ನಚಿತ್ತದಿಂದಲೇ ತೆಗೆದುಹಾಕಬೇಕಲ್ಲವೇ? ಈ ಕಾರಣದಿಂದಲೇ ನಮ್ಮ ಋಷಿಗಳು, ಪತಿಯೊಡನೆ ಪತ್ನಿಯು ಸತೀಹೋಗಲೇಬೇಕೆಂದು ನಿಯಮ ಮಾಡಿದರು. (ಅವರ ದೂರದೃಷ್ಟಿ ಧನ್ಯವಾದುದು!) ಯಾವ ಸ್ವಾಭಿಮಾನಿ ಸ್ತ್ರೀಯು ತನ್ನ ಪತಿಯು ಹೋದಮೇಲೆ, ತನ್ನ ಅಣ್ಣ, ತಮ್ಮ, ಭಾವ-ಮೈದುನರ ಮನೆಯಲ್ಲಿ ಹಂಗಿನ ಊಟ ಮಾಡಲು ಒಪ್ಪುವಳು? ಇದಕ್ಕಾಗಿಯೇ ಈ ಪುಣ್ಯಭೂಮಿಯಾದ ಭಾರತದಲ್ಲಿ ಕೋಟಿಕೋಟಿಯಾಗಿ ಹೆಂಗುಸರು ನಗುನಗುತ್ತಲೇ ತಮ್ಮ ಪ್ರಾಣಗಳನ್ನು ಕೊಟ್ಟರು. ಅವರು ಅಮರರು! ಅವರಿಗೆ ಇತರರ ಮನೆಯಲ್ಲಿ ಹಂಗಿನ ಊಟ ಮಾಡುವ ಆವಶ್ಯಕತೆ ಇರಲಿಲ್ಲ.

ಆದರೆ......? ಕಲ್ಲನ ರಂಪಿಯು ಭಾರತೀಯ ಸಂಸ್ಕೃತಿಯ ಅಧ್ಯಯನ ಮಾಡಿರಲಿಲ್ಲ. ಸತೀಹೋಗುವುದೆಂದರೆ ಎಂತಹ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮನೋಹರ { ನೀಲಿ } ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ನೋಪಾಗಿ ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ { ಜೀವಿನಿ } ಟಾನಿಕ್.

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ { ಪಂಚವಟಿ } ರಾಮಬಾಣ.

ಸದ್ವೈದ್ಯ ಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ

ಕಾರ್ಖಾನೆ.

ಆನಂದ ಗ್ರಂಥಮಾಲಾ, ಹುಬ್ಬಳ್ಳಿ

ಸಂಪಾದಕ ಶ್ರೀ. ಪ. ವೆಂಕೋಬಾಚಾರ್ಯ, ಬಿ.ಎ.,ಬಿ.ಟಿ

ಇದೀಗ ಪ್ರಕಟವಾಗಿವೆ :—

ಕುಡಿ ೩ : ಮನೋರಾಜ್ಯ (ಮೂರಂಕಿನ ನಾಟಕ)

(ಪ್ರೊ. ರಂ. ಶ್ರೀ. ಮುಗಳಿ) ೧–೧೨–೦

ವಾಚನಾಲಯ ಪ್ರತಿ. ೨– ೦–೦

ಕುಡಿ ೪ : ಪುಷ್ಪಹಾರ (ಕಾದಂಬರಿ)

(ಶ್ರೀಮತಿ ಜಯಲಕ್ಷ್ಮೀ ಆರ್. ಶ್ರೀನಿವಾಸನ್) ೧– ೪–೦

ವಾಚನಾಲಯ ಪ್ರತಿ ೧– ೮–೦

ಹೆಚ್ಚು ಪ್ರತಿಗಳನ್ನು ಕೊಳ್ಳುವವರಿಗೆ
ಧಾರಾಳವಾದ ಕಮಿಶನ್.

ಗೌರವಾಸ್ಪದವಾದ ವಿಷಯವೆಂಬುದು ಅವಳಿಗೇನು ಗೊತ್ತು ! ಅವಳು ಜೀವಂತ ಸುಡಿಸಿಕೊಳ್ಳಲಿಕ್ಕೆ ಹೆದರುತ್ತಿದ್ದಳು. ಒಂದುಸಲ ರೊಟ್ಟಿಗಳನ್ನು ಸುಡುವಾಗ, ಕೆಂಡದಿಂದ ಅವಳದೊಂದು ಬೆರಳು ಸುಟ್ಟಿತ್ತು. ಅತ್ತೆಯು ಕೂಡಲೇ ಬಂದು, ಯಾವುದೋ ಮಲಮು ತಂದು ಸವರಿದಳು. ಅವಳ ತಲೆ ಬೆನ್ನು ಸವರಿ, ಸಮಾಧಾನ ಮಾಡಿದಳು. ಆದರೂ ರಂಪಿಯು ಹಾಸಿಗೆಯಲ್ಲಿ ಮಲಗಿ, ಹೊದಿಕೆಯಿಂದ ಮುಖ ಮುಚ್ಚಿಕೊಂಡು, ಅರ್ಧ ಗಂಟೆಯ ವರೆಗೆ ನೋವಿನಿಂದ ಬಿಕ್ಕಿ ಬಿಕ್ಕಿ ಅಳುತ್ತಲೇ ಇದ್ದಳು. ಇಂದು ಇಂಥವಳು ಜೀವಂತ ಸುಡಿಸಿಕೊಳ್ಳುವುದು ಹೇಗೆ ಸಾಧ್ಯ ?

ಕಲ್ಲನ ಮರಣವಾರ್ತೆಯನ್ನು ಕೇಳಿದಾಗಿನಿಂದ, ಅವಳ ಬಾಯಿಂದ ಎಂಥಸ್ವರವೂ ಹೊರಟಿರಲಿಲ್ಲ. ಅವಳು ನಾಲ್ಕು ಗಂಟೆಗಳ ವರೆಗೂ ತನ್ನ ಸ್ನೇಹಿತೆಯರ ತೊಡೆಗಳ ಮೇಲೆ ಮುಖ ಮುಚ್ಚಿಕೊಂಡು ಮಲಗಿಕೊಂಡಿದ್ದಳು. “ ನನ್ನನ್ನು ಯಾರೂ ಉಳಿಸಬಾರರೇ! ಬದುಕಿಸಲಾರರೇ ? ಭಗವಂತನು ಬದುಕಿಸಬಾರದೇ ? ” ಎಂದು ದೇವರನ್ನು ನೆನೆಯುತ್ತಿದ್ದಳು. ‘ ಯಾರಾದರೂ ಬಂದು ಬಿಡಿಸಬಹುದು. ತಾನು ಬದುಕಿದರೂ ಬದುಕಬಹುದು ! ’ ಎಂದು ಆಶಿಸುತ್ತಿದ್ದಳು. ಈ ಆಶೆಯ ದಾರವನ್ನೇ ಆಧಾರವೆಂದು ಗಟ್ಟಿಯಾಗಿ ಹಿಡಿದುಕೊಂಡು, ರಂಪಿಯು ಮುಖ ಮುಚ್ಚಿಕೊಂಡು ಮಲಗಿದ್ದಳು. ಆದರೆ ಜಗತ್ತಿನಿಂದ ಮುಖ ಮುಚ್ಚಿಕೊಂಡವರಿಗೆ ಜಗತ್ತು ಸ್ವಲ್ಪವೂ ದಯೆ ತೋರಿಸದು.

ರಂಪಿಯ **ಅತ್ತೆ** ಮತ್ತು ಸೋದರಮಾವ, ಇವರಿಬ್ಬರೂ ಅವಳ ಹತ್ತಿರ ಬಂದರು. ಇಬ್ಬರೂ ದೊಡ್ಡ ಆಳುಗಳಾಗಿದ್ದರು. ಗಂಭೀರರಾಗಿದ್ದರು. ಅತ್ತೆಗೆ ಸುಮಾರು ಐವತ್ತು ವಯಸ್ಸಾಗಿರಬಹುದು. ಹಲ್ಲು ಕಪ್ಪು ಹಚ್ಚಿದ, ಎಲೆಯಡಕೆ ತಿಂದು ಕೆಂಪಗಾದ ಹಲ್ಲುಗಳು, ಕಿವಿ, ಕೊರಳು, ಕೈಗಳಲ್ಲಿ ಆಭರಣಗಳು. ಕಾಲ್ಗಳಲ್ಲಿ ಕಾಲ್ಗಳ ಬೆರಳುಗಳಲ್ಲಿ, ಅನೇಕ ತೆರದ ಬೆಳ್ಳಿಯ ಆಭರಣಗಳು ; ಕಾಲುಂಗರಗಳು. ಮುಖದ ಮೇಲೆ ಪುತ್ರಶೋಕ ಮತ್ತು ವ್ಯಾವಹಾರಿಕ ಕುಶಲತೆಯ ಭಾವ. ಇಂಥ ಅತ್ತೆ ಕಾಲುಂಗುರಗಳಿಂದಲೂ ಕೈಬಳೆಗಳಿಂದಲೂ ಝಣ್ ಝಣ್ ಎಂಬ ಶಬ್ದ ಹೊರಡಿಸುತ್ತ ಮುಂದೆ ಬಂದು ನಿಂತಳು.

ಮಗನೆಷ್ಟೇ ಕೆಟ್ಟ, ಚಟದವನಾಗಿದ್ದರೂ, ತಾಯಿಗೆ ಮಗನು ಮಗನೇ ಅಲ್ಲವೇ ? ಮಗನ ಮರಣದಿಂದ ಯಾವ ತಾಯಿಗೆ ದುಃಖವಾಗಲಿಕ್ಕಿಲ್ಲ ? ಅಲ್ಲದೆ ಈ ಮಗನು ಗಳಿಸಿ ತಂದುಕೊಡುವ ಮಗನಾಗಿದ್ದ. ತುಂಬಿದ ಯೌವನದಲ್ಲಿಯೇ ಕೈಬಿಟ್ಟು ಹೋದ. ಬದುಕಿದ್ದಾಗಲೇ ತಾಯಿ-ತಂದೆಗಳಿಗಾಗಿ ನಾಲ್ಕು ಮನೆಗಳನ್ನು ಕಟ್ಟಿಸಿ ಬಿಡುವೆ—ಎಂದು ಹೇಳುತ್ತಿದ್ದ. ಇಂಥ ಮಗನು ಹೋದರೆ ತಾಯಿಗೆ ದುಃಖವಾಗದೇ ಇದ್ದೀತೇ ?

ಅತ್ತೆಗೆ ಸೊಸೆಯ ಮೇಲೆಯೂ ಕನಿಕರ ಬಂತು. ಪಾಪ, ತಿಂದುಂಡು ಆಡುವ ವಯಸ್ಸು. ಇಷ್ಟು ಬೇಗ ಸತಿಹೋಗಬೇಕಾಗಿ ಬಂತಲ್ಲಾ ಎಂದು ಮರುಕಹುಟ್ಟಿತು. ‘ ಒಂದು ಸಂತಾನವಾದರೂ ಇದ್ದರೆ, ಇಲ್ಲವೆ ಗರ್ಭವತಿಯಾದರೂ ಆಗಿದ್ದರೆ, ಬದುಕುತ್ತಿದ್ದಳಲ್ಲಾ ’ ಎಂದು ದಯೆ ಬಂತು. ಆದರೆ ಅವಳೇನು ಮಾಡುವಳು ? ಧರ್ಮವನ್ನು ಪಾಲಿಸಲೇಬೇಕು. ಅಲ್ಲದೆ ಪತಿಯು ಹೋದಮೇಲೆ ಲೋಕದಲ್ಲಿ ಹೆಂಗುಸು ಯಾವ ಕೆಲಸಕ್ಕಾಗುವಳು ?—ಎಂದುಕೊಂಡಳು ಅತ್ತೆ.

ಸೊಸೆಯ ಮುಂದೆ ಕುಳಿತು, “ ಅಯ್ಯೋ ನನ್ನ ಕಂದಾ, ಈ ವಯಸ್ಸಿಗೇ ನಿನ್ನ ಕುಂಕುಮ ಅಳಿಸಬೇಕೇ ? ಭಗವಂತನ ಲೀಲೆ ಅಪಾರವಾಗಿದೆ. ಮಗು, ನನ್ನ ಮುದ್ದು ಕಂದಾ, ತೆಗೆದುಕೋ. ಇದನ್ನು ತೆಗೆದುಕೊ ಕುಡಿ. ನನ್ನ ರಾಣೀ, ಕುಡಿ. ನನ್ನ ಸೊಸೆ, ಕುಡಿ ಇದನ್ನ ” ಎಂದು ಹೇಳುತ್ತ, ಅಫೀಮು ಮತ್ತು ಸಕ್ಕರೆ ಬೆರಸಿದ ಪಾನೀಯದಿಂದ ತುಂಬಿದ ಲೋಟವನ್ನು ಬಲಗೈಯಿಂದ ರಂಪಿಯ ಬಾಯ ಬಳಿ ಹಿಡಿದಳು.

ರಂಪಿಯು ಮುಚ್ಚಿದ ಬಾಯಿ ಈಗ ತೆರೆಯಿತು. ಅವಳು ಕಣ್ಣುಗಳನ್ನು ಮೇಲೆ ಮಾಡಿ, ಚಟ್ಟನೆ ಭಯಾನಕವಾಗಿ ಕಿರುಚಿಕೊಂಡು “ ನಾ ಒಲ್ಲೆ, ನಾ ಒಲ್ಲೆ.........ನಾ.....ಒಲ್ಲೆsss ! ” ಎಂದು ಅಳುತ್ತ ಕಿರುಚಿಕೊಂಡಳು.

ಸ್ನೇಹಿತೆಯರೆಲ್ಲರೂ ಇದನ್ನೆಲ್ಲ ನೋಡುತ್ತ, ಒಂದೇ ಸಮನಾಗಿ ಅಳುತ್ತ ತೆಪ್ಪಗೆ ಕುಳಿತುಕೊಂಡಿದ್ದರು.

ಅತ್ತೆಯು ಮತ್ತೆ ಮುಂದೆ ಬಂದು, ರಂಪಿಯ ಬೆನ್ನನ್ನು ಭುಜವನ್ನು ಸವರುತ್ತ, ಮೃದುವಾದ ಧ್ವನಿಯಿಂದ "ನನ್ನ ರಂಪೀ, ನನ್ನ ಕಂದಾ ಕುಡಿ. ಇದನ್ನ ಬೇಗ ಕುಡಿ. ಸ್ಮೃತಿ ತಪ್ಪಿದರೆ ಒಳ್ಳೇದು. ಧೈರ್ಯ ತಂದುಕೋ ಮಗು, ಕುಡಿ! ಇಕೋ, ಬೇಗ ಕುಡಿ!" ಎಂದು ಹೇಳಿದಳು.

ನಡುಗುವ ರಂಪಿಯು ಮೇಲೆ ನೋಡಿದಳು. ಎಡಕ್ಕೆ ನೋಡಿದಳು. ಬಲಕ್ಕೆ ನೋಡಿದಳು. ಸ್ನೇಹಿತೆಯರನ್ನು ನೋಡಿದಳು. ತನ್ನ ಸೋದರಮಾವನನ್ನೂ ಪ್ರಾಣಭಿಕ್ಷೆಯ ಆಶೆಯಿಂದ ದೈನ್ಯವಾಗಿ ನೋಡಿದಳು. ಕಣ್ಣುಗಳಲ್ಲಿ ಕಣ್ಣುಗಳನ್ನಿಟ್ಟು, ಅತ್ತೆಯನ್ನು ಆದಷ್ಟೋ ಹೊತ್ತು ನೋಡಿದಳು. ಆದರೆ ಅವಳಿಗೆ ಎಲ್ಲಿಯೂ ದಯೆಯೆಂಬುದು ಕಾಣಲಿಲ್ಲ. ಆಗ ರಂಪಿಯು, ಹಲ್ಲುಗಳನ್ನು ಜೋರಾಗಿ ಕಡಿಯುತ್ತ, ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು, ತನ್ನ ತಲೆಯನ್ನು ಬಲವಾಗಿ ಅಲುಗಾಡಿಸಿ ಬಿಟ್ಟಳು!

ಸ್ನೇಹಿತೆಯರು, ಎದ್ದು ಹೊರಟುಹೋಗಿಬಿಟ್ಟರು. ಮುಂದೇನಾಗುವುದೆಂಬುದು ಅವರಿಗೆ ಗೊತ್ತಿತ್ತು.

ಅತ್ತೆಯು ನಾನಾವಿಧವಾಗಿ ಹೇಳಿದಳು. ಸೋದರಮಾವನು ಮುಂದೆ ಬಂದು ಬುದ್ಧಿಯನ್ನು ಹೇಳಿದನು. ಆದರೇನು? ಪ್ರಾಣದ ಮೇಲಿನ ಆಶೆ ಬಹಳ ಕೆಟ್ಟದ್ದಲ್ಲವೇ? ರಂಪಿಯು ತನ್ನ ಬಾಯಿಯನ್ನು ಏನು ಮಾಡಿದರೂ, ಎಷ್ಟು ಕೊತ್ತಾದರೂ ತೆರೆಯಲೇ ಇಲ್ಲ.

ರಂಪಿಯ ಸೋದರಮಾವನು ಅವನೂರಿನ ಚೌಧರಿಯಾಗಿದ್ದ. ಸಾಮ, ದಾನ, ದಂಡ, ಭೇದ ಇದೆಲ್ಲ ಅವನಿಗೆ ಗೊತ್ತಿತ್ತು. ಊರಿನ ಜನರೆಲ್ಲಾ ಇವನನ್ನು ಕಂಡರೆ ಹೆದರುತ್ತಿದ್ದರು. ಇಲ್ಲಿ ಅಧಿಕಾರ ನಡೆಯಿಸುವುದು ಅವನಿಗೆ ಬೇಕಾಗಿರಲಿಲ್ಲ. ಆದರೇನು ಮಾಡುವುದು? ಬೇರೆ ಉಪಾಯವಿರಲಿಲ್ಲ. ಪ್ರೀತಿ ಮತ್ತು ದಯೆಯಿಂದ ಕೂಡಿದ ಸ್ವರದಿಂದ "ಮನೆಯ ಯಜಮಾನಿಯೇ, ಇನ್ನು ಮೂಗು ಒತ್ತಿ ಹಿಡಿಯದೆ ಕೆಲಸವಾಗಲಾರದು!" ಎಂದು ಹೇಳಿದ.

ಅಲ್ಲಿ ನೆರೆದವರಲ್ಲಿ ಸ್ತ್ರೀಯರ ಸಂಖ್ಯೆಗೇನೂ ಕಡಿಮೆ ಇರಲಿಲ್ಲ. ಕೆಲವು ಹೆಂಗುಸರು ಮುಂದೆ ಬಂದು, ರಂಪಿಯ ಕೈಕಾಲುಗಳನ್ನು ಗಟ್ಟಿಯಾಗಿ ಹಿಡಿದರು. ಕೆಲವರು ತಲೆಯನ್ನು ಬಲವಾಗಿ ಹಿಡಿದುಕೊಂಡರು. ಅವಳ ಸೋದರಮಾವನು ಮುಂದೆ ಬಂದು, ಹಗುರವಾಗಿ ಹಿಡಿದಂತಿದ್ದರೂ ತನ್ನ ಬಲವಾದ ಕೈಯಿಂದ ರಂಪಿಯ ಮೂಗನ್ನು ಒತ್ತಿ ಹಿಡಿದ. ಅತ್ತೆಯು ಅಫೀಮಿನ ಲೋಟವನ್ನು ಹಿಡಿದುಕೊಂಡು ಮುಂದೆ ಬಂದಳು. ಎರಡು ನಿಮಿಷದಲ್ಲಿಯೇ ಲೋಟಾ ಖಾಲಿಯಾಯಿತು.

* * * *

ಸ್ಮೃತಿ ತಪ್ಪಿಸುವ ಶಕ್ತಿಯುಳ್ಳ ಭಗವಂತನಿಗೆ ಕೋಟಿ ಕೋಟಿ ಧನ್ಯವಾದಗಳು! ಸ್ಮೃತಿ ತಪ್ಪುವಂತೆ ಇಲ್ಲದೆ ಹೋಗಿದ್ದರೆ, ಜೀವಂತ ಸಾಯುವ ಮಹಾಯಾತನೆಯನ್ನು ಎಷ್ಟು ಜನರು ಸಹಿಸಬಹುದಾಗಿತ್ತು? ಇಲ್ಲದಿದ್ದರೆ ಸತಿ ಮತ್ತು ಜೋಹಾರ್ ಹೋಗುವ ಸ್ತ್ರೀಯರ ನಾಮಾವಳಿಯ ಪಟ್ಟಿಯು ಇಷ್ಟು ದೊಡ್ಡದು ಹೇಗಾಗುತ್ತಿತ್ತು?

* * * *

ರಂಪಿಯು ಪಲ್ಲಕ್ಕಿಯಲ್ಲಿ ಸ್ಮೃತಿ ತಪ್ಪಿ ಬಿದ್ದುಕೊಂಡಿದ್ದಳು. ಕೆಂಪು ರೇಶ್ಮೆಯ ಬಟ್ಟೆಯ— ಮದುವೆಯ— ಜೋಡುಗಳನ್ನು ಮೆಟ್ಟಿಕೊಂಡಿದ್ದಳು. ಮದುವೆಯ ಹೊಸ ಕೆಂಪುಸೀರೆಯನ್ನು ಉಟ್ಟುಕೊಂಡಿದ್ದಳು. ಮದುವೆಯ ಎಲ್ಲ ಆಭರಣಗಳನ್ನೂ ಧರಿಸಿಕೊಂಡಿದ್ದಳು. ಬೈತಲೆಯಲ್ಲಿ, ಕಿವಿಯಲ್ಲಿ, ಕೊರಳಲ್ಲಿ ಕೈಯಲ್ಲಿ, ಮೂಗಿನಲ್ಲಿ, ಸೊಂಟದಲ್ಲಿ, ಕಾಲ್ಗಳಲ್ಲಿ, ಎಲ್ಲೆಲ್ಲಿಯೂ ಮದುವೆಯ ಆಭರಣಗಳನ್ನು ಧರಿಸಿಕೊಂಡಿದ್ದಳು. ಆದರೇನು? ಇಷ್ಟು ಆಭರಣಗಳನ್ನು ಧರಿಸಿದರೂ, ಅವಳ ಮುಖವೇನೂ ನೋಡಲು ಯೋಗ್ಯವಾಗಿರಲಿಲ್ಲ. ಸ್ಮೃತಿತಪ್ಪಿಸುವ ಶಕ್ತಿಯುಳ್ಳ ಅಫೀಮು, ಸೌಂದರ್ಯವನ್ನು ಎಂದಿಗೂ ಹೆಚ್ಚಿಸುವುದಿಲ್ಲ.

'ಬಗನ' ಬಾಲಾಮೃತ

ಮಕ್ಕಳ ಸದೃಢತೆಗಾಗಿ 'ಬಗನ' ಬಾಲಾಮೃತವನ್ನು ಉಪಯೋಗಿಸಿರಿ.

ಮುಖ್ಯವಾಗಿ ಮಕ್ಕಳ ಯಕೃತು ಮತ್ತು ಹೊಟ್ಟೆ ಎಂದರೆ ಜಠರ ರೋಗದ ಭಯವಿಲ್ಲ.

ಬಗನ ಬಾಲಾಮೃತದಲ್ಲಿ 'ಗ್ರಾಯಿಪ್ ಹೀಲರಿನ' ಅಂಶವೂ ಇರುವದರಿಂದ, ಇದು ಮಕ್ಕಳ ಉತ್ತಮ 'ಟೊನಿಕ್ಕು' ಇರುವದು.

THE NATIONAL PHARMACIES & PHARMACEUTICALS Ltd. DHARWAR.

ಪ್ರಕಟವಾಗಲಿದೆ.

ಶ್ರೀ. ರಾಮಚಂದ್ರ ಕೊಟ್ಟಲಗಿಯವರ ಕವನಸಂಗ್ರಹ

"ಪಿಪಾಸಾ"

ಪ್ರಿನ್ಸಿಪಾಲ್ ಗೋಕಾಕ ವಿನಾಯಕರಾಯರ

ಪ್ರದೀರ್ಘ ಮುನ್ನುಡಿಯೊಡನೆ.

ಬೆಲೆ ೧—೦—೦

ವಿವರಗಳಿಗೆ ಬರೆಯಿರಿ:—

ಮನೋಹರ ಗ್ರಂಥಭಾಂಡಾರ,

ಧಾರವಾಡ

ಸ್ಮಶಾನವು ೫-೬ ಮೈಲಿ ದೂರವಿತ್ತು. ಪಲ್ಲಕ್ಕಿಯ ಬೋಯಿಗಳು ಮೆರವಣಿಗೆಯೊಂದಿಗೆ ನಿಧಾನವಾಗಿ ಹೆಜ್ಜೆ ಹಾಕುತ್ತ ಮುಂದೆ ಸಾಗಿದ್ದರು.

*　　*　　*　　*

ಚಿತೆಯು ಸಿದ್ಧವಾಯಿತು. ರಂಪಿಯ ಮೈಮೇಲಿನ ಮದುವೆಯ ಎಲ್ಲ ಆಭರಣಗಳನ್ನು ತೆಗೆಯಲಾಯಿತು. ಆದರೆ ಬೈತಲೆಯ ಕುಂಕುಮವನ್ನು ಹಾಗೆಯೇ ಉಳಿಸಲಾಯಿತು. ಕಲ್ಲನ ಪ್ರೇತವನ್ನು ಚಿತೆಯ ಮೇಲಿಟ್ಟರು. ಅವನ ಎಡಗಡೆಯಲ್ಲಿ ಮೂರ್ಛೆಹೋದ ರಂಪಿಯ ಶರೀರವನ್ನು ಇಡಲಾಯಿತು. ಒಂದೊಂದು ಸಲ ಹೊಗೆ-ಬುರುಡೆ ಮೂಲಕ, ಅಫೀಮಿನ ಅಮಲು ಇಳಿಯುವುದು. ಆದ್ದರಿಂದ ರಂಪಿಯ ಕೈಕಾಲುಗಳನ್ನು ಹಗ್ಗದಿಂದ ಬಲವಾಗಿ ಕಟ್ಟಿದ್ದರು. ಅಲ್ಲದೆ ಹಿಂದೆ ಕೆಲವು ಸಲ ಅಫೀಮಿನ ಅಮಲು ಇಳಿದಾಗ, ಚಿತೆಯಿಂದ ಎದ್ದು ಓಡಿಹೋಗುವ ಸತಿಯರನ್ನು ರಂಪಿಯ ಬಳಗದವರು ಹಿಡಿದುಕೊಂಡು, ಬಲವಂತವಾಗಿ ಉರಿಯಲ್ಲಿ ನೂಕಿ ನೂಕಿ ಅನೇಕಸಲ ಸುಡಬೇಕಾಗಿ ಬಂದಿತ್ತು.

ಸಾಯಂಕಾಲವಾಗುತ್ತಾ ಬಂದಿತ್ತು. ಬಿಸಿಲಿನ ಬೇಗೆಯೂ ಇಳಿದಿತ್ತು. ಗಾಳಿಯೂ ನಿಃಶಬ್ದವಾಗಿತ್ತು. ಪ್ರಕೃತಿಯೆಲ್ಲ, ಉಸುರನ್ನು ಗಟ್ಟಿಯಾಗಿ ಹಿಡಿದುಕೊಂಡು, ಯಾವುದೋ ಒಂದು ಸಂಗತಿಗಾಗಿ, ಪ್ರತೀಕ್ಷೆ ಮಾಡುತ್ತಿರುವಂತೆ ತೋರುತ್ತಿತ್ತು. ಪಶ್ಚಿಮದಿಕ್ಕು ಕೆಂಪಾಗಿತ್ತು. ಕತ್ತಲೆಯು ಬರಬೇಕೆನ್ನುತ್ತಿತ್ತು.

*　　*　　*　　*

ರಂಪಿಗೆ ತಿರುಗಿ ಸ್ಮೃತಿ ಬಂತು. ತಾನು ಚಿತೆಯಲ್ಲಿ ಸುಡುತ್ತಿರುವೆನೆಂದು ಅವಳಿಗೆ ಗೊತ್ತಾಯಿತು. ತನ್ನ ಇದ್ದ ಬಿದ್ದ ಎಲ್ಲ ಶಕ್ತಿಯನ್ನೂ ಹಾಕಿ, ತನಗೆ ಕಟ್ಟಿದ ಹಗ್ಗಗಳನ್ನು ಕಿತ್ತಿಹಾಕಲು ಯತ್ನಿಸಿದಳು. ಅವಳ ಭುಜಗಳ ಖಂಡ ಮಾಂಸಗಳು ಆ ಹಗ್ಗದೊಡನೆ ಹೊರಗೆ ಬಂದುವು. ರಂಪಿಯು ಬಲಿಷ್ಠಳಾದ ಹುಡುಗಿಯಾಗಿದ್ದಳು. ತನ್ನೂರ ಕಾವಲುಗಾರನಷ್ಟು ಶಕ್ತಿವಂತಳಾಗಿದ್ದಳು. ಆದರೇನೂ ಪ್ರಯೋಜನವಾಗಲಿಲ್ಲ. ಕೇವಲ ಈ ಮಗ್ಗುಲಿಂದ ಆ ಮಗ್ಗುಲಿಗೆ ತಿರುಗಲು ಮಾತ್ರ ರಂಪಿಗೆ ಸಾಧ್ಯವಾಯಿತು.

ನಿಃಶಬ್ದವಾದ ನೀಲವಾದ ಅಂಧಕಾರದಲ್ಲಿ, ಆ ಚಿತೆಯು ಉರಿಯು ತೇಜಃಪುಂಜವಾಗಿ, ಸುತ್ತೆಲ್ಲಾ ಬೆಳಕು ಚೆಲ್ಲುತ್ತ, ಸುತ್ತುತ್ತಾ ಸುತ್ತುತ್ತಾ, ಉರಿಯುತ್ತಿತ್ತು. ಉರಿದುರಿದು ಚಿತೆಯು ಬೂದಿಯ ರಾಶಿಯಾಗಿ ಬಿದ್ದುಕೊಂಡಿತು.

ಈ ರೀತಿಯಾಗಿ ರಂಪಿಯು ಪರಲೋಕದಲ್ಲಿಯು ತನ್ನ ಪತಿಯ ಬಳಿ ಬಂದು ಸೇರಿದಳು. ಸತ್ತ ಮೇಲೆಯೂ, ರಂಪಿಗೆ ಕಲ್ಲನಿಂದ ಬಿಡುಗಡೆಯಾಗಲಿಲ್ಲ.

ಟಿಪ್ಪಣಿ:—

ಮೊದಲು ಅಕಬರಬಾದಶಹನು, ಅನಂತರ ಲಾರ್ಡ್ ಬೆಂಟಿಂಕನು ಭಾರತದ ಗವರ್ನರಜನರಲ್ಲನಾಗಿ ಬಂದು, ಕಾಯದೆಯಿಂದ ಸಹಗಮನ ಮಾಡುವ ಪದ್ಧತಿಯನ್ನು ನಿಲ್ಲಿಸಲು ಯತ್ನಿಸಿದರು. ಆದರೂ ಭಾರತದ ಕೆಲವು ಹಳ್ಳಿಗಳಲ್ಲಿ ಈ ಪದ್ಧತಿಯು ಇನ್ನೂ ನಡೆಯುತ್ತಲಿದೆ. ೧೯೫೦ ನೆಯ ಮಾರ್ಚ್ ತಿಂಗಳಲ್ಲಿ ವಿಂಧ್ಯಪ್ರದೇಶದ ರೀವಾಸಂಸ್ಥಾನದ ಒಂದು ಹಳ್ಳಿಯಲ್ಲಿ ಸಹಗಮನ ಮಾಡಲು ಹೊರಟ ಒಬ್ಬ ಹೆಂಗುಸನ್ನು, ಪೋಲೀಸರು ಸಕಾಲಕ್ಕೆ ಬಂದು ಬಿಡಿಸಲು ಬಂದರೆ, ಆ ಹಳ್ಳಿಯವರು ಪೋಲೀಸರ ಮೇಲೆಯೇ ತಿರುಗಿಬಿದ್ದು ಇಬ್ಬರು ಪೋಲೀಸರನ್ನು ಕೊಂದುಹಾಕಿದ ಸಮಾಚಾರವು Times of India ಮೊದಲಾದ ವೃತ್ತಪತ್ರಿಕೆಗಳಲ್ಲಿ ಬಂದುದನ್ನು ಕೆಲವರಾದರೂ ಓದಿರಬಹುದು.

ಮನಃಪೂರ್ವಕವಾಗಿ ಸಹಗಮನ ಮಾಡುವುದರಲ್ಲಿ ಉಜ್ವಲತೆ ಇದೆ. ತ್ಯಾಗದ ಸಂತೃಪ್ತಿ ಇದೆ. ಇಂತಹ ತ್ಯಾಗದ ಉಜ್ವಲಕಥೆಗಳನ್ನು ನಾವು ಎಷ್ಟೋ ಕೇಳಿದ್ದೇವೆ. ಆದರೆ ಇಂತಹ ಉದಾಹರಣೆಗಳು ತೀರ ವಿರಳ. ರಂಪಿಯಂತೆ ಸತೀಹೋಗುವವರೇ ಹೆಚ್ಚು. ಆದ್ದರಿಂದಲೇ ಸತೀ ಹೋದವರ ಸಂಖ್ಯೆ ಅಸಂಖ್ಯವಾಗಿದೆ. ಹಿಂದಿನ ಕಾಲದಲ್ಲಿ ಸತೀ ಹೋಗುವ ರೀತಿ ಹೇಗಿತ್ತೆಂಬುದನ್ನು ತೋರಿಸುವುದಕ್ಕಾಗಿಯೇ ಈ ಕತೆಯನ್ನು ಹಿಂದೀ ಕತೆಯ ಆಧಾರದಿಂದ ಬರೆಯಲಾಗಿದೆ.

—ಲೇ.

ಒಮ್ಮೆ ಬಂದು ನೋಡು!

ಶ್ರೀ. ಡಿ. ಎಸ್. ಕರ್ಕಿ ಎಂ. ಎ., ಪಿಎಚ್. ಡಿ. ಬೆಳಗಾಂವಿ

卐

ನಮ್ಮದೆಂಥ ನಾಡು....ಒಮ್ಮೆ ಬಂದು ನೋಡು ! ‖ ಪಲ್ಲವಿ ‖

ನಮ್ಮದೆಂಥ ನಾಡು....
ಒಮ್ಮೆ ಬಂದು ನೋಡು !
ಕಣ್ಣಿನಲ್ಲಿ ಚೆಲುವ
ಹೃದಯದಲ್ಲಿ ಮುದವ
ತುಂಬಿಕೊಂಡು ಸಾಗು....
ನೀರಸತೆಯ ನೀಗು ! ೧

ಕೃಷ್ಣೆ ಕಾವೇರಿ....
ತುಂಗಭದ್ರೆ ಸೇರಿ
ಹರಿದು ಹಾಡಿ ಹಾಡಿ
ನಾಡ ಸಿರಿಯ ಬೇಡಿ
ವೈರಿಯ ತೊಳೆವ ನಾಡು....
ಸೊಬಗಿಗಿದುವೆ ಬೀಡು ! ೨

ತೀರವದು ಪಡುವಲು
ಮೂಡಲಲಿ ಬೆಳುವಲು
ನಡುವೆ ಮಲೆಯ ಸಾಲು,
ಚೆಲುವಿಗದುವೆ ಬೀಡು !
ಎಲ್ಲ ಬಗೆಯ ನಾಡು
ಇಲ್ಲಿ ಇಹುದು ನೋಡು ! ೩

ತೆಂಗು ತೀರದಲ್ಲಿ....
ನೆಲ್ಲು ಮಲೆಯಡಿಯಲಿ;
ಜೋಳ ಗೋದಿ ಕಡಲೆ
ಹತ್ತಿ ಬೆಳುವೊಲದಲಿ–
ಬೆಳೆವ ನಾಡು ನೋಡು....
ಹರುಷದಿಂದ ಹಾಡು ! ೪

ಸೃಷ್ಟಿದೇವಿ ಇಲ್ಲಿ....
ಕ್ರೀಡೆ ಹೂಡಿರುವಳು.
ಅಂತೆ ಮೆರೆವುವಿಲ್ಲಿ
ಗಿರಿ-ಸರೋವರಗಳು;
ಹಳ್ಳ-ಹೊಳೆ-ತೊರೆಗಳು,
ನಲಿಯುತಿಹವು ನೋಡು ! ೫

ಪುಣ್ಯ ಶರಾವತಿಯು
ನೆಗೆದು ಕೊಳ್ಳದಲ್ಲಿ,
ಭವ್ಯ ಸಲಿಲ ನಾಟ್ಯ
ಗೈದಿರುವಳು ಇಲ್ಲಿ.
ಅದರ ಸೊಬಗ ನೋಡು
ಎದೆಯ ಹಿಗ್ಗ ತೋಡು ! ೬

ಭುವನೇಶ್ವರಿ ದೇವಿ
ಇದೇ ನಾಡ ದೇವಿ !
ಪ್ರತಿ ನವರಾತ್ರಿಯಲಿ....
ತಾಯ ಪೂಜೆ ಮಾಡಿ,
ನಲಿವರಲ್ಲಿ ಹೋಗು,
ದೇವಿಯಡಿಗೆ ಬಾಗು ! ೭

ಕನ್ನಡಿಗರ ಭಕ್ತಿ....
ಹೃದಯದಿಂದ ಉಕ್ಕಿ
ಮೂಡು-ಪಡುವಣಿಂದ
ಬಡಗ-ತೆಂಕಣಿಂದ
ಹರಿದು ಬಂದು ನಿಂದು
ತೀರ್ಥವಹುದು ನೋಡು! ೮

ಮೇಲೆ ಕೆಳಗೋ ! ಇರಲಿ
ನಡುವೆ ಎಲ್ಲ ಮನವ
ತೊರೆದು ತುಂಗೆ ಮಿಡಿಸು–
ತ್ತಿಹಳು ಒಂದೆ ಭಾವ !
ಬಂದು ನಿಜಕೆ-ಕೂಡು
ನಾಡ ಹಬ್ಬ ಮಾಡು ! ೯

ನಮ್ಮದೆಂಥ ನಾಡು....
ಒಮ್ಮೆ ಬಂದು ನೋಡು !
ಕಣ್ಣಿನಲ್ಲಿ ಚೆಲುವ
ಹೃದಯದಲ್ಲಿ ಮುದವ
ತುಂಬಿಕೊಂಡು ಸಾಗು....
ನೀರಸತೆಯ ನೀಗು ! ೧೦

ಒಂದು ಪುಟ್ಟ ಹಕ್ಕಿಗೆ

ಶ್ರೀ. ಚೆನ್ನವೀರ ಕಣವಿ, ಧಾರವಾಡ

卐

ಚಿಟ್ಟನುಲಿವ ಪುಟ್ಟಗುಬ್ಬಿ
ಮುಳ್ಳು ಪೇಲಿಯನ್ನು ತಬ್ಬಿ
ಚೀರಿಚೀರಿ ಗಂಟಲುಬ್ಬಿ–
ಒಡೆಯುವಂತೆ ಹಾಡಿತು;
ಕೇಳಲಿಲ್ಲ ಜಗದ ಕಿವಿ
ನೋಡಲಿಲ್ಲ ಬಾನ ರವಿ
ನೀನಾದರು ಬಾರೋ ಕವಿ–
ಎಂದು ಅಂಗಲಾಚಿತು. ೧

ಹಗಲು ದಿಗಿಲುಗೊಳಿಸುತಿರಲಿ
ಸುಗ್ಗಿ ಹೋಗಿ ಮಾಗಿ ಬರಲಿ
'ಟುವ್ವೂ, ಟುವ್ವೂ' ಎಂದು ಒರಲಿ
ಕೊರಗಿ ಸಣ್ಣಗಾಯಿತು;
ತೆನೆಯ ಹಾಲುಗಾಳನುಳಿದು
ಗಗನ ಗಮನವನ್ನು ಹಳಿದು
ಗೂಡಿನಲ್ಲಿ ಮೌನ ತಳೆದು
ರೆಕ್ಕೆ ಮುದುರಿ ಕುಳಿತಿತು. ೨

ಏಕೆ ಇಂತು ಉದಾಸೀನ ?
(ಸದಾಶಿವನಿಗದೇ ಧ್ಯಾನ!)
ನಿನ್ನ ಬಾಳಿಗಾವ ಊನ ?
ಹೇಳು ಪುಟ್ಟಹಕ್ಕಿಯೆ;
ಜಗವಪಾರ ನಾದಧುನಿ
ನಿನ್ನ ದನಿಯದೊಂದು ಹನಿ
ಅದನೆ ಹಾಡಿ ಹಾಡಿ ತಣಿ
ವಿಶ್ವವೀಣೆ ಶಂಕಿಯ ! ೩

ಜನತೆಯೊಂದು ಮೂಢಸಂತೆ
ಕಲಹ, ಕಪಟ, ಕಂತೆ ಕಂತೆ
ನಿನಗೇತಕೆ ಅದರ ಚಿಂತೆ ?
ಮುನ್ನಿನಂತೆ ಸೀನಿಸು !
ಬೆಳಕಿನೆಡೆಗೆ ಕಣ್ಣ ತೆರೆ,
ಜಗವ ಕಾವನೊಬ್ಬ ದೊರೆ,
ಒಪ್ಪಿಸವನಿಗೆಲ್ಲ ಹೊರೆ
ನಿನ್ನಷ್ಟಕ್ಕೆ ಹಾಡಿರು ! ೪

ಆಂತರರಾಷ್ಟ್ರೀಯ ಹಣಕಾಸಿನ ನಿಧಿ

ಶ್ರೀ. ಪಾ. ಭೀ. ಜೋರಾಪುರ ಬಿ.ಎ. (ಆನರ್ಸ್), ಜಬಲಪುರ

★

ವಿಜ್ಞಾನದ ಪ್ರಗತಿಯ ಮೂಲಕ ಶಕ್ತಿ-ವೇಗಗಳು ಬೆಳೆದ ಇಂದಿನಕಾಲದಲ್ಲಿ, ಜಗತ್ತಿನ ಎಲ್ಲ ಭಾಗದ ಸುಖ-ದುಃಖಗಳು ಕೂಡಿ ಒಂದು ಸೂತ್ರದಲ್ಲಿ ಪವಣಿಕೆಗೊಂಡಿವೆ. ಆದುದರಿಂದಲೆ ವಿವಿಧ ರಾಷ್ಟ್ರದ ವಿವಿಧ ಬೆಲೆಯ ನಾಣ್ಯಗಳ ವ್ಯವಹಾರದಲ್ಲಿ ಒಂದು ವ್ಯವಸ್ಥೆಯನ್ನು ಕಲ್ಪಿಸಿ-ಕೊಡಲೆಂದು ಈ ನಿಧಿಯ ನಿರ್ಮಾಣ!

★

ವಿಶ್ವದ ಇಂದಿನ ಆರ್ಥಿಕ ಬಿಕ್ಕಟ್ಟಿನಂತೆ, ಡಾಲರ್ ಕೊರತೆಯಂತೆ, ಹಿಂದೆಯೂ ಆರ್ಥಿಕ ಮುಗ್ಗಟ್ಟಿನ ಕಾಲವೊಂದಿತ್ತು; ಸುವರ್ಣಪ್ರಧಾನ ಪದ್ಧತಿಯ* ಕಾಲವೂ ಇತ್ತು. ಇವೆರಡರಿಂದಲೂ ಆಂತರ ರಾಷ್ಟ್ರೀಯ ವ್ಯಾಪಾರಕ್ಕೆ, ವಿದೇಶ ವಿನಿಮಯಕ್ಕೆ ಮತ್ತು ದೇಶದ ಆರ್ಥಿಕ ಪ್ರಗತಿಗೆ—ಒಟ್ಟಿನಲ್ಲಿ, ಹಣಕಾಸಿನ ವ್ಯವಹಾರಕ್ಕೆ—ಬಲವಾದ ಆಘಾತ ಉಂಟಾಯಿತು. ೧೯೩೧ ರಲ್ಲಿ, ಜಗತ್ತಿನಲ್ಲೆಲ್ಲ ಉಂಟಾದ ಆರ್ಥಿಕ ಮುಗ್ಗಟ್ಟಿನಿಂದ ಬಡರಾಷ್ಟ್ರಗಳು— ಕೃಷಿ ಪ್ರಧಾನರಾಷ್ಟ್ರಗಳು ಚೇತರಿಸಿಕೊಳ್ಳಲು ಅಸಮರ್ಥವಾದುವು. ಇದರಂತೆಯೇ ಸುವರ್ಣಪ್ರಧಾನ ಪದ್ಧತಿಯು ಮೊದಮೊದಲು ಹಣಕಾಸಿನ ರಂಗದಲ್ಲಿ ಸಮತೋಲವನ್ನು ಕಾಯುವ ಒಳ್ಳೇ ಸಾಧನವೆಂದೆನಿಸಿದರೂ, ಒಂದನೆಯ ಮಹಾಯುದ್ಧದ ನಂತರ, ಮಾನವಸಹಜವಾದ ಸ್ವಾರ್ಥಬುದ್ಧಿಯಿಂದಲೋ, ಆ ಪದ್ಧತಿಯು ದೋಷದಿಂದಲೋ, ಅಥವಾ ನಿರ್ದಿಷ್ಟ ನಿಯಮಗಳ ಉಲ್ಲಂಘನೆಯಿಂದಲೋ, ಆರ್ಥಿಕ ಅಧೋಗತಿಯನ್ನು ತಡೆಗಟ್ಟಲು ಸಾಧ್ಯವಾಗಲಿಲ್ಲ; ಇದಲ್ಲದೆ ಅದರಿಂದ ಅನಿಷ್ಟಗಳೇ ಹೆಚ್ಚಾದುವು. ಸಿರಿವಂತ ರಾಷ್ಟ್ರಗಳು ಬಂಗಾರವನ್ನು ಸೂರೆಗೊಳ್ಳುತ್ತಲೇ ಇದ್ದುವು; ಬಡ-ರಾಷ್ಟ್ರಗಳು ಬಂಗಾರವನ್ನು ತೆತ್ತು ತೆತ್ತು ನಿರ್ವೀರ್ಯವಾಗುತ್ತಲೇ ಇದ್ದುವು. ಹೀಗಾಗಿ ಬಂಗಾರದ ಮೇಲಿನ ವಿಶ್ವಾಸವು ಹಾರಿಹೋಯಿತು. ಇಂತಹ ಅನಿಶ್ಚಿತ ಸ್ಥಿತಿಯಲ್ಲಿ ಪ್ರತಿಯೊಂದು ರಾಷ್ಟ್ರವೂ ತನ್ನ ನಾಣ್ಯದ ಮೌಲ್ಯಚ್ಛೇದನೆಯನ್ನು ಮಾಡಿ ಅಧಿಕಲಾಭ ಪಡೆಯಲು ತೊಡಗಿತ್ತು. ಎಲ್ಲೆಲ್ಲೂ ಮೌಲ್ಯಚ್ಛೇದನೆಯ ಸ್ಪರ್ಧೆಯುಂಟಾಯಿತು, ವಿನಿಮಯದ ದರವು ದಿನೇ ದಿನೇ ಜೋಯ್ದಾಡಹತ್ತಿತ್ತು. ಇದರಿಂದ ವಿಶ್ವ ವ್ಯಾಪಾರವು ಸುಲಲಿತವಾಗಿ ಸಾಗದಂತಾಯಿತು. ಹಣಕಾಸಿನ ವ್ಯವಹಾರಗಳಲ್ಲಿ ವಿಶ್ವಾಸವು ಉಳಿಯದಂತಾಯಿತು. ಇಂಥ ಸಾತಂಕ ವಾತಾವರಣವನ್ನು ತಿಳಿಗೊಳಿಸಿ, ಮೌಲ್ಯಚ್ಛೇದನೆಯ ಸ್ಪರ್ಧೆಯನ್ನು ತಡೆಗಟ್ಟಿ, ವಿದೇಶ ವಿನಿಮಯಪ್ರಮಾಣವನ್ನು ಸ್ಥಿಮಿತಕ್ಕೆ ತಂದು, ವಿಶ್ವ ವ್ಯಾಪಾರವನ್ನು ಊರ್ಜಿತಗೊಳಿಸಲು, ಆರ್ಥಿಕ ಸ್ಥಿತಿಯನ್ನು ಸುಧಾರಿಸಲು, ಜುಲೈ ೧೯೪೪ ರಲ್ಲಿ, ಬ್ರಿಟನ್ ಉಡ್ಸ್ (ಅಮೇರಿಕಾ) ನಲ್ಲಿ, ಸಂಯುಕ್ತರಾಷ್ಟ್ರ ಸಂಘದ ಪ್ರತಿನಿಧಿಗಳ ಪರಿಷತ್ತು ಸೇರಿತು. ಈ ಪರಿಷತ್ತಿನ ಫಲಿತಾಂಶವೇ ಆಂತರ ರಾಷ್ಟ್ರೀಯ ಹಣಕಾಸಿನ ನಿಧಿ. "ನಿಧಿ" ಯು ೨೭ನೆಯ ಡಿಸೆಂಬರ್ ೧೯೪೫ ರಂದು ಜನ್ಮತಾಳಿದರೂ, ೧ನೆಯ ಮಾರ್ಚ್ ೧೯೪೭ ರಿಂದ ತನ್ನ ನಿಜವಾದ ಕಾರ್ಯವನ್ನು ಪ್ರಾರಂಭಿಸಿತು. ಭಾರತವೂ "ಜನಕರಾಷ್ಟ್ರ"ಗಳಲ್ಲೊಂದು.

'ನಿಧಿ'ಯ ನಿಯಮ, ಉದ್ದೇಶ ಮತ್ತು ಆಡಳಿತ:

೧. ಸದಸ್ಯ ರಾಷ್ಟ್ರಗಳ ವಂತಿಗೆಯಿಂದ ೮,೮೦೦,೦೦೦,೦೦೦ ಡಾಲರುಗಳ ಆಂತರ ರಾಷ್ಟ್ರೀಯ ಹಣಕಾಸಿನ ನಿಧಿಯನ್ನು ಸ್ಥಾಪಿಸುವುದು.

೨. ವರ್ಗಣಿಯನ್ನು ಬಂಗಾರ ರೂಪದಲ್ಲಿಯೂ, ತಮ್ಮ ತಮ್ಮ ನಾಣ್ಯರೂಪದಲ್ಲಿಯೂ ಕೊಡಬಹುದು; ಆದರೆ ನೂರಕ್ಕೆ ೨೫ ರಷ್ಟನ್ನು ಬಂಗಾರರೂಪದಿಂದ ಕೊಡಲೇಬೇಕು. ಉಳಿದದ್ದನ್ನು ತಮ್ಮ ನಾಣ್ಯದ ರೂಪದಲ್ಲಿ ಕೊಡಬಹುದು. ಪ್ರತಿಯೊಂದು ಸದಸ್ಯರಾಷ್ಟ್ರದ ವರ್ಗಣಿಯನ್ನು 'ನಿಧಿ'ಯೇ ಗೊತ್ತುಪಡಿಸುವುದು. ಸದಸ್ಯರಾಷ್ಟ್ರದೊಂದಿಗೆ ಆಲೋಚಿಸಿ ಹೆಚ್ಚು-ಕಡಿಮೆ ಮಾಡಲೂ ಬಹುದು. ಸದ್ಯದ ವರ್ಗಣಿ ಇಂತಿದೆ: **ಅಮೇರಿಕ—** ೨೭೫೦ ಮಿಲಿಯನ್ ಡಾಲರ್, ಇಂಗ್ಲಂಡ್— ೧೩೦೦ ಮಿ. ಡಾಲರ್; ರಶಿಯಾ— ೧೨೦೦ ಮಿ. ಡಾಲರ್; ಚೀನಾ— ೫೫೦ ಮಿ. ಡಾಲರ್; ಫ್ರಾನ್ಸ್— ೪೫೦ ಮಿ. ಡಾಲರ್; **ಭಾರತ— ೪೦೦ ಮಿ. ಡಾಲರ್. ರಶಿಯವು ಈ**

* Gold Standdard ಇದರ ಭಾಷಾಂತರವು ಎಷ್ಟರಮಟ್ಟಿಗೆ ಸರಿಯಾಗುವುದೋ ಸಂಶಯಾಸ್ಪದ. —ಲೇ.

ಯೋಜನೆಯಲ್ಲಿ ಭಾಗವಹಿಸಲು ಒಪ್ಪದೆ ಇದ್ದುದರಿಂದ, ಭಾರತಕ್ಕೆ ಪಂಚಮಹಾರಾಷ್ಟ್ರಗಳಲ್ಲಿ ಒಂದು ಸ್ಥಾನ ಸಿಕ್ಕಿದೆ.

೩. ತನ್ನ ನಾಣ್ಯಗಳ ವಿನಿಮಯದರವನ್ನು ಡಾಲರ್ ರೂಪದಲ್ಲಾಗಲಿ, ಬಂಗಾರರೂಪದಲ್ಲಾಗಲಿ ಪ್ರಕಟಿಸಬೇಕು. ಇದೇ ಮೌಲ್ಯದರದಂತೆ ವಿದೇಶವ್ಯವಹಾರವನ್ನು ಸಾಗಿಸಬೇಕು. ಭಾರತವು "ಅಂತರರಾಷ್ಟ್ರೀಯನಿಧಿ"ಯ ಸದಸ್ಯತ್ವವನ್ನು ಸ್ವೀಕರಿಸಿದಂದಿನಿಂದ, ಭಾರತದ ರೂಪಾಯಿ ಸ್ವತಂತ್ರವಾಯಿತು; ಎಂದರೆ, ಇದಕ್ಕೂ ಮೊದಲು ಭಾರತದ ರೂಪಾಯಿಯ ಮೌಲ್ಯವನ್ನು ಬ್ರಿಟನ್ನಿನ ಪೌಂಡು, ಶಿಲಿಂಗುಗಳ ರೂಪದಲ್ಲಿ ಪ್ರಕಟಿಸಬೇಕಾಗಿತ್ತು. ಆದರೆ ಈಗ ಆ ನಿರ್ಬಂಧವಿಲ್ಲ. ಡಾಲರ್ ರೂಪದಲ್ಲಿಯಾಗಲಿ, ಬಂಗಾರರೂಪದಲ್ಲಿಯಾಗಲಿ ಪ್ರಕಟಿಸಬಹುದು.

೪. ಮೌಲ್ಯದಲ್ಲಿ ಹೆಚ್ಚುಕಡಿಮೆ ಮಾಡಬೇಕಾದರೆ "ನಿಧಿ"ಯ ಅನುಮತಿಯನ್ನು ಪಡೆಯಬೇಕು. ೧೦ % ರಿಂದ ೨೦% ರ ವರೆಗೆ ಮೌಲ್ಯಪರಿಷ್ಕರಣ ಮಾಡಬಹುದು. ಇದೇ ನಿಯಮದ ಲಾಭವನ್ನು ಪಡೆದುಕೊಂಡು ಬ್ರಿಟನ್, ಭಾರತ, ನಾರ್ವೆ, ಆಸ್ಟ್ರೇಲಿಯಾ, ದ. ಆಫ್ರಿಕಾ ಮೊದಲಾದ ರಾಷ್ಟ್ರಗಳು, ತಮ್ಮ ನಾಣ್ಯಗಳ ಮೌಲ್ಯಚ್ಛೇದನೆಯನ್ನು ಸಪ್ಟೆಂಬರ್ ೧೯೪೯ರಲ್ಲಿ ಮಾಡಿದುವು.

೫. "ನಿಧಿ"ಯ ಅನುಮತಿಯಿಂದ ಕೆಲ ವಿಶಿಷ್ಟ ಪ್ರಸಂಗಗಳಲ್ಲಿಯಲ್ಲದೆ ವಿನಿಮಯ ನಿಯಂತ್ರಣವನ್ನು, ನಿರ್ಬಂಧವನ್ನು ಹೇರಬಾರದು.

೬. "ನಿಧಿ"ಯ ಮುಖ್ಯ ಉದ್ದೇಶಗಳೆಂದರೆ : (ಅ) ವಿನಿಮಯ ದರವು ನಿಶ್ಚಿತವಾಗಿರುವಂತೆ ನೋಡಿಕೊಳ್ಳುವುದು. (ಆ) ಮೌಲ್ಯಚ್ಛೇದನೆಯ ಸ್ಪರ್ಧೆಯನ್ನು ತಡೆಗಟ್ಟುವುದು (ಇ) ಸದಸ್ಯ ರಾಷ್ಟ್ರಗಳ ನಾಣ್ಯಗಳನ್ನು ಬಹುಮುಖವಾಗಿ ರೂಪಾಂತರಗೊಳಿಸುವುದರ ಮುಖಾಂತರ ವಿಶ್ವವ್ಯಾಪಾರಕ್ಕೆ ಉತ್ತೇಜನವನ್ನೀಯುವುದು, ಸೌಕರ್ಯವನ್ನೊದಗಿಸಿಕೊಡುವುದು. (ಈ) "ನಿಧಿ"ಯ ಪ್ರಮುಖ ಕಾರ್ಯವೆಂದರೆ, ಸದಸ್ಯರಾಷ್ಟ್ರಗಳ ನಾಣ್ಯಗಳನ್ನು ಕೊಂಡುಕೊಳ್ಳುವುದು ಮತ್ತು ಮಾರಾಟಮಾಡುವುದು; ಎಂದರೆ ಒಂದು ರಾಷ್ಟ್ರವು ತನ್ನ ನಾಣ್ಯಗಳನ್ನು ಕೊಟ್ಟು, ತನಗೆ ಬೇಕಾದ ದೇಶದ ನಾಣ್ಯಗಳನ್ನು ಪಡೆಯುವುದು. ಭಾರತವು ವಿದೇಶವ್ಯಾಪಾರದಲ್ಲಿ ಗಳಿಸಿದ್ದನ್ನು ಸ್ಟರ್ಲಿಂಗಿಗೆ ರೂಪಾಂತರಿಸುತ್ತದೆ. ಈ ಸ್ಟರ್ಲಿಂಗನ್ನು ಡಾಲರ್‌ರೂಪದಲ್ಲಿಯೂ ಪರಿವರ್ತಿಸಬಹುದು. ಇದರಿಂದ, ಒಂದು ದೇಶದ ನಾಣ್ಯಗಳ ಕೊರತೆಯ ಮೂಲಕ ವ್ಯಾಪಾರವು ನಿಲ್ಲದೆ ಸುಲಲಿತವಾಗಿ ಸಾಗುತ್ತದೆ. ಹಣಕಾಸಿನ ವ್ಯವಹಾರವು— "ಕೊಡುಕೊಳ್ಳುವಿಕೆ''ಯು— ಸಮತೋಲದಲ್ಲಿ ಉಳಿಯುತ್ತದೆ. ಆದರೆ ಆರ್ಥಿಕ ಅಭಿವೃದ್ಧಿಗಾಗಿ, ಸಾಲಪರಿಹಾರಕ್ಕಾಗಿ ಸಾಲಕೊಡುವುದು "ನಿಧಿ"ಯ ಉದ್ದೇಶವಲ್ಲ; ಅದು ಜಾಗತಿಕ-ಬ್ಯಾಂಕಿನ (ಅಂತರರಾಷ್ಟ್ರೀಯ ಬ್ಯಾಂಕಿನ) ಉದ್ದೇಶವಿದೆ.

೭. 'ನಿಧಿ'ಯ ಆಡಳಿತವು ಸದಸ್ಯರಾಷ್ಟ್ರಗಳ ಪ್ರತಿನಿಧಿ ಮಂಡಳದಿಂದ ನಡೆಯುತ್ತದೆ. ಈ ಪ್ರತಿನಿಧಿ ಮಂಡಳವು 'ನಿಧಿಯ'ಯ ಸ್ಥೂಲ ಧೋರಣೆಯನ್ನು ನಿರೂಪಿಸುತ್ತದೆ. ಆದರೆ ನಿಜವಾದ ಕಾರ್ಯಾಧಿಕಾರವನ್ನು ೧೨ ಸದಸ್ಯರುಳ್ಳ ಕಾರ್ಯನಿರ್ವಾಹಕ ಸಮಿತಿಗೆ ಒಪ್ಪಿಸಲಾಗಿದೆ. ಈ ಕಾರ್ಯನಿರ್ವಾಹಕ ಸಮಿತಿಯಲ್ಲಿ, ಅಮೇರಿಕ, ಇಂಗ್ಲಂಡ್, ಫ್ರಾನ್ಸ್, ಚೀನ, ಮತ್ತು ಭಾರತಗಳಿಂದ ಆರಿಸಲ್ಪಟ್ಟ ಒಬ್ಬೊಬ್ಬ ಅಜೀವ ಸದಸ್ಯನಿರುತ್ತಾನೆ. ಅಮೇರಿಕೆಯ ಉಳಿದ ಪ್ರಜಾರಾಜ್ಯಗಳು ಇಬ್ಬರು ಸದಸ್ಯರನ್ನು ಆರಿಸುತ್ತವೆ. ಉಳಿದ ಐದು ಸದಸ್ಯರನ್ನು ಸದಸ್ಯರಾಷ್ಟ್ರಗಳೆಲ್ಲ ಕೂಡಿ ಆರಿಸುತ್ತವೆ. ರಶಿಯವು ಈ ಯೋಜನೆಯಲ್ಲಿ ಭಾಗವಹಿಸಲು ನಿರಾಕರಿಸಿದ್ದುದರಿಂದಲೇ ಭಾರತಕ್ಕೆ ಅಜೀವ ಸದಸ್ಯತ್ವವು ಸಿಕ್ಕಿತು.

"ಅಂತರರಾಷ್ಟ್ರೀಯ ಹಣಕಾಸಿನ ನಿಧಿ" ಯೋಜನೆಯ ಮಹತ್ತ್ವ : ೧೯೩೦ರ ಮೊದಲಿನ ಅಂತರರಾಷ್ಟ್ರೀಯ ಸುವರ್ಣ ಪ್ರಧಾನ ಪದ್ಧತಿಯ ಕಾಲದಲ್ಲಿ, ಅಂತರರಾಷ್ಟ್ರೀಯ ವ್ಯಾಪಾರವು ಸುಗಮವಾಗಿ ಸಾಗಬೇಕಾದರೆ, ರಾಷ್ಟ್ರಗಳ ನಾಣ್ಯವಿನಿಮಯ ದರವು ಬಂಗಾರರೂಪದಲ್ಲಿಯಾಗಲಿ, ಪರಸ್ಪರ ನಾಣ್ಯರೂಪದಲ್ಲಿಯಾಗಲಿ ನಿಶ್ಚಿತವಿರಬೇಕೆಂಬ ತತ್ತ್ವಕ್ಕೆ ಮನ್ನಣೆಯಿತ್ತು. ಒಂದು ವೇಳೆ ವಿದೇಶದ ಕೊರತೆಯ ಮೂಲಕ, ತನ್ನ ನಾಣ್ಯದ ಮೌಲ್ಯ ಪ್ರಮಾಣವು ಕೆಳಗೆ ಇಳಿಯುವುದು ಕಂಡುಬಂದರೆ, ಆ ರಾಷ್ಟ್ರವು ಕೊಡುಕೊಳ್ಳುವ ಕೊರತೆಯನ್ನು ತುಂಬಿಕೊಳ್ಳಲು, ನಾಣ್ಯಚಲನೆಯನ್ನು ನಿರ್ಬಂಧಿಸಿ, ದೇಶದ ಉತ್ಪನ್ನವನ್ನು ಮತ್ತು ಪರದೇಶಗಳಲ್ಲಿ ವೆಚ್ಚ ಮಾಡುವ ಶಕ್ತಿಯನ್ನು ಕಡಿಮೆ ಮಾಡುತ್ತಿತ್ತು. ಆದರೆ ೧೯೩೦ರ ನಂತರ ದೇಶದ ಅನಿರ್ಬಂಧ ಆರ್ಥಿಕ ಚಟುವಟಿಕೆಗಾಗಿ, ಅಂತರಿಕ ಭದ್ರತೆಗಾಗಿ, ಸಾಮಾಜಿಕ ಸುರಕ್ಷಿತತೆಯು ವಿದೇಶ ವಿನಿಮಯ ಭದ್ರತೆಗಿಂತಲೂ ಹೆಚ್ಚು ಮಹತ್ತ್ವಪೂರ್ಣನಿಸಿದುದರಿಂದ, ಈ ತತ್ತ್ವವನ್ನು ತ್ಯಜಿಸಲಾಯಿತು. ಇದೇ ಕಾರಣಕ್ಕಾಗಿಯೇ ಅಂತರರಾಷ್ಟ್ರೀಯ ಸುವರ್ಣಪ್ರಧಾನ ಪದ್ಧತಿಯನ್ನು ತ್ಯಜಿಸಲಾಯಿತು. ಅಂತರರಾಷ್ಟ್ರೀಯ ನಿಧಿಯು ಮೊದಲಿನ ವಿದೇಶವಿನಿಮಯ ಭದ್ರತೆಯ ತತ್ತ್ವವನ್ನು ಮತ್ತು ಆಧುನಿಕ ಅಂತರಿಕ ಆರ್ಥಿಕ ಭದ್ರತೆಯ ತತ್ತ್ವವನ್ನೂ ಸಮನ್ವಯಗೊಳಿಸಲು ಯತ್ನಿಸುತ್ತಿದೆ. ದೇಶದ ಅಂತರಿಕ ಆರ್ಥಿಕಭದ್ರತೆಗೆ ವಿನಿಮಯದರವು ಪ್ರತಿಕೂಲವಾಗಿದ್ದರೆ, ಆ ದರದಲ್ಲಿ ಹೆಚ್ಚುಕಡಿಮೆ ಮಾಡಲು ಅನುಮತಿ ಕೊಟ್ಟು, ಅಂತರಿಕ ಭದ್ರತೆಗೆ ಹೆಚ್ಚು ಮಹತ್ತ್ವ ಕೊಡುವ ತತ್ತ್ವಕ್ಕೆ ಈ ಯೋಜನೆಯು ಮನ್ನಣೆಕೊಡುತ್ತದೆ. ಅಂತರರಾಷ್ಟ್ರೀಯ ವ್ಯಾಪಾರವು ನಿರ್ಭಯದಿಂದ ಸಾಗಬೇಕಾದರೆ, ಅಂತರರಾಷ್ಟ್ರೀಯ ನಿಧಿಗೆ ತಿಳಿಸಿದ ವಿನಿಮಯದ ದರಕ್ಕಿಂತ ನೂರಕ್ಕೆ ೧ ಕ್ಕಿಂತ ಹೆಚ್ಚಾಗಲಿ ಕಡಿಮೆಯಾಗಲಿ ಹೊಯ್ದಾಡದೆ, ವಿನಿಮಯದ ದರದಲ್ಲಿ ವಿಶ್ವಾಸಹುಟ್ಟಿಸಲು ಒಂದೇ ದರ ಉಳಿಯುವಂತೆಯೂ ಈ ಯೋಜನೆಯು ಎಚ್ಚರವಹಿಸಿದೆ. ಆದರೆ ಈ ನಿರ್ಬಂಧವು ಕಠೋರವೆನಿಸಬಹುದು. ಯಾಕೆಂದರೆ, ಕೆಲ

ಅನಿವಾರ್ಯ ಪ್ರಸಂಗದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಹೆಚ್ಚು ಕಡಿಮೆಯಾಗುವುದು ಅವಶ್ಯವಿರುತ್ತದೆ. ಈ ಪದ್ಧತಿಯು ಇಂದಿನ ಸ್ಥಿತಿಯಲ್ಲಿ ಸರಿಹೋಗುವುದೋ ಹೇಗೆ ಎಂಬುದೇ ಸಮಸ್ಯೆ:

೧) ಇಂದಿನ ಜಗದಲ್ಲಿ ಆರ್ಥಿಕ ಸ್ಥಿತಿಯು ಒಂದೇ ಬಗೆಯದಿಲ್ಲ. ಕೆಲ ದೇಶಗಳ ಸ್ಥಿತಿಯು ಸಂಪೂರ್ಣ ನಿಯಂತ್ರಣದಲ್ಲಿದೆ; ಇನ್ನು ಕೆಲ ದೇಶಗಳ ಸ್ಥಿತಿಯು ಸಂಪೂರ್ಣ ಸ್ವತಂತ್ರವಿದೆ; ಬೇರೆ ಕೆಲ ದೇಶಗಳಲ್ಲಿ ಅರ್ಧ ನಿಯಂತ್ರಣವೂ ಅರ್ಧ ಸ್ವಾತಂತ್ರ್ಯವೂ ಇರುವುದರಿಂದ, ಉತ್ಪಾದನೆಯ ವೆಚ್ಚ ಮತ್ತು ಬೆಲೆಯಲ್ಲಿ ಅಂತರವಿರುವುದರಿಂದ, "ಅಂತರರಾಷ್ಟ್ರೀಯ ಹಣಕಾಸಿನ ನಿಧಿ" ಯೋಜನೆಯಲ್ಲಿ ಸಾಧ್ಯವಾದುದಕ್ಕಿಂತಲೂ ತೀವ್ರವಾಗಿ, ಸರಳವಾಗಿ ವಿನಿಮಯ ದರವಲ್ಲಿ ಹೆಚ್ಚು ಕಡಿಮೆಯಾಗುವುದು ಅವಶ್ಯವಾಗಿದೆ. (೨) ಈ ಯೋಜನೆಯಲ್ಲಿ ವಿನಿಮಯದ ದರವು ಅವಲಂಬಿಸಿದ ತಳಹದಿಯು ಭದ್ರವಾಗಿಲ್ಲ. ತಾತ್ತ್ವಿಕವಾಗಿ ಬಂಗಾರವೇ ತಳಹದಿಯಾಗಿದೆ. ಆದರೆ ನಿಜವಾಗಿ ಅಮೇರಿಕೆಯ ಡಾಲರು ನೆಲಗಟ್ಟಾಗಿದೆ. ಆದರೆ ಅಮೇರಿಕೆಯ ಬೆಲೆಗಳ ಸ್ಥಿತಿಯು ಅನಿಶ್ಚಿತವಿದೆ. ಕೋರಿಯದ ಯುದ್ಧ ಪ್ರಾರಂಭವಾದಂದಿನಿಂದಂತೂ ವಿಪರೀತ ಏರಿವೆ. ಇನ್ನೂ ಎಷ್ಟು ಏರುವುವೋ ಬಲ್ಲವರಾರು? ಈ ಅನಿಶ್ಚಿತ ಬೆಲೆಗಳೇ, ನಿಶ್ಚಿತ ವಾಗಿರಬೇಕಾದ ವಿನಿಮಯ ದರದ ತಳಹದಿಯೆಂದರೆ ಪರಿಣಾಮವೇನಾಗಬಹುದು! (೩) ಈ "ನಿಧಿ"ಯು ವಿಷಮ ಹಣದ ಚಲನೆಗೆ ಪ್ರೋತ್ಸಾಹನೆಯನ್ನೀಯುತ್ತದೆ. ಇದಕ್ಕೆ ಕಾರಣವೆಂದರೆ, ಯಾವುದೇ ನಾಣ್ಯದ ಮೌಲ್ಯವು ವಿಶಿಷ್ಟ ಪ್ರಮಾಣದಲ್ಲಿ ಹೆಚ್ಚು ಅಥವಾ ಕಡಿಮೆಯಾಗಿದೆಯೆಂದು ಸಾಮಾನ್ಯವಾಗಿ ಸಂಶಯ ಹುಟ್ಟಿದರೆ, ಆ ಮಟ್ಟವನ್ನು ಕಾಯ್ದುಕೊಳ್ಳಬೇಕೆಂಬ ಪ್ರಯತ್ನವೇ ಈ ಜೂಜಾಟಕ್ಕೆ ಉತ್ತೇಜನ ಕೊಟ್ಟಂತಾಗುತ್ತದೆ. ಇದು ಆಸ್ಟ್ರೇಲಿಯದ ಪೌಂಡಿನ ಬಗ್ಗೆಯೂ, ಕೆನಡಾದ ಡಾಲರಿನ ಬಗ್ಗೆಯೂ ಮತ್ತು ಬ್ರಿಟನಿನ ಸ್ಟರ್ಲಿಂಗಿನ ಬಗ್ಗೆಯೂ ಸ್ಪಷ್ಟವಾಯಿತು.

ಇಂದಿನ ವಿನಿಮಯವು ಬಂಗಾರದ ಭವಿಷ್ಯದ ಮೇಲೆಯೇ ಅವಲಂಬಿಸಿ ಕಂಗಾಲಾಗಿದೆ! ಈ ಬಂಗಾರವು ಅಮೇರಿಕೆಯ ಧೋರಣೆಯನ್ನು ಅವಲಂಬಿಸಿದೆ. ಅಮೇರಿಕೆಯಲ್ಲಿಯ ಇಂದಿನ ಅತಿಪ್ರಸರಣದ ಹಾವಳಿಯನ್ನು ನೋಡಿದರೆ, ವಿಶ್ವದ ಗತಿಯೇನಾಗುವುದೋ ಎಂಬ ಭೀತಿಯುಂಟಾಗುತ್ತದೆ. "ನಿಧಿ"ಯು ವಿನಿಮಯದ ದರವನ್ನು ಸುಲಭವಾಗಿ, ಸಾಕಷ್ಟು ಪ್ರಮಾಣದಲ್ಲಿ ಹೆಚ್ಚುಕಡಿಮೆ ಮಾಡಲು ಬರುವಂತೆ ಸೌಕರ್ಯ ಕಲ್ಪಿಸಿಕೊಟ್ಟು, ಸುಗಮ ದಾರಿಯನ್ನು ತೋರಿಸುವುದು ಯೋಗ್ಯ; ಆದರೆ ದಿನಕ್ಕೊಮ್ಮೆ ವಿಪರೀತವಾಗಿ ಬದಲಿಸುವ ಅಧುನಿಕ ಸ್ವಚ್ಛಂದ ಪ್ರವೃತ್ತಿಯೂ ಬೇಡ, ಸ್ವಲ್ಪ ಕೂಡ ಹೆಚ್ಚು-ಕಡಿಮೆ ಮಾಡಗೊಡದ ಸಂಪ್ರದಾಯದಸಂಕೋಲೆಯೂ ಬೇಡ. ಪ್ರಸಂಗಕ್ಕೆ ತಕ್ಕ ಧೋರಣೆ ಬೇಕು.

ಸುಮಾರು ನಾಲ್ಕು ವರ್ಷಗಳ ಅವಧಿಯಲ್ಲಿ "ನಿಧಿ"ಯು ತನ್ನ ಗುರಿಯಾದ, ವಿನಿಮಯದರವನ್ನು ಸಂಗೊಳಿಸುವಲ್ಲಿ ಮತ್ತು ಆರ್ಥಿಕ ಅವನತಿಗೆ, ಮಹಾಮುಗ್ಗಟ್ಟಿಗೆ ಕಾರಣವಾಗಿರುವ ಮೌಲ್ಯಚ್ಛೇದನೆಯ ಸ್ಪರ್ಧೆಯನ್ನು ತಡೆಗಟ್ಟುವಲ್ಲಿ, ಎಷ್ಟರಮಟ್ಟಿಗೆ ಯಶಸ್ವಿಯಾಗಿದೆಯೆಂಬುದನ್ನು ಹೇಳುವುದು ಕಠಿಣ. ಆಗಬೇಕಾದಷ್ಟು ಕಾರ್ಯ ಆಗಿಲ್ಲವೆಂದೇ ಹೇಳಬೇಕಾಗುತ್ತದೆ. "ಜಾಗತಿಕ ಬ್ಯಾಂಕಿ"ನ ಸದಸ್ಯರಾಗಲು "ಅಂತರರಾಷ್ಟ್ರೀಯ ನಿಧಿ"ಯ ಸದಸ್ಯರಾಗಲೇಬೇಕೆಂಬ ನಿರ್ಬಂಧವಿರುವುದರಿಂದ, "ನಿಧಿ"ಯ ಸದಸ್ಯರಾಷ್ಟ್ರಗಳು ಜಾಗತಿಕ ಬ್ಯಾಂಕಿನ ಸದಸ್ಯತ್ವವನ್ನು ಪಡೆಯಲು ಶಕ್ತವಾಗಿವೆಯೆಂಬುದನ್ನು ಬಿಟ್ಟರೆ, ಉಳಿದ ಯಾವ ಮಹಾಕಾರ್ಯವನ್ನೂ ಸಾಧಿಸಿಲ್ಲ. "ನಿಧಿ"ಯ ಪ್ರಮುಖ ಗುರಿಯಾದ ಬಹುಮುಖ ನಾಣ್ಯಪರಿವರ್ತನೆಯಲ್ಲಾಗಲಿ ವಿನಿಮಯ ದರವನ್ನು ಭದ್ರಗೊಳಿಸುವಲ್ಲಾಗಲಿ ಯಶಸ್ವಿಯಾಗಿಲ್ಲ. "ನಿಧಿ"ಯು ಇದೇ ರೀತಿಯಾಗಿ ಪಕ್ಷಪಾತದಿಂದ, ಬಲಶಾಲಿರಾಷ್ಟ್ರಗಳ ಸೂತ್ರವಾಗಿ ಕೆಲಸಮಾಡುತ್ತ ಹೋದರೆ "ನಿಧಿ"ಯು ಭೂಗರ್ಭನಿಧಿಯೇ ಆಗುವಲ್ಲಿ ಸಂಶಯವಿಲ್ಲ. ಆದರೆ ಸುವರ್ಣಪ್ರಧಾನ ಪದ್ಧತಿಯೊಡನೆ ಹೋಲಿಸಿ ನೋಡಿದರೆ, ಕೊಡುಕೊಳ್ಳುವಿಕೆಯನ್ನು ಸಂಗೊಳಿಸಲು, ಬ್ರಿಟನ್, ಭಾರತ, ಡೆನ್ಮಾರ್ಕ, ಫ್ರಾನ್ಸಗಳಿಗೆ ಮೌಲ್ಯಚ್ಛೇದನೆಯ ಸೌಕರ್ಯವನ್ನು ಒದಗಿಸಿದ್ದು ಒಂದು ರೀತಿಯಿಂದ "ನಿಧಿ"ಯ ಸುಕರ ಉಪಾಯವೆಂದು ತೋರದೆ ಇರದು.* ಆದರೆ ಇಷ್ಟರಿಂದಲೇ ಆ ಕಾರ್ಯವು ಯಶಸ್ವಿಯಾಗುವುದೂ ಸಾಧ್ಯವಿಲ್ಲ, ಇದಕ್ಕಿಂತ ಹೆಚ್ಚಿಗೆ ಸಾಧಿಸಲು "ನಿಧಿ"ಗೆ ಸಾಧ್ಯವೂ ಇಲ್ಲ. ಇದಲ್ಲದೆ ನಾಣ್ಯರೂಪಾಂತರದಲ್ಲಿ ಧನಿಕ ರಾಷ್ಟ್ರಗಳ ಕೈವಾಡವೂ, ರಾಜಕೀಯ ಕುಟಿಲ ನೀತಿಯೂ ಅಡಕವಾಗಿದೆಯೆಂಬುದು ಭಾರತ-ಆಸ್ಟ್ರೇಲಿಯಗಳ ಉದಾಹರಣೆಯಿಂದ ಸ್ಪಷ್ಟವಾಗುತ್ತದೆ. ಭಾರತವು ಸುಮಾರು ೧೦೦ಮಿಲಿಯನ್ ಡಾಲರುಗಳನ್ನು ಪಡೆಯಬೇಕಾದರೆ ಎಷ್ಟೆಷ್ಟು ಕರಾರುಗಳಿಗೆ, ನಿಯಂತ್ರಣಗಳಿಗೆ ಒಪ್ಪಬೇಕು! "ನಿಧಿ"ಯು ಅನುಮತಿಕೊಟ್ಟ ಕಾರ್ಯಗಳಿಗೆ ಮಾತ್ರ ಉಪಯೋಗಿಸಬೇಕಂತೆ. ಇರಲಿ. ಆದರೆ ಅದೇ ನಿಯಮವು ಆಸ್ಟ್ರೇಲಿಯಕ್ಕೆ ಇದೆಯೆ? ಹಿಂಸಾತ್ಮಕ ಕಾರ್ಯಗಳಿಗಾಗಿ— ಯುದ್ಧೋಪಯೋಗಿ ಅಸಿದ್ಧ ಸರಕುಗಳಿಗಾಗಿ ಹಣವನ್ನು ಸೂರೆಮಾಡುತ್ತಿದೆಯಲ್ಲಿ? ಆಸ್ಟ್ರೇಲಿಯವು ಅಮೇರಿಕ-ಇಂಗ್ಲಂಡುಗಳ ಕೈಗೊಂಬೆಯೇ?

* R. Chaterji, M.A. Currency & Exchange (Indian Economics)

ರಜಿಸ್ಟರ್ ಮದುವೆಗಳು. ಮುಂಬಯಿಯಲ್ಲಿ ನಡೆಯತಕ್ಕಂಥವೇ. ಆದರೆ ವಿದ್ಯಾ, ರಾಮನಾಥರು ಅಂಥ ಜನಕ್ಕಿಂತ ತುಸು ಮೇಲ್ಮಟ್ಟದವರು. ವಿದ್ಯಾ ರಾಮನಾಥನನ್ನು ಒಪ್ಪಿದ್ದುದಾದರೂ ಏಕೆ? ರಾಮನಾಥ ಇದು ತನ್ನ ಎರಡನೆಯ ಸಂಬಂಧವೆಂದು ಮದುವೆಯಾದ ಮೇಲಾದರೂ ಹೇಳಲಿಲ್ಲವೇಕೆ?— ಎಂಬುದು ತಿಳಿಯುವುದಿಲ್ಲ. ಇನ್ನು ರಾಮನಾಥನ ಎರಡನೆಯ ಸಂಬಂಧ ಸುಖಕರವಾಗದುದಕ್ಕೆ ಸಂಪೂರ್ಣ ಅವನೇ ಕಾರಣನೆಂದು ನನಗೆನ್ನಿಸುತ್ತದೆ. ಏಕೆಂದರೆ ತಾನು ಛಬಿಯೊಟ್ಟಿಗೆ free ಯಾಗಿ ವರ್ತಿಸಬಲ್ಲ; ಅದೇ ವಿದ್ಯಾ ಹಾಗೆ ಮಾಡಿದರೆ ತಲೆಕಾಯಿಸಿಕೊಳ್ಳುವವನ ವ್ಯಕ್ತಿತ್ವ ಕೆಳಮಟ್ಟದ್ದೆನಿಸುತ್ತದೆ. ಇವೇ ಮೊದಲಾದ ಕಾರಣಗಳಿಂದ ನಾಯಕ ರಾಮನಾಥ ನಮಗೆ ಅಷ್ಟು ಹಿಡಿಯುವುದಿಲ್ಲ.

ಇಲ್ಲಿ ಮುಂಬಯಿ ಜೀವನದ ಒಂದು ಮುಖ ಮಾತ್ರ ಇದೆ; ಅದೂ ಹಿನ್ನೆಲೆಯಾಗಿ. ಸಾಮಾನ್ಯ ಮಧ್ಯಮ ವರ್ಗದ ಜೀವನವೇ ಒಂದು ಕಾದಂಬರಿಯಾಗಿ ಬರುವುದಕ್ಕೆ ಇಲ್ಲಿ ನೆರೆದ ನಾವು ಯತ್ನಮಾಡಬೇಕೆಂಬ ಒತ್ತಾಸೆ ನಮ್ಮಲ್ಲಿ ಮೂಡುವಂತೆ ಎನ್ಕೆ ಪರೋಕ್ಷವಾಗಿ ನೆರವಾಗಿದ್ದಾರೆ. ಒಟ್ಟಿನಲ್ಲಿ ಇದೊಂದು ಸಾಧಾರಣವಾದ ಆದರೆ readable ಕಾದಂಬರಿ.' — ಗೋಪೀನಾಥ.

* * *

೩

'ಪಂದನೆಗಳು— ಮನೆಯಲ್ಲಿಯ ಅನಿವಾರ್ಯದಿಂದ ಈ ದಿನದ ಸಾಹಿತ್ಯಕೂಟಕ್ಕೆ ಬರಲಾರೆ. ವಿಷಾದಿಸುತ್ತೇನೆ. ಈ ಕೆಳಗೆ ಬರೆದಿರುವ ಒಂದೆರಡು ಮಾತನ್ನು ನನ್ನ ಪರವಾಗಿ ಸಾಹಿತ್ಯಕೂಟದಲ್ಲಿ ಓದಿ—

ನವದಂಪತಿಗಳ ಸವಿಸವಿಯಾದ ಪತ್ರಗಳಿಂದಲೂ, ಮಾನವನ ಬಾಳ್ವೆಯಲ್ಲಿ ಸಹಜವಾಗಿ ಸಂಭವಿಸುವ ನಾವು-ನೋವುಗಳ ಹುಳಿಮೊಗೆಯೂ ಬೆರೆದ 'ಶ್ರೀಖಂಡ'ದಂತಿರುವ ಈ ಕಾದಂಬರಿಯನ್ನು ನಮಗೆ ನೀಡಿದ ಶ್ರೀ. ಎನ್ಕೆಯವರು ಅಭಿನಂದನಾರ್ಹರು.

ಕಥಾನಾಯಕನು ರಾಮನಾಥನಾದರೂ, ಲೇಖಕರು ಜಾನಕಿ, ವಿದ್ಯಾ ಮತ್ತು ಛಬಿ ಈ ಮಹಿಳೆಯರಿಗೇ ಹೆಚ್ಚು ಪ್ರಾಶಸ್ತ್ಯ ಕೊಟ್ಟಿರುವುದು, ಮಹಿಳೆಯರ ಬಗ್ಗೆ ಲೇಖಕರಿಗಿರುವ ಆದರಾಭಿಮಾನ ಸೂಚಕವಾಗಿದೆ. ಆದರೆ ಬಹಳ ಜಾಣ್ಮೆಯಲ್ಲಿ ರಾಮನಾಥನ ಬಾಯಿಂದ ಹೇಳಿಸುವ, 'ಕಲಿತವಳಾಗಲಿ, ಕಲಿಯದವಳಾಗಲಿ, ಹೆಂಗಸರ ಮನಸ್ಸು ಸಂಶಯಪಿಶಾಚಿಗಳ ತವರುಮನೆ' ಎಂಬ ಈ ಮಾತು ಚಮತ್ಕಾರಿಕವಾಗಿದೆ. ಏಕೆಂದರೆ, ಇದೇ ರಾಮನಾಥ, ವಿದ್ಯಾಳಿಗಾಗಿ ಬಂದ ಕವರನ್ನು ಎಷ್ಟು ಎಚ್ಚರಿಕೆಯಿಂದ, ಅದೆಷ್ಟು ಆತುರವಾಗಿ ಒಡೆದು ಓದುತ್ತಾನೆ! ಹೀಗೇಕೆ? ಅವನಿಗೂ ಈ ಸಂಶಯ ಪಿಶಾಚಿ ಅಂಟಿತ್ತು ಅಲ್ಲವೆ? ಆದಕ್ಕಾಗಿ ಮಹಿಳೆಯರೊಬ್ಬರನ್ನೇ ಏಕೆ ದೂಷಿಸಬೇಕು? ಈ ಸಣ್ಣ ಆಕ್ಷೇಪವನ್ನು ಹೇಳಿದ ಮಾತ್ರಕ್ಕೆ ಶ್ರೀ. ಎನ್ಕೆಯವರ ಕೃತಿಯ ಬಗ್ಗೆ ಯಾವ ಲೋಪದೋಷವೂ ಬಾರದೆಂದು ನಂಬಿದ್ದೇನೆ. ಇತಿ'—

ಶ್ರೀಮತಿ ಲಲಿತ ರಾಮಣ್ಣ.

* * *

೪

'ನಾವಿನ ಉಡಿಯಲ್ಲಿ' ಬರೆದ ಕೈ, 'ಎರಡನೆಯ ಸಂಬಂಧ'ವನ್ನೂ ಬರೆಸಿದೆ. ಎರಡೂ ಕುಟುಂಬಜೀವನದ ಚಿತ್ರಗಳು. ಮೊದಲಿನದರ ಸನ್ನಿವೇಶಗಳೆಲ್ಲ ಒಂದು ಯುಗದುವು; ಕಳೆದುಹೋದ ಅಥವಾ ಕಳೆಯುತ್ತಿರುವ ಯುಗದುವು. ಎರಡನೆಯ ಸಂಬಂಧದ ಚಿತ್ರಣವೆಲ್ಲ ಇಂದಿನ ಹಾಗೂ ಬಹುಶಃ ಮುಂದಿನ ಒಂದೆರಡು ದಶಕಗಳಷ್ಟು ಕಾಲದ ಕುಟುಂಬಜೀವನಕ್ಕೆ ಸಂಬಂಧಿಸಿದುವು.

ಕಥೆಯ ಮುಖ್ಯಸೂತ್ರ, ಅಸಮಾನ ಮನೋಭೂಮಿಕೆಯಿಂದ ವಿರಸದ ಪಾತಾಳಕ್ಕಿಳಿಯುವ ಸುಧಾರಿತ (?) ದಾಂಪತ್ಯ. ಇಂದು ಸಮಾಜದಲ್ಲಿ ವಿವಾಹವಿಚ್ಛೇದಕ್ಕೆ ಅನುಕೂಲ ವಾತಾವರಣವನ್ನೊದಗಿಸಿಕೊಡಬಹುದಾದ ಪರಿಸ್ಥಿತಿ ಎಷ್ಟು ಸುಲಭವಾಗಿ ಉದ್ಭವಿಸಬಹುದು—ಎಂದು ಈ ಕೃತಿ ಸಾರಿಹೇಳುತ್ತದೆ.

ಇಲ್ಲಿಯ ಮುಂಬಯಿಜೀವನ, ಕಾದಂಬರಿಯ ಓಟ, flash back ತಂತ್ರ—ಇವುಗಳ ಪ್ರಶಸ್ತಿಯಲ್ಲಿ ನನ್ನದೂ ಅನುಮೋದನವಿದೆ, ಆದರೆ flash back ತಂತ್ರದ ಪರಿಣಾಮವಾಗಿಯೋ ಏನೊ, ಪಾತ್ರಸೃಷ್ಟಿ ಯಶಸ್ವಿಯಾಗಿ ಬಂದಿಲ್ಲ. ಬೇರೆಯೆಲ್ಲ ಪಾತ್ರಗಳು ಪರಿಪೂರ್ಣತೆಯನ್ನು ಪಡೆದು ಕಥೆಯ ಬೆಳವಣಿಗೆಗೆ ತುಂಬ ಸಹಾಯ ಮಾಡಿರುವುವಾದರೂ, ಮುಖ್ಯಪಾತ್ರಗಳೇ ನಾವು ಲೇಖಕರಿಂದ ಆಶಿಸಬೇಕಾದಷ್ಟು ಸ್ಫುಟವಾಗಿ ಬಂದಿಲ್ಲ.

ಮುಖ್ಯವಾಗಿ ಮೊದಲನೆಯ ಸಂಬಂಧದ ಪತ್ರಸಂಚಯದ flash backಗೆ— ಇದು ೪೮ ಪುಟಗಳಷ್ಟಿದೆ— ಹೊಂದಿಕೊಂಡು ಇರಬೇಕಾದ ರಾಮನಾಥ-ವಿದ್ಯಾರ ವಿರಸದಾಂಪತ್ಯದ ಗಾಂಭೀರ್ಯ ಮೊದಲಿಗೆ ಕಂಡುಬರುವುದಿಲ್ಲ. ರಾಮನಾಥನ ಎರಡನೆಯ ಸಂಬಂಧದ ಕುರಿತು ಪರಿತಪಿಸುತ್ತಿರುವ ವಿದ್ಯಾಳ ವರ್ತನೆಯ ಬಗೆಯ ಉಲ್ಲೇಖವೇ ಇಲ್ಲ. ಈ ವಿಷಮ ದಾಂಪತ್ಯದ ರೌದ್ರರುದ್ರತೆಯನ್ನು ಸ್ಪಷ್ಟವಾಗಿ ತೋರಿಸುವ ಚಿತ್ರಣ ೧೦-೧೫ ಪುಟಗಳಷ್ಟಾದರೂ ಬೇಕಿತ್ತು.

ಕಥಾನಾಯಕ ಒಬ್ಬ ಸಾಮಾನ್ಯಜೀವಿ. ಆತನ ಆದರ್ಶಕ್ಕೆ ಒಂದು ನಿರ್ದಿಷ್ಟ ನೆಲೆಯಿಲ್ಲ, ಸ್ವರೂಪವೂ ಇಲ್ಲ. ದಾಂಪತ್ಯದಲ್ಲಿ ಸಂಶಯದ ದುರ್ಬಲವ್ಯಕ್ತಿತ್ವದ ರಾಮನಾಥ, ಛಬಿಯಂಥ ಹೆಂಡತಿಯಿಂದಲೂ ಸಂಪೂರ್ಣ ಸುಖಿಯಾಗುತ್ತಿದ್ದನೆಂದು ಹೇಳುವುದು ದಿಟ್ಟತನದ ಮಾತಾಗಬಹುದು. ಅವನ ಈ ದೌರ್ಬಲ್ಯದಿಂದಾಗಿ, ವಿದ್ಯಾಳ ಕುರಿತು ಓದುಗನಲ್ಲಿ ಸಹಾನುಭೂತಿ ಉಂಟಾಗುತ್ತದೆ. ಗೆಳೆಯ ಮಧುವಿನ ಅತಿಚೇಷ್ಟೆಯ ಕುರಿತು ಆಕೆ ತೋರಿಸುವ ಪ್ರತಿಭಟನೆಯಿಂದಾಗಿ, ಈ ಸಹಾನುಭೂತಿ ನಮ್ಮಲ್ಲಿ ಸ್ಫುಟಗೊಳ್ಳುತ್ತದೆ, ಇತ್ತ ಆಕೆ ರಾಮನಾಥನನ್ನು ಬಿಟ್ಟುಬಂದಾಗ, ಮಧುವನ್ನೇ ಏಕೆ ಮದುವೆಯಾಗಲು ಸಾಧ್ಯವಿಲ್ಲ—ಎಂದು ತೋರಿಸುವ ಪ್ರಯತ್ನವನ್ನು ಲೇಖಕರು ಮಾಡಿದಂತಿದೆ. ಆದರೆ

ಟ್ರೇನಿನಲ್ಲಿ ಮನುವಿನೊಡನೆ ಬರುವಾಗ, Coupe ನ್ನು Couple ಎಂದು ದ್ವಂದ್ವಾರ್ಥದ ಶೃಂಗಾರಹಾಸ್ಯದಲ್ಲಿ ಮುಳುಗಿಸಿದ ಮಾತನ್ನು ಅದೇ ವಿದ್ಯಾಳಿಗೆ ಆರೋಪಿಸಿದ್ದಾರೆ.

ಛಬಿ ಕಾದಂಬರಿಯ ಅತ್ಯಂತ ಸುಂದರ ಹಾಗೂ ಸಮರ್ಪಕ ಪಾತ್ರ. ಕಾದಂಬರಿಯುದ್ದಕ್ಕೂ ಮಿಂಚಿನಂತೆ ಪ್ರಕಾಶಿಸುತ್ತ, ಕೊನೆಗೆ ಕುಂಕುಮದ ಕರಡಿಗೆ ಹಿಡಿದು ವಿದ್ಯಾಳನ್ನು ಸ್ವಾಗತಿಸುತ್ತ, ಮುಗಿತಾಯದ ಹಾಡು ಹಾಡುವ ಛಬಿಯ ಪಾತ್ರ ಅಚ್ಚಳಿಯದೆ ಮನಸಿನ ಮುಂದೆ ನಿಲ್ಲುತ್ತದೆ.

ಕಾದಂಬರಿಯ ಗ್ರಾಂಥಿಕಶೈಲಿ ತಿಳಿಯಾದುದು; ಹಾಸ್ಯಮಯ. ಆದರೆ ಸಂಭಾಷಣೆಯ ಭಾಷೆಯಲ್ಲಿ ಹೊಸ ಪ್ರಯೋಗವಿದೆ. ಮರಾಟೀ ಪಾತ್ರಗಳು ಮರಾಟಿಯಲ್ಲೇ ಆಡುತ್ತವೆ. ಕೆಲವು ವೇಳೆ ಕನ್ನಡ ಪಾತ್ರಗಳು ಇಂಗ್ಲೀಷಿನಲ್ಲಿ ಸಂಭಾಷಣೆ ನಡೆಸುವುದೂ ಇದೆ. ಇನ್ನು ಮಾತು ಬಹಳ ಉದ್ವೇಗವಾಗಿದ್ದರೆ ಕನ್ನಡದಲ್ಲೇ ಎಲ್ಲವನ್ನೂ ಇಟ್ಟುಬಿಡುವುದೂ ಉಂಟು. ಈ ರೀತಿ ಕಾದಂಬರಿಯನ್ನು ಕಲಸುಮೇಲೋಗರವಾಗಿ ಪರಿವರ್ತಿಸುವುದರ ಔಚಿತ್ಯದ ಕುರಿತು ನನಗೆ ಸಂದೇಹ. ಸಂಭಾಷಣೆ 'ಕನಸಿನ ಮನೆ'ಯಲ್ಲಿಯಂತೆ ಗ್ರಾಂಥಿಕ ಕನ್ನಡದ ಬಳಸುಭಾಷೆಯಾಗಿದ್ದರೇನೆ ಚೆನ್ನೆಂದು ನನ್ನ ತಿಳಿವಳಿಕೆ.

ಇಷ್ಟನ್ನು ಹೇಳಿದರೂ, ಒಟ್ಟಿನಲ್ಲಿ ಇದು ೧೯೫೧ರ ಒಂದು ಉತ್ತಮ ಕಾದಂಬರಿಯೆಂದು ನನ್ನ ಅಭಿಪ್ರಾಯ.

—ಬಿ. ವ್ಯಾಸರಾಯ

* * *

೫

'ನನಗೆ ಎನ್ಕೆಯವರ ಪರಿಚಯವಿರುವುದು ಅವರ ಏಕಾಂಕಗಳಿಂದ ಮಾತ್ರ. ಈ ಸಭೆಯ ನಿಮಂತ್ರಕರು ಇದರ ಕುರಿತು ಅಭಿಪ್ರಾಯ ಕೇಳಿದರು. 'Not bad' ಅಂದೆ. ಜೀವನದ ಆದರ್ಶಕ್ಕೂ ಜೀವನಕ್ಕೂ ಇರುವ ಅಭ್ಯಂತರವನ್ನು ಎನ್ಕೆಯವರು ಚೆನ್ನಾಗಿ ಚಿತ್ರಿಸಿದ್ದಾರೆ. ಮೊದಲಿನ ನಾಲ್ವತ್ತೆಂಟು ಪುಟಗಳು, ಸಾಮಾನ್ಯಜೀವಿ ರಾಮಚಂದ್ರನ ದಾಂಪತ್ಯಜೀವನದ ಆದರ್ಶವನ್ನು ನಿರೂಪಿಸುತ್ತವೆ. ದೈವಸಂಕಲ್ಪ ಬೇರೆಯಿದ್ದು ರಾಮಚಂದ್ರನ ಆದರ್ಶ, ಅಲ್ಲಿಂದ ಕಣ್ಮರೆಯಾದ ಜಾನಕಿಯ ನೆನಪು, ಅವನ ಎರಡನೆಯ ಜೀವನದ ದುಃಖಕ್ಕೆ ಕಾರಣವಾಗುತ್ತವೆ. ಇತ್ತ ವಿದ್ಯಾ ರಾಮಚಂದ್ರರ ವಿಷಮಸಂಬಂಧದಲ್ಲಿ ಯಾರದು ತಪ್ಪು ಎಂಬುದನ್ನು ಕಾದಂಬರಿಕಾರರು ವಿವೇಚಿಸ ಹೋಗುವುದಿಲ್ಲ. ಇಬ್ಬರದೂ ತಪ್ಪಿದೆ, ಇಬ್ಬರೂ ನಿರಪರಾಧಿಗಳೇ. ಈ ತಪ್ಪುಒಪ್ಪುಗಳು ಜೀವನ ಸಹಜವಾಗಿವೆ.

ಆದರೆ ಅಲ್ಲಲ್ಲಿ impertections ಕಂಡು ಬರುತ್ತವೆ. ಮನು,

ಶಾರದಾ ಪ್ರಕಟನಾಲಯದ ಹೊಸ ಪ್ರಕಟನೆಗಳು!

ಜ್ವಾಲಾಮುಖಿಯ ಮೇಲೆ!

ಶ್ರೀ. ಬಸವರಾಜ ಕಟ್ಟೀಮನಿಯವರ ೪೪೦ ಪುಟಗಳ ಕಾದಂಬರಿ.

ಬೆಲೆ: ನಾಲ್ಕು ರೂಪಾಯಿ.

ನನ್ನ ರಸಿಕ ಮತ್ತು ಬಂಗಾರದ ಗೆಜ್ಜೆ

ಶ್ರೀ 'ಚದುರಂಗ'ರ ಸುಪ್ರಸಿದ್ಧ ಗದ್ಯಗೀತೆ 'ನನ್ನ ರಸಿಕ' ಹಾಗೂ ಏಳು ಕತೆಗಳ ಸಂಕಲನ.

ಬೆಲೆ: ೧ ರೂ. ೮ ಆ.

ಸ್ವಾತಂತ್ರ್ಯದೆಡೆಗೆ

(ದ್ವಿತೀಯ ಮುದ್ರಣ)

ನಮ್ಮ ಸ್ವಾತಂತ್ರ್ಯ ಸಮರದ ಕಾದಂಬರಿ

ಲೇಖಕರು: ಶ್ರೀ. ಬಸವರಾಜ ಕಟ್ಟೀಮನಿ

ಬೆಲೆ: ೨ ರೂ. ೪ ಆಣೆ.

ಶಾರದಾ ಪ್ರಕಟನಾಲಯ, ಅರಳೇಪೇಟೆ, ಬೆಂಗಳೂರು ೨.

ವಿದ್ಯಾರ ಸಂಬಂಧ ತುಂಬಾ ಅಸ್ಪಷ್ಟವಾಗಿದೆ. ಅದರಂತೆ ವಿದ್ಯಾಳ ಸ್ವಂತದ ಹಿನ್ನೆಲೆಯೂ ನಮಗೆ ತಿಳಿಯದು. ಮತ್ತದರಲ್ಲಿ ರಾಮಚಂದ್ರ, ವಿದ್ಯಾರ ನಾಲ್ಕು ದಿನಗಳ ಸ್ನೇಹದಲ್ಲಿ ಕೊನೆಗೊಳ್ಳುವ ಮದುವೆ! ಮುಂಬಯಿಯ ಯಾಂತ್ರಿಕ ವಾತಾವರಣದಲ್ಲಿಯಾದರೂ ಹೀಗಾಗಲು ಸಾಧ್ಯವೆ? ಎನ್ನುವವರು ಮುಂಬಯಿಯ ವಾಸ್ತವಚಿತ್ರದಲ್ಲಿ ಇದೊಂದು ಕುಂದೆಂದರೂ ತಪ್ಪಾಗಲಿಕ್ಕಿಲ್ಲ. ಇನ್ನವರು ಭಾಷೆಯ ಪ್ರಯೋಗದಲ್ಲಿ ಹಿಡಿದ ಹಾದಿ ವಿಶೇಷ ಆಕ್ಷೇಪಾರ್ಹವೆಂದು ನನಗೇನೆನಿಸಲಿಲ್ಲ. ಹೀಗಾಗಿ, ಪಾತ್ರಗಳನ್ನು ನಮ್ಮ ಕಣ್ಣ ಮುಂದೆ ನಿಲ್ಲಿಸುವಲ್ಲಿ ಅದೇನು ಅಡೆತಡೆಯಾಗಲಿಲ್ಲ. ಒಟ್ಟಿನಲ್ಲಿ ಕಾದಂಬರಿ ಸಾಧಾರಣತಃ ಚೆನ್ನಾಗಿದೆ.

—ಬಿ. ಎಸ್. ತುಂಗ.

* * * *

೬

'ಕಲೆಬರಿಕೆ ಕಂಡೊಡನೆ, 'ಎರಡನೆಯ ಸಂಬಂಧ' ಎನ್ನುವುದಕ್ಕೇ! ಏನು ಒಂದು ವಿಶಿಷ್ಟ ಬಾಳ್ವೆ, ಮನೋವ್ಯಾಪಾರ, ರಗಳೆ ರಸಿಕತೆಗಳವೆಯಲ್ಲ.... ಈ ಕಾದಂಬರಿ ಅವುಗಳ ಚಿತ್ರಣವೇನೋ ಎನ್ನಿಸುತ್ತದೆ. ಆದರೆ ಕಾದಂಬರಿಕಾರರ ಉದ್ದೇಶ ಅದಲ್ಲ. ಇಲ್ಲಿರುವುದು ಹೃದಯವಂತಿಕೆಯ ಹಾಗೂ ನಾಗರಿಕತೆಯಲ್ಲಿಯ ಭೇದ. ಅವುಗಳ ಹಿತಮಿತಬೆರಕೆಯೇ ದಾಂಪತ್ಯದ ಯಶಸ್ಸಿನ ಅಡಿಗಲ್ಲು ಎಂಬುದರ ಸೂಕ್ಷ್ಮ ಸಮರ್ಥನೆ.

ಲೇಖಕರು ಉತ್ತರ ಕರ್ನಾಟಕದ ಮಧ್ಯಮವರ್ಗದ ನರನಾಡಿಯನ್ನು ಮಿಡಿದವರೂ ಬಲ್ಲವರೂ ಆಗಿರುವುದರಿಂದ, ಎಲ್ಲೆಲ್ಲಿ ಆಷ್ಟು ಭಾಗ ಬಂದಿರುವುದೋ ಅದೆಲ್ಲ ಕಲಾತ್ಮಕತೆಯ ಸುಸ್ಪಷ್ಟ ಅಂಶವಾಗಿಬಿಟ್ಟಿದೆ. ಉದಾ: ಮಗ ಮೋಹನನನ್ನು ಕರೆತರಲು ರಾಮನಾಥ ತನ್ನೂರಿಗೆ ಹೋದಾಗಿನ ಎರಡೇ ದಿನದ ಘಟನೆಗಳ ನಿರೂಪಣೆಯಲ್ಲಿ ಬರುವ ಜೀವನ, ಆದರಲ್ಲಿಯ ೪–೫ ಪಾತ್ರಗಳು ಎಷ್ಟು ಕಳೆತುಂಬಿ ನಮ್ಮ ಮನಸ್ಸಿನಲ್ಲಿ ನೆಲೆಮಾಡುತ್ತವೆ! ಅದರಲ್ಲಿಯೂ ಆ ಶಾರದೆ! ಯಾರನ್ನು ತಾನು ಸಾಕಿ ಬೆಳೆಸಿ, ಅದಕ್ಕೆ ತಾಯಿಯೇ ಆಗಿದ್ದ ಆಗಲಿದ್ದ ಈ ಬಾಲೆ, ಕೊನೆಗೆ ರಾಮನಾಥ ಆ ಮಗುವನ್ನು ಅಪ್ಪನೆಂಬ ಹಕ್ಕಿನಿಂದ ಕರೆದೊಯ್ಯುವಾಗ, ಆಕೆ ಅವನ ಜೇಬಿನಲ್ಲಿ ಬರೆದಿಟ್ಟ ಪತ್ರ! ಅದನ್ನು ಲೇಖಕರು, 'ಜಾನಕಿಯ ಓಲೆಯ ತಿದ್ದಿದ ಆವೃತ್ತಿ' ಎಂದು. ಒಂದೇ ಮಾತಿನಲ್ಲಿ ಕರೆದು ಎಷ್ಟು ಅರ್ಥ ತುಂಬಿದ್ದಾರಲ್ಲ! 'ಬರಿ ಆವೃತ್ತಿ ಆಯಿತು. ತಿದ್ದಿದ ಆವೃತ್ತಿಯೂ ಆಯಿತು. ಎರಡನೆಯ (ಮೂರನೆಯ?) ಆವೃತ್ತಿ ಆಗಲಿಲ್ಲವಲ್ಲ!' ಎಂದು ಓದುಗ ಮಿಡುಕುವಷ್ಟು ಸುಂದರ ಪಾತ್ರ ಆ ಶಾರದೆಯದು.

ಆದರೆ, ಮುಂಬಯಿ ಜೀವನದ ಹಿನ್ನೆಲೆಯಲ್ಲಿ ಯಾವಾಗ ಕಾದಂಬರಿಕಾರರು ಕಾಲಿಟ್ಟರೋ, ಕಥಾನಾಯಕನ ಜೀವನದಂತೆ ಅವರೂ ತಮ್ಮ ನಿರೂಪಣೆಯಲ್ಲಿ ಕೃತ್ರಿಮರಾಗಿ ಬಿಟ್ಟರು. ಇಲ್ಲಿ ವಾಸ್ತವತೆಗೇನು ಕುಂದಿಲ್ಲ. ಆದರೆ ಮೊದಲಿನದರ ಸಹಜತೆ ಪಾತ್ರಗಳಡೆ ಹಾಕಿ ಹುಡುಕಿದರೂ ಸಿಕ್ಕುವುದಿಲ್ಲ. ಇದಕ್ಕೆ ರಾಮನಾಥನ ಕೃತಕ ದಾಂಪತ್ಯ ಕಾರಣವೋ, ಅಥವಾ ಇದು, ಅನುಭವದ ತೀವ್ರತೆ ಇರದೆ ಲೇಖಕರ ವಿಚಾರಶಕ್ತಿಯೊಂದರಿಂದಲೇ ಉದ್ಭೂತವಾದ ಜೀವನಚಿತ್ರಣವೆಂದೋ, ಅಂತೂ ತಿಳಿಯದು.

ಹೋಗಲಿ; ಜಾನಕಿ, ಗೋಪಾಳರಾಯ, ಶಾರಕ್ಕ, ರಾವ್ ದಂಪತಿಗಳು, ಛಬೆ ಇವರೆಲ್ಲರನ್ನು ಸ್ಪಷ್ಟವಾಗಿ, ಸುಂದರವಾಗಿ ಚಿತ್ರಿಸಿದ ಮತ್ತು ಚಿತ್ರಿಸಬಲ್ಲ ಲೇಖಕರಿಗೆ, ಕಥಾನಾಯಕ-ನಾಯಕಿಯರ ಮನೋಭೂಮಿಕೆಯೇ ಅರ್ಥವಾಗಿಲ್ಲವೇನು? ವಿಶೇಷತಃ ರಾಮನಾಥನ ಚಿತ್ರಣದಲ್ಲಿ ಸುಸಂಗತತೆ ಇರದಂತೆ ಏಕೆ ಆಗಿದೆ?

ಅವನೊಬ್ಬ double graduate. ಸುಸಂಸ್ಕೃತ ಮನುಷ್ಯ, ರಸಿಕ ಮತ್ತು ಸಾಹಿತ್ಯಪ್ರೇಮಿ. ಆದರೆ ಈ ರಾಮಚಂದ್ರನೇ ಬೇರೆ; ಮುಂಬಯಿಯ ರಾಮನಾಥನೇ ಬೇರೆ. ಈ ಬದಲಾವಣೆಗೆ ಏನು ಕಾರಣ? ಅವನ ಬರವಣಿಗೆ ಎಲ್ಲಿ ಹೋಯಿತು? ಅವನಿಗೊಬ್ಬ ಅಣ್ಣನಿದ್ದುದು, ಮುಂಬಯಿಗೆ ಬಂದ ರಾಮನಾಥನಿಗೆ ಮರೆತೇ ಹೋಯಿತೆಂದು ಕಾಣುತ್ತದೆ. ಅಷ್ಟಲ್ಲದಿದ್ದರೆ ಯಾರಿಗೂ ಹೇಳದೆ, ತನ್ನ ಮಗ ಮೋಹನನ ಮುಂದಿನ ಜೀವನವನ್ನೂ ಎಣಿಸದೆ, ಕಳ್ಳತನದಿಂದ ಮದುವೆಯಾದ ಈ ವ್ಯಕ್ತಿಯನ್ನು, ಮೊದಲಿಗೆ ಕಂಡ ಸುಸಂಸ್ಕೃತ ಮಟ್ಟದಲ್ಲಿ ನಾವು ಎಂತು ನಿಲ್ಲಿಸಿಕೊಳ್ಳಲು ಸಾಧ್ಯ? ಆತ ಇಷ್ಟು ಹೇಡಿಯೆ?— ಎಂದು ಯೋಚಿಸುವಂತಾಗುತ್ತದೆ. ರಾಮನಾಥನೊಬ್ಬ ಎಡಹಿದ ಮುನ್ನಡೆಯುವ ಸಾಮಾನ್ಯ ಜೀವಿಯೆಂದು ನಾವು ಸಂಪೂರ್ಣ ಒಪ್ಪುತ್ತೇವೆ. ಇವನ ಅಣ್ಣನಾದ (ಸಾವಿನ ಉಡಿಯಲ್ಲಿ, ಮತ್ತೆ) ವೆಂಕಣ್ಣನೂ ಅಂಥವನೇ. ಅವನೂ ಕಾಮ, ಇತರ ಮನೋವಿಕೃತಿಗಳ ಸಹಜ ಸೆಳೆತಕ್ಕೆ ಸಿಕ್ಕವ. ಆದರೂ ಅವನು ನಮ್ಮ ಸಹಾನುಭೂತಿ ಗಳಿಸುತ್ತಾನೆ; ಈತನಲ್ಲ. ರಾಮನಾಥನೆಂದರೆ ಮಾತಿನಲ್ಲಿ ತುಂಬ ಆದರ್ಶವಾದಿ. ಅದರಂತೆ ನಡೆಯುವವನಲ್ಲ, ತಪ್ಪು ಹಾದಿಯನ್ನು ಹಿಡಿಯುವವ; ಹಿಡಿದ ಮೇಲೆ ನನ್ನದು ತಪ್ಪಾಯಿತೆಂದು ಗೋಗರೆಯುವಷ್ಟು ಮತ್ತೆ ಆದರ್ಶವಾದಿ! ಮರುಕ್ಷಣಕ್ಕೆಯೇ ಅದೇ ತಪ್ಪನ್ನು ಮಾಡುವಂಥ ತಳಬುಡವಿಲ್ಲದ ಮಹಾತ್ಮನೀತ. ಇದಕ್ಕೆ ಉದಾಹರಣೆ: ಶಿವಾಜಿ ಪಾರ್ಕಿನ ಬೆಂಚಿನಲ್ಲಿ ಛಬಿಯ ತೊಡೆಯಮೇಲೆ ತಲೆಯಿರಿಸಿ, ತಾನು ಅವಳನ್ನು ಪಾಪದೃಷ್ಟಿಯಿಂದ ನೋಡಿದವನಾಗಿ ಆತ ಹೇಳುತ್ತಾನೆ. ಅದರ ಮರುದಿನವೇ, ಅದೇ ಮೈತೋಳೆದು ಬಂದ ಅವಳ ಕೈಗಳನ್ನು hands up ಎಂದು ಹುಡುಗನ ಮಾತಿನಿಂದ ಮೇಲೆತ್ತಿಸಿ, ರಾಮನಾಥ ಅವಳನ್ನು ಪುನಃ ಪಾಪದೃಷ್ಟಿಯಿಂದ ನೋಡುವಂತಾಗಿದೆ. ಈ ದೃಶ್ಯದ ಉದ್ದೇಶವೇನು! ಇದರಲ್ಲಿ ಯಾವ ಪುರುಷಾರ್ಥವಿದೆ? ಅಂತೂ ಇಂಥ ಒಂದು Indicile ಹಾಗೂ ಮಾನಸಿಕ ಕಾಮುಕನಿರುವ ವ್ಯಕ್ತಿ, ಜೀವನದಲ್ಲಿ ಇಷ್ಟ ಮಾನವಾದವನಲ್ಲ, ಸಾಹಿತ್ಯದಲ್ಲಂತೂ ಬರುವಂತಹವನಲ್ಲವೆಂದೇ ನನ್ನ ಭಾವನೆ. ಒಟ್ಟಿನಲ್ಲಿ ಇದು ಲೇಖಕರ ಮೊದಲಿನ ಕಾದಂಬರಿಯಷ್ಟು ರಸಸ್ಯಂದಿಯಾಗಿಲ್ಲ. ಲೇಖಕರ ಬರೆಯುವ ಯೋಗ್ಯತೆಯ ಮಟ್ಟಕ್ಕಿಲ್ಲ.

—ದುಷ್ಯಂತಿ

ಸಾದರ ಸ್ವೀಕಾರ

卐

೭೮ **ಗರಿ**. (ಕವನಸಂಗ್ರಹದ ೩ ನೆಯ ಆವೃತ್ತಿ) ಬರೆದವರು ಶ್ರೀ. ' ಅಂಬಿಕಾತನಯ ದತ್ತ ' ರು. ಪ್ರಕಾಶಕರು ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ. ಕ್ರಾ. ಅ. ೧೩೨ ಪುಟಗಳು. ಬೆಲೆ ೨-೦-೦.

೭೯. **ಮಹಾಯುದ್ಧ** (ಖಂಡಕಾವ್ಯ). ಬರೆದವರು ಶ್ರೀ. ತ. ಎ. ಎನ್. ರಾವ್, ಬನಾರಸ. ಪ್ರಕಾಶಕರು, ಮನೋಹರ ಗ್ರಂಥಪ್ರಕಾಶನ ಸಮಿತಿ, ಧಾರವಾಡ. ಕ್ರಾ. ಅ. ೯೦ ಪುಟಗಳು. ಬೆಲೆ ೨-೦-೦.

೮೦. **ಇಂದ್ರಚಾಪ** (ಅನುವಾದಿತ ಕಾದಂಬರಿ). ಮೂಲ ರಷಿಯನ್ ಕಾದಂಬರಿಯ ಲೇಖಿಕೆ ವಾಂಡಾ ವಾಸಿಲಿವಸ್ಕಾ, ಅನುವಾದಕರು ಶ್ರೀಮಾನ್ ರಂಗರಾವ ತಲಚೇರಿಕರ್ ಬಿ. ಎ. ಎಲ್‌ಎಲ್. ಬಿ. ಬೆಳಗಾಂವಿ. ಧಾರವಾಡದ ಮನೋಹರ ಗ್ರಂಥ ಮಾಲೆಯ ೧೦೪ ನೆಯ ಕುಸುಮ. ಕ್ರಾ. ಅ. ೧೮೮ ಪುಟಗಳು. ಬೆಲೆ ೨-೮-೦.

೮೧. **ಬಾಳಹೋಳಿ** (ಎಂಟು ಕಥಾಚಿತ್ರಗಳು) ಬರೆದವರು ಶ್ರೀ. ಅಶ್ವತ್ಥ ಅವರು. ಧಾರವಾಡದ ಮ ಗ್ರಂ. ಮಾಲೆಯ ೧೦೫-೧೦೬ ನೆಯ ಕುಸುಮ ಕ್ರಾ. ಅ ೨೮೮ ಪುಟಗಳು. ಬೆಲೆ ೨-೮-೦.

೮೨. **ಭಾಗ್ಯಶ್ರೀ** (ಸಾಮಾಜಿಕ ನಾಟಕ). ಬರೆದವರು ಶ್ರೀ. ಬೇಂದ್ರೆ ಲಕ್ಷ್ಮಣರಾಯರು. ಮ. ಗ್ರಂ. ಮಾಲೆಯ ೧೦೭ ನೆಯ ಕುಸುಮ. ಕ್ರಾ. ಅ. ೭೮ ಪುಟಗಳು. ಬೆಲೆ ೧-೦-೦.

೮೩. **ಎರಡನೆಯ ಸಂಬಂಧ** (ಸಾಮಾಜಿಕ ಕಾದಂಬರಿ). ಬರೆದವರು ಶ್ರೀಮಾನ್ ' ಎನ್ಕೆ ' ಅವರು ಮ. ಗ್ರಂ. ಮಾಲೆಯ ೧೦೮ ನೆಯ ಕುಸುಮ. ಕ್ರಾ. ಅ. ೨೭೮ ಪುಟಗಳು. ಬೆಲೆ ೩-೦-೦

೮೪. **ನಗುಕಂದ** (ಚಿಕ್ಕಮಕ್ಕಳ ಪದ್ಯಸಂಕಲನ) ಬರೆದವರು. ಶ್ರೀ. ಟಿ. ಉದಯಶಂಕರ, ಶ್ರೀ. ಸುಬ್ಬರಾಯ ಅವರು. ಪ್ರಕಾಶಕರು ಗೆಳೆಯರ ಕೂಟ, ಬೆಂಗಳೂರು ೪. ಫೂ. ಕ್ಯಾ. ೧೬ ಪುಟಗಳು. ಬೆಲೆ ೦-೨-೦

ಇದನ್ನು ಬರೆದವರಿಬ್ಬರೂ ಚಿಕ್ಕಮಕ್ಕಳೇ ಆಗಿದ್ದರೆ, ಇದರಲ್ಲಿಯ ಕವಿತೆಗಳು ಚಿಕ್ಕಮಕ್ಕಳ ಪ್ರಯತ್ನಗಳೆಂದು ಸಮಾಧಾನ ಪಡಬಹುದಾಗಿದೆ; ಪ್ರೌಢರೇ ಆಗಿದ್ದರೆ, ಚಿಕ್ಕಮಕ್ಕಳಿಗಾಗಿ ಬರೆವ ಕವಿತೆಗಳ ರೀತಿಯಿದಲ್ಲವೆಂದು ವಿನಯದಿಂದ ಸೂಚಿಸಬಹುದಾಗಿದೆ. ಚಿಕ್ಕಮಕ್ಕಳಿಗಾಗಿ ಬರೆವ ಪದ್ಯಗಳು ಹೇಗಿರಬೇಕೆಂಬುದಕ್ಕೆ ದಿವಂಗತ ಪಂಜೆ ಮಂಗೇಶರಾವ್, ಶ್ರೀ. ಜಿ. ಪಿ ರಾಜರತ್ನಂ, ಶ್ರೀ. ದಿನಕರ ದೇಸಾಯಿ ಮೊದಲಾದವರ ಕವನಗಳು ಮಾದರಿಯಾಗಿವೆ.

೮೫. **ವಿಕಾಸ** (ಮಾಸಪತ್ರಿಕೆಯ ಸ್ವಾತಂತ್ರ್ಯ ಸಂಚಿಕೆ) ಸಂಪಾದಕರು ಮತ್ತು ಪ್ರಕಾಶಕರು ಶ್ರೀಮಾನ್ ಎಸ್. ಕೆ. ದೇಶಪಾಂಡೇ, ವಿಕಾಸ ಪ್ರಕಾಶನ, ಬಾಗಲಕೋಟೆ. ಡೆ ಅ. ೫೦ ಪುಟಗಳು. ಬೆಲೆ ೦-೮-೦



BOMBAY OFFICE : Princess Street

ಏಜಂಟರು ಬೇಕು

ಜಯಂತಿಯನ್ನು ಮಾರಾಟ ಮಾಡಲಿಕ್ಕೆ ಕರ್ನಾಟಕದ ಬೇರೆ ಬೇರೆ ನಗರಗಳಲ್ಲಿ, ಪ್ರಾಮಾಣಿಕ ಏಜಂಟರು ಬೇಕು. ಯೋಗ್ಯ ಕಮಿಶನ್ ಕೊಡಲಾಗುವುದು. ಕರಾರುಗಳಿಗಾಗಿ ಪತ್ರವ್ಯವಹಾರ ಮಾಡಿ ತಿಳಿದುಕೊಳ್ಳಬೇಕು. ಮನೆ ಮನೆಗೂ ಇರಬೇಕಾದ ಈ ಪತ್ರಿಕೆಯನ್ನು ಮನೆಮನೆಗೂ ತಲ್ಪಿಸುವ ಅಗತ್ಯವಿದೆ.

ವ್ಯ. ಜ.

ಕುಟಜಾರಿಷ್ಟ

ಆಮಾಂಶ-ಸಂಗ್ರಹಣಿಗಳಿಗೆ.

●

ಕಾಸಶ್ವಾಸಾರಿ

ದಮ್ಮು-ಕೆಮ್ಮುಗಳಿಗೆ.

ಎಲ್ಲ ಜಗೆಯ ಆಯುರ್ವೇದ ಔಷಧಗಳಿಗಾಗಿ
ಬರೆಯಿರಿ :

卐

ದಿ ನೂತನ
ಆಯುರ್ವೇದ ಕಾರ್ಯಾಲಯ ಲಿ.
ವಿಜಾಪುರ.

ಮೊದಲು ಹುಬ್ಬಳ್ಳಿಯಲ್ಲಿ ಹೊರಡುತ್ತಲಿದ್ದ ಈ ಮಾಸಪತ್ರಿಕೆ, ಈಗ ಬಾಗಲಕೋಟೆಯಲ್ಲಿ ಹೊರಡುತ್ತಲಿದೆ. ಚಲನ ಚಿತ್ರ, ವ್ಯಾಪಾರ, ಸಾಹಿತ್ಯ ವಿಷಯಗಳ ಲೇಖನಗಳಿಂದ ಕೂಡಿರುವುದು. ಪತ್ರಿಕೆಯ ಮೇಲಿನ ಸಿನೀಮಾ ನಟಿಯ ಮೂರು ವರ್ಣದ ಚಿತ್ರವು, ಆಕರ್ಷಕವಾಗಿದೆ.

೮೬. **ಮಧುರವಾಣಿ** ('ಸಂಸ್ಕೃತಮಾಸಪತ್ರಿಕೆ). ಪ್ರಧಾನ ಸಂಪಾದಕರು ಪಂಡಿತ ಗಲಗಲೀ ರಾಮಾಚಾರ್ಯರು 'ಸಂಸ್ಕೃತ ಸಾಹಿತ್ಯರತ್ನ'. ಸಂಪಾದಕರು ಪಂಡಿತ ಗಲಗಲೀ ಪಂಢರೀನಾಥಾಚಾರ್ಯರು. ಹದಿನಾರನೆಯ ವರ್ಷದ ೧-೨-೩ ಸಂಚಿಕೆಗಳ ಸಂಯುಕ್ತಾಂಕ. ಡೆ. ಅ. ೬೦ ಪುಟಗಳಿಂದ ಕೂಡಿದೆ. ವಾ. ಚಂ. ೫ ರೂಪಾಯಿ.

ಇದುವರೆಗೂ ಬೆಳಗಾಂವಿಯಲ್ಲಿ ಪ್ರಕಟವಾಗುತ್ತಲಿದ್ದ ಈ ಪತ್ರಿಕೆ ಈದೇ ಸಂಯುಕ್ತ ಸಂಚಿಕೆಯಿಂದಲೇ ಬಾಗಲಕೋಟೆಯನ್ನು ತನ್ನ ಪ್ರಕಾಶನ ಕ್ಷೇತ್ರವನ್ನಾಗಿ ಮಾಡಿಕೊಂಡಿದೆ. ಲೇಖಕವರ್ಗವೆಲ್ಲ ಸಂಸ್ಕೃತವಿದ್ವಾಂಸರಿಂದ ತುಂಬಿದೆ. ಪ್ರತಿಯೊಬ್ಬ ಭಾರತೀಯನೂ ಸಂಸ್ಕೃತ ಭಾಷೆಯನ್ನರಿಯದೆ ತನ್ನ ಸಂಸ್ಕೃತಿಯ ವಿಕಾಸವನ್ನು ಮಾಡಿಕೊಳ್ಳಲಾರ. ಇಂತಹ ಪತ್ರಿಕೆಗಳನ್ನು ತರಿಸಿ ಓದುತ್ತ ಹೋಗುವುದರಿಂದ, ಸಂಸ್ಕೃತಭಾಷೆಯ ತಜ್ಞತೆಯಿಲ್ಲದೆ ಹೋದರೂ ಪರಿಚಯವಾದರೂ ಆಗುತ್ತದೆ. ಮಾಧ್ಯಮಿಕ ಶಾಲೆ, ಕಾಲೇಜುಗಳ ವಿದ್ಯಾರ್ಥಿಗಳಂತೂ ಈ ಪತ್ರಿಕೆಯ ವಾಚನದಿಂದ ತುಂಬ ಪ್ರಯೋಜನಪಡೆಯಬಹುದು. ಕಷ್ಟ-ನಷ್ಟಗಳನ್ನು ಸಹಿಸುತ್ತ ಕೇವಲ ಸಂಸ್ಕೃತಿಯ ಅಭಿಮಾನದಿಂದ—ಹದಿನಾರು ವರ್ಷಗಳವರೆಗೂ— ಈ ಪತ್ರಿಕೆಯನ್ನು ನಡೆಯಿಸಿಕೊಂಡು ಬಂದ ಸಂಪಾದಕರ ಕಾರ್ಯ ಅಭಿನಂದನೀಯವಾದದ್ದು.

೮೭. **ಜೋಕಾಲಿಯ ಮೇಲೆ** (ಅನುವಾದಿತ ಕಾದಂಬರಿ) ಮೂಲ ಮರಾಠೀ ಕಾದಂಬರಿಯ ಲೇಖಿಕೆ: ಶ್ರೀಮತಿ ಮಾಲತೀಬಾಯಿ ಬೇಡೇಕರ. ಕನ್ನಡ ಅನುವಾದಕರು ಶ್ರೀಮಾನ್ ಡಿ. ಎಸ್. ಕುಲಕರ್ಣಿ, ಸಾಂಗಲಿ. ಮೈಸೂರಿನ ಉಷಾಸಾಹಿತ್ಯಮಾಲೆಯ ೩೦ ನೆಯ ಪುಸ್ತಕ. ಕ್ರಾ. ಅ. ೧೮೧ ಪುಟಗಳು. ಬೆಲೆ ೨-೮-೦.

೮೮. **ಉಡುಪಿಯ ಕಲಾವೃಂದ** (೭ ನೆಯ ವರ್ಷದ ವರದಿ). ಕಾರ್ಯದರ್ಶಿಗಳು ಶ್ರೀ. ಕೆ. ಹರಿದಾಸ ಉಪಾಧ್ಯಾಯರು, ಚಂದ್ರೇಶ್ವರ ದೇವಾಲಯದ ಮುಖಡಿ. ಉಡುಪಿ. ಡೆ. ಅ. ೧೨ ಪುಟಗಳು.

ಕನ್ನಡ ಸಾಹಿತ್ಯ-ಸಂಸ್ಕೃತಿಯ ಅಭ್ಯಾಸ-ಅಭಿವೃದ್ಧಿಗಳಿಗಾಗಿ ಈ ಸಂಸ್ಥೆ ಉತ್ಸಾಹದಿಂದ ಕಾರ್ಯ ಮಾಡುತ್ತಿರುವುದು ಅಭಿನಂದನೀಯ ವಿಷಯ.

೮೯. **ಕಾವ್ಯವೇದನೆ** (ಕವನ ಸಂಕಲನ). ಲೇಖಕರು ಶ್ರೀ. ವಿ. ಜಿ. ಭಟ್ಟರು. ಪ್ರಕಾಶಕರು ಶ್ರೀ. ಡಿ. ವಿ. ಚಿತ್ತಾಳ ಬಿ. ಎ., ಎಲ್ ಎಲ್. ಬಿ. ಪರ್ಣಕುಟಿ ಗ್ರಂಥಮಾಲಾ, ಧಾರವಾಡ. ಕ್ರಾ. ೩. ೮೪ ಪುಟಗಳು. ಬೆಲೆ ೧-೮-೦

೯೦. **ಆ ಸುಂದರಿಯ ಗಂಡ** (ಕಥಾಸಂಕಲನ) ಬೇರೆ ಬೇರೆ ಮೂವರು ಮಲೆಯಾಳೀ ಕತೆಗಾರರ ಕತೆಗಳ ಭಾಷಾಂತರ. ಭಾಷಾಂತರಕಾರರು ಶ್ರೀಮಾನ್ ಎನ್. ಟಿ ಕಾಮತರು. ಹುಬ್ಬಳ್ಳಿಯ ಸರ್ವೋದಯ ಸಾಹಿತ್ಯಮಾಲೆಯ ೧೨ ನೆಯ ಪ್ರಕಟನೆ. ಕ್ರಾ. ಅ. ೬೪ ಪುಟಗಳು. ಬೆಲೆ ೦ ೧೨-೦

೯೧. **ಹುಚ್ಚರ ಮನೆ** (ಅನುವಾದಿತ ಕಥಾಸಂಗ್ರಹ) ಸಂಗ್ರಹಕಾರರು ಶ್ರೀಮಾನ್ ಎಂ. ಹರಿದಾಸರಾವ್. ಮೇಲಿನ ಸರ್ವೋದಯ ಸಾಹಿತ್ಯಮಾಲೆಯ ೧೩ ನೆಯ ಪ್ರಕಟನೆ. ಕ್ರಾ. ಅ. ೧೧೨ ಪುಟಗಳು. ಬೆಲೆ ೧-೮-೦

೯೨. **ಶ್ರೀ. ಕೃಷ್ಣಲೀಲಾಮೃತಂ** (ಗೀತಸಂಕಲನ). ಲೇಖಕರು ಶ್ರೀಮಾನ್ ಪಾಂಡೇಶ್ವರ ಗಣಪತಿರಾಯರು. ಪ್ರಕಾಶಕರು ಶ್ರೀ. ಎಸ್. ಆರ್. ಪಾಂಡೇಶ್ವರ, ದೇಶಪಾಂಡೇ ನಗರ, ಹುಬ್ಬಳ್ಳಿ ಡೆ ೧೬ ದ ೧೬ ಪುಟಗಳು. ಬೆಲೆ ೦-೬-೦

೯೩. **ಪ್ರಾಣಾಂಜಲಿ** (ದಿ. ಮಹಾದೇವ ಮೈಲಾರ ಅವರ ಚರಿತ್ರೆ). ಲೇಖಕರು ಶ್ರೀಮಾನ್ ವಿ. ಚ. ಹಿತ್ತಲಮನಿ ಬಿ. ಎಸ್‌ಸಿ (ಅಗ್ರಿ) ಆನರ್ಸ. ಶಿರಸಿಯ ಶರಾವತೀ ಪ್ರಕಟನಾ ಮಂದಿರದ ೪ನೆಯ ಕುಸುಮ. ಕ್ರಾ. ಅ. ೯೨ಪುಟಗಳು. ಬೆಲೆ ೧-೮-೦.

ಶರತ್ ಪ್ರಕಾಶನ ಮಂದಿರ, ಧಾರವಾಡ

ಮೊದಲನೆಯ ಸಾಹಿತ್ಯಸುಮನ ಅರಳಿ ಬೆಳಕಿಗೆ ಬಂದಿದೆ!

ಬೆಳವಡಿ ಮಲ್ಲಮ್ಮ

(ಆರು ತರಂಗ ರೂಪಕಗಳು)

ಲೇಖಕರು: **ಶ್ರೀಮಾನ್ ಬೆಟಗೇರಿ ಕೃಷ್ಣಶರ್ಮರು**

ಈ ಆರೂ ತರಂಗರೂಪಕಗಳೆಂದರೆ, ಆರುಬಗೆಯ ರಸಭಾವದ ಸುರತರಂಗಿಣಿಗಳು! ಲೇಖಕರ ಕನ್ನಡ ಇತಿಹಾಸ-ಸಂಸ್ಕೃತಿಗಳ ಜ್ಞಾನವೇ ಇಲ್ಲಿ ಕೃತಿಕುಸುಮಗಳಾಗಿ ಅರಳಿ ನಿಂತಿವೆ! ಕನ್ನಡಿಗರ ನ್ಯೆಮನಗಳನ್ನು ಜುಮ್ಮುದಟ್ಟಿಸುವ ಹಾಸ ಸನ್ನಿವೇಶಗಳ ಸಂದರ್ಶನ!

ಕನ್ನಡ ರಾಣಿ ಬೆಳವಡಿ ಮಲ್ಲಮ್ಮನ ವೀರ ವ್ಯಕ್ತಿತ್ವವನ್ನು ಕಂಡುಕೊಳ್ಳಬೇಕೆ?
ವಿಜಯನಗರದ ನವರಾತ್ರಿ ಸಮಾರಂಭದ ಸಾಮ್ರಾಜ್ಯ ವೈಭವ ನೋಡಬೇಕೆ?
ಪೌರಾಣಿಕ ವ್ಯಕ್ತಿ ಬಲಿಚಕ್ರವರ್ತಿಯ ಜೀವನರಹಸ್ಯವನ್ನು ಅರಿತುಕೊಳ್ಳಬೇಕೆ?
ಅಮೃತಾತ್ಮನಾದ ಕಾಲರಾಯನ ವಾಸ್ತವವೇದಾಂತದ ಪರಿಚಯ ಮಾಡಿಕೊಳ್ಳಬೇಕೆ?
ನಾಗರಪಂಚಮಿಯ ತಂಬಿಟ್ಟಿನ ರುಚಿಕಟ್ಟನ್ನು ಅನುಭವಿಸಬೇಕೆ?
ಮಕ್ಕಳ ಮನದಾಶೆಯ ಕನಸಿನ ನಗೆಯಾಟಗಳಲ್ಲಿ ವಿಹರಿಸಬೇಕೆ?

ಹಾಗಾದರೆ ಈ ರೂಪಕಸಂಕಲನವನ್ನು ಓದಿರಿ!

ನಿಮ್ಮ ಎಲ್ಲ ಬಯಕೆಗಳೂ ಸಿದ್ಧಿಸುವುವಲ್ಲದೆ, ಮನಸ್ಸೂ ರಂಜನೆಗೊಳ್ಳುವುದು.

ಕ್ರಾ. ಅ. ೧೧೬ ಪುಟಗಳ ಪುಸ್ತಕ; ಬೆಲೆ ೧—೮—೦

ಶರತ್ ಪ್ರಕಾಶನಮಂದಿರದಿಂದ ಬೇಗನೆ ಪ್ರಕಟವಾಗಲಿರುವ ಬೇರೆ ಗ್ರಂಥಗಳು:

ಕಾರಹುಣ್ಣಿವೆ (ಆನಂದಕಂದರ ಕವನಸಂಕಲನ), **ಸಾಮಾಜಿಕ ಕಾದಂಬರಿಯೊಂದು.**

ಎರಡು ರೂಪಾಯಿ ಪ್ರವೇಶ ಧನ ಸಲ್ಲಿಸಿ ನಮ್ಮ ಪ್ರಕಾಶನ ಮಂದಿರದ ಗ್ರಾಹಕ ಸದಸ್ಯರಾದವರಿಗೆ, ನಮ್ಮಲ್ಲಿ ಪ್ರಕಟವಾಗುವ ಗ್ರಂಥಗಳೆಲ್ಲ ಕೈ ಬೆಲೆಗೆ ಸಿಕ್ಕುವುವು.

ಎಸ್. ಡಿ. ಧರಮಟ್ಟಿ (ಇನಾಮದಾರ್), ಸಂಚಾಲಕ, ಶ. ಪ್ರ. ಮಂದಿರ.



Printed by V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar—3474-51.

ಜಯಂತಿ

ದೀಪಾವಳಿ ಸಂಚಿಕೆ

ನವಂಬರ್ ೧೯೫೧

ತಂದಿದೆ ಚೆಲುವನು ದೀವಳಿಗೆ—ಇದೋ, ತಂದಿದೆ ಚೆಲುವನು ದೀವಳಿಗೆ!
ಚೆಂದದ ಹಸುಗೆಯ ಮನೆ-ಮನೆಗೆ!

ಎಂಟು ಆಣೆ

ಸಂಪುಟ ೧೪ | ೧ನೆಯ ನವ್ಹಂಬರ್ ೧೯೫೧ | ಸಂಚಿಕೆ ೬

ಈ ಸಂಚಿಕೆಯಲ್ಲಿ:

ದೀವಳಿಗೆಯ ದರ್ಶನ (ಕವನ)
‘ ಆನಂದಕಂದ ’ ೨೦೫
ತಮಸೋ ಮಾ ಜ್ಯೋತಿರ್ಗಮಯ (ಸಂಪಾದಕೀಯ)
ಸಂಪಾದಕರು ೨೦೬
ನಾಡನುಡಿ (ಪ್ರಾಸಂಗಿಕ ಟಿಪ್ಪಣಿಗಳು)
ಕಾಲಭೈರವ ೨೦೭
ಸೀಮೋಲ್ಲಂಘನ (ತರಂಗ ರೂಪಕ) ೨೦೮
ಶ್ರೀ ಬೆಟಗೇರಿ ಕೃಷ್ಣಶರ್ಮ, ಧಾರವಾಡ ೨೦೯
ವಾಙ್ಮಿಕ ನಾಣ್ಯಗಳು (ಪ್ರಬಂಧ)
ಶ್ರೀ. ಎಚ್. ಎಸ್. ಪಾಟೀಲ ಎಂ. ಎ. ಬಿ. ಕಾಮ್. ೨೧೧
ಇಗೋ ಮೂಡಿಬಂದಿತಿಲ್ಲಿ (ಕವನ)
‘ ಅಂಬಿಕಾತನಯದತ್ತ ’ ೨೨೨
ಭಾವಪ್ರಪಾತ (ಕವನ)
‘ ಪಶುಪತಿ ’ ೨೨೨
ಪುಷ್ಪಾ (ಸಣ್ಣಕತೆ)
ಕು. ಶಾಂತಾ ವೆಂಟೇಕರ್, ಶದಡಿ ೨೨೩
ಒದೇ ದಿವಳಿಗೆಗೆ ಹಾದಿ !
ಶ್ರೀಮನ್ನಿರಂಜನ ಬಂಥನಾಳ ಶಿವಯೋಗಿಗಳು ... ೨೩೨
ನಿನ್ನುಡಿಯ ಸಾಕು (ಕವನ)
ಶ್ರೀ. ಸಿದ್ದಣ್ಣಾ ಮಸಳಿ. ಬಿ. ಎ. (ಆನರ್ಸ್.) ೨೩೯
ಪ್ರಕೃತಿ ಪುರುಷ (ಕವನ)
ಶ್ರೀಮತಿ ಜಯದೇವಿಬಾಯಿ ಲಿಗಾಡೆ, ಸೋಲ್ಲಾಪುರ ೨೩೯
ಅಮರಾಂಗನೆ (ಕವನ)
ಶ್ರೀ. ವಸಂತ ಕವಲಿ ಬಿ.ಎ. (ಆನರ್ಸ್) ಧಾರವಾಡ ೨೩೯
ನಾಟಕ-ಸಂಸಾರ (ಸಾಹಿತ್ಯಪ್ರಬಂಧ)
ಶ್ರೀ. ಹೊಸಬೆಟ್ಟು, ವೆಂಕಟರಾವ್ ೨೪೦
ಉತ್ತರ ಹಿಂದುಸ್ತಾನದ ಭಾರತೀಯ ಸಂಗೀತ (ಪ್ರಬಂಧ)
ಶ್ರೀ. ಎಸ್. ಆರ್ ತಟ್ಟಿ ಬಿ. ಎ., ನವಲಗುಂದ ೨೪೫
ಕಾಶ್ಮಿರ ಶಾಲು (ಒಂದುಕಥೆ)
ಶ್ರೀ. ಸಿ. ಎಸ್. ಕುಲಕರ್ಣಿ ಬಿ. ಎ., ಬಿ. ಟಿ. ಧಾರವಾಡ ೨೪೯
ಬರಲಿರುವ ಬಾಳು (ಕವನ)
ಶ್ರೀ. ಸಿ. ಎಂ. ದೇವೇಂದ್ರನಾಯಕ, ಧಾರವಾಡ ೨೫೬
ಬಾಳದೀಪಾವಳಿ (ಕವನ)
ಶ್ರೀ. ಎ. ಎಸ್. ರಾಮಕೃಷ್ಣ, ಮಣಿಪಾಳ-ಉಡುಪಿ ೨೫೬
ಆಕಾಲವಾಣಿಕೆಯು ಆಗು ಹೋಗು
‘ ಕೇಳುಗರ ಕೈವಾರಿ ’ ೨೫೭
ಸ್ವೀಕಾರ ೨೬೦

ವಿಜಯ ರೆಸ್ಟೋರೆಂಟ್ !

(ವಿಜಯ ಟಾಕೀಜ್ ಬಳಿಯಲ್ಲಿ)

卐

ಚಲಚ್ಚಿತ್ರಗಳು ಕಣ್ಣು-ಹೃದಯಗಳನ್ನು ತಣಿಸಿದರೆ ಮೈ-ಮನಸ್ಸುಗಳಿಗೆ ಹುರುಪು ಕೊಡುವುವು, ನಮ್ಮ

ರುಚಿಯಾದ ತಿಂಡಿ-ತಿನಿಸುಗಳು !

ಸಂಪೂರ್ಣ ಸಕ್ಕರೆಹಾಕಿ ತಯಾರಿಸಿದ

ಚಹಾ, ಕಾಫೀ ಮತ್ತು ಬೇರೆ ಪೇಯಗಳು !

ದೀಪಾವಳಿಯ ಹಬ್ಬದ ಸವಿಯನ್ನು ಸಂಪೂರ್ಣವಾಗಿ ಭೋಗಿಸಬೇಕಿದ್ದರೆ ಇನ್ನೆಲ್ಲಿಯೂ ಹೋಗಬೇಕಿಲ್ಲ ಇಲ್ಲಿಗೇ ದಯೆಮಾಡಿಸಿರಿ !

ಗ್ರಾಹಕರ ಸಂತೋಷವೇ ನಮ್ಮ ಗುರಿಯು !

ಲಲಿತ ಪ್ರಬಂಧಗಳ ಕೊರತೆ ಕನ್ನಡಕ್ಕಿದೆಯೇ

ಹಾಗಾದರೆ

‘ ಗಾಳಿಗುದುರಿ ’ ಇದೀಗ ಪ್ರಕಟವಾಗಿದೆ.

ಶ್ರೀಮಾನ್ ಗೋಕಾಕರ ಮುನ್ನುಡಿಯೂ ಇದೆ.

ಲೇ :— ಶ್ರೀ. ಬಿ. ಆರ್. ವಾಡಪ್ಪಿ.

ಬೆಲೆ :— ೧—೪—೦.

ಮಾರಾಟಗಾರರು

ಮನೋಹರ ಗ್ರಂಥಭಾಂಡಾರ, ಧಾರವಾಡ.

ಸಂಪಾದಕರು : ಬೆಟಗೇರಿ ಕೃಷ್ಣಶರ್ಮ



ಸಂಪುಟ ೧೪ ಸಂಚಿಕೆ ೬

ದೀವಳಿಗೆಯ ದರ್ಶನ

'ಆನಂದ ಕಂದ'

ಕುಣಿಯುತ ಬಂದಿದೆ ದೀವಳಿಗೆ—ಝಣ-
ಝಣರಿಸೆ ನೂಪುರ ಅಡಿಗಡಿಗೆ !
ತಣಿವನು ಹಂಚಲು ಎಡೆಯೆಡೆಗೆ—ಕುಣಿ-
ಕುಣಿಯುತ ಬಂದಿದೆ ದೀವಳಿಗೆ ! || ಪಲ್ಲವಿ ||

ಮುಸುಕಿದ ಮೋಡವು ಮುಸುಳಿತಿದೇನು ?
ಹಸನು ಹಸನು ಬೆಳಗಾಲದ ಬಾನು !
ನಸುನಗುತಿಹ ಬಿಸುಪಿಲ್ಲದ ಭಾನು,
ರಸಮಯವಾಗಿದೆ ಬದುಕಿನ ಜೇನು !
ತಂದಿದೆ ಚೆಲುವನು ದೀವಳಿಗೆ—ಇದೊ
ತಂದಿದೆ ಚೆಲುವನು ದೀವಳಿಗೆ....
ಚೆಂದದ ಹಸುಗೆಯ ಮನೆ-ಮನೆಗೆ ! ೧

ತಿಳಿಸಿನ ಬೀಜದ ಎಳವೊಳಕೆಗಳೋ,
ಬೆಳಕಿನ ಬಳ್ಳಿಯ ನವಕಳಿಕೆಗಳೋ,
ತೊಳಗುವುವಿವು ದೀವಿಗೆಗಳ ಸಾಲೋ !
ಅಳಿಗತ್ತಲೆಗಿರುಳಲ್ಲಿಯು ಸೋಲೋ ?
ತಂದಿದೆ ಪ್ರಭೆಯನು ದೀವಳಿಗೆ—ಕರೆ-
ತಂದಿದೆ ಪ್ರಭೆಯನು ದೀವಳಿಗೆ ....
ಚೆಂದದ ಹಂದರ ಜನಗಳಿಗೆ ! ೨

ತಳೆದಿದೆ ಪರಿಪರಿ ಪರಿಜವನೊಲವು,
ಬೆಳಗಿ ಶುಭಾರುತಿ ಬೆಳಸಿದೆ ನಲಿವು !
ಕಲಕಿದ ಎದೆ-ಮನಗಳ ಕಹಿನೋವು—
ತೊಲಗಿ, ಮೊಳಗುತಿದೆ ಒಸಗೆಯ ಸೋವು !
ತಂದಿದೆ ಒಲವನು ದೀವಳಿಗೆ— ಇದೊ
ತಂದಿದೆ ಒಲವನು ದೀವಳಿಗೆ....
ಕುಂದದ ಸಂತಸ ಮನೆ-ಮನೆಗೆ ! ೩

ಶರದದ ಸಿರಿದೇವಿಯು ಹೊಸ ಮೇಳ
ಸರಿಗಮದೊಂದಿಗೆ ಹಾಕುತ ತಾಳ,
ಸ್ವರವೇರಿಸಿ ಮಂಗಳ ಗೀತಗಳ—
ಒರೆದು ಹುರುಳ ತುಂಬಿರುವುದು ಬಾಳ !
ಬಂದಿದೆ ತಂದಿದೆ ದೀವಳಿಗೆ— ಇದೊ
ಬಂದಿದೆ ತಂದಿದೆ ದೀವಳಿಗೆ....
ನಂದನನಂದವ ಮನೆ-ಮನೆಗೆ ! ೪

ವಧುಗಳು ಮರೆತರು ವಿರಹದ ಕಾಟ,
ಹೃದ-ಹೃದಯದಿ ಪ್ರಣಯದ ಚೆಲ್ಲಾಟ !
ಸದನ-ಸದನದಲಿ ಸವಿಸುಖದೂಟ—
ಇದುವೇ ದೀವಳಿಗೆಯ ಮರೆಮಾಟ !
ಕುಣಿಯುತ ಬಂದಿದೆ ದೀವಳಿಗೆ—ಕುಣಿ-
ಕುಣಿಯುತ ಬಂದಿದೆ ದೀವಳಿಗೆ....
ತಣಿವನು ನೀಡಿದೆ ಜನಗಳಿಗೆ ! ೫

ತಮಸೋ ಮಾ, ಜ್ಯೋತಿರ್ಗಮಯ !

ಮಾನವಸಂತಾನವನ್ನು ನಿರಂತರವೂ ಎಚ್ಚರುಗೊಳಿಸುತ್ತ ಬಂದಿದೆ, ಈ ಅಪೌರುಷೇಯ ವೇದವಾಣಿ! 'ಕತ್ತಲೆಯತ್ತ ಬೇಡ, ಬೆಳಕಿನತ್ತ ನಡೆ!' ಎಂಬ ಮಾತು ಸರ್ವಸಾಮಾನ್ಯವಾಗಿ ಕಂಡರೂ, ಇದರ ಅರ್ಥದ ಆಳವನ್ನು ಅನುಭವದಿಂದ ಕಂಡುಹಿಡಿಯುತ್ತ ಹೋದರೆ, ಮಾನವಜೀವನದ ಆದರ್ಶಸಾರವನ್ನೇ ಸೂಚಿಸುವಂತಹ ನುಡಿ ಇದಾಗಿದೆಯೆಂಬುದನ್ನು ನಿಃಸಂದಿಗ್ಧವಾಗಿ ಕಂಡುಕೊಳ್ಳಲುಬಹುದು.

ಕತ್ತಲೆ ಅಜ್ಞಾನದ ಪರ್ಯಾಯಪದ; ಬೆಳಕು ಜ್ಞಾನದ ಪರ್ಯಾಯಪದ. ಅದರಂತೆಯೆ ಕತ್ತಲೆಯೆಂಬುದು ಅಸತ್ಯ-ಸೂಚಕಶಬ್ದವಾಗಿದ್ದರೆ, ಬೆಳಕೆಂಬುದು ಸತ್ಯಸೂಚಕಶಬ್ದವಾಗಿದೆ. ವ್ಯಷ್ಟಿ-ಸಮಷ್ಟಿಗಳ ಜೀವನದ ಸತ್ಯಜ್ಞಾನ ಮಾಡಿಕೊಳ್ಳುವುದೇ ಮಾನವ ಜೀವನದ ಗುರಿಯಾಗಿದೆ. ಆದುದರಿಂದಲೆ ಭಾರತೀಯ ಜೀವನದಲ್ಲಿ ಸತ್ಯ-ಜ್ಞಾನಗಳ ಪ್ರತೀಕವೆನಿಸುವ ಅಗ್ನಿ, ಸೂರ್ಯ, ಸೋಮ— ಮೊದಲಾದ ಪ್ರಭಾಮಯ ಶಕ್ತಿಗಳ ಪೂಜೆ ಪುರಸ್ಕಾರಗಳಿಗೆ ಮಹತ್ತ್ವದ ಸ್ಥಾನವನ್ನು ಕೊಡಲಾಗಿದೆ. ಭಾರತೀಯರ ಮುಖ್ಯ ಉಪಾಸ್ಯದೈವತ ಸವಿತೃಮಂಡಲ ಮಧ್ಯವರ್ತಿಯಾದ ತೇಜೋಮೂರ್ತಿ; ಅಷ್ಟೇ ಮಹತ್ತ್ವದ ಇನ್ನೊಂದು ದೈವತವೆಂದರೆ ಜ್ಯೋತಿಪ್ರದಾಯಕನಾದ ಅಗ್ನಿಶಕ್ತಿ.

ಬೆಳಕು ಕತ್ತಲೆಯನ್ನು ಕಳೆಯಬಲ್ಲದು; ಬೆಂಕಿ ನಶ್ವರವಾದುದನ್ನು ಸುಟ್ಟು ಶಾಶ್ವತವಾವುದೆಂಬುದನ್ನು ಸಿದ್ಧಮಾಡಿ ತೋರಿಸಬಲ್ಲುದು. ಆದುದರಿಂದಲೇ ಮಾನವನು ಯಾವಾಗಲೂ ಬೆಳಕಿನ ಉಪಾಸಕನಾಗಬೇಕು. ದೀಪಳಿಗೆಯ ಹಬ್ಬದಲ್ಲಿ ನಾವು ಮಾಡಬೇಕಾದುದು ಇಂತಹ ಒಳಬೆಳಕಿನ ಉಪಾಸನೆ. ಅಶಾಶ್ವತವಾದ ಹೊರಬೆಳಕುಗಳು ನಮ್ಮ ದಾರಿಯಲ್ಲಿ ಕಂಡು, ಅದೇ ಶಾಶ್ವತಬೆಳಕೆಂಬ ಭ್ರಮೆಯನ್ನು ಹುಟ್ಟಿಸುವುವು; ಅಲ್ಲದೆ ವ್ಯಕ್ತಿವ್ಯಕ್ತಿಗಳೂ ತಾವು ಕಂಡ ಅಶಾಶ್ವತಬೆಳಕುಗಳೇ ಶಾಶ್ವತಬೆಳಕುಗಳೆಂದು ತಿಳಿದು, ತಾನು ಕಂಡುದು ಸತ್ಯಸ್ವರೂಪ, ಇನ್ನೊಬ್ಬರೂ ಕಂಡುದು ಅಸತ್ಯರೂಪ ಎಂಬ ವಾದವನ್ನು ಎಬ್ಬಿಸುವರು. ಇಂತಹ ವಾದಗಳು ಲೋಕದಲ್ಲಿ ಹೆಚ್ಚಿದಾಗಲೆಲ್ಲ ಲೋಕದ ಶಾಂತಿ-ಸುಖಗಳು ಮರೆಯಾಗುವುವು. ಮಾನವಸಂತಾನದ ಬಾಳು ಕಂಗೆಟ್ಟ ಜೀವನವಾಗುವುದು. ಸದ್ಯದ ಪ್ರಪಂಚದ ಬಾಳೆಲ್ಲವೂ ಇಂತಹ ಕಂಗೆಟ್ಟ ಬಾಳೇ ಆಗಿದೆ. ಆದರೂ ಭಾರತೀಯರಾದ ನಾವು ಸಾಂಪ್ರದಾಯಿಕ ಅಂಧಶ್ರದ್ಧೆಯಿಂದ ದೀಪಾವಳಿಯ ಹಬ್ಬವನ್ನು ಪ್ರತಿ ವರುಷವೂ ಆಚರಿಸಿಯೇ ಆಚರಿಸುತ್ತಿದ್ದೇವೆ.

ನಮ್ಮ ನಾಡಿನಲ್ಲಿಯೆ ನೋಡೋಣ : ದೀಪಾವಳಿಯ ಹಬ್ಬವನ್ನು ಆಚರಿಸುವಂತಹ ಯೋಗಯುಕ್ತ ಮನಸ್ಥಿತಿ ನಮ್ಮ ನಾಡಿನ ಜನರಲ್ಲಿದೆಯೆ? ಸಾಂಸ್ಕೃತಿಕಸಮತೆಯನ್ನು ಸಮಾಜದಲ್ಲಿ ಪ್ರಚಾರಗೊಳಿಸುವ ಉದ್ದೇಶದಿಂದಲೆ ಹೊರಟ ಬೇರೆ ಬೇರೆ ಮತಧರ್ಮಗಳು, ಇಂದು ವೈಷಮ್ಯದ ವಿಷವನ್ನು ಎರಚುವುದರಲ್ಲಿ ಪ್ರವೃತ್ತವಾಗಿವೆ. ವ್ಯವಹಾರದ ಅನುಕೂಲತೆಗಾಗಿ ಒಂದು ಕಾಲದಲ್ಲಿ ಉದ್ಯೋಗ-ವೃತ್ತಿಗಳ ಮೂಲಕ ಉಂಟಾದ ಜಾತಿಗಳು, ಇಂದು ಆ ಉದ್ಯೋಗವೃತ್ತಿಗಳನ್ನು ಕಳೆದುಕೊಂಡಿದ್ದರೂ— ಜಾತಿ-ಜಾತಿಗಳ ಹೆಸರುಗಳನ್ನೆತ್ತಿ ಜಗಳವಾಡುತ್ತಲಿವೆ. ಧಾರ್ಮಿಕ, ಸಾಮಾಜಿಕ ಸಮತಾಭಾವವಿಲ್ಲದೆ ಹೋದರೂ, ಹೊಸತಾಗಿಯೆ ಸಂಪಾದಿಸಿದ ರಾಜಕೀಯ ಸ್ವಾತಂತ್ರ್ಯದಿಂದ ಸಾಮಾಜಿಕ ಸುಖ-ಶಾಂತಿಗಳನ್ನು ಪಡೆಯಬಹುದೆಂದರೆ, ಅದಕ್ಕೂ ಅನುಕೂಲ ಪರಿಸ್ಥಿತಿ ನಮ್ಮಲ್ಲಿಲ್ಲ.

ರಾಜಕೀಯ ಪಕ್ಷ-ಪಂಗಡಗಳು ನಮ್ಮಲ್ಲಿ ಕಡಿಮೆಯೇನೂ ಇಲ್ಲ. ಎಲ್ಲ ಪಕ್ಷ-ಪಂಗಡಗಳು ಪ್ರಚಾರಮಾಡುವ ತತ್ತ್ವಜ್ಞಾನ, ಪ್ರಪಂಚವನ್ನೇ ಉದ್ಧಾರಗೊಳಿಸುವಂತಹ ಭ್ರಮೆಯನ್ನು ಹುಟ್ಟಿಸುವುದಾದರೂ, ಅವೆಲ್ಲವುಗಳ ನಿಜವಾದ ಗುರಿಯೆಂದರೆ ರಾಜಕೀಯ ಸೂತ್ರಗಳನ್ನು ತಂತಮ್ಮ ಕಡೆಗೆ ಇರಿಸಿಕೊಳ್ಳಬೇಕೆಂದಿರುವ ಅಧಿಕಾರಲಾಲಸಾಭಾವ. ಎಲ್ಲರಿಗೂ ಅಧಿಕಾರಿಗಳಾಗಲು ಬರುವಂತಿಲ್ಲ; ಆದರೆ ಎಲ್ಲರಿಗೂ ಅಧಿಕಾರ ದೊರೆಯದೆ ಹೋದರೆ, ದೇಶದ ಸುಖ ಶಾಂತಿಗೆ ಉಳಿಗಾಲವಿಲ್ಲ.

ಬರಲಿರುವ ಚುನಾವಣೆಗಳ ಆಯ್ಕೆಯ ಸಲುವಾಗಿ ದೇಶದಲ್ಲಿ ನಡೆದಿರುವ ಪ್ರಚಾರವನ್ನು ನೋಡಿದರೆ, ನಮ್ಮಲ್ಲಿಯ ಭಾರತೀಯ ಬಂಧುಭಾವವೆಲ್ಲ ಅಡಗಿ ಹೋಗಿ, ಏಳೇಳು ಜನ್ಮದ ವೈರತ್ವದ ಭಾವ ಬೆಂಕಿಯನ್ನು ಉಗುಳುತ್ತ ನಿಂತಂತಾಗಿದೆ. ಮಾನವ ಸಂತಾನದ ಹಿತಚಿಂತಕಶಕ್ತಿ, ಅನಾದಿಕಾಲದಿಂದಲೂ ಎಚ್ಚರಿಸುತ್ತ ಬಂದಿರುವ 'ತಮಸೋ ಮಾ ಜ್ಯೋತಿರ್ಗಮಯ!' ಎಂಬ ವಾಣಿಯ ಕಡೆಗೆ ನಾವೆಲ್ಲ ಲಕ್ಷ್ಯಕೊಟ್ಟಿರುವಂತೆ ಇದೆಯೆ ನಮ್ಮ ನಮ್ಮ ದೇಶದ ಪರಿಸ್ಥಿತಿ? ಅಂತಹ ಬೆಳಕಿನ ಬಾಳನ್ನು ವ್ಯಕ್ತಿವ್ಯಕ್ತಿಗಳು ಅನುಭವಿಸಲು ತೊಡಗಿದಾಗಲೇ ಭಾರತೀಯ ಸಮಾಜಕ್ಕೆ ನಿಜವಾದ ದೀಪಳಿಗೆಯ ಹಬ್ಬ! ಬರಲಿರುವ ವರ್ಷವಾದರೂ ನಮ್ಮ ಜನಕ್ಕೆ ಅಂತಹ ದೀಪಾವಳಿಯನ್ನು ಒದಗಿಸಿಕೊಡಲೆಂದು, ಭಾಗ್ಯವಿಧಾತನಲ್ಲಿ ನಮ್ಮ ಮೊರೆ!

— ಸಂಪಾದಕ

ನಾಡನಡೆ

'ಕಾಲಭೈರವ'

ಮಾನ್ಯ ಲಿಯಾಕತರ ಕೊಲೆ!

ಕಳೆದ ತಿಂಗಳಲ್ಲಿ ಪೌರ್ವಾತ್ಯರಾಷ್ಟ್ರಗಳ ಜನರೆಲ್ಲರ ಮನವನ್ನು ಕಲಕಿದ ಮಹತ್ತ್ವದ ಘಟನೆಯೆಂದರೆ, ಪಾಕಿಸ್ತಾನದ ಮಹಾ-ಪ್ರಧಾನ ಲಿಯಾಕತ ಅಲ್ಲಿಯವರ ದುರ್ಧರ ಕೊಲೆ. ಈ ಕೊಲೆಯು ರಾಷ್ಟ್ರ-ರಾಷ್ಟ್ರಗಳಲ್ಲಿಯ ರಾಜಕೀಯ ಸೂತ್ರಧಾರಿಗಳಿಗೂ ಜನ-ನಾಯಕರಿಗೂ ಪಾಠಕಲಿಸುವಂತಹದಾಗಿದೆ.

ಯಾವುದೇ ಜನಸಮೂಹದ ಇಲ್ಲವೆ ರಾಷ್ಟ್ರದ ಅಧಿಕಾರದ ಮುಖ್ಯಸೂತ್ರವನ್ನು ವಹಿಸಬೇಕಾದ ವ್ಯಕ್ತಿಗೆ, ಆ ಆ ಜನತೆಯ ಸಂಪೂರ್ಣ ನಿಷ್ಠೆಯ ಬಲವಾದರೂ ಬೇಕಾಗುತ್ತದೆ; ಇಲ್ಲವೆ ಆ ಜನತೆಯನ್ನು ಭಯಮುಗ್ಧರನ್ನಾಗಿಸುವಂತಹ ಸ್ವಂತದ ಪರಾಕ್ರಮವಾದರೂ ಬೇಕಾಗುತ್ತದೆ. ಇವೆರಡೂ ಇಲ್ಲದಲ್ಲಿ ಒಂದು ಪ್ರಮುಖ ವ್ಯಕ್ತಿ, ಕೊನೆಯವರೆಗೂ ಪ್ರಮುಖ ವ್ಯಕ್ತಿಯಾಗಿ ಬಾಳಲಾರದು. ಈ ಮಾತಿಗೆ ಉದಾಹರಣೆಗಳಾಗಿ ಇತ್ತೀಚೆಗೆ ಹಲವು ಘಟನೆಗಳು ಘಟಿಸುತ್ತ ನಡೆದಿವೆ.

ಯಾವ ರಾಷ್ಟ್ರವನ್ನೇ ತೆಗೆದುಕೊಂಡರೂ, ಅಲ್ಲಿ ರಾಜಕೀಯ ಪ್ರಪಂಚವನ್ನು ಔದಾಸೀನ್ಯದಿಂದ ಕಾಣುತ್ತ ತಂತಮ್ಮ ದೈನಂದಿನ ವ್ಯವಹಾರದಲ್ಲಿ ಮುಳುಗಿಹೋದ ಜನರೇ ಹೆಚ್ಚಾಗಿರುವರು. 'ಯಾರು ಆಳಿದರೇನು, ನಮ್ಮ ಹೋರೆ ನಮಗೆ ಬಿಟ್ಟಿದ್ದಲ್ಲ' ಎಂಬ ಭಾವನೆ ಇಂತಹ ಜನರದು. ಇನ್ನು ರಾಜಕೀಯ ಪ್ರಪಂಚದಲ್ಲಿ ಲಕ್ಷ್ಯ ಹಾಕುತ್ತಿರುವ ಅಲ್ಪಸಂಖ್ಯಾಕ ಜನಸಮುದಾಯದಲ್ಲಿ ಎರಡು ಬಗೆಯ ಜನರಿರುವರು. ಪ್ರತ್ಯಕ್ಷ ರಾಜಕೀಯ ಸೂತ್ರವನ್ನು ವಹಿಸಿಕೊಂಡವರೂ ಅವರ ಅನುಯಾಯಿಗಳ ವರ್ಗವೂ ಒಂದು ಬಗೆಯವರು. ಆ ರಾಜಕೀಯ ಸೂತ್ರಗಳನ್ನು ತಮ್ಮ ಕಡೆಗೆ ಸೆಳೆದುಕೊಳ್ಳಬೇಕೆಂದು ಚಳವಳಿಯನ್ನು ಎಬ್ಬಿಸುತ್ತಿರುವವರು ಇನ್ನೊಂದು ಬಗೆಯವರು. ಈ ಚಳವಳಿಯನ್ನು ಎಬ್ಬಿಸುವ ಜನರನ್ನು ನಿಗ್ರಹಿಸುವ ಶಕ್ತಿ ಅಧಿಕಾರ ಸೂತ್ರ ವಹಿಸಿದ ಗುಂಪಿನಲ್ಲಿ ಇಲ್ಲದೆ ಹೋದರೆ, ಆಳುವ ಅಧಿಕಾರ ವರ್ಗಕ್ಕೂ ಸುಖವಿರದು; ಆಳಿಕೆಗೊಳಗಾದ ಬಹುಸಂಖ್ಯಾಕ ಜನತೆಗೂ ಸುಖವಿರದು.

ಅಳಿದ ಮಹಾಪ್ರಧಾನ ಲಿಯಾಕತ ಅಲ್ಲಿಯವರು ಆಡುತ್ತಿದ್ದ ಮಾತುಗಳನ್ನು ಕೇಳುತ್ತಿದ್ದಾಗ, ಪಾಕಿಸ್ತಾನ್ ರಾಷ್ಟ್ರವನ್ನು ನಿಗ್ರಹಿಸುವಂತಹ ಶಕ್ತಿ-ಸಾಮರ್ಥ್ಯಗಳ ಸಂಪೂರ್ಣ ನೆರವು ಅವರಿಗಿದೆಯೆಂದು ಯಾರಿಗೂ ಎನಿಸುವಂತಿತ್ತು. ಇಂತಹ ಲೋಕೈಕವೀರ ನಾಯಕನನ್ನು ಪಡೆದ ಪಾಕಿಸ್ತಾನ ಭಾಗ್ಯಶಾಲಿಯಾದುದೆಂದು ಭಾವಿಸುವಂತಿತ್ತು. ಆದರೆ ತುಂಬಿದ ಮಹಾಸಭೆಯಲ್ಲಿ ಸಾಮಾನ್ಯನೊಬ್ಬನ ಗುಂಡಿನೇಟಿನಿಂದ ಕೊಲೆಗೊಂಡರೆಂಬ ವಾರ್ತೆಯನ್ನು ಕೇಳಿದಾಗ, ಅವರ ಮುಂದಾಳುತನದ ತುಂಬುನಂಬುಗೆ ಎಂತಹ ಭ್ರಮೆಯ ಮಾತಾಗಿದ್ದಿತೆಂಬುದು ಒಡೆದು ತೋರುವಂತಿದೆ; ಅವರ ರಾಜಕೀಯ ಮುಂದಾಳುತನವನ್ನು ವಿರೋಧಿಸುವ ದುಶ್ಶಕ್ತಿಗಳು ಸಾಕಷ್ಟು ಇವೆಯೆಂಬುದು ಸಿದ್ಧವಾಗುವಂತಿದೆ.

ಎರಡು ಕೊಲೆಗಳಲ್ಲಿಯ ತಾರತಮ್ಯ

ಭಾರತದಲ್ಲಿ ನಡೆದ ಮಹಾತ್ಮರ ವಧೆಯನ್ನು ಇದರೊಂದಿಗೆ ಸರಿಹೋಲಿಸಿ ಹೇಳುವ ಜನರೂ ತುಂಬ ಇದ್ದಾರೆ. ಆದರೆ ಅದಕ್ಕೂ ಇದಕ್ಕೂ ಇರುವ ಮೂಲಭೂತತತ್ತ್ವದ ಅಂತರವನ್ನು, ವಿಚಾರ-ವಿಮರ್ಶೆಗಳಿಂದ ಅರಿತುಕೊಳ್ಳುವವರು ಕಡಿಮೆಯೆಂದೇ ಹೇಳಬಹುದು. ಮಹಾತ್ಮರು ಎಂದೂ ಯಾವ ಬಗೆಯ ರಾಜಕೀಯ ಅಧಿಕಾರವನ್ನೂ ಅಪೇಕ್ಷಿಸಿದವರಲ್ಲ; ವಹಿಸಿದವರೂ ಅಲ್ಲ. ಅಧಿಕಾರದ ಸಂರಕ್ಷಣೆಗಾಗಿ ಯಾವ ಎದುರಾಳಿಗಳನ್ನೂ ದಮನ ಮಾಡಿರಲಿಲ್ಲ; ದಂಡಿಸಿರಲಿಲ್ಲ. ರಾಜಸವೃತ್ತಿಯನ್ನು ಹರಡುತ್ತ ಜನತೆಯನ್ನು ಸ್ವಾರ್ಥಸಾಧಕ ಹಿಂಸೆಗಾಗಿ ಕೆರಳಿಸುತ್ತಿರಲಿಲ್ಲ. ಧಾರ್ಮಿಕ ಸಂಕುಚಿತ ಭಾವನೆಯ ದುರ್ಬೋಧೆ-



ಮುಂಬಯಿ ಆಫೀಸ:— ದೇವಕರ್ಣ ಮ್ಯಾನ್ಶನ್, ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ ೨.

ಯನ್ನು ಮಾಡುತ್ತ ಮಾನವರನ್ನೇ ಮಾನವರ ಮೇಲೆ ಛಾಳಿಯಿಡುವಂತಹ ಕಾರ್ಯಮಾಡಲಿಲ್ಲ. ಆದರೂ ಅವರ ಕೊಲೆಯಾಯಿತು. ಅದೆಂತಹ ಕೊಲೆ! ಧರ್ಮಾಂಧನ ಹುಚ್ಚು-ದುಡುಕಿನ ಪರಿಣಾಮ! ಹೀಗಿರುವಾಗ ಲಿಯಾಖತರ ಕೊಲೆಯನ್ನು ಮಹಾತ್ಮರ ಕೊಲೆಗೆ ಹೋಲಿಸಿ ಹೇಳುವುದು ಸರಿಯೆನಿಸಿತೇ?

ಲಿಯಾಖತರು ವಹಿಸಿದ ರಾಜಕೀಯ ಮುಖ್ಯಾಧಿಕಾರವನ್ನು ಸ್ಪರ್ಧೆ-ಈರ್ಷೆಗಳಿಂದ ನೋಡುವ ಬೇರೆ ಪುಂಡ ಮುಖಂಡರ ಕೊರತೆಯೇನೂ ಪಾಕಿಸ್ತಾನದಲ್ಲಿ ಇಲ್ಲ. ಸದ್ಯದ ಆಡಳಿತವನ್ನು ಮುಳುಗಿಸುವ ಬಗ್ಗೆ ಏಳಲಿದ್ದ ಆಂತರಿಕ ಕ್ರಾಂತಿಯೊಂದನ್ನು ನೊನ್ನೆ ಮೊನ್ನೆಯೇ ಪತ್ತೆ ಹಚ್ಚಿ, ಅದರ ಮುಂದಾಳುಗಳನ್ನು ನ್ಯಾಯಾಸ್ಥಾನದಲ್ಲಿ ನಿಲ್ಲಿಸಲಾಗಿದೆ. ಪ್ರಾದೇಶಿಕ ಪ್ರೊಜ್ಯ ಮುಂದಾಳುಗಳಾದ ಖಾನ್ ಸಹೋದರರೂ ಅವರ ಸಹಕಾರಿಗಳೂ ಕತ್ತಲೆಕೋಣೆಯಲ್ಲಿ ಕೊಳೆಯುತ್ತಲಿದ್ದಾರೆ. ಒಂದು ದೊಡ್ಡ ಸಂಗಡದ ನಾಯಕರಾದ ಅಲ್ಲಮಾ ಮಶ್ರುಖಿಯವರನ್ನು ಲಿಯಾಖತರ ಸರಕಾರ ಸೆರೆಮನೆಯಲ್ಲಿ ಸೇರಿಸಿಬಿಟ್ಟಿದೆ. ತಮ್ಮ ಜನ್ಮಸಿದ್ಧ ಹಕ್ಕಿಗಾಗಿ ಹೋರಾಟ ಹೂಡಿದ ಫಕ್ತೂನಿಗಳನ್ನು ಸದೆಬಡಿಯುವ ನಿಷ್ಠತೆಯಿಂದ ಎಡೆಬಿಡದೆ ನಡೆದಿದೆ. ನೆರೆಯ ರಾಷ್ಟ್ರಗಳಾದ ಅಫಗಾಣಿಸ್ತಾನ್—ಇರಾಣಗಳನ್ನೂ ಅವಿಶ್ವಾಸದಿಂದ ಕಾಣುವ ದೃಷ್ಟಿ ಲಿಯಾಖತರ ಆಡಳಿತದ್ದು. ಇಂತಹರ ಕೊಲೆಯನ್ನು ಮಹಾತ್ಮರ ಧರ್ಮಮರಣದೊಂದಿಗೆ ಹೋಲಿಸಿ ಹೇಳುವುದು ಉಚಿತವೆನಿಸೀತೆ?

ಕಲಿಯಬೇಕಾದ ಪಾಠ

ಆದರೆ ಲಿಯಾಖತರ ಕೊಲೆ, ಭಾರತದ ಆಡಳಿತದಲ್ಲಿಯ ಮುನ್ನಾಯಕರಿಗೆ ಒಳ್ಳೆಯ ಪಾಠಕಲಿಸುವಂತಹದೆಂಬುದೇನೂ ಹುಸಿಮಾತಲ್ಲ. ಏಕೆಂದರೆ ಭಾರತದಲ್ಲಿ, ರಾಜಕೀಯ ಸೂತ್ರಗಳನ್ನು ಸ್ವಾಧೀನಪಡಿಸಿಕೊಳ್ಳಬೇಕೆನ್ನುವ ದುರಾಶೆಯ ರಾಜಕೀಯ ಮುಖಂಡ ವ್ಯಕ್ತಿಗಳಿದ್ದಾರೆ; ಪಕ್ಷ-ಪಂಗಡಗಳೂ ಇವೆ. ಸದ್ಯ ಕೈಯಲ್ಲಿರುವ ಅಧಿಕಾರಸೂತ್ರಗಳನ್ನು ತಮ್ಮ ಕೈಯಲ್ಲಿಯೇ ಮುಂದೆಯೂ ಇರಿಸಿಕೊಳ್ಳಬೇಕೆನ್ನುವ ದುರಾಶೆಯ ಅಧಿಕಾರಸೂತ್ರಾಧಿಕಾರಿಗಳು. ಅನ್ಯಾಯದ ದಾರಿಗಳಿಂದ, ಜನತೆಯಲ್ಲಿಯ ಸುಸಂಸ್ಕೃತ ಸಾಮಾಜಿಕ ಶಕ್ತಿಯನ್ನು ನಿಗ್ರಹಿಸುವುದು ನಡೆದಿದೆ. ಭವಿಷ್ಯಕಾಲದ ಅಧಿಕಾರವನ್ನು ಶಾಸನಸಮ್ಮತವಾಗಿ ಸಂಪಾದಿಸಬೇಕೆಂದು ಹೋರಾಡುವ ಪಕ್ಷ-ಪಂಗಡಗಳ ಮುಂದಾಳುಗಳು. ಒಬ್ಬರೊಬ್ಬರನ್ನು ಶತ್ರುಗಳಂತೆ ಭಾವಿಸಿ, ಪ್ರಚಾರಮಾಡುವ ದುಷ್ಕಾರ್ಯದಲ್ಲಿ ತೊಡಗಿದ್ದಾರೆ. ಗಳತಿರ ವಿಧ್ವಂಸಕ ಚಳವಳಿ, ತಾತ್ಕಾಲಿಕ ಸ್ವಾತಂತ್ರ್ಯಸಾಧನೆಯ ಕಾರ್ಯದಲ್ಲಿ ವಿಜಯಶಾಲಿಯಾಗಿ ಪರಿಣಮಿಸಿರಬಹುದಾದರೂ, ಅದರಲ್ಲಿ ಹುದುಗಿಕೊಂಡಿದ್ದ ದುರ್ವಿಷವು, ಯಾವ ಪಕ್ಷದ ಸರಕಾರವನ್ನೂ ಸುಸೂತ್ರವಾಗಿ ನಡೆಯಗೊಡದಂತೆ, ಪರಿಸ್ಥಿತಿಯನ್ನು ವಿಷಮವಾಗಿಸಿದೆ. ಇಂತಹದರಲ್ಲಿ ಪ್ರಾಂತ-ಪ್ರಾಂತಗಳ-ಜಾತಿ-ಜಾತಿಗಳ ಧರ್ಮ-ಧರ್ಮಗಳ ಒಳಜಗಳಗಳು ಬೇರೆ. ಇಂತಹ ಕಾಲದಲ್ಲಿ ಮುಂದಿನ ಕಾಲದ ಭಾರತದ ರಾಜ್ಯಸೂತ್ರಗಳನ್ನು ವಹಿಸಿಕೊಳ್ಳಬೇಕೆನ್ನುವವರು, ತುಂಬ ಎಚ್ಚರಿಕೆಯಿಂದ ತಮ್ಮ ಪ್ರಚಾರಕಾರ್ಯವನ್ನಿಂದು ನಡೆಯಿಸಬೇಕಾಗಿದೆಯಲ್ಲದೆ, ತಮ್ಮ ವ್ಯಕ್ತಿತ್ವವಿಕಾಸದ ಕಡೆಗೂ ಚಾರಿತ್ರ್ಯಶುದ್ಧಿಯ ಕಡೆಗೂ ವಿಶೇಷ ಗಮನಕೊಡಬೇಕಾಗಿದೆ. ಇಂತಹ ನಿಜವಾದ ಪ್ರಜಾಪ್ರತಿನಿಧಿಗಳು ಆಯ್ಕೆಪಡೆದುಬಂದರೆಯೇ ಭಾರತಕ್ಕೆ ದೊರೆತ ಸ್ವರಾಜ್ಯ ಸುರಾಜ್ಯವಾದೀತು. ಇಲ್ಲವಾದರೆ ಅಸುರರಾಜ್ಯವಾಗಿ, ಭಾರತದ ಕಷ್ಟಕೋಟಲೆಗಳಿಗೆ ಕೊನೆಯೆ ಇಲ್ಲದಂತಾದೀತು.

ಕರ್ನಾಟಕದ ರಾಜಕೀಯಲೋಕ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಪುರಸ್ಕರಿಸಿ ಮೇಲೆ ಕಳುಹಿದ— ಚುನಾವಣೆಯ ಹುರಿಯಾಳುಗಳ ಪಟ್ಟಿಯಲ್ಲಿ, ಒಂದು ಭಾಗವು ಅತ್ಯಲ್ಪ ಬದಲಾವಣೆಯೊಂದಿಗೆ ಒಪ್ಪಿಗೆ ಪಡೆದು ಪ್ರಕಟವಾಯಿತು. ಲೋಕಸಭೆಯ ಹುರಿಯಾಳುಗಳ ಪಟ್ಟಿಯಲ್ಲಿ ಮಾನ್ಯ ಕರಮರಕರರಿಗೂ ಎಡೆ ದೊರೆತುದು ಸಮಾಧಾನದ ಸಂಗತಿಯಾಗಿದೆ. ಆದರೆ ವಿಜಾಪುರ ಜಿಲ್ಲೆಯ ಬಗ್ಗೆ ಆರಿಸಿದ ಹುರಿಯಾಳುಗಳಿಬ್ಬರೂ ಇದ್ದಂತೆಯೆ ಇದ್ದು, ಅದಕ್ಕಾಗಿ ಎದ್ದಿದ್ದ ಅಸಮಾಧಾನದ ವಿಚಾರವೇನೂ ಆದಂತೆ ಕಾಣಲಿಲ್ಲ. ಹಣವಂತನಾದ ವರನು ಸ್ವತಃ ಅಜ್ಞಾನಿಯಿದ್ದರೂ, ಅಸಮರ್ಥನಿದ್ದರೂ, ಅಯೋಗ್ಯನಿದ್ದರೂ ಒಳ್ಳೆಯ ಹೆಣ್ಣನ್ನು ಕೊಟ್ಟು ಮದುವೆಮಾಡುವ ಲೋಭಾಂಧ ತಂದೆ-ತಾಯಿಗಳಂತೆ ಲೋಕದ ನಗೆಗೆ ಈಡಾಗಬಾರದೆಂದು ಆಯ್ಕೆಗಾರರಿಗೆ ನಮ್ಮ ಸೂಚನೆ. ಅಸಮರ್ಥ—ಸಾಲದ ಶಿಕ್ಷಣದ ಹುರಿಯಾಳುಗಳನ್ನಾಯ್ದು ದಿಲ್ಲಿಯ ಲೋಕಸಭೆಗೆ ಕಳುಹುವುದರಲ್ಲಿ ನಾಡಿಗೆ ಎಂತಹ ಗೌರವವೋ ತಿಳಿಯದಾಗಿದೆ. ಈಗ ಮಾನ್ಯ ಕರಮರಕರರನ್ನು ಕೆ. ಪಿ. ಸಿ. ಸಿ.ಯೇನೋ— ಒತ್ತಾಯಕ್ಕಾಗಿಯಾದರೂ— ಒಪ್ಪಿಕೊಂಡಂತಾಯಿತು. ಆದರೆ ಅವರನ್ನು ಎದುರಿಸುವ ಸ್ವತಂತ್ರ ಹುರಿಯಾಳುಗಳು ಸೊಂಟಕಟ್ಟಿದ್ದಾರೆಂಬ ಸುದ್ದಿ ಸಾಕಷ್ಟು ಹಬ್ಬಿದೆ. ಪರಿಣಾಮದಲ್ಲಿ ನಾವಿನ್ನು ಕಾಣಬೇಕಾದ: ಕರ್ನಾಟಕವು ಕಾಂಗ್ರೆಸ್‌ನಿಷ್ಠಪ್ರಾಂತವೋ ಜಾತಿನಿಷ್ಠಪ್ರಾಂತವೋ ಎಂಬುದರ ಸತ್ಯಸ್ಥಿತಿಯನ್ನು. ನಮ್ಮ ಅಭಿಪ್ರಾಯವಿಷ್ಟು: ಕರ್ನಾಟಕವು ಕಾಂಗ್ರೆಸ್‌ನಿಷ್ಠವಾಗುವುದೂ ಬೇಕಾಗಿಲ್ಲ; ಜಾತಿನಿಷ್ಠವಾಗುವುದೂ ಬೇಕಾಗಿಲ್ಲ. ಸತ್ಯ-ನ್ಯಾಯನಿಷ್ಠವಾಗಿ ತನ್ನ ಪ್ರಾಚೀನ ಸಾಂಸ್ಕೃತಿಕ ಗೌರವವನ್ನು ಕಾಯ್ದುಕೊಂಡು ಸಾಗಬೇಕು. ಅದಕ್ಕಾಗಿ, ಹುರಿಯಾಳುಗಳಾಗಿ ನಿಂತವರಲ್ಲಿ ಯಾರಿಂದ ತಮ್ಮ ನಾಡಿನ ಮೇಲ್ಮೆಯಾದೀತೆಂಬುದನ್ನೂ ತಮ್ಮ ಜನದ ಕೀರ್ತಿ ಬೆಳೆದೀತೆಂಬುದನ್ನೂ ಗಮನಿಸಿ, ಅಂತಹರನ್ನೇ ಆಯ್ದು ಕಳುಹುವುದು ಎಲ್ಲ ರೀತಿಯಿಂದಲೂ ಯೋಗ್ಯವಾದುದು.

ಸೀಮೋಲ್ಲಂಘನ

(ಐತಿಹಾಸಿಕ ತರಂಗರೂಪಕ)

ಶ್ರೀ. ಬೆಟಗೇರಿ ಕೃಷ್ಣಶರ್ಮಾ, ಧಾರವಾಡ

★

ಕಾಲ : ಕ್ರಿ. ಶ. ೧೫೧೫ ನೆಯ ವರ್ಷ. ಸ್ಥಳ : ರಾಜಧಾನಿ ವಿಜಯನಗರ.

— ಪಾತ್ರಪರಿಚಯ —

ನಿರೂಪಕ	(ನಾಟಕದ ಸೂತ್ರಧಾರ)
ಕೃಷ್ಣದೇವರಾಯ	(ವಿಜಯನಗರದ ನರಪತಿ)
ಸಾಳುವ ತಿಮ್ಮರಸು	(ವಿಜಯನಗರದ ಮಹಾದಂಡನಾಯಕ)
ತಿರುಮಲಾಂಬೆ	(ಕೃಷ್ಣದೇವರಾಯನ ಹಿರಿಯರಾಣಿ)
ಮುದ್ದಬ್ಬೆ	(ತಿರುಮಲಾಂಬೆಯ ನರ್ಮಸಖಿ)
ಒಬ್ಬ **ಇನ್ನೊಬ್ಬ** **ಮೂರನೆಯವ** **ನಾಲ್ಕನೆಯವ**	ನವರಾತ್ರಿಯನ್ನು ನೋಡಲು ವಿಜಯನಗರಕ್ಕೆ ಬಂದ ಉತ್ತರದ ಗಡಿಯ ಜನಸಾಮಾನ್ಯರು. ಮೊದಲಿನ ಮೂವರು ಪ್ರೌಢ ವಯಸ್ಕರು. ನಾಲ್ಕನೆಯವನು ದುಡುಕಿನ ತರುಣ.

ವೃಂದಗೀತ—

ವಿಜಯಕೆ ರಣವಿಜಯಕೆ ದಿನ ವಿಜಯದ ದಶಮೀ!
ಭುಜಬಲರನು ಕರೆವಳಿದೋ, ದೇವಿ ಶ್ರೀಶಮಿ! ॥ಪಲ್ಲವಿ॥
ಸಾಮ–ದಾನ–ಭೇದಗಳನು ಮೀರಿದ ರಿಪುಜಾಲ....
ಪ್ರೇಮದ ನೆಲೆಯರಿಯದವರು; ಸುಖಶಾಂತಿಗೆ ಶೂಲ....
ಭೂಮಿಯ ಸುಕ್ಷೇಮಕಾಗಿ ಕೀಳಲವರ ಮೂಲ....
ಸೀಮೋಲ್ಲಂಘನಕೆ ಇದೇ ದಿನವು ಸರಿ ಸಕಾಲ! ॥೧॥
ವಿಜಯಕೆ ರಣವಿಜಯಕೆ ದಿನ, ವಿಜಯದ ದಶಮೀ!
ಭುಜಬಲರೇ ಕರೆವಳಿದೋ ದೇವಿ ಶ್ರೀಶಮೀ!

ನಿರೂಪಕ

ವಿಜಯದಶಮಿ! ಓ, ನಮ್ಮ ನಾಡಿನ ಕ್ಷಾತ್ರವೃತ್ತಿಯ ವ್ಯಾಮಂಗಗಳನ್ನು ಜಾಜ್ವಲ್ಯಪಡಿಸುವ ವಿಜಯದಶಮಿ! ಕರ್ನಾಟಕದ ಇತಿಹಾಸಲೋಕವನ್ನು ಅವಲೋಕಿಸಿದರೆ, ಕನ್ನಡವೀರರಿಗೆ ವಿಜಯದಶಮಿಯೊಂದು ಉತ್ಸಾಹಯೋಗ! ಪ್ರತಿವರ್ಷದ ವಿಜಯದಶಮಿಯೂ ವಿಜಯೋದ್ಯಮದ ಪ್ರಾರಂಭದ ಶುಭಮುಹೂರ್ತದ ಕಾಲ! ಸಮ್ರಾಟನ ರಾಜಧಾನಿಯನ್ನು ಮೊದಲುಮಾಡಿ, ಸಣ್ಣ ಬೀರೇಗೌಡನ ಹಳ್ಳಿಯ ವರೆಗೆ–ಎಲ್ಲೆಲ್ಲಿಯೂ ಉತ್ಸವದ ಸಂಭ್ರಮವನ್ನು ಪ್ರದರ್ಶಿಸುವ ಪರ್ವಣಿ! ನವರಾತ್ರಿಯ ಒಂಬತ್ತು ದಿನಗಳ ವರೆಗೂ ಶ್ರೀ–ಶಾರದೆ–ಶಕ್ತಿಯರನ್ನು ಶ್ರದ್ಧೆಯಿಂದ ಉಪಾಸಿಸಿ, ರಾಷ್ಟ್ರಾಭ್ಯುದಯಯಾಗವನ್ನು ನೆರವೇರಿಸಿ ರಾಷ್ಟ್ರದ ಶಕ್ತಿಸಂಪತ್ತು-ಸತ್ತ್ವಗಳನ್ನು ಅಳೆದುಕೊಂಡು, ಮಲೆತುನಿಂತ ವೈರಿಗಳನ್ನು ಅಡಗಿಸಲು ಹೊರಡುವ ಪಯಣದ ದಿನ! ಇತಿಹಾಸಕಾಲದಲ್ಲಿ ಈ ವಿಜಯದಶಮಿ, ಕನ್ನಡಿಗರಿಗೆ ದೊರಕಿಸಿಕೊಟ್ಟ ವಿಜಯಗಳಿಗೆ, ಕೊನೆ-ಮೊದಲಿನ ಲೆಕ್ಕವೇ ಇಲ್ಲ. ಆಸೇತುವಿಂಧ್ಯ ಕರ್ನಾಟಕ ಸಾಮ್ರಾಜ್ಯವನ್ನು ಕಟ್ಟಿದ ಕನ್ನಡ ರಾಜ್ಯರಮಾರಮಣ ಕೃಷ್ಣದೇವರಾಯ—ವಿಜಯನಗರದ ವಿಜಯಧ್ವಜವನ್ನು ಲೋಕಕ್ಕೆಲ್ಲ ಕಾಣಿಸಿದ ಶ್ರೀಕೃಷ್ಣದೇವರಾಯ—ತನ್ನ ರಾಜಧಾನಿಯಲ್ಲಿ ಆಚರಿಸುತ್ತಿದ್ದ ವಿಜಯದಶಮಿಯ ಸಂರಂಭ ಸಂಭ್ರಮಗಳು ಎಂತಹವು! ಅವು ಲೋಕದ ಮೂಲೆಮೂಲೆಗಳ ಜನರ ಮನವನ್ನೂ ಕರ್ನಾಟಕದೆಡೆಗೆ ಸೆಳೆದುವು. ಅಪರಿಂದಲೇ ತಮ್ಮ ಮಹಿಮೆಯ ಬಣ್ಣನೆಯನ್ನು ಬರೆಯಿಸಿಕೊಂಡು, ಇಂದಿನ ಕರ್ನಾಟಕದ ಇತಿಹಾಸದಲ್ಲಿ, ಕನ್ನಡಿಗರ ಹೃದಯದಲ್ಲಿ ಹೆಮ್ಮೆ-ಹುರುಪುಗಳನ್ನು ಹುಟ್ಟಿಸುವ ಪುಟಗಳಾಗಿ ಮೆರೆಯುತ್ತಿರುವುವು! ಓ ವಿಜಯದಶಮೀ, ಕರ್ನಾಟಕ ಪ್ರಜಾಪ್ರೇಮಾ!

* ಮೊನ್ನೆಯ ವಿಜಯದಶಮಿ (ತಾ. ೯-೧೦-೫೧) ಯಂದು, ಧಾರವಾಡದ ಬಾನುಲಿಕಟ್ಟೆಯಿಂದ ಬಿತ್ತರಗೊಂಡುದು. ಸಂ.

ಪ್ರಕಟವಾಗಲಿದೆ.

ಶ್ರೀ. ರಾಮಚಂದ್ರ ಕೊಟ್ಟಲಗಿಯವರ ಕವನಸಂಗ್ರಹ

"ಪಿಪಾಸಾ"

ಪ್ರಿನ್ಸಿಪಾಲ್ ಗೋಕಾಕ ವಿನಾಯಕರಾಯರ
ಪ್ರದೀರ್ಘ ಮುನ್ನುಡಿಯೊಡನೆ.

ಬೆಲೆ ೧—೦—೦

ವಿವರಗಳಿಗೆ ಬರೆಯಿರಿ:—

ಮನೋಹರ ಗ್ರಂಥಭಾಂಡಾರ,

ಧಾರವಾಡ

ಕ್ರಿಸ್ತಶಕ ೧೫೧೫ ನೆಯ ವರ್ಷ. ಶ್ರೀ ಕೃಷ್ಣದೇವರಾಯ, ವಿಜಯನಗರದ ರತ್ನಸಿಂಹಾಸನವನ್ನೇರಿ ಐದಾರುವರ್ಷಗಳಾಗಿವೆ. ರಾಜಕಾರ್ಯಪ್ರವೀಣ ಸಾಳುವ ತಿಮ್ಮರಸ, ರಾಯನ ವೃದ್ಧಮಂತ್ರಿ. ಜಿಗೀಷುವೃತ್ತಿಯ ಕೃಷ್ಣದೇವರಾಯ, ತನ್ನ ಚತುರ ಮಂತ್ರಿಯ ನಿರ್ದೇಶದಂತೆ, ಪ್ರತಿವರ್ಷವೂ ದಿಕ್ಕು-ದಿಕ್ಕಿಗೆ ದಿಗ್ವಿಜಯಮಾಡಿ, ತನ್ನ ಸಾಮ್ರಾಜ್ಯದ ಮೇರೆಗಳನ್ನೆಲ್ಲ ಭದ್ರಗೊಳಿಸಿದ್ದಾನೆ. ಕನ್ನಡ ಪ್ರಜೆಗಳೆಲ್ಲ ಸುಖ-ಸಂಕಥಾ-ವಿನೋದಗಳಲ್ಲಿ ಬದುಕನ್ನು ಲೀಲಾಮಯವನ್ನಾಗಿ ಮಾಡಿಕೊಂಡಿದ್ದಾರೆ. ಎಂತಲೇ ವಿಜಯನಗರದಲ್ಲಿ ಈ ಸಲದ ನವರಾತ್ರಿಯ ಸಾಂಪ್ರದಾಯಿಕ ನಿತ್ಯೋತ್ಸವಗಳ ವಿಜೃಂಭಣೆಯಿಂದ ನಡೆದಿವೆ. ದೇಶ-ವಿದೇಶಗಳಿಂದ ವಿವಿಧಪ್ರಕಾರದ ಜನಸಮೂಹ, ಸಾಗರದ ಅಲೆಗಳಂತೆ ಬಂದು ಬಂದು ಈ ಸವ ಸಾರಂಭದ ಸಂದರ್ಶನಕ್ಕಾಗಿ ರಾಜಧಾನಿಯಲ್ಲಿ ತುಂಬಿಬಿಟ್ಟಿದೆ ಇಂದು ಮಹಾನವಮಿ. ಸಂಜೆಯ ಒಡ್ಡೋಲಗವನ್ನು ಮುಗಿಸಿಕೊಂಡು ಮರಳಿದ ಶ್ರೀಕೃಷ್ಣದೇವರಾಯ, ಸಾಳುವ ತಿಮ್ಮರಸರು ಇದೀಗ ಅರಮನೆಯ ಮಂತ್ರಾಗಾರದಲ್ಲಿ ಕುಳಿತು, ಮರುದಿನದ ಕಾರ್ಯಕಲಾಪವನ್ನೆತ್ತಿ ಆಪ್ತಾಲೋಚನೆ ನಡೆಯಿಸಿದ್ದಾರೆ.

ಕೃಷ್ಣದೇವರಾಯ:— ಅಪ್ಪಾಜೀ, ನವರಾತ್ರಿಯ ಒಂಬತ್ತು ದಿನಗಳ ಮಹೋತ್ಸವದ ಮುಖ್ಯಭಾರವನ್ನು, ಇಂದು ತಲೆಯ ಮೇಲಿಂದ ಇಳುಹಿದಂತಾಯಿತು. ಅಬ್ಬಾ, ಈ ವರ್ಷದ ಜನಸಂದಣಿ ಮೇರೆಮೀರಿದುದು! ತಾಯಿ ಭುವನೇಶ್ವರಿ, ಶ್ರೀಸಂಪಾವಿರೂಪಾಕ್ಷ, ಇಬ್ಬರ ಕರುಣೆಯ ಬೆಂಬಲ, ಎಲ್ಲವನ್ನೂ ಸುಯಂತ್ರಿತವಾಗಿ ಸಾಂಗಗೊಳಿಸಿತು ಧನ್ಯ! ......ಧನ್ಯ!

ಸಾಳುವ ತಿಮ್ಮರಸ:— ಮಹಾರಾಜ, ದೈವದ ಕರುಣೆ, ಪುರುಷನ ಪೌರುಷ—ಎರಡೂ ಜೊತೆಗೂಡಿದಾಗಲೇ ಲೋಕದಲ್ಲಿ ಮಹಾ-ಮಹಾಕಾರ್ಯಗಳು ಜರುಗುವುವು. ದೈವದ ಬಲವಿರುವ ತಮ್ಮಂತಹ ನರವೀರರಿಗೆ, ಯಾವ ಮಾತು ವಿರೋಧಿಯಾಗಿ ನಿಂತೀತು? ಯಾವ ದುಶ್ಶಕ್ತಿ ಅಡೆತಡೆಗಳನ್ನು ಒಡ್ಡೀತು? ಮಹಾಪುರುಷನ ನಾಯಕತ್ವವನ್ನು ಪಡೆದ ಕರ್ನಾಟಕ ಸಾಮ್ರಾಜ್ಯವು ಧನ್ಯವೇ ಸರಿ!

ಕೃಷ್ಣದೇವರಾಯ:— ಸರಿ ಸರಿ! ನಿಮ್ಮದಿದೊಂದು ರೂಢಿ! ನನ್ನನ್ನು ಎಷ್ಟು ಹೊಗಳಿದರೂ ನಿಮ್ಮ ನಾಲಗೆಗೆ ದಣಿವಿಲ್ಲ.

ಸಾಳುವ ತಿಮ್ಮರಸ:— ಮಹಾರಾಜರು ಹೊಗಳುವುದಕ್ಕಾಗಿ ನನ್ನನ್ನು ಇರಿಸಿಕೊಂಡಿಲ್ಲ. ಅದಕ್ಕಾಗಿ ವಂದಿ-ಮಾಗಧ-ವೈತಾಳಿಕರು ಬೇಕಾದಷ್ಟು ಜನರಿದ್ದಾರೆ! ಹೊಗಳಲಿಕ್ಕಾಗಿಯೇ ಅವರು ಸಂಬಳ ತಿನ್ನುತ್ತಿರುವುದರಿಂದ ಅವರೇನೋ ಬಣ್ಣದ ಮಾತುಗಳಿಂದ ಮಹಾರಾಜರನ್ನು ಹೊಗಳುತ್ತಿರಬಹುದು; ಆದರೆ ಒಂದು ಆಶ್ಚರ್ಯದ ಸಂಗತಿಯೆಂದರೆ: ಅವರು ಬಣ್ಣಕೊಟ್ಟು ಹೇಳುವೆವೆಂದು ಹೇಳುವ ಸವಾಲುಗಳೂ, ನಿಮ್ಮ ವಿಷಯದಲ್ಲಿ ವಾಸ್ತವಸ್ಥಿತಿಯಾಗಿ ಪರಿಣಮಿಸುತ್ತಲಿವೆ.

ಕೃಷ್ಣದೇವರಾಯ:— (ಉತ್ಸಾಹದ ನಗೆ ನಕ್ಕು) ಆಯಿತು, ಮತ್ತೆ ಹರಿದಾಸ ತನ್ನ ಪಲ್ಲವಿಗೇ ಬಂದಂತಾಯಿತು ನಿಮ್ಮ ಮಾತು! ಅದು ಹೋಗಲಿ ಅಪ್ಪಾಜಿ! ನಾಳೆಯ ದಿಗ್ವಿಜಯದ ಸೀಮೋಲ್ಲಂಘನಕ್ಕೆ ಯಾವ ನಿಟ್ಟನ್ನು ಗುರಿಯಾಗಿರಿಸಿಕೊಳ್ಳಬೇಕು? ನಮ್ಮ ರಾಜ್ಯದ ಗಡಿಗಳಂತೂ ಭದ್ರವಾಗಿವೆ. ದೇಶದಲ್ಲಿಯ ಮಾಂಡಲಿಕ-ಮಾನ್ಯರೆಲ್ಲ ಸಾಮ್ರಾಜ್ಯನಿಷ್ಠರಾಗಿ ನಡೆದುಕೊಳ್ಳುತ್ತಲಿದ್ದಾರೆ. ಇನ್ನೊಬ್ಬರೊಂದಿಗೆ ಕಾಲುಕೆದರಿ ಜಗಳತೆಗೆದು, ಅವರ ಪಾಲಿನ ನ್ಯಾಯ್ಯವಾದ ಸೊತ್ತನ್ನು ಅಪಹರಿಸುವುದು ಕನ್ನಡರಾಯರಿಗೆ ಅಗೌರವದ ಸಂಗತಿ. ಹೀಗಿರುವಾಗ, ನಾಳೆಯ ಸೀಮೋಲ್ಲಂಘನದ ಕಾರ್ಯಕಲಾಪವನ್ನು, ಕೇವಲ ಸಾಂಪ್ರದಾಯಿಕವಾಗಿಯೆ ನಡೆಯಿಸಬೇಕೇನು?

ಸಾಳುವ ತಿಮ್ಮರಸ:— ಹಾಗೆ ಹೇಗಾದೀತು ದೊರೆಗಳೆ! ವಿಜಯನಗರದ ಸಮ್ರಾಟರ ದಿಗ್ವಿಜಯದ ಅಭಿಯೋಗಸಂದರ್ಭಗಳಿನ್ನೂ ಸಂಪೂರ್ಣವಾಗಿ ಮುಗಿದಿಲ್ಲ. ಮಹಾರಾಜ ನರಸಿಂಹಪ್ರಭುಗಳ ಜೀವನದ ಕೊನೆಯ ಆಶೆಯೊಂದನ್ನು, ತಮ್ಮಿಂದ ನಾನು ಇದುವರೆಗೂ ಬಚ್ಚಿ ಇಟ್ಟುಕೊಂಡಿದ್ದೇನೆ. ಸಾಮ್ರಾಜ್ಯದ ಸೀಮಾಭದ್ರತೆಯ ಮಹತ್ಕಾರ್ಯ, ಇದುವರೆಗೂ ನನ್ನಿಂದ ಈ ರಹಸ್ಯದ ಮಾತನ್ನು ಆಡಗೊಟ್ಟಿರಲಿಲ್ಲ. ಏಕೆಂದರೆ, ನಾವು ಕೆಣಕಬೇಕಾಗಿದ್ದುದು ಬಲಿಷ್ಠಶತ್ರುಗಳನ್ನು!

ಕೃಷ್ಣದೇವರಾಯ:—ಅವರಾರು ಅಪ್ಪಾಜೀ, ಅಂತಹ ಬಲಿಷ್ಠ ಶತ್ರುಗಳು ?

ಸಾಳುವ ತಿಮ್ಮರಸು:—ದೊರೆಗಳ ಕಣ್ಣಿಗೆ ಯಾವ ಶತ್ರುವೂ ಬಲಿಷ್ಠನಾಗಿ ತೋರದಿರುವುದು ಆಶ್ಚರ್ಯದ ಮಾತಲ್ಲ; ಆದರೂ ವಿಜಾಪುರದ ಆದಿಲಶಾಹಿ, ಉತ್ಕಲದ ಗಜಪತಿ.... ಇವರೊಂದಿಗೆ ಎದುರಿಸಿ ನಿಲ್ಲುವುದು, ಇದುವರೆಗೆ ಸುರಕ್ಷಿತತೆಯ ಸಂಗತಿಯಾಗಿರಲಿಲ್ಲ.

ಕೃಷ್ಣದೇವರಾಯ:— ಏನು ? ವಿಜಾಪುರದ ಆದಿಲಶಾಹಿ, ಉತ್ಕಲದ ಗಜಪತಿಗಳೊಂದಿಗೆ ಯುದ್ಧ ಹೂಡಬೇಕಾಗುವುದೇ ನಾವ ? ಆಶ್ಚರ್ಯದ ಸಂಗತಿಯನ್ನೇ ನಾನು ಕೇಳುತ್ತಿದ್ದೇನೆ. ಏಕೆಂದರೆ, ವಿಜಾಪುರದವರು ನಮಗೆ ಹತ್ತಿರದ ಮಿತ್ರರಾಗಿದ್ದಾರೆ. ಇನ್ನು ಗಜಪತಿಯೊ, ವಿಜಯನಗರದ ಶೌರ್ಯಕ್ಕೆ ಹೆದರಿ, ತನ್ನ ಸೀಮೆಯನ್ನು ದಾಟಲೂ ಧೈರ್ಯವಿಲ್ಲದವನಾಗಿದ್ದಾನೆ.

ಸಾಳುವ ತಿಮ್ಮರಸು :—ದೊರೆಗಳ ಮಾತೇನೋ ಸರಿಯೇ ! ಆದರೆ, ನಾಳೆಯ ಸೀಮೋಲ್ಲಂಘನದ ಮುಂದಡಿಯು, ರಾಜಪಿತೃಗಳ ಕೊನೆಯಾಶೆಯನ್ನು ಪೂರಯಿಸಲೇಬೇಕು. ಯಾವುದೇ ಜೀವದ ಕೊನೆಯಾಶೆ, ಅವನ್ನು ಸದ್ಗತಿಗೆ ಒಯ್ಯಲಾರದಲ್ಲವೆ ?

ಕೃಷ್ಣದೇವರಾಯ :—ಏನಿದ್ದಿತು ನನ್ನ ಪೂಜ್ಯಪಿತನ ಕೊನೆಯಾಶೆ ?

ಸಾಳುವ ತಿಮ್ಮರಸು :— ಇದು ನೋಡಿರಿ ! ಮಹಾರಾಜ-ನರಸಿಂಹ ಪ್ರಭುಗಳು, ತಮ್ಮ ಮರಣಕಾಲದಲ್ಲಿ ಹೇಳಿ ಬರೆಯಿಸಿದ ಲಿಖಿತವಿದು ! ಇದುವರೆಗೂ ಇದನ್ನು ಜೋಕೆಮಾಡಿ ಇರಿಸಿದ್ದೇನೆ. ಕೊನೆಯಲ್ಲಿ ನೋಡಿರಿ; ಅವರ ಹಸ್ತದ ಅಂಕಿತವಿದೆ; ಅಧಿಕೃತ ರಾಜಮುದ್ರೆಯಿದೆ. ದೊರೆಗಳು ಚಿತ್ತಯಿಸಬೇಕು ! (ಕಾಗದದ ಸುರುಳಿಯನ್ನು ಕೃಷ್ಣದೇವರಾಯನ ಕಡೆಗೆ ಕೊಡುವನು.)

ಕೃಷ್ಣದೇವರಾಯ:— ಓ! ಇದು ಪೂಜ್ಯಪಿತನ ಕೊನೆಯಾಶೆಯ ಲಿಖಿತವೆ ? (ಸುರುಳಿಯನ್ನು ಬಿಚ್ಚಿ, ಗಟ್ಟಿಯಾಗಿಯೇ ಓದಿಕೊಳ್ಳುವನು)

“ ಉದಯಗಿರಿ, ರಾಯಚೂರು, ಮುದಗಲ್ಲು ದುರ್ಗಗಳು, ವಿಜಯನಗರದ ಸಾಮ್ರಾಜ್ಯದ ಗಡಿಯನ್ನು ಕಾಯುವ ದಿಗ್ಗಜಗಳಿದ್ದಂತೆ. ಇವು ಸಂಪೂರ್ಣವಾಗಿ ವಿಜಯನಗರದ ಸಾಮ್ರಾಜ್ಯದ ಸೊತ್ತುಗಳು ಮಲ್ಲಿಕಾರ್ಜುನ ದೊರೆಗಳ ತರುವಾಯದ ಅವ್ಯವಸ್ಥಿತ ಕಾಲದಲ್ಲಿ, ಉದಯಗಿರಿಯನು ಗಜಪತಿಗಳೂ ರಾಯಚೂರು, ಮುದಗಲ್ಲುಗಳನ್ನು ವಿಜಾಪುರದವರೂ ಅತಿಕ್ರಮಿಸಿದ್ದಾರೆ ಆ ಕೋಟೆಯ ಪ್ರದೇಶಗಳು ಸೇರಿದ ಹೊರತು, ವಿಜಯನಗರ ಸಾಮ್ರಾಜ್ಯಕ್ಕೆ ಪೂರ್ಣತೆಯೇ ಇಲ್ಲ. ನಾನು ನನ್ನ ಜೀವನದುದ್ದಕ್ಕೂ ಹೆಣಗಿ, ಅವುಗಳನ್ನು ಮರಳಿ ಪಡೆಯದೆ ಹೋದೆ. ಇದೊಂದು ನನ್ನ ಉತ್ಕಟವಾದ ಆಶೆ ಪೂರ್ಣವಾಗದೇ ಉಳಿದಂತಾಯಿತು. ನನ್ನ ತರುವಾಯ ವಿಜಯನಗರದ ಸಿಂಹಾಸನವನ್ನೇರಿದವರು ಯಾರೇ ಆಗಲಿ, ಆ ಕೋಟೆಗಳನ್ನು ಗೆದ್ದು, ಸಾಮ್ರಾಜ್ಯಕ್ಕೆ ಸೇರಿಸಿಕೊಂಡಾಗಲೆ ನನ್ನ ಆತ್ಮ ಸಂತೃಪ್ತವಾಗುವುದು. ಈ ನನ್ನ ಆಶೆ ಪೂರಯಿಸದೆ ಹೋದರೆ, ನನಗೆ ಸದ್ಗತಿಯೇ ಇಲ್ಲ ! ”

ಧನ್ಯ ಧನ್ಯ ! ನನ್ನ ಹಿರಿಯರ ವಿಜಯನಗರ ಸಾಮ್ರಾಜ್ಯನಿಷ್ಠೆ ಧನ್ಯವಾದುದು ! ಆಯಿತು, ತಂದೆಯ **ಕೊನೆಯ** ಇಷ್ಟವನ್ನು ನೆರವೇರಿಸುವುದು ಮಗನ ಕರ್ತವ್ಯ !

ಸಾಳುವ ತಿಮ್ಮರಸು :— ಸರಿ, ಕರ್ತವ್ಯನಿಷ್ಠ ತಂದೆಗೆ ಸರಿಯಾದ ಕರ್ತವ್ಯನಿಷ್ಠ ಮಕ್ಕಳು ನೀವು; ಎಂತಲೇ ನಾನು ಬಿನ್ನವಿಸಿದೆ: ನಾಳೆಯ ಸೀಮೋಲ್ಲಂಘನಕ್ಕೆ ಕರ್ತವ್ಯದ ಗುರಿ ಇದೆ— ಎಂದು.

ಕೃಷ್ಣದೇವರಾಯ:—ಆಗಲಿ ಅಪ್ಪಾಜಿ ! ನಮ್ಮ ನಾಳೆಯ ಸೀಮೋಲ್ಲಂಘನದ ಮುಂದಡಿ, ಉದಯಗಿರಿಯತ್ತ ಸಾಗಬೇಕು. ಉದಯಗಿರಿಯನ್ನು ಪಡೆಯದೆ ಮುಂದಿಟ್ಟ ಹೆಜ್ಜೆಯನ್ನು ಹಿಂದಿಡುವಂತಿಲ್ಲ. ಆ ಗಜಪತಿ ಸಾಮೋಪಾಯಕ್ಕೆ ಒಪ್ಪಿ, ನಮ್ಮ ದುರ್ಗವನ್ನು ನಮಗೆ ಒಪ್ಪಿಸದೆ ಹೋದರೆ, ಕನ್ನಡಿಗರ ಭುಜಬಲದ ಸವಿಯನ್ನು ಚೆನ್ನಾಗಿ ತೋರಿಸಲು ಸನ್ನದ್ಧರಾಗಿಯೇ ಹೋಗೋಣ ! ಮೊದಲು ಉದಯಗಿರಿ, ಆಮೇಲೆ ರಾಯಚೂರು ಮುದಗಲ್ಲು ಕೋಟೆಗಳು ! ಶ್ರೀಪಂಪಾವಿರೂಪಾಕ್ಷ ಈ ಕೃಷ್ಣದೇವರಾಯನೆಂಬ ಗೊಂಬೆಯನ್ನು, ಸಾಮ್ರಾಜ್ಯದ ಪರಿಪೂರ್ಣತೆಗಾಗಿಯೆ ಈ ಸಿಂಹಾಸನದ ಮೇಲೆ ಕುಳ್ಳಿರಿಸಿದ್ದಾನೆ.

ಸಾಳುವ ತಿಮ್ಮರಸು:— ಸಂತೋಷ, ರಾಯರ ದೈವಶ್ರದ್ಧೆ ಅನ್ಯಾದೃಶವಾದದ್ದು. ತಾವಿನ್ನು ವಿಶ್ರಾಂತಿ ತೆಗೆದುಕೊಳ್ಳಬೇಕು. (ಎರಡು ಪ್ರಹರ ರಾತ್ರಿಯಾದ ಸನ್ನೆಭೇರಿ ಮೊಳಗುವುದು.)

ಶಾಂತಿಸೇವಾ ಸದನದ ಸುಂದರ ಪ್ರಕಟನೆ

ವಿಜಯಶ್ರೀ

ಮಿರ್ಜಿ ಅಣ್ಣಾರಾಯರ

ಉತ್ಕೃಷ್ಟ ಸಣ್ಣ ಕತೆಗಳ ಸಂಗ್ರಹ.

ಬೆಲೆ: ಒಂದು ರೂಪಾಯಿ.

ಇದೀಗ ಪ್ರಕಟವಾಗಿದೆ.

ದೊರೆಯುವ ಸ್ಥಳ :

ಶ್ರೀ. ಮಿರ್ಜಿ ಅಣ್ಣಾರಾಯರು,

ಪೋ. ಉಗಾರ ಬುದ್ರುಕ

ಬೆಳಗಾಂವ

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್‌ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

ಅಬ್ಬಾ, ಎರಡು ಪ್ರಹರ ರಾತ್ರಿಯ ಸಂಕೇತಭೇರಿ! ದೊರೆಗಳು ನನಗೆ ಅಪ್ಪಣೆ ಕೊಡಬೇಕು!

* * * *

ನಿರೂಪಕ

ಅದೇ ದಿನ ರಾತ್ರಿ, ಮಹಾರಾಣಿ ತಿರುಮಲಾಂಬೆಯಿನ್ನೂ ಎಚ್ಚತ್ತಿದ್ದು, ಅಂತಃಪುರದಲ್ಲಿ ಪತಿಯ ದಾರಿಯನ್ನು ನೋಡುತ್ತಿರುವಳು. ನರ್ಮಸಖಿಯಾದ ಮುದ್ದಬ್ಬೆ, ರಾಣಿಯ ಬಳಿಯಲ್ಲಿಯೆ ಕುಳಿತಿರುವಳು. ಇಬ್ಬರಲ್ಲಿಯೂ ಸುಖ-ಸಂಕಥಾವಿನೋದದ ಸಂಭಾಷಣೆ ನಡೆದಿದೆ.

ತಿರುಮಲಾಂಬೆ:— ಒಡ್ಡೋಲಗ ಮುಗಿದು ಪ್ರಹರರಾತ್ರಿ ಕಳೆಯಿತು. (ನಗರದ ತಳಾರರ ನಗರರಕ್ಷಣೆಯ ಕೂಗು, ದೂರದಿಂದ ಕೇಳುವುದು: ' ಹೋ ಹೋ ' ' ಜಾಗು, ಜಾಗು! ') ಕೇಳಿದೆಯಾ ಕಾಪಿನಬಂಟರ ಎರಡು ಪ್ರಹರದ ಜಾಗಿನ ಕೂಗು! ಮಹಾರಾಜರು ಇದುವರೆಗೂ ದಯಮಾಡಿಸಲಿಲ್ಲ. ಏನು ರಾಜಕಾರ್ಯದಲ್ಲಿ ತೊಡಗಿರಬಹುದು ?

ಮುದ್ದಬ್ಬೆ:— (ನಗುತ್ತ) ರಾಜಕಾರ್ಯವೇ! ಅಹುದು ರಾಜರು ಮಾಡುವುದೆಲ್ಲ ರಾಜಕಾರ್ಯವೆ! ಅನ್ನಾಜಿ, ಮಹಾರಾಜರಿಗೆ ಹನ್ನೆರಡು ಜನ ಪಟ್ಟರಾಣಿಯರು. ಅವರಲ್ಲಿ ತಮಗಿಂತ ಚೆಲುವೆಯರೂ ಚೆನ್ನೆಯರೂ ಬೇರೆ ಜನರು ಇದ್ದಾರೆ. ಒಂಬತ್ತು ದಿನಗಳಿಂದ ದೀಕ್ಷಾಬದ್ಧರಾದ ಅವರ ಕಣ್ಣುಗಳಿಗೆ, ಆ ಚೆಲುವು-ಚೆನ್ನುಗಳನ್ನೇ ಮೊದಲು ಕಾಣುವ ಹಸಿವೆಯಾಗಿದ್ದೀತು!

ತಿರುಮಲಾಂಬೆ:— ನೀನು ಹುಚ್ಚಿಯಿರುವೆ ಮುದ್ದಾ! ಮಹಾರಾಜರು ಸಂಪ್ರದಾಯವನ್ನು ಮೀರಿ ವರ್ತಿಸುವ ಅಸಂಯಮಿಗಳಲ್ಲ. ಇಂದು, ಹಿರಿಯ ಪಟ್ಟದ ರಾಣಿಯಾದ ನನ್ನ ಮನೆಗೆ ಬಂದು, ನನ್ನಿಂದ ಪೂಜೆ-ಕಾಣಿಕೆಗಳನ್ನು ಮೊದಲು ಸಲ್ಲಿಸಿಕೊಳ್ಳಲೇ ಬೇಕು. ನನ್ನ ದೇವರ ಸತ್ಯವನ್ನು ನಾನು ಅರಿಯೆನೇ? ಏನೋ ಮಹತ್ತ್ವದ ರಾಜಕಾರ್ಯದಲ್ಲಿ ತೊಡಗಿರಬೇಕು.

ಮುದ್ದಬ್ಬೆ:— (ಮೆಲುನಗೆಯೊಂದಿಗೆ) ನಾನು ವಿನೋದಕ್ಕಾಗಿ ಹೀಗಾಡಿದೆ ದೇವಿ! ನಮ್ಮ ಮಹಾರಾಜರ ಗುಣದ ಘನತೆಯನ್ನು ನಾನು ಅರಿಯೆನೆ? ದಂಡನಾಯಕರೂ ದೊರೆಗಳೂ ಸೇರಿ ಮಂತ್ರಾಗಾರದ ಕಡೆಗೆ ಹೋಗಿದ್ದಾರೆ— ಎಂದು, ಆಗಲೆ ಚಾಮರದ ಚೆಂದಬ್ಬೆ ನನಗೆ ಹೇಳಿದಳು

ತಿರುಮಲಾಂಬೆ:— ಅಹುದು, ಅಲ್ಲಿಯೇ ಆಪ್ತಾಲೋಚನೆಯಲ್ಲಿ ಕುಳಿತಿರಬೇಕು. ಅವರು ಬರುವ ದಾರಿಯನ್ನು ನಾವೀಗ ಕಾಯಲೇಬೇಕು. ಮುದ್ದಾ, ಅದುವರೆಗೆ ನೀನೊಂದು ಗೀತವನ್ನು ಹೇಳುತ್ತೀಯಾ ?

ಮುದ್ದಬ್ಬೆ:— ದೇವಿಯವರ ಆಜ್ಞೆ! ' ತೋರೆ ತೋಯಜನೇತ್ರನ! ' ಎಂಬ ಜಾವಡಿಯನ್ನು ಹೇಳಲೆ ?

ತಿರುಮಲಾಂಬೆ:— ನಿನ್ನ ತೋಯಜನೇತ್ರ ತೊಯಿದು ಕರಗಿಹೋದ. ನಿನಗೆ ನಿನ್ನ ಜಾವಡಿಗಳದೇ ಹುಚ್ಚು! ಮೊನ್ನೆ ವಿಜಯವಿಠ್ಠಲನ ದೇವಾಲಯದಲ್ಲಿ, ಶ್ರೀಪುರಂದರದಾಸರು ಹಾಡಿದರಲ್ಲ.... 'ಕೃಷ್ಣಮೂರ್ತಿ ಕಣ್ಣಮುಂದೆ ನಿಂತಿದಂತಿದೆ!' ಅದನ್ನು ಹೇಳು.

ಮುದ್ದಬ್ಬೆ:— ಸರಿಸರಿ! ವಿಜಯನಗರದ ರಸದೇವಿ ರಾಣಿ, ಇನ್ನು ಹರಿದಾಸಿಯೇ ಆಗುವರೇನೋ ಎಂದು ಹೆದರಿಕೆ ನನಗೆ! (ವಿನೋದದ ಧ್ವನಿಯಲ್ಲಿ) ಮಹಾರಾಜರಿಗೆ ನಾನೇ ಬಿನ್ನವಿಸಿಕೊಳ್ಳುತ್ತೇನೆ: ಈ ದಾಸಕೂಟದ ತಿರುಪೆಯವರನ್ನೆಲ್ಲಾ ನಗರದಿಂದ ಓಡಿಸದೆ ಹೋದರೆ, ತಮ್ಮ ಮಹಾರಾಣಿಯವರು ತಮಗೆ ದಕ್ಕಲಿಕ್ಕಿಲ್ಲ—ಎಂದು!

ತಿರುಮಲಾಂಬೆ:— ನಿನ್ನ ವಿನೋದ ಸಾಕೇ! ಹೇಳು, ಆ ಸುಂದರ ಕೀರ್ತನೆಯನ್ನು!

ಮುದ್ದಬ್ಬೆ:— ಆಗಲಿ ತಾಯಿ! ಅಪ್ಪಣೆಯಂತೆ ನಡೆಯಬೇಕಾದುದು. ಓಳಗದವರ ಕರ್ತವ್ಯ! ಕೇಳಿ, ಹಾಡುತ್ತೇನೆ. (ಹಾಡುವಳು).

" ಕೃಷ್ಣಾಮೂರ್ತಿ ಕಣ್ಣಮುಂದೆ, ನಿಂತಿದಂತಿದೆ! ॥ಪ॥
ಮಸ್ತಕದಲಿ ಮಾಣಿಕದ ಕಿರೀಟ!
ಕಸ್ತೂರಿ ತಿಲಕದಿ ಹೊಳೆವ ಲಲಾಟ! ॥
ಸುತ್ತಲು ಕೊಳಲನೂದುವ ಓರೆನೋಟ!
ಕೌಸ್ತುಭ ಎಡಬಲದಲಿ ಅಲೆದಾಟ! ॥ ೧ ॥

(ದೂರದಲ್ಲಿ ಶಂಖವನ್ನು ಊದಿದ ಸಪ್ಪಳನಾಗುವುದು. ಹಾಡು ಅಷ್ಟಕ್ಕೆ ನಿಂತು ಹೋಗುವುದು.)

ಮುದ್ದಬ್ಬೆ:— ಕೇಳಿದಿರಾ ? ಶಂಖವನ್ನೂದಿದ ಸೂಚಕಧ್ವನಿ? ಮಹಾರಾಜರು ದಯಮಾಡಿಸಿದರು ಕಾಣುತ್ತದೆ. ಇನ್ನು ಅವರು ಬಂದಮೇಲೆ, ಇದೇಹಾಡನ್ನು ಮಹಾರಾಣಿಯವರು ಹಾಡಬೇಕು: 'ಕೃಷ್ಣಮೂರ್ತಿ ಕಣ್ಣಮುಂದೆ ನಿಂತಿದಂತಿದೆ! ' ಎಂದು ದೇವಿಯವರೇ! ನನಗೆ ಇಗ ಅರ್ಥವಾಯಿತು: ತಾವು ಈ ಕೀರ್ತನೆಯನ್ನೇ-

ಹಾಡಲು ಬಲವಂತ ಮಾಡಿದ್ದರ ರಹಸ್ಯ! ನಾನು ಹೆದರಿದ್ದೆ, ನಮ್ಮ ಮಹಾರಾಣಿಯವರಿನ್ನು ಚಿತ್ತೂರಿನ ಮೀರಾಬಾಯಿಯಂತೆ, ಎಲ್ಲಿ ವಿಜಯವಿಠ್ಠಲನ ದೇವಾಲಯವನ್ನೇ ಸೇರುವರೋ ಎಂದು (ಗಟ್ಟಿಯಾಗಿ ನಗುವಳು.)

ತಿರುಮಲಾಂಬೆ :—(ಹುಸಿಮುನಿಸಿನ ಧ್ವನಿಯಲ್ಲಿ) ಸಮಯ-ಗೊತ್ತಿಲ್ಲ, ಸಂದರ್ಭಗೊತ್ತಿಲ್ಲ; ಯಾವಾಗಲೂ ನಿನಗೆ ನಗೆಯಾಟ ಬೇಕು! ಇರಲಿ, ಇನ್ನು ನಡೆ! ಮಹಾರಾಜರ ಉಪಚಾರ-ಉಪಾ-ಹಾರಗಳ ಏರ್ಪಾಡೆಲ್ಲ ಸರಿಯಾಗಿ ಆಗಿದೆಯೋ ಇಲ್ಲವೋ ನೋಡಿ ಬಾ!

ಮುದ್ದಬ್ಬೆ :— ನೇರವಾಗಿ ಹೊರಟುಹೋಗೆಂದು ಹೇಳಬಾರ-ದಾಗದೆ? ನನಗೂ ಗೊತ್ತಿದೆ ದೇವಿ! ಮಹಾನವಮಿಯ ಹಬ್ಬದ ಉತ್ಸಾಹದ ಕಾಣಿಕೆಯನ್ನು, ಮಹಾರಾಜರು ತಮಗೆ ರಹಸ್ಯ-ದಲ್ಲಿಯೇ ಸಲ್ಲಿಸಬೇಕು!

ತಿರುಮಲಾಂಬೆ :— ನಿನ್ನ ತುಂಟಾಟ ತಲೆಗೇರಿತು ಮುದ್ದಾ! ಹುಂ, ನಡೆಯಿನ್ನು! (ಮುದ್ದಬ್ಬೆ ಹೊರಟುಹೋಗುವಳು. ಶ್ರೀಕೃಷ್ಣ-ದೇವರಾಯ ಪ್ರವೇಶಿಸುವನು.)

ಕೃಷ್ಣದೇವರಾಯ :—(ವಿನೋದದ ಧ್ವನಿಯಲ್ಲಿ) ಮಹಾ-ರಾಣಿಯವರಿಗೆ ಮಂಗಲವಾಗಲಿ!

ತಿರುಮಲಾಂಬೆ :—(ಆದೇರೀತಿಯಲ್ಲಿ) ಕನ್ನಡ ರಾಜ್ಯ ರಮಾರಮಣರಿಗೆ ಜಯವಾಗಲಿ! (ಇಬ್ಬರೂ ಗಟ್ಟಿಯಾಗಿ ನಗುವರು)

ಕೃಷ್ಣದೇವರಾಯ :— ರಾತ್ರಿಯ ಎರಡು ಪ್ರಹರ ಮೀರಿ-ಹೋಯಿತು.! ಬಹಳ ವೇಳೆ ದಾರಿಕಾಯಬೇಕಾಯಿತಲ್ಲವೇ ದೇವಿ?

ತಿರುಮಲಾಂಬೆ :— ಅಹುದು, ದಾರಿಕಾಯಬೇಕಾಯಿತು. ಇಂದು, ಇದೇನು ಇಷ್ಟು ವಿಲಂಬವಾಯಿತು?

ಕೃಷ್ಣದೇವರಾಯ:— ವಿಲಂಬವೆ? ರಾಜಕಾರ್ಯವೇ ನನ್ನ ಜೀವನದ ಗುರಿಯಲ್ಲವೇ ದೇವಿ! ಅಪ್ಪಾಜಿಯೊಂದಿಗೆ ನಾಳೆಯ ಸೀಮೋಲ್ಲಂಘನದ ವಿಚಾರ ಆಲೋಚನೆ ನಡೆಯಿಸಿದ್ದೆ. ನಾಳೆಯ ದಿನ ವಿಜಯದಶಮಿ! ದಿಗ್ವಿಜಯಕ್ಕೆ ಹೊರಡಬೇಕು!

ತಿರುಮಲಾಂಬೆ:—(ಸೋತದನಿಯಲ್ಲಿ) ವಿಜಯದಶಮಿ. ದಿಗ್ವಿಜಯ! ವಿಜಯದಶಮಿ, ನಿಮಗೆಲ್ಲ ವಿಜಯದಶಮಿ; ನಮಗೆ ಮಾತ್ರ ವಿಯೋಗದ ದಶಮಿ!

ಕೃಷ್ಣದೇವರಾಯ:— ನಿನ್ನ ಬಾಯಿಂದಲೂ ಇಂತಹ ಬೇಸ-ರದ ಮಾತುಗಳೇ ಮಹಾರಾಣಿ? ನಿನ್ನ ಉತ್ಸಾಹವಾಣಿಯ ಸಹಕಾರವಿಲ್ಲದೆ ಹೋಗಿದ್ದರೆ, ಕರ್ನಾಟಕ ಸಾಮ್ರಾಜ್ಯದ ಇಂದಿನ ಈ ಅಭ್ಯುದಯಕ್ಕೆ ಅವಕಾಶವಿರುತ್ತಿದ್ದಿತೆ?

ತಿರುಮಲಾಂಬೆ:— ಹೆಣ್ಣು ಬಯಸುವುದು ಕರ್ನಾಟಕ ಸಾಮ್ರಾಜ್ಯವನ್ನಲ್ಲ, ಹೃದಯಸಾಮ್ರಾಜ್ಯವನ್ನು! ಆ ಸಾಮ್ರಾಜ್ಯ ಯಾವಾಗಲೂ ದೂರವಿರಬಾರದೆಂದು ಹೆಣ್ಣು ಬಯಸುವುದು!

ಕೃಷ್ಣದೇವರಾಯ:— ನೀನು ಸಾಧಾರಣ ಹೆಣ್ಣಲ್ಲ ದೇವಿ! ವಿಜಯಸಾಮ್ರಾಜ್ಞಿ! ನನ್ನ ವೀರದ ವಿಜಯಲಕ್ಷ್ಮಿ!

ತಿರುಮಲಾಂಬೆ:— ಇನ್ನು ಬಣ್ಣನೆ ಸಾಕು! ನಾಳೆಯ ಸೀಮೋಲ್ಲಂಘನವು, ಸಾಂಪ್ರದಾಯಿಕವೋ ಸಾರ್ಥನಾಮಿಯೊ?

ಕೃಷ್ಣದೇವರಾಯ:— ಸುದೈವದಿಂದ ಸಾರ್ಥನಾಮಿಯೇ ಆದೆ!

ತಿರುಮಲಾಂಬೆ.—(ಆಶ್ಚರ್ಯದ ಸ್ವರದಲ್ಲಿ) ಏನು? ಹಾಗಾ-ದರೆ ಈ ಸಲದ ದಿಗ್ವಿಜಯದ ದಿಕ್ಕು ಯಾವುದು? ಪೂರ್ವವೋ ಉತ್ತರವೋ?

ಕೃಷ್ಣದೇವರಾಯ:— ಇವೆರಡರ ಮಧ್ಯಪ್ರದೇಶ! ಉತ್ಕಲದ ಗಜಪತಿಯ ಮೇಲೆ ಸಾಗಿಹೋಗಬೇಕಾಗಿದೆ ಆ ದೇಶವನ್ನೂ ಕರ್ನಾಟಕ ಸಾಮ್ರಾಜ್ಯದ ಛತ್ರದಲ್ಲಿ ತರಬೇಕಾಗಿದೆ!

ತಿರುಮಲಾಂಬೆ:— ಮಹಾರಾಜರ ಮನೋರಥವು ಯಶಸ್ವಿ-ಯಾಗಲಿ! ಆದರೆ, ಪಾಪ! ಆ ಗಜಪತಿ, ಸನ್ನಿಧಿಯ ದರ್ಪವನ್ನು ಎದುರಿಸಬಲ್ಲನೆ? ಯುದ್ಧಮಾಡದೆ ಶರಣಾಗತನಾಗುವನು. ಇನ್ನೊಂದು ರಹಸ್ಯದ ಸಂಗತಿ: ಉತ್ಕಲದ ಗಜಪತಿಯ ಮಗಳು ವಿಜಯಾಂಬಿಕೆಗೆ, ನಮ್ಮ ತಂಗಿಯಾಗಲು ಅಪೇಕ್ಷೆಯಿದೆಯಂತೆ. ಈ ದಿಗ್ವಿಜಯದಲ್ಲಿ, ಆಕೆಯ ಅಪೇಕ್ಷೆಯನ್ನು ಪೂರಯಿಸಿ, ನಮಗೊಬ್ಬ ಹೊಸ ತಂಗಿಯನ್ನು ದೊರೆಕಿಸಿಕೊಂಡು ಬರಬೇಕು!

ಕೃಷ್ಣದೇವರಾಯ:— ನೀವೇನೊ ಅಕ್ಕ ತಂಗಿಯರಾಗಿ ಇರ-ಬಹುದು, ಆದರೆ ನನಗವಳು ಜೀವತೆನ್ನುವ ಹೆಂಡತಿಯಾಗಿ ಬರುವಳು—ಗೊತ್ತಿದೆಯೆ? ಇನ್ನು ಹೆಚ್ಚಿನ ಹೆಂಡಿರಿಗೆ ತಿನ್ನಲಿಕ್ಕೆ ಸಾಲುವಷ್ಟು ಜೀವದಸತ್ತ್ವ ನನ್ನಲ್ಲಿಲ್ಲ.

ತಿರುಮಲಾಂಬೆ:— ಶ್ರೀಕೃಷ್ಣಪರಮಾತ್ಮ, ಹದಿನಾರುಸಾವಿರ ಹೆಣ್ಣುಗಳ ಕೈಹಿಡಿದಿದ್ದನಂತೆ

ಕೃಷ್ಣದೇವರಾಯ:— ಪಾಪ! ಅವೆಲ್ಲ ದ್ವಾಪರಯುಗದ ಹೆಣ್ಣುಗಳು! ಈ ಕಲಿಯುಗದ ಹೆಣ್ಣುಗಳು ಗಂಟುಬಿದ್ದಿದ್ದರೆ, ಅವನ ಪಾಡು ತಿಳಿಯುತ್ತಿತ್ತು. (ನಗುತ್ತ) ತನ್ನ ಪರಮಾತ್ಮ ಪಟ್ಟವನ್ನೂ ಬಿಟ್ಟು, ದ್ವಾರಕೆಯ ಸಮುದ್ರದಲ್ಲಿ ಸಮಾಧಿ ಪಡೆಯುತ್ತಿದ್ದ.

ತಿರುಮಲಾಂಬೆ:— ಒಳ್ಳಿತು— ಎನ್ನಿರಿ! ಪರಮಾತ್ಮನನ್ನು ನಗೆಯಾಡಬಾರದು ಶಾಂತಿಃ ಶಾಂತಿಃ ಶಾಂತಿಃ! ಸರ್ವಾರಿಷ್ಟ ಶಾಂತಿರಸ್ತು! ಇನ್ನು ಹರಟೆ ಸಾಕು! ಹಬ್ಬದ ಶುಭದಿನದ ಮಂಗಲಾರತಿಯನ್ನು ಮಾಡಬೇಕಾಗಿದೆ.... ...

(ಮುದ್ದಬ್ಬೆ ಬಂದು ಹೇಳುವಳು.)

ಮುದ್ದಬ್ಬೆ:— ದೇವಿಯವರೇ, ಮಹಾರಾಜರ ಮಂಗಲೋ-ತ್ಸವದ ಎಲ್ಲ ಸಿದ್ಧತೆಗಳೂ ಆಗಿವೆ ದಯಮಾಡಿಸಬೇಕು.

ತಿರುಮಲಾಂಬೆ:— ಆಗಲಿ ಮುದ್ದಾ ! ಬಂದೇಬಿಟ್ಟೆವು.
(ಹೋಗುವರು)

(ಮಂಗಲಸೂಚಕ ನಾಗಸ್ವರದ ಮಂಜುಲಧ್ವನಿ ಕೇಳಬೇಕು.)

* * * *

ನಿರೂಪಕ

(ನಿರೂಪಕನ ಮಾತಿಗಿಂತ ಮೊದಲು, ಬೆಳಗಿನ ಸೂಚನೆಯನ್ನು ಕೊಡುವಂತಹ ಬೇರೆ ಬೇರೆ ಸಂಕೇತಾತ್ಮಕ ಧ್ವನಿಗಳು ಕೇಳುವಂತೆ ಮಾಡಬೇಕು. ಉದಾಹರಣೆಗಾಗಿ : ಕೋಳಿಗಳ ಕೂಗು, ಹಕ್ಕಿಗಳ ಚಿಲಿಪಿಲಿ, ಉದಯರಾಗದ ಹಾಡುಗಳ ದೂರದ ಧ್ವನಿ ಬೆಳಗಿನ ಶುಭವಾದ್ಯಸ್ವನ.)

ಇಂದು ವಿಜಯದಶಮಿ ! ವಿಜಯನಗರದ ಮನೆ-ಮನೆಗಳಲ್ಲಿಯೂ ಸಂತೋಷ ಸಂಭ್ರಮಗಳ ಸುಗ್ಗಿ. ಸೈನ್ಯದ ಪಾಳೆಯಗಳಲ್ಲೆಲ್ಲ ಸಿಮೋಲ್ಲಂಘನದ ಮೆರವಣಿಯ ಸಿದ್ಧತೆಗಳು ರಭಸದಿಂದ ನಡೆದಿವೆ. ರಥಿಕರು, ಮಾವುತರು, ರಾವುತರು, ಕಾಲಾಳುಗಳು, ಊಳಿಗದವರು, ಆಯುಧಕಾರರು, ಸೈನ್ಯದ ಜೊತೆಯ ಬೇಹಾರಿಗಳು, ಬೇಸಾಯದವರು, ಎಲ್ಲರೂ ವಿಜಯಯಾತ್ರೆಯ ಸನ್ನಾಹದಲ್ಲಿ ನಿರತರಾಗಿರುವರು. ನಗರದ ನರ-ನಾರಿಯರೆಲ್ಲರಲ್ಲಿಯೂ ದಿಗ್ವಿಜಯದ ಮೆರವಣಿಗೆಯನ್ನು ನೋಡುವ ಆತುರ-ಕುತೂಹಲಗಳು ನಾಟ್ಯವಾಡುತ್ತಲಿವೆ. ಸಂದರ್ಶಕರಾಗಿ ಬಂದಿದ್ದ ಪರಸ್ಥಳದ ಜನರು, ಹಸಿವು-ನೀರಡಿಕೆಗಳ ಪರಿವೆಯಿಲ್ಲದೆ, ಮೆರವಣಿಗೆಯನ್ನು ನೋಡಲು ಅನುಕೂಲವೆನಿಸುವ ಎತ್ತರ ಪ್ರದೇಶಗಳನ್ನೇರಿ, ಸ್ಥಳ ಹಿಡಿದು ಕುಳಿತುಕೊಳ್ಳಲು ತೊಡಗಿದ್ದಾರೆ

ನಗರದ ಹೊರವಳಯದಲ್ಲಿ 'ಮಹಾನವಮೀ ದಿಬ್ಬ'ದ ಬಯಲಲ್ಲಿ, ಶಮೀದೈವತದ ಪೂಜೆಗಾಗಿ ಭವ್ಯವಾದ ಮಂಟಪವು ನಿರ್ಮಿತವಾಗಿದೆ. ಮಂಟಪದ ನಿರ್ಮಾಣದ ರೀತಿ ವಿಜಯನಗರದ ಕಲಾಪ್ರಾವೀಣ್ಯವನ್ನು, ನೋಡಿದಷ್ಟು ಸಲವೂ ನವ-ನವೀನವಾಗಿ ಪ್ರಕಟಿಸುವಂತಹದಾಗಿದೆ. ಪಶ್ಚಿಮರಾಷ್ಟ್ರಗಳಿಂದ ಬಂದ ಸಂದರ್ಶಕ ರಾಜಕೀಯ ಜನರಿಗಾಗಿ, ವಿಶೇಷ ಆಸನಗಳನ್ನು ಅಣಿಗೊಳಿಸಲಾಗಿದೆ ಮಧ್ಯ ಮಂಟಪದ ಸುಂದರ ಜಗುಲಿಯ ಮೇಲೆ, ಶಮೀದೈವತವೂ ಭುವನೇಶ್ವರಿಯ ಶಾಂತ ವಿಗ್ರಹವೂ ಸುಪ್ರತಿಷ್ಠಿತವಾಗಿವೆ. ಮೆರವಣಿಗೆಯ ಸಮಯದಲ್ಲಿ ಸುವ್ಯವಸ್ಥೆಯನ್ನು ಕಾಯುವುದಕ್ಕೆಂದು, ಸಮವಸ್ತ್ರಗಳಿಂದ ಸಜ್ಜುಗೊಂಡ ಕಾವಿನ ಬಂಟರು ರಾಜಮಾರ್ಗದ ಎಡೆಯೆಡೆಗಳನ್ನು ಹಿಡಿದು ನಿಂತುಕೊಂಡಿದ್ದಾರೆ. ಹಬ್ಬದ ಉತ್ಸವದ ಕಾರ್ಯಕಲಾಪಗಳಲ್ಲಿ ಗಳಿಗೆಗಳು ನಿಮಿಷಗಳಾಗಿ, ಪ್ರಹರಗಳು ಗಳಿಗೆಗಳಾಗಿ ಸರಿಯಾಗುತ್ತಲಿವೆ.

(ಮೊದಲು ಮೂರು ಪ್ರಹರದ ಜಾಂಗಟೆಯ ಮೂರು ಸಲದ ಸಪ್ಪಳ ಕೇಳಬೇಕು. ಆ ಮೇಲೆ ಮೆರವಣಿಗೆಯ ಸನ್ನಾಹ ಭೇರಿ ವಿವಿಧವಾದ್ಯಗಳ ನಿನಾದದೊಂದಿಗೆ ಮೊಳಗಬೇಕು.)

ನಿರೂಪಕ

ಓ, ಮೂರು ಪ್ರಹರಗಳಾದುವು. ಕೇಳಿ ಕೇಳಿ, ಮೆರವಣಿಗೆಯ ಪ್ರಾರಂಭದ ಸನ್ನಾಹದ ಮೊಳಗು ! ಇನ್ನೇನು ? ಮೆರವಣಿಗೆ ತನ್ನ ನಿಯಮಿತ ಸ್ಥಾನದಿಂದ ಹೊರಡುವುದು.

(ದೂರದಿಂದ ಮೆರವಣಿಗೆಯ ಗದ್ದಲ ಕೇಳಲು ತೊಡಗಬೇಕು ಅವರೊಂದಿಗೆ ದೂರದಿಂದಲೇ ಸ್ತುತಿಪಾಠಕರ ಪರಾಕಿನ ಧ್ವನಿ ಕೇಳಬೇಕು. !)

"ಶ್ರೀಮದ್ರಾಜಾಧಿರಾಜ ರಾಜ ಪರಮೇಶ್ವರಾ !
ಕರ್ಣಾಟಕ ರಾಜ್ಯರಮಾ ಹೃತ್ಕಮಲಭಾಸ್ಕರಾ !
ಹಿಂದೂರಾಯ ಸಮೂಹ ಸುರತ್ರಾಣಾ !
ಗೋ-ದೇವ-ದ್ವಿಜ ಸಂರಕ್ಷಣಧುರೀಣಾ!
ವಿಜಯನಗರ ರತ್ನಸಿಂಹಾಸನಾಧೀಶ
ಶ್ರೀವೀರನರಪತಿಕೃಷ್ಣದೇವರಾಜೇಂದ್ರ
ಭೋ ! ಪರಾಕು !"

(ಆಗಾಗ ರಣವಾದ್ಯಗಳ ಮೊರೆತವೂ ದೂರದಿಂದ ಕೇಳಿಸುತ್ತಿರಬೇಕು. ಅರೆನಿಮಿಷ ತಡೆದು)

ನಿರೂಪಕ

ಏನಿದು **ಜನಸಮೂಹ** ? ಅಖಿಲ ಭಾರತದ—ಇಷ್ಟೇ ಅಲ್ಲ—ಜಗತ್ತಿನ ಪ್ರತಿಯೊಂದು ಭಾಗದ ಜನರೂ ನೆರವಿಯಲ್ಲಿ ನೋಡಲು ಸಿಕ್ಕುವರು. ಅದೋ, ಅಲ್ಲಿ ಎತ್ತರವಾದ ದಿಣ್ಣೆಯ ಮೇಲೆ ಮುಂಬದಿಯಲ್ಲಿಯ ಮೂರುನಾಲ್ಕು ಜನರು ಕಾಣುತ್ತಲಿದ್ದಾರೆ. ನೋಡಿದರೆ, ಅವರು ವಿಜಯನಗರ ರಾಜ್ಯದ ಉತ್ತರದ ಗಡಿಯವರೆಂದು ಕಾಣುವುದು. ಬೆಳಗಾಂವಿ ನಾಡಿನಿಂದ ಬಂದವರು. ಆಶ್ಚರ್ಯ ಮುದ್ರೆಯಿಂದ ಅವರು ಏನೇನೋ ಮಾತನಾಡುತ್ತಲಿದ್ದಾರೆ.

(ಜನಜಂಗುಳಿಯ ಗದ್ದಲ-ಗಜಿಬಿಜಿಗಳ ಹಿನ್ನೆಲೆಯೊಂದಿಗೆ)

ಒಬ್ಬ—:ಅಬಾಬಾಬಾಬಾ ! ಏನ ಜನಾನಪಾ ಇದು ! ಎಲ್ಲೇ ನೋಡಿದರೂ, ಬರೀ ಜಾಗಾ ಖಂಬೂದು ಕಾಣೂದಿಲ್ಲಾ, ಬಯಲೆಲ್ಲಾ ಜನದ ಸಮುದ್ರದ ಹಾಂಗ ಕಾಣತೈತಿ !

ಇನ್ನೊಬ್ಬ:—ಮತ್ತ. ಈ ಬಯಲಾದರೂ ಎಂತಾ **ದೊಡ್ಡ** ಬೈಲೋ ಯಜಮಾನಾ ! ಭೂಮಿ ಎಲ್ಲಾ ಬೈಲಾಗಿ ಇಲ್ಲೇ ಬಿದ್ದುಕೊಂಡ್ಹಾಂಗ ಕಾಣತೈತಿ ! ದೇವರು ಇಲ್ಲಿ ಇನ್ನೊಂದು ಮಹಾಮಾಡ್ಯಾನ ನೋಡಿದ್ಯಾ ? ಈ ಮಾನೋಮೀ ಉಚ್ಛಾಯ ನೋಡಲಿಕ್ಕೆ ಬರೂ ಮಂದಿಗೆ ಅನುವಾಗಬೇಕಂತ, ಈ ಬೈಲಾಗ ಈ ದೊಡ್ಡ ದೊಡ್ಡ ದಿಣ್ಣೀ ಕಟ್ಟಿ ನಿಲ್ಲಿಸ್ಯಾನ !

ಮೂರನೆಯವ:—ಎಲ್ಲಾ ಸಂಪಾಪತೀ ವ್ಯಮಾನಪಾ ! ನಮ್ಮಪ್ಪ ದೊಡ್ಡಾಂವ ! ಅವನ ದಯಾ ಇಲ್ಲದಿದ್ದರ, ನಮ್ಮ ಕನ್ನಡರಾಜ್ಯ ಈ ರೀತಿ ಬೆಳೀತಿತ್ತs ?

ನಾಲ್ಕನೆಯವ:—ಮುದಕರ ಬುದ್ಧಿ ಮಸಳಿಸಿ ಹೋಗತೈತೀ ಅಂತಾರ....... ಅದು ಸುಳ್ಳಲ್ಲ ನೋಡು ! ಅಲ್ಲೋ ಯಜ್ಮಾ !

ನಿನ್ನ ಆ ಪಂಪಾಪತಿ ಕಲ್ಲಿನಗಿಂತಾ ಕಲ್ಲಾಗಿ ಗುಡ್ಯಾಗ ಕುಂತಾನ...... ಪತ್ರೀಪೂಜೀ ಮಾಡಿಸಿಕೊಂತ! ಅಂವೇನ ಮಾಡತಾನು? ನಮ್ಮ ಮಾರಾಯ— ಕೃಷ್ಣದೇವರಾಯನಂತಾ ದೊರೀ ಮೂಡಿಬಂದಾನಂತಽ, ಕರ್ನಾಟಕದಾಗ ಇಂತಾದೆಲ್ಲಾ ಐಸಿರಿ ನಡದsತಿ!

ಒಬ್ಬ:—ಬಿಡಲೇ ಮಳ್ಳ! ಇದೆಲ್ಲಾ ಮನಸ್ಯಾನ ಕೈಯಿಂದ ಆಗೂ ಮಾತs! ದೇವರ ಮಯಿಮಾನs ಇದು!

ನಾಲ್ಕನೆಯವ:— ದೇವರ ಮಯಿಮಾ–ದೇವರ ಮಯಿಮಾ– ಅಂತ ನಡಮನ್ಯಾಗ ಕೂಡೋ ದೊಡ್ಡಪ್ಪಾ, ನೀನು! ಹಗೇದಾಗಿನ ಕಾಳು, ರೊಟ್ಟಿ ಆಗಿ ನಿನ್ನ ಬಾಯಾಗ ಬಂದು ಬೀಳತೈತೇ? ಮನಸ್ಯಾ ಅಂದರ ಏನಂತ ತಿಳಿದೀದಿ ನೀನು? ಮನಸಮಾಡಿದರ, ಅಂವ ಏನು ಬೇಕಾದ್ದs ಮಾಡಬಲ್ಲ!

ಮೂರನೆಯವ:—ಹಾಂಗಾದರ ನೀನೂ ಮನಸು ಮಾಡಿ ಇಂತಾದೊಂದು ರಾಜ್ಯಾ ಕಟ್ಟಿ ತೋರಸಪಾ ಹೌದಂತೀನಿ! ಬರೇ ಮಾತಾಡಿದರ ಆತೇನು? ಮನಸ್ಯಾನ ಕೈಯಿಂದ ಆದೀತೇನು ಹೇಳು! ಒಂದು ಮಳೀ ಬರಿಸ್ಯಾನs, ಒಂದು ಬೆಳೀ ತರಿಸ್ಯಾನs!

ನಾಲ್ಕನೆಯವ:—ಏ ಮುದಕಾ, ಹೀಂಗ ಕೈಲಾಗದ ಮಾತು ಮಾತಾಡಬ್ಯಾಡ! ಗೊತ್ತೈತಿಲ್ಲೋ ಇದ್ಯಾರಣ್ಯರ ಕರಾಮತಿ? ಬರೇ ಮಳೀ ಅಲ್ಲ, ಬಂಗಾರದ ಮಳೀ ಸುರಿಸಿದರಂತ–ಬಂಗಾರದ ಮಳೀ!

(ಮೆರೆವಣಿಗೆಯ ಸಪ್ಪು ಹತ್ತಿರದಲ್ಲಿಯೇ ಕೇಳಲು ತೊಡಗುವುದು. "ಜಯ ಪಂಪಾಪತೇ!" "ಜಯ ಭುವನೇಶ್ವರಿ" "ಕನ್ನಡ ರಾಜ್ಯ ರಮಾ ರಮಣನಿಗೆ ಗೆಲುವಾಗಲಿ!" ಎಂಬ ಸೈನಿಕರ ಜಯಜಯಕಾರದ ಕೂಗುಗಳು ಕೇಳುವುವು.)

ಇನ್ನೊಬ್ಬ:— ಏ, ನಿಮ್ಮ ಜಗಳಾಟಾ ನಿಲ್ಲಸರಿ, ಮೆರೆವಣಿಗೀ ಮುಂದಿನ ತುದಿ ಬಂದು ಮುಟ್ಟೈತು. ನೋಡಲಾಕ ಬಂದೀರಿ, ಕಣ್ತುಂಬs ನೋಡ್ರಿನ್ನ!

(ಸೈನಿಕರು ಸಾಗುವ ಸಪ್ಪಳ ಕೇಳಬೇಕು— ವಾದ್ಯಧ್ವನಿಯೊಂದಿಗೆ)

ಒಬ್ಬ:— ಅಬಾಬಾಬಾಬಾ! ಏಸ ಮಂದಿ ಇಪಾ ಈ ದಂಡಿನ ಸಿಪಾಯ್ರು? ದೇಸದಾಗಿನ ಜನಾ ಎಲ್ಲಾ ದಂಡನs ಮಾಡೀ-ದಾರೋ ಏನ ಅಂತೀನಿ!

ಇನ್ನೊಬ್ಬ:— ಇದೆಂತಾ ಮಾತೋ ತಮ್ಮಣ್ಣಾ! ವಿಜಯನಗರದ ರಾಜರ ಸೈನ್ಯ, ಇಪ್ಪತ್ತು ಸಾವಿರ....ಅಲ್ಲ ಅಲ್ಲ! ಇಪ್ಪತ್ತು ಲಕ್ಷ ಐತೆಂತ ಗೊತ್ತಿಲ್ಲs ನಿನಗ.

ಒಬ್ಬ:— ಇಪ್ಪತ್ತ ಲಕ್ಸ....! ಅಂದರ....ಒಂದು ಲಕ್ಸ ಅಂದರ ನೂರು ಸಾವಿರ ಅಲ್ಲಾ ರಾಯಣ್ಣಾ? ನಾ ಅಂತೀನಿ....ಇಷ್ಟ ಜನಕ್ಕೆಲ್ಲಾ ಕತ್ತಿ, ಕಟಾರಿ, ಬರ್ಚಿ, ಭಲ್ಲೀ, ತುಬಾಕೀ, ಮದ್ದು ಗುಂಡು—ಅಣಿಮಾಡಿ ಕೊಡಬೇಕಾದರ, ಎಷ್ಟು, ಜನಾ ದುಡೀ-ಬೇಕಾದೀತು ಹೇಳು ವರಸಾನ ವರಸ?

ಮೂರನೆಯವ:— ಅದಕs ನಾ ಹೇಳಿದಿನಲ್ಲೋ! ಇವೆಲಾ ಮನಿಶ್ಯಾರ ಕಡಿಂದs ಆಗೂ ಮಾತs ಅಲ್ಲ! ದೇವರ ದಯಾನs ಇದನ್ನೆಲ್ಲಾ ಮಾಡೂದು!

ನಾಲ್ಕನೆಯವ:— ಇರಲಿ ಬಿಡಪಾ, ದೇವರ ಮಗನ! ಅದು ನೋಡ ಅಲ್ಲೆ, ಕುದರೀ ಸ್ವಾರರು ಹ್ಯಾಂಗ ಸಾಲ್ಹಿಡದು ಬರಲಾಕ ಹತ್ತ್ಯಾರ! ನೋಡು! ನೋಡು!

(ಕುದುರೆಗಳ ಖುರಪುಟಗಳ ಧ್ವನಿ ಕೇಳಬೇಕು. ಆಗಾಗ ಕುದುರೆಗಳ ಫುರ್ ಫುರ್ ಎಂಬ ಸಪ್ಪಳ, ಕುದುರೆಗಳ ಕೆನೆತ ಕೇಳಿಸಬೇಕು.)

ಒಬ್ಬ:—ಅಲಲಲಲಲ! ಏನ ಕುದುರೆಪಾ ಇವು! ಒಂದರಕಿಂತಾ ಒಂದು ಅರಬ್ಬೀ ದೇಸದ ಕುದರೀನ ನೋಡು! ಕಿವೀ ಹ್ಯಾಂಗ ನಿಮಿರಿಸ್ಯಾವ! ಹೂಂಕರಿಸತಾವ ಏನು? ಏನ ಹಾಕತಿದ್ದಾರಪ್ಪಾ ಇವಕ್ಕ ಹೊಟ್ಟಿಗೆ! ಹಾಂಗs ಒಂದರಕಿಂತಾ ಒಂದರ ಮೈ ಮಿರೀ-ಮಿರೀ ಮಿಂಚತಾವ!

ಇನ್ನೊಬ್ಬ:—ಕುದರೀ ತಡಿಗೋಳನ್ನ ನೋಡೋ! ಎಲ್ಲಾ ಜರತಾರೀ ರೇಶಿಮೀವs ಅದಾವು. ಅಬ್ಬಾ! ಮುಂದಲೀ ತುರಾ-ಯೇನು....ಕೊಳ್ಯಾಗಿನ ಚವರೀ ಕುಚ್ಚುಏನು....ಏನ ಸಡಗರದಿಂದ ನಡೀತಾವ ನೋಡೋ!

ಮೂರನೆಯವ:—ಮತ್ತ....ಅವ್ರ್ಯಾಲ ಕುಂತಿರೋ ಆ ರಾವು-ತರನ್ನ ನೋಡಬಾರದs? ಜವರ ಅಂಗಿ, ಉಕ್ಕಿನ ಕುಲಾವಿ, ಗರಿ ಗರಿ ತುರಾಯಿ, ಕೈಯಾಗಿನ ಬೆಳ್ಳೀ ಹಿಡಿಕೀ ಬರ್ಚಿ, ಇವೆಲ್ಲಾ ನೋಡಿದವರು ದಂಗ ಆಗಿ ಹೋಗಬೇಕು ನೋಡು! ಎಷ್ಟ ಸಾವಿರ ಇದ್ದಾವಪ್ಪಾ ಈ ಕುದರಿಗೋಳು!

ನಾಲ್ಕನೆಯವ:—ಈ ರಾಜರ ದಂಡಿನಾಗ ಇಪ್ಪತ್ತು ಸಾವಿರ ಕುದರೀ ದಂಡs ಐತಂತ! ಇನ್ನೂ ಹೆಚ್ಚಿಗೆ ತರಿಸಬೇಕಂತ ಹೇಳಿ, ಗೋವಾ ದೇಸಕ್ಕ ಯಾವನೋ ಒಬ್ಬ ಪುರಕನ್ನ ಕಳಿಸ್ಯಾರಂತ.... ಒಂದು ಲಕ್ಸ ವರಾ ಗಂಟು ಕೊಟ್ಟು.

ಒಬ್ಬ:—ಅಬಾಬಾಬಾಬಾ! ಭಾರೀ ಅತಪಾ! ಏಸ ಕುದುರ್ಯೋ ಇವು! ನಮ್ಮ ನಾಡಿನ್ಯಾಗಿನ ಕುರೀಹಿಂಡ ಎಣಿಸಿದರೂ ಇಷ್ಟು ಆಗಲಿಕ್ಕಿಲ್ಲಪಾ! (ಆನೆಗಳ ಗಂಟೆಗಳ ಶಬ್ದ ಕೇಳಲು ತೊಡಗುವುದು.)

ಇನ್ನೊಬ್ಬ:— ಏ, ಆನೀ ಹಿಂಡು ಹ್ಯಾಂಗ ಬರಲಿಕ್ಕೆ ಹತ್ಯಾವ ನೋಡೊ!

ಒಬ್ಬ— ಎಲೆಲೆಲೆಲೆ! ಹೆಂತಾ ಮುದ್ದಾನಿಗೋಳಪಾ ಇವು! ಬೆಟ್ಟದ ಮರಿಗೋಳs ಆಗ್ಯಾವು. ನೋಡಿದ್ಯಾ....ಮರದಂತಾ ಕಿವೀ ಹ್ಯಾಂಗ ಜಾಡಸತಾವ; ಸೊಂಡೀ ಹ್ಯಾಂಗ ತೂಗ್ಯಾಡತಾವ; ಕೊಂಬಿಗೆ ಕಿರುಗತ್ತೀ ಹ್ಯಾಂಗ ಕಟಗೊಂಡಾವ!

ನಾಲ್ಕನೆಯವ:—ಮೈಯಾಗಿನ ರೇಶಿಮೀ ಜೂಲಾ ನೋಡೋ ಯಪ್ಪಾ! ಎಲ್ಲಾ ಕಲಾಬತ್ತಿನ ಹೂವಿನ್ನೂವs! ಬೆನ್ನಮ್ಯಾಗಿನ ತೊಟ್ಟಿಲಗೊಳ ನೋಡ್ರಿ; ಹ್ಯಾಂಗ ತಳಾತಳಾ ಹೊಳೀತಾವ.

ಮೂರನೆಯವ:—ಒಂದೊಂದು ತೊಟ್ಟಿಲದಾಗ ಎಂಟೆಂಟು ಮಂದಿ ಗಜವೀರರು ಕುಂತಾರ! ಏನ ಮೈಕಟ್ಟಪಾ ಅವರದು! ಅವರ ಮುರಿಗೀ ಮುಂಡಾಸಾ, ಬಣ್ಣದ ಡಗಲಿ, ಕೈಯಾಗಿನ ಕಟಾರಿ, ... ಒಂದಽ ಎರಡಽ? ಎಲ್ಲಾ ಗುಂಗ ಹಿಡಿಸಿ ಬಿಡತಾವ!

ಇನ್ನೊಬ್ಬ:—ಎಡಕಽ ಬಲಕಽ ಕಟ್ಟಿದ ಗಂಟೀ ನೋಡ್ರಿ! ನಮ್ಮೂರಿನ ಗದ್ದಿಗಿಬಸವಣ್ಣನ ಗುಡ್ಯಾಗಿನ ಗಂಟೀಗಿಂತಾ ದೊಡ್ಡೂ ಆದಾವು!

ಒಬ್ಬ:— ಈ ಭೂಮಿಾ ಮ್ಯಾಗ ಎಲ್ಲೆಲ್ಲೂ ಕಾಣಲಾರ-ದಂತಾ ನೋಟಪಾ ಇದು!

ಮೂರನೆಯವ:— ಅದಕ್ಕಽಹೇಳೂದಪಾ—ಇದೆಲ್ಲಾ ಪಂಪಾ-ಪತೀ ಪವಾಡಾ ಅಂತ!

ನಾಲ್ಕನೆಯವ:— ಮತ್ತ ಪಂಪಾಪತೀ ಅಂತಾನಲ್ಲೋ ಈ ಮುದುಕಾ!

ಇನ್ನೊಬ್ಬ— ಅಂವ ಅಂದರ ಅನಪೊಲ್ಲನ್ಯಾಕ ಬಿಡೋ! ನಿನ್ನ ಗಂಟೀನ ಹೋಗತೈತಿ? ಮುಸ್ಸೋಡೇ ನೋಡಬಾರದಽ?

(ಪರಾಕಿನ ಶಬ್ದ ಕೇಳುವುದು ‹ ಶ್ರೀಮದ್ರಾಜಾಧಿ ರಾಜ ಪರಮೇ-ಶ್ವರಾ ›! ಇತ್ಯಾದಿ. ಬೋಯಿಗಳ ‹ ಹೋಯ್ ಹಾಯ್ › ಎಂಬ ಶಬ್ದ ಕೇಳುವುದು.)

ಒಬ್ಬ:— ಏ ಏ ಅಲ್ಲಿ ನೋಡ್ರ್ಯೋ, ಮುತ್ತಿನ ಪಲ್ಲಕ್ಕಿ! ಹದಿನಾರು ಜನಾ ಬೋಯಿಗೋಳು ಹೊತ್ತಾರ! ಒಳಗ ನಮ್ಮಪ್ಪ ಕೃಷ್ಣದೇವಮಾರಾಜ ಕುಂತಾನ! ಅಹಾಹಾ! ಅವನ ಮಾರೀ-ಮ್ಯಾಲಿನ ರಾಜಕಳೀ ನೋಡ್ರ್ಯೋ! ಪ್ರತ್ಯಕ್ಷ ಪರಮಾತ್ಮ ಕುಂತಾಂಗ ಆಗೇತಿ! ನಮೋ ನಮೋ ನಾರಾಯಣಾ! ಸಾವಿರ ವರ್ಸ ಬದುಕಿ ಬಾಳು ನಮ್ಮಪ್ಪಾ!

(‹ಕನ್ನಡ ರಾಜ್ಯರಮಾರಮಣನಿಗೆ ಜಯವಾಗಲಿ!› ಎಂಬ ಗುಂಪಿನ ಕೂಗು ಕೇಳುವುದು.)

ನಾಲ್ಕನೆಯವ:— ಮಹಾರಾಜರ ಎಡಕ್ಕಿರೂದು ಪಟ್ಟದ ಕುದರಿ! ಬಲಕ್ಕ ಇರೂದು ಪಟ್ಟದ ಆನಿ! ಹಿಂದಽ ಮುಂದಽ ಸಾಲಾಗಿ ಕುದರೀಮ್ಯಾಲ ಕುಂತುಕೊಂಡು ಹೊಂಟಾರಲ್ಲಾ, ಅವರೆಲ್ಲಾ ಬೆಂಗಾಪಿನ ಬಂಟರು!

ಒಬ್ಬ:— ಅವರ ಕೈಯಾಗಿನ ಬಿಚ್ಚುಗತ್ತೀ ನೋಡ್ರ್ಯೋ! ಸೂರ್ಯಾನ ಬಿಸಿಲಿಗೆ ಕೋಲಮಿಂಚಿನ್ಹಾಂಗ ಹ್ಯಾಂಗ ಕಣ್ಣು ಕುಕ್ಕಸತಾವ!

(‹ಜಯ ಭುವನೇಶ್ವರೀ!› ‹ಜಯ ಪರಮೇಶ್ವರೀ› ಎಂಬ ಜಯ-ಜಯಕಾರ ಕೇಳುವುದು.)

ನಾಲ್ಕನೆಯವ:— ಅದು ನೋಡ್ರಿ! ದೇವೀ ಪಲ್ಲಕ್ಕಿ! ನಂತಾಯೀ, ಭುವನೇಶ್ವರೀ! ನಮ್ಮ ಮಾರಾಜಗ ಇನ್ನೂ ನೂರು ವರಸ ಆಯುಸ್ಸ ಕೊಡು ದೇವಿ!

ನಿರೂಪಕ

ಮೂರು ಮೈಲು ಉದ್ದದ ಉತ್ಸವದ ಮೆರೆವಣಿಗೆ ಮುಂದು-ವರಿಯಿತು ಎಲ್ಲೆಲ್ಲಿಯೂ ಉತ್ಸಾಹದ ಕಡಲು ಉಕ್ಕೇರಿದೆ. ಜನರು—ತಾವಿದ್ದುದು ನರಲೋಕವೆಂಬುದನ್ನೇ ಮರೆತುಬಿಟ್ಟದ್ದಾರೆ. ಅಲ್ಲಲ್ಲಿ ಕುಳಿತಿದ್ದ ಜನರೆಲ್ಲ ಎದ್ದು ಹೊರಟು, ಬನ್ನಿಯ ಮಂಟಪದ ಕಡೆಗೆ ಸಾಗುತ್ತಲಿದ್ದಾರೆ. ವಿಜಯನಗರದ ವೈಭವ-ವೀರಗಳೆಲ್ಲ ಇಂದು ಬನ್ನಿಯ ಮಂಟಪದ ಬಯಲಲ್ಲಿ ಒಗ್ಗೂಡಿ ನಿಂತಿದೆ. ಅಲ್ಲಲ್ಲಿ ಗಾಯಕಿಯರ ಗಾಯನ ನಡೆದಿದೆ. ನರ್ತಕಿಯರ ನರ್ತನ ನಡೆದಿದೆ ಬಹುರೂಪಿಗಳ ವೇಷಗಾರಿಕೆ ನಡೆದಿದೆ, ನೋಡಿದಲ್ಲೆಲ್ಲ ನಗೆಗೂಡಿದ ಮೊಗಗಳು. ಸಂತೋಷಸೂಸುವ ಕಣ್ಣುಗಳು.

(ಗಂಟೆ, ಜಾಗಟೆ ಭೇರಿಗಳು ಮೊಳಗುವವು. ಶಂಖದ ಕೂಗು ಕೇಳು-ವುದು.)

ಓ! ದೇವಿಯು ದಂಡಿಗೆ ಮಂಟಪವನ್ನು ತಲ್ಪಿತು. ಮಹಾ-ರಾಜರು ಪುಷ್ಪಕದಿಂದ ಇಳಿದು, ವಿಜಯದಶಮಿಯ ಶಮೀಪೂಜೆಗೆ ಸಿದ್ಧರಾಗಿದ್ದಾರೆ. ಬ್ರಾಹ್ಮಣವೃಂದ ಮಂತ್ರವನ್ನು ಹೇಳುತ್ತಲಿವೆ.
(ಪೂಜಾವಾದ್ಯಗಳ ಸಪ್ಪಳದೊಂದಿಗೆ ಬ್ರಾಹ್ಮಣರ ಮಂತ್ರಃ)

“ಶಮೀ ಶಮಯತೇ ಪಾಪಂ ಶಮೀ ಶತ್ರುವಿನಾಶಿನೀ
ಅರ್ಜುನಸ್ಯ ಧನುರ್ಧಾರೀ ರಾಮಸ್ಯ ಪ್ರಿಯದರ್ಶಿನೀ!
ಆದಿರಾಜಾ ಮಹಾರಾಜಾ ವನರಾಜಾ ವನಸ್ಪತೇ!
ಇಷ್ಟದರ್ಶನಮಿಷ್ಟಾರ್ಥಂ ಕಾರ್ಯಸಿದ್ಧಿಫಲಂ ಲಭೇತ್”

(ಬಹುಜನರ ಕೂಗು: ‹ಜಯ ಪಂಪಾಪತೇ! ಜಯ ಭುವನೇಶ್ವರೀ! ಜಯ ಕರ್ನಾಟಕ ಸಾಮ್ರಾಜ್ಯ ಲಕ್ಷ್ಮೀ!›)

ಒಬ್ಬ:—ಹುಟ್ಟಿ ಬಂದದ್ದಕ್ಕ ಇಂದ ಸಾರ್ಥಕ ಆದ್ಹಾಂಗ ಆತು ನೋಡು! ವಿಜಯನಗರದ ದಸರೀ ಹಬ್ಬದ ಜಾತ್ರೀ ಕಣ್ಣಾರೀ ಕಂಡು. ಜೀವಕ್ಕ ಆನಂದ ಆತ ಏನಪಾ!

ನಾಲ್ಕನೆಯವ:—ಆ ಕಡೆ ನಡೀರೆಪಾ, ಅಲ್ಲೆ ಸೈನ್ಯದ ಕವಾ-ಯತು ನಡೀತಾವಂತ! ಆನೀ-ಕುದರೀ ಏರಾಟಾ ಓಡಾಟಾ ನಡೀ-ತಾವಂತ! ಹುಸಿಗಾಳಗ, ಜಟ್ಟಿಕಾಳಗ ನಡೀತಾವಂತ! ಅದನ್ನಷ್ಟ ನೋಡಿಬರೋಣ ನಡೀರಿ!

ಮೂರನೆಯವ:—ನಾಳಿನ ದಿನಾನಽ ಸೈನ್ಯ, ಗಜಪತೀ ರಾಜ್ಯದ ಮ್ಯಾಗ ದಾಳೀ ಮಾಡಲಿಕ್ಕೆಹೋಗೂದಂತ; ಕೇಳಿಲ್ಲೇನು?

ಒಬ್ಬ— ಇತ್ತಽ ಬರಲಿಕ್ಕೆ ಹತ್ತೈತಲ್ಲೋ ಒಂದು ದಂಡಿನ ತುಕಡಿ! ಅವರು ಹೆಜ್ಜೀ ಚೆಲ್ಲಿಕೋತ, ಏನೋ ಹಾಡಿಕೋತಽ ಬರಲಿಕ್ಕೆ ಹತ್ಯಾರ! ಇಲ್ಲಿ ಕೇಳ್ರಿ, ಅವರ ಹಾಡು ನಿಚ್ಚಳಾಗಿ ಕೇಳಿಸತೈತಿ!

(ಸೈನಿಕರ ಗುಂಪಿನ ಹೆಜ್ಜೆಯ ಹಾಡು)

“ಜಯ ಭವಾನೀ ಜಯ ಮೃಡಾನೀ
ಜಯವು ಜಯ ಭುವನೇಶ್ವರೀ!
ಭಯನಿವಾರಿಣಿ ಭವವಿದಾರಿಣಿ
ಜಯತು ಜಯ ಜಗದೀಶ್ವರೀ!”

ಶಾಬ್ದಿಕ ನಾಣ್ಯಗಳು

(ಜಿಜ್ಞಾಸಾತ್ಮಕ ಪ್ರಬಂಧ)

ಶ್ರೀ. ಪಾಟೀಲ ಹನುಮಂತರಾಯರು
ಎಂ. ಎ., ಬಿ. ಕಾಮ್. ನ್ಯೂ ದಿಲ್ಲಿ.

★

ನಮ್ಮ ಆಡುನುಡಿಯಲ್ಲಿ, ಭಾರತದ ಬೇರೆಬೇರೆ ಭಾಗದ ಭಾಷೆಯ ಶಬ್ದಗಳು ಅನೇಕ ವಿಕಾರಗಳನ್ನು ಪಡೆದು ಬಳಕೆಯಾಗುತ್ತಲಿವೆ. ಆ ಶಬ್ದಗಳ ಮೂಲ-ಸ್ವರೂಪ ತಿಳಿದುಕೊಳ್ಳುವುದು ಒಂದು ಅಗತ್ಯದ ಕಾರ್ಯವಾಗಿದೆಯಲ್ಲದೆ ಸಂತೋಷದ ಕಾರ್ಯವೂ ಆಗಿದೆ.

★

ಅರ್ಥಶಾಸ್ತ್ರದಲ್ಲಿ ಗ್ರೇಶಾಮನ ಸಿದ್ಧಾಂತ (Grecham's Law) ಎಂಬ ಒಂದು ಸಿದ್ಧಾಂತವಿದೆ. ಅದರ ಮುಖ್ಯ ವಿಚಾರವು, ಖೊಟ್ಟಿ ನಾಣ್ಯಗಳು ಖರೇ ನಾಣ್ಯಗಳನ್ನು ಚಲನದಿಂದ ಹೊರಗೆ ತಳ್ಳುತ್ತವೆ—ಎಂಬುದಾಗಿದೆ. ಈಗಂತೂ ನಮ್ಮ ನಾಡಿನಲ್ಲಿ ಸಾಮಾನ್ಯವಾಗಿ ಮತ್ತು ಪ್ರಪಂಚದಲ್ಲಿಯೇ ಹೆಚ್ಚಾಗಿ, ನಾಣ್ಯಗಳ ಸ್ಥಿತಿಯೇ ಬೇರೆಯಾಗಿದೆ; ಅವುಗಳ ಉಪಯೋಗವೂ ಸಂಕುಚಿತವಾಗಿದೆ. ಇದಕ್ಕೆ ದೇಶದೊಳಗಿನ ಆರ್ಥಿಕಪರಿಸ್ಥಿತಿಯೂ, ಜನರ ಮನೋವೃತ್ತಿಯೂ ಎಷ್ಟೇ ಕಾರಣವಾಗಿರಲಿ, ಇದ್ದುದರಲ್ಲಿಯೇ ನಮ್ಮ ದೇಶದಲ್ಲಿ ಇನ್ನೂ ನಾಣ್ಯಗಳ ಚಲನ ತಕ್ಕಮಟ್ಟಿಗೆ ಇದೆಯೆಂದೇ ಹೇಳಬಹುದು. ಅಂತೆಯೇ ಗ್ರೇಶಾಮನ ಸಿದ್ಧಾಂತವೂ ಅಷ್ಟು ಮಟ್ಟಿಗೆ ನಮ್ಮ ಚಲನವಲನಕ್ಕೂ ಅನ್ವಯಿಸುವುದು—ಎಂದೆನ್ನಬಹುದು. ಹೊಸ ನಾಣ್ಯವು ಆದೇ ಪ್ರಚಾರದಲ್ಲಿ ಬಂದಾಗ, ಹೇಗೆ ಜನರು ಅದನ್ನು ತಮ್ಮ ಒಡೆತನದಲ್ಲಿ ಆದಷ್ಟು ಹೆಚ್ಚು ಕಾಲ ಇಟ್ಟುಕೊಳ್ಳಲಿಕ್ಕೆ ಪ್ರಯತ್ನಿಸುತ್ತಾರೆ—ಎಂಬುದನ್ನು ಸಹಜವಾಗಿಯೆ ನಮ್ಮ ಸಮಾಜದಲ್ಲಿ ಕಾಣಬಹುದಾಗಿದೆ. ಆದರಂತೆಯೆ ಒಂದು 'ಖೊಟ್ಟಿ' ಅಥವಾ ಸವಕಳಿಯಾದ ನಾಣ್ಯವು ಯಾರ ಬಳಿಯಲ್ಲಾದರೂ ತಪ್ಪಿ ಬಂದರೆ, ಅದನ್ನು ಸಾಧ್ಯವಾದಷ್ಟು ಶೀಘ್ರವಾಗಿಯೂ, ತೋರಬಹುದಾದ ಜಾಣ್ಮೆಯಿಂದಲೂ, ಮುಂದೆ ಸಾಗಿಸಲಿಕ್ಕೆ ಹೇಗೆ ಆತುರರಾಗಿರುವರು—ಎಂಬುದನ್ನೂ ಆಗಾಗ ನೋಡುತ್ತಿರಲಿಕ್ಕೆ ಸಾಕು.

ಇದೇ ಸಿದ್ಧಾಂತವನ್ನು ಶಬ್ದಗಳಿಗೂ ಹೋಲಿಸಿ, ಹಚ್ಚಿ ನೋಡಿದರೆ ಹೇಗೆ ಎಂಬುದೊಂದು ವಿಚಾರ ಬಂದುದರಿಂದ ಅದರ ಪ್ರಯೋಗಕ್ಕಾಗಿ ನಾನು ಸಲಕರಣೆಗಳನ್ನು ಸಂಗ್ರಹಿಸತೊಡಗಿದೆ.

ಭಾರತವು ಸ್ವತಂತ್ರವಾಗಿ ನಾಲ್ಕು ವರ್ಷಗಳಾದುವು. ಬ್ರಿಟಿಶರ ಅನುಗ್ರಹದಿಂದ ಇಲ್ಲಿ ಒಂದು ಆಡಳಿತವು ಶಾಂತಿಯುತವಾಗಿ ಪ್ರಸ್ಥಾಪಿತವಾಗಿ ನೂರಾರು ವರ್ಷಗಳಾಗಿರುವುವಷ್ಟೆ? ಅದರ ಪರಿಣಾಮವಾಗಿ ಸಾಧಾರಣತಃ ಇಡಿಯ ದೇಶಕ್ಕೆ ಒಂದೇ ನಾಣ್ಯ-ಪದ್ಧತಿಯು ಅಸ್ತಿತ್ವದಲ್ಲಿರುವುದು. ಒಂದು ಹೈದರಾಬಾದು, ಒಂದು ಗ್ವಾಲಿಯರು ಇಂತಹ ಪ್ರದೇಶಗಳ ಮಾತು ಹೋಗಲಿ; ಅದರಂತೆಯೇ ಗೋವೆ, ಪಾಂಡಿಚೇರಿಗಳಂತಹ ಪರಪ್ರದೇಶಗಳ ವಿಷಯವನ್ನು ನಾವು ತಾತ್ಪೂರ್ತಿಕವಾಗಿ ಬಿಟ್ಟುಬಿಡೋಣ. ಸಾಮಾನ್ಯವಾಗಿ ಭಾರತದಲ್ಲೆಲ್ಲ ಒಂದೇ ನಾಣ್ಯಪದ್ಧತಿಯು ರೂಢಿಯಲ್ಲಿದ್ದು ಬೇರೆಯ ನಾಣ್ಯಗಳಂತೂ ನೋಡಲಿಕ್ಕೆ ಇಲ್ಲವೆ ನಡೆಯಿಸಲಿಕ್ಕೆ ದೊರೆಯಲಾರದಂತಿರುವುವು. ಇದು ನಿಜ. ಆದರೆ ಭಾರತದಲ್ಲಿ ಅಸಂಖ್ಯ ಭಾಷೆಗಳಿದ್ದು ಅವುಗಳೊಳಗಿನ ಶಬ್ದಗಳು ಒಂದರಿಂದ ಮತ್ತೊಂದಕ್ಕೆ ಹರಿದು ಬರುವುದು ಸಾಹಿತ್ಯಪ್ರಪಂಚದಲ್ಲಿ ಸಹಜವಾದ ವಿಷಯ. ಆರ್ಥಿಕಪ್ರಪಂಚದಲ್ಲಿ ರಾಷ್ಟ್ರ, ಆಡಳಿತ ಮುಂತಾದ ಕಾರಣಗಳಿಂದ ನಾಣ್ಯಗಳ ಪ್ರವಾಹಕ್ಕೆ ದೇಶದೇಶಗಳೊಳಗೆ ನಿರ್ಬಂಧವನ್ನು ಹಾಕಿದರೆ, ಸಾಹಿತ್ಯಪ್ರಪಂಚದಲ್ಲಿ—ಸರ್ವತಂತ್ರ ಸ್ವತಂತ್ರವಾದ ಸಾಹಿತ್ಯ ಪ್ರಪಂಚದಲ್ಲಿ—ಇಂತಹ ಕಟ್ಟುಗಳನ್ನು ಕಾಣಬಹುದೆ? ಅಂತೆಯೆ ವಿದೇಶಪ್ರಯಾಣವನ್ನು ಕೈಕೊಂಡ ವ್ಯಕ್ತಿಯು, ಬೇರೆ ಬೇರೆ ರಾಷ್ಟ್ರಗಳ ನಾಣ್ಯಗಳನ್ನು ಕಂಡು ಕೌತುಕಪಟ್ಟು, ಮನೋರಂಜನೆಗಾಗಿಯೋ ಮತ್ತಾವ ಕಾರಣಕ್ಕಾಗಿಯೋ ಅಥವಾ ಯಾವ ಕಾರಣವೂ ಇಲ್ಲದೆಯೋ ಹಲಕೆಲವು ನಾಣ್ಯಗಳನ್ನು ಸಂಗಡ ಇಟ್ಟುಕೊಂಡು ಬರುವಂತೆ, ಹೊರನಾಡಿನಲ್ಲಿ—ಎಂದರೆ ಭಾರತದಲ್ಲಿಯೆ ಕನ್ನಡನಾಡನ್ನು ಬಿಟ್ಟು ಬೇರೆ ಪ್ರಾಂತಗಳಲ್ಲಿ—ಪ್ರವಾಸಮಾಡುವ ಇಲ್ಲವೆ ವಾಸಮಾಡುವ ಕನ್ನಡಿಗರಿಗೂ, ಅನೇಕ ಚಿತ್ರವಿಚಿತ್ರವಾದ ಶಾಬ್ದಿಕ ನಾಣ್ಯಗಳು ದೊರೆಯುವುವು; ಕೆಲವು ಸಲ ತಿಳಿಯದೆಯೊ, ಅನಿವಾರ್ಯವಾಗಿಯೋ, ಅವರ ಮಾತಿನಲ್ಲಿಯೂ ಸಮಾವೇಶಹೊಂದಿಕೊಳ್ಳುವುವು.

ಆದರಂತೆಯೆ ಕನ್ನಡನಾಡಿನ ಶಬ್ದಗಳಲ್ಲಿಯೂ ಹಲಕೆಲವು ಪರಭಾಷೆಗಳ ಶಬ್ದಗಳು ಸೇರಿಕೊಂಡಿದ್ದುದೂ ನಮಗೆ ತಿಳಿದ ಸಂಗತಿಯಾಗಿದೆ. ಪರಪ್ರದೇಶ ಮತ್ತು ಪರದೇಶಗಳಿಂದ ನಮ್ಮ ನಾಡಿಗೆ ಬಂದ ಇಲ್ಲವೆ ಇಲ್ಲಿ ಬೀಡುಬಿಟ್ಟ ಅನೇಕ ಪರಭಾಷೀಯ ಜನರ ಸಂಪರ್ಕದಿಂದ, ತರತರದ ಬಳಕೆಯ ಇಲ್ಲವೆ ವಿಶಿಷ್ಟ ಶಬ್ದಗಳು ನಮ್ಮ ರೂಢಿಯಲ್ಲಿ ಬಂದಿವೆ. ಅವುಗಳಲ್ಲಿ ಕೆಲವನ್ನು ಕುರಿತು ನಾಲ್ಕು ಮಾತುಗಳನ್ನು ಬರೆಯುವ ವಿಚಾರವಿದೆ. ಹೊರನಾಡಿನಲ್ಲಿ ಬಂದ ಮೇಲೆ, ನಮ್ಮ ನಾಡಿನಲ್ಲಿ ಬಳಕೆಯಲ್ಲಿದ್ದ ಅಂತಹ ಶಾಬ್ದಿಕ ನಾಣ್ಯಗಳ ಪರಿಚಯ ಮತ್ತು ಪ್ರಚಾರಗಳ ಬಗ್ಗೆ ಅನೇಕ ಮೋಜಿನ

ZANDU

PROTOCASEN

Whole Casein Hydrolysate

PALATABLE AND POWERFUL NUTRITIVE TONIC FOR ORAL ADMINISTRATION IN ALL RUNDOWN CONDITIONS OF HEALTH

Biological Laboratory

The Zandu Pharmaceutical Works, Ltd.
BOMBAY 14.

Sole Agents:—

M/s. Pranlal and Sons
Chemists, Druggists
Station Road. HUBLI

(H. O. Bangalore City)

ಸಂಗತಿಗಳು ತಿಳಿದು ಬರುವುವು. ಅವುಗಳೊಳಗಿನ ಕೆಲವನ್ನು ಮಾತ್ರ ಇಲ್ಲಿ ಕಾಣಿಸುತ್ತೇನೆ.

ಮುಂಬಯಿಯಲ್ಲಿ ಇಲ್ಲವೆ ಮದ್ರಾಸಿನಲ್ಲಿದ್ದಾಗ, ಹಲಕೆಲವು ಆ ಪ್ರದೇಶಗಳ ಶಬ್ದಗಳು ಹೇಗೆ ಆ ಗಡಿಯಲ್ಲಿಂದ ನಮ್ಮ ನಾಡಿನ ಭಾಗಗಳಲ್ಲಿ ಪ್ರವೇಶಹೊಂದಿ ಚಲನದಲ್ಲಿ ಬಂದಿರುವುವು ಎಂಬುದು ಗೊತ್ತಾಗುವುದು. ಆದರೆ ಅದು ಕೇವಲ ಅಲ್ಪಪ್ರಮಾಣದಲ್ಲಿ, ಚಿಕ್ಕ-ಪ್ರದೇಶದಲ್ಲಿ ಮತ್ತು ಅಲ್ಪಾವಧಿಗೆ ಸಂಬಂಧಿಸಿದುದು ಎಂದು ಹೇಳಬಹುದು. ವಿಶೇಷವಾಗಿ ಭಾರತದೊಳಗಿನ ಆಡಳಿತ, ಸಮಾಜ-ರಚನೆ, ಅರ್ಥವ್ಯವಸ್ಥೆ, ವೈದ್ಯಕವೇ ಮೊದಲಾದ ವಿಭಾಗಗಳಲ್ಲಿ ಹೆಚ್ಚಾಗಿ ಫಾರಸೀ ಮತ್ತು ಅರಬ್ಬೀ ಶಬ್ದಗಳು ಸೇರಿಕೊಂಡು, ಕೆಲವು ಕಡೆಗಳಲ್ಲಿ ತೀರ ಬದಲಾಗಿಹೋಗಿರುವುದನ್ನೂ, ಇನ್ನು ಬೇರೆ ಕಡೆ ವಿಪರೀತವಾದ ಅರ್ಥವನ್ನು ಪಡೆದಿರುವುದನ್ನೂ ಕಂಡು-ಕೊಳ್ಳಬಹುದಾಗಿದೆ. ಅಂತೆಯೆ ಉತ್ತರಭಾರತದಲ್ಲಿ ಬಂದು ನೆಲ-ಸಿದ ಇಲ್ಲವೆ "ಕಾಲಿ" ಸಿದ (ಓಡಾಡಿದ) ಕನ್ನಡಿಗರಿಗೆ, ಇಂತಹ ಕೆಲ ವಿಚಿತ್ರ ಅನುಭವಗಳು ತೀರ ಅನಾಯಾಸವಾಗಿ ಬರುವುವು. ಹೈದರಾಬಾದು ನಿಜಾಮರ ಆಧಿಪತ್ಯಕ್ಕಾಗಿ, ಮತ್ತು ಮೈಸೂರು ಹೈದರ ಅಲ್ಲಿ ಟೀಪುಸುಲ್ತಾನ್ ಅವರ ಪ್ರಭಾವದಿಂದ, ಅಂತಹ ಅನೇಕ ಶಬ್ದಗಳನ್ನೂ ಅಣಿಮಾಡಿಕೊಂಡಿದ್ದು, ಉತ್ತರಭಾರತದ ಸಂಪರ್ಕ ಈಗ ಅವುಗಳಿಗೆ ಕಡಿಮೆಯಾದ ಕಾರಣ ಆ ಶಬ್ದಗಳನ್ನು ಅರಿಯದೆಯೊ ಅನಿವಾರ್ಯವಾಗಿಯೊ ಬಳಸುತ್ತ ಬಂದಿವೆ. ಇತ್ತ ಅಂತಹ ಅನುಕರಣವನ್ನೆ ಮಾಡಿದ ಪೇಶ್ವೆಯವರು ಮತ್ತು ವಿಜಯಪುರದ ಆದಿಲಶಾಹಿಗಳ ಮಾತು ಬೇರೆ. ಅಲ್ಲಿ ಕೆಲವು ವಿಶಿಷ್ಟಸ್ಥಾನ-ಗಳಲ್ಲಿ ಮತ್ತು ವಿಚಿತ್ರಪರಿಸ್ಥಿತಿಯಲ್ಲಿ ಆ ಬಗೆಯ ಶಬ್ದಗಳು ಪ್ರಚಲಿತವಿದ್ದರೂ, ಅಲ್ಲಿ ಹೆಚ್ಚು ರೂಢವಾದ ಇಲ್ಲವೆ ಸಮೀಪವಾಗಬಹು-ದಾದ ಶಬ್ದಗಳನ್ನು ಹುಡುಕಿ ತೆಗೆದು, ಚಲನದಲ್ಲಿ ತರುವ ಜಿಜ್ಞಾಸೆ ಮತ್ತು ಪ್ರಯತ್ನಗಳು ಕಾಣುತ್ತವೆ.

ಗ್ವಾಲಿಯರಿನ ಹೆಸರನ್ನು ಎಲ್ಲರೂ ಕೇಳಿರಬಹುದು. ಅದು ಸುಪ್ರಸಿದ್ಧ ಭಾರತೀಯ ಸಂಗೀತಗಾರನಾದ ತಾನಸೇನನ ಜನ್ಮ-ಸ್ಥಳ. ಈಗಾದರೂ ಅದು ಸಂಗೀತದ ಬಗ್ಗೆ ಕೇಂದ್ರಸ್ಥಾನಗಳಲ್ಲಿ ಒಂದಾಗಿದೆ. ನಾನು ಹೋದಾಗ, ಒಮ್ಮೆ ಹಾಗೆಯೆ ಸಂಗೀತ—ತಾನಸೇನ ಮುಂತಾದ ವಿಷಯಗಳ ಬಗ್ಗೆ ಮಾತನಾಡುತ್ತಿದ್ದಾಗ, ನನ್ನ ಜೊತೆಯಲ್ಲಿದ್ದವರು "ತಂಬೂರಿ" ಎಂಬ ಶಬ್ದವನ್ನು "ತಾಂಬೋರಾ" ಎಂದೇನೋ ಉಚ್ಚರಿಸುತ್ತಿರುವಂತೆ ಕಂಡಿತು. ಆ ಮೊದಲಿನ ಅಕ್ಷರ "ತ" ಮತ್ತು "ತಾ" ಇವೆರಡರ ನಡುವೆ ನುಡಿಯಲ್ಪಡುತ್ತಿತ್ತು. ಮಹಾರಾಷ್ಟ್ರದಲ್ಲಿ ತಂಬೂರಿಗೆ 'ತಂಬೋರಾ' ಎನ್ನುತ್ತಿದ್ದುದನ್ನು ಅರಿತ ನಾನು, ಅದರ ವೈಶಿಷ್ಟ್ಯ ಮತ್ತು ಉತ್ಪತ್ತಿಗಳನ್ನು ತಿಳಿದಿರಲಿಲ್ಲ. ಅದೊಂದು ಮರಾಠಿಯಲ್ಲಿಯ ವಿಚಿತ್ರ ಶಬ್ದರಚನೆಯ ದೃಷ್ಟಾಂತ— ಎಂದುಕೊಂಡಿದ್ದೆ. ಆದರೆ ಮುಂದೆ ವಿಚಾರಮಾಡಲಾಗಿ, ಈ ಶಬ್ದವು 'ತಾನ' ಮತ್ತು 'ಪೂರಾ' ಇವುಗಳಿಂದ ಕೂಡಿದುದಾಗಿಯೆಂಬುದು ತಿಳಿದು, ತುಂಬಾ ಕೌತುಕ-ವೆನಿಸಿತು. ಅದರಂತಹದೆ ಆದ ಇನ್ನೊಂದು ಶಬ್ದವೆಂದರೆ, "ಬುನಾದಿ." ಎಷ್ಟೋ ದಿನಗಳ ವರೆಗೆ ಬುನಾದಿಯ ಕೊನೆಗೆ ಇರುವ ಆದಿ ಶಬ್ದಭಾಗದಿಂದ, ನಾನು ಅದಕ್ಕೆ ಮೂಲ ಎಂಬ ಅರ್ಥವು ಪ್ರಾಪ್ತವಾಗಿರಬಹುದು—ಎಂದುಕೊಂಡಿದ್ದೆ. ಆದರೆ ಇಲ್ಲಿ ಹಿಂದೀ ಜನರೊಡನೆ ಮಾತನಾಡುವಾಗ, ಅವರು ಉಪಯೋಗಿ-ಸುವ "ಬೂನಿಯಾದ್" ಎಂಬ ಪದವು ನನಗೆ ಮೂಲನಾಣ್ಯದ ಪರಿಚಯವನ್ನು ಮಾಡಿಕೊಟ್ಟಿತು. ಬುನಾದಿ ಶಬ್ದದ 'ತಳಹದಿ' ಎಂಬ ಅರ್ಥವು, ಈ ರೀತಿಯ ಬುನಾದಿಯ ಮೇಲಿದ್ದುದನ್ನು ತಿಳಿದು ಆಶ್ಚರ್ಯವೆನಿಸಲಿಕ್ಕಿಲ್ಲವೆ? 'ಬಳಕೆಯಲ್ಲಿ ಬಂದ ಈ ಶಾಬ್ದಿಕನಾಣ್ಯಗಳು ಹೇಗೆ ಮೂಲರೂಪದ ಗುರುತು ಕೂಡ ಹತ್ತದಂತೆ ಬದಲಾಗಿರುವುವಲ್ಲ' ಎಂದು ಸೋಜಿಗವೆನಿಸುವುದು. ಈ ನಾಣ್ಯಗಳು ಯಾವ ಟಂಕಸಾಲೆಯವು ಎಂಬುದನ್ನು ನಿರ್ಧರಿ-ಸುವುದು, ಅವುಗಳ ಸ್ವರ್ಣಮೌಲ್ಯವನ್ನು ನಿರ್ಣಯಿಸುವುದು, ಇದೆಲ್ಲ ಬೇರೆ ವಿಷಯ; ಸವಕಳಿಯಾಗಿ ರೂಪಾಂತರವನ್ನು ಹೊಂದಿದ್ದರೂ ಕೂಡ ಇಂತಹ ನಾಣ್ಯಗಳಿಂದ ನಾವು ಶ್ರೀಮಂತರಾಗಿರುವೆವಲ್ಲ— ಎಂಬುದೇ ಒಂದು ವಿಚಿತ್ರವಾದ ಸಮಾಧಾನದ ಮಾತು.

ಇನ್ನೊಮ್ಮೆ ಹೀಗೆಯೆ, ಇಲ್ಲಿಯ ಸುಪ್ರಸಿದ್ಧವಾದ ರಾಮಲೀಲೆ-ಯನ್ನು ನೋಡಲಿಕ್ಕೆ ಹೋಗಿದ್ದೆವು. 'ರಾಮಲೀಲೆ' ಎಂದರೆ

ಅದೊಂದು ಜಾತ್ರೆ ಇದ್ದಂತೆ; ಎಂದ ಮೇಲೆ ಅಲ್ಲಿ ಕುಸ್ತಿಗಳು ಇರಬೇಕಲ್ಲವೆ? ನಮ್ಮ ಹಿಂದೀ ಮಿತ್ರರ ಸಂಗಡ ಅವುಗಳನ್ನು ನೋಡಲಿಕ್ಕೆ ನಾನು ಹೊರಟೆ. ನಮ್ಮ ಕಡೆ ಕುಸ್ತಿ ಎಂದಕೂಡಲೆ ಅವು ಬಹುತರವಾಗಿ "ಜಂಗೀ" ಕುಸ್ತಿಗಳೆ ಇರುವುವಲ್ಲವೆ? ನಾನು ತುಸು ಮೋಜಿಗೆ 'ಇಲ್ಲಿ ಜಂಗೀ ಕುಸ್ತಿಗಳು ನಡೆದಂತೆ ಕಾಣುತ್ತದೆ' ಎಂದೆ. ಅವರಿಗೆ ಅರ್ಥವೆ ಆಗಲಿಲ್ಲ. 'ಈ ನಾಣ್ಯವು ಇಲ್ಲಿ ಏಕೆ ನಡೆಯಲಿಲ್ಲ ?' ಎಂದು ನಾನು ಖತಿಗೊಂಡೆ; ಚಿಂತೆಗೊಳಗಾದೆ ಆ ಮೇಲೆ ತಿಳಿಯಿತು ನನಗೆ— ಅದು ಇತ್ತ ಪ್ರಚಾರದಲ್ಲಿ ಇದ್ದ ಶಬ್ದವಲ್ಲ ಎಂದು. "ಜಂಗ" ಎಂದರೆ ಯುದ್ಧ; ನಮ್ಮ ಕಡೆಗೆ ಕುಸ್ತಿಯಾಳು ಆಡುವ ಯುದ್ಧಭಾವನೆಯ ಕುಸ್ತಿಗಳೇ ಇಲ್ಲಿ ಇರುವುದಿಲ್ಲವೊ, ಅಥವಾ ಯಾವಾಗಲೂ ಯುದ್ಧಮಯವೇ ಆದ ಇಲ್ಲಿಯ ವಾತಾವರಣದಲ್ಲಿ ಕುಸ್ತಿಗಳಿಗೆ ಆ ವಿಶೇಷಣವನ್ನು ಹಚ್ಚುವ ಆವಶ್ಯಕತೆಯೆ ಇರುವುದಿಲ್ಲವೊ— ಯಾರು ಬಲ್ಲರು? ಒಟ್ಟು ಇತ್ತಕಡೆಯಿಂದ ತೆಗೆದುಕೊಂಡು ನಾವು ಉಪಯೋಗಿಸುತ್ತಿದ್ದ ಈ ನಾಣ್ಯವು ಈಗ ಇಲ್ಲಿಯೆ ನಡೆಯುವುದಿಲ್ಲವಲ್ಲ— ಎಂದು ನಾನು ತಿಳಿದುಕೊಂಡೆ. ವಿಜಯನಗರಕಾಲದ ಒಂದು ನಾಣ್ಯವನ್ನು ತೆಗೆದುಕೊಂಡು ಹೋಗಿ, ಹೊಸಪೇಟೆಯಲ್ಲಿ ಈಗ ಕಬ್ಬುಕೊಳ್ಳಲಿಕ್ಕೆ ಪ್ರಯತ್ನಿಸಿದರೆ ಆಗಬಹುದಾದ ನಿರಾಶೆ, ಅಪರದೃಷ್ಟಿಗಳು ಆ ಕಾಲಕ್ಕೆ ನನಗೆ ಆಗಿದ್ದರೆ ವಿಶೇಷವೇನೂ ಅಲ್ಲ.

ಇನ್ನೊಮ್ಮೆ ಹೀಗೆಯೆ ನಾನು ದೆಹಲಿಯ ಪೇಟೆಯಲ್ಲಿ ಬಿಳಿಯ ಹಾಳೆಗಳನ್ನು ತರಲಿಕ್ಕೆಂದು ಹೊರಟೆ. ಇದೊಂದು ತೊಂದರೆಯಾಗಲಿಕ್ಕಿಲ್ಲ ಎಂದು ನಾನು ತುಂಬಾ ವಿಶ್ವಾಸದಿಂದ ಅಂಗಡಿಯೊಂದರಲ್ಲಿ "ಸಫೇದ್ ಕಾಗಜ"ವನ್ನು ಕೇಳಿದೆ. ಆ ನಾಣ್ಯದ ಗುರುತೇ ಹತ್ತಲಿಲ್ಲ ಅಂಗಡಿಕಾರನಿಗೆ. 'ನಮ್ಮಲ್ಲಿ ಎಲ್ಲ ಸಫೇದ್ ಕಾಗದವೇ ಇರುತ್ತದೆ ಮಹನೀಯ!' ಎಂದವನು ಉತ್ತರ ಕೊಟ್ಟ. ನಾನು ಕೊನೆಗೆ ಇಂಗ್ಲಿಷ್ ಭಾಷೆಯ ಸಹಾಯವನ್ನು ತೆಗೆದುಕೊಂಡು ಕಾರ್ಯವನ್ನು ಪೂರೈಸಿಕೊಂಡೆ. 'ಸಫೇದ್'ಇದು ಸಫಾಯಿ— ಎಂದರೆ ಸ್ವಚ್ಛತೆ— ಇದರಿಂದ ಹಸನಾದ ಎಂದು ಅರ್ಥವುಳ್ಳದ್ದಾಗಿರುವುದೇ ವಿನಾ— ಬಿಳಿಯದು— ಬೆಳ್ಳನೆಯದು ಎಂಬ ಅರ್ಥವುಳ್ಳದ್ದಾಗಿಲ್ಲ ಎಂಬುದು ನನಗೆ ಆಮೇಲೆ ಹೊಳೆಯಿತು. ಅದೊಂದು ವಿಚಿತ್ರ, ಸನ್ನಿವೇಶ ಎಂದುಕೊಳ್ಳಬಹುದಲ್ಲವೆ?

ಆದರೆ ಅಮೃತಸರಕ್ಕೊಮ್ಮೆ ಹೋದಾಗ ಕೆಲವು ಅದ್ಭುತವಾದ ಶಾಬ್ದಿಕನಾಣ್ಯಗಳ ಸಂಗ್ರಹವಾಯಿತು ನನ್ನ ಬಳಿಯಲ್ಲಿ. 'ಪಂಜಾಬಿಯು ಒಂದು ಬೇರೆ ಸ್ವತಂತ್ರವಾದ ಭಾಷೆಯೆ ಅಲ್ಲ' ಎಂದು ಹಿಂದೀವಾದಿಗಳೇನೊ ಹೇಳುತ್ತಾರೆ. ಅದರಲ್ಲಿ ರಾಜಕೀಯ ಏನೇ ಇರಲಿ. ಇಲ್ಲಿ ಆ ಭಾಷಾಭಾಂಡಾರದಲ್ಲಿರುವ ಎರಡು ನಾಣ್ಯಗಳ ಅಲ್ಪಪರಿಚಯವನ್ನು ಕೊಡುವೆ. ನನ್ನ ಮಿತ್ರರೊಬ್ಬರ ಮನೆಯಲ್ಲಿ ಅವರ ತಮ್ಮನ ಮದುವೆಯಿತ್ತು. ನಾವೆಲ್ಲರೂ ಸಂಭ್ರಮದಿಂದ ಆ ಮದುವೆಯಲ್ಲಿ ಓಡಾಡಿದೆವು. ಬರುವಾಗ—ವಧುವಿನ ಮನೆಯಿಂದ ವರನ ಸಂಗಡ ಕನ್ಯೆಯನ್ನು ತರುವ ಸಮಯ ಬಂದಿತು. ಆ ಹುಡುಗಿ ಹೊರಡಲಿಕ್ಕೆ ಸಿದ್ಧಳಾಗಿದ್ದಳು. ಹುಡುಗ ತನ್ನ ಗೆಳೆಯರೊಂದಿಗೆ ಮಾತನಾಡುತ್ತ ಕೇಕೆಗಡೆಗಿದ್ದ. ಮಹಿಳೆಯರ ಗುಂಪಿನೊಳಗಿಂದ ಒಬ್ಬಳು ಚೇಷ್ಟೆಗಾಗಿ "ಕರೆಯುವುದಕ್ಕಿಂತ ಮುಂಚೆಯೇ ನೀನು ತಯ್ಯಾರ್ ಆಗಿರುವಿಯಲ್ಲ; ನಿನ್ನ ಗಬರು ಎಲ್ಲಿದ್ದಾನೆ ?" ಎಂದು ಕೇಳಿದಳು. ಜನಸಮೂಹವೆಲ್ಲ ನಗೆಗಡಲಿನಲ್ಲಿ ಮುಳುಗಿತು. ನನಗೆ ಮಾತ್ರ ಒಂದು ಹಳೆಯ 'ವರಹ'ವನ್ನು ಹಾಳುಮನೆಯಲ್ಲಿ ಪಡೆದಾಗ ಆಗುವ ಆಶ್ಚರ್ಯ-ಆನಂದಗಳಾದುವು.

ಪಂಜಾಬದಲ್ಲಿ ಚಿಕ್ಕಮಕ್ಕಳನ್ನು ಹೆಚ್ಚಾಗಿ ಒಂದು ರೂಢನಾಮದಿಂದ ಕರೆಯುವ ಸಂಪ್ರದಾಯ. ಈಗ ಅದು ಎಲ್ಲ ಪ್ರಾಂತಗಳಲ್ಲಿಯೂ ಪ್ರಚಲಿತವಾಗಿದೆ—ಎಂದರೂ ಸಲ್ಲುವುದು. ಹಿರಿಯರು ಇಟ್ಟ ಹೆಸರು ತಮಗೆ ಸರಿಬರುವುದಿಲ್ಲವೆಂದೋ ಏನೋ ಹೀಗೆ ಚಿಕ್ಕತನದಲ್ಲಿ ಮಕ್ಕಳಿಗೆ ತೊಟ್ಟಿಲಲ್ಲಿ ಹೆಸರನ್ನಿಡುವ ಪದ್ಧತಿಯು ಮರೆಯಾಗುತ್ತಲಿದೆ. ದೊಡ್ಡವರಾದ ಮೇಲಾದರೂ ಸಮರ್ಪಕವಾಗಿ ಹೆಸರನ್ನು ಎಷ್ಟು ಜನರು ಆರಿಸಿಕೊಳ್ಳಬಲ್ಲರು ? ಆ ದಿ ರ ಲಿ. ಸಮರ್ಪಕವಾಗದಿದ್ದರೂ ಸಮಾಧಾನವಾದರೂ ಇರುತ್ತದೆ. ತಾವೇ ಇಟ್ಟುಕೊಂಡ ಹೆಸರು ಎಂದು. ಒಟ್ಟಾರೆ ಕೂಸುಗಳಿಗೆ ಈಗ ಪ್ರಚಾರದಲ್ಲಿ ಒಂದು ಶಬ್ದವಿದ್ದುದು ಎಂದರೆ "ಕುಕ್ಕು." ನನಗೆ ನಮ್ಮ ಕಡೆಯಲ್ಲಿ "ಕುಕ್ಕುಬಾಳಾ" ಎಂದು ಆಡಿಸುವುದೇ ನೆನಪಿಗೆ ಬಂದಿತು. ಅಂತೆಯೆ ನನ್ನ ಒಬ್ಬ ಮಿತ್ರರನ್ನು ನಾನು ಕೇಳಿದೆ. 'ಈ ಶಬ್ದವು ಬಹಳ ದಿನಗಳಿಂದ ರೂಢಿಯಲ್ಲಿದೆ' ಎಂದು ಅವರು ಹೇಳಿದರು. ಇನ್ನು "ಕುಕ್ಕುಬಾಳಾ" ಎಂಬ ಒಂದೇ ಹೆಸರಿನ—ಅಥವಾ ಅರ್ಥದ ಎರಡು ಶಬ್ದಗಳ ಈ ಪಟವು, ನಮ್ಮ "ಗುಬ್ಬೀ-ಚಿಮಣಿ" ಯಂತೆ ಏನಾದರೂ ಇರಬೇಕು.... ಎಂದು ನಾನು ಸಂತೋಷದಿಂದ ಸುಮ್ಮನಾದೆ.

೫೫ ವರ್ಷಗಳಿಂದ ಅನುಭವಪಟ್ಟ

ಕರ್ಕೀ ಮತ್ತು ಕಂಪನಿಯ

ಜ್ವರಗಡ್ಡೆಯ ಗುಳಿಗೆಗಳು

ಬಾಟ್ಲಿಗೆ ೧-೮-೦

ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.

ವಿಳಾಸ :—

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ

ಗಿರಗಾಂವ, ಮುಂಬಯಿ. ೪

ವಿಷಯ ವಿಸ್ತೃತವಾಗತೊಡಗಿದೆ ; ಅದು ಇನ್ನೂ ಸಾಕಷ್ಟು ಬೆಳೆಯುವಂತೆ ಸಾಮಗ್ರಿಯೇನೊ ಸಂಗ್ರಹವಾಗಿದೆ. ಆದರೆ ಹೆಚ್ಚಿನ ವಿವರದಲ್ಲಿ ಈಗ ಹೋಗದೆ, ಇನ್ನೊಂದೆರಡು ವಿಶಿಷ್ಟ ಪ್ರಕಾರದ ನಾಣ್ಯಗಳನ್ನು ಇಲ್ಲಿ ನಿರ್ದೇಶಿಸಿ, ಈ ಲೇಖನವನ್ನು ಮುಗಿಸುವೆ. ಮೇಲೆ ಉಪಯೋಗಿಸಿದ 'ಒಂದೆರಡು' ಎಂಬ ಶಬ್ದದಿಂದಲೇ ಇನ್ನೊಂದು ಶಾಬ್ದಿಕನಾಣ್ಯದ ನೆನಪು ಆಗಿದೆ. ಮರಾಠಿಯಲ್ಲಿ ಒಂದಾನೊಂದು ಎನ್ನಲಿಕ್ಕೆ "ಏಖಾದಾ" ಎಂಬ ಒಂದು ಪದವಿದೆ. ನಾವು ಇತ್ತ ಉತ್ತರಾಪಥದಲ್ಲಿ ಬರುವವರೆಗೆ ಅದರ ವಿಷಯವಾಗಿ ಹೆಚ್ಚಿನ ಕುತೂಹಲವಿರಲಿಲ್ಲ. ಆದರೆ ಇಲ್ಲಿ ಒಂದೆರಡು ಎನ್ನಲಿಕ್ಕೆ "ಏಕಾದಾ" ಎಂಬುದೊಂದು ಶಬ್ದವನ್ನು ಬಳಸುತ್ತಾರೆ. ಅದರ ಶುದ್ಧಸ್ವರೂಪ "ಏಕಾಧಾ"– ಎಂದರೆ "ಏಕ + ಅಧಾ" – ಒಂದು ಇಲ್ಲವೆ ಅರ್ಧ – ಎಂಬುದಾಗಿದೆ. ಸ್ಪಷ್ಟೋಚ್ಚಾರವು ಅಸಾಧ್ಯವಾಗಿ "ಅಧಾ" ದೊಳಗಿನ ಮಹಾಪ್ರಾಣವು ಏಕದೊಳಗೆ ಸೇರಿಕೊಂಡಿತು. ಅಂತೆಯೇ "ಏಕಾಧಾ" ಹೋಗಿ "ಏಖಾದಾ" ಆಯಿತು ಮರಾಠಿಯಲ್ಲಿ. ಅದರಂತಹ ಉಚ್ಚಾರಾಂತರವು ಇಲ್ಲಿ ಸಂಭವಿಸಿದರೆ, ಇನ್ನೊಂದು ಬಗೆಯ ಅರ್ಥಾಂತರವು "ಸಹಿ" ಶಬ್ದದಲ್ಲಿ ಅಡಗಿದೆಯೆಂದೆನ್ನಬಹುದು. ನಾವು ಕನ್ನಡಿಗರು ಅದಕ್ಕೆ "ಸೈ" "ಸಹಿ" ಎಂಬುದಾಗಿ ಹೇಳಿ, ಅಂಕಿತ—ದಸ್ಕತ್ತು ಎಂಬ ಅರ್ಥದಲ್ಲಿ ಉಪಯೋಗಿಸುತ್ತೇವೆ. ಆದರೆ ಅದರ ಬಳಕೆಯನ್ನು ಇಲ್ಲಿ ನೋಡಿದಾಗ, ಮೂಲವಾದ ಅದರ ಅರ್ಥವು ತಿಳಿದು ಬರುವುದು. "ಸಹೀ ಬಾತ್" ಎಂದರೆ ಸರಿಯಾದ ಮಾತು; ಒಳ್ಳೆಯ ನುಡಿ; ಹೌದೆನಿಸಿಕೊಳ್ಳುವ ಹೇಳಿಕೆ. ನೀವು ಹೇಳುವ ಮಾತು ನಮಗೆ ಒಪ್ಪಿಗೆಯಾದರೆ, ನಾವು ಅದಕ್ಕೆ 'ಸಹೀಬಾತ' ಎನ್ನುವೆವು ಅದಕ್ಕೆ ಸಮ್ಮತಿಯನ್ನು ಕೊಡುವುದು ಎಂದರೆ ಸಹೀ ಹಾಕುವುದು. ಸಹಕರಿಸಿ ಹೋಗುವ ವಿಷಯಕ್ಕೆ ಸೈ ಮಾತು ಎಂದೆನ್ನಬಹುದು. ಅಂತೂ ಅದೊಂದು ಮೋಜೆನಿಸುವಂತಹ ಶೋಧ.

ಉತ್ತರ ಭಾರತೀಯರಿಂದ ಉತ್ತರ ಕರ್ನಾಟಕದವರನ್ನು ವಿಂಗಡಿಸಿ ತಿಳಿದುಕೊಳ್ಳಬೇಕಾದರೆ ಒಂದು ಚಟ್ನಿಯಿಂದ—ಎಂದು ನನ್ನ ಅನುಭವ; ಅಭಿಪ್ರಾಯ. ಊಟದಲ್ಲಿ, ಬಟ್ಟೆಯಲ್ಲಿ ಮಿಕ ಕೆಲವು ರೀತಿಗಳಲ್ಲಿ ಬೇಕಾದಷ್ಟು ಸಾಮ್ಯವಿದೆ. ಉತ್ತರ ಭಾರತದಲ್ಲಿ ನಾವು ತಿನ್ನುವ—ಅಥವಾ ನಮಗೆ ಅನಿವಾರ್ಯವಾಗಿರುವ ಚಟ್ನಿಯು ಅಷ್ಟು ಲೋಕಪ್ರಿಯವಾಗಿರದಿದ್ದರೂ, ಅದಕ್ಕೆ ಬೇಕಾಗುವ ಆಯುಧಗಳು ಮಾತ್ರ ಅವರಲ್ಲಿ ಸಾಮಾನ್ಯವಾಗಿ ಇರುತ್ತವೆ. ಅವು ಬೇರೆ ಯಾವುದೇ ಉದ್ದೇಶದಿಂದ ಸಂಗ್ರಹವಾಗಿರಲಿ, ನಿಮಗೆ ಮಾತ್ರ ಹೋದಹೋದಲ್ಲಿ ಅಣಿಯಾಗಿವೆ; ಅಂತೆಯೇ ಅಂತಹ ಭಾರದ ವಸ್ತುಗಳನ್ನು ಹೊತ್ತುಕೊಂಡು ಹೋಗುವ ತೊಂದರೆ ಮತ್ತು ವೆಚ್ಚಗಳ ಉಳಿತಾಯವಾಗಿದೆ. ಮೊನ್ನೆಯ ಬೇಸಗೆಯ ಬಿಸುವಿನಲ್ಲಿ ಮಸೂರಿಗೆ ಹೋದಾಗ, ಈ ಸಂದರ್ಭದಲ್ಲಿ ನನಗೊಂದು ಅಮೌಲ್ಯವಾದ ಶಾಬ್ದಿಕನಾಣ್ಯದ ಲಾಭವಾಯಿತು.

ಚಟ್ನಿಯನ್ನು ಅರೆಯುವುದಕ್ಕೆ ನಾವು 'ಅಸೀಕಲ್ಲು ಗುಂಡುಕಲ್ಲು' ಬೇಕು ಎಂದೆನ್ನುತ್ತೇವಷ್ಟೇ. ಇಲ್ಲಿ ಅವುಗಳಿಗೆ "ಶಿಲ್ಬಟ್ಟಾ" ಎಂದೆನ್ನುತ್ತಾರೆ. ನನಗೇನೊ ಈಗ ೧೫–೨೦ ವರ್ಷಗಳ ಹಿಂದಿನ ಒಂದು ನಾಣ್ಯವನ್ನು ಕಂಡಂತೆ ಅನುಭವವಾಯಿತು. ದುರಾಶೆ. ಇದು ನಡೆಯುವುದೇನೊ ನೋಡಬೇಕೆಂದು ನಾನು ಅದನ್ನು ಸೂಕ್ಷ್ಮವಾಗಿ ಪರೀಕ್ಷಿಸತೊಡಗಿದೆ ಪದಚ್ಛೇದಮಾಡಲಾಗಿ 'ಶಿಲ' ಮತ್ತು 'ಬಟಾ,' ಎಂದರೆ ಕಲ್ಲು ಮತ್ತು ಗುಂಡು ಎಂದರ್ಥವು ಹೊರಟಿತು ಕೂಡಲೆ ನನಗೆ ನಮ್ಮ ಕಲ್ಬತ್ತಿನ ನೆನಪಾಯಿತು. ಎಂತಹ ಬಾಂಧವ್ಯ! ಎಷ್ಟು ಸಹಜತೆಯಿಂದ ಈ ಶಾಬ್ದಿಕನಾಣ್ಯವು ನಮ್ಮಲ್ಲಿ ಯಾವಬಗೆಯ ಅನಾದರವೂ ಇಲ್ಲದೆ ಓಡಾಡುತ್ತಿರುವುದಲ್ಲ! ಅಂತೂ ನಮ್ಮ ಆಡಳಿತದ ಆಜ್ಞೆಗಳಂತೆ ವಿತ್ತಪ್ರಪಂಚದಲ್ಲಿಯ ಉದಾರನಿಯಮಗಳಂತೆಯೆ, ಶಾಬ್ದಿಕ ಪ್ರಪಂಚದಲ್ಲಿಯೂ ಎಂತಹ ಮಧುರ ವಾತಾವರಣವಿದೆಯಲ್ಲ— ಎಂದು ಸಂತೋಷವಾಯಿತು. ಇಂತಹದೇ ಆದ ಇನ್ನೊಂದು ಪದ–'ಜಾಗರೂಕತೆ'. ಈ ಶಬ್ದದ ನಿರ್ಮಾಣವು ಹೇಗೆ ಆಯಿತೋ ತಿಳಿಯದು— ಅಥವಾ– ಋಷಿಗಳ ಮೂಲ ಮತ್ತು ನದಿಗಳ ಮೂಲವನ್ನು ಹುಡುಕುವ ಕೆಲಸ ವ್ಯರ್ಥ ಆಗಿದ್ದರೂ ಕಠಿಣ ಇದ್ದಂತೆ– ಈ ಶಬ್ದದ ಮೂಲವನ್ನು ಹುಡುಕುವುದೂ ಪ್ರಯಾಸದಿಂದ ಕೂಡಿರಬಹುದು. ಜಾಗರೂಕತೆ ಎಂದರೆ ಎಚ್ಚರು; ಸಾವಧಾನ. ಆದರೆ ಜಾಗ ಎಂದರಷ್ಟೆ ಎಚ್ಚರಿಕೆ ಎಂಬರ್ಥ ವಿದೆಯಲ್ಲ! ಜಾಗ ಎಂದರೆ ಎಚ್ಚರಿಕೆ, ರೂಕ ಎಂದರೆ ತಡೆ. ಜಾಗರೂಕತೆ ಎಂದರೆ ಎಚ್ಚತ್ತು ತಡೆಯುವ ಸ್ವಭಾವ ಎಂದಂತಾಯಿತು ಇಷ್ಟು ವ್ಯಾಪಕವಾದ ಅರ್ಥದ ಶಬ್ದವನ್ನು ನಾವು ಸಂಕುಚಿತವಾದ ರೀತಿಯಲ್ಲಿ ಉಪಯೋಗಿಸಿಕೊಂಡು, ಅದರ ಬೆಲೆಯನ್ನು ಕಡಿಮೆಮಾಡಿದ್ದೇವೆ. ಇಂದಿನ ರೂಪಾಯಿಗೂ ಹಿಂದಿನ ಕಾಲದಲ್ಲಿ ಹೆಚ್ಚು ಧಾನ್ಯ, ಹೆಚ್ಚು ಬಟ್ಟೆ, ಹೆಚ್ಚು ಸೌಕರ್ಯ ದೊರೆಯುತ್ತಿದ್ದಿಲ್ಲವೆ? ಹಾಗೆಯೆ ಇದೂ ಒಂದು "ಆರ್ಥಿಕ" ದುಸ್ಥಿತಿಯ ಪರಿಣಾಮವೆ ಅಲ್ಲದೆ ಮತ್ತೇನು ?

ಅದಿರಲಿ! ನೀವು 'ಖುಶಾಲರಾಯ' ಎಂಬ ಹೆಸರನ್ನು ಸಾಮಾನ್ಯವಾಗಿ ಕೇಳಿರಬಹುದಲ್ಲವೆ? ಆ "ಕುಶಾಲ" ತಲೆಮರೆಯಿಸಿಕೊಂಡು ನಮ್ಮ ದೇಶದಲ್ಲಿ ಓಡಾಡುವ ಒಬ್ಬ ವ್ಯಕ್ತಿ– ಎಂದರೆ– ಒಂದು ಹೆಸರು– ಎಂದರೆ ನೀವು ಒಮ್ಮೆಲೆ ಪೋಲೀಸ್ ಠಾಣೆಗೆ ವರದಿಯನ್ನು ಕೊಡಹೋಗಬಹುದು. ಎಷ್ಟೋ ಖೊಟ್ಟಿ ನಾಣ್ಯಗಳು, ವಿದೇಶೀಯ ನಾಣ್ಯಗಳು ನಮ್ಮಲ್ಲಿ ಬಳಕೆಯಲ್ಲಿರುವುದಿಲ್ಲವೆ? ಒಮ್ಮೆ ಅದರ ನಿಜರೂಪ ಹೊರಬಿದ್ದಿತೆಂದರೆ, ಅದರ ಒಡೆಯನಿಗೆ ಅದೊಂದು ಎದೆಗುದಿ. ಹಾಗೆಯೆ ನಿಮಗೂ ಈ ಶಾಬ್ದಿಕ ನಾಣ್ಯದ ವಿಷಯವಾಗಿ ತೋಚಬಹುದು. ನಾವು ಎಷ್ಟೋ ಸಾರೆ 'ಕುಶಾಲ' ಎಂಬುದು ಸಂಸ್ಕೃತದ ಕುಶಲ ಎಂದರೆ ಪ್ರವೀಣ ಎಂಬರ್ಥದ ಶಬ್ದವಿರಬಹುದು—ಎಂದು ತಿಳಿದುಕೊಳ್ಳುತ್ತೇವೆ. ಆದರೆ ಅದರ ನಿಜವಾದ ಮುಖ ಹೀಗೆ ಇದೆ— ಇಕೊ ನೋಡಿರಿ 'ಖುಶ್' ಮತ್ತು 'ಹಾಲ' ಈ ಎರಡು ಅವಯವಗಳು ಕೂಡಿ "ಖುಶ್ಹಾಲ"

ಎಂಬ ಹೆಸರು ಹುಟ್ಟಿದೆ. ಒಳ್ಳೆಯ ಸ್ಥಿತಿ; ಸಂತೋಷದ ಸುದ್ದಿ ಎಂಬುದೇ ಅದರ ಅರ್ಥ. ಈ ಖುಷ್ಹಾಲನು ನಮ್ಮಲ್ಲಿ ನಿರಾತಂಕನಾಗಿ ಕುಶಾಲರಾಯನಾಗಿ ಮೆರೆಯುತ್ತಾನೆ. ಆದರೂ ನಾವು ಈ ರೀತಿಯ ಮೋಸಗಾರನನ್ನು ಯಾವ ಸಂಶಯ ನಿರ್ಬಂಧಗಳಿಲ್ಲದೆ ನಮ್ಮಲ್ಲಿ ಇಟ್ಟುಕೊಂಡಿದ್ದೇವೆ. ಇನ್ನಷ್ಟೇ ಅಲ್ಲ. ನಿರ್ಭಾಗ್ಯನಾದ ಈ ವ್ಯಕ್ತಿಯ ಮಾತು ಬಿಟ್ಟುಬಿಡೋಣ. ವಿಪರೀತವಾದ ಅರ್ಥದ ಮಾತುಹೊರಡುವ ಇನ್ನೊಂದು ನಾಣ್ಯವನ್ನು ನಾವು ಅತ್ಯಂತ ಪ್ರೀತಿಯಿಂದ, ಪ್ರತಿದಿನ ಬಳಸುತ್ತೇವೆ. ಅದೆಂದರೆ "ರಾಜೀನಾಮೆ." ಮೂಲವಾದ ಅದರ ಅರ್ಥ ಮತ್ತು ಹುಟ್ಟಿದ ಇವುಗಳನ್ನು ನೋಡಿದರೆ ವಿಸ್ಮಯವಾಗುವುದು. ರಾಜೀ ಎಂದರೆ ಒಪ್ಪಂದ. ರಾಜೀನಾಮೆ ಎಂದರೆ 'ಒಪ್ಪಂದದ ಓಲೆ' ಎಂದಂತೆ. ಆದರೆ ನಾವು ತ್ಯಾಗಪತ್ರ—ಅಥವಾ ಬಿಡುವಳಿಯ ಓಲೆ ಎಂಬರ್ಥದಲ್ಲಿ ಅದನ್ನು ಉಪಯೋಗಿಸುತ್ತೇವೆ. ಹೇಗಿದೆ ಮೋಸ! ಹೆಸರು, ಜಾತಿ, ವೇಷ, ರೀತಿ ಎಲ್ಲರೀತಿಯಿಂದಲೂ ಸೋಗನ್ನು ಹಾಕಿಕೊಂಡು ನಮ್ಮ ದೇಶದಲ್ಲಿ ಸಂಚರಿಸುವ ವಿದೇಶೀಯ "ಗುಪ್ತಚಾರ" ಅಥವಾ ಹೇರನಂತೆಯೆ ಕಾಣುವುದಿಲ್ಲವೆ ಈ ಶಬ್ದ? ಅವನು ಒಪ್ಪಿ ರಾಜೀನಾಮೆಯೊಡನೆ ಬಂದರೂ ನಮಗೆ ವಿರೋಧವಾಗುವುದು, ನಾವು ಒಲ್ಲೆ ಎಂದು ರಾಜೀನಾಮೆಯೊಡನೆ ಹೋದರೂ ಅವನಿಗೆ ಸಂತೋಷವಾಗುವುದು. ಹೇಗಿದೆ ಮರ್ಮಭೇದಕವಾದ ಅರ್ಥ!

ಇದು ಕೊನೆಯ ಮಾತು. ಮೈಸೂರಿನಲ್ಲಿ 'ಮರಾಮತ್ತು ಇಲಾಖೆ' ಎಂಬ ಒಂದು ವಿಭಾಗ (Department) ಇರುವುದು ಗೊತ್ತಿದೆಯಷ್ಟೇ. 'ಮರಾಮತ್ತು ಇಲಾಖೆ' ಎಂದರೆ ಸಮಾಜೋಪಯೋಗಿ ಕಾರ್ಯ ವಿಭಾಗ Public works Department ಎಂಬರ್ಥ. ಮೊದಲು ಅದು Public works and Maintenance ಎಂದಿತ್ತು. ಇತ್ತ ಮರಮ್ಮತ್ ಎಂದರೆ ಸರಿಪಡಿಕೆ; ರಿಪೇರಿ Repairs ಈಗ ಮರಾಮತ ಇಲಾಖೆ ಎಂಬ ಪದದ ಪ್ರಕಾರ Public works ಎಲ್ಲ Mentainance ಅಥವಾ Repairs ಆಗಿದ್ದರೆ ಆಶ್ಚರ್ಯವೇನು?

ಹೀಗಿದೆ ಅರ್ಥಪ್ರಪಂಚದಲ್ಲಿ ಶಾಬ್ದಿಕ ನಾಣ್ಯಗಳ ಮುಸಲತ್ತು! ಹಾ! 'ಮುಸಲತ್ತು' ಎಂದಕೂಡಲೆ ಅದೂ ಒಂದು ಮೋಜಿನ, ಮೋಸದ ಅಲ್ಲದಿದ್ದರೂ— ಮೋಜಿನ ಶಬ್ದವೆ. ಸಾಮಾನ್ಯವಾಗಿ ನಾವು ಮುಸಲತ್ತು ಎಂದರೆ ಒಳಸಂಚು, ಗುಟ್ಟು ಎಂದು ಅರ್ಥಮಾಡಿಕೊಳ್ಳುವೆವು. ಆದರೆ ಅದರ ಬೆಲೆಯು ಇಂತಹ ಸ್ಥೂಲಮಾಪನದಿಂದ ತಿಳಿಯುವುದಿಲ್ಲ. ಸೂಕ್ಷ್ಮವಾಗಿ ಪರೀಕ್ಷಿಸಿದಲ್ಲಿ ಅದು 'ಗುಪ್ತಸಹಾಯ' ಎಂಬರ್ಥವನ್ನು ತಿಳಿಸುವುದು. ಈ ಶಾಬ್ದಿಕ ನಾಣ್ಯಗಳು ಕೂಡ—ಅಪರೂಪವಾಗಿಯೆ ಇರಲಿ, ನಿರೂಪವಾಗಿಯೆ ಆಗಲಿ—ನಮ್ಮ ಸಾಹಿತ್ಯಪ್ರಪಂಚಕ್ಕೆ ಒಂದು ಗುಪ್ತ ಸಹಾಯವನ್ನೆ ಮಾಡಿದಂತಿಲ್ಲವೆ?



ಇಗೊ ಮೂಡಿಬಂದಿತಿಲ್ಲಿ!

'ಅಂಬಿಕಾತನಯದತ್ತ'

☆

ಯಾ ಆಶೆ ಜಿನಾಳದಿ ಉಳಿದು,
ಕರ್ಮವನು ಕಳೆದು
ರೂಪವನು ತಳೆದು ಇದ್ದಿತಲ್ಲಿ—
ಇಗೊ ಮೂಡಿಬಂದಿತಿಲ್ಲಿ ! ॥ ಪಲ್ಲವಿ ॥

ಎದ್ದಿತೆದ್ದಿತೋ ತಾ ಮೈಮುರಿದು
ಡೇಟು-ಗೀಟಿನಲಿ ನನೆ ಕೊನೆ ಕೊರೆದು
ತೊಂಗೆ-ತೊಂಗಲಲಿ ಅದೆ ಹರಿವರಿದು
ಮುಸುಕ ಹಿಂದೆ ತಳ್ಳಿ—
ಇಗೊ ಮೂಡಿಬಂದಿತಿಲ್ಲಿ ! ೧

ಎಲೆ.ಎಲೆಯಲಿ ಅದು ಒಲೆದು ನಲಿದಿತೋ
ಮುಗುಳು-ಮೊಗ್ಗೆ ಅರಳಿಸುತ ಕೆಲೆದಿತೋ
ಮಧುಗಾನದಿ ತನ್ನೊಳಗೆ ನುಲಿದಿತೋ
ಆಗಿ ಎಲರ ಬಳ್ಳಿ—
ಇಗೊ ಮೂಡಿಬಂದಿತಿಲ್ಲಿ! ೨

ಪ್ರಕಟವಾಗಿ ಜಗದುಂಬಿ ತೊಳಗಿದೆ,
ಜಾಗೃತಿಯಲಿ ಸ್ವಪ್ನವೂ ಮುಳುಗಿದೆ,
ಸಫಲವಾಗಿ ಜೀವದಲೆ ಬೆಳಗಿದೆ,
ಮಿಕ್ಕ ಮಿಾಸಲಲ್ಲಿ—
ಇಗೊ ಮೂಡಿಬಂದಿತಿಲ್ಲಿ ! ೩

ಹೇವ ಹೇವ ಭಾವದಲಿ ಬೆರತಿತೋ
ನಾಮ-ಗ್ರಾಮ ಎಲ್ಲವನು ಮರೆಸಿತೋ
ಗಾನ-ತಾನ ಗೀತದೊಳೆ ಹರಿದಿತೋ
ಹೊರಗೆ ಸೂಸಿ ಚೆಲ್ಲಿ —
ಇಗೊ ಮೂಡಿಬಂದಿತಿಲ್ಲಿ! ೪

ಯಾವ ಕೃಷ್ಣನವನೂದಿದ ಮುರಲಿ ?
ಅಡಗಿದ ಪ್ರೀತಿಯೆ ಒಡಮೂಡಿರಲಿ,
ಪ್ರಳಯ ಜಯಿಸಿ ತಾನೀಸಿಯೆ ಬರಲಿ !
ಆಡುತಿರಲು ತಿಳ್ಳಿ—
ಇಗೊ ಮೂಡಿಬಂದಿತಿಲ್ಲಿ ! ೫

ಭಾವಪ್ರಪಾತ

'ಪಶುಪತಿ'

卐

ಕಲ್ಪನೆ ಸಿರಿಮುಡಿಯಿಂದಿಳಿಗಿಳಿದಿರೆ
ಭಾವಗಂಗೆಯು ವಿಲಾಸದಲಿ,
ತುಂತುರು ತುಂತುರು ಜೇನ್ಹನಿ ಚಿಮುಕಿಸಿ
ಕವಿಮನ ಮೋಹಕ ಲಾಸ್ಯದಲಿ.

ಆ ರಸಸ್ರೋತದಿ ಮೀಯಲು ಬಯಸಿದೆ
ಆವಳೊಡನಾಟವು ಬಲು ಚೆಂದ;
ತೋಷದಿ ಹೀರಿದೆ ಭಾವಾವೇಶದಿ
ಆವಳೆದೆಪುಷ್ಪದ ಮಕರಂದ.

ಗಂಗೆಯ ಅಪ್ಪುಗೆಯೊಳು ಮೈಮರೆದಿರೆ
ಬಣ್ಣಿಸಲೆಂತಾ ಸವಿಗನಸು ?
ಎದುರಿನ ಕಾಮನ ಬಿಲ್ಲಿನ ಸೃಷ್ಟಿಯು
ನಿರುಕಿಸಿತೆನ್ನಯ ರಸಚಕ್ಷು !

ಊರ್ವಸಿ ರಂಭಾ ಮೇಣಾ ಮೇನಕೆ
ಕಳಿದರು ನನ್ನನು ಆಡಲಿಕೆ :
ಬಾರೈ ಕವಿಯೇ ಗೀತೆಯ ಹಾಡೆನೆ
ರಾಯಗೆ ಮುದವನು ನೀಡಲಿಕೆ.

ಝುಂ ಝುಂ ಎಂದಿರೆ ಹೆಜ್ಜೆಯ ಗೆಜ್ಜೆಯು
ಗಾನದ ಹೊನಲೇ ಹರಿದಿತ್ತು;
ಭಾವದಿ ಉಕ್ಕಿಹ ಗೀತೆಯು ಕಾಮನ -
ಬಿಲ್ಲಿನ ರೂಹನು ತಳೆದಿತ್ತು.

ಮೈನವಿರಾಯಿತು ಮೇನಕೆ ಮುತ್ತಿಡೆ
ಮೈಮನ ಮರೆಯಿತು ಭೂಮಿಯನು,
ಇಂದ್ರನ ಪಟ್ಟವನೇರಲು ಬಯಸಿರೆ
ರಸಿಕಗೆ ರಾಯನು ಸೋತಿಹನು.

ಜಲಪಾತದ ಜಲಕಣಕಣವಾಗಿ
ಎಂದೆಂದಿಗು ಕುಣಿಕುಣಿವಾಸೆ—
ಅಪ್ಸರೆಯೊಂದಿಗೆ ಲೀಲೆಯನಾಡುತ
ನಿತ್ಯವು ಸೊಬಗನು ಪಡೆವಾಸೆ !

ಭಾವದ ಜಲಪಾತದ ಜೇನ್ಹನಿಯಿಂ
ಮೂಡಲಿ ಕಾವ್ಯಕೆ ಚೇತನವು—
ಕಾಮನ ಬಿಲ್ಲನೆ ಗೀತೆಯೊಳಡಗಿಪ
ಸಾಧನೆ ನೀಡಲಿ ಅನುದಿನವು

ಪುಷ್ಪಾ

(ಸಣ್ಣ ಕತೆ) *

ಕು. ಶಾಂತಾ ವೇಂಟೇಕರ್, ತದಡಿ

卐

ಪ್ರೀತಿಯ ರಾಜ್ಯದಲ್ಲಿಯೂ ಬುದ್ಧಿ-ಭಾವನೆಗಳ ಸಮನ್ವಯ ದೃಷ್ಟಿ ಇರಬೇಕು. ಆದರ್ಶಪ್ರೇಮದ ಭಾವನೆಯ ಬೆನ್ನುಹತ್ತಿದ ಪ್ರೊ. ಶಿವಕುಮಾರರಂತಹರು, ವ್ಯವಹಾರರಾಜ್ಯದಲ್ಲಿ ಏಟುತಿನ್ನಬೇಕಾಗುವುದು ಖಂಡಿತ!

卐

ಪ್ರೊಫೆಸರ್ ಶಿವಕುಮಾರ ಮಾಥುರರಿಗೆ ಇಂದು ತಮ್ಮ ಕಣ್ಣಿನ ವಿಶ್ವಾಸ ತಮಗೇ ಇಲ್ಲದಂತಾಯಿತು. ತಾವು ಕನಸನ್ನು ಕಾಣುತ್ತಿರುವೆವೆಂದು ಅವರು ಭಾವಿಸಿದರು: "ಪುಷ್ಪಾಸಿಂದ ತಂತಿ! ಅಶಕ್ಯ", ಅವರಿಗೆನಿಸಿತು. "ಆದರೂ ಕಳಿಸಿದವರ ಹೆಸರು ಇಲ್ಲಿ ಇದೆ...... 'ಪುಷ್ಪಾ!' ಅಹುದು, ನನ್ನ ಪುಷ್ಪಾ!" ಉದ್ವೇಗದಿಂದ ಅವರ ಕೈ ಅಂಗೈಗಳು ಬೆವತುವು. ಕಂಪಿಸುವ ಕೈಯಲ್ಲಿದ್ದ ಆ ತತ್ತರಿಸುವ ತಂತಿ, ತೊಯ್ದು ಮುದ್ದೆಯಾಗಿತ್ತು. ಕೋಮಲವಾದ ಕಳವಳದಿಂದ "ಪುಷ್ಪಾ" ಎಂದು ಅವರು ನಿಟ್ಟುಸಿರುಬಿಟ್ಟರು; ಮತ್ತು ರೇಡಿಯೋದ ಮೇಲಿನ ಅಂದವಾದ ಫ್ರೇಮಿನಲ್ಲಿರುವ—ನಗುತ್ತಿರುವ—ಪುಷ್ಪಾನ ಫೋಟೋದ ಕಡೆಗೆ ನಿಟ್ಟಿಸಿ ನೋಡಹತ್ತಿದರು. ಪ್ರಿಯ ಪುಷ್ಪಾ! ಅವರು ಆ ತಂತಿಯನ್ನು ಮತ್ತೊಮ್ಮೆ ಓದಿ ನೋಡಿದರು — ಬಹುಶಃ ಇದು ಇಪ್ಪತ್ತನೆಯ ಸಲ! "ಇಂದು ಸಂಜೆ ತಲ್ಪುವೆನು. ಸ್ಟೇಶನಿನಲ್ಲಿ ಭೆಟ್ಟಿಯಾಗಿರಿ.— ಪುಷ್ಪಾ" ಆ ತಂತಿಯಲ್ಲಿರುವ ಸುದ್ದಿ ಹಾರಿಹೋಗಬಹುದೇನೋ ಎಂಬಂತೆ ಅವರು ಆ ತಂತಿಯನ್ನು ತಮ್ಮ ಬೆರಳಿನಲ್ಲಿ ಬಿಗಿಯಾಗಿ ಹಿಡಿದರು. ಅನಂತರ ಅವರು ರೇಡಿಯೋದ ಸಮೀಪ ಹೋಗಿ, ಅಲ್ಲಿರುವ ಸೋಫಾದ ಮೇಲೆ ಕೂತು, ಆ ಫೋಟೋ ನಿಟ್ಟಿಸಿನೋಡಹತ್ತಿದರು. ಆ ಫೋಟೋದ ಬಲಬದಿಯಲ್ಲಿ "ಎಂದೆಂದೂ ನಿಮ್ಮವಳು" ಎಂಬ ಅಕ್ಷರ ಅಚ್ಚುಕಟ್ಟಾಗಿ ಕೊರೆದಿತ್ತು! ಶಿವಕುಮಾರರ ನೆನಪು ತಟ್ಟನೆ ಹತ್ತು ವರ್ಷಗಳ ಹಿಂದಿನ ಘಟನೆಗಳ ಕಡೆಗೆ ಹಾರಿತು.........

ಇಂಟರ್ ಪರೀಕ್ಷೆಯ ನಂತರ ಅವರು, ಅದೇ ಆಗ ಅಲಹಾಬಾದಿನಿಂದ ಮನೆಗೆ ಬಂದಿದ್ದರು. ಆಗಿಹೋದ ಅಂದಿನ ಸುಖದಿನಗಳಲ್ಲಿ ಹಗಲಿನಲ್ಲಿ ನಿದ್ದೆ ಮಾಡುವುದು, ಸಂಜೆಯಲ್ಲಿ ಟೆನಿಸ್ ಆಡುವುದು ಮತ್ತು ಬಹಳ ರಾತ್ರಿಯ ತನಕ ಇಂಗ್ಲೀಶ್ ಕಾದಂಬರಿಗಳನ್ನು ಓದುವುದು— ಇದಿಷ್ಟೇ ಎಡೆಬಿಡದ ಕಾರ್ಯಕ್ರಮ ಅವರದಾಗಿತ್ತು.

ಆದರೆ ಒಂದು ಮಧ್ಯಾಹ್ನ ಅವರ ಚಿಕ್ಕ ತಂಗಿ ಸುಧಾ, ತನ್ನೊಡನೆ ಕೇರಮ್ ಆಡಲು ಒತ್ತಾಯಪಡಿಸಿ, ಅವರನ್ನು ನಡುಮನೆಗೆ ಎಳೆದೇ ಒಯ್ದಳು; ಮತ್ತು ಹೌದು,— ಅದೇ ಸಮಯ ಅವರು ಪುಷ್ಪಾಳನ್ನು ಮೊದಲುಬಾರಿ ಕಂಡದ್ದು. ಸೇವಂತಿಗೆಯ ಬಣ್ಣದ ಸೀರೆ ಉಟ್ಟು, ಕಪ್ಪು ವೆಲ್ವೆಟನ್ ಕುಪ್ಪಸ ತೊಟ್ಟ ಆಕೆಯ ನೈಕಟ್ಟು, ತುಂಬ ತುಂಬ ಸುಂದರವಾಗಿ ಒಡೆದು ಕಾಣುತ್ತಿತ್ತು...... ಅವರಿಗೆ ಇಂದು ಅದೆಲ್ಲದರ ನೆನಪು ಪರಿಸ್ಫುಟವಾಗಿ ಆಯಿತು. ಅಂದು ಅದೆಷ್ಟು ಕೋಮಲ, ಅದೆಷ್ಟು ಪ್ರಫುಲ್ಲ, ಅದೆಷ್ಟು ಉಜ್ವಲವಾಗಿ ಆಕೆ ಕಂಡಳು! ಆಕೆಯ ಎಡಗೈಯ ಕಿರುಬೆರಳಿಗೆ ವಸ್ತ್ರದ ಪಟ್ಟಿಯೊಂದು ಕಟ್ಟಿತ್ತು; ಅದೇ ಅವರಿಗೆ ಅವಳನ್ನು ಮಾತನಾಡಿಸಲು ಅನುವುಮಾಡಿಕೊಟ್ಟಿತು: "ನಿಮ್ಮ ಬೆರಳಿಗೆ ಏನಾಗಿದೆ?" ಆಕೆ ಒಂದಕ್ಷರ ಸಹ ಮಾತನಾಡಲಿಲ್ಲ. ಅವಳು ಪಟ್ಟಿಕಟ್ಟಿದ ಆ ಬೆರಳನ್ನು ಮರೆಮಾಡಲು ಮಾತ್ರ ಯತ್ನಿಸಿ, ನಸುನಕ್ಕಳು. ಆಕೆಯ ಧ್ವನಿಕೇಳಲು ಶಿವಕುಮಾರ, ಹಲವು ರೀತಿಯಿಂದ ಆಕೆ ಮಾತನಾಡುವಂತೆ ಪ್ರಯತ್ನಿಸಿದರು; ಚತುರತನದಿಂದ ಬಹಳ ನೆವಗಳನ್ನು ಹುಡುಕಿದರು; 'ಪೋಯಿಂಟ್ಸ್'ಗಳ ಬಗ್ಗೆ ಕೇಳಿದರು; "ಸ್ಕ್ವಾಯರ್" ಬಗ್ಗೆ ಕೇಳಿದರು; ಬೇಕುಬೇಕೆಂತಲೇ ತಪ್ಪಿತಪ್ಪಿ ಆಡಿದರು; ಆದರೆ ಅದಾವುದೂ ಪುಷ್ಪಾ ಮಾತನಾಡುವಂತೆ ಮಾಡಲಿಲ್ಲ. ಅದೆಲ್ಲವೂ ತಾನು ಮಾತನಾಡಬೇಕೆಂದು ಹೂಡಿದ ತಂತ್ರವಿತ್ತೆಂದು ಆಕೆ ಊಹಿಸಿದ್ದಳು. ಆದರೆ, ಮಾತನಾಡುವುದರ ಬದಲು ಆತನ ಹಂಚಿಕೆಯು ನಿಷ್ಫಲವಾದುದರ ಬಗ್ಗೆ ಆಕೆಗೆ ಪರಾಕಾಷ್ಠೆಯ ತೃಪ್ತಿಯಾಯಿತೋ ಎನ್ನುವಂತೆ, ಆಕೆ ಆಗೊಮ್ಮೆ ಈಗೊಮ್ಮೆ, ತುಂಟತನದಿಂದ ನಸುನಗುತ್ತಿದ್ದಳು. ಹಾ! ಈ ಫೋಟೋದಲ್ಲಿ ನಗುತ್ತಿರುವಂತೆಯೇ ಆಕೆ ಆವಾಗ ನಕ್ಕಿದ್ದಳು. ಅದೆಷ್ಟೋ ಅನುನಯದ ನಂತರ ಆಕೆ ಫೋಟೋ ತೆಗೆಯಿಸಿಕೊಳ್ಳಲು ಒಪ್ಪಿದ್ದಳು! ಆಗ ಅವರು ಕೊಲೇಜಿನಲ್ಲಿ ಮೂರನೆಯ ವರ್ಷದಲ್ಲಿ ಓದುತ್ತಿದ್ದರು, ಮತ್ತು ದಸರೆಯ ಸೂಟಿಯಲ್ಲಿ ಮನೆಗೆ ಬಂದಿದ್ದರು. ಪುಷ್ಪಾ ಮೆಟ್ರಿಕ್ ಕ್ಲಾಸಿನಲ್ಲಿ ಓದುತ್ತಿದ್ದಳು. ಅವರ ಆಲೋಚನೆಗೆ ಆಕೆ ಒಪ್ಪಿಗೆಕೊಟ್ಟಳು; ಆದರೆ ಅವನು ಪ್ರತ್ಯಕ್ಷ ಕೆಮೆರಾ ತಂದಾಗ ಮಾತ್ರ ಆಕೆ ಓಡಿಹೋಗಲು ತೊಡಗಿದಳು. ಶಿವಕುಮಾರ ಆಕೆಯನ್ನು ಅಟ್ಟಿಕೊಂಡು ಹೋಗಿ ಕಪಾಟಿನ ಹಿಂದೆ ಹಿಡಿದನು. ಆಕೆಯ ನಗೆಯು ಫೊಕ್ಕನೆ ಹೊರಹೊಮ್ಮಿತು, ಮತ್ತು ತತ್‌ಕ್ಷಣ ಆಕೆ ವಿರೋಧಮಾಡಿದಳು. "ಬಿಡಿರಿ! ನನ್ನನ್ನು ಹೋಗಲು ಬಿಡಿರಿ," ಎಂದು ಆಕೆಯು ಅವರ ಹಿಡಿತದಿಂದ ಬಿಡಿಸಿಕೊಳ್ಳಲು ದೃಢವಾಗಿ ಹೆಣಗುತ್ತ ಹೇಳಿದಳು.

* ಸುಪ್ರಸಿದ್ಧ ಚಲಚ್ಚಿತ್ರ ನಟ ಕಿಶೋರಶಾಹು ಅವರ ಕತೆಯೊಂದರ ಅನುವಾದವಿದು. **ಸಂ. ಜ.**



"ನಿನ್ನಿಷ್ಟಕ್ಕೆ ನೀನು ಬಿಡಿಸಿಕೊಂಡು ಹೋಗು. ಯಾರು ಹಿಡಿದಿರುವರು ನಿನ್ನನ್ನು ?" ಎಂದು ಅವರು ತುಂಟತನದಿಂದ ನುಡಿದರು:

"ನನ್ನನ್ನು ಹೋಗಲು ಬಿಡಿರಿ, ಕುಮಾರ! ಯಾರಾದರೂ ನಮ್ಮನ್ನು ನೋಡಿಯಾರು."

"Who cares"— ಹೀಗೆನ್ನುತ್ತ ಶಿವಕುಮಾರ ಪುಷ್ಪಾನ ಗಲ್ಲವನ್ನು ಮೊದಲು ಬಾರಿಗೆ ಚುಂಬಿಸಿದ್ದರು. ಹೌದು,— ಅದೇ ಮಚ್ಚೆಯುಳ್ಳ ಗಲ್ಲ. ಆ ಸಣ್ಣ ಮಚ್ಚೆ ಇದ್ದ ಆ ಗಲ್ಲ, ಲಜ್ಜೆಯ ಮೂಲಕ ನಸುಗೆಂಪಾಗಿ ಚೆಂದಕಾಣಿಸಿತು..................

ಚಹದ ಟ್ರೇ ತಕ್ಕೊಂಡು ಒಳಗೆ ಬಂದ ಅಬ್ದುಲ್ಲನು, ಪ್ರೊಫೆಸರರು ರೇಡಿಯೋದ ಮೇಲಿರುವ ಫೋಟೋದಲ್ಲಿ ಮಗ್ನರಾಗಿದ್ದುದನ್ನು ಕಂಡ. ಅವನ ಒಡೆಯನ ಆ ವಿಕಾರ ಅವನಿಗೆ ಗೊತ್ತಿದ್ದಿತ್ತು. ಆ ಮನೆಯಲ್ಲಿ ಅವನ ಎಂಟು ವರ್ಷಗಳ ದೀರ್ಘ ಕಾಲದಿಂದಲೂ ಚಾಕರಿ ಮಾಡುತ್ತಿರುವುದರಿಂದ ಅವನಿಗೆ ತನ್ನ ಒಡೆಯನ ಅನೇಕ ವಿಚಿತ್ರಗಳನ್ನು ನೋಡುವ ಸಂದರ್ಭ ಒದಗಿತ್ತು. ಅವನ ಒಡೆಯನು ಕೂಡ ಅವನೊಡನೆ ಹಲವು ಬಾರಿ ತನ್ನ ಮತ್ತು ಪುಷ್ಪಾಳ ಪ್ರೇಮಕತೆಯನ್ನು ವರ್ಣಿಸಿ, ತನ್ನ ಅತುರಭಾರವಾದ ಹೃದಯವನ್ನು ತೋಡಿಕೊಳ್ಳುತ್ತಿದ್ದನು.

ಒಡೆಯನಿಗೆ ತಾನು ಬಂದುದರ ಅರಿವನ್ನು ಮಾಡಿಕೊಡಲು ಅಬ್ದುಲ್ಲನು ತನ್ನ ಕರಿಯವಾದ ಗಡ್ಡದ ಮೇಲೆ ಕೈ ಆಡಿಸುತ್ತ, ಸಣ್ಣಗಾಗಿ, ಯುಕ್ತಿಯಿಂದ ಕೆಮ್ಮಿದ; ಆದರೆ ಅಬ್ದುಲ್ಲನು ಮಾಡಿದ ಸದ್ದು ಅವನ ಒಡೆಯನಿಗೆ ಬಹುಶಃ ಕೇಳಿಬರುವ ಸಂಭವವಿರಲಿಲ್ಲ.

"ಸರಕಾರ್, ಇಲ್ಲಿ ಚಹಾ ಇಟ್ಟಿದ್ದೇನೆ." ಅಬ್ದುಲ್ಲನು ನಮ್ರತಾಪೂರ್ವಕವಾಗಿ ಹೇಳಿದನು. ಪ್ರೊಫೆಸರರು ಮತ್ತೊಮ್ಮೆ ಆ ತಂತಿಯಲ್ಲಿರುವ ಸಂಗತಿಯನ್ನು ಓದಿದರು. ಮತ್ತು ಆ ಫೋಟೋದಲ್ಲಿ ಮತ್ತೆ ಮಗ್ನರಾದರು. "ಪ್ರಣಯ ಪೀಡಿತ! ಬೆಂದು ಬೇಗುದಿಗೊಂಡಿದ್ದಾನೆ ಬೇಟಾ!" ಹೀಗೆಂದು ವಿಚಾರಿಸಿ, ಅಬ್ದುಲ್ಲನು ಒಳಗಿಂದೊಳಗೆ ನಕ್ಕನು. ಅಬ್ದುಲ್ಲನಿಗೆ ಭಾವನೆ ಇದ್ದಿಲ್ಲವೆಂತಲ್ಲ. ಆದರೆ ಅವನು ಒಡೆಯನಂತೆ ಇದ್ದಿಲ್ಲ. ಕಳೆದುಹೋದ ಪ್ರೀತಿಗಾಗಿ ಕಣ್ಣೀರು ಸುರಿಸುತ್ತಿರುವ ಅಳುಬುರುಕ ಶೃಂಗಾರಭಾವವು ನಿಷ್ಫಲವೆಂದು ಅಬ್ದುಲ್ಲನಿಗೆನಿಸಿತ್ತು. ಅವನಿಗೆ ಜೀವನವುಗೊತ್ತಿದ್ದಿತು. ಅವನು ಕೂಡ ಒಂದು ಕಾಲಕ್ಕೆ ಆ ರೀತಿ ತರುಣನಿದ್ದನು; ಹಾಗೆ ನೋಡಿದರೆ ಈಗಲೂ ಕೂಡ ಅವನು ಅಷ್ಟೇನೂ ಮುದುಕನಲ್ಲ. ಅವನ ಮೊದಲಿನ ಹೆಂಡತಿ ಸತ್ತನಂತರ, ಅವನು ಎರಡನೆಯ ಮದುವೆ ಮಾಡಿಕೊಳ್ಳಲಿಲ್ಲವೇ ? ಮತ್ತು ಅವಳು ಅವನನ್ನು ಬಿಟ್ಟುಹೋದನಂತರ, ಅವನು ಸುಮ್ಮನೆ ದುಃಖಿಸುತ್ತ ಕೂತನೆ ? ಹೆಂಗುಸರು ಗಂಡುಸರ ಕಾಲಿನ ಜೋಡುಗಳಂತಲ್ಲವೇ ? ಒಂದನ್ನು ಕಳೆದುಕೊಂಡರೆ ಮತ್ತೊಂದನ್ನು ಮೆಟ್ಟುತ್ತೀರಿ. ನೀವು ಒಬ್ಬ ಹೆಂಡತಿಯನ್ನು ಕಳೆದುಕೊಂಡನಂತರ ಮತ್ತೊಬ್ಬಳನ್ನು ಪಡೆಯುತ್ತೀರಿ. ಮತ್ತು ಅವಳನ್ನು ಕೂಡ ಕಳೆದುಕೊಂಡರೆ ಮೂರನೇಯವಳನ್ನು ಮಾಡಿಕೊಳ್ಳುತ್ತೀರಿ. ಪ್ರೊಫೆಸರರ ಪ್ರಿಯತಮೆಯು ಬೇರೊಬ್ಬನನ್ನು ಮದುವೆಯಾದರೆ— ಅವರು ತಮ್ಮ ಕೊನೆಯ ದಿನದತನಕ ಗೋಳಾಡುತ್ತಿರಬೇಕೆ? ತಮ್ಮ ಬಹುಮೂಲ್ಯ ಎಂಟು ವರುಷಗಳನ್ನು ಅವರು ಈ ಮೊದಲೇ ಪೋಲುಮಾಡಿದ್ದಾರೆ; ಉಳಿದ ಜೀವನದಲ್ಲಿ ಕೂಡ ಅವರು ಹಾಗೆಯೇ ಮಂಕಾಗಿರಬೇಕೇ ? ಅಬ್ದುಲ್ಲನು ಧೈರ್ಯಮಾಡಿ ಮತ್ತೊಮ್ಮೆ, "ಚಹಾ ಆರಿಹೋಗುತ್ತಿದೆ, ಗರೀಬ್‌-ಪರವಾರ್," ಎಂದು ಹೇಳಿದನು.

ಕಟ್ಟಕಡೆಗೆ ಗರೀಬ್‌-ಪರವಾರ್ ಆಲಿಸಿದರು. ಅವರು ಸಾವಕಾಶವಾಗಿ ಹೊರಳಿ, ಅಬ್ದುಲ್ಲನ ಕಡೆಗೆ ನೋಡಿದರು. ಅಬ್ದುಲ್ಲನ ಕಡೆಗೆ ನೋಡಿದರಷ್ಟೇ....ಅಬ್ದುಲ್ಲನನ್ನಲ್ಲ. ಅಬ್ದುಲ್ಲನು ಮತ್ತೊಮ್ಮೆ ಹೇಳಬೇಕಾಯಿತು. ಅವನು ತನ್ನ ಸಣ್ಣಗಿನ ಮಿಶ್ರಬಣ್ಣದ ಗಡ್ಡದ ಮೇಲೆ ಕೈಯಾಡಿಸುತ್ತ ಸಣ್ಣಗಾಗಿ ಕೆಮ್ಮಿದನು.

'ಹೋ, ನೀನೋ ? ಅಬ್ದುಲ್, ಅದೇನು ?" ಹೀಗೆನ್ನುತ್ತ ಪ್ರೊಫೆಸರರು ಗಾಳಿಗೋಪುರದಿಂದ ನೆಲಕ್ಕೆ ಕುಪ್ಪಳಿಸಿದರು.

"ಬಹಳ ಹೊತ್ತಿನಿಂದ ನಾನು ಚಹ ಹಿಡಿದುಕೊಂಡು ದಾರಿಕಾಯುತ್ತಿದ್ದೇನೆ, ಹುಜೂರ್! ಚಹಾ ಆರುವುದರಿಂದ ನೀವು ಸಿಡುಕುಗೊಳ್ಳಬಹುದು"

ಪ್ರೊಫೆಸರರು ನಗುತ್ತ, "ನಿನಗಾರು ಹೇಳಿದರು ನಾನು ಸಿಡುಕುಗೊಳ್ಳುವೆನೆಂದು ? ಅದೂ ನಿನ್ನೊಡನೆ ? ಮತ್ತೆ ಈ ಹೊತ್ತು ? ......ಅಚ್ಛಾ ಚಹಾ ಸಿದ್ಧಮಾಡು!"

ಅಬ್ದುಲ್ಲನು ಟ್ರೇ ಮೇಜಿನಮೇಲಿಟ್ಟು, ಸ್ವಲ್ಪ ಚಹಾ ತಯಾರಿಸಿ ಕಪ್ಪೊಂದನ್ನು ಒಡೆಯನ ಕೈಗಿತ್ತನು. ಚಹಾದ ಕಪ್ಪನ್ನು ಕೈಗೀಡುವಾಗ ಅವನು "ನನ್ನ ದಿಟ್ಟತನಕ್ಕೆ ಕ್ಷಮೆ ಇರಲಿ, ಹುಜೂರ್! ಆದರೆ ಚಿತ್ರಗಳಿಗೆ 'ಕುರ್ಬಾನ್' ಮಾಡುವುದು ಇನ್ನು ಸಾಕು. ಈಗ ನನಗೊಬ್ಬಳು ಒಡತಿ ಸಿಗುವಂತೆ ಮಾಡಿರಿ— ಎಂದು ನಿಮ್ಮ ಹತ್ತಿರ ನಾನು ಬೇಡುವೆನು. ಅವರು ಮನೆಯನ್ನು ಚೆನ್ನಾಗಿ ನಡೆಸಬಲ್ಲರು, ಮತ್ತು ನಿಮ್ಮನ್ನೂ ನಲಿಸಬಲ್ಲರು." ಮಿತಿಮೀರಿ ಸಲುಗೆಯ ಅಪಲಾಭವನ್ನು ಪಡೆಯುತ್ತಿದ್ದ ಅಬ್ದುಲ್ಲನು, ಯೋಗ್ಯ ಅವಕಾಶ ದೊರೆತಾಗ ಚಾಣಾಕ್ಷ ಅಭಿಪ್ರಾಯಗಳನ್ನೂ ಆಡಿತೋರಿಸುತ್ತಿದ್ದನು.

"ಒಡತಿ!" ಪ್ರೊಫೆಸರರು ನಸುನಕ್ಕರು. "ಅವಳು ಇಂದು ಸಂಜೆ ಬರುತ್ತಾಳೆ!"

"ತಾವು ನನ್ನ ತಮಾಷೆಮಾಡುತ್ತೀರಿ ಹುಜೂರ್! ಯಾವಾಗಲೆಲ್ಲ ಈ ಗುಲಾಮನು ಅರಿಕೆಮಾಡಿಕೊಂಡರೆ, ಹೀಗೆಯೇ—ನೀವು ಅದನ್ನು ವಿನೋದದಲ್ಲಿಯೇ ಹಾರಿಸಿಬಿಡುತ್ತೀರಿ."

"ಇಲ್ಲ, ನಾನು ವಿನೋದಮಾಡುತ್ತಿರುವುದಿಲ್ಲ. ನಾನು ನಿಜವನ್ನೇ ಹೇಳುತ್ತಿದ್ದೇನೆ. ಅವಳು ಇಂದು ಸಂಜೆ ಬರುತ್ತಾಳೆ. ಇದೋ ನೋಡು, ಈ ತಂತಿ!"

ಒಂಟಿಯಂತಿರುವ ಉದ್ದ ಕತ್ತನ್ನು ತಂತಿಯ ನಿಟ್ಟಿನಲ್ಲಿ ಇನ್ನೂ ಉದ್ದವಾಗಿ ಚಾಚುತ್ತ, ಅಬ್ದುಲ್ಲನು ಸಮೀಪಕ್ಕೆ ಸಾರಿದನು; ಮತ್ತು "ಯಾರಿಂದ ತಂತಿ ಹುಜೂರ್," ಎಂದು ಕೇಳಿದನು

ಪ್ರೊಫೆಸರರು ರೇಡಿಯೋದ ಮೇಲಿರುವ ಫೋಟೋದ ಕಡೆಗೆ ತೋರಿಸಿದರು.

ಅಬ್ದುಲ್ಲನು "ನಿಜವೇ?" ಎಂದು ಕೇಳಬೇಕೆಂದಿದ್ದ, ಆದರೆ ಆಶ್ಚರ್ಯದ ಅತಿರೇಕದ ಮೂಲಕ ಅವನಿಗೆ ಶಬ್ದಗಳೇ ನೆನಪಾಗಲಿಲ್ಲ. ಅವನ ಬಾಯಿ ತೆರೆಯಿತು ಮತ್ತು ಹಾಗೆಯೇ ವಿಕಟವಾಗಿ ತೆರೆದೇ ಉಳಿಯಿತು. ಅವನ ಚಿಕ್ಕವಾದ ತೀಕ್ಷ್ಣದೃಷ್ಟಿಯ ಕಣ್ಣುಗಳು, ಪ್ರೊಫೆಸರನಿಂದ ರೇಡಿಯೋದ ಮೇಲಿರುವ ಫೋಟೋದ ಕಡೆಗೂ, ಮತ್ತು ಆ ಫೋಟೋದ ಕಡೆಯಿಂದ ತಿರುಗಿ ಪ್ರೊಫೆಸರನ ಕಡೆಗೂ ತಿರುಗಾಡಲು ತೊಡಗಿದುವು. ಬಿಗಿದು ಕಟ್ಟಿದಂತೆ ಹತ್ತಿಯಾಗಿ ತೊಟ್ಟುಕೊಂಡ ಉದ್ದ ಚಣ್ಣದಲ್ಲಿ, ಅಬ್ದುಲ್ಲನ ಬಡಕ ಶರೀರವು ಕೇವಲ ಒಂದು ವ್ಯಂಗ್ಯಚಿತ್ರದಂತೆ ಕಾಣುತ್ತಿತ್ತು! ಅವನ ಆ ವಿನೋದಪೂರ್ಣ ಹಾವಭಾವಗಳ ನಿಲುವನ್ನು ನೋಡುತ್ತಿರುವಂತೆ ಪ್ರೊಫೆಸರರಿಗೆ ನಗು ತಡೆಯಲಾಗಲಿಲ್ಲ. ಅಬ್ದುಲ್ಲನು ಕೂಡ ನಕ್ಕ. ಇಬ್ಬರೂ ಒಡೆಯ-ಸೇವಕರು ಒಬ್ಬರನ್ನೊಬ್ಬರು ನೋಡಿ ನಕ್ಕರು. ಸ್ವಲ್ಪ ವೇಳೆಯ ನಂತರ ಅಬ್ದುಲ್ಲನು "ಆದರೆ, ಹುಜೂರ್, ಅವರಿಗೆ,— ಅಲ್ಲ, ಅವರು ಈಗ ಮದುವೆಯಾದ ಹೆಂಗುಸು, ಹಿಂದೊಮ್ಮೆ ನೀವು ಹಾಗೆನ್ನೋ ನನ್ನೊಡನೆ ಹೇಳಿದ್ದಿರಲ್ಲವೇ?" ಎಂದು ಕೇಳಿದನು.

"ಹೌದು. ಅದು ನನ್ನ ದುರ್ದೈವ!" ಪ್ರೊಫೆಸರರು ಅಂದರು, "ನಾನು ಇಂಗ್ಲಂಡಿಗೆ ಹೋಗದಿದ್ದರೆ, ಮತ್ತು ನಾನಿಲ್ಲದ ವೇಳೆಯ ಅನ್ಯಾಯಲಾಭ ತಕ್ಕೊಂಡು ಅವಳ ಕಡೆಯ ಜನರು ಅವಳನ್ನು ಬೇರೆಯವನೊಡನೆ ಲಗ್ನಮಾಡಿಕೊಡದಿದ್ದರೆ, ಇಂದು ಆವಳ ನಿನ್ನ ಒಡತಿಯಾಗಿರುತ್ತಿದ್ದಳು ಅಬ್ದುಲ್ಲ!" ಶಿವಕುಮಾರರ ಧ್ವನಿಯಲ್ಲಿ ಕ್ಲೇಶವಿತ್ತು. ಪುಷ್ಪಾನ ಮದುವೆಯ ಸುದ್ದಿಯಿಂದ ಅವರಿಗಾದ ವ್ಯಥೆಯ ವೇದನೆ ಎಂತಹದೆಂಬುದು ಅವರಿಗೊಬ್ಬರಿಗೇ



BOMBAY OFFICE: Princess Street

ಏಜಂಟರು ಬೇಕು

ಜಯಂತಿಯನ್ನು ಮಾರಾಟ ಮಾಡಲಿಕ್ಕೆ ಕರ್ನಾಟಕದ ಬೇರೆ ಬೇರೆ ನಗರಗಳಲ್ಲಿ, ಪ್ರಾಮಾಣಿಕ ಏಜಂಟರು ಬೇಕು. ಯೋಗ್ಯ ಕಮಿಶನ್ ಕೊಡಲಾಗುವುದು. ಕರಾರುಗಳಿಗಾಗಿ ಪತ್ರವ್ಯವಹಾರ ಮಾಡಿ ತಿಳಿದುಕೊಳ್ಳಬೇಕು. ಮನೆ ಮನೆಗೂ ಇರಬೇಕಾದ ಈ ಪತ್ರಿಕೆಯನ್ನು ಮನೆಮನೆಗೂ ತಲ್ಪಿಸುವ ಅಗತ್ಯವಿದೆ.

ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಗೊತ್ತು. ತನ್ನ ಉಳಿದ ಜೀವನದಲ್ಲಿ ಬ್ರಹ್ಮಚಾರಿಯಾಗಿ ಉಳಿಯಬೇಕೆಂದು ಅವರು ನಿರ್ಣಯಿಸಿದ್ದರು. ಅವರ ತಾಯಿ ಮತ್ತು ಅಣ್ಣ [illegible] ಮದುವೆಯಾಗುವಂತೆ ಎಷ್ಟೋ ಒಡಂಬಡಿಸಿದ್ದರು. ಆದರೆ ಸ್ವರ್ಗೀಯ ಪುಷ್ಪಾನ ಮಧುರಮೂರ್ತಿಯನ್ನು ಮನಸ್ಸಿನಿಂದ ತೆಗೆದುಹಾಕಲು ಶಿವಕುಮಾರರಿಗೆ ಶಕ್ಯವಿಲ್ಲ.

"ಹಾಗಿಯೇ ಸರಕಾರ್," ಅಬ್ದುಲ್ಲನು ಕೆಲ ಮಟ್ಟಿಗೆ ಅಸಮಾಧಾನವೆಂಬಂತೆ ನುಡಿದನು, "ಅವರ ಗಂಡ— ದೇವರು ಹಾಗೆ ಮಾಡದಿರಲಿ— ದೇವರು ಅನುಗ್ರಹಿಸಲಿ— ನಾನು ಹೇಳುವುದೇನೆಂದರೆ,— ಆಕೆಯ ಗಂಡ— ಅವರು ಬದುಕಿರುವರಷ್ಟೇ ?"

"ಹೌದು," ಪ್ರೊಫೆಸರರು ಅಂದರು "ಅವರು ಚೆನ್ನಾಗಿ ಇದ್ದಾರೆ–ಜೀವದಿಂದ ಗಟ್ಟಿಯೇ ಇದ್ದಾರೆ !"

"ಅಂದರೆ, ಹುಜೂರ್, ಗಂಡನನ್ನು ಬಿಟ್ಟು ಬರು—"

"ಇಲ್ಲ-ಹಾಗೇನಿಲ್ಲ. ಕೆಲವೊಂದು ಕೆಲಸಕ್ಕಾಗಿ ಅವಳು ಇಲ್ಲಿಗೆ ಬರುತ್ತಾಳೆ." ಎಂದು ಅವರು ಅಂದರು; ತಡೆದು ಮತ್ತೆ, ಒಳ್ಳೇ ಸಂತಸಗೊಂಡು "ತನ್ನನ್ನು ಭೆಟ್ಟಿಯಾಗಬೇಕೆಂದು ನನಗೆ ತಿಳಿಸಿದ್ದಾಳೆ." ಎಂದು ಮಾತು ಮುಗಿಸಿದರು. ಪ್ರೊಫೆಸರರ ಮನಸ್ಸಿನ ಮುಂದೆ ಪುಷ್ಪಾನ ಮಚ್ಚೆಯುಳ್ಳ ಗಲ್ಲ ಕಾಣಿಸಿತು. ಅವಳ ಉದ್ದನೆಯ ಚೆಲುವಾದ ಕಪ್ಪು ಹೆರಳುಗಳು—ಅವರ ಕಣ್ಣಿನ ಮುಂದೆ ಹಾವುಗಳಂತೆ ಅಲುಗಾಡಿದುವು. ತಲೆಯ ಮೇಲಿನ ಸೀರೆಯ ಸೆರಗು ಸರಿಯಾಗಿ ಇರುವಂತೆ ಅವಳು ಮತ್ತೆ ಮತ್ತೆ ಮಾಡುವ ನಿಷ್ಫಲ ಪ್ರಯತ್ನ........."ಅಬ್ದುಲ್ಲ" ಅವರು ಕೂಗಿದರು.

"ಜೀ ಸರಕಾರ್," ಅಬ್ದುಲ್ಲನು ರೇಡಿಯೋದ ಮೇಲಿರುವ ಫೋಟೋದ ಕಡೆಗೆ ದಿಟ್ಟಿಸಿ ನೋಡುತ್ತಿದ್ದನು.

"ನಿನ್ನ ಹೆಂಡತಿಯ ನೆನಪು ನಿನಗೆ ಎಂದೂ ಆಗುವುದಿಲ್ಲವೆ ?"

"ಯಾವಳು ಹುಜೂರ್ ? ಮೊದಲಿನವಳೋ—ಅಥವಾ ಅನಂತರ ಬಂದವಳೋ ?"

ಪ್ರೊಫೆಸರರು ಜೋಳ್ಳನೆ ನಕ್ಕರು; "ಇಬ್ಬರದೂ !" ಅವರು ಹೇಳಿದರು.

ಅಬ್ದುಲ್ಲನು ತನ್ನ ಕರೆನರೆ ಗಡ್ಡದ ಮೇಲೆ ಕೈಯಾಡಿಸಿದನು. "ಸರಕಾರ್, ನೆನಪಿನಿಂದ ಯಾರಿಗೆ ಏನು ಸಿಕ್ಕದ್ದುಂಟು ? ನನ್ನ ಮೊದಲನೆಯ ಹೆಂಡತಿ ಸತ್ತಿರುವಳು. ಆ ರಸೂಲ-ಏ-ಪಾಕನು ಅವಳ ಆತ್ಮಕ್ಕೆ ಶಾಂತಿ ನೀಡಲಿ ! ನನ್ನ ಎರಡನೆಯವಳು—ಆ ಸಿಡಿಮಾರಿ ಬೆಕ್ಕು—ನನ್ನನ್ನು ಬಿಟ್ಟು ಹೋದಳು. ಆಕೆ ಇನ್ನು ಯಾರನ್ನಾದರೂ ಗಂಡನೆಂದು ಒಪ್ಪಿಕೊಂಡಿದ್ದರೆ, ಅವನ ಬದುಕನ್ನೂ ನರಕವನ್ನಾಗಿಯೇ ಮಾಡಿರಬೇಕು, ಹುಜೂರ್, ಆ ಚಂಡಿ ತಾನೊಬ್ಬ ಅಪ್ಸರೆಯ ಮಗಳೆಂತಲೇ ತಿಳಿದಿದ್ದಳು."

"ಇರಲಿ. ಆ ವಿಷಯ ಬಿಡು" ಪ್ರೊಫೆಸರರು ನಗುವನ್ನು ಹತ್ತಿಕ್ಕುತ್ತ ಅಂದರು "ಸಿಟ್ಟಿನ ಭರದಲ್ಲಿ, ನೀನು ನಿನ್ನ ಒಡತಿಯನ್ನು ಮರೆತಂತೆ ತೋರುತ್ತದೆ !"

"ಇಲ್ಲ, ಹುಜೂರ್ ! ಅದು ಹೇಗೆ ಸಾಧ್ಯ ? ಆದರೆ ಅವರೆಂಥ ಒಡತಿಯರು ? ಮರುಕ್ಷಣಕ್ಕೇ ಹೊರಟು ಹೋಗಲು ಬರುವವರು. ಅವರು ನಿಮ್ಮೊಡನೆಯೇ ಉಳಿದು ಬಿಡಲಿಕ್ಕೇನು ಬರುವಂತಿಲ್ಲ. ಗರೀಬಪರವರ್, ದಯಮಾಡಿ ಸ್ಥಿರವಾದ ಒಂದು ತೀರ್ಮಾನ ಮಾಡಿಕೊಂಡು ಬಿಡಿ, ನಿಮ್ಮ ಕಾಲೇಜಿನಲ್ಲಿ ಹಲವು ಹೆಣ್ಣು ಮಕ್ಕಳು ಓದುತ್ತಾರೆ. ನೀವು ಒಂದು ಸೂಚನೆಯ ಸನ್ನೆ ಮಾಡುವುದೇ ತಡ, ಅಲ್ಲಾನ ಆಣೆಯಾಗಿಯೂ ಅವರೆಲ್ಲ ಹಿಂಡುಗಟ್ಟಿ ನಿಮ್ಮ ಕಾಲಿಗೆ ಬೀಳುವರು ನೋಡಿ !"

ಪ್ರೊಫೆಸರರಿಗೆ ತಡೆಯಲಾಗಲಿಲ್ಲ; ಗಹಗಹಿಸಿ ನಕ್ಕರು. ಅಬ್ದುಲ್ಲನ ಮಾತುಗಾರಿಕೆಯಲ್ಲಿ ಅವರಿಗೆ ಕೆಲವೊಮ್ಮೆ ತುಂಬ ಮೋಜು ಅನಿಸುತ್ತಿತ್ತು. ಅವನ ಆ ಬಾಯ್ತುಂಬ ಹೊಗಳಿಕೆಯ ಶೈಲಿ, ಆ ಜಂಭದ ಮಾತು, ಆಲಂಕಾರಿಕ ಅತಿಶಯೋಕ್ತಿ— ಇವೆಲ್ಲ ಅಬ್ದುಲ್ಲನ ವಾಗ್ವಿಶೇಷಗಳಾಗಿದ್ದುವು. ಇವೇ ಗುಣಗಳಿಗಾಗಿ ನೆರೆಕೆರೆಯ ಬಂಗಲೆಗಳ ಜವಾನರೆಲ್ಲ ಅವನನ್ನು "ಅಬ್ದುಲ್ಲ-ಮಿಯಾ !" ಎಂದು ಮನ್ನಣೆಯಿಂದ ಕರೆಯುತ್ತಿದ್ದರು. ಪೂರಣ

ಮಡಿವಾಳನ ವಿಧವೆ ತಂಗಿ ಮೋಂಗಾ, ಅವನನ್ನು “ಬಡೇ ಮಿಯಾ” ಎಂದು ಆದರದಿಂದ ಸಂಬೋಧಿಸುತ್ತಿದ್ದಳು. ಬೀದಿ-ಕೊಟಡ ಚೌಕಿನಲ್ಲಿ ವೀಳ್ಯ ಮಾರುವವನನ್ನು “ಖಾನ್‌ಸಾಹೇಬ್” ಎಂದು ಗೌರವಿಸದೇ ಅವನನ್ನು ಮಾತಾಡಿಸುತ್ತಲೇ ಇದ್ದಿಲ್ಲ.

ಅದೇ ಕ್ಷಣಕ್ಕೆ ಟೆಲಿಫೋನ್ ಗಂಟೆ ಬಾರಿಸಿತು. ಅಬ್ದುಲ್ ರಿಸಿವ್ಹರನ್ನು ಎತ್ತಿಕೊಂಡು ಕಿವಿಗೊಟ್ಟನು ಕೂಡಲೇ ಮುಖ-ಪಾತ್ರದ ಮೇಲೆ ಕೈಯನ್ನಿಟ್ಟು, ಸದಾಕಾಲ ವೀಳ್ಯ ಮೆದ್ದು ಕರಿಗೆಂಪಾದ ಹಲ್ಲುಗಳನ್ನು ಕಿರಿಯುತ್ತ “ಹುಜೂರ್, ತಮ್ಮನ್ನು ಕೇಳುತ್ತಾರೆ!” ಎಂದನು.

ಶಿವಕುಮಾರರು ಈಗ ಟೆಲಿಫೋನಿನ ಈ ಆಗಂತುಕ ಉಸಾಬರಿಯನ್ನು ಮೆಚ್ಚಲಿಲ್ಲ. ಕಬಾಬಿನ ಪ್ಲೇಟಿನಲ್ಲಿ ಎಲುವಿನ ತುಂಡು ಸಿಕ್ಕಂತೆ ಎನಿಸಿತು ಅವರಿಗೆ. “ಅದು ಯಾರು? ಹೆಸರು ಕೇಳು?” ಎಂದರು.

“ಅದು ಹೆಣ್ಣುದನಿ, ಹುಜೂರ್!”

“ಪರವಾ ಇಲ್ಲ, ಹೆಸರು ವಿಚಾರಿಸು! ಹೆಣ್ಣುದನಿಗಳಿಗೆ ಹೆಸರೇ ಇರುವುದಿಲ್ಲೇನು?”

ಅಬ್ದುಲ್ ಹೆಸರು ಕೇಳಿದ. “ಅವರು ಹೇಳುವುದಿಲ್ಲ, ಹುಜೂರ್. ಬರೇ ನಗುತ್ತಿದ್ದಾರೆ—” ಅವನು ನಿರಾಶೆಯ ದನಿ ತೆಗೆದನು.

ಪ್ರೊಫೆಸರರು ಬರಿಯದಾದ ಕಪ್ಪನ್ನು ಟ್ರೇದಲ್ಲಿ ಇಟ್ಟು ಎದ್ದರು. ಅಬ್ದುಲ್ಲನ ಕೈಯಿಂದ ರಿಸೀವ್ಹರ್ ತೆಗೆದುಕೊಂಡರು. ಅಬ್ದುಲ್ಲ ಟ್ರೇ ಎತ್ತಿಕೊಂಡು ಹೊರಗೆ ಹೋದನು. “ಹಲ್ಲೋ-ಹಲ್ಲೋ” ಪ್ರೊಫೆಸರರು ಮುಖಪಾತ್ರದಲ್ಲಿ ಕೂಗಿದರು. ಅವರಿಗೆ ಒಂದು ಪೂರ್ವಪರಿಚಿತ ಹಾಸ್ಯವು ಕೇಳಿಬಂತು. “ಹಲ್ಲೋ! ಯಾರು? ಪುಷ್ಪಾ! ನೀನು ಎಂದು ಬಂದು ತಲ್ಪಿದೆ?” “ಮುಂಜಾನೆ, ಇದೇ ಮುಂಜಾನೆ”—ಪುಷ್ಪಾ ಆ ದೂರದ ತುದಿಯಿಂದ ಟೆಲಿಫೋನಿನಲ್ಲಿ ಉಲಿದಳು. “ನೀನು ನನ್ನ ದನಿ ಗುರುತಿಸಿದೆಯಾ ಕುಮಾರ?”

“ನಿನ್ನ ದನಿಯನ್ನು ನಾನು ಗುರುತಿಸಲಾರೆನೇ? ಓ— ನಿನಗೇನು ಗೊತ್ತು? ನೀನು ಊಹಿಸಲೂ ಆರೆ: ನಾನೆಷ್ಟು ಹಿಗ್ಗಿದ್ದೇನೆಂದು. ಓ, ಪುಷ್ಪಾ, ಎಷ್ಟು ವರ್ಷಗಳನಂತರ ನನಗೆ ಹೀಗೆ “ಕುಮಾರ್” ಎಂದು ಕರೆದದ್ದು?”

“ಎಂಟು ವರ್ಷಗಳನಂತರ”

“ಅಹುದು, ಎಂಟು! ಬಹು ದೀರ್ಘ ಅವಧಿ!”

“ನೀನು ಚೆನ್ನಾಗಿದ್ದೀಯಾ ಕುಮಾರ್!”

“ಬದುಕಿದ್ದೇನೆ, ಥ್ಯಾಂಕ್ಸ್! ನೀನು ಎಲ್ಲಿಂದ ಮಾತನಾಡುತ್ತಿರುವಿ? ಏನು? ಪ್ಯಾರಡಾಯಿಜ್ ಹೋಟೆಲ್! ಆದರೆ ನೀನು ಸಂಜೆಯ ಗಾಡಿಗೆ ಬರುವವಳಿದ್ದೆಯಲ್ಲವೇ?”

“ಅಹುದು, ಆದರೆ ಡಾಕ್ಟರರು ಮೊದಲನೆಯ ಗಾಡಿಗೇ ಹೊರಡಲು ಹೇಳಿದರು.”

“ಡಾಕ್ಟರರು?”

“ಅಹುದು, ರಮಾ ಕೈ ಮುರಿದುಕೊಂಡಿದ್ದಾನೆ. ಅವನನ್ನು ನಾನು ಎಕ್ಸರೇ ಪರೀಕ್ಷೆಗಾಗಿ ತಂದಿದ್ದೇನೆ.”

“ರಮಾ ಯಾರು?” ಶಿವಕುಮಾರರು ಕೇಳಿದರು.

ಪುಷ್ಪಾನ ಹಾಸ್ಯಲಹರಿ ಅಲೆಯಲೆಯಾಗಿ ಹರಿಯಿತು “ನನ್ನ ಮಗ” ಎಂದು ಹೇಳಿದಳು.

“ಓ— ಹೀಗೋ! ಎಂದರೆ.... ನೀನೀಗ ತಾಯಿ ಆಗಿರುವಿ?”

ಪುಷ್ಪಾ ಇನ್ನೊಮ್ಮೆ ನಕ್ಕಳು. “ಹೇಳು ಪುಷ್ಪಾ, ನೀನು ನನ್ನ ಭೆಟ್ಟಿಗೆ ಎಂದು ಬರುತ್ತೀ?.... ನಿನಗೆ ಬೇಕೆನಿಸಿದಾಗ? ಅಯ್ಯೋ! ನಾನು ನಿನ್ನನ್ನು ನೋಡಲು ಆತುರದಿಂದ ಸಾಯುತ್ತಿದ್ದೇನೆ. ಈಗಲೇ ಹೊರಟು ಬಾ! ಓ, ಬೇಡ! ನಾನು ಈಗ ೧೧ಕ್ಕೆ ಕಾಲೇಜಿಗೆ ಹೋಗಬೇಕಾಗಿದೆ. ಏನೆಂದೆ? ಸಂಜೆಗೆ? ಏಕೆ? ಹಾಗಾದರೆ

ನೀನು ಆಸ್ಪತ್ರೆಯಿಂದ ಮರಳುವುದು ಯಾವಾಗ ? ಅಚ್ಛಾ! ನಿನ್ನ ಇಷ್ಟ! ಖಂಡಿತವಾಗಿ ನೀನು ಕೆಲವು ದಿನ ನನ್ನ ಜತೆ ಉಳಿಯುವೆಯಷ್ಟೇ ? ಏನು ? ಅಶಕ್ಯ.... !

" ಅಲ್ಲ ಕುಮಾರ್ ! ಕೇಳು. ಅವರಿಗೆ ಬರೇ ಎರಡು ದಿನದ ರಜೆ ಸಿಕ್ಕಿದೆ. ನಾವು ನಾಳೆಗೆ ಹೋಗಲೇಬೇಕು."

" ಒಂದು ಯುಗ ಕಳೆದು ಬಂದಿರುವಿ... ...ಬರೇ ಎರಡು ದಿನಗಳಿಗಾಗಿ ಬಂದೆಯಾ ?

" ಅದ್ದರಿಂದಲೇ ನಾನು, ಇಲ್ಲಿ ಹೋಟೆಲಿಗೆ ಬಂದು ತಲ್ಪಿದಕ್ಷಣ ನಿನಗೆ ಫೋನು ಮಾಡಿದೆ ! "

" ಸರಿ. ಹಾಗಾದರೆ ನಾನು ನಿನಗೆ ಸಂಜೆಗೆ ಯಾವಾಗ ಬಂದು ಕಾಣಲಿ ? ನೀನೇ ಬರುವೆಯಾ ? ಹ್ಞಾ, ಬಹುತ ಅಚ್ಛಾ ! ನನ್ನೊಡನೆ ಊಟಕ್ಕೆ ಉಳಿಯಬೇಕು.—ಅಹುದು ಅಹುದು— ನೀವೆಲ್ಲ ಬಂದು ಬಿಡಿ ! ನಾನು ದಾರಿ ಕಾಯುತ್ತೇನೆ. ಹಲ್ಲೋ, ಹಲ್ಲೋ, ಪುಷ್ಪಾ ! "

ಪುಷ್ಪಾ ಮಾತು ಮುಗಿಸಿಬಿಟ್ಟಿದ್ದಳು. ಪ್ರೊಫೆಸರರು ರಿಸೀವ್ಹರ್ ತೂಗಿಟ್ಟು ತನ್ನ ಖುರ್ಚಿಯಲ್ಲಿ ಮರಳಿ ಬಂದು ಕುಳಿತರು· ಒಂದು ಕರುಣಗೀತವನ್ನು ಗುಣುಗುಣಿಸಲು ತೊಡಗಿದರು. ರೇಡಿಯೋ ಸೆಟ್ಟಿನ ಮೇಲಿನ ಚಿತ್ರದಲ್ಲಿ ಪುಷ್ಪಾ ನಗುತ್ತಿದ್ದಳು. ಅವರು ಅಬ್ದುಲ್ಲನನ್ನು ಕೂಗಿದರು. ಅವರಿಗೆ ಗೊತ್ತು— ಕಣ್ಮರೆಯಾದೆನೆಂದು ಕಾಣಿಸಿ ಅಬ್ದುಲ್ಲ, ಕದದ ಮರೆಗೆ ಕಿವಿಗೊಟ್ಟು ಅಡಗಿದ್ದಾನೆಂದು.

" ಜೀ ಹುಜೂರ್," ಎಂದು ಉತ್ತರಿಸುತ್ತ ಅಬ್ದುಲ್ಲನು ಮರುಗಳಿಗೆಯೇ ಒಳಗೆ ಕಾಲಿಟ್ಟನು.

" ಇದು ನೋಡು. ಇಂದು ರಾತ್ರಿ ಒಂದು ಊಟ ಸಿದ್ಧ ಮಾಡು. ನಿನ್ನ ಒಡತಿ ಬರುತ್ತಾರೆ; ತಿಂಡಿಪದಾರ್ಥಗಳೆಲ್ಲ ಉತ್ತಮವಾಗಬೇಕು ನೋಡು. ಲಕ್ಷ್ಯದಲ್ಲಿ ಬಂದಿತೇ ? "

" ಎಷ್ಟು ಜನ ಊಟಕ್ಕೆ ಬರುವರು ? "

" ಎರಡು ನೂರು ಜನ! ಇರಲಿ ಇತ್ತ ಕೇಳು. ಪೇಟೆಯಿಂದ ಕೆಲವು ಮಾವಿನ ಹಣ್ಣುಗಳನ್ನು ಕೊಂಡು ತರಬೇಕು ! "

ಆ ದಿನವೆಲ್ಲ ಪ್ರೊಫೆಸರ್ ಸಾಹೇಬರಿಗೆ ಪಾಠ ಹೇಳುವುದರಲ್ಲಿ ಸ್ವಲ್ಪವೂ ಮನಸ್ಸಿದ್ದಿಲ್ಲ. ಪುಷ್ಪಾನ ಹಿಗ್ಗಿನ ಬುಗ್ಗೆಯಂಥ ನಗೆಯ ಕುಲುಕುಲು ಅವರ ಕಿವಿಯಲ್ಲಿ ಮೊಳಗುತ್ತಲೇ ಇತ್ತು. ಮುಚ್ಚಿಯಿಂದ ಮುದ್ದಾಗಿ ಕಾಣುವ ಆಕೆಯ ಗಲ್ಲ, ಅವರ ಚಿತ್ತರಂಗದಲ್ಲಿ ಸುಳಿಯುತ್ತಲೇ ಇತ್ತು. ಅವರಿಗೆ ತಮ್ಮ ಕಾಲೇಜಿನಲ್ಲಿ ಕಲಿಯುವ ದಿನಗಳು ನೆನಪಾದುವು.— ಆ ಸುಖದ— ಸಂದು ಹೋದ ದಿನಗಳು ; ಅವರು ಮತ್ತು ಪುಷ್ಪಾ ಇಬ್ಬರೇ ಜತೆಯಲ್ಲಿ (ಕನಸಿನಲ್ಲಿ) ಕಳೆದ ದಿನಗಳು ! ಪುಷ್ಪಾನನ್ನು ಕಳೆದುಕೊಂಡ ಮೇಲೆ ಅವರು ಆತ್ಮಹತ್ಯೆಮಾಡಿಕೊಂಡಂತೆಯೇ ಬದುಕಿದ್ದರು. ಬಾಳಿನಲ್ಲಿ ಒಮ್ಮೆಲೇ ಯಾವ ಅರ್ಥವೂ ಉಳಿಯಲಿಲ್ಲ. ಅವರ ತಾಯಿ, ಅಣ್ಣ ಕೂಡ ದುಃಖಪಟ್ಟುಕೊಂಡರು. ಅವರು ಹಲವಾರು ಹುಡುಗಿಯರನ್ನು ಆರಿಸಿದ್ದಾಯಿತು; ಮದುವೆಯ ಪ್ರಸ್ತಾಪವೆತ್ತಿದ್ದಾಯಿತು. ಆದರೆ ಶಿವಕುಮಾರರು ಮದುವೆಯನ್ನೇ ಒಪ್ಪಲಿಲ್ಲ. ಅವರ ತಾಯಿ ! ನಿನ್ನೆಯೇ ಬಂದ ಆಕೆಯ ಪತ್ರದಲ್ಲಿ ಮತ್ತೆ ಒಂದು ಹೆಣ್ಣಿನ ಪ್ರಸ್ತಾಪವನ್ನು ತೆಗೆದಿದ್ದಳು. ಆದರೆ ಅವರ ಹೃದಯವನ್ನೆಲ್ಲ ಪುಷ್ಪಾ ಒಬ್ಬಳೇ ವ್ಯಾಪಿಸಿದ್ದಳು. ಅಲ್ಲಿ ಇನ್ನಾರಿಗೂ ಸ್ಥಳವಿದ್ದಿಲ್ಲ. ಪುಷ್ಪಾನೊಡನೆ ಯಾವುದೇ ಪತ್ರೋತ್ತರಗಳು ಆಗಿದ್ದಿಲ್ಲ. ಆಕೆಯ ಬಗ್ಗೆ ಯಾವುದೇ ಒಂದು ವಿಶೇಷ ಆಶೆಯನ್ನು ಅವರು ಮನಸ್ಸಿನಲ್ಲಿ ಕಟ್ಟಿಕೊಂಡಿದ್ದಿಲ್ಲ. ಆಕೆಯನ್ನು ಅವರು ಪೂರ್ತಿ ಕಳಕೊಂಡಂತಿತ್ತು. ಆದರೂ ಆಕೆಯ ಮುಗ್ಧ ಮಧುರ ಮೂರ್ತಿಯನ್ನು ಹೃದಯದಿಂದ ಕಿತ್ತೊಗೆಯುವುದು ಸುಲಭ ಸಂಗತಿಯೇ ? ಪುಷ್ಪಾನಿಗೆ ಆತ್ಮಾರ್ಪಣೆಮಾಡುವುದರಿಂದ ಅವರು ಅನುಭವಿಸುತ್ತಿರುವ ಸುಖವನ್ನೇ ಇನ್ನೊಬ್ಬ ಹುಡುಗಿಯನ್ನೂ ಮದುವೆಯಾಗಿ ಮನೆಮಾಡಿಕೊಂಡಿರುವುದರಿಂದ ಅಶಿಸಬಹುದೇ ? ಅಬ್ದುಲ್ಲ ' ಒಡತಿ ' ಎಂದು ಕಾಡಿ ಬೇಡಬಹುದು. ಅದು ಅವನ ಚಟ. ಅವನೇನು ಬಲ್ಲ—ಪ್ರೊಫೆಸರರ ಅಂತರಂಗದ ಗುಪ್ತವೇದನೆ ? ಆಹಾ—ಈಗ ಎಂಟು ವರ್ಷಗಳ ನಂತರ ಅವರ ಕಣ್ಣುಗಳು, ಪುಷ್ಪಾನನ್ನು ಕಂಡು ಸವಿಯುಂಡು ತಣಿಯಲಿದ್ದುವು. ಎಂಟು ವರ್ಷ— ಎಂಟು ಹುರುಳಿಲ್ಲದ ಬರಡು ವರ್ಷ !

ಪ್ರೊಫೆಸರ್ ಸಾಹೇಬರು " ರೋಮಿಯೋ ಜ್ಯೂಲಿಯೆಟ್ ಓದಿ ಹೇಳುವಾಗ, ವಿಮನಸ್ಕರಾಗಿ ಎತ್ತೋ ಹರಿದರು. ಮುಂದಿನ ಬೆಂಚುಗಳನ್ನು ಅಲಂಕರಿಸಿದ ಹುಡುಗಿಯರ ಸಾಲು, ತಮ್ಮ ದಂತಪಙ್ಕ್ತಿಯಿಂದ ಅಧರಗಳನ್ನು ಕಚ್ಚಿ, ಹತ್ತಿಕ್ಕಲು ಹವಣಿಸಿದ ಪಿಸುನಗೆಯನ್ನು ಗಮನಿಸಿದಾಗಲೇ ಅವರಿಗೆ ತಮ್ಮ ವಿಮನಸ್ಕತೆಯ ಅರಿವಾಯಿತು. ಆಗಲೇ ತಮಗೆ ತಲೆಶೂಲಿಯೆಂದು ನೆವ ಹೇಳಿ, ಅವರು ವಿದ್ಯಾರ್ಥಿವರ್ಗದಿಂದ ತಮ್ಮ ರಹಸ್ಯವನ್ನು ಮರೆಯಿಸಿದ್ದು ಒಳಿತಾಯಿತು. ಇಲ್ಲವಾದರೆ ವರ್ಗದಲ್ಲಿ ಅವರ ಸೋಲು ಪೂರ್ತಿ ನಗೆಗೇಡು ಆಗುತ್ತಿತ್ತು. ಅವರು ಬೇಸರುಪಟ್ಟು, ಆಗಾಗ ಕೈಗಡಿಯಾರವನ್ನು ನೋಡತೊಡಗಿದರು. ಆದರೆ ಆ ಪಾಪಿ ಮುಳ್ಳುಗಳೂ ಬಂದು ಹೂಡುವ ಹಟವನ್ನೇ ಮಾಡಿದಂತಿತ್ತು ; ಬೇಗನೆ ಸರಿಯಲು ಸುತರಾಂ ಒಪ್ಪಲಿಲ್ಲ. ಕೊನೆಗೂ ಅಸ್ವಸ್ಥರಾಗಿ, ವರ್ಗವನ್ನು ಕೊನೆಯ ತಾಸಿಗೆ ಬಿಟ್ಟುಕೊಟ್ಟು ಲಗುಬಗೆಯಿಂದ ಮನೆಗೆ ನಡೆದರು.

ಪ್ರೊಫೆಸರರು ತಮ್ಮ ಮನೆಯ ಜಗುಲಿಯನ್ನೇರುವಾಗಲೇ ಅಬ್ದುಲನು ಅಡುಗೆಯ ಕೋಣೆಯಲ್ಲಿ ತಯಾರಿಸುತ್ತಿದ್ದ 'ಪುಲಾವಿ'ನ ಕಂಪನ್ನು ಘಮ್ಮಗೆ ಮೂಸಿದರು. ಅಬ್ದುಲನ ಕೈಯೇ ಅಷ್ಟು ಕುಶಲವಿತ್ತು— ಪಾಕಕಲೆಯಲ್ಲಿ. ಅವನು ತಯಾರಿಸುತ್ತಿರುವ ಪಕ್ವಾನ್ನಗಳ ಸೊಗಸಾದ ಕಂಪಿನಿಂದ, ಮನೆಗೆ ಮನೆಯೇ ತುಂಬಿ ಸೂಸುತ್ತಿತ್ತು.

“ಟೆಲಿಫೋನ್ ಕರೆಯೊಂದು ಬಂದಿತ್ತು, ಹುಜೂರ್” ಅಬ್ದುಲ್ಲ ವರದಿ ಒಪ್ಪಿಸಿದನು— ತನ್ನ ಬಣ್ಣ ಬಣ್ಣದ ಹೊಸ “ವಾಸ್ಕೋಟ”ನ ಜೇಬಿನಲ್ಲಿ ಕೈಗಳನ್ನು ತುರುಕುತ್ತ.

“ಯಾರಿಂದ?”

“ಒಡತಿಯಿಂದ—ಮುಂಜುವಿನ ಕರೆಯೇ, ಹುಜೂರ್.”

“ಅವರು ಏನೆಂದರು?” ಪ್ರೊಫೆಸರರಿಗೆ ದಿಗಿಲು—ಔತಣದ ನಿಮಂತ್ರಣ ರದ್ದಾಯಿತೋ ಎಂದು!

“ಏನಿಲ್ಲ, ಅವರು ಬರೇ ತಮ್ಮನ್ನು ವಿಚಾರಿಸಿದರು ಸರಕಾರ್! ತಾವು ಕಾಲೇಜಿಗೆ ಹೋಗಿರುವಿರೆಂದು ನಾನು ತಿಳಿಸಿದೆನು. ಅಂತಹದೇನೂ ವಿಶೇಷವಿಲ್ಲವೆಂದು ಅವರು ಅಂದರು. ಇಷ್ಟೆ, ಅವರು ಸಂಜೆಯ ೬ ಕ್ಕೆ ಬರುವರಂತೆ.”

ಪ್ರೊಫೆಸರರು ಸಮಾಧಾನದ ನಿಟ್ಟುಸಿರನ್ನು ನಿಧಾನವಾಗಿ ಸುಯ್ದರು. “ಸರಿ. ಅಬ್ದುಲ್, ಊಟಸಿದ್ಧವಾಗಲು ಎಷ್ಟು ವೇಳೆ ಇದೆ?”

“ಇನ್ನೂ ತುಂಬ ಅವಕಾಶವಿದೆ, ಸರಕಾರ್! ಇಗ ೪॥ ಕೂಡ ಬಡಿದಿಲ್ಲ. ತಮ್ಮ ಸ್ನಾನಕ್ಕಾಗಿ ಬಿಸಿನೀರು ಸಿದ್ಧವಿದೆ ಎಲ್ಲವನ್ನೂ ನಾನು ಸಜ್ಜುಗೊಳಿಸುತ್ತೇನೆ. ೬ ಘಂಟೆಗೆ ಸರಿಯಾಗಿ ತಮ್ಮ ಊಟ ಮೇಜಿನ ಮೇಲೆ ಸಿದ್ಧವಿರುತ್ತದೆ. ಗಡಬಿಡಿ ಮಾಡಬೇಡಿರಿ, ದಯಮಾಡಿ. ಇಂದು ನಮ್ಮ ಒಡತಿಗೆ ಇಂಥಾ ಊಟ ಉಣಿಸುತ್ತೇನೆ— ಅವರು ನಿಮ್ಮ ಈ ಬಡಗುಲಾಮನನ್ನು ಎಂದೂ ಮರೆಯಬಾರದು.”

ಶಿವಕುಮಾರರು ಬೇಗನೇ ಸಿದ್ಧರಾದರು. ಅಬ್ದುಲನು ಇಡೀ ಕೋಣೆಯನ್ನು ಮೊದಲೇ ಅಚ್ಚುಕಟ್ಟಾಗಿ ಇಟ್ಟಿದ್ದನು. ಆದರೂ ಅವನು ಮಾಡಿದ ವ್ಯವಸ್ಥೆಯಲ್ಲಿ ಕೆಲವೊಂದು ಸೂಕ್ಷ್ಮ ತಿದ್ದುಪಡಿ ಮಾಡದೆ ಪ್ರೊಫೆಸರರಿಗೆ ನೆಮ್ಮದಿಯೆನಿಸಲಿಲ್ಲ. ಪುಷ್ಪಾ ಬರುವಳು ಈ ಹೊತ್ತು! ಇನ್ನು ತುಸುವೇಳೆಗೆ ಅವಳು ಇಲ್ಲಿ ತಲ್ಪುವಳು—ಇಲ್ಲಿ ಶಿವಕುಮಾರರ ಸ್ವಂತ ಕೋಣೆಯಲ್ಲಿ ಕಾಲಿಡುವಳು,—ಕುಮಾರನೊಂದಿಗೆ ಸರಸವಾಡುವಳು! ಓ ಪುಷ್ಪಾ ಽಽ!

ಕಿಡಕಿಯ ಮುಂದೆ ನಿಂತು, ಪ್ರೊಫೆಸರರು, ಹೊರಗೆ ಹಾದಿಯಲ್ಲಿ ಸಾಗುವ ವಾಹನಗಳ ಓಡಾಟವನ್ನು ನೋಡತೊಡಗಿದರು. ಕೆಲವು ಕಾರುಗಳು ಬಂದು ಅವರ ಮನೆಯ ಎದುರು ನಿಂತುವು. ಆಗ ಅವರ ಎದೆಯೂ ಒತ್ತಡದಿಂದ ಹಾರಹತ್ತಿತು. ಆದರೆ ಯಾವ ಕಾರಿನಿಂದಲೂ ಪುಷ್ಪಾ ಇಳಿಯಲಿಲ್ಲ

ಒಮ್ಮೆಲೇ ಅವರ ಹಿಂಬದಿಗೆ ಆ ಕೋಣೆಯಲ್ಲಿ ಹೆಜ್ಜೆಗಳ ಭಾರವಾದ ಸದ್ದು ಕೇಳಿಸಿತು. ಹಿಂದಿರುಗಿ ನೋಡಿದರೆ, ತನ್ನ ಗಂಡ ಮತ್ತು ನಾಲ್ಕು ಮಕ್ಕಳಿಂದ ಸುತ್ತುಗಟ್ಟಿದ ಪುಷ್ಪಾನೇ ನಗುತ್ತ ನಿಂತಿದ್ದಾಳೆ. ಆ ನಗೆ ಪುಷ್ಪಾನದೇ ನಗೆ, ನಿಜ ಆದರೆ ಅವಳಲ್ಲಿ ಅಂಥ ಪರಿವರ್ತನೆ! ಅದೆಷ್ಟು ಭಯಂಕರವಾಗಿ ಪ್ರಚಂಡವಾಗಿ ಕೊಬ್ಬಿ ಬೆಳೆದಿದ್ದಾಳೆ! ಅವಳನ್ನು ಈಗ ಗುರುತಿಸುವುದೇ ಬಿಗಿಯಿತ್ತು. ಇವಳು ಅದೇ ಪುಷ್ಪಾನೇ? ಓ ಽಽಽ ಕೆಂಪು, ಹಳದಿ, ನೀಲಿ, ನೇರಲ—ಮುಂಜು ಶಿವಕುಮಾರರ ಕಣ್ಣೆದುರು ತೇಲತೊಡಗಿತು. ಕಣ್ಣಿಗೆ ಮಬ್ಬುಗಟ್ಟಿದಂತಾಯಿತು ತನ್ನ ಎದೆ ಹಾರುವುದು ಒಮ್ಮೆಲೇ ನಿಂತೇ ಹೋಗುವಂತೆ ಎನಿಸಿತು ಅವರಿಗೆ. ಕರಗುತ್ತಿರುವ ಮಂಜಿನಲ್ಲಿಯೇ—ತಿಳಿಯಾಗುತ್ತಿರುವ ಮಬ್ಬಿನಲ್ಲಿಯೇ—ಪುಷ್ಪಾ ಪರಿಚಯ ಮಾಡಿಕೊಡುತ್ತಿದ್ದುದು ಕೇಳಿಬಂತು. “ನನ್ನ ಪತಿ,

ಬಾಯೋಟೋನಾ

ಮಕ್ಕಳು ಮೊದಲ್ಗೊಂಡು ಮುದುಕರವರೆಗೆ ಸ್ತ್ರೀಪುರುಷರು ಇದನ್ನು ಸೇವಿಸಬಹುದು. ಮುದುಕರಿಗೂ ಜೀವಾಣುಗಳಿಗೂ ಬಲವನ್ನೂ ಆರೋಗ್ಯವನ್ನೂ ಕೊಡುವ ಉತ್ತಮ ಉಪಾಯವೆಂದರೆ ‘ಬಾಯೋಟೋನಾ’ ಸೇವಿಸುವದೇ ಆಗಿದೆ. ೪೦ ದಿವಸ ಸಾಕಾಗುವ ಬಾಟ್ಲಿಯ ಬೆಲೆ ರೂ. ೨ ಟಿ. ಖರ್ಚು ಬೇರೆ. ಸೂಚಿಪತ್ರ ಪಡೆಯಬಹುದು.

ROY & CO. BOMBAY 2.

ಚಿತ್ರಕಲಾ ಪ್ರವೇಶ

೩ನೆಯ ಆವೃತ್ತಿ

ಅಚ್ಚಾಗಿ ಸಿದ್ಧವಾಗಿದೆ.

ಬೇಕಾಗಿರುವವರು

ಬೇಗನೆ ಬೇಡಿಕೆ ಕಳುಹಿರಿ!

ಬರೆದವರು:

ಪ್ರೊ. ಜಿ. ಎಸ್. ಹುದ್ದಾರ

ಉಮಾಶಂಕರ! ಇವನು ಶಿವಕುಮಾರ ಮಾಘುರ! ಚಿಕ್ಕಂದಿನಲ್ಲಿ ನಾವು ಒಟ್ಟಿಗೇ ಜಗಳಾಡುತ್ತಿದ್ದೆವು- ಅಲ್ಲವೇ ಕುಮಾರ ? ”

ಶಿವಕುಮಾರರು ತನ್ನನ್ನು ಸಾವರಿಸಿಕೊಳ್ಳುತ್ತಿದ್ದರು. ಉಮಾಶಂಕರ ಅವರ ಕೈ ಕುಲುಕಿದನು. “ ನನ್ನ ಮಕ್ಕಳನ್ನು ಭೆಟ್ಟಿಯಾಗುವುದಿಲ್ಲವೇ ? ” ಪುಷ್ಪಾ ಎನ್ನುತ್ತಿದ್ದಳು “ಇವನು ದಯಾಶಂಕರ ! ”

“ ಇವನೇ ಹಿರಿಯವನೋ ? ” ಶಿವಕುಮಾರರು ಕಳಕೊಂಡ ದನಿಯನ್ನು ಕೊನೆಗೂ ಒಮ್ಮೆ ಪಡೆದರು.

“ ಅಹುದು. ಅದೋ ಇವಳು ಸ್ವರೂಪ ರಾಣಿ. ಇವಳಿಗೆ ನಾವು ಕರೆಯುವುದು ಬಿಟ್ಟು ಎಂದು ಬಿಟ್ಟೊ, ನಮಸ್ತೆ ಮಾಡು. ಹಾಗೂ, ಇವನು ನಿನ್ನ ಕಾಕಾ ಇವನು ಇಲ್ಲಿ ರಮಾಶಂಕರನು. ತುಂಬ ಉಡಾಳ ಹುಡುಗ. ಎಲುಬು ಮುರಿದುಕೊಂಡವನೂ ಇವನೇ !”- ಮುಂದೆ ರಮಾನ ಕಡೆಗೆ ಹೊರಳಿ ಪುಷ್ಪಾ ಕೇಳಿದಳು, “ ಮತ್ತೆ ಇಲ್ಲಿ ಗೋಡೆ ಗೀಡೆ ಹತ್ತುವುದಿದೆಯೋ ? ”

ತನ್ನ ಮನಸ್ಸಿನ ದುರವಸ್ಥೆಯ ಮೇಲೆ ಮುಸುಕು ಹಾಕುತ್ತ, ಶಿವಕುಮಾರರು ಕೃತಕವಾಗಿ ಹಾಸ್ಯಮಾಡಲು ಹೆಣಗಿದರು. “ ಡಾಕ್ಟರರ ಅಭಿಪ್ರಾಯವೇನು ? ಎಕ್ಸರೇ ಚಿತ್ರ ತೆಗೆದರೇ ? ”

“ ಅಹುದು, ರೇಡಿಯಸ್ಸೇ ಮುರಿದಿತ್ತು. ಈಗ ಎಲುಬೆಲ್ಲ ಜೋಡಿಸಿ ಕೂಡ್ರಿಸಿದ್ದಾರೆ. ಭುಜವನ್ನು ಈಗ ಪ್ಲಾಸ್ಟರಿನಲ್ಲಿ ಹಾಕಿ ಕಟ್ಟಿದ್ದಾರೆ. ”— ಪುಷ್ಪಾನ ಗಂಡನು ನುಡಿದನು.

“ ಮತ್ತು ಇನ್ನೊಂದು ೧೫ ದಿನದೊಳಗಾಗಿ ಅದು ನೆಟ್ಟಗಾಗುವುದೆಂದು ಡಾಕ್ಟರರು ಹೇಳಿದ್ದಾರೆ ” ಪುಷ್ಪಾ ಪುಷ್ಟಿಕೊಟ್ಟಳು.

“ ಆದರೆ ನೀನು ಇನ್ನೂ ಈ ತರುಣಮಿತ್ರರ ಹೆಸರು ಹೇಳಿಯೇ ಇಲ್ಲ ನನಗೆ ! ” — ತಾಯಿಯ ಬೆರಳುಗಳುಗಳನ್ನು ಗಟ್ಟಿಯಾಗಿ ಹಿಡಿದು ನಿಂತ ಬಾಲಕನನ್ನು ಕುರಿತು ಕೈಮಾಡಿ ಶಿವಕುಮಾರರು ಉದ್ಗರಿಸಿದರು.

“ ಇವನು ವಿದ್ಯಾಶಂಕರ, ನನ್ನ ಮುದ್ದಿನ ಮಗ ! ”

“ ಹೀಗೋ ? ಒಟ್ಟು ಒಂದು ಚತುಷ್ಟಯವಾಯಿತು. ” ಶಿವಕುಮಾರರು ಮುಗುಳುನಗೆಯಲ್ಲಿ ನುಡಿದರು ”– ಉಮಾಶಂಕರ, ನಿಮಗೆ ಇದಕ್ಕಾಗಿ ಧನ್ಯವಾದಗಳು ! ”

ಉಮಾಶಂಕರ ಪುಷ್ಪಾ ಇಬ್ಬರೂ ನಕ್ಕರು. ಹೇಗೋ ಶಿವಕುಮಾರರಿಗೆ ಎನಿಸಿತು– ಪುಷ್ಪಾ ಐದನೆಯ ಶಿಶುರತ್ನವನ್ನು ಎಲ್ಲೋ ಉದರಾಶ್ರಯಕೊಟ್ಟು ಅಡಗಿಸಿಕೊಂಡಿರಬೇಕೆಂದು

ಆ ಮಕ್ಕಳು ಕೋಣೆಯ ತುಂಬ ಕುಳಿದಾಡಿ ಸ್ವೈರವಾಗಿ ಸುತ್ತಾಡಹತ್ತಿದುವು. ಕನಿಷ್ಠ ಪುತ್ರನು ನಡುಮೇಜಿನಿಂದ ರಕ್ಷಾಪಾತ್ರೆಯನ್ನು ಎತ್ತಿಕೊಂಡು, ಕೆಳಗೆ ದಪ್ಪಗಿನ ಉಣ್ಣೆಯ ಜಮಖಾನೆಯ ಮೇಲೆ ಕೂತು ಆಡಲು ಆರಂಭಿಸಿದನು. ಬಾಗಿಲ ಹಿಂದೆ ತುಸು ಸದ್ದು ಕೇಳಿ, ಶಿವಕುಮಾರರು ಪುಷ್ಪಾಗೆ ಕೇಳಿದರು: “ ನಿಮಗೆ ಚಹಾ ಶರಬತ್ ಏನಾದರೂ ಬೇಕೆ ? ”

“ ಯಾವುದೂ ಬೇಡ ! ಥ್ಯಾಂಕ್ಸ್, ಇದೇ ಹೊರಡುವ ಮುಂಚೆ ನಮ್ಮ ಚಹ ಮುಗಿದಿದೆ, ” ಪುಷ್ಪಾನ ಗಂಡ ಹೇಳಿದ.

ಶಿವಕುಮಾರರಿಗೆ ಸಂಭಾಷಣಕ್ಕೆ ವಿಷಯದ ಕೊರತೆ ಎನಿಸಿತು. ಅಲ್ಲದೆ, ಅವನೊಡನೆ ಏನು ಮಣ್ಣು ಸಂಭಾಷಣ ? ಪುಷ್ಪಾ.... ಅವರ ಕನಸಿನ ಕೆಳದಿಯಾದ ಪುಷ್ಪಾ— ಈಗ ಉಳಿದಿದ್ದಿಲ್ಲ. ಕನಸಿನ ಪುಷ್ಪಾನೊಡನೆ ಅವರು ತಾಸುಗಟ್ಲೆ ಕೊನೆಯಿಲ್ಲದೆ ಮಾತಾಡುತ್ತಿದ್ದರು- ಮತ್ತು ಕೊನೆಗೆ ಕೆಲವೇ ನಿಮಿಷ ಮಾತನಾಡಿದೆನೆಂದು ತಿಳಿಯುತ್ತಿದ್ದರು. ಎಂಟು ವರ್ಷಗಳ ಹಿಂದಿನ ತೀರ ಸಲಿಗೆಯ ಪ್ರಿಯ-ಪ್ರೇಯಸಿಯರಿಬ್ಬರೂ ಈಗ ಹತ್ತಿರ ಕೂತಿದ್ದೂ, ಒಬ್ಬರಿಗೊಬ್ಬರು ಅಪರಿಚಿತರಾಗಿ ಎನಿಸುವುದು ಅತಿ ವಿಚಿತ್ರವಿತ್ತು. ಶಿವಕುಮಾರರು ಸ್ವಿಚ್ ಒತ್ತಿ ಕೋಣೆಯ ತುಂಬ ಬೆಳಕು ಹರಿಯಿಸಿದರು. ಅಬ್ಬಾ, ಪುಷ್ಪಾನ ಆ ಕೈಗಳು ಎಷ್ಟು ದಪ್ಪ ಕಾಣುತ್ತಿದ್ದುವು ! ಆಕೆಯ ಸಣಗೊಬ್ಬಿನ ಗದ್ದವೂ, ಕೆಳಗೆ ತೂಗುವಂತೆ ತೋರುತ್ತಿತ್ತು.

“ ಈ ಮನೆಯ ಬಾಡಿಗೆ ಏನು ಕುಮಾರ ? ” ಪುಷ್ಪಾ ಕೇಳಿದಳು.

“ ೫೫ ರೂಪಾಯಿ !.... ಹೆಚ್ಚಾಯಿತೇ ? ”

“ಏನೂ ಹೆಚ್ಚು ಅಲ್ಲ. ” ಉಮಾಶಂಕರ ಅಭಿಪ್ರಾಯಪಟ್ಟನು. “ಕೋಣೆಗಳೆಷ್ಟು ? ”

“ಕೋಣೆಗಳೋ ? ಇದೊಂದು ನಡುಮನೆ, ಒಂದು ಮಲಗುವ ಕೋಣೆ, ಒಂದು ಬಚ್ಚಲು ಕೋಣೆ, ಒಂದು ಅನಿವಾರ್ಯ ಅಡುಗೆಯ ಕೋಣೆ— ಒಬ್ಬ ಬ್ರಹ್ಮಚಾರಿಗೆ ಸಾಲುವಷ್ಟು ದೊಡ್ಡದು ! ” ಶಿವಕುಮಾರರು ನಸುನಕ್ಕು ನುಡಿದರು. ಪುಷ್ಪಾ ತಲೆತಗ್ಗಿಸಿದಳು. ಆದರೆ ಅವಳು ನಾಚುವಂತಿದ್ದಿಲ್ಲ. ಚಪ್ಪರಿಸಿದರೂ ಪಡಿನುಡಿಯಲಾರದ ಹರಿದ ನಗಾರಿಯಂತೆ ಅವಳ ಸ್ಥಿತಿ ಇತ್ತು.

ಒಡತಿಯನ್ನು ನೋಡೇ ತೀರಬೇಕೆಂದು— ತಡೆಯಲಾರದ— ಬಯಕೆಯಿಂದ ಅಬ್ದುಲನು, ಜಗುಲಿಗೆ ಹೋಗುವ ನೆವದಿಂದ ಕೋಣೆಯೊಳಗಿಂದ ಹಾಯ್ದನು. ಆದರೆ ಅವನು ಸರಿಯಾಗಿ ಒಡತಿಯನ್ನು ಕಂಡುಹಿಡಿಯಲಾರದೆ ಹೋದನು. ಅವನ ದೃಷ್ಟಿ ಪುಷ್ಪಾನನ್ನು ನಿಟ್ಟಿಸದೆ ಸುತ್ತಲೂ ಹರಿಯಿತು. ಮರುಕ್ಷಣಕ್ಕೆ ಅವನು ಮರಳಿದನು. ಅವನ ಕಣ್ಣಿನಲ್ಲಿ ಪ್ರೊಫೆಸರರು ಕುತೂಹಲದ ಕೂಟಪ್ರಶ್ನೆಯನ್ನು ಓದಿದರು— “ ನನ್ನ ಒಡತಿ ಎಲ್ಲಿ, ಸರಕಾರ್ ? ”

ಪ್ರೊಫೆಸರರ ಎದೆಯು ಒಳಗೊಳಗೇ ಕುಗ್ಗಿ ನುಗ್ಗಾಯಿತು. ಅತಿಥಿಗಳತ್ತ ಹೊರಳಿ ಅವರು ಕೇಳಿದರು : “ ನಿಮಗೆ ಕೆಲವು ರೆಕಾರ್ಡ್ಸ್ ಕೇಳಿಸಲೇ ? ”

ಮಕ್ಕಳು ಗ್ರಾಮೋಫೋನಿನ ಸುತ್ತಲೂ ಮುಕುರಿದರು. ಮುರಿದ ಕೈಯನ್ನು ಪಟ್ಟಿಯಲ್ಲಿ ಕಟ್ಟಿಕೊಂಡ ರಮಾಶಂಕರನು, ದಯಾನೊಡನೆ ಜಗಳ ತೆಗೆದನು. ಬಿಟ್ಟೊ ಗಾಬರಿಯಾಗಿ ಅಳತೊಡಗಿದಳು. ವಿದ್ಯಾ ನಕ್ಕು ನಕ್ಕು ತನ್ನ ಪುಟ್ಟ ಕೈಗಳನ್ನು ತಟ್ಟಿ ನಲಿದನು. ಉಮಾಶಂಕರನು ತನ್ನ ಕಣ್ಣೆದುರಿನಿಂದ “ಇಲಸ್ಟ್ರೇಟೆಡ್

ವೀಕ್ಲೀ''ಯ ಸಂಚಿಕೆಯನ್ನು ದೂರ ಸರಿಸುವಾಗ, ಹೆಂಡತಿಯ ಕಡೆಗೆ ನೋಡಿದನು. "ಸಾಕು. ನನ್ನನ್ನು ಹೀಗೆ ದುರುದುರು ನಿಟ್ಟಿಸಬೇಡಿರಿ. ಏಳಿ; ಆ ಕೇಡಿಮಕ್ಕಳನ್ನು ತುಸು ನೋಡಿಕೊಳ್ಳಿ !" ಎಂದು ಪುಷ್ಪಾ ಗಂಡನನ್ನು ಗದ್ದರಿಸಿದಳು. ಉಮಾಶಂಕರ ಖುರ್ಚಿಯಿಂದ ಎದ್ದನು.

ಗ್ರಾಮೊಫೋನ್ ಹಚ್ಚಿದನಂತರ ರೇಡಿಯೋ ನಡೆಯಿತು. ಆನಂತರ ಹವಾಮಾನದ ಹರಟೆ ಆಯಿತು ತರುವಾಯ ಮಕ್ಕಳ ತುಂಟತನದ ಚರ್ಚೆ ತೊಡಗಿತು. ಆ ಮೇಲೆ ದೇಶದ ಪ್ರಚಲಿತ ರಾಜಕೀಯ ಪರಿಸ್ಥಿತಿಯ ಪರ್ಯಾಲೋಚನೆಗೆ ಮೊದಲಾಯಿತು.

ಕೊನೆಗೂ ಹತಾಶರಾಗಿ ಶಿವಕುಮಾರರು ಅಬ್ದುಲನಿಗೆ, ಗೊತ್ತಾದ ವೇಳೆಗೂ ಬಹಳ ಮುಂಚಿತವಾಗಿಯೇ ಊಟವನ್ನು ಬಡಿಸಿಡಲು ಅಪ್ಪಣೆಮಾಡಿದರು. ಅಬ್ದುಲನು ಕೆಲಳಿ ಸಿಡುಕು-ಗೊಂಡನು. ಮೂವರು ಬರುವರೆಂದು ಹೇಳಿದ್ದಳು; ಆದರೆ ಈಗ ಪೂರ್ತಿ ಅರ್ಧ ಡಝನ್ ಜನವಿತ್ತು ! ಅವನು ಒಡತಿಗಾಗಿ ಇದಿರು ನೋಡುತ್ತಿದ್ದನು; ಆದರೆ ಇಲ್ಲಿ ನೋಡಿದರೆ ಬೇರೆ ಯಾವಳೋ ಬಂದಿದ್ದಳು. ಪ್ರೊಫೆಸರರು ತನಗೆ ಒಂದು ಕುಚೋದ್ಯಮಾಡಿದ-ರೆಂಬ ಸಂಶಯವು ಅವನಲ್ಲಿ ತಲೆದೋರಿತು. ಸುಮ್ಮನೆ ತನ್ನ ಕೆಲಸಗಳಲ್ಲಿ ವ್ಯಗ್ರನಾದನು.

ಊಟದ ಸಮಯದಲ್ಲಿ ಬಹಳೇ ಗದ್ದಲು ನಡೆಯಿತು. ಶಿವ-ಕುಮಾರರಿಗೆ ಯಾವ ಪದಾರ್ಥ-ಪಕ್ವಾನ್ನವೂ ಮೆಚ್ಚಿಗೆ ಆಗ-ಲಿಲ್ಲ. ಪುಲಾವಿಗೆ ರುಚಿಗಿಂತ ಕಂಪೇ ಹೆಚ್ಚಾಗಿತ್ತು. ಅವರೆಲ್ಲರ ನಡುವೆ ಸ್ಥಾಪಿತಳಾದ ಪುಷ್ಪಾ, ಮರಿಗಳ ಮೇಲೆ ರೆಕ್ಕೆ ಕೆದರಿ ಕುಳಿತ ಹೇಂಟೆಯನ್ನೇ ಹೆಚ್ಚು ಹೋಲುತ್ತಿದ್ದಳು. ಉಮಾ ಶಂಕರ-ಶಿವಕುಮಾರರು, ಆ ಹೇಂಟೆಯ ಎರಡು ಬಲಿತ ಮರಿಗಳೋ ಎನ್ನುವಂತೆ ಇತ್ತು ! ಓಽಽ, ಹೆಂಗುಸರು ತುತ್ತನ್ನು ಮೆಲ್ಲು-ವಾಗ ಎಷ್ಟು ಬೀಭತ್ಸವಾಗಿ ದವಡೆಗಳನ್ನು ಅರೆದಾಡುತ್ತಾರೆ ! ಆ ಎಂಟು ವರ್ಷಗಳ ಹಿಂದೆ ಆಕೆಯ ಗಲ್ಲದ—ಮುದ್ದುಮುದ್ದಾಗಿ ಕಂಡ—ಮಚ್ಚೆ, ಈಗ ವಿದ್ರೂಪ ಕಪ್ಪು ಕಲೆಯಾಗಿ ಬೆಳೆದು, ಒಂದು ನೊಣದ ಗಾತ್ರವನ್ನು ಪಡೆದಿತ್ತು.

ಪ್ರೊಫೆಸರರು ನೋಡಿದರು; ಅಬ್ದುಲ್ ಮತ್ತೆ ಮತ್ತೆ ಪುಷ್ಪಾನ ಕಡೆಗೂ ಆ ರೇಡಿಯೋ ಮೇಲಿನ ಚಿತ್ರದ ಕಡೆಗೂ ನೋಡುತ್ತಿದ್ದನು. ಆ ಎರಡೂ ಬಿಂಬ-ಪ್ರತಿಬಿಂಬಗಳಲ್ಲಿ ಅವನು ಏನಾದರೊಂದು ಹೋಲಿಕೆಯನ್ನು ಹುಡುಕುತ್ತಿರಬೇಕು. ಶಿವಕುಮಾರರು ಥಕ್ಕನೆ ಪ್ರಜ್ಞೆ ಪಡೆದಂತಾದರು ಅವರು ಎದ್ದು ರೇಡಿಯೋದ ಹತ್ತಿರ ಹೋದರು, ಅದರ ಮೇಲಿನ ಚಿತ್ರವನ್ನು ಕೆಳಮೋರೆಯಾಗಿ ಮಾಡಿಟ್ಟರು. "ಪುಷ್ಪಾನ ಗಂಡ, ಈ ಚಿತ್ರವನ್ನು ಈಗಾಗಲೇ ನೋಡಿರಬಹುದೇ ?" ಎಂದು ಅವರು ದಿಗಿಲುಗೊಂಡರು. ಆದರೆ "ಪರಿವೆ ಏನು ?" ಎಂದುಕೊಂಡರು. ತಮ್ಮ ಕಡೆಗಣ್ಣಿ-ನಿಂದ ಅವರು ಉಮಾಶಂಕರನ ಕಡೆಗೆ ನೋಡಿದರು. ಅವನು ನಗುತ್ತಿದ್ದನು. ಪುಷ್ಪಾ ಮನವಾರೆ ಉಣ್ಣುವುದರಲ್ಲಿ ತನ್ಮಯ-ಳಾಗಿದ್ದಳು.

ತುಸು ತಡೆದು, ಅತಿಥಿಗಳನ್ನು ತನ್ನ ಕಾರಿನ ತನಕ ಬೀಳ್ಕೊಟ್ಟು ಬಂದು ಶಿವಕುಮಾರರು ಪಾವಟಿಗೆಗಳನ್ನು ಏರು-ತ್ತಿರುವಾಗ, ಒಮ್ಮೆಲೇ ಚಣ್ಣದ ಜೇಬಿನಲ್ಲಿ ಒಂದು ಪತ್ರವಿದ್ದಂತೆ ಅವರ ಕೈಗೆ ಎನಿಸಿತು. ಆ ಪತ್ರ ಅವರ ತಾಯಿಯದಿದ್ದು, ಯಾವುದೋ ಹೆಣ್ಣು ನಿಶ್ಚಯ ಮಾಡುವುದರ ಹೊಸತೊಂದು ಪ್ರಸ್ತಾಪವಿತ್ತು.

ನಡುಮನೆಯಲ್ಲಿ ಅಬ್ದುಲ್ಲನು, ಕೆಳಮೋರೆ ಮಾಡಿಟ್ಟ ಪುಷ್ಪಾಳ ಚಿತ್ರವನ್ನು ಸರಿಯಾಗಿ ನಿಲ್ಲಿಸುತ್ತಿದ್ದನು.

"ಎಷ್ಟು ಬಡಿಯಿತು, ಅಬ್ದುಲ್ ?" ಪ್ರೊಫೆಸರರು ಟೆಲಿ-ಫೋನಿನ ಕಡೆಗೆ ಹೋಗುತ್ತ ಕೇಳಿದರು.

"೭|| ಆಗಿ ೫ ಮಿನಿಟು, ಹುಜೂರ್"

"ಅಚ್ಛಾ. ಬಾ ! ನನ್ನ ಹಾಸಿಗೆಸುರುಳಿಯನ್ನು ಕಟ್ಟು. ಲಗು ಕಟ್ಟು. ಹಾಗೆಯೇ ಆ ಬ್ಯಾಗನ್ನು ತುಂಬು—ಆ ಚರ್ಮದ ಸೂಟ ಕೇಸು ! ಲಗು, ಅವಸರದಿಂದಾಗಲಿ !"

ಪ್ರೊಫೆಸರರು ತಮ್ಮ ಪ್ರಿನ್ಸಿಪಾಲ್‌ಸಾಹೇಬರೊಡನೆ ಫೋನಿನಲ್ಲಿ ಮಾತನಾಡಿದರು. ಮಾತು ಮುಗಿಯುವುದರಲ್ಲಿ ಅವರು ಮೂರು ದಿನದ ರಜೆ ಪಡಕೊಂಡಿದ್ದರು.

ಅಬ್ದುಲ್ಲನು ತನ್ನ ಒಡೆಯರನ್ನು ಬೆರ್‍ರಗೆ ಬಾಯಿ ಕಳಕೊಂಡು ನೋಡುತ್ತಲೇ ಉಳಿದನು. ಅಂದು ಮುಂಜಾನಿನಿಂದಲೂ ಅವರ ನಡತೆ ತೀರ ವಿಚಿತ್ರವಾಗಿತ್ತು. "ಏನಾಯಿತು ಹುಜೂರ್ ? ಎಲ್ಲಿಗೆ ಹೊರಟಿರಿ ?" ಅವನು ಕೇಳಿದನು.

"ಮನೆಗೆ ಹೊರಟೆನು !"

"ಏಕೆ ಸರಕಾರ್ ? ಏಕೆ ಹೊರಟಿರಿ ? ಎಲ್ಲಾ ಕ್ಷೇಮ ತಾನೇ ?"

ಪ್ರೊಫೆಸರರು ನಸುನಕ್ಕರು. ರೇಡಿಯೋದ ಮೇಲಿನ ಫೋಟೋ ತೆಗೆದು ಪೇಟಿಜಿನ ಕಣದಲ್ಲಿ ಇಡುತ್ತ ಹೇಳಿದರು: "ನಿನಗಾಗಿ ಒಡತಿ-ಯನ್ನು ತರಲಿಕ್ಕೆ !"

[ವಿ. ಸೂ:— ಕಿಶೋರಸಾಹುವನ್ನು ರಜತಪಟದಮೇಲೆ ಕಾಣದ-ವರು ಕಡಿಮೆಯೆ. ಅವನ ಸುವಿಖ್ಯಾತ ಹೆಸರನ್ನು ಕೇಳದವರು ಇಷಕ್ಕೂ ಕಡಿಮೆ. ಅವನು ಅತ್ಯುತ್ತಮ ನಟ; ಅಷ್ಟೇ ನಿಪುಣ ನಿರ್ದೇಶಕ. ತನ್ನ ನಾಟಕಕಥೆಗಳನ್ನು ತಾನೇ ಬರೆಯುವ ಲಲಿತ ಲೇಖಕ. ಜತೆಗೆ ಉತ್ತಮ ನೀಳ್ಗತೆಗಳನ್ನು ಹಿಂದಿಯಲ್ಲಿಯೂ ಇಂಗ್ಲಿಷಿನಲ್ಲಿಯೂ ಬರೆದ ಹೆಸರಾದ ಕುಶಲ ಕತೆಗಾರ. ಅವನ ಈ ಕತೆಗಾರಿಕೆಯ ಖ್ಯಾತಿಯನ್ನು ಕನ್ನಡ ರಸಿಕರು ಕೇಳಿರಲಿಕ್ಕಿಲ್ಲ. "ಟೇಸೂ ಕೆ ಫೋಲ್" ಎಂಬ ಕಥಾಸಂಗ್ರಹ ವೊಂದು ಅವನದು ಪ್ರಕಟವಾಗಿದೆ. ಅದರೊಳಗಿನ ಒಂದು ಕರುಣ-ವಿನೋದದ ಕಥೆಯನ್ನು ಇಲ್ಲಿ ಕನ್ನಡಿಸಲಾಗಿದೆ.]

ಜ್ಞಾನಸಂಪಾದನೆಯ ಸುಲಭೋಪಾಯ

ಓದೇ ದೀವಳಿಗೆಗೆ ಹಾದಿ !

ಶ್ರೀಮನ್ನಿರಂಜನ ಪ್ರ. ಸ್ವ. ಸಂಗನಬಸವ ಶಿವಯೋಗಿಗಳು, ಬಂಥನಾಳ

★

ಬರೀ ಸಹಿ ಮಾಡಬಲ್ಲ ಸಾಕ್ಷರತೆ ವ್ಯಕ್ತಿಯ ಮತ್ತು ಸಮಾಜದ ಜೀವನವನ್ನು ಬೆಳಗಲಾರದು. ಗ್ರಂಥವಾಚನ ಮಾಡಿಸಬಲ್ಲ ಸಾಕ್ಷರತೆ, ವ್ಯಕ್ತಿಯ ಜೀವನದಲ್ಲಿ ಬೆಳಕನ್ನು ತುಂಬಬಹುದಲ್ಲದೆ, ಅವನ ದೇಶ-ಕಾಲಗಳನ್ನೂ ಬೆಳಗಿಸಬಲ್ಲದು.

卐

ಮಾನವನಿಗೆ ಜ್ಞಾನಸಂಪಾದನೆಯಾಗಬೇಕಾದರೆ ಗುರುಮುಖ, ವಿಚಾರ, ಅವಲೋಕನ, ಓದು, ವಾದ-ವಿವಾದ ಇತ್ಯಾದಿ ಅನೇಕ ದ್ವಾರಗಳಿರುತ್ತವೆ. ಅವುಗಳಲ್ಲಿ ಓದುವುದು ಅತ್ಯಂತ ಮಹತ್ತ್ವದ ವಿಷಯವಾಗಿರುವುದು. 'ಗುರು' ಶಬ್ದದಲ್ಲಿ ಸರ್ವ ಹಿರಿಯರ ಸಮಾವೇಶವನ್ನೂ ಮಾಡಬಹುದು. ಬಾಲ್ಯಾವಸ್ಥೆಯಲ್ಲಿ ಗೃಹ ಮತ್ತು ಶಾಲೆಗಳೆರಡೂ ಜ್ಞಾನಸಾಧನೆಯ ಸ್ಥಾನಗಳಾಗಿರುತ್ತವೆ. ಮನೆಯಲ್ಲಿ ತಂದೆ ತಾಯಿ ಮೊದಲಾದ ಹಿರಿಯರೂ ಶಾಲೆಯಲ್ಲಿ ಗುರುಗಳೂ ಶಿಕ್ಷಣವನ್ನು ಕೊಡುತ್ತಿರುತ್ತಾರೆ. ವಿದ್ಯಾರ್ಥಿಯು ದೊಡ್ಡವನಾಗುತ್ತ ಹೋದಂತೆ, ಅವನಿಗೆ ಗುರುಮುಖದ ಸಹಾಯವು ಕಡಿಮೆಯಾಗುತ್ತ ಹೋಗುತ್ತದೆ. ಯಾರಿಗೆ ತಮ್ಮ ಮಕ್ಕಳ ನಿಜವಾದ ಕಲ್ಯಾಣದ ಇಚ್ಛೆ ಇರುವುದೋ ಅವರು, ಮಕ್ಕಳಿಗೆ ಬಹುಕಾಲ ಕಲಿಸಿಕೊಳ್ಳುವ ರೂಢಿಯನ್ನುಂಟುಮಾಡಬಾರದು.

ಮನುಷ್ಯನಿಗೆ ಮಾನಸಿಕಶ್ರಮವು ಸ್ವಾಭಾವಿಕವಾಗಿಯೇ ತ್ರಾಸದಾಯಕವಾಗಿರುತ್ತದೆ. ಕಾರಣವೇನೆಂದರೆ— ಮಾನಸಿಕಶ್ರಮವು ಶಾರೀರಿಕ ಶ್ರಮಕ್ಕಿಂತಲೂ ಕಠಿಣವಾದುದಾಗಿರುವುದು. ಮನಸ್ಸಿಗೆ ಒಮ್ಮೆ ಎರಡನೆಯವರಿಂದ ಸಹಾಯ ತಕೊಳ್ಳುವ ಚಟವು ಬಿದ್ದಿತೆಂದರೆ, ಅದರ ಸ್ವಾವಲಂಬನೆಯೇ ನಷ್ಟವಾಗುತ್ತದೆ. ವ್ಯವಹಾರದಲ್ಲಿ ಯಾವಾಗಲೂ ಅಡೆ-ತಡೆಗಳು, ಅಡ್ಡಿ-ಆತಂಕಗಳು, ಬಂದೇ ಬರುತ್ತವೆ. ಪ್ರತಿಕ್ಷಣಕ್ಕೂ ಸಲಹೆ ಕೊಡತಕ್ಕಂತಹ ಗುರು ದೊರೆಯುವುದು ಶಕ್ಯವಾಗಲಾರದು.

ಮನಸ್ಸು ಕಬ್ಬಿಣದಂತಿರುವುದು. ಕಬ್ಬಿಣವು ಕೆಲಸದೊಳಗಿರದಿದ್ದರೆ ಜಂಗು ಹಿಡಿದು ಉಪಯೋಗವಿಲ್ಲದಂತಾಗುತ್ತದೆ. ಆದರೆ ನಿತ್ಯ ಕೆಲಸದೊಳಗೆ ತೊಡಗಿದ್ದರೆ ಸತೇಜವಾಗಿದ್ದು ಬಹು ದಿವಸ ಬಾಳುತ್ತದೆ. ಅದರಂತೆ ಯಾರಿಗೆ ಮಾನಸಿಕಶ್ರಮ ಮಾಡುವ ರೂಢಿ ಇರುವುದಿಲ್ಲವೋ ಅವರ ಮನಸ್ಸು ಜಂಗು ಹಿಡಿದ ಕಬ್ಬಿಣದಂತೆ ನಿರುಪಯೋಗವುಳ್ಳದ್ದಾಗುವುದು. ಆಯುಧಗಳು ಹದವಾಗಿರಬೇಕಾದರೆ ಮಸೆಗಲ್ಲು ಹೇಗೆ ಅಗತ್ಯವಾಗಿರುವದೋ, ಹಾಗೆಯೇ ಮನಸ್ಸಿಗೂ ಕೂಡಾ ಅಡೆತಡೆಗಳು ಮಸೆಗಲ್ಲಾಗಿರುತ್ತವೆ. ಅಡಚಣೆಯ ಮಸೆಗಲ್ಲಿಗೆ ಬುದ್ಧಿಯೆಂಬ ಆಯುಧವನ್ನು ಘರ್ಷಣೆ ಮಾಡಿದರೆ, ಅದು ಸತೇಜವೂ ತೀಕ್ಷ್ಣವೂ ಆಗುತ್ತದೆ. ಬೇಕು ಬೇಕಾದಾಗ ಗುರುಮುಖದ ಅಪೇಕ್ಷೆ ಮಾಡುವುದರಿಂದ ಈ ಘರ್ಷಣೆಯೇ ಉಂಟಾಗುವುದಿಲ್ಲವಾದ್ದರಿಂದ, ಬುದ್ಧಿಗೆ ಮಾಂದ್ಯ ಬರುವುದು. ಪ್ರಯುಕ್ತ ಕೇವಲ ಅಪರಿಹಾರ್ಯವೆನಿಸಿದಾಗ ಮಾತ್ರ ಗುರುಮುಖದಿಂದ ಕೇಳುವುದು ನಡೆಯಬೇಕಲ್ಲದೆ, ಯಾವಾಗಲೂ ಉಪಯೋಗದ್ದಲ್ಲ. ಶ್ರೀಮಂತ ಜನರು ತಮ್ಮ ಮಕ್ಕಳಿಗೆ ಕಲಿಸಲು ಮನೆಯ ಶಿಕ್ಷಕರನ್ನಿಟ್ಟಿರುತ್ತಾರೆ. ಇದು ಯಾವಾಗಲೂ ಉಪಯೋಗದ್ದಲ್ಲ. ಶಾಲೆಯಲ್ಲಿ ಶಿಕ್ಷಕನು ಕಲಿಸ-



ಲಿಕ್ಕೆ ಅಸಮರ್ಥನಿದ್ದರೆ, ಅಥವಾ ಕಾರಣಾಂತರದಿಂದ ಕ್ಲಾಸಿನಲ್ಲಿಯ ಹುಡುಗರು ಮುಂದೆ ಹೋಗಿದ್ದು ಹಿಂದಿನ ಅಭ್ಯಾಸ ಮಾಡಬೇಕಾಗಿದ್ದರೆ, ಇಲ್ಲವೆ ಒಂದೇ ವರ್ಷದಲ್ಲಿ ಎರಡು ಕ್ಲಾಸುಗಳಲ್ಲಿ ಉತ್ತೀರ್ಣರಾಗಬೇಕಾಗಿದ್ದರೆ ಮಾತ್ರ ಖಾಸಗಿ ಶಿಕ್ಷಕರನ್ನಿಡುವುದು ಯೋಗ್ಯವಾಗಬಹುದು. ಅದಿಲ್ಲದಿದ್ದರೆ ಮನೆಯ ಮಾಸ್ತರರಿಂದ ವಿದ್ಯಾರ್ಥಿಗಳಿಗೆ, ಈಗ ತೊಂದರೆಯೆನಿಸದಿದ್ದರೂ ಮುಂದೆ ಮಾತ್ರ ಅದರ ಕೆಡುಕು ಪರಿಣಾಮವಾಗದೆ ಹೋಗುವುದಿಲ್ಲೆಂದು ಶಿಕ್ಷಣತಜ್ಞರು ಅಭಿಪ್ರಾಯಪಡುತ್ತಾರೆ. ಇದರಿಂದ ಹುಡುಗರು ಸ್ವತಃ ವಿಚಾರಮಾಡುವ ಶಕ್ತಿಯೇ ಕುಂಠಿತವಾಗುತ್ತದೆ. ಹೇಗೆ ಹಸ್ತಪಾದಾದಿ ಅವಯವಗಳೂ ನೇತ್ರ ಕರ್ಣಾದಿ ಇಂದ್ರಿಯಗಳೂ ಅಭ್ಯಾಸದಿಂದ ಸದೃಢವೂ ಚಪಲತೆಯುಳ್ಳವುಗಳೂ ಆಗುವುವೋ ತದ್ವತ್ ಅಭ್ಯಾಸದ ಬಲದಿಂದ ಬುದ್ಧಿಯೂ ಸಹ ಸದೃಢವೂ ಚಾಣಾಕ್ಷವೂ ಆಗುತ್ತದೆ. ಶರೀರದ ಅವಯವಗಳಂತೆ ಮನಸ್ಸಿನ ಅವಯವಗಳೂ ಕೂಡ ಅಭ್ಯಾಸದಿಂದಲೂ ಉಪಯೋಗದಿಂದಲೂ ಸಬಲ ಹಾಗು ಸದೃಢವಾಗುವುದು ಸತ್ಯವಾದ ಸಿದ್ಧಾಂತವು. ವಿದ್ಯಾರ್ಥಿಗಳಿಗೆ ಒಂದು ಅವಸ್ಥೆಯಲ್ಲಿ ಗುರುಮುಖ ಸಹಾಯವು ಅತ್ಯಂತ ಅವಶ್ಯವೆನಿಸಿದರೂ ಆ ಆವಶ್ಯಕತೆಯು ಎಷ್ಟು ತೀವ್ರ ಕಡಿಮೆಯಾಗುವುದೋ ಅಷ್ಟು ಒಳ್ಳೆಯದು.

ಗುರುಮುಖದ ಹೊರತು ಜ್ಞಾನಸಂಪಾದನೆಗೆ ನಾಲ್ಕು ಸಾಧನಗಳಿರುತ್ತವೆ. ಅವುಗಳಲ್ಲಿ ವಿಚಾರ, ಅವಲೋಕನ, ಮತ್ತು ಓದುವುದು ಇವು ಮೂರು ಸ್ವಾಧೀನ ವಿಷಯಗಳಾಗಿರುತ್ತವೆ. ನಾಲ್ಕನೆಯದಾದ ವಾದವು. ಬೇರೆಯವರೊಬ್ಬರು ವಾದಮಾಡುವ ಶಕ್ತಿಯುಳ್ಳವರು ದೊರೆತರೆ ಮಾತ್ರ ಸಾಧ್ಯ. ಶ್ರೇಷ್ಠರ ಕೂಡ ವಾದಮಾಡುವುದರಿಂದ ನವೀನಜ್ಞಾನವು ಪ್ರಾಪ್ತವಾಗುತ್ತದೆ. ಸಮಾನರ ಕೂಡ ವಾದಮಾಡುವುದರಿಂದ ಸಂಶಯ ನಿವಾರಣೆಯಾಗುತ್ತದೆ. ಕನಿಷ್ಠರ ಕೂಡ ವಿವಾದಮಾಡುವುದರಿಂದ, ಸಂಪಾದಿಸಿದ ಜ್ಞಾನವು ಸುವ್ಯವಸ್ಥಿತವಾಗುತ್ತದೆ. ಕುಸ್ತಿಯಿಂದ ಪೈಲವಾನರ ಶರೀರದ ಮೇಲೆ ಯಾವ ಪರಿಣಾಮವಾಗುತ್ತದೆಯೋ ಅದರಂತೆ, ಉತ್ತಮ ವಾದದಿಂದ ಬುದ್ಧಿಯ ಮೇಲೆಯೂ ಸುಪರಿಣಾಮವಾಗುತ್ತದೆ. ಕುಸ್ತಿಯಲ್ಲಿ ಮಾತ್ಸರ್ಯಭಾವನೆಯಿದ್ದರೆ ಕೆಡುಕಾಗುವಂತೆ, ವಾದದಲ್ಲಿಯೂ ದುರಾಗ್ರಹವಿದ್ದರೆ ಅದರ

ಪರಿಣಾಮವು ಕೆಟ್ಟದಾಗುವುದು. ಪ್ರಯುಕ್ತ ಯಾವ ಕಾಲಕ್ಕೆ ಯೋಗ್ಯ ಪ್ರತಿಸ್ಪರ್ಧಿ ದೊರೆಯುವನೋ ಆ ಕಾಲದಲ್ಲಿಯೇ ವಾದಕ್ಕೆ ಅಣಿಯಾಗಬೇಕು.

ಅವಲೋಕನದಲ್ಲಿ ಸರ್ವ ಇಂದ್ರಿಯಗಳ ಅನುಭವದ ಸಮಾವೇಶವಿರುವುದು. ಈ ಅನುಭವವನ್ನು ಮನುಷ್ಯನು ಬುದ್ಧಿಪುರಸ್ಸರ ತಕ್ಕೊಳ್ಳಬಹುದು, ಅಥವಾ ಸಹಜಗತಿಯಿಂದಲೂ ಅದು ಪ್ರಾಪ್ತವಾಗಬಹುದು. ಸಂಸಾರದಲ್ಲಿ ಮನುಷ್ಯನಿಗೆ ಭಿನ್ನ ಭಿನ್ನ ಸ್ವಭಾವದವರು ಭೆಟ್ಟಿಯಾಗುವುದು, ಹಾಗು ಭಿನ್ನ ಭಿನ್ನ ಪದಾರ್ಥಗಳ ಸೇವನೆಯಿಂದ ಅವುಗಳ ಧರ್ಮತಿಳಿಯುವುದು— ಮೊದಲಾದುವುಗಳಿಂದ ಸಹಜವಾದ ಅನುಭವವು ದೊರೆಯುತ್ತದೆ. ಮತ್ತು ಭೂಗರ್ಭ, ಖಗೋಲ, ರಸಾಯನ, ವೈದ್ಯಕ ಮೊದಲಾದುವುಗಳಲ್ಲಿಯ ಧರ್ಮವು ತಿಳಿಯುವುದರ ಸಲುವಾಗಿ ಶಾಸ್ತ್ರಶೋಧಕನು ಯಾವ ಯಾವ ಪ್ರಯೋಗಗಳನ್ನು ಮಾಡುತ್ತಿರುವನೋ, ಅವುಗಳಿಂದ ಅವನು ಬುದ್ಧಿಪುರಸ್ಸರ ಅನುಭವವನ್ನು ಸಂಪಾದಿಸಿದವನಾಗುವನು. ಈ ಅನುಭವವನ್ನು ಅತ್ಯಂತ ಶಾಂತರೀತಿಯಿಂದಲೂ ದಕ್ಷತೆಯಿಂದಲೂ ಪಡೆದುಕೊಳ್ಳಬೇಕಾಗುವುದು. ಇಂದ್ರಿಯಗಳ ದ್ವಾರದಿಂದ ಪ್ರಾಪ್ತವಾಗಿರುವ ಅನುಭವದ ಮೇಲಿಂದ ಕಾರ್ಯಕಾರಣಾದಿಗಳ ಸಂಬಂಧವನ್ನು ನಿಶ್ಚಿತಗೊಳಿಸಲು ಯಾವ ಸಾಧನವಿದೆಯೋ ಅದಕ್ಕೆಯೇ ವಿಚಾರಶಕ್ತಿಯೆಂದು ಅನ್ನುತ್ತಾರೆ. ಒಂದಕ್ಕೊಂದು ಸಂಬಂಧವಿಲ್ಲದೆ ಕಾರ್ಯಕಾರಣಗಳನ್ನು ಹೊಂದಿಸುತ್ತ ಹೋಗುವುದೆಂದರೆ, ವಿಚಾರಿಯು ತಪ್ಪುಮಾರ್ಗಹಿಡಿದಂತಾಗುವುದು.

ಇಲ್ಲಿಯ ವರೆಗೂ ಜ್ಞಾನಸಂಪಾದನೆಯ ಐದು ಸಾಧನಗಳಲ್ಲಿ ಗುರುಮುಖ, ವಾದ, ಅವಲೋಕನ ಹಾಗು ವಿಚಾರ ಈ ನಾಲ್ಕರ ಸಂಕ್ಷಿಪ್ತವಿವೇಚನೆಯನ್ನು ಮಾಡಿದ್ದಾಯಿತು. ವಾಸ್ತವಿಕವಾಗಿ ನೋಡಿದರೆ, ಓದುವುದೇ ಮುಖ್ಯ ವಿಷಯವಾದ ಈ ಲೇಖನದಲ್ಲಿ, ಉಳಿದುವುಗಳ ಬಗ್ಗೆ ಇಷ್ಟು ವಿಸ್ತಾರವಾಗಿ ಹೇಳಬಾರದಾಗಿತ್ತು; ಆದರೆ ಇವುಗಳು ವಾಚನಕ್ಕೆ ಅತ್ಯಂತ ನಿಕಟಸಂಬಂಧವುಳ್ಳವುಗಳಾದಕಾರಣ, ಸಂಕ್ಷಿಪ್ತವಾಗಿಯಾದರೂ ಹೇಳಲೇಬೇಕಾಯಿತು. ಈಗ ಮುಖ್ಯ ವಿಷಯವಾದ ವಾಚನದ ಕಡೆಗೆ ಹೊರಳುವಾ.

ಓದುವುದು ಎರಡು ಬಗೆಯಾಗಿರುತ್ತದೆ. ಒಂದು ಎರಡನೆಯವರ ಸಲುವಾಗಿ; ಮತ್ತೊಂದು ಸ್ವಂತದ ಸಲುವಾಗಿ. ತಾನೇ ಬರೆದದ್ದಾದರೂ ಇರಬಹುದು; ಎರಡನೆಯವರು ಬರೆದದ್ದಾದರೂ ಇರಬಹುದು. ಸ್ವಂತಕ್ಕಾಗಿ ಓದುವುದರಲ್ಲಿಯೂ ಎರಡು ರೀತಿಗಳುಂಟು: ಒಂದು ಹೊತ್ತುಗಳೆಯುವುದಕ್ಕಾಗಿ; ಮತ್ತೊಂದು ತಿಳಿದುಕೊಂಡು ನಡೆಯುವುದಕ್ಕಾಗಿ. ಆದರೆ ಪುಸ್ತಕದಲ್ಲಿಯ ವಿಷಯವು ಯಾವುದಿರುವುದೋ ಅದರ ಪರಿಣಾಮವು ಓದುವವನ ಮನಸ್ಸಿನ ಮೇಲಾಗುವುದು ಸಹಜಸಿದ್ಧ. ಪ್ರಯುಕ್ತ ಕೆಟ್ಟ ಪುಸ್ತಕಗಳನ್ನು ಓದಲೇಬಾರದು. ಯಾಕೆಂದರೆ— ಕೆಟ್ಟ ಪುಸ್ತಕಗಳನ್ನು ಓದದೆ ಸುಮ್ಮನಿದ್ದರೆ, ಮನಸ್ಸಿನಲ್ಲಿ ಕೆಟ್ಟ ಕಲ್ಪನೆಯಾದರೂ ಬರಲಿಕ್ಕಿಲ್ಲ. ಯಾರು ವಾಚನದ ಮಹತ್ತ್ವವನ್ನು ಕೊಂಡಾಡುವರೋ ಅವರು ಉತ್ತಮ ಪುಸ್ತಕಗಳ ವಿಷಯವಾಗಿಯೇ ಪ್ರಶಂಶೆಮಾಡಿದ್ದಾರೆಂದು ನಿಶ್ಚಯವಾಗಿ ತಿಳಿಯಬೇಕು.

ಪುಸ್ತಕವು ಒಂದು ಪ್ರಕಾರದಿಂದ ಮಿತ್ರನ ಹಾಗೆ ಇರುವುದು. ದುಷ್ಟಮಿತ್ರನಂತೆ ಕೆಟ್ಟ ಪುಸ್ತಕಗಳಿಂದ ದುರ್ಗುಣಗಳುಂಟಾಗುತ್ತವೆ. ಪ್ರಯುಕ್ತ ಕುಮಿತ್ರನಂತೆ ಕೆಟ್ಟ ಪುಸ್ತಕಗಳ ಸಹವಾಸದಿಂದ ದೂರವಿರಬೇಕು. ಬಹುಶ್ರುತ ಸನ್ಮಿತ್ರನ ಸಹವಾಸದಿಂದ ಆಗುವ ಎಲ್ಲ ಲಾಭಗಳು ಉತ್ತಮ ಪುಸ್ತಕಗಳನ್ನೋದುವುದರಿಂದ ಸಿಕ್ಕುವುವಲ್ಲದೆ, ಆ ಸಹವಾಸದಿಂದ ದೊರೆಯಲಾರದ ಅನೇಕ ಪ್ರಯೋಜನಗಳು ಕೂಡ ಉಂಟಾಗುತ್ತವೆ. ಜ್ಞಾನಸಂಪಾದನೆಯ ಸಾಧನೆಗಳಲ್ಲಿ ಮಿಕ್ಕವುಗಳಿಗಿಂತ ವಾಚನವು ಅಲ್ಪವೆಚ್ಚದಲ್ಲಿಯೆ ಕಿಂಚಿತ್ ದೇಹಶ್ರಮದಿಂದ— ಸರ್ವರಿಗೂ ಪ್ರಾಪ್ತವಾಗಲು ಅಡ್ಡಿಯಿಲ್ಲ.

ಎಲ್ಲರಿಗೂ ಯೋಗ್ಯಮಾರ್ಗದರ್ಶಕ ಗುರು ದೊರೆಯುವುದು ಶಕ್ಯವಿಲ್ಲ. ಅದರಂತೆ ಸಂವಾದಕ್ಕಾದರೂ ಯೋಗ್ಯಮಿತ್ರನು ದೊರೆಯುವುದು ಸುಲಭವಲ್ಲ. ಸ್ವತಂತ್ರವಾಗಿ ಪ್ರಮಾದರಹಿತವಾಗಿ ವಿಚಾರಮಾಡುವ ಶಕ್ತಿ ಬರುವಂತೆ ಎಲ್ಲರಿಗೂ ಶಿಕ್ಷಣವಾಗಿರಲೂ ಶಕ್ಯವಿಲ್ಲ. ಸಹಜವಾಗಿಯಾಗಲಿ ಬುದ್ಧಿಪುರಸ್ಸರವಾಗಿಯಾಗಲಿ ಅನುಭವ ತಕ್ಕೊಳ್ಳಲು ಬರುವಂತೆ ಅವಲೋಕನಮಾಡುವ ಕಲೆಯು ದೊರೆಯುವುದು ಅಸಂಭವ. ಆದರೆ ವಾಚನದ ಸ್ಥಿತಿಯು ಮಾತ್ರ ಹಾಗಿರುವುದಿಲ್ಲ. ಮುದ್ರಣಕಲೆಯು ಸಂಪೂರ್ಣ ವಿಕಾಸಹೊಂದಿರುವ ಈಗಿನ ಕಾಲದಲ್ಲಿ, ಜ್ಞಾನಸಂಪಾದನೆಯ ಓದುವ ಸಾಧನ ಬಹು ಸುಗಮವಾಗಿರುವುದು. ಕಿಂಬಹುನಾ ಕೆಲವೊಂದು ಪರಿಸ್ಥಿತಿಯಲ್ಲಿ ಜ್ಞಾನವಮಾಡಿಕೊಳ್ಳಲು ಉಳಿದ ಸಾಧನಗಳು ಉಪಯೋಗವೇ ಆಗುತ್ತಿರುವುದಿಲ್ಲ. ಎಂತಹ ಪಂಡಿತನೇ ಇರಲಿ, ಯಾವುದೇ ವಿಷಯದ ಮೇಲಿನ ತನ್ನ ವಿಚಾರಗಳನ್ನು ಸರ್ವಸ್ಥಾನಗಳಲ್ಲಿ ಸ್ವತಃ ಹೋಗಿ ಸ್ವಮುಖದಿಂದ ಹೇಳಿಕೊಡುವುದು ಸಾಧ್ಯವಾಗದ ಸಂಗತಿಯಾಗಿದೆ. ಆದರೆ ಅವೇ ವಿಚಾರಗಳನ್ನೆಲ್ಲ ಬರೆದು ಗ್ರಂಥರೂಪದಲ್ಲಿ ತಂದು ಪ್ರಸಿದ್ಧಮಾಡಿದ್ದಾದರೆ, ಅದರಿಂದ ಯಾರು ಬೇಕಾದವರು ಬೇಕೆನಿಸಿದಾಗ ಅದರ ಲಾಭ ಪಡೆಯಲು ಅನುಕೂಲವಾಗುವುದು.

ವಿಚಾರಗಳನ್ನು ಗ್ರಂಥಗ್ರಥಿತ ಮಾಡುವುದರಿಂದ, ಅವುಗಳಿಗೆ ಜಡಸ್ವರೂಪ ಕೊಟ್ಟು ಅಮರತ್ವಕ್ಕೇರಿಸಿದಂತಾಗುತ್ತದೆ. ಅವುಗಳಿಗೆ ಜಡಸ್ವರೂಪ ಬಂದಿರುವುದರಿಂದಲೇ, ತಮ್ಮ ಜನಕನಿಂದ ಬೇಕಾದವರ ಕೈಯಲ್ಲಿ ಹೋಗಲೂ ಶಕ್ಯವಾಗುತ್ತದೆ. ಅವುಗಳಿಗೆ ಅಮರತ್ವ ಬಂದಿರುವುದರಿಂದ ಮಾನವವಂಶದ ವಂಶಪರಂಪರೆಗೆ ಅವುಗಳ ಲಾಭಹೊಂದಲು ಅನುಕೂಲವಾಗುತ್ತದೆ. ವ್ಯಾಸ, ವಾಲ್ಮೀಕಿ, ಶಂಕರಾಚಾರ್ಯ, ಬಸವೇಶ್ವರ, ಪ್ರಭು ಮೊದಲಾದ ಜ್ಞಾನಿಗಳು ತಮ್ಮ ವಿಚಾರಗಳನ್ನು ಬರೆದು ಬರೆಯಿಸಿ ಇಟ್ಟಿರದಿದ್ದರೆ, ಮಹಾ-

ಭಾರತ, ರಾಮಾಯಣ, ಭಾಷ್ಯ, ವಚನಶಾಸ್ತ್ರ ಮೊದಲಾದುವು-ಗಳಿಂದ ಹಿಂದು ಜನರಿಗೆ, ಇಂದಿಗೆ ಸಾವಿರಾರು ವರ್ಷಗಳಿಂದ ಲೌಕಿಕ ಹಾಗು ಪಾರಮಾರ್ಥಿಕವಾದ ಯಾವ ಜ್ಞಾನ ಉಂಟಾಗುತ್ತಿರು-ವುದೋ ಅದು, ಆಗಲು ಸಾಧ್ಯವಾಗುತ್ತಿರಲಿಲ್ಲ. ಪುಸ್ತಕದ್ವಾರವಾಗಿ ಪಾಶ್ಚಿಮಾತ್ಯರ ಇಂಗ್ಲಿಷ್ ಮೊದಲಾದ ಭಾಷೆಯೊಳಗಿನ ಜ್ಞಾನ ಭಾಂಡಾರವು ವಿನಿಯಂತ್ರಣವಾಗಿರುವುದರಿಂದ, ನಮ್ಮೆಲ್ಲರಿಗೂ ಬಹು ಲಾಭವಾಗುತ್ತಿರುವುದು ಅನುಭವದ ಸಂಗತಿಯಾಗಿದೆ. ನೂರಾರು ವರ್ಷಗಳ ಪಾರತಂತ್ರ್ಯದ ಸಂಕೋಲೆಯನ್ನು ಕಿತ್ತೊಗೆದು ಈಗ ಸ್ವಾತಂತ್ರ್ಯದ ಸುಖವನ್ನನುಭವಿಸುತ್ತಿರುವ ಶಕ್ತಿಯು ಬಂದದ್ದು ಆ ಜ್ಞಾನಭಾಂಡಾರದಿಂದಲ್ಲವೆ? ದೊಡ್ಡ ದೊಡ್ಡ ತತ್ತ್ವವೇತ್ತರು, ಇತಿಹಾಸಕಾರರು, ಶಾಸ್ತ್ರಜ್ಞರು, ಸಂಶೋಧಕರು ತಮ್ಮ ವಿಚಾರಗಳನ್ನು ಪುಸ್ತಕರೂಪನೌಕೆಯಲ್ಲಿ ಹಾಕಿ ಇಡದಿದ್ದರೆ, ಅವು ಕಾಲವೆಂಬ ಮಹಾಸಮುದ್ರದಲ್ಲಿ ಎಂದೋ ಮುಳುಗಿ ಹೋಗುತ್ತಿದ್ದುವು.

ಗುರುಮುಖದಿಂದ ಆಗುವ ಲಾಭವನ್ನು ವಿದ್ಯಾರ್ಥಿಗಳು ಬಹಳವಾದರೆ ಶಾಲೆ, ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಹೊಂದಲು ಬರುತ್ತದೆ. ಒಮ್ಮೆ ಶಾಲೆಯನ್ನು ಬಿಟ್ಟರೆ ಅಥವಾ ಕಾಲೇಜು ವಿಶ್ವವಿದ್ಯಾಲಯಗಳಲ್ಲಿ ಪದವೀಧರರಾದರೆ ತೀರಿತು. ಆಮೇಲೆ ಗುರುವನ್ನು ಬಿಟ್ಟು ವ್ಯವಹಾರದಲ್ಲಿ ಬೀಳಬೇಕಾಗುತ್ತದೆ. ವ್ಯವಹಾರವು ಬೆನ್ನು ಹತ್ತಿತೆಂದರೆ ಜ್ಞಾನಸಂಪಾದನೆಗೆ ಪುಸ್ತಕದ ಹೊರತು ಬೇರೆ ಸಾಧನವೇ ಉಳಿಯುವುದಿಲ್ಲ. ಸುಶಿಕ್ಷಿತ ಜನರಲ್ಲಿ ೧೦೦ಕ್ಕೆ ೯೦ರಷ್ಟು ಜನರಿಗೆ ನೌಕರಿ ಇಲ್ಲವೆ ಯಾವುದಾದರೊಂದು ಉದ್ಯೋಗ-ವ್ಯವಸಾಯಗಳಲ್ಲಿ ಬಿದ್ದಬಳಿಕ ಅವರಿಗೆ ಓದುವ ಇಚ್ಛೆಯೇ ಆಗುತ್ತಿರುವುದಿಲ್ಲವೆಂದು, ಸದ್ಯದ ಪರಿಸ್ಥಿತಿಯು ಮೇಲಿಂದ ನಿರ್ಧಾರವಾಗಿ ಹೇಳಬಹುದು. ಶಾಲೆ, ಕಾಲೇಜುಗಳಲ್ಲಿ ಕಷ್ಟಪಟ್ಟು ಮಾನಸಿಕ ಶ್ರಮಮಾಡಿರುವುದಕ್ಕೆ ನೌಕರಿ ಅಥವಾ ಉದ್ಯೋಗಗಳು ದೊರೆತರೆ ಅಭ್ಯಾಸದ ಸಾರ್ಥಕತೆ ಆದಂತೆಯೇ ಸರಿ. ಮುಂದೆ ಮಾನಸಿಕ ಶ್ರಮವನ್ನು ಮಾಡುವ ಆವಶ್ಯಕತೆಯೇ ಉಳಿಯುವುದಿಲ್ಲವೆಂಬುದಾಗಿ ಬಹುಜನರು ತಿಳಿದುಕೊಂಡಿರುತ್ತಾರೆ. ಶಾಲೆ-ಕಾಲೇಜುಗಳಲ್ಲಿ ಸಂಪಾದಿಸಿದ ಜ್ಞಾನದ ಬಂಡವಲದ ಮೇಲೆಯೇ ಮರಣಾಂತ್ಯದವರೆಗೂ ಕೇವಲ ವ್ಯಾಪಾರ ಉದ್ಯೋಗಗಳಲ್ಲಿ ತೊಡಗಿದ ಅನೇಕ ಜನರಿದ್ದಾರೆ. ಅವರಿಗೆ ಸ್ವಾಭಾವಿಕವಾಗಿಯೇ ಮಾನಸಿಕ ಶ್ರಮ ಮಾಡುವುದು ತ್ರಾಸದಾಯಕವೆನಿಸುತ್ತದೆ. ಉದ್ಯೋಗಕ್ಕೆ ಹೋಗುವ ವೇಳೆಯ ಹೊರತಾಗಿ ಅವಕಾಶ ದೊರೆತಾಗೆಲ್ಲ ಅವರು ಇಸ್ಪೀಟು, ಪಗಡೆ, ಗಂಜೀಫ, ಕೇರಮ್ ಮೊದಲಾದ ಆಟವಾಡುವುದರಲ್ಲಿಯೂ ಇಲ್ಲವೆ ತಂಬಾಕು ತಿನ್ನುವುದು, ಸೇದುವುದು, ಏರಿಸುವುದರಲ್ಲಿಯೂ ಕಾಲಕಳೆಯುತ್ತಿರುತ್ತಾರೆ. ಕೆಲವರಂತೂ ಇದಕ್ಕೂ ಮುಂದೆ ಹೋಗಿರುವರು.

ಯಾರು ಚಿಕ್ಕವರಿರುವಾಗಿನಿಂದಲೂ ಓದುವ ರುಚಿಯುಳ್ಳವರಾಗಿರುವರೋ, ಅವರು ಸಂಸಾರದಲ್ಲಿ ತೊಡಗಿದ್ದರೂ ಅವಕಾಶ ದೊರೆತಾಗೆಲ್ಲ ಸದ್ಗ್ರಂಥಗಳನ್ನು ಅವಲೋಕನ ಮಾಡುತ್ತಿರುವುದರಿಂದ, ಅವರ ಸ್ಥಿತಿಯು ಮೇಲ್ಕಾಣಿಸಿದ ದುರ್ವ್ಯಸನೀ ಜನರ ಸ್ಥಿತಿಗಿಂತ ಬೇರೆತರದ್ದಾಗಿರುತ್ತದೆ. ಉತ್ತಮೋತ್ತಮ ಗ್ರಂಥಗಳನ್ನು, ಮಾಸಿಕಗಳನ್ನು, ಪತ್ರಿಕೆಗಳನ್ನು, ನಿತ್ಯ ಓದುತ್ತಿರುವುದರಿಂದ ಅವರ ಜ್ಞಾನವು ಒಂದೇಸಮನೆ ಬೆಳೆಯುತ್ತಲೇ ನಡೆದಿರುವದು. ಮತ್ತು ವ್ಯವಹಾರದಲ್ಲಿ ಅದರ ಉಪಯೋಗವೂ ಆಗುತ್ತಿರುವದು. ಮನುಷ್ಯನು ಹೊಟ್ಟೆಯ ಸಲುವಾಗಿ ಏನಾದರೊಂದು ಉದ್ಯೋಗ ಮಾಡಬೇಕಾಗುವುದು ಅನಿವಾರ್ಯವಾಗಿದ್ದರೂ, ಅವಕಾಶ ದೊರೆತಾಗೆಲ್ಲ ಉಳಿದ ವಿಷಯಗಳ ಜ್ಞಾನಮಾಡಿಕೊಳ್ಳುವುದು ಅಪ್ರಯೋಜಕವೆಂದು ತಿಳಿಯಬಾರದು.

ಪ್ರಪಂಚದಲ್ಲಿ ಪ್ರತಿದಿವಸ ಸಣ್ಣ ದೊಡ್ಡ ಅನೇಕ ಅಡೆ-ತಡೆಗಳು ಒಂದೇ ಬರುತ್ತವೆ. ಅವುಗಳ ಪರಿಹಾರವನ್ನು ಹೇಗೆ ಮಾಡಿಕೊಳ್ಳಬೇಕೆಂಬ ತಿಳಿವಳಿಕೆ ಇಲ್ಲದಿದ್ದರೆ, ಬಾಳುವೆಯಲ್ಲಿ ಬಹು ತೊಂದರೆಯಾಗುವದು. ಕುಟುಂಬದಲ್ಲಿ ಒಬ್ಬರಿಗೆ ಕಿಂಚಿತ್ ರೋಗ ಬಂದರೆ ಸಾಕು---ಡಾಕ್ಟರ ಕಡೆಗೆ ಓಡುವುದು, ನೆರೆಹೊರೆ-

ನಿಮ್ಮ ಮುಖದ ಲಾವಣ್ಯ ಹೆಚ್ಚಿಸಿರಿ!

ಮುಖದ ಮೇಲಿನ ಕಲೆಗಳು ಮೊಡವೆ ಬೊಕ್ಕೆ—ಇವನ್ನೆಲ್ಲ ಇಲ್ಲದಂತಾಗಿಸಿಯೂ ಹವೆಯ ಮೂಲಕ ಚರ್ಮದ ಮೇಲಾಗುವ ಪರಿಣಾಮವನ್ನು ನಿಲ್ಲಿಸಿಯೂ ಮೈದೊಗಲನ್ನು ರೇಶಿಮೆಯಂತೆ ಮೃದುವಾಗಿಸುವ ಮತ್ತು ಹೊಳಪು ಕೊಡುವ ದ್ರವ್ಯಗಳಿಂದ ಸಿದ್ಧಗೊಳಿಸಿರುವ

ಕಾಮಿನಿಯಾಸ್ನೋ

(ರಜಿಸ್ಟರ್ಡ್)

ಉಪಯೋಗಿಸಿ, ನೀವು ನಿಮ್ಮ ಮುಖದ ಚೆಂದಗನ್ನೂ ಚೆಲುವನ್ನೂ ಹೆಚ್ಚಿಸಿಕೊಳ್ಳಿರಿ. ನಿಮ್ಮ ವ್ಯಕ್ತಿಮತ್ವವನ್ನು ಬೆಳೆಯಿಸಿ, ಅದರಿಂದ ಸಹಜವಾಗಿ ನಿಮ್ಮ ಕಾರ್ಯಕ್ಕಾಗೂಕುವುದಕ್ಕಿದು ನೆರವು ಕೊಡುವುದು.

ದೀಪಾವಳಿಗೆಯಂತಹ ಮಂಗಲಪ್ರಸಂಗದಲ್ಲಿ, 'ಕಾಮಿನಿಯಾ ಸ್ನೋ' 'ಕಾಮಿನಿಯಾ ಆಯಿಲ್' 'ಕಾಮಿನಿಯಾ ಸಾಬೂನು' 'ಓಟೋ ದಿಲ್ ಬಹಾರ' ಈ ಸೌಂದರ್ಯ ಪ್ರಸಾಧನಗಳ ಕಾಣಿಕೆಯು ನಿಮ್ಮ ಮತ್ತು ನಿಮ್ಮ ಆಪ್ತೇಷ್ಟರ ಆನಂದವನ್ನು ಹೆಚ್ಚಿಸಬಲ್ಲದು.

ಆಂಗ್ಲೋ ಇಂಡಿಯನ್ ಡ್ರಗ್ ಮತ್ತು ಕೆಮಿಕಲ್ ಕಂ.

೨೮೫, ಜುಮ್ಮಾ ಮಸೀದ, ಮುಂಬಯಿ ೨.

ಯುವರಲ್ಲಿ ಸ್ವಲ್ಪ ಜಗಳವಾದರೆ ಸಾಕು—ವಕೀಲರ ಮನೆಯ ದಾರಿ ಹಿಡಿಯುವುದು, ಯಾವುದಾದರೊಂದು ಸಾರ್ವಜನಿಕ ಕೆಲಸ ಮಾಡುವ ಪ್ರಸಂಗ ಬಂದರಂತೂ ಎದೆ ಒಡೆದುಕೊಂಡೇ ಬಿಡುವುದು—ಇವು ಹೆಚ್ಚಿನ ಜ್ಞಾನ ಸಂಗ್ರಹವಿಲ್ಲದವರ ಕೃತಿಗಳಾಗಿರುತ್ತವೆ. ಆದರೆ ಯಾರು ಪೂರ್ವ ವಯಸ್ಸಿನಲ್ಲಿ ಸಾಧಾರಣ ಮಟ್ಟಿಗಾದರೂ ಶಿಕ್ಷಣವಾಗಿ ನಿತ್ಯ ಓದುವ ಅಭ್ಯಾಸವನ್ನಿಟ್ಟುಕೊಂಡಿರುವರೋ, ಅಂಥವರಿಗೆ ಈ ದೈನ್ಯಾವಸ್ಥೆಯು ಬರಲಾರದು. ಮತ್ತು ಇಂಥ ಸಣ್ಣ-ಪುಟ್ಟ ಅಡಚಣೆಗಳಿಂದ ಪಾರಾಗಲೂ ಅಂಜಿಕೆಯು ಇರುವುದಿಲ್ಲ. ಸಾಮಾನ್ಯ ಅಡಚಣೆಗಳಿಂದ ಹೇಗೆ ಪಾರಾಗಬೇಕೆಂಬ ತಿಳಿವಳಿಕೆಯು ಇರುವುದರಿಂದ, ಅವರಿಗೆ ಅವುಗಳ ಮಹತ್ತ್ವವೇ ತೋರುವುದಿಲ್ಲ.

ಸಂಸಾರದಲ್ಲಿ ಮೇಲೆ ಮೇಲೆ ಒದಗುತ್ತಿರುವ ಅಡಚಣೆಗಳಿಂದ ಪಾರಾಗಲು ವಾಚನವು ಬಹು ಸಹಾಯಕವಾಗಿರುವುದು. ಇದು ವಾಚನದ ಕೆಳಮೆಟ್ಟಿಲ ಲಾಭವಿರುವುದು. ಜಗತ್ತಿನಲ್ಲಿ ಪ್ರತಿಕ್ಷಣಕ್ಕೂ ಹೊಸ ಹೊಸ ಶೋಧಗಳೂ ಕಲ್ಪನೆಗಳೂ ಯುಕ್ತಿಗಳೂ ಹೊರಟು, ಹಳೆಯವು ಹಿಂದೆ ಬೀಳುತ್ತಿರುವವು. ಯಾರು ಶಾಲೆ-ಕಾಲೇಜುಗಳಲ್ಲಿ ಸಂಪಾದಿಸಿದ ಜ್ಞಾನಕ್ಕೇ ಅಂಟಿಕೊಂಡಿರುವರೋ, ಮತ್ತು ವ್ಯವಹಾರದಲ್ಲಿ ಬಿದ್ದ ಬಳಿಕ ಓದುವ ಅಭ್ಯಾಸವನ್ನಿಟ್ಟುಕೊಂಡಿರುವುದಿಲ್ಲವೋ, ಅಂಥವರು ತಮ್ಮ ಹಳೆಯತನಕ್ಕಾಗಿ ಜನರಲ್ಲಿ ಅಪಹಾಸ್ಯಕ್ಕೀಡಾಗಬೇಕಾಗುತ್ತದೆ. ಸ್ವಾಮಿಗಳೂ ಶಿಕ್ಷಕರೂ ವೈದ್ಯರೂ ಶಿಲ್ಪಿಗಳೂ ವ್ಯಾಪಾರಿಗಳೂ ನೌಕರರೂ ಮೊದಲಾದವರಲ್ಲಿ ಯಾರು ನಿತ್ಯ ಓದುವ ಅಭ್ಯಾಸವನ್ನಿಟ್ಟುಕೊಂಡಿರುವುದಿಲ್ಲವೋ ಅವರಿಗೆ ತಮ್ಮ ತಮ್ಮ ಉದ್ಯೋಗಗಳಲ್ಲುಂಟಾದ ಸುಧಾರಣೆಯು ಗೊತ್ತಾಗದ್ದರಿಂದ, ಅವರು ಬಹು ಹಾನಿಗೀಡಾಗಬೇಕಾಗುತ್ತದೆ.

ಪೂರ್ವಕಾಲದಲ್ಲಿ ವಾಚನದ ವಿಷಯದಲ್ಲಿ ಆಸ್ಥೆಯಿದ್ದಿರುವಂತೆ ಕಾಣಲಿಕ್ಕಿಲ್ಲ. ಆದರೆ ಈಗ ಮಾತ್ರ ಮಾನವನು ನಾಗರಿಕನಾಗಿ ಬಾಳಬೇಕಾದರೆ, ಓದುವುದಿಲ್ಲದೆ ನಡೆಯುವುದಿಲ್ಲ. ಪೂರ್ವಕಾಲದಲ್ಲಿ ರಾಜ್ಯಸೂತ್ರವು ರಾಜನ ಇಲ್ಲವೆ ಅವನ ಮಂತ್ರಿಗಳ ಕೈಯಲ್ಲಿಯೆ ಇರುತ್ತಿತ್ತು. ರಾಜ್ಯಪದತ್ವವು ವಂಶಪರಂಪರೆಯಿಂದ ಪ್ರಾಪ್ತವಾಗುತ್ತಿತ್ತು. ಕಾಯಿದೆ ಮಾಡುವುದು—ಪರರಾಷ್ಟ್ರಗಳ ಕೂಡ ಯುದ್ಧ ಮಾಡುವದು, ಅಥವಾ ಒಪ್ಪಂದಮಾಡುವುದು ಖಜಾನೆಯನ್ನು ಖರ್ಚು ಮಾಡುವುದು ಬಿಡುವುದೇ ಮೊದಲಾದ ಎಲ್ಲ ಪ್ರಸಂಗಗಳಲ್ಲಿ, ಪೂರ್ವದ ಅನಿಯಂತ್ರಿತ ರಾಜರು, ಅವರ ಮಂತ್ರಿಗಳು, ಪ್ರಜರ ಅನುಮತಿಯನ್ನು ತಕ್ಕೊಳ್ಳುತ್ತಿದ್ದಿಲ್ಲ. ಇಷ್ಟೇ ಅಲ್ಲ, ಅವರ ಅಭಿಪ್ರಾಯವಾದರೂ ಏನಿರುವುದೆಂಬುದರ ಕಡೆಗೂ ಲಕ್ಷ್ಯಕೊಡುತ್ತಿದ್ದಿಲ್ಲ. ಆದರೆ ಈಗ ಮನ್ವಂತರವು ಸಂಪೂರ್ಣ ಬದಲಿಸಿದೆ. ರಾಜಸತ್ತೆಯು ನಷ್ಟವಾಗಿ ಆಡಳಿತದ ಸಂಪೂರ್ಣಸತ್ತೆಯು ಪ್ರಜರ ಕಡೆಗೆ ಬಂದಿದೆ. ಕಾಯಿದೆ ಮಾಡುವುದು ಪ್ರಜರ ಅರ್ಥಾತ್ ಅವರಿಂದ ಚುನಾಯಿತರಾಗಿ ಹೋದ ಪ್ರತಿನಿಧಿಗಳ ಮೇಲೆಯೇ ಬಿದ್ದಿರುವುದು ಯುದ್ಧಮಾಡುವುದಾಗಲೀ ಬಿಡುವುದಾಗಲೀ, ಖಜಾನೆಯು ಖರ್ಚುಮಾಡುವುದಾಗಲೀ ಸಂಗ್ರಹಮಾಡುವುದಾಗಲೀ, ಎಲ್ಲವೂ ಜನಾಭಿಪ್ರಾಯವನ್ನೇ ಅವಲಂಬಿಸಿರುವುದು. ಇಂಥ ಕಾಲದಲ್ಲಿ ನಾಲ್ಕೂ ಕಡೆಯ ಪರಿಸ್ಥಿತಿ ಹೇಗಿದೆಯೆಂಬುದರ ಜ್ಞಾನವಿಲ್ಲದಿದ್ದರೆ, ಅವರಿಂದ ದೊಡ್ಡ ದೊಡ್ಡ ಪ್ರಮಾದಗಳಾಗುವ ಸಂಭವವಿರುವುದು. ಜನರಿಗೆ ಸ್ವಾತಂತ್ರ್ಯಗಳಿಸಲು ಹೇಗೆ ಅವರ ಜ್ಞಾನವೇ ಕಾರಣವಾಯಿತೋ, ಹಾಗೆಯೇ ಆ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವುದರ ಸಲುವಾಗಿಯೂ ಮತ್ತು ಅದರಿಂದ ಅಧಿಕಾಧಿಕ ಪ್ರಯೋಜನಗಳನ್ನು ಹೊಂದುವುದರ ಸಲುವಾಗಿಯೂ ಪ್ರತಿಯೊಬ್ಬನು ಜ್ಞಾನವಂತನಾಗಿರಬೇಕಾದುದು ಅತ್ಯವಶ್ಯವಾಗಿರುತ್ತದೆ. ೧೦೦ರಲ್ಲಿ ೯೯ ಜನರಿಗೆ ಶಿಕ್ಷಣ ಪಡೆಯುವ ಕೆಲಸವು ಇನ್ನೂ ಪೂರ್ತಿಯಾಗುವುದರೊಳಗಾಗಿಯೇ, ಹೊಟ್ಟೆಗಾಗಿ ಯಾವುದಾದರೊಂದು ಕಾಯಕದಲ್ಲಿ (ಉದ್ಯೋಗದಲ್ಲಿ) ತೊಡಗಲೇಬೇಕಾಗುವುದು. ಇದರಿಂದ ಅವರಿಗೆ ಓದುವುದರ ಕಡೆಗೆ ಅಷ್ಟು ಲಕ್ಷ್ಯಕೊಡಲಾಗುವುದಿಲ್ಲ. ಆದರೆ ಪ್ರಜಾಸತ್ತಾತ್ಮಕ ರಾಜ್ಯದಲ್ಲಿ ಇಂಥವರಿಂದ ತಮ್ಮ ಪಾಲಿಗೆ ಬಂದ ರಾಜ್ಯಪ್ರಕರಣದಲ್ಲಿಯ ಕಾರ್ಯವನ್ನು ಚೆನ್ನಾಗಿ ಮಾಡಲು ಹೇಗೆ ಸಾಧ್ಯವಾಗಬಹುದು? ಇಂಗ್ಲಂಡ್ ಅಮೇರಿಕಾ ರಶಿಯಾದಲ್ಲಿಯ ಕ್ಷೌರಿಕ, ಅಗಸ, ಕಮ್ಮಾರ, ಕಂಚುಗಾರ, ಕುಂಬಾರ, ಚಮಗಾರ ಮೊದಲಾದವರ ಟೇಬಲಿನ ಮೇಲೆ ದೈನಿಕ ಪತ್ರಗಳೂ ಕಪಾಟಿನಲ್ಲಿ ಹತ್ತಿಪ್ಪತ್ತು ಪುಸ್ತಕಗಳೂ ತಪ್ಪದೆ ಬಿದ್ದಿರುತ್ತವೆಂದು ಅಲ್ಲಿಗೆ ಹೋಗಿಬಂದ ಅನುಭವಿಗಳು ಹೇಳುತ್ತಿರುತ್ತಾರೆ. ಇದರಿಂದ ತಿಳಿಯುವುದೇನೆಂದರೆ, ಆ ಕಡೆಯ ಸಾಮಾನ್ಯ ಉದ್ಯೋಗದಲ್ಲಿದ್ದವರು ಕೂಡ ರಾಜಕಾರಣದ ಚಳವಳಿ ಹೇಗೆ ಸಾಗುತ್ತಿದೆ ಇದನ್ನು ಲಕ್ಷ್ಯಪೂರ್ವಕವಾಗಿ ಹೇಗೆ ಅವಲೋಕಿಸುತ್ತಾರೆಂಬುದು ಸಿದ್ಧವಾಗುವುದು. ಆ ಸಂಬಂಧವಾಗಿ ತಮ್ಮ ತಮ್ಮಲ್ಲಿಯೇ ವಾದವಿವಾದದಿಂದ ತಮ್ಮದೇ ಆದ ಒಂದು ನಿರ್ಣಯವನ್ನು ಮಾಡಿಕೊಂಡಿರುತ್ತಾರೆ. ಈ ಕಾರಣದಿಂದ ಯಾವಾಗ್ಗೆ ಪಾರ್ಲಿಮೆಂಟಿನಲ್ಲಿ ಕೆಲವು ವಾದಗ್ರಸ್ತ ವಿಷಯಗಳುಂಟಾಗಿ ಪ್ರಧಾನಿಗಳಲ್ಲಿ ಸದಸ್ಯರಲ್ಲಿ ವಿರೋಧವುಂಟಾಗುವುದೋ ಆವಾಗ್ಗೆ, ಆ ವಿಷಯವಾಗಿ ಜನರ ಅಭಿಪ್ರಾಯವೇನಿರುವುದೆಂಬುದನ್ನು ತಿಳಿದುಕೊಳ್ಳುವ ನಿರ್ಣಯವಾಗುತ್ತದೆ. ಆ ಕಾಲದಲ್ಲಿ ಅನುಕರಣಪ್ರಿಯರಾಗದೆ ತಮ್ಮ ಅಭಿಪ್ರಾಯನ್ನು ಸ್ಪಷ್ಟವಾಗಿ ತಿಳಿಸಲು ಅವರಿಗೆ ಅನುಕೂಲವಾಗುತ್ತದೆ. ಯಾರಿಗೆ ರಾಜ್ಯಸೂತ್ರವು ಜಮೀನುದಾರರ ಬಂಡವಲದಾರರ ಮತ್ತು ಭಂಡಖೋರರ ಕೈಯಲ್ಲಿರದೆ ಜನರ ಕೈಯಲ್ಲಿಯೇ ಇರಬೇಕೆಂಬ ಇಚ್ಛೆ ಇರುವುದೋ, ಅವರು ಜ್ಞಾನಸಂಗ್ರಹದ ಈ ಕಾರ್ಯವನ್ನು ಸತತ ನಡಿಸಬೇಕು. ಜ್ಞಾನಸಂಗ್ರಹದ ಪ್ರಧಾನಸಾಧನವೆಂದರೆ ವಾಚನವೇ ಆಗಿರುವುದು.

ಈ ವರೆಗೂ ಕೇವಲ ಸಾಮೂಹಿಕ ದೃಷ್ಟಿಯಿಂದಲೇ ವ್ಯವಹಾರ ಹಾಗು ರಾಜಕಾರಣದಲ್ಲಿ, ಓದುವ ಸಾಧನೆಯಿಂದ ಯಾವ ಯಾವ

ಪ್ರಯೋಜನವುಂಟೆಂಬುದನ್ನು ಮಾತ್ರ ತಿಳಿಸಿದ್ದಾಯಿತು. ಆದರೆ ನಿತ್ಯವಾಚನದಿಂದ ಇದಕ್ಕಿಂತಲೂ ಹೆಚ್ಚಿನ ಲಾಭವು ವ್ಯಕ್ತಿಗತ-ವಾಗಿಯೂ ಸಿಗುವುದು. ಸಂಸಾರದಲ್ಲಿ ಪ್ರತಿಯೊಬ್ಬನ ಮೇಲೆ ಪ್ರಸಂಗವಶಾತ್ ದೊಡ್ಡ ದೊಡ್ಡ ಅನರ್ಥಗಳು ಬಂದೊದಗುತ್ತವೆ. ಯಾರಿಗೆ ಒಬ್ಬನೇ ಒಬ್ಬನಾದ ಮನೆ ನಡಿಸುತ್ತಿರುವ ಪ್ರಬುದ್ಧ ಮಗನು ಆಕಸ್ಮಾತ್ ಮರಣ ಹೊಂದುತ್ತಾನೆ; ಯಾರಿಗೆ ರೂಪವತಿ ಹಾಗು ಅನುಕೂಲೆಯಾದ—ಗೃಹದ ಆಧಾರಸ್ತಂಭಳಾದ-ಸತಿಯು ಸಾಯುತ್ತಾಳೆ, ಒಬ್ಬರಿಗೆ ಸರ್ವಸಂಪತ್ತು ಏಕಾಏಕಿ ನಷ್ಟವಾಗು-ತ್ತದೆ, ಮತ್ತೊಬ್ಬರಿಗೆ ಭಯಂಕರ ಅಪಘಾತವಾಗಿ ಶರೀರಕ್ಕೆ ವ್ಯಂಗತ್ವವು ಪ್ರಾಪ್ತವಾಗುತ್ತದೆ. ಮಗುದೊಬ್ಬರಿಗೆ ಅರ್ಧಾಂಗ-ವಾತ, ಕುಷ್ಟ, ಮಹಾರೋಗ ಮೊದಲಾದುವುಗಳುಂಟಾಗುತ್ತವೆ. ಹೀಗೆ, ಅನರ್ಥಗಳು ಸಂಭವಿಸಿದ ಪ್ರಸಂಗಗಳಲ್ಲಿ ಮನಸ್ಸಿಗೆ ಅದರ ವಿಸ್ಮರಣೆಯಾಗುವಂತಹ ಒಂದಾದರೂ ಸಾಧನೆಯಿಲ್ಲದಿದ್ದರೆ ಮನುಷ್ಯನಿಗೆ ಹೇಳತೀರದಷ್ಟು ದುಃಖವಾಗಿ, ಒಂದೊಂದು ವೇಳೆ ಹುಚ್ಚು ಕೂಡಾ ಹಿಡಿಯುವುದುಂಟು. ಮತ್ತು ಆತ್ಮಹತ್ಯಮಾಡಿ-ಕೊಳ್ಳುವುದೂ ಉಂಟು. ಪ್ರಯುಕ್ತ ಇಂಥ ಪ್ರಸಂಗಗಳಲ್ಲಿ ವಿಪದ್ಗ್ರಸ್ತರಿಗೆ ಓದುವ ರೂಢಿ ಇದ್ದರೆ, ಹತ್ತಿರ ಉತ್ತಮ ಪುಸ್ತಕ-ಗಳ ಸಂಗ್ರಹವಿದ್ದರೆ, ದುಃಖದ ಮೊದಲನೆಯ ಉತ್ಕಟತರಂಗವು ಲಯವಾದ ನಂತರ, ಅವರಿಗೆ ಯೋಗ್ಯ ಪುಸ್ತಕಗಳನ್ನು ಓದುವುದ-ರಿಂದ ದಿನದಿನಕ್ಕೆ ಸಮಾಧಾನವಾಗಲು ಶಕ್ಯವಿರುತ್ತದೆ. ಇಂತಹ ಪ್ರಸಂಗಗಳಲ್ಲಿ ಧಾರ್ಮಿಕ ಅಥವಾ ಆಧ್ಯಾತ್ಮಿಕ ಗ್ರಂಥಗಳು ವಿಶೇಷ ಸಹಾಯವನ್ನೀಯುತ್ತವೆ. ದೇಹವು ಜಡವಸ್ತು, ನಶ್ವರವಾಗಿರು-ವುದು. ಆತ್ಮನು ಅವಿನಾಶಿಯಾಗಿದ್ದಾನೆ. ಜನ್ಮಿಸಿದವನಿಗೆ ಮರ-ಣವು ಪ್ರಕೃತಿಸಿದ್ಧವು. ಇಂದಿಲ್ಲ ನಾಳೆ ಪ್ರತಿಯೊಬ್ಬನೂ ದೇಹ-ದೃಷ್ಟಿಯಿಂದ ಸಾಯಲೇಬೇಕು. ಯಾರಿಗೆ ಈ ಜಗತ್ತಿನಲ್ಲಿ ಕಾರಣ-ವಿಲ್ಲದೆ ವಿಪತ್ತುಗಳನ್ನು ಭೋಗಿಸುವ ಪ್ರಸಂಗ ಬರುತ್ತದೆಯೋ ಅವರಿಗೆ ಪರಮೇಶ್ವರನು ಸ್ವರ್ಗ, ಕೈಲಾಸ, ವೈಕುಂಠಾದಿ ಲೋಕಗಳಲ್ಲಿ ಶಾಶ್ವತ ಸುಖವನ್ನು ಕೊಡುತ್ತಾನೆ. ಸರ್ವಶಕ್ತಿಮಾನ್ ಸರ್ವಜ್ಞ-ನಾದ ಪರಮೇಶ್ವರನ ಇಚ್ಛಾಮಾತ್ರದಿಂದಲೇ ಜಗತ್ತಿನ ಸರ್ವ-ಕಾರ್ಯಗಳು ನಡೆದಿರುತ್ತವೆ. ಆತನ ಶಕ್ತಿಯ ಮುಂದೆ ಯಾರ ಆಟವೂ ಸಾಗುವಂತಿಲ್ಲ. ಪ್ರಯುಕ್ತ ಆತನು ಹೇಗೆ ಇಡುತ್ತಾನೋ ಅದೇ ಸ್ಥಿತಿಯಲ್ಲಿಯೇ ಸಂತೋಷದಿಂದ ಇರಬೇಕು— ಈ ರೀತಿಯಾಗಿ ಧರ್ಮಾಂತರ್ಗತವಾದ ಅನೇಕ ವಿಚಾರಗಳಿಂದ, ತುಂಬಿಬಾರದ ವಿಪತ್ತಿಗೀಡಾದವರ ಮನಸ್ಸಿಗೆ ಧೈರ್ಯ ಬಂದು, ಸಮಾಧಾನವಾಗಿ ದುಃಖವು ಇಳಿಮುಖವಾಗುತ್ತದೆ. ಇದರಿಂದ ಸ್ವಲ್ಪ ದಿವಸಗಳ-ಲ್ಲಿಯೇ ಮನುಷ್ಯನು ಉಲ್ಲಾಸವೃತ್ತಿಯಿಂದ ಕೂಡಿದವನಾಗಿ ಮೊದಲಿನಂತೆಯೇ ಕರ್ತವ್ಯಕರ್ಮಗಳನ್ನು ಮಾಡಲುದ್ಯುಕ್ತ-ನಾಗುತ್ತಾನೆ.

ಒಟ್ಟಿನ ಮೇಲೆ ಹೇಳುವುದೆಂದರೆ ಯಾರು ನಿತ್ಯ ಯೋಗ್ಯ ಪುಸ್ತಕಗಳನ್ನೋದುವ ರೂಢಿಯುಳ್ಳವರಾಗಿರುವರೋ ಅವರಿಗೆ ವೇಳೆ ಹೋಗುವುದಂತೂ ಗೊತ್ತೇ ಆಗುವುದಿಲ್ಲ. ಮತ್ತು ಜಗತ್ತಿ-ನೊಳಗೆ ಈ ವರೆಗೂ ಆಗಿಹೋದ ಸಾಧು- ಶರಣ-ತತ್ತ್ವಜ್ಞಾನಿ-ಕವಿ- ವೀರ- ಧೀರ- ನಾಟಕಕಾರ ಮೊದಲಾದವರ ಸಮಾಗಮ-ವುಂಟಾದಂತಾಗಿ, ಜ್ಞಾನಾಮೃತಸೇವನೆ ಮಾಡುವ ಸುಯೋಗ ಒದಗುತ್ತದೆ. ಹಾಗು ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಕಾಲ-ಗಳಲ್ಲಿ ಯಾವ ಯಾವ ಜನರಿದ್ದರು, ಅವರ ನೀತಿ-ರೀತಿಗಳು ಹೇಗಿದ್ದುವು, ಅವರ ರಾಜ್ಯಪದ್ಧತಿ ಹೇಗಿತ್ತು, ಧರ್ಮಕಲ್ಪನೆ ಎಂತಿತ್ತು, ಅವರ ಮಧ್ಯದಲ್ಲಿ ರಾಜ್ಯಕ್ರಾಂತಿ ಧರ್ಮಕ್ರಾಂತಿಗಳಾಗ-ಲಿಕ್ಕೆ ಕಾರಣಗಳಾವುವು? ಮತ್ತು ಸಂಕಟಕಾಲದಲ್ಲಿ ದೊಡ್ಡ ದೊಡ್ಡ ಜನರು ಹೇಗೆ ವರ್ತಿಸಿದರು? ಅನೀತಿ, ಹೇಡಿತನ, ಯಾದವಿ ಮೊದಲಾದವುಗಳಿಂದ ಯಾವ ರಾಷ್ಟ್ರಗಳು ನಷ್ಟವಾದುವು? ಉದ್ಯೋಗ, ನ್ಯಾಯ, ಧರ್ಮಪರಾಯಣತೆಯಿಂದ ಯಾವ ರಾಷ್ಟ್ರಗಳು ಉದಯೋನ್ಮುಖವಾದುವು ಇತ್ಯಾದಿ ಸರ್ವಸಂಗತಿಗಳು ಸಹಜವಾಗಿ ತಿಳಿಯುವುವಲ್ಲದೆ ವಾಚಕರಿಗೆ ವರ್ತಮಾನಕಾಲದ ವಿಸ್ಮರಣೆಯಾಗಿ, ಯಾವ ಯುಗದ ಯಾವ ದೇಶದ ಇತಿಹಾಸ-ವನ್ನೋದುತ್ತಿರುವರೋ ಆ ಯುಗದಲ್ಲಿ ಆ ದೇಶದಲ್ಲಿಯೇ ನಾವು ಇರುತ್ತೇವೆಯೋ ಏನೋ ಅನ್ನುವ ಭಾಸವು ಅವರ ವೃತ್ತಿಯಲ್ಲಿ ಕ್ಷಣಕಾಲವಾದರೂ ಉತ್ಪನ್ನವಾಗಿ, ಒಂದುಬಗೆಯ ಆನಂದದಲ್ಲಿ-ರುವ ಸಂದರ್ಭವುಂಟಾಗುತ್ತದೆ.

ಮಲೇರಿಯಾ
ಇನ್‌ಫ್ಲುಯೆಂಜಾ
ಮತ್ತು
ಯಾವತ್ತೂ ಜ್ವರಗಳು
ಒಡನೆ ವಾಸಿ ಹೊಂದುತ್ತವೆ.
ಶ್ರೀಮಂತರ—ಬಡಬಗ್ಗರ—ಕೂಲಿಕಾರರ ಎಲ್ಲರ ಸಲುವಾಗಿ
ಜ್ವರಗಳ ಮೇಲೆ ರಾಮಬಾಣ ಔಷಧ.
ಮಾದನ್ ಸನ್ಸ್ ಮತ್ತು ಕಂ. ಕೆಮಿಸ್ಟ್,
ಮುಂಬಯಿ—೨.

ನಿನ್ನುಡಿಯೆ ಸಾಕು

ಶ್ರೀ ಸಿದ್ದಣ್ಣ ಮಸಳಿ ಬಿ. ಎ. (ಆನರ್ಸ್) ವಿಜಾಪುರ

★

ಶಿವ ಶಕ್ತಿಯು ಸಮ್ಮಿಲನದಿ ಕಿಡಿಸೂಸುವ ಬೆಳಕೆ,
ಮನಮಂದಿರ ಜಗ ಬೆಳಗಲು ಬಾರೆನ್ನಯ ಮನಕೆ!

ರಸವಿಲ್ಲದ ಬಂಬಾಳಿಗೆ ಕಡು ಹೇಸಿದೆ ಜೀವ,
ಕಾರುಣ್ಯದ ನಿನ್ನೊಲವಿಗೆ ಹಾತೊರಿಸಿದೆ ಭಾವ
ದಿನದಿನದಲಿ ತನುಮನದಲಿ ಸರಿಸರಿಯಲಿ ಮರುಗಿ
ಕರುಳಿನ ಕರೆ ಮೊರೆಯಿಡುತಿರೆ ಕರುಳರಿಯದೆ ಕರಗಿ.

ನಿನ್ನೊಲುಮೆಯ ಎದೆಹಾಲಿನ ಮುಂದಾವುದು ಬೇಡ,
ಬಾಳೊರತೆಯು ನಿರ್ಝರಿಣಿಯು ನಿನ್ನಿಂದಲೆ ನೋಡ!
ಬಾನ್ನೀಲಿಯ ಸೀಮಂತಿನಿ ಆಕಾಶದ ಗಂಗೆ—
ಮಾತಿಲ್ಲದ ಮಂದಾಕಿನಿ ಹರಿವೈತರು ತುಂಗೆ!
ಬೆಳುದಿಂಗಳ ಹೊಳೆ ಹರಿದಿರೆ ಈ ಭೂಮಿಯು ಸೇರಿ
ಆ ಹೊಳೆಯಲಿ ಓ ಬರುವೆಯ ಹೊಂದೋಣಿಯನೇರಿ?

ಮಳೆ ಮುಗಿಲಿಗೆ ಚಳಿ ಚಿಮುಕಲು ಅದರಾತ್ಮವೆ ಕರಗಿ
ಇಳೆಗಿಳಿದಿರೆ ಹನಿಹನಿಗಳಲಿ ಬಾರೊಡನೆಯೆ ಸಾಗಿ!
ಹೂ-ಹೂವಿನ ಮಕರಂದದ ರಸಜೇನನು ನೀಡಿ
ರಸಜೀವಿಯ ಎದೆಯರಳಿಸು ಸುಳಿಗಾಳಿಯ ಕೂಡಿ!
ರಸರೂಪಸಿ ಕಾವ್ಯಾಂಗನೆ ಕುಣಿದಾಡಲು ತಾನ
ಸಿರಿ ಕಿಂಕಿಣಿ ಝಣ ಝಣ ಝಣ—ನನ್ನಾತ್ಮವೆ ಮೌನ!
ರಸವಾಗಲಿ ವಿಷವಾಗಲಿ ನಿನ್ನೊಲುಮೆಯೆ ಬೇಕು,
ಓ ಪೂರ್ಣೆಯೆ ಎಂದಾದರು ನಿನ್ನುಡಿಯೇ ಸಾಕು!
ಶಿವ-ಶಕ್ತಿಯು ಸಮ್ಮಿಲನದಿ ಕಿಡಿಸೂಸುವ ಬೆಳಕೆ,
ಮನಮಂದಿರ ಜಗಬೆಳಗಲು ಬಾರೆನ್ನಯ ಮನಕೆ!

ಪ್ರಕೃತಿ - ಪುರುಷ

ಶ್ರೀಮತಿ ಜಯದೇವೀಬಾಯಿ ಲಿಗಾಡೆ, ಸೊಲ್ಲಾಪುರ

★

ಕುರುಡ-ಕುಂಟರು ನಾವು ಹೊರಟು ಇಬ್ಬರು ಕೂಡಿ,
ನಾವಿಲ್ಲ ಬೇರೆ....ಜೋಡಿ ಜೋಡಿ!
ಕನಸಿನಲಿ ನಿಂದಿಹೆವು ಮನಸಿನಲಿ ಮೂಡಿಹೆವು
ಜೀವದಲಿ ಕೂಡಿ....ಜೋಡಿ ಜೋಡಿ! ೧

ಮರೆವುಲೋಕವ ಕಳೆದು ಅರಿವುಲೋಕವ ಸಾರಿ
ಸೇರಿಹೆವು ಬೇರೆ ನೀನು ಒಂದೇ ಜೋಡಿ!
ನೀನು ತಾ ಅತೀತಾಗಿ, ಕಾಲ ತಾ ವ್ಯತೀತಾಗಿ,
ಎರಡಿಲ್ಲ ಅಲ್ಲಿ ಬೇರೆ ಒಂದೇ ಒಂದೇ! ೨

ಹೆಣ್ಣು ರೂಪವ ಕಳೆದು ಗಂಡು ರೂಪವ ತಳೆದು
ನಿಂದಿಹೆನು, ಯಾರು ನಂಬರು ಯಾವ ಮಾತು!
ಕುರುಡಾರು ಕುಂಟಾರು? ಎಲ್ಲಾ ಕದಲು ಬದಲು
ಪ್ರಕೃತಿ-ಪುರುಷರು ಅಲ್ಲಿ ಸಾಗಿಹೆವು ಎಲ್ಲ ಬಯಲು! ೩

ಅಮರಾಂಗನೆ

ಶ್ರೀ. ವಸಂತ ಕವಲಿ ಬಿ. ಎ. ಧಾರವಾಡ

卐

ನಾನಮರಳಾಗಿಹೆನು! ಧ್ರುವತಾರೆ ನಾನಿಹೆನು!!
ಶತಮಾನಗಳ ಕಳೆದು ದೇಶಗಳ ಗಡಿ ಮೀರಿ
ಜನ-ಜನಾಂಗದ ಮನದ ನೀಲ ಬಾನನು ಸೇರಿ
ಅಚ್ಚಳಿಯದಿಹ ತೇಜದಿಂದೆ ಬೆಳಗುತಲಿಹೆನು!
ನಾನಲ್ಲ ಕವಯಿತ್ರಿ, ಸಂಗೀತ ಶಾರದೆಯು,
ವಿದುಷಿ ವಾಗ್ಮಿನಿ ಚಿತ್ರಕಾರ್ತಿ ನರ್ತಕಳಲ್ಲ
ಘೋರ ಸಮರಗಳಲ್ಲಿ ಹೋರಿ ಮಡಿದವಳಲ್ಲ,
ಆದರೂ ನನ್ನನೆಂದಿಗು ಮರೆಯದೀ ಧರೆಯು!
.... ಫ್ರೇನಿ ಬ್ರಾನಳೆ! ನಿಜದಿ ಅಮರಾಂಗನೆಯು ನೀನು!
ಆ ನಿನ್ನ ಸೌಂದರ್ಯ—ಅಮರ ಕವಿ ಕೀಟ್ಸನನು
ಮೋಹಗೊಳಿಸಿದ ಶಿಲ್ಪ—ಧನ್ಯವದು; ಬ್ರಾನಳೇ,
ಕವಿಯ ಹೃದಯವ ಸೀಳ್ದ ನೀನು ಸಾಮಾನ್ಯಳೇ?
ಕೀಟ್ಸನನು ನೆನೆವನಿತು ಜಗ ನಿನ್ನ ನೆನೆಯುವುದು;
ಕೃಷ್ಣನನು ಮರೆಸಂದು ಬೇಡನನು ಮರೆಯುವುದು.

ನಾಟಕ ಸಂಸಾರ

ಶ್ರೀ. ಸೀತಾರಾಮಾಚಾರ್ಯ, ಹೊಸಬೆಟ್ಟು

卐

ನಾಟಕ ನೋಡಬೇಕೆಂಬ ಆಡಬೇಕೆಂಬ ಆಶೆ ನಮ್ಮ ನಾಡಿಗರಲ್ಲಿ ತುಂಬ ಇದೆ. ಆದರೆ ಇಂತಹ ನೋಡುವ ಆಡುವ ನಾಟಕಗಳನ್ನು ಬರೆಯಬೇಕೆನ್ನುವವರು, ನಾಟಕದ ಇತಿಹಾಸವನ್ನೂ ಕಲಾತತ್ತ್ವವನ್ನೂ ಅರಿತುಕೊಳ್ಳಲೇಬೇಕು !

卐

ಮೊದಲ ಮಾತು

ನಾಡಿನ ಏಳ್ಗೆಗೆ ನಾಟಕಸಂಸಾರವು ಒಂದುಪಯುಕ್ತ ಸಾಧನ. ಮೋಜಿಗಾಗಿಯೇ ಅಲ್ಲದೆ, ಸಾಮಾನ್ಯರಿಗೂ ಗ್ರಾಹ್ಯವಾಗಿ, ಸಮಾಜದ ಬದುಕಿನ ಚಿತ್ರವನ್ನ ತೋರಿಸಿ, ರಂಜಕ ಸನ್ನಿವೇಶದಲ್ಲಿ ಪರೋಕ್ಷವಾಗಿ ಬೋಧಕವಾದ ಮಾರ್ಗದರ್ಶನ ಮಾಡಿಸುವುದಿದರ ವೈಶಿಷ್ಟ್ಯ. ಒಂದು ದೇಶದ ನಾಗರಿಕತೆಯನ್ನು ಆ ದೇಶದ ಕೆಲವು ನಾಟಕಗಳಿಂದಲೆ ನೋಡಿ ತಿಳಿಯಬಹುದು. ವಿದ್ಯಾರ್ಥಿಗಳಿಗೆ ಕೊನೆಯಲ್ಲಿ ನಾಟಕಗಳ ಪಾಠವಾಗಬೇಕು ಎಂಬುದನ್ನು ಸೂಚಿಸುವ 'ನಾಟಕಾಂತಸಾಹಿತ್ಯ' ಎಂಬ ಮಾತೂ, ಚತುರ್ವೇದಗಳಿಂದ ಸಾಹಿತ್ಯ, ಅಭಿನಯ, ಸಂಗೀತ, ರಸಗಳನ್ನು ಕೂಡಿಸಿ ಬ್ರಹ್ಮನು ನಾಟ್ಯವೆಂಬ ಪಂಚಮವೇದವನ್ನು ದೇವತೆಗಳಿಗೆ ದಯಪಾಲಿಸಿದನೆಂಬ ನಾಟ್ಯಶಾಸ್ತ್ರದ ಹೇಳಿಕೆಯೂ, ನಾಟಕದ ಮಹಿಮೆಯನ್ನು ತಿಳಿಸಿಕೊಡಬಹುದು. ನಾಟಕವು ಮುಖ್ಯವಾಗಿ ಸಾಮುದಾಯಿಕತೆ ಮತ್ತು ಮನೋರಂಜಕತೆ ಎಂಬೆರಡು ಸೂತ್ರಗಳನ್ನು ಹೊಂದಿದೆ. 'ನಾಟ್ಯಂ ಭಿನ್ನರುಚೇರ್ಜನಸ್ಯ ಬಹುಧಾಪ್ಯೇಕಂ ಸಮಾರಾಧನಂ'—ಎನ್ನುವುದಾದರೂ ಇದಕ್ಕೆ ಒಪ್ಪಿದುದೇ.

ನಾಟ್ಯ-ನಾಟಕಾ

ಅನುಕರಣದ ಪರಿಮಾರ್ಜಿತ ರೂಪವೇ ಅಭಿನಯ. ಇದನ್ನು, ಕಲಾವಸ್ತುವಾದ ನಟನ ದೇಹದ ಮೂಲಕ, ಮಾನನೀಯವಾದ ಪಾತ್ರಗಳಲ್ಲಿ ಅವಿತಿರುವ ರಸಗಳನ್ನು ಸಹಜವಾಗಿ ಹೊರಪಡಿಸುವ ಕಲೆಯೆಂದೇ ಕರೆಯಬಹುದು. ಭಾವದ ಬಳಿಗೆ ತರುವ ಕ್ರಿಯೆಯು ಅಭಿನಯ. ಮಿಕ್ಕ ಕಲೆಗಳಂತೆ ಇಲ್ಲೂ ವಿಮರ್ಶಕರಿಗೆ ಭಾಸವಾಗುವಂತೆ ವಾದ-ವಿವಾದಗಳೂ ಇರುತ್ತವೆ. 'ನೃತ್ಯ'ವೆಂದರೆ ರಮಣೀಯವಾಗಿ ದೇಹದ ಗಾತ್ರವಿಕ್ಷೇಪಣೆ. 'ಪ್ರಾಯೇಣ ಸರ್ವಲೋಕಸ್ಯ ನೃತ್ತಮಿಷ್ಟಂ ಸ್ವಭಾವತಃ'— ಎನ್ನುವಂತೆ, ಸರ್ವರೂ ನೃತ್ಯದಿಂದ ಸಂತೋಷಿಸುತ್ತಾರೆ. ಮಗುವಿನ ನರ್ತನವನ್ನು ಕಂಡು ತೃಪ್ತಿಪಡದ ಮನವಿಲ್ಲ.

ನೃತ್ತಕ್ಕೆ ಅಭಿನಯವು ಸೇರಿದಾಗ 'ನೃತ್ಯ'ವಾಗುತ್ತದೆ. ನಾಟ್ಯವೆಂದರೆ ನೃತ್ಯ ಮತ್ತು ಅಭಿನಯಗಳ ಮಧುರ ಸಮ್ಮಿಲನವೆನ್ನಲೂಬಹುದು. ನೃತ್ಯದಿಂದ ಭಾವೋತ್ಪತ್ತಿಯಾದರೆ, ನಾಟ್ಯದಿಂದ ರಸೋತ್ಪತ್ತಿ. ಮೌನವಾಗಿ ಭಾವಾನುಭಾವಗಳ ತೋರ್ಪಡಿಕೆಗೆ—ಮಲಬಾರ ಕಥಕ್ಕಳಿಗಳಲ್ಲಿಯಂತೆ ಮುದ್ರೆಯೇ ಸಾಧನ. ಚಿತ್ರ, ಶಿಲ್ಪ, ಗೀತಗಳೊಂದಿಗೆ ನಾಟಕ, ನೃತ್ಯಗಳು ಮಾನವನ ಭಾವನಾಲಹರಿಗೆ ಪುಟಗೊಟ್ಟು, ಚಲನೆಯಲ್ಲಿ ಭಾಗವಹಿಸುವ, ಗೆಳೆಯರ ಸಂಗದಲ್ಲಿರುವ, ಚರಿಸುವ ಪದಾರ್ಥಗಳ ಮೇಲೆ ಮನಸ್ಸಿಡುವ—ಮಾನವಪ್ರವೃತ್ತಿಗಳನ್ನು ತೃಪ್ತಿಪಡಿಸುತ್ತವೆ. ಕೈ ಕಣ್ಣು, ಮನಸ್ಸು, ಭಾವಗಳ ಸಂಬಂಧೀಕರಣವೇ ನಾಟ್ಯ ಲಕ್ಷಣವೆಂದು ಭರತವಾಕ್ಯದ ತಾತ್ಪರ್ಯ. ಕವಿವರ ಬೇಂದ್ರೆಯವರ ನುಡಿಯೊಂದು ಹೀಗಿದೆ: "ಅಂಗದಲ್ಲಿ ಅನುಭಾವ ಬೇರಿ, ಅನುಭಾವದಲ್ಲಿ ಭಾವಬೇರಿ, ಭಾವದಿಂದ ಜೀವ ಸೇರಿ, ಜೀವದಲ್ಲಿ ರಸವ ಬೀರು' ಇದರಿಂದ ನಟನ ಆಂಗಿಕ ಭಾವವು ನೋಟಕರಲ್ಲಿ ಮಾನಸಿಕವಾಗಿ ಮಾರ್ಪಡುವುದು— ಎಂದರಿಯಬಹುದು.

'ಲೋಕಚರಿತ್ರೆಯು ನಾಟಕವು'— ಎಂದೂ, "ಸುಖ ದುಃಖ ದ್ವಂದ್ವವಾದ ಲೋಕಸ್ವಭಾವವನ್ನೆ ಆಂಗಿಕಾದ್ಯಭಿನಯಗಳಿಂದ ವ್ಯಕ್ತಪಡಿಸುವುದೇ ನಾಟಕ (ರಾಧಸ್) ಎಂದೂ ಹೇಳುವರು. ಬಾಹ್ಯ ಆಂತರಿಕ ಗತಿಯೊಡನೆ ಜೀವನವು ರಂಗಭೂಮಿಯಲ್ಲಿ ಒಂದು ಸ್ಥಿತಿಗೆ ಬರುವ ಗತಿಯನ್ನು ನಾಟಕಕಲೆಯೆನ್ನಬಹುದು. ದುಃಖಾರ್ತರ ದುಃಖವನ್ನು ಮರೆಸುವ, ತಪಸ್ವಿಗಳಿಗೆ ತೇಜಃಕಾರಕವಾದ ದಿವ್ಯಾನಂದವನ್ನು ಸುರಿಸುವ ವಿಶ್ರಾಂತಿಕರ ಕಲೆಯೇ ನಾಟ್ಯ. ಕಣ್ಣ ಮುಂದೆ ರೂಪುವೆತ್ತು ತೋರುವ ರೂಪಕವಾದ ನಾಟಕವು ಕೇವಲ ವಿಲಾಸದ ಸಾಧನವಲ್ಲ. ಜನತೆಯ ಜೀವಂತ ವಿಶ್ವವಿದ್ಯಾನಿಲಯ. ವೈದಿಕ ವಾಙ್ಮಯದಲ್ಲಿ ಉಪನಿಷತ್ತಿನಂತೆ



೧೦೦೦ ರೂಪಾಯಿ ಬಹುಮಾನ

೩೦ ವರ್ಷಗಳಿಂದ ಅನುಭವಸಿದ್ಧವಾದ— ಮಿರಜಿಯ ವೈದ್ಯ

ವಿ. ಎಸ್. ಕಾಪಸೇಯವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರ ಪಾಕ

[ರಜಿಸ್ಟರ್ಡ್]

ಮೂತ್ರದಲ್ಲಿ ಸ್ವಪ್ನದಲ್ಲಿ ವೀರ್ಯಸ್ಖಲನ, ಸ್ವರತಿಯಿಂದುಂಟಾದ ಅಶಕ್ತತೆ, ವೀರ್ಯದ ಬೇರೆ ಬೇರೆ ದೋಷಗಳು, ಪಿತ್ತಾಂಶ, ಉಷ್ಣ, ಸೊಂಟನೋವು, ಉಪದಂಶಮೇಹರೋಗಗಳಿಂದುಂಟಾಗುವ ಕ್ಷೀಣತೆ— ಇವೆಲ್ಲ ನಷ್ಟವಾಗಿ, ಚೆನ್ನಾಗಿ ಮಲಶುದ್ಧಿಯಾಗುವುದು. ಹಸಿವೆ, ಸ್ಮರಣಶಕ್ತಿ, ದೇಹದ ತೂಕ ಹೆಚ್ಚುವುದು. ಹೊಸ ತಾರುಣ್ಯ ಬಂದಂತಾಗಿ ವೀರ್ಯದಲ್ಲಿ ಗರ್ಭಧಾರಕಶಕ್ತಿ ಬಲಗೊಳ್ಳುವುದು. ಈ ಔಷಧಿಯು ೨೩ ವನಸ್ಪತಿಗಳ ಯೋಗದಿಂದ ಸಿದ್ಧವಾಗಿದೆ. ಸಾಲಾಮಿಶ್ರಿ, ಸಫೇದಮಿಶ್ರಿ, ಪಂಜಾಬ ಮಿಶ್ರಿವಚೆಕಂದ ಮೊದಲಾದ ಪದಾರ್ಥಗಳಲ್ಲಿ ವೀರ್ಯವರ್ಧಕ ಗುಣವಿಲ್ಲವೆಂದು ಸಿದ್ಧಮಾಡುವವರಿಗೆ ೧೦೦೦ ರೂಪಾಯಿ ಬಹುಮಾನ.

೨೧ ದಿನಗಳಿಗೆ ಸಾಲಬಹುದಾದ ಅಳ ತೊಲೆಯ ಒಂದು ಡಬ್ಬಿಗೆ ೫-೮-೦; ಅಂಚೆಯ ವೆಚ್ಚ ೧-೬-೦. ಶೀಘ್ರಗುಣಕಾರಿಯಾದ ಸ್ಪೇಶಲ್ ಡಬ್ಬಿಗೆ ೧೦-೮-೦. (ಇದರಿಂದ ೭ ದಿನಗಳಲ್ಲಿಯೇ ಗುಣವು.) ಅಂಚೆಯ ವೆಚ್ಚ ೧-೬-೦. ೩ ಡಬ್ಬಿಗೆ ೧೫-೦-೦ ಅಂಚೆಯವೆಚ್ಚ ೨-೧೩-೦. ಒಮ್ಮೆಲೇ ೩ ಡಬ್ಬಿಗಳನ್ನು ಬೇಡುವವರು ೫ ರೂ ಮುಂಗಡ ಕಳಿಸಬೇಕು.

ಚಾಲಕ: **ವ್ಹಿ. ಎಸ್. ಕಾಪಸೇ** ಮು. ಪೋ. ಮಿರಜ

ಸಾಹಿತ್ಯದಲ್ಲಿ ನಾಟಕಕ್ಕೆ ಸ್ಥಾನವಿದೆ. 'ಜಗತ್ತು ರಂಗಭೂಮಿ, ಎಲ್ಲಾ ಮಂದಿಯೂ ನಟರು'— ಎಂಬುದು ಸುಂದರ ಯಥಾರ್ಥ ಕಲ್ಪನೆ! ಸೃಷ್ಟಿಯ ಆದಿಯಿಂದಲೇ ನಾಟ್ಯದ ಆರಂಭವಾಗಿದೆ. ಇತಿಹಾಸವು, ಕಾಡುಜನರು ನಾದ-ಸಂಸ್ಕೃತಿಯ-ಮಾನವರಾಗಿ ರೂಪುಗೊಂಡ ಈ ವೇಳೆಯ ಮಾನವ ಮಹಾನಾಟ್ಯದ ಕತೆಯನ್ನು ತಿಳಿಸುತ್ತಿದೆ. ಭಾಷೆಯ ಮೊದಲಲ್ಲಿ ಅಭಿನಯ-ಮುದ್ರೆಗಳಿಂದಲೇ ಅಭಿಪ್ರಾಯ ತೋರಪಡುವ ನಾಟ್ಯವಿದ್ದಿರಬಹುದು. ಮನುಷ್ಯನು ಹುಟ್ಟಿ ತನ್ನ ಶೈಶವದಿಂದಲೇ ನಾಟ್ಯದ ಹೆಜ್ಜೆಯನ್ನಿಡುವನು.

ನಾಟಕೋದ್ದೇಶವು ಕೇವಲ ಶ್ರವಣವಲ್ಲ. ಹಾಗಿದ್ದರೆ ಈ ಕಾರ್ಯವನ್ನು ಕತೆ-ಕಾದಂಬರಿಗಳು ಮಾಡಲಾರವೆ? ವಸ್ತುವನ್ನು ಚಿತ್ರಿಸಿ, ಕಣ್ಮುಂದೆ ನಲಿಸಿ, ನಟಿಸಿ ಆಡುವಂತೆ ಕಂಡರೇನೇ ಹೆಚ್ಚು ಸೊಗಸು. ಕಥಕ್ಕಳಿ, ವೀಧಿ ನಾಟಕ, ಬಯಲಾಟ, ತಾಳಮದ್ದಲೆಗಳು— ನಾಟಕಗಳ ರೂಪಗಳು. ದ್ರಾವಿಡರ ನೃತ್ಯಾಭಿನಯಗಳೊಡನೆ, ಆರ್ಯರ ಪೌರಾಣಿಕ ವಸ್ತುಗಳೂ, ಸಂವಾದವೂ ಸೇರಿ, ಯಕ್ಷಗಾನ ಮುಂತಾದ **ನಾಟಕಗಳ** ಮೂಲವು ರೂಪಿತ**ವಾಗಿರಬಹುದು.**

ಹಿಂದಿನ ರಂಗಭೂಮಿಯೆಂದರೆ ಊರೊಳಗಿನ ಬಯಲು, **ವೇಳೆಯೆಂದರೆ** ಬಹುಜನವು **ಒಂದೆಡೆ ಕೂಡುವ ಜಾತ್ರೆ,** ಉತ್ಸವ! ಅಂದು ಕಾಡುಜನರ ಆಟಗಳಲ್ಲಿ ಮಾನವತೆಯ ಗೂಢಮೂಲವಾದ ಆವ ಭಾವನೆಗಳಿದ್ದುವೋ, ಅವೆಲ್ಲಾ ಸೇರಿ, ಬೇರೆ ಬೇರೆ ರೀತಿಯಲ್ಲಿ ಮನರಂಜನೆಯನ್ನು ಹೆಚ್ಚಿಸಿ, ಸೌಂದರ್ಯಾಸ್ವಾದನೆಯಲ್ಲಿ ಯಾವ ಬಗೆಯ ರುಚಿಗಳನ್ನೊದಗಿಸುತಿತ್ತೊ, ಅವೇ **ನಾಟಕಗಳಾಗಿದ್ದುವು** ಎನ್ನುವುದು ಒಪ್ಪತಕ್ಕ ಮಾತು. ಇಲ್ಲಿ ಸಾಹಿತ್ಯವೆಂಬುದು ರಸೋತ್ಪತ್ತಿಯ ಒಂದಂಗಮಾತ್ರವಾಗಿ, ಇದು **ನಾಟ್ಯ**ಪ್ರಧಾನವಾದ ವಾಙ್ಮಯವಿಭಾಗವಾಗಿದೆ. ಯಾವ ಸಾಹಿತ್ಯಕೃತಿಯೂ 'ದರ್ಪಣದೊಳಗಿನ ದೆವ್ವ'ವಾಗಲಾಗದು. ಮಹೋನ್ನತ ಕೃತಿಯಲ್ಲಿ ಜೀವನವಿಮರ್ಶೆಯಿರಬೇಕು (ಆರ್ನೊಲ್ಡ್); 'ಕಾವ್ಯಸೃಷ್ಟಿಯು ನವ್ಯೋನವವಾಗಿದ್ದರೂ, **ಜೀವಿತದ** ಆಳವನ್ನೂ ಸತ್ಯವನ್ನೂ ಅದು ಪೂರ್ಣವಾಗಿ ಪ್ರತಿಬಿಂಬಿಸಬೇಕು' (ಎರಿಸ್ಟಾಟಲ್). ಇದರಿಂದಾಗಿ, ಪ್ರಾಚೀನ ಕೃತಿಗಳಲ್ಲಿಯಂತೆ ಬರಿಯ ಸಾಮ್ರಾಟ್‌ಚಕ್ರವರ್ತಿಗಳಲ್ಲದೆ, ನಾಟಕದಲ್ಲಿ ಚೋಮ-ಸೋಮಿಯರೂ ನಾಯಕ-ನಾಯಕಿಯರಾಗಿದ್ದಾರೆ. 'ನಾವು ದಾರಿ ಕಾಯುತ್ತಿರುವುದು ಸಾಮ್ರಾಜ್ಯ ವಿಸ್ತಾರಕ್ಕಲ್ಲ; ಮಾನವ ಜಾತಿಯ ವಿಸ್ತಾರಕ್ಕಾಗಿ' (ಸಾಹಿತ್ಯದಲ್ಲಿ ಪ್ರಗತಿ). Drama should mirror life, Art is a mirror of life— ಎನ್ನುವಂತೆ ನಾಟಕವು ಬಾಳಿನ ಕನ್ನಡಿಯಾಗಿ, ಸಹಜತೆಯಿಂದ ತುಂಬಿರಬೇಕು.

ಲೇಖಕ ನಾಟಕವನ್ನು ಹಸಿಬಿಸಿಯಾಗಿ ರೂಪಿಸಿ, ಒಂದು ಗಳಿಗೆ ಮಂದಿಯನ್ನು ನಗಿಸಿ ಕಳುಹುವುದು ನಾಟಕದ ಉನ್ನತಿಯಲ್ಲ. ಆದರ ಹಾಸ್ಯವು ಕರಡಿಯಿಡುವ ಕಚಕುಳಿಯಲ್ಲ; ಗರತಿಯ ನಗು. ಗಯಟೆ ಮಹಾಕವಿಯು ನಾಟಕವು ಒಂದು ವಿನೋದಗುಚ್ಛವಾಗಿರಬೇಕೆಂದೆನಿಸಿದುದು ಅದರ ಮನೋರಂಜಕತೆಯ ತಿಳಿವಿನಿಂದಲೇ. ಹಾಸ್ಯವು ಬಾಳಿಗೆ **ಬೇಕೇ ಬೇಕು.** A sense of Humour is one of most precious gifts it is as oil to wheels of life. ಆಕರ್ಷಣೆಗಾಗಿ ಸೌಂದರ್ಯದ ದೃಷ್ಟಿಯಿಂದ ಹಿಮ್ಮೇಳ, ಸಂಗೀತವನ್ನು ಬಳಸಿಕೊಳ್ಳುವುದು **ಅರ್ಥಪೂರ್ಣ**ವಾಗಿದೆ.

ಸಂವಿಧಾನ

ಕತೆಯ ಪ್ರವಾಹವು ನಿರರ್ಗಳವಾಗಿ ಹರಿಯಲೋಸುಗ, ನಾಟಕದಲ್ಲಿ ಅಂಕ, ವಿಷ್ಕಂಭಕ, ಪ್ರವೇಶ, ಸಂಧಿ— ಈ ಶಾಸ್ತ್ರೀಯ ವ್ಯವಸ್ಥೆಯಿದೆ. ಒಂದಕ್ಕಿಂತ ಹೆಚ್ಚು ದಿವಸಗಳ ವರೆಗೆ ನಡೆದ ವೃತ್ತವನ್ನು ಒಂದೇ ಅಂಕದಲ್ಲಿ ಕೂಡಿಹಾಕದೆ, ಸಾಮಾನ್ಯವಾಗಿ ನಾಟಕದಲ್ಲಿ ೫-೧೦ ರ ವರೆಗೆ ಅಂಕಗಳಿರಬಹುದು. ದೀರ್ಘವಾದ ಗದ್ಯಗಳು, ಗೂಢಾರ್ಥದ ಮಾತು, ಕ್ಲಿಷ್ಟಶಬ್ದಗಳು, ಶೌಚ— ಮರಣ, ಯುದ್ಧ, ಶೃಂಗಾರದ ಅಂತಿಮಕೋಟಿ— ಇಂತಹವುಗಳಿಗೆ ರಂಗಭೂಮಿಯಲ್ಲಿ ಸ್ಥಾನವಿಲ್ಲ. ಮುಖ್ಯ ಕಥಾಂಶಕ್ಕೆ ಸಾಧಕಸಂಗತಿಗಳು, ಫಕ್ಕನೆ ಅರ್ಧದಲ್ಲಿ **ಬಿಟ್ಟಂತಿದ್ದು** ಮುಂದೆ **ಪುನಃ ಕತೆಗೆ ಜೋಡಣೆಯಾಗುವುದು ರಚನೆಯ ಕೌಶಲ;**

ಕಥಾವಸ್ತು, ನಾಯಕ, ರಸ, ಇವು ನಾಟಕದಲ್ಲಿ ಮುಖ್ಯವಾದುವುಗಳು. ಮನಬಂದಂತೆ ತಾನೇ ತಾನು ನುಡಿಯುವ ಕಾವ್ಯಕವಿಯಂತೆ ರೂಪಕಕವಿ ಆಡಲಾರ; ಆತನು ಪ್ರತಿಯೊಂದು ಮಾತನ್ನು ಪಾತ್ರಗಳ ಮುಖದಿಂದಲೇ ಆಡಿಸಿ, ಬರೆದ ನಾಟಕವು ಅಭಿನಯವೆಂಬ ಪಾಕಸಂಸ್ಕಾರದಿಂದ ರಸದೂಟವಾಗಬೇಕು. 'ಕ್ವೈ', ಬರ್ನಾರ್ಡ್ ಷಾರಂತೆ ಸಮಾಜಸುಧಾರಣೆಯ ನಾಟಕಗಳಲ್ಲಿ ಹಾಸ್ಯರಸ ಪ್ರಧಾನವಾಗಿದ್ದು, ಪೌರಾಣಿಕ, ಐತಿಹಾಸಿಕಗಳಲ್ಲಿ ಕರುಣೆ, ಶೃಂಗಾರ, ವೀರರಸಗಳು ಮುಖ್ಯವಾಗಿರಬಹುದು. ಅಕಸ್ಮಾತ್ ಒಂದೆಡೆಗೆ ತಂದು ದುಃಖಪರ್ಯವಸಾನವಾಗುವಂತಹ ನಾಟಕೀಯರಚನೆಯು 'ಸಂಧ್ಯತಿ'ಯೆನ್ನಲ್ಪಡುವುದು. ಮುಖ್ಯಾರ್ಥವನ್ನು ಅಲಂಕರಿಸಹೊರಟು, ಪರಿಪೋಷಣೆ ಮಾಡತೊಡಗಿದರೆ, ಅದನ್ನು 'ಪತಾಕೆ'ಯೆನ್ನುವರು.

ನಾಟಕಾರಂಭದಲ್ಲಿ 'ಪ್ರಸ್ತಾವನೆ' ಬರುತ್ತದೆ. ಪೂರ್ವರಂಗ, ಸಭಾಪೂಜೆ, ನಾಟಕದ ಹೆಸರು, ಕವಿಯ ಪರಿಚಯ, ಇವುಗಳು ಇದರಲ್ಲಿ ಸೇರುವುವು. ಸೂತ್ರಧಾರನು ಗಾಯಕರಾದ ತನ್ನ ಪರಿವಾರಸಮೇತನಾಗಿ ನಾಟಕ-ರಂಗಭೂಮಿಗಳ ಶ್ರೇಯಕ್ಕಾಗಿ ಪ್ರಾರ್ಥನೆಮಾಡುವನು, ಇದೇ ನಾಂದಿ.

ಕುಲ, ಶೀಲ, ನಾಯಕ ಪದ್ಧತಿಗಳನ್ನನುಸರಿಸಿ ಪಂಡಿತರು ನಾಯಕರಲ್ಲಿ ಧೀರೋದಾತ್ತ, ಧೀರಲಲಿತ, ಧೀರೋದ್ಧತ, ಧೀರ ಪ್ರಶಾಂತ– ಈ ನಾಲ್ಕು ಪ್ರಭೇದಗಳನ್ನು ಕಲ್ಪಿಸಿರುವರು. ಹೇಗಿದ್ದರೂ, ಪ್ರಾತಿನಿಧಿಕ ನಾಟಕದಲ್ಲಿ, Every charactor in a piece of Art, it should be more representative of our society than presenting a set of persons or ideas in our society ಎಂದಂತಿರಬೇಕು.

ನಾಟಕ-ಸಾಹಿತ್ಯ

ಮೊಟ್ಟಮೊದಲು ಗ್ರೀಕರು ನಾಟಕವನ್ನು ವೈಜ್ಞಾನಿಕವಾಗಿ ಬರೆದು ಸುಖಾಂತ-ದುಃಖಾಂತಗಳಾಗಿ ವಿಂಗಡಿಸಿದರು. ಒಂದನೆಯದು ಮನುಷ್ಯನ ಪರಾಕ್ರಮ ಆನಂದವನ್ನೇ ತೋರಿದರೆ, ಇನ್ನೊಂದು ಅಸತ್ಯ, ಅನ್ಯಾಯಗಳ ಪರಿಣಾಮವನ್ನು ತಿಳಿಸುತ್ತದೆ. ಮನಸ್ಸಿನ ದೃಷ್ಟಿಯಿಂದ, ಸುಖಾಂತಗಳಿಗಿಂತ, ದುಃಖಾಂತಗಳೇ ಹೆಚ್ಚು ಪರಿಣಾಮಕಾರಿಯಾದರೂ, ನಾಟಕ ಸಾಹಿತ್ಯದಲ್ಲಿ ಈ ಭಾಗ ಕಡಿಮೆಯೆ! ಸುಮಾರು ೨೫೦೦ ವರ್ಷಗಳ ಹಿಂದೆಯೆ ಗ್ರೀಸ್‌ನಲ್ಲಿ ಆಡಿನವೇಷದಿಂದ, ಭಕ್ತರು, ಸ್ತೋತ್ರಗೀತಗಳಿಂದಲೂ, ನೃತ್ಯದಿಂದಲೂ, ಡಯೋನಿಸಸ್ ದೇವತೆಗೆ ಪೂಜೆಸಲ್ಲಿಸುತ್ತಿದ್ದರು. ಪಾಶ್ಚಾತ್ಯ ದೇಶಗಳಲ್ಲಿ ಪ್ರಚಾರ ಕಾರ್ಯಕ್ಕೆ ನಾಟಕವನ್ನು ಬಳಸಿ, ಬೈಬಲಿನ ಕತೆಗಳನ್ನು ನಾಟಕಗಳನ್ನಾಗಿ ಅಭಿನಯಿಸಿ ತೋರಿಸುತ್ತಿದ್ದರು.

ನಮ್ಮಲ್ಲಿ ಮೊದಲಾಗಿ ಸಂಸ್ಕೃತಜ್ಞರೇ ನಾಟಕವನ್ನು ಬರೆದವರು. 'ಸ್ವರ್ಗ ಮತ್ತು ಮರ್ತ್ಯವನ್ನು ಒಮ್ಮೆಗೆ ಬೋಧಿಸುವ' 'ಶಾಕುಂತಲ'ವನ್ನು ಕಾಳಿದಾಸನು ಹೃದಯಂಗಮವಾಗಿ

ಕನಯಿಸಿದನು. ಈತನ ನಾಟಕದಲ್ಲಿ ಮಾನವನ ಅಭ್ಯುದಯದ ಸೂಕ್ಷ್ಮ ಹಂತಗಳು ಚಿತ್ರಿತವಾಗಿವೆ. ಅದರೊಳಗಿನ 'ಪ್ರಕೃತಿ ನಗುತ್ತವೆ, ಗಿಡಬಳ್ಳಿಗಳು ಮಾತಾಡುತ್ತವೆ– ವಿರಹದುಃಖವನ್ನೇ ಅನುಭವಿಸುತ್ತವೆ." ಸಕ್ಕದದಲ್ಲಿ ಕ್ರಿ. ಶ. ೪೦೦ ರ ಹೊತ್ತಿಗೆ 'ಮೃಚ್ಛಕಟಿಕ' ಎಂಬ ರಾಜಕೀಯಮಿಶ್ರ ಸಾಮಾಜಿಕ ನಾಟಕವೊಂದು ಹುಟ್ಟಿತು. ಭಾಸ, ಶೂದ್ರಕ, ಭವಭೂತಿ, ವಿಶಾಖದತ್ತರು– ಪ್ರಸಿದ್ಧ ನಾಟಕಕಾರರು.

೧೬ ನೆಯ ಶತಕದ 'ಮಿತ್ರವಿಂದಾಗೋವಿಂದ'ವು ಕನ್ನಡ ಸಾಹಿತ್ಯದಲ್ಲಿ ಮೊದಲನೆಯದೆನ್ನುವಂತಿದೆ. ಆದರೆ ಲಿಖಿತವಾಗಿ ಅಲ್ಲದಿದ್ದರೂ– ಮೊದಲಿನಿಂದಲೇ ನಾಟಕಗಳು ಹೇಗೂ, ಬಳಕೆಯಲ್ಲಿದ್ದಿರಬೇಕೆಂಬುದನ್ನು ಹೀಗೆ ಸಮರ್ಥಿಸಬಹುದು. ನಮ್ಮ ಸಾಹಿತ್ಯದ ಉದ್ದಾಮ ಪಂಡಿತರಾದ ಕವಿಗಳ ಶೈಲಿಗೂ, ಪಾಮರರ ಮಾತಿನ ಧಾಟಿಗೂ ತುಂಬಾ ಹೆಚ್ಚು ಕಡಿಮೆ. ಹಿಂದೆ ಬರೆದ ನಾಟಕಗಳು ಕಾವ್ಯಪ್ರಧಾನವಾಗಿ ಗೀತನಾಟಕಗಳಾಗಿದ್ದು ಜನತೆಗೆ ಅರ್ಥವಾಗದೆ ಬರೆಯಲ್ಪಟ್ಟರೂ, ಸಾಮಾನ್ಯರಿಗೆ ಅರ್ಥವಾಗದೆ, ಅಭಿನಯಿಸಲು ಬಾರದೆ ಪ್ರೋತ್ಸಾಹಕ್ಕೆ ಬಾರದಿರಬೇಕು. ಅಲ್ಲದೆ ಕೆಲವು ಪ್ರಾಚೀನ ನಾಟಕಗಳಲ್ಲಿ ಕುಲೀನರಲ್ಲದ– ಗಣಿಕೆಯರು ಮೊದಲಾದವರೇ ಹೆಚ್ಚಾಗಿ ಭಾಗವಹಿಸುತ್ತಿದ್ದರು. ಇದರಿಂದ ರೂಪಕವನ್ನು ಕವಿಗಳೂ, ಸಮಾಜವೂ ಕೀಳ್ತರಗತಿಯ ದೃಷ್ಟಿಯಿಂದ ಕಂಡಂತಿದೆ. ಮುಖ್ಯವಾಗಿ, ನಾಟಕವು ಅಭಿನಯ, ಸನ್ನಿವೇಶಪ್ರಧಾನವಾದುದರಿಂದ, ರೂಪಕವನ್ನು ಆಯಾಯಾ ಸಂದರ್ಭದಲ್ಲಿ ಜನರು ಬಾಯಿಪಾಠ ಮಾಡಿಕೊಂಡು, ನಟಿಸಿ ಅಲ್ಲಲ್ಲೇ ಬಿಟ್ಟಿರಬಹುದು; ದೃಶ್ಯಕಾವ್ಯವೆಂದು ಅದನ್ನು ಬರೆದಿಡುವ ಗೋಜಿಗೆ ಹೋಗಿಲ್ಲದಿರಬೇಕು; ಅಲ್ಲದೆ, ನಾಟಕವನ್ನು ಓದಿ ಮೆಚ್ಚುವುದೆಂದರೆ ಕಠಿಣ'–ಇವುಗಳಿಂದ. ಇಂದು ದೊರಕದಿದ್ದರೂ, ಮೊದಲಿನಿಂದಲೂ ಅವು ಇರಲಸಾಧ್ಯವೆನ್ನಲು ಕಾರಣಗಳುಂಟೆ?

೧೮೯೦ ರಲ್ಲಿ ಆಗಿ ಹೋದ ಬಸವಪ್ಪ ಶಾಸ್ತ್ರಿಗಳನ್ನೇ ಈಗಿನ ಕನ್ನಡ ನಾಟಕಗಳ ಪಿತಾಮಹರೆಂದು ಹೇಳಬಹುದು. ನಮ್ಮಂಪ್ಪಿ, ಪೋಲೀಕಟ್ಟಿ, ಜರಾಸಂಧಿ, ಮಂಡೋದರಿ, ಮುಕ್ತದ್ವಾರ, ರಕ್ತಾಕ್ಷಿ, ಹರಿಜನ್ವಾರ, ತಾಳಿಕೋಟೆ, ವಿದ್ಯಾರಣ್ಯವಿಜಯ, ನಾಗರಿಕ, ಮಯೂರ, ಸೊಹ್ರಾಬ್–ರುಸ್ತುಂ, ಬಹದ್ದೂರ್‌ಗಂಡ, ಕಂಕಣಕೂಷ್ಟಂತು.. ಮೊದಲಾದುವು ನಮ್ಮ ಶತಮಾನದ ನಾಟಕಗಳು 'ರಕ್ತಾಕ್ಷಿ' 'ಅಷಾಢಭೂತಿ' 'ಬೊಂಬೆಯ ಮನೆ'ಗಳಂತಹ ಅನುವಾದ–ರೂಪಾಂತರಗಳೂ, 'ಮಲ್ಲಿಗೆಚಪ್ಪರ'ದಂತಹ ಏಕಪಾತ್ರಾಭಿನಯಗಳೂ ನಮ್ಮಲ್ಲಿವೆ. ಈ ಶತಮಾನದಲ್ಲೀವರೆಗೆ ಸು. ೧೦೦೦ರ ತನಕ ನಾಟಕಗಳು ಪ್ರಕಟವಾಗಿರಬಹುದಾದರೂ, ಅವುಗಳಲ್ಲಿ ನಟನೆಗೆ ಯೋಗ್ಯವಾದುವುಗಳು ಎಷ್ಟು—ಎನ್ನುವುದಕ್ಕೆ ಸಂತೋಷದ ಉತ್ತರವಿಲ್ಲ. ನಾಟಕರಚನೆಯು ಕ್ಲಿಷ್ಟವಾದಕಲೆ. ಶಿಷ್ಟದಭಾಷೆ, ಅಭಿನಯಸೌಕರ್ಯವಿಲ್ಲದಿದ್ದರೆ–ಅದು ಏನೇನೂ ರಂಗಕ್ಕೆಬರಲು ಸಾಧ್ಯವಿಲ್ಲ.

ಏಕಾಂಕಗಳು.

ಕಾದಂಬರಿ–ಸಣ್ಣಕತೆಗಳಂತೆ, ಹ್ರಸ್ವದಲ್ಲಿ, ನಾಟಕ–ಏಕಾಂಕಗಳಿವೆ. ನಮ್ಮಲ್ಲಿಯ ಹೆಚ್ಚಿನ ಏಕಾಂಕಗಳು ಜೀವನದ ಹಲವಾರು ದಿನಗಳ ಘಟನೆಯನ್ನೊಂದೆಡೆ ಚಿತ್ರಿಸಿದಂತಿದ್ದು, ಆ ಕಲೆಯನ್ನೂ ನಮಗೊದಗಿಲ್ಲವೆನ್ನಬೇಕು. ಇವುಗಳಲ್ಲಿ ಗೀತ-ಆಶು-ಬಾನುಲಿ ನಾಟಕಗಳೆಂದು ಮೂರು ಮಾದರಿಗಳಿವೆ. ಕಲಾವಿದನ ಪ್ರೇರಣೆಯಲ್ಲಿ ಭಾವಲೋಕದ ಆಳತೆಯು ಇನ್ನಷ್ಟು ಹೆಚ್ಚಿದಾಗ, ನುಡಿಗೆ ಗೀತ ಕೂಡಿದಲ್ಲಿ, ಮಾತಿಗಿಂತ ಹೆಚ್ಚು ಶಕ್ತಿಯಿಂದ ಚಿತ್ರಣವು ಚೆನ್ನಾಗಿ ನಡೆಯಬಹುದು. ಸ್ಥೂಲವಾಗಿ ಗೀತನಾಟಕವು ಹಾಡುಗಳ ಮೂಲಕವೇ ಸಂವಾದ ಕಟ್ಟಿ, ಒಂದು ವಸ್ತುವಿಗೆ ನಾಟ್ಯಸ್ವರೂಪವನ್ನು ಕೊಡುವಂತಹದು. ಸಮಯೋಚಿತ ಭಾವವನ್ನು ಸಂಗೀತದೆರಡು ಅಂಗಗಳಾದ ರಾಗ-ತಾಳಗಳ ನೆರವಿನಿಂದ ಅರಳಿಸಿ ತೋರಬಲ್ಲ ಪದ್ಯ—ಸ್ವಚ್ಛಂದ ಛಂದಗಳು—ಮಾತ್ರಾವೃತ್ತ ಹಾಗೂ ಜಾನಪದ ಧಾಟಿಗಳೂ ಗೀತೆಯಲ್ಲಿ ಸೇರಿಕೊಳ್ಳುತ್ತವೆ. ಮೊದ ಮೊದಲು ಮಾಸ್ತಿಯವರ 'ಶಾಂತಾ' 'ಸಾವಿತ್ರಿ'ಗಳಲ್ಲಿ, 'ಶ್ರೀ'ಯವರ 'ಅಶ್ವತ್ಥಾಮನ್' ನಲ್ಲಿ ಕುವೆಂಪುರವರ 'ಯಮನ ಸೋಲಿ'ನಲ್ಲಿ, ಎನ್ನುವಂತೆ, ಗೀತನಾಟಕವು ರೂಪು ತೋರಿ ವೈವಿಧ್ಯ ತಾಳಿದೆ. ಛಾಯಾನಾಟಕವಾಗಿ ಜನತೆಯಲ್ಲಿ ಪರಿಣಾಮವನ್ನುಂಟುಮಾಡಿದ ನಾಟಕಗಳು ಕಾರಂತರವು. ಪದ್ಯಗೀತಮಿಶ್ರದಲ್ಲಿ ಪು. ತಿ. ನ, ಕಾರಂತರು-ಮುಖ್ಯತಃ ಯಶಸ್ವಿಗಳು !

ನಾಟಕವು ಪ್ರಧಾನತಃ ಕಣ್ಣಿನ ವಿಷಯವಾದರೂ, ಪ್ರಸಾರ ನಾಟಕ್ಕಾ, ಶ್ರುತಿಕಾ ಎನ್ನುವುದರಲ್ಲೆಲ್ಲಾ ಕಿವಿಯ ಮೂಲಕ ಕಣ್ಣಿಗೆ ಮುಟ್ಟುವಂತೆ ಮಾಡುವುದು ಮುಖ್ಯ "ನಿವೇದಕನೆಂಬ ಸೂತ್ರಧಾರನ ಪ್ರಾಮುಖ್ಯತೆ, ಸಂಗೀತ ಮತ್ತಿತರ ಧ್ವನಿಗಳಿಂದಲೇ ವಾತಾವರಣ ಕಲ್ಪನೆ, ವ್ಯಕ್ತಿಪಾತ್ರಗಳ ಸಜೀವ ಸಂವಾದ ರಚನೆ, ಚಲಚ್ಚಿತ್ರದಂತೆ ಕಡಿಮೆ ಹೊತ್ತಿನಲ್ಲಿ ಹೆಚ್ಚು ತಿಳಿಸುವ ಓಟ ಮತ್ತು ಮೊನೆ ಇಲ್ಲಿದೆ." ಶ್ರೀ. ರಂ. ಶ್ರೀ. ಮುಗಳಿ ನಾ. ಕಸ್ತೂರಿ, ಬೀಚಿ, ರತ್ನಂ, ಎನ್ಕೆ, ರಂಗನಾಥ, ಬೆಟಗೇರಿ ಕೃಷ್ಣಶರ್ಮ ಇವರ ನಾಟಕಗಳನ್ನು ಇಲ್ಲಿ ಹೇಳಬಹುದು.

ನಾಡಿನ ಹೆಮ್ಮೆಯಾದ ಆಶು ನಾಟಕವೇನೂ ಹೊಸತಲ್ಲ. ಬಯಲಾಟ, ಯಕ್ಷಗಾನಪ್ರಸಂಗಗಳಲ್ಲಿ ಇದರ ಸಮಯಸ್ಫೂರ್ತಿಯ ಲಕ್ಷಣಗಳು ತೋರಿವೆ. ಇಂದು ನಾಡಿನ ಮೂಲೆ ಮೂಲೆಯಲ್ಲಿ ತಕ್ಕಷ್ಟು ಪ್ರತಿಭೆ ಲೋಕಾನುಭವಗಳನ್ನು ಹೊಂದಿದ ಇದರ ನಟರು ದೊರೆಯಬಹುದು. ಇಂತಹರ ಶಕ್ತಿ, ಶ್ರದ್ಧೆಗಳ ಮೇಲೆಯೇ 'ಆಶು'ವಿನ ಭವಿಷ್ಯ ನಿಂತಿದೆ. ಈ ನಾಟಕದಲ್ಲಿ ವಿಷಯ ಕೊಟ್ಟೊಡನೆ ಕವಿತಾರಚನೆಯಾರಂಭವಾಗಿ, ಮುಂದೆ ಬರೆಯದುದಾದರೂ ಬರೆದುದೆಂಬ ಆಭಾಸವನ್ನುಂಟುಮಾಡುವ ರಚನೆಯಿರಬೇಕು. ಕತೆಯಲ್ಲಿ ತಾಕಲಾಟದ ಬದಲು ಸಾಮೂಹಿಕ ಸ್ಫೂರ್ತಿಯು ಇಲ್ಲಿಯ ಸಿದ್ಧಿಸ್ವಾರಸ್ಯ. ಒಂದೇ ನೌಕೆಯ

ಪಯಣಿಗರಲ್ಲಿ ಒಬ್ಬನ ಜೋಲಿತಪ್ಪಿದರೆ ಎಲ್ಲರೂ ಮುಳುಗುವಂತೆ, ಒಬ್ಬ ನಟನ ತಪ್ಪಿತದಿಂದ ನಾಟಕವೇ ಕೆಡಬಹುದು. ಆಕು ನಾಟಕದ ಪ್ರಚಾರಕಾರ್ಯ ನಡೆದು, ರಂಗಭೂಮಿಯ ಶಿಕ್ಷಣ-ಕೇಂದ್ರಗಳು ಸ್ಥಾಪಿತವಾಗಿ ಈ ವಿಭಾಗಕ್ಕೂ ತಕ್ಕ ವ್ಯವಸ್ಥೆಯಾಗಬೇಕು.

ಇಂದಿನ ಕನ್ನಡ ಏಕಾಂಕಸೃಷ್ಟಿಯ ಗದ್ಯಭಾಗದಲ್ಲಿ ಕೈಲಾಸಂ-ಶ್ರೀರಂಗರು ಹೆಚ್ಚು ಜಾಣ್ಮೆ ತೋರಿದವರು. ಕನ್ನಡವು 'ಕೈ'ಯನ್ನು ಕಳೆದುಕೊಂಡು, ಆ ಸ್ಥಾನವನ್ನು ಇಂದು ತುಂಬಬೇಕಾಗಿದೆ. ಕರ್ನಾಟಕದಲ್ಲಿ ಕೆಳದಿ, ವಿಜಯನಗರ, ಮೈಸೂರರಾಜರು ನಾಟಕಕಲೆಗೆ ತುಂಬಾ ಪ್ರೋತ್ಸಾಹ ಕೊಡುತ್ತಿದ್ದರು ಎಂದು ತಿಳಿದು ಬರುತ್ತಿದೆ. ಈ ಕಲೆಗೆ ಮನ್ನಣೆ ದೊರೆಯುವಂತೆ ವರದಾಚಾರ್ಯ, ದಿ. ಸುಬ್ಬಣ್ಣ, ಪೀರರು, ವೀರಣ್ಣ, ಗ. ಸದಾಶಿವ, ಬಿ. ಶಾಸ್ತ್ರಿಗಳು, ಶಿ ವಾಮನರಾಯರು, ಸುಂದರಮ್ಮ, ಮಂ ರಂಗನಾಥ ಭಟ್ಟರು— ಚೆನ್ನಾಗಿ ಶ್ರಮಿಸಿದ್ದಾರೆ. ಇವರೆಲ್ಲರ ಸೇವೆಯಿಂದಾಗಿ ಕನ್ನಡ ರಂಗಭೂಮಿ ಮೊನ್ನೆ ಯಶಸ್ವಿಯಾಗಿ ತನ್ನ ಶತವರ್ಷಮಹೋತ್ಸವವನ್ನು ಆಚರಿಸಿತು.

ಚಲನ ಚಿತ್ರಗಳ ಸೌಲಭ್ಯ ಬಹಳ ಬಳೆದು ನಾಟಕ ಸಂಸ್ಥೆಯ ಪ್ರಾಧಾನ್ಯತೆ ತಿಳಿಯದೆ ಅವು ಪ್ರಯಾಸಕ್ಕೊಳಗಾದಂತಿವೆ. ಕಾಣುವಂತೆ, ವಾಕ್ಚಿತ್ರದ ಲಾಭನಷ್ಟಗಳ ಒಂದು ಉದ್ಯಮವಾದಂತಾಗಿ, ನಾಟಕವು ಕೈಕೊಳ್ಳಬೇಕಾದುದನ್ನು ತಾವು ಮುಂದುವರಿಸಬಹುದು ಎಂಬ ಆಸೆಯೂ ನಿರಾಸೆಯಾಗಹತ್ತಿದೆ ಎನ್ನಲೂ ಬಹುದು! ಜನತೆಯ ಅರಿವು, ಪ್ರೋತ್ಸಾಹಗಳು ಮುಂಬರಲಿ.

ರಂಗಭೂಮಿ

ರಂಗಭೂಮಿಯು ಗೀತ, ಚಿತ್ರ, ಸಾಹಿತ್ಯಗಳ ನಿರ್ಮಾಣ ಶಕ್ತಿಗೆ ತುಂಬಾ ಅವಕಾಶವಿರುವ ಒಂದು ದೊಡ್ಡ ಲೋಕ. ಅನೇಕ ದೇಶಗಳ ಸಂಸ್ಕೃತಿಗಳು, ಅದನ್ನು ಬಳೆಯಿಸಿಕೊಂಡು, ಬಳಸಿಕೊಂಡು ಮುಂಬಂದಿರುವ ರೀತಿಯನ್ನು ಕಂಡರೆ, ನಮ್ಮ ನಾಡಿನವರು ಅಷ್ಟೊಂದು ಹೆಮ್ಮೆಪಡುವ ಹಂತದಲ್ಲಿಲ್ಲ (ಶ್ರೀ. ಕಾರಂತರು) ಗಂಭೀರವಾಗಿ ನುಡಿದಂತೆ: ಯಾವನು ರಂಗಭೂಮಿಗಾಗಿ ದುಡಿಯಲು ಬಗೆವನೋ, ಅವನು ರಂಗಭೂಮಿಯ ಅಧ್ಯಯನಮಾಡಬೇಕು. ಇದಕ್ಕೆ ತಕ್ಕ ರಂಗಶಿಕ್ಷಣಾಲಯಗಳು ಏರ್ಪಾಡಾಗಬೇಕಾಗಿದೆ. ರಾಷ್ಟ್ರೀಯ ನಾಟಕ ಸಂಸ್ಥೆಯೊಂದಾಗಿ, ನಾಟಕ ಶಿಕ್ಷಣದ ವ್ಯವಸ್ಥೆ ನಡೆದು, ನಾಟ್ಯ, ಕಲೆ, ಹಾಡುಗಾರಿಕೆಗಳಿಗೆ ವಿಶ್ವವಿದ್ಯಾನಿಲಯದಲ್ಲಿ ಸ್ಥಾನ ದೊರಕಿ 'ಡಿಗ್ರಿ' ಪ್ರಶಸ್ತಿಗಳ ಅನುಕೂಲತೆಯಾಗಬೇಕು. ನಾಟ್ಯಕಲಾಶಾಲೆ, ನಾಟ್ಯಕಲಾಪರಿಷತ್-ಗಳೆ ಸ್ಥಾಪಿತವಾಗಿ, ಸಾಹಿತ್ಯ ಪ್ರಕಟಣೆ, ಬಹುಮಾನ, ಪ್ರಚಾರ, ಪ್ರದರ್ಶನ, ಶಿಕ್ಷಣಗಳ ಕಾರಭಾರವನ್ನವು ವಹಿಸಿಕೊಳ್ಳಬೇಕು.

ಕಲಾ-ಸೇವೆ.

ಅಭಿನಯವು ಅಸಾಧಾರಣ ಕಲೆ, ನಾಟಕವು ಅದ್ವಿತೀಯ ಸಾಹಿತ್ಯವಿಭಾಗ, 'ಐರ್ಲೆಂಡ್ ದೇಶಕ್ಕೆ ಈಟ್ಸ್ ಕವಿಯೊಂದಂತೆ **ನಾವೂ-ಭಾರತವೆಲ್ಲಾ ರಂಗಭೂಮಿಯಮೇಲೆ ನಡೆಯಬೇಕು**'— **ಎನ್ನಬಹುದು. ತಪಸ್ವೀಮಾನವತೆಯನ್ನು ಸುರತ್ತದೆಡೆಗೆ ವಿಕಾಸ**-**ಗೊಳ್ಳಲು ನೆರವಾಗುವ ಕಲೆ ದೈವೀಕಲೆ.** ನಾಟಕ ಇಂತಹದು! 'ಸಂತೋಷಂ ಜನಯೇತ್ ಪ್ರಾಜ್ಞಃ ತದೇವೇಶ್ವರ ಪೂಜನಂ' ಎನ್ನುವಂತೆ ಜನತೆಯ ಮನರಂಜನಕಾರಿಯಾದ ನಾಟಕದ ಸೇವೆಯೇ ದೈವಸೇವೆ. ದೇಹದದೇಗುಲದ ಜನತಾ ಜನಾರ್ದನನ ಪೂಜೆಗಾಗಿ ಮೀಸಲಾದ ನಾಟ್ಯಕಲಾ ಸೇವಕರು ಭಾಗ್ಯವಂತರು! ನಾಟಕೀಯತೆಯ ತಿರುಳರಿಯುವುದರಿಂದಲೇ ರನ್ನ, ರಾಘವಾಂಕ, ಮುದ್ದಣರ ಕಾವ್ಯಗಳು ಜನಪ್ರಿಯವಾಗಿವೆ. ಬರ್ನಾಡ್ ಷಾರು ಲೋಕಪ್ರಿಯರಾಗಿದ್ದಾರೆ. ಷೇಕ್ಸ್‌ಪಿಯರನು ಜನತೆಯ ಜೀವನಾಡಿಯಾಗಿದ್ದಾನೆ. ಚಿತ್ರಾಂಗದಾ, ಮಾಲಿನಿಯಂತಹ ರೂಪಕಗಳನ್ನು ನೀಡಿದ ಠಾಗೋರರು, ಇದರಿಂದಾಗಿ ಇನ್ನಷ್ಟು ಜನಮಮತೆಯನ್ನು ಕಂಡುಕೊಂಡರು; ನಾಟಕವು ಮೆಚ್ಚದ ಮಾನವನಿಲ್ಲ!

ಯೋಗಸಾಧನೆಯು ನಾಟ್ಯದ ಇನ್ನೊಂದು ಮುಖ. ಆಧ್ಯಾತ್ಮಿಕಾಹ್ಲಾದವನ್ನು ಕೊಡುವ ನಾಟ್ಯವು ಸ್ಫೂರ್ತಿದಾಯಕವಾದುದು. ಶ್ರೀ ಚೈತನ್ಯ, ಪುರಂದರ, ಕನಕದಾಸರು—ನಾಟ್ಯದಿಂದಲೇ ಭಕ್ತಿಪರವಶರಾಗಿ ಆನಂದದ ಆವೇಶದಲ್ಲಿ ತನ್ಮಯತೆಯನ್ನು ಹೊಂದಿದುದನ್ನು ನಾವು ಕೇಳಿದ್ದೇವೆ. 'ನಲಿದರೆ ಒಲಿವೆ' ಇದೂ ಒಪ್ಪಿದಮಾತು! ಅಚಿಂತ್ಯದ ಸೂತ್ರಧಾರಿತ್ವದಲ್ಲಿ ಜಗನ್ನಾಟಕ ಮುಂದುವರಿಯುತ್ತಾ ಇದೆ. ಈ ದಿವ್ಯದ ರಂಗಭೂಮಿಯಲ್ಲಿ ನಾವೆಲ್ಲಾ ಪ್ರತಿಯೊಂದು ಪಾತ್ರವೇ. 'ನಾಟಕ ಚೆನ್ನಾಗಲಿ'— ನಮ್ಮ ಆಶೆ, ಕರ್ತವ್ಯ. ಅಭಿನಯದರ್ಪಣದಲ್ಲಿ ಕಾಣುವಂತೆ "ಯಾವನ ಆಂಗಿಕಾವ್ಯಭಿದಯವೇ ಪ್ರಪಂಚವೋ, ನಾಟಕಾಭಿನಯವೇ ಸಮಸ್ತವಾಙ್ಮಯವೋ, ಆಹಾರ್ಯಾಭಿನಯವೇ ಚಂದ್ರತಾರೆಗಳೋ, ಅಂತಹ ಪರಿಶುದ್ಧ ಶಿವನಿಗೆ ನಮಸ್ಕಾರ.

ಧಾರವಾಡ ಗೆಸ್ಟ್‌ಹಾವುಸ್

ಧಾರವಾಡವು ಕರ್ನಾಟಕದ ಕೇಂದ್ರನಗರ. ಇಲ್ಲಿಗೆ ಬರುಹೋಗುವ ಸುಸಂಸ್ಕೃತ ಪ್ರವಾಸಿಕರೂ ಹೆಚ್ಚು!

ಎಲ್ಲರಿಗೂ ಉಳಿದುಕೊಳ್ಳಲಿಕ್ಕೂ ಊಟಕ್ಕೂ ಎಲ್ಲ ಬಗೆಯಿಂದಲೂ ಅನುಕೂಲವಾದ ಸ್ಥಳವೆಂದರೆ;

卐 ನಮ್ಮ ಧಾರವಾಡ ಗೆಸ್ಟ್‌ಹಾವುಸ್ 卐

ಆಧುನಿಕರೀತಿಯ ವ್ಯವಸ್ಥೆ! ಅಚ್ಚುಕಟ್ಟಾದ ಊಟ!

ಸಂಚಾಲಕರು: ಕೆ. ರಂಗರಾವ, ಧಾರವಾಡ

ಬಾಂಬೆ ರೆಸ್ಟೋರಾಂಟ್ ಧಾರವಾಡ

ಧಾರವಾಡದ ಯಾವ ಸವಿಗಾರರ ಬಾಯಲ್ಲಿಯೂ ಇದೇ ಮಾತು :

'ಬಾಂಬೆ ರೆಸ್ಟೋರಾಂಟ್!' 'ಬಾಂಬೆ ರೆಸ್ಟೋರಾಂಟ್!' 'ಬಾಂಬೆ ರೆಸ್ಟೋರಾಂಟ್!'

ನಿಮಗೆ ಅಚ್ಚುಕಟ್ಟುತನ, ಸ್ವಚ್ಛತೆ, ಶುದ್ಧತೆಗಳು ಬೇಕಾದರೆ ಇಲ್ಲಿಗೇ ಬರಬೇಕು !

ಪ್ರತಿಯೊಬ್ಬ ಸುಶಿಕ್ಷಿತ ಸಭ್ಯಗೃಹಸ್ಥರೂ ಇದರ ಗುಣಗಳನ್ನು ಮೆಚ್ಚಿ ಹೊಗಳಿಹಾಡುವರು !

ಎಲ್ಲ ತಿಂಡಿಗಳೂ ತಾಜಾ ತುಪ್ಪದಲ್ಲಿ ತಯಾರಿಸಿದುವುಗಳು. ಬೆರಕೆಯೆಂಬುದೆ ಇಲ್ಲ.

ಋತುಮಾನಕ್ಕನುಸರಿಸಿದ ರುಚಿರುಚಿಯ ತಿಂಡಿಗಳ ವೈವಿಧ್ಯ ಇಲ್ಲಿ ಸಿಕ್ಕುವುದು.

ಹೊಸಕಾಲಕ್ಕೆ ಒಪ್ಪಿಗೆಯಾಗುವಂತಹ ಎಲ್ಲ ಬಗೆಯ ಉಪಹಾರಗಳ ಸೌಲಭ್ಯ !

ಪಾರ್ಟೀ-ಸಂಗ್ಯನ್ನುಗಳಿಗೆ ಸಮಿಚೀನ ಖಾದ್ಯ-ಪೇಯುಗಳನ್ನು ಪೂರಯಿಸಲಾಗುವುದು.

ಮಾಲಕರು :—ಶ್ರೀ, ಕೆ. ಬಿ. ಮಧ್ವರಾವ್, ಧಾರವಾಡ,

ಧಾರವಾಡ ನಗರದಲ್ಲಿ ನಿರಂತರವೂ ಅಪೂರ್ವವಸ್ತುಗಳ

ಪ್ರದರ್ಶನಾಲಯ ತೆರೆದಿದೆ:

ಬನ್ನಿರಿ! ಬಂದು ಕಣ್ಣಾರೆ ನೋಡಿರಿ!! ಬೇಕಾದುದನ್ನು ಪಡೆಯಿರಿ!!!

ನಿಮಗೆ ಯಾವ ಸಾಮಾನು ಬೇಕು ? ಸೌಂದರ್ಯಸಾಧಕವೋ, ಜೀವನೋಪಯೋಗಿಯೊ ?

ಏನು ಹಬ್ಬಕ್ಕೆ ತಮಾಷೆಮದ್ದಿನ ಸಾಧನವೈವಿಧ್ಯ ಬೇಕೆ ?

ಆಟಿಗೆ ಸಾಮಾನು, ಸುಗಂಧದ್ರವ್ಯ, ಪ್ರೇಮೋಪಹಾರ ಉಪಕರಣಗಳು ಬೇಕೆ !

ಬನ್ನಿ ನಮ್ಮಲ್ಲಿ, ಬೇಕಾದಂತಹವನ್ನು ಪೂರಯಿಸುವೆವು.

ಶಾಲೆ-ಕಾಲೇಜುಗಳ ಯಾವ ಪುಸ್ತಕ ಬೇಕಾದರೂ ಕೇಳಬಹುದು !

ಊರ ಮತ್ತು ಸಹಕಾರಿ ಸಂಘಗಳ ಲೆಕ್ಕದ ಬುಕ್ಕು, ಖಾತೆ-ಕೀರ್ದಿ ಬುಕ್ಕುಗಳು,

ರೇಶನ್ ಅಂಗಡಿಯ ಪುಸ್ತಕಗಳು ಎಲ್ಲವೂ ನಮ್ಮಲ್ಲಿ ಇವೆ.

ಮೆಚ್ಚಿಗೆಯಾಗುವ ಮಾಲು! ಹೆಚ್ಚೆನಿಸದ ಯೋಗ್ಯ ಬೆಲೆ!

ಆಕಳವಾಡಿ ಬುಕ್‌ಡಿಪೊ, ವಿಜಯ ರೋಡು, ಧಾರವಾಡ.

ಉತ್ತರಹಿಂದುಸ್ತಾನದ ಭಾರತೀಯ ಸಂಗೀತ

(ಪರಿಚಯಾತ್ಮಕ ಪ್ರಬಂಧ)

ಶ್ರೀ. ಎಸ್. ಆರ್. ತಟ್ಟಿ ಬಿ. ಎ. **ನವಲಗುಂದ**

卐

ಇಂದು ಭಾರತೀಯ ಸಂಗೀತವು ಹಿಂದುಸ್ತಾನಿ, ದಾಕ್ಷಿಣಾತ್ಯ ಎಂಬ ಪ್ರದೇಶವಾಚಕ ಹೆಸರನ್ನು ಪಡೆದು ಎರಡು ಕವಲುಗಳಾಗಿ ಹರಿದು ಬಂದಿದೆ. ದಾಕ್ಷಿಣಾತ್ಯ ಸಂಗೀತಪದ್ಧತಿಗಿಂತ ಹಿಂದುಸ್ತಾನಿ ಪದ್ಧತಿಯಲ್ಲಿ ಕೃಷಿ ಹೆಚ್ಚು ನಡೆದಿದೆ. ಎಂತಲೇ ಆ ಕೃಷಿಯ ಫಲ ಹುಲುಸಾಗಿದೆ; ಸವಿಯಾಗಿದೆ.

卐

ಹಾಡುಗಾರನು ಸುಶ್ರಾವ್ಯವಾಗಿ ಪ್ರಸನ್ನಮುದ್ರೆಯಿಂದ ಶುದ್ಧ ವರ್ಣೋಚ್ಚಾರದಿಂದ ಹಾಡಿದರೆ, ಅವನು ಸ್ತುತಿಗೆ ಪಾತ್ರನು. ಆದರೆ, ಅವನು ತನ್ನ ಕಲೆಯಲ್ಲಿ ಪರಿಪೂರ್ಣನಾಗಬೇಕಾದರೆ, ಆ ಶಾಸ್ತ್ರೀಯ ಸ್ವರೂಪವನ್ನು ಕೆಲಮಟ್ಟಿಗಾದರೂ ಬುದ್ಧಿಯಿಂದ ಗ್ರಹಿಸಬೇಕು. ಅಲ್ಲದೆ ದೇಶದ ಈಗಿನ ಹೊಸ ಪರಿಸ್ಥಿತಿಗನುಸರಿಸಿ ನೂರಾರು ಜನರು ಕೂಡಿ ಒಂದು ಹಾಡನ್ನು ಹಾಡಬೇಕಾಗಿದ್ದರೆ, ಅದರ ರಚನೆಯು ಹೇಗಿರಬೇಕು ? ಅದಕ್ಕೆ ಯಾವ ಸ್ವರೂಪವಿರಬೇಕು? ಎಂಬುದನ್ನು ಹೇಳಲು ಸಮರ್ಥನಾಗಿರಬೇಕು. ಅದಕ್ಕಾಗಿ ವೃಂದಸಂಗೀತದ ಪರಿಚಯವು ಅವನಿಗೆ ಕೆಲಮಟ್ಟಿಗೆ ಬೇಕು. ಈ ಸಂದರ್ಭದಲ್ಲಿ ಪಾಶ್ಚಾತ್ಯ ಸಂಗೀತಕ್ಕೂ ಭಾರತೀಯ ಸಂಗೀತಕ್ಕೂ ಇರುವ ವಿಶೇಷವನ್ನು ನಾವು ಗಮನಿಸಬೇಕು. ಮೊದಲು ಅವುಗಳ ಧ್ಯೇಯದಲ್ಲಿರುವ ಭೇದವನ್ನು ಲಕ್ಷ್ಯಿಸೋಣ. 'ಪಾಶ್ಚಾತ್ಯ ಸಂಗೀತದ ಗುರಿಯು ಸೃಷ್ಟಿಯ ಮತ್ತು ಮಾನವಜೀವನದ ಸೌಂದರ್ಯದ ವಿವಿಧತೆಯನ್ನು ಅನುಕರಿಸುವುದು ಮತ್ತು ಬಣ್ಣಿಸುವುದು— ಎಂದು ಹೇಳಬಹುದು. ಆದರೆ ನಮ್ಮ ಕಲೆಯ ಗುರಿಯು ಸೃಷ್ಟಿಯ ವಿವಿಧತೆಯಲ್ಲಿರುವ ಸೂಕ್ಷ್ಮವಾದ ಐಕ್ಯವನ್ನು ಬಿಂಬಿಸುವುದೇ ಆಗಿದೆ' ಎಂದು ರವೀಂದ್ರನಾಥ ಠಾಕೂರರು ಒಂದೆಡೆ ಅಭಿಪ್ರಾಯಪಟ್ಟಿದ್ದಾರೆ. ಪಾಶ್ಚಾತ್ಯ ಕಲಾವಿದರು, ಲಿಪಿಯಲ್ಲಿ ಇದ್ದಷ್ಟನ್ನೇ ಹಾಡಬೇಕು ಅಥವಾ ಬಾರಿಸಬೇಕು; ನಮ್ಮ ಸಂಗೀತವು ಹಾಗಿಲ್ಲ; ಪ್ರತಿಯೊಬ್ಬನಿಗೆ ತನ್ನ ಲಹರಿಯನ್ನು ಇಲ್ಲವೇ ಮನೋಧರ್ಮವನ್ನು ಅನುಸರಿಸುವುದಕ್ಕೆ ಅವಕಾಶವಿರುವುದು. ಪಾಶ್ಚಾತ್ಯರಲ್ಲಿ ಲಿಪಿಯಲ್ಲಿ ಬರೆಯದೆ ಇದ್ದ ಸಂಗೀತವೇ ಇಲ್ಲ. ಇದಕ್ಕೆ ಪ್ರತಿಯಾಗಿ ಈ ದೇಶದ ಉತ್ತಮ ಗಾಯಕನ ಸಂಗೀತವನ್ನು ಲಿಪಿಯಲ್ಲಿಳಿಸುವುದೇ ಸಾಧ್ಯವಿಲ್ಲ. ಕೊನೆಯದಾಗಿ ಪಾಶ್ಚಾತ್ಯ ಸಂಗೀತದಲ್ಲಿ ಒಂದು ವಿಶಿಷ್ಟತರದ ನಾದ ಸಮ್ಮಿಲನವಿದೆ. ಮೂರು ನಾಲ್ಕು ಜನರು ಸೇರಿ ಒಂದೇ ಹಾಡಿನ ಮೂರು ನಾಲ್ಕು-ಬೇರೆ ಬೇರೆ ಥಾಟಗಳನ್ನು ಒಟ್ಟಿಗೆ ಸೇರಿ ಹಾಡುವರೆಂದು ಕಲ್ಪಿಸಿರಿ; ಏಕಕಾಲಕ್ಕೆ ಮೂರುನಾಲ್ಕು ಸ್ವರಗಳು ನುಡಿಸಲ್ಪಡುತ್ತಿದ್ದು ಅವುಗಳ ಸಮ್ಮಿಶ್ರನಾದವೇ ಕಾಲಗತಿಯಲ್ಲಿ ಮುಂದುವರಿಯುತ್ತಿರುವುದು. ಇದಕ್ಕೆ 'harmonised melody' ಎಂದು ಇಂಗ್ಲಿಷಿನಲ್ಲಿ ಹೇಳುವರು. ನಮ್ಮ ರಾಷ್ಟ್ರಗೀತವಾದ 'ಜನಗಣಮನ' ಎಂಬ ಹಾಡು, ಈಗ ಹೀಗೆ ವೃಂದಸಂಗೀತಕ್ಕೆ ಅಣಿಮಾಡಲ್ಪಟ್ಟಿದೆ. ಭಾರತೀಯ ಸಂಗೀತದಲ್ಲೂ ಹಾರ್ಮನಿ ಅಥವಾ ಸ್ವರಸಂವಾದವಿದೆ; ಆದರೆ ಅದು ಹಾಡಿನ ಆಧಾರ ಶ್ರುತಿಯೊಡನೆ ಹಾಡಿದ ಉಳಿದೆಲ್ಲ ಸ್ವರಗಳ ಮಿಲನರೂಪವಾಗಿರುತ್ತದೆ.

ಭಾರತೀಯ ಸಂಗೀತವು ಪ್ರಾಚೀನಪರಂಪರೆಯಿಂದ ಬಂದ ಸಂಗೀತವು. ಈಗ ಹಿಂದುಸ್ತಾನಿ ಸಂಗೀತದಲ್ಲಿ ಗುರುವು ಶಿಷ್ಯನಿಗೆ ಮೊದಲು ಕಲಿಸುವ ಸ, ರಿ, ಗ, ಮ, ಪ, ಧ, ನಿ— ಎಂಬ ಏಳೂ ಸ್ವರಗಳು 'ಶಂಕರಾಭರಣ' ಮೇಲಾವಲೀ ಅಥವಾ 'ಬಿಲಾವಲ' ಮೇಳದುವಾಗಿರುತ್ತವೆ. ಭರತಭೂಮಿಯಲ್ಲಿ ಸುಮಾರು ೩ನೆಯ ಶತಮಾನದಲ್ಲಿ ಬರೆದ ಭರತನಾಟ್ಯಶಾಸ್ತ್ರದಲ್ಲಿ, ಸಂಗೀತಕ್ಕೆ ಒಂದು ಪ್ರಕರಣವಿದ್ದು, ಅದರಲ್ಲಿ ಸ್ವರಾಂತರದ ಉಪಪತ್ತಿಯನ್ನು ಹೇಳಲಾಗಿದೆ. ಸ್ವರಾಂತರವೆಂದರೆ ಒಂದು ಸ್ವರದಿಂದ ಇನ್ನೊಂದು ಸ್ವರಕ್ಕೆ ಇರುವ ಅಂತರ. ಅಥವಾ ಒಂದು ಸ್ವರದಿಂದ ಇನ್ನೊಂದು ಸ್ವರಕ್ಕೆ ಏರುವ ಮೆಟ್ಟಲು. ಒಂದು ಅಂತಸ್ತಿನಿಂದ ಎಂದರೆ ಮಧ್ಯಷಡ್ಜದಿಂದ ಇನ್ನೊಂದು ಅಂತಸ್ತಿಗೆ ಎಂದರೆ ತಾರಷಡ್ಜಕ್ಕೆ ಏರುವ ಯಾವುದೊಂದು ಥಾಟಿನ ಸ್ವರದ ಮೆಟ್ಟಲುಗಳು, ಎಲ್ಲವೂ ಸಮಾನ ಎತ್ತರದುವಿರುವುದಿಲ್ಲ; ಆದರೂ ಮೂರೇ ಸ್ವರಾಂತರಗಳು ಅವುಗಳಲ್ಲಿ ಪುನಃ ಪುನಃ ಬರುತ್ತವೆ. ಭರತ, ಶಾರ್ಙ್ಗದೇವರ ಕಾಲದಲ್ಲಿ, ಗುರುವು ಶಿಷ್ಯನಿಗೆ ಮೊದಲು ಕಲಿಸುತ್ತಿದ್ದ '**ಸರಿಗಮಪಧನಿಸ**' ಎಂಬ ಎಂಟು ಸ್ವರಗಳ ನಡುವೆ ಇರುವ ಏಳು ಸ್ವರಾಂತರಗಳು ಈಗಿನ ಕಾಫೀಥಾಟಿನವಿದ್ದುವು. ಇದರಲ್ಲಿ ಸರಿಗಮದಲ್ಲಿಯ ಮೂರು ಪಾವಟಿಗೆಗಳಿದ್ದಂತೆಯೇ ಮುಂದಿನ ಪಧನಿಸದಲ್ಲಿಯ ಮೂರು ಪಾವಟಿಗೆಗಳು ಇರುವುವು—ಎಂದರೆ ಅಷ್ಟೇ

ಅಪೂರ್ವವಾದ, ಮೇಲುಮಟ್ಟದ ಚಿತ್ರಗಳನ್ನು
ಧಾರವಾಡದ ನಾಗರಿಕರಿಗೆ ಮೊದಲಿಗೆ ತೋರಿಸುವ

ಒಂದೇ ಒಂದು ಚಿತ್ರಮಂದಿರ

ವಿಜಯ ಟಾಕೀಜ್

● ಹೊಸದಾಗಿ ಹಾಕಿದ ಬಾವರ್ ಮಶಿನ್ನು !
● ಕ್ಲ್ಯಾಂಗ್ ಫಿಲ್ಮ್ ಸಾವುಂಡ್ ಸಿಸ್ಟಿಮ್ !!
● ಹಾಯ್ ಇಂಟೆನ್ಸಿಟಿ ಆರ್ಕ್ ಲ್ಯಾಂಪ್ !!!

ಆಧುನಿಕ ರೀತಿಯಲ್ಲಿ ಸುಸಜ್ಜಿತವಾಗಿರುವ ಈ
ಚಿತ್ರಮಂದಿರದಲ್ಲಿ ಚಿತ್ರಪಟ ನೋಡುವುದೆಂದರೆ

ದಿನವೂ ದೀಪಾವಳಿಯ ಉಲ್ಲಾಸ !

ಅಳತೆಯವು. ಈ ಸ್ವರಾಂತರಗಳಲ್ಲಿ ಕೆಲವು ದೊಡ್ಡವು ಕೆಲವು ಮಧ್ಯಮಮಾನದವು. ಕೆಲವು ಸಣ್ಣವು ಕೆಲವು ಒಮ್ಮೊಮ್ಮೆ ಅದಕ್ಕೂ ಸೂಕ್ಷ್ಮ, ಹೀಗೆ ನಾಲ್ಕು ಬಗೆಯವು ಇರುವುವು. ಅವಕ್ಕೆ ನಾವು ‘ ಸೂಕ್ಷ್ಮಸ್ವರಾಂತರ '' ‘ ಸಣ್ಣ ಸ್ವರಾಂತರ ” ‘ ಮಧ್ಯಮ-ಮಾನದ ಸ್ವರಾಂತರ '' ‘ ದೊಡ್ಡ ಸ್ವರಾಂತರ ’ ಎಂದು ಹೆಸರಿಟ್ಟು ಅವುಗಳಿಗೆ ಅನುಕ್ರಮವಾಗಿ ೧, ೨, ೩, ೪ ಎಂಬ ಸಾಂಕೇತಿಕ ಸಂಖ್ಯೆಗಳನ್ನು ಕೊಟ್ಟೋಣ. ಕೀಬೋರ್ಡಿನ ಮೊದಲಿನ ಮೂರು ಪಾವಟಿಗೆಗಳು ಅನುಕ್ರಮವಾಗಿ ೩, ೨, ೪ ಈ ಅಳತೆಯವು ಆಗುವವು. ಮಧ್ಯಮದಿಂದ ಪಂಚಮಕ್ಕೆ ಹತ್ತುವ ಮೆಟ್ಟಲೂ ೪ ಸಂಜ್ಞೆಯುಳ್ಳದ್ದು; ಎಂದರೆ ದೊಡ್ಡ ಸ್ವರಾಂತರವೇ. ಪಧನಿಸದಲ್ಲಿಯ ಕೊನೆಯ ಮೂರು ಮೆಟ್ಟಿಲುಗಳು— ಎಂದರೆ ಪ ದಿಂದ ಸ ಕ್ಕೆ ಹತ್ತುವ ಪಾವಟಿಗೆಗಳು ಕೆಳಗೆ ಸ ದಿಂದ ಮ ಕ್ಕೆ ಹತ್ತುವ ಪಾವಟಿಗೆಗಳ ಅಳತೆಯವೇ ಇವೆ. ಇನ್ನು ಒಂದು ಸ ದಿಂದ ಮೇಲಂತಸ್ತಿನ ಸ ಕ್ಕೆ ಸ್ವರಾಂತರವು ಕ್ರಮದಿಂದ ಏರುತ್ತ ಹೋಗುತ್ತದೆ. ಅದ್ದರಿಂದ ಸ ದಿಂದ ರಿ ಕ್ಕೆ ೩ ಆದರೆ, ಸ ದಿಂದ ಗ ಕ್ಕೆ ೫, ಸ ದಿಂದ ಮ ಕ್ಕೆ ೯, ಸ ದಿಂದ ಪ ಕ್ಕೆ ೧೩ ಹೀಗೆ ಷಡ್ಜದಿಂದ ಪಂಚಮಕ್ಕೆ ೧೩, ಪಂಚಮದಿಂದ— ಮುಂದಿನ ತಾರಷಡ್ಜಕ್ಕೆ ೯ ಹೀಗೆ, ಈ ಎರಡೂ ಸ್ವರಾಂತರಗಳು ಕೂಡಿ ೨೨ ಆಗುವುದು. ಇವುಗಳಿಗೇ ೨೨ ಶ್ರುತ್ಯಂತರಗಳೆಂದೂ ಅಥವಾ ‘ ದ್ವಾವಿಂಶತಿ ಶ್ರುತಿ ’ ಗಳೆಂದೂ ಭಾರತೀಯ ಸಂಗೀತದಲ್ಲಿ ಪ್ರಸಿದ್ಧಿಯಿದೆ. **ಸೂಕ್ಷ್ಮಸ್ವರಾಂತರಕ್ಕೆ ಪ್ರಮಾಣಶ್ರುತಿಯೆಂದೂ**, ಸಣ್ಣ ಸ್ವರಾಂತರಕ್ಕೆ **ದ್ವಿಶ್ರುತಿಯೆಂದೂ**, ಸರಾಸರಿ ಸ್ವರಾಂತರಕ್ಕೆ **ತ್ರಿಶ್ರುತಿ** ಎಂದೂ ದೊಡ್ಡ ಸ್ವರಾಂತರಕ್ಕೆ **ಚತುಶ್ರುತಿ** ಎಂದೂ ಹೆಸರಿವೆ. ಆಧುನಿಕ ವೈಜ್ಞಾನಿಕರಲ್ಲಿ ಈ ಸ್ವರಾಂತರಗಳಿಗೆ ಅನುಕ್ರಮವಾಗಿ ೨೨ ಸೆಂಟ್ಸ್, ೧೧೨ ಸೆಂಟ್ಸ್, ೧೮೨ ಸೆಂಟ್ಸ್, ೨೦೪ ಸೆಂಟ್ಸ್ ಎಂದು ಹೇಳುವ ಪರಿಪಾಠವಿದೆ. ಸ್ವರಾಂತರಗಳಿಗೆ ಸರಿಯಾದ ಅಳತೆಗೋಲನ್ನು ಶಾಸ್ತ್ರಕಾರರು ತೋರಿಸಿದ್ದರೆ, ಸಂಗೀತವು ನಿಯಮಬದ್ಧವಾಗಲಾರದು. ‘ಕಲೆಯು ಮೊದಲು, ಶಾಸ್ತ್ರವು ಹಿಂದುಗಡೆ’ ಎಂಬುದೇನೋ ನಿಜ; ಆದರೆ ಎಲ್ಲ ಕಲೆಗೂ ಕೆಲವು ನೀತಿ–ನಿಬಂಧನೆಗಳೂ ಇರಲೇಬೇಕು. ಗುರುಮುಖದಿಂದ ಅಭ್ಯಾಸ ಮಾಡಿದ ಒಳ್ಳೆಯ ಸಂಗೀತಗಾರರು ಈಗಲೂ ತೋಡಿರಾಗದಲ್ಲಿ ಕೋಮಲ ಗಾಂಧಾರಕ್ಕಿಂತ ಸೂಕ್ಷ್ಮಾಂತರದಿಂದ ಕಡಿಮೆಯಾದ ಗಾಂಧಾರವನ್ನು ಹಚ್ಚುವರೆಂದೂ, ದೇಸಕಾರದಲ್ಲಿಯ ತೀವ್ರ ಋಷಭ-ಧೈವತಗಳು ಸೂಕ್ಷ್ಮಾಂತರ ಯುಕ್ತವಾದುವೆಂದೂ ಕೇದಾರದಲ್ಲಿಯ ತೀವ್ರಗಾಂಧಾರವು ಶುದ್ಧಮಧ್ಯಮಕ್ಕೆ ತೀರ ಸಮೀಪವಾದುದೆಂದೂ ಹೇಳುವ ಪರಿಪಾಠವಿದೆ. ಅಭ್ಯಾಸದಿಂದಲೂ ಅನುಕರಣದಿಂದಲೂ ಕಲಿತು, ಈ ಸೂಕ್ಷ್ಮಾಂತರಗಳನ್ನು ಉಪಯೋಗಿಸುವುದು ಸಾಧ್ಯವಿದೆ. ಇದು ನಮ್ಮ ಭಾರತೀಯ ಸಂಗೀತದ ಇನ್ನೊಂದು ವೈಶಿಷ್ಟ್ಯವಾಗಿದೆ. ಗ್ರೀಕ್ ಸಂಗೀತದಲ್ಲೂ ಅವು ಉಪಯೋಗಿಸಲ್ಪಡುತ್ತಿದ್ದುವೆಂದು ಕ್ಲೆಮೆಂಟ್ಸ್ ಎಂಬ ಸಂಶೋಧಕರು ತೋರಿಸಿಕೊಟ್ಟಿದ್ದಾರೆ. ಸಾರ್ಥಗೀತಗಳು ಸಂಗೀತದ ಶರೀರವಾಗಿದ್ದರೂ, ಭಾರತೀಯ ಸಂಗೀತದ ಜೀವಾಳವು ರಾಗಾಲಾಪನೆಯೇ; ಅದನ್ನು ‘ ಅನಂತಂ ’ ಎಂಬ ಪರಮಾತ್ಮನ ನಾಮಸ್ಮರಣೆಯ ದಿವ್ಯಾಕ್ಷರಗಳನ್ನು ಅನ್ನುತ್ತಲೇ ಮಾಡುವ ರೂಢಿಯಿದೆ. ಆದ್ದರಿಂದ ಆಲಾಪನ ಪದ್ಧತಿಗೆ ‘ **ನೋಂತೋಂ** ’ ಎಂದು ಹೆಸರಿದೆ. ಇದರಿಂದ ಸಂಗೀತದ ರಸಾಸ್ವಾದನೆಯು ಶಬ್ದನಿರಪೇಕ್ಷವಾದುದು— ಎಂಬ ಮಾತು ಸ್ಪಷ್ಟವಾಗುವುದು.

ಈ ಆಲಾಪನವು ಅಥವಾ ರಾಗಪದ್ಧತಿಯು, ಭಾರತೀಯ ಸಂಗೀತದ ಮುಖ್ಯ ವೈಶಿಷ್ಟ್ಯವಾಗಿದೆ. ಸುಮಾರು ಕ್ರಿ.ಶ. ೧೩೦೦ರ ವರೆಗೆ ಗಾಯಕರು ಜಯದೇವ ಕವಿಯ–ಸಂಸ್ಕೃತದಲ್ಲಿದ್ದ– ‘ ಗೀತಗೋವಿಂದ ’ದಂತಹ ಪದ ಕಾವ್ಯಗಳನ್ನೇ ಬಳಸುತ್ತಿದ್ದರೆಂದು ಹೇಳಬಹುದು. ಕ್ರಿ. ಶ. ೭೦೦ ರಿಂದ ಕ್ರಿ. ಶ. ೧೩೦೦ ರ ವರೆಗೆ ಪ್ರಾಕೃತ ಹಾಗು ಅಪಭ್ರಂಶದಲ್ಲಿಯ ಸಾಹಿತ್ಯವೂ ಹಾಗೆ ಉಪಯೋಗಿಸಲ್ಪಡುತ್ತಿರಬೇಕು. ಆಮೇಲೆ ಉತ್ತರ ಹಿಂದುಸ್ಥಾನದ ದೇಶಭಾಷೆಗಳಾದ ಹಿಂದಿ, ಪಂಜಾಬಿ, ಬಂಗಾಲಿ, ಮರಾಠಿ ಮುಂತಾದ ಭಾಷೆಗಳು ಬೆಳೆಯಲಾರಂಭಿಸಿದುವು. ವ್ರಜಭಾಷೆಯಲ್ಲಿಯೂ ಹಿಂದಿ" ಯಲ್ಲಿಯೂ ಸಾಹಿತ್ಯವು ಬೆಳೆಯಿತು. ಈ ಸಂದರ್ಭದಲ್ಲಿ ಮಧ್ಯಯುಗೀನ ತುಲಸೀದಾಸ, ಸೂರದಾಸ, ಕಬೀರದಾಸ, ಮೀರಾಬಾಯಿ ಮುಂತಾದ ಭಕ್ತಶಿರೋಮಣಿಗಳ ಹೆಸರುಗಳು ಅಜರಾಮರವಾಗಿವೆ.

ಇನ್ನು ಒಂದೇ ಆಗಿದ್ದ ಭಾರತೀಯ ಸಂಗೀತದಲ್ಲಿ, ಉತ್ತರ ಹಿಂದುಸ್ತಾನದ ಸಂಗೀತ ಹಾಗು ದಕ್ಷಿಣದ ಸಂಗೀತ ಹೀಗೆ ಎರಡು ಶಾಖೆಗಳು ಹೇಗೆ ಮತ್ತು ಏಕೆ ಉಂಟಾದುವು? ಬ್ರಿಟಿಶರು ಈ ದೇಶವನ್ನು ಆಳಹತ್ತಿ ಇಂಗ್ಲಿಷನ್ನು ಸಾಮಾನ್ಯ ದೇಶಭಾಷೆಯಾಗಿ ಮಾಡುವುದಕ್ಕಿಂತ ಮುಂಚೆ, ಮೊಗಲರ ಕಾಲದಲ್ಲಿ, ಪರ್ಶಿಯನ್ ಭಾಷೆಯು ದೇಶದ ದರಬಾರಿನ ಹಾಗು ಸಾಹಿತ್ಯಿಕ ಭಾಷೆಯಾಗಿತ್ತು. ಇರಾಣದ ಶಿಲ್ಪ ಮುಂತಾದ ಲಲಿತಕಲೆಗಳು, ಈ ದೇಶದ ಮೇಲೆ ತಮ್ಮ ಕಲೆಗಳ ಪ್ರಭಾವವನ್ನು ಬೀರದೆ ಹೋಗಲಿಲ್ಲ. ಹೀಗಾಗಿ ಆಗಿನ ಹಿಂದುಸ್ತಾನಿ ಸಂಗೀತದ ರೀತಿ-ನೀತಿಗಳ ಮೇಲೆ ಪರ್ಶಿಯನ್ ಸಂಗೀತದ ಹಾಗು ಭಾಷಾಶೈಲಿಯ ವರ್ಚಸ್ಸು ಬಿದ್ದಿತೆ. ಮುಸಲ್ಮಾನ್ ಅರಸರ ಉದಾರವಾದ ಆಶ್ರಯದಿಂದಲೂ ತಮ್ಮ ನಿರಂತರ ವ್ಯಾಸಂಗದಿಂದಲೂ ಮುಸಲ್ಮಾನರು ಆಲಾಪನ-ಪ್ರಧಾನವಾದ 'ಖ್ಯಾಲ' ಗಾಯನವೆಂಬ ಒಂದು ವಿಶಿಷ್ಟರೀತಿಯನ್ನು ಭಾರತೀಯ ಸಂಗೀತಪರಂಪರೆಗೆ ಭಂಗಬಾರದಂತೆ ಪ್ರಚಾರಕ್ಕೆ ತಂದರು. ಇಂತು ಹಿಂದು ಮುಸ್ಲಿಂ ಸಂಸ್ಕೃತಿಗಳೂ ಸಮರಸವಾಗಿ ಕೂಡಿ, ಬೇರೊಂದು ನವೀನಸಂಸ್ಕೃತಿಯು ಮುಂದೆ ಎಂದಾದರೂ ಒಂದು ಕಾಲಕ್ಕೆ ಉಂಟಾಗಬಹುದೆಂಬುದಕ್ಕೆ ಹಿಂದುಸ್ತಾನಿ ಸಂಗೀತವು ಒಂದು ದಿವ್ಯನಿದರ್ಶನವಾಗಿದೆ.

ಅಲ್ಲಾ ಉದ್ದೀನ ಖಿಲಜಿಯ ದರ್ಬಾರದಲ್ಲಿದ್ದ ಅಮೀರ ಖುಸ್ರೂವು ಈ ಖ್ಯಾಲಪದ್ಧತಿಯ ಆದ್ಯಪ್ರವರ್ತಕನೆಂದು ಹೇಳುವರು. ದಕ್ಷಿಣ-ಭಾರತದಲ್ಲಿ ಮುಸಲ್ಮಾನರ ಆಳಿಕೆಯ ವರ್ಚಸ್ಸು ಹೆಚ್ಚಾಗಿಯೂ ಬಹುಕಾಲದವರೆಗೂ ನೆಲಸಲಿಲ್ಲ. ಹೀಗಾಗಿ ಅಲ್ಲಿ ವಾಸ್ತುಶಿಲ್ಪ, ಮೂರ್ತಿಶಿಲ್ಪ ಮುಂತಾದ ಕಲೆಗಳು ಬೇರೆ ನಮೂನೆಯಮೇಲೆ ಬೆಳೆದಂತೆ, ಸಂಗೀತವು ಕರ್ನಾಟಕದ ತಂಜಾವೂರು ನಾಯಕರಿಂದ ಹಾಗೂ ಮೈಸೂರು ಅರಸರಿಂದ ಪ್ರೋತ್ಸಾಹನ ಹೊಂದಿ, ಕನ್ನಡ, ತಮಿಳು, ತೆಲುಗು ಭಾಷೆಗಳಲ್ಲಿಯ ಸಾಹಿತ್ಯ-ಸಂಸ್ಕೃತಿಗಳ ಗುಣವನ್ನು ಮೈಗೂಡಿಸಿಕೊಂಡು, ಹಳೆಯ ಸಂಪ್ರದಾಯಕ್ಕೆ ಮಿತಿಮೀರಿ ಕಟ್ಟುಬಿದ್ದರೂ ಗ್ರಾಂಥಿಕ ಪರಿಭಾಷೆಯ ಅರ್ಥವನ್ನು ಸರಿಯಾಗಿ ಮಾಡಿಕೊಳ್ಳದೆ, ಒಂದು ಬೇರೆ ರೀತಿಯಾಗಿ ಪರಿಣಮಿಸಿದೆ. ಇರಲಿ, ಅದಕ್ಕೆ ತನ್ನದೆ ಆದ ಒಂದು ಸೊಗಸೂ, ಮಾಧುರ್ಯವೂ ವೈಶಿಷ್ಟ್ಯವೂ ಇದೆ.

ಹಿಂದುಸ್ತಾನೀ ಸಂಗೀತವು ಭಾರತೀಯ ಸಂಗೀತದ ಕೆಲವು ಭೂಗತವಾದ ತತ್ತ್ವಗಳನ್ನು ಹೆಚ್ಚು ಸೂಕ್ಷ್ಮವಾಗಿ ಕಾಪಾಡಿಕೊಂಡುಬಂದಿದೆ. ಹೀಗಾಗುವುದಕ್ಕೆ ಅವರು ಗ್ರಂಥಗಳ ಗೊಡವೆಗೆ ಹೋಗದೆ ಇದ್ದುದೂ ಒಂದು ಕಾರಣವಾಗಿರಬಹುದು. ಅದರಲ್ಲಿದ್ದ ಗುಣಗಳನ್ನೂ, ಒಳ್ಳೆಯ ಸಂಗತಿಗಳನ್ನೂ ಮೊದಲು ಎತ್ತಿಕೊಳ್ಳೋಣ.

ಒಂದನೆಯದು: ಗಾಯಕರಲ್ಲಿ ದಿವಸದ ಬೇರೆಬೇರೆ ಪ್ರಹರಗಳಲ್ಲಿ ಹಾಡತಕ್ಕ ಬೇರೆಬೇರೆ ರಾಗಗಳ ವ್ಯವಸ್ಥೆ ಇರುವುದು. ಈ ನಿಯಮವನ್ನು ಉತ್ತರ ಹಿಂದುಸ್ತಾನದವರು ಪಾಲಿಸಿದಷ್ಟು ದಕ್ಷಿಣ ದೇಶದವರು ಪಾಲಿಸುವುದಿಲ್ಲವೆಂದು ತೋರುತ್ತದೆ. ಹಿಂದುಸ್ತಾನಿ ಸಂಗೀತದ ಒಂದು ಕಾರ್ಯಕ್ರಮವೇರ್ಪಟ್ಟರೆ, ಕಾರ್ಯಕ್ರಮದ ವೇಳೆಯ ಮೇಲಿಂದ 'ಗಾಯಕನು ಇಂಥದೇ ರಾಗವನ್ನು ಸಾಧಾರಣವಾಗಿ ಹಾಡುವನು' ಎಂದು ಹೇಳಬಹುದಾಗಿದೆ. 'ತೆಲುಗು ತಮಿಳು ಜನರಲ್ಲಿಯೂ ಇದೇ ಪರಿಪಾಠವಿರುವುದು.' ಎಂದು ಇದಕ್ಕೆ ಪ್ರತಿಯಾಗಿ ಯಾರಾದರೂ ಹೇಳಿದರೆ— ಪಕ್ಷಾಭಿನಿವೇಶದಿಂದಲ್ಲ; ವಸ್ತುಸ್ಥಿತಿಯನ್ನು ಚೆನ್ನಾಗಿ ಪರಿಶೀಲಿಸಿ ಅಧಿಕೃತರೀತಿಯಿಂದ ಹೇಳಿದರೆ— ಶಾಸ್ತ್ರದ ಮಾತನ್ನು ಅವರು ಹಾಗೆ ಹೇಳಬಹುದು. ರೂಢಿಯಲ್ಲಂತೂ ಹಾಗೆ ಕಂಡುಬರುವುದಿಲ್ಲ. ಎರಡನೆಯದು: ರಾಗಾಲಾಪನೆಯೇ ಸಂಗೀತದ ಜೀವಾಳವಾಗಿರುವುದರಿಂದ, ಹಿಂದುಸ್ತಾನಿ ಸಂಗೀತದ ಖ್ಯಾಲಗಾಯನ ಶೈಲಿಯು ಆಳವೂ ಶಾಂತವೂ ಆದ ಪ್ರವಾಹದಂತೆ ಸುದೀರ್ಘವಿಲಂಬಿತಲಯದಲ್ಲಿ ಸಾಗಿ, ಮನಸ್ಸಿನ ಏಕಾಗ್ರತೆಯನ್ನು ಸಾಧಿಸಿ, ಮನಸ್ಸನ್ನು ಪ್ರಸನ್ನೀಕರಿಸುವುದು. ದ್ರುತಗತಿಯತ್ತ ಹಾಗೂ ಬಹಳ ಏರುಶ್ರುತಿಯತ್ತ ಹಿಂದುಸ್ತಾನೀ ಸಂಗೀತದ ಒಲವು ಹೆಚ್ಚು ಇಲ್ಲ. ಸಾಧಾರಣವಾಗಿ ಹಾಡಿಕೆಯ ವೇಗವು ಕ್ರಮವಾಗಿ ವಿಲಂಬಿತ, ಮಧ್ಯ, ದ್ರುತಲಯಗಳಲ್ಲಿ ಹರಿದು ಮುಕ್ತಾಯಗೊಳ್ಳುವುದು. ದಕ್ಷಿಣ ದೇಶದ ಗಾಯಕರು ಎತ್ತಿಕೊಳ್ಳುತ್ತಲೇ ಮಧ್ಯ-

ಶಾರದಾ ವಿಲಾಸ

★

ಅತ್ಯುತ್ತಮವಾದ ವಿಶ್ರಾಂತಿನಿವಾಸ!

ಧಾರವಾಡದಲ್ಲಿ ಸುಪ್ರಸಿದ್ಧ ಸಂಸ್ಥೆಗಳಾಗಿರುವ ನಗರಸಭೆ, ಕರ್ನಾಟಕ ವಿದ್ಯಾವರ್ಧಕಸಂಘ, ಆರ್. ಎಲ್. ಎಸ್. ಹೈಸ್ಕೂಲು, ಕರ್ನಾಟಕ ಹೈಸ್ಕೂಲು, ಮಿತ್ರ-ಸಮಾಜ-ಇವೆಲ್ಲವುಗಳ ನೆರೆಯಲ್ಲಿಯೇ ಇರುವ ಲೋಕಪ್ರಿಯವಾದ

ಉಪಾಹಾರ ಮಂದಿರವಿದು!

ಧಾರವಾಡದ ವಿದ್ಯಾವಂತರ ಬಳಗವೆಲ್ಲ ಇಲ್ಲಿನೋಡಲು ದೊರೆಯುವುದು.

ರುಚಿರುಚಿಯಾದ ತಿಂಡಿಗಳು! ಉತ್ಸಾಹದಾಯಕ ಪಾನೀಯ! ಧಾರವಾಡಕ್ಕೆ ಬಂದವರೆಲ್ಲ ಶಾರದಾ ವಿಲಾಸಕ್ಕೆ ಸಂದರ್ಶನ ಕೊಡಬೇಕು!

ಸಂಚಾಲಕರು :

ಮುದ್ರಬೆಟ್ಟು ಗೋಪಾಲರಾವ

ಲಯವನ್ನೋ ದ್ರುತಲಯವನ್ನೋ ಆಶ್ರಯಿಸುವುದು ಅಪರೂಪವಲ್ಲ. ಅವರು ಕೂಡ ವಿಲಂಬಿತಲಯದಲ್ಲಿಯ ಕೀರ್ತನೆಗಳನ್ನೆಷ್ಟೋ ಅನ್ನುತ್ತಿರಬಹುದು—ಅದೇಕೆ ಅನ್ನುವರು—ಆದರೂ ಅವರ ತಾಳದ ಒಂದು ಆವರ್ತಕ್ಕೆ ಹಿಡಿಯುವ ಕಾಲದ ಎರಡರಷ್ಟು ಅಥವಾ ನಾಲ್ಕರಷ್ಟು ಕಾಲವು. ಹಿಂದುಸ್ತಾನಿ ಖ್ಯಾಲಗಾಯಕರ ಒಂದು ಆವರ್ತಕ್ಕೆ ಹತ್ತುವುದೆಂದು ಸಾಮಾನ್ಯವಾಗಿ ಹೇಳಬಹುದು. ಹಿಂದುಸ್ತಾನೀ ಖ್ಯಾಲದ ಚೀಜುಗಳನ್ನು ಅನ್ನುವಾಗ, ತಾಳವು ಹಿನ್ನೆಲೆಯಲ್ಲಿರುವುದು. ಚೀಜಿನ ಪ್ರತಿಯೊಂದು ಅಕ್ಷರಕ್ಕೂ ಬೀಳುವ ತಾಳದ ಆಘಾತಗಳೂ ಮನಸ್ಸನ್ನು ವ್ಯಾಪಿಸಿ ಮನಸ್ಸನ್ನು ಸೆರೆಹಿಡಿಯುವುದಿಲ್ಲ ಮೂರನೆಯದು: ಆಲಾಪನದಲ್ಲಿ ಹಿಂದುಸ್ತಾನಿ ಗಾಯಕರು ವಾದಿ, ಸಂವಾದಿ ಸ್ವರಗಳ ನಿಯಮವನ್ನು ಹೆಚ್ಚು ಸೂಕ್ಷ್ಮವಾಗಿ ಪಾಲಿಸುವರು. ನಾಲ್ಕನೆಯದು : ಹಿಂದುಸ್ತಾನಿ ಗಾಯಕರು ಸ್ವರಸಾಧನೆಗಾಗಿಯೂ ಕಂಠಮಾಧುರ್ಯಕ್ಕಾಗಿಯೂ ಹೆಚ್ಚು ಪರಿಶ್ರಮಪಡುವರು. ಐದನೆಯದು : ಗ್ರಂಥಗಳಲ್ಲಿ ಹೇಳಿದ ಹಾಗೆ ಎಷ್ಟೋ ರಾಗಗಳ ರಚನೆಯೂ ರೂಪರೇಷೆಯೂ ಪೂರ್ವ-ಸಂಪ್ರದಾಯದಂತೆ ಹಿಂದುಸ್ತಾನೀ ಪದ್ಧತಿಯಲ್ಲಿ ಉಳಿದು ಬಂದಿವೆ. ದಕ್ಷಿಣಾದಿಯಲ್ಲಿ ಶ್ರುತಿಸ್ಥಾನಗಳ ಅರ್ಥವನ್ನು ಸರಿಯಾಗಿ ಮಾಡಿಕೊಳ್ಳದೆ, ರಾಮಾಮಾತ್ಯ ಮೊದಲಾದವರು ಅಕ್ರಮವಾದ ಕೆಲವು ಜನಕರಾಗಗಳನ್ನು ಮತ್ತು ರಾಗರಚನೆಯ ಸೂಕ್ಷ್ಮ ವಿಮರ್ಶೆಯಿಲ್ಲದೆ ಎಷ್ಟೋ ಕ್ಷುದ್ರ ರಾಗಗಳನ್ನೂ ರೂಢಿಯಲ್ಲಿ ಸೇರಿಸಿಬಿಟ್ಟಿದ್ದಾರೆ ಉದಾ: ಕನಕಾಂಗಿ, ಚಲನಾಟ, ಕುಂತಲವರಾಳಿ. ಆರನೆಯದು : ಗಾಯನವನ್ನು ಕಲಿಯುವಾಗ ಮತ್ತು ಕಲಿಸುವಾಗ ಹಿಂದುಸ್ತಾನೀ ಸಂಗೀತಕಾರರು ಸ್ವರಲಿಪಿಯನ್ನು ಹೆಚ್ಚಾಗಿ, ಬಳಸುವುದಿಲ್ಲ. ಸ್ವರಸಂಯೋಗಗಳ ಸರಿಗಮಾದಿ ಸೂಕ್ಷ್ಮಪೃಥಕ್ಕರಣ ಮಾಡದೆ, ಮುಖ್ಯತಃ ಹಾಡಿನ ವಿವಿಧ ಭಂಗಿಯನ್ನು ಕೇಳಿ ಅನುಭವಿಸಿ ಕಲಿಯುತ್ತಾರೆ. ಆಕಾರಾದಿ ತಾನಗಳ ಬದಲಾಗಿ ಸ್ವರಗಳನ್ನು ಮಿತಿಮೀರಿ ಪ್ರದರ್ಶಿಸುವ ರೀತಿಯು ಹಿಂದುಸ್ತಾನಿಯವರಿಗೆ ಹೆಚ್ಚು ಒಗ್ಗುವುದಿಲ್ಲ.

ಹೀಗೆ ಉತ್ತರ ಹಿಂದುಸ್ತಾನದ ಸಂಗೀತವು ಭಾರತೀಯ ಸಂಗೀತದ ವೈಶಿಷ್ಟ್ಯವನ್ನು ಚೆನ್ನಾಗಿ ಕಾಪಾಡಿಕೊಂಡು ಬಂದಿವೆ ಎಂದು ಹೇಳಬಹುದು. ಉತ್ತರ ಹಿಂದುಸ್ತಾನದ ಸಂಗೀತಕ್ಕೆ ಸಾಹಿತ್ಯವನ್ನು ಒದಗಿಸಿಕೊಟ್ಟದ್ದು ಪ್ರಾಚೀನ ಹಿಂದಿ ಅಥವಾ ವ್ರಜ ಭಾಷೆಯು. ಅದರಲ್ಲಿ ಅನೇಕ ಅಭಿಜಾತ ಗಾಯಕರು ಹಾಡುಗಳನ್ನು ಹಾಡಿದ್ದಾರೆ. ಅವರಲ್ಲಿ ಅಗ್ರಸ್ಥಾನವು ಅಕಬರ ಬಾದಶಹನ ಕಾಲದ ತಾನಸೇನ ಎಂಬ ಗಾಯಕ ಶಿರೋಮಣಿಗೆ ಇರುವುದು. ಇದರಂತೆ ಸದಾರಂಗ, ಅದಾರಂಗ, ಮನರಂಗ, ಬೈಜುಬಾವರೆ ಮುಂತಾದವರು ಪ್ರಸಿದ್ಧಿ ಪಡೆದಿದ್ದಾರೆ. ಗಾಯಕರ ಶೈಲಿಯು ಖ್ಯಾಲಗಾಯನದಿಂದ ನೆರಿಗನ್ನು ಪಡೆದಿರಬಹುದಾದರೂ ಗೀತಪ್ರಬಂಧಗಳ ಅಥವಾ ಚೀಜುಗಳ ಭಾಷೆಯೂ ಅವುಗಳ ವಿಷಯ-ಅರ್ಥ-ಭಾವಗಳೂ ಸಂಪೂರ್ಣವಾಗಿ ಭಾರತೀಯ ಪರಂಪರೆಯನ್ನೇ ಅನುಸರಿಸಿರುವುವು ಶ್ರೀಕೃಷ್ಣಭಕ್ತಿಯೇ ಬಹ್ವಂಶ—ಹಾಡುಗಳ ವಿಷಯವಾಗಿರುವುದು. ಪ್ರಬಂಧಗಳಲ್ಲಿ ಮುಖ್ಯವಾಗಿ ಧ್ರುಪದ, ಧಮಾರ, ಖ್ಯಾಲ, ಠುಮ್ರಿ, ಟಪ್ಪಾ, ಹೋರಿ, ಗಜಲ, ಕವಾಲಿ, ತರಾಣಾ, ಪದ—ಇವು ಇರುವುವು. ಧ್ರುಪದ-ಧಮಾರಗಳು ಗಂಭೀರಪ್ರಕೃತಿಯವು. ಧಮಾರವು ಒಂದು ತಾಳ ವಿಶೇಷಕ್ಕೂ ಪರಿಣಮಿತವಾಗಿದೆ. ಧ್ರುಪದಗಳಲ್ಲಿ ದೇವರ ಸ್ತೋತ್ರ, ಗಾಯನದ ಶ್ರೇಷ್ಠ ಗುರಿಯ ವರ್ಣನೆ— ಮುಂತಾದ ವಿಷಯಗಳಿರುವುವು. ಖ್ಯಾಲದಲ್ಲಿ ಹೆಚ್ಚಾಗಿ ಗೋಪಿಯರು ಕೃಷ್ಣನ ಮೇಲಿನ ತಮ್ಮ ನಿಃಸೀಮ ಪ್ರೇಮವನ್ನು ಪರಿಪರಿಯಿಂದ ಹೇಳಿಕೊಂಡಿರುವ ವಿಷಯವಿರುವುದು. ಠುಮರಿ, ಟಪ್ಪಾಗಳಲ್ಲಿ ನಾಯಿಕೆಯು ತನ್ನ ವಿರಹದುಃಖವನ್ನು ನಾನಾಪರಿಯಿಂದ ತೋಡಿಕೊಳ್ಳುವಳು. ಇದರಂತೆ ಗಜಲ-ಕವಾಲಿಗಳೂ ಶೃಂಗಾರರಸ ಪ್ರಧಾನವಾದ ಗೀತಗಳು. ಚೀಜುಗಳಲ್ಲಿರುವ ವಿಷಯದ ಕಲ್ಪನೆ ಬರುವುದಕ್ಕೆ ಕೆಲವು ಉದಾಹರಣೆಗಳನ್ನು ತೆಗೆದುಕೊಳ್ಳೋಣ : " ನಾದಭೇದ ಅಪರಂಪಾರ " ಎಂಬ ಒಂದು ಹಿಂಡೋಲ ರಾಗದಲ್ಲಿಯ ಧ್ರುವಪದದ ಅರ್ಥವು ಹೀಗಿದೆ :— " ನಾದಭೇದಗಳು ಅನಂತಾನಂತವಾಗಿವೆ. ಅವುಗಳ ಪಾರವನ್ನು ಕಂಡವರಿಲ್ಲ. ಅವುಗಳನ್ನು ಸುರರೂ ನರರೂ, ಮುನಿಗಳೂ ಗಂಧರ್ವರೂ ಹಾಡಿ ಹಾಡಿ ದಣಿದಿದ್ದಾರೆ. " ಅನೇಕ ಚೀಜುಗಳಲ್ಲಿ ಋತುಗಳ— ವಸಂತಋತುವಿನ ವರ್ಷಋತುವಿನ— ವರ್ಣನೆಯಿದೆ. ಹಲವು ಚೀಜುಗಳಲ್ಲಿ ಗೀತದ ಲಕ್ಷಣಗಳನ್ನು ಹಾಗೂ ವಾದ್ಯದ ಪ್ರಕಾರಗಳನ್ನು ಹೇಳಿದೆ. ಠುಮರಿ ಜಾತಿಯ ಪ್ರಬಂಧಗಳನ್ನು ಹಾಡುವಾಗ ಸಲ್ಲಗ್ನ ರಾಗಗಳನ್ನೂ ಛಾಯಾಲಗ ರಾಗಗಳನ್ನೂ ಬೇಕಾದಹಾಗೆ ತಂದು ಪರಿಪರಿಯಿಂದ ಮನಸ್ಸಿನ ಭಾವವನ್ನು ತೋರಿಸಲಿಕ್ಕೆ ಅವಕಾಶವಿರುವುದು. ಇವು ಸಾಧಾರಣವಾಗಿ ಒಂದೆರಡು ನಿರ್ದಿಷ್ಟ ತಾಳಗಳಿಗೆ ಮರ್ಯಾದಿತವಾಗಿರುವುವು. "ಬಾಜುಬಂದೇ ಖುಲುಖುಲು ಜಾಯ" ಎಂಬ ಒಂದು ಭೈರವಿಯ ಠುಮರಿಯ ಆಶಯವು ಹೀಗಿದೆ: "ಪ್ರಿಯತಮನು ಏನೋ ಒಂದು ಮೋಡಿಯನ್ನು ಮಾಡಿಹೋದನು. ತೋಳಿನ ಆಭರಣಗಳು ಸಡಿಲಾದುವು. ಏನನ್ನೋ ಅಭಿಮಂತ್ರಿಸಿ ಮುಖದ ಮೇಲೆ ಊದಿದನು. ಪ್ರಕೃತಿಯನ್ನು ವೈದ್ಯನಿಗೆ ತೋರಿಸಿತು. ಆದರೆ ಈ ಮನೋರೋಗಕ್ಕೆ ವೈದ್ಯನು ಏನು ಮಾಡಿಯಾನು ? "

ಕಳೆದ ಐವತ್ತು ವರ್ಷಗಳಲ್ಲಿ ಮಿನುಗಿಹೋದ ಸಂಗೀತರತ್ನಗಳು ನಮ್ಮ ಭಾರತೀಯ ಸಂಗೀತವನ್ನು ಉತ್ತರ ಹಿಂದುಸ್ತಾನದಲ್ಲಿ ಸಂರಕ್ಷಿಸಿ ಊರ್ಜಿತಸ್ಥಿತಿಗೆ ತರಲು ತಮ್ಮ ಆಯುಷ್ಯವನ್ನು ವ್ಯಯಿಸಿದ್ದಾರೆ. ಬಡೋದೆಯ ಮರಹೂಂ ಫೈಯಾಜಖಾನ್ ಅವರ ಕಲೆಯ ಶ್ರೇಷ್ಠತೆಯಂತೂ ಮೊನ್ನೆಮೊನ್ನೆಯ ವರೆಗೆ ಎಲ್ಲರಿಗೂ ವಿದಿತವಾದ ವಿಷಯವಾಗಿದೆ. ಹಿಂದುಸ್ತಾನಿ ಗಾಯನದಲ್ಲಿ ಶ್ರೇಷ್ಠಗಾಯಕರು ಇದುವರೆಗೂ ಬಹುಮಟ್ಟಿಗೆ ಮುಸಲ್ಮಾನರೇ ಇದ್ದರೆಂದು ಹೇಳಬಹುದು. ಹೆಚ್ಚು ಶಿಕ್ಷಣ ಪ್ರಸಾರದಿಂದ ಈಗ ಹಿಂದುಗಳೂ ಈ ಕಲೆಯಲ್ಲಿ ನೈಪುಣ್ಯವನ್ನು ಸಂಪಾದಿಸಹತ್ತಿದ್ದಾರೆ. ಇದು ಮುಂದಿನ ಕಲೆಯ ಉತ್ಕರ್ಷದ ಶುಭಚಿಹ್ನವಾಗಿದೆ. ಅಂತೂ ಭಾರತೀಯ ಸಂಗೀತದ ಒಂದು ಪ್ರಕಾರವಾದ ಹಿಂದುಸ್ತಾನೀ ಸಂಗೀತಕ್ಕೆ ಮುಸಲ್ಮಾನೀ ಗಾಯಕರು ಸಲ್ಲಿಸಿದ ಸೇವೆಯು ಚಿರಸ್ಮರಣೀಯವಾಗಿದೆ.

ಕಾಶ್ಮೀರದ ಶಾಲು

ಶ್ರೀ. ಚಿದಾನಂದ ಕುಲಕರ್ಣಿ ಬಿ. ಎ., ಬಿ. ಟಿ. ಧಾರವಾಡ

卐

ಜೀವನದಲ್ಲಿಯ ಒಂದು ದುರಂತ ಘಟನೆ, ಮಾನವ-ನನ್ನು ನಿರಾಶನನ್ನಾಗಿ ಮಾಡಿ, ಮನುಷ್ಯತ್ವದಿಂದ ದೂರವಾಗಿಸುತ್ತದೆ; ಅದೇ ಬಗೆಯ ಇನ್ನೊಂದು ಘಟನೆ ಮತ್ತೆ ಮನುಷ್ಯತ್ವದ ಕಡೆಗೆ ಎಳೆಯುತ್ತದೆ. ಇದೊಂದು ಮನಸ್ಸಿನ ಆಶ್ಚರ್ಯಕಾರಕ ಧರ್ಮ.

★

"ಅಶೋಕ ಎಲ್ಲಿ ?"

"ಅವನು ಎಚ್ಚರಿದ್ದರೆ ನಿಮಗೆ ಉಣಗೊಡುವನೇ ?"

"ಅಂದರೆ ?"

"ಆರತಿಮಾಡಿಸಿಕೊಂಡು, ಇಷ್ಟುಹೊತ್ತಿನ ವರೆಗೂ ಕುಣಿದಾಡಿ ದಣಿದು ಮಲಗಿರುವನು."

"ಹಾಗಾದರೆ, ನಾನೊಬ್ಬನೇ ಕುಳಿತು ಊಟ ಮಾಡಬೇಕೇ ?"

"ಒಂದು ದಿನ ಮಾಡಿದರೆ ಏನಾಗುವುದು ?"

ನಾನು ಮೇಲ್ಮಾಳಿಗೆಯ ಗಚ್ಚಿನ ಮೇಲೆ ಊಟಕ್ಕೆಂದು ಕುಳಿತಿದ್ದೆ. ನನ್ನ ಸರೂ ಅಕ್ಕರೆಯಿಂದ ಬಡಿಸುತ್ತಿದ್ದಳು.

ನಾನು ಸುತ್ತಲೂ ನೋಡಿದೆನು. ಹಾಲುಚೆಲ್ಲಿದಂತೆ ಶರತ್ಕಾಲದ ಬೆಳುದಿಂಗಳು ಸುತ್ತಲೂ ಸುರಿದಿತ್ತು. ಸೃಷ್ಟಿದೇವಿ ನಗುತ್ತಿದ್ದಳು. ಆಗ ನನಗೊಂದು ವಿಚಾರ ಹೊಳೆಯಿತು.

"ನಾನು ಊಟಮಾಡುವುದಿಲ್ಲ." ಎಂದೆ.

"ಏಕೆ ?" ಅವಳು ಕುತೂಹಲದಿಂದ ಕೇಳಿದಳು.

"ಒಬ್ಬೊಂಟಿಗನಾಗಿ ಕುಳಿತರೆ ನನಗೆ ಊಟ ಹೋಗುವುದಿಲ್ಲ"

"ಮತ್ತಾರು ಬರಬೇಕು ನಿಮ್ಮ ಸಂಗಡ ಊಟಕ್ಕೆ ?"

"ಇಲ್ಲಿ ನಿನ್ನ ಹೊರತಾಗಿ ಮತ್ತೆ ಯಾರು ಇದ್ದಾರೆ ?"

"ಸುರುವಾಯಿತೇನೋ ನಿಮ್ಮ ಚೇಷ್ಟೆ! ಇಂದು ಯಾವ ಕಥೆ-ಕಾದಂಬರಿ ಓದಿ ಬಂದಿದ್ದೀರಿ ?"

"ಯಾವುದೂ ಓದಿಲ್ಲ. ಆ ಬೆಳುದಿಂಗಳನ್ನು ನೋಡು; ಭೂದೇವಿಯನ್ನು ನೋಡು."

"ನೂತನ ಕಾವ್ಯವೊಂದನ್ನು ಬರೆಯಲು ಪ್ರಾರಂಭಿಸಿದಂತೆ ಕಾಣುತ್ತದೆ!"

"ಹೂಂ. ಜೀವನಕಾವ್ಯ!" ಎನ್ನುತ್ತ ಬಡಿಸುತ್ತಿದ್ದ ಅವಳ ಕೈಹಿಡಿದೆನು.

"ಇದೇನು ಚೇಷ್ಟೆ? ಹೊಟ್ಟೆ ಹಸಿದಿಲ್ಲವೇನು ?" ಅವಳು ಮುನಿಸುಗೊಂಡವಳಂತೆ ಕೇಳಿದಳು.

"ಹಸಿದಿದೆ. ಆದರೆ ನೀನೂ ನನ್ನ ಜತೆಗೆ ಕುಳಿತುಕೊಂಡರೆ ಮಾತ್ರ...."

"ನಾನೊಲ್ಲೆ."

"ಏಕೆ ?"

"ದೇವರಿಗೆ ಮೊದಲು ನೈವೇದ್ಯ ಕೊಟ್ಟು ಅನಂತರ ಪ್ರಸಾದ-ವನ್ನು ತೆಗೆದುಕೊಳ್ಳುತ್ತಾರಲ್ಲವೇ ?"

"ದೇವರು ನೈವೇದ್ಯವನ್ನೇ ಸ್ವೀಕರಿಸದಿದ್ದರೆ ?"

"ಭಕ್ತರಿಗೆ ಪ್ರಸಾದವೂ ಇಲ್ಲ!"

ಅಂತೂ ನಾನು ಸೋಲುವ ಪ್ರಸಂಗ ಬಂದಿತು. ಆದರೂ ಮತ್ತೆ ಕೇಳಿದೆ: "ಒಂದು ದಿನವಾದರೂ ನೀನು ನನ್ನ ಜೊತೆಗೆ ಕುಳಿತು ಉಣ್ಣಬಾರದೇ? ಪ್ರತಿ ದಿನ ನನ್ನ ಎಂಜಲಿನ ತಾಟ-ನಲ್ಲಿಯೇ ಕುಳಿತು ಉಣ್ಣುತ್ತೀ."

"ಅದೇ ಹೆಚ್ಚು ಸರಿ."

ಕೂಡಲೇ ಮತ್ತೊಂದು ವಿಚಾರ ನನಗೆ ಹೊಳೆಯಿತು.

"ಇಬ್ಬರೂ ಒಂದೇ ತಾಟಿನಲ್ಲಿಯೇ ಉಣ್ಣುವಾ. ನನಗೆ ನೈವೇದ್ಯವೂ ಆಗುತ್ತದೆ; ನಿನಗೆ ಪ್ರಸಾದವೂ ದೊರೆಯುತ್ತದೆ."

ಈಗ ಏನು ಉತ್ತರ ಕೊಡಬೇಕೆನ್ನುವುದು ಅವಳಿಗೆ ತಿಳಿಯ-ಲಿಲ್ಲ. ಕ್ಷಣಹೊತ್ತು ವಿಚಾರಿಸಿ ಹೇಳಿದಳು: "ಹಾಗೇ ಆಗಲಿ. ನೀವು ಪ್ರಾರಂಭಿಸಿರಿ! ಅಶೋಕ ಕೆಳಗೆ ಮಲಗಿರುವನು; ಅವನಿಗೆ ಚೆನ್ನಾಗಿ ಹೊಚ್ಚಿ, ಬಾಗಿಲು ಮುಂದೆಮಾಡಿಕೊಂಡು ಬರುತ್ತೇನೆ."

"ಖಂಡಿತವಾಗಿಯೂ ?"

"ಹೂಂ. ಖಂಡಿತವಾಗಿ ಬರುತ್ತೇನೆ."

ಅವಳು ಕೆಳಗೆ ಹೋದಳು; ನಾನು ಊಟವನ್ನು ಪ್ರಾರಂಭಿಸಿದೆ. ನಾಲ್ಕು ತುತ್ತು ಉಂಡಿರಲಿಲ್ಲ.

"ಅಯ್ಯೋ ಕಳ್ಳ....ಅಶೋಕ....ಉಳಿಸಿರಿ..." ಎಂಬ ಕೂಗಾಟ ಕೇಳಿಸಿತು. ನಾನು ದಡದಡನೆ ಕೆಳಗೆ ಓಡಿದೆನು.

ಕೆಳಗಿನ ದೃಶ್ಯವನ್ನು ನೋಡಿ ನಾನು ದಂಗುಬಡೆದುಹೋದೆ. ಅಶೋಕನು ಮಲಗಿದ ಕೋಣೆಯ ಬಾಗಿಲಿನಲ್ಲಿ ಅವಳು ಮೂರ್ಛೆ ಬಂದು ಬಿದ್ದಿದ್ದಳು. ವಿದ್ಯುದ್ದೀಪ ಬೆಳಗುತ್ತಿತ್ತು. ಆಜಾನು-ಬಾಹುವಾದ ಒಂದು ವ್ಯಕ್ತಿ, ಕೈಯಲ್ಲಿ ಚೂರಿಯನ್ನು ಹಿಡಿದು-ಕೊಂಡು ಅಶೋಕನ ಹಾಸಿಗೆಯ ಹತ್ತಿರ ನಿಂತಿತ್ತು. ಇದಾವುದರ ಕಲ್ಪನೆಯಿಲ್ಲದ ಅಶೋಕ ನಿಶ್ಚಿಂತೆಯಿಂದ ನಿದ್ರಿಸುತ್ತಿದ್ದ

ಅವಳನ್ನು ಎಚ್ಚರಿಸಬೇಕೇ .... ಅಶೋಕನನ್ನು ಕರೆದು-ಕೊಂಡು ಬರಬೇಕೇ.... ಆ ಕಳ್ಳನನ್ನು ಹಿಡಿಯಬೇಕೇ.... ಜನರನ್ನು ಕೂಗಬೇಕೇ.... ಏನು ಮಾಡಬೇಕು ? ಎನ್ನುವದೇ ನನಗೆ ತಿಳಿಯಲಿಲ್ಲ, ಆಕಸ್ಮಾತ್ತಾಗಿ ಒದಗಿದ ಈ ಘಟನೆ ನನ್ನ ವಿಚಾರ ಶಕ್ತಿಯ ಮೇಲೆ ಆಘಾತವನ್ನುಂಟುಮಾಡಿತ್ತು. ನನ್ನನ್ನು ನಿಷ್ಕ್ರಿಯನನ್ನಾಗಿ ಮಾಡಿತ್ತು.

' ಬಗನ ' ಬಾಲಾಮೃತ

ಮಕ್ಕಳ ಸದೃಢತೆಗಾಗಿ 'ಬಗನ' ಬಾಲಾಮೃತ-ವನ್ನು ಉಪ-ಯೋಗಿಸಿರಿ.

ಮುಖ್ಯವಾಗಿ ಮಕ್ಕಳ ಯಕೃತು ಮತ್ತು ಹೊಟ್ಟೆ ಎಂದರೆ ಅವರ

ರೋಗದ ಭಯವಿಲ್ಲ.

ಬಗನ ಬಾಲಾಮೃತದಲ್ಲಿ ' ಗ್ರಾಯಿಪ್ ಹೀಲರಿನ ' ಅಂಶವೂ ಇರುವದರಿಂದ, ಇದು ಮಕ್ಕಳ ಉತ್ತಮ ' ಟೊನಿಕ್ಕು ' ಇರುವದು.

THE NATIONAL PHARMACIES & PHARMACEUTICALS Ltd. DHARWAR.

ಈ ನಿಶ್ಶಬ್ದತೆ-ಬಹಳ ಹೊತ್ತು ನಿಲ್ಲಲಿಲ್ಲ. ಮೈಯಲ್ಲಿ ಏನೋ ಆವೇಶ ಬಂದಂತಾಯಿತು. ಆ ವ್ಯಕ್ತಿಯ ಮೇಲೆ ಬಿದ್ದು ಅವನನ್ನು ಹಿಡಿಯಬೇಕೆಂದು, ರಭಸದಿಂದ ಕೋಣೆಯಲ್ಲಿ ಹೋದೆ. ನಾನಿನ್ನೂ ಅವನ ಹತ್ತಿರ ಹೋಗಿರಲಿಲ್ಲ. ಆ ವ್ಯಕ್ತಿ ಧೊಪ್ಪನೇ ನೆಲಕ್ಕೆ ಬಿತ್ತು. ಅವನ ಕೈಯಲ್ಲಿಯ ಚೂರಿ ಅವನಿಗೇ ನಟ್ಟು, ರಕ್ತ ಚಿಮ್ಮಲಾರಂಭಿಸಿತು.

ನನಗೆ ಆಶ್ಚರ್ಯವಾಯಿತು. ಅದರ ಕೂಡ ಧೈರ್ಯವೂ ಬಂದಿತು. ಮೊದಲು ಓಡಿಹೋಗಿ ಅಶೋಕನನ್ನು ಹೊರಗೆ ಎತ್ತಿಕೊಂಡು ಬಂದೆ. ಪೋಲಿಸ ಕಚೇರಿಗೆ ಫೋನುಮಾಡಿದೆ. ಅನಂತರ ಅವಳ ನೆತ್ತಿಗೆ ನೀರು ಬಡಿದೆ. ಆಗ ಅವಳು ಅರ್ಧ ಎಚ್ಚತ್ತಳು. ಹಾಗೇ ಅವಳನ್ನು ಎಬ್ಬಿಸಿಕೊಂಡು ಒಳಗೆ ಹೋಗಿ ಮಲಗಿಸಿದೆ.

ಇಷ್ಟಾದರೂ ನಮ್ಮ ಮನೆಯ ಕಡೆಗೆ ಯಾರೂ ಸುಳಿದಿದ್ದಿಲ್ಲ.

ನನ್ನ ಮನೆ ಊರಿಂದ ಬಹಳ ದೂರದಲ್ಲಿತ್ತು. ನಾವಿದ್ದದ್ದು ಊರಿನ ಹೊಸ ವಿಸ್ತರಣ. ಅಲ್ಲಿ ಮನೆಗಳು ಇನ್ನೂ ಬಹಳ-ವಾಗಿರಲಿಲ್ಲ. ಇದ್ದ ಮನೆಗಳೂ ಒಂದರಿಂದ ಒಂದು ದೂರ-ವಾಗಿದ್ದುವು. ಸುತ್ತಲಿನ ಸೃಷ್ಟಿಸೌಂದರ್ಯಕ್ಕೆ ಮುಗ್ಧನಾಗಿ ನಾನು, ಆ ಮನೆಯಲ್ಲಿದ್ದೆನು.

೩

ಪೋಲೀಸರ ಮೋಟರು ಮನೆಯ ಮುಂದೆ ಬಂದು ನಿಂತಿತು. ಅವರಿಗೆ ನಡೆದ ಸಂಗತಿ ತಿಳಿಸಿ, ಆ ವ್ಯಕ್ತಿ ಬಿದ್ದ ಕೋಣೆಗೆ ಕರೆದು ಕೊಂಡು ಹೋದೆನು. ಅವರು ಅವನನ್ನೊಮ್ಮೆ ಚೆನ್ನಾಗಿ ನೋಡಿದರು. ಅಂಗಾತ ಬಿದ್ದಿದ್ದ; ಅರೆಮುಗಿದ ಕಣ್ಣುಗಳನ್ನೂ ನಿಶ್ಚೇಷ್ಟಿತ ದೇಹವನ್ನೂ ನೋಡಿ, ಅವನು ಬದುಕಿರುವನೋ ಸತ್ತಿರುವನೋ ತಿಳಿಯುವಂತಿರಲಿಲ್ಲ. ಅವನ ಮುಖಮುದ್ರೆ-ಯನ್ನು ನೋಡಿ, ಅವನು ಸುಸಂಸ್ಕೃತನೋ, ಹುಚ್ಚನೋ, ಕುಡುಕನೋ ಏನೆಂಬುದನ್ನು ನಿರ್ಧರಿಸಲೂ ಬರುವಂತಿರಲಿಲ್ಲ ಅವನ ಮುಖವು ಗಡ್ಡಮೀಸೆಗಳಿಂದ ಅರ್ಧ ಮುಚ್ಚಿತ್ತು. ತಲೆ-ಗೂದಲಿಗೆ ಕೇಶವರ್ಧಿನಿಯ ಸುಗಂಧ ಸ್ನಿಗ್ಧತೆಯ ಪರಿಚಯವು ಎಂದೂ ಆದಂತೆ ಕಂಡುಬರುತ್ತಿರಲಿಲ್ಲ. ರಕ್ತದ ಮಡುವಿನಲ್ಲಿ ಆತ ಮಲಗಿದ್ದ.

ಪೋಲೀಸರು ತಪಾಸಿಸಿದರು. ಅವನ ಹತ್ತಿರ ಬೇರಾವ ವಸ್ತುಗಳೂ ದೊರೆಯಲಿಲ್ಲ.

ಅವನನ್ನು ಆಸ್ಪತ್ರೆಗೆ ಸಾಗಿಸಿದರು.

೪

ಈ ಸಂಗತಿ ನಡೆದು ಎಂಟು ದಿನಗಳಾಗಿದ್ದುವು. ನಾವು ಒಂದು ದೊಡ್ಡ ಕುತ್ತನ್ನು ದಾಟಿದಂತಾಗಿತ್ತು. ಯಾಕೆಂದರೆ ಅಂದು ಅಶೋಕನ ಹುಟ್ಟು ಹಬ್ಬವಿತ್ತು. ಮನೆಯಲ್ಲಿ ಸಂಭ್ರಮವಾಗಿತ್ತು. ಅಶೋಕನಿಗೆ ಮೈತುಂಬ ಒಡವೆಗಳನ್ನು ಇಡಿಸಿದ್ದೆವು. ಎಷ್ಟೋ ಸರಸ ಸಲ್ಲಾಪಗಳಾಗಿದ್ದುವು. ' ಬಹಳ ನಕ್ಕವನು ಅಳುತ್ತಾನೆ ' ಎಂಬಂತೆ ಎಲ್ಲಿ ಆಗುವುದೋ ಎಂದು ಒಮ್ಮೊಮ್ಮೆ ನನಗೆ ಅಂದು ಎನಿಸುತ್ತಿತ್ತು. ಅದರಂತೆಯೇ ಈ ರಗಳೆ-ಯಾಯಿತು. ಆದರೂ ದೇವರ ಕೃಪೆಯಿಂದ ಎಲ್ಲವೂ ಸುರಕ್ಷಿತವಾಗಿ ಮುಗಿದು ಹೋಗಿತ್ತು. ಅವಳು ದೇವರಿಗೆ ಕೃತಜ್ಞಳಾಗಿ ಒಂದು ಸತ್ಯನಾರಾಯಣವನ್ನೂ ಮಾಡಿಸಿದಳು.

ಆ ಕಳ್ಳನು ಆಸ್ಪತ್ರೆಯಲ್ಲಿದ್ದ. ಗುಣಹೊಂದುತ್ತಲಿದ್ದ. ತಾವು ಬಹಳ ದಿನಗಳಿಂದ ಹುಡುಕುತ್ತಿದ್ದ ವ್ಯಕ್ತಿ ಅವನೇ ಎಂದು ಪೋಲೀಸರಿಗೆ ಬಹಳ ಆನಂದವಾಗಿತ್ತು. ಅವನನ್ನು ಹಿಡಿದು-ಕೊಟ್ಟದ್ದಕ್ಕಾಗಿ ಅವರು ನನ್ನನ್ನು ಬಹಳ ಆದರಿಸಲಾರಂಭಿಸಿದ್ದರು. ಹೊಗಳಲಾರಂಭಿಸಿದ್ದರು. ಅವರಿಗೆ ಬಹಳ ದಿನಗಳಿಂದ ಆ ಕಳ್ಳ ಇಂಗು ಹಚ್ಚಿದ್ದಾನಂತೆ. ಇಂಥವನು ನನ್ನ ಕೈಯಲ್ಲಿ ಸಿಕ್ಕಿದ್ದ.

ಆದರೆ ನನಗೆ ಇದಾವುದರ ಕಡೆಗೂ ನನ್ನ ಲಕ್ಷ್ಯವಿರಲಿಲ್ಲ. ಅವನನ್ನು ನಾನು ಹಿಡಿದಿರಲೇ ಇಲ್ಲ. ಹಿಡಿಯಬೇಕೆಂದರೂ ಅದು ಸಾಧ್ಯವಾಗುತ್ತಿರಲಿಲ್ಲ. ನಾನು ನಿರಾಯುಧನಾಗಿದ್ದೆ. ಅಲ್ಲದೇ ಒಬ್ಬನೇ ಇದ್ದೆ. ಗಾಬರಿಯಾಗಿದ್ದೆ. ಮತ್ತು ನಾನು ಅವನಷ್ಟು ಬಲಿಷ್ಠನೂ ಆಗಿರಲಿಲ್ಲ. ಅವನು ಸಹಜವಾಗಿ ನನ್ನನ್ನು ಹೊಡೆದು ಪಾರಾಗಬಹುದಿತ್ತು. ಆದರೆ ಹಾಗೆ ಮಾಡದೆ ಅವನು

ಕೆಳಗೆ ಬಿದ್ದನೇಕೆ ? ನಾನು ಬರುವವರೆಗೂ ಅವನು ಏಕೆ ಓಡಿ ಹೋಗಿದ್ದಿಲ್ಲ! ಈ ಪ್ರಶ್ನೆಗಳು ನನ್ನನ್ನು ಬಹಳ ವಿಚಾರಕ್ಕೆ ಈಡುಮಾಡಿದುವು. ಇದರ ಗೂಢವನ್ನು ಅರಿಯಲು ನಾನು ಪ್ರಯತ್ನಿಸಲಾರಂಭಿಸಿದೆ. ಇದರ ಹಿಂದೆ ಏನೋ ಒಂದು ಸಂಗತಿ ಅಡಗಿರಲೇಬೇಕೆಂದು ದೃಢವಾದ ನಂಬುಗೆಯಾಯಿತು ನನಗೆ.

ಅವನ ಭೆಟ್ಟಿಗಾಗಿ ಆಸ್ಪತ್ರೆಗೆ ಹೋಗಿ ಬರಲಾರಂಭಿಸಿದೆನು. ಮೊದಮೊದಲು ಅವನು ನನ್ನ ಕೂಡ ಸರಿಯಾಗಿ ಮಾತನಾಡಲಿಲ್ಲ. ಒಂದೆರಡು ಸಾರೆ ಅಶೋಕನನ್ನು ಕರೆದುಕೊಂಡು ಹೋಗಿದ್ದೆ. ಆಗ ಮಾತ್ರ ಅವನು ಬಹಳೇ ಒಳ್ಳೆಯ ಗೃಹಸ್ಥನಂತೆ ನನ್ನ ಕೂಡ ನಡೆದುಕೊಂಡ. ಅವನು ಮೊದಮೊದಲು ಅಶೋಕನನ್ನು ದೂರದಿಂದಲೇ ಮಾತನಾಡಿಸಿದ. ಒಂದು ದಿನ ಅವನನ್ನು ಎತ್ತಿಕೊಳ್ಳಲು ಕೈ ಮುಂದೆ ಮಾಡಿದಾಗ, ನಾನು ಅಶೋಕನನ್ನು ಅವನ ಕೈಯಲ್ಲಿ ಕೊಡಲಿಲ್ಲ. ಕೂಡಲೆ ಅವನು ಮುಗುಳುನಗೆ ನಕ್ಕು ನುಡಿದ.

"ಓಹೋ, ನಾನು ಕೊಲೆಗಡಕನಲ್ಲವೇ ? ಕಳ್ಳನಲ್ಲವೇ ? ನನ್ನ ಕೈಯಲ್ಲಿ ನಿರ್ಭಯದಿಂದ ತಮ್ಮ ಮಕ್ಕಳನ್ನು ಕೊಡಲು ಯಾವ ತಾಯಿ-ತಂದೆಗಳು ಮುಂದಾಗಬಹುದು!"

ಈ ಮಾತುಗಳನ್ನು ಕೇಳಿ ನನಗೆ ಇರಿದಂತೆ ಆಯಿತು. ನಾನು ಅಶೋಕನನ್ನು ಅವನ ಕೈಯಲ್ಲಿ ಕೊಟ್ಟೆ. ಅವನು ಒಬ್ಬ ಅಂತಃಕರಣಿಯಾದ ತಂದೆಯಂತೆ ನಡೆದುಕೊಂಡ. ಅಶೋಕನನ್ನು ಮುದ್ದಿಸಿದ. ನಗಿಸಿದ. ಅವನ ಕೂಡ ಸಣ್ಣ ಮಕ್ಕಳಂತೆ ಆಡಿದ. ನಾನು ಅವನನ್ನು ಬೀಳ್ಕೊಂಡು ಬರುವಾಗ, ಅವನು ಏನನ್ನೋ ಆಲೋಚಿಸುತ್ತಿದ್ದ. ಮುಖವು ಸಣ್ಣದಾಗಿತ್ತು. ನಾನು ಇನ್ನೂ ಅವನ ಕೋಣೆಯಿಂದ ಹೊರಗೆ ಬಂದಿರಲಿಲ್ಲ. ನನ್ನನ್ನು ಅವನು ಕರೆದ. ನಾನು ಮರಳಿ ಅವನ ಬಳಿಗೆ ಹೋದೆ. ಅವನು ಸ್ವಲ್ಪ ತಡೆದು ನುಡಿದ.

"ನನ್ನದೊಂದು ಮಾತು ಕೇಳುತ್ತೀರಾ ?"

"ಏನು ?"

"ನಾಳೆಯೂ ಅಶೋಕನನ್ನು ಕರೆದುಕೊಂಡು ಬರುತ್ತೀರಾ ?"

"ಹೂಂ !"

"ಸ್ವಲ್ಪ ಬೇಗ ಬರಬೇಕು !"

"ಏಕೆ ?"

"ನಾಳೆ ನನ್ನನ್ನು ಇಲ್ಲಿಂದ ಬಹಳ ದೂರ ಕರೆದುಕೊಂಡು ಹೋಗುತ್ತಾರೆ. ಅಲ್ಲಿ ನನ್ನ ಅಪರಾಧಗಳ ಬಗ್ಗೆ ವಿಚಾರಣೆಯಾಗಲಿದೆ. ಇಲ್ಲಿಂದ ಹೋದಮೇಲೆ ನಾನು ಮರಳಿ ಇಲ್ಲಿಗೆ ಬರಲಾರೆ. ಹೋಗುವಾಗ ಅಶೋಕನನ್ನೊಮ್ಮೆ ನೋಡಬೇಕೆಂದು ಆಶೆ. ಅದೃಷ್ಟ ನಡೆಯಿಸಿಕೊಡುವಿರಾ ?" ಅವನ ದನಿಯಲ್ಲಿ ಕಾತರತೆಯಿತ್ತು. ಕಣ್ಣುಗಳಲ್ಲಿ ದೈನ್ಯವಿತ್ತು. ನಾನು ಆಶ್ವಾಸನ ಕೊಟ್ಟು ಮರಳಿದೆ.

ಮರುದಿನ ಸರೂ "ಆ ಕೊಲೆಗಡಕನನ್ನು ನೋಡಲು ನಾನೇನೂ ಬರಲಾರೆ. ಅವನ ಮೋರೆಗೆ ಬೆಂಕೀ ಹಚ್ಚಲಿ" ಎಂದು ಕೋಪಿಸಿ-

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ.ವಿ. ಪಂಡಿತ

ಮನೋಹರ {ನೀಲಿ} ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ {ಜೀವಿನಿ} ಟಾನಿಕ್.

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ ; ಮತ್ತು ಔಷಧಸಾಧ್ಯಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ {ಶಂಖವಟಿ} ರಾಮಬಾಣ.

ಸದ್ವೈದ್ಯ ಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರ್ಖಾನೆ.

ಕೊಂಡು ನುಡಿದಳು. "ಅವನು ಇನ್ನು ಎಂದೂ ತಿರುಗಿ ಬಾರದ ಸ್ಥಳಕ್ಕೆ ಹೋಗುತ್ತಾನೆ. ಒಮ್ಮೆ ಅವನು ಹೇಗಿರುವನೋ ನೋಡಿಕೊಂಡು ಬರೋಣ" ಎಂದು ಸರೂನನ್ನೂ ನನ್ನ ಸಂಗಡ ಬರಲು ಒಪ್ಪಿಸಿದೆನು.

ನಾವಿಬ್ಬರೂ ಅಶೋಕನನ್ನು ಅಲ್ಲಿಗೆ ಕರೆದುಕೊಂಡು ಹೋದಾಗ, ಪೋಲೀಸರ ಮೋಟಾರು ಬಂದು ನಿಂತಿತ್ತು. ಅವನು ಅದರಲ್ಲಿ ಹತ್ತುವುದರಲ್ಲಿದ್ದನು. ನಾವು ಬರುವುದನ್ನು ನೋಡಿ ತಡೆದು ನಿಂತನು. ಸರೂ "ಇದೇನು ?" ಎಂದು ಎನ್ನುತ್ತಿರುವಾಗಲೇ, ನಾನು ಅಶೋಕನನ್ನು ಅವನ ಕೈಯಲ್ಲಿ ಕೊಟ್ಟೆ. ಅವನು ಅಶೋಕನ ಮೇಲೆ ಮುದ್ದಿನ ಮಳೆಗರೆದ; ಅಶೋಕನೂ ಕಿಲಕಿಲನೆ ನಕ್ಕ.

ಪೋಲೀಸರು "ಹೂಂ. ನಡೆ!" ಎಂದರು. ಅಶೋಕ ನನ್ನ ಕಡೆ ಬಂದ. ಅವನು ನಮ್ಮ ಕಡೆಗೆ ಹೊರಳಿ ನೋಡಿ ನಮ್ಮಿಬ್ಬರಿಗೂ ವಂದಿಸಿದ.

ಮೋಟರಿನ ಯಂತ್ರವು ಸಪ್ಪಳ ಮಾಡಲಾರಂಭಿಸಿತು. ಅದು ಮರೆಯಾಗುವವರೆಗೂ ನಾವು ಅದನ್ನೇ ನಿಟ್ಟಿಸುತ್ತಿದ್ದೆವು.

ಕಾಲಚಕ್ರ ತಿರುಗುತ್ತಿತ್ತು. ಅದರ ಸುಳಿಯಲ್ಲಿ ಸಿಕ್ಕು ಅವನ ನೆನಪೂ ಎಲ್ಲಿಯೋ ಮರೆಯಾಗಿ ಹೋಯಿತು.

ಕುಟಜಾರಿಷ್ಟ

ಆಮಾಂಶ-ಸಂಗ್ರಹಣಿಗಳಿಗೆ.

●

ಕಾಸಶ್ವಾಸಾರಿ

ದಮ್ಮು-ಕೆಮ್ಮುಗಳಿಗೆ.

ಎಲ್ಲ ಬಗೆಯ ಆಯುರ್ವೇದ ಔಷಧಗಳಿಗಾಗಿ ಬರೆಯಿರಿ :

卐

ದಿ ನೂತನ ಆಯುರ್ವೇದ ಕಾರ್ಯಾಲಯ ಲಿ.

ವಿಜಾಪುರ.

ಇಂದು ಅಶೋಕನ ಹುಟ್ಟುಹಬ್ಬ. ಮನೆಯಲ್ಲಿ ಸಂಭ್ರಮ ನಡೆದಿದೆ. ಪಕ್ವಾನ್ನಗಳು ಸಿದ್ಧವಾಗಿವೆ. ನಾನೂ ಆನಂದದಲ್ಲಿದ್ದೆ.

ಮಧ್ಯಾಹ್ನದಲ್ಲಿ ಊಟಕ್ಕೆ ಅಡುಗೆಯ ಮನೆಗೆ ಬಂದಾಗ, ಸರೂ ದೇವರ ಮುಂದೆ ಕೈಮುಗಿದು ಕುಳಿತು ಏನನ್ನೋ ಬೇಡಿಕೊಳ್ಳಲಾರಂಭಿಸಿದಳು; ಅದು ಮುಗಿಯುವ ವರೆಗೂ ನಾನು ಸುಮ್ಮನೆ ನಿಂತಿದ್ದು ಅನಂತರ ಕೇಳಿದೆ. "ಏನು ಬೇಡಿಕೊಂಡೆ ದೇವರಲ್ಲಿ ?" ಅವಳು ನಸುನಗೆ ಬೀರಿ ಹೇಳಿದಳು : "ಹೋದ ಸಾರಿ ಇದೇ ದಿನ ಎಂಥ ಸಂಕಟ ಬಂದುಹೋಯಿತು. ಆತನ ದಯೆಯಿಂದಲೇ ನಾವು ಪಾರಾದೆವು. ಇಂದಾದರೂ ಯಾವ ಆಪತ್ತುಗಳೂ ಬಾರದಂತೆ ನಮ್ಮನ್ನು ಕಾಪಾಡಬೇಕೆಂದು ಬೇಡಿಕೊಂಡೆ."

"ಅದಕ್ಕೆ ದೇವರು ಏನು ಹೇಳಿದ ?"

"ಸಾಕು ನಿಮ್ಮ ಚೇಷ್ಟೆ. ದೇವರನ್ನು ಹಾಗೆ ತುಚ್ಛಮಾಡಿ ನುಡಿಯಬೇಡಿರಿ." ಅವಳು ನೊಂದುಕೊಂಡು ನುಡಿದಳು. ಹಬ್ಬದದಿನ ಅವಳ ಮನಸ್ಸನ್ನು ನೋಯಿಸುವ ಇಚ್ಛೆ ನನಗಿರಲಿಲ್ಲ. ಆದ್ದರಿಂದ ಅದನ್ನೇ ನಾನು ಸರಸದಲ್ಲಿ ಪರಿವರ್ತಿಸಿದೆ. ಆಗ ಮಿಷ್ಟಾನ್ನ ಭೋಜನದ ಕೂಡ ಮಾತಿನ ರಸದೂಟವೂ ಆಯಿತು.

ತಾಂಬೂಲವನ್ನು ಮೆದ್ದು ಸ್ವಲ್ಪ ವಾಮಕುಕ್ಷಿಯಾಗಬೇಕೆಂದು ವಿಚಾರಿಸುತ್ತಿರುವಾಗ, ಅಂಚೆಯಾಳು ಬಂದು ಒಂದು ಪಾರ್ಸಲ್ ಕೊಟ್ಟು ಹೋದ. ಅದು ರಜಿಸ್ಟರ್ಡ್ ಪಾರ್ಸಲ್ ಆಗಿತ್ತು. ಮರು ಪಾವತಿ ಇಟ್ಟಿತ್ತು. ಕಳಿಸಿದವರ ವಿಳಾಸ ನೋಡಿದೆ. ಜಿಲ್ಲೆಯ ಪೋಲೀಸ್ ವರಿಷ್ಠಾಧಿಕಾರಿಗಳಿಂದ ಬಂದಿತ್ತು. ನಾನು ಕುತೂಹಲದಿಂದ ಅದನ್ನು ಒಡೆದು ನೋಡಿದೆ. ಒಳಗೆ ಬಹಳ ಬೆಲೆಯುಳ್ಳ ಒಂದು ಕಾಶ್ಮೀರದ ಶಾಲು. ನೋಡಲೂ ಬಲು ಅಂದವಾಗಿತ್ತು. ಅದಕ್ಕೆ ಒಂದು ಸಣ್ಣ ಚೀಟಿಯನ್ನು ಅಂಟಿಸಿದ್ದರು. ಅದರ ಮೇಲೆ 'ಕೈದಿಯ ಕೊನೆಯ ಇಚ್ಛೆಯಂತೆ ಕಳುಹಿಸಲ್ಪಟ್ಟದ್ದು' ಎಂದು ಅಧಿಕಾರಿಗಳು ಬರೆದಿದ್ದರು.

"ಸರೂ, ಸರೂ" ನಾನು ಕೂಗಿದೆ!

ಊಟ ಮಾಡಿ ಕೈ ತೊಳೆಯುತ್ತಿದ್ದ ಸರೂ— ಸರಸ್ವತಿ— ಓಡಿ ಬಂದಳು. ಆ ಶಾಲನ್ನು ಅವಳಿಗೆ ತೋರಿಸಿದೆ.

"ಯಾರು ಕಳಿಸಿರುವರು ? ಎಷ್ಟು ಚೆಂದವಾಗಿದೆ !" ಅವಳು ಕೇಳಿದಳು.

"ಒಬ್ಬ ಕೈದಿ !"

"ಹಾಂ !"

"ಹೂಂ !"

ಅವಳು ಅದನ್ನು ಚೆಲ್ಲಿ ಒಳಗೆ ಹೋದಳು. ನಾನು ಸುಳ್ಳು ಹೇಳುತ್ತಿರುವೆನೆಂದೂ ಚೇಷ್ಟೆ ಮಾಡುತ್ತಿರುವೆನೆಂದೂ ಅವಳ ಭಾವನೆಯಾಗಿತ್ತು.

ಆ ಶಾಲನ್ನು ಎತ್ತಿಕೊಂಡೆ. ಆಗ ಒಂದು ಕಾಗದ ಕಂಡಿತು. ಅದು ಶಾಲಿನಲ್ಲಿ ಇಡಲ್ಪಟ್ಟಿರಬೇಕು. ಸರೂ ಅದನ್ನು ಚೆಲ್ಲಿದಾಗ ಕೆಳಗೆ ಬಿದ್ದಿರಬೇಕು. ಅದನ್ನು ನಾನು ಬಿಚ್ಚಿ ಓದಲಾರಂಭಿಸಿದೆ. ಸರಳವಾದ ಹಿಂದಿಯಲ್ಲಿ ಬರೆಯಲ್ಪಟ್ಟಿತ್ತು.

"ನನ್ನ ಈ ಕಾಣಿಕೆ ತಲ್ಪಿದಂದು, ಬಹುತರ ಅಶೋಕನ ಹುಟ್ಟುಹಬ್ಬವಿರಬಹುದು ಅಲ್ಲವೇ ? ಹೋದ ವರುಷದ ಆ ದಿನದ ಘಟನೆ ಮರೆತಿರಲಿಕ್ಕಿಲ್ಲ. ಅಂದಿನ ಆ ಕಳ್ಳ ?.... ಅವನನ್ನೂ ಮರೆತಿರಲಿಕ್ಕಿಲ್ಲ.

"ಅಂದಿನ ಆ ಕಳ್ಳನೇ ಎಂದರೆ ನಾನೇ, ಅನೂಪ— ಈ ಪತ್ರ ಬರೆಯುತ್ತಿದ್ದೇನೆ. ಇದು ನನ್ನ ಕೊನೆಯ ಪತ್ರ. ನನಗೆ ದೇಹಾಂತ ಶಿಕ್ಷೆಯಾಗಿದೆ. ಇನ್ನು ಹನ್ನೆರಡು ತಾಸಿನಲ್ಲಿ ನನ್ನ ಇಹಲೋಕಯಾತ್ರೆ ಮುಗಿಯುತ್ತದೆ.

ಅಶೋಕನ ಹುಟ್ಟುಹಬ್ಬಕ್ಕೆ ಮುಟ್ಟುವಂತೆ ನಾನು ಒಂದು ಶಾಲನ್ನು ಕಳಿಸುತ್ತಿದ್ದೇನೆ. ಇದನ್ನೇಕೆ ಕಳಿಸುತ್ತಿದ್ದೇನೆ ಎಂದು ನಿಮಗೆ ಆಶ್ಚರ್ಯವೆನಿಸಬಹುದು. 'ಅಲ್ಲವೇ ? ಅಂದು ನಾನು ಓಡಿಹೋಗದೆ ಧೊಪ್ಪನೆ ಕೆಳಗೆ ಏಕೆ ಬಿದ್ದೆ ಎಂಬುದು ನಿಮಗೆ ತಿಳಿದಿರಲಿಕ್ಕಿಲ್ಲ.

ಅದೆಲ್ಲವನ್ನು ಈಗ ತಿಳಿಸಿ ಹೋಗಬೇಕೆಂದು ಬಯಸಿದ್ದೇನೆ. ಇಲ್ಲದಿದ್ದರೆ ಯಾವನೋ ಒಬ್ಬ ಅಪರಾಧಿ ಕಳಿಸಿದ ಕಾಣಿಕೆ ಎಂದು ಇದನ್ನು ನೀವು ಸ್ವೀಕರಿಸದೆ ಇರಬಹುದು. ಈಗ ನಾನು ಅಪರಾಧಿ ಹೌದು. ಅಷ್ಟೇ ಏಕೆ, ನಾನು ಮನುಷ್ಯನೇ ಅಲ್ಲವೆಂದೂ ಬೇಕಾದರೆ ಹೇಳಬಹುದು. ನನ್ನಲ್ಲಿದ್ದ ಮಾನವತೆ ಎಂದೋ ಹೋಯಿತು. ಎಂದರೆ ಎಂದು ಧರ್ಮ ಮತ್ತು ದೇವರ ಹೆಸರಿನಿಂದ ಕಗ್ಗೊಲೆ-ಅತ್ಯಾಚಾರಗಳು ನಮ್ಮಲ್ಲಿ ನಡೆದುವೊ, ಎಂದು ನಮ್ಮ ದೇಶ ಇಬ್ಭಾಗವಾಯಿತೋ-ಅಂದು.

ಹೌದು ಅದಕ್ಕೂ ಮೊದಲು ನಾನು ಮಾನವನಾಗಿದ್ದೆ. ಆ ನನ್ನ ಪಾಲಿನ ದೇವತೆ– ಅವಳೇ ನನ್ನನ್ನು ಮಾನವನನ್ನಾಗಿ ಮಾಡಿದ್ದಳು. ಅವಳ ದರ್ಶನವಾಗುವ ಮೊದಲು ನಾನೊಬ್ಬ ಕಾಲೇಜಿನ ವಿದ್ಯಾರ್ಥಿಯಾಗಿದ್ದೆ. ಲಾಹೋರಿನಲ್ಲಿ ನನ್ನ ತಂದೆ ಉಣ್ಣೆಯ ಮತ್ತು ಶಾಲುಗಳ ಪ್ರಸಿದ್ಧ ವ್ಯಾಪಾರಿಯಾಗಿದ್ದ. ಕಾಶ್ಮೀರದಿಂದ ಉಣ್ಣೆ ತರಿಸಿ ಶಾಲು ಮಾಡಿಸಿ ಮಾರುತ್ತಿದ್ದ. ನಾನು ಶ್ರೀಮಂತ ತಂದೆಯ ಏಕಮಾತ್ರ ಪುತ್ರನಾಗಿದ್ದೆ. ಜೀವನವೆಂದರೆ ಬರೀ ವಿಲಾಸೋಪಭೋಗಗಳಿಂದೇ ನನ್ನ ತಿಳುವಳಿಕೆಯಿತ್ತು. ಅದೇ ವಾತಾವರಣದಲ್ಲಿಯೇ ನಾನು ಬೆಳೆದಿದ್ದೆ.

ನಾನು ಕಾಲೇಜಿನ ಕಟ್ಟೆಯೇರುತ್ತಲೇ ನನ್ನ ವಿಲಾಸಜೀವನಕ್ಕೆ ಕಳೆಯೇರಿತು. ನಾನು ಕಾಲೇಜಿನಲ್ಲಿದ್ದಾಗಲೇ ೧೯೪೭ ರ ಕ್ರಾಂತಿ ನಮ್ಮ ದೇಶವನ್ನು ಆವರಿಸಿತು. ನನಗೆ ಮಾತ್ರ ಯುದ್ಧದ ಬೇಗೆ ತಾಗಲಿಲ್ಲ. ಕ್ರಾಂತಿಯ ಕಿಡಿ ಸಿಡಿಯಲಿಲ್ಲ. ನನ್ನ ವೇಳೆ ಸಿನೆಮಾ ತಾರೆಗಳ ಸುದ್ದಿಗಳನ್ನು ಓದುವುದರಲ್ಲಿ, ಅವರ ಅನುಕರಣ ಮಾಡುವುದರಲ್ಲಿ ಹೋಗುತ್ತಿತ್ತು. ನಮ್ಮ ಕಾಲೇಜಿನ ತಾರೆಯರನ್ನೂ ನಾನು ಮರೆತಿರಲಿಲ್ಲ. ಅವರ ಪ್ರೇಮಕಟಾಕ್ಷಕ್ಕಾಗಿ ಸದಾ ಹಾತೊರೆಯುತ್ತಿದ್ದೆ. ನಾನು ಒಬ್ಬ ಚಲಚ್ಚಿತ್ರ ನಟನಾಗಬೇಕು. ನನ್ನ ಚಿತ್ರವನ್ನು ನೋಡಿದ ತರುಣಿಯರೆಲ್ಲ ಮುಗ್ಧರಾಗಿ ನನಗೆ ಪ್ರಣಯಪತ್ರಗಳನ್ನು ಬರೆಯುತ್ತಿರಬೇಕು— ಎಂಬುದೇ ನನ್ನ ಜೀವನದ ಮಹತ್ವಾಕಾಂಕ್ಷೆಯಾಗಿತ್ತು.

ಹೀಗಿರುವಾಗ ಒಮ್ಮೆ ಕಾಶ್ಮೀರ ಪ್ರವಾಸಕ್ಕೆ ಹೋಗಿದ್ದೆ. ಅಲ್ಲಿಯ ಸೌಂದರ್ಯವನ್ನು ಸೂರೆಗೊಳ್ಳುವುದೇ ನನ್ನ ಉದ್ದೇಶವಾಗಿತ್ತು. ನಾನು ಪ್ರವಾಸದಲ್ಲಿದ್ದಾಗ, ಒಬ್ಬ ಹಳ್ಳಿಯ ಹುಡುಗಿ ನನ್ನನ್ನು ಮುಗ್ಧನನ್ನಾಗಿ ಮಾಡಿದಳು.

ಅಂತಹ ಸೌಂದರ್ಯರಾಶಿಯನ್ನು ನಾನೆಲ್ಲೂ ಎಂದೂ ನೋಡಿರಲಿಲ್ಲ. ನಮ್ಮ ಸಿನೆಮಾ ತಾರೆಯರೆಲ್ಲ ಅವಳ ಮುಂದೆ ಏನೂ ಅಲ್ಲ. ನಾನು ಅವಳಿಗೆ ಮನಸೋತು, ಅವಳ ಪ್ರಣಯಿಯಾದೆನು. ಅವಳು ನನ್ನ ಬಲೆಗೆ ಬೀಳಲಿಲ್ಲ. ಕಾಲೇಜಿನಲ್ಲಿ ಕಲಿತ ವಿದ್ಯಾವತಿಯರು ನನ್ನ ಪ್ರಣಯವನ್ನು ಎಡೆಬಿಡದೆಯೂ ಬಯಸುವಾಗ, ಈ ಹಳ್ಳಿಯ ಹುಡುಗಿ ನನ್ನನ್ನು ತುಚ್ಛಮಾಡಿದ್ದು ನೋಡಿ, ನನ್ನ ಮೋಹ ಇಮ್ಮಡಿಸಿತು. ನಾನು ಅವಳಿಗೆ ಬಗೆಬಗೆಯ ಆಮಿಷ ತೋರಿಸಿದೆ. ಐಶ್ವರ್ಯದ ರಾಣಿಯನ್ನಾಗಿ ಮಾಡುವೆನೆಂದು ಹೇಳಿದೆ. ಅವಳು ಅದಕ್ಕೆ ಏನು ಹೇಳಿದಳು ಗೊತ್ತೆ ? “ ನೀವು ಪಟ್ಟಣದ ಜನ.... ಕಲಿತವರು ! ನಂಬಿಗೆಗೆ ಯೋಗ್ಯರಲ್ಲ. ಏನಾದರೂ ಹೇಳಿ ಮೋಸ ಮಾಡಿ ನಾಲ್ಕು ದಿನ ವಿಲಾಸದಲ್ಲಿ ಕಾಲಕಳೆದು, ನಮ್ಮ ಶೀಲವನ್ನು ಸೂರೆಗೊಂಡು ಹಾರಿಹೋಗಿಬಿಡುವಿರಿ. ಇಂತಹ ಸಂಗತಿಗಳು ಇಲ್ಲಿ ಎಷ್ಟೋ ನಡೆದದ್ದು ನನಗೆ ಗೊತ್ತಿದೆ. ”

ಆದರೆ ಅವಳಿಲ್ಲದೇ ನಾನು ಬಾಳುವಂತಿರಲಿಲ್ಲ. ಅವಳಿಲ್ಲದ ಜೀವನವು ವ್ಯರ್ಥವೆನಿಸಿತು. ಅವಳಿಗಾಗಿ ಬೇಕಾದ ತ್ಯಾಗಮಾಡಲು ಸಿದ್ಧನಾದೆನು. ನನ್ನ ನಿಶ್ಚಲ ಪ್ರಣಯವನ್ನು ಕಂಡು ಅವಳೂ ಮುಗ್ಧಳಾದಳು. ಅವಳ ತಾಯಿತಂದೆಗಳನ್ನು ಒಪ್ಪಿಸಿ, ಅವಳನ್ನು ಮದುವೆಮಾಡಿಕೊಂಡು, ಲಾಹೋರಿಗೆ ಬಂದೆನು.

ಲಾಹೋರಿನಲ್ಲಿ ನನಗೊಂದು ಆಘಾತ ಕಾದಿತ್ತು. ನಮ್ಮ ಉಣ್ಣೆಯೆಲ್ಲ ಅಗ್ನಿನಾರಾಯಣನಿಗೆ ಆಹುತಿಯಾಗಿತ್ತು. ತಂದೆ ಎದೆಯೊಡೆದುಕೊಂಡು ಸ್ವರ್ಗಸ್ಥನಾಗಿದ್ದ. ನನಗೆ ಏನೂ ತಿಳಿಯದಂತಾಯಿತು, ಹುಚ್ಚನಂತಾದೆ. ಕಡೆತನಕ ಹುಚ್ಚನೇ ಆಗುತ್ತಿದ್ದೆನು. ಆದರೆ ಅವಳು....ಹೌದು ಅವಳು ನನ್ನ ದೇವತೆ....ಅವಳೇ ನನ್ನನ್ನು ಮನುಷ್ಯನನ್ನಾಗಿ ಮಾಡಿದಳು. ಜೀವನವನ್ನು ಧೈರ್ಯದಿಂದ ಹೇಗೆ ಎದುರಿಸಬೇಕೆಂಬುದನ್ನು ಕಲಿಸಿದಳು. ಕಾಲೇಜಿನಲ್ಲಿದ್ದಾಗ ಜೀವನವನ್ನು ಎದುರಿಸುವ ಯಾವ ಸಿದ್ಧತೆಯನ್ನೂ ಮಾಡಿಕೊಂಡಿರಲಿಲ್ಲ. ಅಲ್ಲಿ ಆತರದ ಶಿಕ್ಷಣವೂ ದೊರೆಯುವುದಿಲ್ಲ.

ಆನಂದ ಗ್ರಂಥಮಾಲಾ, ಹುಬ್ಬಳ್ಳಿ.

ಎರಡನೆಯ ವರುಷದ ಪುಸ್ತಕಗಳು :

೧. ಕಾಂತಂ ಮತ್ತು ಶರದ್ರಾತ್ರಿಗಳು : (ಹಾಸ್ಯಮಯ ಶೃಂಗಾರ ಚಿತ್ರಗಳು)

ಸಾದಾ ಪ್ರತಿಗೆ ೧-೮-೦, ಉತ್ತಮ ಪ್ರತಿಗೆ ೨-೦-೦

೨. ಇವತ್ : (ಮೋಪಾಸಾನ ಶೃಂಗಾರ ರಸಪ್ರಧಾನ ಕಾದಂಬರಿ)

ಸಾದಾ ಪ್ರತಿಗೆ ೧-೧೨-೦, ಉತ್ತಮ ಪ್ರತಿಗೆ ೨-೮-೦

ಮುಂದೆ ಬರಲಿರುವ ಪ್ರಕಟನೆಗಳು :

೩. ಸೈಮನನ ತಂದೆ : (ಸ. ಕತೆಗಳು) ಇಲ್ಲವೆ ಪೂರ್ಣಿಮಾ : (ಸಂಸಾರಚಿತ್ರಗಳು-ಪತ್ರರೂಪದಲ್ಲಿ)

೪. ಸುವರ್ಣದೀಪ : (ಅ. ನ. ಕೃ. ಇವರ ಕಾದಂಬರಿ)

ವಾರ್ಷಿಕ ಚಂದಾ (ಸಾದಾ ಪ್ರತಿಗಳಿಗೆ) ೫-೦-೦

,, (ಶಾಲೆ-ಕಾಲೇಜುಗಳಿಗೆ ವಾಚನಾಲಯಗಳಿಗೆ ಉತ್ತಮ ಪ್ರತಿಗೆ) ೬-೮-೦

ಏಜಂಟರು ಬೇಕು. ಧಾರಾಳವಾದ ಕಮಿಷನ್ನು !

ಸಂಪಾದಕರು :

ಶ್ರೀ. ಪಿ. ವೆಂಕೋಬಾಚಾರ್ಯ, ಬಿ.ಎ.,ಬಿ.ಟಿ.
ಗವಳಿಗಲ್ಲಿ— ಹುಬ್ಬಳ್ಳಿ.

ಸಂಗೀತಾಭ್ಯಾಸಿಗಳಿಗೆ ಸವಿಯೂಟ !

ಹಾರ್ಮೋನಿಯಂ ಕಲಿಯಬಯಸುವವರಿಗೆ ದಾರಿದೀಪ !

ಸಂಗೀತಾಚಾರ್ಯ

ಹಿಂದುಸ್ತಾನೀ ಹಾಗೂ ಕರ್ನಾಟಕ ಪದ್ಧತಿಯ ೩೦ ರಾಗಗಳಿಂದ ಒಡಗೂಡಿದೆ. **ಬೆಲೆ : ೧-೪-೦**

ಸಚಿತ್ರ ಹೊಲಿಗೆಯ ಶಿಕ್ಷಣ

ಪ್ರತಿಯೊಂದು ಮನೆಯಲ್ಲಿ ಅವಶ್ಯ ಸಂಗ್ರಹಿಸಬೇಕಾದುದು. ಇದರಲ್ಲಿ ಸ್ತ್ರೀಯರ ಉಡುಪುಗಳನ್ನು ಹೇಗೆ ಮಿತವ್ಯಯದಿಂದ ಕತ್ತರಿಸಬೇಕು, ಹೇಗೆ ಹೊಲಿಯಬೇಕೆಂಬುದನ್ನು ಆಕೃತಿಗಳಿಂದ ವರ್ಣಿಸಲಾಗಿದೆ. **ಬೆಲೆ : ೨-೦-೦**

ದೊರೆಯುವ ಸ್ಥಳ :

ರಾಮಾಶ್ರಯ ಬುಕ್ ಡಿಪೊ,

ಮಾರ್ಕೆಟ್, ಧಾರವಾಡ

ಕಾಲೇಜಿನಲ್ಲಿದ್ದಾಗ ಜೀವನನೆಂದರೆ ವಿಲಾಸವೈಭವಗಳ ಹೊಣೆಗೆಟ್ಟ ಉಪಭೋಗವೆಂದೇ ನನ್ನ ಕಲ್ಪನೆಯಾಗಿತ್ತು. ಈ ನನ್ನ ಕಲ್ಪನೆಯನ್ನು ಬದಲಿಸಿ ಜೀವನದ ಹೊಣೆಗಾರಿಕೆಯ ಅರಿವನ್ನು ಮಾಡಿಕೊಡುವ ಒಂದು ಸಂಗತಿಯೂ ಕಾಲೇಜಿನಲ್ಲಿ ಇರಲಿಲ್ಲ. ಇದರಿಂದ ಜೀವನದ ಹೋರಾಟದಲ್ಲಿ ನಾನು ಸೋಲುವ ಪ್ರಸಂಗ ಬಂದಿತ್ತು. ಆದರೆ ಅವಳು ಜೀವನದ ಕೂಡ ಹೋರಾಡುತ್ತಲೆ ಬೆಳೆದಿದ್ದಳು.

ಆಕೆ ಬಹಳ ಒಳ್ಳೆಯ ರೀತಿಯಿಂದ ಕಲಾಪೂರ್ಣವಾಗಿ ಶಾಲನ್ನು ನೇಯುತ್ತಿದ್ದಳು. ನನಗೂ ಕಲಿಸಿದಳು. ನಾವಿಬ್ಬರೂ ಕೂಡಿ ಒಂದು ಹಳ್ಳಿಗೆ ಹೋಗಿ ನೆಲಸಿದೆವು. ಶಾಲುಗಳನ್ನು ನೇಯ್ದು ಜೀವನ ಸಾಗಿಸಲಾರಂಭಿಸಿದೆವು. ನಾನು ಮತ್ತೆ ಸುಖಿಯಾದೆ. ಮೊದಲಿಗಿಂತಲೂ ಹೆಚ್ಚು ಸುಖಿಯಾದೆ. ಶ್ರೀಮಂತ ಕುವರನಿದ್ದಾಗ, ಕಾಲೇಜಿನಲ್ಲಿದ್ದಾಗ, ಪಟ್ಟ ಸುಖದಲ್ಲಿ ಬರೀ ವಿಲಾಸ, ಮದ, ಆಮೋದಗಳಿದ್ದುವು. ಈಗಿನ ಸುಖದಲ್ಲಿ ಶಾಂತಿ, ಪ್ರೇಮ, ತೃಪ್ತಿಗಳಿದ್ದುವು. ಈಗಿನ ಜೀವನದಲ್ಲಿ ಒಂದು ಮಾಧುರ್ಯವಿತ್ತು ಪಾವಿತ್ರ್ಯವಿತ್ತು. ನಮ್ಮ ಶಾಲುಗಳು ಜನಪ್ರಿಯವಾಗಲಾರಂಭಿಸಿದುವು. ಮೆಲ್ಲಮೆಲ್ಲನೆ ಲಕ್ಷ್ಮಿಯು ನಮ್ಮ ಮನೆಗೆ ನಡೆದು ಬರಲಾರಂಭಿಸಿದಳು. ನಾನೊಬ್ಬ ಹೊಣೆಯರಿತ ನಾಗರಿಕನಾದೆನು, ಸುಖಜೀವಿಯಾದೆನು.

ಇಷ್ಟರಲ್ಲಿ ನಮ್ಮ ಪ್ರೇಮಲತೆಯೂ ಫಲಬಿಟ್ಟಿತು. ಆಗಿನ ಆ ಆನಂದವನ್ನು ನಾನೀಗ ಹೇಗೆ ಬಣ್ಣಿಸಲಿ? ಸ್ವರ್ಗಸುಖವೂ ಆಗ ತುಚ್ಛವೆನಿಸಿತ್ತು. ಅದನ್ನು ಶಬ್ದದಿಂದ ಬಣ್ಣಿಸಲು ಬರಲಾರದು. ಹೃದಯದಿಂದಲೇ ಅರಿಯಬೇಕು. ಅದು ಶಬ್ದಾತೀತ. ಹೃದಯವೇದ್ಯವಾದದ್ದು. ನನ್ನ ರಾಣಿ ನನ್ನನ್ನು ಅಷ್ಟು ಸುಖಿಯನ್ನಾಗಿ ಮಾಡಿದ್ದಳು.

ಒಂದು ದಿನ ಅವಳು ಹೇಳಿದಳು :

“ ನಮ್ಮ ಹುಡುಗನಿಗೊಂದು ಶಾಲು ನೇಯಬಾರದೇ ? ಇಷ್ಟು ಜನರಿಗೆಲ್ಲ ನೇಯುತ್ತೀರಿ ”

ನಾನು ಹೇಳಿದೆ : “ ನನ್ನ ಕೈ ಇನ್ನೂ ಅಷ್ಟು ಪಳಗಿಲ್ಲ. ನೀನು ಪ್ರವೀಣೆ; ನೀನೆ ನೇಯ್ದುಬಿಡು ! ”

“ ನಾನು ನಿಮ್ಮಷ್ಟು ಜಾಣೆಯಲ್ಲ. ”

“ ನನಗೆ ಕಲಿಸಿದ ಗುರುವೇ ಹೀಗೆಂದರೆ ? ”

“ ಹೌದು. ಶಿಷ್ಯ ಗುರುವನ್ನು ಮೀರಿಸಿದ್ದರೆ ? ”

ಕೊನೆಗೆ ಇಬ್ಬರೂ ಕೂಡಿ ಒಂದು ಶಾಲನ್ನು ನೇಯಬೇಕೆಂದು ನಿರ್ಣಯಿಸಿದೆವು—ನಮ್ಮ ಮುದ್ದುಕುವರನ ಹುಟ್ಟುಹಬ್ಬಕ್ಕಾಗಿ, ಮರುದಿನವೇ ನಾನು ಮಗ್ಗದಮೇಲೆ ಕುಳಿತೆನು.

ಇಷ್ಟರಲ್ಲಿಯೇ ದೇಶವು ಇಬ್ಭಾಗವಾಯಿತು. ಕಗ್ಗೊಲೆ ಸುರುವಾಯಿತು.

ಬಾಲಕನ ಹುಟ್ಟುಹಬ್ಬ ಇನ್ನೂ ಎರಡು ದಿನವಿತ್ತು. ಶಾಲು ಮುಗಿಯಲು ಬಂದಿತ್ತು. ಅಂದೇ ಅದನ್ನು ಮುಗಿಸಿ ನಾವು ಗುಳೇಕಟ್ಟಲು ವಿಚಾರಿಸಿದ್ದೆವು.

ಆದರೆ....ನನ್ನ ಮಗು....ನನ್ನ ದೇವತೆ....ಬೇಡ. ಆ ದುರಂತವನ್ನು ವರ್ಣಿಸಲಾರೆ. ಧರ್ಮದ ಹೆಸರಿನಿಂದ, ದೇವರ ಹೆಸರಿನಿಂದ ನಡೆದ ಆ ಕಗ್ಗೊಲೆ, ಆ ಅತ್ಯಾಚಾರ.... ಅಯ್ಯೋ.... ನಾನು ಬರೆಯಲಾರೆ; ಅದನ್ನು ಬರೆಯಲಾರೆ. ಮನುಷ್ಯನು—ನಿಜವಾಗಿ ವಿಚಾರಿಸಿದರೆ—ಮನುಷ್ಯನಲ್ಲ.... ಹಿಂಸ್ರಪಶು ! ಅಲ್ಲ, ಅದಕ್ಕಿಂತಲೂ ಕೀಳಾದವನು !! ಪಶುಗಳಲ್ಲಿ ಒಂದು ನ್ಯಾಯ, ನೀತಿ ಇರುತ್ತದೆ. ಆದರೆ ಮಾನವನಲ್ಲಿ ಏನೂ ಇಲ್ಲ. ಅವನು ರಾಕ್ಷಸ. ಹೌದು ರಾಕ್ಷಸ ! ಅಲ್ಲ ಅನ್ನುವವರು ಈ ದುರಂತವನ್ನು ಒಮ್ಮೆ ಅನುಭವಿಸಿ ನೋಡಲಿ. ಅಂದರೆ ತಿಳಿಯುತ್ತದೆ. ಈ ದೇವರು, ಈ ಧರ್ಮ, ಎಲ್ಲ ಹಾಳಾಗಲಿ ! ನಮಗೆ ಧರ್ಮ ಬೇಡ; ದೇವರು ಬೇಡ ! ಅವು ಇಲ್ಲದಿದ್ದರೆ ನಮಗೆ ನಡೆಯುತ್ತದೆ. ನಮಗೆ ಬೇಕಾದದ್ದು ಮಾನವತೆ, ಶಾಂತಿ, ಪ್ರೇಮ, ದಯೆ, ನ್ಯಾಯ ! ಇವುಗಳಿಲ್ಲದಲ್ಲಿ ಆ ದೇವರು ಆ ಧರ್ಮವನ್ನು ತೆಗೆದುಕೊಂಡು ಏನು ಮಾಡುವುದು ? ಇವು ಆಗ ಸುಟ್ಟು ಸೂರೆಗೊಂಡಿದ್ದುವು. ನರರು ನರರಾಕ್ಷಸರಾಗಿದ್ದರು. ಅವರ ಕೂಡ ನಾನೂ ರಾಕ್ಷಸನಾದೆ. ಸೇಡು ! ಭಯಂಕರ ಸೇಡು !! ಅದೇ ನನ್ನ ಅಧಿದೇವತೆಯಾಗಿತ್ತು. ನನ್ನ ಮಟ್ಟಿಗೆ ಯಾವ ಧರ್ಮ-ದೇವರುಗಳ

ನಮ್ಮ ಸಂಘದ ನಿರ್ಮಿತಿಗಳು:

- ರುಚಿಕರವಾದ ಹಸನು ಕುಶಿಬೆಯೆಣ್ಣೆ
- ಶುದ್ಧ ಕೈನೂಲಿನ ಖಾದಿಯ ಬಟ್ಟೆ
- ಸುವಾಸಿಕ ಕರ್ನಾಟಕ ಅಂಬರ್ ನಂ. ೧೧
  'ಮಹದೇವ ಸ್ಪೈಲಾರ' ಊದಬತ್ತಿ
- ಕೈಮಗ್ಗದ ನಯವಾದ ವಿವಿಧ ಬಟ್ಟೆಗಳು

ಇವುಗಳನ್ನೇ ಕೊಂಡು, ಹಳ್ಳಿಯ ಉದ್ಯಮಗಳಿಗೆ ಪ್ರೋತ್ಸಾಹನೆ ಕೊಡಿರಿ.

ನಮ್ಮ ಸ್ಟಾಕಿಸ್ಟರು :—

ವ್ಹಿಲೇಜ್ ಇಂಡಸ್ಟ್ರೀಯಲ್ ಸ್ಟೋರ್ಸ್
(ಅಂಕೋಲಾ ಸ್ಟೋರ್ಸ್) ಧಾರವಾಡ

ಅಂಕೋಲಾ ಸ್ಟೋರ್ಸ್ — ಇದರ ಹೆಸರು ಯಾರಿಗೆ ಗೊತ್ತಿಲ್ಲ!

ಜನರೆಲ್ಲರೂ ಪ್ರೀತಿಸುವ 'ಮೈಸೂರು' ಕಾಫೀಪುಡಿ ಮತ್ತು ಫ್ಯಾಮಿಲಿ ಮಿಕ್ಸ್ಚರ್ ಚಹಾ ಇಲ್ಲಿ ದೊರೆಯುವುವಲ್ಲದೆ, ಸಂಸಾರದ ನಿತ್ಯೋಪಯೋಗಕ್ಕೆ ಬೇಕಾಗುವ ಎಲ್ಲ ಕಿರಾಣಿ ಸಾಮಾನುಗಳು ಇಲ್ಲಿ ಯೋಗ್ಯ ಧಾರಣೆಯಿಂದ ದೊರೆಯುವುವು.

ಸಂಚಾಲಕರು : **ಅಂಕೋಲಾ ಕಿರಾಣಿ ಸ್ಟೋರ್ಸ್**
Main Road, ಧಾರವಾಡ

ನಿರ್ಬಂಧವೂ ಉಳಿದಿದ್ದಿಲ್ಲ. ಮಾನವಕುಲದ ಮೇಲೆ ಸೇಡು ತೀರಿಸಿಕೊಳ್ಳುವುದೇ ನನ್ನ ಇಚ್ಛೆಯಾಗಿತ್ತು. ರಾಕ್ಷಸನಾಗಿಯೇ ಅಲ್ಲಿಂದ ನಾನು ಹೊರಬಿದ್ದೆ. ಅಂದು ನಿಮ್ಮ ಮನೆಯಲ್ಲಿ ಹೊಕ್ಕಾಗಲೂ ನಾನು ರಾಕ್ಷಸನಾಗಿಯೇ ಇದ್ದೆ.

ಆದರೆ ಆ ಶಾಲು— ನೀವು ನಿಮ್ಮ ಅಶೋಕನಿಗೆ ಹೊಚ್ಚಿ ಮಲಗಿಸಿದ ಶಾಲು— ನನ್ನನ್ನು ಮಾನವನನ್ನಾಗಿ ಮಾಡಿತು. ನಾನು ಬಂದ ಕೋಣೆಯಲ್ಲಿ ವಿದ್ಯುದ್ದೀಪ ಬೆಳಗುತ್ತಲಿತ್ತು. ಒಂದು ಮಗು ಮಲಗಿತ್ತು. ಮೈತುಂಬ ಒಡವೆಗಳಿದ್ದುವು. ನನ್ನ ಕೈಯಲ್ಲಿ ಚೂರಿ ಇತ್ತು. ಆದರೆ ಆ ಶಾಲು— ಮಗು ಹೊದ್ದುಕೊಂಡ ಆ ಶಾಲು— ನನ್ನನ್ನು ಹಿಡಿದು ನಿಲ್ಲಿಸಿತು. ನಾನು ಹಾಗೆಯೆ ಆ ಮುದ್ದು ಕಂದನನ್ನು ನೋಡುತ್ತ ಮುಗ್ಧನಾಗಿ ನಿಂತೆ. ನನ್ನ ಮಗನಿಗೆ ನೇಯಬೇಕೆಂದು ಮಾಡಿದ ಶಾಲಿನ ಬಣ್ಣವೂ ಹೀಗೆಯೆ ಇತ್ತು. ನನ್ನ ಮಗನೂ ಅದನ್ನು ಹೀಗೆಯೆ ಹೊದ್ದುಕೊಂಡು ಮಲಗುತ್ತಿದ್ದನಲ್ಲವೇ? ಆ ದೃಶ್ಯ, ಆ ನೋಟ, ನನ್ನನ್ನು ನನ್ನ ರಾಕ್ಷಸಜೀವನದಿಂದ ಹಿಂದೆ ಒಯ್ದಿತು. ನನ್ನ ಮಾನವಜೀವನದ ಚಿತ್ರಗಳು ನನ್ನ ಕಣ್ಣಮುಂದೆ ಬರಹತ್ತಿದುವು. ನನ್ನ ಜೀವನದ ಚಲಚ್ಚಿತ್ರವನ್ನು ನೋಡುತ್ತ ನಾನು ಅಲ್ಲಿಯೇ ನಿಂತೆ. ಎಷ್ಟು ಹೊತ್ತು ನಿಂತಿದ್ದೆನೋ ಏನೋ! ನನಗೆ ಎಚ್ಚರವಾದಾಗ ನಾನು ಆಸ್ಪತ್ರೆಯಲ್ಲಿ ಮೆತ್ತಗಿನ ಹಾಸಿಗೆಯ ಮೇಲೆ ಮಲಗಿದ್ದೆ. ಮುಂದಿನ ಸಂಗತಿ ನಿಮಗೆ ಗೊತ್ತೇ ಇದೆ.

ಈ ಶಾಲನ್ನು ನಾನು ಏಕೆ ಕಳುಹಿಸಿದ್ದೇನೆ— ಅದೂ ಇದೇ ದಿನ ಮುಟ್ಟುವಂತೆ ಏಕೆ ಕಳುಹಿದ್ದೇನೆ—ಎಂಬುದು ಈಗ ನಿಮಗೆ ಗೊತ್ತಾಗಿರಬಹುದು. ಅಶೋಕನ ಹುಟ್ಟುಹಬ್ಬದ ಕಾಣಿಕೆಯಿದು. ಇದನ್ನು ಈ ಸೆರೆಮನೆಯಲ್ಲಿ ನಾನೇ ನೇಯ್ದಿದ್ದೇನೆ. ನನ್ನ, ಹೆಚ್ಚಾಗಿ ನನ್ನ ಆ ದೇವಿಯ ಇಚ್ಛೆಯನ್ನು ಪೂರ್ಣಮಾಡುವುದಕ್ಕಾಗಿ, ಇದನ್ನು ಅಶೋಕನಿಗೆ ಕಳುಹಿದ್ದೇನೆ. ಇದು ಒಬ್ಬ ದುರ್ದೈವಿಯ ಕೊನೆಯ ಆಶೆ. ಇದನ್ನು ಪೂರ್ಣಮಾಡುವಿರೆಂದು ನಂಬಿದ್ದೇನೆ. ನನ್ನ ಪರವಾಗಿ ನನ್ನ ದೇವಿಯ ಪರವಾಗಿ ನಿಮಗೂ ನಿಮ್ಮ ಪತ್ನಿಗೂ ಬೇಡಿಕೊಳ್ಳುತ್ತೇನೆ. ನನ್ನಿಂದ ಈ ಶಾಲು ಬಂದಿದೆ ಎಂದು ತಿಳಿದು, ನಿಮ್ಮ ಪತ್ನಿ ಏನು ಎಂದುಕೊಳ್ಳುವರೋ. ಅವರಿಗೂ ಈ ಪತ್ರ ತೋರಿಸಿ, ನನ್ನನ್ನು ಕ್ಷಮಿಸಲು ಬಿನ್ನವಿಸಬೇಕು. ನಾನಿನ್ನು ಬರುತ್ತೇನೆ. ನಿಮಗೆ ನನ್ನ ಅನಂತ ಪ್ರಣಾಮಗಳು. ಅಶೋಕನಿಗೆ ನನ್ನ ಹೃತ್ಪೂರ್ವಕವಾದ ಆಶೀರ್ವಾದಗಳು. ಅವನು ಸಾಮ್ರಾಟ ಅಶೋಕನಾಗಲಿ!— ಎಂದು ನಾನು ಹಾರಯಿಸುತ್ತೇನೆ. ಹೋಗಿಬರುವೆನು. ಅಲ್ಲಿ ಹೋಗುವೆನು.

—ಅನೂಪ

ಆ ಪತ್ರವನ್ನು ಹಿಡಿದುಕೊಂಡು ನಾನು ಹುಚ್ಚನಾಗಿ ಕುಳಿತೆ. ಇನ್ನೂ ಹೀಗೇಯೆ ಎಷ್ಟು ಹೊತ್ತು ಕೂಡುತ್ತಿದ್ದೆನೋ! ಆ ಪತ್ರದ ಮೇಲೆ ಎರಡು ಮುತ್ತಿನಂತಹ ಹನಿಗಳು ಬಿದ್ದುವು. ನಾನು ಗಾಬರಿಯಾಗಿ ಹೊರಳಿ ನೋಡಿದೆ. ಸರಸ್ವತಿ ನನ್ನ ಹಿಂದೆ ನಿಂತಿದ್ದಳು.

"ಏನು ನೀವೂ ಇದನ್ನು ಓದಿದಿಯಾ" ಎಂದು ಕೇಳಿದೆ.

ಅವಳಿಗೆ ಉತ್ತರ ಕೊಡಲು ಶಬ್ದಗಳೇ ಬರಲಿಲ್ಲ. ಮುತ್ತಿನಂತಹ ನಾಲ್ಕು ಹನಿಗಳು ಮತ್ತೆ ಉದುರಿದುವು.

ನರಸಿಂಹ ಭವನ

ಟೀ ಕ್ಲಬ್, ಧಾರವಾಡ

ನಡುಪೇಟೆಯಲ್ಲಿ ಹಬ್ಬದ ಸೊಗಸು!

ಹುರುಪನ್ನು ಕೊಡುವ ತಿಂಡಿ-ತಿನಿಸುಗಳ ವೈವಿಧ್ಯ!

ಚಹಾ, ಕಾಫಿ—ಪಾನೀಯಗಳು!

ಪದಾರ್ಥಗಳ ಶುಚಿ-ರುಚಿಗಳೇ ನಮ್ಮ ಗುರಿ!

ಎಲ್ಲರಿಗೂ ಆದರದ ಸುಸ್ವಾಗತ!

ಬರಲಿರುವ ಬಾಳು

ಶ್ರೀ. ಸಿ. ಎಂ. ದೇವೇಂದ್ರ ನಾಯಕ, ಧಾರವಾಡ

ಅವಿತುಕೊಂಡಿದೆಯಿಲ್ಲಿ ತುಂಬುಗತ್ತಲಲಿ ಭೀತಿ !
ಘೂಕರಿಸುತಿವೆ ಗೂಬೆ-ಗೂಬೆಗಳ ನೆಲೆಯು !
ಸರ್ಪಕುಲ ಹಾಡುತಿದೆ ಮೃತ್ಯುಗೀತಗಳನ್ನು ;
ಬರಿ ವಿಷಣ್ಣತೆ ಬೆರೆತ ತೋಪುಗಳ ಮರೆಯಲ್ಲಿ
ಭಯಗೊಂಡ ಚಂದ್ರಮನು ಅಡಗಿಕೊಂಡಿಹನು.
ಕನ್ಮನೆಯ ಸವಿಮಧುವು ಹುರುಳನ್ನು ಕಳಕೊಂಡು
ಹಳತಾಗುತಿಹುದು.

ಇದೊ ಇದೊ,
ಎಡೆಬಿಡದೆ ಸುಯ್ಯುತಿದೆ ಗೋಳಿಡುವ ಗಾಳಿ ;
ಉಸುರಿದಾ ತರಗೆಲೆಯು ಬಿರುಗಾಳಿಯೊಡನೆಯೆ
ಅಲುಗಾಡಿ ಪಾಡುತಿಹವು.

ಅದೊ, ನೋಡು !
ಅಲುಗುತಿದ್ದಾ ನೆರಳು ಉನ್ಮತ್ತತಾಂಡವಕೆ.
ಸುಪ್ತಭಾವವನಿತ್ತು ಮತ್ತೆ ನೆಲೆನಿಂತಿಹುದು.
ಕಾಲಮುಗ್ಗುತಿದೆ—ಓ, ಬಾಳು ಕುಗ್ಗುತಿದೆ—
ಅಳಿದ ಆಶೆಯು ಅಳಲನು ಸೀರಸದಲಿ.

ಇನಿವಾಡು-ನಗೆಕೇಕೆ ಅಡಗಿಹವು ದುಸ್ವರದಿ ;
ತುಂಬುದೊರೆಯಾತ್ಮವೇ ಕಂದಿರುವುದೀಗ !
ಮಲಿತ ಕೊಳಚೆಯ ನೀರು ವಿದ್ರೂಪಿ-ಕುಬ್ಜನಹ
ನೀರಕಿರುಗಂಟೆಗಳಗಂಟಿಕೊಂಡಿಹವು.
ತೆರೆಗಳಬ್ಬರವೆಲ್ಲೊ ದೂರದಲಿ ಮೊರೆಯುತಿಹುದು.

ಹುಟ್ಟು ಹಾಕುತ್ತಲಿದೆ ಅಂಬಿಗನ ದೆವ್ವ !
ನೆಲದಿ ತಲೆಯನು ತೂರಿ ಮುರಿದ ಮಗ್ಗವನಲ್ಲಿ
ಸರಿಗೊಳಿಸುತಿಹನು ಜೇಡ.
ದಣಿದ ದೇಹದ ಬೆಸ್ತ ಬಲೆಯನ್ನು ತಿದ್ದುತಿಹ.
ಅದೊಡೇನ್ ಇವರೆಲ್ಲ—ನಿರ್ಜೀವ ಬೊಂಬೆಗಳ
ಹುಚ್ಚು ಹಾರಯಿಕೆಗಳ ಉನ್ಮತ್ತ ವಿಶ್ವದಲಿ
ಜೀವವಿಹ ನೆರಳಂತೆ ತೋರುತಿಹರು.

ವಿಶ್ವದಿರವಿಂತಿದ್ದರೂ
ಹೊಸ ಬೆಳಗು ಬರುವುದರಲಿಹುದು—
ಉದಯರವಿ ತನ್ನ ಹೊಂಗದಿರಿಂದ ಮೆಲುಮೆಲನೆ
ಮೈದಡಹಲಿಹ ; ಇನ್ನು ಮಬ್ಬು-ನೆರಳುಗಳಿರವು.
ಪಸಲೆಯೆಳಮೊಳಕೆಗಳು ನಗೆಮಿಂಚಸೂಸುವುವು.
ಅಭ್ಯುದಯಕಾಲದಾ ಹೊಸ ಹರ್ಷಯಾತ್ರೆಯಲಿ
ಇಂದಿನೀ ಬೊಂಬೆಗಳೆ ಬದುಕಿ ಬಾಳುವುವು—
ಚೇತನದ ನಂಬುಗೆಯ ಕೊಡುತಲೀ ಏಕಾಂತ
ವಿಶ್ವವನು ಒಂದೆ ಕರುಣದ ಎಳೆಗೆ ಬಂಧಿಸುತ
ಹೊಸಬೆಳಗು ಮುಗಿಸುವುದು ಹಳೆಯ ಯುಗವ....
ಕರೆಯಲಿದೆ ಮತ್ತೊಂದು ಹೊಸಶುಭಯುಗವ ! *

* ಮೂಲ ಬಂಗಾಲೀ ಕವನದ ಇಂಗ್ಲಿಷ್ ಅನುವಾದದ ಆಧಾರದಿಂದ ಬರೆದುದಿದು. ಮೂಲಕವಿ ಶ್ರೀ. ಗೋವಿಂದ ಚಕ್ರವರ್ತಿಯವರು. ಇಂಗ್ಲಿಷ್ ಅನುವಾದಕರು ಶ್ರೀ. ಸಮರ ಚಟರ್ಜಿಯವರು.

ಬಾಳ ದೀಪಾವಳಿ

ಶ್ರೀ. ಎ. ಎಸ್. ರಾಮಕೃಷ್ಣ, ಮಣಿಪಾಲ-ಉಡುಪಿ

" ಸಾಲು ಸೊಡರಿನ ಬೆಳಕು ಸುತ್ತ ಝಗ-ಝಗಿಸಿರಲು
ಕತ್ತಲಿಗೆ ಸ್ಥಾನವೆಲ್ಲಿ ?
ಹಬ್ಬ-ಹರಿದಿನಗಳಲಿ ಹರುಷ ಹಬ್ಬಿರುವಾಗ
ದುಗುಡಕ್ಕೆ ಎಡೆಯದೆಲ್ಲಿ ?
ಓ ಸಖನೆ, ಕಹಿಯ ನೆನಪೇಕೆ ಇಲ್ಲಿ ? "

" ಸಾಲುಸೊಡರಿನ ಬೆಳಕು ಝಗ-ಝಗಿಸಲೇನಂತೆ
ದೀಪದಡಿ ಕತ್ತಲಿರದೆ ?
ಬಾಳ ದೀಪಗಳೆಲ್ಲ ಮೇಲೆ ಬೆಳಗಿದರೇನು
ಮೂಲದಲಿ ದುಗುಡವಿರದೆ ?
ಓ, ನಲ್ಲೆ, ಕಹಿಯನ್ನು ಮರೆಯಬಹುದೆ ? "

" ಮೇಲಿರುವ ತಿಳಿನೀರ ಸವಿದು ಸುಖಿಸುವ ನನಗೆ
ತಳದ ಹಂಗೇಕೆ ಬೇಕು ?
ಸಂತಸದ ಬೆಳಕಿನಲಿ ಮುಂಬರಿವ ನಾವೇಕೆ
ಕತ್ತಲನು ನೆನೆಯಬೇಕು ?
ಓ, ಸಖನೆ ಬೆಳಕೊಂದೆ ನಮಗೆ ಸಾಕು !

ಆಕಾಶವಾಣಿಯ ಆಗು-ಹೋಗು

ಕೇಳುಗರ ಕೈವಾರಿ ಹೇಳಿದುದು

卐

ಧಾರವಾಡದ ಆಕಾಶವಾಣಿಯಲ್ಲಿ ನಿತ್ಯವೂ ನಮ್ಮ ನಾಡಿನ ಸಂಗೀತಗಾರರ— ವಿದ್ವಾಂಸರ— ಅಭಿನಯಕಲಾವಿದರ ಸೊಲ್ಲು ಕನ್ನಡಿಗರಿಗೆಲ್ಲ ಕೇಳುತ್ತಿರುವುದು ಆನಂದಾಭಿಮಾನಗಳ ಸಂಗತಿ. ಧಾರವಾಡದಲ್ಲಿ ಬಾನುಲಿಕಟ್ಟೆಯಿಲ್ಲದಿರುವಾಗ, ಇವರಲ್ಲಿಯ ಬಹುಸಂಖ್ಯಾಕರ ಅಸ್ತಿತ್ವದ ಕಲ್ಪನೆಯೂ ನಮ್ಮ ಜನರಿಗೆ ಇರಲಿಲ್ಲ. ಆದುದರಿಂದಲೇ ಬೇರೆ ಬೇರೆ ಆಕಾಶವಾಣಿಕೇಂದ್ರಗಳಲ್ಲಿ ಬಿತ್ತರಗೊಳ್ಳುತ್ತಲಿದ್ದ ಬೇರೆ ನಾಡಿನ ಸಂಗೀತಗಾರರ— ವಿದ್ವಾಂಸರ ಸಂಗೀತ-ಭಾಷಣಗಳನ್ನು ಕೇಳಿ ಕೇಳಿ, ನಮ್ಮ ನಾಡಿನಲ್ಲಿ ಅಂತಹ ಕಲಾವಿದರು ಇಲ್ಲವೇ ಇಲ್ಲ— ಎಂಬ 'ದೀನ ನಾನು' ಭಾವ ನಮ್ಮ ನಾಡಿಗರಲ್ಲಿ ತಲೆದೋರಿತ್ತು. ಈಗ ಮಿಕ್ಕ ಆಕಾಶವಾಣಿ ಕೇಂದ್ರಗಳಿಗೆ ಸರಿಹೆಗಲಾಗಿ ಧಾರವಾಡ ಕೇಂದ್ರವೂ ಬಿತ್ತರಿಸುತ್ತಿರುವ ನಮ್ಮ ಜನರವೇ ಆದ ಕಾರ್ಯಕ್ರಮಗಳು ಯಾರ ಹೃದಯವನ್ನು ಹೆಮ್ಮೆ-ಹರ್ಷಗಳಿಂದ ಹಿಗ್ಗಿಸಲಿಕ್ಕಿಲ್ಲ? ಇಂತಹ ಹಿಗ್ಗು-ಹೆಮ್ಮೆಗಳು ಸರ್ವಸಾಮಾನ್ಯವೆ. ನಮ್ಮಲ್ಲಿಯೂ ಬೇಕಾದಷ್ಟು ಜನ ಕಲಾವಿದರೂ ಪಂಡಿತರೂ ಇರಬೇಕೆಂಬ ತೃಪ್ತಿ ನಮಗೆ ಉಂಟಾಗಿದ್ದರೂ, ಈ ಭಾವನಾತ್ಮಕ ತೃಪ್ತಿ ನಮ್ಮ ಕಲೆ ಜಾಣ್ಮೆಗಳ ಪ್ರಗತಿಗೆ ಸಹಕಾರಿಯಾಗದು. ಅದಕ್ಕಾಗಿ ರಸಿಕರಾದ ವಿಮರ್ಶಕರು ವಿಧಾಯಕ ವಿಮರ್ಶೆಗಾಗಿ ಲೇಖನಿಯನ್ನು ಕೈಯಲ್ಲಿ ಹಿಡಿಯಬೇಕಾಗುವುದು. ನಮ್ಮ ಬಾನುಲಿ ಕಲಾವಿದರು, ಇಂತಹ ವಿಮರ್ಶೆಗಳನ್ನು ವೈಯಕ್ತಿಕ ಟೀಕೆಗಳೆಂದು ಭಾವಿಸದೆ, ತಾವಿನ್ನೂ ಸಾಧಿಸಬೇಕಾಗಿರುವ ಕಲಾಪೂರ್ಣತೆಯ ದಿಗ್ದರ್ಶನವೆಂದು ಭಾವಿಸಿ ನಡೆಯಬೇಕಾಗಿ ಬಿನ್ನಹ.

ಕಲಾಪ್ರಪಂಚದಲ್ಲಿ ಕೆಲಕೆಲವು ಸಂಪ್ರದಾಯ— ಶೈಲಿಗಳ ವೈಶಿಷ್ಟ್ಯಗಳಿರುವುವು. ಒಂದು ಬಗೆಯ ಸಂಪ್ರದಾಯ–ಶೈಲಿಗಳನ್ನು ಅಳವಡಿಸಿಕೊಂಡ ಕಲಾವಿದರು, ಇನ್ನೊಂದು ಬಗೆಯವುಗಳನ್ನು ಮೆಚ್ಚದೆ ಇರುವರು. ಬಹಳ ಜನರು ತಂತಮ್ಮ ಸಂಪ್ರದಾಯ-ಶೈಲಿಗಳ ವಿಷಯಕವಾದ ಅಭಿನಿವೇಶವನ್ನು ತಳೆದು ಮಿಕ್ಕುವನ್ನು ಟೀಕಿಸುವುದನ್ನೂ ಅಣಕಿಸುವುದನ್ನೂ ನಾವು ನೋಡುತ್ತೇವೆ. ಆದರೆ ಸವಿಗಾರರಾದ ವಿಮರ್ಶಕರು, ಪ್ರತಿಯೊಂದು ಸಂಪ್ರದಾಯ–ಶೈಲಿಗಳಲ್ಲಿಯ ಸೌಂದರ್ಯಾಸೌಂದರ್ಯಗಳನ್ನು ಪೃಥಕ್ಕರಣಮಾಡಿ ಹೇಳಬಲ್ಲರು; ಸದಸದ್ವಿವೇಕಬುದ್ಧಿಯಿಂದ ಆ ಆ ಸೌಂದರ್ಯವನ್ನು ಸ್ವೀಕರಿಸಿ, ಅಸೌಂದರ್ಯಭಾಗದ ಕಾರಣವಿಶ್ಲೇಷಣೆ ಮಾಡಿ ಹೇಳುವರು. ಇಂತಹ ವಿಮರ್ಶಕರ ವಾಣಿಯನ್ನು ನಮ್ಮ ಕಲಾವಿದರು, ಆತ್ಮೀಯಭಾವದ ಹಿತವಚನಗಳೆಂದು ಭಾವಿಸಬೇಕಲ್ಲದೆ, ವ್ಯಕ್ತಿವಿಷಯಕವಾದ ದ್ವೇಷ-ಮತ್ಸರಗಳ ಆರೋಪವನ್ನು ಕಲ್ಪಿಸಿ, ಮನಃಕ್ಷತಿಯನ್ನು ಹೊಂದಬಾರದು.

ಜಯಂತಿಯ ಈ ಪುಟಗಳಲ್ಲಿ ನಾವು, ಪ್ರತಿ ತಿಂಗಳ ಕಾರ್ಯಕ್ರಮಗಳನ್ನು ಕುರಿತು ವಿಮರ್ಶಿಸಿ ಬರೆಯಬೇಕೆಂದಿದ್ದೇವೆ. ನಮ್ಮ ಅನುಕೂಲತೆಗಾಗಿ, ಮೊದಲ ತಿಂಗಳ ೨೬ ನೆಯ ದಿನಾಂಕದಿಂದ ನಡೆಯುವ ತಿಂಗಳ ೨೫ ನೆಯ ದಿನಾಂಕದ ವರೆಗಿನ ಒಂದು ತಿಂಗಳ ಅವಧಿಯನ್ನು ವಿಮರ್ಶೆಗೆಂದು ತೆಗೆದುಕೊಳ್ಳಲಿದ್ದೇವೆ.

ತಾ. ೨೬-೯-೫೧ ರಿಂದ ೨೫-೧೦-೫೧ ರವರೆಗೆ

ಸಂಗೀತ ವಿಭಾಗ

ಧಾರವಾಡದ ಆಕಾಶವಾಣಿಕೇಂದ್ರದ ಪ್ರದೇಶವ್ಯಾಪ್ತಿಯಲ್ಲಿ ಉತ್ತರ-ದಕ್ಷಿಣ ಪದ್ಧತಿಯ ಸಂಗೀತವನ್ನು ಬಯಸುವ ಜನರ ಸಂಖ್ಯೆ ಅಲ್ಪ ಪ್ರಮಾಣದಲ್ಲಿದೆ. ಉತ್ತರ–ದಕ್ಷಿಣಗಳ ಗಡಿಯ ಕೇಂದ್ರವಿದೆಂಬ ತಿಳಿವಳಿಕೆಯಿಂದ ಎರಡೂ ಬಗೆಯ ಸಂಗೀತ ಕಾರ್ಯಕ್ರಮಗಳಿಗೆ ಇಲ್ಲಿ ಎಡೆಯಿದೆಯಾದರೂ, ಶ್ರಾವಕರಲ್ಲಿಯ ಬಹುಸಂಖ್ಯಾಕರು ಔತ್ತರೇಯ ಸಂಗೀತವನ್ನೇ ಮೆಚ್ಚುವವರಿದ್ದುದರಿಂದ, ದಕ್ಷಿಣಪದ್ಧತಿಯ ಕಾರ್ಯಕ್ರಮಗಳನ್ನು ಕೇಳಿ ಬೇಸರುಪಟ್ಟುಕೊಳ್ಳುವುದೂ, ಮುಖ ಮುದುರಿಸುತ್ತಿರುವುದೂ ಅಲ್ಲಲ್ಲಿ ಕಂಡುಬರುತ್ತಿದೆ. ಇದನ್ನು ಕೇಂದ್ರದ ಸಂಚಾಲಕರೂ ಶ್ರಾವಕರೂ ವಿವೇಚನಾತ್ಮಕಬುದ್ಧಿಯಿಂದ ವಿಚಾರ ಮಾಡಬೇಕಾದ ಸಂಗತಿ; ಜನತೆಯ ಅಪೇಕ್ಷೆಯ ಕಡೆಗೆ ಕೇಂದ್ರದ ಅಧಿಕಾರಿಗಳು ಲಕ್ಷ್ಯಕೊಡಬೇಕಾದುದು ಸರಿಯೆ; ಅದರಂತೆಯೆ ಈ ಕೇಂದ್ರದ ವೈಶಿಷ್ಟ್ಯವನ್ನು ಮನದಂದು, ಜನತೆಯೂ ಈ ಕೇಂದ್ರದ ದಾಕ್ಷಿಣಾತ್ಯ ಕಾರ್ಯಕ್ರಮಗಳನ್ನು ತಾಳ್ಮೆಯಿಂದ ಕೇಳಬೇಕಾದುದು ಅತ್ಯಗತ್ಯವಾಗಿದೆ. ದಾಕ್ಷಿಣಾತ್ಯ ಸಂಗೀತದಲ್ಲಿಯೂ ಸೌಂದರ್ಯವಿಶೇಷವಿದೆ. ಅದನ್ನೆ ಮೆಚ್ಚುವ ಬಹುಸಂಖ್ಯಾಕ ಜನರು ದಕ್ಷಿಣಭಾರತದಲ್ಲಿ ಇದ್ದಾರೆ. ಹೀಗಿರುವಾಗ ನಮ್ಮದೇ ಆದ ದಕ್ಷಿಣ ಪದ್ಧತಿಯ ಎಂದರೆ ಕರ್ನಾಟಕೀ ಸಂಗೀತವನ್ನು ಬೇಸರದಿಂದ ಕಾಣದೆ, ಅದರಲ್ಲಿಯ ಸೌಂದರ್ಯವನ್ನೂ ಆಸ್ವಾದಿಸುವ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದು ನಮಗೆ ಹಿತಕರವಾದ ಮಾತೇ ಆಗಿದೆ.

ಕಳೆದ ತಿಂಗಳಲ್ಲಿ ಹಾಡಿದ ಸುಪ್ರಸಿದ್ಧ ಸಂಗೀತಗಾರರೆಂದರೆ, ಗ್ವಾಲಿಯರಿನ ಶ್ರೀ. ಕೃಷ್ಣರಾವ ಪಂಡಿತರು. ಇವರು ಭಾರತ-

ಧಾರವಾಡದ ಸೌಂದರ್ಯ ರಸಿಕರಿಗೆ ಕಣ್ಣು ಹಬ್ಬ!

ರೀಗಲ್ ಚಿತ್ರಮಂದಿರದಲ್ಲಿ

ಜನಪ್ರಿಯ ನಿರ್ಮಾತೃ ಕಿಶೋರ ಶಾಹು ಅವರ
ರಸಭರಿತ ರಮ್ಯಚಿತ್ರ

ಕಾಲಿ-ಘಟಾ

卐

ಬೇಗನೆ ಬರಲಿದೆ! ಬೇಗನೆ ಬರಲಿದೆ!

ನಟವರ್ಗ: ಕಿಶೋರಶಾಹು, ಬೀನಾರಾಯ್, ಗೋಪ,
ಜೀವನ, ಕಕ್ಕೂ

ಸೈಂಯಾ (ನಟರು ಮಧುಬಾಲಾ, ಸಜ್ಜನ)

ಜೋಹರಿ (ನಟರು ಗೀತಾಬಾಲಿ, ಅಮರನಾಥ)

ಮೊದಲಾದ ಹೆಸರಾಂತ ಚಿತ್ರಪಟಗಳೂ ಬರಲಿವೆ
ಬರುವ ದಿನಾಂಕವನ್ನು ನಿರೀಕ್ಷಿಸಿರಿ!

ವಲ್ಲಿ ಹೆಸರು ಪಡೆದ ಒಂದು ಸಂಗೀತ ಪರಂಪರೆಯ ಮನೆತನಕ್ಕೆ ಸೇರಿದವರು. ಇವರು ಹಾಡಿದ ದರ್ಬಾರಿ, ಕಾನಡಾ, ಸಿಂಧ-ಕಾಫಿ ರಾಗಗಳು ಶಾಸ್ತ್ರಶುದ್ಧವಾಗಿದ್ದುವು. ಭೈರವಿಯೂ ಮನೋಹರವಾಗಿತ್ತು. ಆದರೆ ಪಂಡಿತರ ಹಾಡಿಕೆಯ ರೀತಿ ಸವಿಗಿಂತ ಶಾಸ್ತ್ರಶುದ್ಧಿಯನ್ನೇ ಹೆಚ್ಚಾಗಿ ಪುರಸ್ಕರಿಸುವಂತಹದು. ಇವರಲ್ಲದೆ ಉತ್ತರ ಕರ್ನಾಟಕದ ಪರಿಚಿತ ಗಾಯಕರಾದ ಶ್ರೀ. ವಿ. ಎ. ಕಾಗಲಕರ್, ಶ್ರೀ. ಸಿದ್ಧರಾಮಪ್ಪಾ ಜಂಬಲದಿನ್ನಿ, ಶ್ರೀ. ಫಕೀರಪ್ಪಾ ಕುಂದಗೋಳ, ಶ್ರೀ. ಗುರುಬಸವಾರ್ಯ ಹಿರೇಮಠ, ಕೇಂದ್ರದ ಮುಖ್ಯ ಕಲಾವಿದರಾದ ಶ್ರೀ. ದೇಶಪಾಂಡೆ ಗುರುರಾಯರು ಇವರೆಲ್ಲ ಬೇರೆ ಬೇರೆ ದಿನಗಳಲ್ಲಿ ಹಾಡಿದರು. ಇವರೆಲ್ಲರೂ ಪರಿಚಿತ ಗಾಯಕರು. ಸಂಗೀತ ಸಭೆಯನ್ನು ಏರ್ಪಡಿಸಿ ಕಾರ್ಯಕ್ರಮ ಮಾಡಿಸಿದರೆ, ರಸಿಕರನ್ನು ತಲೆದೂಗಿಸಬಲ್ಲ ಸಾಮರ್ಥ್ಯ ಇವರೆಲ್ಲರಲ್ಲಿ ಇರುವುದೆಂಬುದರ ಅರಿಕೆ ನಮಗಿದೆ. ಆದರೆ ಹಿರಿಯ ಗಾಯಕರಲ್ಲಿಯೂ ಕೆಲವರಿಗೆ ಬಾನುಲಿಯ ಧ್ವನಿ-ವರ್ಧಕದೆದುರು ಹೇಗೆ ಹಾಡಬೇಕೆಂಬುವರ ರೀತಿ ಇನ್ನೂ ಗೊತ್ತಾದಂತೆ ಕಾಣುವುದಿಲ್ಲ. ಇರುವ ನಿಯಮಿತ ಅವಧಿಯಲ್ಲಿ ಹಾಡಬೇಕಾಗಿರುವ ರಾಗದ ಯಾವ ಸೌಂದರ್ಯ ಭಾಗಗಳನ್ನು ಯಾವ ಯಾವ ಪ್ರಮಾಣದಲ್ಲಿ ಪ್ರದರ್ಶಿಸಬೇಕೆಂಬುದನ್ನು ಮೊದಲೇ ನಿರ್ಣಯಿಸಿಕೊಂಡು ಕುಳಿತರೆ, ಕೊಟ್ಟ ವೇಳೆಯ ಉಪಯೋಗ ಇನ್ನಷ್ಟು ಚೆನ್ನಾದೀತು.

ಇವರಲ್ಲದೆ ತರುಣ ಗಾಯಕರಾದ ಶ್ರೀ. ಆರ್. ಎಸ್. ಜಂತಲಿ, ಶ್ರೀ ನಾರಾಯಣ ಮುಜುಮದಾರ, ಶ್ರೀ. ಡಿ. ಎಚ್. ಹಾವನೂರ, ಶ್ರೀ. ಕೆ. ಕೆ. ಮಾದನಸೆಟ್ಟಿ, ಶ್ರೀ. ಮೃತ್ಯುಂಜಯ ಪುರಾಣಿಕಮಠ, ಶ್ರೀ. ವಿ. ಕೆ. ದೇಶಪಾಂಡೆ, ಶ್ರೀ. ಲೋಣಕಡಿ ಮೊದಲಾದವರೂ ಹಾಡಿದರು. ಇವರೆಲ್ಲರ ಸಂಗೀತವನ್ನು ಸದ್ಯ ವಿಮರ್ಶಿಸುವುದಕ್ಕಿಂತ ಎಲ್ಲರಿಗೂ ಶುಭ ಭವಿಷ್ಯವನ್ನು ಕೋರುವುದೇ ಒಳ್ಳೆಯದು. ಏಕೆಂದರೆ ಇವರೆಲ್ಲ ಮುಂದೆ ಹೆಸರು ಪಡೆಯಬೇಕಾಗಿರುವ ಸಂಗೀತ ವಿದ್ಯಾರ್ಥಿಗಳು

ಕಳೆದ ತಿಂಗಳಲ್ಲಿ ಹಾಡಿದ ಸಂಗೀತಗಾತಿಯರಲ್ಲಿ ಕು. ಸರೋಜಿನಿ ನಾಡಕರ್ಣಿ, ಶ್ರೀಮತಿ ಸೋನೂಬಾಯಿ ದೊಡ್ಡಮನಿ, ಶ್ರೀಮತಿ ಜಿವುಬಾಯಿ ನಾಗರಗಟ್ಟಿ, ಶ್ರೀಮತಿ ಸುಧಾ ಸೊಲ್ಲಾಪುರಕರ, ಶ್ರೀಮತಿ ತಾರಾಬಾಯಿ ತೇರದಾಳ, ಶ್ರೀಮತಿ ಸುಶೀಲಾ ಟೇಂಬೆ, ಕು. ಶಾಂತಾ ಗುಳೇದಗುಡ್ಡ, ಶ್ರೀಮತಿ ಕೃಷ್ಣಾಬಾಯಿ ರಾಮದುರ್ಗ ಇವರು ಮುಖ್ಯವಾಗಿ ಕಾಣುವರು. ಇವರಲ್ಲಿ ಒಬ್ಬಿಬ್ಬರು ಇನ್ನೂ ವಿದ್ಯಾರ್ಥಿನಿಯರು. ಒಬ್ಬಿಬ್ಬರು ಸಂಗೀತೋದ್ಯಮದಲ್ಲಿಯೆ ಆಯುಷ್ಯವನ್ನು ಹಾಕಿ, ಈಗ ಮುಪ್ಪಿನ ಮೂಲಕ ಕಲೆಯ ಜೀವಾಳವನ್ನು ಕಳೆದುಕೊಂಡವರು. ಆದರೂ ಸ್ತ್ರೀಕಂಠವೆಂಬ ಕೌತುಕ-ಕುತೂಹಲಗಳಿಂದ, ಶಾಸ್ತ್ರದ ಕಡೆಗೆ ಕೀಳ್ಗಣ್ಣು ಮಾಡಿ, ರಸಿಕರು ಇವರ ಸಂಗೀತವನ್ನು ಕೇಳಬೇಕಷ್ಟೆ! ವಿದ್ಯಾರ್ಥಿನಿಗಳಾಗಿರುವ ಸೋದರಿಯರಾದರೂ ತಮ್ಮ ಕೃಷಿಯನ್ನು ಹೆಚ್ಚಿಸಿ, ಒಳ್ಳೆಯ ಸಂಗೀತಗಾತಿಯರಾಗಿ ನಾಳೆಯ ರಸಿಕರನ್ನು ಮೆಚ್ಚಿಸುವಂತಹ ಯೋಗ್ಯತೆಯನ್ನು ಪಡೆಯಬೇಕು.

ಇನ್ನುಳಿದವರಲ್ಲಿ ಬಹಳ ಜನರು, ತಮ್ಮ ಶಕ್ತಿಯ ಅರಿವು ತಮಗಿಲ್ಲದೆ, ಆಕಾಶವಾಣಿಯಲ್ಲಿ ಹಾಡಬೇಕೆಂಬ ಉತ್ಕಟ ಮಹತ್ವಾಕಾಂಕ್ಷೆಯಿಂದ ಹಾಡುವ ಧೈರ್ಯಮಾಡಿದವರು. ಪಾಪ ಅವರಿಗೆ ಅನುಕೂಲ ಕಲ್ಪಿಸಿಕೊಟ್ಟ ಆಕಾಶವಾಣಿಯ ಅಧಿಕಾರಿಗಳ ಉಪಕಾರವನ್ನು ಅವರು ಸ್ಮರಿಸುತ್ತಿರಬಹುದು. ಆದರೆ ಕೇಳುಗರಲ್ಲಿ ಬಹುಜನರು ಆ ಗಾಯಕರನ್ನೂ ಅವರ ಗಾಯನಕ್ಕೆ ಅವಕಾಶ ಕಲ್ಪಿಸಿಕೊಟ್ಟವರನ್ನೂ ಶಪಿಸದೆ ಇದ್ದಿರಲಾರರು

ಇತ್ತೀಚೆಗೆ ಕೇಂದ್ರಕಲಾವಿದರಿಂದ ಬಿತ್ತರಗೊಳ್ಳುವ ಕೆಲವೊಂದು ಸಂಗೀತ ಕಾರ್ಯಕ್ರಮಗಳು ತೀರ ಆಭಾಸಮಯವಾಗಿರುವುವು. ಸಂಪೂರ್ಣ ಸಂಬಳವನ್ನು ಕೊಟ್ಟೇ ಇರಿಸಿಕೊಳ್ಳುವುದರಿಂದ ಮೇಲೆ ಆಕಾಶವಾಣಿಯ ಅಧಿಕಾರಿಗಳು ಇಂತಹ ಕಿನೆಯ ಆನೆಯ ತರಗತಿಯ ಕಲಾವಿದರನ್ನು ಏಕೆ ಕೇಂದ್ರದಲ್ಲಿ ಇರಿಸಿಕೊಳ್ಳುವರೋ ತಿಳಿಯದಂತಾಗಿದೆ. ಉದಾಹರಣೆಗಾಗಿ ಹೇಳಬೇಕೆಂದರೆ 'ಕ್ಷಣ ಆಲಾ ಭಾಗ್ಯಾಚಾ' ಎಂಬ ಮರಾಠೀ ಭಾವಗೀತದ— ದಸರೆಯ ದಿನದ—ಬಿತ್ತರಣೆ. ಅಂದು ಅದನ್ನು ಹಾಡಿದ ಕೇಂದ್ರ ಕಲಾವಿದನಿಗಿಂತ ಚೆನ್ನಾಗಿ, ಮನೆಮನೆಯ

ಹೆಣ್ಣುಮಕ್ಕಳೂ ಹಾಡುತ್ತಾರೆ. ಇನ್ನೊಂದು ನಾಯಕೀ ಕಾನಡಾ ರಾಗದಲ್ಲಿಯ ಖ್ಯಾಲ್ ಸಂಗೀತ ಕಂಪನೀ ನಾಟಕದಲ್ಲಿಯ ನಾಯಕನಟನ ಅಭ್ಯಾಸಸಂಗೀತದ - ಮಾದರಿಯದು. ಇದನ್ನು ಹಾಡಿದವರನ್ನೂ ಕಲಾವಿದರೆಂದು ಒಪ್ಪಬೇಕೇ ನಾವು? ಇದೇ ಕೇಂದ್ರದಲ್ಲಿರುವ ಕಲಾವಿದರೊಬ್ಬರಿಂದ ಆಗಾಗ ಬಿತ್ತರಗೊಳ್ಳು-ತ್ತಿರುವ ವಿವಿಧ ಕಾರ್ಯಕ್ರಮಗಳನ್ನು ಕೇಳಿ ಆನಂದಪಟ್ಟವರಿಗೆ, ಮೇಲೆ ಹೇಳಿದಂತಹ ಕೇಂದ್ರಕಲಾವಿದರ ಕಾರ್ಯಕ್ರಮಗಳು ತೀರ ನಿರಾಶೆಯನ್ನುಂಟು ಮಾಡಿದುವೆಂದು ವಿಷಾದದಿಂದಲೆ ಬರೆಯಬೇಕಾಗಿದೆ.

ಭಾಷಣ ವಿಭಾಗ

ಪ್ರೊ. ಧಾರವಾಡಕರರು ತಾ. ೬-೧೦-೫೧ ರಂದು ಮಾಡಿದ ಭಾ. 'ಪುಸ್ತಕ ವಿಮರ್ಶೆ'ಯೊಂದನ್ನು ಬಿಟ್ಟರೆ, ಕಳೆದ ತಿಂಗಳಲ್ಲಿ ಸಾಹಿತ್ಯ-ಸಂಸ್ಕೃತಿಗಳನ್ನು ಕುರಿತ—ಜನಪ್ರಿಯವೆನಿಸ-ಬಹುದಾದ—ಭಾಷಣ ಕಾರ್ಯಕ್ರಮಗಳು ನಡೆದೇ ಇಲ್ಲವೆಂದು ಹೇಳಬಹುದು. ತಾ ೨-೧೦-೫೧ ರಂದು ಧ್ವನಿಮುದ್ರಿತವಾಗಿ ಬಿತ್ತರಗೊಂಡ 'ಮಾನವ ಕುಲೋದ್ಧಾರಕ ಮಹಾತ್ಮಾ ಗಾಂಧಿ' ಎಂಬ ಭಾಷಣವು, ಅವಸರದ ಮೂಲಕವೇನೋ ಸ್ಪಷ್ಟವಾಗಿ ಮುದ್ರಿತವಾದಂತಿರಲಿಲ್ಲ. ವಿಷಯವಿವೇಚನೆಯಲ್ಲಿಯೂ ಇನ್ನಿಷ್ಟು ವ್ಯವಸ್ಥೆಯನ್ನು ಆಶಿಸುವಂತಿತ್ತು. ೪-೧೦-೫೧ ರಂದು ಶ್ರೀ. ಪಾಟೀಲ ಪುಟ್ಟಪ್ಪನವರು ಮಾಡಿದ 'ಪತ್ರಿಕೋದ್ಯಮ' ಎಂಬ ಭಾಷಣದಲ್ಲಿ, ಅವರು ಅಮೇರಿಕೆಗೆ ಹೋಗಿ ಅದೇ ವಿಷಯವನ್ನು ಅಭ್ಯಾಸಿಸಿ ಪ್ರಶಸ್ತಿ ಪಡೆದ ಕುರುಹುಗಳಾವುವೂ ಕಾಣಲಿಲ್ಲ. ೧೦ ನೆಯ ದಿನಾಂಕದ 'ಪ್ರಸಂಗರಂಗ'ದಲ್ಲಿ ಶ್ರೀ. ವಿ ಬಿ ನಾಯಕರು, ಅಖಂಡ ಪಾರ್ಲಿಮೆಂಟಿನ ತಿಕ್ಕಾಟಗಳ ವಿಷಯ ತೆಗೆದು-ಕೊಳ್ಳದೆ, ಆ ಕಾಲದ ಮಹತ್ತ್ವದ ವಿಷಯಗಳಾದ ಹಿಂದೂ ಕೋಡ್ ಬಿಲ್ಲು, ಪತ್ರಿಕಾ ಮಸೂದೆಗಳನ್ನಷ್ಟೇ ತೆಗೆದುಕೊಂಡಿದ್ದರೆ ಹೆಚ್ಚು ಔಚಿತ್ಯವಿರುತ್ತಿತ್ತು. ದಿನಾಂಕ ೧೧ ರಂದು 'ಔಷಧ ಮತ್ತು ವಿಜ್ಞಾನ' ಎಂಬುದಾಗಿ ಮಾತನಾಡಿದ ಅನುಭವಿಕ ಡಾಕ್ಟರರು ಅನುಭವಿಕ ಭಾಷಣಕಾರರೆಂದು ತೋರಲಿಲ್ಲ. ನಿಯ-ಮಿತ ಅವಧಿಗಿಂತ ಎರಡು ನಿಮಿಷಗಳ ಮೊದಲೇ ಭಾಷಣ ಮುಗಿಯಿತು. ದಿ. ೧೨ ರಂದು 'ಕುರಾನಿನ ತತ್ತ್ವಗಳು' ಎಂಬುದಾಗಿ ಮಾಡಿದ ಭಾಷಣವು, ಭಾಷಣವೋ ರೂಪಕವೋ ಕುರಾನ ಪಠನವೋ— ಏನೆಂಬುದೇ ಗೊತ್ತಾಗಲಿಲ್ಲ. 'ನಮ್ಮ ಅನ್ನ' (೧೪-೧೦-೫೧) ಎಂಬ ಭಾಷಣದಲ್ಲಿ ಮಹಾಮೂಲೀ ವಿಷಯ ಸಂಗ್ರಹವಿದ್ದಿತಾದರೂ ಆಸ್ಖಲಿತ ಶೈಲಿಯಿರಲಿಲ್ಲ. 'ಮನಸ್ಸಿನಲ್ಲಿ ಚಕ್ರಮಾರುತಗಳು' (೧೫-೧೦-೫೧) ಎಂಬ ಭಾಷಣದ ಭಾಷೆ 'ಕನ್ನಾಂಗ್ಲಿಷ್' ಆಗಿದ್ದಿತು. ದಿ. ೨೩ ರಂದು ಶ್ರೀ ಹ ರಾ. ಪುರೋಹಿತರ 'ಪತ್ರಿಕೋದ್ಯಮ' ಎಂಬ ಭಾಷಣದಲ್ಲಿ ವಾರ್ತಾಹರ ಮತ್ತು ವಾರ್ತಾಸಂಪಾದನೆ ಇವುಗಳ ವಿವೇಚನೆ ಇನ್ನೂ ವಿಶದವಾಗಿ ಆಗಬೇಕಿತ್ತು. ದಿ ೨೪ ರ 'ಸಂಯುಕ್ತ ರಾಷ್ಟ್ರಗಳು' ಎಂಬ ಭಾಷಣ, ಬಯಲುಭಾಷಣದಂತೆ ಪ್ರಚಾರಪ್ರಾಮುಖ್ಯ-ವಾಗಿತ್ತು. ದಿ ೨೫ ರಂದು ಶ್ರೀ. ಎಸ್. ಎಸ್. ಪಾಲೀಮಠ ಅವರ 'ಒಕ್ಕಲುತನ ಮತ್ತು ವಿಜ್ಞಾನ' ಎಂಬ ಭಾಷಣವು ಅನು-ಭವಿಕರ ವಾಣಿಯಾಗಿದ್ದಿತು. ದಿ. ೧೭-೧೦-೫೧ ರಂದು ವಾರ್ತಾಸಮೀಕ್ಷೆ'ಯ ಹೆಸರಿನಿಂದ ಭಾಷಣಮಾಡಿದ ಪಂಡಿತರು, ಲಿಯಾಕತ ಅಲ್ಲಿಯವರ ಕೊಲೆಯ ವಿಚಾರ ಹೇಳುವಾಗ, ಅದೇ-ತಕ್ಕೆ ಅಷ್ಟೊಂದು ಗಾಬರಿಗೊಂಡಿದ್ದರೋ ಏನೋ! ಉಚ್ಚಾರ ಅಸ್ಪಷ್ಟ, ನಿರೂಪಣೆಯ ರೀತಿ, ಶೈಲಿ ತೀರ ಸಾಮಾನ್ಯ. ಇವರಿಗೆ ಭಾಷಣ ವಿಭಾಗದ ಪಿ. ಎ. ಗಳು ಮೊದಲೇ ತರಬಿಯತ್ತು ಕೊಟ್ಟಿರಲಿಲ್ಲವೇನೋ ಪಾಪ!

ನಾಟಕ ವಿಭಾಗ

ರಬಿಯಾ, ಸುಳ್ಳಿನ ಸಂತೆ, ರಕ್ಷತಾ ಎಂಬ ಹೆಸರಿನ ನಾಟಕಗಳು ಪ್ರತಿ ಶನಿವಾರ ಕ್ರಮವಾಗಿ ಬಿತ್ತರಗೊಂಡುವು. ಸತ್ಯವ್ರತ, ಸೀಮೋಲ್ಲಂಘನ ಎಂಬುವೆರಡು ಗಾಂಧಿಜಯಂತಿ, ವಿಜಯದಶಮಿಗಳಂದು ಬಿತ್ತರಗೊಂಡುವು 'ರಬಿಯಾ' 'ಸುಳ್ಳಿನ ಸಂತೆ' ಸಾಮಾಜಿಕ ವಸ್ತುಗಳಿಂದ ಕೂಡಿದ್ದು, ಹೊಸ ಲೇಖಕರ ಕೃತಿಗಳಾಗಿವೆ. ಇವುಗಳಲ್ಲಿ ಭಾಗವಹಿಸಿದ ನಟ-ವರ್ಗಕ್ಕೂ ಇವುಗಳನ್ನು ರಂಜಿಸಿ ತೋರಿಸಲಿಕ್ಕೆ ಸಾಧ್ಯವಾಗಲಿಲ್ಲ. 'ರಕ್ಷತಾ' ಪ್ರದರ್ಶನವು ಪರಿಣಾಮಕಾರಿಯಾಯಿತಾದರೂ ಕೃತಿಯಲ್ಲಿಯ ಪಾತ್ರ ಪರಿಪೋಷಣೆಯ ರೀತಿ ಚರ್ಚೆಗೆ ಆಸ್ಪದ ಮಾಡಿಕೊಡುವಂತಹದಾಗಿದೆ. 'ಸತ್ಯವ್ರತ'ವು ಅತಿಭಾವುಕ ಗುಣದ ಮೂಲಕ ಕಳೆಯ ಕಳೆಯನ್ನು ಕಳೆದು ಕೊಡುತ್ತಿತ್ತು. 'ಸೀಮೋಲ್ಲಂಘನ' ಒಂದು ಕಥೆಯನ್ನು ಪೂರ್ಣಗೊಳಿಸುವ ನಾಟಕವಲ್ಲ, ಐತಿಹಾಸಿಕ ಕಾಲದ ವಿಜಯದಶಮಿಯ ಸಮಾ-ರಂಭವೊಂದರ ಚಿತ್ರರೂಪಕ ಮಾತ್ರ. ಮುಖ್ಯ ನಟ-ನಟಿಯರ ಅಂದಿನ ಅಭಿನಯಾಭಾಷದ ಮೂಲಕ, ಕೃತಿಯ ತಿರುಳು ಅಭಿವ್ಯಕ್ತವಾಗಲೇ ಇಲ್ಲ.

ಇತರ ವಿಷಯ

ಮಕ್ಕಳ ಕಾರ್ಯಕ್ರಮದಲ್ಲಿ 'ರೇಡಿಯೋ ಕಾಕಾ'ನ ಪ್ರವೇಶವಾಗಿದೆ. ಅವನಿಂದ 'ಗಿಳಿವಿಂಡು' ಹೆಚ್ಚು ಜೀವಕಳೆ ಪಡೆಯುವುದೇನೋ ನೋಡಬೇಕು. 'ಗೃಹಲಕ್ಷ್ಮಿ'ಯ ಕಾರ್ಯಕ್ರಮಗಳಲ್ಲಿ ಅನುಭವಿಕರಾದ—ವಿದುಷಿಯರಾದ—ಗೃಹ-ಲಕ್ಷ್ಮಿಯರು ಹೆಚ್ಚು ಹೆಚ್ಚಾಗಿ ಭಾಗವಹಿಸಿ, ಅವರಲ್ಲಿ ಹೆಚ್ಚಿನ ಜೀವವನ್ನು ತುಂಬಬೇಕು.

ಸಾದರ ಸ್ವೀಕಾರ

卐

೯೪. **ಸೌಭಾಗ್ಯ** (ಪತ್ರಸಂಕಲನ) ಬೇರೆ ಬೇರೆ ಲೇಖಿಕೆಯರು ಬರೆದ ಕಲ್ಪಿತ ಪತ್ರಗಳನ್ನು ಶ್ರೀಮಾನ್ ಪ. ಸು. ಭಟ್ಟರು ಸಂಪಾದಿಸಿದ್ದಾರೆ. ಇದು ಶರಾವತಿ ಗ್ರಂಥಮಾಲೆಯ ೫ನೆಯ ಕುಸುಮ. ಕ್ರೌ. ಅ. ೧೨೦ ಪುಟಗಳು ಬೆಲೆ ೧-೮-೦.

೯೫. **ಶರಾವತಿಯಿಂದ ಸಾಬರಮತಿಗೆ** (ಒಕ್ಕಲುತನದ ಪ್ರವಾಸಪ್ರಬಂಧ) ಲೇಖಕರು ಶ್ರೀ ವಿ. ಚ. ಹಿತ್ತಲಮನಿ ಬಿ. ಎಸ್. ಸಿ (ಅಗ್ರಿ) ಆನರ್ಸ್, ಶರಾವತೀ ಪ್ರಕಟನಾ ಮಂದಿರದ ೬ನೆಯ ಕುಸುಮ. ಕ್ರೌ. ಅ. ೧೨೮ ಪುಟಗಳು ಬೆಲೆ ೧-೮-೦.

೯೬. **ಆರನೆಯ ತಾರೆ** (ಸಾಮಾಜಿಕ ನಾಟಕ) ಲೇಖಕರು ಶ್ರೀ. ನಾ. ಮ. ಕೋರವಾರ. ಶರಾವತೀ ಪ್ರಕಟನಾ ಮಂದಿರದ ೭ನೆಯ ಕುಸುಮ. ಕ್ರೌ. ಅ ೧೩೪ ಪುಟಗಳು ಬೆಲೆ ೧-೨-೦

೯೭. **ನೀಲಲೋಚನೆ** (ಸಣ್ಣ ಕತೆಗಳ ಸಂಕಲನ) ಬರೆದವರು. ಶ್ರೀ. ವಿ. ಚ. ಹಿತ್ತಲಮನಿ ಬಿ. ಎಸ್. ಸಿ. (ಅಗ್ರಿ) ಆನರ್ಸ್, ಶರಾವತೀ ಪ್ರಕಟನಾ ಮಂದಿರದ ೮ನೆಯ ಕುಸುಮ. ಕ್ರೌ. ಅ. ೧೧೪ ಪುಟಗಳು. ಬೆಲೆ ೧-೮-೦

೯೮. **ಚಟಾಕಿ** (ಮಕ್ಕಳ ಪುಟ್ಟ ಮಾಸಪತ್ರಿಕೆ) ಸಂಪಾದಕರು. ಶ್ರೀಮಾನ್ ಟಿ. ಉದಯಶಂಕರರು. ಪ್ರಕಾಶಕರು ಲಲಿತಾಪ್ರಿಯ ಮತ್ತು ರಾಮನಾಥ, ನಂ. ೧೦. ೧ನೆಯ ರಸ್ತೆ, ಶಂಕರಪುರ ಬೆಂಗಳೂರು-೪. ಡೆ. ೧/೧೬ ದ ೩೨ ಪುಟಗಳು. ಬಿಡಿ ಸಂಚಿಕೆಗೆ ೦-೨-೬

ನಮ್ಮ ಕಡೆಗೆ ಬಂದುದಿದು ೧ನೆಯ ವರ್ಷದ ೧ನೆಯ ಸಂಚಿಕೆ. ಪತ್ರಿಕೆ ಗುಣಪೂರ್ಣವಾಗಿ ಚಿರಾಯುವಾಗಲಿ !

೯೯. **ನೆನಹು** (ಒಂದು ಕತೆ) ಬರೆದವರು, ಶ್ರೀ. ಬಿ. ಆರ್. ವಿ. ರಾವ್ ಪ್ರಕಾಶಕರು, ಸೆಕ್ರೆಟರಿ ಕ. ಕೆ ಸಾ. ಬಳಗ, ಶಿಕಾರಿಪುರ, ಶಿವಮೊಗ್ಗಾ ಜಿಲ್ಲಾ. ಫೂ. ಕ್ಯಾ. ಅ. ೮ ಪುಟಗಳು. ಬೆಲೆ ೦-೪-೦

೧೦೦. **ಕತ್ತಲ ಬೆಳಕು** (ಕಥಾಸಂಕಲನ). ಲೇಖಕರು ಶ್ರೀ. ಹ. ವೆಂ. ನಾಗರಾಜರಾಯ, ಬೆಂಗಳೂರು. ಪ್ರಕಾಶಕರು ಆನಂದ ಬ್ರದರ್ಸ್, ಬೆಂಗಳೂರು ೨. ಕ್ರೌ. ಅ. ೮೬ ಪುಟಗಳು. ಬೆಲೆ ೧-೪-೦

೧೦೧. **ಸತಿ** (ಅನುವಾದಿತ ಐತಿಹಾಸಿಕ ಕಥೆ) ಮೂಲ ಬಂಗಾಲೀ ಗ್ರಂಥದ ಅನುವಾದಕರು ಶ್ರೀ. ಟಿ. ಸದಾಶಿವಯ್ಯ. ಪ್ರಕಾಶಕರು ಆನಂದ ಬ್ರದರ್ಸ್, ಬೆಂಗಳೂರು ೨. ಕ್ರೌ. ಅ. ೨೧೪+೧೨ ಪುಟಗಳು. ಬೆಲೆ ೨-೧೫-೦.

೧೦೨. **ಶ್ರೀ ಸ್ವಾಮಿ ರಾಮತೀರ್ಥ** (ಜೀವನ ಚರಿತ್ರ). ಲೇಖಕರು ಶ್ರೀ. ಟಿ. ಸದಾಶಿವಯ್ಯ, ದೇಶೀಯ ವಿದ್ಯಾಶಾಲಾ ಬೆಂಗಳೂರು ೪. ಪ್ರಕಾಶಕರು ಆನಂದ ಬ್ರದರ್ಸ್ ಬೆಂಗಳೂರು ೨. ಕ್ರೌ. ಅ. ೧೩೨ ಪುಟಗಳು. ಬೆಲೆ ೧-೧೨-೦.

೧೦೩. **ಬೃಂದಾವನ** (ಕಿರಿಯರ ಸಂಗೀತ ನಾಟಕ) ಬರೆದವರು ಶ್ರೀ. ಟಿ. ಸದಾಶಿವಯ್ಯ. ಪ್ರಕಾಶಕರು ಆನಂದ ಬ್ರದರ್ಸ್, ಬೆಂಗಳೂರು ೨. ಕ್ರೌ. ಅ. ೪೮ ಪುಟಗಳು. ಬೆಲೆ ೦-೧೨-೦.

೧೦೪. **ಬಾಣಂತಿಉಪಚಾರ** ಮತ್ತು **ಕೆಲವು ಸ್ತ್ರೀ ರೋಗಗಳು** (ವೈದ್ಯಕ ಗ್ರಂಥ). ಬರೆದವರು ಆಯುರ್ವೇದ ವಿಶಾರದ ಶ್ರೀ. ಗುಂಡಾಚಾರ್ಯ ಸವಣೂರ L. A. M. S. ಹುಬ್ಬಳ್ಳಿ. ಪ್ರಕಾಶಕರು ರಾಮಚಂದ್ರ ಬಳವಂತ ದೇಶಪಾಂಡೆ, ವಿವಿಧ ಜ್ಞಾನ ಸಾಹಿತ್ಯಮಾಲಾ ಆಫೀಸ್, ಕಲಬುರ್ಗಿ ಬಿಲ್ಡಿಂಗ್, ಮೋಟರ್ ಸ್ಟ್ಯಾಂಡ್, ಹುಬ್ಬಳ್ಳಿ. ಕ್ರೌ. ಅ. ೬೮ ಪುಟಗಳು ಬೆಲೆ ೧-೬-೦.

೧೦೫. **ಬೆಳವಡಿ ಮಲ್ಲಮ್ಮ** (ಆರು ತರಂಗರೂಪಕಗಳು) ಬರೆದವರು ಶ್ರೀ. ಆನಂದಕಂದರು. ಪ್ರಕಾಶಕರು : ಶರತ್ ಪ್ರಕಾಶನ ಮಂದಿರ, ವಿಜಯ ರೋಡ್, ಧಾರವಾಡ. ಕ್ರೌ. ಅ. ೧೯೬ ಪುಟಗಳು. ಬೆಲೆ ೧-೮-೦.

ಜಯಹಿಂದ ಭವನ

ಗಾಂಧಿಚೌಕ........ಧಾರವಾಡ

ದಿನ-ದಿನವೂ ದೀಪಾವಳಿಯ ಸವಿಯನ್ನು
ಅನುಭವಿಸಬೇಕಿದ್ದಲ್ಲಿ
ನಮ್ಮ 'ಜಯಹಿಂದ ಭವನ'ಕ್ಕೆ ಬನ್ನಿರಿ
ರೇಡಿಯೊ ಸಂಗೀತದ ಸುಮಧುರವಾದ ಹಿನ್ನೆಲೆಯಲ್ಲಿ
ರುಚಿರುಚಿಯಾದ ಬಿಸಿಬಿಸಿ ತಿಂಡಿ-ತಿನಿಸುಗಳ ಸವಿ !
ಕೆಲಸಮಾಡಿ ದಣಿದ ಮಿದುಳಿಗೆ ಹೊಸ ಹುರುಪು ಕೊಡುವ
ಚಹಾ, ಕಾಫೀ, ಕೋಕೋ, ಪೇಯಗಳು !
ಹಿರಿಯ ಕಿರಿಯ ಸವಿಗಾರರೆಲ್ಲರಿಗೂ ಸುಸ್ವಾಗತ !
ಒಮ್ಮೆ ಬಂದವರು ಮತ್ತೆಮತ್ತೆ ಇಲ್ಲಿಗೇ ಬರಬೇಕು
ಇಂತಹ ಚುಂಬಕಶಕ್ತಿ ನಮ್ಮ ಭವನದಲ್ಲಿದೆ.

ಸಂಚಾಲಕರು :—

ಎಂ. ಡಿ. ಕೃಷ್ಣರಾವ್ ಮತ್ತು
ಬಂಧುಗಳು.

ಪ್ರತಿಭಾ ಗ್ರಂಥಮಾಲೆಯ

ಎಂಟು ವರ್ಷಗಳ ಬೇಸಾಯ!

[illegible]

(ತಾ. ೧—೧೧—೧೯೫೧)

ಕಾದಂಬರಿಗಳು

ಅನ್ನಪೂರ್ಣಾಮಂದಿರ	ಶೆಟ್ಟಿ	೨-೦
ಅಶೋಕಚಕ್ರ	ಮಿರ್ಜಿ	೩-೮
ಇಂದ್ರಜಾಲ	ನವಗಿರಿನಂದ	೪-೦
ಎರಡು ಸೆಳೆತ	ಮುಲ್ಲಾರಿ	೧-೧೨
ಕರೀಬೆಕ್ಕು	(ಪತ್ತೆದಾರಿ)	೧-೪
ಕಾಲಯಾನ	ಭಾರತೀಸುತ	೧-೧೦
ಕೊಂದವರು ಯಾರು ?	(ಪತ್ತೆದಾರಿ)	೧-೪
ಕೊಲ್ಲಂಬ	ಹೊಸಮನೆ	೦-೧೪
ಗಂಡು ಹೆಣ್ಣಿನ ಸಮಸ್ಯೆ	ಕುಪ್ಪಮ್ಮ	೩-೦
ತರಲಾ	ಜೋಶಿ-ದೇಶಪಾಂಡೆ	೧-೦
ದಲಿತ ಕುಸುಮ	ಹೊಸಮನೆ	೩-೦
ದೇವರ ಸಾಮ್ರಾಜ್ಯ	ಶ್ರೀಕಂಠಯ್ಯ	೨-೦
ದೇವರೆಲ್ಲಿ	ರಮಾಕಾಂತ	೪-೦
ಧರ್ಮಸಂಕಟ	ವಾಡೇದ	೨-೦
ನಿರ್ದೋಷಿ	ಕುಮುಟಾ	೨-೦
ನೂರಜಹಾನ	ಗಲಗಲಿ	೧-೦
ನೇತಾಜಿ	ಮುಲ್ಲಾರಿ	೧-೮
ಪತಿ	ನವಗಿರಿನಂದ	೧-೬
ಪತಿವ್ರತೆಯ ಪ್ರಭಾವ	ಕೌಜಲಗಿ	೧-೪
ಪುನರ್ಮಿಲನ	ವಾಡೇದ	೩-೮
ಪೂಜಾಫಲ	ನೆರಂಗ	೧-೮
ಬಿರುಗಾಳಿ	ಪ್ರೊ. ಫಡಕೆ	೩-೮
ಬೆಳವಲದ ಭಾಗ್ಯಲಕ್ಷ್ಮಿ	ಕೇ. ಗೋ. ಕು.	೨-೮
ಭೂಮಾತೆ-ಮಂದಿರ	ಪರ್ಲ್ ಬಕ್	೧-೮
ಮರೆಯಲಾರದ ಮಡದಿ	ಯೋಗೀಶರಾವ್	೨-೦
ಮಾಧವಲೀಲೆ	ವೆಂಕಟೇಶಯ್ಯ	೧-೮
ಮುಗಿಲಮಲ್ಲಿಗೆ	ಪುರಾಣಿಕ	೩-೦
ಮಾಲತಿಮಂದಿರ	ಹೊಸಮನೆ	೨-೦
ಯಮದೂತ	ವಿಶ್ವಾಮಿತ್ರ	೧-೮
ರಂಗವಿಲಾಸಿನಿ	ಮುಲ್ಲಾರಿ	೩-೦
ರಮಾನಾಥ	ಪ್ರೇಮಚಂದ	೩-೦
ವಿಜಯಾ	ಶರತ್	೧-೮
ವೃಂದ	ವೆಂಕೋಬಾಚಾರ್ಯ	೧-೮
ವೈಕುಂಠನ ಮೃತ್ಯುಪತ್ರ	ಶರತ್	೧-೮
ಶೋಡಶಿ	,,	೨-೦
ಸಮ್ರಾಟ್ ಹರ್ಷವರ್ಧನ	ನಾಗೇಶ	೩-೦
ಸಾವಿನ ಊಡಿಯಲ್ಲಿ	ಎಸ್ಕೆ	೩-೦
ಸತ್ಸೇವೆ	ನವಗಿರಿನಂದ	೩-೮
ಸುಭಾಸಸೀಮೋಲ್ಲಂಘನ	ಮುಲ್ಲಾರಿ	೧-೮
ಸ್ವರ್ಣಭೂಮಿ	ಮುಲ್ಯ	೧-೪

ಕಥಾಸಂಕಲನಗಳು

ಗೃಹದಾಹ	ಪ್ರೇಮಚಂದ	೧-೮
ಘಾಟೀಮುದುಕ	ದೇವುಡು	೧-೮
ಚಂದ್ರತಾರೆ	ವರದರಾಜ	೧-೪
ಚಕಮಕಿ	ಬೇಂದ್ರೆ	೨-೦
ಚಿನ್ನದ ಪದಕ	ವೆಂ. ಮು. ಜೊ.	೧-೪
ನಿಸರ್ಗದಮಡಿಯಲ್ಲಿ	ಅನೇಕರು	೧-೮
ಪಂಜರದ ಹಕ್ಕಿ	ಮುಲ್ಲಾರಿ	೦-೧೪
ಪುಷ್ಪೋತ್ಸವ	ದೀಕ್ಷಿತ	೧-೦
ಪ್ರಣಯಸಮಾಧಿ	ಮಿರ್ಜಿ	೧-೪
ಬಾಳ್ಮೋಟೆಗಳು	ನಾಯ್ಕ	೦-೬

ನಾಟಕಗಳು

ಬಾಯಬಂಡಾಯ	ಬೇಂದ್ರೆ	೧-೮
ರೇಡಿಯೊ ನಾಟಕಗಳು	ಬೀಚಿ	೧-೮

ಚಂದಾದಾರರಾಗಿರಿ

ಪ್ರತಿವರ್ಷ ೯೦೦ ಪುಟಕ್ಕೆ
ಕಡಿಮೆಯಿಲ್ಲದ
ಮನೋಹರ ಕಥೆ, ಕಾದಂಬರಿ,
ನಾಟಕಗಳು

ಅಂಚೆವೆಚ್ಚ ಸೇರಿ
ಆರೇ ರೂಪಾಯಿಗಳಲ್ಲಿ
ನಿಮ್ಮ ಮನೆ ಬಾಗಿಲಿಗೇ
ತಲುಪುವವು

ಅಲ್ಲದೆ

ಹಳೆಯ ವರುಷದ ಮಾಲೆಯ ಚಂದಾದಾರರಿಗೆ ಈ ಪಟ್ಟಿಯಲ್ಲಿಯ ಪ್ರಕಟನೆಗಳಿಗೆ ರೂಪಾಯಿಗೆ ಎರಡಾಣೆ ರಿಯಾಯತಿಯುಂಟು. (ಅಂಚೆವೆಚ್ಚ ಮಾತ್ರ ಪ್ರತ್ಯೇಕ) ೨೫ರೂ.ಕ್ಕೆ ಮೇಲ್ಪಟ್ಟ ಬೇಡಿಕೆಗೆ ಅಂಚೆ ವೆಚ್ಚ ಕೂಡ ಉಚಿತ.

ಈ ಸುಸಂಧಿಯ ಲಾಭ ಪಡೆಯಲು ತಪ್ಪಬೇಡಿ.

ಸೂಚನೆ:— ಚಂದಾಹಣವನ್ನು ಯಾವಾಗಲೂ ಮುಂಗಡ ಕಳಿಸತಕ್ಕದ್ದು. ವರ್ಷದ ಮಧ್ಯದಲ್ಲಿಯೇ ಚಂದಾದಾರರಾದರೂ ಆ ವರ್ಷದ ಜನವರಿಯಿಂದ ಡಿಸೆಂಬರ್ ವರೆಗೆ ಹೊರಡುವ ಎಲ್ಲ ಪುಸ್ತಕಗಳನ್ನೂ ಕಳಿಸಲಾಗುವದು.

ಪ್ರತಿಭಾ ಗ್ರಂಥಮಾಲೆ. **ಭಗತಸಿಂಗ ಬೀದಿ, ಧಾರವಾಡ.**

ಪ್ರತಿಭಾ ಗ್ರಂಥಮಾಲೆ

ಒಂದೇ ಎಡೆ

—ಸಕಲವಿಧ ಸಾಹಿತ್ಯಾಭಿರುಚಿಯನ್ನು ತಣಿಸಲು—

ಕಾದಂಬರಿಗಳು

		ರೂ.	ಆ.
ರಾಜಯೋಗಿ	ಆನಂದಕಂದ	೨	೦
ಸುದರ್ಶನ	,,	೧	೮
ಮನೆಯ ಸುಖಶಾಂತಿ	ವ. ಪಿ.	೦	೧೧
ಹೊಸಹೆಜ್ಜೆ	ಭಾರ್ಗವ	೦	೧೦
ದೇವದಾಸ	ಶರತ್	೧	೮
ಶ್ರೀಕಾಂತ (೪ ಭಾ. ಸ್ವರ್ಗ)	,,	೧೨	೦
ಅರಗಿನ ಮನೆ	,,	೪	೦
ಅಕ್ಕಾಜಿ	,,	೧	೪
ಚಿತ್ರ	,,	೦	೧೨
ಪ್ರೇಮಪಥ	,,	೦	೬
ರತ್ನಗೋಲ (ಪತ್ತೇದಾರಿಕಾದಂಬರಿ)		೧	೦
ಹಂತಕನು ಯಾರು ?	,,	೧	೪
ಮಿಸ್ ಆಮೇಲಿಯಾ	,,	೧	೪
ಕಾಲಾಬಝಾರ್	,,	೧	೪
ಅದೃಶ್ಯಮನುಷ್ಯ	,,	೧	೦
ಕೊತವಾಲನ ಕಾರಸ್ಥಾನ		೧	೦
ಡಾಕ್ಟರ್ ಗಿರೀಶ	,,	೦	೬
ಪತ್ತೇದಾರ ಯಶವಂತರಾಯ		೨	೯

ಕಥೆಗಳು

ಮಾತನಾಡುವ ಕಲ್ಲು	ಆನಂದಕಂದ	೧	೪
ನಮ್ಮ ಬದುಕು	,,	೦	೧೪
ಲಾಂಛನ	ಪ್ರೇಮಚಂದ	೦	೫
ತೂರಂಪಾ	,,	೦	೫
ಮಾತ್ರೆಗಳು	ವೀ. ಬಿ.	೦	೧೩
ಮುಗಳಲ್ಲ ಹೆಂಡತಿ	ಯೋಗೀಶರಾವ್	೦	೧೨
ಉರ್ದೂ ಕಥಾವಳಿ	ಜೋಶಿ	೦	೮
ಪ್ರತಿಬಿಂಬ	ಫಾಡೇಕರ	೦	೮
ಮಹಾಸತಿ	ಶರತ್	೦	೫
ಮಂಗಳಸೂತ್ರ	,,	೦	೫
ಹೇಮಾಂಗಿನಿ	,,	೦	೯
ಗುರುಚರಣ	,,	೦	೪
ಮಹೇಶ	,,	೦	೪
ಅಭಾಗಿನಿಯ ಸ್ವರ್ಗಾರೋಹಣ	,,	೦	೩
ಇದು ನನ್ನದಲ್ಲ	ಮುಲ್ಲಾರಿ	೦	೯
ಗೋಡೆಯಲ್ಲಿ ಕಿಂಡಿ	,,	೦	೧೩

ನೌಕರಿ	ಫಾಡೇಕರ	೦	೨
ಬಂಗಾರದ ಹೊಗೆ	,,	೦	೨
ನಾರೀರತ್ನ	,,	೦	೨
ನಿಥವಾ ಕುಮಾರಿ	,,	೦	೩
ಕಲಿತ ಹೆಂಡತಿ	,,	೦	೨
ಗಾಂಧೀ ಹುಚ್ಚು	,,	೦	೨
ರಾವಬಹಾದ್ದೂರ	,,	೦	೨
ನಾನೇ ಹೊಲೆಯ	,,	೦	೨
ಸನಾತನೀ ಸೂಳೆ	,,	೦	೨
ಸೌಭಾಗ್ಯವತಿ	,,	೦	೩
ನೃತ್ಯಕಾಲಿ	ಮುಲ್ಲಾರಿ	೦	೬

ನಾಟಕಗಳು

ವಿದ್ಯಾರ್ಥಿ ವೇಷದಲ್ಲಿ (ದೇವದಾಸ)		೧	೦
ಸನ್ಯಾಸಿನಿ	ಹ. ಪಿ. ಜೋಶಿ	೦	೧೦
ಗಾಂಧೀಟೋಪಿ	ಫಾಡೇಕರ	೦	೨
ರೈತರ ಭಾಗ್ಯೋದಯ	,,	೦	೪
ಬಡವರ ರೊಟ್ಟಿ	,,	೦	೨

ಕಾಮವಿಜ್ಞಾನದ ಗ್ರಂಥಗಳು

ಕಾಮಶಾಸ್ತ್ರ	...	೧	೮
ಅನಂಗರಂಗ	...	೧	೮
ವಿಕೃತಕಾಮ	..	೧	೮
ಕಾಮಕುಂಜ	..	೧	೮
ರತಿರಹಸ್ಯ	...	೧	೮
ಫಿರಂಗಿ ಪರಮಾರೋಗ ಸಮಸ್ಯೆ		೦	೮
ಕಾಮದಹನದ ಭ್ರಾಂತಿ	...	೧	೦

ವಿಚಾರ ಸಾಹಿತ್ಯ ಮತ್ತು ಇತರ

ಕನ್ನಡಿಯ ಹುಟ್ಟು	ಶಂ. ಬಾ.	೧	೧೨
ಸಾಹಿತ್ಯಸಮೀಕ್ಷೆ—	ಧಾರವಾಡಕರ	೧	೮
ಪತ್ರಿಕಾವ್ಯವಸಾಯ	,,	೦	೧೨
ನಮ್ಮ ನೂತನರಾಜ್ಯಘಟನೆ		೦	೮
ಭೂ ಸುಧಾರಣೆಗಳು		೦	೮

ಹಸ್ತಸಾಮುದ್ರಿಕ ಶಾಸ್ತ್ರ

ಕೈಗನ್ನಡಿ (ಸಚಿತ್ರ)	ಕಲಮದಾನಿ	೧	೮

ಚರಿತ್ರ—ಇತಿಹಾಸ

ನೇತಾಜಿ (ಜೀವನಸಾಹಸ)		೧	೮
ಆಜಾದಹಿಂದ (ಸಚಿತ್ರ)		೧	೦
ಅಗಸ್ತ್ಯವೀರರು	ನಾಡಿಗ	೦	೮
ಗಾಂಧೀದರ್ಶನ (ಸಚಿತ್ರ)		೧	೦
ಪಮುಯಂತಿ	ಕೌಜಲಗಿ	೦	೮
ಕಾಂಗ್ರೆಸ್ಸಿನ ಇತಿಹಾಸ	ಜೋಶಿ	೦	೧೨
ಕ್ರಾಂತಿಯ ನೂರುವರ್ಷ		೦	೧೨

ಶ್ರೀಮತ್ ಶಿವಾನಂದ ಸ್ವಾಮಿಗಳ

ಬ್ರಹ್ಮಚರ್ಯವೇ ಜೀವನ ಅರ್ಥಾತ್ ವೀರ್ಯನಾಶವೇ ಮೃತ್ಯು	೩	೦
ಉದರದ ಆರೋಗ್ಯ ಮತ್ತು ಸ್ನಾಯು ಬಲ ಸಂವರ್ಧನೆ	೨	೦

ಕನ್ನಡ ಕಂದರಿಗಾಗಿ

ಪೆದ್ದನಪುರಿ	ಮುಲ್ಲಾರಿ	೦	೨
ಕತ್ತೆಯ ಮೇಳ	,,	೦	೨
ಕಳೆದ ಕಡಲೆ	,,	೦	೨
ಗೆಳೆಯ	,,	೦	೩
ಚಂದಪ್ಪ	,,	೦	೩
ಜಾಣ ಗುಬ್ಬಿ	,,	೦	೩
ಹೊಟ್ಟೆಡುಮ್ಮ	,,	೦	೩
ನರಿಗಳ ತಂತ್ರ	,,	೦	೩
ಮುದ್ದಮ್ಮನ ಸಂಸಾರ	,,	೦	೩
ರೆಕ್ಕೀ ನಕ್ರಪ್ಪ	,,	೦	೩
ಚೆಕ್ಕಮ್ಮನಂಗಡಿ	,,	೦	೨
ಓತೀಕಾಟನ ತಂಗಿ	,,	೦	೩
ಗಾಳಿಯ ಹಾವಳಿ	,,	೦	೩
ತಿರುವು ಮುರುವು	,,	೦	೩
ಗುಬ್ಬಚ್ಚಿ ಗೂಡು	,,	೦	೩
ಕೆಂಪುಮೋತಿ ಹಂಪಣ್ಣ	...	೦	೩
ಮೂವರು ಕಳ್ಳರು	...	೦	೩
ಮಂಗ ಎಂದರೆ ಮಂಗ	...	೦	೩
ಕನಕಾಂಗಿಯ ವಕೀಲಿ	...	೦	೩
ಬಂಗಾರ ಕೂದಲಿನ ರಾಕ್ಷಸ	....	೦	೩
ಚಿಕ್ಕ ಹುಡಿಗಿ ಪುಟ್ಟತಮ್ಮ	...	೦	೪
ಕಿಡಿಗೇಡಿ ಕಿಟ್ಟ	...	೦	೪
ಸೇರಿಗೆ ಸವ್ವಾಸೇರು	ಶೆಟ್ಟಿ ..	೦	೩
ಗುಡುಗುಡಿಯ ರಹಸ್ಯ	....	೦	೪
ಧ್ರುವನ ದೋಸ್ತ	....	೦	೨
ಮಕ್ಕಳ ಒಡವು	ಶಂ. ಬಾ.	೦	೪

ಸಮಾಜ ಪುಸ್ತಕಾಲಯ

ಭಗತಸಿಂಗಬೀದಿ, ಧಾರವಾಡ.

ಶರತ್ ಪ್ರಕಾಶನ ಮಂದಿರ, ಧಾರವಾಡ

(ಪುಸ್ತಕ ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು)

ಕನ್ನಡ ನಾಡಿನ ವಾಚನಾಲಯಗಳ ಸಂಚಾಲಕರು ಜ್ಞಾಪಕದಲ್ಲಿ ಇರಿಸಿಕೊಳ್ಳಬೇಕು !
ತಮ್ಮ ವಾಚನಾಲಯಕ್ಕೆ ಬೇಕಾಗುವ ಯಾವ ಕನ್ನಡ ಪುಸ್ತಕಗಳನ್ನೂ ಯೋಗ್ಯ ಬೆಲೆಗೆ
ಸಮಯಕ್ಕೆ ಸರಿಯಾಗಿ ಪೂರಯಿಸಲಾಗುವುದು.

'ಆನಂದಕಂದ' ರ ಕಥೆ, ಕಾದಂಬರಿ, ಕವನ ಸಂಕಲನ, ನಾಟಕಸಂಕಲನ, ಸಾಹಿತ್ಯ ಸಂಸ್ಕೃತಿಯ ಗ್ರಂಥಗಳು ಎಲ್ಲವೂ ನಮ್ಮಲ್ಲಿ ದೊರೆಯುವುವು. ವ್ಯಾಪಾರಿಗಳಿಗೆ ಅನುಕೂಲ ದರದ ಕಮಿಶನ್ ಕೊಡಲಾಗುವುದು. ಎಲ್ಲರೂ ನಮ್ಮೊಡನೆ ವ್ಯವಹಾರ ಬೆಳೆಯಿಸಬೇಕು. ನಮ್ಮ ಮಂದಿರ ಈಗ ತಾನೆ ಪ್ರಕಟಿಸಿದ 'ಆನಂದಕಂದರ' ತರಂಗರೂಪಕ ಸಂಕಲನ :

ಬೆಳವಡಿ ಮಲ್ಲಮ್ಮ

ಕ್ರೌ. ೮. ೧೧೬ ಪುಟ : ಬೆಲೆ ೧–೮–೦

ಬೇಗನೇ ಪ್ರಕಟವಾಗಲಿರುವ ಗ್ರಂಥ : **ಕಾರಹುಣ್ಣಿವೆ** (ಕವನಸಂಗ್ರಹ), ಒಂದು ಸಾ. ಕಾದಂಬರಿ

ಸದ್ಯ ನಮ್ಮಲ್ಲಿ ದೊರೆಯುವ 'ಆನಂದಕಂದ'ರ ಗ್ರಂಥಗಳು

ಕಾದಂಬರಿ

ರಾಜಯೋಗಿ
ಸುದರ್ಶನ

ಕವನ ಸಂಕಲನ

ವಿರಹಿಣಿ
ಒಡನಾಡಿ

ಕಥಾಸಂಕಲನ

ಬಡತನದ ಬಾಳು
ನಮ್ಮ ಬದುಕು
ಸಂಸಾರ ಚಿತ್ರ
ಮಾತನಾಡುವ ಕಲ್ಲು

ಇತರ ಗ್ರಂಥಗಳು

ಕರ್ನಾಟಕ ಜನಜೀವನ

ಜೀವನ ಚರಿತ್ರ

ಶ್ರೀ. ಬಸವಣ್ಣನವರು

ಅಲ್ಲದೆ ಶ್ರೀ. ಹುದ್ದಾರರ '**ಚಿತ್ರಕಲಾಪ್ರವೇಶವೂ**' ಚಾಡಿಯ ಚಾಣಿಕ್ಯನ 'ಜಾತೀಯಸಮಸ್ಯೆ' '**ಕರ್ನಾಟಕ ಏಕೀಕರಣ**', ಈ ಕಿರುಹೊತ್ತಿಗೆಗಳೂ ದೊರೆಯುವುವು.

ಶರತ್ ಪ್ರಕಾಶನ ಮಂದಿರಕ್ಕೆ ೨ರೂ. ಸಲ್ಲಿಸಿ ಗ್ರಾಹಕ ಸದಸ್ಯರಾದವರಿಗೆ ವಿಶೇಷ ಸವಲತ್ತುಗಳು.
ಬೇಗನೇ ಪತ್ರವ್ಯವಹಾರವನ್ನು ಮಾಡಿರಿ.

ಸಂಚಾಲಕ : ಎಸ್. ಡಿ. ಧರಮುಷ್ಟಿ ಶ. ಪ್ರ. ಮಂದಿರ ಧಾರವಾಡ.



Printed by V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar – 3474-51.

೧೯೫೧ನೆಯ ಡಿಸೆಂಬರ್

ಕನ್ನಡ ಕಲಾವಿದನೊಬ್ಬನ ಕನಸಿನ ಕಿನ್ನರಿ.

ಸಂಪುಟ ೧೪ | ೧ನೆಯ ಡಿಸೆಂಬರ್ ೧೯೫೧ | ಸಂಚಿಕೆ ೬

ಈ ಸಂಚಿಕೆಯಲ್ಲಿ:

ಕನ್ನಡ ಕಲಾವಿದನೊಬ್ಬನ ಕನಸಿನ ಕಿನ್ನರಿ (ಮುಖಚಿತ್ರ)
ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯ ಕೃಪೆಯಿಂದ
ಇನ್ನೊಂದು ಪುಟ್ಟ ಹಕ್ಕಿಗೆ (ಕವನ)
ಶ್ರೀ. ಚೆನ್ನವೀರ ಕಣವಿ ಬಿ.ಎ. (ಆನರ್ಸ್) ಧಾರವಾಡ ೨೬೧
ಕಾಂಗ್ರೆಸ್ಸು ಗೆಲ್ಲುವುದೇ ? (ಸಂಪಾದಕೀಯ)
ಸಂಪಾದಕರು ೨೬೨
ನಾಡನಡೆ (ಪ್ರಾಸಂಗಿಕ ಟಿಪ್ಪಣಿ)
'ಕಾಲಭೈರವ' ೨೬೩
ಗುಡಿ (ಮನೋವಿಶ್ಲೇಷಣಾತ್ಮಕ ಕಥೆ)
ಶ್ರೀ. ಕುಲಕರ್ಣಿ ಬಿಂದುಮಾಧವ, ಬಾದಾಮಿ ೨೬೫
ಶ್ರೀ ಪುರಂದರದಾಸರು (ಸಂಗೀತದಲ್ಲಿಯ ವ್ಯಕ್ತಿತ್ವ)
ಶ್ರೀ. ಎಸ್. ರಾಜಾರಾಯರು ಬಿ. ಎ. (ಆನರ್ಸ್)
ಧಾರವಾಡ ೨೭೨
ಕಥೆಗೆ ವಸ್ತು (ಜೀವನಚಿತ್ರ ಮಾಲೆ)
ಶ್ರೀ. ಶೇಷಗಿರಿ ಪ್ರಭು ಎಂ.ಜಿ. ಎಂ. ಕಾಲೇಜ್ ಉಡುಪಿ ೨೭೪
ರಚನೆಗೊಳುತಿದೆ ನಾಡು ಹೊಸಹಸೆಯ ಮೇಲೆ ! (ಕವನ)
ಶ್ರೀ ಡಿ.ಎಸ್. ಕರ್ಕಿ ಎಂ.ಎ., ಪಿಎಚ್. ಡಿ. ಬೆಳಗಾಂವಿ ೨೭೮
ರಥಯಾತ್ರೆ (ಕವನ)
ಶ್ರೀ. ಶಿವರುದ್ರಪ್ಪ ಬಿ. ಎ. (ಆನರ್ಸ್) ದಾವಣಗೇರಿ ೨೭೮
ಸ್ವಾತಂತ್ರ್ಯ (ಕಿರುಗವಿತೆ)
'ಆನಂದಕಂದ' ೨೭೮
ಪ್ರತಿಜ್ಞಾಪೂರ್ತಿ (ಪೌರಾಣಿಕ ನಾಟಕ)
ಶ್ರೀ. ದೇಶಪಾಂಡೆ ರಂಗರಾಯರು, ಆಲದಕಟ್ಟಿ ೨೭೯
ಪೃಥ್ವಿಯ ಭವಿತವ್ಯ (ವಿಜ್ಞಾನ ಪ್ರಬಂಧ)
ಶ್ರೀ. ಎನ್. ಜಿ. ಕಟ್ಟಿ ಬಿ. ಎಸ್‌ಸಿ. (ಟೆಕ್) ಕೊಲ್ಹಾಪುರ ೨೮೨
ಜಲಕನ್ನಿಕೆಯರು (ರೂಪಕ ಕಥೆ)
ಶ್ರೀ. ಹ.ಸೋ. ಯೋಗೀಶ ಬಿ.ಎ. (ಆನರ್ಸ್) ಧಾರವಾಡ ೨೯೦
ಮಿಸಾಸೀಕಂಸ (ಒಂದು ಹರಟೆ)
ಶ್ರೀ. ಎನ್. ಕೆ. ಕುಲಕರ್ಣಿ ಎಂ.ಎ., ಬಿ.ಟಿ. ಧಾರವಾಡ ೨೯೧
ನಾಕಂಡ ನಾಡು (ಬನಾರಸಿನಲ್ಲಿಯ ಭಾವ-ಭಂಗಿ)
ಶ್ರೀ. ಮಿರ್ಜಿ ಅಣ್ಣಾರಾಯರು, ಉಗಾರ ೨೯೩
ಪುಸ್ತಕ ವಿಮರ್ಶೆ (ಆರೋಗ್ಯಜೀವನ.)
ಶ್ರೀ. ಬಿ. ಪಿ. ಎಸ್. ರಾವ್. ೨೯೭
ಆಕಾಶವಾಣಿಯ ಆಗುಹೋಗು
'ಕೇಳುಗರ ಕೈವಾರಿ' ೨೯೮
ಸಾದರ ಸ್ವೀಕಾರ ೩೦೦

ಜಯಂತಿ ಕಥಾಸ್ಪರ್ಧೆ

ವಿವರಗಳಿಗಾಗಿ

★

ಜನವರಿ ಸಂಚಿಕೆಯನ್ನು

ನೋಡಿರಿ !

★

ತರುಣ ಕತೆಗಾರರ ಸ್ವಂತದ

ಪರೀಕ್ಷೆಗೆ ಅನುಕೂಲ ಕಾಲ!

ಮಹಾ ಚುನಾವಣೆ — ಬಂದೇ ಬಂದಿತು
ತಿಂಮನ ತಲೆಯು — ತಂದೇ ತಂದಿತು

ಮತವಿದ್ದರೆ ಸಾಲದು-ಮತಿಯೂ ಬೇಕು

ಎರಡನೆ ವರುಷದ ಮೊದಲ ಮುತ್ತು

ತಿಂಮನ

'ಹನ್ನೊಂದನೆ ಅವತಾರ'

೨-೮-೦

ನಗೆಗಡಲೊಳಗೆ ಮುಳುಗಿ

ತಿಳುವಿನ ತೆರೆಯೊಳಗೆ ತೇಲಿರಿ

ವಾರ್ಷಿಕ ವಂತಿಗೆ — **ಐದೇ ರೂಪಾಯಿ**
ಒಂದೇ ವರ್ಷದಲ್ಲಿ — **ಮೂರು ಪುಸ್ತಕಗಳು**

ತಿಂಮ ಸಾಹಿತ್ಯ ಮಾಲಾ, ಬಳ್ಳಾರಿ

ಸಂಪಾದಕರು : ಬೆಟಗೇರಿ ಕೃಷ್ಣಶರ್ಮ



ಸಂಪುಟ ೧೪ ಸಂಚಿಕೆ ೭

ಮತ್ತೊಂದು ಪುಟ್ಟಹಕ್ಕಿಗೆ:

ಶ್ರೀ. ಚೆನ್ನವೀರ ಕಣವಿ, ಧಾರವಾಡ.

ಎಲ್ಲಿಂದ ಬಂದೆ ನೀ ನನ್ನ ಮುದ್ದಿನ ಹಕ್ಕಿ ?—
"ಹದುಳ"—ಎನ್ನುವ ಮೊದಲೆ ಹಾರಬೇಡಾ;
ಒಂದು ಚಣವಾದರೂ ನನ್ನ ಬಳಿಯಲಿ ಕುಳಿತು
ಕುಶಲವಾರ್ತೆಯ ನಾಲ್ಕು ಮಾತನಾಡಾ! ೧

ಎಂದಾದರೊಂದು ದಿನ ಅಂದ-ಚೆಂದಕೆ ಬರುವೆ,
ನೋಡ ನೋಡುತ ಪಕ್ಕಬೀಸಿ ಬಿಡುವೆ;
ನನ್ನ ಹೃದಯದ ಮಾತು ಹೃದಯದಲ್ಲಿಯೆ ಉಳಿಯೆ
ಒಲವು ನಲವಿಗೆ ಸಂಚಕಾರ ಕೊಡುವೆ. ೨

ನಿನ್ನ ಹಾಡಿನ ಮುಂದೆ ನನ್ನದೇತರ ಹಾಡು ?—
ನಿನ್ನ ಹಾಡಿಗು ನನಗು ಜನ್ಮಗಂಟು!
ನೀ ಕಂಡ ಬನದಲ್ಲಿ ಬಾನಿನಲಿ ಕಾನಿನಲಿ
ಇವಳು ಮೀರಿದ ಬೇರೆ ಭಾವವುಂಟು. ೩

ನಿನ್ನಧ್ವನಿ ಸ್ವಚ್ಛಂದ ಆನಂದದುಕ್ಕಿಂದ
ಹೊಚ್ಚಹೊಸ ಮಳೆಯ ತನಿಸೆಳಕಿನಂತೆ!
ಹಚ್ಚಹಸುರಿನ ಬನದಿ ಗಿರಿಶಿಖರದಿಂದುರುಳಿ
ಹರಿವ ನದಿಯಲಿ ನಾದ ತುಳುಕಿದಂತೆ! ೪

ಪುಟ್ಟಜೀವಿಯ ಇಂಥ ಪುಟ್ಟ ಎದೆಯೊಳದೆಂತು
ಗಾನಮಹಿಮೆಯು ತಾನೆ ಚಿಮ್ಮುತಿಹುದೊ!
ಇಳೆಯ ಬಾಳಿನ ಸಾರಸರ್ವಸ್ವಸುಧೆಯಲ್ಲಿ
ಹಕ್ಕಿಕಂಠದೊಳಿಂತು ಹೊಮ್ಮುತಿಹುದೊ! ೫

ಮೇಲೆ ನೀಲಾಂಬರದಿ ನೋಡ ತೂಗಾಡುವ
ನಿನ್ನ ಗಾಯನ ಸುಧಾಪಾನದಲ್ಲಿ;
ನಿನ್ನ ಧ್ವನಿ 'ಗೋ' ಎಂದು 'ಆ' ಎಂದು 'ಬಾ' ಎಂದು
ದಿಕ್ಕು ಕರೆಕರೆದಿಹವು ತಮ್ಮೊಳಲ್ಲಿ! ೬

ಮರದುದಿಗೆ ಹೊಂಬಿಸಿಲ ಬಾವುಟವು ತೂಗಿಹುದು -
ಸೃಷ್ಟಿ ಫಲದೂಗಿರಲು ಹೆಚ್ಚಿಗೇಕೆ?
ನನ್ನೆದೆಯು ಮೌನದಲಿ ಕರಗಿ ನೀರಾಗಿರಲು
ಆರಿಗಾರೋ ಎಂದು ಹಾರಲೇಕೆ? ೭

ಏನಾದರೂ ಇರಲಿ ಹಾಡ ನಿಲ್ಲಿಸಬೇಡ;
ದೀಪ ಪಟ್ಟನೆ ಆರಿಹೋಗಬಹುದು!
ನನ್ನೆದೆಯ ಕತ್ತಲೆಯ ಕಣ್ಣುಕಪ್ಪಡಿ ಮತ್ತೆ
ಮೂಲೆ ಮೂಲೆಗು ಹೋಗಿ ಹಾಯಬಹುದು! ೮

ಬದುಕು ಸೋಲಾದರೂ ಕಾಡುಪಾಲಾದರೂ
ಹಾಡ ಬಿಟ್ಟುಳಿದವನ ಪಾಡು ಬೇಡ;
ನೀನೆನ್ನ ದೈವತವು, ಹಾಡೆನ್ನ ಜೀವಿತವು,
ಮತ್ತೆ ಮತ್ತುಳಿದವರ ಮಾತು ಬೇಡ! ೯

ಕಾಂಗ್ರೆಸ್ಸು ಗೆಲ್ಲುವುದೆ?

(ಸಂಪಾದಕೀಯ)

ಬರಲಿರುವ—ಭಾರತದ—ಮಹಾಚುನಾವಣೆಯು, ಭಾರತದ ರಾಜಕಾರಣದಲ್ಲಿ ಮಹತ್ತ್ವದ ವಿಷಯವಾಗಿದೆಯಲ್ಲದೆ, ಜಾಗತಿಕ ಮಹತ್ತ್ವದ ಸಮಸ್ಯೆಯೂ ಆಗಿದೆ. ಭಾರತಕ್ಕೆ ಸ್ವಾತಂತ್ರ್ಯ ಬಂದಂದಿನಿಂದಲೂ ಅಂದಿನ ಸುಸಂಘಟಿತ ರಾಜಕೀಯ ಸಂಸ್ಥೆಯಾದ ಕಾಂಗ್ರೆಸ್ಸಿನ ಕೈಯಲ್ಲಿಯೆ ಬಂದುವು, ಭಾರತದ ರಾಜಕೀಯ ಆಡಳಿತದ ಅಧಿಕಾರಸೂತ್ರಗಳು. ಅಂದಿನಿಂದ ಇದುವರೆಗೂ ಅವು ಕಾಂಗ್ರೆಸ್ಸಿನ ಕೈಯಲ್ಲಿಯೇ ಅಬಾಧಿತವಾಗಿ ಉಳಿದುವು. ಸ್ವಾತಂತ್ರ್ಯದ ಹೋರಾಟದಲ್ಲಿ ಬ್ರಿಟಿಷರೊಂದಿಗೆ ಆದ ಕೊನೆಯ ಒಪ್ಪಂದದ ಮೇರೆಗೆ, ಕಾಂಗ್ರೆಸ್ಸೇ ಅಧಿಕಾರಸೂತ್ರಗಳನ್ನು ವಹಿಸಿಕೊಂಡು, ಎದುರಿಸುತ್ತಲಿದ್ದ ವಿರೋಧಕಪರಿಸ್ಥಿತಿಗಳನ್ನೂ ಕಷ್ಟದಿಂದ ಹೇಗೊ ಹೇಗೊ ದಾಟಿಕೊಂಡು, ತನ್ನ ಆಡಳಿತದ ನಾಲ್ಕುವರೆ ವರ್ಷಗಳನ್ನು ಕಳೆಯಿತು. ಈ ಅವಧಿಯಲ್ಲಿಯೆ ಭಾರತದ ನವೀನ ರಾಜ್ಯಘಟನೆ ನಿರ್ಮಾಣವಾಗಿ, ತಾತ್ಕಾಲಿಕ ಪಾರ್ಲಿಮೆಂಟೂ ರೂಪುಗೊಂಡಿತು. ಕೇಂದ್ರ ಮಂತ್ರಿಮಂಡಲದಲ್ಲಿಯೂ ಪಾರ್ಲಿಮೆಂಟಿನಲ್ಲಿಯೂ ಕಾಂಗ್ರೆಸ್ಸಿಗರದೇ ಮೇಲುಗೈಯಾಗಿ, ಸರಕಾರದ ರಾಜಕೀಯ ಧೋರಣದ ನಿರ್ಣಾಯಕರು ಕಾಂಗ್ರೆಸ್ಸಿಗರೇ ಆದರು. ಆಗ ಕಾಂಗ್ರೆಸ್ಸಿನ ಹೊರತು ಬೇರೆ ಸುಸಂಘಟಿತ ರಾಜಕೀಯ ಸಂಸ್ಥೆಗಳು ಭಾರತದಲ್ಲಿ ಇರಲಿಲ್ಲವೆಂತಲ್ಲ; ಆದರೆ ಅವು ಕಾಂಗ್ರೆಸ್ಸಿನಷ್ಟು ಶಕ್ತಿಸಂಪನ್ನವಾಗಿರಲಿಲ್ಲವಿಷ್ಟೇ ಅಲ್ಲ; ಘಟನಾತ್ಮಕರೀತಿಯಿಂದ ಅವುಗಳಿಗೆ ಮುಂದುವರಿದು ಹೋಗಲಿಕ್ಕೂ ಬರುವಂತಿರಲಿಲ್ಲ. ಆದುದರಿಂದ ಇದುವರೆಗಿನ ಭಾರತೀಯ ಸರಕಾರವೆಂದರೆ ಕಾಂಗ್ರೆಸ್ಸಿನ ಸರಕಾರವೇ ಆಗಿದ್ದಿತು.

ಇಂದು ನೋಡಿದರೆ, ಪರಿಸ್ಥಿತಿಯೇ ತಲೆಕೆಳಗಾಗಿ ಬಿಟ್ಟಿದೆ. ಹೋರಾಟದ ಕಾಲದಲ್ಲಿ ಸುಸಂಘಟಿತವಾಗಿದ್ದ ಕಾಂಗ್ರೆಸ್ಸು, ಆಡಳಿತದ ಈ ನಾಲ್ಕುವರೆ ವರ್ಷಗಳಲ್ಲಿ ಹಳಿಯುದಾದ ಹುಳಿತ ತೆಂಗಿನಂತಾಗಿದೆ. ಹೋರಾಟಕಾಲದಲ್ಲಿ ಜನತೆಯ ವಿಶ್ವಾಸವನ್ನು ಗಳಿಸಿಕೊಂಡ ಪ್ರಮಾಣದಲ್ಲಿಯೇ, ಆಡಳಿತದ ಈ ಅಲ್ಪಾವಧಿಯಲ್ಲಿ ಜನತೆಯ ಅವಿಶ್ವಾಸ-ಅಶ್ರದ್ಧೆಗಳಿಗೆ ಪಾತ್ರವಾಗಿದೆ. ಇದರ ಕಾರಣವಿಮಾಂಸೆಯೇನೇ ಇರಲಿ; ಕಾಂಗ್ರೆಸ್ಸಿನ ವ್ಯವಸ್ಥೆ ಅನವಸ್ಥೆಗೆ ಗುರಿಯಾದುದು ಯಾರೂ ಒಪ್ಪಿಕೊಳ್ಳಬೇಕಾದ ಮಾತು. ಹಿಂದಿನ ಚುನಾವಣೆಯಲ್ಲಿ ಕಾಂಗ್ರೆಸ್ಸಿಗರೊಂದಿಗೆ ಹೋರಾಟ ಹೂಡಲು ಸಂಪೂರ್ಣ ಭಾರತದಲ್ಲಿ ಯಾರಿಗೂ ಧೈರ್ಯವಾಗುತ್ತಿರಲಿಲ್ಲ. ಧೈರ್ಯಮಾಡಿ ನಿಂತವರೂ ಪರಾಜಿತರಾಗಿ ಕಾಂಗ್ರೆಸ್ಸಿನ ಸಾಮರ್ಥ್ಯವನ್ನು ಕಂಡುಕೊಂಡು ತಲೆಯನ್ನು ಬಾಗಿಸಿದರು. ಇಂದು ನೋಡಿದರೆ, ಭಾರತದಲ್ಲಿ ಎಲ್ಲ ಕಡೆಗೂ ಸಾಮಾನ್ಯ ವ್ಯಕ್ತಿಯೂ ಕಾಂಗ್ರೆಸ್ಸನ್ನು ಎದುರಿಸಲು ಸನ್ನದ್ಧನಾಗಿ ನಿಂತಿದ್ದಾನೆ. ಬೇರೆ ಬೇರೆ ರಾಜಕೀಯ ಸಂಸ್ಥೆಗಳ ಪ್ರತಿನಿಧಿಗಳಲ್ಲದೆ ವೈಯಕ್ತಿಕವಾಗಿಯೂ ಚುನಾವಣೆಯ ಕಣಕ್ಕಿಳಿದಿದ್ದಾರೆ ಬಹುಸಂಖ್ಯಾಕರು.

ಇಂದು ಚುನಾವಣೆಯ ಕಣಕ್ಕಿಳಿದ ಯಾವ ರಾಜಕೀಯ ಸಂಸ್ಥೆಯ ಕಡೆಗೆ ಕಣ್ಣುಬಿಟ್ಟು ನೋಡಿದರೂ, ಆ ಆ ಸಂಸ್ಥೆಯ ಮೂಲ ಸಂಘಟಕರು, ಒಂದು ಕಾಲದ ಕಾಂಗ್ರೆಸ್ಸಿನ ಮುಂದಾಳುಗಳೇ ಆಗಿದ್ದಾರೆ. ಅವರು ಕೂಡ ಸ್ವಾತಂತ್ರ್ಯದ ಹೋರಾಟದ ಕಾಲದಲ್ಲಿ ಸ್ವಾರ್ಥತ್ಯಾಗಮಾಡಿದವರೇ ಆಗಿದ್ದಾರೆ. ಬುದ್ಧಿವಂತಿಕೆಯಲ್ಲಿಯೂ ಕರ್ತೃತ್ವಶಕ್ತಿಯಲ್ಲಿಯೂ ಪ್ರಾಮಾಣಿಕತನದಲ್ಲಿಯೂ—ಇಂದಿನ ಕಾಂಗ್ರೆಸ್ಸಿನ ನಾಯಕರಿಗೆ— ಯಾವ ರೀತಿಯಿಂದಲೂ ಕಡಿಮೆಯೆನಿಸಿಕೊಳ್ಳುವಂತಿಲ್ಲ: ಆ ಆ ಸಂಸ್ಥೆಗಳ ಬೇರೆ ಬೇರೆ ನಾಯಕರಿಗೆ ವಿಶ್ವಾಸದ ಅನುಯಾಯಿಗಳೂ ದೊರೆತಿದ್ದಾರೆ. ಇಂದಿನ ಅನ್ನ-ವಸ್ತ್ರಸಮಸ್ಯೆಯಿಂದಲೂ ಆಡಳಿತದ ದುರವಸ್ಥೆಯಿಂದಲೂ ಕಂಗೆಟ್ಟು ಹೋಗಿರುವ ಸಾಮಾನ್ಯಜನತೆ, ಯಾವುದೇ ರಾಜಕೀಯ ಪಕ್ಷಕ್ಕೆ ಕಟ್ಟುಬಿದ್ದಿಲ್ಲವಾದರೂ, ಯಾವ ಪಕ್ಷದ ಗೆಲವಿನಿಂದ ತಮಗೆ ಸುಖಜೀವನ ದೊರೆತೀತೆಂಬ ಯೋಚನೆಯಲ್ಲಿದೆ. ಚುನಾವಣೆಗೆ ಸೇರಿದ ಎಲ್ಲ ಸಂಸ್ಥೆಗಳೂ ವ್ಯಕ್ತಿಗಳೂ ಸಹಸ್ರ–ಸಹಸ್ರಮುಖದಿಂದ ಕಾಂಗ್ರೆಸ್ ಸಂಸ್ಥೆಯೊಂದನ್ನೆ ಬೈಯುತ್ತ ಹೊರಟಿವೆ. ಕಾಂಗ್ರೆಸ್ಸಿಗರ ವಿಷಯದಲ್ಲಿ ಜನತೆ ಮೊದಲೇ ಸಂದಿಗ್ಧಭಾವದ್ದು ; ಅದರಲ್ಲಿ ವಿರೋಧಕಪ್ರಚಾರದ ಹಾವಳಿಬೇರೆ. ಹೀಗಿರುವಾಗ 'ನಾಳೆಯ ಭಾರತದ ಆಳುವವರು ನಾವೇ' ಎಂಬ ವಿಶ್ವಾಸ, ಕಾಂಗ್ರೆಸ್ಸಿಗರಲ್ಲಿ ಎಷ್ಟರ ಮಟ್ಟಿಗೆ ಗಟ್ಟಿಗೊಂಡಿದ್ದೀತು ?

ಇನ್ನೂ ಒಂದು ಸಂಗತಿ: ಪ್ರಾಂತ-ಪ್ರಾಂತಗಳಲ್ಲಿ ನಡೆದಿರುವ ಕಾಂಗ್ರೆಸ್ಸಿಗರಲ್ಲಿಯ ಒಳಜಗಳಗಳನ್ನು ನೋಡಿದರೆ, ಕಾಂಗ್ರೆಸ್ ಸಂಸ್ಥೆಯು ತ್ಯಾಗಸ್ವರೂಪ ನಷ್ಟವಾಗಿ, ಅಧಿಕಾರ ಸಂಪಾದಿಸಬೇಕೆಂಬ ಭೋಗಸ್ವರೂಪ ಅದಕ್ಕೆ ಪ್ರಾಪ್ತವಾಗಿರುವಂತೆ ಕಾಣುತ್ತಲಿದೆ. ಕಾಂಗ್ರೆಸ್ ಸಂಸ್ಥೆಯ ತತ್ತ್ವಜ್ಞಾನ ತ್ಯಾಗಪೂರ್ಣವಾಗಿ ತೋರಬಹುದಾದರೂ, ಅದರ ಗಿಳಿಯೋದನ್ನು ಓದುವ ಅನುಯಾಯಿವರ್ಗದ ಆಚಾರ-ವಿಚಾರಗಳು, ಸ್ವಾರ್ಥಮಯವಾಗಿವೆಯೆಂಬುದು, ಹಳ್ಳಿಯ ಹುಂಬರಿಗೂ ಕಂಡುಂಡ ಮಾತಾಗಿದೆ. ಆಡಿದುದನ್ನು ಮಾಡದ ಅಧಮವ್ಯಕ್ತಿಗೆ ಚುನಾವಣೆಯಲ್ಲಿ ಗೆಲವನ್ನು ಗಳಿಸಿಕೊಟ್ಟರೆ, ತನಗೆ ಬೇಕಾದ ಸುಖಶಾಂತಿಗಳನ್ನು ಅನುಭವಿಸಲಿಕ್ಕಾದೀತೇ ಎಂದು ಜನತೆ ವಿವಂಚನೆಯಲ್ಲಿದೆ. ಕಾಂಗ್ರೆಸ್ಸಿನಿಂದ ಮಹಾಚುನಾವಣೆಗೆ ನಿಂತ ಅಭ್ಯರ್ಥಿಗಳು, ಈ ಎಲ್ಲ ವಿರೋಧಕ ಚಕ್ರವ್ಯೂಹಗಳನ್ನು ದಾಟಿ ಗೆಲವು ಪಡೆಯಬೇಕಾದರೆ, ಅಂತಹ ವಿಶಿಷ್ಟವ್ಯಕ್ತಿತ್ವವನ್ನು ಪಡೆದವರಾಗಿದ್ದರೆಯೆ ಸಾಧ್ಯವಾದೀತು. ಹಿಂದೆ ಕಾಂಗ್ರೆಸ್ ಸಂಸ್ಥೆಯ ಹೆಸರಿನಿಂದ ವ್ಯಕ್ತಿಗಳು ಜಯಶೀಲರಾದರು. ಇಂದು ವ್ಯಕ್ತಿ-ವ್ಯಕ್ತಿಗಳು ಕೂಡಿ ಕಾಂಗ್ರೆಸ್ಸಿಗೆ ಜಯವನ್ನು ತಂದುಕೊಡಬೇಕಾಗಿದೆ. ಆದರೆ ಅಂತಹ ವ್ಯಕ್ತಿತ್ವ ಇಂದಿನ ಕಾಂಗ್ರೆಸ್ಸಿಗರಾದ ಅಭ್ಯರ್ಥಿಜನರಲ್ಲಿ ಇದೆಯೆ ? ಇಲ್ಲವಾದರೆ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಗೆಲವೂ ಇಲ್ಲ. ಕಾಂಗ್ರೆಸ್ಸು ಗೆಲ್ಲದೆ ಹೋದರೆ, ದೇಶದ ದುರ್ದಶೆಗೆ ಕೊನೆಯೂ ಇಲ್ಲ.

—ಸಂಪಾದಕರು

ನಾಡನಡೆ

ಇಂಗ್ಲಿಷ್ ಜನತೆಯ ರಾಷ್ಟ್ರಹಿತ ದೃಷ್ಟಿ

ಇಂಗ್ಲಂಡಿನಲ್ಲಿ ಕ್ಲೆಮೆಂಟ್ ಆಟ್ಲೀಯವರ ಕೂಲಿಕಾರ ಪಕ್ಷದ ಸರಕಾರ ಹೋಗಿ, ಚರ್ಚಿಲರ ಪುರಾಣಮತವಾದಿ ಸರಕಾರ ತಲೆಯೆತ್ತಿ ನಿಂತುದು ಆಶ್ಚರ್ಯಪಡಬೇಕಾದ ಮಾತೇ ಆಗಿದೆ. ಆದರೆ ಇಂಗ್ಲಿಷ್ ಜನರ ರಾಷ್ಟ್ರಹಿತಬುದ್ಧಿಯ ಸ್ಪಷ್ಟ ಕಲ್ಪನೆಯಿರುವ ರಾಜಕಾರ್ಯವಿದರಿಗೆ, ಇದರಲ್ಲಿ ಆಶ್ಚರ್ಯಪಡಬೇಕಾದ ಸಂಗತಿಯೇನೂ ಇಲ್ಲ. ಕಳೆದ ಮಹಾಯುದ್ಧದ ಪೂರ್ವದಲ್ಲಿ, ಚರ್ಚಿಲ್ ಪಕ್ಷವನ್ನು ವಿರೋಧಿಸಿ ನಿಂತು ಜಯಶಾಲಿಗಳಾದ ಚೆಂಬರ್ಲೇನ್ ಪಕ್ಷದವರು ಸರಕಾರದ ಸೂತ್ರಗಳನ್ನು ವಹಿಸಿದ್ದರು. ಆದರೆ ಮಹಾಯುದ್ಧದ ಬೇಗೆ ಹರಡಲಿರುವುದರ ವಾಸನೆ ತಗುಲಿದಾಗ, ಇಂಗ್ಲಂಡಿನ ಜನತೆ, ಯುದ್ಧಸಮರ್ಥರಾದ ಚರ್ಚಿಲರ ಕೈಯಲ್ಲಿಯೆ ಮತ್ತೆ ಅಧಿಕಾರಸೂತ್ರವನ್ನು ಒಪ್ಪಿಸಿಕೊಟ್ಟಿತು. ಯುದ್ಧ ಮುಗಿಯಿತೋ ಇಲ್ಲವೋ! ಬಳಿಕ ನಡೆದ ಚುನಾವಣೆಯಲ್ಲಿ ಚರ್ಚಿಲರಿಗೆ ಅಪಜಯ. ಕೂಲಿಕಾರಪಕ್ಷದ ಧುರೀಣ ಆಟ್ಲೀಯವರಿಗೆ ವಿಜಯ! ಹೇಗಿದೆ ಚಮತ್ಕಾರ! ಇಂಗ್ಲಂಡಿನ ಜನತೆಗೆ ಗೊತ್ತು: ದುಡುಕು ಸ್ವಭಾವದ ಚರ್ಚಿಲರು ಶಾಂತಿಕಾಲದ ಮುಖ್ಯಮಂತ್ರಿತ್ವಕ್ಕೆ ತಕ್ಕವರಲ್ಲವೆಂದು!

* * * *

ಈಗ ಮತ್ತೆ ಇಂಗ್ಲಿಷರು ಯುದ್ಧಪರಿಸ್ಥಿತಿಯನ್ನು ಮುನ್ನೋಡುತ್ತಲಿದ್ದಾರೆ. ಇರಾಣ-ಇಜಿಪ್ತಗಳಂತಹ ಬ್ರಿಟಿಷರ ಕೈಯಲ್ಲಿಯ ಕುನ್ನಿಗಳೂ, ಇಂದು ಬ್ರಿಟಿಷರನ್ನು ವಿರೋಧಿಸಿ ರಣಗರ್ಜನೆಯನ್ನು ನಡೆಯಿಸಿಬಿಟ್ಟಿವೆ. ವ್ಯಾಪಾರವೃತ್ತಿಯಿಂದಲೇ ಜೀವನವನ್ನು ನಡೆಯಿಸಬೇಕಾಗಿರುವ ಬ್ರಿಟಿಷರಿಗೆ, ಇರಾಣ-ಇಜಿಪ್ತಗಳ ಈ ಕೂಗಾಟ, ಜೀವ-ಸಾವುಗಳ ಸಮಸ್ಯೆಯನ್ನೇ ತಂದೊಡ್ಡಿದೆ. ಇಂತಹ ಕಾಲದಲ್ಲಿ ಕೂಲಿಕಾರ ಪಕ್ಷದ ಸರಕಾರದ ಉದಾರಧೋರಣ ಕೆಲಸಕ್ಕೆ ಬಾರದೆಂಬುದನ್ನು ಇಂಗ್ಲಂಡಿನ ಜನತೆ ಸರಿಯಾಗಿ ಅರಿತುಕೊಂಡಿದೆ. ಆದುದರಿಂದಲೆ—ಕೂಲಿಕಾರರೇ ಬಹುಸಂಖ್ಯಾಕರಿದ್ದ ಭಾಗಗಳಲ್ಲಿಯೂ— ಕೂಲಿಕಾರ ಪಕ್ಷದ ಅಭ್ಯರ್ಥಿಗಳಿಗೆ ಸೋಲು! ಚರ್ಚಿಲರ ಸನಾತನಪಕ್ಷದವರಿಗೆ ಗೆಲವು! ರಾಷ್ಟ್ರಹಿತದ ದೃಷ್ಟಿಯಿಲ್ಲದ ಸಾಮಾನ್ಯ ಜನರಿಗೆ ಇದೊಂದು ಒಡೆಯದ ಒಗಟವೆನಿಸಿದ್ದರೆ ಆಶ್ಚರ್ಯವೇನೂ ಇಲ್ಲ.

* * * *

ಇರಾಣದ ಎಣ್ಣೆಗಣಿ, ಸುಯೇಜ್ ಕಾಲುವೆಯ ಸರ್ವಾಧಿಕಾರ ಇವುಗಳನ್ನು ಕಳೆದುಕೊಂಡರೆ, ಇಂಗ್ಲಿಷ್ ಜನತೆಗೆ ತಿಂದುಂಡು ಬದುಕುವುದಕ್ಕೆ ದಾರಿಯೇ ಇಲ್ಲ. ವೈಭವಶಾಲಿ ಸಾಮ್ರಾಜ್ಯವನ್ನು ನಡೆಯಿಸಿದ ಕಡಲರಾಣಿ ಇಂಗ್ಲಂಡ್, ಬಡತನದ ಬೀಡು ಆಗುವುದರಲ್ಲಿದೆ. ಇದನ್ನು ಅನ್ಯಾಯ-ಅಧರ್ಮ-ಕುಟಿಲರಾಜಕಾರಣಗಳಿಂದಾದರೂ ತಡೆಯಲೇಬೇಕಾಗಿದೆ. ಆಟ್ಲೀಯವರಂತಹ ಸರಳ-ನ್ಯಾಯಮಾರ್ಗಿಗಳಿಗಿದು ಸಾಧ್ಯವಿಲ್ಲವೆಂಬುದನ್ನು ಮನವರಿಕೆ ಮಾಡಿಕೊಂಡ ಇಂಗ್ಲಂಡಿನ ಜನತೆಯಿಂದು, ಆಟ್ಲೀಯವರನ್ನು ಮೂಲೆಗೊತ್ತಿತು. ಚರ್ಚಿಲರಿಗೆ ಚಡ್ಡಿ ಹಾಕಿ ರಾಜಕೀಯ ರಂಗಕ್ಕೆ ಕರೆದು ತಂದಿತು. ಮಹಾಯುದ್ಧಕಾಲದಲ್ಲಿ, ಉತ್ತರ ಧ್ರುವದಂತಿದ್ದ ರಶಿಯವನ್ನೂ ತನ್ನ ಕಡೆಗೆ ಎಳೆದುಕೊಂಡು ಸ್ವಾರ್ಥಸಾಧಿಸಿಕೊಂಡ ಚಾಣಕ್ಯ....ಚರ್ಚಿಲರು. ಈಗಲೂ ಅನೇಕ ರೀತಿಯಲ್ಲಿ ಅವರು ತಮ್ಮ ಕೈಚಳಕ ನಡೆಯಿಸಿ, ರಾಷ್ಟ್ರದ ಹಿತ ಸಾಧಿಸುವುದರಲ್ಲಿ ಹೆಣಗಬಹುದು.

ಬ್ರಿಟಿಷ್ ಜನತೆ, ಭಾರತದ ಜನತೆ

ಇಂಗ್ಲಂಡಿನ ಜನತೆಯ ಈ ರಾಷ್ಟ್ರಹಿತಬುದ್ಧಿಯಿಂದ ಭಾರತೀಯ ಜನತೆ ಕಲಿತುಕೊಳ್ಳಬೇಕಾದುದು ತುಂಬ ಇದೆ. ಹಗಲಿರುಳೂ ನಮ್ಮನ್ನು ದ್ವೇಷಿಸುತ್ತಿರುವ ಪರದೇಶಕ್ಕೆ, ಕಳ್ಳಮಾರ್ಗದಿಂದ ಬೇಕುಬೇಕಾದ ಪದಾರ್ಥಗಳನ್ನೆಲ್ಲ ಪೂರಯಿಸಿ, ಸ್ವಾರ್ಥಸಾಧಿಸುವ ಕೋಟ್ಯಧೀಶ ವರ್ತಕರು ನಮ್ಮಲ್ಲಿ ಅನೇಕರಿದ್ದಾರೆ. ಇವರಿಗೆ ಅನುಕೂಲತೆಯನ್ನೊದಗಿಸಿಕೊಟ್ಟು ತಮ್ಮ ಹೊಟ್ಟೆ ದೊಡ್ಡದನ್ನಾಗಿಸಿಕೊಳ್ಳುವ ದೇಶದ್ರೋಹಿ ಅಧಿಕಾರಿವರ್ಗವೂ ನೌಕರವರ್ಗವೂ ನಮ್ಮಲ್ಲಿ ಬೇಕಾದಷ್ಟು ಇದೆ. ಧರ್ಮದ ಹುರುಳು-ತಿರುಳುಗಳನ್ನು ತಿಳಿದುಕೊಳ್ಳದೆ, ಧರ್ಮಾಭಿಮಾನದಿಂದ ರಾಷ್ಟ್ರದ್ರೋಹ ಬಗೆಯುವ ಜನರಿಗೂ ಕೊರತೆಯಿಲ್ಲ. ಜಾತಿ-ಮತಗಳ ಜಗಳಾಟದಿಂದ ರಾಷ್ಟ್ರಹಿತ ಮಣ್ಣುಗೂಡುವುದೆಂಬುದನ್ನೂ ಲೆಕ್ಕಿಸದಿರುವ ಕಂಗುರುಡರಿಗೂ ಕಡಿಮೆಯಿಲ್ಲ. ಭಾಷೆ-ಭಾಷೆಗಳ ಹೋರಾಟದ ಮೂಲಕ ಪೊಟ್ಟೆಯಕಿಚ್ಚನ್ನು ಹರಡುವವರು ಹಲವಾರು ಜನರು. ಇವರೆಲ್ಲರ ಕಣ್ಣೆದುರು ಭಾರತರಾಷ್ಟ್ರದ ಅಖಂಡಸ್ವರೂಪ ನಿಲ್ಲುವ ಬಗೆ ಹೇಗೆ? ಅಖಿಲ ಭಾರತೀಯ ಜನತೆಯ ಹಿತದ ಕಲ್ಪನೆಮೂಡುವ ಬಗೆ ಹೇಗೆ? ಬಡವರ ಸುಖಜೀವನವನ್ನು ಬಯಸುವ ಸಿರಿವಂತರಿಲ್ಲ! ಅಜ್ಞಾನಿಗಳನ್ನು ಸಹಾನುಭೂತಿಯಿಂದ ಮೇಲಕ್ಕೆ ಎತ್ತಬೇಕೆಂದು ಅಪೇಕ್ಷಿಸುವ ಸುಶಿಕ್ಷಿತರಿಲ್ಲ! ದುರ್ಬಲರ ರಕ್ಷಣೆ ಕರ್ತವ್ಯವೆಂದು ತಿಳಿದ ಸಬಲರಿಲ್ಲ! ಇವೆಲ್ಲ ಸದ್ವಿಚಾರಗಳು ಮೂಡಿದ ರಾಷ್ಟ್ರದಲ್ಲಿಯೆ ಪ್ರಜಾಪ್ರಭುತ್ವ ಸುಖಾವಹವಾಗಬಹುದು. ಇಲ್ಲದೆ ಹೋದ ಪ್ರಜಾಪ್ರಭುತ್ವದ ಆಡಳಿತ ನಿತ್ಯನರಕವಾದೀತು. ನಮ್ಮ ಮಹಾಚುನಾವಣೆಯಲ್ಲಿ ಸ್ಪರ್ಧಾಳುಗಳಾಗಿ ನಿಂತಿರುವ ಮುಖಂಡರೂ, ಅವರನ್ನು ಆಯ್ದುಕೊಡಲಿರುವ ಮತಾಧಿಕಾರಿಗಳೂ, ಇಂಗ್ಲಿಷ್ ಜನತೆಯ ರಾಜಕಾರಣದ ಅರ್ಥಮಾಡಿಕೊಳ್ಳುವುದು ಅತ್ಯವಶ್ಯ ವಿಷಯವಾಗಿದೆ.

ಕನ್ನಡಿಗರು ಯಾರನ್ನು ಆರಿಸಬೇಕು ?

ಎಲ್ಲ ಕಡೆಗಳಲ್ಲಿಯಂತೆ ಕರ್ನಾಟಕದಲ್ಲಿಯೂ ಮಹಾಚುನಾವಣೆಗಾಗಿ ಬೇರೆ ಬೇರೆ ಸಂಸ್ಥೆಗಳು ಹೋರಾಡಲು ಸಿದ್ಧವಾಗಿವೆ. ಸ್ವತಂತ್ರ ರೀತಿಯಿಂದ ನಿಂತ ವ್ಯಕ್ತಿಗಳೂ ಕಡಿಮೆಯಿಲ್ಲ. ಯಾವ

ಸ್ಥಳದಲ್ಲಿ ಯಾರೂ ಅವಿರೋಧವಾಗಿ ಆರಿಸಿಬರುವ ಸಂಭವ ಕಾಣುತ್ತಿಲ್ಲ. ಕನ್ನಡನಾಡಿನ ಎಲ್ಲ ಸ್ಥಳಗಳಿಗೂ ಕಾಂಗ್ರೆಸ್ಸು ತನ್ನ ಪರವಾಗಿ ಸ್ಪರ್ಧಾಳುಗಳನ್ನು ನಿಲ್ಲಿಸಿದೆ. ಮಿಕ್ಕ ರಾಜಕೀಯ ಸಂಸ್ಥೆಗಳ ಪ್ರಭಾವ ಕರ್ನಾಟಕದಲ್ಲಿ ಇಲ್ಲವೇ ಇಲ್ಲವಾದುದರಿಂದ, ಕಾಂಗ್ರೆಸ್ಸಿಗರು ಹೆಚ್ಚಾಗಿ ಸ್ವತಂತ್ರರೀತಿಯಿಂದ ನಿಂತವರೊಂದಿಗೇ ಸ್ಪರ್ಧಿಸಬೇಕಾಗಿ ಬರುವ್ರದು ಆದುದರಿಂದ, ಕರ್ನಾಟಕದ ಮತ-ದಾರರು ನಮ್ಮಲ್ಲಿಂದ ಸ್ಪರ್ಧಾಳುಗಳನ್ನು ಆರಿಸುವಾಗ, ಸಂಪೂರ್ಣ-ವಾಗಿ ವಿಚಾರಮಾಡಬೇಕಾಗಿದೆ. ಕರ್ನಾಟಕ ಏಕೀಕರಣ, ಕನ್ನಡಿ-ಗರ ಜೀವಾಳದ ಸಂಗತಿಯೇನೋ ಸರಿ! ಸದ್ಯ ನಮ್ಮ ನಾಡಿನ ಪ್ರಭಾವಶಾಲಿಪಕ್ಷದವರಾದ ಕಾಂಗ್ರೆಸ್ಸಿಗರೂ ಏಕೀಕರಣಕ್ಕಾಗಿ ಮನಸಾರೆ ಹೆಣಗುವವರೇ ಆಗಿದ್ದಾರೆ. ಇನ್ನೊಂದು ಪಕ್ಷವನ್ನು ಕಟ್ಟಿಕೊಂಡು ಹೊರಟ ಏಕೀಕರಣವಾದಿಗಳು, ಕೇವಲ ಏಕೀಕರಣ-ವಾದಿಗಳಷ್ಟೇ ಅಲ್ಲ; ಒಂದು ಕಾಲದಲ್ಲಿ ಕಾಂಗ್ರೆಸ್ಸಿನ ನಿಸ್ಸೀಮಭಕ್ತ-ರಾಗಿ ಕೆಲಸಮಾಡಿದವರೂ ಇದ್ದಾರೆ ಆರಿಸಿಬಂದರೆ, ಕರ್ನಾಟಕದ ಉನ್ನತಿಯ ಸಲುವಾಗಿ ಇವರಿಂದಲೂ ಒಳ್ಳೆಯ ಕೆಲಸ ನಡೆಯ-ಬಹುದಾಗಿದೆ. ಕೃಪಲಾನಿಯವರ ಪಕ್ಷದವರೂ ಕೆಲವರು ಅಭ್ಯರ್ಥಿಗಳಾಗಿ ನಿಂತಿದ್ದಾರೆ; ಆದರಂತೆಯೆ ಪುರೋಗಾಮಿಪಕ್ಷ, ಸಮಾಜಸಮತಾವಾದಿಗಳು, ಭಾರತೀಯ ಜನಸಂಘದವರು. ಕರ್ನಾಟಕದಲ್ಲಿ ಈ ಸಂಸ್ಥೆಗಳ ಜನರು ಹೆಚ್ಚು ಸಂಖ್ಯೆಯಲ್ಲಿ ಆರಿಸಿಬರುವುದು ಶಕ್ಯವೇ ಇಲ್ಲ. ಸ್ವತಂತ್ರವಾಗಿ ನಿಂತ ಬಹು-ಸಂಖ್ಯಾಕರಲ್ಲಿ ರಾಜಕೀಯದ ಅನುಭವವಿರುವವರು ಹೆಚ್ಚಾಗಿ ಕಾಣುತ್ತಿಲ್ಲ. ಆದುದರಿಂದ, ಕನ್ನಡಿಗರು ತಮ್ಮ ಜನರನ್ನು ಬೇರೆ ಕಡೆಗೆ ಕಳುಹಬೇಕಾದರೆ, ಒಂದೆ ವಿಚಾರದ ಒಂದೆ ಪಕ್ಷದ ಅನುಭವಿಕ ಜನರನ್ನೇ ಆರಿಸಿ ಕಳುಹುವುದು ಅನುಕೂಲ. ಅವರು ಕರ್ನಾಟಕದ ಹಿತದೃಷ್ಟಿಯನ್ನಿರಿಸಿಕೊಂಡು, ಭಾರತದ ಏಕ-ರಾಷ್ಟ್ರೀಯತೆಗೆ ಕುಂದುಬಾರದಂತೆ, ಕನ್ನಡನಾಡಿನ ಅಭ್ಯುದಯ-ವನ್ನು ಸಾಧಿಸುವವರಾಗಿರಬೇಕು. ಒಂದೆ ಒಂದು ಮತದಾರ ಸಂಘದಿಂದ ಆರಿಸಿಬಂದ ಸ್ವತಂತ್ರ ಅಭ್ಯರ್ಥಿಯೊಬ್ಬನಿಂದ ಯಾವ ಕಾರ್ಯವನ್ನೂ ಸಾಧಿಸಲಿಕ್ಕಾಗದೆಂಬ ಮಾತನ್ನು ಕನ್ನಡಿಗರೆಲ್ಲರೂ ನೆನಪಿನಲ್ಲಿ ಇರಿಸಿಕೊಳ್ಳಬೇಕು.

ಎಸ್. ಟಿ. ಮೋಟಾರುಗಳ ಅವ್ಯವಸ್ಥೆ

ಸರಕಾರದ ಸುವ್ಯವಸ್ಥೆಯಲ್ಲಿ ಸಾರಿಗೆಯ ಮೋಟರುಗಳು ಪ್ರಾರಂಭವಾಗುವುವೆಂಬ ಕನಸು ಕಣ್ಣಮುಂದಿದ್ದಾಗ, ಜನರೆಲ್ಲ ಸಮಾಧಾನದ ಉಸಿರಿನೊಂದಿಗೆ 'ಗೆದ್ದೆವಪ್ಪಾ!' ಎಂದು ಉದ್ಗಾರ ತೆಗೆದಿದ್ದರು. ಒಡೆತನದ ಮೋಟಾರು ಸಾರಿಗೆಯವರ ಲಾಭ-ಗುಳಿತನಕ್ಕೂ ಅವ್ಯವಸ್ಥೆಗೂ ಬೇಸತ್ತಿದ್ದ ಜನತೆ 'ಸರಕಾರೀ ಸಾರಿಗೆ ಮೋಟಾರು ಬೇಗನೆ ಪ್ರಾರಂಭವಾಗಲಿ!' ಎಂದು ದಿನವೂ ಬೇಡಿಕೊಳ್ಳುತ್ತಿದ್ದರು. ಆಯಿತು, ಸಾರಿಗೆ ಪ್ರಾರಂಭವಾಯಿತು. ಹೊಸತಾಗಿಯೆ ಬಂದ ಭವ್ಯವಾದ ಗಾಡಿಗಳು ಜನರ ಕಣ್ಣು-ಮನಗಳನ್ನು ಸೆಳೆದುವು. ಒಂದೊಂದಾಗಿ ಒಡೆತನದ ಸಾರಿಗೆಗಳು ನಿಲ್ಲಲು ತೊಡಗಿದುವು. ಇಂದು ಮುಂಬಯಿ ಕರ್ನಾಟಕದ ಮುಖ್ಯ ಮುಖ್ಯ ಮಾರ್ಗಗಳನ್ನೆಲ್ಲ ಸರಕಾರ, ಮೋಟಾರು ಸಾರಿಗೆ-ಗಾಗಿ ತನ್ನ ವಶದಲ್ಲಿ ಇರಿಸಿಕೊಂಡುಬಿಟ್ಟಿದೆ. ಆದರೆ ಜನತೆ ಕಂಡ ಸವಿಗನಸು ಇಂದಿನ ನನಸಿನ ಲೋಕದಲ್ಲಿ ಕಹಿಯಾಗಿಬಿಟ್ಟಿದೆ. ಆರೇಳು ತಿಂಗಳುಗಳಲ್ಲಿ ಗಾಡಿಗಳೆಲ್ಲ ಗೋಡಾವುನಿಗೆ ಕಳುಹುವ ಪರಿಸ್ಥಿತಿಗೆ ಬಂದಿವೆ. ವೇಳಾಪತ್ರಿಕೆಯೇನೋ ಸ್ಟ್ಯಾಂಡುಗಳಲ್ಲಿ ಕಾಣುವುದು. ಆದರೆ ವೇಳೆಗೆ ಸರಿಯಾಗಿ ಬಿಡಲಿಕ್ಕೆ ಸ್ಟ್ಯಾಂಡಿನ ಮೇಲೆ ಗಾಡಿಗಳೇ ಇರುವುದಿಲ್ಲ. ಧಾರವಾಡದಂತಹ ಜಿಲ್ಲಾ ಸ್ಥಳದಲ್ಲಿ ಕೂಡ ಈ ಪಾಡು ಎಂದರೆ, ಮಿಕ್ಕ ಕಡೆಯ ದುರ್ದಶೆ-ಯನ್ನಂತೂ ಹೇಳಲೆ ಬೇಕಾಗಿಲ್ಲ. ನಿಲ್ದಾಣಕ್ಕೆ ಹೋಗಿ ಟಿಕೇಟು ದೊರಕಿಸುವುದು ಚುನಾವಣೆಯ ಹೋರಾಟದಲ್ಲಿ ಗೆಲವು ಪಡೆದಂತೆ. ದೈವವಶಾತ್ ಟಿಕೇಟು ದೊರೆತು ಗಾಡಿಯಲ್ಲಿ ಕುಳಿತುಕೊಂಡ ಮೇಲೂ ಸರಿಯಾದ ಸಮಯಕ್ಕೆ ಗುರಿಯನ್ನು ತಲ್ಪೇವು— ಎಂಬ ಭರವಸೆಯನ್ನು ಕೊಡದಂತಹ ಮುರುಕು ಬಸ್ಸುಗಳು. ಬಸ್ಸಿನ ಹೊಣೆಗಾರಿಕೆಯೂ ಪ್ರವಾಸಿಕರ ಕಷ್ಟ-ನಷ್ಟಗಳ ಕಲ್ಪನೆಯೂ ಇಲ್ಲದ ಡ್ರಾಯ್ವರ್—ಕಂಡಕ್ಟರ್ ಸಾಹೇಬರು! ಇದನ್ನೆಲ್ಲ ನೋಡಿದಾಗ, ಮೊದಲಿನ ವೈಯಕ್ತಿಕ ಒಡೆತನದ ಸಾರಿಗೆ ಮೋಟಾರುಗಳ ಪ್ರವಾಸವೇ ಸಾವಿರಪಾಲು ಒಳ್ಳೆಯದಾಗಿದ್ದಿತೆಂದು ಯಾರಿಗೂ ಎನಿಸುವ್ರದು. ನಾಡಿನಲ್ಲೀಗ ಎಸ್. ಟಿ. ಮೋಟಾರು ಪ್ರವಾಸವನ್ನು ಶಪಿಸುವವರೇ ಹೆಚ್ಚಾಗಿ ಇದ್ದಾರೆ. ಎಲ್ಲ ಕಡೆಗೂ ಸರಕಾರದ ಕಾರಭಾರವಿದ್ದಲ್ಲಿ ಇದೇ ರೀತಿ. ಕಲ್ಲು-ಮಣ್ಣು ಕೂಡಿದ ಮುಗ್ಗುಕಾಳಿನ ಸೀದಾಧಾನ್ಯ ತಿನ್ನಬೇಕು. ಕುಂಟುಗಾಲಿನ ಮುರುಕು ಮೋಟಾರುಗಳಲ್ಲಿ, ಕುಳಿತುಕೊಳ್ಳಲೂ ಸ್ಥಳವಿಲ್ಲದೆ ಪ್ರವಾಸಮಾಡಬೇಕು. ಹೇಗೂ ನಮ್ಮ ನಾಡು ನಡೆದೇ ಇದೆ.

ಜಯಂತಿ

ಗುಡಿ

ಶ್ರೀ. ಕುಲಕರ್ಣಿ ಬಿಂದುಮಾಧವ ಬಾದಾಮಿ

★

ಮಾನವನ ಏಕಮುಖವೃತ್ತಿ, ವಿಕಸಮುಖಶಕ್ತಿಗಳೇ ವ್ಯವಹಾರಪ್ರಪಂಚದಲ್ಲಿ ಮುಖ್ಯತನ ಎನಿಸಿಕೊಳ್ಳುವವು. ಮುದುಕಿ ಸ್ವಾತಂತ್ರ್ಯದ ಮಗುವಿನಾಶೆಯು ಮುಖ್ಯ ಇದೇ ಮಾದರಿಯದು. ಪಾಪ! ಆ ತಾಯಿಯ ಹೃದಯ ಮಗುವಿಗಾಗಿ ಮಿಡುಕಿದುದೆಷ್ಟು!

★

ತಂಗಾಳಿ ನಿಧಾನವಾಗಿ ಬೀಸುತ್ತಲಿತ್ತು. ಬಾನಾಡಿಯು ಪೂರ್ವದ ಗುಡ್ಡದಲ್ಲಿ ಸೂರ್ಯನಿನ್ನೂ ಮರೆಯಾಗಿದ್ದರೂ ಬೆಳಕು ನಿಧಾನವಾಗಿ ಹೊರಬರುತ್ತಲಿತ್ತು. ಹಕ್ಕಿ-ಪಕ್ಕಿಗಳ ಇಂಚರ ಕರ್ಣಾನಂದದಾಯಕವಾಗಿತ್ತು. ಒಂದು ಕೈಯಲ್ಲಿ ಆರತಿ ತಟ್ಟೆ [illegible] ನಲ್ಲೇ ಮಹಾಕೂಟದ [illegible] ಕಾಲುದಾರಿಯನ್ನು ತುಳಿಯುತ್ತ ಮುನ್ನಡೆದಿದ್ದಳು. ಹರಿದು ಚಿಂದಿಚಿಂದಿಯಾದ ಒಂದು ಸೀರೆಯನ್ನು ಧರಿಸಿದ್ದಳು. ಗಾಜಿನ ಎರಡು ಬಳೆಗಳ ಹೊರತು ಕೈ ಬರಿದಾಗಿಯೇ ಇತ್ತು. ಬೆಳ್ಳಗಾದ ತಲೆಯ ಕೂದಲು [illegible], ತಲೆಯ ಮೇಲೆ ಎಳೆದ ಸೆರಗಿನಿಂದ ಹೊರಹಾಯ್ದು ಗಾಳಿಗೆ ಅಲುಗಾಡುತ್ತ ಬಿದ್ದಿದ್ದವು. ಪಟಪಟನೆ ಆಕೆಯ ಹೆಜ್ಜೆ ಸಾಗುತ್ತಿತ್ತು.

---

* ಮಹಾಕೂಟ [illegible] ಕ್ಷೇತ್ರ [illegible] ಬಾದಾಮಿ [illegible].

ಆ ಕ್ಷೇತ್ರ [illegible]

ರಿಂದ, ಆವಳ ಹೃದಯದ ಭಾವನೆಯನ್ನು ಗುರುತಿಸಬಹುದಾಗಿತ್ತು. ಆವಳ ಮನಸ್ಸಿನಲ್ಲಿ [illegible] ಸಂತೋಷದ ಸ್ತ್ರೀರೂಪವಾಗಿ ಆ ಬಚ್ಚುಬಾಯಿಂದ, ರಕ್ತಹೀನ ತುಟಿಗಳಿಂದ ನಗೆ ಹೊರಹೊಮ್ಮುತ್ತಲಿತ್ತು.

'ತಾಯಿ! [illegible]'

'ಹೌದು-ಹೌದು... ನಾನೊಂದು ಮಗುವಿನ ತಾಯಿಯಾಗುತ್ತೇನೆ... ತಾಯಿಯಾಗುತ್ತೇನೆ....'

'ಖಂಡಿತವಾಗಿಯೂ....'

ಮುದುಕಿಯ ಹೃದಯ ಮಾರ್ನುಡಿಯಿತು. ನೀರಿಗೆಗಟ್ಟಿದ ಆ ಮೊಗ ಇಷ್ಟಿಷ್ಟು ಗೆಲುವಿನಿಂದ, ಸಂತಸದಿಂದ ತುಂಬಿಕೊಂಡಿತು.

'ಮಹಾಕೂಟೇಶ್ವರ ನನಗೆ ಕರುಣಿಸದೆ ಇರುತ್ತಾನೆಯೆ?.... ಸಮಸ್ತ ಲೋಕಕ್ಕೆಯೆ ಮಕ್ಕಳನ್ನು ಕರುಣಿಸಿದ ತಂದೆ ಅವನು.... ಬಂಜೆಯರಿಗೆಲ್ಲ ಮಕ್ಕಳನ್ನಿತ್ತವನಿಗೆ ಇದೊಂದು ಅಸಾಧ್ಯ ಕಾರ್ಯವೆ?... ಬಂಜೆಯ ದುಃಖ, ನೋವು ಅವನಿಗೆ ಗೊತ್ತಿಲ್ಲವೆ?.... ಯಾವ ಬಂಜೆಯೂ ಕಟ್ಟದ ಹಿರಿಯ ಗುಡಿ ಅವನಿಗೆ ಕಟ್ಟುತ್ತೇನೆ.... ಆದರೂ ಅವನು ಕಣ್ತೆರೆಯಲಾರನೆ?....

'ಓ... ತೆರೆಯುತ್ತಾನೆ.... ಖಂಡಿತವಾಗಿಯೂ ತೆರೆಯುತ್ತಾನೆ.... ಭಕ್ತರ ಇಷ್ಟವನ್ನು ಸಲ್ಲಿಸುವುದೇ ಅವನ ಕೆಲಸವಲ್ಲವೆ?.... ಅವನ ಕೃಪೆಯಾದರೆ ನನಗೊಂದು ಮಗು ಜನಿಸುವುದು ಮಹಾ ಕೆಲಸವೆ?....

'ಹೌದು-ಹೌದು.... ನನಗೂ ಒಂದು ಮಗು!... ನನ್ನದೇ.... ನನ್ನ ಒಡಲಿನಿಂದಲೇ ಹುಟ್ಟಿಬರುತ್ತದೆ ಮಗು!.... ನನಗಾಗಿ ಒಂದು ಮಗು!!! ....'

ಪಿಸಿಪಿಸಿ ನಕ್ಕಳು ಮುದುಕಿ— ತಾನಿನ್ನೂ ತಾರುಣ್ಯದಲ್ಲೇ ಇರುವಂತೆ.

'ನನಗೊಂದು ಮಗುವನ್ನಾದರೂ ಕರುಣಿಸಿ ನೋಡಲಿ—ನನ್ನಯ್ಯ.... ನಾನೆಂತಹ ಪ್ರೀತಿ-ವಿಶ್ವಾಸಗಳಿಂದ ಮಗುವನ್ನು ಬೆಳೆಸುತ್ತೇನೆಂದು.... ಎಂತಹ ಆದರ, ಅಭಿಮಾನಗಳು ನನ್ನಲ್ಲಿವೆಯೆಂದು ಆಗ ಅವನಿಗೆ ತಿಳಿಯುತ್ತದೆ....'

ಮುದುಕಿಯ ಒಳಗಣ್ಣಿನೆದುರು ಸ್ಪಷ್ಟವಾಗಿ, ಕಿಲಕಿಲನೆ ನಗುವ ಮಗುವಿನ ಮೊಗ ಕಾಣಿಸಿಕೊಂಡಿತ್ತು.

ನನ್ನದೇ ಮಗು ಅದು!— ಎಂತಹ ಮುದ್ದಾಗಿದೆ! ಸುಂದರವಾಗಿದೆ ಅದು! ತನ್ನೆಡೆ ನೋಡುತ್ತಿದೆ! ನೋಡಿ ನಗುತ್ತಲಿದ್ದಾಳೆ.



[illegible]

ನೂರು ಪ್ರೀತಿಯಿಂದ ಅದರ ಲಾಲನೆ-ಪಾಲನೆಗೈಯುತ್ತಲಿದ್ದಾಳೆ. ಜೋಗುಳ ಹಾಡುತ್ತ ತೊಟ್ಟಿಲು ತೂಗುತ್ತಲಿದ್ದಾಳೆ.

'ಓ, ಎಂತಹ ಭವ್ಯ ಕನಸಿದು!'

ಮುದುಕಿಯು ಮನದಾಳದಿಂದೆದ್ದ ಉದ್ಗಾರ ಅದು. ಕೃತಿಯಿಂದಾಗದ ಕಾರ್ಯವನ್ನು ಮನಸ್ಸಿನ ಕಲ್ಪನಾಸೃಷ್ಟಿ ನಿರ್ಮಿಸಿತ್ತು. ಅಮಿತವಾದ ಆನಂದವನ್ನಿತ್ತು ಬಾಹ್ಯದೃಷ್ಟಿಯನ್ನು ಮರೆಯಿಸಿತ್ತು.

ಆದರೂ ಅಭ್ಯಾಸಬಲದಿಂದ ಮುದುಕಿ, ಮುಂದೆ ಮುಂದೆ ಸಾಗಿದ್ದಳು. ಆವಳ ಹೃದಯಸಮುದ್ರದಲ್ಲಿ ಒಂದೇ ಸಮನೆ ತೆರೆಗಳು ಏಳುತ್ತಲಿದ್ದುವು. ಮನಸ್ಸು ಹರಿದ ಹಾಗೆ ಕಡಿವಾಣ ಸಡಲಿಸಿ ಮೌನವಾಗಿ ಸಾಗಿದ್ದಳು.

'...ಮಹಾಕೂಟೇಶ್ವರ! ....ನಮ್ಮೆಲ್ಲರ ಸ್ವಾಮಿ ಅವನು.... ಅವನು ಕಣ್ದೆರೆದರೆ ಅಸಾಧ್ಯ ಕೆಲಸವಾವುದು?.... ಬಂಜೆಯರಿಗೆ— ಅವನಲ್ಲದೆ ಬೇರಿನ್ನಾರು ಗತಿ?....

.... ಎಷ್ಟು ಜನಕ್ಕೆಲ್ಲ....ಎಷ್ಟು ತಾಯಂದಿರಿಗೆಲ್ಲ....ಬಂಜೆಯರಿಗೆಲ್ಲ...ಅವನ ಪ್ರಸಾದ ದೊರೆತಿಲ್ಲ!....ಮಕ್ಕಳ ಕೃಪೆಯಾಗಿಲ್ಲ!!.... ಆಚೆ ಬೀದಿ ರಿಂದಕ್ಕ....ಈಚೆ ಮನೆ ಬಸವ್ವ.... ನೆರೆಮನೆ ನಾಗವ್ವ....

ಒಬ್ಬರೆ?....ಇಬ್ಬರೆ??.... ನೂರಾರು!.... ಸಾವಿರಾರು!!.... ಅವನ ಕೃಪೆಯಾಗದ ಜನವೂ ಉಂಟೆ ಈ ಲೋಕದಲ್ಲಿ?

....ಇಂತಹ ಅನನ್ಯ ಭಕ್ತಿಯಿಂದ ನಡೆದುಕೊಳ್ಳುವ ನನಗೆ ಒಂದು ಮಗುವನ್ನು ಕರುಣಿಸದೆ ಇರುತ್ತಾನೆಯೆ?....

ಕರುಣಿಸಿಯೇ ಕರುಣಿಸುತ್ತಾನೆ.....ನನಗಿಂತಲೂ ಹಿರಿಯರಾದ ಬಂಜೆಯರು ಪಡೆಯಬಲ್ಲರಾದಾಗ, ನಾನೇಕೆ ಪಡೆಯುವುದಿಲ್ಲ?....

ನಾನೂ ಪಡೆಯುತ್ತೇನೆ .... ಗಂಡೊ.... ಹೆಣ್ಣೊ....ಎಂತಹದೆ ಆಗಲಿ, ಒಂದು ಮಗುವನ್ನು ಹೆತ್ತುಬಿಡುತ್ತೇನೆ.....

....ಹುಗ್ಗಿಯ ಊಟ ಅಪೇಕ್ಷಿಸಿದರೆ ಅದನ್ನೂ ನೀಡುತ್ತೇನೆ— ನನ್ನಯ್ಯನಿಗೆ— ಐಯ್ಯನವರಿಗೆ.... ಆದರೆ ನನಗೊಂದು ಮಗುವಾಗಬೇಕು....ಮಗುವಾಗಲೇ ಬೇಕು ....

'ಎಲ್ಲರಂತೆ ಅವನಿಗೆ ಸಣ್ಣ' 'ಗುಡಿ'ಕಟ್ಟುವುದು ಬೇಡ.....ಸಣ್ಣ ಕಲ್ಲುಗಳನ್ನೆತ್ತಿ ಇಟ್ಟಲ್ಲೇ ಇದುವರೆಗೆ ಅವನ ಕೃಪೆಯಾಗಲಿಲ್ಲ.... ಈ ಸಲ....ಈ ದಿನ ಹಿರಿಯ ಕಲ್ಲುಗಳನ್ನೇ ಎತ್ತಿ ತರುತ್ತೇನೆ..... ಯಾರಿಗೂ ಯಾವ ತಾಯಂದಿರಿಗೂ ಸಾಧ್ಯವಾಗದ ಹಿರಿಯ 'ಗುಡಿ'ಯನ್ನು ನನ್ನ ಸ್ವಾಮಿಗೆ ಕಟ್ಟುತ್ತೇನೆ.....

....ಆಗಲಾದರೂ ಅವನು ನನಗೊಂದು.... ಒಂದೇ ಒಂದು ಮಗುವನ್ನು ನೀಡಲಿ..... ನನ್ನ ವಂಶ ಉಳಿಯಲಿ....ನನ್ನ ಮಗು ಚಿರಕಾಲ ಬಾಳಲಿ.....ತಾಯ್ತನ ಸಾರ್ಥಕ್ಯವಾಗಿ ನನ್ನ ಬಂಜೆತನ ಅಳಿಯಲಿ. ....

ಬಂಜೆ!....ಊಹ್ಞೂಂ—ನಾನಿನ್ನು ಬಂಜೆಯಾಗಿಯೇ ಉಳಿಯಲಾರೆ.....

ನಾನೂ ತಾಯಿಯಾಗುತ್ತೇನೆ—ತಾಯಿ!....ಎಲ್ಲ ತಾಯಂದಿರಂತೆ ನಾನು ಮಗುವನ್ನೆತ್ತಿ ಆಡಿಸುತ್ತ ಕಕ್ಕುಲತೆಯಿಂದ ಪೋಷಿಸುತ್ತೇನೆ.....ಯಾರೂ ಹಾಸ್ಯಮಾಡಿ ನಗದ ಹಾಗೆ....ಇದುವರೆಗೆ ಹಾಸ್ಯಮಾಡಿ ನಕ್ಕವರ ಮುಖಕ್ಕೆ ಹೊಡೆದ ಹಾಗೆ ನನಗೂ ಒಂದು ಮಗುವಾಗುತ್ತದೆ—ಮಗು!....

ಮ—ಗು!....

ಎಷ್ಟು ಸುಂದರವಾಗಿದೆ ಆ ಶಬ್ದ!....

ಮತ್ತೆ-ಮತ್ತೆ ತನ್ನಲ್ಲೇ ತಾನು ಗೊಣಗುಟ್ಟಿಕೊಂಡಳು— 'ಮಗು!—ಮಗು!'—ಎಂದು. ಸಂತೋಷ, ಸುಖ, ಸಮಾಧಾನಗಳು ಬರಿಯ ಆ ಒಂದು ಶಬ್ದದಲ್ಲೇ ಅಡಗಿದ ಹಾಗೆ ತೋರುತ್ತಿತ್ತು. ಮಕ್ಕಳು ರುಚಿಕಟ್ಟಾದ ಪೆಪ್ಪರುಮಿಂಟನ್ನು ಬಾಯಲ್ಲೇ ಇಟ್ಟುಕೊಂಡು ಮತ್ತೆ ಮತ್ತೆ 'ಚೀಪಿ,' ಅದರ ಸವಿ ಸವಿಯುತ್ತಿರುವಂತೆ—ಮಗುವನ್ನು ಪಡೆಯದಿದ್ದರೂ ಆ ಹೆಸರನ್ನೇ ಸವಿಯುತ್ತ ಸಾಗಿದ್ದಳು—ಮುಂದೆ—ಮುಂದೆ ಮುದುಕಿ.

ಒಂದು ಕೂಗಳತೆಯ ದಾರಿಯನ್ನೂ ಅವಳು ಕ್ರಮಿಸಿರಲಿಲ್ಲ; ಮತ್ತೆ ಅವಳ ಮನಸ್ಸು ನಾಗಾಲೋಟದಿಂದ ಓಡಲಾರಂಭಿಸಿತು.

ಹೌದು ....: ನಾನೂ ತಾಯಿಯಾಗುತ್ತೇನೆ. .... ನನಗೊಂದು ಮಗು ಜನಿಸುತ್ತದೆ...

ಮುದುಕಿಯ ಮೊಗ ಮತ್ತೆ ಇನ್ನಿಷ್ಟು ಅಗಲವಾಯಿತು. ತನ್ನಲ್ಲೇ ತಾನು ಕೇಕೆ ಹಾಕಿ ಗಟ್ಟಿಯಾಗಿ ನಕ್ಕಳು. ಇನ್ನೂ ತುಂಬಿದ ಉತ್ಸಾಹದಿಂದ, ಸಂತೋಷದಿಂದ ಹೊಸ ಮೊದಲಗಿತ್ತಿಯಂತೆ ವೈಯಾರದಿಂದ ಆ ಪಾವಟಿಗೆಗಳನ್ನು ಜಿಗಿಯುತ್ತ ಸಾಗಿದಳು,

ದಾರಿಯ ಎರಡೂ ಪಕ್ಕಕ್ಕೆ ತಲೆ ಎತ್ತಿ ನಿಂತಿದ್ದುವು ಗುಡ್ಡದ 'ಪಡೆ'ಗಳು. ಮುದುಕಿ ಅಲ್ಲೆಲ್ಲ ಆಗಾಗ ದೃಷ್ಟಿ ಹಾಯಿಸುತ್ತ ನಡೆದಾಗ, ಬಲದ 'ಪಡೆ'ಯ ಮೇಲಿಂದ 'ಕಿಸಕ್' ಎಂದು ಹಲ್ಲುಕಿರಿಯಿತು ಮಂಗವೊಂದು.

ಮುದುಕಿ ತಲೆ ಎತ್ತಿ ನೋಡಿದಳು.

ತಾಯಿಮಂಗ ತನ್ನ ಮಗುವನ್ನೆತ್ತಿಕೊಂಡು ಮೊಲೆಯುಣಿಸುತ್ತ ಅದರ ಮೈಮೇಲೆ ಕೈಯಾಡಿಸುತ್ತ ಕುಳಿತುದು, ಈ ಅಪರಿಚಿತ ಮುದುಕಿಯೇಕೆ ಇಲ್ಲಿಗೆ ಬಂದಿತು?—ಎಂದು, ಆಚ್ಚರಿಯಿಂದ ಅವಳನ್ನು ದೃಷ್ಟಿಸಿತ್ತು.

ಮುದುಕಿಯು ಆ ತಾಯಿ—ಮಗುವನ್ನು ಆದೇ ವೇಳೆಗೆ ದೃಷ್ಟಿಸಿದಳು. ಅವಳ ಹೃದಯ ಸಂತೋಷದಿಂದ ಉದ್ಗರಿಸಿತು :

'ತಾಯಿಯ ಹೊಟ್ಟೆ ತಣ್ಣಗಾಗಿದೆ ಮಂಗಮ್ಮ....ನಿನ್ನ ಬದುಕುಬಾಳು ಪಾವನವಾಗಿದೆ.....ತಾಯಿಯಾಗುವ ಭಾಗ್ಯಕ್ಕಿಂತ ಹಿರಿಯ ಭಾಗ್ಯ ಹೆಣ್ಣಿಗೆ ಇನ್ನೇನಿದೆ?... '

ಮುದುಕಿಯ ದೃಷ್ಟಿ ಮತ್ತೆ ಮುಂದುವರಿಯಿತು. ಆ ಮಂಗಮಗುವಿನ ಮೇಲೆ ನೆಟ್ಟು ನಿಂತಿತು.

ಎಷ್ಟು ಸುಂದರವಾಗಿತ್ತು ಆ ಮಗು !— ಮೃದುವಾದ ಕುಪ್ಪಳುಗೂದಲು, ಕೆಂಪಗೆ ರಂಗುರಂಗಾಗಿರುವ ಮೊಗ— ಯಾರಲ್ಲೂ ಮೋಹ ಹುಟ್ಟಿಸುವಂತಿತ್ತು.

ಮುದುಕಿಗೆ ಅದನ್ನೊಂದು ಸಲ ಅಪ್ಪಿ ಮುದ್ದಿಡುವ ಮನಸ್ಸಾಯಿತು. ಆದರೆ ಹಾಗೆ ಹಿಡಿಯಲು ಹೋದರೆ, ಅದೆಲ್ಲಾದರೂ ಓಡಿಹೋಗುತ್ತದಲ್ಲ—ಎಂದು ಬರಿಯ ಅದರ ಬಾಲಲೀಲೆಗಳನ್ನು ಗಮನಿಸುತ್ತ ನಿಂತಳು.

ಎಷ್ಟು ಹೊತ್ತಿನವರೆಗೆ ಅವಳು ಹಾಗೆ ಸಮರಸಳಾಗಿ ತನ್ನನ್ನೇ ತಾನು ಮರೆತು ನಿಂತಿದ್ದಳೊ ಅವಳರಿಯಳು. ಆದರೆ ಸ್ವಲ್ಪ ಹೊತ್ತಿನಲ್ಲೇ ಯಾವುದೋ ಒಂದು ಹಿರಿಯ ಕೊರತೆ ಅವಳಿಗೆ ಅಸ್ಪಷ್ಟವಾಗಿ ಗೋಚರಿಸಿತು. ಎಚ್ಚತ್ತ ಅವಳ ಮನಸ್ಸು ಅದಕ್ಕೆ ಮಾರ್ದನಿಯನ್ನಿತ್ತಿತು.

'ಇಂತಹ ಒಂದೇ ಒಂದು ಮಗುವಾದರೂ ನಿನಗೆ ಹುಟ್ಟಲಿಲ್ಲವಲ್ಲ ?.... ಒಂದೇ ಒಂದು ಮಗುವಿನ ತಾಯಿಯಾಗುವ ಭಾಗ್ಯವೂ ನಿನಗಿಲ್ಲವಾಯಿತಲ್ಲ ?....'

ಮುದುಕಿಯ ಕಣ್ಣು ಹನಿಗೂಡಿತು. ಗಾಢವಾದ ನಿಟ್ಟುಸಿರು ಅವಳ ಹೃದಯವನ್ನೊಡೆದು ಬಂದಿತು. ಮತ್ತೆ ಅವಳು ದೀನಳಾಗಿ ಮಹಾಕೂಟೇಶ್ವರನನ್ನು ಮೊರೆಹೊಕ್ಕಳು.

'ನಿನ್ನ ಆಶ್ರಯದಲ್ಲಿರುವ ಈ ಪ್ರಾಣಿಗಳಿಗೂ ನಿನ್ನ ಕೃಪೆಯಾಗಿದೆ ಶಿವನೆ....ನನಗೇಕೆ ನಿನ್ನ ಕೃಪೆಯಾಗಲಿಲ್ಲ? ....ನಾನೇನು ಅಂತಹ ಅಪರಾಧ ಮಾಡಿದ್ದೇನೆ ಸ್ವಾಮಿ ?....

'ಈ ಸಲ ಹಾಗೆ ಮಾಡಬೇಡ ದೇವರೆ.... ನನ್ನ ಮೇಲೆ ಕೋಪಿಸಿಕೊಳ್ಳದೆ ಕೃಪೆಮಾಡು.... ಸೆರಗೊಡ್ಡಿ ನಿನಗೆ ಪ್ರಾರ್ಥಿಸುತ್ತೇನೆ.....

'....ಒಂದೇ ಒಂದು ಈ ಮಂಗನಂತಹ ಮಗುವನ್ನು ನನಗೆ ಕರುಣಿಸಿ ಬಿಡು.... ನಾನು ನಿನ್ನಲ್ಲಿ ಇನ್ನೇನನ್ನು ಕೇಳುವುದಿಲ್ಲ...'

ಮುದುಕಿ ಇನ್ನೂ ಆಶಾಪೂರಿತವಾದ ದೃಷ್ಟಿಯಿಂದ ಆ ಮಂಗ ಮಗುವನ್ನು ನೋಡುತ್ತಲೇ ಇದ್ದಳು. ಏನೋ ಜ್ಞಾಪಕವಾಗಿ ತನ್ನ ಉಡಿಯಲ್ಲಿ ಕೈಹಾಕಿದಳು. ಒಂದು ಬಗೆಯ ತೃಪ್ತಿಯಿಂದ ಅದರಲ್ಲಿಯ ಚೂರಮರಿಯ ಕಾಳುಗಳನ್ನು ಕೈಗೆತ್ತಿಕೊಂಡು, ಆ ಮಗುವಿನ ಮುಂದೆಸೆದಳು. ಅದು ತನ್ನೆದುರು ಬಿದ್ದ ಮಂಡಕ್ಕಿಯನ್ನೊಂದುಸಲ ದೃಷ್ಟಿಸಿತು; ಆದರೆ ಮುಂದೆ ಬರಲಿಲ್ಲ. ಅಪರಿಚಿತ ಮುದುಕಿ ಮುಂದೆ ನಿಂತಿರುವಾಗ, ಅದು ಹೇಗೆ ತಾನೆ ಮುಂದೆ ಬಂದು ಆ ಕಾಳುಗಳನ್ನು ಮುಕ್ಕೀತು ?

ಮಗುವಿನ ಮನಸ್ಸು ಮುದುಕಿಗೆ ಅರ್ಥವಾಯಿತೇನೊ ! ತಾನು ನಿಂತಲ್ಲಿಂದ ಎರಡು ಮೂರು ಮಾರು ಹಿಂದೆ ಸರಿದಳು. ಆಗ ಕೊಂಚ ಧೈರ್ಯಬಂತು ಅದಕ್ಕೆ. ತಾಯ ಒಪ್ಪಿಗೆಗಾಗಿ 'ಹಿಂದಿರುಗಿ ನೋಡಿತು. ತಾಯಿಮಂಗ ಕಣ್ಸನ್ನೆಯಿಂದ ಆ ಕಾಳುಗಳನ್ನು ತಿನ್ನಲು ಒಪ್ಪಿಗೆಯಿತ್ತಿತು. ತಾಯ ಒಪ್ಪಿಗೆ ದೊರೆತುದೇ ತಡ; ಆ ಮರಿ ಕುಣಿಯುತ್ತ ಮುಂದೆ ಬಂದು ಒಂದೊಂದೇ ಕಾಳುಗಳನ್ನಾರಿಸಿ ಬಾಯಿಗಿಟ್ಟುಕೊಳ್ಳಲಾರಂಭಿಸಿತು. ಆದರೆ ತಾಯಿ ಮಂಗ ಮಾತ್ರ ಒಂದು ಕಾಳನ್ನೂ ಮುಟ್ಟಲಿಲ್ಲ.

ಆ ತಾಯಿ-ಮಗುವಿನ ಪ್ರೇಮವನ್ನು ಕಂಡು ಮುದುಕಿ ಇನ್ನಷ್ಟು ಹರುಷಭರಿತಳಾಗಿ, ತನ್ನ ಉಡಿಯಲ್ಲಿಯ ಮಂಡಕ್ಕಿಗಳನ್ನು ಕೈಗೆ ಸಿಕ್ಕಿದ ಹಾಗೆ ಅದರ ಮುಂದೆ ತೂರಲಾರಂಭಿಸಿದಳು.

ಆ ಮರಿ, ಮುದುಕಿ ಒಗೆಯುತ್ತಿರುವ ಹಾಗೆ ಸರಸರನೆ ತನ್ನ ಗಂಟಲಿಗೆ ತುಂಬುತ್ತಿತ್ತು. ಬಲ ಕಪೋಲ 'ಗೋಲಿ'ಗುಂಡು ಇಟ್ಟ ಹಾಗೆ ಉಬ್ಬಿಕೊಂಡಿತು. ಆದರೂ ಆ ತಾಯಿಮಂಗ ಒಂದು ಕಾಳಿಗಾಗಿಯೂ ಹಾರಯಿಸಲಿಲ್ಲ; ಮುಂದೆ ಅಡಿ ಇಡಲಿಲ್ಲ. ಆ ಮಗುವಿನ ತೃಪ್ತಿ, ಸಂತೋಷಗಳೇ ತನ್ನವೆಂದು ಸಾರುತ್ತಿರುವಂತೆ—ಮೌನವಾಗಿ ಕುಳಿತು ತನ್ನ ಕಂದನನ್ನು ಅಭಿಮಾನದಿಂದ ನೋಡುತ್ತಲಿತ್ತು. ಮಂಗನಾದರೇನಾಯಿತು ? ಅದರ ಮನದ ಸರೋವರದಲ್ಲಿ ತಾಯ್ತನದ ಹೂ ಅರಳಿರಲಿಲ್ಲವೇನು ?

ಆ ಮಗುವನ್ನು ನೋಡುತ್ತಿರುವಂತೆ ಮುದುಕಿಯ ಹೃದಯ ದ್ರವಿಸಲಾರಂಭಿಸಿತು. ತಾನೂ ಅಂತಹ ಮಗುವಿನ ತಾಯಿಯಾಗು

ತ್ತೀನೆ ಬೇಗ—ಎಂಬ ಹುಚ್ಚು ಕನಸು. ಮತ್ತೆ ಅವಳ ಕಣ್ಣುಗಳೆದುರು ತಾಂಡವ ನೃತ್ಯಗೈದಿತು. ಆ ಕನಸನ್ನು ಕ್ಷಣಾತ್ರ ಕ್ಷಣಾತ್ರ ಮುದುಕಿ ಮೈಮರೆತಳು. ಆ ಮಗು ಅವಳದಾಗಿಯೇ ತೋರಿತು.

ಮುದುಕಿ ಮುಂದುವರಿದು ಆ ಮರಿಯನ್ನೆತ್ತಿಕೊಳ್ಳಲು ಮುಂದೆ ಕೈಚಾಚಿದಳು. ಮರಿ ಭಯದಿಂದ ತಾಯಬಳಿಗೋಡಿತು. ತಾಯಿಮಂಗವು ಹೆದರಿಕೊಂಡು ತನ್ನ ಮಗುವನ್ನು ಎದೆಯಲ್ಲಿ ಗಟ್ಟಿಯಾಗಿ ಅಪ್ಪಿಕೊಂಡಿತು.

ಮುದುಕಿ ಇನ್ನೂ ಮುಂದುವರಿದಳು.

ಇಷ್ಟು ಹೊತ್ತಿನವರೆಗೆ ಕೃತಜ್ಞತೆಯಿಂದ ಅವಳನ್ನು ನೋಡುತ್ತಿದ್ದ ತಾಯಿ ಮಂಗ, ತನ್ನ ಕಂದನ ಅಪಹರಣವಾಗುತ್ತಿದೆ ಎಂದು ತಿಳಿದಾಗ, ಕೋಪದಿಂದ ಕಿಡಿಕಾರುತ್ತ ಹಲ್ಲುಕಿರಿಯಿತು.

ಮುದುಕಿ ಅದರ ಹಲ್ಲುಕಿರಿತಕ್ಕೆ ಎಚ್ಚತ್ತು ನೋಡಿದಳು ಆ ಮಂಗಗಳನ್ನು. ಉಗ್ರವಾಗಿತ್ತು ತಾಯಿ ;— ತನ್ನ ಕಂದನ ಮೇಲಿನ ಅಮಿತವಾದ ಮೋಹದಿಂದ ಕುರುಡಾಗಿ ಹಲ್ಲು ಕಿರಿಯುತ್ತಲಿತ್ತು—ಅವಳನ್ನು ಹೆದರಿಸಲು ಯತ್ನಿಸಿತು.

ಆ ಉಗ್ರವಾದ ಮೊಗವನ್ನು ಕಂಡು ಮುದುಕಿಗೆ ತನ್ನ ನೆರೆಹೊರೆಯ ತಾಯಂದಿರ ಮೊಗಗಳೆಲ್ಲ ಒಂದು ಸಲ ಅವಳ ಒಳಗಣ್ಣಿನೆದುರು ಕುಣಿದುವು. ವಿಕಟವಾಗಿ ಅಟ್ಟಹಾಸಗೈಯುತ್ತ:

'ನೀನು ಬಂಜೆ ...ನಮ್ಮ ಮಕ್ಕಳನ್ನು ಮುಟ್ಟಬೇಡ....' ಎಂಬುದು ಅರಿಟಿದ ನಾಗಾಯಿತು. ಮುದುಕಿ ಗಟ್ಟಿಯಾಗಿ ಕಿವಿಮುಚ್ಚಿಕೊಂಡಳು. ಅದರಿಗೆ ತನ್ನ ಕಂದನನ್ನು ಎತ್ತಿಕೊಂಡು ಕುಳಿತ ಮಂಗ ಇನ್ನೂ ಹಲ್ಲುಕಿರಿಯುತ್ತಲಿತ್ತು. ಅದರ ಧ್ವನಿಯಲ್ಲಿ ತಾತ್ಸಾರದ ಬಿಂಕವಿತ್ತು

'ಬಂಜೆ....ನೀನು ಬಂಜೆ....'

ಎಂದು ಅದು ಹಲ್ಲುಕಿರಿಯುತ್ತಲಿರುವಂತೆ ಅವಳಿಗೆ ಭಾಸವಾಯಿತು—ಮತ್ತೆ.

'ನಾನು ಬಂಜೆಯೆ ?'

ಮುದುಕಿ ತಳಮಳಿಸಿದಳು. ತಾಯು ತಪ್ಪಾ[illegible]ದಳು.

ಊಹೂಂ—ನಾನು ಬಂ[illegible] ಮಹಾಕೂಟೇಶ್ವರನ ಕೃಪೆಯಿಂದ ನಾನು ಹಡೆದೇ ಹಡಿಯುತ್ತೇನೆ ....ಅಲ್ಲ ನಾನು ಬಂಜೆಯಲ್ಲ...

ಹ-ಹ-ಹ್ಹಾ....[illegible]....ನೀನು ಬಂಜೆ....

ಮತ್ತೆ [illegible] ಧ್ವನಿಯಲ್ಲಿ [illegible] ಅರಚುತ್ತಲಿರುವಂತೆ ಭಾಸವಾಯಿತು. ಮುದುಕಿಯು ತಪ್ಪಿಸಿಕೊಂಡು [illegible] ಮರೆತು ಕೆಳಗೆ [illegible] ಕಲ್ಲನ್ನೆತ್ತಿಕೊಂಡು, ಎದುರು ಕುಳಿತ ಆ ತಾಯಿಮಂಗಕ್ಕೆ ಒಗೆದಳು.

[illegible]

ನಾನು ಬಂಜೆ...ನೀನು ಬಂಜೆ... [illegible]

—ಎಂದು ವಿಕಟವಾಗಿ ನಗುತ್ತಿರುವಂತೆ ಅವಳಿಗೆ ಕೇಳಿಸಿತು. ಮುದುಕಿ ಆ ಅಟ್ಟಹಾಸವನ್ನು ಕೇಳಲಾರದೆ ಮುಂದೆ—ಮುಂದೆ ಓಡಲಾರಂಭಿಸಿದಳು.

ಅರ್ಧ ಫರ್ಲಾಂಗನ್ನೂ ಅವಳು ದಾಟಲಿಲ್ಲ. ಓಡಿದುದರಿಂದ 'ದಮ್ಮು' ಹತ್ತಿ ಅಲ್ಲೇ ಒಂದೆರಡು ನಿಮಿಷ ಕುಳಿತಳು. ಹೊಯ್ದಾಡುತ್ತಲಿರುವ ಅವಳ ಒಳಧ್ವನಿ ಮತ್ತೆ ಉಸಿರುಗರೆಯಿತು.

...ಮನುಷ್ಯರಷ್ಟೇ ನನ್ನನ್ನು ತಿರಸ್ಕರಿಸುವರೆಂದು ತಿಳಿದಿದ್ದೆ.... ಈ ಅಲ್ಪಪ್ರಾಣಿಯಾದ ಮಂಗಕ್ಕೂ ನನ್ನ ಮೇಲೆ ತಿರಸ್ಕಾರವೆ?....

'ಹುಟ್ಟಬಾರದು....ಏಳೇಳು ಜನ್ಮಕ್ಕೂ ಬಂಜೆಯಾಗಿ ಹುಟ್ಟಬಾರದು ಶಿವನೆ....'

ಮುದುಕಿಯ ಕಣ್ಣುಗಳಿಂದ ಕಣ್ಣೀರ ಕಾರಂಜಿ 'ಚಿಲ್' ಎಂದು ಚಿಮ್ಮಿತು. ಹಾಗೇ ದುಃಖಿಸುತ್ತ ಅವಳೆಷ್ಟು ಹೊತ್ತು ತಾನೆ ಕುಳಿತುಕೊಳ್ಳಲು ಸಾಧ್ಯ ?—ತನ್ನನ್ನೇ ತಾನು ಸಂತಯಿಸಿಕೊಂಡಳು :— ಸಮಾಧಾನ ತಂದುಕೊಂಡಳು. ಆಗ ಅವಳಿಗೆ ಮತ್ತೆ ಮಹಾಕೂಟೇಶ್ವರನ ನೆನಪಾಯಿತು.

'....ಅವನು ಕಣ್ಣುಬಿಟ್ಟರೆ ಅಸಾಧ್ಯ ಕೆಲಸವಾವುದು-?.... ಖಂಡಿತವಾಗಿಯೂ ಅವನು ನನಗೊಂದು ಮಗುವನ್ನು ಕರುಣಿಸಿಯೇ ಕರುಣಿಸುತ್ತಾನೆ....'

ಸಮಾಧಾನದ ಉಸಿರೆಳೆದಳು ಮುದುಕಿ. ಹಾಗೆಯೆ ಅಲ್ಲಿಂದೆದ್ದು ಮುಂದೆ ಸಾಗಿದಳು. ಅವಳೀಗ ಗುಡ್ಡದ ಮೇಲೆ ಬಂದಿದ್ದಳು. ಬಿಸಿಲೂ ಪ್ರಖರವಾಗಿತ್ತು. ಆದರೂ ಅವಳು ಬೇಗ ಬೇಗನೆ ಹೆಜ್ಜೆ ಹಾಕುತ್ತಲಿದ್ದಳು.

'ಮಹಾಕೂಟೇಶ್ವರ, ಕೃಪೆಮಾಡು!'

ಎಂದವಳೆದೆ ನೊರೆಯುತ್ತಿತ್ತು. ಮುದ್ದು ಮುದ್ದಾದ ಮಗುವಿನ ಚಿತ್ರವೊಂದು, ಅವಳ ಹೃದಯಪಟಲದ ಮೇಲೆ ಮೂಡಿ ಮನಸ್ಸನ್ನು ಪ್ರಸನ್ನಗೊಳಿಸಲಾರಂಭಿಸಿತ್ತು.

ಗುಡ್ಡ ಇಳಿದು, ಹೊಳೆದ—ಕಾಡು ಕೆಂಡದಂಥ—ಮಳಲಿನ ನೆಲ, ಸುಗ್ಗಿ ಮತ್ತೆ ಗುಡ್ಡವನ್ನೇರಲಾರಂಭಿಸಿದಳು. ಅವಳ ಮನಸ್ಸು, ಕಣ್ಣು ಕಲ್ಪನೆಯ ಮಗುವಿನ ಮೇಲೆ ಕೇಂದ್ರೀಕೃತವಾಗಿದ್ದುವು.

ಗುಡ್ಡದ ಮೇಲೆ ಬಂದಾಗ ಅವಳಿಗೆ ದೂರದ ತೋಪಿನಲ್ಲಿ ತಲೆಯೆತ್ತಿ ನಿಂತ ಮಹಾಕೂಟೇಶ್ವರನ ಗುಡಿಯ ಕಲಶದ ದರ್ಶನವಾಯಿತು. ಮುದುಕಿ ಗಟ್ಟಿಯಾಗಿ ಕೈ ಎತ್ತಿ ಮುಗಿದು, ಮತ್ತೆ ಮತ್ತೆ ತನಗೊಂದು ಮಗುವನ್ನು ಕರುಣಿಸೆಂದು ಬೇಡಿಕೊಂಡಳು.

ಅವಳ ನಡಿಗೆ ಇನ್ನೂ ತೀವ್ರವಾಯಿತು. ಅವಳ ಹೃದಯ ಇನ್ನು ಕಟ್ಟು ಹೊಡೆದು ಹೋಗುತ್ತಿತ್ತು. ನೋಡುನೋಡುವಷ್ಟರಲ್ಲೇ ಮುದುಕಿ ಬೆಟ್ಟದಿಂದ ಕೆಳಗಿಳಿದು ಗುಡಿಯ ದಾರಿಯಲ್ಲಿ

ನಾಗಲಾರಂಭಿಸಿದ್ದಳು. ಏನೋ ಜ್ಞಾಪಕವಾಗಿ ಮುದುಕಿ ತನ್ನ ಕೈ-ಮೈಗಳನ್ನು ನೋಡಿಕೊಂಡಳು * ಆವಳ ದೇಹವೆಲ್ಲ ಹಳದಿಯಾಗಿತ್ತು ಬಾಣಂತಿ ಬಣ್ಣದಂತೆ.

'ಹಳದಿ ಬಣ್ಣ !.... ಬಾಣಂತಿಯ ಬಣ್ಣ !!'

ಮುದುಕಿ ಚಪ್ಪಾಳೆಬಾರಿಸಿ 'ಕಿಸಿ ಕಿಸಿ' ನಕ್ಕಳು.

'ಬಾಣಂತಿ !.... ಹೌದು.... ತಾಯಿ, ನಾನೂ ನಿನ್ನಂತೆಯೇ ಶಿವನ ಕೃಪೆಯಿಂದ ಬಾಣಂತಿಯಾಗುತ್ತೇನೆ.'

'ಆಗ ?'....

'ಆಗ ನನ್ನ ಮೈಬಣ್ಣ ನಿನ್ನಂತೆಯೇ - ನಿನ್ನಂತೆಯೇ !... ಹಳದಿ.... ಹಳದಿ.... ಹಳದಿ....'

'ಕೃಪೆಮಾಡು ತಾಯಿ.... ನೀನು ಶಿವನ ಮೆಚ್ಚಿನ ತಾಯಿ.... ಆವನ ವರಪ್ರಸಾದದಿಂದಲೇ ಗರ್ಭಿಣಿಯಾಗಿ ಮಗುವನ್ನು ಹೆತ್ತವಳು.... ಬಂಜೆಯರಿಗೆಲ್ಲ ನೀನೆಯೇ ಅಕ್ಕ !....'

'ಬಂಜೆಯರ ದುಃಖ ಕಷ್ಟಗಳನ್ನರಿತ ನಿನಗಿನ್ನೇನು ಹೆಚ್ಚಿಗೆ ಹೇಳುವುದಿದೆ ತಾಯಿ.... ನೀನಾದರೂ ನನ್ನ ಕಷ್ಟ-ದುಃಖಗಳನ್ನು ನನ್ನಯ್ಯನಿಗೆ ನಿವೇದಿಸು.... ನಾನೂ ಬೇಕಾದರೆ ನಿನ್ನಂತೆಯೇ ಆವನಿಗೆ ಒಲಿಯಾಗುತ್ತೇನೆ.... ಆದರೂ ಚಿಂತೆಯಿಲ್ಲ. ನಾನು ಮಾತ್ರ ಬಾಣಂತಿಯಾಗಬೇಕು.... ಮಗುವನ್ನು ಬಿಟ್ಟು ಆವನು ನನ್ನನ್ನು ತನ್ನ ಪಾದಗಳ ಬಳಿ ಸೇರಿಸಿಕೊಂಡರೂ ಸಂತೋಷವೆ !'

'ಆವನಿ ನಾನು ತಾಯಿ ಯಾಗಬೇಕು'

ಮುದುಕಿಯು ಅಂತರ್ಯಾಣದ ಧ್ವನಿಯೊಂದು ಕರುಣಾ ಪರ್ಯವಸಿತವಾಗಿ ಪ್ರಾರ್ಥಿಸುತ್ತಲಿತ್ತು. ಆವಳ ದೃಷ್ಟಿಯೆಲ್ಲ ತನ್ನ ಕೈ, ಮೈಗಳ ಮೇಲೆ ನೆಟ್ಟಿತ್ತು. ಬಾಣಂತಿಯು ಆ ಬಣ್ಣವನ್ನು ಗಮನಿಸುತ್ತಲಿತ್ತು.

ಗರ್ಭಿಣಿ ದಾರಿ ಸಾಗಿತು. ಗುಡಿಯನ್ನು ಸಮೀಪಿಸುವ ದಟ್ಟವಾದ ವಾರಿಯ ಮೇಲಿದ್ದಷ್ಟು ಕಂಡು ಆವಳ ಹೃದಯ ತಳಮಳಗೊಂಡಿತು. ಆ ತಂಪಾದ ನೆಳಲಿನಲ್ಲಿ, ಮನಸ್ಸಿನಲ್ಲಿ ತಂಪಾಗಿಯೆ ನಡೆಸಿಕೊಂಡು ಮುನ್ನಡೆದಳು. ನಾಲ್ಕಾರು ಮೆಟ್ಟಿಲುಗಳನ್ನೂ ಹತ್ತಿ ಇಳಿದಲ್ಲಿ ಆವಳು, ಗುಡಿಯ ಹೆಬ್ಬಾಗಿಲಲ್ಲಿ ದಿಕ್ಕುತನೂ ನಗುತ್ತ ನಿಂತ ದ್ವಾರಪಾಲಕರನ್ನು ಕಂಡು, ಸಿಗ್ಗಿನ ಗುಡಿ-

* ಮಹಾಕೂಟದ ಗುಡಿಯ ಈ ಕೆರೆಯಲ್ಲಿ ದೊಡ್ಡವಾದ ಕಾವಿಯ ... ರಿಂದ, ಸೂರ್ಯಕಿರಣಗಳ ಪ್ರತಿಫಲ ... ಅಲ್ಲದೆ ಸುತ್ತ ... ಬಂದ ಹಳದಿವರ್ಣದಿಂದ ... ಇಲ್ಲಿ ಮೈಯೆಲ್ಲ ಹಳದಿವರ್ಣವಾಗಿ ಕಾಣುತ್ತದೆ. ಆದರೆ ... ನಂಬುತ್ತಾರೆ. ... ಬಂದು ... ಹೇಳುತ್ತಾರೆ. ಕತೆ ...

* ಮಹಾಕೂಟೇಶ್ವರನ ... ಅವರಿಗೆ ... ಗೊಂಡಿತ್ತು ... ಮಗುವ ... ತರ್ಣ ತರಲಿಲ್ಲವಾಗಿ, ಆವಳನ್ನು ... ನಡೆದಿತ್ತೆ ...

ಕಟ್ಟಿತು ಆವಳೆದೆಯಲ್ಲಿ. ದ್ವಾರಪಾಲಕರನ್ನೂ ದೇವರೆಂದು ಭಾವಿಸುವ ಆವಳ ಮುಗ್ಧ ಮನಸ್ಸು ಆವಳಿಂದ ಕೈ ಎತ್ತಿ ಮುಗಿಯಿಸಿತು.

ಸಿಂಹದ್ವಾರವನ್ನು ದಾಟಿ ಒಳಗೆ ನಡೆದಳು ಮುದುಕಿ. ಆಶುಚಿಯಾಗಿ ದೇವರಿಗೆ ಹೋದರೆ ಆವನ ಕೃಪೆಯಾದೀತೆ ? ಮುದುಕಿಗೆ ಗೊತ್ತು. ಮಹಾಕೂಟೇಶ್ವರನ ಎರಡೂ ಹೊಂಡಗಳಲ್ಲಿ ಮುಳುಗಿ ಎದ್ದವರಿಗೆ ನೂರುಜನ್ಮಗಳ ಪುಣ್ಯಬರುತ್ತದೆ—ಎಂದು. ಆ ಪುಣ್ಯದ ಕೊಡ ತುಂಬಿಯಾದರೂ ತನಗೊಂದು ಮಗುವಾಗಲಿ— ಎಂದು ಹಾರಯಿಕೆ ಆವಳದು.

ಭಯ-ಭಕ್ತಿಗಳಿಂದ ಮುದುಕಿ ಹೊರಗಿನ ಹೊಂಡದಲ್ಲಿ ಮುಳುಗುಹಾಕಿದಳು. ಆವಳ ಬಾಯಿ ಒಂದೇಸಮನೆ 'ಶಿವನೇ ಶಿವನೇ !' ಎಂದು ಜಪಿಸಲಾರಂಭಿಸಿತು. ಆವಳು ಹಾಗೆಯೆ— ಒದ್ದೆಯಾದ ಸೀರೆ ಮೈಮೇಲಿದ್ದಂತೆಯೇ— ಗುಡಿಯೊಳಗೆ ನಡೆದಳು. ಒಳಗಿನ ಆ ಹಿರಿಯ ಹೊಂಡಕ್ಕೆ ಹೋಗಿ ಇನ್ನೊಂದು ಮುಳುಗುಹಾಕಿ ಗರ್ಭಗುಡಿ ಪ್ರವೇಶಿಸಿದಳು. ಆ ಲಿಂಗವನ್ನು ನೋಡುತ್ತಿರುವಂತೆ ಆವಳ ಹೃದಯ ತುಂಬಿಬಂದಿತು. ಭಕ್ತಿ, ಹರುಷ, ಆಸೆಗಳ ತ್ರಿವೇಣೀ ಸಂಗಮದಲ್ಲಿ ಮಿಂದೇಳುತ್ತ ಮುದುಕಿ ಸಾಷ್ಟಾಂಗ ನಮಸ್ಕಾರ ಹಾಕಿದಳು. ಪೂಜಾರಿಯಿಂದ ಕರ್ಪೂರದಾ-

'ಬಗನ' ಬಾಲಾಮೃತ

ರೋಗದ ಭಯವಿಲ್ಲ.

ಬಗನ ಬಾಲಾಮೃತದಲ್ಲಿ 'ಗ್ಲಾಯಿಕೊ ಫೋಸ್ಫೇಟ್' ಅಂಶವೂ ಇರುವದರಿಂದ್ಯ, ಇದು ಮಕ್ಕಳಿಗೆ ಉತ್ತಮ 'ಟೊನಿಕ್ಕು' ಇರುವದು.

THE NATIONAL PHARMACIES & PHARMACEUTICALS Ltd. DHARWAR.

ZANDU

PROTOCASEN

Whole Casein Hydrolysate

PALATABLE AND POWERFUL NUTRITIVE TONIC FOR ORAL ADMINISTRATION IN ALL RUNDOWN CONDITIONS OF HEALTH

Biological Laboratory

The Zandu Pharmaceutical Works, Ltd.
BOMBAY 14.

Sole Agents:—

M/s. Pranlal and Sons
Chemists, Druggists
Station Road. HUBLI

(H. O. Bangalore City)

ರತಿ ಬೆಳಗಿಸಿ ಕಾಯಿ ಒಡೆಯಿಸಿಕೊಂಡು, ಆ ಲಿಂಗವನ್ನೇ ದೃಷ್ಟಿಸುತ್ತ ಮತ್ತೆ ಮತ್ತೆ ಕೈ ಎತ್ತಿ ಮುಗಿದಳು.

'ನಿನಗೇ ಶರಣು ಬಂದಿದ್ದೇನೆ ಶಿವನೆ.... ಇಷ್ಟು ವರುಷಗಳ ಬಯಕೆಯನ್ನೀಡೇರಿಸು. ನಾನು ನಿನ್ನನ್ನೇನೂ ಹೆಚ್ಚು ಕಾಡುವ್ರುದಿಲ್ಲ. ಒಂದೇ ಒಂದು ಮಗುವನ್ನು ಕರುಣಿಸಿಬಿಡು.'— 'ಬಾಣಂತಿ'— ಆಕ್ಕನಂತೆ ನನ್ನನ್ನೂ ನಿನ್ನ ಬಳಿಗೆ ಕರೆದುಕೊಂಡರೂ ಚಿಂತೆಯಿಲ್ಲ. ಆದರೆ ನಾನು ಬಾಣಂತಿಯಾಗಿಯಾದರೂ ಸಾಯುವಂತೆ ಪ್ರಸಾದವನ್ನು ನೀಡು ತಂದೆ.

" ನಿನಗಾಗಿ ಬೇಕಾದರೆ ಯಾವ ಬಂಜೆಯೂ ಕಟ್ಟದ ಹಿರಿಯ 'ಗುಡಿ' ಕಟ್ಟುತ್ತೇನೆ.... ಹುಗ್ಗಿಯ ಊಟ ಹಾಕುತ್ತೇನೆ.... ಆದರೆ ನನಗೊಂದು ಮಗುವನ್ನು ಮಾತ್ರ ದಯಪಾಲಿಸು ನನ್ನಯ್ಯ ! "

ಭಕ್ತಿ ತುಂಬಿ, ಭಾವ ತುಂಬಿ, ಹೃದಯ ತುಂಬಿ ಆವಳು ಆ ಲಿಂಗಕ್ಕೆ ಅನನ್ಯಭಕ್ತಿಯಿಂದ ಮೊರೆಯಿಟ್ಟಳು. ಪೂಜಾರಿ ಅದೇ ವೇಳೆಗೆ ಪ್ರಸಾದ, ಚಂಡುಹೂಗಳನ್ನು ಆವಳುಡಿಯಲ್ಲಿ ಹಾಕಿದ. ಮುದುಕಿ ಪರಮಭಕ್ತಿಯಿಂದ ಆ ಪ್ರಸಾದವನ್ನು ಕಣ್ಣಿಗೊತ್ತಿಕೊಂಡಳು. ಹಾಗೆಯೆ ಆ ಲಿಂಗಕ್ಕೆ ಇನ್ನೊಂದು ಸಲ ಕೈಮುಗಿದು ಅಲ್ಲಿಂದ ಸಾಗಿದಳು.

ಅಲ್ಲಿಲ್ಲ ಇರುವ ವೀಣಾಪಾಣಿ ಸರಸ್ವತಿ, ಬಸವಣ್ಣ, ಕೋಣೆಶಂಕರ— ಎಲ್ಲ ದೇವರ ದರ್ಶನವನ್ನೂ ಪಡೆದು, ಮತ್ತೆ ಹಿಂದಿರುಗಿದಳು.

ಆವಳ ಮನದಲ್ಲಿ, ನರನರದಲ್ಲಿ ಶಾಂತಿ, ಸಮಾಧಾನಗಳು ತುಂಬಿಕೊಂಡಿದ್ದುವು. ಕೈಯ್ಯಲ್ಲಿ ಹಿಡಿದ ಮಹತ್ತ್ವದ ಕೆಲಸವೊಂದು ಪೂರಯಿಸಿದ ನೆಮ್ಮದಿ ಆವಳಿಗೆ ದೊರೆತಿತ್ತು.

ಬಿಸಿಲು ಒಂದೇಸಮನೆ ರಣಗುಡುತ್ತಲಿತ್ತು. ಗಾಳಿಯ ಸುಳಿವೂ ಇರಲಿಲ್ಲ. ಮೇಲೆ ಒದ್ದೆ ಸೀರೆ ಬೇರೆ. ಹೊಟ್ಟೆ 'ತಕತಕ' ನೆ ತಾಳ ಹಾಕುತ್ತಿತ್ತು. ಆದರೂ ಆವಳು ಒಂದು ಗುಟುಕು ನೀರನ್ನೂ ಬಾಯಲ್ಲಿ ಹಾಕಲಿಲ್ಲ. ಪ್ರಸಾದದ ಕೊಬ್ಬರಿಯ ಒಂದು ತುಣುಕಿನ ರುಚಿಯನ್ನೂ ನೋಡಲಿಲ್ಲ. 'ಗುಡಿ' ಯನ್ನು ನಿಲ್ಲಿಸಿದ ವಿನಾ ಆವಳ ಕಾರ್ಯ ಪೂರಯಿಸಿದಂತೆಲ್ಲಾಯಿತು ? 'ಗುಡಿ' ನಿಂತಾಗಲೇ ಪ್ರಸಾದವನ್ನು ಸವಿಯುವುದು ! ' ಎಂಬ ಘೋರ ಪ್ರತಿಜ್ಞೆ ಆವಳದು. ದೇವರು ಆವಳ ಬಂಜೆತನ ಅಳಿಯಲು ಕೈಕಟ್ಟನಿಂತಾಗ ಆವಳು ಈ ಅಲ್ಪ ಕಷ್ಟವನ್ನಾದರೂ ತಾಳಿಕೊಳ್ಳಬೇಡವೆ ?

ಮಾವಿನತೋಪಿನ ತಂಪಾದ ನೆಳಲಿನಲ್ಲೂ ಆವಳು ಒಂದು ಕ್ಷಣ ನಿಲ್ಲಲಿಲ್ಲ. ಹಾಗೆಯೆ ಸಾಗಿದ್ದಳು. 'ಬಾಣಂತಿ'ಯ ಗೆರಸು ತುಳಿದು, 'ಪಡೆ' ಇಳಿದು, ಹೊಲದ ಆ ಸುಡುವ ಮಳಲು ದಾಟಿ, ಮತ್ತೆ ಗುಡ್ಡ ಏರಿದಳು. ಒಂದು ಬಗೆಯ ತೃಪ್ತಿ-ನೆಮ್ಮದಿಗಳಿಂದ ಆವಳ ಮನಸ್ಸು ತುಂಬಿತ್ತು. ಯಾವುದೋ ಒಂದು ಅದ್ಭುತಶಕ್ತಿ ಆವಳನ್ನು ಮುಮ್ಮುಂದಕ್ಕೆ ಕೊಂಡೊಯ್ಯುತ್ತಲಿತ್ತು.

ನೇರವಾಗಿ ಆವಳು 'ಗುಡಿ' ಕಟ್ಟುವ ತಾಣಕ್ಕೆ ಬಂದಳು. ಅಲ್ಲಿಲ್ಲ ನೂರಾರು, ಸಾವಿರಾರು 'ಗುಡಿ'ಗಳು ಆವಳ ಕಣ್ಣಿಗೆ ಹಬ್ಬವನ್ನುಂಟು ಮಾಡಿದುವು. ಅದೇ ಪ್ರಥಮ ಸಲ ಗರ್ಭಿಣಿಯಾದ ಹೆಣ್ಣಿನಂತೆ ಪ್ಯಾರದಿಂದ ಆ 'ಗುಡಿ'ಗಳ ಬಳಿಸಾರಿದಳು. ಅವುಗಳನ್ನೇ ನೆಟ್ಟದೃಷ್ಟಿಯಿಂದ ನೋಡುತ್ತ ಹರುಷಪುಲಕಿತಳಾಗಿ ಹೇಳಿಕೊಂಡಳು— ಮನದಲ್ಲೆ.

' ನೂರು-ಸಾವಿರ-ಕೋಟಿ, ಅಬ್ಬ ! ಎಷ್ಟು 'ಗುಡಿ'ಗಳಿವು ? ಎಷ್ಟು ಮಗುಗಳಿಗೆ ಜನ್ಮವಿತ್ತ ಪ್ರಸಾದದ ಪ್ರತಿನಿಧಿಗಳಿವು !

ಮುದುಕಿ ಮುಂದೆ ಸಾಗಿ ಒಂದೊಂದೇ ಗುಡಿಯನ್ನು ಪರಿಶೀಲಿಸಿದಳು. ಮನಸ್ಸು ತಣಿವ ವರೆಗೂ ನೋಡಿದಳು.

' ಇಷ್ಟೆಲ್ಲ ಬಂಜೆಯರೂ ತಾಯಂದಿರಾಗಿದ್ದಾರೆ, ಲೋಕದ ಬಂಜೆಯರ ದುಃಖವನ್ನೇ ಪರಿಹರಿಸಿದ ನಿನಗೆ, ನನ್ನ ದುಃಖವನ್ನು ಪರಿಹರಿಸಲಾಗುವುದಿಲ್ಲವೆ ದೇವರೆ !

' ಈ ಸಲ ಖಂಡಿತವಾಗಿಯೂ ನಿನ್ನಿಂದ ಈ ಕಾರ್ಯವಾಗುತ್ತದೆ. ನೀನು ಕಣ್ತೆರೆದು ನೋಡಿದರೆ ಯಾವುದು ಅಸಾಧ್ಯ ? ಕಣ್ಣು ಮುಚ್ಚಿ ಕಣ್ಣು ತೆರೆಯುವುದರೊಳಗಾಗಿ ನೂರಾರು ಮಕ್ಕಳನ್ನಿತ್ತು ಸಲಹೀಯೆ— ತಂದೆ.

‘ ಈ ದಿನ ನಿನಗೆ ಯಾವ ಬಂಜೆಯರೂ ಕಟ್ಟದ ಹಿರಿಯ ‘ಗುಡಿ’ ಕಟ್ಟಿಕೊಡುತ್ತೇನೆ. ನನಗೆ ಮಾತ್ರ ಎಂತಹದೇ ಆಗಲಿ ಮಗುವನ್ನು ದಯಪಾಲಿಸು ನನ್ನಪ್ಪ.’

‘ ಇದು ನನ್ನ ಕೊನೆಯ ಪ್ರಾರ್ಥನೆ. ’

ಮುದುಕಿ ತುಂಬ ಗಂಭೀರಳಾಗಿ ಮನದಲ್ಲೇ ನೂರಾರು ಸಲ ಮಹಾಕೂಟೇಶ್ವರನನ್ನು ಸ್ಮರಿಸಿದಳು. ಹಾಗೆಯೆ ‘ ಗುಡಿ ’ ಕಟ್ಟುವುದಕ್ಕಾಗಿ ಮುದುಕಿ ಗಂಡುಗಚ್ಚೆ ಹಾಕಿ ಸನ್ನದ್ಧಳಾದಳು.

ಅಭೂತಪೂರ್ವವಾದ ಉತ್ಸಾಹ ಅವಳ ಹೃದಯದಲ್ಲಿ ತುಂಬಿ ತುಳುಕುತ್ತಲಿತ್ತು. ಯಾವುದೋ ಒಂದು ಅದ್ಭುತ ಶಕ್ತಿ ಅವಳ ಮೈಯಲ್ಲಿ ಸಂಚರಿಸುತ್ತಲಿತ್ತು.

ಮುದುಕಿ ಒಂದೆರಡು ಫರ್ಲಾಂಗುಗಳ ವರೆಗೆ ಸುತ್ತಿ, ಸುತ್ತಿ ಒಂದು ಹಿರಿಯ ಕಲ್ಲನ್ನೆತ್ತಿ ತಂದಳು. ಅಲ್ಲೆಲ್ಲ ಇರುವ ‘ ಗುಡಿ ’-ಗಳ ಮಧ್ಯದಲ್ಲಿ ಅದನ್ನು ಪ್ರತಿಷ್ಠಾಪಿಸಿದಳು.

ತಿಣಿತಿಣಕಿ ಎರಡನೆಯ ಕಲ್ಲನ್ನೂ ಎತ್ತಿ ತಂದಳು.

ಮತ್ತೆ ಒಂದು ಫರ್ಲಾಂಗು ಓಡಿ ಮೂರನೆಯ ಕಲ್ಲನ್ನೂ ತಂದಳು. ತನ್ನ ಮಹತ್ತರವಾದ ಕೆಲಸ ಈ ರೀತಿ ಸುಲಭವಾಗಿ ಕೈಗೂಡುತ್ತಿರುವುದನ್ನು ಕಂಡು, ಅವಳ ಮನಸ್ಸು ತುಂಬಿದ ಸಮಾಧಾನ ಶಾಂತಿಗಳಲ್ಲಿ ಮಿಂದೇಳುತ್ತಲಿತ್ತು.

ಆ ಕಲ್ಲುಗಳನ್ನೆಲ್ಲ ಒಟ್ಟಯಂತೆ ಹೊಂದಿಸಿದಳು. ಮುದುಕಿ— ಇನ್ನೂ ಉತ್ಸಾಹದಿಂದ.

ಅದರ ಮೇಲೆ ಹಾಸಲು ಇನ್ನೂ ಒಂದು ತುಂಬ ಹಿರಿಯ ಕಲ್ಲು ಅವಳಿಗೆ ಬೇಕಾಗಿತ್ತು. ಅಂತಹದನ್ನು ಎತ್ತಿ ತರುವುದಕ್ಕೆ ಅವಳಲ್ಲಿ ಶಕ್ತಿಯಾದರೂ ಇತ್ತೆ ?— ಅದೊಂದನ್ನೂ ಯೋಚಿಸಲಿಲ್ಲ ಮುದುಕಿ. ‘ ಗುಡಿ ’ಯನ್ನು ಪೂರ್ತಿಗೊಳಿಸುವುದೊಂದೇ ತನ್ನ ಗುರಿ ಎನ್ನುವಂತೆ ತನಗಾದ ಆಯಾಸವನ್ನೆಲ್ಲ ಮರೆತು ಮುದುಕಿ ಆವೇಶಗೊಂಡವಳಂತೆ ಮತ್ತೆ ಓಡಿದಳು. ಅವಳ ಮೈಯಿಂದ ಬೆವರು ಧಾರೆ ಧಾರೆಯಾಗಿ ಸುರಿಯುತ್ತಲಿತ್ತು.

ಒಂದು ಕೂಗಳತೆಯ ದಾರಿ ಸಂಚರಿಸಿ ತನಗೆ ಬೇಕಾದ ಹಿರಿಯ ಕಲ್ಲನ್ನು ಶೋಧಿಸಿದಳು. ಆ ಕಲ್ಲು ಕಂಡಾಗ ಅವಳಿಗೆಂಥಹ ಆನಂದ! ತಿಣಿ-ತಿಣಿಕಿ, ತುಟಿ ಕಚ್ಚಿ, ನಾಲಗೆ ಕಚ್ಚಿ, ಬಿಗಿಹಿಡಿದು ಅವಳು ಹೇಗೋ ಆ ಕಲ್ಲನ್ನು ಎತ್ತಿದಳು. ತುಂಬ ಭಾರವಾಗಿತ್ತು ಆ ಕಲ್ಲು. ಆದರೂ ಅದರೆಡೆಗೆ ಅವಳ ಗಮನವಿರಲಿಲ್ಲ.

ಶಕ್ತಿ ಸಾಲದಾಗಿತ್ತು. ಕೈ-ಕಾಲುಗಳ ಶಕ್ತಿ ಕುಂದುತ್ತಲಿತ್ತು. ಶೇಕು ಹೆಚ್ಚಿತ್ತು. ಬೆವರಿನಲ್ಲಿ ಅವಳ ಇಡಿಯ ದೇಹವೆಲ್ಲ ಮಿಂದಿತು. ಆದರೂ ಅವಳು ತುಂಬ ಸಾಹಸ ಮಾಡಿ ಕಲ್ಲನ್ನು ಹೊತ್ತಳು. ನಿಧಾನವಾಗಿ ಒಂದೊಂದೇ ಹೆಜ್ಜೆ ಕಿತ್ತಿಡುತ್ತ ತಾನು ಕಟ್ಟಿದ ನೂತನ ‘ ಗುಡಿ ’ಯ ಬಳಿ ಸಾರಿದಳು— ಹೇಗೋ.

ಅಬ್ಬ! ಇನ್ನೊಂದು ಕ್ಷಣದಲ್ಲಿ ಆ ಕಲ್ಲು ‘ ಗುಡಿ’ಯ ಮೇಲೆ ಕುಳಿತು ಅವಳ ಹಿರಿಯ ಆಸೆಯನ್ನು ಜೀವನದ ಮಹೋನ್ನತ ಉದ್ದೇಶವನ್ನು ಪೂರ್ತಿಗೊಳಿಸಬೇಕು.

ಮುದುಕಿ ಮಹಾಕೂಟೇಶ್ವರರನ್ನು ಜಪಿಸುತ್ತ ಹೊತ್ತು ತಂದ ಕಲ್ಲನ್ನು ಗುಡಿಯ ಮೇಲೆ ಹೊಂದಿಸಲು ಎತ್ತಿದಳು.

ದೇಹದ ಆಸರೆ ತಪ್ಪಿತು. ಶಕ್ತಿ ಉಡುಗಿತು. ಹೃದಯದ ಏರಿಳಿತ ಭಯಂಕರವಾಗಿತ್ತು.

ಮುದುಕಿ ಇನ್ನೊಂದು ಕ್ಷಣದಲ್ಲಿ ಅದನ್ನು ‘ ಗುಡಿಯ ’ ನೆತ್ತಿಯ ಮೇಲೊಯ್ಯಲಿದ್ದಳು.

ಆದರೆ ಕೈಗಳು ‘ಗದ-ಗುಟ್ಟಿ’ ನಡುಗಿದುವು. ದೇಹ ‘ ಈ ಭಾರ ತಡೆಯಲಾರೆ ’ ಎಂದು ಉಸುರಿತು. ಕಾಲು ತತ್ತರಿಸಿತು.

ಕಣ್ಣು ಮುಚ್ಚಿ ಕಣ್ಣು ತೆರೆಯುವುದರೊಳಗಾಗಿ ಆ ಹಿರಿಯ ಕಲ್ಲು ಅವಳ ಮೇಲೆ ‘ ಧಡಾರನೆ ’ ಬಿದ್ದಿತು.

ಮುದುಕಿಯ ದೇಹವೂ ಅದರೊಂದಿಗೆ ಕೆಳಗುರುಳಿತ್ತು. ತನ್ನ ಜೀವನದ ಹಿರಿಯ ಆಸೆ, ಕನಸು, ಹುಚ್ಚುಗಳನ್ನು ಕಟ್ಟಿಕೊಂಡೇ ಈ ಲೋಕ ತ್ಯಜಿಸಿದ್ದಳು.

ಕಟ್ಟಿಗೆ ಕಡಿದುಕೊಂಡು ಹೋಗಲು ಬಂದ ಹರಿಜನ ಹುಡುಗರು, ದನಗಾಹಿಗಳು— ಆಗಲೆ ಅಲ್ಲಿ ನೆರೆದಿದ್ದರು. ಅವರವರಲ್ಲೇ ಮಾತು-ಕತೆ ನಡೆಯಿತು.

‘ಅಯ್ಯಪ್ಪರೆs,—ಹುಚ್ಚಿ ಸಾವಂತ್ರೆವ್ವ—ಸತ್ತು ಹೋತಲ್ರಲೇ.’

‘ ಪಾಪ! ಗಂಡಿಲ್ಲ, ಮಕ್ಕಿಲ್ಲ, ಹುಚ್ಚಹಿಡಿದು ಈ ಗುಡದಾಗ ಪಿರಿ-ಪಿರಿ ತಿರಗತಿತ್ತು ಮುದಕಿ! ’

‘ ಶಿವನಾಟ,— ಯಾರ ತಿಳಿದಾರಪs.... ಇಲ್ಲೆ ಇತ್ತs ಈ ಮುದಕಿs ಸಾವು!

ಅವರೆಲ್ಲರ ಹೃದಯಗಳು ತುಂಬಿ ಉದ್ಗಾರ ಹೊರಹೊರಡುತ್ತಲಿದ್ದವು. ಆ ಅನಾಥ. ಹುಚ್ಚಿ ಮುದುಕಿಗಾಗಿ ಅವರೆಲ್ಲರ ಕಣ್ಣೀರ ತರ್ಪಣ ನಡೆಯಿತು.

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್‌ಲ್ಯಾಂಟರ್ನ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

ಕರ್ನಾಟಕ ಸಂಗೀತ ಪಿತಾಮಹ

ಶ್ರೀಪುರಂದರದಾಸರು

ಶ್ರೀ. ಎಸ್. ರಾಜಾರಾಯರು ಬಿ.ಎ. (ಆನರ್ಸ್) ಧಾರವಾಡ

★

ಶ್ರೀಪುರಂದರದಾಸರು ಹರಿದಾಸವರೇಣ್ಯರೆಂದೇ ಬಹುಜನರಿಗೆ ಪರಿಚಿತರು. ಆದರೆ ಅವರು ಕರ್ನಾಟಕದ ಸಂಗೀತ ಕಲಾಕ್ಷೇತ್ರದಲ್ಲಿ ಕೃಷಿಮಾಡಿಕೊಟ್ಟ ಫಲವನ್ನು ಕಂಡವರು ತೀರ ಅಪೂರ್ವ!

★

ಕರ್ನಾಟಕ ಗಾನಕಲೆಯ [illegible], ಕಲೆಯ ಹಿರಿಮೆ, ಅದಕ್ಕೆ ಶ್ರೀಪುರಂದರದಾಸರು, ತ್ಯಾಗರಾಜರು ಮುಂತಾದ ಮಹನೀಯರು ಸಲ್ಲಿಸಿರುವ ಸೇವೆ— ಇವುಗಳನ್ನು ಸೂಕ್ಷ್ಮವಾಗಿ ವಿವರಿಸಿ, ಆ ವಿಭೂತಿಗಳು ರಚಿಸಿರುವ ಅಪಾರ ಕೃತಿಗಳಲ್ಲಿ ಯಾವುದಾದರೂ ಒಂದನ್ನು ಉದಾಹರಣಾರ್ಥವಾಗಿ ತೆಗೆದುಕೊಂಡು, ಆ ಕೃತಿಯನ್ನು ರಚಿಸಲು ಒದಗಿದ [illegible] ಸನ್ನಿವೇಶವನ್ನು ಚಿತ್ರಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಈ ಬಗ್ಗೆ ಇಂದು ಪುರಂದರದಾಸರ "ಇಂದಿನ ದಿನವೇ ಶುಭದಿನವು" ಎಂಬ ಉಗಾಭೋಗವನ್ನು ತೆಗೆದುಕೊಳ್ಳಲಾಗಿದೆ.

ಶ್ರೀಪುರಂದರದಾಸರು ಕರ್ನಾಟಕ ಗಾನಕಲೆಗೆ ನೀಡಿದ ಸೇವೆ ಅಪಾರವಾದುದು. ಗೀರ್ವಾಣಸಾಹಿತ್ಯಕ್ಕೆ ಕವಿ ವಾಲ್ಮೀಕಿ ಹೇಗೋ ಅಂತೆಯೇ ಶ್ರೀಪುರಂದರದಾಸರು ನಮ್ಮ ಕರ್ನಾಟಕ ಸಂಗೀತಕ್ಕೆ. ಸಂಖ್ಯಾದೃಷ್ಟಿಯಿಂದ ನೋಡುವುದಾದರೆ ದಾಸರ ವಿವಿಧ ಕೃತಿಗಳು ನಾಲ್ಕುಮುಕ್ಕಾಲು ಲಕ್ಷವೆಂದು ಅವರ [illegible] ನಾಮವೊಂದರಲ್ಲಿ ಪ್ರಸ್ತಾಪಿಸಿದ್ದಾರೆ. ಈ ಅಪಾರವಾದ ನಿಧಿಯಲ್ಲಿ ಅಧಿಕ ಭಾಗ ಕಣ್ಮರೆಯಾಗಿ, ಸ್ವಲ್ಪ ಮಾತ್ರ ನಮಗೆ ಲಭ್ಯವಾಗಿರುವುದು, ಕನ್ನಡಿಗರಾದ ನಮ್ಮೆಲ್ಲರ ದುರ್ದೈವದ ಸಂಗತಿ. ಕರ್ನಾಟಕ ಸಂಗೀತದ ಪಿತಾಮಹನೆಂಬ ಬಿರುದು ಪುರಂದರದಾಸರಿಗೇ ಸಲ್ಲುವ ಮಾತು. ಅವರು ಪದಗಳನ್ನು ರಚಿಸಿ ಹಾಡಿದವರುಗಳು ಮಾತ್ರವಲ್ಲ, ಉತ್ತಮ ಗಾನದ ಲಕ್ಷಣಕಾರರೂ ಆಗಿದ್ದರು.

ಈಗ ನಮ್ಮಲ್ಲಿ (ಕರ್ನಾಟಕ ಸಂಗೀತಗಾರರಲ್ಲಿ) ರೂಢಿಯಲ್ಲಿರುವ ಅಭ್ಯಾಸಕ್ರಮವನ್ನು ರೂಪಿಸಿಕೊಟ್ಟವರು ಪುರಂದರ ದಾಸರು. ಇವರಿಗಿಂತ ಪೂರ್ವದಲ್ಲಿ, ಕರ್ನಾಟಕ ಸಂಗೀತವನ್ನು ಅಭ್ಯಾಸ ಮಾಡುವವರು ಖರಹರಪ್ರಿಯ ಮೇಳದಿಂದ ಪ್ರಾರಂಭ ಮಾಡುತ್ತಿದ್ದರಂತೆ. ಪುರಂದರದಾಸರು [illegible] ಮಾಯಾಮಾಳವಗೌಳ ಮೇಳದಿಂದ [illegible]

ಪ್ರಾರಂಭ ಮಾಡುವ ಕ್ರಮವನ್ನು ಆಚರಣೆಗೆ ತಂದರು. ಈ ಬದಲಾವಣೆಗೆ ಕಾರಣವೇನಿರಬಹುದೆಂಬುದನ್ನು ನಾವು ಸ್ವಲ್ಪ ಸೂಕ್ಷ್ಮವಾಗಿ ಪರಿಶೀಲಿಸಿದರೆ ರಹಸ್ಯ ತಾನೇ ವ್ಯಕ್ತವಾಗುತ್ತದೆ. ಮಾಯಾಮಾಳವ ಗೌಳ ರಾಗವನ್ನು ನೋಡಿರಿ:—

ಸರಿ ಗಮ ಪಧ ನಿಸ
1 1 1 3

ಷಡ್ಜದಿಂದ ರಿಷಭಕ್ಕೆ ಎಷ್ಟು ಅಂತರವೋ, ಗಾಂಧಾರದಿಂದ ಮಧ್ಯಮಕ್ಕೂ, ಪಂಚಮದಿಂದ ಧೈವತಕ್ಕೂ, ನಿಷಾದದಿಂದ ಮೇಲಿನ ಷಡ್ಜಕ್ಕೂ ಅಷ್ಟೇ ಅಂತರವಿರುತ್ತದೆ. ಷಡ್ಜ, ಗಾಂಧಾರ, ಪಂಚಮ, ನಿಷಾದ ಈ ನಾಲ್ಕು ಸ್ವರಗಳನ್ನು ಸ್ವಲ್ಪ ಉಸಿರು [illegible] ಕೊಟ್ಟು ಹಾಡಿದರೆ, ರಿಷಭ, ಮಧ್ಯಮ, ಧೈವತ, ಮೇಲಿನ ಷಡ್ಜಗಳನ್ನು ಹಾಡುವುದು ಸುಲಭ. ಈಗಲೂ ನಮ್ಮ ಅನುಭವದಿಂದ ನೋಡುವುದಾದರೆ, ಪ್ರಾರಂಭದ ದೆಸೆಯಲ್ಲಿರುವ ವಿದ್ಯಾರ್ಥಿಗಳು ಸಾಧಾರಣವಾಗಿ ಗಾಂಧಾರವನ್ನು ಮಧ್ಯಮಸ್ಥಾನದಲ್ಲೂ, ನಿಷಾದವನ್ನು ಮೇಲಿನ ಷಡ್ಜ ಸ್ಥಾನದಲ್ಲೂ ಹಾಡುವುದನ್ನು ನಾವು ಗಮನಿಸಬಹುದು. ಖರಹರಪ್ರಿಯ ಮೇಳಕ್ಕಿಂತ ಮಾಯಾಮಾಳವಗೌಳ ಮೇಳವನ್ನು ವಿದ್ಯಾರ್ಥಿಗಳಿಗೆ ಸುಲಭವಾಗಿ ಕಲಿಸಬಹುದೆಂದು [illegible] ಪುರಂದರದಾಸರು ಈ ಬದಲಾವಣೆಯನ್ನು ಮಾಡಿರಬಹುದು [illegible]. [illegible] ಮಾಯಾಮಾಳವಗೌಳದ [illegible] ಪ್ರಾರಂಭ ಮಾಡಿ, ಸ್ವರಜ್ಞಾನ ತಾಳ [illegible] ಜಂಟಿ, [illegible] ನಮ್ಮ ಕರ್ನಾಟಕ ಸಂಗೀತ [illegible] ಅಭ್ಯಾಸಕ್ರಮ [illegible]

ಆದಿಯಪ್ಪ ಅಯ್ಯನೆಂಬ ವಾಗ್ಗೇಯಕಾರನು ತಾನು ರಚಿಸಿರುವ ತಾನ-ವರ್ಣ-ತಿಲ್ಲಾಣಗಳಿಗೆ ಪುರಂದರದಾಸರು ರಚಿಸಿದ ತಾನವರ್ಣ ತಿಲ್ಲಾಣಗಳೇ ಮೂಲರೂಪವೆಂದು ವಿಶದೀಕರಿಸಿರುತ್ತಾನೆ. ಆದರೆ ದಾಸರ ಈ ಕಲಾಕೃತಿಗಳು ಇಂದು ನಮ್ಮ ಪಾಲಿಗೆ ಇಲ್ಲವಾಗಿರುವುದು ಶೋಚನೀಯ.

ದಾಸರ ಕೃತಿಗಳನ್ನು ದೇವರ ನಾಮಗಳು ಅಥವಾ ದಾಸರ ಪದಗಳು ಎಂದು ಕರೆಯುವುದು ವಾಡಿಕೆಯಾಗಿದೆ. ವಿವಿಧ ತಾಳಗಳಲ್ಲಿ ಕೃತಿಗಳನ್ನು ರಚಿಸಿದ್ದರೂ, ಛಾಪು ಮತ್ತು ಝಂಪೆ ತಾಳಗಳಲ್ಲಿ ರಚನೆ ಹೆಚ್ಚಾಗಿ ಕಂಡುಬರುತ್ತವೆ.

ಪುರಂದರದಾಸರ ಸಂಗೀತವಿದ್ಯಾ ಪ್ರತಿಭೆಯನ್ನು ಹೊರಹೊಮ್ಮಿಸುವ ಕವಿತೆಗಳೆಂದರೆ ಸುಳಾದಿಗಳು. ಸುಳಾದಿಗಳನ್ನು ಹಾಡಿ ತೋರುವವರೇ ಈಗ ಅತಿ ವಿರಳ. ಸುಳಾದಿಯ ನಡೆಯೂ, ಕೀರ್ತನೆಗಳ ನಡೆಯಂತೆಯೇ ಇರುತ್ತದೆ. ಆದರೆ ಸುಳಾದಿಗಳಿಗೆ ಪಲ್ಲವಿ ಅನುಪಲ್ಲವಿಗಳೆಂಬ ಭಾಗಗಳಿರುವುದಿಲ್ಲ. ಸುಳಾದಿಯಲ್ಲಿ ಏಳೆಂಟು ಭಾಗಗಳಿದ್ದು, ಪ್ರತಿಯೊಂದೂ ಬೇರೆ ಬೇರೆ ತಾಳಗಳಲ್ಲಿರುತ್ತವೆ. ಕೆಲವು ಸುಳಾದಿಗಳ ಒಂದೊಂದು ತಾಳದ ಚರಣವನ್ನೂ ಒಂದೊಂದು ರಾಗದಲ್ಲಿ ಹಾಡುವ ಪದ್ಧತಿ ಇದೆ. 'ಸಂಗೀತಸಾರಾಮೃತ'ಎಂಬ ತನ್ನ ಗ್ರಂಥದಲ್ಲಿ ತುಳಜೇಂದ್ರ ಮಹಾರಾಜನು, ತಾನು ವಿವರಿಸಿರುವ ರಾಗ-ಲಕ್ಷಣಗಳಿಗೆ ಪುರಂದರದಾಸರು ಸುಳಾದಿಗಳಲ್ಲಿ ಪ್ರಯೋಗಿಸಿರುವ ವಿವಿಧ ರಾಗಸಂಚಾರಗಳು ಆಧಾರವೆಂದು ಸ್ಪಷ್ಟವಾಗಿ ಉಲ್ಲೇಖಿಸಿದ್ದಾನೆ.

ಸಂಗೀತವು ನಟ-ವಿಟಗಾಯಕರಿಗೆ ಅರ್ಹವಾದದ್ದೆಂದು ತಿರಸ್ಕರಿಸಲ್ಪಟ್ಟಿದ್ದ ಅಂದಿನ ಕಾಲದಲ್ಲಿ, ಅಪೂರ್ವರಾಗಗಳಲ್ಲಿ ಭಕ್ತಿಭರಿತವಾದ ಸಾಹಿತ್ಯವನ್ನು ಸೇರಿಸಿ, ಸಂಗೀತದಿಂದ ಸುಲಭವಾಗಿ ಪರಮಾತ್ಮನ ಕೃಪೆಗೆ ಪಾತ್ರರಾಗಬಹುದೆಂದು ಸಿದ್ಧಾಂತಪಡಿಸಿ, ಸಂಗೀತ ಶಾಸ್ತ್ರವನ್ನುದ್ಧರಿಸಿದವರು ಪುರಂದರದಾಸರು. ಕೀರ್ತನರೂಪದಲ್ಲಿ ಧರ್ಮೋಪದೇಶಮಾಡುವ ಸಂಸ್ಥೆಯನ್ನು ಕರ್ನಾಟಕ ದೃಷ್ಟಿಯಿಂದ ಪುನರುಜ್ಜೀವನಗೊಳಿಸಿ, ಕೀರ್ತನ ಪದ್ಧತಿಯನ್ನುದ್ಧರಿಸಿದ ಸಂಪೂರ್ಣ ಕೀರ್ತಿ ಶ್ರೀಪುರಂದರದಾಸರಿಗೇ ಸಲ್ಲತಕ್ಕದ್ದು. ಕರ್ನಾಟಕದಲ್ಲಿ ಪುರಂದರದಾಸರಷ್ಟು ಕನ್ನಡ ಪದಗಳನ್ನು ಮತ್ತಾರೂ ರಚಿಸಿಲ್ಲವೆಂಬುದರಲ್ಲಿ ಸಂದೇಹವಿಲ್ಲ. ವೇದಾಂತ ತತ್ತ್ವಗಳನ್ನೂ, ಪುರಾಣಚರಿತ್ರೆಗಳನ್ನೂ ತಿಳಿಯಾದ ಕನ್ನಡಕ್ಕೆ ಪರಿವರ್ತಿಸಿ ಸಮಾಜಕ್ಕೆ ಉಪದೇಶಿಸಿದರು. ಸಕಲ ಧರ್ಮ ಗ್ರಂಥಗಳ ಸಾರವನ್ನೂ ಕನ್ನಡಿಸಿದರು. ಗೀರ್ವಾಣಭಾಷೆಗಷ್ಟೇ ಸಲ್ಲುತ್ತಿದ್ದ ಪುರಸ್ಕಾರವನ್ನು ಕನ್ನಡಕ್ಕೂ ದೊರಕಿಸಿಕೊಟ್ಟರು.

ದಾಸರ ಕೀರ್ತನೆಗಳು ಸರಳವಾದ ಸುಂದರವಾದ ಕನ್ನಡ ಭಾಷೆಯಲ್ಲಿ ರಚಿತವಾಗಿದ್ದು, ಉಪನಿಷತ್ತುಗಳಂತೆ ಪರಾಪರ ತತ್ತ್ವಜ್ಞಾನದಿಂದ ತುಂಬಿ ತುಳುಕುತ್ತಿರುವುದರಿಂದಲೇ, ಅವುಗಳಿಗೆ 'ಪುರಂದರೋಪನಿಷತ್' ಎಂದು ಹೆಸರು ದೊರೆತುದು. ಪುರಂದರದಾಸರು ತಮ್ಮ ಕೀರ್ತನೆಗಳಲ್ಲಿ ಪ್ರಸ್ತಾಪಿಸಿರುವ ವಿಷಯಗಳು ಅನೇಕವಾಗಿವೆ. ಸದಾಚಾರಕ್ಕೆ ಬೇಕಾಗುವ ನೀತಿಯ ಉಪದೇಶ, ವಿಷ್ಣುಭಕ್ತಿಕ್ರಮ, ಶ್ರೀಹರಿಯ ಸ್ವಾತಂತ್ರ್ಯ, ಸಂಸಾರದಲ್ಲಿಯೇ ಇದ್ದು ಕರ್ಮಕ್ರಿಯೆಗಳ ಬಾಧೆಯನ್ನು ತಪ್ಪಿಸಿಕೊಳ್ಳುವ ಉಪಾಯ, ಅಜ್ಞಾನ ಮೂಲಕ ಹುಟ್ಟುವ ಸಾಂಸಾರಿಕ ವಿಷಯಗಳಲ್ಲಿಯ ಆಸಕ್ತಿಯನ್ನು ಸದ್ಗುರುಗಳ ಉಪದೇಶದಿಂದ ತೊರೆದು ವಿಷ್ಣುಭಕ್ತರ ಸಂಗದಿಂದ ಶ್ರೀಹರಿಯ ಮಹಿಮೆಯನ್ನು ಕೀರ್ತಿಸಿ ಕೊಂಡಾಡಿ, ಭಗವತ್ಕೃಪೆಗೆ ಪಾತ್ರರಾಗಬೇಕೆಂಬ ಆಳವಾದ ತತ್ತ್ವವಿಚಾರಗಳಿಂದ ಕೂಡಿದ ತಮ್ಮ ಕೃತಿಗಳ ಮೂಲಕ, ಹರಿದಾಸ್ಯದ ಗುಟ್ಟನ್ನು ಜನಸಾಮಾನ್ಯಕ್ಕೆ ಸುಲಭವಾಗಿ ತಿಳಿಸಿದ್ದಾರೆ ಶ್ರೀಪುರಂದರದಾಸರು. ಚಿನ್ನವರದ ಶ್ರೀನಿವಾಸರಾಯ, ಸರ್ವಸ್ವವನ್ನೂ ತ್ಯಾಗಮಾಡಿ ಪುರಂದರದಾಸರಾದ ಕ್ರಾಂತಿಕಾರಕ ಪವಾಡದ ಕತೆ ನಾಡಿನಲ್ಲೆಲ್ಲ ಜನಜನಿತವಾಗಿದೆ.

ಭಕ್ತಿ-ವಿರಕ್ತಿಯನ್ನು ಪಡೆದ ಆ ದಾಸದಂಪತಿಗಳು, ಹರಿನಾಮ ಸಂಕೀರ್ತನೆ ಮಾಡುತ್ತ ವಿಜಯನಗರದವರೆಗೆ, ವ್ಯಾಸತೀರ್ಥರ ಬಳಿಗೆ ವಿಜಯಯಾತ್ರೆ ಬೆಳೆಸಿದರು. ಅವರಿಂದ ಉಪದೇಶಪಡೆದ ದಿನವೇ ಸಾಕ್ಷಾತ್ಕಾರ ಪಡೆದ ತೃಪ್ತಿಯಲ್ಲಿ ಹೀಗೆ ಹಾಡಿದರು :

ಇಂದಿನ ದಿನವೇ ಶುಭ ದಿನವು । ಇಂದಿನ ವಾರ ಶುಭವಾರ ॥
ಇಂದಿನ ತಾರೆ ಶುಭ ತಾರೆ । ಇಂದಿನ ಯೋಗ ಶುಭಯೋಗ ॥
ಇಂದಿನ ಕರಣ ಶುಭಕರಣ । ಇಂದು ಪುರಂದರ ವಿಠಲರಾಯನ
ಸಂದರುಶನ ಫಲವೆನಗಾಯ್ತು । ಸಂದರುಶನ ಫಲವೆನಗಾಯ್ತು ॥



ಕಥೆಗೆ ವಸ್ತು

(ಜೀವನ ಚಿತ್ರನಾಳ)

ಶ್ರೀ. ಶೇಷಗಿರಿ ಪ್ರಭು, ಎಂ. ಜಿ. ಎಂ. ಕಾಲೇಜ್, ಉಡುಪಿ

卐

ನಮ್ಮಲ್ಲಿ ಕತೆ-ಕಾದಂಬರಿಕಾರರಾಗಬೇಕೆನ್ನುವ ತರುಣರ ಕಣ್ಣು, ತಂತಮ್ಮ ಕತೆಗಳಿಗೆ ಪ್ರಣಯ, ರಾಜಕೀಯ ಇರ್ಘುಗಳಿಗೆ ಸಂಬಂಧಿಸಿದ ವಸ್ತುಗಳನ್ನು ಹುಡುಕುವುದರ ಕಡೆಗೇ ತೊಡಗಿರುವುದಲ್ಲದೆ, ಮಾನವತೆಯ ರಹಸ್ಯವನ್ನು ಕಾಣುವುದನ್ನು ಅಪೇಕ್ಷಿಸುವುದಿಲ್ಲ. ಮಾನವನು ನಿಜವಾದ ಮಾನವನಿದ್ದರೆ, ಪ್ರಣಯವು ಪರಿಪಕ್ವವಾದೀತು; ರಾಜಕೀಯದ ರಜೋವೃತ್ತಿ ಸಾತ್ತ್ವಿಕವಾದೀತು !

卐

ಕತೆ ಬರೆಯಬೇಕಾದರೆ 'ವಸ್ತು'ವೊಂದು ಇದ್ದೇ ತೀರಬೇಕಲ್ಲವೆ? ನಾನೊಬ್ಬ ಕತೆಗಾರ ಇದುತನಕ ಹಲವು ಕತೆಗಳನ್ನು ಬರೆದವ. ಯಾವ ಕತೆಗೂ ವಸ್ತುವನ್ನು ಹುಡುಕುವುದು ನನಗೆ ಕಷ್ಟವಾಗಿಲ್ಲ. ನಮ್ಮ ನಿತ್ಯಜೀವನದಲ್ಲೇ ತೋರುವ ವಿಷಯಗಳ ಮೇಲೆ ಕತೆ ಬರೆಯಬೇಕು— ಎಂಬ ತತ್ತ್ವವಾದಿ ನಾನು. ಅದರಂತೆಯೇ ನನ್ನ ಇದುವರೆಗಿನ ಕತೆಗಳನ್ನು ಬರೆದಿದ್ದೇನೆ— ಎಂಬ ಹೆಮ್ಮೆಯೂ ಇದೆ

ಇಂದೂ ಒಂದು ಕತೆ ಬರೆಯಬೇಕೆಂದು, ಬೆಳಗ್ಗೆ ಹಾಸಿಗೆ ಬಿಟ್ಟೇಳುವಾಗಲೇ ಯೋಚಿಸಿದೆ. ಕಾಲೇಜುವಿದ್ಯಾರ್ಥಿಯಾಗಿ ನಾಲ್ಕು ಜನ ಗೆಳೆಯರೊಂದಿಗೆ ವಸತಿಗೃಹವೊಂದರಲ್ಲಿ ವಾಸಿಸುತ್ತಿರುವ ನನಗೆ— ಉಡುಪಿಯಂತಹ ಪಟ್ಟಣದಲ್ಲಿ— ವಸ್ತುವೊಂದು ಸಿಕ್ಕುವುದು ಬಹು ಸುಲಭವೆಂದು—ನನ್ನ ಹಿಂದಿನ ಅನುಭವದಿಂದ ನಂಬಿದ್ದೆ. ನನ್ನ ನಂಬಿಕೆ ಸುಳ್ಳಾಗಲೂ ಇಲ್ಲ. ಎದ್ದ ಸ್ವಲ್ಪ ಹೊತ್ತಿನಲ್ಲೇ ವಸ್ತುವೊಂದು ಸಿಕ್ಕಿತು :

ನನ್ನ ಕೋಣೆಗೆ ತಾಗಿ ನನ್ನ ಗೆಳೆಯನೊಬ್ಬನ ಕೋಣೆಯಿದೆ ಬೆಳಗ್ಗೆನೆ ಆ ಕೋಣೆಯಿಂದ ಸಂಗೀತಧ್ವನಿ ಕೇಳಿಬರುತ್ತಿತ್ತು. ಕಳೆದ ರಾತ್ರಿ ನಾವಿಬ್ಬರೂ ನೋಡಿದ 'ಚಿತ್ರ'ದ ಗೀತಗಳ ಕೇಳುತ್ತಿದ್ದುವು. ಮೆಲ್ಲಗೆ ಎದ್ದು ಹೊರಬಂದೆ. ಗೆಳೆಯನ ಕೋಣೆಯ ಬಾಗಿಲು ಮುಚ್ಚಿತ್ತು. ಕಿಟಕಿಯೊಂದರಿಂದ ಮೆಲ್ಲ ಒಳಗೆ ಇಣಿಕಿನೋಡಿದೆ. ನೋಡುವುದೇನು ! ಗೆಳೆಯ ಪಾಶ್ಚಾತ್ತ ದೇಶಕ್ಕೇನೆ ಹೊರಟು ನಿಂತಂತಿತ್ತು ! 'ಸೂಟು,' 'ಟೈ'ಗಳಿಂದ ಅಲಂಕೃತನಾಗಿದ್ದ. ಆಗ ತಾನೇ ಬಾಚಿಕೊಂಡ ಕೂದಲನ್ನು ಮೆಲ್ಲನೆ ತೀಡಿಕೊಂಡು ಸರಿಪಡಿಸುತ್ತಲಿದ್ದ. ನಾನು ನೋಡುತ್ತ ನಿಂತೆ. ಆತ 'ಫೋಟೋ' ಒಂದನ್ನು ಟ್ರಂಕಿನಿಂದ ತೆಗೆದು ಅದನ್ನು ನಿಲುಗನ್ನಡಿಯೊಂದರ ಎದುರಿಗಿಟ್ಟು, ಅದರ ಪಕ್ಕದಲ್ಲಿ ತಾನೂ ನಿಂತ. ಫೋಟೋದ ಪ್ರತಿಬಿಂಬ ಮತ್ತು ತನ್ನ ಪ್ರತಿಬಿಂಬಗಳು ಸರಿಯಾಗಿ ತೋರುವಂತೆ, ತನ್ನ ಮತ್ತು ಅದರ ಸ್ಥಾನಗಳನ್ನು ಸರಿಪಡಿಸಿಕೊಂಡ. ಮುಂದೆ ನೋಡುವುದೇನು ! ಗೆಳೆಯ ಅಭಿನಯಕ್ಕೆ ತೊಡಗಿದ ! ಮೆಲ್ಲನೆ ಏನೋ ಗುಣುಗುಣಿಸ ತೊಡಗಿದ. ಕನ್ನಡಿಯೊಳಗಿನ ಬಿಂಬ ನನ್ನಿಂದ ಮರೆಯಾಗಿತ್ತು. ಆದರೆ ಗೆಳೆಯನೊಡನಿದ್ದ 'ಫೋಟೋ'ವನ್ನು ನಾನು ಹಿಂದೆ ನೋಡಿದ್ದೆ. ಸಿನೆಮಾ ಚಿತ್ರದಲ್ಲಿ ಅಭಿನಯಿಸಿದ ನಟಿಯ ಭಾವಚಿತ್ರವಾಗಿತ್ತು— ಅದು !

ಥಕ್ಕನೆ ಗೆಳೆಯ ಸುತ್ತಲೂ ನೋಡಿದ. ನಾನು ಕೂಡಲೇ ಅತ್ತ ಸರಿದೆ. ಆದರೂ ನನ್ನನ್ನು ಆತ ಕಂಡನೆಂದೆನಿಸಿತು. ಇನ್ನು ಸರಿಯಲ್ಲವೆಂದು ಮೆಲ್ಲಗೆ ಕದ ತಟ್ಟಿದೆ. ಐದು ನಿಮಿಷಗಳ ನಂತರ ಬಾಗಿಲು ತೆರೆಯಿತು. ಒಳಹೊಕ್ಕು ನೋಡುತ್ತೇನೆ— ಗೆಳೆಯ ಆಕಳಿಸುತ್ತ ಹಾಸಿಗೆಯಲ್ಲಿ ಕುಳಿತಿದ್ದ. ಎಂತಹ ನಿದ್ದೆ ಬಂತಪ್ಪಾ... ಗಂಟೆ ಎಷ್ಟಾಯಿತು ?' ಎಂದು ಕಣ್ಣುಜ್ಜಿಕೊಂಡ. ಅತ್ತಿತ್ತ ನೋಡಿದೆ ಮೂಲೆಯಲ್ಲಿ ಕೋಟು ಪ್ಯಾಂಟುಗಳ ಮುದ್ದೆಯೊಂದು ತೋರಿತು. 'ಪಕ್ಕಾ ಕಳ್ಳ' ಎಂದುಕೊಂಡೆ ಮನದಲ್ಲೇ. ಉಳಿದ ಇತರ ಗೆಳೆಯರೂ ಕೂಡಿದಾಗ ಈ ಗುಟ್ಟನ್ನು ಬಯಲಿಗೆಳೆದು— ನನ್ನನ್ನು ಬಹುದಿನಗಳಿಂದ ಗೇಲಿಮಾಡುತ್ತಿದ್ದ ಆತನ ಮೇಲೆ ಸೇಡುತೀರಿಸಿಕೊಳ್ಳಬೇಕೆಂದು ಬಗೆದೆ. ಏನೂ ತಿಳಿಯದವನಂತೆ ಆತನೊಡನೆ ಮಾತನಾಡಿ, ಕೋಣೆಗೆ ಹಿಂದಿರುಗಿದೆ.

ಅಷ್ಟರಲ್ಲೇ ಇನ್ನೊಂದು ಯೋಚನೆಯೂ ನನ್ನ ಮನಸ್ಸಿನಲ್ಲಿ ಮೂಡಿತು. ಇದನ್ನೇ ವಿನೋದ ಸ್ವಾರಸ್ಯಮಯ ಕತೆಯಾಗಿ ಬರೆಯಬಾರದು ? 'ರಾಗಾನುಸಂಧಾನ' ಎಂದು ಹೆಸರು



ಕೊಡೋಣವೇ ? ಛೀ ! ಅದು ಹಳೆಯ ಹೆಸರಾಯಿತು. 'ಗೆಳೆಯನ ಗುಟ್ಟು ?' ಛೀ!.... 'ಸಿನಿಮಾ ಹುಚ್ಚು' ಸರಿ ! ಅದನ್ನೇ ಕೊಟ್ಟ-ರಾಯಿತು. ನನ್ನೊಬ್ಬ ಗೆಳೆಯ; ಆದರ್ಶವಾದಿ ! ಯಾವಾಗಲೂ ಸಿನೆಮಾಗಳನ್ನು ಹಳಿಯುವವ— ಅವು ಕೊಳಕು ಚಿತ್ರಗಳೆಂದು ಬಯ್ಯುವವ— ಒಂದು ದಿನ ನಮ್ಮ ಒತ್ತಾಯಕ್ಕೆ ಚಿತ್ರಕ್ಕೆ ಬಂದ.... ಅವನ ಮನಸ್ಸಿನಲ್ಲಿ ಪರಿವರ್ತನೆಯಾಯಿತು; ಆದರೂ ಹೇಳಲು ನಾಚಿದ. ಗುಟ್ಟಾಗಿ— ಈ ಗೆಳೆಯ ಮಾಡಿದಂತೆ ಮಾಡಿದ...' ಸರಿ, ಉತ್ತಮ ಕತೆಯಾಗುತ್ತದೆ.

* * * *

ಒಂಬತ್ತುವರೆಗೆ ಸ್ನಾನಮುಗಿಸಿ ಊಟಕ್ಕೆ ಹೋದೆವು. ಹೋಗುವಾಗಲೇ, 'ಉಡುಪಿಯ ಊಟ ಅರೆಹೊಟ್ಟೆಯೂ ತುಂಬುವುದಿಲ್ಲ' ಎಂದು ನನ್ನ ಇನ್ನೊಬ್ಬ ಗೆಳೆಯ ರಾಗವೆಳೆದ. ಆತ ನಿತ್ಯವೂ ಹಾಗೆನ್ನುತ್ತಿದ್ದ. ನಮಗೆಲ್ಲರಿಗೂ ಊಟ ಸಾಕಾಗುತ್ತಿರಲಿಲ್ಲವೆಂಬುದು ನಿಜವಾದರೂ— ಆ ಗೆಳೆಯನೆಂದಂತಾಗುತ್ತಿರಲಿಲ್ಲ. ಇಂದು ಮಾತ್ರ— ನನಗೂ ಹಾಗೆನಿಸುವಂತಾಯಿತು. ನನಗಿಂದು ಹಸಿವೆಯೇ ಹೆಚ್ಚಾಗಿತ್ತೋ. ಇಂದು ಬಡಿಸಿದುದೇ ಕಡಿಮೆಯೋ— ತಿಳಿಯೆ; ಊಟ ಮುಗಿಸಿ ಏಳುವಾಗ, ಹೊಟ್ಟೆ ಇನ್ನೂ ಕೇಳುತ್ತಿತ್ತು. ಸರಿ, ನನ್ನ ತೀಕ್ಷ್ಣಬುದ್ಧಿಗೆ ಅಲ್ಲಿಯೇ ಒಂದು 'ಪ್ರಗತಿಶೀಲ' ಕತೆ ಹೊಳೆಯಿತು : 'ಬಡವನೊಬ್ಬ ದಿನವಿಡೀ ದುಡಿದು—ಸಿಕ್ಕಿದ ಆದಾಯದಿಂದ ಹೋಟೆಲಲ್ಲಿ ಊಟವೊಂದನ್ನು ಪಡೆಯುತ್ತಾನೆ. ಊಟ ಆತನ ಹಸಿವೆಯನ್ನು ಇನ್ನಷ್ಟು ಕೆಣಕಿದಂತಾಗುತ್ತದೆ. ಆತ ಊಟ ಮುಗಿಸಿ ಹೊರ ಬರುವಾಗ— ಎದುರಿನ ಮನೆಯ ಶ್ರೀಮಂತನೊಬ್ಬ ಆಗ ತಾನೇ ಊಟ ಮುಗಿಸಿ, ಡರ್ರನೆ ತೇಗುತ್ತ ಹೊರಬರುತ್ತಾನೆ. ಆತನನ್ನು ನೋಡಿದೊಡನೆಯೇ, ಈ ಬಡವನಿಗೆ ಹೊಟ್ಟೆ ಉರಿಯುತ್ತದೆ. 'ನಮ್ಮಂತಹ ಬಡವರ ರಕ್ತ ಹೀರಿಯಲ್ಲವೆ ಇವರು ಹೀಗೆ ಕುಳಿತು ತಿನ್ನುವುದು ?' ಎಂದು ಭಾವಿಸುತ್ತಾನೆ. ಅಂದೇ ಆತ ಬಡವರ ಸಂಘಟನೆಗೆ ತೊಡಗುತ್ತಾನೆ. ಸಿರಿವಂತರನ್ನು ದ್ವೇಷಿಸುತ್ತಾನೆ. ಕೂಲಿಕಾರರಲ್ಲಿ ಒಕ್ಕಟ್ಟು ಉಂಟುಮಾಡುತ್ತಾನೆ. ಮುಂದೆ ಆತ ದೊಡ್ಡ ಜನನಾಯಕನಾಗಿ ಸಾಮ್ಯವಾದದ ಭಯಂಕರ ಕ್ರಾಂತಿಗೆ ತೊಡಗುತ್ತಾನೆ. ಅಂತ್ಯದಲ್ಲಿ ಬಂಡವಾಳಶಾಹಿಗಳ ಕ್ರೌರ್ಯಕ್ಕೆ ತುತ್ತಾಗಿ— ಆತ್ಮಾರ್ಪಣ ಮಾಡುತ್ತಾನೆ.' ಅಬ್ಬ ! ತುಂಬ ಉತ್ತಮ ವಸ್ತು ! ಇದನ್ನಂತೂ ಬರೆದೇ ತೀರಬೇಕು— ಎಂದೆಣಿಸಿದೆ.

* * * *

ಇಂದು ರಜೆಯಿದ್ದುದರಿಂದ ಪೇಟೆಯತ್ತ ತಿರುಗಾಡಿ ಬರೋಣವೆಂದು— ಗೆಳೆಯರೆಲ್ಲ ಹೊರಟೆವು. ಎಲ್ಲಿಗೆ ಹೋಗುವುದು ? ಎಂಬ ಪ್ರಶ್ನೆ ಬಂತು. 'ಪಾರ್ಕಿ'ಗೆ ಎಂದ ಒಬ್ಬ. 'ಈಗ ಅಲ್ಲಿ ಯಾರು ಬರುತ್ತಾರೆ ?' ಎಂದ ಇನ್ನೊಬ್ಬ. ಸಿನೇಮಾ ಮಂದಿರದತ್ತ ಹೋಗೋಣವೆಂದರೆ— ಇಂದು 'ಮ್ಯಾಟಿನಿ'ಯೂ ಇಲ್ಲ. ಸರಿ, ಬಸ್ ಸ್ಟ್ಯಾಂಡಿನತ್ತ ಹೊರಟೆವು. ಅಲ್ಲಿಗೆ ನಾವು ಹೋಗುವುದಕ್ಕೂ, ಮಂಗಳೂರಿಂದ ಬಸ್ಸೊಂದು ಬಂದು ನಿಲ್ಲುವುದಕ್ಕೂ— ಸರಿಹೋಯಿತು. ಬಸ್ಸಿನಲ್ಲಿಯ ಪ್ರಯಾಣಿಕರ ಕಡೆಗೆ ನಮ್ಮ ದೃಷ್ಟಿ ಹರಿಯಿತು. 'ಲೇಡೀಸ್ ಸೀಟ್'ನಿಂದ ತರುಣಿಯೊಬ್ಬಳು ಕೆಳಗಿಳಿದಳು. ನಮ್ಮೆಡೆಗೆ ಒಮ್ಮೆ ನೋಡಿ ಅತ್ತ ಮೊಗದಿರುಹಿದಳು. ನನ್ನ ಗೆಳೆಯನೊಬ್ಬ ಆಕೆಯನ್ನೇ ನೆಟ್ಟದಿಟ್ಟಿಯಿಂದ ನೋಡುತ್ತಿದ್ದ.... ನನ್ನ ಪ್ರತಿಭೆ ಕತೆ ಹೆಣೆಯತೊಡಗಿತು : 'ಬಸ್ಸಿನಲ್ಲಿ ಕಂಡ



ಹುಡುಗಿ' ಎಂಬುದು ಶಿರೋನಾಮೆ. 'ತರುಣನೊಬ್ಬ ಬಸ್ಸಿನಲ್ಲಿ ಪ್ರಯಾಣವೆಸಗುತ್ತಿದ್ದ; ಅದೇ ಬಸ್ಸಿನಲ್ಲಿ ಸುಂದರ ತರುಣಿಯೊಬ್ಬಳೂ ಇದ್ದಳು. ಬಸ್ಸು ಹೋಗುತ್ತಿದ್ದಂತೆ, ಯಾರೋ ಅಡ್ಡ ಬಂದುದರಿಂದ— ಫಕ್ಕನೆ ನಿಂತಿತು. ಕುಳಿತವರೆಲ್ಲ ಅತ್ತಿತ್ತ ಹೊರಳಿ ಬಿದ್ದರು. ನಮ್ಮ ತರುಣನ ಎದುರಿಗೇ ಕುಳಿತಿದ್ದ ಆ ತರುಣಿ, ಆತನ ಮೈಮೇಲೇನೆ ಬಿದ್ದಳು. ಆತ ಆಕೆಯನ್ನು ಹಿಡಿದು ಪೆಟ್ಟಾಗದಂತೆ ತಡೆದ. ಆಕೆ ಆತನಿಗೆ ಕೃತಜ್ಞತೆ ಸಮರ್ಪಿಸಿದಳು. ಆತ 'ಅದು ತನ್ನ ಕರ್ತವ್ಯ' ಎಂದ. ಅವರ ಪರಿಚಯ ಬೆಳೆಯಿತು; ಪವಿತ್ರ-ಪ್ರೇಮ ಬಲಿಯಿತು. ಆಕೆ ತನ್ನೂರಿಗೆ ಹೋದಮೇಲೂ ಆತನಿಗೆ ಪತ್ರ ಬರೆಯುತ್ತಿದ್ದಳು. ಪತ್ರಮುಖೇನ ಅವರ ಪ್ರೇಮ ಬೆಳೆದು ಬಂತು. ಆಕೆಯ ಜಾತಿ ಬೇರೆಯಾಗಿತ್ತು. ಆಕೆಯ ತಂದೆ ಆಕೆಗೆ ವಿವಾಹ ನಿಶ್ಚಯಿಸಿದ. ಆಕೆ ಪ್ರತಿಭಟಿಸಿದರೂ ಸಾಧ್ಯವಾಗಲಿಲ್ಲ. ಆತನಿಗೆ ಎಲ್ಲವನ್ನೂ ತಿಳಿಸಿದಳು. ಕೊನೆಗೆ ತಮ್ಮ ಪ್ರೇಮಕ್ಕಾಗಿ— ಅವರಿಬ್ಬರೂ ತಮ್ಮವರನ್ನೆಲ್ಲ ಬಿಟ್ಟು— ದೊಡ್ಡ ಪಟ್ಟಣವೊಂದನ್ನು ಸೇರಿದರು. ಆತನಿಗೊಂದು ಕೆಲಸ ದೊರಕಿ, ಅಲ್ಲಿ ಆದರ್ಶ-ದಂಪತಿಗಳಾಗಿ ಬಾಳಿದರು' ಅಥವಾ— ಇದನ್ನೊಂದು ದುರಂತ ಕತೆಯಾಗಿ ಮಾಡಲೇ? 'ಆಕೆಯ ತಂದೆಯ ಬಲಾತ್ಕಾರ; ಆಕೆಯ ಅಸಹಾಯತೆ; ಕೊನೆಗೆ ಆತನಿಗೆ ಪತ್ರವೊಂದನ್ನು ಬರೆದು, 'ನಾನು ಮುಂದೆ ಹೋಗುತ್ತೇನೆ; ನೀವೂ ಬೇಗನೇ ಬನ್ನಿ'ಎಂದು ಹಾರಯಿಸಿ, ಆತ್ಮಹತ್ಯೆ ಮಾಡಿಕೊಂಡಳು; ಅದನ್ನು ಕೇಳಿದ ಆತ— ಏನಾದ? ಹುಚ್ಚನಾದ.... ಅಲ್ಲ, ಆತ್ಮಹತ್ಯೆ ಮಾಡಿಕೊಂಡ–!.... ಹೀಗೆ ಮಾಡಿದರೇನು? ಆದರೆ— ಹಾಗೆ ಮಾಡುವುದಾದರೆ, ಅವರಿಬ್ಬರ ಶೃಂಗಾರಭರಿತ ಮಾತುಕತೆಗೆ ಸ್ಥಾನವಿಲ್ಲದಾಗುವುದು.... ಏನು ಮಾಡಲಿ?....ಸರಿ, ಆ ನಡುವೆ ಅವರಿಬ್ಬರು ಒಮ್ಮೆ ಭೇಟಿಯಾಗುತ್ತಾರೆ.... ಸುಖದ ಕನಸು ಕಟ್ಟುತ್ತಾರೆ— ಆಮೇಲೆ, ಕ್ರೂರವಿಧಿ, ಅಂಧಸಮಾಜ ಎರಡೂ ಸೇರಿ, ಅವರನ್ನು ಬಲಿಗೊಳ್ಳುತ್ತವೆ. ಇದೇ ಸರಿ— ಎಂದು ನಿಶ್ಚಯಿಸಿದೆ. ವಸತಿಗೃಹಕ್ಕೆ ಹಿಂದಿರುಗುವಾಗಲೆಲ್ಲ ನನ್ನ ಮನಸ್ಸು, ಅವರ ಬಸ್ಸು ನಿಂತು ಆಕೆ ಆತನ ಮೇಲೆ ಬಿದ್ದಾಗಿನ ಮತ್ತು ಅವರಿಬ್ಬರು ಪುನಃ ಭೇಟಿಯಾದಾಗಿನ ಸನ್ನಿವೇಶಗಳನ್ನು ಚಿತ್ರಿಸಿಕೊಳ್ಳುತ್ತಿತ್ತು.

* * * *

ಸಂಜೆ ಗೆಳೆಯರೆಲ್ಲ ಒಂದೆಡೆ ಸೇರಿದೆವು. 'ಪಾರ್ಕಿಗೆ ಹೋಗುವ' ಎಂದನೊಬ್ಬ. 'ಬೇಡ ಪೇಟೆಗೆ ಹೋಗಿ ಬರುವ' ಎಂದ ಇನ್ನೊಬ್ಬ.

'ಅಲ್ಲೇನು ಕೆಲಸ?'

'ನಾನು ಹೊಸ 'ಷೂಸ್' ಕೊಳ್ಳಬೇಕು. ಈ ಉಡುಪಿಯ ರಸ್ತೆಯಲ್ಲಿ ಒಂದೂವರೆ ಮೈಲು ನಡೆದು ಕಾಲೇಜಿಗೆ ಹೋಗುವುದೆಂದರೆ— ಜೀವವೇ ಹಿಂಡಿದಂತಾಗುತ್ತದೆ. ನನ್ನ ಷೂಸ್ ಹಾಳಾದುದರಿಂದ ನಿನ್ನೆ ಬರಿಗಾಲಿನಲ್ಲಿ ಹೋಗಬೇಕಾಯಿತು. ಅಬ್ಬ! ಕಾಲೆಲ್ಲ ಬೀಗಿಕೊಂಡಿದೆ' ಎಂದನಾತ.

ನಿಜ, ಕಾಲೇಜು ತುಂಬ ದೂರವಿತ್ತು. ರಸ್ತೆಯಲ್ಲಿ ಬೆಣಚುಗಲ್ಲುಗಳು ಯಮದೂತರಂತೆ ತಲೆಯೆತ್ತಿ ನಿಂತಿದ್ದುವು. ಬರಿಗಾಲಿನಲ್ಲಿ ನಡೆಯುವುದು ಅಸಾಧ್ಯವೆಂದು— ಎಲ್ಲರೂ ಒಪ್ಪುವಂತಿತ್ತು. ಎಲ್ಲರೂ ಕೂಡಿ ಪೇಟೆಯತ್ತ ಹೊರಟೆವು.

ಮಾರ್ಗದಲ್ಲಿ ನಮ್ಮ ಸಹಪಾಠಿಯೊಬ್ಬ ಸಿಕ್ಕಿದ. ಆತ ಪಾರ್ಕಿನ ಕಡೆ ಹೊರಟಿದ್ದ; ತಲೆಯಿಂದ ಕಾಲುತನಕ ಶೃಂಗರಿಸಿಕೊಂಡಿದ್ದ. ನಮ್ಮೊಡನೆ ಕೆಲವೇ ಮಾತುಗಳನ್ನಾಡಿ, ತನ್ನ ಹಾದಿ ಹಿಡಿದ. ನಮ್ಮ ಗೆಳೆಯನೊಬ್ಬನ ದೃಷ್ಟಿ ಆತನ ಬೂಟುಗಳ ಮೇಲೆಯೇ ನೆಟ್ಟಿತ್ತು. ಆತನೂ ಅಂಥದೊಂದು ಜತೆ ಕೊಳ್ಳಲು ಕೆಲ ದಿನಗಳ ಹಿಂದೆ ಬಯಸಿದುದೂ, ಮನೆಯಿಂದ ಬಂದ ಹಣ ಕಡಿಮೆಯಾಗಿ ಕೊಳ್ಳಲಾರದೆ ಹೋದುದೂ—ನನಗೆ ತಿಳಿದಿತ್ತು. ಭೇಟಿಯಾದ ಗೆಳೆಯ ಬೇರಾಗುತ್ತಲೇ ಈತ ಹೇಳಿದ: "ಅಪ್ಪ ಕಾರ್ಖಾನೆಯಿಂದ ಹಣ ಗಳಿಸುತ್ತಾನೆ; ಮಗ 'ಗಮ್ಮತ್ತ್' ಮಾಡುತ್ತಾನೆ. ಈ ದೊಡ್ಡವರಿಗೆಲ್ಲ ಬುದ್ಧಿಗಲಿಸಲು 'ಕಮ್ಯೂನಿಸಂ' ಏ ಬರಬೇಕು" ಎಂದು. ಆತ ಪಾರ್ಕಿನಕಡೆಗೆ ಹೊರಟಿದ್ದುದನ್ನೂ, ನಾವಿಂದು ಹೋಗಲಾರದಾದೆವೆಂಬುದನ್ನೂ ಎಣಿಸಿ, ನಮಗೆಲ್ಲ ಆತನ ಮೇಲೆ ಸಿಟ್ಟು ಬಂದು—ಎಲ್ಲರೂ ಆ ಹೊತ್ತಿಗೆ ಕಮ್ಯೂನಿಸ್ಟರಾದೆವು. ನನ್ನ ಮನಸ್ಸು 'ಕೂಲಿಕಾರ ಶೋಷಣೆ'ಯ ಕತೆಯೊಂದನ್ನು ಬರೆವ ಯೋಚನೆಯಲ್ಲಿ ತೊಡಗಿತು.

ಅಂಗಡಿಯನ್ನು ಸೇರಿ 'ಷೂಸ್' ಕೊಂಡಾಯಿತು. ಅದಕ್ಕಿಂತ ಹೆಚ್ಚಾಗಿ, ಅಲ್ಲಿದ್ದ ಎಲ್ಲಾ ತರದ 'ಷೂಸ್'ಗಳನ್ನು ನೋಡಿ ಕಾಲಿಗಿಕ್ಕಿಕೊಂಡು 'ಬೆಲೆ ಸರಿಬರಲಿಲ್ಲೆಂದು' ಬಿಟ್ಟುದಾಯಿತು. ಹೊಸ 'ಷೂಸ್' ಕೊಂಡ ಗೆಳೆಯನಿಂದ ಕಾಫಿ ಗಿಟ್ಟಿಸಿಯೂ ಆಯಿತು. ಹಿಂದಿರುಗಿ ಹೊರಟೆವು. ಕತ್ತಲಾಗುತ್ತ ಬಂದಿತ್ತು. ಮಾತನಾಡುತ್ತ ಸಾಗುತ್ತಿದ್ದೆವು. ಸಿನೆಮಾ ಥಿಯೇಟರ್ ಬರಲು ನಮ್ಮ ಪದ್ಧತಿಯಂತೆ, ಅಲ್ಲಿಯ ಜಾಹೀರಾತುಗಳನ್ನೂ ಸಿನೆಮಾಕ್ಕೆ ಹೋಗುವ ಜನರನ್ನೂ ನೋಡುತ್ತ ತುಸು ಹೊತ್ತು ನಿಂತೆವು.

* * * *

ನಾನು ಇಂದು ಕತೆ ಬರೆವ ಕುರಿತು ಯೋಚಿಸುತ್ತಿದ್ದೆ. ಯಾವ ಕತೆಯಾದೀತೆಂದು ಆಯುತ್ತಿದ್ದೆ.

ಆಕಸ್ಮಾತ್ತಾಗಿ ರಸ್ತೆಯ ಬದಿಯಲ್ಲಿ ಯಾವುದೋ ವಸ್ತುವಿನ ಕಡೆಗೆ ನನ್ನ ಗಮನ ಹರಿಯಿತು. ದೂರದಿಂದ ನೋಡಿದಾಗ, ಅದು ಚಲಿಸುತ್ತಿದ್ದಂತೆ ಕಂಡಿತು. ಕುತೂಹಲದಿಂದ ಹತ್ತಿರಕ್ಕೆ ಹೋದೆ.

ನಾನಿದುತನಕ ನೋಡಿದ ವಿಷಯಗಳಿಂದ ಬೇರೆಯಾದ ದೃಶ್ಯ ಅಲ್ಲಿತ್ತು. ತೀರ ಮುದುಕನೊಬ್ಬ ನೆಲಕ್ಕೆ ತಾಗಿಕೊಂಡೇ ಮುನ್ನಡೆಯಲು ಯತ್ನಿಸುತ್ತಿದ್ದ. ಮೈಮೇಲೆ ಒಂದೇ ತುಂಡು ಬಟ್ಟೆಯಿತ್ತು. ಎಲ್ಲ ಎಲುವುಗಳೂ, ಎದ್ದು ಕಾಣುತ್ತಿದ್ದುವು. ಪೂರ್ಣ ಬಗ್ಗಿಕೊಂಡು, ಕೈಗಳಿಂದ ಮೊಣಕಾಲುಗಳನ್ನು ಹಿಡಿದುಕೊಂಡು— ಒಂದೊಂದೇ ಹೆಜ್ಜೆಯನ್ನು ಎತ್ತಿ ಮುಂದಿಡಲು ಯತ್ನಿ-

ಸುತ್ತಿದ್ದ. ನಾನು ಹತ್ತಿರ ಹೋದಾಗ ಆತ ಒಂದು ಹೆಜ್ಜೆಯನ್ನೆತ್ತುತ್ತಲಿದ್ದ. ಆತನ ಮುಖವನ್ನು ಕಂಡೊಡನೆಯೇ ನನಗೆ— ಏನಾಯಿತೋ ತಿಳಿಯೆ ; ಈ ತನಕ ಅನುಭವಿಸದ ಒಂದು ಅನುಭವವಾಯಿತು ; ಮುಂದೆ ನೋಡುವುದಸಾಧ್ಯವಾಯಿತು. ಏಕೋ ವೇದನೆಯೊ ಏನ ಅನುಭವವಾದಂತೆನಿಸಿತು. ತಲೆ ತಿರುಗುವಂತಾಯಿತು. ನನ್ನ ಮನಸ್ಸು ಹಿಂಜರಿಯುತ್ತಿದ್ದರೂ—ಯಾವುದೋ ಶಕ್ತಿಯ ವಶವಾಗಿ, ಪುನಃ ಮುದುಕನನ್ನು ನೋಡಿದೆ. ಆತ ಇನ್ನೊಂದು ಹೆಜ್ಜೆ ಮುಂದಿಡುವ ಯತ್ನದಲ್ಲಿದ್ದ. ಆದರೆ ಈ ಬಾರಿ ಆತನ ಕಾಲು ಚೂಪಾದ ಕಲ್ಲೊಂದರ ಮೇಲೆ ಬಿತ್ತು. ಮುದುಕ ಮುಗ್ಗರಿಸಿದ ; ಕೈಗಳನ್ನು ನೆಲಕ್ಕೆ ಕೊಟ್ಟು, ಅಲ್ಲೇ ಒರಗಿಕೊಂಡ ; ಕ್ಷೀಣಧ್ವನಿಯೊಂದು ಕೇಳಿಬಂತು....

ನನ್ನಿಂದ ಮುಂದೆ ನೋಡಲಾಗಲಿಲ್ಲ ನನ್ನ ಗೆಳೆಯರೆಡೆ ನೋಡಿದೆ. ಅವರಿನ್ನೂ 'ಷೂಸ್' ಕುರಿತು ಚರ್ಚಿಸುತ್ತಿದ್ದರು. 'ನಾನೂ ಒಂದು ಜತೆ ಕೊಳ್ಳಬೇಕು. ನನ್ನ ಚಪ್ಪಲಿ ತೀರ ಸವೆದಿದೆ. ಬರಿಗಾಲಿನಲ್ಲಿ ನಡೆದು ಸಾಯಲೋ, ಹಣ ಕಳಿಸುತ್ತೀರೋ—ಎಂದು ಬರೆಯುತ್ತೇನೆ ಮನೆಗೆ' ಎಂಬ ಮಾತು ಕೇಳಿ ಬಂತು.

ಮೌನವಾಗಿ ಗೆಳೆಯರಿದ್ದತ್ತ ಹೋದೆ. ನಾನು ಬಂದುದನ್ನು ನೋಡಿ ಅವರೂ ಹೊರಟರು. ನೆಟ್ಟಗೆ ಕೋಣೆಯನ್ನು ಸೇರಿದೆವು.

* * * *

ರಾತ್ರಿ ನನ್ನಿಂದ ಕತೆ ಬರೆಯಲಾಗಲಿಲ್ಲ ಏಕೋ—ಮನಸ್ಸೇ ಸರಿಯಿರಲಿಲ್ಲ ; ಕಲ್ಪನೆಯೇ ಮುಂದುವರಿಯಲಿಲ್ಲ. ಅಂದು ಯೋಚಿಸಿದ ಕತೆಗಳೆಲ್ಲ ಮರೆತೇ ಹೋದುವೆನಿಸಿತು. ಏನು ಯೋಚಿಸಿದರೂ ಮನದೆದುರು ಆ ಮುದುಕನ ಚಿತ್ರ ಬಂದು ನಿಲ್ಲುತ್ತಿತ್ತು. ಯಾವುದೋ ಒಳದನಿಯೊಂದು ನನ್ನನ್ನು ಅಣಕಿಸುವಂತೆ ಭಾಸವಾಗುತ್ತಿತ್ತು.

ಮುಂದೆರಡು ದಿನಗಳತನಕವೂ ಮನಸ್ಸಿಗೆ ಕೊಂಚವೂ ನೆಮ್ಮದಿಯಿರಲಿಲ್ಲ. ಮನಸ್ಸೇ ಬಂದಾದಂತಿತ್ತು. ಆಗಾಗ—ಆ ಮುದುಕನ ಚಿತ್ರ ಮಾತ್ರ ಮೂಡುತ್ತಿತ್ತು. ಈ ಅವಧಿಯಲ್ಲಿ ನಾನು ಯೋಚಿಸಿದೆನೆನ್ನಲಾರೆ ; ಕಲ್ಪಿಸಿದೆನೆನ್ನಲಾರೆ.... ನಾನೇನ ಮಾಡುತ್ತಿದ್ದೆನೋ—ನನಗೇ ತಿಳಿದಿಲ್ಲ. ಒಂದು ಮಾತ್ರ ನಿಜ—ಕ್ಷಣ ಕ್ಷಣಕ್ಕೆ ನನ್ನನ್ನು ಯಾರೋ ಅಣಕಿಸಿದಂತೆ ಎನಿಸುತ್ತಿತ್ತು.

ಮೂರನೆಯ ದಿನ ಬೆಳಗ್ಗೆ ಎದ್ದವನೇ—ಯಂತ್ರದಂತೆ ಕಾಗದ, ಲೇಖನಿ ಹಿಡಿದು ಕುಳಿತೆ. ಹಿಂದೆ ಮುಂದೆ ಯೋಚಿಸದೆ ಬರೆಯುತ್ತ ಸಾಗಿದೆ. ಎರಡು ಗಂಟೆಗಳ ಕಾಲ ಬರೆದು ಮುಗಿಸಿ, ಒಮ್ಮೆ ಓದಿನೋಡಿದೆ. 'ಎರಡು ಮುಖಗಳು' ಎಂದು ಹೆಸರಿಸಿದೆ. ಮೂರು ದಿನಗಳಿಂದ ಹೊತ್ತ ಹೊರೆ ಒಮ್ಮೆಗೇ ಇಳಿದಂತಾಯಿತು. ಮನಸ್ಸಿಗೆ ಯಾವುದೋ ಒಂದು ಹೊಸ ಶಾಂತಿಯು ಅನುಭವವಾಯಿತು.

ಅಂದಿನಿಂದ ನಾನು, ಕತೆಗಾಗಿ ವಸ್ತು ಹುಡುಕುವುದನ್ನು ಬಿಟ್ಟಿದ್ದೇನೆ

ರಚನೆಗೊಳುತಿದೆ ನಾಡು ಹೊಸಹಸೆಯ ಮೇಲೆ !

ಶ್ರೀ. ಡಿ. ಎಸ್. ಕರ್ಕಿ ಎಂ ಎ, ಪಿಎಚ್. ಡಿ. ಬೆಳಗಾಂವಿ

卐

೧

ರಚನೆಗೊಳುತಿದೆ ನಾಡು
ಹೊಸಹಸೆಯ ಮೇಲೆ–
ಸಾಗಲಿದೆ ಬೇಗನೆಯೆ
ನವರಾಷ್ಟ್ರ ಲೀಲೆ !
ಜಾತಿ-ಪಂಥದ ತೂರಿ
ಪ್ರೌಢ ಬುದ್ಧಿಯು ಬೀರಿ
ಲೋಕಹಿತವನೇರಿ
ನಿಲ್ಲುತಿದೆ ರಾಜ್ಯ —
ಅದ್ಭುತ ಪ್ರಯೋಗಕ್ಕೆ
ಸಾಧಿಸದೆ ಸಾಧ್ಯ?

೨

ಎಚ್ಚರಾಗಿರು ಪ್ರೌಢ
ತೂಕಡಿಸಬೇಡ !
ನೆಚ್ಚು ನಾಡಿನೊಳಿರಲಿ
ಅಕಳಿಸಬೇಡ !
ನಿನ್ನ ತಲೆಗಿಹುದು ಬೆಲೆ,
ನಿನ್ನ ಬಲ ನಂಬಿ ನಡೆ,
ಬಹುದು ಭಾರತಕೆ ಕಳೆ
ಸುಳ್ಳದರೊಳಿಲ್ಲ —
ಮನಕೆ ಮಾನವಿರೆ ಸಾಕ್ಷಿ
ಸರಿಯುಪ್ಪುದೆಲ್ಲ !

೩

ನೀ ತೆರೆಯಬೇಕಣ್ಣ
ನಿನ್ನೆರಡು ಕಣ್ಣ–
ಕಣ್ಣಿನಾಚೆಗೆ ಹೊಳೆವ
ನಿನ್ನ ಬಗೆಗಣ್ಣ
ಸಾಕು ಪರರಾಧಾರ,
ಸಾಕು ಪರರುಪಚಾರ,
ತಿಳಿ ಬಗೆಯು ಅವತಾರ
ಬೇಕು ಭಾರತಕೆ —
ನೀಡು ನಿಷ್ಠೆಯ ಕಾಣ್ಕೆ
ಬರುವ ಜೀವನಕೆ.

೪

'ನಾನೊಂದು ಕಿರುಬಿಂದು
ಬಲವೆನಿತು ?' ಎಂದು
ಕುಂದುವಡೆಯುವುದೇಕೆ
ಬಿಡುಗಡೆಗೆ ಬಂದು ?
ಬೆಳಸು ಶಕ್ತಿಗೆ ಶಕ್ತಿ
ನಲಿಸು ದೀಪ್ತಿಗೆ ಭಕ್ತಿ
ಭದ್ರವಾಗಲಿ ಮುಕ್ತಿ
ಒಂದೊಂದೆ ಬಿಂದು—
ಸಖ್ಯಕ್ಕೆ ಹರಿದು ನಿಲೆ
ತತ್ತ್ವಮಯ ಸಿಂಧು !

೫

ಆಯ್ಕೆಗೊಳಲಿಹ ವೀರ
ನಿನಗೊಂದು ಮಾತು :
ಗುರಿಯು ಮರೆಯಲು ಬೇಡ
ಪಕ್ಷಕ್ಕೆ ಸೋತು !
ಇರಲಿ ಯಾವುದೆ ಪಕ್ಷ
ತಳೆದು ಕೇವಲ ಸ್ವಾರ್ಥ
ಗೈಯದಿರು ನೀ ಮೋಸ
ದೇಶದುನ್ನತಿಗೆ—
ಮುಡುಪಿರಲಿ ತಾಯಡಿಗೆ
ನಿನ್ನ ಸನ್ಮತಿಕೆ !

* * *

ರಚನೆಗೊಳುತಿದೆ ನಾಡು
ಹೊಸ ಹಸೆಯ ಮೇಲೆ
ಸಾಗಲಿದೆ ಬೇಗನೆಯೆ
ನವ ರಾಷ್ಟ್ರಲೀಲೆ !
ಲೋಕಹಿತವನೇರಿ
ನಿಲ್ಲುತಿದೆ ರಾಜ್ಯ—
ಅದ್ಭುತ ಪ್ರಯೋಗಕ್ಕೆ
ಸಾಧಿಸದೆ ಸಾಧ್ಯ ?

ರಥಯಾತ್ರೆ

ಶ್ರೀ. ಎಸ್. ಶಿವರುದ್ರಪ್ಪ ಬಿ.ಎ. (ಆನರ್ಸ್)
ದಾವಣಗೆರೆ

ವಿಶಾಲ ಪಥದಲಿ ಜೀವನ ರಥದಲಿ
ನಿನ್ನಯ ಕರುಣೆಯ ಸಾರಥ್ಯದಲಿ
ನೀಲ ವಿತಾನದ ಹಂದರದಡಿಯಲಿ
ಮರ್ತ್ಯದ ಮಣ್ಣಿನ ಧೂಳಿಯಲಿ
ಹಗಲು ಇರುಳುಗಳ ಬೆಳಕಿನಲಿ

ನಡೆಯುತ್ತಿದೆ ಈ ಜೀವರಥ
ವಿಶಾಲವಾಗಿದೆ ನನ್ನ ಪಥ.

ನೋವು ನಲಿವುಗಳ ಸವಿದು ನೋಡಿದೆ,
ಬಾಳಿನ ಸುಮಧುರ ಒಲವನು ಹೀರಿದೆ,
ಸೃಷ್ಟಿಯ ಚೆಲುವಿಗೆ ಎದೆಯನು ನೀಡಿದೆ,
ಹಕ್ಕಿಯ ತೆರದಲಿ ಹಾರುತ ಹಾಡಿದೆ,
ಮುಂದೆ ಕಾಣ್ ಅದೋ ಬೆಳಕು ಮೂಡಿದೆ!

ನಡೆಯುತ್ತಿದೆ ಈ ಜೀವರಥ
ವಿಶಾಲವಾಗಿದೆ ನನ್ನ ಪಥ.

ಗರ್ಗರ ನಾದದ ಗಾಲಿಯ ವೇಗ
ಅನಂತಯಾತ್ರೆಗೆ ಬಂಧುರ ರಾಗ ;
ಸಾಕ್ಷಿಯಾಗುತಿದೆ ಗಗನಾಭೋಗ
ಅನಂತ ಶಕ್ತಿಯೆ ನಡೆಸಿರುವಾಗ
ನನಗೇತಕೆ ಬಿಡು ವ್ಯರ್ಥಾವೇಗ !

ನಡೆಯುತ್ತಿದೆ ಈ ಜೀವರಥ
ವಿಶಾಲವಾಗಿದೆ ನನ್ನ ಪಥ.

ಸ್ವಾತಂತ್ರ್ಯ

'ಅನಂಗಕಂದ'

ಸ್ವಾತಂತ್ರ್ಯದ ಹುಯಿಲೆ ಹುಯಿಲು !
ಸ್ವಾತಂತ್ರ್ಯವೊ ಬಯಲಿ ಒಯಿಲು !
ಪ್ರಕೃತಿ ತನ್ನ ಕಟ್ಟಳೆಗಳ
ಕೋಟಿಗಳನು ನಿರ್ಮಿಸಿಹಳು,
ಪ್ರತಿಜೀವನ ಪ್ರತಿಜಡವನು
ಕಟ್ಟಳೆಯಲಿ ಬಂಧಿಸಿಹಳು.
ಬಂಧ ಹರಿವೆನೆಂದರೆ
ಲೋಕಕೆ ಅದೆ ತೊಂದರೆ !

ಪ್ರತಿಜ್ಞಾಪೂರ್ತಿ

(ಪೌರಾಣಿಕ ತರಂಗರೂಪಕ)

ಶ್ರೀ. ದೇಶಪಾಂಡೆ ರಂಗರಾಯರು, ಆಲದಕಟ್ಟಿ

卐

[ಪಾತ್ರಗಳು: ಭೀಷ್ಮ, ದ್ರೋಣ, ಅರ್ಜುನ, ಏಕಲವ್ಯ, ದ್ರುಪದ.]

೧

ನಿವೇದಕ :

ಭಾರತಯುದ್ಧದಲ್ಲಿ, ಭೀಷ್ಮಪಿತಾಮಹರ ತರುವಾಯ ಕೌರವ ಸೇನಾಪತಿಗಳಾದ ದ್ರೋಣಾಚಾರ್ಯರ ಜೀವನದ ಪ್ರಥಮಾವಸ್ಥೆಯಲ್ಲಿ ಜರುಗಿದ ಕೆಲವು ಘಟನೆಗಳ ಶಬ್ದಚಿತ್ರವಿದು. ದ್ರೋಣಾಚಾರ್ಯರೂ ಪಾಂಚಾಲದೇಶದ ರಾಜಪುತ್ರ ದ್ರುಪದನೂ ಬಾಲ್ಯಸ್ನೇಹಿತರು. ಸಹಾಧ್ಯಾಯಿಗಳು. ಇವರೀರ್ವರಲ್ಲಿ ಅನ್ಯೋನ್ಯ ಪ್ರೀತಿ. ಏಕಜೀವಿಗಳು. ದ್ರುಪದನ ವಿದ್ಯಾಭ್ಯಾಸಂಗ ಮುಗಿದು ರಾಜಧಾನಿಗೆ ತೆರಳಿದ ಮೇಲೆ, ತಂದೆಯ ಮರಣಾನಂತರ ಸಿಂಹಾಸನವನ್ನೇರಿ ರಾಜನಾದನು. ತಂದೆ ಭಾರದ್ವಾಜರ ಮರಣಾನಂತರ ದ್ರೋಣಾಚಾರ್ಯರು, ಮಗನಾದ ಅಶ್ವತ್ಥಾಮನ ಪೋಷಣೆಗಾಗಿ ಒಂದು ಹಸುವನ್ನು ತರಲು ಭಾರ್ಗವ—ಪರಶುರಾಮರಲ್ಲಿಗೆ ಹೋದಾಗ, ಸರ್ವಸ್ವದಾನಮಾಡಿ ಬರಿಗೈಯಾದ ಅವರಿಂದ ಆಚಾರ್ಯರಿಗೆ ಹಸುವಿನ ಬದಲು ಧನುರ್ವಿದ್ಯೆಯ ಸಂಪಾದನೆಯಾಯಿತು. ಹಾಗೆಯೇ ಹಿಂದಿರುಗಿದ ದ್ರೋಣಾಚಾರ್ಯರು, ಬಾಲ್ಯಸ್ನೇಹಿತ ದ್ರುಪದನಲ್ಲಿಗೆ ಹೋದರು. ರಾಜನಾದ ಮೇಲೆ ಐಶ್ವರ್ಯದಲ್ಲಿ ಮಗ್ನನಾಗಿ ಉನ್ಮತ್ತನಾದ ದ್ರುಪದನು, ಆಚಾರ್ಯರನ್ನು ತಿರಸ್ಕರಿಸಿ ಹೊರದೂಡಿಸಿದನು. ಅವಮಾನಿತರಾದ ಆಚಾರ್ಯರು, ಶಿಷ್ಯರಿಂದ ದ್ರುಪದನನ್ನು ಸೋಲಿಸಿ ಸೆರೆಹಿಡಿದು ತರಿಸಿ ದಂಡಿಸುವ ಪ್ರತಿಜ್ಞೆಮಾಡಿ, ಹಸ್ತಿನಾವತಿಗೆ ಬಂದರು. ಬಾಲಕರ ಮುಖಾಂತರ ಭೀಷ್ಮರಿಗೆ ಅವರು ಬಂದದ್ದು ತಿಳಿದು ತಮ್ಮಲ್ಲಿಗೆ ಕರೆಯಿಸಿಕೊಂಡು ಮಾತನಾಡುತ್ತಿರುವರು.

ಭೀಷ್ಮ:— ಗುರುಬಂಧುಗಳಿಗೆ ಸುಸ್ವಾಗತ. ಇತ್ತ ಬರಬೇಕು. ಸಂದರ್ಶನದಿಂದ ಕೃತಾರ್ಥನಾದೆ.

ದ್ರೋಣ:— (ಆಶ್ಚರ್ಯಸೂಚಕಧ್ವನಿ) ನಾನು....ತಮಗೆ.... ಗುರುಬಂಧು !

ಭೀಷ್ಮ:— ನಿಃಸಂಶಯವಾಗಿ ! ನಾನೂ ಭಾರ್ಗವರ ಶಿಷ್ಯನೇ ಅಲ್ಲವೆ ? ಈ ಸುಯೋಗದ ಶ್ರೇಯಸ್ಸೆಲ್ಲವನ್ನು ನಾನು....ಆ.... ಕುಮಾರ ಯುಧಿಷ್ಠಿರನ ಮುದ್ರೆಯುಂಗುರಕ್ಕೇ ಕೊಡುವೆ. ಕೈತಪ್ಪಿ ಕೂಪದಲ್ಲಿ ಬಿದ್ದು, ಅದು ನಮಗೊಂದು ಅಲಭ್ಯಲಾಭ ಮಾಡಿಕೊಟ್ಟಿತು. ಆಳದಿಂದ ಅದನ್ನು ಮೇಲಕ್ಕೆತ್ತಿದ ಅಸ್ತ್ರಸಿದ್ಧಿ ಭಾರ್ಗವಶಿಷ್ಯರಲ್ಲಲ್ಲದೆ ಅನ್ಯರಲ್ಲಿ ಶಕ್ಯವಿಲ್ಲ. ತಾವೇ ಇರಲಿಕ್ಕೆ ಸಾಕೆಂಬ ನನ್ನ ತರ್ಕ ಸರಿಯಾಯ್ತು. ಇನ್ನು ಯಾವ ವಿಷಯದಲ್ಲಿಯೂ ಸಂಕೋಚಪಟ್ಟುಕೊಳ್ಳಬಾರದು. ಗುರುಬಂಧುಗಳಾದ ನಮ್ಮಲ್ಲಿ ಪರಸ್ಪರ ಸ್ನೇಹ, ಆದರ, ವಿಶ್ವಾಸಗಳು ಬೆಳೆಯುತ್ತಿರಲೆಂದು ಆಶಿಸುವೆ.

ದ್ರೋಣ :— ಈ ಅಪೂರ್ವಸ್ವಾಗತದಿಂದ ನಾನು ಸಂಭ್ರಾಂತನಾಗಿದ್ದೇನೆ.

ಭೀಷ್ಮ :— ಅಷ್ಟೊಂದು ಆಶ್ಚರ್ಯಪಡುವಂತಹದೇನಿದೆ ಇದರಲ್ಲಿ ?

ದ್ರೋಣ :— ನಿರ್ಧನ— ನಿರ್ಗತಿಕ— ನಿಃಸಹಾಯ— ಬ್ರಾಹ್ಮಣ ನಾನು. ತಾವೋ, ತ್ರೈಲೋಕ್ಯವಿಖ್ಯಾತ ವೀರಕ್ಷತ್ರಿಯರು, ಸಾರ್ವಭೌಮ ಸತ್ತಾಧಾರಿಗಳು ! ಉಚ್ಚಪದವಿಯಲ್ಲಿದ್ದ ಕ್ಷತ್ರಿಯರಿಂದ ದರಿದ್ರ ಬ್ರಾಹ್ಮಣನಿಗೆ....ಇಷ್ಟೊಂದು ಸ್ವಾಗತ ! ಬಂಧುವೆಂದು ಆದರದ ಕರೆ !!

ಭೀಷ್ಮ :— ಕ್ಷತ್ರಿಯರಾದ ನಮಗೆ ಬ್ರಾಹ್ಮಣರು ಸದೈವ ಪೂಜ್ಯರೇ ಅಲ್ಲವೆ? ಗುರುಬಂಧುಗಳಂತೂ ಸರಿಯೇ. ವಿಶೇಷವಾಗಿ ತಾವಂತೂ ' ಇದಂ ಬ್ರಾಹ್ಮ್ಯಂ ಇದಂ ಕ್ಷಾತ್ರಂ ಶಾಪಾದಪಿ ಶರಾದಪಿ '

ದ್ರೋಣ:— (ನಿಟ್ಟುಸಿರು) ಇಷ್ಟೊಂದು ವಿವೇಕ ಇಷ್ಟೊಂದು ವಿಶ್ವಾಸ, ಎಲ್ಲ ಕ್ಷತ್ರಿಯರಲ್ಲಿಯೂ ಇರುತ್ತಿದ್ದಿದ್ದರೆ, ಪ್ರತಿಸ್ವರ್ಲೋಕವಾಗುತ್ತಿತ್ತು ಈ ಭೂಲೋಕ ! (ನಿಟ್ಟುಸಿರು) ದುರ್ದೈವ; ಬ್ರಾಹ್ಮಣದ್ವೇಷದ ಅವಶೇಷ—ಕಾರ್ತವೀರ್ಯನ ಅಂಶ–ಉಳಿದಿದೆ ಇನ್ನೂ ಜಗತ್ತಿನಲ್ಲಿ !

ಭೀಷ್ಮ :— (ಆಶ್ಚರ್ಯ) ಇದೇನಿದು ? ಅಸ್ತ್ರ-ಶಸ್ತ್ರಾಭ್ಯಾಸದ ಜತೆಗೆ ಕ್ಷತ್ರಿಯದ್ವೇಷದ ದೀಕ್ಷೆಯನ್ನೂ ತೆಗೆದುಕೊಂಡಿಲ್ಲವಷ್ಟೇ ಗುರುಗಳಿಂದ ?

ದ್ರೋಣ :— ಭೀಷ್ಮರಾಜ ! ಉನ್ಮತ್ತ ಸತ್ತಾಧಾರಿಗಳಿಂದಾಗುವ ಅನ್ಯಾಯ ಅಪಮಾನಗಳನ್ನು, ತೆಪ್ಪಗೆ ಕಣ್ಣುಮುಚ್ಚಿ ಸಹನ ಮಾಡುವುದೇ ಒಳಿತೇನು ನಿಮ್ಮ ಅಭಿಪ್ರಾಯದಲ್ಲಿ ?

ಭೀಷ್ಮ :— ಇಲ್ಲ, ಹಾಗೆಂದಿಗೂ ಇಲ್ಲ. ನೀತಿಯ ಮರ್ಯಾದೆ ಮೀರಿದ್ದನ್ನು ಪ್ರತಿಭಟಿಸಲೇ ಬೇಕು.

ದ್ರೋಣ:— ಸರಿ, ಈ ಸಹಾನುಭೂತಿಯಿಂದ ನನ್ನ ಮನಸ್ಸಿನ ಮೇಲಿನ ಭಾರ ಬಹುಮಟ್ಟಿಗೆ ಹಗುರಾಯಿತು. ನನ್ನ ಪ್ರತಿಜ್ಞಾಪೂರ್ತಿಯ ಸುದಿನವೂ ಸಮೀಪಿಸಿತೆಂದು ತಿಳಿಯುವೆ.

ಭೀಷ್ಮ :— (ಆಶ್ಚರ್ಯ) ಓ ಹೋ ! ಗುರುಗಳಂತೆ ಶಿಷ್ಯರಿಂದಲೂ ಕ್ಷತ್ರಿಯಕುಲ ನಿರ್ಮೂಲನ ಪ್ರತಿಜ್ಞೆಯೋ ?

ದ್ರೋಣ :— ಛೀ ! ಆ ಯೋಗ್ಯತೆ ನನ್ನದಲ್ಲ. ನನಗೆ ದ್ರೋಹ ಬಗೆದವನ ಮಟ್ಟಿಗೆ ನನ್ನ ಪ್ರತಿಜ್ಞೆ.

ಭೀಷ್ಮ :— ಹೀಗೋ ? ಆ ದ್ರೋಹಿ ಯಾರು ?

ದ್ರೋಣ :— ಪಾಂಚಾಲರಾಜ !

ಭೀಷ್ಮ :— ದ್ರುಪದ ? ಪಾಂಚಾಲರಾಜ ದ್ರುಪದನೇ ? ತಮ್ಮ....ಸಹಾಧ್ಯಾಯಿಯೆಂದು ಕೇಳಿದ್ದೆ ?

ದ್ರೋಣ:—(ನಿಟ್ಟುಸಿರು) ಸಹಾಧ್ಯಾಯಿ! ಸಹಾಧ್ಯಾಯಿಯೇ ಸುದೀರ್ಘವೈರಿಯಾಗಿರುವ ಭೀಷ್ಮರಾಜ! ಈ ವೈರದ ಹಿನ್ನೆಲೆಯನ್ನಷ್ಟು ಪರಾಮರ್ಶಿಸಿದರೆ ಅದರ ಯಥಾರ್ಥ ತಿಳಿಯಲನುಕೂಲನಾಗುವುದು ತಮಗೆ. ಈ ದ್ರುಪದ ನಮ್ಮ ಆಶ್ರಮದಲ್ಲಿ ಗುರುಕುಲವಾಸಕ್ಕೆಂದು ಕಾಲಿಟ್ಟಂದಿನಿಂದ ವಿದ್ಯಾಸಮಾಪ್ತಿಯ ನಂತರ ರಾಜಧಾನಿಗೆ ಮರಳುವವರೆಗೆ, ಅನ್ಯೋನ್ಯಪ್ರೇಮ ನೆಲೆಸಿತ್ತು ನಮ್ಮುಭಯತರಲ್ಲಿ. ದೇಹವೆರಡಾದರೂ ಭಾವದಲ್ಲಿ ಭೇದವಿಲ್ಲ. ಅರೆನಿಮಿಷ ಅಗಲದ ಏಕಜೀವಿಗಳು ನಾವು. ವಿಷಮತೆಯೆಂಬುದೇ ಗೊತ್ತಿರಲಿಲ್ಲ. ಆಶ್ರಮಜೀವನದಲ್ಲಿ ಸಹಭಾಗಿಗಳಾಗಿದ್ದಂತೆ, ರಾಜ್ಯಭೋಗದಲ್ಲಿಯೂ ಸಹಭಾಗಿಗಳೆಂದು ತನ್ನ ಇಚ್ಛೆಯನ್ನು ವ್ಯಕ್ತಪಡಿಸುವಷ್ಟು ಅವನ ಪ್ರೀತಿ ನನ್ನ ಮೇಲೆ. ವಿದ್ಯಾಭ್ಯಾಸ ಪೂರ್ತಿಯಾಗಿ ಕೊನೆಗೊಂದು ದಿನ ತನ್ನ ಪಟ್ಟಣಕ್ಕೆ ಪ್ರಯಾಣಬೆಳಸುವ ಸಮಯ; ಉಕ್ಕಿಬರುತ್ತಿರುವ ದುಃಖವನ್ನು ಹತ್ತಿಕ್ಕಿ ನನ್ನನ್ನು ತಬ್ಬಿಕೊಂಡು "ಅರ್ಧರಾಜ್ಯ ನನ್ನದು, ಅರ್ಧರಾಜ್ಯ ನಿನ್ನದು. ನಿನ್ನನ್ನಗಲಿ ಏಕಾಕಿಯಾಗಿ ಜೀವಿಸಲಾರೆ. ನನ್ನಾಣೆ. ಬಂದುಬಿಡು. ನನ್ನೊಡನೆ ಬಂದುಬಿಡು!" ಎಂದು ಒತ್ತಾಯಪಡಿಸಿ, ಕಟ್ಟಕಡೆಗೆ ಬಹುಪ್ರಯಾಸದಿಂದ ಪ್ರಯಾಣಬೆಳಸಿದ್ದ ಈ ದ್ರುಪದ!!!

ಭೀಷ್ಮ:— ಇಷ್ಟು ಗಾಢಮೈತ್ರೀ!! ಇದೆಲ್ಲ ಕರಗಿ ಒಮ್ಮೆಲೇ ವೈರಭಾವ ಉಂಟಾದ ಕಾರಣ?

ದ್ರೋಣ:— ಪರಿಸ್ಥಿತಿಯ ಪರಿಣಾಮವೇ ಕಾರಣ! ಅವನು ಪಟ್ಟಾಭಿಷಿಕ್ತ ರಾಜನಾದ; ನಾನು ಜನ್ಮತಃ ರಿಕ್ತಹಸ್ತ ದ್ವಿಜನಾದೆ!

ಭೀಷ್ಮ:—(ಉಪಹಾಸ) ಆಂ. ಹಾಂ. ಹೀಗೇನು! ಶಿಷ್ಟಾಚಾರದಂತೆ ಒಮ್ಮೆಯಾದರೂ ಮರಳಿ ನಿಮ್ಮಲ್ಲಿಗೆ?

ದ್ರೋಣ:— ಇಣಕಿ ಸಹ ನೋಡಲಿಲ್ಲ. ನಾನೇ ಅವನಲ್ಲಿಗೆ ಒಮ್ಮೆ ಹೋಗಬೇಕಾಗಿ ಬಂತು. ನನಗೊಬ್ಬ ಕುಮಾರನಿರುವ. ಅವನ ಪೋಷಣೆಗಾಗಿ ಒಂದು ಹಸುವಿನ ಅಪೇಕ್ಷೆಯಾಯ್ತು. ಈ ಅಪೇಕ್ಷೆ ನನ್ನಲ್ಲಿ ಹುಟ್ಟಿದ್ದೇ ತಪ್ಪಾಯ್ತು.

ಭೀಷ್ಮ:— ಅದೇಕೆ? ಪದ್ದುದು ವನ್ನಪೇಕ್ಷಿಸುವುದು....

ದ್ರೋಣ:— (ನಿಟ್ಟುಸಿರು) ದರಿದ್ರರಿಗೆ ತರವಲ್ಲ. ದರಿದ್ರನ ಅಪೇಕ್ಷೆ ಫಲಿಸುವುದೂ ಇಲ್ಲ. ಹುಟ್ಟುಹುಟ್ಟುತ್ತಲೇ ದಾರಿದ್ರ್ಯದ ಬೇಗೆಯಲ್ಲಿ ಸುಟ್ಟೇ ಹೋಗುವವು. ಹಾಲು ಹಾಲೆಂದು ಹಟಹಿಡಿದ ಕೂಸಿಗೆ ಹಿಟ್ಟುಕದಡಿದ ತಿಳಿನೀರೇ ಹಾಲೆಂದು ಕೊಡುತ್ತ ಬಂದ ದುರ್ಭಾಗ್ಯ ನಮ್ಮದು!

ಭೀಷ್ಮ:— ರಾಜ್ಯದಲ್ಲಿ ಅರ್ಧರಾಜ್ಯವನ್ನೇ ಕೊಡಮಾಡಿದ ಪಾಂಚಾಲನಂತಹ ಸ್ನೇಹಿತ, ಕೊಡಲಾರದಿದ್ದನೇ ಒಂದು ಗೋವನ್ನು?

ದ್ರೋಣ:— (ನಿಟ್ಟುಸಿರು) ನಾನೂ ಇದೇ ರೀತಿ ಆಲೋಚಿಸಿದೆ. ಆ ಮದಾಂಧನಲ್ಲಿ ಹೋದದ್ದೇ ತಪ್ಪಾಯ್ತು. ಬಾಲ್ಯಸ್ನೇಹಿತ ಭಾರದ್ವಾಜದ್ರೋಣ ಬಾಗಿಲಲ್ಲಿ ದರ್ಶನಾಪೇಕ್ಷೆಯಾಗಿ ಕಾಯ್ದಿರುವನೆಂದು ದ್ವಾರಪಾಲಕನಿಂದ ಹೇಳಿಕಳುಹಿಸಿದರೆ, ಆ ಉನ್ಮತ್ತನ ಉತ್ತರವೇನು ಗೊತ್ತೇ? "ಭಾರದ್ವಾಜ ದ್ರೋಣನಾರೋ ನಾ ಅರಿಯೆ— ಅವನೆಲ್ಲಿಯ ಸ್ನೇಹಿತ ನನಗೆ? ದರಿದ್ರವನವಾಸಿ, ಅವನೀಪತಿಯ ಸಖನಂತೆ! ಹುಚ್ಚನಿರಬಹುದು.... ಹೋಗೆಂದು ಹೇಳವನಿಗೆ"— ಇದು ಅವನ ಮಾರುತ್ತರ.

ಭೀಷ್ಮ:— ಲೋಭಿಗಳ ಮನದೊಲವೇ ಇದು— ಪ್ರತ್ಯಕ್ಷದಲ್ಲಿ ನಿರಾಕರಿಸುವ ಧೈರ್ಯ ಸಾಲದೇ ಅಪ್ರತ್ಯಕ್ಷವಾಗಿ ಯಾಚಕರನ್ನು ಓಡಿಸುವ ಶಾಠ್ಯತನ!

ದ್ರೋಣ:— (ನಿಟ್ಟುಸಿರು) ಇನ್ನು ಸಹಿಸಿದೆ. ದ್ವಾರಪಾಲಕ ಹೇಳುವುದರಲ್ಲಿ ಏನಾದರೂ ಪ್ರಮಾದವಾಗಿರಬಹುದು. ಪ್ರತ್ಯಕ್ಷ ಕಾಣಿಸಿಕೊಂಡು ಮಾತಾಡಿಸಿಬಿಡುವ— ಎಂದು ಒಳನುಗ್ಗಿದೆ.

ಭೀಷ್ಮ:— ಸಮಕ್ಷಮ ಕಂಡರೂ ಸನ್ಮಾನಿಸಲಿಲ್ಲವೇ?

ದ್ರೋಣ:— ಭೀಷ್ಮರಾಜ, ಆ ಪ್ರಸಂಗ ನೆನಸಿದರೇ— ಮೈಮುಳಿನುರಿ ಏರಿ.... ಪ್ಪ....(ದೀರ್ಘಶ್ವಾಸ) ಅವರಾಡಿದ ಶಬ್ದ.... ಕಿವಿಗೆ.... ಕಾಸಿದ ಸೀಸದ ರಸ— ಆಢ್ಯ ಅನಾಢ್ಯರಲ್ಲಿ ಸಖಿತ್ವ ಶಕ್ಯವೇ (ದೀರ್ಘಶ್ವಾಸ) ದೂಡಿವನನ್ನು!.......

ಭೀಷ್ಮ:— (ಕ್ರೋಧದಿಂದ) ಉನ್ಮತ್ತಶಿಖಾಮಣಿ— ಸಾಮಾನ್ಯ ಶಿಷ್ಟಾಚಾರದ ರೀತಿ-ನೀತಿಯನ್ನೂ ಅರಿಯದ— ಮೂರ್ಖ ಶಿರೋಮಣಿ.... ಇಂಥ ಪ್ರಮತ್ತರಿಂದಲೇ ಕ್ಷತ್ರಿಯ ಕುಲಕ್ಕೆ ಕಳಂಕ. ಶಾಠ್ಯತನಕ್ಕೆ ಶಾಸನ ಅವಶ್ಯ.... ಆ ಕೂಡಲೇ ದಂಡಿಸಬೇಕಿತ್ತು ಅಧಾರ್ಮಿಕನನ್ನು!

ದ್ರೋಣ:— ಬ್ರಾಹ್ಮಣ್ಯ ಅಡ್ಡಬಾರದಿದ್ದಿದ್ದರೆ ಆ ಕಾಲಕ್ಕೆ ಆಗಬಹುದಿತ್ತು. ಈಗ ಮಾಡಬೇಕಾದ್ದನ್ನು ನನ್ನ ಶಿಷ್ಯರಿಂದ ಮಾಡಿಸಬೇಕಾಗಿದೆ. ಆಢ್ಯ-ಅನಾಢ್ಯರಲ್ಲಿ ಸಖಿತ್ವ ಶಕ್ಯವಿದೆ. ನಾನು ಅವನ ಪೂರ್ವಸಖ ಎಂಬುದನ್ನು ಒಡನುಡಿಸಬೇಕಾಗಿದೆ. ಅವನ ಮುಖದಿಂದಲೇ ಸರಿಹಿಡಿದು ತರಿಸಿ.... ಇದೇ ನನ್ನ ಪ್ರತಿಜ್ಞೆ.

ಭೀಷ್ಮ:— ಸರಿ. ಈ ತಮ್ಮ ಪ್ರತಿಜ್ಞಾಪೂರ್ತಿ ನಮ್ಮ ರಾಜಕುಮಾರರಿಂದಲೇ ಆಗಬೇಕೆಂದು ಭಗವತ್ ಸಂಕಲ್ಪವೇ ಇದ್ದಂತಿದೆ. ಯೋಗ್ಯ ಧನುರ್ವಿದ್ಯಾಗುರುಗಳು ರಾಜಪುತ್ರರಿಗೆ ದೊರೆಯಬಹುದೇ ಎಂಬ ಚಿಂತೆಯಲ್ಲಿದ್ದ ನನಗೆ, ಅನಾಯಾಸೇನ ತಮ್ಮ ದರ್ಶನವಾಯ್ತು. ಯೋಗಾಯೋಗ ಹೇಗಿದೆ ನೋಡಿ; ರಾಜಪುತ್ರರನ್ನು ಶಿಷ್ಯರನ್ನಾಗಿ ಪರಿಗ್ರಹಿಸುವ ಕೃಪೆಯನ್ನು ಅಪೇಕ್ಷಿಸಲೆ?

ದ್ರೋಣ:— ಆಗಲಿ ಸಂತೋಷ!

ಭೀಷ್ಮ:— ಶುಭಮುಹೂರ್ತದಲ್ಲಿ ಪಾಠ ಪ್ರಾರಂಭವಾಗಲಿ. ರಾಜಪುತ್ರರ ಪರಿಚಯ ಮಾಡಿಕೊಡುವೆ; ದಯಮಾಡಿಸಬೇಕು.

೨

ನಿವೇದಕ:

ಗುರುಗಳಾದ ದ್ರೋಣಾಚಾರ್ಯರಲ್ಲಿ ಕುರು-ಪಾಂಡವ ಕುಮಾರರ ಧನುರ್ವಿದ್ಯಾಭ್ಯಾಸ ಪ್ರಾರಂಭವಾಯಿತು. ದಿನೇದಿನೇ ಅವರಲ್ಲಿ ಆದ ಪ್ರಗತಿ ನೋಡಿ ಆಚಾರ್ಯರಿಗೂ ಉತ್ಸಾಹ. ಶಿಷ್ಯವರ್ಗದಲ್ಲಿ ಪ್ರತಿಭಾಸಂಪನ್ನ ಅರ್ಜುನನ ಶೀಲ, ಸ್ವಭಾವ, ಉತ್ಸಾಹ, ಏಕಾಗ್ರತೆಗಳನ್ನು ಮೆಚ್ಚಿ ಆಚಾರ್ಯರಿಗೆ ಅವನಲ್ಲಿ ವಿಶೇಷಪ್ರೀತಿ. ಕೆಲಕಾಲಾನಂತರ ಮೃಗಯಾವಿಹಾರಕ್ಕೆಂದು ಬೇಟೆಯ ನಾಯಿಗಳನ್ನು ಸಂಗಡ ಕರೆದು-ಕೊಂಡು ಕುಮಾರಕರೆಲ್ಲರೂ ಅರಣ್ಯಕ್ಕೆ ಹೊರಟರು. (ನಾಯಿ ಬೊಗಳುವ ಶಬ್ದ. ಬೇಟೆಗೆ ಹೊರಟ ಕೋಲಾಹಲ ಶಬ್ದ) ಆ ಅರಣ್ಯ ಮಧ್ಯದಲ್ಲಿ ಧನುರ್ವಿದ್ಯೆಯ ಸಾಧನ ಮಾಡುತ್ತಿರುವ ಏಕಲವ್ಯನೆಂಬ ನಿಷಾದಪುತ್ರನೊರ್ವನು ನಾಯಿಯ ಬೊಗಳುವಿಕೆಗೆ ಬೇಸರುಗೊಂಡು, ಶಬ್ದ ವೇಧಕ್ರಮದಿಂದ ಬಾಯಿಗೆ ಬೀಗ ಹಾಕಿದಂತೆ ಬಾಣಗಳನ್ನು ಹೊಡೆದನು. ಬೊಗಳುವಿಕೆ ಅರ್ಧಕ್ಕೇ ನಿಂತು ಕುಮಾರಕರ ಕಡೆಗೆ ಓಡಿ ಬಂತು ನಾಯಿ. (ನಾಯಿಯ ಬೊಗಳುವಿಕೆ-ಬಾಣಗಳ ಶಬ್ದ. ಬೊಗಳುವಿಕೆ ಅರ್ಧಕ್ಕೇ ನಿಂತ ಶಬ್ದ) ಆಶ್ಚರ್ಯಗೊಂಡ ಕುಮಾರಕರು ಏಕಲವ್ಯನನ್ನು ಕಂಡು ದ್ರೋಣಶಿಷ್ಯನೆಂದು ಅವನಿಂದ ತಿಳಿದು, ಮನೆಗೆ ಮರಳಿ ಬಂದ ಮೇಲೆ ಗುರುಗಳಿಗೆ ಇದೆಲ್ಲವನ್ನೂ ತಿಳುಹಿದರು. ಆಚ್ಚರಿಗೊಂಡ ಆಚಾರ್ಯರು ಮರುದಿನ ಅರ್ಜುನನನ್ನು ಸಂಗಡ ಕರೆದುಕೊಂಡು, ರಹಸ್ಯವಾಗಿ ಏಕಲವ್ಯನಿದ್ದೆಡೆಗೆ ಹೊರಟಿರುವರು.

ದ್ರೋಣ :— ಪಾರ್ಥ, ವಿಚಾರ ಮಾಡಿದಷ್ಟೂ ಕುತೂಹಲ ಹೆಚ್ಚುತ್ತಲೇ ಇದೆ ನನ್ನ ಮನಸ್ಸಿನಲ್ಲಿ. ಏಕಲವ್ಯನೆಂಬ ಹೆಸರಿನ ಶಿಷ್ಯ ನನಗೆ ಎಂದೂ ಇರಲಿಲ್ಲ. ಅವನಾರೋ ತಾನಾರೋ! ಅವನ ಮುಖದರ್ಶನವೇ ಇಲ್ಲ. ಹೀಗಿದ್ದೂ ನನ್ನ ಶಿಷ್ಯನೆಂದು ಅವನೇ ಹೇಳಿದನೆಂದು ಹೇಳುವೆ... ಯಾರ ಮಗನೆಂದು ಹೇಳಿದ?

ಅರ್ಜುನ :— ನಿಷಾದ ಕುಲಪತಿ ಹಿರಣ್ಯಧನುವೆಂದೇನೋ ಹೇಳಿದ.

ದ್ರೋಣ :— ಹೀಗೋ? ನಿಷಾದನೊಬ್ಬನು ನನ್ನೆಡೆಗೆ ತನ್ನ ಮಗನನ್ನು ನನ್ನ ಶಿಷ್ಯರಲ್ಲಿ ಸೇರಿಸಿಕೊಳ್ಳಬೇಕೆಂದು ಬಂದಿದ್ದಂತೆ ಈಗ ಸ್ಮರಣೆಗೆ ಬರುವುದು. ರಾಜಪುತ್ರರ ಜೊತೆಗೆ ಸಾಮಾನ್ಯರ ಅಭ್ಯಾಸಕ್ಕೆ ಭೀಷ್ಮರಾಜರು ಸಮ್ಮತಿಸಲಿಕ್ಕಿಲ್ಲವೆಂದು ನಾನು ನಿರಾಕರಿಸಿದ್ದೆ. ಅದೇನೇ ಇರಲಿ, ನೀನು ಹೇಳುವ ಇವನ ಅಸಾಮಾನ್ಯ ಶರಸಂಧಾನಕೌಶಲ್ಯ ತಿಳಿಯಲಾದೀತೇ? ನನ್ನಿಂದ ಪ್ರತ್ಯಕ್ಷ ಏನೊಂದೂ ಉಪದೇಶ ಹೊಂದಿರದೆ, ನಾನೇ ತನ್ನ ಗುರುವೆಂದು ಹೇಳಬೇಕಾದರೆ ಇದರಲ್ಲಿ ಏನೋ ರಹಸ್ಯವಿದೆ.... ಇನ್ನ್ಯಾರಾದರೂ ಇದ್ದರೇನು ಅವನ ಹತ್ತಿರ?

ಅರ್ಜುನ :— ಯಾರೂ ಇಲ್ಲ. ಅವನಲ್ಲಿದ್ದದ್ದೆಂದರೆ ಒಂದು ಧನುಸ್ಸು, ಬಾಣ, ಬತ್ತಳಿಕೆ; ಸಮ್ಮುಖದಲ್ಲೊಂದು ಮಣ್ಣಿನ ಮೂರ್ತಿ.

ದ್ರೋಣ:— (ಆಶ್ಚರ್ಯ) ಮೂರ್ತಿ! ಮಣ್ಣಿನ ಮೂರ್ತಿ!!

ಅರ್ಜುನ:— ಹೌದು, ತಮ್ಮ ಹೋಲಿಕೆಯದೇ ಇತ್ತು ಆ ಮೂರ್ತಿ.

ದ್ರೋಣ:—(ಆಶ್ಚರ್ಯ) ಓ— ಹೋ! ಇನ್ನಿಷ್ಟೂ ಆಶ್ಚರ್ಯ! ಕೇವಲ ಮೂರ್ತಿಯ ಆರಾಧನೆಯಿಂದ ಅನುಗ್ರಹ ಪಡೆದು ಇಂತಹ ಅಮೋಘಸಿದ್ಧಿ ಪಡೆದಿರುವನೆಂದಮೇಲೆ, ಅವನೊಬ್ಬ ಆದರ್ಶ ಶಿಷ್ಯನೆಂದೇ ಹೇಳಬೇಕು.

ಬಾಯೋಟೋನಾ
ಇದರ ಸೇವನೆಯಿಂದ
ಮಕ್ಕಳು ಮೊದಲ್ಗೊಂಡು ಮುದುಕರ ವರೆಗೆ ಸ್ತ್ರೀಪುರುಷರು ಇದನ್ನು ಸೇವಿಸಬಹುದು. ನರಗಳಿಗೂ ಜೀವಾಣುಗಳಿಗೂ ಬಲವನ್ನೂ ಆರೋಗ್ಯವನ್ನೂ ಕೊಡುವ ಉತ್ತಮ ಉಪಾಯವೆಂದರೆ 'ಬಾಯೋಟೋನಾ' ಸೇವಿಸುವದೇ ಆಗಿದೆ. ೪೦ ದಿವಸ ಸಾಕಾಗುವ ಬಾಟ್ಲಿಯ ಬೆಲೆ ರೂ. ೨. ಟ. ಖರ್ಚು ಬೇರೆ. ಸೂಚಿಪತ್ರ ಪಡೆಯಬಹುದು.
ROY & CO. BOMBAY 2.

ಚಿತ್ರಕಲಾ ಪ್ರವೇಶ
೩ನೆಯ ಆವೃತ್ತಿ
ಅಚ್ಚಾಗಿ ಸಿದ್ಧವಾಗಿದೆ.
ಬೇಕಾಗಿರುವವರು
ಬೇಗನೆ ಬೇಡಿಕೆ ಕಳುಹಿರಿ!
ಬರೆದವರು :
ಶ್ರೀ. ಜಿ. ಎಸ್. ಹುದ್ದಾರ

ಅರ್ಜುನ:— ಚೇತನಾಶೂನ್ಯ ಮಣ್ಣಿನ ಮೂರ್ತಿಯೇನು, ಅದರಲ್ಲಿ ಅನುಗ್ರಹಶಕ್ತಿ ಎಲ್ಲಿಂದ ಬರಬೇಕು?

ದ್ರೋಣ:— ಅನುಮಾನಕ್ಕೆ ಅವಕಾಶವಿಲ್ಲ. ಆಶ್ಚರ್ಯಪಡಲು ಕಾರಣವೂ ಇಲ್ಲ. ಅಚೇತನದಲ್ಲಿಯೂ ಚೈತನ್ಯವಿದೆ. ಸೂಜಿಗಲ್ಲು ಚೇತನವೋ ಅಚೇತನವೋ ?

ಅರ್ಜುನ :— ಅಚೇತನ, ಬಿದ್ದಲ್ಲಿಯೇ ಬಿದ್ದಿರುವ ಅದೊಂದು ಮುದ್ದೆಗಲ್ಲು !

ದ್ರೋಣ :— ಆದರೆ, ಅದರಲ್ಲಿ ಆಕರ್ಷಣಶಕ್ತಿ ಅದೃಶ್ಯವಾಗಿ ಇದೆಯಷ್ಟೇ ?

ಅರ್ಜುನ :— ಇದೆ. ಅದೊಂದು ಸೃಷ್ಟಿಚಮತ್ಕಾರ !

ದ್ರೋಣ :— ಆಯ್ತು, ಮೇಲೆ ನೋಡು! ಆಕಾಶದಲ್ಲಿ ಏನು ಕಾಣುವುದು ?

ಅರ್ಜುನ :— ಏನಿದೆ ? ಏನೂ ಇಲ್ಲ! ಶೂನ್ಯ!

ದ್ರೋಣ :— ಶೂನ್ಯವೆಂದು ಹೇಳುವ ನಿರಭ್ರವಾದ ಆಕಾಶದಲ್ಲಿ ಒಮ್ಮೆಲೇ ಕಾರ್ಮೋಡ ಕವಿದು ಭೋರೆಂದು ಮಳೆ ಸುರಿಯಹತ್ತುವುದು. ಅದರಲ್ಲಿಯೇ ಅಕಸ್ಮಾತ್ ಅಶನಿಪಾತ-ಶಿಲಾಪಾತಗಳೂ ಆಗುವುವು.

ಅರ್ಜುನ :— ಇದೂ ಒಂದು ಸೃಷ್ಟಿಚಮತ್ಕಾರವೇ !

ದ್ರೋಣ:— ಪಾರ್ಥ, ಚೇತನಾಚೇತನಾತ್ಮಕ ಪ್ರಪಂಚದ ಸಕಲ ವಸ್ತುಗಳ ಒಳಗೂ ಹೊರಗೂ ಕಾಣಬರುವ ಇಂತಹ ಚಮತ್ಕೃತಿಗಳೆಲ್ಲಕ್ಕೂ ಮಾನವನ ಚರ್ಮಚಕ್ಷುವಿಗೆ ಕಾಣದ ಒಂದು ಅಚಿಂತ್ಯ ಅದ್ಭುತಶಕ್ತಿಯೇ ಕಾರಣ. ಆ ದಿವ್ಯಶಕ್ತಿಗೆ ಸೃಷ್ಟಿ ಸ್ಥಿತಿ ಲಯ ನಿಯಮನ ನಿಗ್ರಹ ಅನುಗ್ರಹ ಸಾಮರ್ಥ್ಯವಿದೆ. ಅದರ ಆರಾಧನೆಯಿಂದಲೇ ಮಾನವನ ಉತ್ಕರ್ಷ—ಇಷ್ಟಾರ್ಥಸಿದ್ಧಿ!

ಅರ್ಜುನ :— ವಿಗ್ರಹಾರಾಧನೆಯಿಂದ ಇಷ್ಟಾರ್ಥಸಿದ್ಧಿ ಸಾಧಿಸುವುದಾದರೆ...

ದ್ರೋಣ :— ಅವಶ್ಯವಾಗಿ ಸಾಧಿಸಬಹುದು. ವಿಗ್ರಹಾರಾಧನೆಯೆಂದ ಮಾತ್ರಕ್ಕೆ, ಅರೆಮನಸ್ಸಿನಿಂದ ಅರಳೆಂವಲ್ಲಿಗೆ ಜಾಜಿಮಲ್ಲಿಗೆ ಪುನ್ನಾಗಪುಷ್ಪಮಾಲೆಗಳಿಂದ ಎದುರಿರುವ ವಿಗ್ರಹವನ್ನಲಂಕರಿಸಿ, ವಾದ್ಯಘೋಷ-ವೇದಘೋಷಗಳ ರಭಸದಲ್ಲಿ ಅದ್ಭುತಿಯ ಆಡಂಬರದಿಂದ ಆಟದ ಬೊಂಬೆಯಾಟದಂತೆ ಪೂಜೆಯ ಪ್ರದರ್ಶನ ನಡೆಸುವುದು ನಿಜವಾದ ಆರಾಧನೆಯೆಂದೆನಿಸದು. ಚೇತನಾಚೇತನಾತ್ಮಕ ಸಕಲ ಪ್ರಪಂಚನಿಯಾಮಕ ಸರ್ವತ್ರವ್ಯಾಪ್ತ ಪರಮಾತ್ಮನ ವಿಭೂತಿಯೇ ವಿಗ್ರಹದಲ್ಲಿ ನೆಲಸಿರುವುದೆಂಬ ಭಾವನೆಯಿಂದ, ಏಕಾಗ್ರಚಿತ್ತನಾಗಿ ತನ್ನ ಅಂತರ್ಯಾಮಿಬಿಂಬರೂಪವನ್ನೇ ಅಲ್ಲಿ ಕಾಣುತ್ತ ಆತ್ಮಸಮರ್ಪಣೆ ಮಾಡುವುದೇ ವಿಗ್ರಹಾರಾಧನೆ. ಈ ರೀತಿಯ ಆರಾಧನೆಯಿಂದಲೇ ಇಷ್ಟಾರ್ಥಸಿದ್ಧಿ.

ಅರ್ಜುನ :— ಪರಮಾತ್ಮನ ಆರಾಧನೆಗೆ ಸಂಬಂಧಿಸಿದ್ದಾಯಿತು ಈ ವಿಷಯ ಏಕಲವ್ಯನ ಸಮ್ಮುಖದಲ್ಲಿದ್ದ ವಿಗ್ರಹವೋ....

ದ್ರೋಣ:— ಪಾರ್ಥ, ವಿಗ್ರಹದ ಆಕಾರ ಮುಖ್ಯವಲ್ಲ. ಆರಾಧಕನ ಭಾವನೆ ಮುಖ್ಯ. ಆ ಮೂರ್ತಿಯಲ್ಲಿಟ್ಟ ಏಕಲವ್ಯನ ಏಕೋಭಾವ, ಅವನ ಇಷ್ಟದೈವತಸಿದ್ಧಿರಬಹುದು. ಯಾಕೆಂದರೆ ಒಂದೆಡೆ ಭಗವಂತನೇ “ ಆಸ್ತಿಕ್ಯಬುದ್ಧಿಯಿಂದ ಭಕ್ತಿಪುರಸ್ಸರವಾಗಿ ತಮ್ಮ ತಮ್ಮ ಇಷ್ಟದೈವತವನ್ನು ಯಾರು ಪೂಜಿಸಲು ಇಷ್ಟಪಡುವರೋ ಅವರಿಗೆ ಆ ಆ ದೇವತೆಗಳಲ್ಲಿ ಅಚಲವಾದ ಭಕ್ತಿಯನ್ನು ಕೊಟ್ಟು, ಅವರವರ ಇಷ್ಟಾರ್ಥವನ್ನು ಪೂರೈಸುವೆನು ” ಎಂದು ಉಪದೇಶ ಮಾಡಿರುವ.

(ಬಾಣಗಳ ಸುಂಯ್‌ಗುಡುವ ಶಬ್ದ)

ಆಹಾ! ಇದೇನು ಅವ್ಯಾಹತವಾಗಿ ಬರುವ ಬಾಣಗಳ ರಭಸ!!

ಅರ್ಜುನ:— ನಾವೀಗ ಏಕಲವ್ಯನ ಸಾಧನಭೂಮಿಯ ಅಂಚಿನಲ್ಲಿಯೇ ಇರುವೆವು.

ದ್ರೋಣ:— ಹೀಗೋ, ಕ್ಷಣ ಹೊತ್ತು ಮರೆಯಲ್ಲಿ ನಿಂತು ನಿರೀಕ್ಷಿಸೋಣ !

(ಮತ್ತೆ ಮತ್ತೆ ಬಾಣಗಳ ಸುಂಯ್‌ಗುಡುವ ಶಬ್ದ)

ಧನ್ಯ ಧನ್ಯ! ವೀರಾ ಧನ್ಯ ಧನ್ಯ! ಶರಸಂಧಾನ ಚಮತ್ಕೃತಿಗೆ ಮೆಚ್ಚಿದೆ. ಅಪೂರ್ವ ಹಸ್ತಲಾಘವಕ್ಕೆ ಬೆರಗಾದೆ.

ಏಕಲವ್ಯ :— ಶ್ರೀ ಗುರುಚರಣಕ್ಕೆ ಈ ದೀನದಾಸನ ಅನಂತ ವಂದನೆಗಳು.

ದ್ರೋಣ :— ಆಯುಷ್ಮಾನ್‌ಭವ. ಏಳು ಏಳು ಏಳು, ನೀನಾರು ?

ಏಕಲವ್ಯ :— ನಾನೊಬ್ಬ ತಮ್ಮ ದೀನಶಿಷ್ಯ.

ದ್ರೋಣ :— ನಿನ್ನ ಹೆಸರು ?

ಏಕಲವ್ಯ :— ಏಕಲವ್ಯನೆಂದು ಕರೆಯುವರು ನನ್ನನ್ನು !

ದ್ರೋಣ :— ನಿನ್ನ ತಂದೆ ?

ಏಕಲವ್ಯ :— ನಿಷಾದಕುಲಪತಿ.... ಹಿರಣ್ಯಧನು.

ದ್ರೋಣ :— ಹೀಗೋ .... ಅಂ, ಇದೇನು ? ಇದೇನಿದು ಇಲ್ಲಿರುವುದು ?

ಏಕಲವ್ಯ :— ಅವರು ನನ್ನ ಪೂಜ್ಯಗುರುಗಳು.

ದ್ರೋಣ :— ನಿನ್ನ ಪೂಜ್ಯ ಗುರುಗಳು ! ಈ ಮಣ್ಣಿನ ಮೂರ್ತಿ ನಿನ್ನ ಗುರುವು ?

ಏಕಲವ್ಯ :— ಅಹುದು !

ದ್ರೋಣ :— ಮಾತಾಡಿಸು ನೋಡೋಣ.

ಏಕಲವ್ಯ :— ಪ್ರತಿಮೆದಲ್ಲಿದ್ದ ಸಾನ್ನಿಧ್ಯವೇ ಪ್ರತ್ಯಕ್ಷ ಮಾತಾಡುತ್ತಿರುವಾಗ........

ದ್ರೋಣ :— ಸಾನ್ನಿಧ್ಯ ! ಮಾತಾಡುತ್ತಿರುವುದು !! ಏನು? ಎಲ್ಲಿ ?

ಏಕಲವ್ಯ :— ಮಹಾತ್ಮನ್, ನನ್ನ ಉದ್ಧಾಮತನವೇನಿದ್ದರೂ ಕ್ಷಮಿಸಿ ಅನುಗ್ರಹಿಸಬೇಕು. ಇಷ್ಟು ದಿನ ಮೂರ್ತಿಯಲ್ಲಿ ಸನ್ನಿ-

ಹಿತರಾಗಿ ಸ್ಫೂರ್ತಿಕೊಟ್ಟು ಅನುಗ್ರಹಿಸಿದಿರಿ. ಈಗ ಪ್ರತ್ಯಕ್ಷ ದರ್ಶನ ಕೊಟ್ಟು ಕೃತಾರ್ಥನನ್ನಾಗಿ ಮಾಡಿದಿರಿ. ಇಂದಿಗೆ ಧನ್ಯನಾದೆ.

ದ್ರೋಣ :— ನಾವೇ ಏನು ನಿನ್ನ ಗುರುಗಳು ? ಹಾಗಾದರೆ ಗುರುದಕ್ಷಿಣೆ ?

ಏಕಲವ್ಯ :— ಅವಶ್ಯವಾಗಿ ಸಲ್ಲಿಸುವೆ. ಅಪೇಕ್ಷಿತವಾದದ್ದನ್ನು ಅಪ್ಪಣೆ ಕೊಡಿಸೋಣಾಗಲಿ.

ದ್ರೋಣ :— ಅಪೇಕ್ಷಿಸಿದ್ದನ್ನು ಕೊಡುತ್ತೀಯಾ ? ವಿಚಾರ ಮಾಡಿ ಹೇಳು. ಹಿಂದಿನಿಂದ ಹಿಂಜರಿದು ದ್ರೋಹಕ್ಕೆ ಪಾತ್ರನಾದೀಯೆ !

ಏಕಲವ್ಯ:— ಭಾಷೆ ತಪ್ಪಿದವ ನಿಷಾದಕುಲಪತಿಯ ಪುತ್ರನೇ? ಈ ಶರೀರವನ್ನಪೇಕ್ಷಿಸಿದರೂ ಸನ್ನಿಧಿಯಲ್ಲಿ ಅರ್ಪಿ........

ದ್ರೋಣ:— (ಎಚ್ಚರಿಕೆ ಕೊಡುವ ದನಿ) ಹಾಂ ! ಭಾವನಾವಶನಾಗುವುದು ತರವಲ್ಲ.

ಏಕಲವ್ಯ :— ಸ್ವಾಮಿನ್, ಸದ್ಭಾವನೆ ಇದ್ದವನಿಗೆ........

ದ್ರೋಣ :— ಸದ್ಭಾವನೆ ! ಸದ್ಭಾವನೆ !! ಶರೀರವನ್ನೇ ಅರ್ಪಿಸುವಷ್ಟು ಮನಸ್ಸಿನ ಸ್ಥೈರ್ಯವೇ ? ಬಲಗೈ ಅಂಗುಷ್ಟವನ್ನು ಕೊಟ್ಟುಬಿಡು ಹಾಗಾದರೆ.... ಪಾರ್ಥಾ, ನೋಡಿದೆಯಾ ಈ ಮನೋ........ (ಗಾಬರಿಯ ಧನಿ) ಏ, ಏ, ಏಕಲವ್ಯ ! ಏಕಲವ್ಯ ! ಹಾಂ ಹಾಂ, ಏನಿದು ?

ಏಕಲವ್ಯ :— ಸ್ವೀಕರಿಸಿ ಅನುಗ್ರಹಿಸಬೇಕು.

ದ್ರೋಣ :— (ಕನಿಕರದ ದನಿ) ಅಯ್ಯೋ, ಇದನ್ನೇನು ಮಾಡಿಟ್ಟೆ ! ಭಾವನಾಪರವಶನಾಗಬೇಡವೆಂದು ಎಚ್ಚರಿಕೆ ಕೊಟ್ಟರೂ—ಅನರ್ಥ ಮಾಡಿದೆ. ಯಾವ ಕಾರ್ಯಕ್ಕೂ ಬಾರದು ಈ ರಕ್ತರಂಜಿತ ಅಂಗುಷ್ಟದ ತುಣುಕು. ಅಕಟಾ ! ಇದನ್ನು ನೋಡಲಾರೆ. ಈ ಅಪ್ರಯೋಜಕವಸ್ತುವನ್ನು ಅಪೇಕ್ಷಿಸಬಹುದೇ ಇಲ್ಲವೇ ಎಂಬುದೂ ನಿನ್ನ ವಿವೇಕಕ್ಕೆ ಹೊಳೆಯಲಿಲ್ಲವೇ ? ಅಯ್ಯೋ ನಿನ್ನ ಗ್ರಹಚಾರವೇ. (ನಿಟ್ಟುಸಿರು) ನಿನ್ನದಲ್ಲ ನಿನ್ನದಲ್ಲ. ಎಲ್ಲ ತಪ್ಪೂ ನನ್ನದೇ !

ಏಕಲವ್ಯ:—ಭಗವನ್, ಹಾಗೆ ಹೇಳಕೂಡದು. ಮನಃಪೂರ್ವಕವಾಗಿ ಕರ್ತವ್ಯಪಾಲಿಸಿರುವೆ

ದ್ರೋಣ— (ಸದ್ಗದಿತನಾಗಿ) ಅಹಹಾ, ಏನು ನಿನ್ನ ಗುರುಭಕ್ತಿ ? ಮನೋಧೈರ್ಯ ಪರೀಕ್ಷಿಸಲೆಂದು ಸುಮ್ಮನೇ ನಾನೇನೋ ನುಡಿದೆ. ಏನನರ್ಥಮಾಡಿಕೊಂಡು ಕುಳಿತೆ ? ಈ ಅವಿಚಾರದಿಂದ ನಿನಗಾದ ಹಾನಿ ನಿನ್ನ ಲಕ್ಷ್ಯದಲ್ಲಿ ಬಂದಿದೆಯೇ ?

ಏಕಲವ್ಯ — ಕರ್ತವ್ಯಪಾಲಿಸಿ ಗುರುಕೃಪೆಗೆ ಪಾತ್ರನಾದದ್ದೊಂದು ಘನವಾದಲಾಭವೆಂದೇ ತಿಳಿಯುವೆ. ಹಾನಿಯಾದದ್ದು ಗುರುಕೃಪೆಯಿಂದ ತುಂಬಿಬರುವುದು.

ದ್ರೋಣ:—ಧನ್ಯ ಧನ್ಯ! ನಿನ್ನಂತಹ ಶಿಷ್ಯನು ಆತ್ಮವಿಶ್ವಾಸವಿದ್ದವನನ್ನು ನಾನೆಲ್ಲಿಯೂ ಕಾಣಲಿಲ್ಲ. ಗುರುಭಕ್ತರಲ್ಲಿ ಅಗ್ರೇಸರ, ಧೈರ್ಯದ ಮೇರುವೇ ಬ ನಿನ್ನ ಖ್ಯಾತಿ ಲೋಕದಲ್ಲಿ ಹರಡುವುದು. ಅಂಗುಷ್ಟಹೀನನಾದರೂ ಧನುರ್ಧಾರಿಗಳಲ್ಲಿ ಹೀನನಾಗಲಾರೆ. ಇನ್ನು ಕೆಲಕಾಲಾನಂತರ ದೈವತಕದಲ್ಲಿ ಸ್ವತಃ ನಾವೇ ಇನ್ನೂ ಕೆಲವು ಧನುರ್ವೇದರಹಸ್ಯವನ್ನು ತಿಳಿಸುವೆವು. ನಿರುತ್ಸಾಹಿಯಾಗದಿರು !

ಏಕಲವ್ಯ:— ಅನುಗೃಹೀತನಾದೆ.

ದ್ರೋಣ:— ಯಾವ ವಿಷನಿವಿ-ಷದಲ್ಲಿ ಇಲ್ಲಿಗೆ ಬಂದಿದ್ದೆವೋ.... ಈ ದುರ್ಘಟನೆ ನಡೆದು ದುರ್ಲೌಕಿಕಕ್ಕೆ ಕಾರಣವಾಯಿತು.



BOMBAY OFFICE : Princess Street

ಏಜಂಟರು ಬೇಕು

ಜಯಂತಿಯನ್ನು ಮಾರಾಟ ಮಾಡಲಿಕ್ಕೆ ಕರ್ನಾಟಕದ ಬೇರೆ ಬೇರೆ ನಗರಗಳಲ್ಲಿ, ಪ್ರಾಮಾಣಿಕ ಏಜಂಟರು ಬೇಕು. ಯೋಗ್ಯ ಕಮಿಶನ್ ಕೊಡಲಾಗುವುದು. ಕರಾರುಗಳಿಗಾಗಿ ಪತ್ರವ್ಯವಹಾರ ಮಾಡಿ ತಿಳಿದುಕೊಳ್ಳಬೇಕು. ಮನೆ ಮನೆಗೂ ಇರಬೇಕಾದ ಈ ಪತ್ರಿಕೆಯನ್ನು ಮನೆಮನೆಗೂ ತಲ್ಪಿಸುವ ಅಗತ್ಯವಿದೆ.

೧೦೦೦ ರೂಪಾಯಿ ಬಹುಮಾನ

೩೦ ವರ್ಷಗಳಿಂದ ಅನುಭವಸಿದ್ಧವಾದ— ಮಿರಜಿಯ ವೈದ್ಯ ವಿ. ಎಸ್ ಕಾಪಸೇಯವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರ ಪಾಕ

[ರಜಿಸ್ಟರ್ಡ್]

ಮೂತ್ರದಲ್ಲಿ ಸ್ವಪ್ನದಲ್ಲಿ ವೀರ್ಯಸ್ಖಲನ, ಸ್ವರತಿಯಿಂದುಂಟಾದ ಅಶಕ್ತತೆ, ವೀರ್ಯದ ಬೇರೆ ಬೇರೆ ದೋಷಗಳು, ಪಿತ್ತಾಂಶ, ಉಷ್ಣ, ಸೊಂಟನೋವು, ಉಪದಂಶಮೇಹರೋಗಗಳಿಂದುಂಟಾಗುವ ಕ್ಷೀಣತೆ— ಇವೆಲ್ಲ ನಷ್ಟವಾಗಿ, ಚೆನ್ನಾಗಿ ಮಲಶುದ್ಧಿಯಾಗುವುದು. ಹಸಿವೆ, ಸ್ಮರಣಶಕ್ತಿ, ದೇಹದ ತೂಕ ಹೆಚ್ಚುವುದು. ಹೊಸ ತಾರುಣ್ಯ ಬಂದಂತಾಗಿ ವೀರ್ಯದಲ್ಲಿ ಗರ್ಭಧಾರಕಶಕ್ತಿ ಬಲಗೊಳ್ಳುವುದು. ಈ ಔಷಧಿಯು ೫೩ ವನಸ್ಪತಿಗಳ ಯೋಗದಿಂದ ಸಿದ್ಧವಾಗಿದೆ. ಸಾಲಾಮಿಶ್ರಿ, ಸಫೇದಮಿಶ್ರಿ, ಪಂಜಾಬ ಮಿಶ್ರಿ-ವಚಕಂಪ ಮೊದಲಾದ ಪದಾರ್ಥಗಳಲ್ಲಿ ವೀರ್ಯವರ್ಧಕ ಗುಣವಿಲ್ಲವೆಂದು ಸಿದ್ಧಮಾಡುವವರಿಗೆ ೧೦೦೦ ರೂಪಾಯಿ ಬಹುಮಾನ.

೨೧ ದಿನಗಳಿಗೆ ಸಾಲಬಹುದಾದ ೮೪ ತೊಲೆಯ ಒಂದು ಡಬ್ಬಿಗೆ ೫-೮-೦; ಅಂಚೆಯ ವೆಚ್ಚ ೧-೬-೦. ಶೀಘ್ರಗುಣಕಾರಿಯಾದ ಸ್ಪೇಶಲ್ ಡಬ್ಬಿಗೆ ೧೦-೮-೦. (ಇದರಿಂದ ೭ ದಿನಗಳಲ್ಲಿಯೇ ಗುಣವು.) ಅಂಚೆಯ ವೆಚ್ಚ ೧-೬-೦. ೩ ಡಬ್ಬಿಗೆ ೧೫-೦-೦ ಅಂಚೆಯವೆಚ್ಚ ೨-೧೩-೦. ಒಮ್ಮೆಲೇ ೩ ಡಬ್ಬಿಗಳನ್ನು ಬೇಡುವವರು ೫ ರೂ ಮುಂಗಡ ಕಳಿಸಬೇಕು.

ಮಾಲಕ: **ವ್ಹಿ. ಎಸ್. ಕಾಪಸೇ** ಮು. ಪೋ. ಮಿರಜ

ಪರಮಾತ್ಮನ ಇಚ್ಛೆ. ಏಕಲವ್ಯ, ನೀನು ಮಾತ್ರ ನಿರುತ್ಸಾಹಿಯಾಗದಿರು. ಇನ್ನು ಹೊರಡೋಣವೇ?

ಏಕಲವ್ಯ:— ಸ್ವಾಮಿನ್. ಶಿಷ್ಯನಲ್ಲಿ ಏಕಪ್ರಕಾರವಾಗಿ ಪ್ರೀತಿಯಿರಲಿ. ಅಭಿಮಾನವಿರಲಿ. ಶ್ರೀಗುರುಚರಣಾರವಿಂದಕ್ಕೆ ಅನಂತ ವಂದನೆಗಳು.

ದ್ರೋಣ:— ಏಳು. ಏಳು! ಆಯುಷ್ಮಾನ್‌ಭವ! ಪರಮಾತ್ಮನು ಸದಾ ನಿನಗೆ ಸದ್ಬುದ್ಧಿಯನ್ನೀಯಲಿ. ಪಾರ್ಥ, ನಡೆ ಹೋಗೋಣ!

೩

ನಿವೇದಕ:

ಗುರುಗಳಾದ ದ್ರೋಣಾಚಾರ್ಯರು, ಶಿಷ್ಯರ ಧನುರ್ವಿದ್ಯಾಭ್ಯಾಸ ಸಮಾಪ್ತಿಯನಂತರ ಅವರ ಪ್ರಗತಿಪರೀಕ್ಷಣಕ್ಕಾಗಿ ಭೀಷ್ಮರ ಅನುಮತಿಯಿಂದ ಶಿಕ್ಷಾರಂಗವೊಂದನ್ನು ಏರ್ಪಡಿಸಿದರು. ಆಚಾರ್ಯರ ಪ್ರೀತಿಯ ಶಿಷ್ಯ ಅರ್ಜುನನ ಪ್ರತಿಸ್ಪರ್ಧಿಯಾಗಿ ಬಂದ ಕರ್ಣನಿಗೆ, ಛಲದಂಕ ದುರ್ಯೋಧನನ ದುರಾಗ್ರಹದಿಂದ ಅಂಗದೇಶದ ರಾಜ್ಯಲಾಭವಾಗುವುದಲ್ಲದೆ, ಕೌರವರ ಕುಟಿಲಕಾರಸ್ಥಾನದಲ್ಲಿ ಪ್ರಧಾನಾಂಗಪಾತ್ರವಹಿಸಲು ಅನುವಾಯಿತು. ಇದಾದ ಕೆಲಕಾಲಾನಂತರ, ಆಚಾರ್ಯರು ತಮ್ಮ ಪ್ರತಿಜ್ಞೆಯನ್ನು ನೆರವೇರಿಸಿಕೊಳ್ಳುವ ಮನಸ್ಸುಮಾಡಿ, ಶಿಷ್ಯರಿಂದ ಕೂಡಿ ಪಾಂಚಾಲರಾಜ ದ್ರುಪದನ ಮೇಲೆ ದಂಡಯಾತ್ರೆ ಹೊರಡಲು ಭೀಷ್ಮರ ಅನುಮತಿಯನ್ನು ಪಡೆಯಲು ಬಂದಿರುವರು.

ಭೀಷ್ಮ :— ಆಚಾರ್ಯ, ವಜ್ರವೈಡೂರ್ಯಾದಿ ನವರತ್ನಖಚಿತ ಶುದ್ಧ ಅಪರಂಜಿಯ ಅಪ್ರತಿಮ ಸುಂದರ ಪಾತ್ರೆಯೊಂದಿದೆ. ಅದರಲ್ಲಿ... ಮದ್ಯತುಂಬಿದೆ. ಆ ಪಾತ್ರೆ ಆದರಣೀಯವೆ?

ದ್ರೋಣ :— ಮದ್ಯಭಾಂಡವೆಂದಮೇಲೆ.... ಎಂತಹದಿದ್ದರೂ ಅಪವಿತ್ರವೇ; ಆದರಕ್ಕೆ ಯೋಗ್ಯವಾಗದು.

ಭೀಷ್ಮ :— (ನಿಟ್ಟುಸಿರು) ಇದೇ ರೀತಿಯಿದೆ ನೋಡಿ ಸುಯೋಧನನ ವ್ಯಕ್ತಿತ್ವ! ವಿಖ್ಯಾತ ಚಂದ್ರವಂಶದಲ್ಲಿ ಹುಟ್ಟಿರುವ; ಶೂರನಿರುವ, ಧೀರನಿರುವ! ಔದಾರ್ಯದಲ್ಲಂತೂ ಎಲ್ಲರನ್ನೂ ಮೀರಿರುವ....

ದ್ರೋಣ :— ಮೊನ್ನೆ ತಾನೇ ನಿದರ್ಶನಕ್ಕೆ ಬಂದಿದೆಯಲ್ಲ: ಯಾವನೋ ಒಬ್ಬ ಅಜ್ಞಾತ ಕುಲಶೀಲ ಆಗಂತುಕನ ಆತ್ಮಪ್ರೌಢಿಗೆ ಮೆಚ್ಚಿ, ಅಂಗರಾಜ್ಯದ ಅರಸನನ್ನಾಗಿ ಮಾಡಿತು ಆತನ ಔದಾರ್ಯ— ತಡವಿಲ್ಲದೇ— ಹಿರಿಯರ ದಾಕ್ಷಿಣ್ಯವನ್ನೂ ಇಡದೇ!

ಭೀಷ್ಮ:— (ನಿಟ್ಟುಸಿರು) ಸಮಾನಶೀಲರು... ಒಂದೆಡೆ ಕೂಡಿದ ಮೇಲೆ....

ದ್ರೋಣ :— ಇಂತಹುದಕ್ಕೆ.... ಔದಾರ್ಯವೆನ್ನುವುದಕ್ಕಿಂತ.... ದಾಯಾದಮತ್ಸರಕ್ಕೆ ಸಹಾನುಭೂತಿಯಿತ್ತವನ ಸಹಾಯಕ್ಕೆ ಕೊಟ್ಟ ಸಂಚಕಾರವೆಂದು ಆರ್ಯವಿದುರ ಅಂದೆಯೇ....

ಭೀಷ್ಮ :— (ನಿಟ್ಟುಸಿರು) ದಾಯಾದ ಮತ್ಸರದ ಹಿರಿನಂಜು! ನಿಃಶೇಷವಾಗಿ ಜೀರ್ಣಿಸಿಕೊಂಡಿದ್ದೆನೆಂದು ಹೇಳಿದ್ದರೆಲ್ಲರೂ ಹಿರಿಯರು!! ಭಾರತ ಸಿಂಹಾಸನದ ಭಾವೀ ಉತ್ತರಾಧಿಕಾರಿಗಳಿಗೂ ಅದೊಂದು ಉದಾಹರಣೆಯಾಗಬಹುದೆಂದು ಆಶಿಸಿದ್ದೆ. ಆದರೇನು? ಶಕುನಿಯ ದುರ್ಮಂತ್ರದಿಂದ ಇಂದು.... ಒಂದಕ್ಕೆ ನೂರ್ಮಡಿಯಾಗಿ, ಧೃತರಾಷ್ಟ್ರಕುಮಾರಕರ ರೂಪದಲ್ಲಿ ತಲೆಯೆತ್ತಿ ನಿಂತಿದೆ ಸರ್ವಸ್ವವನ್ನೂ ನುಂಗಲು....(ನಿಟ್ಟುಸಿರು) ಭಗವತ್ ಸಂಕಲ್ಪ...

ದ್ರೋಣ :— ಭಗವತ್ ಸಂಕಲ್ಪದಲ್ಲಿಯೇ ಭವಿಷ್ಯತ್ ಎಲ್ಲವೂ ಮರೆಯಲ್ಲಿರುವಾಗ... (ರಣವಾದ್ಯ)

ಭೀಷ್ಮ :— ಇದೇನಿದು? ಅಕಾಲದಲ್ಲಿ ರಣದುಂದುಭಿ!

ದ್ರೋಣ :— ಇದಕ್ಕೆ ನಾನೇ ಕಾರಣ. ಆ ವಿಷಯದ ಪ್ರಸ್ತಾಪನೆಗಾಗಿಯೇ ಈಗ....

ಭೀಷ್ಮ :— ಓ-ಹೋ! ಈಗ ಸ್ಮರಣೆಗೆ ಬಂತು. ಶಿಷ್ಯರಿಂದ ಪ್ರತಿಜ್ಞಾಪೂರ್ತಿಗೆ ಹವಣಿಸಿರುವಿರೋ?

ದ್ರೋಣ :— ತಾವು ಅನುಮತಿ ಇತ್ತರೆ, ನಾಳೆಯದಿನವೇ ಪ್ರಯಾಣ ಬೆಳೆಸಬೇಕೆಂದು ಸನ್ನಾಹಮಾಡಿರುವೆ. ತಮ್ಮ ಸಹಾನುಭೂತಿ ಸದಿಚ್ಛೆಯ ಬೆಂಬಲವೂ ಅವಶ್ಯ....

ಭೀಷ್ಮ:— ಆಗಲಿ. ಮೊದಲಿನಿಂದಲೂ ನಿಮ್ಮ ಕಾರ್ಯದಲ್ಲಿ ನನ್ನ ಸಹಾನುಭೂತಿ ಇದೆ. ಸತ್ಯ ಹಾಗೂ ಧರ್ಮದ ಬೆಂಬಲವಿದ್ದ ಪಕ್ಷಕ್ಕೆ ಯಶಸ್ಸುಕೊಡಲು ಭಗವಂತ ಸಮರ್ಥನಿರುವ. ತಮ್ಮ ಪ್ರತಿಜ್ಞಾಪೂರ್ತಿ ಅಂದರೇನೇ ನಮ್ಮ ಭಾರತ ರಾಜಪುತ್ರರ ವಿಜಯ-ಧ್ವಜದ ಕೀರ್ತಿ. ಕುರು-ಪಾಂಡವರಾಜಪುತ್ರರಿಗೆ ಇದೇ ರೀತಿ ಸಹಕಾರಬುದ್ಧಿಯನ್ನೂ ಪಾಲಿಸಲೆಂದು ಪರಮಾತ್ಮನಲ್ಲಿ ಪ್ರಾರ್ಥಿಸುವೆ.

೪

ನಿವೇದಕ :

ದ್ರೋಣ ಶಿಷ್ಯರೆಲ್ಲರೂ ಅವರ ನೇತೃತ್ವದಲ್ಲಿ ದ್ರುಪದನನ್ನು ಯುದ್ಧದಲ್ಲಿ ಸೋಲಿಸಿ ಸೆರೆ ಹಿಡಿದು ತರಲು ಉತ್ಸಾಹದಿಂದ ಸನ್ನದ್ಧರಾಗಿ ಹೊರಟರು. ಮಧ್ಯಮಾರ್ಗದಲ್ಲಿ ಕರ್ಣನ ಪ್ರಚೋದನೆಯಿಂದ ದುರ್ಯೋಧನಾದಿ ಕೌರವರು, ಆಚಾರ್ಯರನ್ನೂ ಪಾಂಡವರನ್ನೂ ಹಿಂದೆಹಾಕಿ ತಮ್ಮ ಪಕ್ಷಕ್ಕೆ ಮುಂದೆ ಹೋಗಿ ಪಾಂಚಾಲನಗರವನ್ನು ಮುತ್ತಿ ಒಳಹೊಕ್ಕು ಯುದ್ಧ ಪ್ರಾರಂಭಿಸಿದರು. ದ್ರುಪದನೂ ಅವನ ಮಕ್ಕಳೂ ಅವರನ್ನು ಸೋಲಿಸಿ ಬೆನ್ನಟ್ಟಿದರು. ಇದೇ ಸಮಯಕ್ಕೆ ಧರ್ಮನೊಬ್ಬನನ್ನು ಆಚಾರ್ಯರ ಸನ್ನಿಧಿಯಲ್ಲಿ ಬಿಟ್ಟು, ಅವರ ಅನುಜ್ಞೆ ಪಡೆದು ಹೊರಟ ನಾಲ್ಕು ಜನ ಪಾಂಡವರೂ ದ್ರುಪದನನ್ನು ಎದುರಿಸಿದರು. ತುಮುಲ ಯುದ್ಧ ನಡೆಯಿತು. ಅದರಲ್ಲಿ ಅರ್ಜುನನು ದ್ರುಪದನ ರಥದಲ್ಲಿ ಧುಮ್ಮಿಕ್ಕಿ, ಅವನನ್ನು ಜೀವಂತ ಸೆರೆಹಿಡಿದು, ಆಚಾರ್ಯರೆಡೆಗೆ ತಂದು ಅವರ ಪಾದದ ಮೇಲೆ ಕೆಡಹಿರುವನು.

ದ್ರೋಣ:—(ಉಪಹಾಸ) ಪಾಂಚಾಲಾ, ಹೀಗೇಕೆ ಹೆಂಗಳೆಯರಂತೆ ಮುಖ ತಗ್ಗಿಸಿರುವೆ? ಅಭಿಮಾನ ಅಡ್ಡಬರುತ್ತಿದೆಯಲ್ಲವೆ! ಆಢ್ಯತೆಗಾಗಿ ಹೆಮ್ಮೆಪಡುವ ನಿನಗೆ ಮುಖ ತೋರಿಸಲು ನಾಚಿಕೆ! ಅಲ್ಲವೇ? ಎತ್ತು. ಎತ್ತು. ಮುಖ ಮೇಲಕ್ಕೆತ್ತು. ಆಢ್ಯತೆಯ ಲಕ್ಷಣಗಳನ್ನಾದರೂ ನೋಡೋಣ!! ಪ್ರಜಾರಂಜಕ ಗುಣದ ಗಂಧಕೂಡ ಇಲ್ಲದ ನಿನ್ನಲ್ಲಿ, ಗುಣಾಢ್ಯನ ಲಕ್ಷಣವಂತೂ ಕಾಣಿಸಲು ಶಕ್ಯವೇ ಇಲ್ಲ! ಇನ್ನು ಧನಾಢ್ಯನೆಂಬ ಹೆಮ್ಮೆಯಲ್ಲವೇ ನಿನಗೆ? ಧನಕನಕ ರಾಜ್ಯಲಕ್ಷ್ಮಿ ಸ್ಥಿರವಾಗಿ ಶಾಶ್ವತವಾಗಿ ನಿನ್ನವೇ ಎಂದು ತಿಳಿದಿದ್ದೆಯಲ್ಲವೇ? ಪರಾಜಿತನಾದ ನಿನ್ನಲ್ಲಿ ಈಗ ನಿನ್ನದೆಂದು ಹೇಳಿಕೊಳ್ಳಲು ಆ ಲಕ್ಷಣಗಳಲ್ಲಿ ಒಂದಾದರೂ ಯಾವುದಾದರೂ.... ಉಳಿದಿದೆಯೋ? ಇಲ್ಲ. ಅವೆಲ್ಲವೂ ವಿಜಯಿಗಳಾದ ನಮ್ಮ ಸ್ವಾಧೀನ. ಈಗ ನೀನು ದರಿದ್ರ! ಕಂಗಾಲ! ಬಲಾಢ್ಯನ ಲಕ್ಷಣವೇ ಇದು! ಬಾಲವೀರ ಪಾರ್ಥನಿಂದ ಬಿಗಿಸಿಕೊಂಡು ನಿಂತಿರುವಿ! ನೀನಾರೆಂಬುದರ ಅರಿವು ಮಾಡಿಕೊಡಲೇ? ದೈವಾನುಕೂಲವಿದ್ದರೂ ನಿರಂಕುಶ ಪ್ರಭುತ್ವ ನಡೆಸಿದ ನೀಚ! ಸಂಪಾದಿಸಿ ಭೋಗಿಸುವುದರಲ್ಲಿಯೇ ಪುರುಷಾರ್ಥವೆಂದು ತಿಳಿದ ಮೂರ್ಖ! ಪ್ರತಿಕೂಲ ಪರಿಸ್ಥಿತಿಯಲ್ಲಿದ್ದ ಪ್ರಜರ ಕಷ್ಟ-ಕಾರ್ಪಣ್ಯಗಳ ಕಡೆಗೆ ಕಣ್ಣೆತ್ತಿ ನೋಡದ ಮದಾಂಧ!! ಜೀವದಾಶೆ ಇದೆಯೋ? ಜೀವದಾನ ಬೇಕೇ?

ದ್ರುಪದ:— (ನಿಟ್ಟುಸಿರು) ಇನ್ನೆಂತಹ ಜೀವದಾಶೆ?

ದ್ರೋಣ:— ಯಾಕೆ ?

ದ್ರುಪದ:— (ಉಸಿರ್ಗರೆಯುತ್ತ) ಮಾನಖಂಡನೆಯಾದ ಮೇಲೆ.......

ದ್ರೋಣ:— ಮಾನ .... ಮರ್ಯಾದೆ .... ಹೋದಮೇಲೆ, ಜೀವಿತದ ಪ್ರಯೋಜನವಿಲ್ಲ ಅಲ್ಲವೇ? ಮಾನ ಅಪಮಾನದ ಭಾವನೆ ಮಾನವನ ಹೃದಯಕ್ಕೆ ಉಂಟು. ಈ ಅನುಭವ ನಿನಗೆ ಈಗ ಬಂದಿತು ಅಲ್ಲವೇ? ನೀನೇ ಆಢ್ಯ-ನೀನೇ ಅಭಿಜಾತ-ನೀನೇ ಬಲವಂತ-ನೀನೇ ಭೋಗಿ-ನೀನೇ ಈಶ್ವರ-ನಿನ್ನನ್ನುಳಿದ ಮಾನವರು ಕುದ್ರಪಶು ಭಾವನೆಯಿಲ್ಲ—ಹೃದಯವಿಲ್ಲ. ಕೇವಲ ನಿನ್ನ ಭೋಗಕ್ಕಾಗಿ ಬದ್ಧರಿರುವ— ಸ್ವೈಲಾಗದ— ದ್ವಿಪಾದಪಶುಗಳೆಂದು ಭಾವಿಸಿದ್ದಿಯಲ್ಲವೇ ಇಷ್ಟುದಿನ!! ಆ ನಿನ್ನ ದುರಂತ ದುರಭಿಮಾನದ ಏಟಿಗೆ ಸಿಕ್ಕಿ ಮಾನಕ್ಷತಿ ಹೊಂದಿದ ಈ ನನ್ನ ಹೃದಯ, ಕ್ಷತ್ರಿಯನಾದಾಗಿದ್ದರೆ ಶತ್ರುಕ್ಷಣದಲ್ಲಿ ಪ್ರಾಣ ಹೀರಬಹುದಾಗಿತ್ತು ನಿನ್ನದು! ಬ್ರಹ್ಮಸ್ವದಯ ಬ್ರಾಹ್ಮಣಧರ್ಮ— ಇನ್ನೂ ಬದುಕಿರುವಿ, ಇನ್ನೂ ಬದುಕಿ ಬಾಳುವ ಆಸೆಯಿದ್ದರೆ, ಬೇಡಿಕೋ— ಪ್ರಾಣದಾನ ಕೊಡುವೆ !

ಮಲೇರಿಯಾ
ಇನ್‌ಫ್ಲುಯೆಂಜಾ
ಮತ್ತು
ಯಾವತ್ತೂ ಜ್ವರಗಳು

ಒಡನೆ ವಾಸಿ ಹೊಂದುತ್ತವೆ.

ಶ್ರೀಮಂತರ—ಬಡಬಗ್ಗರ—ಕೂಲಿಕಾರರ ಎಲ್ಲರ ಸಲುವಾಗಿ ಜ್ವರಗಳ ಮೇಲೆ ರಾಮಬಾಣ ಔಷಧ.

ಮಾದವನ್ ಸನ್ಸ್ ಮತ್ತು ಕಂ. ಕೆಮಿಸ್ಟ್ಸ್,

ಮುಂಬಯಿ—೨.

ಪ್ರಕಟವಾಗಲಿದೆ.

ಶ್ರೀ. ರಾಮಚಂದ್ರ ಕೊಟ್ಟಲಗಿಯವರ ಕವನಸಂಗ್ರಹ

“ ಪಿಪಾಸಾ ”

ಪ್ರಿನ್ಸಿಪಾಲ್ **ಗೋಕಾಕ ವಿನಾಯಕರಾಯರು**

ತಮ್ಮ ಮುನ್ನುಡಿಯಲ್ಲಿ ಹೀಗೆ ಹೇಳಿದ್ದಾರೆ.

‘ ಶ್ರೀ. ರಾಮಚಂದ್ರರಾಯರ ಕಾವ್ಯದಲ್ಲಿ ಒಂದು ಸಾತ್ತ್ವಿಕ ಆನಂದಾಧಾನವಿದೆ, ವಿರಸದ ರಸವಿದೆ. ಅವರೆ ಅದರ ಗರ್ಭದಲ್ಲಿಯೇ ಒಂದು ಸರಸತೆಯಿದೆ. ನವೀನ ಜನನವಿದೆ. ಅವರ ಜೀವನದ ಸತ್ತ್ವನಾದ ಸತ್ಯ-ಸೌಂದರ್ಯ-ಪ್ರೇಮಗಳು ಆನಂದಾಧಾನದಲ್ಲಿ ವ್ಯಕ್ತವಾಗಿ ಪ್ರಟಿಕ್ಕೆ ಹಾಕಿದ ಚಿನ್ನದಂತೆ ಕಾಂತಿ ಪಡೆಯುತ್ತವೆ. ಹೀಗೆ ವಿರಸ-ರಸಗಳೊಂದಿಗೆ ಹಾಯ್ದು ಬಂದ ಜೀವಕ್ಕೆ ಮುಂದಿನ ದಾರಿಯೆಂದರೆ ಸಮರಸ, ಸಮರಸದ ಜೀವನ. ’

ಬೆಲೆ ೧—೪—೦

ವಿವರಗಳಿಗೆ ಬರೆಯಿರಿ :—

ಮನೋಹರ ಗ್ರಂಥಭಾಂಡಾರ,

ಧಾರವಾಡ

ದ್ರುಪದ :— ಕ್ಷತ್ರಿಯಧರ್ಮ ಪ್ರಾಣಭಿಕ್ಷೆ ಬೇಡುವುದಲ್ಲ.

ದ್ರೋಣ :— ಭಲೆ! ಇದೊಂದು ವೀರಕ್ಷತ್ರಿಯನಿಗೊಪ್ಪುವ ಮಾತು! ಭಾರದ್ವಾಜಾಶ್ರಮದ ಪುಣ್ಯಭೂಮಿಯಲ್ಲಿ ಬಾಲ್ಯದ ಕೆಲಕಾಲಕಳೆದ ಪುಣ್ಯವಿಶೇಷ, ಇಷ್ಟಾದರೂ ಉಳಿದಿದೆ. ಕ್ಷತ್ರಿಯರ ಸ್ವಾಭಿಮಾನದ ಅಂಶ. ಬಾಲ್ಯಸ್ನೇಹಿತನೆನ್ನಲು ಇನ್ನೂ ಇದೆ— ಇದೆ ಅವಕಾಶ. ಪಾಂಚಾಲಾ, ಕ್ಷಾತ್ರಧರ್ಮದಲ್ಲಿ ನಿನ್ನ ಶಾಸನಾತ್ಮಕ ಬುದ್ಧಿ ಶುದ್ಧವಾಗಿದ್ದದ್ದೇ ಆದರೆ, ಮಿತ್ರಧರ್ಮವನ್ನು ಪಾಲಿಸಲು ತಪ್ಪುತ್ತಿದ್ದೆಯಾ! ಸಾಮಾನ್ಯ-ಸರ್ವಮಾನ್ಯ ರಾಜಧರ್ಮ, ನ್ಯಾಯ-ನೀತಿ—, ಒಳಿತುಕೆಡಕುಗಳನ್ನು ತಿಳಿದು ಪ್ರಜರ ಕಷ್ಟ ಪರಿಹಾರ ಕರ್ತವ್ಯದಿಂದ ಚ್ಯುತನಾಗುತ್ತಿದ್ದೆಯಾ? ಸಂಕಷ್ಟಗಳನ್ನು ದೂರಿಕೊಳ್ಳಲು ಬಂದ ದರಿದ್ರರನ್ನು ಕಂಡರೆ—ನಿನ್ನ ಕಣ್ಣು ಕೆಂಡದಂತೆ ಕೆಂಪಾದುವು. ಕಿವಿ ಕಿವುಡಾದುವು. ಕ್ಷಾತ್ರಧರ್ಮದ ಜಂಭಕೊಚ್ಚಿದ ಈ ನಾಲಗೆ ಬೊಗಳಿತು! ತಿರಸ್ಕಾರಧಿಃಕಾರದ ಉದ್ಗಾರ!!! ದರ್ಶನಾಪೇಕ್ಷೆಯಾಗಿ ನಾನು ಬಂದ ಪ್ರಸಂಗ ನೆನಪಿದೆಯೇ?

ದ್ರುಪದ :— (ದೀರ್ಘ ನಿಟ್ಟುಸಿರು) ತಪ್ಪಿದೆ.

ದ್ರೋಣ :— ಸಾಮಾನ್ಯ ಶಿಷ್ಟಾಚಾರದ ಸ್ವಾಗತ ಮಾಡುವಷ್ಟು ಸೌಜನ್ಯ....

ದ್ರುಪದ :— (ನಿಟ್ಟುಸಿರು) ಇಲ್ಲ, ಆ ಕಾಲಕ್ಕೆ ನನ್ನಿಂದಾದ ತಪ್ಪಿಗೆ....ಈಗ ಪಶ್ಚಾತ್ತಾಪ....

ದ್ರೋಣ :— ಪಶ್ಚಾತ್ತಾಪ! ನಿಜವಾದ ಪಶ್ಚಾತ್ತಾಪವಾಗಿದೆಯೇ? ಹೇಳು ಹಾಗಾದರೆ; ಪೂರ್ವಸ್ನೇಹ ಋಣಾನುಬಂಧಕ್ಕೇನು ಹೇಳುವೆ?

ದ್ರುಪದ :— ಒಪ್ಪುವೆ.

ದ್ರೋಣ :— ನಮ್ಮ ಉಭಯತರ ಸ್ಥಾನಮಾನಪರಿಸ್ಥಿತಿಯಲ್ಲಿ ಬದಲಾಗಿದೆಯಲ್ಲಾ—ಆದರೂ ನನ್ನದೇನು ಆಕ್ಷೇಪವಿಲ್ಲ. ಆಢ್ಯ ಅನಾಢ್ಯರಲ್ಲಿ ಸಖ್ಯ ಶಕ್ಯವಿಲ್ಲವೆಂದು ನಿನ್ನದೇ ಅಭಿಪ್ರಾಯ.

ದ್ರುಪದ :— (ನಿಟ್ಟುಸಿರು) ಪಶ್ಚಾತ್ತಾಪದಿಂದ ದಗ್ಧವಾದ ಹೃದಯದ ಮೇಲೆ ಮತ್ತೆ ಮತ್ತೆ ಬರೆ ಎಳೆಯುವದು ಸಾಕು. ಜೀವಿತದ ಕೊನೆಗೂ ದ್ರೋಣಸಖ ದ್ರೋಣಸಖನೆನ್ನುತ್ತಲೇ ಪ್ರಾಣಬಿಡುವೆ. ಬೇಗನೇ ನನ್ನ ಪ್ರಾಣ ತೆಗೆಯಲು ಶಿಷ್ಯನಿಗೆ....

ದ್ರೋಣ:— ದ್ರುಪದಾ, ಪ್ರಾಣಹಿಂಸೆ ಬ್ರಾಹ್ಮಣ ಧರ್ಮವಲ್ಲ. ನಿನ್ನನ್ನು ಘಾತಿಸುವ ಇಚ್ಛೆ ಇದ್ದಿಲ್ಲ. ಈಗಲೂ ಇಲ್ಲ. ವ್ಯಕ್ತಿಗಿಂತ ತತ್ತ್ವದ ಮಹತ್ವವನ್ನರಿತುಕೋ. ನಿನಗೆ ಬುದ್ಧಿಗಲಿಸಲೆಂದು, ಪ್ರತಿಜ್ಞೆಯಂತೆ ಶಿಷ್ಯರಿಂದ ಜೀವಸಹಿತ ಬಂಧಿಸಿ ತರಿಸಬೇಕಾಯ್ತು. ಭಾಗೀರಥೀ ದಕ್ಷಿಣತೀರದ ಅರ್ಧರಾಜ್ಯ ನಿನ್ನದು, ಉತ್ತರತೀರದ ಅರ್ಧರಾಜ್ಯ ನನ್ನದು. ಒಪ್ಪಿಗೆಯೇ?

ದ್ರುಪದ :— ಒಪ್ಪುವೆ.

ದ್ರೋಣ :— ಪಾರ್ಥಾ ಬಿಚ್ಚಿಬಿಡು, ಬಿಚ್ಚಿಬಿಡು, ಈ ಬಿಗಿದ ಪಾಶವನ್ನು. ದ್ರುಪದ ನನ್ನ ಬಾಲ್ಯ ಸ್ನೇಹಿತ. ಪ್ರೀತಿಯ ಸಖ. ಪಾಂಚಾಲಾ, ಸುಖ ದುಃಖ ಲಾಭ ಅಲಾಭ ಜಯ ಅಪಜಯ ಮಾನ ಅಪಮಾನ ಎಲ್ಲವೂ ಪರಮಾತ್ಮನ ಇಚ್ಛೆ. ನಡೆದು ಹೋದ ಸಂಗತಿಗಳೆಲ್ಲವನ್ನು ಕ್ಷಮಾಶೀಲರಾಗಿ ಮರೆತುಬಿಡೋಣ. ಇನ್ನು ಮುಂದೆಯೂ ಸ್ನೇಹ ಆದರ ವಿಶ್ವಾಸಗಳು ನಮ್ಮಲ್ಲಿ ಬೆಳೆಯುತ್ತಿರಲಿ. ದೀರ್ಘಕಾಲ ಅಗಲಿದ ಈ ನಮ್ಮ ಹೃದಯಗಳು ದೃಢಾಲಿಂಗನದಿಂದ ಏಕೀಭಾವ ಹೊಂದಲಿ. ಬಾ ಆಲಿಂಗನ ಕೊಡು....ಅಹಹಾ ಅಹಹಾ! ಆನಂದ ಆನಂದ ಬ್ರಹ್ಮಾನಂದ!



ಪೃಥ್ವಿಯ ಭವಿತವ್ಯ

(ವಿಜ್ಞಾನ-ಪ್ರಬಂಧ)

ಶ್ರೀ. ರಾಜೇಂದ್ರ, ಕೊಲ್ಹಾಪುರ

●

ಪೃಥ್ವಿಯ ಆಯುಷ್ಯ ಸಾವಿರಕೋಟಿ ವರ್ಷಗಳೆಂದು ಒಪ್ಪಿದರೆ, ಒಕ್ಕಾಲು ಆಯುಷ್ಯ ಸಂದಿದೆ; ಮುಕ್ಕಾಲು ಆಯುಷ್ಯ ಮುಂದಿದೆ. ಮಾನವಜಾತಿ ಇನ್ನೂ ನೊನ್ನೆ ಹುಟ್ಟಿದ ಕೂಸು. ೧೦೦೦೦ ಪಾಲು ಆಯುಷ್ಯ ಇನ್ನೂ ಮುಂದಿದೆ.

★

ಭವಿಷ್ಯಕಾಲದಲ್ಲಿ ಪ್ರವೇಶವು ಎಂದಿಗೂ ಅಸಾಧ್ಯ. ವರ್ತಮಾನ ಮತ್ತು ಭವಿಷ್ಯದ ನಡುವಿನ ತೆರೆ ಅಭೇದ್ಯ. ಹೀಗಿದ್ದರೂ ಭವಿಷ್ಯದಲ್ಲಿ ಹಣಿಯಿಕ್ಕಿ ನೋಡುವ ನಮ್ಮ ಕುತೂಹಲ ವಿಲಕ್ಷಣವಾಗಿದೆ. ನಮ್ಮ ನಿಮ್ಮ ವಾರದ ಭವಿಷ್ಯವನ್ನು ಮೊದಲುಗೊಂಡು ರಾಷ್ಟ್ರಗಳ ಭವಿಷ್ಯವನ್ನು ನುಡಿಯುವ ಹಲ್ಲಿ, ಹಕ್ಕಿ, ಬುಡುಬುಡಿಕೆಯವ, ಹೋರಾರಕ್ಷರ ಬಗ್ಗೆ—ಬುದ್ಧಿವಾದವು ಬೇಡವೆನ್ನುತ್ತಿದ್ದರೂ—ನೂರರಲ್ಲಿ ಐದು ಪಾಲಾದರೂ ಸತ್ಯವಾದೀತೆಂದು ಅರ್ಥಮರ್ಥ ನಂಬಿ ಗಾಳಿಗೋಪುರ ಕಟ್ಟದವರಿಲ್ಲ. ವಿಜ್ಞಾನಿಯೂ ಕೂಡ ಇಂದಿನ ವರೆಗೆ ಸಂಗ್ರಹಿಸಿದ ಜ್ಞಾನದ ಆಧಾರದಿಂದ ಪೃಥ್ವಿಯ, ತಾರೆಗಳ, ವಿಶ್ವದ ಭೂತ-ಭವಿಷ್ಯಗಳ ಬಗ್ಗೆ ತರ್ಕದ ಅಸ್ತಿವಾರದ ಮೇಲೆ ಕಲ್ಪನೆಯ ಗೋಪುರವನ್ನು ನಿಲ್ಲಿಸುವ ಮೋಹದಿಂದ ಮುಕ್ತನಾಗಿಲ್ಲ. ನಮ್ಮ ಪೃಥ್ವಿ ಕಾಲಪ್ರವಾಹದಲ್ಲಿ ಹೇಗೆ ಪರಿವರ್ತನ ಹೊಂದಬಹುದೆಂಬ ಬಗ್ಗೆ ನಿಶ್ಚಿತಸ್ವರೂಪದಿಂದ ಹೇಳುವುದು ಇಂದು ಅಶಕ್ಯವಿದ್ದರೂ, ರಸಾಯನಶಾಸ್ತ್ರ, ಪದಾರ್ಥವಿಜ್ಞಾನ, ಖಗೋಲಶಾಸ್ತ್ರಗಳ ಆಧಾರದಿಂದ ತರ್ಕಿಸುವುದು ಅಸಾಧ್ಯವಲ್ಲ.

ಸುಮಾರು ಮೂವತ್ತು ಸಾವಿರ ಲಕ್ಷ ವರ್ಷಗಳ ಹಿಂದೆ ಸೂರ್ಯನು ಒಡೆದು, ಅದರ ತುಂಡುಗಳು ದೂರ ಸಿಡಿದು, ಸೂರ್ಯನ ಸುತ್ತಲೂ ಮಾಲಾಕಾರವಾಗಿ ತಿರುಗಹತ್ತಿದುವೆಂದೂ, ಆ ತುಂಡುಗಳೇ ಪೃಥ್ವಿ, ಬುಧ, ಮಂಗಳ, ಶನಿ ಆದಿ ಗ್ರಹಗಳೆಂದೂ ಎಲ್ಲರೂ ಅರಿತಿರಲು ಸಾಕು. ಅಂದು ಶೈಶವದಲ್ಲಿ ಪೃಥ್ವಿ ಇಂದಿಗಿಂತ ತೀರ ಭಿನ್ನವಾಗಿದ್ದಿತು. ಬೆಟ್ಟ-ಕೊಳ್ಳ, ಕಡಲು, ನದಿ, ವನಸ್ಪತಿ, ಪ್ರಾಣಿಗಳಿಂದ ತುಂಬಿದ ಇಂದಿನ ಪೃಥ್ವಿ, ಅಂದು ಅತಿಶಯ ಉಷ್ಣವಾದ ವಾಯುಗೋಲವಾಗಿತ್ತು.

ಆ ವಾಯುಗೋಲವು ಆರಿ ಆರಿ, ಪ್ರವಾಹಿಯಾಯಿತು; ಹಿರಿತು ಘನೀಭೂತವಾಯಿತು. ಪೃಥ್ವಿಯ ಮೇಲ್ಮೈ ಇಂದು ಘನರೂಪವಾಗಿದ್ದರೂ, ಅಂತರಂಗದಲ್ಲಿ ಇನ್ನೂ ಕುದಿಯುವ ಲೋಹರಸವಿದೆ. ನಟ್ಟನಡುವೆ ಉರಿಯುವ ವಾಯುವೇ ಇರಬಹುದು. ಅದನ್ನೆಲ್ಲ ಕಂಡವರಾರು ? ಪೃಥ್ವಿಯ ಅಂತರಂಗವು ಇನ್ನೂ ತನ್ನ ಎಲ್ಲ ರಹಸ್ಯಗಳನ್ನೂ ಬಯಲು ಮಾಡಿಲ್ಲ. ನೆಲದಾಳದಲ್ಲಿ ೨೦ ಮೈಲಿಗಿಂತ ದೂರ ಹೋಗಲು ಇನ್ನೂ ಸಾಧ್ಯವಾಗಿಲ್ಲ.

ಪೃಥ್ವಿಯು ಆರುವ ಕ್ರಿಯೆ ಬಿಡದೆ ಸಾಗಿದೆ. ಆರಿ ಆರಿ ಮುಂದೇನಾಗಬಹುದು ? ಮುಗಿಲಲ್ಲಿ ಕಾಣುವ ಇತರ ಗ್ರಹಗಳನ್ನು ನಿರೀಕ್ಷಿಸಿದರೆ, ಈ ಪ್ರಶ್ನೆಯ ಉತ್ತರ ದೊರೆಯುತ್ತದೆ. ಅವುಗಳಲ್ಲಿ ಗುರು, ಶನಿ, ಶುಕ್ರ, ಯುರೇನಸ್, ನೆಪ್ಚೂನ್ ಇವು ಪೃಥ್ವಿಗಿಂತ ದೊಡ್ಡವಿದ್ದು, ಅದಕ್ಕಿಂತ ಹೆಚ್ಚು ಉಷ್ಣವಾಗಿವೆ. ಮಂಗಳವು ಪೃಥ್ವಿಗಿಂತ ಚಿಕ್ಕದಿದ್ದರೂ, ಅದು ಪೃಥ್ವಿಯನ್ನು ಅನೇಕ ರೀತಿಯಲ್ಲಿ ಹೋಲುತ್ತಿದೆಯೆಂದು ಕಂಡುಬಂದಿದೆ. ಪೃಥ್ವಿಯ ಉಪಗ್ರಹವಾದ ಚಂದ್ರವು ಮಾತ್ರ ಪೂರಾ ಆರಿಹೋಗಿದೆ. ಅದು ಈಗ ತನ್ನ ಸುತ್ತಲೂ ತಿರುಗಲು, ಪೃಥ್ವಿಯ ಸುತ್ತಲೂ ತಿರುಗಲು ಬೇಕಾಗುವಷ್ಟು ಹೊತ್ತು ಹಿಡಿಯುತ್ತದೆ. ಚಂದ್ರನ ಮೈಮೇಲೆ ಹವೆಯೂ ಇಲ್ಲ. ಅಲ್ಲಿ ಜೀವ ಹುಟ್ಟಿ ಬಾಳುವುದು ಸಾಧ್ಯವಿಲ್ಲ. ಚಂದ್ರನ ಗತಿಯೇ ನಮ್ಮ ಪೃಥ್ವಿಗೆ ಬರಬಹುದೆ ?

ಕೆಳಗೆ ನೆಲವಿದೆ, ಸೂರ್ಯನ ಬೆಳಕು ಮೇಲಿದೆ. ಹೇಗೋ, ಎಂತೋ, ಏಕೋ, ಜೀವಸೃಷ್ಟಿಯಿದೆ. ಅದರ ಭವಿತವ್ಯವೇನು ?

ಉರಿಯುವ ಚಂಡಿನ ಕಾವು ಮೊದಲಿಗಿಂತ ಎಷ್ಟೋ ಕಡಿಮೆಯಾಗಿದೆ. ಕಾಯ್ದ ವಸ್ತು, ಕಾವನ್ನು ಕಿರಣರೂಪದಲ್ಲಿ ಹೊರಚೆಲ್ಲಿ, ತಣ್ಣಗಾಗುತ್ತದೆ. ತಣ್ಣಗಾದ ವಸ್ತು, ಉಷ್ಣತೆಯ ಕಿರಣಗಳನ್ನು ಹೀರಿ ಕಾಯುತ್ತದೆ. ಉಷ್ಣತೆಯ ಕಿರಣಗಳ ವಿನಿಮಯ ಹೀಗೆ ಸತತವಾಗಿ ಸಾಗುತ್ತದೆ. ಈಗ ತನ್ನದೆನ್ನುವ ಕಾವು ಪೃಥ್ವಿಯಲ್ಲಿ ವಿಶೇಷ ಉಳಿದಿಲ್ಲ. ಸೂರ್ಯನಿಂದ ಬಂದ ಕಾವು, ಪೃಥ್ವಿಯು ಆವಕಾಶದಲ್ಲಿ ಕಳೆದುಕೊಳ್ಳುವ ಕಾವಿಗೆ ಸಮವಾಗಿದ್ದುದರಿಂದ, ಇಲ್ಲಿಯ ಉಷ್ಣತಾಮಾನವು ಬಹಳವಾಗಿ ಬದಲಿಸುವುದಿಲ್ಲ. ಆದರೆ ಬಾಹ್ಯಜಗತ್ತಿನಲ್ಲಿ ಸ್ಥಿತ್ಯಂತರಗಳುಂಟಾದರೆ, ಪೃಥ್ವಿಯ ಮೇಲೆ ಅವುಗಳ ಪರಿಣಾಮವು ಆಗದಿರದು. ಈ ಸ್ಥಿತ್ಯಂತರಗಳು ಕ್ರಮಕ್ರಮವಾಗಿ ಬರಬಹುದು. ಅಥವಾ ಅಕಸ್ಮಾತ್ತಾಗಿ ಬಂದು ಉತ್ಪಾತವನ್ನುಂಟುಮಾಡಬಹುದು.

ನಾವಕಾಶ ಘಟಿಸಬಹುದಾದ ಸ್ಥಿತ್ಯಂತರಗಳಲ್ಲಿ, ಸೂರ್ಯನಿಂದ ಬರುವ ಪ್ರಕಾಶ ಮತ್ತು ಉಷ್ಣತೆಗಳ ಪ್ರಮಾಣವು ಕಡಿಮೆಯಾಗುವ ಸಂಭವವಿದೆ. ಸೂರ್ಯನ ಉಷ್ಣತೆಯ ಉಗಮ ಜಲಜನಕ (Hydrogen)→ಹೀಲಿಯಮ್ ಪರಾವರ್ತನದಲ್ಲಿದೆ. ಈ ಪರಾವರ್ತನದಲ್ಲಿ ಸೂರ್ಯನ ದ್ರವ್ಯ (Matter) ವೇ ಕ್ಷಯಿಸುತ್ತಿದ್ದು, ಅದೇ ಪ್ರಕಾಶ ಮತ್ತು ಉಷ್ಣತೆಗಳ ರೂಪದಲ್ಲಿ ನಮಗೆ ದೊರೆಯುತ್ತದೆ. ಜಲಜನಕ→ಹೀಲಿಯಮ್ ಪರಾವರ್ತನವು ಇದೇ ಗತಿಯಿಂದ ಸಾಗಿದರೆ

೫೫ ವರ್ಷಗಳಿಂದ ಅನುಭವಪಟ್ಟ
ಕರ್ವೆ ಮತ್ತು ಕಂಪನಿಯ
ಜ್ವರಗಡ್ಡೆಯ ಗುಳಿಗೆಗಳು
ಬಾಟ್ಲಿಗೆ ೧-೮-೦
ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.
ವಿಳಾಸ :—
ಗಣೇಶ ರಾಮಚಂದ್ರ ಕರ್ವೆ ಮತ್ತು ಕಂಪನಿ
ಗಿರಗಾಂವ, ಮುಂಬಯಿ. ೪

ಸೂರ್ಯನ ಉಷ್ಣತೆ ಮತ್ತು ಪ್ರಕಾಶ ಇದೇ ಪ್ರಮಾಣದಲ್ಲಿ ೧೦೦೦,೦೦೦ ಲಕ್ಷ ವರುಷಗಳವರೆಗೆ ದೊರೆಯಬಹುದು.

ಆದರೆ ಸೂರ್ಯನ ಎಲ್ಲ ದ್ರವ್ಯವು ಜಲಜನಕವೇ ಆಗಿರದೆ, ಬೇರೆ ದ್ರವ್ಯಗಳುಂಟು. ಆದರೂ ಸೂರ್ಯನ ಪ್ರಕಾಶ ಮತ್ತು ಉಷ್ಣತೆ ಇದೇ ಪ್ರಮಾಣದಲ್ಲಿ ಎಷ್ಟೋ ಅಬ್ಜ ವರ್ಷಗಳ ವರೆಗೆ ನಮಗೆ ದೊರೆಯುವವು. ಜಲಜನಕವು ಪೂರ್ಣ ನಾಶವಾದ ಮೇಲೆ, ಸೂರ್ಯನು ಆಟ್ಟಿಸಿ ಲಘುಗಾತ್ರನ ಶ್ವೇತವಾಮನ (white dwarf)' ಗತಿಗೆ ಬರಬಹುದು. ಸೂರ್ಯನ ಆಕುಂಚನದ ಫಲವಾಗಿ ನಮ್ಮ ಮಹಾಸಾಗರಗಳು ಹೆಪ್ಪುಗಟ್ಟಿ ಬರ್ಫವಾಗುವುವು; ಮತ್ತು ಹವೆ ಕರಗಿ ನೀರಾಗಿ ಹರಿಯುವುದು. ಈ ಪರಿಸ್ಥಿತಿಯಲ್ಲಿ ಜೀವಸೃಷ್ಟಿಯು ಇತ್ತೋ ಇಲ್ಲೋ ಎನಿಸಿಬಿಡುವುದು. ಇದು ಬರಿ ಕವಿಕಲ್ಪನೆಯಲ್ಲ; ನಭೋಮಂಡಲದಲ್ಲಿ 'ಶ್ವೇತವಾಮನ' ಅವಸ್ಥೆಗಿಳಿದ ತಾರೆಗಳು ಅಸಂಖ್ಯವಾಗಿವೆ. ಅವುಗಳ ಗ್ರಹಮಂಡಲಗಳು ಈ ಹಣೆಬರೆಹವನ್ನು ಎಂದೋ ಕಂಡಿವೆ. ಅಲ್ಲಿ ಜೀವಸೃಷ್ಟಿಯ ಮೃತಾವಶೇಷಗಳೂ ಇರಬಹುದು. ಯಾರು ಬಲ್ಲರು ?

ಎಲ್ಲ ಘಟನೆಗಳೂ ಸುಸೂತ್ರವಾಗಿ ನಡೆದರೆ, ಈ ದುರಂತವು ಘಟಿಸಲು ಇನ್ನೂ ಹತ್ತು ಅಬ್ಜ ವರ್ಷಗಳು ಹತ್ತಬಹುದು, ಆದರೆ ಅಕಲ್ಪಿತ ಅಪಘಾತಗಳು ಒದಗಿ ಮಾನವವಂಶವು— ಜೀವಸೃಷ್ಟಿಯೂ ಸಹ— ಮೊದಲೇ ನಾಮಶೇಷವಾಗುವ ಸಂಭವವಿದೆ. ನಮ್ಮ ಸೂರ್ಯನು ಇನ್ನೊಂದು ತಾರೆಗೆ ಢಿಕ್ಕಿಹೊಡೆಯಬಹುದು, ಅಥವಾ ಒಂದು ಲಘುಗ್ರಹವು (Asteroid) ಇನ್ನೊಂದರ ಮೇಲೆ ಅಪ್ಪಳಿಸಿ, ದಾರಿತಪ್ಪಿ, ಪೃಥ್ವಿಗೆ ತಿಕ್ಕಹಾಯಬಹುದು. ಅಥವಾ ಹೊರಗಿನ ನಕ್ಷತ್ರವೊಂದು 'ವಾಕಿಂಗಿ'ಗಾಗಿ ನಮ್ಮ ಗ್ರಹಮಾಲೆಯಲ್ಲಿ ಬಂದು, ಗುರುತ್ವಾಕರ್ಷಣದ ಸಮತೋಲವನ್ನೇ ಕೆಡಿಸಬಹುದು. ನಮ್ಮ ಪೃಥ್ವಿ ಅಡ್ಡದಾರಿಬಿದ್ದು, ಸಿಕ್ಕಲ್ಲಿಗೆ ಹೋಗಬಹುದು. ಕಾಲುಬಟ್ಟೆ ಕತ್ತೆಯಂತೆ ತಿರುಗಬಹುದು. ಈ ಅಪಘಾತಗಳಲ್ಲಿ ಪ್ರತಿಯೊಂದೂ ಜೀವಸೃಷ್ಟಿಗೆ ಕರಾಲಮೃತ್ಯುವಾಗುವುದು. ಇಂಥ ಅಪಘಾತಗಳು ಎಂದು ಆದಾವೆಂದು ಹೇಳುವುದು ಅತಿಶಯ ಕಠಿಣ. ಆದರೂ ಠೋಕಳಾಳೆಯಿಂದ, ಬರುವ ೧೦೦೦೦೦ ಲಕ್ಷ ವರ್ಷಗಳಲ್ಲಿ ಈ ಉತ್ಪಾತಗಳು ಆಗಲಿಕ್ಕಿಲ್ಲನೆಂದು ಶಾಸ್ತ್ರಜ್ಞರ ವಿಶ್ವಾಸವಿದೆ.

ಇನ್ನೊಂದು ಸಂಕಟ ಮಾತ್ರ ಬಲವಾಗಿದೆ. ನಮ್ಮ ಸೂರ್ಯನ ಪ್ರಕಾಶ ಮತ್ತು ಉಷ್ಣತೆ ಒಮ್ಮೆಲೇ ಹೆಚ್ಚಾಗಿ ಪೃಥ್ವಿಯ ಮೇಲಿನ ಜೀವಸೃಷ್ಟಿಯು ಸುಟ್ಟು ಸುಣ್ಣವಾಗಬಹುದು. ಸೂರ್ಯನಿಗಿಂತ ೨೫೦೦೦ ಪಟ್ಟು ಪ್ರಕಾಶಮಾನವಾದ ನವತಾರಕೆಗಳು (Nova) ಮುಗಿಲಿನಲ್ಲಿ ಆಗಾಗ ಕಾಣಬರುತ್ತವೆ. ನಮ್ಮ ಸೂರ್ಯನೂ ಒಂದಿಲ್ಲೊಂದು ದಿನ (Nova) ಆಗಿ ಪರಿಣಮಿಸಿದರೆ, ಪೃಥ್ವಿಯು ಉರಿದುಹೋಗಬಹುದು.

"ದಿವಿಸೂರ್ಯಸಹಸ್ರಸ್ಯ ಭವೇತ್ ಯುಗಪದುತ್ಥಿತಾ" ಎನ್ನುವುದರ ಪ್ರತ್ಯಕ್ಷಾನುಭವವು ಆಗ ಆಗಬಹುದು. ಆದರೆ ಸೂರ್ಯನು ನೋವ್ಹಾ ಆಗಬಹುದೋ, ಇಲ್ಲವೋ; ಆದರೆ ಎಂದು ಆಗಬಹುದು? ಮೊದಲಾದ ಪ್ರಶ್ನೆಗಳಿಗೆ ನಿಶ್ಚಿತ ಉತ್ತರ ಹೇಳುವುದು ಸಾಧ್ಯವಿಲ್ಲ. ಹಿಮಪ್ರಲಯಕ್ಕಿಂತ ಈ ಅಗ್ನಿಪ್ರಲಯವು ಭೀಷಣವಾಗುವುದೆಂಬುದರಲ್ಲಿ ಸಂದೇಹವಿಲ್ಲ.

ನೋವ್ಹಾ ಎಂದು ವಿಶಿಷ್ಟ ನಕ್ಷತ್ರಗಳಿರದೆ, ದಿನವೂ ಕಾಣುವ ಸಾಮಾನ್ಯ ತಾರೆಗಳೇ, ಅಕಸ್ಮಾತ್ತಾಗಿ ಭುಗಿಲೆದ್ದು ನೋವ್ಹಾ ರೂಪ ತಾಳುವವೆಂದು ನಿಶ್ಚಿತವಾಗಿ ತಿಳಿದುಬಂದಿದೆ. ಆಕಾಶಗಂಗೆಯಲ್ಲಿಯೇ ಪ್ರತಿವರ್ಷ ಹತ್ತು ಹನ್ನೆರಡು ನಕ್ಷತ್ರಗಳು ನೋವ್ಹಾ ಆಗುವುದನ್ನು ನೋಡುತ್ತೇವೆ. ಆಕಾಶಗಂಗೆಯಲ್ಲಿ ೩೦೦೦,೦೦೦ ಲಕ್ಷ ನಕ್ಷತ್ರಗಳಿದ್ದು, ಸರಾಸರಿ ಲೆಕ್ಕದಿಂದ, ಯಾವುದೇ ನಕ್ಷತ್ರವು ೩೪೦೦ ಕೋಟಿ ವರ್ಷಗಳಲ್ಲಿ ಒಮ್ಮೆ ನೋವ್ಹಾ ಆಗುವ ಸಂಭವವಿರುತ್ತದೆ. ಅರ್ಥಾತ್ ಬರುವ ೧೦೦೦ ಕೋಟಿ ವರ್ಷಗಳಲ್ಲಿ ಸೂರ್ಯನು ನೋವ್ಹಾ ಆಗಿ ಅಗ್ನಿಪ್ರಲಯವನ್ನುಂಟುಮಾಡುವ ಹೆದರಿಕೆಯಿದೆ.

ಭೂಗರ್ಭಶಾಸ್ತ್ರಜ್ಞರು, ಸೂರ್ಯನು ಕಳೆದ ೧೦೦ ಕೋಟಿ ವರ್ಷಗಳಲ್ಲಿ ನೋವ್ಹಾ ಆಗಿಲ್ಲವೆಂದು ಹೇಳುತ್ತಾರೆ. ನಕ್ಷತ್ರವು ಶ್ವೇತವಾಮನರೂಪ ತಾಳುವ ಮೊದಲು ಒಮ್ಮೆ ನೋವ್ಹಾ ಆಗಿ ಸಿಡಿದೇಳುವುದೆಂದು ಕೆಲವರ ಅಭಿಪ್ರಾಯವಿದ್ದರೂ, ನೋವ್ಹಾ ಪರಿವರ್ತನದ ಕಾರಣಗಳು ಇನ್ನೂ ಅಜ್ಞಾತವಾಗಿಯೇ ಇವೆ. ಅಕಲ್ಪಿತ ಆಘಾತ-ಅಪಘಾತಗಳು ಒದಗದೆ, ಗ್ರಹಮಾಲೆಯ ಉತ್ಕ್ರಾಂತಿಯು ಸಹಜಗತಿಯಿಂದ ಸಾಗಿದರೆ, ಪೃಥ್ವಿಯೂ ಇನ್ನೂ ನೂರಾರು ಕೋಟಿ ವರುಷಗಳ ವರೆಗೆ ಜೀವಸೃಷ್ಟಿಯನ್ನು ರಕ್ಷಿಸೀತೆಂದು ಹೇಳಬಹುದು.

ಈ ಸುದೀರ್ಘ ಕಾಲಖಂಡದ ಪ್ರಾರಂಭದಲ್ಲಿಯೇ ನಾವು ಜೀವಿಸಿರುವುದು ನಮ್ಮ ಸುದೈವ. ಮಾನವ ಜಾತಿಯು ಕದಾಚಿತ್ ಕೊನೆಯವರೆಗೆ ಉಳಿಯಬಹುದು, ಉಳಿಯಲಿಕ್ಕಿಲ್ಲ. ಉಳಿದರೆ,

ಬರಲಿರುವ ಮಾನವ ಸಮಾಜವು ಇಂದಿಗಿಂತ ಸಾವಿರಪಾಲು ಜ್ಞಾನವನ್ನು ಗಳಿಸಿರಬಹುದು. ಅಪಾರವಾದ ಜ್ಞಾನರಾಶಿಯ ಸಹಾಯದಿಂದ ಜೀವನದಲ್ಲಿ, ನಾವು ಕನಸಿನಲ್ಲಿಯೂ ಕಾಣಲಾರದ, ಸುಖ-ಸಿರಿ-ಸೌಕರ್ಯಗಳನ್ನು ಭೋಗಿಸಬಹುದು. ಜ್ಞಾನದ ಮುಚ್ಚಿದ ಭಾಂಡಾರದ ಮುದ್ರೆಯನ್ನೊಡೆದು, ಅಲ್ಲಿ ಮೊದಲನೆಯ ಹೆಜ್ಜೆಯನ್ನಿಟ್ಟ ಹೆಮ್ಮೆ, ಗೌರವ, ಆನಂದ ಇವು ಮಾತ್ರ ನಮಗೇ ಮೀಸಲು. ರೋಗ, ಜರೆ, ಮೃತ್ಯುಗಳ ಮೇಲೆ ಮಾನವನು ವಿಜಯ ಪಡೆಯಬಹುದು. ಜೀವಿತವು ಸುರಕ್ಷಿತವೂ ಸುಗಮವೂ ಆಗಬಹುದು. ಅಂದಿನ ಜನರು, ನಮ್ಮ ಶೋಧಗಳ ಕತೆಗಳನ್ನು ನಂಬಲಿಕ್ಕಿಲ್ಲ. ಅಜ್ಞಾತ ಭೂಭಾಗಗಳಲ್ಲಿ, ಅಜಸ್ರ ಶ್ವಾಪದಗಳನ್ನೂ ಅಸಂಖ್ಯ ಎಡರುಗಳನ್ನೂ ಎದುರಿಸುತ್ತ, ಅಲೆದು, ಬೆಟ್ಟದ ತುದಿಗಳನ್ನೇರಿ, ಕಡಲಿನಾಳದಲ್ಲಿ ಮುಳುಗಿ, ನೆಲದ ಬಸಿರನ್ನು ಬಗೆದು, ಜ್ಞಾನವನ್ನು ಸಂಪಾದಿಸಿದ ಕತೆ ಅವರ ಪಾಲಿಗೆ ಬರಿ ಕತೆಯಾಗುವುದು.

ನಿಶ್ಚಿತ ಅವಧಿಯಲ್ಲಿ ಪ್ರಲಯವುಂಟಾಗಿ ಜೀವಸೃಷ್ಟಿಯು ಹೇಳಹೆಸರಿಲ್ಲದೆ ಹಾಳಾಗಿ ಹೋಗಲಿದೆಯೆಂದು ಅರಿತ ಮಾನವನು, ಜೀವಿತದ ಮಹತ್ತ್ವದ ಮೌಲ್ಯಗಳನ್ನೇ ಕಳೆದುಕೊಂಡು, 'ಅನುಗೋಲವಿಲ್ಲದಾ ಹಳವ ಸಾಗಿದಂತೆಯೋ, ಶರಧಿಯಲ್ಲಿ ಬಿಸುಟದಾ ಬಳ್ಳಿ ತೇಲುವಂತೆಯೆ' ಪ್ರವಾಹ ಪತಿತನಾಗಿ ಬಾಳಬಹುದು.

ಪೃಥ್ವಿಯ ಆಯುಷ್ಯವು ಸಾವಿರಕೋಟಿ ವರುಷಗಳೆಂದು ಒಪ್ಪಿದರೆ, ಒಕ್ಕಾಲು ಆಯುಷ್ಯ ಸಂದಿದೆ, ಮುಕ್ಕಾಲು ಆಯುಷ್ಯ ಮುಂದಿದೆ. ಮಾನವಜಾತಿ ಇನ್ನೂ ನೆನ್ನೆ ಹುಟ್ಟಿ ಕಣ್ಣು ತೆರೆದ ಕೂಸು. ೧೦೦೦೦ ಪಾಲು ಆಯುಷ್ಯ ಮುಂದಿದೆ. ಮಾನವನ ನಾಗರಿಕತೆ ಹುಟ್ಟಿ ೧೦೦೦೦ ವರ್ಷವೂ ಆಗಿಲ್ಲ.

ಮನುಷ್ಯನ ಪ್ರಗತಿ ಮೊದಲು ಸಾವಕಾಶವಾಗಿ ಮುನ್ನಡೆಯಿತು. ಈಗ ವಿಜ್ಞಾನದ ಹಿರಿಯ ಸಾಧನ ಕೈವಶವಾದಂದಿನಿಂದ ನಾವು ರಭಸದಿಂದ ಮುಂದುವರೆಯುತ್ತಿದ್ದೇವೆ. ಹೀಗೆಯೇ ಮುಂದುವರೆದರೆ ನಾವು ಎಷ್ಟುದೂರ ಸಾಗೇವೆಂಬುದನ್ನು ಹೇಳುವುದು ಅಸಾಧ್ಯ. ಜ್ಞಾನಕ್ಕೆ ಅಂತವಿಲ್ಲ, ಮುನ್ನಡೆಗೆ ಮೇರೆಯಿಲ್ಲ. ಬರ್ನಾರ್ಡ್ ಶಾ ಹೇಳುವಂತೆ, ದ್ರಷ್ಟಾರನ ದೃಷ್ಟಿಗೂ ಶಕ್ತಿಯ ಸೀಮೆಯುಂಟು. ಅದರಾಚೆಗೆ ಏನೋ ಇದೆ, ಇದೆ— ಎನ್ನುವ ಸಮಾಧಾನದ ಬೆಲೆಯೂ ಅಷ್ಟಿಷ್ಟಲ್ಲ.

ಮಾನವ ಜಾತಿಗೂ, ಜೀವಸೃಷ್ಟಿಗೂ ಸುದೀರ್ಘ ಆಯುಷ್ಯವಿದೆಯೆಂದು ಹೇಳುವಾಗ, ಜನಾಂಗಕ್ಕೇ ಆಗಬಹುದಾದ ಅಪಘಾತಗಳನ್ನು ಮರೆಯಲಾಗದು. ಮುಗಿಲಿನಲ್ಲಿ ಗ್ರಹೋಪಗ್ರಹಗಳು ಢಿಕ್ಕಿ ಹೊಡೆಯಬಹುದು. ಸೂರ್ಯನು ಆಕುಂಚನ ಹೊಂದಿ, ಪೃಥ್ವಿಯ ಜೀವರಾಶಿಯನ್ನು ಚಳಿಯಿಂದ ನಾಶಗೊಳಿಸಬಹುದು ; ಉರಿದೆದ್ದು, ನೋವ್ಹಾರೂಪ ತಾಳಿ, ಸುಟ್ಟುರುಹಬಹುದು. ಏನೇ ಆದರೂ, ಲಕ್ಷ ಲಕ್ಷ ವರುಷಗಳ ಭವಿಷ್ಯ ನಮಗಿದೆ. ಈ ಕಾಲಖಂಡದ ವಿಸ್ತಾರದ ಯೋಗ್ಯ ಕಲ್ಪನೆ ಸಾಮಾನ್ಯ ಜನರಿಗೆ ಸ್ಪಷ್ಟವಾಗಿ ಆಗುವುದು ಕಠಿಣ. ನಾವಿನ್ನೂ ಬಹುಕಾಲ ಇದೇ ಜಗತ್ತಿನಲ್ಲಿ ವಾಸಮಾಡುವವರಿದ್ದೇವೆ. ಇಂದಿಗಿಂತ ಸಾವಿರ ಪಾಲು ಒಳ್ಳೇ ರೀತಿಯಿಂದ ಬಾಳುವಷ್ಟು ಪ್ರಗತಿಯಾಗುವುದು ಸಾಧ್ಯವಿದೆ. ಬುದ್ಧಿ-ವಿಜ್ಞಾನಗಳ ಸಾಧನದಿಂದ ಈ ಪ್ರಗತಿಯನ್ನು ಸಾಧಿಸುವ ಶಕ್ತಿ ನಮಗಿದೆ ಎನ್ನುವ ಹಿರಿಯ ಆಕ್ಮ ನಮ್ಮೆಲ್ಲರಿಗೆ ಇರಲು ಯಾವ ಅಭ್ಯಂತರವೂ ಇಲ್ಲ.

ಅವಕಾಶದ ಮಹತೋಮಹೀಯ ವ್ಯಾಪ್ತಿಯನ್ನೂ, ಪೃಥ್ವಿ, ಜೀವಿತಗಳ ಕ್ಷುದ್ರತೆಯನ್ನೂ ತೂಗಿ ನೋಡಿದರೆ, ಜ್ಯೋತಿಃಶಾಸ್ತ್ರದ ಅಭ್ಯಾಸದಿಂದ, ಮನವು ವಿಷಣ್ಣವೂ ಭಯಾಕುಲವೂ ಆಗುವ ಸಂಭವವಿದೆ. ಆದರೆ ಭೂತ ಮತ್ತು ಭವಿಷ್ಯಕಾಲಗಳನ್ನು ಅಳೆದಾಗ, ನಾವು ಪಡೆಯಬಹುದಾದ ವೈಭವದ ಹಗಲುಗನಸುಗಳು, ಅನಂತ ಆಶಾವಾದವನ್ನು ಹುಟ್ಟಿಸಬಹುದು.

ಮಾನವನ ಪಾಲಿಗೆ ವರ್ತಮಾನವು ಇನ್ನೂ ಉಷಃಕಾಲ. ಬೆಳಕಿನ ವೈಭವ ಬರಲಿದೆ. ನಮ್ಮ ವಂಶಜರೇ ಅದನ್ನು ಪಡೆಯಲಿದ್ದಾರೆ. ನಮಗಿಂತಲೂ ಎಷ್ಟೋ ಮುಂದುವರೆದ ನಮ್ಮ ವಂಶಜರು, ನಮ್ಮನ್ನು, ಜಗತ್ತಿನ ಇತಿಹಾಸದಲ್ಲಿ ಜ್ಞಾನದ ದೀವಿಗೆಯನ್ನು ಹೊತ್ತಿಸಿದ, ಅಜ್ಞಾನ, ಅಂಧಶ್ರದ್ಧೆಗಳ ಘೋರಾರಣ್ಯದಲ್ಲಿ ಏಳುತ್ತ ಬೀಳುತ್ತ, ತಪ್ಪು ಹಜ್ಜೆಯಿಡುತ್ತ, ನಿಸರ್ಗದ ಅನೇಕ ಶಕ್ತಿಗಳನ್ನು ವಿಜ್ಞಾನದ ಬಲದಿಂದ ಗೆದ್ದು, ಪೃಥ್ವಿಯನ್ನು ಮನುಕುಲದ ವಾಸಕ್ಕೆ ಯೋಗ್ಯಸ್ಥಾನವನ್ನಾಗಿ ಮಾಡಿದ ಪರಾಕ್ರಮಿ ಹಿರಿಯರೆಂದು ಗೌರವದಿಂದ ನೋಡುವರು. ಅರುಣೋದಯದ ಮುನ್ನಿನ ಮಬ್ಬುಗತ್ತಲೆಯಲ್ಲಿಯೇ ಎಡವರಿಸುವ ನಮಗೆ, ಪೂರಾ ಬೆಳಗು ಹರಿದ ಮೇಲೆ, ಆ ಬೆಳಗಿನಲ್ಲಿ ಈ ನಮ್ಮ ಪೃಥ್ವಿಯೇ ಹೇಗೆ ಕಾಣುವುದೆಂಬುದರ ಕಲ್ಪನೆಯೂ ಅಸಾಧ್ಯಪ್ರಾಯವಾದುದು. ಜ್ಯೋತಿಶ್ಶಾಸ್ತ್ರವು ಜನಾಂಗಕ್ಕೇ ಆಶೆಯ ಸಂದೇಶವನ್ನು ಬೀರುತ್ತಿದೆ. ಜೊತೆಗೆ ಪ್ರತಿಯೊಬ್ಬ ವ್ಯಕ್ತಿಯ ಮೇಲೆ ಹಿರಿಯ ಹೊಣೆಯನ್ನು ಹೊರಿಸುತ್ತದೆ. ದೀರ್ಘವಾದ ಭವಿಷ್ಯತ್ತಿಗಾಗಿ, ಹೊಸ ತಳಹದಿಯನ್ನು ಹಾಕುವ, ಹೊಸ ಯೋಜನೆಗಳನ್ನು ತಯಾರಿಸುವ ಹೊಣೆ ನಮ್ಮ ಮೇಲಿದೆ.



ಜಲಕನ್ನಿಕೆಯರು

(ಖಲೀಲ್ ಗಿಬ್ರಾನನ ಒಂದು ರೂಪಕ ಕಥೆ)

ಶ್ರೀ ಹ. ಸೋ. ಯೋಗೀಶ, ಧಾರವಾಡ

ಸೂರ್ಯೋದಯವಾಗುತ್ತಲಿದೆ. ವಿಶಾಲ ಸಾಗರ ಗಂಭೀರವಾಗಿದೆ. ಹವಳ-ಮುತ್ತುಗಳಿಗೆ ಆಗರವೆನಿಸುವ ಆ ಸಾಗರದಲ್ಲಿ, ತರುಣನೊಬ್ಬನ ಹೆಣ ತೇಲಾಡುತ್ತಲಿದೆ. ನಾಲ್ವರು ಜಲಕನ್ನಿಕೆಯರು ಆ ಹೆಣವನ್ನು ಸುತ್ತುವರಿದಿದ್ದಾರೆ. ಅವರ ಹೊಂಬಣ್ಣದ ಕೇಶರಾಶಿ ಮಿಂಚುತ್ತಲಿದೆ. ನೀಲವರ್ಣದ ವಿಕಸಿತನಯನಗಳು ಆ ತರುಣನ ಹೆಣವನ್ನೇ ದಿಟ್ಟಿಸುವುದರಲ್ಲಿವೆ. ತಮ್ಮತಮ್ಮೊಳಗೆ ಮಾತನಾಡುತ್ತಲಿದ್ದಾರೆ. ಅವರ ಮೆಲ್ಮಾತು ತರಂಗಗಳೊಂದಿಗೆ ತೇಲಿಕೊಂಡು ಬಂದು, ದಡದಲ್ಲಿ ನಿಂತಿರುವ ನನ್ನ ಕಿವಿಗಳಲ್ಲಿಯೂ ಕೇಳಿಯಕೊಡಗಿವೆ.

ಒಬ್ಬ ಜಲಕನ್ಯೆ ಹೇಳಿದಳು :

"ನಿನ್ನೆಯ ದಿನ, ಸಾಗರವು ರೌದ್ರರೂಪ ತಳೆದಾಗ, ಈ ತರುಣ ನಮ್ಮ ಜಗತ್ತನ್ನು ಪ್ರವೇಶಿಸಿದನು."

ಎರಡನೆಯಾಕೆ ನುಡಿದಳು :

"ಸಾಗರವು ರೌದ್ರರೂಪ ತಳೆದಿರಲಿಲ್ಲ. ದೈವಾಂಶಸಂಭೂತನೆಂದು ಮದೋನ್ಮತ್ತನಾಗಿರುವ ಮಾನವನು, ನಮ್ಮೊಂದಿಗೆ ಕದನ ಹೂಡಿದ್ದನು. ಸಾಗರವು ಕೆನ್ನೀರ ಬಣ್ಣ ಹೊಂದುವವರೆಗೂ ಆತನ ರಕ್ತವನ್ನು ಹೀರಲಾಗಿದೆ. ಆ ಹೋರಾಟದಲ್ಲಿ ಈ ಮಾನವ ಉಸಿರನ್ನು ಕಳೆದುಕೊಂಡಿದ್ದಾನೆ.

ಮೂರನೆಯಾಕೆ ಮಾತನಾಡಿದಳು :

"ಇಂತಹ ಕದನವನ್ನು ನಾನರಿಯೆ. ಆದರೆ ಮಾನವನು ಭೂಪ್ರಪಂಚವನ್ನು ಜಯಿಸಿದ ಬಳಿಕ, ಜಲಪ್ರಪಂಚವನ್ನೂ ಜಯಿಸಲು ನಿರ್ಧರಿಸಲು ನೀರ ಮೇಲೆ ತೇಲುವ ಉಪಕರಣವೊಂದನ್ನು ನಿರ್ಮಿಸಿದಾಗ, ಮಾನವನ ದುರಾಶೆಯನ್ನು ಕಂಡು ಸಾಗರಾಧಿಪತಿ ಸಿಟ್ಟಿಗೆದ್ದ. ಆಗ ಸಮ್ರಾಜೆಯನ ಮನವನ್ನು ಮೆಚ್ಚಿಸಲು ಬಲಿದಾನಕ್ಕಾರಂಭವಾಯಿತು. ಬಗೆಬಗೆಯ ಕಾಣಿಕೆಗಳನ್ನು ಸಲ್ಲಿಸಲು ತೊಡಗಿದ ಮಾನವ. ಈ ನಿರ್ಜೀವ ಕಲೇವರವೂ ನಮ್ಮ ಕಡಲ ದೊರೆಗಾಗಿ ಬಂದ ಒಂದು ಹೊಸತಾದ ಕಾಣಿಕೆ."

ಮತ್ತೊಬ್ಬಾಕೆ ಎಂದಳು :

"ಸಮುದ್ರರಾಜನ ವ್ಯಕ್ತಿತ್ವ ಎಷ್ಟೊಂದು ಹಿರಿಮೆಯಿಂದ ಕೂಡಿದುದಾದರೂ, ಆತನ ಹೃದಯ ತುಂಬ ಕಠಿಣವಾದುದು. ನಾನೇನಾದರೂ ಸಾಗರರಾಣಿಯಾಗಿದ್ದರೆ, ಈ ಬಗೆಯ ಬಲಿಯನ್ನು ಸ್ವೀಕರಿಸುತ್ತಿರಲಿಲ್ಲ....ಸರಿ! ಬನ್ನಿ, ಇದೀಗ ಈ ಹೊಸಕಾಣಿಕೆಯನ್ನು ಪರೀಕ್ಷಿಸೋಣ. ನಮ್ಮೀ ಪರೀಕ್ಷೆಯಿಂದ ಮಾನವನ ವಿಷಯದಲ್ಲಿ ಹೆಚ್ಚಿನ ಅರಿವನ್ನು ಪಡೆಯಬಹುದು ನಾವು!"

ತರುಣನ ಶೋಧನೆ ನಡೆಯಿತು. ಆವನ ಉಡುಗೆಯಲ್ಲಿ ಓಲೆಯೊಂದು ದೊರೆಯಿತು. ಆದನ್ನು ತೆಗೆದುಕೊಂಡು ಒಬ್ಬ ಜಲಕನ್ಯೆ ಓದಲು ಮೊದಲುಮಾಡಿದಳು :

"ಪ್ರಿಯ ಆತ್ಮಾ !

ಕರಾಳ ರಾತ್ರಿ ಮತ್ತೆ ಆವರಿಸಿದೆ. ಬರೀ ಕಂಬನಿ ಮಿಡಿಯುತ್ತಲಿದ್ದೇನೆ. ಇದರಿಂದಲೇ ನನಗೆ ಸಮಾಧಾನ. ರಣರಂಗದಿಂದ ನೀನು ಮರಳುವೆಯೆಂಬ ಆಶೆ ನನ್ನನ್ನು ಸಂತಯಿಸುತ್ತದೆ. ಅಗಲುವ ಮುನ್ನ ನೀನಾಡಿದ ಮಾತುಗಳನ್ನು ಮರೆಯಲಾರೆ: 'ಪ್ರತಿಯೊಂದು ಪ್ರಾಣಿಯ ಬಳಿಯೂ ಕಂಬನಿಯ ಕಡಲು ಇರುತ್ತದೆ. ಒಂದಿಲ್ಲೊಂದು ದಿನ ಅದು ಕೋಡಿಯೊಡೆದು ಹರಿಯಲೆ ಬೇಕು!'

ಓ, ಪ್ರಿಯತಮಾ, ಏನು ಹೇಳಲಿ? ಕಂಗೆಟ್ಟು ಹೋಗಿದ್ದೇನೆ. ನನ್ನ ಉಸಿರೇ ಇದೀಗ ಓಲೆಯಾಗಿ ಉರುಳತ್ತಲಿದೆ. ಅಗಲಿಕೆಯ ಮೂಲಕ ಆತ್ಮ ಬಳಲುತ್ತಿದೆ. ನೋವನ್ನು ನಲಿವನ್ನಾಗಿಯೂ ದುಃಖವನ್ನು ಸುಖವನ್ನಾಗಿಯೂ ಪರಿವರ್ತಿಸುವ ಪ್ರೇಮವು ನನ್ನನ್ನು ಸಂತವಿಡುತ್ತಲಿದೆ. ಒಲವು ನಮ್ಮಿಬ್ಬರನ್ನೂ ಸೆಳೆದಾಗ, ದೈವಾನುಗ್ರಹದಿಂದ ಎರಡೂ ಎದೆಗಳು ಒಂದುಗೂಡುವ ದಿನವನ್ನೇ ಎದುರು ನೋಡುತ್ತಿದ್ದೆವು. ಆದರೆ ಅಷ್ಟರಲ್ಲಿಯೆ ರಣಮಾರಿಯ ಕರೆಯ ವಿಕಾರಸ್ವರ ಕೇಳಬಂದಿತು. ಕರ್ತವ್ಯ ಪರವಶನಾಗಿ ನೀನು, ಆ ಕರೆಗೆ ಓ ಕೊಟ್ಟೆ.

ಪ್ರೇಮಿಗಳನ್ನು ಅಗಲಿಸುವ, ಸುಮಂಗಲೆಯರನ್ನು ಅಮಂಗಲೆಯರನ್ನಾಗಿಸುವ, ಚಿಕ್ಕಮಕ್ಕಳನ್ನು ದಿಕ್ಕಿಲ್ಲದವರನ್ನಾಗಿ ಮಾಡುವ ಯುದ್ಧವಿದು ಎಂತಹ ಕರ್ತವ್ಯ? ಸಾಮ್ರಾಜ್ಯಗಳನ್ನು ಸ್ಮಶಾನಗಳನ್ನಾಗಿ ಪರಿವರ್ತಿಸುವ ಈ ಕಾದಾಟ, ದೇಶಭಕ್ತಿಯ ಲಕ್ಷಣವೆ? ತಮ್ಮನ್ನು ಕಾಲಕಸಕ್ಕಿಂತ ಕೀಳಾಗಿ ಕಾಣುವ ಈ ದಬ್ಬಾಳಿಕೆಗಾರರ ಕೀರ್ತಿಗಾಗಿ ಬಡಜನರು ದುಡಿಯಬೇಕಂತೆ! ಇದನ್ನು ಕರ್ತವ್ಯವೆನ್ನಬಹುದೆ? ಜನಾಂಗಗಳ ಶಾಂತಿಯನ್ನು ಕರ್ತವ್ಯ ಕದಡುವ ಹಾಗಿದ್ದರೆ, ಜನಜೀವನದ ಸುಖವನ್ನು ದೇಶಸೇವೆ ಧ್ವಂಸಮಾಡುವುದಾದರೆ, ಅದಕ್ಕೆ ಇದೋ ದೀರ್ಘನಮಸ್ಕಾರ!

ಬೇಡ, ಬೇಡ! ಓ, ಒಲವೇ, ನನ್ನ ಮಾತನ್ನು ಕೇಳಬೇಡ! ನಿನ್ನ ದೇಶಕ್ಕೆ ನೀನು ವಿಧೇಯನಾಗಿರು! ಅಗಲಿಕೆ-ಏಕಾಕಿತನಗಳಿಂದ ಬಳಲಿ ಬಸವಳಿಯುತ್ತಿರುವ—ಪ್ರೇಮದ ಮೂಲಕ ಕಣ್ಣು ಕಾಣದವಳಾಗಿರುವ— ಈ ನಲ್ಲಳ ಮಾತನ್ನು ಲೆಕ್ಕಿಸಬೇಡ! ಈ ಜನ್ಮದಲ್ಲಿ ಪ್ರೇಮವು ನಿನ್ನನ್ನು ನನ್ನೆಡೆಗೆ ತಾರದಿದ್ದಲ್ಲಿ, ಮುಂದಣ ಜನ್ಮದಲ್ಲಾದರೂ ನಮ್ಮಿಬ್ಬರನ್ನು ಒಂದು ಗೂಡಿಸಲಿ!

ಎಂದೆಂದೂ ನಿಮ್ಮವಳೇ"

ಓಲೆಯನ್ನೋದಿ ಮತ್ತೆ ತರುಣನ ಉಡುಗೆಯಲ್ಲಿಯೆ ಸೇರಿಸಿದಳು ಜಲಕನ್ನಿಕೆ. ನಾಲ್ವರ ಎದೆಗಳನ್ನೂ ದುಃಖಮೌನ ಆವರಿಸಿತ್ತು. ಒಯ್ಯನೊಯ್ಯನೆ ಈಜಿ ಮುಂದುವರಿದರು. ಸತ್ತ ಸೈನಿಕನಿಂದ ದೂರ ತೇಲಿ ಹೋದಾಗ, ನಿಟ್ಟುಸಿರೊಂದು ಹೊಮ್ಮಿಬಂದಿತು: 'ಸಾಗರಾಧಿಪತಿಯ ಕ್ರೌರ್ಯವನ್ನೂ ಮೀರಿಸಬಲ್ಲದು ಮಾನವನ ಕಲ್ಲೆದೆಯ ಕ್ರೌರ್ಯ!' ನಿಟ್ಟುಸಿರೊಂದಿಗೆ ಕೇಳಿತೀ ನುಡಿ.

ಮೀಸೆಯ ಕಂಸ

(ಒಂದು ಹರಟೆ)

ಶ್ರೀ. ಎನ್. ಕೆ. ಕುಲಕರ್ಣಿ ಎಂ. ಎ., ಬಿ. ಟಿ. ಧಾರವಾಡ

★

ಇಂದಿನ ಕಾಲದಲ್ಲಿ ಮೀಸೆಯೊಂದು ಮಹಾ ಸಮಸ್ಯೆ-
ಯನ್ನೇ ಉಂಟುಮಾಡಿದೆ. ಗಂಡುಸೆನಿಸಿಕೊಳ್ಳು-
ವುದಕ್ಕೆ ಮೀಸೆಯ ಅಗತ್ಯವಿದೆಯಾದರೂ,
ಅವುಗಳನ್ನು ಯಾವುದೇ ರೂಪದಿಂದ
ಮುಖದಮೇಲೆ ಇರಿಸಿಕೊಂಡರೂ,
ಒಂದೊಂದು ಬಗೆಯ ಅನನುಕೂಲ;
ಒಂದೊಂದು ಬಗೆಯ ನಗೆಗೇಡು !

★

"To be or not to be" ಎಂಬ ಕ್ಷಣಿಕ ಪ್ರಶ್ನೆ ಹ್ಯಾಮ್ಲೆಟ್ಟನಿಗಾಗಿದ್ದರೆ, ನನಗೋ ಆಜೀವ ಘೋರ ಪ್ರಶ್ನೆ !— 'To keep or not to keep', ಮೀಸೆಗಳನ್ನು ಇಡಬೇಕೋ ಬೇಡವೋ— ಎಂದು. ಮೀಸೆಹೊತ್ತವನು ಗಂಡುಸೆಂದು ಹಳೆಯ ಮಾತನ್ನು ಇಟ್ಟುಕೊಂಡರೆ, ಹೊಸ ಫ್ಯಾಶನ್ನು ತದ್ವಿರುದ್ಧವಾಗಿರುವುದು. ಫ್ಯಾಶನ್ನಿನ ಪ್ರವಾಹದಗುಂಟ ಹೋಗಿ ಒಮ್ಮೆ ಮೀಸೆ ತೆಗೆದಾಗ, ನಮ್ಮ ತೀರ್ಥರೂಪರು— ನನ್ನ ಮಗ್ಗುಲ ಮುಡಚಿಬಿಟ್ಟರು; 'ಅಯೋಗ್ಯಾ ಇನ್ನೂ ನಾನು ಜೀವಂತ ಇದ್ದಾಗಲೇ ಈ ಅವಲಕ್ಷಣವೇ !' ಎಂದು. 'ಗಂಡುಸಿಗೆ ಮೀಸೆ ಬೇಕಲ್ಲವೆ ? ಆದರೆ ನಮಗೂ ಏಕೆ ಬೇಡ ?' ಎಂಬ ಸಮತಾಪಟುಗಳಾದ ಅನೇಕ ಹೆಂಗಳೆಯರ ಮುಖದ ಮೇಲೂ ಇತ್ತೀಚೆಗೆ ನಾನು ಕರಿಯ ಎಳಚಿಗುರುಗಳನ್ನು ಕಂಡಿದ್ದೇನೆ. ಹೀಗೆಂದಾಗ ಒಂದು ತಮಾಷೆ ನೆನಪಾಗುತ್ತದೆ ; 'ಮೀಸೆಯೊಂದಿಲ್ಲದಿದ್ದರೆ ನೀನು ನನ್ನ ಹೆಂಡತಿಯಂತೆ ಕಾಣಬಹುದಿತ್ತು '— ಎಂದು ಒಬ್ಬನೆಂದಾಗ, ಅವನ ಮಿತ್ರನು 'ನನಗೆಲ್ಲಿವೆ ಮೀಸೆ ?' ಎಂದನಂತೆ. 'ಮೀಸೆ ಇದ್ದುದು ನಿನಗಲ್ಲ, ನಮ್ಮವಳಿಗೆ' ಎಂದು ಬಂತಂತೆ ಉತ್ತರ. 'ಮೀಸೆ ಹೊತ್ತ ಗಂಡುಸೂ ಬೇಡ. ಮೀಸೆಯಿಲ್ಲದ ಹೆಂಗುಸೂ ಬೇಡ,' ಎಂದು ಹಿಟ್ಲರನಂತೆ ಎಷ್ಟೋ ಸಲ ಅರೆಮೀಸೆಯಿಟ್ಟು ನೋಡಿದೆ. ಇದರಿಂದ ನನಗೆ ಕ್ಷಿಪ್ರದಲ್ಲಿಯೆ ಮೀಸೆ ಕಡಿಯುವುದೊಂದು ಚಟವೇ ಸೇರಿಕೊಂಡಿತು. ಸಾಲದುದಕ್ಕೆ ನನ್ನ ಚಿಕ್ಕ ತಮ್ಮ ಯಾವಾಗಲೂ ಚೇಷ್ಟೆ ಮಾಡಬೇಕು: 'ಅಣ್ಣಾನ ಮೂಗಿನ ಕೆಳಗೆ ಗುಂಗಾಡು ಮನೆ ಮಾಡಿದೆ,' ಅಂತ ! ಆದರೆ ಹಿಟ್ಲರನ ತರುವಾಯ ಅವನ ಮೀಸೆಯೂ ನಾಶವಾಗಿ ಹೋಯಿತು. ಕೆಲವು ಸಿನಿಮಾ ಹಿರೋಜ್ ಎಂದರೆ ವಿಶೇಷವಾಗಿ Stunt hero ಗಳ ಫ್ಯಾಶನ್ನು ಬಳಕೆಗೆ ಬಂತು; ಕಟವಾಯುವರೆಗೂ ಸಣ್ಣ ರೇಖೆಯಾಗಿ ಮೀಸೆ ಬಿಡುವುದು, ಬಿದಿಗೆಯ ಚಂದ್ರನಂತೆ. ಈ ರೀತಿ ಕೆಲವರಲ್ಲಿ ತದಿಗೆ-ಚವತಿಯ ಚಂದ್ರರಂತೆ ಸ್ವಲ್ಪ ದಪ್ಪಗಾಗಿಯೂ ಕಂಡುಬರುತ್ತಿತ್ತು. ಈ ಫ್ಯಾಶನ್ನು ಇನ್ನೂ ಅನವಸ್ಥೆಗೀಡಾಗಿರದಿದ್ದರೂ, ನನಗೇಕೋ ಇನ್ನು ಅಷ್ಟೊಂದು ಹಿಡಿಸಲಿಲ್ಲ. ಇಂತಹ ಮೀಸೆ ಬಿಟ್ಟವರು, ಮುಂಬಯಿಯಂತಹ ಮಹಾ ಪಟ್ಟಣಗಳಲ್ಲಿ ಕಿಸೆಕತ್ತರಿಗಳಾಗಿರುತ್ತಾರೆ— ಎಂದು ನನ್ನ ಭಾವನೆ ಅಂತೆಯೇ ಸಜ್ಜನನಾದ ನನಗೆ ಇಂತಹ ಶಿಸ್ತು ಸೇರಲಿಲ್ಲ. ಮೀಸೆಯನ್ನು ಪೂರ್ಣ ತೆಗೆಯದೆ ಇನ್ನೆಷ್ಟು ವಿಧವಾಗಿ ಮೇಲ್ತುಟಿಯ ಮೇಲೆ ಇಡುವುದಕ್ಕೆ ಬರುತ್ತದೆಯೊ ಎಂಬುದಕ್ಕೆ ದೊಡ್ಡದೊಂದು ಸಂಶೋಧನವನ್ನೆ ನಡೆಯಿಸಿದೆ. ಇತಿಹಾಸ ಕಾಲದಿಂದ ಮೀಸೆಯ ಬೆಳವಣಿಗೆಯನ್ನು ಅಭ್ಯಾಸ ಮಾಡತೊಡಗಿದೆ. ಕರ್ನಾಟಕ-ಮಹಾರಾಷ್ಟ್ರದ ವೀರನಾಯಕರ ಕಲ್ಲೀಮೀಸೆ ಒಂದಿಷ್ಟು ಮನಸ್ಸು ಹಿಡಿಯಿತು. ನಮ್ಮೂರಲ್ಲಿ ಒಬ್ಬ ಅಧಿಕಾರಿ ಇದೇ ತರದ ಮೀಸೆ ಇಟ್ಟಿದ್ದರು ! ಅವರು ಸಂತೆ ಪೇಟೆ ಮಾಡುವಾಗ, ಎರಡು ತತ್ತಿನ ಬುಟ್ಟಿಗಳನ್ನು ಕಲ್ಲೀಮೀಸೆಗಳ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ.ವಿ. ಪಂಡಿತರ
ಮನೋಹರ { ನೀಲಿ } ಹೇರ್ ಆಯಿಲ್
ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.
ಗರ್ಭಾಶಯಕ್ಕೆ { ಜೀವಿನಿ } ಟಾನಿಕ್.
ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ ; ಮತ್ತು ಔಷಧಸಾಧ್ಯಬಂಜೆತನಕ್ಕೆ ಸಿದ್ಧಯೋಗ.
ಅಜೀರ್ಣ ವಿಕಾರಗಳಿಗೆ { ಪಂಚವಟಿ } ರಾಮಬಾಣ.
ಸದ್ವೈದ್ಯ ಶಾಲಾ, ನಂಜನಗೂಡು.
'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ
ಕಾರ್ಖಾನೆ.

ಕುಟಜಾರಿಷ್ಟ

ಆಮಾಂಶ-ಸಂಗ್ರಹಣಿಗಳಿಗೆ.

●

ಕಾಸಶ್ವಾಸಾರಿ

ದಮ್ಮು-ಕೆಮ್ಮುಗಳಿಗೆ.

ಎಲ್ಲ ಬಗೆಯ ಆಯುರ್ವೇದ ಔಷಧಗಳಿಗಾಗಿ ಬರೆಯಿರಿ :

卐

ದಿ ನೂತನ

ಆಯುರ್ವೇದ ಕಾರ್ಯಾಲಯ ಲಿ.

ವಿಜಾಪುರ.

ಇಕ್ಕೆಲದಲ್ಲೂ ಇಟ್ಟುಕೊಂಡು ಸಹಜವಾಗಿ ನಡೆದುಕೊಂಡು ಹೋಗುತ್ತಿದ್ದರಂತೆ. ಆದರೆ ನಾನ, ಬಡಪಾಯಿಯಾದ ನನಗೆ ಬುಟ್ಟಿ ಹೊರುವುದಿರಲಿ, ಕಲ್ಲಿಮೀಸೆಗಳನ್ನು ಹೊರುವ ತ್ರಾಣವಾದರೂ ಬೇಕಲ್ಲವೆ ? ಅಂತೂ ಕಲ್ಲಿಮೀಸೆಗೂ ಸಂಚಕಾರ ಬಂತು. ಆಮೇಲೆ ನಮ್ಮ ನೆರೆಮನೆಯ 'ಮೀಸೀಮಾವಾ'ನ ನೆನಪು ಬಂತು. 'ಮೀಸೀಮಾವಾ'ನ ವೈಶಿಷ್ಟ್ಯವೆಂದರೆ, ಮೀಸೆಯನ್ನು ಅಷ್ಟಾಗಿ ಬೆಳೆಯಿಸದೆ ಅಸಾಧ್ಯ ಉದ್ದವಾಗಿ ಬಿಟ್ಟಿದ್ದರು. ಅವರಿಗೆ ಬಾಯಿಯೆಂಬುದೊಂದಿದೆಯೆಂಬುದು ಎಷ್ಟೋ ಜನರಿಗೆ ಗೊತ್ತಿರಲಿಲ್ಲ. ಬಾಯಿತೆರೆದಾಗ ಕೂಡ ಬಾಯೊಳಗೂ ಮೀಸೆಗಳೆ ಬೆಳೆದಂತೆ—ದಟ್ಟಡವಿಯಂತೆ— ತೋರಬೇಕು. ಮೀಸೀಮಾವಾನನ್ನು ಚಹಾ ಕುಡಿಯುವಾಗ ನೋಡಬೇಕು. ಮೀಸೆಯೆಲ್ಲಾ ಸಿಂಹದ ಆಯಾಲಿನಂತೆ ಬಸಿಯಲ್ಲಿ ಹಾಯಾಗಿ ಈಸಾಡುತ್ತಿರುವಾಗ, ಚಹವು ಮೀಸೆಗಳಿಂದ ಫಿಲ್ಟರ್ ಆಗಿ ಒಳಗೆ ಹೋಗುತ್ತಿತ್ತು. ಮಾವಾನ ಹೆಂಡತಿ ಮಾವಿಾ, ಚಹ ಸೋಸುವುದೇ ಇಲ್ಲ; ಹಾಗೇ ಚಹ ಮಾಡಿಕೊಟ್ಟುಬಿಡುತ್ತಾರೆ. ಮಾವಾನ ಮೀಸೆಯ ಸಂದುಗಳೊಳಗಿಂದ ಚಹಾ ಸೋಸಿಹೋಗುತ್ತವೆ. ಚಹಾಪುಡಿಯೆಲ್ಲಾ ಮೀಸೆಗಳಿಗೆ ಅಂಟಿಕೊಂಡಿರುತ್ತದೆ. ಆ ಮೇಲೆ 'ಸವಡಿ'ಯ ಪ್ರಕಾರ ಪುಡಿಯನ್ನು ಕೊಡವಿಕೊಳ್ಳುತ್ತಾರೆ ಎನ್ನುತ್ತಿದ್ದರು. ನೆರೆಹೊರೆಯ ಜನ ಒಂದು ದಿನ, ಮೀಸೀಮಾವಾನ ಮೊಮ್ಮಗಳು ಒಂದು ವರುಷದ 'ಬೇಬಿ'— ಮಾವಾನ ಮೀಸೆಗೆ ಜೋತುಬಿದ್ದಾಗ ಮಾವಾ ಒದ್ದಾಡಿದ ಪರಿಯನ್ನೂ, ಅದನ್ನು ಕಂಡು ಬೇಬಿ ಕುಣಿದಾಡಿದ ಬಗೆಯನ್ನೂ ಇನ್ನೂ ಕತೆಮಾಡಿ ಹೇಳುತ್ತಾರೆ. ಸರಿ, ಮೀಸೀಮಾವಾನಂತೆ ನಾನು ಮೀಸೆಬಿಟ್ಟರೆ, ನನ್ನ ಮೇಲ್ದುಟಿಯೆ ಹರಿದುಬೀಳುವ ಫಜೀತಿಯೆಂದು ಆ ವಿಚಾರವನ್ನೂ ಬಿಟ್ಟುದಾಯಿತು. ಇದೂ ಅಲ್ಲದೆ ಸೂಜಿಮೊನೆಯ ಮೀಸೆ, ದಬ್ಬಣಕಾಟೆಯ ಮೀಸೆ, ಜೊಂಡುಮೀಸೆ, ಜೊಂಡಿಗ ಮೀಸೆ, ಪಕ್ಷಿಮೀಸೆ, ಹಲ್ಲಿಯ ಮೀಸೆ, ಸೊಣದ ಮೀಸೆ, ಕುದುರೆ ಸಾಲಿನ ಮೀಸೆ, ಇಂದ್ರಧನುಸ್ಸಿನ ಮೀಸೆ, ಶಿವಧನುಸ್ಸಿನ ಮೀಸೆ, ಜೋಕಾಲಿಯ ಮೀಸೆ, ಗೆದ್ದಲ ಮೀಸೆ, ಗುದ್ದಲಿ ಮೀಸೆ, ರಂಟೆಯಮೀಸೆ, ಕುಂಟೆಯ ಮೀಸೆ, ಕುಡುಗೋಲಿನ ಮೀಸೆ, ಮೀಸೀಕಂಸಿನ ಮೀಸೆ, ಹೀಗೆ ಎಲ್ಲಾ ಎಲ್ಲಾ ಪ್ರಕಾರದ ಮೀಸೆಗಳನ್ನೂ ಪ್ರಯೋಗಮಾಡಿ ನೋಡಿದೆ. ನನಗೊಂದೂ ಪ್ರಕಾರದ ಮೀಸೆ ಹಿಡಿಯಲಿಲ್ಲ. ನಾನು ಇಷ್ಟೆಲ್ಲಾ ಪ್ರಯೋಗಮಾಡಿ, ಸತ್ವದ, ಸೌಂದರ್ಯದ ನೆಲೆ-ಬೆಲೆಗಳನ್ನಿನ್ನೂ ಕಾಣದೆ ಹೆಣಗಾಡುತ್ತಿರುವಾಗ, ಸುದೈವದಿಂದಲೊ ದುರ್ದೈವದಿಂದಲೊ ನಮ್ಮ ತೀರ್ಥರೂಪರು ನನ್ನ ಮೀಸೆಗೆ ಲೈಸನ್ಸ್ ದಯಪಾಲಿಸಿ ಬಿಟ್ಟರು! ತಿಳಿಯಿತಲ್ಲವೆ ? ಸರಿ, ಅಂದಿನಿಂದ ಮೀಸೆಯ ಕಂಸನಾಗಿ ಮೀಸೆಗೆ ಸಂಪೂರ್ಣ ಟ್ರಾಕ್ಟರ್ ಹಚ್ಚಿಬಿಟ್ಟೆ. ಈಗ ಸುಖವಾಗಿದ್ದೇನೆ. ನನ್ನ ಮೀಸೆಯ ಜೊತೆಗೆ ನಾನು ನಡೆಸಿದ ಪ್ರಯೋಗಗಳೆಂದರೆ ಮಾನವ ಕುಲದ ಮೀಸೆಯ ಇತಿಹಾಸದ ಒಂದು ಸುವರ್ಣ ಪುಟವಾಗಿದೆಯೆಂದರೆ, ಯಾರೂ ಇದು ಅತಿಶಯೋಕ್ತಿಯೆಂದು ಕರೆಯಲಾರರು. *

---

* ಧಾರವಾಡ ಬಾನುಲಿ ಕೇಂದ್ರದಿಂದ ಅಕ್ಟೋಬರ್ ತಿಂಗಳಿನ 'ಕಾಮನ ಬಿಲ್ಲಿ'ನಲ್ಲಿ ಬಿತ್ತರಿಸಲ್ಪಟ್ಟುದು. ಸಂ. ಜ.



ನಾನು ಕಂಡ ನಾಡು

(ಪ್ರವಾಸ ಪ್ರಬಂಧ)

ಶ್ರೀ. ಮಿರ್ಜಿ ಅಣ್ಣಾರಾಯರು, ಉಗಾರ

★

(೧೦) ಬನಾರಸದಲ್ಲಿಯ ನಮ್ಮ ಭಾವ, ಭಂಗಿ

ಕಾಶೀಕ್ಷೇತ್ರ ತನ್ನ ಪ್ರಾಚೀನ ಮಹಿಮೆಯಿಂದ, ಭಾರತದ ಯಾತ್ರಿಕರನ್ನು ದೂರದಿಂದ ಆಕರ್ಷಿಸುವುದು, ಆದರೆ ಹತ್ತಿರ ಹೋದಾಗ ಅಲ್ಲಿಯ ಇಂದಿನ ನಾಗರಿಕತೆಯ ಭೂತ ಭೀತಿಯನ್ನು ಹುಟ್ಟಿಸುತ್ತದೆ. ಆದರೂ ಅಲ್ಲಿ ವಿಶ್ವೇಶ್ವರನಿದ್ದಾನೆ; ವಿಶ್ವವಿದ್ಯಾನಿಲಯವಿದೆ.

卐

ಸುಮಾರು ಸಂಜೆಯ ಐದು ಗಂಟೆಯಾಗಿತ್ತು. ಮೋಡಗಳ ಮರೆಯಲ್ಲಿರುವ ರವಿಯ ಕಿರಣಗಳು ತೂರಿ ಹೊರಗೆ ಬರುತ್ತಿದ್ದುವು. ಅವುಗಳ ಸ್ವರ್ಣವರ್ಣ! ಅದರಿಂದ ಭುವಿಯು ಸುವರ್ಣಲೋಕದಂತೆ ಮೋಹಕವಾಗಿದ್ದಿತು. ಭೋಗಭೂಮಿಯು ನೆನಪನ್ನು ತರುತ್ತಿದ್ದಿತು. ದೃಷ್ಟಿಹರಿದಲ್ಲೆಲ್ಲ ಸೌಂದರ್ಯದ ಸವಿಯೂಟವನ್ನುಂಡು ನಲಿಯುತ್ತಿದ್ದಿತು. ಮನಸ್ಸು ಇಹಲೋಕವನ್ನು ಬಿಡು ಎಲ್ಲೆಲ್ಲಿಯೋ ವಿಹರಿಸುವುದು, ಮೇಲೆ ಮೇಲೆ ಮೇಲಕ್ಕೇರುವುದು. ಮೇಲಕ್ಕೇರಿದ ಮನಸ್ಸಿನೊಡನೆಯೇ ನ್ಮೈಯೂ ಮೇಲಕ್ಕೆ ಹೋದುದು, ನಮ್ಮ ಉಗಿಬಂಡಿಯು ಗಂಗಾನದಿಯ ಸೇತುವೆಯ ಮೇಲೆ ಬಂದಾಗ ಅರಿವಾಯಿತು!

ಕೆಳಗೆ ವಿಸ್ತಾರವಾದ ಗಂಗಾನದಿಯ ಪಾತ್ರ. ಭಾರತೀಯರ ವಿಶಾಲಹೃದಯದ ಪ್ರತೀಕ. ಎದುರಿಗೆ ದೃಷ್ಟಿ ಹರಿಯುವ ವರೆಗೂ ಹಬ್ಬಿದ ಬನಾರಸ ಪಟ್ಟಣ, ಜಗತ್ತಿನಲ್ಲಿ ಇದೊಂದೇ ನಗರವಂತೆ: ಉದ್ದಕ್ಕೂ ಹೀಗೆ ನದಿಯ ತೀರದಗುಂಟ ಹಬ್ಬಿದುದು. ಎತ್ತರವಾದ— ನಾಲ್ಕೈದು ಅಂತಸ್ತುಗಳುಳ್ಳ— ಮನೆಗಳು ಸಾಲುಸಾಲಾಗಿ ಅಡಕಿಲು ಏರಿಸಿದಂತೆ, ಏಳೆಂಟು ಮೈಲುಗಳ ವರೆಗೆ ಹಬ್ಬಿದ ದೃಶ್ಯ ತುಂಬ ಮನೋಹರವಾದುದು ಎಲ್ಲ ಮನೆಗಳ ಮೆಟ್ಟುಗಲ್ಲುಗಳನ್ನೂ ಗಂಗೆ ದಿನಾಲು ತೊಳೆಯುತ್ತಿರುತ್ತಾಳೆ. ಅದರಲ್ಲಿಯೇ ಗುಡಿ, ಗೋಪುರ, ಧ್ವಜ ಪತಾಕೆಗಳ ಸಾಲು! ಧೂಪದ ಹೊಗೆ! ದೀಪಗಳ ಕಾಂತಿ! ಕೆಳಗೆ ಉದ್ದಕ್ಕೂ ನದಿಯ ಘಟ್ಟದ ಮೇಲೆ ಹಬ್ಬಿರುವ ಜನ ಜಂಗುಳಿ. ಅಲ್ಲದೆ ನದಿಯ ನೀರಿನ ಮೇಲೆಲ್ಲ ಜನ! ಚಿಕ್ಕ ಚಿಕ್ಕ ನಾವು, ದೋಣಿ! ಎಲ್ಲವೂ ಜನರನ್ನು ತುಂಬಿಕೊಂಡು ಅತ್ತಿಂದಿತ್ತ ಇತ್ತಿಂದತ್ತ ವಿಹರಿಸುತ್ತಿವೆ. ಕೇಕೆ ಹಾಕುವ ಅಂಬಿಗರು! ರುಮಾಲು ತೆಗೆದು ಆನಂದದಿಂದ ಬೀಸಾಡುವ ಪಯಣಿಗರು! ಹೆಂಗುಸರು! ಮಕ್ಕಳು! ದೂರದಿಂದ ಕೇಳಬರುವ ಗಂಟೆಯ ನಾದ.... ಎಲ್ಲವೂ ವಿಶ್ವೇಶ್ವರನ ವಿಶ್ವರೂಪದರ್ಶನವೇ!

ಆ ದಿವ್ಯದರ್ಶನದಿಂದ ಪುಳಕಿತಗೊಂಡ ನಾನು, ಒಂದು ಕ್ಷಣ ಕಣ್ಣು ಮುಚ್ಚಿದೆ. ಬನಾರಸ— ವಾರಣಾಸಿಯ ಹಿಂದಿನ ಇಂದಿನ ದಿನಗಳನ್ನೆಲ್ಲ ಸ್ಮರಿಸಿದೆ. ಕಾಶೀ ದೇಶದ ರಾಜಧಾನಿಯಿದು. ಇಬ್ಬರು ತೀರ್ಥಂಕರರ ಜನ್ಮಭೂಮಿ ಸುಪಾರ್ಶ್ವ ಮತ್ತು ಪಾರ್ಶ್ವನಾಥ. ಮಹಾಕವಿ ವೃಂದಾವನ ಇಲ್ಲಿಯೇ ನಿಂತು, ತನ್ನ ಕಾವ್ಯಗಳನ್ನು ರಚಿಸಿದ. ಜೈನಧರ್ಮದ ಸ್ಯಾದ್ವಾದ ಮಹಾವಿದ್ಯಾಲಯ, ಭಾರತಭೂಷಣ ಮಾಳವೀಯ ಅವರ ತಪಸ್ಸಿನ ಫಲವಾದ ಕಾಶೀ ವಿಶ್ವವಿದ್ಯಾನಿಲಯ. ಆಧ್ಯಾತ್ಮ ವಾತಾವರಣ ಎಲ್ಲವೂ ಮನಸ್ಸನ್ನು ಸೆಳೆಯ ತೊಡಗಿದುವು. 'ಕೂಲೀ ಕೂಲೀ' ಎಂಬ ಕರ್ಕಶಧ್ವನಿಯು ಕಿವಿಯನ್ನು ಹೊಕ್ಕೊಡನೆಯೇ, ಕನಸಿನಿಂದ ಎಚ್ಚತ್ತು ಹೊರಗೆ ನೋಡಿದೆ. ಅದೇ ನಮ್ಮ ರೈಲು ಬನಾರಸ ನಿಲ್ಮನೆಯಲ್ಲಿ ಬಂದು ನಿಂತಿದ್ದಿತು!

ಕೆಳಗೆ ಇಳಿದೊಡನೆಯೇ ನಮಗೆ ಜೇಬುಗಳ್ಳರ ನೆನಪು ಬಂದಿತು. ಹಿರಿಯರು ನನಗೆ ಎಚ್ಚರಿಕೆಯನ್ನು ಕೊಟ್ಟರು! ಅದರಲ್ಲೂ ಪೂಜಾರಿಗಳ ಎಳೆದಾಟ, ನುಗ್ಗಾಟ, ಕಚ್ಚಾಟಗಳಿಂದ ಪಾರಾಗಿ ಹೊರಗೆ ಬರಬೇಕಾದರೆ ಸಾಕುಬೇಕಾಗಿ ಹೋಯಿತು. ಅದೊಂದು ಭಾರತಯುದ್ಧದ ಪ್ರಸಂಗವೇ! ಎದುರಿಗೆಲ್ಲ ಆಪ್ತಬಂಧುಗಳೇ. ಎಲ್ಲರೂ ನಮ್ಮ ಆತಿಥ್ಯಕ್ಕಾಗಿ ಮೇಲೇರಿ ಬರುವವರೇ, ಅವರ ವಿನಯ, ಆದರ, ಸೌಜನ್ಯ, ಜ್ಞಾನ ಇವುಗಳನ್ನೆಲ್ಲ ಕಂಡೂ ಕೇಳಿಯೂ ಧಿಕ್ಕರಿಸುವ ಎದೆಗಾರಿಕೆ, ಅರ್ಜುನನಂತಹ ಏಕೈಕ ವೀರನಿಗೂ ಅಸಾಧ್ಯವಾದುದು! ಒಂದು ಕ್ಷಣ ನಾವೂ ದಿಙ್ಮೂಢರಾಗಿ ನಿಲ್ಲುವೆವು, ನಿಂತೆವು, ಕರ್ತವ್ಯಾಕರ್ತವ್ಯದ ವಿವೇಕವೇ ಮರೆಯಾದಂತಾಗುವುದು. ಅದರಲ್ಲೂ ಟಾಂಗಾ, ರಿಕ್ಷಾದವರ ಸಹಕಾರವು ಕೂಡ ಅವರಿಗೇ ಎಂದ ಮೇಲೆ, ಅಪರಿಚಿತರಾದ ಪ್ರಯಾಣಿಕರ ಗೋಳನ್ನೇ ಕೇಳತೀರದು. ಅಯ್ಯೋ! ಇಲ್ಲೇಕೆ ಬಂದೆವು!—ಎನ್ನಿಸಿಬಿಡುವುದು

ಅದರಲ್ಲೂ ಸೂರ್ಯಾಸ್ತದ ಸಮಯ. ಮುಂಗತ್ತಲೆಯ ದಿನಗಳವು. ಅಪರಿಚಿತ ಊರು. ಮೋಸದ ತವರ್ಮನೆ. ಇಳಿದುಕೊಳ್ಳುವ ಸ್ಥಳದ ಗೊತ್ತುಗುರಿಗಳಿಲ್ಲ ಜೊತೆಗೆ ಸೋತು ಸೊರಗಿದ ತಂದೆ-ತಾಯಂದಿರು. ದೂರದಲ್ಲಿ ನಮ್ಮ ಮೇಲೆಯೇ ಕಣ್ಣಿಟ್ಟುಕೊಂಡು ನಿಂತ ಹತ್ತೆಂಟು ಜನ ಸ್ವಾಗತಾಧ್ಯಕ್ಷರು. ಅರ್ಚಕರು. ಒಂದು ಕ್ಷಣ, ತಿರುಗಿ ರೈಲನ್ನು ಹತ್ತಿ ಬಂದ ದಾರಿಯಿಂದ ತಿರುಗಿ ಹೋಗೋಣವೇ— ಎನ್ನಿಸಿತು. ಈ ಪ್ರವಾಸದ ಸಾಹಸವೂ ಬೇಡ, ವಿಶ್ವೇಶ್ವರನ ದರ್ಶನವೂ ಬೇಡ. ನೆನೆದರೆ ಮನೆಯಲ್ಲಿಯೇ— ಅಲ್ಲ—ಮನದಲ್ಲಿಯೇ ಪರಮಾತ್ಮ! ಎಂದೇನೇನೋ ಭಾವಿಸಿದೆ.

" ಹೂಂ! ತಡವಾಗತದಲ್ಲ....ಇನ್ನೂ ಕಣ್‌ಬೆಳಕು ಇರುವಾಗ

ಎಲ್ಲಿಯಾದರೂ ಒಂದು ಸ್ಥಳ ಕಾಣೋಣಿಲ್ಲ..." ಎಂದು ಹಿರಿಯರು ಒತ್ತಾಯಪಡಿಸತೊಡಗಿದರು.

"ಸ್ವಾಮಿಗಳು ಅದೆಲ್ಲಿಯೋ ಇಳಿದುಕೊಳ್ಳಿರೆಂದು ಹೇಳಿದ್ದರಲ್ಲ!" ಎಂದು ತಾಯಿಯು ನನ್ನ ಮನಸ್ಸಿನ ಇಂಗಿತವನ್ನರಿತುಕೊಂಡು ನುಡಿದಳು. ಹೌದು: ಸ್ವಾಮಿಗಳು ಹೇಳಿದ್ದು, ಸ್ಯಾದ್ವಾದ ವಿದ್ಯಾಲಯ. ಅದು 'ಭದೈನಿ ಘಾಟ'ದಲ್ಲಿದೆ. ಅಲ್ಲಿಗೇ— ಕುದುರೆಯ ಗಾಡಿಯವನನ್ನು ನಿಶ್ಚಯಮಾಡಿಕೊಂಡು— ಸಾಗಿದೆವು.

ಬನಾರಸದ ವಿಸ್ತಾರವಾದ ಬೀದಿಗಳು; ಸುಂದರವಾದ ಮನೆಯ ಸಾಲುಗಳು. ಅವುಗಳನ್ನೆಲ್ಲ ಕಾಣುತ್ತ ಸ್ವಲ್ಪ ದೂರ ಸಾಗಿದೆವು. ಮನಸ್ಸೂ ಅರಳಿತು. ಆ ಮೇಲೆ ನಮ್ಮ ಕುದುರೆಯ ಗಾಡಿಯು ಒಂದು ಚಿಕ್ಕ ಓಣಿಯನ್ನು ಸೇರಿತು. ಜೋರಿನಿಂದ ಮುಂದೆ ಓಡಹತ್ತಿತು. ಎರಡೂ ಬದಿಗೆ ಮುಸಲ್ಮಾನರ ಮನೆಗಳು. ಅರಿವೆಗೆ ಬಣ್ಣ ಹಾಕುವ, ಪ್ರಿಂಟು ಮಾಡುವ, ಇನ್ನೇನೇನೊ ಚಿಕ್ಕ ಚಿಕ್ಕ ಹೋರೆಗಳನ್ನು ಮಾಡುವ ಜನರ ಓಣಿಯದು. ಅಲ್ಲಲ್ಲಿ ಇರಾಣೀ ಹಾಟೇಲುಗಳು ದಾರಿಯ ಮೇಲೆಯೇ ಗುದುಮುರಿಗೆ ಹಾಕುತ್ತ ಓಡಾಡುವ ಮುಸಲ್ಮಾನ್ ತರುಣರ ತಂಡಗಳು! ಈ ಎಲ್ಲ ದೃಶ್ಯವನ್ನು ಕಂಡು ತಾಯಿಯು ಮೆಲ್ಲಗೆ ಕೇಳಿದಳು.

"ಎಲ್ಲಿ ಒಯ್ಯಲಿಕ್ಕೆ ಹತ್ತಿದ ನೋಡಪ್ಪಾ ಅಣ್ಣಾ ?" ಧ್ವನಿಯಲ್ಲಿ ಹೆದರಿಕೆಯೂ ಇತ್ತು.

ಆಗ ಗಾಡಿಯವನ ಮುಖದ ಕಡೆಗೆ ನೋಡಿದೆ ನಾನು. ಗಡ್ಡಬಿಟ್ಟ ಮುಸಲ್ಮಾನನಾತ. ತರುಣ. ಸುತ್ತಲೂ ಕತ್ತಲೆ ಕವಿಯುತ್ತಿದೆ. ಕುದುರೆಯು ಆತುರದಿಂದ ಮುಂದೆ ಮುಂದೆ ಧಾವಿಸುತ್ತಿರುವಂತೆ ಭಾಸವಾಗತೊಡಗಿತು, ನನಗೆ. ಸ್ಟೇಶನಿನ ಮೇಲೆ ಬಾಡಿಗೆಯನ್ನು ಗೊತ್ತುಮಾಡುವಾಗಲೂ ತುರುಸಿನಿಂದ ಅವನೊಡನೆ ವಾದಿಸಿದ್ದು ಈಗ ಮತ್ತೆ ನೆನಪು ಆಗತೊಡಗಿತು. ಅಷ್ಟರಲ್ಲಿ ಎದುರಿನಿಂದ ಬರುವ ಮುಸಲ್ಮಾನ್ ಗೃಹಸ್ಥನೊಬ್ಬನು, ನಮ್ಮ ಗಾಡಿ ಹೊಡೆಯುವವನಿಗೆ 'ಸಲಾಂ' ಮಾಡಿದ. ಇದನ್ನೆಲ್ಲ ಕಂಡು ಹಿಂದು-ಮುಸಲ್ಮಾನರ ಗೊಂದಲದ— ವೃತ್ತಪತ್ರಗಳಲ್ಲಿ ಓದಿದ— ಸುದ್ದಿಗಳು ಒಂದೊಂದೇ ನನ್ನ ಮನಸ್ಸಿನಲ್ಲಿ ಸುಳಿಯತೊಡಗಿದುವು. ಹೆದರಿಕೆಯನ್ನುಂಟುಮಾಡತೊಡಗಿದುವು. ಅದೇ ಕಾಲಕ್ಕೆ ಕುಡಿದು ಕೆಲೆಯುತ್ತ ಸಾಗಿದ ಮುಸಲ್ಮಾನರ ತಂಡವೊಂದು ಎದುರಿಗೇ ಬಂತು! ಇನ್ನೇನು, ಇಲ್ಲಿಂದ ನಾವು ಪಾರಾಗುವುದೇ ಕಠಿಣವೆಂದುಕೊಂಡೆ. ಆದರೂ ಗಾಡಿ ಹೊಡೆಯುವವನ ಮುಖವನ್ನೊಮ್ಮೆ ನಿರೀಕ್ಷಿಸಿದೆ, ಪರೀಕ್ಷಿಸಿದೆ. ಅದರಲ್ಲಿ ಯಾವ ಬಗೆಯ ಕ್ರೂರತೆಯೂ ಮೋಸಗಾರಿಕೆಯೂ ಕಂಡು ಬರಲಿಲ್ಲ. ಪ್ರಸನ್ನತೆ ಮಾತ್ರ ಸುಳಿಯುತ್ತಿತ್ತು. ಸ್ವಲ್ಪ ಸಮಾಧಾನವಾಯಿತು. ಆದರೂ ಹಿರಿಯರೊಡನೆ ಮಾತಿಗೆ ಆರಂಭಿಸಿದೆ. ಗಾಡಿಯವನಿಗೆ ತಿಳಿಯಲೆಂದು ಬೇಕೆಂತಲೇ ಹಿಂದಿಯಲ್ಲಿ ಮಾತನಾಡುತ್ತಿದ್ದೆ.

"ಇನ್ನೇನಿಲ್ಲ, ಸಮೀಪದಲ್ಲಿಯೇ ಬಂತು...." ಈ ಮೊದಲೊಮ್ಮೆ ಕಾಶೀಪಟ್ಟಣಕ್ಕೆ ಬಂದು ಹೋದವರ ಠೀವಿಯಲ್ಲಿ ನುಡಿದೆ.

"ಹೌದು; ಇನ್ನೆರಡು ದೀಪದ ಕಂಬಗಳನ್ನು ದಾಟಿದರೆ, ನೀವು ಇಳಿಯುವ ದಾರಿಯು ಬರುವುದು" ಎಂದು ಗಾಡಿಯವನು ನನ್ನ ಮಾತಿಗೆ ದನಿಗೂಡಿಸಿದ. "ನೋಡಿರಿ....ಸಾಹೇಬರೇ, ಎಷ್ಟು ದೂರವಿದೆ! ಇನ್ನೂ ನಾಲ್ಕಾರು ಆಣೆಗಳನ್ನಾದರೂ ನೀವು ಚಹಾಕ್ಕೆ ಕೊಡಬೇಕು ಮಹಾರಾಜ!" ಎಂದು ತನ್ನ ಬೇಡಿಕೆಯನ್ನು ಮುಂದಿಟ್ಟ.

"ನೋಡೋಣ ನಡೆ...." ಆತನ ಬಲೆಯನ್ನು ಬೀಸಿದೆ ನಾನು.

"ಇದೇ ಮೂರು ರೂಪಾಯಿ ತಲೆಬಡಿದುಹೋಗಿದೆ!" ಎಂದಳು ಸರಳಹೃದಯದ ತಾಯಿ.

ಅಷ್ಟರಲ್ಲಿ ಸ್ಯಾದ್ವಾದ ವಿದ್ಯಾಲಯಕ್ಕೆ ಹೋಗುವ ಚಿಕ್ಕ ಓಣಿಯು ಬಂದಿತು. ಮುಂದೆ 'ಟಾಂಗಾ' ಹೋಗುವಂತಿರಲಿಲ್ಲ. ನದಿಯ ನೀರು ಬರುತ್ತಿರುವುದರಿಂದ, ಕಲ್ಲುಹಾಸಿದ ಕಿರಿಯ ಅಗಲವಾದ ದಾರಿಯದು. ನಾಲ್ಕಾರು ಕಡೆಗೆ ತಿರುವುಮುರುವಾಗಿ ಹೊರಳಿ, ವಿದ್ಯಾಲಯವನ್ನು ಸೇರಬೇಕು. ಅಂತಹ ಓಣಿಯಲ್ಲಿ ಕೂಡ ಎರಡೂ ಮಗ್ಗಲು ಎತ್ತರವಾಗಿ ನಿಂತ ಮನೆಗಳು. ಕೂಟಿಗೆ ಟಾಂಗಾ ನಿಲ್ಲಲು, ಹತ್ತೆಂಟು ಜನ ಮುಸಲ್ಮಾನ ಬಂಧುಗಳು ಸುತ್ತಲೂ ಬಂದು ನೆರೆದರು. ಅವರಲ್ಲಿ ಕೆಲವು ಜನ ಮಾರವಾಡಿಗಳೂ ಇರಬೇಕು. ಆದರೆ ನಮಗೆ ಅವರೆಲ್ಲ ಮುಸಲ್ಮಾನರಂತೆಯೇ ಕಾಣುತ್ತಿದ್ದರು. ಬಿಸಿಲುಗಾಲ. ಬೆವರು ಸುರಿಯುತ್ತಿದ್ದುದರಿಂದ, ಹಲವರು ಬರಿಮೈಯಿಂದ ಇದ್ದರು. ಕೆಲವರು ತಲೆಗೆ ಅರಿವೆ ಸುತ್ತಿದ್ದರು. ಒಂದಿಬ್ಬರು ದೊಡ್ಡ ದೊಡ್ಡ ಚಿಲಿಮೆಗಳನ್ನು ಹಿಡಿದು ತಂಬಾಕು ಸೇದುತ್ತಿದ್ದರು! ಕೆಲವರು ನಮ್ಮ ಸಾಮಾನು ಒಯ್ಯುವ ಕೂಲಿ ದೊರೆತೀತೆಂಬ ಆಶೆಯಿಂದಲೂ ಅಲ್ಲಿಗೆ ಬಂದಿದ್ದರು. ಆದರೆ ಇದೇನೂ ನಮಗೆ ಆಗ ಹೊಳೆಯಲಿಲ್ಲ! ಸ್ವಲ್ಪ ಗಾಬರಿಯಾಗಿಯೇ ಇದ್ದೆವು.

ಟಾಂಗಾದವನು ನಮ್ಮನ್ನು ಕೆಳಗೆ ಇಳಿಸಿದ ಸಾಮಾನುಗಳನ್ನು ದಾರಿಯ ಬದಿಯಲ್ಲಿ ಇಳಿಸಿಟ್ಟು ದುಡ್ಡು ಕೇಳಿದ. ತಾಯಿಯು 'ನಮ್ಮನ್ನು ಗೊತ್ತುಮಾಡಿದ ಸ್ಥಳಕ್ಕೆ ಮುಟ್ಟಿಸು, ಆ ಮೇಲೆ ದುಡ್ಡು'— ಎಂದು ವಾದಿಸಹತ್ತಿದಳು. ಅವನು ಟಾಂಗಾ ತಿರುಗಿಸಿಕೊಳ್ಳುತ್ತ "ಇದೇ ದಾರಿಯಿಂದ ಹೋಗಿರಮ್ಮಾ ಸಮೀಪದಲ್ಲಿಯೇ ಇದೆ." ಎಂದು ಹೇಳುವ. ಅವನ ದನಿಯಲ್ಲಿ ಕಾಶಿಯ ಪರಿಚಯವಿಲ್ಲದ ಇವರಿಗೆ ಹೇಗೆ ತಿಳಿಸಿ ಹೇಳಲಿ ?—ಎನ್ನುವ ಮರುಕವಿತ್ತು. ಟಾಂಗಾ ಹೋಗದ ದಾರಿಯದು. ನಾನು ಸ್ವಲ್ಪ ತಿಳಿದವನೆಂದು ಭಾವಿಸಿ, ನನ್ನ ಹತ್ತಿರ ಬಂದು 'ಸಂಜೆಯಾಗುವುದು ಬಾಡಿಗೆ ಕೊಡಿರಿ. ಇನ್ನಿಷ್ಟು ತಡವಾದರೆ ಪೇಟೆಯಲ್ಲಿ ಹುಲ್ಲು ಸಿಕ್ಕದು, ಕುದುರೆಯನ್ನು ಉಪವಾಸ ಕಟ್ಟಬೇಕಾಗುವುದು." ಎಂದು ಅಂಗಲಾಚಿ ಬೇಡತೊಡಗಿದ. ನನ್ನ ಹೃದಯವೂ ಕರಗಿತು. ಆದರೆ ಆ

ಸುತ್ತಲಿನ ವಾತಾವರಣವನ್ನು ನೋಡಿದರೆ, ಆ ಟಾಂಗಾ ಹೋಗಗೊಡುವುದು ಉಚಿತವಾಗಿ ತೋರದಾಯಿತು. ತಿರುಗಿ ಸ್ಟೇಶನಿಗಾದರೂ, ಹೋಗಲಿಕ್ಕೆ ಬಂದೀತೆಂಬ ವಿಚಾರ ನನಗೆ. ಆದರಿಂದ ಆವನಿಗೆ ಹೇಳಿದೆ:

"ಮತ್ತೆ ನಾಲ್ಕಾರು ಆಣೆಗಳನ್ನು ಕೊಡುವೆ. ಸಾಮಾನುಗಳನಷ್ಟು ಅಲ್ಲಿಗೇ ಮುಟ್ಟಿಸಿ ಹೋಗಲ್ಲ!" ಒಮ್ಮೆಲೇ ಅವನು ಒಪ್ಪಲಿಲ್ಲ. ಅನುಮಾನಿಸಿದ. ನಾನು ಕೂಡಲೆ ಬಾಡಿಗೆ ಕೊಡುವ ಲಕ್ಷಣವನ್ನು ಪ್ರದರ್ಶಿಸಲಿಲ್ಲ. ಆದರಿಂದ ಅವಸರದಿಂದ ನಮ್ಮ ಬ್ಯಾಗೊಂದನ್ನು ತಕ್ಕೊಂಡು, ಆ ಸಂದಿಯಲ್ಲಿ ಮುಂದೆ ನಡೆದ. ಇನ್ನೆರಡು ಗಂಟುಗಳು ಅಲ್ಲೇ ಉಳಿದುವು. ಹಿರಿಯರಿಗೆ ಅಲ್ಲಿಯೇ ಕಾವಲಿಗೆ ನಿಲ್ಲಲಿಕ್ಕೆ ಹೇಳಿ, ನಾನು ಅವನ ಹಿಂದೆ ಹೊರಡಲು ಸಿದ್ಧನಾದೆ. ಆದರೆ ಹಿರಿಯರು ನನ್ನೊಬ್ಬನನ್ನೇ ಕಳಿಸಲಿಕ್ಕೆ ಒಪ್ಪಲಿಲ್ಲ. ಅಲ್ಲಿ ಹಿಂದೆ ತಾಯಿಯಾಗಲಿ ತಂದೆಯಾಗಲಿ ಒಬ್ಬರೇ ನಿಲ್ಲುವಂತೆಯೂ ಇರಲಿಲ್ಲ ಆದುದರಿಂದ ಆ ಗಂಟುಗಳನ್ನು ಹೊರಲಾರದೆ ಹೊತ್ತುಕೊಂಡು ಹಿರಿಯರು ಬೆನ್ನು ಹತ್ತಿದರು!

ಆ ಸಂದಿಯಲ್ಲಿ ಮುಂದೆ ಸಾಗಿ ನಾವು ಗಂಗೆಯ ತೀರವನ್ನು ಸೇರಬೇಕು. ಅದಕ್ಕಾಗಿ ಸ್ವಲ್ಪ ದೂರವೇ ಸಾಗಬೇಕಾಯಿತು. ಮೊದಲೇ ಮುಚ್ಚಂಜೆಯ ಕತ್ತಲೆ, ಅದರಲ್ಲೂ ಅಂಕುಡೊಂಕಾದ ಬೀದಿ, ಅಪರಿಚಿತ ಸ್ಥಳ. ಹೇಗೋ ಒಮ್ಮೆ 'ಸ್ಯಾದ್ವಾದ ವಿದ್ಯಾಲಯ, ಕಾಶಿ' ಎಂಬ ಬೋರ್ಡು ಇರುವ ಒಂದು ಕಟ್ಟಡದ ಕಟ್ಟೆಯ ಮೇಲೆ ನಮ್ಮ ಸಾಮಾನುಗಳನ್ನು ಇಳಿಸಿಕೊಂಡು ನಿಂತೆವು. ಕುದುರೆಯ ಗಾಡಿಯವನನ್ನು ಹಣಕೊಟ್ಟು ಕಳಿಸಿದೆವು.

ತುಸು ಹೊತ್ತು ಕಾದೆವು. ನಮ್ಮ ಹತ್ತಿರ ಯಾರೂ ಬಂದು ಮಾತನಾಡಿಸಲಿಲ್ಲ. ಹಿಂದೆ ಅನೇಕ ಕ್ಷೇತ್ರಗಳಲ್ಲಿ ಹೋಗಿ ಧರ್ಮಶಾಲೆಗಳಲ್ಲಿ ಇಳಿದೊಡನೆಯೇ, ನಮ್ಮ ಸ್ವಾಗತಕ್ಕೂ ವ್ಯವಸ್ಥೆಗೂ ಹಲವರು ಆತುರಗೊಂಡು ಮುಂದೆ ಬರುತ್ತಿದ್ದರು. ಇಲ್ಲಿ ಆ ಅನುಭವ ತಲೆಕೆಳಗಾಯಿತು. ಆದರಿಂದ ಹಿರಿಯರು ಇನ್ನಿಷ್ಟು ಸಪ್ಪಗಾದರು. ಆವರಿಗೆ ನಾನೇ ತಿಳಿಸಿ ಹೇಳಿದೆ: "ಇದೇನು ಧರ್ಮಶಾಲೆಯಲ್ಲ. ಮಕ್ಕಳು ಓದುವ ಶಾಲೆ. ಅಲ್ಲಿ ಮುಡ್ಡಿನಾಳೆಯಿಂದ ಜನ ಮುಂದೆ ಮುಂದೆ ಸುಳಿಯುತ್ತಿದ್ದರು. ಇಲ್ಲಿಯ ವಿದ್ಯಾರ್ಥಿಗಳು ಏಕೆ ಬಂದಾರು?" ನನ್ನ ಮಾತಿನ ಮೇಲೆ ಹಿರಿಯರ ನಂಬಿಗೆ ಕೂಡದು. ಅವರಿಗೆ ಆ ಕಟ್ಟಡ ಸಾಲೆಯಂತೆಯೂ ಕಾಣದು. ಒಂದು ಗುಹೆಯ ಬಾಗಿಲಲ್ಲಿ ನಿಂತಂತೆ ಆಗಿತ್ತು ಅದರಲ್ಲೂ ಇನ್ನೂ ಬೆಸಗೆಯ ಬಿಡುವಿನ ದಿನಗಳು ತೀರಿರಲಿಲ್ಲ. ಆದರಿಂದ ವಿದ್ಯಾರ್ಥಿಗಳು, ತಮ್ಮ ತಮ್ಮ ಊರುಗಳಿಗೆ ಹೋಗಿದ್ದರು. ಪ್ರಶಾಂತವಾಗಿತ್ತು ವಿದ್ಯಾರ್ಥಿನಿಲಯ ನದಿಯ ತೀರದಲ್ಲಿಯ ಕಟ್ಟಡ. ಆವರಣಕ್ಕೆ ತಕ್ಕಂತೆ, ಮಳೆಗಾಲದಲ್ಲಿ ನದಿಯ ನೀರು ಒಳಸೇರದಂತೆ ಕಟ್ಟಲಾಗಿತ್ತು. ತಲೆಬಾಗಿಲಲ್ಲಿ ಒಳಗೆ ಹತ್ತೆಂಟು ಮೆಟ್ಟಿಲುಗಳನ್ನು ಇಳಿದು, ದೂರದ ವರೆಗೆ ಕತ್ತಲೆಯಲ್ಲಿ ಸಾಗಬೇಕು. ಆಗ ವಿದ್ಯಾಲಯದ ಮುಖ್ಯ ಭಾಗದಲ್ಲಿ ಬಂದಂತೆ ಆಗುತ್ತಿದ್ದಿತು. ಅಲ್ಲಿ ಬಂದೊಡನೆಯೇ ಎಂಥವರ ಮನಸ್ಸೂ ಅರಳುವುದು. ಎದುರಿಗೆ ವಿಸ್ತಾರವಾಗಿ ಹಬ್ಬಿದ ಗಂಗಾಸಲಿಲ; ಅದರಾಚೆಗೆ ಕಿರಿಯ ಅಗಲಾದ ಎದುರಿನ ಬಯಲು. ಮುಂದೆ ದೃಷ್ಟಿ ಹರಿಯುವ ವರೆಗೆ, ಹಬ್ಬಿದ ಹಚ್ಚ ಹಸುರಿನ ಪ್ರದೇಶ. ಕೊನೆಗೆ ದಿಗಂತದಲ್ಲಿ ಕೆಂಪು ಕಾಂತಿ. ಮೇಲೆ ನೀಲ ವರ್ಣದ ಆಗಸ. ಅದೆಲ್ಲವೂ ಸೇರಿ ಅದೊಂದು ಭವ್ಯವೂ ದಿವ್ಯವೂ ಆದ ಇಂದ್ರಚಾಪದಂತೆ ಕಂಗೊಳಿಸುತ್ತಿತ್ತು. ಒಂದು ಕ್ಷಣ, ಕಾಲೊಳಗಿನ ಧೂಳನ್ನೂ ಲೆಕ್ಕಿಸದೆ ಅದನ್ನೆಲ್ಲ ನೋಡುತ್ತ ಮೈಮರೆತು ನಿಂತೆ. ಸ್ವಲ್ಪ ಹೊರಳಿ ಎಡಬಲಕ್ಕೆ ನೋಡಿದರೆ, ಸುಂದರವಾದ ಕಟ್ಟಡದ ಸಾಲುಗಳು. ಅವುಗಳಲ್ಲಿ ಮನೋಹರವಾದ ದೀಪಗಳ ಸಾಲು. ಅದೆಲ್ಲವೂ ಮೈಮರೆಯಿಸುವ ನೋಟ!

"ಇಲ್ಲಿ ಹಗಲು ಆರು ತಾಸಿನಲ್ಲಿ ಹೊಡೆದು ಒಯ್ದರೂ ಹೊರಗಿನವರಿಗೆ ಗೊತ್ತಾಗಲಿಕ್ಕಿಲ್ಲ'"

ತಂದೆಯವರು ತಾಯಿಗೆ ಹೇಳುತ್ತಿದ್ದ ಈ ಮಾತಿನಿಂದ ನಾನು ವಾಸ್ತವಪ್ರಪಂಚಕ್ಕೆ ಇಳಿದೆ. ಅವರ ಮಾತನ್ನೂ ನಂಬಿಯೆನ್ನುವಂತಿರಲಿಲ್ಲ. ಆ ಧೂಳುಬಿದ್ದು, ಹೊಲಸಾದ ನೆಲದ ವಿಸ್ತಾರವಾದ ಆ ಕಲ್ಲಿನ ಕಟ್ಟಡ, ದೊಡ್ಡ ದೊಡ್ಡ ಕಲ್ಲಿನ ಕಂಬ, ತೊಲೆಗಳು. ಅಲ್ಲೊಂದಿಲ್ಲೊಂದು ಧೂಳುತಿನ್ನುತ್ತ ಬಿದ್ದ ಕುರ್ಚಿ. ಮೇಜು, ಮಂಚಗಳು. ಜನರ ಸುಳುವಿಲ್ಲ. ಎಲ್ಲವೂ ಭಯಾನಕವೇ. ಆದರೂ ಹಿರಿಯರಿಗೆ ತುಸು ಹೊತ್ತು ಅಲ್ಲಿ ವಿಶ್ರಮಿಸಲು ಹೇಳಿದೆ. ನಾನು ಹೊರಗೆ ಬಂದು, ಆ ವಿದ್ಯಾಲಯದ ಮೇಲಿನ ಗಚ್ಚಿಯ ಮೇಲೆ ಹೋದೆ. ಅಲ್ಲಿಂದ ಊರು, ನದಿ, ಸೇತುವೆ, ಹೊಲ, ನೆಲಗಳೆಲ್ಲ ಇನ್ನೂ ಸುಂದರತರವಾಗಿ ಕಾಣುತ್ತಿದ್ದುವು. ಮಾಳಿಗೆಯ ನಡುವೆಯೊಂದು ಸುಂದರ ಜಿನಾಲಯವಿತ್ತು. ಆದರ ಎದುರಿಗೇ ಮಾತನಾಡುತ್ತ ಒಬ್ಬ ತರುಣ ಹಾಗೂ ಒಬ್ಬ ಮುದುಕಿ ಕುಳಿತಿದ್ದರು. ನನ್ನನ್ನು ಕಂಡೊಡನೆಯೇ ಆ ಯುವಕ ಬೆರಗಿನಿಂದ ನನ್ನ ಸಮಾಚಾರವನ್ನೆಲ್ಲ ಕೇಳಿಕೊಂಡ.

ಆತ ಸ್ಯಾದ್ವಾದ ವಿದ್ಯಾಲಯದ ಒಬ್ಬ ವಿದ್ಯಾರ್ಥಿ. ಸಿ. ಪಿ. ಪ್ರಾಂತದವ. ಬಿಡುವಿನಲ್ಲಿ ತನ್ನ ಊರಿಗೆ ಹೋಗಿರಲಿಲ್ಲ. ಏನಾದರೂ ಹೆಚ್ಚಿಗೆ ಓದಿಕೊಳ್ಳಬೇಕೆಂದು ಅಲ್ಲಿಯೇ ಉಳಿದುಕೊಂಡಿದ್ದ ಅವಳು ಅಲ್ಲಿಯ ಕೆಲಸಮಾಡುವ ಮುದುಕಿ. ಅವಳಿಗೆ ಕೂಡಲೆ ಕೆಳಗೆ ಹೋಗಿ ದೀಪ ಹಚ್ಚುವಂತೆ ಸೂಚಿಸಿದ. ಅವನ ನಡೆ ನುಡಿಗಳಲ್ಲಿಯ ಸೌಜನ್ಯವನ್ನು ಕಂಡು ನನಗೂ ಸಂತೋಷವಾಯಿತು. ನಾನು ಕರ್ನಾಟಕ ಪ್ರಾಂತದವನೆಂದು ನನ್ನ ಪರಿಚಯ ಮಾಡಿಕೊಟ್ಟೆ. ಹಾಗಾದರೆ ಇಲ್ಲಿ ಬಳ್ಳಾರಿ ಜಿಲ್ಲೆಯಿಂದ ಓದಲು ಬಂದ ಜಯಕುಮಾರ ಎಂಬ ವಿದ್ಯಾರ್ಥಿಯೊಬ್ಬನು ಇರುವನೆಂದೂ ಅವನೂ ಬಿಡುವಿನಲ್ಲಿ ಊರಿಗೆ ಹೋಗಿಲ್ಲವೆಂದೂ ಹೇಳಿದ. ನನಗೆ ಹಿಡಿಸಲಾರದಷ್ಟು ಆನಂದ. ಕನ್ನಡ ನಾಡಿನ ಗೆಳೆಯರೊಬ್ಬರು ಇದ್ದರೆಂದ ಮೇಲೆ ಹೆಚ್ಚಿಗಿನ್ನೇನು ಬೇಕು? ಆ ಜಯಕುಮಾರನ ಪ್ರಾಂತದವರೆಂಬ ಒಂದೇ ಕಾರಣದಿಂದ ಈ ವಿದ್ಯಾರ್ಥಿಮಿತ್ರರು

ನಮ್ಮ ವ್ಯವಸ್ಥೆಯನ್ನೆಲ್ಲ ಮಾಡಿದರು. ಇಳಿದುಕೊಳ್ಳುವ ವ್ಯವಸ್ಥೆಯೆಲ್ಲ ಆಯಿತು. ಹಾಲು ತರಿಸಿಕೊಟ್ಟರು. ನೀರು ತಂದು ಕೊಟ್ಟರು. ಆ ಮೇಲೆ ನಮ್ಮ ಜಯಕುಮಾರನ ಆಗಮನವಾಯಿತು!

ಕನ್ನಡಿಗರು ಒಟ್ಟಿಗೆ ಸೇರಿದೆವು. ಅವನದು ಬಳ್ಳಾರಿ, ನನ್ನದು ಬೆಳಗಾಂವಿ ಒಂದೇ ಮನೆಯ ಅಣ್ಣತಮ್ಮಂದಿರು. ಬಹು ಸಮೀಪದಲ್ಲಿ ಕುಳಿತು ಮಾತನಾಡಿದೆವು. ಏನೇನೋ ಮಾತನಾಡಿದೆವು. ಪ್ರವಾಸದ ದಣಿವೆಲ್ಲ ಹಿಂಗಿತು. ಇರುಳೆಲ್ಲ ನಮ್ಮಿಬ್ಬರಿಗೂ ನಿದ್ರೆಯೇ ಇಲ್ಲ.

ಮರುದಿನ ಆ ಇಬ್ಬರು ಗೆಳೆಯರು ನಮ್ಮ ಅತಿಥಿಗಳು. ಬಿಡುವಿನ ದಿನಗಳಾದುದರಿಂದ ಅಡಿಗೆ ಮಾಡಿಕೊಂಡು ಉಣ್ಣುತ್ತಿದ್ದರವರು. ಆ ಎರಡು ಮೂರು ದಿನಗಳಲ್ಲಿ ನನ್ನ ತಾಯಿಯೇ ಎಲ್ಲರಿಗೂ ಅಡಿಗೆ ಮಾಡಿ ಬಡಿಸಿದಳು. ಎಲ್ಲರೂ ಕೂಡಿ ಸಾಯಂಕಾಲ ನಾವಿನಲ್ಲಿ ಕುಳಿತು ಶ್ರೀವಿಶ್ವೇಶ್ವರನ ದರ್ಶನಕ್ಕೆ ಹೋಗುತ್ತಿದ್ದೆವು. ಸುಂದರವಾದ ದೇವಸ್ಥಾನ. ಆ ವಿಶ್ವನಾಥನ ಸ್ಫಟಿಕವಾದ ಲಿಂಗಕ್ಕಿಂತಲೂ ಆ ಮಂದಿರದಲ್ಲಿ ಮಾಡಿ ಕೂಡಿಸಿದ ಪೌರಾಣಿಕ ವ್ಯಕ್ತಿಗಳ ಸುಂದರ ಮೂರ್ತಿಗಳೇ ನಮ್ಮ ಮನಸ್ಸನ್ನು ಆಕರ್ಷಿಸಿದುವು, ಹೃದಯವನ್ನು ಅರಳಿಸಿದುವು. ಅರಣ್ಯಕ್ಕೆ ಹೊರಟ ರಾಮ ಸೀತೆಯರು, ಆಕಳುಗಳನ್ನು ಕಾಯುವ ಬಾಲಗೋಪಾಲ—ಕೃಷ್ಣ, ಪ್ರಲ್ಹಾದ, ವಾಮನ ಮೊದಲಾದವರ ಸುಂದರ ವಿಗ್ರಹಗಳು ನಮ್ಮನ್ನು ಹಿಂದಿನ ಕಾಲಕ್ಕೆ ಒಯ್ದು ಬಿಡುತ್ತವೆ. ಒಂದು ಕ್ಷಣ ಆ ಸತ್ಯಯುಗದಲ್ಲಿ ನಾವೂ ಜೀವಿಸಿರುವಂತೆ ಆಗುತ್ತದೆ. ಭೀಕರವಾದ ಆ ಕಾಳಿಕಾದೇವಿಯ ಮೂರ್ತಿಯನ್ನು ಕಂಡಾಗ, ಯಾವ ಯುಗದಲ್ಲಿ ಹೋದರೂ ಬಾಳಿನಲ್ಲಿ ಭೀಕರತೆ ಎಂಬುದಿದೆಯೋ ಅಲ್ಲ!— ಎಂದೆನಿಸುವುದು. ಎದೆ ನಡುಗುವುದು. ಆಗಲೇ ಭವ್ಯನಿ, ಶ್ರೀಪೂಪುರಗಳಲ್ಲಿಯ ಸುಂದರ ಪ್ರಶಾಂತ ಜಿನಮೂರ್ತಿಗಳನ್ನು ನೆನೆದು ಮನಸ್ಸು ಪ್ರಸನ್ನಗೊಳ್ಳುವುದು.

ಬನಾರಸಕ್ಕೆ ಹೋದಾಗ ವಿಶ್ವವಿದ್ಯಾಲಯವನ್ನು ನೋಡದೆ ಬರುವವರು ವಿರಳ. ಅದಕ್ಕಾಗಿಯೇ ಒಂದು ದಿನ ಹೆಚ್ಚಿಗೆ ನಾನು ಕಾಶಿಯಲ್ಲಿ ಉಳಿದುಕೊಂಡೆ. ಗೆಳೆಯರನ್ನು ಕರೆದುಕೊಂಡು ಮುಂಜಾನೆ ವಿಶ್ವವಿದ್ಯಾಲಯದತ್ತ ಹೋದೆ. ನಗರದ ಹೊರಗಡೆಗೆ ವಿಸ್ತಾರವಾದ ಬಯಲನ್ನೆಲ್ಲ ವ್ಯಾಪಿಸಿಬಿಟ್ಟಿವೆ, ಹಲವಾರು ಕಾಲೇಜುಗಳು. ಆದರೆ ಅವೆಲ್ಲ ಒಂದೇ ಆವಾರದಲ್ಲಿವೆ! ಎಂಜಿನಿಯರಿಂಗ್ ಕಾಲೇಜ್, ಟೆಕ್ನಾಲಾಜಿಕಲ್ ವಿಭಾಗಗಳು ನಮ್ಮನ್ನು ದಂಗುಗೊಳಿಸುತ್ತವೆ. ಅಲ್ಲಿಯ ವಿಷಯಗಳನ್ನು ಪ್ರೇಕ್ಷಕರಿಗೆ ವಿವರಿಸಿ ಹೇಳಲಿಕ್ಕೆಂದೇ ಒಬ್ಬ ಮನುಷ್ಯನನ್ನು ವಿಶ್ವವಿದ್ಯಾಲಯದವರು ನಿಯಮಿಸಿದ್ದಾರೆ. ಆ ವಿಷಯದಲ್ಲಿ ತೀರ ಅಲ್ಪಜ್ಞಾನಿಗಳಾದ ನಮಗೆ, ಅವರ ವಿವರವೆಲ್ಲ ಅರ್ಥವಾಗಲಿಲ್ಲ. ಸುಮ್ಮನೆ ನೋಡುತ್ತ ಮುಂದೆ ಸಾಗಿದೆವು. ಕಲಾಶಾಲೆ, ಪುಸ್ತಕಾಲಯಗಳತ್ತ ಬಂದಾಗ, ನಮ್ಮ ಭಾವನೆಯು ಮುಗಿಲನ್ನು ಮುಟ್ಟದಿರಲಿಲ್ಲ. ಕುತೂಹಲ ಕೆರಳದಿರಲಿಲ್ಲ. ಸಂಸ್ಕೃತ ಕಾಲೇಜಿನಲ್ಲಿ ಗೋಡೆಗಳ ಮೇಲೆ ಬರೆದ ಗೀತೆ-ಉಪನಿಷತ್ತುಗಳ ವಾಕ್ಯಗಳು! ವಿವಿಧ ಪೌರಾಣಿಕ ಚಿತ್ರಗಳು ನಮ್ಮ ಮನಸ್ಸನ್ನು ಬಹಳ ಸೆಳೆದುಕೊಂಡುವು. ಎಲ್ಲ ವಿದ್ಯಾಲಯಗಳಿಗೂ ಮಿದುಳಿನಂತಿರುವ ಕೇಂದ್ರ ಗ್ರಂಥಾಲಯವನ್ನಂತೂ ನೋಡಿ ಯಾರೂ ಆಶ್ಚರ್ಯಪಡುವಂತಿದೆ. ಹಲವು ಭಾಷೆಯ ಗ್ರಂಥಗಳನ್ನು ನಾವು ಲ್ಲಿ ಕಾಣಬಹುದು. ಮೂರು ಅಂತಸ್ತಿನ ಆ ಸುಂದರ ಸರಸ್ವತೀ ಮಂದಿರವು, ವಿದ್ಯಾನಟಿಯ ನಾಟ್ಯರಂಗಸ್ಥಳವಾಗಿದೆ. ಅದರಂತೆಯೇ ವಿಸ್ತಾರವಾದ ಆಟದ ಬಯಲು, ವ್ಯಾಯಾಮಶಾಲೆಗಳೂ ನೋಡತಕ್ಕಂಥವುಗಳು. ಇಲ್ಲಿಯ ವಿದ್ಯಾರ್ಥಿಗಳಲ್ಲಿ ಈಜುವ, ದೋಣಿ ನಡೆಯಿಸುವ ಸ್ಪರ್ಧೆಗಳೂ ನಡೆಯುತ್ತವೆ.

ಅದು ಮಾಳವೀಯರವರ ನೇತೃತ್ವದಲ್ಲಿ ಬೆಳೆದ ವಿಶ್ವವಿದ್ಯಾಲಯವಲ್ಲವೆ? ಎಂದ ಮೇಲೆ, ಅದರಲ್ಲಿ ಭಾರತೀಯ ಸಾಂಸ್ಕೃತಿಕ ದೃಷ್ಟಿಯು ತಾನೇ ತಾನಾಗಿ ಬೆಳೆದುನಿಂತುದನ್ನು ನಾವು ಹೆಜ್ಜೆ ಹೆಜ್ಜೆಗೂ ಕಾಣುತ್ತೇವೆ. ನೂಲುವ ಕೇಂದ್ರವಿದೆ, ಕೈನೂಲಿನ ಬಟ್ಟೆಯ ಶಾಖೆಯೂ ಏರ್ಪಟ್ಟಿದೆ. ವಿದ್ಯಾರ್ಥಿಗಳ ಸ್ವಾವಲಂಬನ ಸಂಘವಿದೆ. ಈ ಸಂಘವು ಬಡ ವಿದ್ಯಾರ್ಥಿಗಳಿಗೆ ಕೆಲಸ ಒದಗಿಸುತ್ತದೆ. ಹಾಲು, ಬೆಣ್ಣೆ, ಕಾಗದ, ಪತ್ರಿಕೆಗಳನ್ನು ಮಾರುವುದು, ಪಾಠ ಹೇಳುವುದು, ಟೈಪುಮಾಡುವುದು, ಮನೆಗಳಿಗೆ ಸುಣ್ಣ ಬಳಿಯುವುದು, ಕುರ್ಚಿ-ಮೇಜು ಮೊದಲಾದುವುಗಳನ್ನು ಹೊರುವುದು, ತೋಟದ ಕೆಲಸ, ಬೂಟ್ಸುಗಳಿಗೆ ಪಾಲಿಶ್ ಮಾಡುವುದು ಇವೆಲ್ಲ ಉದ್ಯೋಗಗಳನ್ನೂ ಅಲ್ಲಿಯ ಬಡ ವಿದ್ಯಾರ್ಥಿಗಳು ಮಾಡುವರು. ಇಂತಹ ವಿದ್ಯಾರ್ಥಿಗಳು ಪ್ರತಿ ತಿಂಗಳೂ ಇಪ್ಪತ್ತು ಇಪ್ಪತ್ತೈದು ರೂಪಾಯಿಗಳನ್ನು ಸಂಪಾದಿಸುತ್ತಾರೆ. ಎಂ. ಎ. ತರಗತಿಯಲ್ಲಿ ಓದುವ ವಿದ್ಯಾರ್ಥಿಯು ಗೋಡೆಗೆ ಸುಣ್ಣ ಬಳಿಯುವುದನ್ನು ನಾವಿಲ್ಲಿ ಕಾಣಬಹುದು. ಅದರಂತೆ ಈ ವಿಶ್ವವಿದ್ಯಾಲಯದಲ್ಲಿ ನೌಕರರ ಸಹಕಾರಿ ಸಂಘವೂ, ವಿದ್ಯಾರ್ಥಿ ಸಹಾಯ ಸಂಘಗಳೂ ಇವೆ.

ಇವನ್ನೆಲ್ಲ ನೋಡಿ ಮನೆಯ ಕಡೆಗೆ ಮರಳಿ ನಡೆದಾಗ, ಪಂ. ಮಾಳವೀಯರವರ ಜೀವನದೊಳಗಿನ ಒಂದು ಪ್ರಸಂಗ ನನ್ನ ಬಗೆಗಣ್ಣೆದುರಿಗೆ ಆಗಾಗ ಬಂದು ನಿಲ್ಲುತ್ತಿದ್ದಿತು: ಗಂಗಾತಟಾಕ. ಅಂದು ಮಾಳವೀಯರು ಮಿಂದುಕುಳಿತಿದ್ದಾರೆ! ಮುಂದಿನ ಭವ್ಯ ಕನಸನ್ನು ಕಾಣುತ್ತಿದ್ದಾರೆ! ಕಣ್ಣೆದುರಿಗೆ ಭವ್ಯ ಕಾಶೀವಿದ್ಯಾಪೀಠದ ದೃಶ್ಯ! ದಿವ್ಯದರ್ಶನ! ಆ ಅಪೂರ್ವದರ್ಶನವನ್ನು ತಂದೆಗೆ ಅರುಹಿದ ಆ ನೋಟ! ಎಂತಹ ಅಮೃತಪ್ರಸಂಗ! ತಾವು ಕಷ್ಟಪಟ್ಟು ಗಳಿಸಿದ ನೂರೊಂದು ರೂಪಾಯಿಗಳ ಕಾಣಿಕೆಯನ್ನು ತಂದೆ ಮಗನಿಗೆ ಸಲ್ಲಿಸಿ ಹರಸಿದ ಆ ಹೃದಯ! ಪವಿತ್ರ ಹೃದಯ!

ತಮ್ಮ ಕನಸನ್ನು ಕಾರ್ಯರೂಪದಲ್ಲಿ ಕಂಡವರು ಮಾಳವೀಯರವರಂತೆ ಇನ್ನೊಬ್ಬರಿಲ್ಲ!— ಎಂದುಕೊಂಡೆ.



ಆರೋಗ್ಯ ಜೀವನ

ಬರೆದವರು ಶ್ರೀ. ಎಸ್. ಬಿ. ನಾಡಗೀರ ಬಿ. ಎ. (ಆನರ್ಸ್). ನಿವೃತ್ತ ಶಿಕ್ಷಣಾಧಿಕಾರಿಗಳು. ಧಾರವಾಡ. ಕ್ರಾ. ಅ. ೨೧೪ ಪುಟ. ಬೆಲೆ ೨-೮-೦.

ಈ ಪುಸ್ತಕದ ಮೇಲೆ 'ಪ್ರಾಥಮಿಕ ಶಿಕ್ಷಕರ ಅಧ್ಯಾಪನ ಕೇಂದ್ರಗಳ ಸಲುವಾಗಿಯೂ, ಮಾಧ್ಯಮಿಕ ಶಾಲೆಗಳ ಮೇಲಿನ ತರಗತಿಗಳ ಸಲುವಾಗಿಯೂ, ಸಮಾಜ ಶಿಕ್ಷಣಕ್ಕಾಗಿಯೂ ಬರೆದ ಪುಸ್ತಕ' ಎಂದು ಬರೆದಿದೆ. ಪಠ್ಯಪುಸ್ತಕದ ಉದ್ದೇಶದಿಂದ ಬರೆದ ಪುಸ್ತಕವಿದಾದರೂ, ಪ್ರತಿಯೊಬ್ಬರೂ ಓದಿ ತಿಳಿದುಕೊಳ್ಳಲೆಬೇಕಾದ ಆರೋಗ್ಯವಿಜ್ಞಾನವಿಷಯಕ ವಿವರಣೆಗಳಿಂದ ಇದು ಕೂಡಿದೆ.

ಬಡವರ ಬಡತನದ ಮೂಲಕವಾಗಿಯೂ ಸಿರಿವಂತರ ಭೋಗ-ಲಾಲಸಾಮಯ ಜೀವನದ ಮೂಲಕವೂ ನಮ್ಮ ನಾಡಿನಲ್ಲಿ, ಆರೋಗ್ಯಜೀವನದ ಕಡೆಗೆ ಲಕ್ಷ್ಯಕೊಟ್ಟು ನಡೆಯುವವರ ಸಂಖ್ಯೆ ತೀರ ಕಡಿಮೆಯಾಗಿದೆ. ಸ್ವಾಸ್ಥ್ಯಪೂರ್ಣ ಜೀವನವನ್ನು ಎಲ್ಲರೂ ಬಯಸುವರಾದರೂ, ಅದಕ್ಕಾಗಿ ತಾವೆಲ್ಲ ಹೇಗೆ ಹೇಗೆ ನಡೆದು-ಕೊಳ್ಳಬೇಕೆಂಬುದರ ಕಡೆಗೆ ಯಾರೂ ನೋಡುತ್ತಿರುವುದಿಲ್ಲ. ಸಾಯಬಾರದೆಂದು ಎಲ್ಲರದೂ ಇಚ್ಛೆ; ಆದರೆ ಸಾಯದಂತೆ ಪೂರ್ವಜಾಗ್ರತಿಯ ಜ್ಞಾನಪಡೆದುಕೊಳ್ಳುವವರೇ ಅಪೂರ್ವ-ವಾಗಿದ್ದಾರೆ. ಸುಖಮಯವಾದ ಆರೋಗ್ಯ ಜೀವನವನ್ನು ಅನು-ಭವಿಸುತ್ತ ನೂರು ವರ್ಷ ವಿಹಾರಿ ಬಾಳಬೇಕಾದರೆ, ಆರೋಗ್ಯದ ಮೂಲಸೂತ್ರಗಳನ್ನು ಅರಿತುಕೊಳ್ಳಬೇಕು. ಅವುಗಳನ್ನು ನಮ್ಮ ನಿತ್ಯಜೀವನದಲ್ಲಿ ತಪ್ಪದೆ ಅನುಸರಿಸುತ್ತಿರಬೇಕು. ಅಂತಹ ಆರೋಗ್ಯಸೂತ್ರಗಳ ಸುಖಪರಿಚಯ ಮಾಡಿಕೊಡುವ ಗುಣ-ಗಳೆಲ್ಲ ಈ ಪುಸ್ತಕದಲ್ಲಿ ಸಂಗ್ರಹಗೊಂಡಿರುವುದು ಸಂತೋಷದ ಸಂಗತಿ.

ಈ ಪುಸ್ತಕಕ್ಕೆ ತಕ್ಕುದಾದ ಮುನ್ನುಡಿಯನ್ನು ಬರೆದ ಡಾ. ಬಿ. ಎಚ್. ಕಮಲಾಪುರ ಎಂ. ಡಿ. ಅವರು, ಇದರಲ್ಲಿಯ ವಿಷಯ-ಕ್ರಮದ ವೈಜ್ಞಾನಿಕ ಶುದ್ಧಿಯನ್ನು ಮನವಾರೆ ಒಪ್ಪಿಕೊಂಡಿರುವ-ರಲ್ಲದೆ, ಮುನ್ನುಡಿಯ ಕೊನೆಯಲ್ಲಿ '.... ಶ್ರೀ. ನಾಡಗೀರರು ಬಹಳೇ ಪರಿಶ್ರಮಪಟ್ಟು ತಮ್ಮ ಶಿಕ್ಷಣದ ಅಮೂಲ್ಯ ಅನುಭವ-ದಿಂದ ಈ ಗ್ರಂಥವನ್ನು ಬರೆದು, ನಿವೃತ್ತ ಶಿಕ್ಷಣಾಧಿಕಾರಿಗಳಿಗೆ ಮೇಲ್ಪಂಕ್ತಿ ಹಾಕಿಕೊಟ್ಟಿದ್ದಾರೆ. ಇಂಥ ವಿಷಯಗಳ ಮೇಲೆ ಇನ್ನೂ ಸವಿಸ್ತಾರವಾದ ಹಲ-ವಾರು ಗ್ರಂಥಗಳು, ಬೇರೆ ಬೇರೆ ದೃಷ್ಟಿಯಿಂದ ನಮ್ಮ ನಾಡಿನಲ್ಲಿ ಬೆಳಕಿಗೆ ಬರಬೇಕೆಂಬುದು ನನ್ನ ಮತ. ಈ ಮಾದರಿಯ ಉಪಯುಕ್ತವಾದ ಪುಸ್ತಕವನ್ನು ಬರೆದುದಕ್ಕೆ ಶ್ರೀಮಾನ್ ಎಸ್. ಬಿ. ನಾಡಗೀರರಿಗೆ ನನ್ನ ಹೃತ್ಪೂರ್ವಕ ಅಭಿನಂದನೆ-ಗಳು' ಎಂದು ಬರೆದಿರುವ ಮಾತುಗಳು ಕೇವಲ ಸಾಂಪ್ರದಾಯಿಕ ಪ್ರಶಂಸೆಯ ಮಾತು-ಗಳಲ್ಲವೆಂಬುದನ್ನು ಈ ಗ್ರಂಥವನ್ನು ನೋಡಿದವರು ಯಾರೂ ಒಪ್ಪಿಕೊಳ್ಳುವಂತಿದೆ.

ಇದರಲ್ಲಿ ೧ ವೈಯಕ್ತಿಕ ಆರೋಗ್ಯ, ೨ ಪ್ರಥಮ ಚಿಕಿತ್ಸೆ, ೩ ರುಗ್ಣೋಪಚಾರ, ೪ ಕೆಲವು ಸಾಮಾನ್ಯ ಬೇನೆಗಳೂ ಅವುಗಳ ನಿವಾರಣೋಪಾಯವೂ, ೫ ಸುಲಭೋಪಾಯಗಳು— ಎಂದು ಐದು ಮುಖ್ಯ ವಿಭಾಗಗಳನ್ನು ಕಲ್ಪಿಸಲಾಗಿದೆ. ಮೊದಲನೆಯ ವಿಭಾಗದಲ್ಲಿ ದೇಹದ ರಚನೆಯ ಅಂಗಾಂಗಗಳ ಪರಿಚಯವನ್ನು ಸಚಿತ್ರವಾಗಿ ಮಾಡಿಕೊಡಲಾಗಿದೆಯಲ್ಲದೆ, ಕೊನೆಯಲ್ಲಿ ವಿಕಾಸ-ವಾದದ ರೂಪರೇಷೆಯನ್ನೂ ಕೊಡಲಾಗಿದೆ. ೨-೩-೪-೫ನೆಯ ಭಾಗದಲ್ಲಿ ಬಂದಿರುವ ವಿಷಯಗಳು, ಬಾಳಿನಲ್ಲಿ ಒದಗುವ ಆಕಸ್ಮಿಕ ಅಪಘಾತಗಳಿಗೂ ಅನಾರೋಗ್ಯ ಪರಿಸ್ಥಿತಿಗಳಿಗೂ ಉಪಾಯ ಯೋಜನೆಯನ್ನು ಸೂಚಿಸುವಂತಹವಾಗಿವೆ.

ಪ್ರತಿಯೊಂದು ಕುಟುಂಬದಲ್ಲಿಯೂ ಇರಬೇಕಾದ ಪುಸ್ತಕ. ಗ್ರಂಥಕರ್ತರು ತಮ್ಮ ನಿವೃತ್ತಜೀವನವನ್ನೂ ಸಮಾಜಕ್ಕೆ ಪ್ರಯೋಜನಕಾರಿಯಾಗುವಂತೆ ಬಳಸುತ್ತಿರುವುದು ಪ್ರಶಂಸನೀಯ ಸಂಗತಿಯಾಗಿದೆ. ಗ್ರಂಥಕ್ಕಿರಿಸಿದ ಬೆಲೆಯೂ ಹೆಚ್ಚೆನಿಸದಂತಿದೆ.

—ಬಿ. ಪಿ. ಎಸ್. ರಾವ್.

ಶಾಂತಿಸೇವಾ ಸದನದ ಸುಂದರ ಪ್ರಕಟನೆ

ವಿಜಯಶ್ರೀ

ಮಿರ್ಜಿ ಅಣ್ಣಾರಾಯರ

ಉತ್ಕೃಷ್ಟ ಸಣ್ಣಕತೆಗಳ ಸಂಗ್ರಹ.

ಬೆಲೆ: **ಒಂದು ರೂಪಾಯಿ.**

ಇದೀಗ ಪ್ರಕಟವಾಗಿದೆ.

ದೊರೆಯುಸ್ಥಳ:

ಶ್ರೀ. ಮಿರ್ಜಿ ಅಣ್ಣಾರಾಯರು,

ಪೋ. ಉಗಾರ ಬುದ್ರುಕ

ಬೆಳಗಾಂವ

ಆಕಾಶವಾಣಿಯ ಆಗು-ಹೋಗು

ತಾ. ೨೬-೧೦-೫೧ ರಿಂದ ೨೫-೧೧-೫೧ ರ ವರೆಗೆ

卐

ಸಂಗೀತ ವಿಭಾಗ

ಕಳೆದ ತಿಂಗಳಲ್ಲಿ ಆದ ದೀವಳಿಗೆಯ ಹಬ್ಬವನ್ನು ಸಾಗ್ರಸಂಗೀತ-ಸಮ್ಮೇಳನವನ್ನಾಗಿ ಮಾಡಲು, ಧಾರವಾಡದ ಆಕಾಶವಾಣಿಯ ಕೇಂದ್ರಕ್ಕೆ ಲಖನೌನಗರದ ಶ್ರೀ. ರತಂಜನಕರ್ ಅವರು ಬಂದಿದ್ದರು. ಒಳ್ಳೆಯ ಪಂಡಿತರೆಂಬ ಪ್ರಸಿದ್ಧಿ ಇವರಿಗಿದೆ. ಆದರೆ ಹಾಡುವ ಹಾಡಿನಲ್ಲಿ 'ಸಂ-ಗೀತ' ಕಾಣದು. ಧ್ವನಿಯ ರಭಸದ ದೃಷ್ಟಿಯಿಂದ ನೋಡಿದರೆ, ಇವರಿಗೆ ಹಿನ್ನೇಳವಾಗಿದ್ದವರದೇ ಬಲಶಾಲಿಯಾಗಿದ್ದಿತೆಂದು ಹೇಳಬಹುದು. ದೀವಳಿಗೆ ಲಾಲಿತ್ಯದ ಹಬ್ಬ. ಲಾಲಿತ್ಯವುಳ್ಳ ಸಂಗೀತಗಾರರನ್ನೇ ನಮ್ಮ ಆಕಾಶವಾಣಿ ಕರೆಯಿಸಿದ್ದರೆ ಒಳ್ಳೆಯದಾಗುತ್ತಿತ್ತು. ಹಬ್ಬಕ್ಕಾಗಿ ಹಣದ ವೆಚ್ಚವೇನೋ ಆಯಿತು. ಉಂಡ ಊಟ ಮಾತ್ರ ಗೋದಿಯ ಹುಗ್ಗಿ.

ಪಂಡಿತ ಶಿವರಾಮ ಬುವಾ ವಝೆಯುವರೂ ಕಳೆದ ತಿಂಗಳಲ್ಲಿ ಹಾಡಿದರು. ಅವರು ಹಾಡಿದ 'ಚರಜಕೀ ಮಲ್ಹಾರ' 'ಕಾಫೀ ಕಾನಡಾ' ರಾಗಗಳು ಶಾಸ್ತ್ರಶುದ್ಧವಾಗಿ, ಸಾಂಪ್ರದಾಯಿಕ ಸೌಂದರ್ಯದಿಂದ ಕೂಡಿದ್ದುವು ನಿಲಯದ ಕಲಾವಿದರು ಹಾಡಿದ 'ಬಿಲಾಸಖಾನೀ ತೋಡಿ' 'ಜೇತಶ್ರೀ' 'ದೇವಗಿರಿ ಬಿಲಾವಲ್' ರಾಗಗಳು ಶಾಸ್ತ್ರಶುದ್ಧವಾಗಿದ್ದುವಲ್ಲದೆ, ಹಾಡುವವರ ಕಂಠಮಾಧುರ್ಯದ ಮೂಲಕ ಆಕರ್ಷಕವಾಗಿಯೂ ಇದ್ದುವು. ಆದರೆ ನಿಲಯದ ಬೇರೆ ಕಲಾವಿದರು ಹಾಡಿದ 'ಶಂಕರಾ' 'ಪುರಿಯಾ' ರಾಗಗಳು, ತಮ್ಮ ಆಭಾಸಾತ್ಮಕ ಗುಣದ ಮೂಲಕ ರಸಿಕರ ಸಾತ್ತ್ವಿಕ ಉಪಹಾಸಕ್ಕೆ ಕಾರಣವಾದುವು. ಇವುಗಳನ್ನು ಹಾಡಿದ ಕಲಾವಿದರು, ಇನ್ನೂ ಸಂಗೀತವಿದ್ಯಾರ್ಥಿಗಳಾಗಬೇಕಾದುದು ಅತ್ಯಗತ್ಯ.

ರವಿವಾರಕ್ಕೊಮ್ಮೆ ಪ್ರಾಚೀನ ಕಾವ್ಯವಾಚನ ಗಮಕದೊಂದಿಗೆ ನಡೆಯುವುದು. ಆದರೆ ಗಮಕಿಯು ನಡುನಡುವೆ ಕಠಿಣ ಶಬ್ದಾರ್ಥಗಳನ್ನು ಹೇಳುತ್ತ ಹೋಗುವುದರಿಂದ, ಗಮಕದ ಗಾಡಿ ಕೆಡುವುದಲ್ಲದೆ, ಭಾವದ ಪರಿಪುಷ್ಟಿಗೂ ತಡೆಯುನ್ನೊಡ್ಡಿದಂತಾಗುವುದು.

ಶ್ರೀ. ಪ್ರಭುದೇವ ಸರದಾರ, ಶ್ರೀ. ಶಂಕರರಾವ ಜೋಶಿ, ಶ್ರೀ. ಬುರ್ಲಿ, ಶ್ರೀ ಮೃತ್ಯುಂಜಯಸ್ವಾಮಿ ಪುರಾಣಿಕಮಠ, ಶ್ರೀ. ಪಿ ಕಟೀರಾಪ್ ರಾಮರಾವ್—ಇವರೇ ಮೊದಲಾದ ಕಲಾವಿದರು ತಾವು ಹಾಡುವುದೇ ಸಂಗೀತದ ಸಂಪೂರ್ಣ ಸೌಂದರ್ಯ ಸ್ವರೂಪ—ಎಂಬ ಕಲ್ಪನೆ ಮಾಡಿಕೊಂಡಿದ್ದರೆ ಹೇಗೆ. ತರುಣ ಕಲಾವಿದರಾದ ಇವರಿಗೆ ಕಲಿತು ಹಾಡಲು ಇನ್ನೂ ಸಾಕಷ್ಟು ಅವಕಾಶವಿದೆಯೆಂಬುದನ್ನು ಜ್ಞಾಪಕಕ್ಕೆ ತಂದುಕೊಡಬಯಸುತ್ತೇವೆ.

ಹಳೆಯ ಗಡಿಗಳಾದ ಶ್ರೀ. ಗುರುಬಸವಾರ್ಯರೂ ಶ್ರೀ. ಜಂಬಲದಿನ್ನಿಯವರೂ ಇನ್ನೂ ನೈಕಾಸುರನ ಭೀತಿಯಿಂದ ಮುಕ್ತರಾದಂತೆ ಕಾಣುವುದಿಲ್ಲ. ಗಾಬರಿಗೊಂಡುದರಿಂದ ದಮ್ಮು ಹತ್ತಿದುದೂ ಸಂಗೀತದೊಂದಿಗೆ ಕೇಳುವುದು.

ಬೆಳಗಾಂವಿಯ ಕು. ಲೀಲಾ ಜೋಶಿಯವರು ಮಂಜುಲಧ್ವನಿಯಲ್ಲಿ ಹಾಡುವರಾದರೂ, ಅಲ್ಲಿಯವರೇ ಆದ ಕು. ಅಂಬು ಸುಂಟಣಕರರು ಸಂಗೀತದಲ್ಲಿ ಸೌಂದರ್ಯವೆಂದರೆ ಏನೆಂಬುದನ್ನು ಇನ್ನೂ ತಿಳಿದುಕೊಳ್ಳಬೇಕಾಗಿದೆ.

ಶ್ರೀಮತಿ ಗಂಗೂಬಾಯಿ ಹಾನಗಲ್ಲ ಅವರೂ ಕಳೆದ ತಿಂಗಳಲ್ಲಿ ಹಾಡಿದರು. ಇವರ ಹಾಡಿಕೆಯಲ್ಲಿ ಸೌಂದರ್ಯವಿದೆ; ಸ್ವರದಲ್ಲಿ ಮಾಧುರ್ಯವಿದೆ. ಆದರೆ ಇವರ ಹಾಡು ಕೇಳುವುದೆಂದರೆ ಧ್ವನಿಮುದ್ರಿಕೆಯ ಸಂಗೀತ ಕೇಳಿದಂತೆ. ಮತ್ತೆ ಮತ್ತೆ ಅವೇ ತಾನ, ಅವೇ ಮುರಿಕೆ. ನವನವೋನ್ಮೇಷಶಾಲಿನಿಯೆನಿಸಿಕೊಳ್ಳುವಂತಹ ಪ್ರತಿಭಾಶಾಲಿತ್ವ, ಇವರ ಸಂಗೀತದಲ್ಲಿ ದೊರೆಯುವುದಿಲ್ಲ.

ನಾಟಕ ವಿಭಾಗ

(ಬರೆದು ಬಂದುದು)

ನಮ್ಮ ಬಾನುಲಿ ಕೇಂದ್ರದ ಮೊದಲನೆಯ ವರುಷದ ನಾಟಕ ವಿಭಾಗದ ಕಾರ್ಯಕ್ರಮಗಳು ಒಳ್ಳೇ ಪ್ರಗತಿಪರವಾಗಿದ್ದುವೆಂದು ಹೇಳಬಹುದು. ಆದರೆ ಇತ್ತೀಚೆಗೆ—೩-೪ ತಿಂಗಳಿಂದಂತೂ—ನಾಟಕವಿಭಾಗದಲ್ಲಿ ಅಪಳಿತವು ಹೇಗೆ ನಡೆದಿರಬಹುದು? ಎಂದು ಊಹಿಸುವುದು ಕಠಿಣಸಾಧ್ಯ. '**ಅಳಿಯತನ**' ಮೊದಲಾದ ಒಂದೆರಡು ನಾಟಕಗಳನ್ನು ಬಿಟ್ಟರೆ (ಆ ನಾಟಕಗಳನ್ನು ಬಿತ್ತರಿಸುವಲ್ಲಿಯೂ ಎಷ್ಟೋ ಕುಂದುಗಳಿವೆ.) ನಾಟಕವೆಂಬ ಹೆಸರಿಗೆ ತಕ್ಕ ಕಾರ್ಯಕ್ರಮಗಳು ಎಷ್ಟಾಗಿವೆ? ಹೀಗೆ ಕೆಲಸಕ್ಕೆ ಬಾರದ ನಾಟಕಗಳನ್ನು, ಅಂತಹರೇ ಆದ ಕೆಲವು ನಟರಿಂದ ಬಾನುಲಿಯ ಮುಖಾಂತರ ಬಿತ್ತರಿಸಿ, ಸಂಬಂಧಿಸಿದ ಅಧಿಕಾರಿಗಳು ಯಾವ ಉದ್ದೇಶವನ್ನು ಸಾಧಿಸಿದಂತಾಗಿದೆ? ಶ್ರೋತೃಗಳು ಒಪ್ಪುವಂತಹ ನಾಟಕಗಳನ್ನು ಬಿತ್ತರಿಸಲು ಧಾರವಾಡದ ಬಾನುಲಿಗೆ ಸಾಧ್ಯವಿಲ್ಲವೆ?

'ಈ ಅವನತಿಗೆ ಕಾರಣ ಆರ್ಥಿಕ ದುರವಸ್ಥೆ' ಎಂದು ಹೇಳಲಾಗುತ್ತದೆ. ಈ ದುರ್ಗತಿಯು ಕೇವಲ ನಾಟಕ ವಿಭಾಗಕ್ಕೊಂದೇ ಬಂದಿರಲು ಸಾಧ್ಯವಿಲ್ಲ. ಈ ವಿಭಾಗದಲ್ಲಿ ಮೊದಲಿಗೆ ಒಳ್ಳೆಯ ನಟರಿಗೆ ಕೊಡುತ್ತಿದ್ದ ಶುಲ್ಕವನ್ನು ೧೫/- ರಿಂದ

೧೦/- ರೂಪಾಯಿಗೆ ಇಳಿಸಿದ್ದಾರೆ ಹೀಗೆ ಮಾಡುವುದು ಯಾವ ನ್ಯಾಯ? ಸಂಗೀತ ವಿಭಾಗದಲ್ಲಿ ಮತ್ತು ಭಾಷಣವಿಭಾಗದಲ್ಲಿ ಇದರಂತೆ ಶುಲ್ಕವನ್ನು ಕಡಿಮೆಮಾಡಿದ್ದಾರೆಯೆ? ಸಂಗೀತ ವಿಭಾಗದಲ್ಲಿ ಆಯಾ ಕಲಾಕಾರರ ಮಟ್ಟವನ್ನನುಸರಿಸಿ—ಒಮ್ಮೆ ನಿರ್ಣಯಿಸಲಾದ ಶುಲ್ಕವನ್ನು ಕಡಿಮೆಮಾಡಲು ಬರುವುದಿಲ್ಲವಂತೆ. ಭಾಷಣವಿಭಾಗದಲ್ಲಿಯೂ—೧೫ ನಿಮಿಷ ಮಾತ್ರ ಭಾಷಣವಿದ್ದರೂ—ಅವರಿಗೆ ಸಲ್ಲುವ ೨೫/- ರೂಪಾಯಿಗಳಲ್ಲಿ ಕಡಿಮೆಮಾಡಲು ಬರುವದಿಲ್ಲವಂತೆ. ಪಾಪ! ನಾಟಕ ವಿಭಾಗ! ದಿಕ್ಕಿಲ್ಲದ ಪರದೇಶಿ! ಅದರಲ್ಲಿ ಭಾಗವಹಿಸುವ ಕಲಾಕಾರರನ್ನು ಸ್ವಲ್ಪವೂ ಕೂಡ ವಿಚಾರಿಸದೆ, ಅವರ ಶುಲ್ಕವು ಇಳಿಸಲ್ಪಟ್ಟಿತು. ಇದು ಯಾವ ನ್ಯಾಯ? ಅವರು ಕನಿಷ್ಠ ೪ ಸಲವಾದರೂ ರಂಗ ತಾಲೀಮಿಗೆ ಹೋಗಬೇಕಾಗುತ್ತದೆ. ಪ್ರತಿಸಲ ಏನಿಲ್ಲೆಂದರೂ ಒಂದೆರಡು ತಾಸು ಸ್ಟುಡಿಯೋದಲ್ಲಿ ವ್ಯರ್ಥವಾಗಿ ಕಳೆಯಬೇಕಾಗುತ್ತದೆ. ವ್ಯರ್ಥವಾಗಿ ಎಂಬ ಶಬ್ದವನ್ನು ಉದ್ದೇಶಪೂರ್ವಕವಾಗಿ ಉಪಯೋಗಿಸಿದ್ದೇನೆ. ಪಾತ್ರಧಾರಿಗಳಿಗೆ ಸ್ಟುಡಿಯೋಕ್ಕೆ ಬರಲಿಕ್ಕೆ ಹೇಳಿದ ವೇಳೆಗೆ ನಾಟಕನಿರ್ದೇಶಕರು ಎಷ್ಟು ಸಲ ಬಂದಿದ್ದಾರೆ? ಇತ್ತೀಚೆಗೆ ಅವರು ಸ್ವತಃ ಬರುವದು ಕಡಿಮೆ ಎಂದೇ ಹೇಳಬೇಕು. ನಾಟಕವನ್ನು ಚಿತ್ತರಿಸುವ ಹೊಣೆಯನ್ನು ಅಲ್ಲಿಯ ಸ್ಟಾಫ್ ಆರ್ಟಿಸ್ಟರ ಮೇಲೆ ಹೊರಿಸಿ, ತಾವು ಹೊರಗೇ ಇರುವರಂತೆ. ಸಂಬಂಧಿಸಿದ ಸ್ಟಾಫ್ ಆರ್ಟಿಸ್ಟರಿಗೆ ಈ ಹೊಣೆಯನ್ನು ತೂಗಿಸಿಕೊಂಡು ಹೋಗುವ ಯೋಗ್ಯತೆ ಇದೆಯೆ? ಅಥವಾ ಆ ಹೊಣೆಯನ್ನು ಅವರ ತಲೆಯ ಮೇಲೆ ಹಾಕಿದ ಮಾತ್ರಕ್ಕೆ ಅವರ ಯೋಗ್ಯತೆಯು ಬೆಳೆಯಬಲ್ಲದೆ? ಇವೆಲ್ಲ ವಿಷಯಗಳನ್ನು ವಿಚಾರಿಸಿದರೆ, ಎಲ್ಲರಿಗಿಂತ ಹೆಚ್ಚು ಶ್ರಮ ಪಡಬೇಕಾಗಿದ್ದ ಜೀವಿಗಳಿಗೆ ಈ ಏಟನ್ನು ಕೊಟ್ಟಿದ್ದು ಯಾವ ರೀತಿಯಿಂದಲೂ ಸಮಂಜಸವಾಗಲಾರದು.

ಹಣದ ಅಭಾವವೇ ಕಾರಣವಾಗಿದ್ದಲ್ಲಿ, ನಾಟಕಗಳನ್ನು ಪ್ರತಿ ವಾರವೂ ಕೇಳಿಸಿಯೇ ತೀರಬೇಕೆಂಬ ಹಟವೇಕೆ ಬಾನುಲಿಯ ಅಧಿಕಾರಿಗಳಿಗೆ? "ಕಸ ತಿನ್ನುವದಕ್ಕಿಂತ ತುಸು ತಿನ್ನು" ಎಂಬಂತೆ ೧೫ ದಿನಗಳಿಗೊಮ್ಮೆ, ಅಥವಾ ೩ ವಾರಗಳಿಗೊಮ್ಮೆಯಾದರೂ ಆಗಲಿ, ಒಳ್ಳೆ ನಾಟಕಗಳನ್ನು ಬರೆಯಿಸಿ ಒಳ್ಳೇ ನಟರಿಂದ ಅವುಗಳನ್ನು ಚಿತ್ತರಿಸಲು ಅನುವು ಮಾಡಿಕೊಟ್ಟರೆ ಆಗದೆ? ಈ ಎರಡನೆಯ ವರುಷದಲ್ಲಿ ಕೆಲವು ಕಲಾಕಾರರಿಗೆ ೪-೬ ತಿಂಗಳುಗಳ ವರೆಗೆ ಆಮಂತ್ರಣವೇ ಇಲ್ಲ. ಆದರೆ ಕೆಲವು ಕಲಾಕಾರರು ಮಾತ್ರ ತಿಂಗಳಲ್ಲಿ ಒಂದೆರಡು ಸಲವಾದರೂ,—ಎಲ್ಲ ವಿಭಾಗಗಳಲ್ಲಿ ಕೂಡಿ—ಗಾಳಿಯಲ್ಲಿ ಮೂಡಿದ ಉದಾಹರಣೆಗಳೆಷ್ಟೋ ಇವೆ. ಇದಕ್ಕೆ ಬಾನುಲಿಯವರು ಕೊಡುವ ಕಾರಣವೆಂದರೆ: ಅವರ ಧ್ವನಿ, ಬೇರೆ ಬೇರೆ ಭಾಗಗಳಲ್ಲಿ ಅವರಿಗೆ ಅನ್ವಯಿಸುವ ಕಾರ್ಯಕ್ರಮಕ್ಕೆ ಅರ್ಹತೆ—ಎಂದು. ಒಬ್ಬ ಕಲಾವಿದನಿಗೆ ತಿಂಗಳಲ್ಲಿ ಒಂದೇ ಕಾರ್ಯಕ್ರಮವನ್ನು ಕೊಡಬಹುದೆಂಬ ನಿಯಮವು ಈ ಸಂದರ್ಭದಲ್ಲಿ ಹಾರಿಹೋಯಿತೆ? ಅಥವಾ ಹಾಗೆ ಅರ್ಹತೆಯುಳ್ಳ ಬೇರೆ ಕಲಾವಿದರು ಅವರ ದೃಷ್ಟಿಯಿಂದ ಮಾಯವಾದರೆ?

ಕಳೆದ ತಿಂಗಳ ೩೦ನೆಯ ತಾರೀಖಿಗೆ ೯೦ ನಿಮಿಷಗಳ ವರೆಗೆ ಅವ್ಯಾಹತವಾಗಿ ಚಿತ್ತರಿಸಲ್ಪಟ್ಟ 'ಅಂಬರೀಷ' ನಾಟಕದ ಧ್ವನಿಮುದ್ರಿಕೆಯು ಎಷ್ಟರ ಮೆಚ್ಚುಗೆಯನ್ನು ಪಡೆಯಿತು? ಅದರಲ್ಲಿಯ ಸಂಭಾಷಣೆಗಳು ಜೊಡ್ಡುಬಿಸೊಳಗಿದ್ದತಿದ್ದವು. ಅಂಬರೀಷ ಮತ್ತು ಅವನ ತಮ್ಮನ ನಡುವಿನ ಸಂಭಾಷಣೆಯ ಕಾಲದಲ್ಲಿ ಅಂಬರೀಷನು ಪ್ರತಿ ಶಬ್ದಕ್ಕೆ 'ಹಾಂ! ಆಹಾಂ! ಹೂಂ! ಹೌದು!' ಎಂದು ಹೇಳುತ್ತಿದ್ದನು. ದೇವರ ಸಮ್ಮುಖದಲ್ಲಿ ಅಂಬರೀಷನು ತನ್ನ ಪ್ರಿಯತಮೆಯ ಸಂಗಡ (ಅವಳು ಯಾರೆಂಬುದು ತಿಳಿಯದಿದ್ದಾಗ್ಯೂ) ಪ್ರಣಯವನ್ನು ನಡಿಸುವದು, ತನಗೆ ದೂರ್ವಾಸನಿಂದ ಶಾಪವು ಕೊಡಲ್ಪಟ್ಟ ಕೂಡಲೆ, ತಾಲದಲ್ಲಿ ಹಾಡನ್ನು ಪ್ರಾರಂಭಿಸುವದು, ಘಂಟಾಕರ್ಣನ ತೀರ ಕೆಳತರಗತಿಯ ವಿನೋದ, ಇಂದ್ರನ ಅರೆತೆರೆದ ಬಾಯಿಂದ ಬರುತ್ತಿರುವ ಧ್ವನಿ—ಇವೆಲ್ಲವುಗಳೂ ರೆಕಾರ್ಡ್‌ಮಾಡಿಕೊಳ್ಳಲಿಕ್ಕೆ ಯೋಗ್ಯವಾದುವುಗಳೆ? ಇದರ ಹತ್ತುಪಾಲು ಚೆನ್ನಾಗಿ ಇದೇ ಕೇಂದ್ರದಿಂದ ಚಿತ್ತರಿಸಲ್ಪಟ್ಟ ನಾಟಕಗಳನ್ನು ಧ್ವನಿಮುದ್ರಿಸಿಕೊಂಡಿದ್ದರೆ, ಪ್ರಸಂಗದಲ್ಲಿ ಉಪಯೋಗಿಸಲು ಬರುತ್ತಿದ್ದಿಲ್ಲವೆ?

ಬಾನುಲಿಯ ನಾಟಕವಿಭಾಗವನ್ನು ಹೀಗಳೆಯುವುದು ಮಾತ್ರ ನನ್ನ ಉದ್ದೇಶವಲ್ಲ. ಈ ಶಾಖೆಯಲ್ಲಿ ನಡೆದ ಅನ್ಯಾಯವು ಬೇಗನೆ ದೂರವಾಗಲಿ. ಹಣದ ಉಳಿತಾಯವನ್ನು ಮಾಡುವುದಿದ್ದರೆ, ಅಖಿಲ ಭಾರತ ಆಕಾಶವಾಣಿಯ ದಿಲ್ಲಿ, ಮುಂಬಯಿ, ಲಖನೌ ಮುಂತಾದ ಬೇರೆ ಬೇರೆ ಕೇಂದ್ರಗಳಿಂದ ಚಿತ್ತರಿಸಿದ ಬೇರೆ ಬೇರೆ ಭಾಷೆಗಳಲ್ಲಿಯ ನಾಟಕಗಳನ್ನು ಆರಿಸಿಕೊಂಡು ಭಾಷಾಂತರಿಸಿ, ಇಲ್ಲಿಂದ ಚಿತ್ತರಿಸಲಿ. ನಾಟಕಗಳ ನಿರ್ವಹಣೆಯಲ್ಲಿ, ಸಂಬಂಧಿಸಿದ ಅಧಿಕಾರಿಗಳು ಪೂರ್ಣಪರಿಶ್ರಮವನ್ನು ವಹಿಸಲಿ. ಚಿತ್ತರಣೆಗಾಗಿ ಯೋಗ್ಯ ನಟವರ್ಗದ ಸಹಕಾರವನ್ನು ಕೋರಲಿ. ತಿಂಗಳಲ್ಲಿ ಒಂದೆರಡುಸಲವಾದರೂ ಚಿಂತೆಯಿಲ್ಲ; ಯೋಗ್ಯ ನಾಟಕಕಾರರಿಂದ ನಾಟಕಗಳನ್ನು ಬರೆಯಿಸಿ ಅವನ್ನು ಚಿತ್ತರಿಸಲಿ. ತಡವಾಗಿಯಾದರೂ ಅಡ್ಡಿ ಇಲ್ಲ. ಸುಧಾರಿಸಲು ಇನ್ನೂ ಅವಕಾಶವಿದ್ದೇ ಇದೆ.

—ಎಚ್. ಕೆ. ಮೂರ್ತಿ

ಸಾದರ ಸ್ವೀಕಾರ

卐

೧೦೨. **ಶ್ರೀಸ್ವಾಮಿ ರಾಮತೀರ್ಥ** (ಜೀವನ ಚರಿತ್ರ) ಲೇಖಕರು ಶ್ರೀ. ಟಿ. ಸದಾಶಿವಯ್ಯ, ದೇಶೀಯ ವಿದ್ಯಾಶಾಲಾ ಬೆಂಗಳೂರು ೪. ಪ್ರಕಾಶಕರು ಆನಂದ ಬ್ರದರ್ಸ್ ಬೆಂಗಳೂರು ೨. ಕ್ರಾ. ಅ. ೧೩೨ ಪುಟಗಳು. ಬೆಲೆ ೧-೧೨-೦.

೧೦೩. **ಬೃಂದಾವನ** (ಕಿರಿಯರ ಸಂಗೀತನಾಟಕ) ಬರೆದವರು ಶ್ರೀ. ಟಿ. ಸದಾಶಿವಯ್ಯ, ಪ್ರಕಾಶಕರು ಆನಂದ ಬ್ರದರ್ಸ್, ಬೆಂಗಳೂರು ೨. ಕ್ರಾ. ಅ. ೪೫ ಪುಟಗಳು. ಬೆಲೆ ೦-೧೨-೦.

೧೦೪. **ಬಾಣಂತಿ ಉಪಚಾರ** ಮತ್ತು **ಕೆಲವು ಸ್ತ್ರೀರೋಗಗಳು** (ವೈದ್ಯಕಗ್ರಂಥ). ಬರೆದವರು 'ಆಯುರ್ವೇದ ವಿಶಾರದ' ಶ್ರೀ. ಗುಂಡಾಚಾರ್ಯ ಸವಣೂರ L. A. M. S. ಹುಬ್ಬಳ್ಳಿ. ಪ್ರಕಾಶಕರು ರಾಮಚಂದ್ರ ಬಳವಂತ ದೇಶಪಾಂಡೇ, ವಿವಿಧಜ್ಞಾನ ಸಾಹಿತ್ಯಮಾಲಾ ಆಫೀಸ್, ಕಲಬುರ್ಗೀ ಬಿಲ್ಡಿಂಗ್, ಮೋಟರ್ ಸ್ಟ್ಯಾಂಡ್, ಹುಬ್ಬಳ್ಳಿ. ಕ್ರಾ. ಅ. ೯೮ ಪುಟಗಳು. ಬೆಲೆ ೧-೬-೦.

೧೦೫. **ಬೆಳವಡಿ ಮಲ್ಲಮ್ಮ** (ಆರು ತರಂಗರೂಪಕಗಳು) ಬರೆದವರು ಶ್ರೀ. ಆನಂದಕಂದರು. ಪ್ರಕಾಶಕರು; ಶರತ್‌ಪ್ರಕಾಶನ ಮಂದಿರ, ವಿಜಯ ರೋಡ್, ಧಾರವಾಡ. ಕ್ರಾ. ಅ. ೧೧೬ ಪುಟಗಳು. ಬೆಲೆ ೧-೮-೦.

೧೦೬. **ಭಾನುವಾರದ ಬಯಕೆ** (ಪ್ರಹಸನ) ಬರೆದವರು ಶ್ರೀ. ರಾ. ವೆಂ ಶ್ರೀನಿವಾಸ. ಪ್ರಕಾಶಕರು ಹಂಸ ಲಿಮಿಟೆಡ್, ಮೈಸೂರು. ಕ್ರಾ. ಅ. ೩೪ ಪುಟಗಳು. ಬೆಲೆ ೦ ೮-೦.

೧೦೭. **ಬಿಸಿಲುಗುದುರೆ** (ಸಾಮಾಜಿಕ ಕಾದಂಬರಿ). ಬರೆದವರು ಶ್ರೀ. ರಾ ವೆಂ ಶ್ರೀನಿವಾಸ. ಮೈಸೂರಿನ ಹಂಸ ಸಾಹಿತ್ಯಮಾಲೆಯ ೬ನೆಯ ಗ್ರಂಥ. ಕ್ರಾ. ಅ ೩೦೬ ಪುಟಗಳು ಬೆಲೆ ೩-೮-೦

೧೦೮. **ರಕ್ತದ ರೂಪಾಯಿ** (ಸ್ವತಂತ್ರ ಕಾದಂಬರಿ) ಬರೆದವರು ಶ್ರೀ. ಸೇವ ನಮಿರಾಜಮಲ್ಲ ಬಿ.ಎ (ಆನರ್ಸ್) ಧಾರವಾಡದ ಲಲಿತ ಸಾಹಿತ್ಯಮಾಲೆಯ ೭ನೆಯ ವರ್ಷದ ೨ನೆಯ ಕುಡಿ. ಕ್ರಾ. ಅ. ೧೦೬ ಪುಟಗಳು. ಬೆಲೆ ೧-೮-೦.

೧೦೯. **ಸರದಾರ ವಲ್ಲಭಭಾಯಿ** (ಜೀವನ ಚರಿತ್ರೆ). ಬರೆದವರು ಶ್ರೀ. ಸಿದ್ಧವನಹಳ್ಳಿ ಕೃಷ್ಣಶರ್ಮರು. ಧಾರವಾಡದ ಲಲಿತ ಸಾಹಿತ್ಯಮಾಲೆಯ ೭ನೆಯ ವರ್ಷದ ೩ನೆಯ ಕುಡಿ. ಕ್ರಾ. ಅ. ೧೦೦ ಪುಟಗಳು. ಬೆಲೆ ೧-೮-೦.

೧೧೦. **ತಾರಾಲೋಕ** (ಮಾಸಪತ್ರಿಕೆ) ಸಂಪಾದಕರು. ಶ್ರೀ. ರಂಗನಾಥ ಭಾರದ್ವಾಜ. ಸಹಸಂಪಾದಕರು ಶ್ರೀ. ಕೆ. ಶ್ರೀನಿವಾಸಶಾಸ್ತ್ರಿ. ಪ್ರಕಾಶಕರು—ಶ್ರೀ. ರಂಗನಾಥ ಭಾರದ್ವಾಜ, ಉತ್ತರಾದಿಮಠಬೀದಿ ಮೈಸೂರು. ಕ್ರಾ. ೧/೮ ಪುಟಗಳು ೩೨. ಬೆಲೆ ೦-೪-೦.

೧೧೧. **ಕನ್ನಡ ಚರ್ಪಟಪಂಜರಿ** (ಅನುವಾದಿತ ಸ್ತೋತ್ರ) ಮೂಲ ಸಂಸ್ಕೃತದಲ್ಲಿ ಶ್ರೀಜಗದ್ಗುರು ಶ್ರೀಶಂಕರಾಚಾರ್ಯರು ರಚಿಸಿರುವುದರ ಅನುವಾದಕರು ದೇಸಾಯಿ ದತ್ತಮೂರ್ತಿ, ಕನ್ನಡ ಕುಟೀರ ಹುಬ್ಬಳ್ಳಿ. ಪ್ರಕಾಶಕರು ಶ್ರೀ ಶಂಕರಭಟ್ಟ ಜೋಶಿ, ಹುಬ್ಬಳ್ಳಿ. ಫೂ. ಕ್ಯಾ. ಅ. ೮ ಪುಟಗಳು.



೧೧೨ **ಸ್ವರ್ಗದ ಬಾಗಿಲು** (ಸಾಮಾಜಿಕ ಕಾದಂಬರಿ). ಲೇಖಕರು ಪ್ರೊ. ವಿ. ಎಂ. ಇನಾಮದಾರ ಎಂ. ಎ. ಮೈಸೂರಿನ ಉಷಾ ಸಾಹಿತ್ಯಮಾಲೆಯ ಗ್ರಂಥ. ಕ್ರಾ. ಅ. ೨೩೮ ಪುಟಗಳು. ಬೆಲೆ ೨-೧೨-೦

೧೧೩. **ಚಿತ್ರವಿಚಿತ್ರ** (ನಾಟಕ) ಲೇಖಕರು ನಾ. ಕಸ್ತೂರಿ ಎಂ.ಎ.ಬಿ.ಎಲ್. ಸುಪರಿಂಟೆಂಡೆಂಟ್, ಧರ್ಮರತ್ನಾಕರ ರಾಜೇನಹಳ್ಳಿ ಮುದ್ದುರಾಯಪ್ಪನವರ ಕಾಲೇಜು, ದಾವಣಗೆರೆ. ಪ್ರಕಾಶಕರು ತಿಮ್ಮಸಾಹಿತ್ಯಮಾಲಾ, ಬಳ್ಳಾರಿ. ಕ್ರಾ. ಅ. ೮೬ ಪುಟಗಳು; ಬೆಲೆ ೧-೪-೦.

ಶರತ್ ಪ್ರಕಾಶನ ಮಂದಿರ, ಧಾರವಾಡ

(ಪುಸ್ತಕ ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು)

ಕನ್ನಡ ನಾಡಿನ ವಾಚನಾಲಯಗಳ ಸಂಚಾಲಕರು ಜ್ಞಾಪಕದಲ್ಲಿ ಇರಿಸಿಕೊಳ್ಳಬೇಕು ! ತಮ್ಮ ವಾಚನಾಲಯಕ್ಕೆ ಬೇಕಾಗುವ ಯಾವ ಕನ್ನಡ ಪುಸ್ತಕಗಳನ್ನೂ ಯೋಗ್ಯ ಬೆಲೆಗೆ ಸಮಯಕ್ಕೆ ಸರಿಯಾಗಿ ಪೂರಯಿಸಲಾಗುವುದು.

'ಆನಂದಕಂದ' ರ ಕಥೆ, ಕಾದಂಬರಿ, ಕವನ ಸಂಕಲನ, ನಾಟಕಸಂಕಲನ, ಸಾಹಿತ್ಯ ಸಂಸ್ಕೃತಿಯ ಗ್ರಂಥಗಳು ಎಲ್ಲವೂ ನಮ್ಮಲ್ಲಿ ದೊರೆಯುವುವು. ವ್ಯಾಪಾರಿಗಳಿಗೆ ಅನುಕೂಲ ದರದ ಕಮಿಶನ್ [illegible] ಎಲ್ಲರೂ ನಮ್ಮೊಡನೆ ವ್ಯವಹಾರ ಬೆಳೆಯಿಸಬೇಕು. ನಮ್ಮ ಮಂದಿರ ಈಗ ತಾನೆ ಪ್ರಕಟಿಸಿದ 'ಆನಂದಕಂದರ' ತರಂಗರೂಪಕ ಸಂಕಲನ :

ಬೆಳವಡಿ ಮಲ್ಲಮ್ಮ

ಕ್ರೌ. ಅ. ೧೧೬ ಪುಟ :

ಬೆಲೆ ೧-೮-೦

ಬೇಗನೇ ಪ್ರಕಟವಾಗಲಿರುವ ಗ್ರಂಥ : ಕಾರಹುಣ್ಣಿವೆ (ಕವನಸಂಗ್ರಹ), ಒಂದು ಸಾ. ಕಾದಂಬರಿ

ಸದ್ಯ ನಮ್ಮಲ್ಲಿ ದೊರೆಯುವ 'ಆನಂದಕಂದ'ರ ಗ್ರಂಥಗಳು

ಕಾದಂಬರಿ

ರಾಜಯೋಗಿ

ಸುದರ್ಶನ

ಕವನ ಸಂಕಲನ

ವಿರಹಿಣಿ

ಒಡನಾಡಿ

ಕಥಾಸಂಕಲನ

ಬಡತನದ ಬಾಳು

ನನ್ನ ಬದುಕು

ಸಂಸಾರ ಚಿತ್ರ

ಮಾತನಾಡುವ ಕಲ್ಲು

ಇತರ ಗ್ರಂಥಗಳು

ಕರ್ನಾಟಕ ಜನಜೀವನ

ಜೀವನ ಚರಿತ್ರ

ಶ್ರೀ. ಬಸವಣ್ಣನವರು

ಅಲ್ಲದೆ ಶ್ರೀ. ಹುದ್ದಾರರ **'ಚಿತ್ರಕಲಾಪ್ರವೇಶವು'** ಚಾಡಿಯ ಚಾಣಕ್ಯನ **'ಜಾತೀಯಸಮಸ್ಯೆ'** **'ಕರ್ನಾಟಕ ಏಕೀಕರಣ**, ಈ ಕಿರುಹೊತ್ತಿಗೆಗಳೂ ದೊರೆಯುವುವು.

ಶರತ್ ಪ್ರಕಾಶನ ಮಂದಿರಕ್ಕೆ ೨ರೂ. ಸಲ್ಲಿಸಿ ಗ್ರಾಹಕ ಸದಸ್ಯರಾದವರಿಗೆ ವಿಶೇಷ ಸವಲತ್ತುಗಳು. ಬೇಗನೇ ಪತ್ರವ್ಯವಹಾರವನ್ನು ಮಾಡಿರಿ.

ಸಂಚಾಲಕ : ಎಸ್. ಡಿ. ಧರಮುಟ್ಟಿ ಶ. ಪ್ರ. ಮಂದಿರ ಧಾರವಾಡ.



Printed by V. Y. Jathar at the Karnatak Printing Works, Dharwar, and Published for the Proprietors
Jayanti Publications, by M. V. Melligatti at the Jayanti Office, Dharwar -3513-51.